# ವಿಶಿಷ್ಟಾದ್ವೈತ ದರ್ಪಣ

(ಭಾಗ -೨)

ಗ್ರಂಥಕರ್ತೃ ಮತ್ತು ಪ್ರಕಾಶಕ:
ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯ

# ವಿಶಿಷ್ಟಾದ್ವೈತ ದರ್ಪಣ

## (ಭಾಗ–೨)

★

This book is published with the Financial Assistance of Tirumala-Tirupati Devasthanams under their scheme 'Aid To Publish Religious Books'

★

ಗ್ರಂಥಕರ್ತರು ಮತ್ತು ಪ್ರಕಾಶಕರು :

**ಶೇಟ್ಟಿಲೂರ್ ಶ್ರೀನಿವಾಸರಂಗಾಚಾರ್ಯ**

ಶ್ರೀರಂಗ ನಿಲಯ, ೧೦೩/೧, ೧ನೇ ಮುಖ್ಯ ರಸ್ತೆ
೩ನೇ ಅಡ್ಡ ರಸ್ತೆ, ಗವೀಪುರಂ ಬಡಾವಣೆ
ಬೆಂಗಳೂರು-೫೬೦ ೦೧೯

**VISISHTADWAITA DARPANA** (Part-II)
Kannada. Writer and Publisher : Sahitya Veda Vedanta Vidwan, Shettalur Srinivasa Rangacharya. Sriranga Nilaya, No. 103/1 1st Main Road, 3rd Cross Road, Gavipuram Extension, Bangalore-560 019 (Karnataka)

Pages : 448+xxiv

Price : Rs. 80

All rights reserved

55435

First Edition : 1990

Copies : 1,000

Printed by Y.V. Keshava Murthy, Managing Director, Praja Printers Private Limited (National Award Winners), Praja Bhavan No. 53/2, Bull Temple Road, Bangalore-19 (Karnataka). Phone : 604261 & 625823
Grams : Praja.



ಪದಿ ನಿಪತನ ಮೋಕಂ ಜೀವದಂ ಪಾಪಿನೋ ಮೋ
ವಿಶದ ಮಿತಿ ಕರೇಣ ಜ್ಞಾಪಯನ್ದಕ್ಷಿಣೇನ ।
ಉರಸಿ ನಿಹಿತದಾರಃ ವೇಙ್ಕಟಾದ್ರೌ ಚ ತಿಷ್ಠನ್
ಕಲಿಯುಗಮನುಜಾನಾಮಿಷ್ಟದೋ ಭಾತಿ ಚಿತ್ರಮ್ ॥



ಅಖಿಲಭುವನರಕ್ಷಾ ಸಾಧನಾಯಾವಿತೀರ್ಣೇ
ಕುಮತಿಕಲಿವಿಲಾಸಧ್ವಾಂತತಿಗ್ಮಾಂಶುಜಾಲೇ ।
ನಿರವಧಿಕರುಣಾಬ್ಧೌ ವೇದಚೂಡಾಗುರೌಮೇ
ಭವತು ಪರಮಭಕ್ತಿಃ ಶ್ರೀನಿಧೌ ವೇಙ್ಕಟೇಶೇ ॥

# ಮುನ್ನುಡಿ

ಆಲದ ಬೀಜದಿಂದ ಮರ ಹುಟ್ಟುತ್ತದೆ. ಮರದಿಂದ ಬೀಜ ಹುಟ್ಟುತ್ತದೆ. ಇದರಲ್ಲಿ ಯಾವುದು ಮೊದಲು ಇದ್ದೀತು ? ಎಂದು ವಿಚಾರ ಮಾಡಿದರೆ ಇದಕ್ಕೆ ಮೊದಲೇ ಇಲ್ಲ—ಅನಾದಿ ಎಂದೇ ಹೇಳಬೇಕಾಗುತ್ತದೆಯಲ್ಲವೇ ? ಇದನ್ನೇ ಬೀಜಾಙ್ಕುರ ನ್ಯಾಯವೆನ್ನುತ್ತಾರೆ. ಹಾಗೆ ಅನಾದಿಯಾದ ಕರ್ಮ ಪ್ರವಾಹದಿಂದ ಜೀವನಿಗೆ—ಹುಟ್ಟುವಿಕೆ, ಸಾಯುವಿಕೆ ಎಂಬ ಸಂಸಾರದ ಕಟ್ಟು. ಇದನ್ನು ಬಿಡಿಸಿಕೊಳ್ಳಲು ಉಪಾಯ ಭಕ್ತಿ ಅಥವಾ ಪ್ರಪತ್ತಿ ಎಂಬೀ ಎರಡು. ಇದರಲ್ಲಿ ಮೊದಲನೆಯದಾದ ಭಕ್ತಿಯನ್ನು ನಾನು ಬರೆದಿರುವ ವಿಶಿಷ್ಟಾದ್ವೈತ ದರ್ಪಣದ ಮೊದಲನೆಯ ಭಾಗದಲ್ಲಿ ಸಾಧ್ಯವಾದಷ್ಟು ವಿಸ್ತಾರವಾಗಿಯೇ ವಿವರಿಸಲಾಯಿತು.

ಈವಾಗ ಎರಡನೆಯ ಭಾಗವಾದ ಈ ಗ್ರಂಥದಲ್ಲಿ—

**ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂತ್ವಾಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥**

ಎಂದು ಗೀತಾಚಾರ್ಯನು ಅರ್ಜುನನನ್ನು ಕುರಿತು ಹೇಳಿರುವ ಮಾತನ್ನೇ ಆಧಾರವಾಗಿಟ್ಟು ರಾಮಾನುಜಾಚಾರ್ಯರು ತಮ್ಮ ಭಾಷ್ಯದಲ್ಲಿ—

"ಎಲೌ ಅರ್ಜುನ ! ಭಕ್ತಿಯೋಗವನ್ನು ಆರಂಭಿಸುವುದಕ್ಕೆ ತಡೆಯನ್ನುಂಟು ಮಾಡುವ ಪಾಪಗಳನ್ನು ಎಷ್ಟೋ ಜನ್ಮಗಳಿಂದ ಮಾಡಿರುವೆ. ಅವುಗಳನ್ನು ನೀಗಿಸಲು ಶಾಸ್ತ್ರದಲ್ಲಿ ಕೃಚ್ಛ್ರ ಚಾಂದ್ರಾಯಣ ಇವೇ ಮೊದಲಾದ ಅನೇಕ ವಿಧವಾದ ಪ್ರಾಯಶ್ಚಿತ್ತಗಳನ್ನು ಮಾಡಬೇಕು. ಅದಕ್ಕೆ ಬಹಳ ಕಾಲ ಬೇಕು. ಒಂದು ಜನ್ಮದಲ್ಲಿ ಮಾಡಲು ಸಾಧ್ಯವಿಲ್ಲ; ಮಾಡುವುದೂ ಕಷ್ಟ. ಆದುದರಿಂದ ಈ ಎಲ್ಲಾ ಧರ್ಮಗಳನ್ನೂ ಬಿಟ್ಟು ನನ್ನನ್ನು ಒಬ್ಬನನ್ನೇ ಶರಣುಹೋಗು. ನಾನು ಭಕ್ತಿಯೋಗಕ್ಕೆ ವಿಘ್ನವನ್ನುಂಟುಮಾಡುವ ಎಲ್ಲಾ ಪಾಪಗಳನ್ನೂ ಪ್ರಾಯಶ್ಚಿತ್ತ ಮಾಡದೆಯೇ ಹೋಗಲಾಡಿಸುತ್ತೇನೆ, ನೀನು ದುಃಖಿಸಬೇಡ ಎನ್ನುತ್ತಾನೆ" ಎಂದು ವಿವರಿಸಿದ್ದಾರೆ.

ಈ ತತ್ತ್ವಾರ್ಥವನ್ನು ವೇದಾಂತಾಚಾರ್ಯರು ಸಕಲ ಶಾಸ್ತ್ರಗಳನ್ನೂ ಒಟ್ಟುಗೂಡಿಸಿ ರಹಸ್ಯತ್ರಯಸಾರವೆಂಬ ಗ್ರಂಥದಲ್ಲಿ ಉಪಪಾದನೆ ಮಾಡಿದ್ದಾರೆ.

ಇದನ್ನೇ ಈ ಗ್ರಂಥದ ಹೆಚ್ಚಾದ ಭಾಗದಲ್ಲಿ ವಿವರಿಸಲಾಗಿದೆ.

ನಾವು ಪಾಪಿಷ್ಠರು. ಹಿಂದಿನ ಜನ್ಮಗಳಲ್ಲಿ ಎಷ್ಟೋ ಪಾಪಗಳನ್ನು ಮಾಡಿದ್ದೇವೆ ಮತ್ತು ಈ ಜನ್ಮದಲ್ಲೂ ಮಾಡುತ್ತಿದ್ದೇವೆ. ಇಂತಹ ನಮಗೆ ಪರಮಾತ್ಮನು ಕರುಣೆಯನ್ನು ತೋರಿ ಕ್ಷಣಕಾಲ ಸಾಧ್ಯವಾದ ಈ ಶರಣಾಗತಿಯ ಅನುಷ್ಠಾನದಿಂದ ಅವನ್ನೆಲ್ಲಾ ಮನ್ನಿಸಿ ಅಷ್ಟೊಂದು ಆನಂದವನ್ನು ಅನುಭವಿಸುವಂತೆ ಮಾಡುವನೇ ?

ಇವೇ ಮುಂತಾದ ಸಂದೇಹಗಳನ್ನು ಸಾತ್ವಕಿ ತಂತ್ರ, ಲಕ್ಷ್ಮೀತಂತ್ರ ಮತ್ತು ಅಹಿರ್ಬುಧ್ನ್ಯ ಸಂಹಿತೆ ಇವುಗಳ ಪ್ರಮಾಣ ವಚನಗಳನ್ನು ಹೇಳಿ ನೀಗಿಸಲಾಗಿದೆ ; ಅಲ್ಲದೆ ಪ್ರಹ್ಲಾದ, ಕಾಕಾಸುರ, ಗಜೇಂದ್ರ, ದ್ರೌಪದಿ, ವಿಭೀಷಣ ಮುಂತಾದವರ ಉದಾಹರಣೆಗಳನ್ನೂ ತೋರಿಸಿದೆ. ಸಹೃದಯರು ಈ ಭಾಗವನ್ನು ಓದಿ ಮನಸ್ಸಿನ ಪರಿಪಾಕವನ್ನು ಹೊಂದಿದರೆ ಅದೇ ನನ್ನ ಯತ್ನಕ್ಕೆ ಫಲವೆಂದು ಭಾವಿಸುತ್ತೇನೆ.

ಬದ್ಧ, ನಿತ್ಯ, ಮುಕ್ತರೆಂಬ ಜೀವರಾಶಿಗಳಲ್ಲಿ ಬದ್ಧರ ಗುಂಪಿಗೆ ಸೇರಿದ ನಾವು ಈ ಸಂಸಾರದ ಕಟ್ಟಿನಿಂದ ಬಿಡುಗಡೆಯನ್ನು ಪಡೆದು, ಕೇವಲ ಶಾಸ್ತ್ರದಿಂದ ಮಾತ್ರ ಅರಿಯಲು ತಕ್ಕವರಾದ ಎಲ್ಲರನ್ನೂ ಸಮಾನವಾದ ದೃಷ್ಟಿಯಿಂದ ನೋಡುವ ಯಾವಾಗಲೂ ಲಕ್ಷ್ಮಿಯಿಂದ ಕೂಡಿಯೇ ಇರುವ ಪರದೇವತೆಯಾದ ನಾರಾಯಣನ ಪ್ರೀತಿಗೆ ನಾವೆಲ್ಲರೂ ಪಾತ್ರರಾಗೋಣ. ಇದೇ ನನ್ನ ಹಂಬಲ. ಅದಕ್ಕಾಗಿಯೇ ಈ ಎರಡು ಭಾಗವುಳ್ಳ ವಿಶಿಷ್ಟಾದ್ವೈತ ದರ್ಪಣವೆಂಬ ಈ ಕೃತಿ.

ಈ ಕೃತಿಗೆ ನಮ್ಮ ನಾಡಿನ ಘನಸರ್ಕಾರದವರು ನನ್ನ ಗ್ರಂಥದ ಮೊದಲನೆಯ ಭಾಗಕ್ಕೆ ಧನಸಹಾಯಮಾಡಿದಂತೆ ಪ್ರಕೃತ ಈ ಎರಡನೆಯ ಭಾಗಕ್ಕೂ ೧೫,೦೦೦ ರೂ.ಗಳನ್ನು ಕೊಟ್ಟರು.

ಹಾಗೆಯೇ ತಿರುಮಲ–ತಿರುಪತಿ ದೇವಸ್ಥಾನದವರೂ ೧೦,೦೦೦ ರೂ.ಗಳನ್ನು ಕೊಡುವುದಾಗಿ ಭರವಸೆಯನ್ನಿತ್ತಿರುತ್ತಾರೆ.

ಕೇಂದ್ರ ಸರ್ಕಾರದವರೂ ಈ ಪುಸ್ತಕದ ಪ್ರಕಾಶನಕ್ಕೆ ತಗಲುವ ವೆಚ್ಚದಲ್ಲಿ ಬಹುಭಾಗವನ್ನು ತಾವು ಭರಿಸುವುದಾಗಿ ಆಶ್ವಾಸನೆ ನೀಡಿದ್ದಾರೆ.

ಇವರೆಲ್ಲರಿಗೂ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ.

ಹಿಂದಿನ ಪುಸ್ತಕದಂತೆ ಈ ಎರಡನೆಯ ಭಾಗವನ್ನೂ ಅಂದವಾಗಿ ಮುದ್ರಿಸಿದ ರಾಷ್ಟ್ರಪ್ರಶಸ್ತಿ ವಿಜೇತರಾದ ಪ್ರಜಾ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಇದರ ವ್ಯವಸ್ಥಾಪಕ ನಿರ್ದೇಶಕರಾದ ಸಹಕಾರಿ ಬಂಧು, ಸಮಾಜ ಸೇವಾಧುರೀಣ ಶ್ರೀಯುತ ವೈ. ಎ. ಕೇಶವಮೂರ್ತಿ ಅವರಿಗೂ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಯುತ ವೈ. ಎ. ಶ್ರೀನಿವಾಸಮೂರ್ತಿ ಅವರಿಗೂ ನನ್ನ ಕೃತಜ್ಞತೆಯನ್ನು ತಿಳಿಸಲು ಸಂತೋಷವಾಗುತ್ತದೆ.

ಹಾಗೆಯೇ ನಾನು ಅಪೇಕ್ಷಿಸಿದ ಕಾಲದೊಳಗೆ ಚಟುವಟಿಕೆಯನ್ನು ಹೊಂದಿ ಗ್ರಂಥದ ಮುದ್ರಣ ಕಾರ್ಯದಲ್ಲಿ ನೆರವನ್ನೀಡಿದ ಕಾರ್ಯವರ್ಗದವರೆಲ್ಲರಿಗೂ, ಹಾಗೂ ತಿದ್ದುಪಡಿ ವಿಭಾಗದ ಶ್ರೀ ಆರ್. ಆರ್. ವೆಂಕಟರಾಮಯ್ಯನವರಿಗೂ ಸಹ ನಾನು ಚಿರಋಣಿ.

ಬೆಂಗಳೂರು
ಶ್ರಾವಣ ಶುಕ್ಲ ಪೌರ್ಣಿಮೆ
ದಿನಾಂಕ : ೧೬-೮-೧೯೮೯

ಸಾಹಿತ್ಯ ವೇದ ವೇದಾಂತ ವಿದ್ವಾನ್
ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯ

ಪಂಡಿತರತ್ನಂ
ಕೆ. ಎಸ್. ವರದಾಚಾರ್ಯ

ನಂ. ೨೮೪೨, ಪಂಪಾಪತಿ ರಸ್ತೆ
ಮೈಸೂರು-೫೭೦ ೦೧೪

# ಗ್ರಂಥದ ಬಗ್ಗೆ

ಅನೇಕ ಗ್ರಂಥಗಳನ್ನು ರಚಿಸಿ ಸುಪ್ರಸಿದ್ಧರಾದ ಶ್ರೀ ಉ. ವೇ. ವಿದ್ವಾನ್ ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯ ಸ್ವಾಮಿಗಳು ಬರೆದಿರುವ "ವಿಶಿಷ್ಟಾದ್ವೈತ ದರ್ಪಣ" ಎಂಬ ಗ್ರಂಥವನ್ನು ಓದಿ ನನಗೆ ಬಹಳ ಸಂತೋಷವಾಯಿತು. ಇದು ಒಂದು ಸಮಗ್ರ ಗ್ರಂಥ—ಅಂದರೆ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಗ್ರಂಥ.

ಈ ಸಿದ್ಧಾಂತದ ಸ್ಥಾಪನೆ, ಪೋಷಣೆ ಮತ್ತು ರಕ್ಷಣೆಗಾಗಿ ಅನೇಕ ಆಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿರುವರು. ಒಬ್ಬರೇ ಅನೇಕ ಗ್ರಂಥಗಳನ್ನು ರಚಿಸಿರುವರು. ಒಂದೊಂದು ಗ್ರಂಥದಲ್ಲೂ ಒಂದೊಂದು ವಿಶೇಷಾಂಶ ಇದ್ದೇ ಇರುವುದು. ಈ ಎಲ್ಲವನ್ನೂ ಪ್ರತಿಯೊಬ್ಬರೂ ಓದುವುದು ಅಶಕ್ಯ. ಇದಲ್ಲದೆ, ಅನೇಕ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿರುವುದರಿಂದ ಸಾಮಾನ್ಯ ಜನರಿಗೆ ಅವನ್ನು ಓದಲು ಸಾಧ್ಯವೂ ಇಲ್ಲ. ಇದೆಲ್ಲವನ್ನು ಆಲೋಚಿಸಿ ಈ ಗ್ರಂಥಕಾರರು ಈ ಗ್ರಂಥವನ್ನು ಸರ್ವಾಂಗ ಸುಂದರವಾಗಿಯೂ ಸರಳವಾಗಿಯೂ ರಚಿಸಿ ಮಹೋಪಕಾರ ಮಾಡಿದ್ದಾರೆ. ಇಂತಹ ಗ್ರಂಥಗಳನ್ನು ರಚಿಸಲು ಬೇಕಾದ ಶಾಸ್ತ್ರಪಾಂಡಿತ್ಯ, ಸಂಪ್ರದಾಯಜ್ಞಾನ ಇತ್ಯಾದಿಗಳು ಇವರಿಗೆ ಇರುವುದರಿಂದ ಈ ಗ್ರಂಥ ಎಲ್ಲರಿಗೂ ಆದರಣೀಯವಾಗಿದೆ.

ಒಟ್ಟಿನಲ್ಲಿ ಈ ಮಹಾವಿದ್ವಾಂಸರು ಈ ಗ್ರಂಥವನ್ನು ರಚಿಸಿ ದರ್ಶನಕ್ಷೇತ್ರಕ್ಕೂ ವಿಶೇಷತಃ ವಿಶಿಷ್ಟಾದ್ವೈತ ದರ್ಶನಕ್ಕೂ ಕನ್ನಡ ಜನತೆಗೂ ಮಹೋಪಕಾರ ಮಾಡಿದ್ದಾರೆ. ಇವರಿಂದ ಇನ್ನೂ ಅನೇಕ ಸಾರಸ್ವತಸೇವೆ ನಡೆಯಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ದಿನಾಂಕ : ೨೭–೧೧–೧೯೮೯

ಕೊತ್ತಿಮಂಗಲಂ ವರದದಾಸಃ

ಸಂಸ್ಕೃತಿ ಪ್ರಚಾರ ಕಾರ್ಯಾಲಯ

ನಂ. ೩೭, ರಂಗರಾವ್ ರಸ್ತೆ
ಶಂಕರಪುರಂ, ಬೆಂಗಳೂರು-೫೬೦ ೦೦೪

# ಅವಲೋಕನ

ಅನ್ನದಾನಂ ಪರಂದಾನಂ ವಿದ್ಯಾದಾನಂ ಅತಃಪರಂ ।
ಅನ್ನೇನ ಕ್ಷಣಿಕಾತೃಪ್ತಿಃ ಯಾವಜ್ಜೀವಂತು ವಿದ್ಯಯಾ ॥

ಹಸಿದವರಿಗೆ ಅನ್ನನೀಡುವುದು ಶ್ರೇಷ್ಠವಾದ ದಾನವೆಂದು ಭಾವಿಸಲ್ಪಡುವುದಾದರೂ ಪರಮಶ್ರೇಷ್ಠವಾದುದು ವಿದ್ಯೆಯ ಜ್ಞಾನದ ದಾನವೆಂದೇ ಬಲ್ಲವರ ತೀರ್ಮಾನ. ವಿದ್ಯೆಯೆಂದರೆ ಸಾಮಾನ್ಯವಾದ ತಿಳಿವಳಿಕೆಗಿಂತ ಮಿಗಿಲಾದ "ಸಾ ವಿದ್ಯಾ ಯಾ ವಿಮುಕ್ತಯೇ" ಸರ್ವಕರ್ಮ ಬಂಧನಗಳಿಂದ ಬಿಡುಗಡೆಹೊಂದಿ ಜೀವಾತ್ಮನು ಸ್ವಾಭಾವಿಕವಾದ ಅನುಪಮ, ಅಮಿತ ಮತ್ತು ಪರಿಶುದ್ಧ ಪರಮಾನಂದವನ್ನು ಶಾಶ್ವತವಾಗಿ ಪಡೆಯಲು ಸಾಧಕವಾದ ಶ್ಲಾಘ್ಯ ಬ್ರಹ್ಮವಿದ್ಯೆಯೆಂದೇ ಜ್ಞಾನಿಗಳ ನಿರ್ಣಯ. ಇಂಥ ವಿದ್ಯೆಯನ್ನು ಎಲ್ಲರಿಗೂ ನೀಡುವ ದಾನಕ್ಕೆ ಸಮವಾದುದು ಲೋಕದಲ್ಲಿ ಮತ್ತೊಂದಿಲ್ಲ. ಇಂಥ ಪರಮದಾನವನ್ನು ಪ್ರತಿಯೊಬ್ಬರಿಗೂ ನೀಡುವ ಪರಮಶ್ಲಾಘ್ಯವಾದ ಕಾರ್ಯವನ್ನು ಕೈಗೊಂಡಿರುವ ವಿದ್ವದ್ವರೇಣ್ಯರಾದ ಮಾನ್ಯ ಶ್ರೀ ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯರ ಪ್ರಯತ್ನವನ್ನು ಎಷ್ಟುಕೊಂಡಾಡಿದರೂ ಅಲ್ಪವೆ. ಬ್ರಹ್ಮವಿದ್ಯೆ ಅತ್ಯಂತ ಗಹನವಾದುದು. ಇದನ್ನು ಯಥಾವತ್ತಾಗಿ ತಿಳಿಯಲು ಪ್ರಬಲ ಸಂಸ್ಕಾರ, ಬಹುಗ್ರಂಥಗಳ ಆಳವಾದ ಅಧ್ಯಯನ ಇದಕ್ಕೆ ಅಪೇಕ್ಷಿತವಾದ ಬುದ್ಧಿಶಕ್ತಿ ಅಗತ್ಯ. ತಾವು ತಿಳಿದುದನ್ನು ಪಾಮರರಿಗೂ, ಶಾಸ್ತ್ರಪಾಂಡಿತ್ಯವಿಲ್ಲದವರಿಗೂ ಸಹ ಸುಲಭವಾಗಿ ಮನದಟ್ಟಾಗುವಂತೆ ಯಾವ ಸಂಶಯಕ್ಕೂ ಅವಕಾಶವಿಲ್ಲದಂತೆ ನಿಷ್ಕೃಷ್ಟವಾಗಿ ತಿಳಿಯಪಡಿಸುವುದಕ್ಕೆ ವಿಶೇಷವಾದ ಸಾಮರ್ಥ್ಯ ಅಪೇಕ್ಷಿತ. ಶ್ರೀ ಶ್ರೀನಿವಾಸರಂಗಾಚಾರ್ಯರು ಈ ಎರಡಂಶಗಳಲ್ಲಿಯೂ ಸಿದ್ಧಿ ಪಡೆದಿದ್ದಾರೆಂಬುದಕ್ಕೆ ಅವರು ರಚಿಸಿರುವ ವಿಶಿಷ್ಟಾದ್ವೈತ ದರ್ಪಣ ಗ್ರಂಥವು ಸಾಕ್ಷಿಯಾಗಿದೆ.

ವೇದ ಉಪನಿಷತ್ತು ಸ್ಮೃತಿ ಇತಿಹಾಸಪುರಾಣಾದಿ ಗ್ರಂಥಗಳಲ್ಲೂ ವೇದಾಂತ ಶಾಸ್ತ್ರ ಗ್ರಂಥಗಳಲ್ಲೂ ಆಳವಾದ ವೈದುಷ್ಯವನ್ನು ಪಡೆದು ಅವುಗಳಲ್ಲಿ ನಿಗೂಢ

ವಾಗಿರುವ ಅಮೂಲ್ಯ ವಿಷಯಗಳನ್ನು ಮನದಟ್ಟು ಮಾಡಿಕೊಂಡಿರುವ ಮಾನ್ಯ ವಿದ್ವಾಂಸರು, ಪ್ರಗತಿಯನ್ನು ಸಾಧಿಸುವ ಅಭಿಲಾಷೆಯುಳ್ಳ, ಶ್ರೇಯಸ್ಸನ್ನು ಪಡೆಯುವ ಆಕಾಂಕ್ಷೆಯುಳ್ಳ ಮಾನವರಿಗೆ ಅತ್ಯಗತ್ಯವಾದ ಅಪೇಕ್ಷಿತವಾದ ವಿಚಾರಗಳನ್ನೆಲ್ಲಾ ಆರಿಸಿ ಅಚ್ಚುಕಟ್ಟಾಗಿ ಜೋಡಿಸಿ ಪಾಮರರೂ ಅರಿಯುವಂತೆ ಸರಳವಾಗಿ ತಿಳಿಗನ್ನಡ ಭಾಷೆಯಲ್ಲಿ ಸತ್ಪರಿಣಾಮವಾಗುವ ಹಾಗೆ ಹೃದ್ಯವಾಗಿ ಪ್ರತಿಪಾದನೆ ಮಾಡಿದ್ದಾರೆ ಈ ಸುಂದರ ಗ್ರಂಥದಲ್ಲಿ. ಭಗವಂತನ ಸ್ವರೂಪ ಸ್ವಭಾವಗಳನ್ನೂ, ಜೀವಾತ್ಮನ ಸ್ವರೂಪ ಸ್ವಭಾವಗಳನ್ನೂ ಪರಮಾತ್ಮನ ಅನುಗ್ರಹ ಪ್ರಾಪ್ತಿಗೆ ಅಗತ್ಯವಾದ ಮತ್ತು ಫಲವನ್ನು ಕೊಟ್ಟೇ ಕೊಡುವ ಪ್ರಪತ್ತಿ ಅಥವಾ ಶರಣಾಗತಿಯ ಸ್ವರೂಪ, ಅದನ್ನು ಅನುಷ್ಠಿಸುವ ವಿಧಾನ ಮುಂತಾದವನ್ನು ಸಪ್ರಮಾಣವಾಗಿ ನಿಖರವಾಗಿ ನಿರೂಪಿಸಿದ್ದಾರೆ.

ಪ್ರಪತ್ತಿಯ ವಿಷಯದಲ್ಲಿ ವಿಪುಲವಾದ ವಿಮರ್ಶೆ ಮಾಡಿ ಗ್ರಂಥಕರ್ತೃಗಳು ಮಾಡಿರುವ ಸಿದ್ಧಾಂತವಂತೂ ಮನೋಜ್ಞವಾಗಿದೆ. ಯಾರಿಗೂ ಯಾವ ಬಗೆಯ ಸಂಶಯ ಆಕ್ಷೇಪಗಳೂ ತಲೆಯೆತ್ತದಂತೆ ನಿಷ್ಕರ್ಷೆ ಮಾಡಲ್ಪಟ್ಟಿದೆ. ಕೆಲವು ಉದಾಹರಣೆಗಳನ್ನಿತ್ತು ಇದರ ವೈಶಿಷ್ಟ್ಯವನ್ನು ತೋರಿಸಲಾಗಿದೆ. ಅಂತೆಯೇ ಜೀವಾತ್ಮನ ವಿಷಯದಲ್ಲೂ ಇತರ ದಾರ್ಶನಿಕರ ಅಭಿಪ್ರಾಯಗಳನ್ನು ಸಂಗ್ರಹವಾಗಿ ಪರಿಚಯಿಸಿ ಸಿದ್ಧಾಂತವನ್ನು ಅಪೇಕ್ಷಿತವಾದ ಉದಾಹರಣೆಗಳ ಮೂಲಕ ಸಯುಕ್ತಿಕವಾಗಿ ಪ್ರಮಾಣಬದ್ಧವಾಗಿ ಚೊಕ್ಕವಾಗಿ ತೋರಿರುತ್ತಾರೆ. ಮೋಕ್ಷಸ್ವರೂಪದಲ್ಲಿ ದಾರ್ಶನಿಕರಲ್ಲಿರುವ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಯಥಾರ್ಥವಾದ ತತ್ತ್ವವನ್ನು ಸ್ಪಷ್ಟಪಡಿಸಿದ್ದಾರೆ.

ಶ್ರಿಯಃ ಪತಿಯ ಪರತತ್ತ್ವವನ್ನೂ ಮಹಾಲಕ್ಷ್ಮಿಯ ವಿಶಿಷ್ಟ ಸ್ಥಾನವನ್ನೂ ನಿಖರವಾಗಿ ಪ್ರತಿಪಾದನೆ ಮಾಡಿದ್ದಾರೆ. ಆಯಾಯ ಮತದವರ ಸಂಪ್ರದಾಯದವರ ಅಭಿಪ್ರಾಯಗಳನ್ನು ಪ್ರಾಮಾಣಿಕವಾಗಿ ನಿರೂಪಿಸಿ ಉಪನಿಷತ್ಸಿದ್ಧಾಂತವನ್ನು ಸಮರ್ಥನೆ ಮಾಡಿ ಪರತತ್ತ್ವದ ನಿರ್ಣಯವನ್ನು ಮಾಡಿಕೊಟ್ಟಿದ್ದಾರೆ.

ಹಾಗೆಯೇ ಅಪೇಕ್ಷಿತವಾದಷ್ಟು ಅದ್ರವ್ಯದ ವಿಚಾರವನ್ನೂ ವಿಮರ್ಶೆ ಮಾಡಿ ಸರಿಯಾದ ಮಾಹಿತಿಯನ್ನು ಒದಗಿಸಿದ್ದಾರೆ.

ಈ ಗ್ರಂಥದಲ್ಲಿ ಪ್ರಧಾನವಾಗಿ ಚರ್ಚಿಸಿರುವ ವಿಷಯಗಳ ಕ್ರಮ ಹೀಗಿದೆ : ಪ್ರಪತ್ತಿನಿರೂಪಣೆ, ಪರಿಪೂರ್ಣ ಬ್ರಹ್ಮಾನುಭವನಿರೂಪಣೆ, ಜೀವತತ್ತ್ವನಿರೂಪಣೆ, ಈಶ್ವರನಿರೂಪಣೆ ಅದ್ರವ್ಯನಿರೂಪಣೆ. ಮೇಲ್ಕಂಡ ವಿಷಯಗಳನ್ನು ನಿರೂಪಿಸಲು ವೇದ ಉಪನಿಷತ್ತು ಬ್ರಹ್ಮಸೂತ್ರ ಮಹಾಭಾರತ ವಿಷ್ಣುಪುರಾಣ ಪಾಂಚರಾತ್ರ

ಸಂಹಿತೆ ಭಗವದ್ಗೀತೆ ಶ್ರೀಭಾಷ್ಯ ಗೀತಾಭಾಷ್ಯ ವೇದಾರ್ಥ ಸಂಗ್ರಹ ಲಕ್ಷ್ಮೀತಂತ್ರ ಶ್ರೀಸ್ತವ ಶ್ರೀ ಗುಣರತ್ನಕೋಶ ತತ್ತ್ವಮುಕ್ತಾಕಲಾಪ ನ್ಯಾಯಸಿದ್ಧಾಂಜನ ನಿಕ್ಷೇಪ ರಕ್ಷೆ ರಹಸ್ಯತ್ರಯಸಾರ ತತ್ತ್ವ ಶುದ್ಧಿ ಮುಂತಾದ ಗ್ರಂಥಗಳೆಲ್ಲವನ್ನೂ ಗ್ರಂಥಕಾರರು ಆಧಾರನಾಗಿ ಅವಲಂಬಿಸಿರುತ್ತಾರೆ.

"ವಿಶಿಷ್ಟಾದ್ವೈತ ದರ್ಪಣ" ಗ್ರಂಥವು ಹೆಸರಿಗೆ ತಕ್ಕಂತೆ ಅಪೂರ್ವ ವಿಷಯ ಗಳೆಲ್ಲವನ್ನೂ ಸ್ಪಷ್ಟವಾಗಿ ಪ್ರತಿಪಾದಿಸುವುದರಲ್ಲಿ ವಾಸ್ತವವಾಗಿ ಕನ್ನಡಿಯಾಗಿದೆ.

ತಿಳಿಯಬೇಕಾದ ವಿಷಯಗಳನ್ನೆಲ್ಲಾ ಸ್ಪಷ್ಟವಾಗಿ ಪ್ರತಿಪಾದಿಸುವ ಈ ಗ್ರಂಥ ವೊಂದರ ಅಧ್ಯಯನವೇ ಸಾಕು. ಬೇರಾವ ಗ್ರಂಥಗಳ ಅಧ್ಯಯನದ ಆವಶ್ಯಕತೆ ಇಲ್ಲ. ಇತರ ಗ್ರಂಥಗಳ ಪರಿಚಯ ಅನಪೇಕ್ಷಿತ. ಇಷ್ಟೇ ಅಲ್ಲ, ಸಮಗ್ರ ವಿಷಯ ಗಳನ್ನೆಲ್ಲ ಒಂದೇ ಕಡೆ ಸುಂದರವಾಗಿ ಚಿತ್ರಿಸುವ ಬೇರಾವ ಗ್ರಂಥವೂ ಇಲ್ಲ. ಈ ಭವ್ಯಗ್ರಂಥ ಅನುಪಮ. ಅಸಾಧಾರಣ. ಈ ಗ್ರಂಥದ ಅಧ್ಯಯನ ಕೇವಲ ಶಾಸ್ತ್ರ ಪರಿಶ್ರಮವಿಲ್ಲದವರಿಗೆ ಮಾತ್ರ ಅಲ್ಲ ಅನೇಕ ಶಾಸ್ತ್ರಗ್ರಂಥಗಳಲ್ಲಿ ವೈದುಷ್ಯವನ್ನು ಪಡೆದಿರುವ ವಿದ್ವಾಂಸರಿಗೂ ಸಹ ಎಲ್ಲ ವಿಷಯಗಳನ್ನೂ ಸುಲಭವಾಗಿ ತಿಳಿಯಲು ನಿರ್ಣಯ ಮಾಡಿಕೊಳ್ಳಲು ಅತ್ಯಗತ್ಯವೆಂಬುದನ್ನು ಒತ್ತಿಹೇಳಲು ಸಂತೋಷಿಸುತ್ತೇನೆ.

ಮಾನ್ಯಶ್ರೀ ಶ್ರೀನಿವಾಸರಂಗಾಚಾರ್ಯರ ಪರಿಶ್ರಮದ ತಪಸ್ಸಾಧನೆಯ ಫಲ ಈ ಉತ್ತಮ ಗ್ರಂಥ ನಿರ್ಮಾಣವೆಂಬುದು ಸ್ಪಷ್ಟವಾಗಿ ತೋರುತ್ತದೆ.

ನನ್ನ ಮಾನ್ಯಮಿತ್ರರಾದ ಶ್ರೀಯುತ ಗ್ರಂಥಕಾರರಿಂದ ಈ ಬಗೆಯ ಉತ್ತಮ ಕೃತಿಗಳು ಹೊರಹೊಮ್ಮುತ್ತಿರಲಿ ಎಂದು ಆಶಿಸುತ್ತೇನೆ.

**ಪಂಡಿತರಾಜ ಎನ್. ಟಿ. ಶ್ರೀನಿವಾಸಯ್ಯಂಗಾರ್**

ದಿನಾಂಕ : ೨-೧-೧೯೯೦ ವಿಶ್ರಾಂತ ವ್ಯಾಕರಣ ಪ್ರಧಾನಾಧ್ಯಾಪಕ

# ಅಭಿಪ್ರಾಯ

ಹತ್ತಾರು ವರ್ಷಗಳ ಕಾಲ ಅನೇಕ ಗ್ರಂಥಗಳ ನಿರಂತರ ಅಧ್ಯಯನ ಪರಿಶ್ರಮ ಸಾಧನೆಗಳಿಂದ ತಿಳಿಯಲು ಶಕ್ಯವಾದ ಸಾರವಾದ ಆಧ್ಯಾತ್ಮಿಕ ವಿಷಯಗಳನ್ನು, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಒಂದೆಡೆ ಅಲ್ಪಕಾಲದಲ್ಲಿಯೇ ಅನಾಯಾಸವಾಗಿ ತಿಳಿಯಲು ಶಕ್ಯವಾಗುವಂತೆ ಸಂಕಲನ ಮಾಡಿ ಸ್ಪಷ್ಟವಾದ ರೀತಿಯಲ್ಲಿ ಪ್ರತಿಪಾದಿಸಿರುವ ಅಪೂರ್ವ ಗ್ರಂಥ "ವಿಶಿಷ್ಟಾದ್ವೈತ ದರ್ಪಣ".

ವಿಶಿಷ್ಟಾದ್ವೈತ ಸಿದ್ಧಾಂತ ಸಂಪ್ರದಾಯಗಳನ್ನು ನಿಖರವಾಗಿ ಅರಿತುಕೊಳ್ಳಬೇಕೆಂಬುವವರಿಗೆ ಇದೊಂದು ವರಪ್ರಸಾದವೆಂಬುದರಲ್ಲಿ ಸಂಶಯವಿಲ್ಲ. ಇಂಥ ಅಪೂರ್ವ ಮತ್ತು ಅನುಪಮ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಸರಳವಾಗಿ ರಚಿಸಿರುವ ಮಾನ್ಯ ಶ್ರೀ ಶ್ರೀನಿವಾಸರಂಗಾಚಾರ್ಯರು ಅತ್ಯಂತ ಅಭಿನಂದನಾರ್ಹರು.

ಈ ಗ್ರಂಥವನ್ನು ಸರ್ವರೂ ಅಧ್ಯಯನ ಮಾಡುವುದು ಅಗತ್ಯ.

**ವಿ. ಎಸ್. ಇಂದಿರಮ್ಮ**
ವಿಶಿಷ್ಟಾದ್ವೈತ ಪ್ರಾಧ್ಯಾಪಕರು
ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು
ಬೆಂಗಳೂರು-೫೬೦ ೦೧೮

# ಅಲ್ಪ ಬೆಲೆ–ಅಮೋಘ ಸಾಹಿತ್ಯ

## ವಿಶಿಷ್ಟಾದ್ವೈತ ದರ್ಪಣ (ಭಾಗ-೧)

**ಲೇಖಕರು ಮತ್ತು ಪ್ರಕಾಶಕರು :** ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯ, ಶ್ರೀರಂಗ ನಿಲಯ, ನಂ. ೧೦೩/೧, ೧ನೇ ಮುಖ್ಯ ರಸ್ತೆ, ೩ನೇ ಅಡ್ಡ ರಸ್ತೆ, ಗವೀಪುರಂ ಬಡಾವಣೆ, ಬೆಂಗಳೂರು-೫೬೦ ೦೧೯. ಪುಟ : ೬೨೪. ಬೆಲೆ : ರೂ. ೬೦. (ಮೊದಲ ಮುದ್ರಣ : ೧೯೮೬).

ಕನ್ನಡದಲ್ಲಿ ವಿಶಿಷ್ಟಾದ್ವೈತ ತತ್ತ್ವವನ್ನು ತಿಳಿಸುವಂತಹ ಗ್ರಂಥಗಳು ಹಲವು ಇವೆ. ಈಗ ಪ್ರಕಟವಾಗಿರುವ ಶ್ರೀನಿವಾಸರಂಗಾಚಾರ್ಯರ ಕೃತಿಯು. ಉಳಿದ ಕೃತಿಗಳಿಗಿಂತ ಮಹತ್ವವಾಗಿದೆ.

ವಿಶಿಷ್ಟಾದ್ವೈತ ದರ್ಪಣ ಎಂಬ ಹೆಸರಿನಲ್ಲಿ ಅನ್ವಯ–ಅನ್ವರ್ಥಕ ಭಾವದಂತೆ ವಿಷಯವು ಚೆನ್ನಾಗಿ ಪ್ರತಿಪಾದಿತವಾಗಿದೆ. ಪರಮತವನ್ನು ದೂಷಣೆಗೆ ಒಳಪಡಿಸದೆ– ಆಯಾ ಮತಗಳಲ್ಲಿ ಅಡಗಿರುವ ಸಾರವನ್ನೂ ಲೋಪವನ್ನೂ ಚೆನ್ನಾಗಿ ಗ್ರಹಿಸಿ ಕೊಂಡು ನಿರಸನ ಮಾಡಿರುವ ವಾದ ವೈಖರಿಯೂ ಕೋಟಿ ಕ್ರಮ ಚಾತುರ್ಯವೂ ಯುಕ್ತ–ಯುಕ್ತವೂ ಕ್ರಮವೂ ಅನ್ಯಾದೃಶವಾಗಿದೆ. ಗ್ರಂಥಕರ್ತರ ವಿದ್ವತ್ತು ಸಮುಚಿತವಾಗಿ ಹೀಗೆ ಪ್ರಕಾಶಮಾನವಾಗಿದೆ.

ಗ್ರಂಥದ ಆರಂಭದಲ್ಲಿ ಅವೈದಿಕ ದರ್ಶನಗಳಾದ ಚಾರ್ವಾಕ–ಬೌದ್ಧ ದರ್ಶನ ಗಳ ತಿರುಳನ್ನು ವಿಷಯವನ್ನು ಸಂಗ್ರಹವಾಗಿ ಹೇಳಿ ಅವು ಹೇಗೆ ವೇದ ವಿಷಯಕ್ಕೆ ವಿರುದ್ಧ ಎಂಬುದನ್ನು ಸಕಾರಣವಾಗಿ ತಿಳಿಯ ಹೇಳಿ ನಿರಸನ ಮಾಡಿರುವುದು ಬೆರಗು ತರುತ್ತದೆ. ಇನ್ನಿತರ ದರ್ಶನಗಳಾದ ಸಾಂಖ್ಯ–ವೈಶೇಷಿಕ ಇತ್ಯಾದಿ ತತ್ವದರ್ಶನ ಗಳನ್ನೂ ಸಹ ಇದೇ ರೀತಿ ನಿರಸನಮಾಡಿ—ರಾಮಾನುಜಾಚಾರ್ಯರ ವಿಶಿಷ್ಟಾ ದ್ವೈತದ ಮಹತ್ವವನ್ನು ಸಂಗ್ರಹವಾಗಿ ಆದರೆ ಸಾರವತ್ತಾಗಿ ತಿಳಿಯಪಡಿಸಿರುವ ಗ್ರಂಥಕರ್ತರ ಕ್ರಮವು ಬಹುದೊಡ್ಡದು.

ಇದಕ್ಕೆ ಗ್ರಂಥಕರ್ತರು ಬಳಸಿರುವ ಆಳ್ವಾರರ ಸೂಕ್ತಗಳು, ಗೀತೆ–ಉಪನಿ ಷತ್ತು, ಬ್ರಹ್ಮಸೂತ್ರ–ವೇದ ಅರಣ್ಯಕ ಗ್ರಂಥಗಳ ಆಧಾರ ಬಹಳ ಸಮುಚಿತವೂ ಸಂದರ್ಭಾನುಸಾರವೂ ಯುಕ್ತಿ–ಯುಕ್ತವೂ ಆಗಿದೆ,

ಗ್ರಂಥದ ಉದ್ದಕ್ಕೂ ಬಳಸಿರುವ ಆಧಾರವಾಕ್ಯಗಳಿಗೆ ಗ್ರಂಥಕರ್ತರೇ ನೀಡಿರುವ ಕನ್ನಡಾನುವಾದ ಬಹಳ ಸಮಂಜಸವಾಗಿದೆ. ಸಾಮಾನ್ಯ ಜನರು ಸಂಸ್ಕೃತ ಗೊತ್ತಿಲ್ಲದವರಿಗೆ ಗದ್ಯಭಾಗವನ್ನು ಮಾತ್ರ ಓದಿಕೊಂಡರೆ ಸಾಕು; ವಿಷಯವು ಯಥೋಚಿತವಾಗಿ ಮನವರಿಕೆಯಾಗುತ್ತದೆ. ಸ್ವಮತ ದರ್ಶನವನ್ನು ಮಾಡಿಕೊಡುವಾಗಲೂ ಗ್ರಂಥಕರ್ತರು ಅತಿ ವಿಸ್ತಾರಕ್ಕೆ ಹೋಗದೆ, ಆದರೆ ಕ್ರಮ ತಪ್ಪದೆ ಸಾರಸಂಗ್ರಹ ಮಾಡಿರುವ ವಿದ್ವತ್ ಕ್ರಮ ಸಂತೋಷವನ್ನೂ ಬೆರಗನ್ನೂ ತರುತ್ತದೆ !

ಈ ಬೃಹದ್ ಗ್ರಂಥದಲ್ಲಿ ಗ್ರಂಥಕರ್ತರು ದರ್ಶನ ಮಾಡಿಸಲು ಹೊರಟಿರುವ "ವಿಶಿಷ್ಟಾದ್ವೈತ ದರ್ಪಣ" ಸಾಮಾನ್ಯ ಜನರಿಗೂ ಪಂಡಿತರಿಗೂ ವಿಷಯವನ್ನು ಗ್ರಹಿಸಲು ಆಸಕ್ತಿ ಇರುವವರಿಗೂ ಮುಮುಕ್ಷುಜನಗಳಿಗೂ ಪ್ರಿಯವಾಗುವುದರಲ್ಲಿ ಸಂದೇಹವೇನೂ ಇಲ್ಲ. ಶಾಸ್ತ್ರ ಮತ್ತು ಸಂಪ್ರದಾಯ ಪರವಾದ ವಿವರಗಳಲ್ಲಿ ಗ್ರಂಥಕರ್ತರ ವ್ಯುತ್ಪತ್ತಿ ಕ್ರಮ ಬುದ್ಧಿ ವೈಭವ ಅಸಾಧಾರಣ ಮೇಧಾಶಕ್ತಿ ಯುಕ್ತಿ ಕ್ರಮ ತರ್ಕ ವೈಖರಿ ಯಾರನ್ನೂ ಸಹ ಬಾಯಿ ಮುಚ್ಚಿಸುತ್ತದೆ. ಪ್ರತಿಪಾದನೆ ಮಾಡುವಾಗಿನ ಗ್ರಂಥಕರ್ತರ ವಿಷಯಕ್ರಮ ನಿರೂಪಣೆಯಂತೂ ಅಸದೃಶವಾಗಿದೆ.

ಇಂದು ಪರಂಪರೆಯಿಂದ ಬಂದ ದರ್ಶನ ಗ್ರಂಥಗಳ ಅನುಸಂಧಾನ ವಿರಳವಾಗುತ್ತಿರುವಾಗ ಆಯಾ ದರ್ಶನ ಗ್ರಂಥಗಳ "ತಲಸ್ಪರ್ಶೀಯವಾದ ವ್ಯಾಸಂಗಕ್ಕೆ ಇಂಥ ಗ್ರಂಥಗಳು ಉಪಕಾರವೂ ಉಪಾದೇಯವೂ ಆಗುತ್ತವೆ. ಇಂಥ ಗ್ರಂಥಗಳನ್ನು ಬರೆಯುವುದೂ ಬರೆದುದನ್ನು ಪ್ರಕಟಪಡಿಸುವುದೂ ಒಂದು ದೊಡ್ಡ ಸಾಹಸದ ಕೆಲಸವೇ. ಆದರೆ ಗ್ರಂಥಕರ್ತರಿಗೆ ವಿಷಯದ ಮೇಲಿರುವ ಪ್ರಭುತ್ವವೂ ವಿಷಯವನ್ನು ಜನಸಾಮಾನ್ಯರಿಗೆ ತಿಳಿಯಪಡಿಸಬೇಕೆಂಬ ಕಳಕಳಿಯೂ ಅದನ್ನು ಪಡೆದು ದರ್ಶನೋಚ್ಚುಗಳಾಗಬೇಕೆಂಬ ಮಹಾ ಮತಿತಾರ್ಥವೂ ಇರುವುದರಿಂದ ಈ ಗ್ರಂಥ ಅವರ ವಿದ್ವದುದ್ಯಮ ಸಾಹಸದಿಂದ ಪ್ರಕಾಶಿತವಾಗಿದೆ.

ಸುಮಾರು ಆರುನೂರು ಪುಟಗಳ ಈ ದೊಡ್ಡ ಗ್ರಂಥದಲ್ಲಿ, ಈಶಾವಾಸ್ಯ ವಿದ್ಯಾ (ಪುಟ ೨೮೭), ಆನಂದಮಯ ವಿದ್ಯಾ (ಪುಟ ೩೧೭), ಶಾಂಡಿಲ್ಯ ವಿದ್ಯಾ (ಪುಟ ೩೫೨), ಉಪಕೋಸಲ ವಿದ್ಯಾ (ಪುಟ ೩೭೪), ವೈಶ್ವಾನರ ವಿದ್ಯಾ (ಪುಟ ೪೦೩), ಮಧುವಿದ್ಯಾ (ಪುಟ ೪೪೩), ಅಜಾವಿದ್ಯಾ (ಪುಟ ೪೬೭), ಪಂಚಾಗ್ನಿವಿದ್ಯಾ (ಪುಟ ೫೫೩), ಗಾಯಿತ್ರಿ ವಿದ್ಯಾ (ಪುಟ ೫೭೯), ಪರ್ಯಂಕ ವಿದ್ಯಾ (ಪುಟ ೫೮೫) ಈ ಭಾಗಗಳು ಶಾಸ್ತ್ರಕ್ಕೆ ಶಾಸ್ತ್ರಾರ್ಥ ಶೈಲಿಯೂ ಸುಭಗತ್ವಕ್ಕೆ ಸುಭಗ ಶೈಲಿಯೂ ಆಗಿರುವುದು ಮೆಚ್ಚುವಂಥ ಸಂಗತಿ.

ಓದುಗರು ಜಿಜ್ಞಾಸುಗಳು ಇದನ್ನು ಒಂದೇ ಓದಿಗೆ ಮುಗಿಸತಕ್ಕದ್ದಲ್ಲ. ಆಗಾಗ್ಗೆ ಓದುತ್ತಾ ಓದಿದ್ದನ್ನು ಮನನ ಮಾಡುತ್ತಾ ಮನನ ಮಾಡಿದನ್ನು ಪುನರಾಲೋಚನೆಗೆ ಒಳಪಡಿಸುತ್ತ ಹೋದರೆ ಗ್ರಂಥವು ಸ್ವಾಧೀನವಾಗುತ್ತದೆ. ಶಾಸ್ತ್ರದ ಸಾಮಾನ್ಯ ತಿಳಿವನ್ನು ತಿಳಿಯಬೇಕೆನ್ನುವವರೂ ಶಾಸ್ತ್ರದ ಆಳವಾದ ಅರಿವನ್ನು ಪಡೆಯಬೇಕೆನ್ನುವವರೂ ಈ ಬೃಹದ್ ಗ್ರಂಥದ ಅಧ್ಯಯನದಿಂದ ಸುಪ್ರೀತರಾಗಬಲ್ಲರು. ಇದರಲ್ಲಿ ಸಂಶಯವಿಲ್ಲ. ಗ್ರಂಥಕರ್ತರು ಇದರ ಮುಂದಿನ ಭಾಗವನ್ನೂ ಸಹ ಪ್ರಕಾಶ ಪಡಿಸಲೆಂದು ಮನಸಾ ಆಶಿಸುತ್ತೇನೆ.

ಮುದ್ರಣ ವಿನ್ಯಾಸ ಉಪಯೋಗಿಸಿರುವ ಕಾಗದ ಅಚ್ಚುಕಟ್ಟುತನ ವಿಷಯಕ್ಕೆ ತಕ್ಕಂತೆ ಇದೆ. ಇಂಥ ಬೃಹದ್ ಗ್ರಂಥಕ್ಕೆ ಇಟ್ಟಿರುವ ಬೆಲೆಯೂ ಅಲ್ಪವೇ. ಮಹಾಜನರು ಕೊಂಡು ಓದಿ ಸುಪ್ರೀತರಾಗಿ ದರ್ಶನಭಾಗ್ಯವನ್ನು ಪಡೆದರೆ ಗ್ರಂಥ ಕರ್ತರ ಶ್ರಮ ಸಾರ್ಥಕವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಕನ್ನಡ ಪ್ರಭ (ದಿನಾಂಕ ೮-೬-೧೯೮೬)

# ಅರ್ಪಣೆ



ಶ್ರೀರಂಗಮ್ಮ

ಕಡಲೊಳು ತೇಲುವ ಕಟ್ಟಿಗೆಗಳೆರಡೂ ತೆರೆಗಳ ಬಡಿತದಿ ಬೆರೆಯುವ ತೆರದಿ ಎಲೌ ಜೀವ ! ನೀನೂ ನಾನೂ ಪಿಂತಿನ ಕರುಮದ ಪರಿಪಾಕದಿ ಹಿರಿಯಕುಲದಿ ಸ್ತ್ರೀಪುಂರೂಪವಂ ಪೆತ್ತೀ ಸಂಸಾರದ ಕಡಲೊಳು ಬೆರೆತವಲ್ತೆ ! ನೀ ಎನ್ನ ಕೈಯಂ ಪಿಡಿದು ಹದಿಬದೆಯ ಪದವಿಯಂ ಪೆತ್ತೆ ! ಬಾಳಿನ ಹಾದಿಯಲಿ ನಡೆಯಲು ತೊಡಗಿ ಗಾಡಿಯಂ ಸೆಳೆವ ಎತ್ತುಗಳಂದದಿ ಸಮಭಾರವಂ ನಾಂ ಪೊತ್ತುದಿಲ್ಲ. ನೊಗದ ಬಲುಭಾರವಂ ನೀನೇ ಪೊತ್ತು ಪತಿಯ ಸಹಕರಿಸಿದೆ. "ಈಸಬೇಕು ಇದ್ದು ಜಯಿಸಬೇಕು" ಎಂಬೀ ನಾಣ್ಣುಡಿಯ ತತ್ತ್ವಮಮ್ ನಾನರಿತೆ ನಿನ್ನಿಂದ. ತುದಿಹಾದಿಯಲಿ ಸಂಸಾರದ ಭರವಂ ಎನ್ನೀಹೆಗಲಲಿ ಹೊರಸಿಟ್ಟು ಕಣ್ಮರೆಯಾದ. ವಿಧಿನಿಯಮದಿ ಬೆರೆತ ಕಟ್ಟಿಗೆಗಳೆರಡೂ ಪಿರಿದವು. ಒಂಟೆತ್ತಿನೀ ಗಾಡಿಯಂ ಸೆಳೆದು ಗುರಿಯಂ ನಾಂ ಮುಟ್ಟುವ ಪರಿಯಂ ತಿಳಿಸುವೆಯಾ ಮಡದಿಯ ರೂಪದಾ ಓ ಜೀವ ! ಈ ಪೊತ್ತಿಗೆಯನ್ನಾದರೂ ಓದಿ ಧೃತಿಧರಿಸೆನ್ನುವೆಯಾ ?

–ನಿನ್ನ ಪತಿದೈವ ಶ್ರೀರಂಗ

# ಗ್ರಂಥಕರ್ತ



ವೇದಮಾರ್ತಾಂಡ, ಸಾಹಿತ್ಯ ವೇದ ವೇದಾಂತ ವಿದ್ವಾನ್, ಶ್ರೀರಂಗಂ ಶ್ರೀಮದಾಂಡವನ್ ಆಶ್ರಮಮ್ ಆಸ್ಥಾನ ವಿದ್ವಾನ್, ಸೋಸಲೆ ವ್ಯಾಸರಾಯ ಮಠದ ಆಸ್ಥಾನ ವಿದ್ವಾನ್, ಯಜುರ್ವೇದ ಮಾರ್ತಾಂಡ, ಯಜುರ್ವೇದ ರತ್ನ

**ಶೇಟ್ಟಿಲೂರ್ ಶ್ರೀನಿವಾಸರಂಗಾಚಾರ್ಯ**

ವಿಶ್ರಾಂತ ಕನ್ನಡ ಪಂಡಿತ, ಸಂಸ್ಕೃತ ಪ್ರಧಾನ ಅಧ್ಯಾಪಕ, ಕಾರ್ಪೊರೇಷನ್ ಪ್ರೌಢಶಾಲೆ, ಚಾಮರಾಜಪೇಟೆ, ಬೆಂಗಳೂರು. ವಿಶ್ರಾಂತ ಸಂಸ್ಕೃತ, ಕನ್ನಡ ಲೆಕ್ಚರರ್, ಥಿಯಲಾಜಿಕಲ್ ಕಾಲೇಜ್, ಮಿಲ್ಲರ್ಸ್ ರೋಡ್, ಬೆಂಗಳೂರು

# ವಿಷಯಾನುಕ್ರಮಣಿಕೆ


| | |
|---|---|
| ಮುನ್ನುಡಿ | vii |
| ಗ್ರಂಥದ ಬಗ್ಗೆ | x |
| ಅವಲೋಕನ | xi |
| ಅಭಿಪ್ರಾಯ | xiv |
| ಅಲ್ಪ ಬೆಲೆ–ಅಮೋಘ ಸಾಹಿತ್ಯ | xv |
| ಅರ್ಪಣೆ | xviii |
| ಪ್ರಪತ್ತಿ ಶಬ್ದದ ಅರ್ಥ | ೨ |
| ಪೀಠಿಕೆ | ೭ |
| ಪೂರ್ವಪಕ್ಷ | ೯ |
| ಇನ್ನು ಸಿದ್ಧಾಂತವನ್ನು ಸಂಗ್ರಹವಾಗಿ ತಿಳಿಯೋಣ | ೧೫ |
| ಲಕ್ಷ್ಮೀತನ್ತ್ರದಲ್ಲಿ ಷಡಂಗ ಯೋಗದ ವಿವರಣೆ ಹೀಗೆ ಇದೆ | ೨೯ |
| ಗುರುಭಕ್ತಿ | ೫೮ |
| ಶ್ರೀ ತತ್ತ್ವದ ನಿರೂಪಣೆ | ೫೯ |
| ಪರಮೈಕಾಂತಿಯ ಲಕ್ಷಣ | ೬೬ |
| ಸಚ್ಛಿಷ್ಯ ಮತ್ತು ಸದಾಚಾರ್ಯರ ಲಕ್ಷಣ | ೭೭ |
| ಪೀಠಿಕೆಯ ಸಿಂಹಾವಲೋಕನ | ೭೭ |
| ಪ್ರಪತ್ತಿಯು ಮೋಕ್ಷಕ್ಕೆ ನೇರವಾದ ಕಾರಣ | ೭೯ |
| ಪ್ರಪತ್ತಿಯು ಪ್ರತ್ಯೇಕವಾದ ಉಪಾಯ | ೮೦ |
| ಸ್ವರೂಪ ವಿಚಾರ | ೮೪ |
| ಗುರು ಲಘು ವಿಕಲ್ಪ ವಿಚಾರ | ೮೫ |

ಭರನ್ಯಾಸದ ಆವಶ್ಯಕತೆ ೧೦೮

ಪ್ರಪತ್ತಿ ಲಕ್ಷಣ ವಾಕ್ಯಗಳಿಗೆ ಐಕಕಂಠ್ಯದ ವರ್ಣನೆ ೧೧೦

ಭಗವಂತನಲ್ಲಿ ಉಪಾಯತ್ವ ಜ್ಞಾನವೇ ಪ್ರಪತ್ತಿ ಎಂಬ ಪಕ್ಷದ ನಿರಸನ ೧೧೪

ಚರಮಶ್ಲೋಕವು ವಿಧಿವಾಕ್ಯವಲ್ಲ, ಅನುವಾದ ಮಾತ್ರವೇ
ಎಂಬ ವಾದದ ಖಂಡನೆ ೧೨೭

ಭಕ್ತ್ಯುಪಾಯವು ಆತ್ಮನಾಶಕವಾಗಿ ಸ್ವರೂಪ ವಿರುದ್ಧ
ಎಂದು ಹೇಳುವ ವಾದವು ಸರಿಯಲ್ಲ ೧೩೨

ಅಸಂಭಾವಿತವಾಗಿರುವಿಕೆಯಿಂದ ಸ್ವರೂಪ ವಿರುದ್ಧ
ಎಂಬ ಹೇಳಿಕೆಯ ನಿರಸನ ೧೩೨

ಅನರ್ಥಾವಹವಾಗಿ ಸ್ವರೂಪ ವಿರುದ್ಧವೆಂಬ ವಾದದ ನಿರಸನ ೧೩೮

ಮಹಾವಿಶ್ವಾಸವೂ ಅಙ್ಗವಲ್ಲವೆಂಬ ವಾದದ ನಿರಸನ ೧೬೨

ಪ್ರಪತ್ತಿಯು ಸ್ವತಃ ಅಙ್ಗಿಯಾಗಿ ಉಪಾಯವಲ್ಲ,
ಅಙ್ಗಿಯಾದ ಉಪಾಸನಕ್ಕೆ ಅಙ್ಗಮಾತ್ರವೆಂಬ ವಾದದ ನಿರಸನ ೧೬೯

**ಪರಿಪೂರ್ಣ ಬ್ರಹ್ಮಾನುಭವ** ೧೮೫

**ಜೀವತತ್ತ್ವ ನಿರೂಪಣೆ** ೨೦೩

ಜೀವರು ಈಶ್ವರನಿಗಿಂತಲೂ ಹಾಗೆಯೇ ತಮ್ಮಲ್ಲಿ ಒಬ್ಬರಿಗೊಬ್ಬರೂ
ಭಿನ್ನರಾಗಿದ್ದಾರೆ ೨೨೩

ಕೈವಲ್ಯ ವಿಚಾರ ವಿಮರ್ಶೆ ೨೩೦

ಕೈವಲ್ಯವೆಂಬ ಮೋಕ್ಷವು ಭಾಷ್ಯಕಾರರಿಗೆ ಸಮ್ಮತವಾದುದಲ್ಲ
ಎಂಬುದರ ನಿರೂಪಣೆ ೨೪೨

**ಈಶ್ವರ ನಿರೂಪಣೆ** ೨೭೧

**ಅದ್ರವ್ಯದ ನಿರೂಪಣೆ** ೩೫೧

ಸತ್ತ್ವಗುಣ ಲಕ್ಷಣ

ರಜೋಗುಣ ಲಕ್ಷಣ

ತಮೋಗುಣ ಲಕ್ಷಣ ೩೫೫

ಶಬ್ದ ಲಕ್ಷಣ ೩೮೫

ಸ್ಫೋಟವಾದ ವಿಮರ್ಶೆ ೩೯೭

ಶಬ್ದಕ್ಕೆ ಅದ್ರವ್ಯತ್ವ ಸಮರ್ಥನೆ ೪೦೪

ಸ್ಪರ್ಶದ ನಿರೂಪಣೆ ೪೨೮

ರೂಪದ ನಿರೂಪಣೆ ೪೨೮

ರಸದ ನಿರೂಪಣೆ ೪೨೯

ಗಂಧದ ನಿರೂಪಣೆ ೪೩೦

ಸಂಯೋಗದ ನಿರೂಪಣೆ ೪೩೧

ಶಕ್ತಿ ನಿರೂಪಣೆ ೪೩೨

ಆಳ್ವಾರುಗಳ ಪಾಶುರಗಳು ೪೩೬

ಗ್ರಂಥೋಪಸಂಹಾರ ೪೪೫

ಗ್ರಂಥ ವಿಮರ್ಶೆ ೪೪೭

Book Review ೪೪೮

# ಭಾಗ-೨

॥ ಶ್ರೀಃ ॥

ಅಸ್ಮದ್ಗುರು ಪರಂಪರಾಯೈ ನಮಃ

# ವಿಶಿಷ್ಟಾದ್ವೈತ ದರ್ಪಣ (ಭಾಗ–೨)

**ಜನನಮರಣರೂಪೇ ದುಷ್ಪಥೇ ಸಂಚರನ್ತೋ**
**ಬಹುವಿಧಜನಿಮನ್ತಃ ಪ್ರಾಪ್ಯಮಪ್ರಾಪ್ಯಖಿನ್ನಾಃ ।**
**ಇತಿ ಯದುಪತಿರೇತಾನ್ಪ್ರೇರಣೇಚ್ಛುರ್ದಯಾಳುಃ**
**ಸುಲಭಗಮನಮಾರ್ಗಂ ಸಂಜಗೌ ಗೀತತನ್ತ್ರೇ ॥೧॥**

ಮನುಷ್ಯ, ಪಶು, ಗಿಡ, ಮರ, ಬಳ್ಳಿ ಮುಂತಾದ ಚೇತನ ಅಚೇತನ ವರ್ಗಗಳು ಹುಟ್ಟುವಿಕೆ, ಸಾಯುವಿಕೆ ರೂಪವಾದ ಸಂಸಾರವೆಂಬ ಕಡಿದಾದ ಹಾದಿಯಲ್ಲಿ ಸಂಚಾರಮಾಡುತ್ತಿವೆ. ಹುಟ್ಟುತ್ತಿವೆ ಸಾಯುತ್ತಿವೆ ; ಮತ್ತೆ ಹುಟ್ಟುತ್ತವೆ ಸಾಯುತ್ತವೆ. ಹೀಗಾಗಿ ತಾವು ಎಲ್ಲಿಗೆ ಹೋಗಿ ಸೇರಬೇಕೋ ಆ ಜಾಗವನ್ನು—ಪ್ರಾಪ್ಯದೇಶವನ್ನು ಹೊಂದದೆ ಬಳಲುತ್ತವೆ. ಇದನ್ನರಿತು ದಯಾವಂತನಾದ, ಯದುಕುಲಕ್ಕೆ ಒಡೆಯನಾದ ಕೃಷ್ಣನು ಅರ್ಜುನನಿಗಾಗಿ ತಾನು ಉಪದೇಶಿಸಿದ ಗೀತಾಶಾಸ್ತ್ರದಲ್ಲಿ, ಇವು ಸುಲಭವಾಗಿ ಹೋಗುವ ದಾರಿಯನ್ನು ಹಾಡಿದ್ದಾನೆ—ಉಪದೇಶಿಸಿದ್ದಾನೆ.

**ಶರಣವರಣಮಾತ್ರಂ ರಕ್ಷತಿ ತ್ವಾಂ ಮಯೀತಿ**
**ಪ್ರಣತಕುರುಜಮೂಚೇ ಯುದ್ಧಖಿನ್ನಂ ಯ ಆಜೌ ।**
**ಸ ಜಯತಿ ರುಚಿಮಾನ್ನಃ ಕೃಷ್ಣಮೇಘಸ್ಸುವರ್ಷೀ**
**ಜನಿಮೃತಿದವಹಾರೀ ಜ್ಞಾನಬೀಜಪ್ರಪೋಷಃ ॥೨॥**

"ಅರ್ಜುನ! ನೀನು ಬಂಧುಬಳಗದವರನ್ನು ಕೊಲ್ಲಬೇಕಲ್ಲ, ಎಂದು ದುಃಖಿಸಬೇಡ. ನಿನ್ನ ಕರ್ತವ್ಯವನ್ನು ಮಾಡು. ಪಾಪ ಅಂಟುವುದಿಲ್ಲ. ನನ್ನನ್ನು[1] ಮರೆಹೋಗುವುದೊಂದೇ ಉಪಾಯ. ಸಕಲ ಪಾಪವನ್ನೂ ನಾನು ನೀಗಿಸುತ್ತೇನೆ. ಇದಕ್ಕಾಗಿ ದುಃಖಿಸಬೇಡ. ನನ್ನ ಮಾತನ್ನು ನಂಬು. ಇದರಲ್ಲಿ ಉಂಟಾಗುವ ಪುಣ್ಯಪಾಪಗಳೆಲ್ಲವೂ ನನ್ನ ಆಜ್ಞೆಯಿಂದಾದವೆಂದು ದೃಢವಾದ ನಂಬಿಕೆ ಇರಲಿ.

1. ಸರ್ವಧರ್ಮಾನ್ ಪರಿತ್ಯಜ್ಯ. ಗೀತೆ. ೧೮–೬೬.

ಈ ರೀತಿಯಾದ ಭಾವನೆ ಉಳ್ಳ ನಿನ್ನನ್ನು ನಾನೆಂದೂ ಕೈಬಿಡೆ" ಎಂದು ಯುದ್ಧ ಭೂಮಿಯಲ್ಲಿ ಕೃಷ್ಣನು ತನ್ನ ಸೋದರತ್ತೆಯ ಮಗನನ್ನು ಸಮಾಧಾನ ಮಾಡಿ ಹುರಿದುಂಬಿಸುತ್ತಾನೆ.

ಕಪ್ಪುಮೋಡವು ಒಳ್ಳೆಯ ಮಳೆಯನ್ನು ಸುರಿಸುತ್ತದೆ. ಕಾಡುಕಿಚ್ಚನ್ನು ಆರಿಸುತ್ತದೆ. ಮಿಂಚುಳ್ಳದ್ದಾಗಿ ಕಾಂತಿಯಿಂದಲೂ ಕೂಡಿದೆ. ಅದರ ನೀರು ರುಚಿ ಯಾಗಿಯೂ ಇರುತ್ತದೆ. ಅಲ್ಲದೆ ಮಳೆಬಿದ್ದರೆ ನೆಲದ ಬೀಜಗಳು ಮೊಳೆಯುತ್ತವೆ.

ಮೋಡದಂತೆ ಕಪ್ಪಾದ ಮೈಬಣ್ಣವುಳ್ಳ ಶ್ರೀಕೃಷ್ಣನು ಕಾಂತಿಯಿಂದ ಕೂಡಿದ್ದಾನೆ. ನಾವು ಅಪೇಕ್ಷಿಸಿದವನ್ನು ಕೊಡುತ್ತಾನೆ. ಹುಟ್ಟುವಿಕೆ ಸಾಯುವಿಕೆ ಎಂಬ ಕಾಡುಕಿಚ್ಚನ್ನು ಆರಿಸುತ್ತಾನೆ. ಅಂದರೆ ಅದನ್ನೂ ನಾಶಮಾಡುತ್ತಾನೆ. ಜ್ಞಾನವೆಂಬ ಬೀಜವನ್ನು ಬಿತ್ತಿ ಮೊಳೆಯುವಂತೆ ಮಾಡುತ್ತಾನೆ. ಒಳ್ಳೆಯ ಬುದ್ಧಿ ಯನ್ನು ಕೊಟ್ಟು ಅದು ಬೆಳೆಯುವಂತೆ ಅನುಗ್ರಹಿಸುತ್ತಾನೆ. ಅವನನ್ನು ನೋಡು ತ್ತಿದ್ದರೆ ಮತ್ತೆ ಮತ್ತೆ ಅವನನ್ನೇ ನೋಡಬೇಕೆಂಬ ರುಚಿ–ಆಸೆ ಉಂಟಾಗುತ್ತದೆ. ಅಂತಹ ಶ್ರೀಕೃಷ್ಣನು ಸರ್ವೋತ್ಕೃಷ್ಟನಾಗಿ ಬೆಳಗಲಿ, ಜಯಶೀಲನಾಗಲಿ.

ಈ ಗ್ರಂಥದ ಮೊದಲನೆಯ ಭಾಗದಲ್ಲಿ ಭಕ್ತಿಯನ್ನು ವಿಸ್ತಾರವಾಗಿ ವಿವರಿಸಿದ್ದಾಯಿತು. ಧ್ಯಾನ ಶಬ್ದದಿಂದ ಹೇಳಲ್ಪಡುವ ಭಕ್ತಿಯು ವಿದ್ಯಾಭೇದ ದಿಂದ ಬಹು ವಿಧವಾಗಿರುತ್ತದೆ. ಆ ವಿದ್ಯೆಗಳಲ್ಲಿ ಕೆಲವು ಐಹಿಕ ಫಲವನ್ನು ಕೊಡ ತಕ್ಕವು, ಕೆಲವು ಮುಕ್ತಿಫಲವನ್ನು ಕೊಡತಕ್ಕವು. ಐಹಿಕ ಫಲವೆಂದರೆ ಈ ಲೋಕದ ಸುಖಕ್ಕೆ ಸಂಬಂಧಪಟ್ಟ ಪಶು, ಪುತ್ರ, ವೃಷ್ಟಿ=ಮಳೆ, ಅನ್ನ ಮುಂತಾದವು. ಅವನ್ನು ಕೊಡತಕ್ಕವು ಉದ್ಗೀಥಾದಿ ವಿದ್ಯೆಗಳು. ಈ ವಿದ್ಯೆಗಳನ್ನು ಈ ಗ್ರಂಥ ದಲ್ಲಿ ಹೆಚ್ಚಾಗಿ ವಿವರಿಸಿಲ್ಲ. ಮುಕ್ತಿಫಲವನ್ನು ಕೊಡತಕ್ಕವು ಅಂತರಿಕ್ಷವಿದ್ಯೆ, ಅಂತರಾದಿತ್ಯವಿದ್ಯೆ ಮುಂತಾದವು. ಇವುಗಳನ್ನು ಮಾತ್ರ ಸಾಕಷ್ಟು ಮೊದಲನೆಯ ಭಾಗದಲ್ಲಿ ಹೇಳಿದ್ದಾಯಿತು.

ಈವಾಗ ಜ್ಞಾನ ವಿಶೇಷ ರೂಪವಾದ ಪ್ರಪತ್ತಿಯನ್ನು ತಿಳಿಯೋಣ.

## ಪ್ರಪತ್ತಿ ಶಬ್ದದ ಅರ್ಥ

ಪ್ರಪತ್ತಿ–ಶರಣಾಗತಿ–ಭರನ್ಯಾಸ ಮುಂತಾದ ಶಬ್ದಗಳ ಪ್ರಯೋಗಗಳು ವ್ಯವಸ್ಥೆ ಇಲ್ಲದೆ ಅಲ್ಲಲ್ಲಿ ಕಂಡು ಬರುತ್ತಿವೆ. ಆದರೂ ಇದರ ಲಕ್ಷಣವನ್ನು ಹೇಳುವ ವಾಕ್ಯ ಈ ರೀತಿ ಇದೆ.

ತ್ವಮೇವೋಪಾಯ ಭೂತೋಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ಸಾ ದೇವೇಽಸ್ಮಿನ್ ಪ್ರಯುಜ್ಯತಾಮ್ ॥

"ನಿನ್ನನ್ನು ಹೊಂದಲು ನೀನೇ ಉಪಾಯವಾಗಿ ನನಗೆ ಆಗು, ನನ್ನನ್ನು ಸ್ವೀಕರಿಸು" ಎಂದು ಪ್ರಾರ್ಥನೆ ಮಾಡುವ ಬುದ್ಧಿಯೇ ಶರಣಾಗತಿಯು, ಎಂಬುದಾಗಿ ಹೇಳಲ್ಪಟ್ಟಿದೆ. ಅದನ್ನು ಈ ಒಡೆಯನಲ್ಲಿ ಪ್ರಯೋಗಿಸಿ–ಅನುಷ್ಠಿಸಿ. ಈ ವಾಕ್ಯವು ದೇವನಲ್ಲಿ ಮಾಡಬೇಕಾದ ಜ್ಞಾನ ಸ್ವರೂಪವಾದ ಶರಣಾಗತಿಯನ್ನು ತೋರಿಸುತ್ತದೆ.

ಆದುದರಿಂದ ಕೇವಲ ಬಾಯಿಂದ ಹೇಳುವ ಮಾತ್ರದಿಂದಲೋ ಕಾಯಿಕ ವ್ಯಾಪಾರದಿಂದಲೋ ಅಂದರೆ ನಮಸ್ಕಾರಮಾತ್ರದಿಂದಲೋ ಸಾಕ್ಷಾತ್ತಾಗಿ ಫಲವನ್ನು ಪಡೆಯಲಾಗುವುದಿಲ್ಲ.

ಅಲ್ಲದೆ,

ನಿಕ್ಷೇಪಾಪರಪರ್ಯಾಯೋ ನ್ಯಾಸಃ ಪಂಚಾಂಗ ಸಂಯುತಃ ।
ಸಂನ್ಯಾಸಸ್ತ್ಯಾಗ ಇತ್ಯುಕ್ತಃ ಶರಣಾಗತಿರಿತ್ಯಪಿ ॥

ನಿಕ್ಷೇಪಕ್ಕೆ ಬದಲಾದ ಶಬ್ದ ನ್ಯಾಸ ಎಂಬುದು. ಅದು ಐದು ಅಂಗಗಳಿಂದ ಕೂಡಿರುತ್ತದೆ. ಇದೇ ಸಂನ್ಯಾಸ, ತ್ಯಾಗ, ಶರಣಾಗತಿ ಎಂಬುದಾಗಿಯೂ ಹೇಳಲ್ಪಡುತ್ತದೆ, ಎಂಬ ಬೇರೆ ವಚನವೂ ಇದೆ. ಇದರಿಂದ ಶರಣಾಗತಿ ಎಂದರೆ ನಿಕ್ಷೇಪ ಈ ವಸ್ತುವನ್ನು ಕಾಪಾಡುವ ಹೊಣೆ ನಿನ್ನದು. ಭರನ್ಯಾಸ ರಕ್ಷಣೆಯ ಭಾರವನ್ನು, ಹೊಣೆಯನ್ನು ನಿನ್ನಲ್ಲಿ ಇಟ್ಟಿದ್ದೇನೆ ಎಂದರ್ಥವಾಯಿತು.

ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟು ಹೆಚ್ಚಾಗಿ ಲೋಕದಲ್ಲಿ ಪ್ರಯೋಗಿಸುವ ಪದಗಳನ್ನು ನೋಡಿ ಆಚಾರ್ಯರು 'ಭರನ್ಯಾಸಂಯೂಚ್ಞಾನ್ವಿತಮಭಿವದಂತಿ ಪ್ರಪದನಮ್—ಯಾಚನೆಯಿಂದ ಕೂಡಿದ ರಕ್ಷಣಾಭಾರವನ್ನು ಇಡುವಿಕೆ–ಭರನ್ಯಾಸ. ಅದೇ ಪ್ರಪತ್ತಿ ಎನ್ನುತ್ತಾರೆ, ಎಂದು ಹೇಳುತ್ತಾರೆ.

ಈ ವಿಷಯವು ವೇದಾಂತಾಚಾರ್ಯರು ರಚಿಸಿರುವ ನ್ಯಾಸವಿಂಶತಿಯಲ್ಲಿ ಸ್ಪಷ್ಟವಾಗಿದೆ.

ರಕ್ಷಾಪೇಕ್ಷಾ ಸ್ವಸಾಹ್ಯ[1]ಪ್ರಣಯವತಿ ಭರನ್ಯಾಸ ಆಜ್ಞಾದಿದಕ್ಷೇ
ದೃಷ್ಟ್ವಾನಾತ್ರ ಪ್ರಪತ್ತಿವ್ಯವಹೃತಿರಿಹ ತನ್ಮೇಲನೇ ಲಕ್ಷಣಂ ಸ್ಯಾತ್ ।

1. ನ್ಯಾಸವಿಂಶತಿ. ೧೩. ಪ್ರಣಯಃ–ಯಾಚನೆ, ಆಜ್ಞಾ = ಆಜ್ಞೆಮಾಡುವುದು.

ಗೇಹಾಗತ್ಯಾದಿ ಮಾತ್ರೇನಿಪತತು ಶರಣಾಗತ್ಯಭೀಖ್ಯೋಪಚಾರಾತ್
ಯದ್ವಾsನೇಕಾರ್ಥ ಭಾವಾದ್ಭವತಿ ಹಿ ವಿವಿಧಃ ಪಾಲನೀಯತ್ವಹೇತುಃ ॥

ಪ್ರಪತ್ತಿ ಎಂಬುದರ ಸ್ವರೂಪಯಾವುದು ? ಈ ಶಬ್ದವು ಮುಖ್ಯವಾಗಿ ಯಾವ ಅರ್ಥವನ್ನು ಹೇಳುತ್ತದೆ ? ಉಪಚಾರವಾಗಿ ಯಾವುದನ್ನು ಹೇಳುತ್ತದೆ ? ಎಂಬ ಅಂಶಗಳನ್ನು ಸಂಶಯ ವುಂಟಾಗದಂತೆ ನಿರ್ಣಯಿಸುವುದಕ್ಕಾಗಿ ಪ್ರಪತ್ತಿಯ ಲಕ್ಷಣವು ಈ ಶ್ಲೋಕದಲ್ಲಿ ವಿಚಾರಮಾಡಲ್ಪಟ್ಟಿದೆ.

ಪ್ರಪಂಚದಲ್ಲಿ ಒಬ್ಬ ಮನುಷ್ಯ ತನ್ನಹತ್ತಿರ ಇರುವ ಒಂದು ಪದಾರ್ಥ ವನ್ನು ಕಾಪಾಡಲು ಮತ್ತೊಬ್ಬನ ಸಹಾಯವು ಆವಶ್ಯಕವೆಂದು ಅಪೇಕ್ಷಿಸಿ ಅವನ ಹತ್ತಿರ ಹೋಗಿ ತನ್ನ ಪದಾರ್ಥವನ್ನು ತಾನು ಕಾಪಾಡಿಕೊಳ್ಳುವ ವಿಷಯ ದಲ್ಲಿ ಸಹಾಯ ಮಾಡಬೇಕೆಂದು ಅವನನ್ನು ಬೇಡುತ್ತಾನೆ. ಆದರೆ ಅದನ್ನು ಕಾಪಾಡುವ ಎಲ್ಲಾಹೊಣೆಯನ್ನೂ ಮತ್ತೊಬ್ಬನ ಹತ್ತಿರ ಇಡಲಿಲ್ಲ. ಅವನ ಆ ಬೇಡಿಕೆಯನ್ನು ಶರಣಾಗತಿ ಎಂದು ಹೇಳುವಂತೆ ಕಾಣಲಿಲ್ಲ. ಅಲ್ಲದೆ ಒಬ್ಬ ದೊಡ್ಡ ಮನುಷ್ಯನು ತನ್ನ ಕೆಲಸದವನಿಗೆ ಅಪ್ಪಣೆಮಾಡಿ ತನ್ನ ಹೊಣೆಯಲ್ಲ ವನ್ನೂ ಅವನಲ್ಲಿ ಇಡುತ್ತಾನೆ. ಅಥವಾ ಒಬ್ಬನಿಗೆ ಕೂಲಿಯನ್ನು ಕೊಟ್ಟು ತನ್ನ ಹೊಣೆಯಲ್ಲವನ್ನೂ ಅವನಲ್ಲಿಡುತ್ತಾನೆ, ಇದೂ ಶರಣಾಗತಿ ಎಂದು ಪ್ರಸಿದ್ಧ ವಾಗಿರುವುದನ್ನು ಕಾಣಲಿಲ್ಲ. ಆದುದರಿಂದ ಪ್ರಾರ್ಥಿಸುವುದು ಮಾತ್ರವೋ ಹೊಣೆ ಯನ್ನು ವಹಿಸುವುದು ಮಾತ್ರವೋ ಇವು ಪ್ರತ್ಯೇಕವಾಗಿ ಶರಣಾಗತಿ ಎಂದು ಪ್ರಸಿದ್ಧವಾಗಿಲ್ಲವೆಂದು ತೀರ್ಮಾನವಾಯಿತು. ಆದರೆ ಅವೆರಡೂ ಸೇರಿದರೆ ಅದೇ ನಿಜವಾದ ಶರಣಾಗತಿ, ಅಂದರೆ–ತನ್ನನ್ನು ಕಾಪಾಡಬೇಕೆಂದು ಪ್ರಾರ್ಥಿಸಿ ತನ್ನ (ಜವಾಬ್ದಾರಿಯನ್ನೂ) ಹೊಣೆಯನ್ನೂ ಮತ್ತೊಬ್ಬನ ಹತ್ತಿರ ಸಮರ್ಪಿಸುವುದೇ ಸರಿಯಾದ ಶರಣಾಗತಿಯಾಗುತ್ತದೆ. ಎರಡರ ಸೇರುವಿಕೆಯೇ ಪ್ರಪತ್ತಿಯ ಸ್ವರೂಪ.

ಆದರೆ [1]ಕಾಗೆಯು ರಾಮನ ಹತ್ತಿರಕ್ಕೆಬಂದು ಸೇರಿದುದು. [2]ಬೇಡನು ಹೆಣ್ಣು ಪಾರಿವಾಳವನ್ನು ಹಿಡಿದುಕೊಂಡು ಗಂಡುಪಾರಿವಾಳ ಇರುವ ಜಾಗಕ್ಕೆ

1. **ಕಾಕಾಸುರನಕಥೆ:** ರಾಮನು ಸೀತೆಯೊಡನೆ ಚಿತ್ರಕೂಟದಲ್ಲಿದ್ದಾಗ ಇಂದ್ರನ ಮಗನಾದ (ಜಯಂತನೆಂಬ) ಕಾಗೆಯು ಮಾಂಸದಲ್ಲಿ ಆಸೆಪಟ್ಟು ಸೀತೆಯ ಹತ್ತಿರ ಬಂದಿತು.

**ಪುತ್ರಃಕಿಲ ಸಶಕ್ರಸ್ಯವಾಯಸಃ ಪತತಾಂವರಃ ।**
**ಧರಾಂತರಗತ ಶ್ಶೀಘ್ರಂ ಪವನಸ್ಯಗತೌಸಮಃ ॥** ರಾ. ಸುಂ. ಸ. ೩೮. ಶ್ಲೋ. ೨೮.

ಇಂದ್ರನ ಪುತ್ರನೆಂದು ಪ್ರಸಿದ್ಧನಾದ ಜಯಂತನೇ ವಾಯಸರೂಪದಿಂದ ಬಂದನೆಂದು ಹೇಳುತ್ತಾರೆ. ವಾಯಸರೂಪನಾದ ಬೇರೆ ಮಗ ಎಂದೂ ಹೇಳುತ್ತಾರೆ.

ಆಗ ರಾಮನು ಸೀತೆಯ ಮಡಲಿನಲ್ಲಿ ಮಲಗಿದ್ದನು. ಆ ಕಾಗೆಯು ಸೀತೆಯ ಸ್ತನದ ನಡುವೆ ಕೊಕ್ಕಿ ಗಾಯಮಾಡಿದನು. ಅದರಿಂದ ಕೋಪಗೊಂಡ ರಾಮನು ತನ್ನ ದರ್ಭೆ ದಿಂದ ಮಾಡಲ್ಪಟ್ಟ ಹಾಸಿಗೆಯಿಂದ ಒಂದು ಚಿಕ್ಕ ದರ್ಭವನ್ನು ತೆಗೆದುಕೊಂಡು ಅದನ್ನು ಅಭಿಮಂತ್ರಿಸಿ ಬ್ರಹ್ಮಾಸ್ತ್ರಮಾಡಿ ಕಾಗೆಯಮೇಲೆ ಎಸೆದನು, ಅದು ಹೆದರಿ ಓಡಲಾರಂಭಿಸಿತು. ಈ ಅಸ್ತ್ರವೂ ವೇಗವಾಗಿ ಅದನ್ನು ಹಿಂಬಾಲಿಸಿತು. ಇದರ ವೇಗವನ್ನು ಕಂಡ ಎಲ್ಲಾ ದೇವತೆಗಳೂ ಮುನಿಗಳೂ "ಈ ಕಾಗೆಗೆ ಸಹಾಯಮಾಡಿದರೆ ತಮ್ಮ ಮೇಲೆ ಎಲ್ಲಿ ಅದು ಬೀಳುವುದೋ" ಎಂದು ಹೆದರಿದರು. ಆ ಕಾಗೆ ಬ್ರಹ್ಮ-ಶಿವ-ಇಂದ್ರರೆಂಬ ಹಿರಿಯ ದೇವತೆಗಳನ್ನು ರಕ್ಷಣೆಗಾಗಿ ಮರೆಹೋಯಿತು. ಅವರು ರಾಮನ ಕೋಪಕ್ಕೆ ಹೆದರಿ ಅದಕ್ಕೆ ರಕ್ಷಣೆ ಕೊಡದವರಾದರು. ಅದನ್ನು ಕಾಪಾಡಿದರೆ ತಮಗೆ ಏನು ಆಪತ್ತು ಬರುತ್ತದೋ ಎಂದು ಹೆದರಿನಿಂತರು. ಮತ್ತೆ ಆ ಕಾಗೆ ರಾಮನಿರುವ ದಿಕ್ಕಿಗೆ ಹಾರಿ ರಾಮನ ಪಾದದಲ್ಲಿ ಬಿದ್ದು ಕ್ಷಮೆಯನ್ನು ಬೇಡಿತು. ರಾಮನು ಅದರ ಮಹಾಪರಾಧ ವನ್ನು ಮನ್ನಿಸಿದನು. ಆ ಅಸ್ತ್ರಕ್ಕೆ ಬಲಿಯಾಗಿ ಅದರ ಒಂದು ಕಣ್ಣನ್ನು ಕೊಂಡು ಅದನ್ನು ಬಿಟ್ಟನೆಂದು ರಾಮಾಯಣದ ಕಥೆ.

2. **ಕಪೋತವೃತ್ತಾಂತ :** ಈ ವೃತ್ತಾಂತವು ಶ್ರೀಮದ್ರಾಮಾಯಣದಲ್ಲಿ ಯುದ್ಧ ಕಾಂಡದ ೧೮ನೇ ಸರ್ಗದಲ್ಲಿ—

**ಶ್ರೂಯತೇಹಿಕಪೋತೇನ ಶತ್ರುಶ್ಶರಣ ಮಾಗತಃ ।**
**ಅರ್ಚಿತಶ್ಚಯಥಾನ್ಯಾಯಂ ಸ್ವೈಶ್ಚಮಾಂಸೈರ್ನಿಮಂತ್ರಿತಃ ॥೨೪॥**
**ಸಹಿತಂ ಪ್ರತಿಜಗ್ರಾಹ ಭಾರ್ಯಾಹರ್ತಾರಮಾಗತಮ್ ।**
**ಕಪೋತೋವಾನರಶ್ರೇಷ್ಠ ಕಿಂಪುನರ್ಮದ್ವಿಧೋಜನಃ ॥೨೫॥**

ಈ ಶ್ಲೋಕಗಳಲ್ಲಿ ಹೇಳಲ್ಪಟ್ಟಿದೆ.

ಶ್ರೀರಾಮನು ಕಪಿಗಳಿಗೆ ಹೇಳುವ ಕಥೆಯಿದು.

ಶ್ರೀರಾಮನು ಕಪಿ ಸೈನ್ಯದೊಡನೆ ಲಂಕೆಗೆ ಹೋಗಲು ದಕ್ಷಿಣ ಸಮುದ್ರದ ದಡದಲ್ಲಿ ಬೀಡು ಬಿಟ್ಟಿದ್ದಾನೆ. ಆವಾಗ ಈ ಸಮಾಚಾರವನ್ನರಿತ ರಾವಣನ ತಮ್ಮನಾದ ಧರ್ಮಾತ್ಮ ನಾದ ವಿಭೀಷಣನು ತನ್ನ ಮಂತ್ರಿಗಳೊಡನೆ ಲಂಕೆಯಿಂದ ರಾಮನಿರುವ ಜಾಗಕ್ಕೆ ಹಾರಿ ಬಂದು ಅಂತರಿಕ್ಷದಲ್ಲೇ ಇದ್ದನು. ರಾಮನ ಸುತ್ತಲೂ ಕುಳಿತಿದ್ದ ಕಪಿಗಳನ್ನು ಕುರಿತು, ತಾನು ಮಕ್ಕಳು, ಹೆಂಡತಿ ಇವರನ್ನು ಬಿಟ್ಟು ರಾಮನನ್ನು ಮರೆಹೋಗಲು ಬಂದಿರು ವುದಾಗಿ ತಿಳಿಸಬೇಕೆಂದು ಕಪಿಗಳನ್ನು ಕೇಳಿಕೊಳ್ಳುತ್ತಾನೆ. ಆವಾಗ ಶತ್ರುಪಕ್ಷದಿಂದ ಬಂದಿರುವ ವಿಭೀಷಣನ ವಿಷಯವಾಗಿ ಒಂದೊಂದು ಕಪಿಯೂ ಒಂದೊಂದು ವಿಧವಾಗಿ ಅನ್ನುತ್ತದೆ. ಅವುಗಳ ಮಾತನ್ನೆಲ್ಲ ಕೇಳಿ ಕೊನೆಯಲ್ಲಿ ರಾಮನು ತನ್ನ ಅಭಿಪ್ರಾಯ ವನ್ನು ಸೂಚಿಸುತ್ತಾನೆ. ಆ ಸಂದರ್ಭದಲ್ಲಿ ಈ ಕಥೆ ಇದೆ.

ಕಾಡಿಗೆ ಬೇಟೆಗೆ ಹೋದ ಬೇಡನು, ಒಂದು ಹೆಣ್ಣುಪಾರಿವಾಳವನ್ನು ಹಿಡಿದು. ತನ್ನ ಬಲೆಯಲ್ಲೇ ಹಾಕಿ ಮುಂದೆಸಾಗಿದನು. ದೊಡ್ಡ ಬಿರುಗಾಳಿ ಬಂದಿತು. ಮಳೆಯೂ ಸುರಿಯಲಾರಂಭಿಸಿತು. ಮಳೆಯಲ್ಲಿ ನೆನೆದ ಬೇಡನು ಮನೆಯ ಕಡೆಗೆ ಹಿಂತಿರುಗಲು

ಮನಸ್ಸುಮಾಡಿದನು. ಸಂಜೆಯಾಗಿ ಕಗ್ಗತ್ತಲೆ ಕವಿಯಿತು. ಛಳಿಯಿಂದ ನಡುಗುತ್ತಾ ಅವನು ಹಸಿವಿನ ಬೇಗೆಯಿಂದ ಬೆಂಡಾದನು. ಮೊದಲು ತಾನು ಹೆಣ್ಣು ಪಾರಿವಾಳವನ್ನು ಹಿಡಿದ ಮರದ ಹತ್ತಿರಕ್ಕೆ ಆಕಸ್ಮಿಕವಾಗಿ–ಅಲ್ಲಿಗೆ ಬರಬೇಕೆಂದು ಯೋಚಿಸದೆಯೇ ಹಠಾತ್ತಾಗಿ ಬಂದನು.

**ಸೋಽಞ್ಜಲಿಂಶಿರಸಾಬಧ್ವಾ ವಾಕ್ಯಮಾಹ ವನಸ್ಪತಿಮ್ ।**
**ಶರಣಂ ಹಿಗತೋಽಸ್ಮ್ಯದ್ಯ ದೇವತಾಮಿಹವಾಸಿನೀಮ್ ॥**

ಎರಡು ಕೈಗಳನ್ನೂ ಜೋಡಿಸಿ ತಲೆಯಲ್ಲಿಟ್ಟನು, ಆ ದೊಡ್ಡಮರವನ್ನು ನೋಡಿದನು. ಓ ಈ ವನಸ್ಪತಿಯಲ್ಲಿ ವಾಸಮಾಡುವ ದೇವತೆಯೇ ! ನಾನು ಈಗ ನಿನ್ನನ್ನು ಮರೆಹೋಗುವೆನು ಎಂದನು. ಹೆಂಡತಿಯನ್ನು ಕಳೆದುಕೊಂಡಿದ್ದ ಗಂಡುಪಾರಿವಾಳವು ಅವನನ್ನು ಗುರುತಿಸಿತು. ಅವನ ಬಲೆಯಲ್ಲಿದ್ದ ಹೆಣ್ಣುಪಾರಿವಾಳವೂ ತನ್ನ ಗಂಡನಿಗೆ ಅತಿಥಿಯಾಗಿ ನಮ್ಮಬೀಡಿಗೆ ಬಂದ ಬೇಡನನ್ನು ನಮ್ಮಿಂದ ಸಾಧ್ಯವಾದ ಮಟ್ಟಿಗೂ ಆದರಿಸತಕ್ಕದೆಂದು ಗಂಡನಿಗೆ ಬೇಡನ ಬಲೆಯಲ್ಲಿದ್ದೇ ಹೇಳಿತು.

ಬೇಡನು ಪಕ್ಷಿಜಾತಿಗೇ ಸಹಜವಾದ ಶತ್ರು ; ಅಲ್ಲದೆ ಹೆಂಡತಿಯನ್ನೂ ಅಪಹರಿಸಿದ್ದಾನೆ. ಇಂತಹವನನ್ನು ಆ ಗಂಡುಪಾರಿವಾಳವು ತನ್ನ ಹತ್ತಿರಕ್ಕೆಬಂದಿದ್ದರೂ ಉದಾಸೀನ ಮಾಡಬಹುದಾಗಿತ್ತು ; ಅಥವಾ ಅವನನ್ನು ಕೊಲ್ಲಲೂ ಉಪಾಯವನ್ನು ಹುಡುಕ ಬಹುದಾಗಿದ್ದಿತು. ಆದರೆ ಅದು ಹಾಗೆ ಮಾಡಲಿಲ್ಲ. ತಾನು ವಾಸಮಾಡುವ ಜಾಗಕ್ಕೆ ಬಂದವನು ಅತಿಥಿಯಾದುದರಿಂದ ದೇವತೆಯೆಂದೇ ತಿಳಿಯಬೇಕೆಂದು ಭಾವಿಸಿತು. ಅವನಿಗೆ ಛಳಿಯನ್ನು ನೀಗಿಸಲು ಬೆಂಕಿಯನ್ನು ಹಚ್ಚಿತು. ತನ್ನ ಕೊಕ್ಕಿನಿಂದ ಕಡ್ಡಿಗಳನ್ನು ತಂದು ಹಾಕಿತು. ಆದರದಿಂದ ಅವನನ್ನು ಕುರಿತು 'ಮೈಯನ್ನು ಬೆಚ್ಚಗೆ ಕಾಯಿಸಿಕೋ' ಎಂದಿತು. ಅವನು ಹಸಿವಿನಿಂದ ಸಂಕಟಪಡುವುದನ್ನು ಕಂಡು ತನ್ನ ಶರೀರದ ಮಾಂಸದಿಂದಲೇ ಅವನಿಗೆ ತೃಪ್ತಿಯನ್ನು ಉಂಟುಮಾಡಲು ಬಯಸಿತು. ಶರಭಂಗಋಷಿಯಂತೆ ಅದೇ ಬೆಂಕಿಯಲ್ಲಿ ಬಿದ್ದು ತನ್ನಪ್ರಾಣವನ್ನೂ ನೀಗಿತು. ತನ್ನ ಶರೀರದ ಮಾಂಸದ ಮುದ್ದೆಯಿಂದ ಅವನಿಗೆ ತೃಪ್ತಿಯನ್ನುಂಟುಮಾಡಿತು.

ಆ ಹಕ್ಕಿಯು ಹೊರಗಿನಿಂದ ಆಹಾರವನ್ನು ತನ್ನ ಕೊಕ್ಕಿನಿಂದ ಆಯ್ದು ತರಬಹುದಾಗಿದ್ದಿತು. ಅಥವಾ ತಾನು ಗೂಡಿನಲ್ಲಿ ಕೂಡಿಟ್ಟಿದ್ದ ಬೇರೆ ಆಹಾರಗಳನ್ನಾದರೂ ಕೊಡಬಹುದಾಗಿತ್ತು. ಅದೂ ಅಲ್ಲದೆ ತನ್ನ ಶರೀರದ ಒಂದು ಭಾಗವನ್ನಾದರೂ ಕೊಟ್ಟು ಉಪಚರಿಸಬಹುದಾಗಿತ್ತು. ಮೂಢರು ಶರೀರವನ್ನೇ ಆತ್ಮಾ ಎಂದು ತಿಳಿದು ಗೌರವಿಸುತ್ತಾರೆ. ಪ್ರಾಜ್ಞರು "ಶರೀರಮಾದ್ಯಂಖಲುಧರ್ಮಸಾಧನಮ್—ಶರೀರವು ಧರ್ಮವನ್ನು ಸಾಧನೆ ಮಾಡಲು ಮುಖ್ಯ ಸಾಧನ" ಎಂದು ಗೌರವಿಸುತ್ತಾರೆ. ಅಂತಹ ಆದರಿಸಲು ತಕ್ಕ ತನ್ನ ಶರೀರವನ್ನು ಅತಿಥಿಯಾದ ಬೇಡನಿಗೆ ಅರ್ಪಣೆ ಮಾಡಿತು. ಇದು ಎಂತಹ ಔದಾರ್ಯ ! ಎಂತಹ ಅತಿಥಿಸತ್ಕಾರ ! ತಿರ್ಯಗ್ಜಾತಿಯಲ್ಲಿ ಹುಟ್ಟಿದ ಕಪೋತವೇ ಈ ರೀತಿ ತನ್ನ ಶತ್ರುವಿಗೂ ಸತ್ಕಾರ ಮಾಡಿರುವಾಗ ನಾನು ಮರೆಹೊಕ್ಕ ಇವನನ್ನು ಬಿಡಲೇ ? ಎಂದು ಅವುಗಳಿಗೆ ಹೇಳಿ ಶತ್ರುಪಕ್ಷದಿಂದ ಬಂದಿದ್ದರೂ ಆ ವಿಭೀಷಣನನ್ನು ತನ್ನವನನ್ನಾಗಿ ಮಾಡಿಕೊಂಡನು.

ಬಂದದ್ದು ಮುಂತಾದ ಜಾಗಗಳಲ್ಲಿ ಶರಣಾಗತಿ ಮಾಡಿದಂತೆ ಹೇಳಲ್ಪಡುತ್ತದಲ್ಲ. ಇಲ್ಲಿ ಪ್ರಾರ್ಥನೆಯೂ ಹೊಣೆಯನ್ನು ಹೊರಿಸುವುದೂ ಇಲ್ಲವಲ್ಲ ? ಎಂಬ ಪ್ರಶ್ನೆ ಉಂಟಾಗಬಹುದು. ಇದಕ್ಕೆ ಬದಲು—

ಈ ಜಾಗಗಳಲ್ಲಿ ಪೂರ್ಣವಾದ ಪ್ರಪತ್ತಿಯ ಸ್ವರೂಪ ಇಲ್ಲದಿದ್ದರೂ ಕಾಪಾಡುವವನ ಹತ್ತಿರಕ್ಕೆ ಬಂದುದು ಮೊದಲಾದವನ್ನು ಮಾತ್ರ ಇಟ್ಟುಕೊಂಡು ಶರಣಾಗತಿ ಎಂಬ ಮಾತು ಉಪಚಾರದಮಾತಾಗಿ ಬಂದಿದೆ ಎಂದು ಭಾವಿಸಬಹುದು.

ಅಲ್ಲದೆ [1]ಶರಣಂ ಗೃಹರಕ್ಷಿತ್ರೋಃ ಎಂಬ ನಿಘಂಟುವಿನಂತೆ ಶರಣ ಶಬ್ದಕ್ಕೆ ಮನೆ, ಕಾಪಾಡುವವನು, ಉಪಾಯ ಎಂಬ ಈ ಅರ್ಥಗಳೂ ಇರುವುದರಿಂದ ಶರಣಾಗತಿ ಎಂಬ ಶಬ್ದಕ್ಕೆ ಮನೆಗೆ ಬರುವುದು ಎಂಬ ಅರ್ಥವನ್ನು ಇಟ್ಟುಕೊಂಡು ಉಪಚಾರ ಶಬ್ದವಲ್ಲದೆ ಮುಖ್ಯಾರ್ಥವನ್ನೇ ಇದು ಹೇಳುತ್ತದೆ ಎಂದೂ ಹೇಳಬಹುದು. ಪ್ರಪಂಚದಲ್ಲಿ ಒಬ್ಬನನ್ನು ಕಾಪಾಡುವುದಕ್ಕೆ ಹಲವು ಕಾರಣಗಳಿವೆ. ತನ್ನ ಮನೆಗೆ ಬರುವುದು—ಕೈಮುಗಿಯುವುದು—ಬಾಯಿಂದ ಕೇಳಿಕೊಳ್ಳುವುದು, ಹಲ್ಲನ್ನು ಕಿರಿದು ಗಿಂಜುವುದು ಮುಂತಾದ ಬೇರೆ ಬೇರೆ ಕಾರಣಗಳನ್ನು ಇಟ್ಟೇ ಮತ್ತೊಬ್ಬರನ್ನು ಕಾಪಾಡುವುದನ್ನು ನೋಡುತ್ತೇವೆ. ಈ ಕೆಲಸಗಳೆಲ್ಲವೂ ಪ್ರಪಂಚದಲ್ಲಿರುವ ಧರ್ಮಿಷ್ಠರು ತಮ್ಮನ್ನು ಬಂದು ಸೇರಿದವರನ್ನು ಲೋಕಧರ್ಮದಂತೆ ಕಾಪಾಡುವುದಕ್ಕೆ ಕಾರಣವಾದ ಶರಣಾಗತಿಯೇ ಆಗುತ್ತದೆ. ಮೋಕ್ಷಕ್ಕಾಗಿ ಭಗವಂತನ ಪಾದಗಳಲ್ಲಿ ಮಾಡಬೇಕಾಗಿ ಶಾಸ್ತ್ರವಿಧಿಸುವ ಶರಣಾಗತಿಯಾದರೋ ರಕ್ಷಿಸಬೇಕೆಂದು ಪ್ರಾರ್ಥಿಸಿ, ತನ್ನ ಹೊಣೆಯನ್ನು ಪೂರ್ತಿಯಾಗಿ ಅವನಲ್ಲಿ ಸಮರ್ಪಿಸುವುದೇ ಆಗಿದೆ.

## ಪೀಠಿಕೆ

ಇದು ಇರುವಿಕೆ—ಜೀವನು ಶರೀರಕ್ಕಿಂತಲೂ ಬೇರೆಯಾದವನು. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ತ್ವಕ್ಕು ಎಂಬ ಅಂತರಿಂದ್ರಿಯಗಳಿಗೂ, ವಾಕ್ಕು, ಪಾಣಿ, ಪಾದ, ಪಾಯು ಮತ್ತು ಉಪಸ್ಥಗಳೆಂಬ ಬಹಿರಿಂದ್ರಿಯಗಳಿಗೂ ಬೇರೆಯಾದವನು ; ಹಾಗೆಯೇ ಪ್ರಾಣ, ಮನಸ್ಸು ಇವುಗಳಿಗಿಂತಲೂ ಬೇರೆಯಾದವನು. ಬೇರೆ ಲೋಕದಲ್ಲಿ ಉಂಟಾಗುವ ಸುಖ ಮತ್ತು ದುಃಖಗಳನ್ನು ಅನುಭವಿಸಲು ತಕ್ಕವನು. ಅಚೇತನ ವಸ್ತುಗಳಿಗಿಂತ ಬೇರೆಯಾದ ಜ್ಞಾನ, ಚಿಕೀರ್ಷೆ—ಮಾಡಬೇಕೆಂಬ ಇಚ್ಛೆ, ಯತ್ನಮಾಡುವಿಕೆ ಎಂಬ ಈ ರೂಪವುಳ್ಳ ಸ್ವಾತಂತ್ರ್ಯಾತ್ಮಕವಾದ

1. ಅಮರ, ನಾನಾರ್ಥವರ್ಗ. ೫೨.

ಚೈತನ್ಯವುಳ್ಳವನು. ಇವು ಮೂರೂ ಇವನಿಗೆ ಭಗವಂತನ ನಿತ್ಯೇಚ್ಛೆಯಿಂದ ಸಿದ್ಧವಾದವು, ಭಗವಂತನಿಗೆ ಪರಾಧೀನನಾದವನು ಮೊದಲಿಲ್ಲದ–ಅನಾದಿಯಾದ ಕರ್ಮಪ್ರವಾಹದಿಂದ ದೇವ, ಮನುಷ್ಯ, ತಿರ್ಯಕ್ ಮತ್ತು ಸ್ಥಾವರಗಳೆಂಬ ನಾಲ್ಕು ವಿಧವಾದ ದೇಹಗಳಲ್ಲಿ ಪ್ರವೇಶಿಸಿ ಆಶರೀರಗಳನ್ನೇ ಆತ್ಮವೆಂದು ಅಭಿಮಾನದಿಂದ ತಿಳಿಯುತ್ತಾನೆ. ಇದರಿಂದ ಸಹಿಸಲಾಗದ ದುಃಖಗಳಿಗೆ ಈಡಾಗುತ್ತಾನೆ.

ಭಗವಂತನು ಎಲ್ಲಾವಸ್ತುಗಳ ನಿಜಸ್ಥಿತಿಯನ್ನೂ ಒಂದೇವೇಳೆಯಲ್ಲಿ ಚೆನ್ನಾಗಿ ನೋಡಿ ತಿಳಿದುಕೊಳ್ಳುವ ಸಿದ್ಧಿಯುಳ್ಳವನು. ತನ್ನ ಇಷ್ಟಕ್ಕನುಗುಣವಾಗಿ ಸೃಷ್ಟಿ, ಸ್ಥಿತಿ, ಸಂಹಾರ, ನಿಗ್ರಹ, ಅನುಗ್ರಹಗಳೆಂಬ ಐದು ಕಾರ್ಯಗಳನ್ನು ಮಾಡುವ ಶಕ್ತಿಸಂಪತ್ತುಳ್ಳವನು. ಎಲ್ಲಾಜನರಿಗೂ ಯಾವ ಉಪಾಧಿ (ಕಾರಣ)ಯೂ ಇಲ್ಲದೆ ಸ್ನೇಹಿತನಾಗಿರುತ್ತಾನೆ, ದಯೆಮಾಡಲು ತಕ್ಕವರಲ್ಲಿ ದಯೆಮಾಡುವಿಕೆ, ವಾತ್ಸಲ್ಯ, ಸೌಶೀಲ್ಯ (ತನಗಿಂತ ಕೀಳಾದವರಲ್ಲೂ ಕಲೆತು ಬೆರೆಯುವಿಕೆ) ಇವೇ ಮೊದಲಾದ ಗುಣಗಳ ಸಮೂಹದಿಂದ ಕೂಡಿರುತ್ತಾನೆ. ಈಗುಣಗಳಿಂದ ತಪ್ಪುಮಾಡಿದ ಮಕ್ಕಳಲ್ಲಿ ತಂದೆಯ ಕೋಪ ಹೇಗೆ ತಣ್ಣಗಾಗುವುದೋ ಹಾಗೆ ಪರಮಾತ್ಮನ ಕೋಪ, ಪಾಪ ಮಾಡಿದ ನಮ್ಮಂತಹವರ ವಿಷಯದಲ್ಲಿ ಶಮನವಾಗುತ್ತದೆ. ತನ್ನನ್ನು ಹೊಂದಲು ಅಪೇಕ್ಷಿಸುವವರಿಗೆ ಇಂತಹ ಗುಣ ಐಶ್ವರ್ಯಗಳಿಂದ ಕೂಡಿದ ತನ್ನನ್ನೇ ಅವರಿಗೆ ಅಧೀನಮಾಡುವ ಔದಾರ್ಯವುಳ್ಳವನು.

ಈರೀತಿ ಪುರುಷಶ್ರೇಷ್ಠನಾದ, ಪರಬ್ರಹ್ಮನಾದ ನಾರಾಯಣನು ಸಂಸಾರಿಯಾದ ಈ ಜೀವಸಮೂಹವನ್ನು ಒಂದೇಸಲ ಈ ಕಷ್ಟದಿಂದ ಪಾರುಮಾಡಲು ಸಮರ್ಥನು. ಆದರೆ ಎಲ್ಲರನ್ನೂ ಕಾಪಾಡಲು ತಕ್ಕ ಕಲ್ಯಾಣಗುಣಗಳಿಂದ ಕೂಡಿದ್ದರೂ ಈ ಜೀವಗಳು ಅನಾದಿಯಾಗಿ ಮಾಡಿರುವ ಅವುಗಳ ಕರ್ಮವು ಆ ಕಾಪಾಡುವಿಕೆಯನ್ನು ತಡೆಯುತ್ತವೆ. ಅವನೇನೋ ಹೇಗಾದರೂ ಇವನ್ನು ಸಂಸಾರ ಕಡಲಿನಿಂದ ಮೇಲಕ್ಕೆ ಎತ್ತಲು ಹಾತೊರೆಯುತ್ತಿದ್ದಾನೆ. ಸಂಸಾರತಂತ್ರವನ್ನು ನಡೆಸಬೇಕಾದುದು ಅವನ ಸಂಕಲ್ಪವಾದುದರಿಂದ, ವೈಷಮ್ಯ ನೈರ್ಘೃಣ್ಯಗಳೆಂಬ ಈ ದೋಷಗಳು ಅವನಿಗೆ ಇಲ್ಲವಾದುದರಿಂದ, ಅವುಗಳು ತಮ್ಮತಮ್ಮ ಕರ್ಮಕ್ಕೆ ತಕ್ಕಂತೆ ಕೇಳುವ, ಏಳಿಗೆಗೆ ಸಾಧನವಾದ ಪುರುಷಾರ್ಥಗಳನ್ನು ಅವುಗಳಿಗೆ ಅವನು ಕೊಡುತ್ತಿರುತ್ತಾನೆ. ಈ ಅಭ್ಯುದಯ ರೂಪವಾದ ಪುರುಷಾರ್ಥಗಳು ಮೇಲೆ ನೋಡಲು ಪ್ರಯೋಜನವುಳ್ಳವುಗಳೆಂದು ಕಂಡರೂ ಕೊನೆಯಲ್ಲಿ ಫಲದಿಂದ ಅನರ್ಥವೇ ಆಗಿವೆ.

ಹೀಗಿರುವಾಗ ಈ ಜೀವನು ಒಂದು ಸಲ ಸರ್ವಸಮನಾದ, ತಾವರೆಯಂತೆ ಕಣ್ಣುಳ್ಳ ಪರಮಾತ್ಮನ ದೃಷ್ಟಿಗೆ ಬೀಳುತ್ತಾನೆ, ಸಂಸಾರವೆಂಬ ವೃಕ್ಷದ ಬುಡವನ್ನು ಕತ್ತರಿಸಲು ಅನುಕೂಲವಾದ ಹುಟ್ಟು, ವಿದ್ಯೆ, ನಡವಳಿಕೆ ಮತ್ತು ವೈರಾಗ್ಯ ಇವೇ

ಮುಂತಾದವು ಇವನಲ್ಲಿ ಇರುವುದಿಲ್ಲ. ಭಗವಂತನ ದಯೆಗೆ ಪಾತ್ರವಾಗುವುದೇ ನೆಪವಾಗಿ ತಡೆಯಿಲ್ಲದ ಈ ಸಂಸಾರ ಚಕ್ರದಲ್ಲಿ ಉಂಟಾಗುವ ಎಲ್ಲಾ ಸಿದ್ಧಾಂತ ದವರೂ ಒಪ್ಪುವ ಯಾವುದೋ ಒಂದು ಸುಕೃತ ವಿಶೇಷದಿಂದ, ತತ್ತ್ವೋಪ ದೇಶವನ್ನು ಪಡೆಯಲು ಒಳ್ಳೆಯ ಆಚಾರ್ಯನ ಹತ್ತಿರ ಹೋಗುತ್ತಾನೆ. ಸೇವೆ ಮಾಡಿ ಪ್ರಕೃತಿ, ಪುರುಷ, ಈಶ್ವರ ಎಂಬ ತತ್ತ್ವತ್ರಯವನ್ನು ಅರಿಯುತ್ತಾನೆ. ಬಹಳ ಶಾಖೆಗಳುಳ್ಳ ವೇದದ ಶಾಖಾಭೇದಗಳಲ್ಲಿ ಹೇಳುವ ಯಾವುದೋ ವಿದ್ಯೆಯೆಂಬ ನೆರಳಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಾನೆ. ಅಂದರೆ ಆ ವಿದ್ಯೆಯನ್ನು ಉಪಾಸನೆ ಮಾಡುತ್ತಾನೆ. ಪರಮ ಪುರುಷನ ತಾವರೆಯಂತಿರುವ ಪಾದಗಳ ಧ್ಯಾನದಿಂದ ಬೇರೆ ಯಾದ ತನ್ನ ಇಷ್ಟಾರ್ಥಗಳನ್ನೆಲ್ಲ ಮರೆಯುತ್ತಾನೆ. ಅನಂತರ ಬಹಳ ಕಾಲದ ಬಯಕೆಯಾದ ಅರ್ಚಿರಾದಿದಾರಿಯಿಂದ ನಡೆದು ವೈಕುಂಠದೇಶವನ್ನು ಹತ್ತಿ ತನ್ನ ರೂಪವನ್ನು ಹೊಂದಿ ಭಗವಂತನನ್ನು ಅನುಭವಿಸುತ್ತಾನೆ.

ಆದರಲ್ಲೂ ಜ್ಞಾನ ಕರ್ಮಗಳಿಂದ ಸಮುಚ್ಚಿತವಾದ ಅಂದರೆ ಕೂಡಿದ ವಾಕ್ಯಾರ್ಥಜ್ಞಾನಾದಿಗಳೇ ಮೋಕ್ಷಕ್ಕೆ ಕಾರಣ—ಎಂಬ ಇತರಮತಗಳನ್ನು ನಿರಸನ ಮಾಡಿರುತ್ತಾರೆ ಈ ದಾರ್ಶನಿಕರು. ಕರ್ಮ, ಜ್ಞಾನ ಇವುಗಳಿಂದ ಅನುಗ್ರಹಿಸ ಲ್ಪಟ್ಟ ವೇದನ–ಧ್ಯಾನ–ಉಪಾಸನ ಇವೇ ಮೊದಲಾದ ಶಬ್ದಗಳಿಂದ ಹೇಳಲ್ಪಡುವ ದರ್ಶನ ಸಮಾನಾಕಾರವಾದ ಜ್ಞಾನವೇ ಸಾಧನವೆಂದು ತೀರ್ಮಾನ ಮಾಡಿರುತ್ತಾರೆ. ಆ ಜ್ಞಾನವು ಭಕ್ತಿಶಬ್ದದಿಂದ ಹೇಳಲ್ಪಡುತ್ತದೆ. ಅದು ಕನಸಿನಲ್ಲಿ ಕಣ್ಣಿನಿಂದ ಭಗವಂತನನ್ನು ಕಂಡಂತಿರುವುದು. ಹೆಚ್ಚಾದ ಪ್ರೀತಿರೂಪವಾಗಿದೆ, ಮತ್ತೆ ಮತ್ತೆ ಆನಂದವನ್ನುಂಟುಮಾಡುತ್ತದೆ. ಅನೇಕ ಬಾರಿ ಆವರ್ತಿಮಾಡಲ್ಪಡುವ, ಪ್ರಯಾಣದ ಕೊನೆಯವರೆವಿಗೂ ಅಂದರೆ ಸಾಯುವವರೆವಿಗೂ ಎಡೆಬಿಡದೆ ಇರುವ ಈ ಸ್ಮರಣ– ನೆನಪಿನ ಪರಂಪರೆಯೇ ಮೋಕ್ಷಕ್ಕೆ ಏಣಿ ಎಂದು ನಿರ್ಣಯ ಮಾಡಿದ್ದಾಯಿತು.

ಇದನ್ನು ಇಲ್ಲಿ ವಿಚಾರ ಮಾಡೋಣ–ಮೇಲೆ ಹೇಳಿದ ಉಪಾಸನೆಗಳ ಸಮೂಹಗಳಿಗಿಂತ ಬೇರೆಯಾದ ಮತ್ತೊಂದನ್ನು ಅಪೇಕ್ಷಿಸದೇ ಸ್ವತಂತ್ರವಾದ ಮೋಕ್ಷೋಪಾಯವುಂಟೆ ? ಅಥವಾ ಇಲ್ಲವೇ ? ಇಲ್ಲ ಎಂಬುದು ಪೂರ್ವಪಕ್ಷ, ಉಂಟೆಂಬುದು ಸಿದ್ಧಾಂತ.

## ಪೂರ್ವಪಕ್ಷ

೧. ಪ್ರಪತ್ತಿ ಎಂಬುದೇನು ? ಅದರ ಸ್ವರೂಪ ಎಂತಹದು ?

೨. ಅದರ ಲಕ್ಷಣ ಏನು ?

೩. ಅದನ್ನು ಯಾರು ಅನುಷ್ಠಾನ ಮಾಡಿದ್ದಾರೆ ?

೪. ಅದನ್ನು ಅನುಷ್ಠಿಸಬೇಕೆಂಬ ವಿಧಿವಾಕ್ಯವಾವುದು ? ಈ ಪ್ರಶ್ನೆಗೆ ಉತ್ತರ ಹೇಳಲು ಸಾಧ್ಯವೇ ?

೫. ಭಕ್ತಿ ಬಿಟ್ಟು ಬೇರೆ ಉಪಾಯವೇ ಇಲ್ಲ ಎಂದು ಪ್ರಮಾಣಗಳು ಹೇಳುತ್ತವೆ, ಇದಕ್ಕೇನು ಉತ್ತರ ?

೬. ಭಕ್ತಿಯೂ ಪ್ರಪತ್ತಿಯೂ ಒಂದೇ ಎಂದು ನಿಶ್ಚಯವಾಗಿದೆ ಎಂಬ ಈ ವಾದಕ್ಕೆ ಸಮಾಧಾನ ಏನು ?

೭. ಬೇರೆಯಾದ ಪ್ರಪತ್ತಿಯು ಸ್ವಪ್ರವೃತ್ತಿ ನಿವೃತ್ತಿರೂಪವಾಗಿರುವುದರಿಂದ ಯಾರಾದರೂ ಅನುಷ್ಠಾನ ಮಾಡಲು ಸಾಧ್ಯವೇ ?

೮. ಶ್ರುತಿ ಸ್ಮೃತಿಗಳಲ್ಲಿ ಪ್ರಪತ್ತಿಯೆಂಬುದೊಂದು ಪ್ರಸಿದ್ಧವಾಗಿದೆಯೇ ?

೯. ಮುಖ್ಯವಾಗಿ ಸಂಪ್ರದಾಯಕ್ಕೇ ಈ ವಾದವು ವಿರುದ್ಧವಲ್ಲವೇ ?

ಈ ಕಾರಣಗಳಿಂದ ಪ್ರಪತ್ತಿಯು ಮೋಕ್ಷೋಪಾಯವಲ್ಲ ; ಇದು ಅವರ ಅಭಿಪ್ರಾಯ. ಈ ಅಭಿಪ್ರಾಯವನ್ನೇ "ನಿಕ್ಷೇಪ ರಕ್ಷೆ" ಎಂಬ ಗ್ರಂಥದಲ್ಲಿ ವೇದಾಂತಾಚಾರ್ಯರು ಕಾರಿಕಾರೂಪದಲ್ಲಿ ಹೇಳಿದ್ದಾರೆ. ಅದನ್ನೂ ಇಲ್ಲಿ ಹೇಳೋಣ.

೧ ೨ ೩ ೪ ೫
ಸ್ವರೂಪಲಕ್ಷ್ಮಾನುಷ್ಠಾನ ವಿಧ್ಯದೃಷ್ಟೇರ್ನಿಷೇಧತಃ ।
೬ ೭ ೮ ೯
ಐಕ್ಯಾ ದಶಕ್ತೇರ ಖ್ಯಾತೇಃ ಸಂಪ್ರದಾಯ ವಿರೋಧತಃ ॥

ಈ ಪೂರ್ವಪಕ್ಷಿಗಳು ಕೇಳುವ ಪ್ರಶ್ನೆಗಳನ್ನೇ ಅಂದರೆ "ಪ್ರಪತ್ತಿಯೆಂಬುದು ಭಗವಂತನನ್ನು ಹೊಂದಲು ಬೇರೆ ಉಪಾಯವಲ್ಲ; ಭಕ್ತಿಯೆಂಬುದೊಂದೇ ಉಪಾಯ" ಎಂದು ಹೇಳುವವರ ಅಭಿಪ್ರಾಯವನ್ನು ಇನ್ನೂ ವಿವರವಾಗಿ ತಿಳಿಯೋಣ.

ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ಎಲ್ಲಾ ತತ್ತ್ವವನ್ನೂ ಉಪದೇಶಮಾಡಿದನು, ಕೊನೆಯಲ್ಲಿ,

[1]ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥

1. ಭಗವದ್ಗೀತಾ. ೧೮–೬೬,

ಎಂದು ಉಪದೇಶಮಾಡಿದ್ದಾನೆ. ಇದಕ್ಕೆ ಚರಮ ಶ್ಲೋಕವೆಂದು ಸಾಂಪ್ರದಾಯಿಕವಾದ ಹೆಸರು. "ಪ್ರಪತ್ತಿಯೆಂಬುದು ಒಂದುಂಟು" ಎಂದು ಹೇಳುವವರು ಈ ಶ್ಲೋಕಕ್ಕೆ ಹೊಸದಾಗಿ ಒಂದರ್ಥವನ್ನು ಹೇಳುತ್ತಾರೆ. ಅದೇನೆಂದರೆ– "ಎಲ್ಲಾ ಧರ್ಮಗಳನ್ನೂ ಬಿಟ್ಟು ಬಿಟ್ಟು ಭಗವಂತನನ್ನೇ ಶರಣವಾಗಿ ಹೊಂದಿದವನಿಗೆ ಭಗವಂತನೇ ಮೋಕ್ಷಕ್ಕೆ ಉಪಾಯವಾಗುತ್ತಾನೆ" ಎಂದು.

೧. ಹೀಗೆ ಹೇಳಿದರೆ ಇದರಲ್ಲಿ ಶರಣಾಗತಿ ಎಂಬುದು ಹಿಂದೇಯೇ ಸಿದ್ಧವಾಗಿರುವುದೇ ? ಅಥವಾ ಹೊಸದಾಗಿ ಸಾಧಿಸಬೇಕೇ ? ಜೀವನಿಗೆ ಇದು ಸಿದ್ಧವಾಗಿರುವುದಾದರೆ, ಇದನ್ನು ಕುರಿತು ಶಾಸ್ತ್ರ ಏತಕ್ಕೆ ? ಈ ವಿಶೇಷವುಳ್ಳವನು ಅಧಿಕಾರಿಯಾಗುತ್ತಾನೆ ಎಂದು ಇದನ್ನು ಅಧಿಕಾರಿ ವಿಶೇಷಣವಾಗಿ ಶಾಸ್ತ್ರ ಹೇಳುತ್ತದೆ. ಎಂದರೆ–ಮೇಲೆ ಒಂದು ಕಾರ್ಯವನ್ನು ಮಾಡುವವನಿಗೆ ಅದಕ್ಕಾಗಿ ಯಾವುದಾವುದು ಬೇಕೋ ಅದದನ್ನು ಅಧಿಕಾರಿ ವಿಶೇಷಣವೆಂದು ಮೀಮಾಂಸಕರು ಹೇಳುತ್ತಾರೆ. ಶರಣಾಗತಿಯನ್ನು ಅದರಂತೆ ವಿಶೇಷಣವೆಂದರೆ ಮೇಲೆ ಇವನು ಮೋಕ್ಷಕ್ಕಾಗಿ ಒಂದನ್ನು ಮಾಡಬೇಕೆಂದಾಯಿತು. ಆಗ ಶರಣಾಗತಿಯಿಂದ ಮೋಕ್ಷ ಎಂದು ಹೇಳಲಾಗುತ್ತದೆಯೆ ? ಒಂದನ್ನೂ ಮಾಡಬೇಕಾದುದಿಲ್ಲವೆಂದಾದರೆ, ಚರಮಶ್ಲೋಕವು ಜೀವನಿಗೆ ಒಂದು ಕಾರ್ಯವನ್ನು ವಿಧಿಸುತ್ತದೆ ಎಂದು ಹೇಳುವುದೂ ತಪ್ಪಾಗುತ್ತದೆ. ಆದುದರಿಂದ ಪ್ರಪತ್ತಿಯೇ ಸಾಧಿಸಬೇಕಾದುದು ಎಂದು ಹೇಳಬೇಕಾಗುತ್ತದೆ. ಅದು ಜ್ಞಾನವಾಗದೆ ಬೇರೆ ಯಾವುದಾದರೂ ಆದರೆ, ನೇರವಾಗಿ ಮೋಕ್ಷಸಾಧನವಾಗಲಾರದು. ಜ್ಞಾನದಲ್ಲೂ ಧ್ಯಾನವಾದರೆ, ಭಕ್ತಿಯಾಗಿಯೇ ಮುಗಿಯುತ್ತದೆ–ಬೇರೆ ಜ್ಞಾನವೆಂದರೆ, ಅದನ್ನು ಹೇಗೆ ಮಾಡುವುದು ? ಸರ್ವಧರ್ಮಗಳನ್ನೂ ಬಿಡಬೇಕು; ಆ ಸ್ಥಿತಿಯೊಡನೆ ಕಲೆತ ಜ್ಞಾನದಿಂದ ಮೋಕ್ಷವೆಂದರೆ–ಎಲ್ಲಾ ಧರ್ಮಗಳನ್ನೂ ಯಾರು ಬಿಡಲು ಸಾಧ್ಯ ? ಪ್ರಪಂಚವೆಲ್ಲ ಒಳ್ಳೆಯ ಪದ್ಧತಿಯಿಲ್ಲದೆ ಈ ಪ್ರಪತ್ತಿಯಿಂದ ನಾಶವಾಗುತ್ತದೆ. ಭಕ್ತಿಯೋಗದಂತೆ ಇರುವ ಮೋಕ್ಷೋಪಾಯಗಳನ್ನು ಮಾತ್ರ ಬಿಡಬೇಕೆಂದು ಹೇಳಿದರೆ, ಇವನು ಭಕ್ತಿಯೋಗವನ್ನು ಮಾಡಲು ಸಮರ್ಥನೋ ಅಥವಾ ಅಸಮರ್ಥನೋ ? ಅಸಮರ್ಥನಾದರೆ ಅವನನ್ನು ನೋಡಿ 'ನೀ ಬಿಡು' ಎಂದು ಏತಕ್ಕೆ ವಿಧಿಸಬೇಕು ? ಸಾಮರ್ಥ್ಯವುಳ್ಳವನಾಗಿದ್ದರೆ ಅವನನ್ನು ಕುರಿತು ಪ್ರಪತ್ತಿಯನ್ನು ವಿಧಿಸಿದರೆ, ಭಕ್ತಿಯೋಗ ಶಾಸ್ತ್ರ ವ್ಯರ್ಥವಾಗುತ್ತದೆಯಲ್ಲವೇ ? ವಿವೇಕವಿಲ್ಲದವರೇ ಭಕ್ತಿಯೋಗವನ್ನು ಮಾಡುತ್ತಾರೆಂದರೆ–ವ್ಯಾಸ, ಪರಾಶರ ಮುಂತಾದವರು ವಿವೇಕವಿಲ್ಲದವರೇ ? ಆದುದರಿಂದ ಇಂತಹದು ಪ್ರಪತ್ತಿ ಎಂದು ಹೇಳಲಾಗದು.

೨. ಕಾಗೆಯು ಕಾಲಿನಲ್ಲಿ ಬಿದ್ದಿತು. ದ್ರೌಪದಿಯು ಅರುಚಿದಳು. ಬೇಡನು ಕಪೋತ (ಪಾರಿವಾಳ) ಇದ್ದ ಮರದ ಕೆಳಗೆ ಬಂದು ನಿಂತನು–ಎಂಬಿವನ್ನೆಲ್ಲಾ ಹೇಳಿ

ಪ್ರಪತ್ತಿಯನ್ನು ಸ್ಥಾಪಿಸಲು ಮುಂದುವರಿಯುತ್ತಾರೆ. ಅದಕ್ಕೆ ಲಕ್ಷಣವೇನೋ ತಿಳಿಯಲಿಲ್ಲ. 'ನೀನು ಉಪಾಯವಾಗಬೇಕು' ಎಂಬ ಪ್ರಾರ್ಥನೆ ಪ್ರಪತ್ತಿ ಎಂದು ಕೆಲವರು ಹೇಳುತ್ತಾರೆ. ಬೇಡನು ಪಾರಿವಾಳವನ್ನು ಕೇಳಿಕೊಂಡನೇನು ? ಅಲ್ಲದೆ 'ಶರಣ' ಎಂಬ ಶಬ್ದಕ್ಕೆ ಇಲ್ಲಿ ಉಪಾಯ ಎಂದು ಅರ್ಥ; ರಕ್ಷಿಸುವವನು ಎಂಬ ಅರ್ಥವನ್ನು ಇಲ್ಲಿ ತೆಗೆದು ಕೊಳ್ಳಕೂಡದು ಎಂದು ಒಂದು ವಾಕ್ಯ ಹೇಳುತ್ತದೆ. 'ನೀನು ರಕ್ಷಿಸಬೇಕು' ಎಂದು ಗೋಪ್ತೃತ್ವವರಣವು ಬೇಕೆನುತ್ತದೆ ಮತ್ತೊಂದು ವಾಕ್ಯ. ಆನುಕೂಲ್ಯ ಸಂಕಲ್ಪವೇ ಮೊದಲಾಗಿ ಶರಣಾಗತಿ ಆರು ವಿಧ ಎಂದು ಕೆಲವರು ಹೇಳುತ್ತಾರೆ. ಎಲ್ಲವನ್ನೂ ಸೇರಿಸಿ ಲಕ್ಷಣವನ್ನು ಹೇಳಲೇ ಆಗದು. ಎಲ್ಲವನ್ನೂ ಸೇರಿಸಿದರೆ ಪ್ರಪತ್ತಿ ಎಂದೂ ಹೇಳಲಾಗುವುದಿಲ್ಲ. ಕೆಲವೆಡೆಗಳಲ್ಲಿ ಎಲ್ಲವೂ ಸೇರಿರುವುದನ್ನು ಕಾಣೆವು.

೩. ಈವಾಗ ನೀವು ಪ್ರಪತ್ತಿಯೆಂದು ಯಾವುದನ್ನೋ ಹೊಡುತ್ತೀರಲ್ಲ ; ಅದನ್ನು ಹಿಂದಿನಕಾಲದಲ್ಲಿ ಮಾಡಿದವರಾರು ? ದ್ರೌಪದಿ, ವಿಭೀಷಣ ಮುಂತಾದವರು ಎನ್ನುವಿರಿ. ಅವರು ಅದನ್ನು ಮೋಕ್ಷಕ್ಕಾಗಿ ಮಾಡಲೇ ಇಲ್ಲ, ವಿದುರ, ಧರ್ಮವ್ಯಾಧ ಮುಂತಾದವರನ್ನೂ ಹಿಂದಿನ ಜನ್ಮದಲ್ಲಿ ಅವರು ಮಾಡಿರುವ ಭಕ್ತಿಯೋಗದ ಸಂಬಂಧದಿಂದ ಅಭ್ಯಾಸವುಳ್ಳವರೆಂದೇ ಹಿರಿಯರು ಹೇಳಿರುತ್ತಾರೆ. ಅವರಿಗೇ ಪ್ರಪತ್ತಿ ಉಪಾಯವಾಗದಿರುವಾಗ ವೈದಿಕರಾದವರಿಗೆ ಅದು ಮೋಕ್ಷಕ್ಕೆ ಉಪಾಯವಾದೀತೇ ? ಮೂರು ಅಕ್ಷರವುಳ್ಳ ಹೆಸರಿನಿಂದಲೇ (ಗೋವಿಂದ ಎಂಬ ಶಬ್ದದಿಂದಲೇ) ಕ್ಷತ್ರಬಂಧುವೆಂಬುವನು ಅಂದೇ ಶ್ರೇಷ್ಠವಾದಗತಿಯನ್ನು ಪಡೆದನು. "[1]**ಮೂನ್ರೆಳುತ್ತು ಉಡೆಯಪೇರಾಲ್ ಕತ್ತಿರಬನ್ದು ಮುನ್ರೇ ಪರಾಙ್ಗತಿ ಕಣ್ಣುಕೊಂಡಾನ್**=ಹಿಂದೆ ಮೂರಕ್ಷರವುಳ್ಳ ಹೆಸರಿನಿಂದ (ಅದನ್ನು ಹೇಳಿದ ಮಾತ್ರದಿಂದ) ಕ್ಷತ್ರಬಂಧುವು ಶ್ರೇಷ್ಠವಾದ ಗತಿಯನ್ನು ಪಡೆದನು" ಎಂದು ಹೇಳುತ್ತಾರಲ್ಲ. ಕೇವಲ ನಾಮ ಸಂಕೀರ್ತನದಿಂದ-'ಗೋವಿಂದ' ಎಂಬ ಭಗವಂತನ ನಾಮವನ್ನು ಹೇಳಿದ ಮಾತ್ರದಿಂದ ಅದು ಇವನಿಗೆ ಮೋಕ್ಷವನ್ನು ಕೊಟ್ಟಿತೇ ? ಅದರಂತೆ ಪ್ರಪತ್ತಿಯೂ ಭಕ್ತಿಯನ್ನು ಮುಂದಿಟ್ಟೇ ಮೋಕ್ಷಕ್ಕೆ ಕಾರಣವಾಗುತ್ತದೆ.

೪. ಪ್ರಪತ್ತಿಯನ್ನು ಮೋಕ್ಷಕಾಗಿ ವಿಧಿಸುವ ವಾಕ್ಯವೊಂದಿಲ್ಲ, "**ಮುಕ್ತಿಕಾಮಃ ಶರಣಾಗತಿಂ ಕುರ್ಯಾತ್**=ಮೋಕ್ಷವನ್ನು ಬಯಸುವವನು ಶರಣಾಗತಿಯನ್ನು ಮಾಡಬೇಕು" ಎಂಬ ಈ ರೀತಿಯಾದ ವಾಕ್ಯವು ಎಲ್ಲಿಯೂ ಇಲ್ಲವಲ್ಲ. ಭಗವಂತನು ಅರ್ಜುನನೊಬ್ಬನನ್ನು ನೋಡಿ "[2]**ಶರಣಂವ್ರಜ**=ನನ್ನನ್ನು ಮರೆ ಹೋಗು" ಎಂದು

1. ತಿರುಮಾಲೈ. ೪.
2. ಗೀತೆ. ೧೮-೬೬,

ಹೇಳಿದನು. ಅದು ಎಲ್ಲರಿಗೂ ಅನ್ವಯಿಸುವುದಿಲ್ಲ. ಅದರ ಅರ್ಥವೂ ಈವಾಗ ಅರಿಯಲಾಗದು. ಶ್ವೇತಾಶ್ವತರೋಪನಿಷತ್ತಿನಲ್ಲಿ [1]ಪ್ರಪತ್ತಿ ಮಾಡುತ್ತೇನೆ ಎಂದಿದೆ. ಅದು ಎಲ್ಲರೂ ಮಾಡಬೇಕೆಂಬ ವಿಧಿವಾಕ್ಯವಾಗುತ್ತದೆಯೇ ? ತೈತ್ತರೀಯೋಪನಿಷತ್ತಿನಲ್ಲಿ [2]ನ್ಯಾಸವಿದ್ಯೆಯನ್ನು ವಿಧಿಸಿದೆ ; ಓಮಿತ್ಯಾತ್ಮಾನಂ ಯುಂಜೀತ ಎಂದು ಅದು ಯೋಗವೇ ಹೊರತು ಪ್ರಪತ್ತಿಯಲ್ಲವಲ್ಲ. ಶ್ರೀಭಾಷ್ಯದಲ್ಲೂ ಪುರುಷವಿದ್ಯೆಯನ್ನು ಅದಕ್ಕೆ ಅಂಗವಾಗಿ ಹೇಳಿದ್ದಾರೆ. ಆದರಿಂದ ಅದು ಸುಲಭವಾಗಿ ಮಾಡುವ ಪ್ರಪತ್ತಿಯಾಗಲಾರದು. [3]ಒಂದೇ ಸಲ ಶರಣು ಹೊಂದಿದವನಿಗೂ, ನಿನಗೆ ದಾಸನಾಗಿರುವೆನೆಂದು ಬೇಡುವವನಿಗೂ ಅಭಯವನ್ನು ಕೊಡುವುದು ತನ್ನ ವ್ರತ ಎಂದು ಶ್ರೀರಾಮನು ತನ್ನ ಗುಣವನ್ನು ಹೇಳಿದನು. ಇದರಿಂದ ಭಗವಂತನು ಪ್ರಪತ್ತಿಗೆ ಮೋಕ್ಷಫಲವನ್ನು ತರುತ್ತಾನೆನ್ನುವುದು ಉಂಟಾಗದು. ಶ್ರೀಕೃಷ್ಣನು ನನ್ನ ಹತ್ತಿರ [4]ಪ್ರಪತ್ತಿಮಾಡುವವರು ಮಾಯೆಯಿಂದ ಬಿಡಲ್ಪಡುತ್ತಾರೆ—ಎಂದು ಹೇಳುತ್ತಾನೆ. ಇಲ್ಲಿ ಪ್ರಪತ್ತಿಯಿಂದ ಭಕ್ತಿ ಹುಟ್ಟಿ ಅದರಿಂದ ಮೋಕ್ಷ ಎಂದು ಭಾಷ್ಯಾದಿಗಳಿಂದ ತಿಳಿದುಬರುತ್ತದೆ. ಚರಮ ಶ್ಲೋಕದಲ್ಲಿ ಭಾಷ್ಯವೂ ಭಕ್ತಿಯೋಗಕ್ಕೆ ಅಂಗವಾಗಿಯೇ ಪ್ರಪತ್ತಿಯನ್ನು ಹೇಳುತ್ತದೆ.

೫. [5]ಪುರುಷಸೂಕ್ತದಲ್ಲಿ ಭಕ್ತಿಯನ್ನು ಮೋಕ್ಷಕ್ಕೆ ಉಪಾಯವನ್ನಾಗಿ ಹೇಳಿ ಬೇರೆ ದಾರಿಇಲ್ಲ ಎಂದು ಹೇಳಿದೆ. ಗೀತೆಯಲ್ಲೂ ಭಕ್ತಿಯನ್ನು ಬಿಟ್ಟು ಬೇರೊಂದರಿಂದ ನನ್ನನ್ನು ಹೊಂದಲಾಗದು ಎಂದು ಗೀತಾಚಾರ್ಯನು ಹೇಳಿದ್ದಾನೆ. ಪರಾಶರಶೌನಕಾದಿಗಳೂ ಯೋಗವೊಂದೇ ಪಾಪಗಳೆಲ್ಲವನ್ನೂ ಸುಡುತ್ತದೆ. ಎಂದು ಹೇಳಿ ಅದನ್ನೇ ವಿಸ್ತಾರವಾಗಿ ಹೇಳಿದ್ದಾರೆ. ಮನುವೂ ಮೋಕ್ಷವನ್ನು ಪಡೆಯಲು

1. ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಂಹದೇವ ಮಾತ್ಮಾಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂಪ್ರಪದ್ಯೇ ॥
ಶ್ವೇತಾಶ್ವತರ. ೬–೧೮.

2. ತೈತ್ತರಿಯೋಪನಿಷತ್. ನಾ. (ಅನು ೬೩.) ೭೮.

3. ಸಕೃದೇವ ಪ್ರಪನ್ನಾಯ ತವಾಸ್ಮೀತಿಚ ಯಾಚತೇ ।
ಅಭಯಂ ಸರ್ವ ಭೂತೇಭ್ಯೋ ದದಾಮ್ಯೇ ತತ್‌ವ್ರತಂ ಮಮ ॥
ರಾಮಾಯಣ ಯುದ್ಧ ಕಾಂಡ. ೧೮–೩೩–೩೪.

4. ದೈವೀಹ್ಯೇಷಾ ಗುಣಮಯೀ ಮಮಮಾಯಾದುರತ್ಯಯೊ ।
ಮೊಮೇವಯೇ ಪ್ರಪದ್ಯಂತೇ ಮಾಯಾಮೇತಾಂತರಂತಿತೇ ॥ ಗೀತಾ. ೭–೧೪.

5. ತಮೇವಂ ವಿದ್ವಾನಮೃತ ಇಹಭವತಿ ।
ನಾನ್ಯಃ ಪಂಥಾಅಯನಾಯ ವಿದ್ಯತೇ ॥

[1]ಸ್ವಪ್ನದಂತಿರುವ ಸಾಕ್ಷಾತ್ಕಾರವಾದ ಜ್ಞಾನವೇ ಬೇಕೆನ್ನುತ್ತಾರೆ. ಆದುದರಿಂದ ಬೇರೆ ಉಪಾಯವಿಲ್ಲ ಎಂದಾಯಿತು.

೬. ಭಕ್ತ, ಪ್ರಪನ್ನ ಎಂಬಶಬ್ದಗಳು ಒಂದೇ ಅರ್ಥದಲ್ಲಿ ಪ್ರಸಿದ್ಧವಾಗಿವೆ. ಗೀತೆಯಲ್ಲಿ ೭, ೮ನೇ ಅಧ್ಯಾಯಗಳಲ್ಲಿ ಇದನ್ನು ನೋಡಬಹುದು.

ಉದಾಹರಣೆ :

**ಮಾಮೇವಯೇ ಪ್ರಪದ್ಯನ್ತೇ ಮಾಯಾಮೇತಾಂತರನ್ತಿತೇ ।** ಗೀ. ೭-೧೪.

ಎಂದು ಪ್ರಪತ್ತಿ ಮಾಡಿದವರನ್ನು ಹೇಳುತ್ತದೆ.

**ತೇಷಾಂಜ್ಞಾನೀ ನಿತ್ಯಯುಕ್ತಃ ಏಕಭಕ್ತಿಃ ವಿಶಿಷ್ಯತೇ ।** ಗೀ. ೭-೧೭.

ಎಂದು ಏಕಭಕ್ತಿ ಶಬ್ದದಿಂದ ಪರಮೇಕಾಂತಿಯನ್ನು ಅಂದರೆ ವಿಷ್ಣುವನ್ನು ಬಿಟ್ಟು ಬೇರೆದೇವತೆಯಲ್ಲಿ ಭಕ್ತಿ ಮಾಡಿದವನನ್ನು ಹೇಳುತ್ತದೆ.

ಒಂದು ಸಲ ಉಂಟಾದ ಜ್ಞಾನದಿಂದ ಮೋಕ್ಷವಿಲ್ಲ, ಪ್ರತಿ ನಿತ್ಯವೂ ಆ ಜ್ಞಾನದ ಪರಂಪರೆಯು ಎಡೆಬಿಡದೇ ಇರಬೇಕೆಂದು ಬ್ರಹ್ಮನಂದಿ ಮೊದಲಾದವರು ಹೇಳಿದ್ದಾರೆ. ಹೀಗೆಂದಾದ ಮೇಲೆ ಪ್ರಪತ್ತಿಯೆಂಬುದು ಬೇರೆಯಾದುದುಂಟೇ? ಎರಡೂ ಸೇರಿಯೇ ಪ್ರಯೋಜನವಾಗುವುದರಿಂದ ಒಂದನ್ನು ಹೇಳಿದರೂ ಮತ್ತೊಂದನ್ನು ಹೇಳಿದಂತೆಯೇ ಆಯಿತು.

೭. ಒಂದನ್ನೂ ಮಾಡದೇ ಇರುವುದೇ ಪ್ರಪತ್ತಿ ಎಂದು ಶೋಮಾಶಿ ಯಾಂಡಾನ್ ಎಂಬುವರು ಹೇಳುತ್ತಾರೆ. ಆ ರೀತಿ ಇರಲು ಯಾರಿಂದ ಸಾಧ್ಯ ? ಅವರವರು ಹೇಳುವುದೊಂದೂ ಪ್ರಪತ್ತಿ ಎಂಬ ಶಬ್ದದ ಅರ್ಥವಾಗದು.

೮. ಉಪನಿಷತ್ತಿನಲ್ಲೋ, ಮನ್ವಾದಿಮಹರ್ಷಿಗಳ ಸ್ಮೃತಿಗಳಲ್ಲೋ, ಕಲ್ಪ ಸೂತ್ರದಲ್ಲೋ ಎಲ್ಲಾದರೂ ಪ್ರಪತ್ತಿ ಹೇಳಲ್ಪಟ್ಟಿದೆಯೇ ? ಈ ಭರತಖಂಡ ದಲ್ಲಿ ಯಾವ ಮತದವರಾದರೂ ಪ್ರಪತ್ತಿಯೆಂಬುದನ್ನು ಹೇಳಿದ್ದಾರೆಯೇ ?

೯. ಶ್ರೀಭಾಷ್ಯಕಾರರಾದ ರಾಮಾನುಜರೂ ಹೇಳಿಲ್ಲ. ಗದ್ಯದಲ್ಲಿ ಶರಣಾಗತಿಯನ್ನು ಹೇಳಿದ್ದಾರೆನ್ನಬಹುದು. ಅದನ್ನುಮಾಡಿ ಪರಭಕ್ತಿ ಪರಜ್ಞಾನ

1. **ಪ್ರಶಾಸಿತಾರಂ ಸರ್ವೇಷಾಮಣೀಯಾಂಸ ಮಣೀಯಸಾಮ್ ।**
**ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ ತುಪುರುಷಂ ಪರಮ್ ॥**

ಳನ್ನು ಉಂಟಾಗುವಂತೆಮಾಡು ಎಂದಲ್ಲವೇ ಕೇಳಿದ್ದಾರೆ. ಅಲ್ಲದೆ ನಿತ್ಯದಲ್ಲಿ ಶರಣಾಗತಿಯನ್ನು ಆರಾಧನೆಗಾಗಿ ಮಾಡಿದ್ದಾರೆ. ಎಂದರೆ ಅವರು ರಚಿಸಿರುವ ನಿತ್ಯವೆಂಬ ಗ್ರಂಥದಲ್ಲಿ ಶರಣಾಗತಿಯನ್ನು ಆರಾಧನೆಗೆ ಸೇರಿಸಿದ್ದಾರೆ. ಯಾಮುನಾಚಾರ್ಯರೂ ಸ್ತೋತ್ರರತ್ನದಲ್ಲಿ ಶರಣಾಗತಿಯನ್ನು ಮಾಡಿ [1]ಭಕ್ತಿಯನ್ನು ಕೊಡು ಎಂದು ಹೇಳಿದ್ದಾರೆ.

ಆದುದರಿಂದ ಗ್ರಂಥಮೂಲ ಸಂಪ್ರದಾಯಕ್ಕೆ ವಿರುದ್ಧವಾಗಿ ಹೇಳುವ ಉಪದೇಶ ಸಂಪ್ರದಾಯವು ಉಪಯೋಗವಾಗಲಾರದು.

ಇದು ಪೂರ್ವಪಕ್ಷದ ಸಾರಾಂಶ.

## ಇನ್ನು ಸಿದ್ಧಾಂತವನ್ನು ಸಂಗ್ರಹವಾಗಿ ತಿಳಿಯೋಣ

ಪೂರ್ವಪಕ್ಷಿಯು ಕೇಳಿದ ಪ್ರಶ್ನೆಗಳಿಗೆ ಪ್ರತ್ಯುತ್ತರವು ಈ ಸಂಗ್ರಹದಿಂದಲೇ ಸಿಕ್ಕುತ್ತದೆ. ಅವನು ಹೇಳಿದ ವಿಷಯಗಳೆಲ್ಲವನ್ನೂ ದೂಷಿಸಬೇಕೆಂಬುದಿಲ್ಲ. ನಾವು ಅಪೇಕ್ಷಿಸಿದ ಅಂಶಗಳಿಗೆ ಮಾತ್ರ ಅವನು ತಿಳಿದಿರುವ ತಪ್ಪಾದ ಅಭಿಪ್ರಾಯವನ್ನು ಅದಲ್ಲವೆಂದು ಹೇಳುತ್ತೇವೆ. ಅದು ತಪ್ಪಾಗಲಾರದು. ಅದು ದೂಷಣವಲ್ಲ. ಈ ಸಂದರ್ಭದಲ್ಲಿ ವೇದಾಂತಾಚಾರ್ಯರು ನಿಕ್ಷೇಪರಕ್ಷೆಯಲ್ಲಿ ಹೇಳಿರುವ ಶ್ಲೋಕ ಇದು.

**ಅತ್ರಾನಭಿಮತಾಂಶಸ್ಯ ದೂಷಣಂ ಕಿಂನು ದೂಷಣಮ್ ।**
**ತಥಾಭ್ಯುಪಗತಾಂಶಸ್ಯ ದೂಷಣಂ ಕಿಂನು ದೂಷಣಮ್ ॥**

ಎಂಬುದು ಇದೇ ಅರ್ಥವನ್ನು ಕೊಡುತ್ತದೆ.

ಮೇಲೆ ಉದಾಹರಿಸಲ್ಪಡುವ ಪ್ರಮಾಣಗಳಿಂದ ಪ್ರಪತ್ತಿ ಎಂಬುದು ನಿಕ್ಷೇಪವಾಗುತ್ತದೆ. ಆತ್ಮ ನಿಕ್ಷೇಪವೆಂದೂ ಹೇಳಲ್ಪಡುತ್ತದೆ. ಆತ್ಮವನ್ನು ಭಗವಂತನಿಗೇ ಶೇಷವೆಂದು ನೆನೆಯುವುದು ಎಂದು ಅರ್ಥವಾದರೂ, ಅಷ್ಟುಮಾತ್ರದಲ್ಲೇ ನಿಲ್ಲದೆ ನನ್ನನ್ನು ಕಾಪಾಡುವುದಕ್ಕೆ ಬೇಕಾದ ಹೊಣೆಯೂ ಭಾರವೂ, ನನ್ನಿಂದ ಹೊರಲು ಆಗುವುದಿಲ್ಲವಾದುದರಿಂದ ಭಗವಂತನೇ ಅದನ್ನು ಭರಿಸಿಕೊಳ್ಳಬೇಕು—ಹೊತ್ತು ಕೊಳ್ಳಬೇಕು ಎಂಬ ಅಳತೆಗೆ ಬೆಳೆದ ನೆನಪಾಗುತ್ತದೆ ಅದು.

ಇದು ತಾನೆ ಭಕ್ತಿಯೋಗವನ್ನು ಮಾಡುವವನ ಆತ್ಮಸಮರ್ಪಣಕ್ಕೂ ಪ್ರಪನ್ನನ ಆತ್ಮ ಸಮರ್ಪಣಕ್ಕೂ ಇರುವ ವ್ಯತ್ಯಾಸ. ಇಬ್ಬರೂ ತನ್ನನ್ನು ಕಾಪಾಡುವುದರಿಂದ

1. ಭಗವನ್ ಭಕ್ತಿಮಪಿಪ್ರಯಚ್ಛಮೇ. ಸ್ತೋತ್ರ ರತ್ನ. ೫೪.

ಬರುವ ಪ್ರಯೋಜನವು ಭಗವಂತನದೇ ಎಂದು ತಿಳಿದಿದ್ದಾರೆ. ಆದರಲ್ಲಿ ವ್ಯತ್ಯಾಸ ವೇನೂ ಇಲ್ಲ. ಪ್ರಪತ್ತಿಯೂ ಒಂದು ವಿಧವಾದ ಜ್ಞಾನವೇ. ಈ ಅರ್ಥವನ್ನೇ ಆಚಾರ್ಯರು ಕಾರಿಕಾರೂಪದಲ್ಲಿ ಹೇಳಿದ್ದಾರೆ.

**ಸ್ವನಿರ್ಭರತ್ವ ಪರ್ಯನ್ತ ರಕ್ಷಕೈಕಾರ್ಥ್ಯ ಭಾವನಮ್ ।**
**ತ್ಯಕ್ತರಕ್ಷಾಫಲ ಸ್ವಾಮ್ಯಂ ರಕ್ಷ್ಯಸ್ಯಾತ್ಮ ಸಮರ್ಪಣಮ್ ॥** ಎಂದು

ಇದರ ಅರ್ಥ : ರಕ್ಷ್ಯಸ್ಯ=ಕಾಪಾಡಲುತಕ್ಕವನ,ಅವನಿಗೇ ಶೇಷ(ದಾಸ)ನಾಗಿ ಇರುವವನ ಆತ್ಮ ಸಮರ್ಪಣಮ್=ಆತ್ಮಸಮರ್ಪಣವೆಂದರೆ, ತ್ಯಕ್ತರಕ್ಷಾಫಲ ಸ್ವಾಮ್ಯಂ=ತ್ಯಕ್ತ–ಬಿಡಲ್ಪಟ್ಟ, ರಕ್ಷಾಫಲ=ರಕ್ಷಣೆಯಫಲವಾದ ನಿತ್ಯಕೈಂಕರ್ಯ ರೂಪವಾದ (ಫಲ)ದಲ್ಲಿ ಸ್ವಾಮ್ಯಂ='ಈ ಫಲವು ನನ್ನದು' ಎಂಬ ಅಭಿಮಾನ ರೂಪ ವಾದದು (ಅದನ್ನುಬಿಡುವಿಕೆ ಉಳ್ಳದ್ದು) ಸ್ವನಿರ್ಭರತ್ವ ಪರ್ಯಂತ ರಕ್ಷಕೈಕಾರ್ಥ್ಯ ಭಾವನಂ=ಸ್ವನಿರ್ಭರತ್ವವೆಂದರೆ ತನ್ನ ರಕ್ಷಣೆಯಲ್ಲಿ ಭರವು–ಹೊರೆಯು (responsibility) ಇಲ್ಲ. ರಕ್ಷಕನಾದ ಭಗವಂತನಿಗೇ ಸೇರಿದ್ದು–ಶೇಷವಾದದ್ದು ಎಂಬ ಮನೋನಿಶ್ಚಯ. ಸ್ವರೂಪದಲ್ಲಿ ಸ್ವಾಮ್ಯ–ಯಜಮಾನ ನಾಗಿರುವಿಕೆಯು ತ್ಯಾಗವು ಅರ್ಥಸಿದ್ಧವಾದುದು. ಇದು ಲಕ್ಷಣ ವಾಕ್ಯ.

**ಅಹಂ ಮದ್ರಕ್ಷಣಭರೋ ಮದ್ರಕ್ಷಣಫಲಂತಥಾ ।**
**ನಮಮಶ್ರೀಪತೇ ರೇವೇತ್ಯಾತ್ಮಾನಂ ನಿಕ್ಷಿಪೇದ್ಬುಧಃ ॥**

ನಾನು, ನನ್ನ ರಕ್ಷಣೆಯಭಾರ, ನನ್ನನ್ನು ಕಾಪಾಡುವುದರಿಂದ ಉಂಟಾಗುವ ಫಲ ಇವೆಲ್ಲ ನನಗಲ್ಲ, ಲಕ್ಷ್ಮಿಯಗಂಡನಾದ ನಾರಾಯಣನಿಗೇ ಸೇರಿದವು ಎಂದು ವಿವೇಕವುಳ್ಳವನು, ಪಂಡಿತನು ತನ್ನನ್ನು ಭಗವಂತನಲ್ಲಿಡಬೇಕು–ಅರ್ಪಿಸಬೇಕು ಎಂದು ನ್ಯಾಸದಶಕದಲ್ಲಿ ಆಚಾರ್ಯರು ಪ್ರಯೋಗವಾಕ್ಯದಲ್ಲಿ ಹೇಳಿದ್ದಾರೆ.

ಶ್ರಿಯಃಪತಿಯು ತನ್ನ ಅತಿಶಯಕ್ಕಾಗಿಯೇ ನನ್ನನ್ನೂ, ನನ್ನನ್ನು ಕಾಪಾಡುವ ಭರವನ್ನೂ, ನನ್ನನ್ನು ಕಾಪಾಡುವಿಕೆಯ ಫಲವನ್ನೂ ಈವಾಗ ಸ್ವೀಕರಿಸು ತ್ತಾನೆ. ಆದುದರಿಂದ ಸ್ವರೂಪದಿಂದಲೇ ಅವನಿಗೆ ಶೇಷಭೂತರಾದ ಅವರಿಗೆ ಇಷ್ಟೊಂದು ಕಾಲ ತನಗೇ ಶೇಷವಾಗಿರುವಿಕೆಯನ್ನು ಹೊಂದಿವೆಯೆಂಬ ಭ್ರಾಂತಿಗೆ ವಿಷಯರಾದವರಿಗೆ, ಆ ಭ್ರಾಂತಿಯನ್ನು ಹೋಗಲಾಡಿಸುವುದರ ಮೂಲಕ ಶ್ರೀಪತಿಗೇ ಶೇಷವಾಗಿರುವಿಕೆಯ ಭಾವನೆಯನ್ನು ಪ್ರಾರ್ಥನೆ ಮತ್ತು ನೈರ್ಭರ್ಯ ಗಳಿಂದ ಸಂದಷ್ಟವಾಗಿದ್ದು ಕೊಂಡು (ಹಿಡಿಯಲ್ಪಟ್ಟಿದ್ದಾಗಿ) ಅಖಂಡವಾದ ಅಂಗಿತ್ವಕ್ಕೆ ಪೂರ್ತಿಯಾಗಿರುವ ಸ್ಥಾನವುಳ್ಳದ್ದು ಆತ್ಮಭರಾರ್ಪಣೆಯೆನ್ನಲ್ಪಡುತ್ತದೆ. ಎಂಬುದು ಕಾರಿಕೆಯ ಅರ್ಥ.

ಈ ರೀತಿಯಾದ ಪ್ರಪತ್ತಿಗೆ ಐದು ಅಂಗಗಳುಂಟು ಎಂದು ಶಾಸ್ತ್ರವು ಹೇಳುತ್ತದೆ.

**ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯವರ್ಜನಮ್ ।**
**ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂತಥಾ ।**
**ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾಶರಣಾಗತಿಃ ॥**

ಇದು ಪಾಂಚರಾತ್ರ ವಚನ.

ಅನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ಕಾರ್ಪಣ್ಯ, ಮಹಾವಿಶ್ವಾಸ, ಗೋಪ್ತೃತ್ವವರಣ ಎಂಬಿವೈದೂ ಅಂಗಗಳು.

ನಿಗಮಾಂತ ಮಹಾದೇಶಿಕರು ರಚಿಸಿರುವ ರಹಸ್ಯತ್ರಯಸಾರದಲ್ಲಿರುವ ಕಾರಿಕೆಗಳಿಗೆ ಶ್ರೀಮದಾತ್ರೇಯ ವರದಾಚಾರ್ಯರಿಂದ ಬರೆಯಲ್ಪಟ್ಟ 'ಕಾರಿಕಾ ದರ್ಪಣ' ಎಂಬ ವ್ಯಾಖ್ಯೆಯಲ್ಲಿ ಪ್ರಪದನ ಸ್ವರೂಪವು ವರ್ಣಿತವಾಗಿದೆ. ಅವರ ಮಾತನ್ನೇ ಇಲ್ಲಿ ಉದ್ಧರಿಸಿ ಅರ್ಥವನ್ನು ಬರೆಯುತ್ತೇನೆ.

ಪ್ರಸಂಗಾತ್ಸಾಂಗ ಪ್ರಪದನ ಸ್ವರೂಪಂ ಲಕ್ಷ್ಯತೇ—ಪ್ರಸಂಗದಿಂದ ಸಾಂಗ ಪ್ರಪದನದ ಸ್ವರೂಪವು ಬರೆಯಲ್ಪಡುತ್ತದೆ.

**ಸ್ವಾಮಿನ್ನಿತಃ ಪ್ರಭೃತ್ಯಾನುಕೂಲ್ಯೇನ ವರ್ತಿಷ್ಯೇ ಪ್ರಾತಿಕೂಲ್ಯಾನ್ನಿವೃತ್ತೋಽಸ್ಮಿ ತ್ವಮೇವರಕ್ಷಿಷ್ಯಸೀತಿ ವಿಶ್ವಸಿಮಿ-"ಅಹಮಸ್ಮ್ಯಪರಾಧಾನಾ ಮಾಲಯೋಽಕಿಂಚನೋಽಗತಿಃ—ಅತೀವಕೃಪಣೋಽಹಂ ತ್ವಂ ಮಮ ಗೋಪಾಯಿತಾಭವ" ಇತಿ ಪಂಚಾಂಗ ಸಹಿತಮಿದಮಾತ್ಮಸ್ವರೂಪಂ ತವೈವಾತ್ಮರಕ್ಷಾಭರಂ ತ್ವಯಿನ್ಯಸ್ಯಾಮಿ ತ್ವಮೇವೋಪಾಯಾಂತರ ಸ್ಥಾನೇ ತಿಷ್ಠನ್ ತತ್ಕಾರ್ಯಮ್ ಸಾಧಯ—ಇತಃ ಪಶ್ಚಾದಸ್ಮದ್ಯ** ತನ ನಿರಪೇಕ್ಷೋ ಭವಾನೇವರಕ್ಷತು ತತಸ್ತದಂಶೇ ನಿರ್ಭರೋಽಹಮಸ್ಮಿ ರಕ್ಷಾಫಲ ಸ್ವಾಮ್ಯಮಪಿ ಶೇಷಿಣ ಸ್ತವೈವ ನಮಮ ಅಸ್ಮಿನ್ಸಾಂಗ ಪ್ರಪದನೇ ಮಮ ಕರ್ತೃತ್ವಮಪಿನ ಇದಂ ಪ್ರಪದನ ಮಪಿಭವದ್ವಶೀಕರಣ ಮಾತ್ರಂ. ಫಲಂ ಪ್ರತ್ಯವ್ಯವಹಿತೋಪಾಯೋಽಪಿ ನೇತ್ಯಧ್ಯವ ಸಾಯಕರಣಂ ಗುರುಪರಂಪರಾನು ಸಂಧಾನ ಪೂರ್ವಕಮಾಚಾರ್ಯೋಚ್ಚಾ ರಣಾನೂಚ್ಚಾರಿತ ದ್ವಯಾಧಿಕರಣ ಮಂತ್ರ ವಿಶಿಷ್ಟಂಸಾಙ್ಗ ಪ್ರಪದನಮಿತಿ.

'ಓ ಸ್ವಾಮಿ ! ಇನ್ನುಮುಂದೆ ನಿನಗೆ ಅನುಕೂಲನಾಗಿಯೇ ನಡೆದುಕೊಳ್ಳುತ್ತೇನೆ. ಅಂದರೆ ನಿನಗೆ ಪ್ರೀತಿ ಉಂಟಾಗುವ ಕಾರ್ಯವನ್ನೇ ಮಾಡುತ್ತೇನೆಂದರ್ಥ.

ನಿನಗೆ ಪ್ರತಿಕೂಲವನ್ನುಂಟುಮಾಡುವುದರಿಂದ ಹಿಂತಿರುಗುತ್ತೇನೆ. ನೀನೇ ರಕ್ಷಿಸುವೆ ಎಂದು ನಂಬಿದ್ದೇನೆ. ನಾನು ಅಪರಾಧದ ನೆಲವೀಡಾಗಿದ್ದೇನೆ. ನಿನ್ನನ್ನು ತೃಪ್ತಿಪಡಿಸಲು ನನ್ನಲ್ಲಿ ಯಾವ ಉಪಾಯವೂ ಇಲ್ಲ. ನನ್ನನ್ನು ಕಾಪಾಡುವವರು ನಿನ್ನನ್ನು ಬಿಟ್ಟು ಮತ್ತೊಬ್ಬರಿಲ್ಲ. ಬಹಳ ಕೃಪಣನಾಗಿದ್ದೇನೆ—ಭಕ್ತಿಯೋಗ ಮಾಡಲು ಶಕ್ತಿ ಇಲ್ಲದವನಾಗಿದ್ದೇನೆ. ನೀನು ನನ್ನನ್ನು ಕಾಪಾಡುವವನಾಗು, ಎಂಬ ಈ ಐದು ಅಂಗಗಳಿಂದ ಕೂಡಿದ ಆತ್ಮಸ್ವರೂಪವೂ ನಿನ್ನದೇ. ನನ್ನ ರಕ್ಷಣೆಯಭಾರವನ್ನು ನಿನ್ನಲ್ಲಿ ಇಡುತ್ತೇನೆ, ನೀನೇ ಉಪಾಯಾಂತರಸ್ಥಾನದಲ್ಲಿದ್ದು ಆ ಕಾರ್ಯವನ್ನು ಸಾಧಿಸು—ಆಗು ಮಾಡು, ಇನ್ನುಮುಂದೆ ನನ್ನ ಪ್ರಯತ್ನವನ್ನು ಅಪೇಕ್ಷಿಸದೆ ನೀನೇ ಕಾಪಾಡು. ಆದುದರಿಂದ ನಾನು ಆ ಅಂಶದಲ್ಲಿ ನಿರ್ಭರನಾಗಿದ್ದೇನೆ. ನನ್ನ ರಕ್ಷಣೆಯ ಫಲದ ಒಡೆತನವೂ ಶೇಷಿಯಾದ ನಿನಗೇ ಸೇರಿದ್ದು, ನನಗಲ್ಲ. ಈ ಅಂಗಗಳಿಂದ ಪರಿಪೂರ್ಣವಾದ ಪ್ರಪತ್ತಿಯಲ್ಲಿ ನನಗೆ ಕರ್ತೃತ್ವವೂ ಇಲ್ಲ. ಈ ಪ್ರಪತ್ತಿಯೂ ನಿನ್ನನ್ನು ವಶಮಾಡಿಕೊಳ್ಳಲು ಮಾತ್ರವಾಗಿದೆ. ಫಲವನ್ನು ಕುರಿತು ನೇರವಾದ ಉಪಾಯವೂ ಅಲ್ಲ, ಹೀಗೆಂಬ ಮನೋನಿಶ್ಚಯ ಮಾಡಿಕೊಳ್ಳುವಿಕೆ, ಗುರುಪರಂಪರೆಯನ್ನು ಮೊದಲು ಅನುಸಂಧಾನ ಮಾಡಿ ಆಚಾರ್ಯರು ಮೊದಲು ಹೇಳಿ ಕೊಟ್ಟಿದ್ದನ್ನು ಅನುಸರಿಸಿ ಅವರು ಹೇಳಿದಂತೆ ಹೇಳಿ ದ್ವಯಾಧಿಕರಣದಲ್ಲಿ ಹೇಳಿರುವ ಮಂತ್ರದಿಂದ ಕೂಡಿದ್ದು ಸಾಙ್ಗ ಪ್ರಪತ್ತಿ.

ಶ್ರೀಮದ್ರಹಸ್ಯ ತ್ರಯಸಾರವೆಂಬುದು ಶ್ರೀ ನಿಗಮಾಂತ ಮಹಾದೇಶಿಕರಿಂದ ರಚಿಸಲ್ಪಟ್ಟ ವಿಸ್ತಾರವಾದ ಸಂಪ್ರದಾಯಗ್ರಂಥ. ಇದರಲ್ಲಿ ೩೨ ಅಧಿಕಾರಗಳುಂಟು. ಇದಕ್ಕೆ ಶ್ರೀ ಭಾಷ್ಯಂ ಶ್ರೀನಿವಾಸಾಚಾರ್ಯರು ಬರೆದಿರುವ ಸಾರದೀಪಕೆ ಶ್ರೀಮದ್ವೇದಾಂತರಾಮಾನುಜ ಮಹಾದೇಶಿಕರು ಬರೆದಿರುವ ಪೂರ್ವಸಾರಾಸ್ವಾದಿನೀ ಶ್ರೀಮದ್ಭಾರದ್ವಾಜ ಶ್ರೀನಿವಾಸಾಚಾರ್ಯರು ಬರೆದಿರುವ ಸಾರಪ್ರಕಾಶಿಕೆ, ಶ್ರೀ ಶೈಲ ಶ್ರೀನಿವಾಸಾಚಾರ್ಯರು ಬರೆದಿರುವ ಸಾರವಿವರಿಣೀ, ಶ್ರೀಪರಕಾಲ ಸಂಯಮೀಂದ್ರರು ರಚಿಸಿರುವ ಸಾರ ಪ್ರಕಾಶಿಕಾ ಸಂಗ್ರಹವೆಂಬ ಐದು ವ್ಯಾಖ್ಯಾನಗಳುಂಟು.

ಅವುಗಳಲ್ಲಿ ಸಾರವಿವರಣಿಯಲ್ಲಿ ಹೇಳಿರುವ ಮಾತಿದು : **ಅಯಂಭಾವಃ ಅಕಿಞ್ಚನೋಪಾಯಃ ಪ್ರಪತ್ತಿಃ, ಅಕಿಞ್ಚನತ್ವಂನಾಮ ಉಪಾಯಾನ್ತರಾನಧಿಕಾರಿತ್ವಮ್, ಪ್ರಪತ್ತಿರ್ನಾಮ ಭರಸಮರ್ಪಣಮ್, ತಚ್ಚೋಪಾಯಾನ್ತರೇ ಸ್ವಯಮಶಕ್ತತ್ವಾತ್ತ್ವೈಶ್ಸನ್ಯಂ ಫಲೇ ತ್ವಮೇವೋಪಾಯಮನಪೇಕ್ಷ್ಯದೇಹೀತಿಪ್ರಾರ್ಥನಾ, ತತಶ್ಚೋಪಾಯಾನ್ತರ ಸ್ಥಾನನಿವೇಶಿತ್ವಂಸಿಧ್ಯತೀತಿ.**

ಇದು ಅಭಿಪ್ರಾಯ : ಅಕಿಞ್ಚನನಿಗೆ ಉಪಾಯವಾದುದು ಪ್ರಪತ್ತಿಯು. ಅಕಿಞ್ಚನನ ಸ್ವಭಾವವೇನೆಂದರೆ ಬೇರೆ ಉಪಾಯದಲ್ಲಿ ಅಧಿಕಾರವಿಲ್ಲದಿರುವಿಕೆ.

ಪ್ರಪತ್ತಿಯೆಂದರೆ ಭರಸಮರ್ಪಣ—ಹೊರೆಯನ್ನು ಹೊರಿಸುವುದು, ಜವಾಬ್ದಾರಿಯನ್ನು ಇಡುವುದು. ಅದೂಕೂಡ ಬೇರೆ ಉಪಾಯದಲ್ಲಿ ತಾನು ಅಶಕ್ತನಾಗಿರುವುದರಿಂದ ಆದರಿಂದ ಸಾಧಿಸಲ್ಪಡುವ ಪ್ರಯೋಜನವನ್ನು ನೀನೇ ಉಪಾಯವನ್ನು ಬಯಸದೆ ಕೊಡು ಎಂಬ ಪ್ರಾರ್ಥನೆ ಹಾಗೂ ಉಪಾಯಾನ್ತರ ಸ್ಥಾನದಲ್ಲಿ ಇಡುವಿಕೆ ಸಿದ್ಧಿಸುತ್ತದೆ ಎಂದು.

ಈ ಸಾಙ್ಗಪ್ರಪತ್ತಿಯ ಅನುಷ್ಠಾನಕ್ಕೆ ಶ್ರೀರಾಮಾನುಜಾಚಾರ್ಯರ ಸ್ವಸ್ರೀಯರು—ಅಕ್ಕ ಅಥವಾ ತಂಗಿಯ ಮಕ್ಕಳಾದ ನಡಾದೂರಮ್ಮಾಳ್ ಎಂಬುವರು ಹೇಳಿರುವ ಸಂಗ್ರಹ ಈ ರೀತಿ ಇದೆ. ಇದನ್ನು ಅವರು ಹೇಳಿರುವ ತಮಿಳು ಭಾಷೆಯನ್ನೇ ಬರೆದು ವಿವರಿಸೋಣ.

**"ಅನಾದಿಕಾಲಮ್ ದೇವರೀರುಕ್ಕು ಅನಿಷ್ಟಾಚರಣ ಮ್ಪಣ್ಣುಕೈಯಾಲೆ ಸಂಸರಿತ್ತು ಪ್ಪೋನ್ದೇನ್, ಇನ್ರುಮುದಲ್ ಅನುಕೂಲನಾಯ್ ವರ್ತಿಕ್ಕ ಕ್ಕಡವೇನ್, ಪ್ರತಿಕೂಲಾಚರಣಮ್ಪಣ್ಣಕ್ಕಡವೇನಲ್ಲೇನ್, ದೇವರೀರೈ ಪ್ಪೆರುಕೈಕ್ಕು ಏನ್ಕೈಯಿಲೊರುಕೈಮುದಲಿಲ್ಲೈ, ದೇವರೀರೈಯೇ ಉಪಾಯಮಾಕವರುದಿ ಯಿಟ್ಟೇನ್, ದೇವರೀರೇ ಉಪಾಯಮಾಕವೇಣುಮ್. ಅನಿಷ್ಟನಿವೃತ್ತಿಯಿಲಾದಲಿಷ್ಟಪ್ರಾಪ್ತಿಯಿಲಾದಲ್ ಎನಕ್ಕಿನಿ ಒರಭರಮೋಣ್ಡೋ" ವೆನ್ರು.**

ಬಹಳ ಕಾಲದಿಂದ ನಿಮಗೆ ಇಷ್ಟವಲ್ಲದ್ದನ್ನು ಮಾಡಿದ್ದರಿಂದ ಸಂಸಾರಿಯಾದೆನು—ಹುಟ್ಟಿಸಾಯುತ್ತಿದ್ದೇನೆ. ಇದರಿಂದ ಆಕಿಞ್ಚನ್ಯ ಮತ್ತು ಅನನ್ಯಗತಿತ್ವ ರೂಪವಾದ ಅಧಿಕಾರವು ಸೂಚಿಸಲ್ಪಟ್ಟಿದೆ. ಇಲ್ಲಿಂದಮುಂದೆ ಅನುಕೂಲನಾಗಿ ನಡೆದು ಕೊಳ್ಳುತ್ತೇನೆ ; ಪ್ರತಿಕೂಲವಾದುದನ್ನು ಮಾಡುವುದಿಲ್ಲ. ಇದರಿಂದ ಆನುಕೂಲ್ಯಸಙ್ಕಲ್ಪಮ್ ನಿಮ್ಮನ್ನು ಹೊಂದಲು ನನ್ನಕೈಯಲ್ಲಿ ಯಾವ ಉಪಹಾರವೂ ಇಲ್ಲ, ಯಾವ ಉಪಾಯವೂ ಇಲ್ಲ ಎಂದರ್ಥ, ಇದರಿಂದ ಕಾರ್ಪಣ್ಯವು ಹೇಳಿದಂತಾಯಿತು. ನೀವೇ ಉಪಾಯವಾಗಬೇಕು. ನಿಮ್ಮನ್ನೇ ಉಪಾಯವಾಗಿ ನಂಬಿದ್ದೇನೆ. ಇದರಿಂದ ಗೋಪ್ತೃತ್ವವರಣವಾದ ಉಪಾಯವರಣವು ಹೇಳಲ್ಪಟ್ಟಿತು. ಇನ್ನು ಮುಂದೆ ಅನಿಷ್ಟವಾದುದನ್ನು ಬಿಡುವುದರಲ್ಲೂ ಇಷ್ಟವಾದುದನ್ನು ಹೊಂದುವುದರಲ್ಲೂ ನನಗೆ ಒಂದು ಭರವುಂಟೋ? ಇಲ್ಲವೆಂದರ್ಥ. ಇದರಿಂದ ಭರಕ್ಕೆ ಸ್ವಸಂಬಂಧ ನಿಷೇಧಹೇಳಲ್ಪಟ್ಟಿತು. ಇಲ್ಲಿ ಸ್ವರೂಪ ಭರಫಲಗಳ ಪರಸಂಬಂಧ ವಿಧಾನವೂ ಸ್ವಸಂಬಂಧ ನಿಷೇಧವೂ ಹೇಳುತ್ತದೆ. 'ಎನ್ರು' ಎಂಬುದು ಸಂಗ್ರಹದ ಸಮಾಪ್ತಿ ಸೂಚನೆ.

ಸಾತ್ಯಕಿತನ್ತ್ರದಲ್ಲಿ ಪ್ರಪತ್ತಿಯ ಅಧ್ಯಾಯದಲ್ಲಿ ಪ್ರಪತ್ತಿಯನ್ನು ಮಾಡುವವನಿಗೆ ಬೇರೆ ಉಪಾಯವು ಬೇಕಿಲ್ಲ ಎಂಬುದನ್ನು ಪ್ರಶ್ನಪ್ರತಿ ವಚನಗಳಿಂದ ನಿರ್ಧರಿಸಿ ಹೇಳಿದೆ.

ಬ್ರಹ್ಮವಿದ್ಯೆಗಳಲ್ಲಿ ಒಂದು ವಿದ್ಯೆಯನ್ನು–ಉಪಾಸನೆಯನ್ನು ಅನುಷ್ಠಿಸ ಬೇಕೆಂದಿರುವವನು ಅವು ಸಮಾನವಾದ ಫಲವನ್ನು ಕೊಡುವುವಾದುದರಿಂದ ಯಾವುದಾದರೂ ಉಪಾಯವನ್ನು ಅವನು ಕೈಗೊಳ್ಳಬಹುದು "[1]ವಿಕಲ್ಪೋಽ ವಿಶಿಷ್ಟ ಫಲತ್ವಾತ್" ಎಂದು ಶಾಸ್ತ್ರವು ಹೇಳಿರುವುದರಿಂದ. ಶರಣಾಗತಿ ವಿಷಯ ದಲ್ಲಾದರೋ ಇದರ ಸಿದ್ಧಿಗಾಗಿ ಪರಮಾತ್ಮನೊಬ್ಬನನ್ನೇ ಉಪಾಯಸ್ಥಾನದಲ್ಲಿಡ ಬೇಕೇವಿನಾ ಬೇರೆ ಉಪಾಯವನ್ನು ಅನುಷ್ಠಿಸಕೂಡದು. ಮಹಾತ್ಮರು ಹೇಳಿರುವ "ಅಸ್ತ್ರಬನ್ಧಃ ಸಚಾನ್ಯಂ ಹಿ ಬನ್ಧಮನುವರ್ತತೇ=ಅಸ್ತ್ರಬಂಧವು ಬೇರೆ ಕಟ್ಟನ್ನು ಹಿಂಬಾಲಿಸುವುದಿಲ್ಲ" ಎಂದು ಬ್ರಹ್ಮಾಸ್ತ್ರಬಂಧದ ಉದಾಹರಣವೂಕೂಡ ಈ ಅಭಿಪ್ರಾಯದಿಂದಲೇ.

ಬ್ರಹ್ಮೋವಾಚ=ಬ್ರಹ್ಮನು ಹೇಳುತ್ತಾನೆ.

**ಭಗವನ್ ಹಿತಮಾಖ್ಯಾತಂ ಆತ್ಮನಾಂ ಪತತಾಮಧಃ ।**
**ತ್ವತ್ಪ್ರಾಪಕಂ ಮಹತ್ ಕರ್ಮ ಕಾರುಣ್ಯವಿವಶಾತ್ಮನಾ ॥**

ಓ ಪೂಜ್ಯನೇ ! (ಸಂಸಾರವೆಂಬ ಕಡಲಿನಲ್ಲಿ) ಕೆಳಗೇಹೋಗುವ ಪ್ರಾಣಿಗಳ ಉದ್ಧಾರಕ್ಕೆ ನಿನ್ನನ್ನು ಹೊಂದುವಂತೆ ಮಾಡುವ ಹಿತವಾದ ದೊಡ್ಡ ಕರ್ಮವನ್ನು ದಯವಂತನಾದ ನೀನು ಹೇಳಿರುವೆ.

**ಅಧೀತಾಃ ಬಹವೋಮನ್ತ್ರಾಃ ಶ್ರೀಮದಷ್ಟಾಕ್ಷರಾದಿಕಾಃ ।**
**ಏಭಿಃಕರ್ಮಭಿರೀಜಾನಸ್ತ್ವಾನ್ ಮನ್ತ್ರಾನ್ ಸತತಂಜಪನ್ ।**
**ತ್ವಾಮಾಪ್ನೋತ್ಯೇವ ಪುರುಷಃ ಪುರುಷಂ ಪುರುಷೋತ್ತಮಮ್ ॥**

ಶ್ರೀಮದಷ್ಟಾಕ್ಷರವೇ ಮೊದಲಾದ ಬಹಳ ಮನ್ತ್ರಗಳನ್ನು ಗುರುಗಳ ಉಪ ದೇಶದ ಮೂಲಕ ಪಡೆದು ಕಲಿತಾಯಿತು. ಆ ಮಂತ್ರಗಳನ್ನು ಯಾವಾಗಲೂ ಜಪಮಾಡುತ್ತಾ ಈ ಕರ್ಮಗಳಿಂದ ನಿನ್ನನ್ನು ಪೂಜಿಸಿದರೆ ಖಂಡಿತವಾಗಿಯೂ ಪುರು ಷನು ಪುರುಷೋತ್ತಮನಾದ ನಿನ್ನನ್ನು ಪಡೆದೇ ಪಡೆಯುತ್ತಾನೆ. ಸಂಶಯವೇ ಇಲ್ಲ.

**ಏತಾನ್ಯಾಲೋಚ್ಯಮಾನಾನಿ ಕರ್ಮಾಣಿಕರುಣಾಕರ ।**
**ದುರ್ವಿಜ್ಞೇಯ ಸ್ವರೂಪಾಣಿ ದುಷ್ಕರಾಣಿ ವಿಭಾಗಶಃ ॥**

ಎಲೌ ದಯಾ ಸಮುದ್ರನೆ ! ಆಲೋಚಿಸಿ ನೋಡಿದರೆ ಈ ಕರ್ಮಗಳ ಸ್ವರೂ ಪಗಳು ಅರಿಯಲಸದಳವು. ಒಂದೊಂದು ಭಾಗವೂ ಮಾಡಲು ಕಷ್ಟವಾಗಿರುವುವು.

---

1. ಬ್ರಹ್ಮಸೂತ್ರ. ೩–೩-೫೭.

ಮನ್ತ್ರಾಂಶ್ಚೈಕೈಕಶಸ್ತಾವತ್ ಜಪಮಾನಸ್ಯ ಮಾಧವ ।
ಉಕ್ತೇನೈವಚ ಮಾರ್ಗೇಣ ಗಚ್ಛತ್ಯಾಯುರ ಪಕ್ಷಯಮ್ ॥

ಓ ಮಾಧವನೇ ! ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿ ಈ ಮನ್ತ್ರಗಳನ್ನು ಒಂದೊಂದಾಗಿ ಜಪಮಾಡುತ್ತಿರುವಾಗಲೇ ಪುರುಷನ ಆಯುಸ್ಸು ಕ್ಷೀಣವಾಗುತ್ತದೆ.

ತಸ್ಮಾತ್ ಸಕೃತ್ ಕೃತೇನೈವ ಕರ್ಮಣಾ ಯೇನ ಮಾನವಃ ।
ಸಕೃತ್ ಜಪ್ತೇನ ಮನ್ತ್ರೇಣ ಕೃತಕೃತ್ಯಃ ಸುಖೀಭವೇತ್ ।
ತತ್ ಬ್ರೂಹಿಕರ್ಮ ತನ್ಮನ್ತ್ರಂ ದಯಾರ್ದ್ರಹೃದಯೋಹ್ಯಸಿ ॥

ಆದುದರಿಂದ ಮನುಷ್ಯನು ಯಾವಕರ್ಮವನ್ನು ಒಂದು ಸಲ ಮಾಡುವುದ ರಿಂದಲೇ ಯಾವಮಂತ್ರವನ್ನು ಒಂದು ಸಲ ಜಪಮಾಡುವುದರಿಂದಲೇ, ಅವನು ಮಾಡಬೇಕಾದಕಾರ್ಯವು ಪರಿಪೂರ್ತಿಯಾಗಿ, ಅವನ ಕರ್ತವ್ಯ ಮುಗಿದು ಸುಖಿ ಯಾಗುತ್ತಾನೋ, ಆ ಕರ್ಮವನ್ನೂ ಆ ಮನ್ತ್ರವನ್ನೂ ಹೇಳು, ನೀನು ದಯೆಯಿಂದ ತುಂಬಿದ ಮನಸ್ಸುಳ್ಳವನಲ್ಲವೇ ?

ಭಗವಾನುವಾಚ=ಭಗವಂತನು ಹೇಳುತ್ತಾನೆ.

ಸತ್ಯಮುಕ್ತಮ್ ಅಶಕ್ಯಾನಿ ಕರ್ಮಾಣಿ ಕಮಲಾಸನ ।
ಮನ್ತ್ರಾಣಾಞ್ಚ ಯಾಥಾಶಾಸ್ತ್ರ ಮನುಷ್ಠಾನಂ ನಶಕ್ಯತೇ ॥

ಎಲೌ ಬ್ರಹ್ಮನೇ ! ನಿಜವನ್ನೇ ನುಡಿದೆ. ಕರ್ಮಗಳನ್ನುಮಾಡಲು ಅಸಾಧ್ಯವು. ಶಾಸ್ತ್ರರೀತಿಯಾಗಿ ಮನ್ತ್ರಗಳನ್ನು ಅನುಷ್ಠಿಸುವುದಕ್ಕೂ ಆಗದು.

ವಿದ್ಯತೇ ಕರ್ಮತತ್ ಯೇನಕೃತಮಾತ್ರೇಣ ಕರ್ಮಣಾ ।
ಮಾಮಾಪ್ನೋತಿ ನರೋಬ್ರಹ್ಮನ್ ಮಮಾತ್ಮಾಚ ಭವಿಷ್ಯತಿ ॥ ಇತಿ

ಒಂದು ಕರ್ಮ ಇದೆ. ಅದನ್ನು ಮನುಷ್ಯನು ಮಾಡಿದರೆ ಸಾಕು. ಅದರಿಂದ ನನ್ನನ್ನು ಹೊಂದುತ್ತಾನೆ. ನನ್ನ ಸ್ವರೂಪವನ್ನೇ ಹೊಂದುತ್ತಾನೆ. (ಚತುರ್ಭುಜಾದಿ ಗಳನ್ನು ಪಡೆಯುತ್ತಾನೆ).

ಹೀಗೆಯೇ ಶೌನಕರಿಂದ ಹೇಳಲ್ಪಟ್ಟ ಜಿತಂತಾಸ್ತೋತ್ರದಲ್ಲೂ, ಬೇರೆ ಉಪಾಯದಲ್ಲಿ ನೈರಾಶ್ಯವನ್ನುಅಂದರೆ ಆಸೆಇಲ್ಲದಿರುವಿಕೆಯನ್ನುಸ್ಪಷ್ಟವಾಗಿ ಹೇಳಿದೆ.

ಜಿತನ್ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ ॥

**ದೇವಾನಾಂ ದಾನವಾನಾಂಚ ಸಾಮಾನ್ಯಮಧಿ ದೈವತಮ್ ।**
**ಸರ್ವದಾಚರಣದ್ವಂದ್ವಂ ವ್ರಜಾಮಿ ಶರಣಂತವ ॥**

ಎಲೌ ತಾವರೆಯಂತೆ ಕಣ್ಣುಳ್ಳ ಪರಮಾತ್ಮನೆ ! ನೀನು ಜಯಶೀಲನಾಗು. ನಿನಗೆ ನಮಸ್ಕಾರ ! ನೀನು ದೇವತೆಗಳಿಗೂ ರಾಕ್ಷಸರಿಗೂ ಸಮಾನನಾದ ಸ್ವಾಮಿ. ಅವರವರ ಕರ್ಮಕ್ಕೆ ಅನುಸಾರವಾದ ಹುಟ್ಟಿನಿಂದ ಅವರವರಿಗೆ ಪ್ರದ್ವೇಷ. ಶಿಷ್ಟರ ರಕ್ಷಣೆಗಾಗಿ ದುಷ್ಟರನ್ನು ಕೊಲ್ಲುವೆ. ನಿನ್ನ ಎರಡು ಪಾದಗಳನ್ನು ಯಾವಾಗಲೂ ಮರೆಹೊಕ್ಕಿದ್ದೇನೆ.

**ಪಾಹಿಮಾಂ ಪುಂಡರೀಕಾಕ್ಷ ನಜಾನೇ ಶರಣಂ ಪರಮ್ ।**

ತಾವರೆಯಂತೆ ಕಣ್ಣುಳ್ಳ ಪರಮಾತ್ಮನೇ ! ನನ್ನನ್ನು ಕಾಪಾಡು. ನಿನಗಿಂತ ಬೇರೆಯಾದ ರಕ್ಷಕರು ಮತ್ತೊಬ್ಬರಿಲ್ಲ.

**ತ್ವತ್ಪಾದಕಮಲಾದನ್ಯ ನ್ನ ಮೇ ಜನ್ಮಾಂತರೇಷ್ವಪಿ ।**
**ನಿಮಿತ್ತಂಕುಶಲ ಸ್ಯಾಸ್ತಿ ॥**

ಬೇರೆ ಜನ್ಮಗಳಲ್ಲೂ ಕೂಡ ನನಗೆ ಕ್ಷೇಮವನ್ನುಂಟುಮಾಡುವುದಕ್ಕೆ ಕಾರಣ ನಿನ್ನ ಕಮಲದಂತಿರುವ ಪಾದಗಳೇವಿನಾ ಬೇರೆ ಮತ್ತಾವುದೂ ಇಲ್ಲ.

ಬೇರೆ ಧರ್ಮಗಳು ಇದಕ್ಕೆ ಅಂಗಗಳಾಗಿರಬೇಕು ಎಂಬ ಬುದ್ಧಿಯನ್ನು ಬಿಡಬೇಕೆಂದು ಹೇಳುತ್ತಾರೆ.

**ಪ್ರಪತ್ತೌ ಭಕ್ತಿವನ್ನಾಸ್ತಿ ತತ್ತದ್ಧರ್ಮಾನ್ತರಾಙ್ಗತಾ ।**
**ಇತಿಬೋಧಯಿತುಂ ತತ್ತತ್ತ್ಯಾಗೋಕ್ತಿರಿಹಯುಜ್ಯತೇ ॥**

ಭಕ್ತಿಯೋಗಕ್ಕೆ ಕರ್ಮಯೋಗ, ಜ್ಞಾನಯೋಗ ಇವು ಅಂಗಗಳು, ಅದರ ಹಾಗೆ ಪ್ರಪತ್ತಿಗೆ ಬೇರೆ ಧರ್ಮಗಳ ಅಂಗವಾಗಿರುವಿಕೆ ಬೇಕಾದುದಿಲ್ಲ ಹೀಗೆಂದು ಬೋಧಿಸಲು ಅವುಗಳ ತ್ಯಾಗವನ್ನು 'ಸರ್ವಧರ್ಮಾನ್ಪರಿತ್ಯಜ್ಯ' ಎಂಬಲ್ಲಿ ಹೇಳಿದೆ. ನಿತ್ಯ ನೈಮಿತ್ತಿಕ ಕರ್ಮಗಳನ್ನು 'ಬಿಡು' ಎಂದರ್ಥವಲ್ಲ.

"ತಮೇತಂ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾನಾಶಕೇನ" ಇವೇ ಮೊದಲಾದ ಪ್ರಮಾಣಗಳಿಂದ ಉಪಾಸನರೂಪವಾದ ವೇದನಕ್ಕೆ ಯಜ್ಞ, ದಾನ, ತಪಸ್ಸು ವ್ರತಾಚರಣ ಮುಂತಾದವು ನಿಷ್ಪಾದಕಗಳು–ಉತ್ಪತ್ತಿಗೆ ಕಾರಣ ಭೂತಗಳು. ಪ್ರಪತ್ತಿಯನಿಷ್ಪತ್ತಿಗೆ ಇವೊಂದೂ ಬೇಕಾಗಿಲ್ಲ. ಇವು ಉಪಾಯಗಳು ಎಂಬ ಬುದ್ಧಿಯನ್ನು ಬಿಡಬೇಕು ಎಂದು ತಾತ್ಪರ್ಯ.

**ನಚಾನ್ಯಾನಙ್ಗತಾಮಾತ್ರಾತ್ ಅನನುಷ್ಠಾನ ಸಂಭವಃ ।**
**ಸ್ವತಂತ್ರವಿಧಿಸಿದ್ಧತ್ವಾತ್ ಅನ್ಯಥಾಽತಿಪ್ರಸಂಗತಃ ॥**

ಬೇರೆ ಅಂಗಗಳಿಲ್ಲದಿರುವಿಕೆ ಮಾತ್ರದಿಂದ ಇದನ್ನು ಅನುಷ್ಠಿಸುವುದು ಕೂಡದು ಎಂದು ಹೇಳಕೂಡದು. ಸ್ವತಂತ್ರವಾದ ವಿಧಿ'ಮಾಮೇಕಂ ಶರಣಂವ್ರಜ'ನನ್ನನ್ನೊಬ್ಬ ನನ್ನೇ ಶರಣು ಹೋಗು ಎಂದು ಹೇಳಿರುವುದರಿಂದ ಇದರ ಅನುಷ್ಠಾನ ಸಿದ್ಧಿಸಿತು.

**'ಆನುಕೂಲ್ಯಸ್ಯಸಂಕಲ್ಪ'** ಎಂಬ ಪಾಂಚರಾತ್ರ ವಚನದಲ್ಲಿ ಷಡ್ವಿಧಾಶರಣಾಗತಿಃ=ಶರಣಾಗತಿಯು ಆರು ವಿಧ ಎಂದು ಹೇಳಿದೆಯಲ್ಲ ; ಅದು ಹೇಗೆ 'ಶರಣಾಗತಿಯೆಂಬುದು ಒಂದು ಉಪಾಯ' ಎಂದು ಕೂಡುತ್ತದೆ ?

"[1]**ಸ್ನಾನಂಸಪ್ತವಿಧಮ್**–ಸ್ನಾನವು ಏಳುವಿಧವಾದದ್ದು"ಎಂಬಿವೇ ಮೊದಲಾದ ಜಾಗಗಳಲ್ಲಿ ಅವಾಂತರ ಭೇದಗಳು ಸ್ವರೂಪ ಪ್ರಯುಕ್ತವಾಗಿಯೇ ಇದೆ ಅಲ್ಲ ?

1. ೧) **ಪಾರ್ಥಿವ.** ೨) **ವಾಯವ್ಯ.** ೩) **ಮಾನ್ತ್ರ.** ೪) **ಮಾನಸಿಕ.** ೫) **ಪೋಷ್ಕರ್ಣ್ಯ.** ೬) **ಬ್ರಾಹ್ಮ.** ೭) **ಕಾಪಿಲ.**

ಇವು ಏಳೂ ಸ್ನಾನದ ಭೇದಗಳು. ಇವು ವಾರುಣಸ್ನಾನವೆಂದು ಹೇಳುವ ಅವಗಾಹನ ಸ್ನಾನಕ್ಕೆ ಶಕ್ತಿ ಇಲ್ಲದವನಿಗೆ ಹೇಳಿರುವ ಸ್ನಾನದ ರೀತಿಗಳು. ವಾರುಣ ಸ್ನಾನವೆಂದರೆ ನದೀ, ಕೆರೆ ಮುಂತಾದವುಗಳಲ್ಲಿ ಇಳಿದು ಎಲ್ಲಾ ಅವಯವಗಳೂ ನೆನೆಯುವಂತೆ ನೀರಿನಲ್ಲಿ ಮುಳುಗಿ ಸ್ನಾನ ಮಾಡುವುದು. ಇದನ್ನು ಅವಗಾಹನಸ್ನಾನವೆನ್ನುತ್ತಾರೆ.

೧. **ಪಾರ್ಥಿವ**=ಕೇಶವಾದಿ ನಾಮಗಳನ್ನು ಧ್ಯಾನ ಮಾಡುತ್ತಾ ದ್ವಾದಶೋರ್ಧ್ವ ಪುಂಡ್ರಗಳನ್ನು ಆ ಆ ಸ್ಥಾನಗಳಲ್ಲಿ ಧರಿಸುವುದು.

೨. **ವಾಯವ್ಯ**=ಹಸುಗಳ ಪಾದಧೂಳಿಗಳನ್ನು ಅಸ್ತಮಯಕಾಲದಲ್ಲಿ ಧರಿಸಿಕೊಳ್ಳುವುದು.

೩. **ಮಾನ್ತ್ರ**=ಕಾಲುಗಳು–ತಲೆ–ಹೃದಯ, ತಲೆ–ಹೃದಯ–ಕಾಲುಗಳು, ಹೃದಯ–ಕಾಲು ಮತ್ತು ತಲೆ ಇವುಗಳಲ್ಲಿ ಆಪೋಹಿಷ್ಠಾಮಯೋಭುವಃ ಆಪೋಜನಯಥಾಚನಃ ಎಂಬ ಈ ಮಂತ್ರಗಳಿಂದ ನೀರನ್ನು ಪ್ರೋಕ್ಷಿಸಿಕೊಳ್ಳುವುದು.

ಇದನ್ನು ನೆನಪಿನಲ್ಲಿಡಲು ಒಂದು ಕಾರಿಕೆ.

**ಭುವಿಮೂರ್ಧ್ನಿ ತಥಾಕಾಶೇ ಮೂರ್ಧ್ನ್ಯಾಕಾಶೇ ತಥಾಭುವಿ ।**
**ಆಕಾಶೇ ಭುವಿಮೂರ್ಧ್ನಿಸ್ಯಾತ್ ಮಂತ್ರಸ್ನಾನಂತಥೋಕ್ಷಣೇ ॥** ಎಂಬುದು.

೪. **ಮಾನಸಿಕಸ್ನಾನ**= ತಾವರೆಯಂತೆ ಕಣ್ಣುಳ್ಳ ಮಂತ್ರಮೂರ್ತಿಯಾದ ಹರಿಯನ್ನು ಆಕಾಶದಲ್ಲಿರುವಂತೆ ಧ್ಯಾನ ಮಾಡಬೇಕು. ಅವನ ತೇಜಸ್ಸು ಸಾವಿರಾರು ಸೂರ್ಯರ ತೇಜಸ್ಸಿಗೆ ಸಮಾನವಾದುದು, ಅವನು ತನ್ನ ನಾಲ್ಕು ತೋಳುಗಳಿಂದ ಶಂಖಚಕ್ರಗದಾ ಪದ್ಮಗಳನ್ನು ಧರಿಸಿರುವವನು. ಕತ್ತಿನಲ್ಲಿ ವನಮಾಲೆಯನ್ನು ಧರಿಸಿದ್ದಾನೆ. ಕಮಲದಂತೆ ಅಂದವಾಗಿಯೂ, ಸುಕುಮಾರವಾಗಿಯೂ ಇರುವ ಅವನ ಪಾದಗಳಲ್ಲಿ ಧ್ವಜ–ವಜ್ರ–ಅಂಕುಶಗಳ ಗುರುತುಗಳಿರುವವು. ಅವನ ಕಾಲಿನ ಹೆಬ್ಬೆರಳಿನಿಂದ ಹುಟ್ಟಿದ ಗಂಗೆಯು ತನ್ನ ತಲೆಯಮೇಲೆ ಬೀಳುತ್ತಿದೆ. ಅದು ಬ್ರಹ್ಮರಂಧ್ರದಿಂದ ಪ್ರವೇಶಿಸಿ ತನ್ನ ಶರೀರದ ಒಳಗಿನ ಮತ್ತು ಹೊರಗಿನ ಕೊಳೆಯನ್ನು ತೊಳೆಯುತ್ತಿದೆ. ಇದರಿಂದ "ಧೂಳಿಲ್ಲದ ಸ್ಫಟಿಕ ಮಣಿಯು ಹೇಗೆ ಶುಭ್ರವಾಗಿ ಹೊಳೆಯುತ್ತಿದೆಯೋ ಹಾಗೆ ತಾನೂ ಆದೆ".

**ಖಸ್ಥಿತಮ್ಪುಣ್ಡರೀಕಾಕ್ಷಮ್ಮನ್ತ್ರಮೂರ್ತಿಂ ಹರಿಂ ಸ್ಮರೇತ್ ।**
**ಅನನ್ತಾದಿತ್ಯ ಸಙ್ಕಾಶಂ ವಾಸುದೇವ ಞ್ಚತುರ್ಭುಜಮ್ ।**
**ಶಙ್ಖಚಕ್ರಗದಾ ಪದ್ಮಧಾರಿಣಂ ವನ ಮಾಲಿನಮ್ ।**
**ಕೇಯೂರ ಹಾರಿಣಂ ದೇವಂ ಸುವರ್ಣ ಮಕುಟೋಜ್ವಲಮ್ ।**
**ಧ್ವಜವಜ್ರಾಙ್ಕುಶಾಲಕ್ಷ್ಯ ಪಾದಪದ್ಮಂ ಸುನಿರ್ಮಲಮ್ ।**
**ತತ್ಪಾದಾಙ್ಗುಷ್ಠಜಾಙ್ಗಙ್ಗಾನ್ನಿ ಪತನ್ತೀಂ ಸ್ವಮೂರ್ಧನಿ ।**
**ಚಿನ್ತಯೇದ್ಬ್ರಹ್ಮರನ್ಧ್ರೇಣ ಪ್ರವಿಶನ್ತೀಂ ಸ್ವಕಾನ್ತನುಮ್ ।**
**ತಯಾ ಸಂಕ್ಷಾಳಯೇ ತ್ಸರ್ವಮ್ಬಾಹ್ಯ ಮಾಭ್ಯನ್ತರಮ್ಮಲಮ್ ।**
**ತತ್ಕ್ಷಣಾ ದ್ವಿರಜೋಮರ್ತ್ಯೋ ಜಾಯತೇ ಸ್ಫಟಿಕೋಪಮಃ ॥**

ಎಂದು ಧ್ಯಾನ ಮಾಡಬೇಕು–ಇದು ಮಾನಸಿಕಸ್ನಾನ.

೫. **ಪಞ್ಚಾಙ್ಗಸ್ನಾನ**= ಎರಡು ಕಾಲುಗಳು, ಎರಡು ಕೈಗಳು ಮತ್ತು ಮುಖ ಇವನ್ನು ನೀರಿನಿಂದ ತೊಳೆದು ಶುದ್ಧಿಮಾಡುವುದು.

೬. **ಬ್ರಾಹ್ಮಸ್ನಾನ**= ಒಬ್ಬ ಭಗವದ್ಭಕ್ತನು ರೋಗಿಯಾಗಿರುವವನನ್ನು ಮುಟ್ಟಿ ಸ್ನಾನ ಮಾಡುವುದು. ಈ ರೀತಿ ಹತ್ತು ಸಲಮಾಡಿದರೆ ಆ ಸ್ನಾನ ಮಾಡಲು ಅಶಕ್ತನಾದ ಆ ರೋಗಿಯು ಸ್ನಾನ ಮಾಡಿದಂತಾಗುತ್ತದೆ.

೭. **ಕಾಪಿಲಸ್ನಾನ**= ಕಾಲಿನಿಂದ ಹೊಕ್ಕಳಿನವರೆಗೂ ಮೃಜ್ಜಲದಿಂದ ಅಂದರೆ ಮಣ್ಣಿನೊಡನೆ ಕಲೆತ ನೀರಿನಿಂದ ಚೆನ್ನಾಗಿ ತೊಳೆದು, ಒದ್ದೆಯ ಬಟ್ಟೆಯಿಂದ ಮೈಯನ್ನೆಲ್ಲ ಒರಸಿ ಕೊಳ್ಳುವುದು.

ಈ ಮೇಲೆ ಹೇಳಿದ ಏಳು ವಿಧವಾದ ಸ್ನಾನಗಳೂ ವಾರುಣ ಸ್ನಾನವೆಂದೂ ಹೇಳುವ ಅವಗಾಹನ ಸ್ನಾನಕ್ಕೆ (ನದೀ ತಟಾಕಾದಿಗಳಲ್ಲಿ ಇಳಿದು ಎಲ್ಲ ಅವಯವಗಳೂ ನೆನೆಯುವಂತೆ ಮುಳುಗಿ ಸ್ನಾನಮಾಡುವಿಕೆಗೆ) ಶಕ್ತಿ ಇಲ್ಲದವನಿಗೆ.

ಅಂದರೆ [1]ಅಷ್ಟಾಂಗಯೋಗ ಎನ್ನುವಂತೆ ಇಲ್ಲಿ ಅಂಗಾಂಗಿಗಳ ಸಮುಚ್ಚಯದಿಂದ ಹೇಳಿದೆ. ಇವುಗಳಲ್ಲಿ ನ್ಯಾಸ ಒಂದೇ ಅಂಗಿ, ಉಳಿದವು ಅಂಗಗಳು ಎಂದು ಹೇಳುವುದು.

**ನಿಕ್ಷೇಪಾಪರ ಪರ್ಯಾಯೋ ನ್ಯಾಸಃ ಪಂಚಾಂಗ ಸಂಯುತಃ ।**
**ಸನ್ಯಾಸಸ್ತ್ಯಾಗ ಇತ್ಯುಕ್ತ ಶ್ಶರಣಾಗತಿರಿತ್ಯಪಿ ॥**

ಎಂಬ ಶ್ಲೋಕದಿಂದ ನ್ಯಾಯದ ಅಪೇಕ್ಷೆ ಇಲ್ಲದೆ ಸಿದ್ಧವಾಗಿದೆ.

ಶಾಸ್ತ್ರದಲ್ಲಿ ವಿಹಿತವಾದವುಗಳಲ್ಲಿ ಪ್ರವೃತ್ತಿಯೂ, ನಿಷಿದ್ಧವಾದವುಗಳಲ್ಲಿ ನಿವೃತ್ತಿಯೂ ಇರಬೇಕು ; ಅಂದರೆ ಪರಮಾತ್ಮನ ಇಷ್ಟದಂತೆ ನಡೆದುಕೊಳ್ಳುವುದು ಶೇಷಭೂತನಾದ ಇವನ ಕರ್ತವ್ಯ. ಶಾಸ್ತ್ರದಲ್ಲಿ 'ಈ ಕಾರ್ಯಗಳನ್ನು ಮಾಡು–ಇವನ್ನು ಮಾಡಬೇಡ' ಎಂದು ಹೇಳಿದೆ, ಮಾಡೆಂದು ಹೇಳುವವೆಲ್ಲ ಅವನಿಗೆ ಇಷ್ಟವಾದವು. ಮಾಡಬೇಡವೆಂದು ಹೇಳುವವೆಲ್ಲ ಅವನಿಗೆ ಅನಭಿಮತಗಳು–ಇಷ್ಟವಾದವಲ್ಲ, ಅವನಿಗೆ ಇಷ್ಟವಾದವನ್ನು ನಾವು ಮಾಡಿದರೆ ಅವನಿಗೆ ಸಂತೋಷ. ಅವನು ಮಾಡಕೂಡದು ಎಂದು ಹೇಳಿರುವುದನ್ನು ನಾವು ಮಾಡಿದರೆ ಅವನಿಗೆ ಕೋಪ ಇದು ಅಪರಾಧ–ತಪ್ಪು. ಅದನ್ನು ಮಾಡಿದ್ದರಿಂದಲೇ ನಾವು ಸಂಸಾರದಲ್ಲಿ ಕಟ್ಟಲ್ಪಟ್ಟಿದ್ದೇವೆ.

**ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ ।**

ಸಂಚರಿಸುವ, ಸಂಚರಿಸದೇ ಇರುವ ಸಕಲಭೂತಗಳೂ ಪರಮಾತ್ಮನ ಶರೀರ. ಇಂತಹ ಪರಮಾತ್ಮನಿಗೆ ಅತಿಶಯುವನ್ನುಂಟುಮಾಡುವುದೇ ಶೇಷಭೂತನಾದ ಜೀವನ ಕರ್ತವ್ಯ. ಅದೇ ಪರಮಪ್ರಯೋಜನ. ಆದುದರಿಂದ ನಾನು ಯಾರು ? ಪರವಸ್ತು ಯಾವುದು ? ಅವನಿಗೆ ಅತಿಶಯುವನ್ನುಂಟುಮಾಡುವುದಾದರೂ ಹೇಗೆ ? ಎಂಬುದನ್ನು ಅರಿತೆನು. ಮೋಕ್ಷವನ್ನು ಪಡೆಯಲು ಆಸೆಉಳ್ಳವನಾಗಿದ್ದೇನೆ. ನಾನು ಸರ್ವಭೂತಗಳಿಗೂ ಅನುಕೂಲವಾಗಿ ನಡೆದುಕೊಳ್ಳುವ ರೂಪವಾದ ನಿನ್ನ ಆನುಕೂಲ್ಯದಲ್ಲಿ ನಡೆದುಕೊಳ್ಳುತ್ತೇನೆ. ಸರ್ವಭೂತಗಳಿಗೂ ಪ್ರತಿಕೂಲವಾಗಿ ನಡೆದುಕೊಳ್ಳುವರೂಪವಾದ ನಿನ್ನ ಪ್ರಾತಿಕೂಲ್ಯದಿಂದ ಹಿಂತಿರುಗುತ್ತೇನೆ.

---

1. **೧) ಯಮ. ೨) ನಿಯಮ, ೩) ಆಸನ. ೪) ಪ್ರಾಣಾಯಾಮ. ೫) ಪ್ರತ್ಯಾಹಾರ. ೬) ಧಾರಣ. ೭) ಧ್ಯಾನ.**

ಈ ಏಳೂ ಸಮಾಧಿ=ಭಗವಂತನ ಸ್ವರೂಪದ ನಿರಂತರ ಚಿಂತನಕ್ಕೆ, ಧ್ಯಾನಕ್ಕೆ ಅಂಗಗಳು.

ಎಂಬ ಈ ಎರಡು ಅಂಗಗಳು **ಆನುಕೂಲ್ಯ ಸಂಕಲ್ಪ—ಪ್ರಾತಿಕೂಲ್ಯ ವರ್ಜನ** ಎಂಬುವು.

ಈ ಎರಡು ಭಾವನೆಗಳೂ ಮೋಕ್ಷವನ್ನು ಪಡೆಯಬೇಕೆಂಬ ಬಯಕೆ ಉಳ್ಳವನ ಮನದಲ್ಲಿ ಮೂಡಿದರೆ. ಶಾಸ್ತ್ರದಲ್ಲಿ ವಿಧಿಸಿರುವುದನ್ನು ಮಾಡದೇ ಇರುವುದು, ಮಾಡಕೂಡದೆಂದು ನಿಷೇಧಿಸಿರುವುದನ್ನು ಮಾಡುವುದು ಎಂಬ ಈ ಅಪಾಯಗಳ ನಿವೃತ್ತಿಯು ಸಿದ್ಧಿಸುತ್ತದೆ.

**ಕಾರ್ಪಣ್ಯವೆಂದರೆ,** ಅಂಗಗಳೊಡಗೂಡಿದ ಭಕ್ತಿಯೋಗ ಮಾಡಲು ಶಕ್ತಿ ಇಲ್ಲದೆ ಇರುವಿಕೆ, ಇಲ್ಲ ಆಕಿಂಚನತ್ವ ಬೇರೆ ಗತಿಇಲ್ಲದಿರುವಿಕೆ ಅನನ್ಯಗತಿತ್ವ—ಗುಣಗಳಿಲ್ಲದಿರುವಿಕೆ. ಇವನ್ನು ಅನುಸಂಧಾನ ಮಾಡುವುದರಿಂದ ಗರ್ವಹಾನಿಯಾಗುತ್ತದೆ. ಅದೇ ಕಾರ್ಪಣ್ಯ, ಕೃಪಣಸ್ಯ ವೃತ್ತಿಃ=ಕಾರ್ಪಣ್ಯಮ್, ಎಂಬ ನಿರ್ವಚನದಂತೆ ಆ ವೇಳೆಯಲ್ಲಿ ದಯೆ ತೋರಿಸುವವನಿಗೆ ದಯೆ ಹುಟ್ಟುವಂತೆ ನಮಸ್ಕಾರ ಮಾಡುವಿಕೆ ಮುಂತಾದವೂ ಇಲ್ಲಿ ಕೂಡುತ್ತವೆ. ಇದೂ ಒಂದು ಅಂಗ.

**ಮಹಾವಿಶ್ವಾಸ**—ಎಂದರೆ ದೃಢವಾದ ನಂಬಿಕೆ. ಪ್ರಾಣಕ್ಕೆ ಅಪಾಯ ಉಂಟಾಗುವ ಸಂದರ್ಭ ಬಂದರೂ ನಾವು ಅವನನ್ನೇ ನಂಬಿ ಇರುವುದರಿಂದ ಅವನು ನಮ್ಮನ್ನು ಕೈಬಿಡಲಾರ ಎಂಬ ಮನೋನಿಶ್ಚಯ. ಭಯಂಕರವಾದ ಪಾಪಗಳನ್ನು ಮಾಡಿರುವ ನನಗೆ ಹೆಚ್ಚು ಫಲವಾದ ಮೋಕ್ಷವು ನ್ಯಾಸಮಾತ್ರದಿಂದ ತಡವಿಲ್ಲದೆ, ಶುಕ ಮಹರ್ಷಿಯೇ ಮೊದಲಾದವರಿಗೆ ದೊರಕಿದಂತೆ ಹೇಗೆ ದೊರಕೀತು ? ಎಂಬ ಈ ಸಂದೇಹವನ್ನು ನೀಗಿಸುವ ಮೂಲಕ ಇದರ ಉಪಯೋಗ. "**ರಕ್ಷಿಷ್ಯತೀತಿ ವಿಶ್ವಾಸಾದಭಿಷ್ಟೋಪಾಯ ಕಲ್ಪನಮ್**=ಕಾಪಾಡಿಯೇ ಕಾಪಾಡುತ್ತಾನೆ ಎಂಬ ನಂಬಿಕೆಯಿಂದ ಅವನನ್ನೇ ನಮ್ಮ ಇಷ್ಟಫಲದ ಹೊಂದುವಿಕೆಗೆ ಉಪಾಯವನ್ನಾಗಿ ಮಾಡುವುದು" ಎಂದು ಹೇಳಿರುವ ರೀತಿಯಲ್ಲಿ ಬೇರೆ ಸಹಾಯವನ್ನು ಅಪೇಕ್ಷಿಸದೆ ಈ ಮಹಾವಿಶ್ವಾಸವು ಪ್ರಪತ್ತಿಯನ್ನು ಅನುಷ್ಠಿಸುವಂತೆ ಮಾಡುತ್ತದೆ.

ಈಶ್ವರನು ವೈಷಮ್ಯ ನೈರ್ಘೃಣ್ಯ ಪರಿಹಾರಕ್ಕಾಗಿ ಅಶಕ್ತನಾದ ನನ್ನಿಂದ ಒಂದುಸಲ ಭರನ್ಯಾಸವನ್ನು ಮಾಡಿಸಿ ಆ ಮೇಲೆ ಬೇರೆ ಉಪಾಯವನ್ನೋ ಅಥವಾ ತನ್ನನ್ನೇ ಉಪಾಯವನ್ನಾಗಿಯೋ ಅಪೇಕ್ಷಿಸಲಾರ. ಭರನ್ಯಾಸವಾದ ಮೇಲೆ 'ಮೋಕ್ಷಕ್ಕಾಗಿ ಯಾವಸಾಧನೆಯನ್ನು ಮಾಡಲಿ' ಎಂಬ ವಿಚಾರವೇ ಹುಟ್ಟದಂತೆ ಚಿತ್ತಸ್ಥೈರ್ಯವನ್ನು ಉಂಟುಮಾಡುತ್ತದೆ, ಈ ಮಹಾವಿಶ್ವಾಸ ಎಂದು ಹೇಳಿದಂತಾಯಿತು. ಇದು ಮತ್ತೊಂದು ಅಂಗ.

ಈ ರೀತಿ ಅನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳಿಗೆ ಉಪಾಯದ ನೆರವೇರಿಸುವಿಕೆಯಲ್ಲಿ ಉಪಯೋಗ, ಕಾರ್ಪಣ್ಯಕ್ಕೆ [1]ಶಂಕಾಪಂಚಕ ಎಂಬ ಅನುಷ್ಠಾನ ವಿರೋಧಿಯನ್ನು ನಿರಸನ ಮಾಡುವುದರಲ್ಲಿ ಉಪಯೋಗ. ಮಹಾವಿಶ್ವಾಸಕ್ಕೆ ಅನುಷ್ಠಾನ ಸಿದ್ಧಿಯಲ್ಲಿ ಉಪಯೋಗವೆಂದು ಹೇಳಿಯಾಯಿತು. ಇನ್ನುಗೋಪ್ತೃತ್ವವರಣದ ಉಪಯೋಗವನ್ನೂ ಅದರ ಸ್ವರೂಪವನ್ನೂ ತಿಳಿಯೋಣ.

1. ೧) ಭಗವಂತನು ಸರ್ವಜ್ಞನು ಮತ್ತು ಸರ್ವಶಕ್ತನು. ನಾನು ಕರ್ಮಯೋಗಾದಿಗಳನ್ನೂ ಮಾಡದಂತೆ ಮಾಡುವ ಕೊನೆಇಲ್ಲದ ಅಪರಾಧವನ್ನು ಮಾಡಿರುವವನು ಅಂತಹ ದಂಡನೆಗೆ ತಕ್ಕ ನನಗೆ ಅವನು ಹೇಗೆ ಅಭಿಗಮ್ಯನಾಗುತ್ತಾನೆ ? ನನ್ನನ್ನು ಅವನು ಹತ್ತಿರಕ್ಕೆ ಸೇರಿಸುತ್ತಾನೆ ಎಂಬುದು ಸಂದೇಹ.

೨) ಕರ್ಮಕ್ಕೆ ತಕ್ಕಂತೆ ಫಲವನ್ನು ಕೊಡತಕ್ಕವನು ಪರಮಾತ್ಮ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ. ದುಷ್ಕರ್ಮಕ್ಕೆ ದೋಷದಿಂದ ಕೂಡಿರುವ ಫಲ. ದೊಡ್ಡದಾದ ಕರ್ಮಕ್ಕೆ ದೊಡ್ಡಫಲ, ಅಲ್ಪಕ್ಕೆ ಅಲ್ಪಫಲ. ಹೀಗಿರುವಾಗ ನನ್ನಲ್ಲಿ ಅನಂತವಾದ ಅಪರಾಧಗಳಿರುವಾಗ ಅನಂತವಾದ ದುಷ್ಫಲಗಳನ್ನೇ ಕೊಡಬೇಕಾಗಿದೆ. ಅದಿಲ್ಲದೆ ಸತ್ಫಲವನ್ನೇ ಹೇಗೆ ಕೊಟ್ಟಾನು ? ಬ್ರಹ್ಮ, ಶಿವ, ಸನಕಾದಿಗಳಿಗೂ ಹೊಂದಲಸದಳವಾದ ಅಳತೆಗೆ ಮೀರಿದ ಫಲವನ್ನು ಹೇಗೆ ಕೊಡುವನು ? ಅವನನ್ನು ಹೊಂದಲು ವಿರೋಧವಾದ ಕಾರ್ಯವನ್ನೇ ಮಾಡಿರುವ ನನ್ನನ್ನು ಅವನು ತಡೆಗಟ್ಟಬೇಡವೆ ? ಎಂಬುದು ಸಂದೇಹಕ್ಕೆ ಕಾರಣ.

೩) ಸರ್ವೇಶ್ವರನು ನಾವು ಮಾಡುವ ಯಾವ ವಿಧವಾದ ಉಪಕಾರವನ್ನೂ ಬಯಸದವನು, ಪ್ರಪತ್ತಿಯಾದರೋ ಶರೀರವನ್ನು ಕಷ್ಟಕ್ಕೆ ಈಡುಮಾಡದೆ ಹಣವನ್ನೂ ಹೆಚ್ಚಾಗಿ ಖರ್ಚುಮಾಡಿಸದೆ, ಬಹಳಕಾಲ ಮಾಡಬೇಕಾದದು ಅಲ್ಲದ್ದೂ ಆಗಿದೆ. ಅದನ್ನು ಸಮುದಾಯ ಜ್ಞಾನಪೂರ್ವಕವಾಗಿ ಒಂದು ಸಲ ಉಚ್ಚರಿಸುವ ರೂಪವಾದ ವ್ಯಾಪಾರದಿಂದಲೋ ಅಥವಾ ಒಂದು ಸಲ ಅನುಸಂಧಾನ ಮಾಡುವುದರಿಂದಲೋ ಅವರು ಹೇಗೆ ಪ್ರಸನ್ನನಾಗುವನು ? ಬಹಳ ವಿಧವಾದ ಮಹೋಪಕಾರಗಳಲ್ಲೂ ಅಪೇಕ್ಷೆ ಇಲ್ಲದ ಅವನು ಈ ಅಲ್ಪವ್ಯಾಪಾರವನ್ನು ಅಪೇಕ್ಷಿಸಿ ಅದಕ್ಕೆ ಪ್ರತ್ಯುಪಕಾರವಾಗಿ ಈ ದೊಡ್ಡಫಲವನ್ನು ಕೊಡುವುದು ಯುಕ್ತವೆ ? ಎಂಬುದು ಸಂದೇಹಕ್ಕೆ ಕಾರಣ.

೪) ಪರಮಾತ್ಮನು ಕ್ಷುದ್ರದೇವತೆಗಳಂತೆ ಬೇಗನೆ ಫಲವನ್ನು ಕೊಡುವ ಸ್ವಭಾವವಲ್ಲದವನು. ಅವನು ಹೇಗೆ ಈ ಫಲವನ್ನು ಬೇಗನೆ ಕೊಟ್ಟಾನು ?

೫) ಎಲ್ಲಕ್ಕೂ ಒಡೆಯನಾದವನು ಪರಮಾತ್ಮ. ಇವನಿಗೆ ಸಮನಾದವರೂ ಇಲ್ಲ ಅಥವಾ ಇವನಿಗೆ ಹೆಚ್ಚಿನವರೂ ಇಲ್ಲ. ನಾನೋ ಹುಟ್ಟಿನಿಂದಲೂ, ನಡತೆಯಿಂದಲೂ ಬಹಳನೀಚನಾಗಿದ್ದೇನೆ. ಮಹಾಪ್ರಭುವು ಅತಿನೀಚನನ್ನು ಲಕ್ಕಿಸುವನೆ ? ಹಾಗೆ ಒಂದು ವೇಳೆ ಲಕ್ಷಿಸಿದರೂ ತಾರತಮ್ಯವಿಲ್ಲದೆ-ಹೆಚ್ಚು ಕಡಿಮೆ ನೋಡದೆ ಇಷ್ಟೊಂದು ದೊಡ್ಡ ಉಪಕಾರವನ್ನು ಮಾಡುವುದು ಹೇಗೆ ಹೊಂದುತ್ತದೆ ? ಎಂಬುದು ಸಂದೇಹಬೀಜ-ಕಾರಣ.

ಮೋಕ್ಷವು ಚೇತನನಿಗೆ ಸ್ವರೂಪ ಪ್ರಾಪ್ತವಾದದ್ದು. ಅಂದರೆ ಈ ಸಂಸಾರದ ಕಟ್ಟಿನಿಂದ ಬಿಡಿಸಿಕೊಳ್ಳಬೇಕಾದದ್ದು ಯುಕ್ತವಾದದ್ದೆ; ಆದರೂ ಬಹಳ ಕಾಲದಿಂದ ಅನುಭವಿಸುತ್ತಿರುವ ಭೋಗದ ನಿವೃತ್ತಿರೂಪವಾದದ್ದು ಇದು. ಆದುದರಿಂದ ಅದನ್ನು ಯೋಚಿಸದೆ, ನಮ್ಮ ಹಿತವನ್ನು ಬಯಸುವವನಾದರೂ ಅವನು ನಮಗೆ ಅದನ್ನು ಕೊಟ್ಟರೆ, "ನನಗೆ ಬೇಡವಾದದ್ದನ್ನು ಅವನು ಕೊಟ್ಟ" ಎಂದಾಗುತ್ತದೆ, ಅಲ್ಲದೆ ಇವನಿಗೆ ಅವನಲ್ಲಿ 'ಉಪಕಾರ ಮಾಡಿದವನು' ಎಂಬ ಬುದ್ಧಿಯೂ ಹುಟ್ಟಲಾರದು. ಆದುದರಿಂದಲ್ಲವೇ "**ಅಪ್ರಾರ್ಥಿತೋ ನ ಗೋಪಾಯೇತ್**=ಪ್ರಾರ್ಥಿಸಲ್ಪಡದೆ ಕಾಪಾಡಕೂಡದು ಎಂದೂ, **ಗೋಪ್ತೃತ್ವಪರಣಂ ನಾಮ ಸ್ವಾಭಿಪ್ರಾಯ ನಿವೇದನಮ್**=ಗೋಪ್ತೃತ್ವವರಣವೆಂದರೆ, ಶೇಷಿಯು ನನಗೆ ರಕ್ಷಕನಾಗಲಿ ಎಂಬ ತನ್ನ ಇಷ್ಟವನ್ನು ಹೇಳುವುದು" ಎಂದೂ ಶಾಸ್ತ್ರ ಪ್ರಮಾಣಗಳು ಹೇಳುತ್ತವೆ.

ಜೀವನು ಸಂಸಾರಿಯಾಗಿದ್ದಾಗ ಭೋಗ ಐಶ್ವರ್ಯ ಇವೇ ಮೊದಲಾದವುಗಳ ಅನುಭವದಲ್ಲಿ ಆಸಕ್ತನಾಗಿರುತ್ತಾನೆ, ಆಗ ವೈರಾಗ್ಯ ಹುಟ್ಟಿರುವುದಿಲ್ಲ. ತನ್ನ ಸ್ವರೂಪಕ್ಕೆ ತಕ್ಕದ್ದಲ್ಲದ ಈ ಪುರುಷಾರ್ಥಗಳಲ್ಲೇ ತೊಳಲುತ್ತಾನೆ. ಇವನ ಸ್ವರೂಪಕ್ಕೆ ಪ್ರಾಪ್ತವಾದದ್ದು–ಇವನು ಹೊಂದಬೇಕಾದದ್ದು ಅಪವರ್ಗ. ಅಪ ವರ್ಜ್ಯತೇ ಇತ್ಯಪವರ್ಗಃ ಎಂದು ಇದರ ನಿರ್ವಚನ. ಸಮಾಪ್ತಿ ಎಂದು ಅರ್ಥ ವಾಗುತ್ತದೆ. ಐಶ್ವರ್ಯವೇ ಮೊದಲಾದ ಸಾಂಸಾರಿಕ ಭೋಗಗಳನ್ನು ನಿವೃತ್ತಿ ಮಾಡುವುದು–ಬಿಡುವುದು. ಈ ರೀತಿ ಬಿಡುವುದೇ ಮೋಕ್ಷ. ಮೋಕ್ಷಶಬ್ದವು ಮೋಕ್ಷವೆಂಬ ಧಾತುವಿನಿಂದಲೇ ನಿಷ್ಪನ್ನವಾದ ಶಬ್ದ. ಈ ಧಾತುವು ಚುರಾದಿಗೆ ಸೇರಿದ್ದು,

**ಮೋಕ್ಷೋಽವಸಾನೇ ಸರ್ವ್ಪೋಽಕ್ಷ್ಯೋಽವಸಾನಂ ಕ್ಷೇಪಉಚ್ಯತೇ ।**

ಎಂಬುದು ಧಾತುಕಾರಿಕೆ ಚುರಾದಿ ೫೦ನೆಯದರಲ್ಲಿ ಹೇಳಿದೆ. ಇದೇ ಮುಖ್ಯ ವಾದ ಪುರುಷಾರ್ಥ, ಇದನ್ನು ನಾವು ಪಡೆಯಲು ನಮ್ಮಲ್ಲಿರುವ ಯಾವ ಉಪಾಯವೂ ಇಲ್ಲ. ಅಕಿಂಚನರಾಗಿದ್ದೇವೆ. ಭಕ್ತಿಯನ್ನು ಮಾಡುವವರಿಗೆ ಭಕ್ತಿಯೋಗವು ಆ ಉಪಾಯಸ್ಥಾನದಲ್ಲಿದೆ. ಈ ರೀತಿ ಉಪಾಯದಿಂದ ಸಾಧಿಸಲ್ಪಡುವ ಫಲವನ್ನು ಉಪಾಯವಿಲ್ಲದೆ ನೀನೇ ಕೊಡು. ಈ ಭಾರವೂ ನಿನಗೇ ಸೇರಿದ್ದು, ನೀನೇ ಉಪಾಯಸ್ಥಾನದಲ್ಲಿದ್ದು ಕೊಡು ಎಂದು ಪ್ರಾರ್ಥಿಸುವುದು. ಇದು ಒಂದು ಅಂಗ.

ಈ ಐದೂ ಈನ್ಯಾಸವಿದ್ಯೆಯಲ್ಲಿ ಅಂಗಗಳಾಗಿವೆ. ಅನುಷ್ಠಾನಕಾಲದಲ್ಲಿ ಆತ್ಮನಿಕ್ಷೇಪಕ್ಕೆ ಮುಖ್ಯವಾಗಿವೆ.

ತ್ವಮೇವೋಪಾಯ ಭೂತೋಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ॥

ಎಂಬುದು ಲಕ್ಷಣವಾಕ್ಯ.

ಈ ರೀತಿ ಪ್ರಾರ್ಥನಾರೂಪವಾದ ಅಂಗದಿಂದ ಕೂಡಿದ ಭರಸಮರ್ಪಣವನ್ನು ಹೇಳಲು ಹೊರಟಿದೆ ಇದು. ಈ ಭರನ್ಯಾಸಕ್ಕೆ ಫಲ ನಿತ್ಯಕೈಙ್ಕರ್ಯ. ಇದು ಭಗವಂತನ ಪ್ರೀತಿಯೇ ಮುಖ್ಯವಾಗಿ ಉಳ್ಳದ್ದು ಮತ್ತು ಅವನಿಗೆ ಅತಿಶಯವನ್ನುಂಟು ಮಾಡತಕ್ಕದ್ದು.

## ಲಕ್ಷ್ಮೀತನ್ತ್ರದಲ್ಲಿ ಷಡಂಗ ಯೋಗದ ವಿವರಣೆ ಹೀಗೆ ಇದೆ

ಇಂದ್ರನು ಲಕ್ಷ್ಮೀದೇವಿಯನ್ನು ಕುರಿತು 'ಓ ದೇವಿ! ಆನುಕೂಲ್ಯಾದಿಗಳ ಸ್ವರೂಪವನ್ನು ಹೇಳು' ಎಂದು ಪ್ರಾರ್ಥಿಸಿದನು. ಅದಕ್ಕೆ ದೇವಿಯು ತಾನೇ, ಅವನಿಗೆ ಅವುಗಳ ಸ್ವರೂಪವನ್ನು ವಿವರಿಸುತ್ತಾಳೆ. ಎಲೌ ಇಂದ್ರನೇ, ಕೇಳು—

ಆನುಕೂಲ್ಯಮಿತಿಪ್ರೋಕ್ತಂ ಸರ್ವಭೂತಾನುಕೂಲತಾ ।
ಅಂತಃಸ್ಥಿತಾಽಹಂ ಸರ್ವೇಷಾಂ ಭಾವಾನಾ ಮಿತಿನಿಶ್ಚಯಾತ್ ॥
ಮಯೀವ ಸರ್ವಭೂತೇಷುಹ್ಯಾನುಕೂಲ್ಯಂ ಸಮಾಚರೇತ್ ।
ತಥೈವ ಪ್ರಾತಿಕೂಲ್ಯಂಚ ಭೂತೇಷು ಪರಿವರ್ಜಯೇತ್ ॥

'ಎಲ್ಲಾ ಪದಾರ್ಥಗಳ ಒಳಗೂ ನಾನಿರುವೆನು', ಎಂಬುದನ್ನು ದೃಢವಾಗಿ ನಂಬು, ಎಲ್ಲಾ ಭೂತಗಳಲ್ಲೂ, ನನ್ನಲ್ಲಿ ಹೇಗೆ ನಡೆದುಕೊಳ್ಳುವೆಯೋ ಹಾಗೆ ನಡೆದುಕೋ. ಅವುಗಳಿಗೆ ಅನುಕೂಲವನ್ನು ಮಾಡು. ಪ್ರತಿಕೂಲವನ್ನು ಮಾಡಬೇಡ.

ತ್ಯಾಗೋಗರ್ವಸ್ಯ ಕಾರ್ಪಣ್ಯಂ ಶ್ರುತಶೀಲಾದಿ ಜನ್ಮನಃ ।
ಅಂಗಸಾಮಗ್ರ್ಯ ಸಂಪತ್ತೇಃ ಅಶಕ್ತೇಶ್ಚಾಪಿಕರ್ಮಣಾಮ್ ॥
ಅಧಿಕಾರಸ್ಯಚಾಸಿದ್ಧೇಃ ದೇಶಕಾಲ ಗುಣಕ್ಷಯಾತ್ ।
ಉಪಾಯಾ ನೈವ ಸಿದ್ಧ್ಯಂತಿ ಹ್ಯಪಾಯಾ (ಯ) ಬಹುಲಾಸ್ತಥಾ ॥
ಇತಿಯಾ ಗರ್ವಹಾನಿಃ ಸ್ಯಾತ್ ದೈನ್ಯಂಕಾರ್ಪಣ್ಯ ಮುಚ್ಯತೇ ।
ಶಕ್ತೇಃ ಸೂಪಸದತ್ವಾಚ್ಚ ಕೃಪಾಯೋಗಾಚ್ಚಶಾಶ್ವತಾತ್ (ಶಾಙ್ರ್ಗಿಣ್ಯಃ) ॥

'ನಾನು ಶಾಸ್ತ್ರಗಳನ್ನು ಓದಿ ಪಾಂಡಿತ್ಯವನ್ನು ಪಡೆದಿರುತ್ತೇನೆ. ಒಳ್ಳೆಯ ಕುಲದಲ್ಲಿ ಹುಟ್ಟಿರುತ್ತೇನೆ, ನನ್ನ ನಡವಳಿಕೆಯೂ ಚೆನ್ನಾಗಿದೆ;' ಎಂಬಿವೇ ಮೊದ

ಲಾದ ಹೆಮ್ಮೆಯನ್ನು ಬಿಡಬೇಕು. ಈ ತ್ಯಾಗವೇ ಕಾರ್ಪಣ್ಯ. ದೇಶ ಕಾಲ ಇವು ಗಳ ಗುಣವು ಕ್ಷೀಣವಾಗಿರುವುದರಿಂದ ಆತ್ಮ ನಿಕ್ಷೇಪ ಎಂಬ ಈ ಕಾರ್ಯಕ್ಕೆ ಬೇಕಾದ ಅಂಗಗಳ ಪರಿಪೂರ್ಣತೆಗೆ ಬೇಕಾದ ಕರ್ಮಗಳನ್ನು ಮಾಡುವ ಸಾಮರ್ಥ್ಯವೂ ಸಾಲದು. ಆದುದರಿಂದ ನನಗೆ ಅಧಿಕಾರವೂ ಸಿದ್ಧಿಸಿಲ್ಲ. ಅದನ್ನು ನೆರವೇರಿಸಲು ಅಧಿಕಾರವೂ ನನಗೆ ಇಲ್ಲದಾಯಿತು. ಅಪಾಯಗಳೂ ಬಹಳವಾಗಿವೆ. ಉಪಾಯ ಗಳೂ ಸಿದ್ಧಿಸುವುದಿಲ್ಲ. ಹೀಗೆಂಬ ದೈನ್ಯವು ಕಾರ್ಪಣ್ಯವೆನಿಸಿಕೊಳ್ಳುತ್ತದೆ. ಇದು ಗರ್ವಹಾನಿ ರೂಪವಾದದ್ದು. ಶಾರ್ಙ್ಗವೆಂಬ ಹೆಸರುಳ್ಳ ಬಿಲ್ಲನ್ನು ಧರಿಸಿರುವ ಪರಮಾತ್ಮನ ಕೃಪೆ ನಿತ್ಯವಾದದ್ದು, ಅಪಾರವಾದದ್ದು. ಅವನು ಸರ್ವಶಕ್ತ. ಆದುದರಿಂದ ನಮ್ಮಂತಹ ಅಶಕ್ತರು ಸುಲಭವಾಗಿ ಅವನ ಹತ್ತಿರ ಹೋಗಬಹುದು.

**ಈಶೇಶಿತವ್ಯಸಂಬಂಧಾತ್ ಅನಿದಂ ಪ್ರಥಮಾದಪಿ ।**
**ರಕ್ಷಿಷ್ಯತ್ಯನುಕೂಲಾನ್ ನಃ ಇತಿಯಾ ಸುದೃಢಾಮತಿಃ ॥**
**ಸ ವಿಶ್ವಾಸೋ ಭವೇತ್‌ಶಕ್ರ ! ಸರ್ವದುಷ್ಕೃತನಾಶನಃ ।**

ಓ ಇಂದ್ರ ! ಅವನು ದಯಾಮಯ, ಸರ್ವಶಕ್ತ ಎಂಬುದು ಮಾತ್ರವಲ್ಲದೆ ಅವನು ಎಲ್ಲಕ್ಕೂ ಒಡೆಯ. ಅವನ ಆಳ್ವಿಕೆಗೆ ಒಳಪಟ್ಟವು ಮಿಕ್ಕವೆಲ್ಲ. ಈ ಶೇಶಿ ತವ್ಯ ಸಂಬಂಧ ಅನಾದಿಯಾದದ್ದು. ಆದುದರಿಂದ ಅವನಲ್ಲೂ ಅವನಿಗೆ ಸಂಬಂಧ ಪಟ್ಟವಲ್ಲೂ ಅನುಕೂಲವಾಗಿ ನಡೆದುಕೊಳ್ಳುವ ನಮ್ಮನ್ನು ನಿಶ್ಚಯವಾಗಿಯೂ, ಅವನು ಕಾಪಾಡಿಯೇ ಕಾಪಾಡುತ್ತಾನೆ ; ಕೈಬಿಡ. ಹೀಗೆಂಬ ದೃಢವಾದ ಬುದ್ಧಿ — ನಂಬಿಕೆ ಎನಿಸುತ್ತದೆ. ಇದೇ ಮಹಾ ವಿಶ್ವಾಸ. ಇದು ಎಲ್ಲಾ ಪಾಪಗಳನ್ನೂ ಹಾಳು ಮಾಡುತ್ತದೆ.

**ಕರುಣಾವಾನಪಿ ವ್ಯಕ್ತಂಶಕ್ತಃ ಸ್ವಾಮ್ಯಪಿದೇಹಿನಾಮ್ ।**
**ಅಪ್ರಾರ್ಥಿತೋ ನ ಗೋಪಾಯೇತ್ ॥**

ದಯೆ ಉಳ್ಳವನಾಗಿದ್ದರೂ ಶಕ್ತನಾಗಿದ್ದಾನೆ. ಕೆಲವರಿಗೆ ದಯೆ ಇದ್ದರೂ ಕಷ್ಟದಲ್ಲಿರುವವರನ್ನು ಅದರಿಂದ ಪಾರುಮಾಡಲು ಸಾಮರ್ಥ್ಯವಿಲ್ಲದವರಾಗಿದ್ದಾರೆ. ಅಂತಹವರ ದಯೆ ಯಾವ ಕಾರ್ಯವನ್ನು ಸಾಧಿಸೀತು ? "ಅಯ್ಯೋ ಪಾಪ ! ಕಷ್ಟ ದಲ್ಲಿದ್ದಾನೆ" ಎಂದು ಕನಿಕರ ಮಾತ್ರದಲ್ಲಿ ಪರ್ಯವಸಾನವಾಗುತ್ತದೆ. ಹಾಗಲ್ಲದ್ದು ಇವನ ಕರುಣೆ. ಆರ್ಥಿಕವಾಗಿಯೂ ಶಾರೀರಕವಾಗಿಯೂ ಸಹಾಯಮಾಡತಕ್ಕ ದ್ದಾಗಿದೆ. ಪ್ರಾಣಿಗಳಿಗೆ ಒಡೆಯನಾಗಿದ್ದರೂ ನಾವು ಪ್ರಾರ್ಥನೆ ಮಾಡದೆ ಕಾಪಾಡ ಲಾರ. ಹಾಗೆ ಕಾಪಾಡಿದರೆ, ವೈಷಮ್ಯ ನೈರ್ಘೃಣ್ಯಗಳು ಉಂಟಾಗುತ್ತವೆ ; ಅಲ್ಲದೆ "ನನಗೆ ಬೇಡದ್ದನ್ನು ಕೊಟ್ಟನು" ಎಂಬ ಭಾವನೆಯೂ ಜೀವನಿಗೆ ಉಂಟಾಗ

ಬಹುದು. ಆದುದರಿಂದ ಪ್ರಾರ್ಥಿಸಿದವನಿಗೆ ಅವನ ಇಷ್ಟಾರ್ಥವನ್ನು ನಾದುದರಿಂದ

**ಇತಿ ತತ್ಪ್ರಾರ್ಥನಾಮತಿಃ ।**
**ಗೋಪಾಯಿತಾಭವೇತ್ಯೇವಂ ಗೋಪ್ತೃತ್ವವರಣಂಸ್ಮೃತಮ್ ॥**

ನಾವು ಪ್ರಾರ್ಥನೆ ಮಾಡದೆ ಇದ್ದರೆ ಅವನು ನಮ್ಮನ್ನು ಕಾಪಾಡಲಾರ; ಹೀಗೆಂದು ತಿಳಿದು ಓ ಭಗವಂತ! ನನ್ನನ್ನು ಕಾಪಾಡು ಎಂದು ಪ್ರಾರ್ಥನೆಯಿಂದ ಕೂಡಿದ ಬುದ್ಧಿ ಇರಬೇಕು. ಇದು ಗೋಪ್ತೃತ್ವವರಣ ಎಂದು ಹೇಳಲ್ಪಟ್ಟಿದೆ.

**ತೇನ ಸಂರಕ್ಷ್ಯಮಾಣಸ್ಯಫಲೇ ಸ್ವಾಮ್ಯವಿಯುಕ್ತತಾ ।**
**ಕೇಶವಾರ್ಪಣಪರ್ಯಂತಾಹ್ಯಾತ್ಮನಿಕ್ಷೇಪ ಉಚ್ಯತೇ ॥**

ಅವನಿಂದ ಕಾಪಾಡಲ್ಪಡುವ ತನಗೆ ಆ ಕಾಪಾಡುವಿಕೆಯಿಂದ ಉಂಟಾಗುವ ಫಲವೂ ತನ್ನದಲ್ಲ. ಅವನದೇ. ಆ ಕೇಶವನೇ ತನಗಾಗಿ, ತನ್ನ ಪ್ರಯೋಜನ ವನ್ನು ಪಡೆಯಲು ತಾನೇ ಕಾಪಾಡುತ್ತಾನೆ; ಎಂಬ ಭಾವನೆ ಇರಬೇಕು. ಇದೇ ಆತ್ಮ ನಿಕ್ಷೇಪ ಎಂದು ಹೇಳಲ್ಪಡುತ್ತದೆ.

**ನಿಕ್ಷೇಪಾಪರ ಪರ್ಯಾಯೋ ನ್ಯಾಸಃ ಪಂಚಾಂಗಸಂಯುತಃ ।**
**ಸಂನ್ಯಾಸಸ್ತ್ಯಾಗ ಇತ್ಯುಕ್ತಃ ಶರಣಾಗತಿರಿತ್ಯಪಿ ॥**

ಈ ರೀತಿಯಾದ ಐದು ಅಂಗಗಳಿಂದ ಕೂಡಿದ ನ್ಯಾಸ ಎಂದರೆ ಪರಮಾತ್ಮನಲ್ಲಿ ತನ್ನನ್ನು ಸಮರ್ಪಣೆ ಮಾಡುವಿಕೆಯು ನಿಕ್ಷೇಪವೆನಿಸುತ್ತದೆ, ಇದೇ ಸಂನ್ಯಾಸ, ತ್ಯಾಗ, ಶರಣಾಗತಿ ಎಂದೂ ಹೇಳಲ್ಪಡುತ್ತದೆ.

**ಉಪಾಯಶ್ಚ ಚತುರ್ಥಸ್ತೇ ಪ್ರೋಕ್ತಃ ಶೀಘ್ರಫಲಪ್ರದಃ ।**
**ಅಸ್ಮಿನ್ ಹಿವರ್ತಮಾನಾನಾಂ ವಿಧೌವಿಪ್ರನಿಷೇವಿತೇ ॥**

ನಾಲ್ಕನೇ ಉಪಾಯವು—ಮಹಾವಿಶ್ವಾಸ. ಇದು ಬೇಗನೆ ಫಲವನ್ನು ಕೊಡುತ್ತದೆ. ಬ್ರಾಹ್ಮಣರಿಂದ ಸೇವಿಸಲ್ಪಟ್ಟ ಈ ವಿಧಿಯಲ್ಲಿ ಇರುವವರಿಗೆ ಫಲ ಪ್ರಾಪ್ತಿಯು ತಡವಾಗದು.

**ಪೂರ್ವೋತ್ತ್ರಯ ಉಪಾಯಾ ಸ್ತೇಭವೇಯುರಮನೋಹರಾಃ ।**
**ಆನುಕೂಲ್ಯೇತರಾಭ್ಯಾಂತು ವಿನಿವೃತ್ತಿರಪಾಯತಃ ॥**
**ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿರಿಹೋದಿತಾ ।**
**ರಕ್ಷಿಷ್ಯತೀತಿ ವಿಶ್ವಾಸಾತ್ ಅಭೀಷ್ಟೋಪಾಯಕಲ್ಪನಮ್ ॥**

ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ಮತ್ತು ಕಾರ್ಪಣ್ಯ ಎಂದು ಹಿಂದೆ ಹೇಳಿದ ಮೊದಲ ಮೂರೂ ಭಗವಂತನಲ್ಲಿ ಶರಣುಹೋಗಲು ಉಂಟಾಗುವ ಅಪಾಯವನ್ನು ನೀಗಿಸುತ್ತವೆ. ಆದರೆ ಅವು ಅವನ ಮನಸ್ಸನ್ನು ನಮ್ಮೆಡೆ ಸೆಳೆಯು ಲಾರವು. ಆನುಕೂಲ್ಯಸಂಕಲ್ಪ ಮತ್ತು ಪ್ರಾತಿಕೂಲ್ಯವರ್ಜನ ಇವುಗಳಿಂದ ಅವನ ಕೃಪೆ ನಮ್ಮ ಮೇಲೆ ಬೀಳದಂತೆ ಮಾಡುವ ಅಪಾಯದ ಬಿಡುಗಡೆಯಾಗುತ್ತದೆ. ಕಾರ್ಪಣ್ಯದಿಂದ ಬೇರೆ ಉಪಾಯವನ್ನು ಇವನು ಮಾಡದಂತೆ ತಡೆಯುಂಟಾಗುತ್ತದೆ. 'ಅವನು ಕಾಪಾಡಿಯೇ ಕಾಪಾಡುತ್ತಾನೆ' ಎಂಬ ದೃಢ ನಂಬಿಕೆ—ಮಹಾ ವಿಶ್ವಾಸ ಉಂಟಲ್ಲ ಆ ನಾಲ್ಕನೆಯದು ಅದು ನಮ್ಮ ಇಷ್ಟಾರ್ಥವನ್ನು ಪಡೆಯಲು ಮುಖ್ಯ ವಾದ ಉಪಾಯ. ಅದು ಬೇಗನೆ ಫಲವನ್ನು ಕೊಡುತ್ತದೆ.

**ಗೋಪ್ತೃತ್ವವರಣಂ ನಾಮ ಸ್ವಾಭಿಪ್ರಾಯ ನಿವೇದನಮ್ ।**
**ಸರ್ವಜ್ಞೋಽಪಿಹಿ ವಿಶ್ವೇಶಃ ಸದಾಕಾರುಣಿಕೋಽಪಿಸನ್॥**
**ಸಂಸಾರ ತಂತ್ರವಾಹಿತ್ವಾತ್ವಾತ್ ರಕ್ಷಾಪೇಕ್ಷಾಂಪ್ರತೀಕ್ಷತೇ ।**

ಗೋಪ್ತೃತ್ವವರಣವೆಂದರೆ ತನ್ನ ಅಭಿಪ್ರಾಯವನ್ನು ಹೇಳಿಕೊಳ್ಳುವಿಕೆ. ಲೋಕದಲ್ಲಿ ಸಾಮಾನ್ಯವಾಗಿ ಇರುವ ಸ್ಥಿತಿ ಇದು—ಕೇಳದೇ ಇರುವುದನ್ನು ಕೊಡು ವುದು ಅಷ್ಟೊಂದು ಉಚಿತವಾಗಲಾರದು. ಹಾಗೆ ಕೊಟ್ಟರೆ, 'ನನಗೆ ಅಪೇಕ್ಷೆ ಇಲ್ಲದ್ದನ್ನು ಅವನು ಕೊಟ್ಟ' ಎಂಬ ಭಾವನೆಯೂ ಉಂಟಾಗಬಹುದು. ಲೋಕಕ್ಕೆಲ್ಲ ಒಡೆಯನಾದ ಭಗವಂತ, ನಮ್ಮೆಲ್ಲರ ಕಷ್ಟವನ್ನೂ ಅರಿತವನೇ. ಅವನು ಸರ್ವಜ್ಞ. ಯಾವಾಗಲೂ ನಮ್ಮಲ್ಲಿ ದಯೆ ಉಳ್ಳವನೇ. ಆದರೂ ಪ್ರಾಣಿಗಳನ್ನು ಸೃಷ್ಟಿಸು ವುದು, ಕಾಪಾಡುವುದು ಮತ್ತು ನಾಶಮಾಡುವುದು ಎಂಬ ಈ ಸಂಸಾರವನ್ನು ನಡೆ ಸುವುದು ಅವನ ವಿನೋದ, ಆಟ. ಇದಕ್ಕಾಗಿ ಅವನು ನಮ್ಮಿಂದ 'ನನ್ನನ್ನು ರಕ್ಷಿಸು' ಎಂಬ ಕೇಳಿಕೆಯನ್ನು ಅಪೇಕ್ಷಿಸುತ್ತಾನೆ. ನಮ್ಮ ಅಭಿಪ್ರಾಯವನ್ನು ಅವನಲ್ಲಿ ನಿವೇದನ ಮಾಡಿಕೊಳ್ಳಬೇಕು. ಇದು ಗೋಪ್ತೃತ್ವವರಣ.

**ಆತ್ಮಾತ್ಮೀಯ ಭರನ್ಯಾಸೋಹ್ಯಾತ್ಮನಿಕ್ಷೇಪ ಉಚ್ಯತೇ ।**

ತಾನು ಮತ್ತು ತನಗೆ ಸೇರಿದವು ಇವುಗಳ ರಕ್ಷಣಾಭಾರವನ್ನು ಅವನಿಗೆ ಒಪ್ಪಿ ಸುವುದು ಆತ್ಮನಿಕ್ಷೇಪವೆನಿಸಿಕೊಳ್ಳುತ್ತದೆ.

**ಹಿಂಸಾಸ್ತೇಯಾದಯಃ ಶಾಸ್ತ್ರೈರಪಾಯತ್ವೇನ ದರ್ಶಿತಾಃ ।**
**ಅಪಾಯೋಪಾಯ ಸಂತ್ಯಾಗೀ ಮಧ್ಯಮಾಂವೃತ್ತಿಮಾಸ್ಥಿತಃ ॥**
**ರಕ್ಷಿಷ್ಯತೀತಿ ನಿಶ್ಚಿತ್ಯ ನಿಕ್ಷಿಪ್ತಸ್ವಸ್ವಗೋಚರಃ ।**
**ಬುಧ್ಯೇತ ದೇವದೇವಂ ತಂ ಗೋಪ್ತಾರಂ ಪುರುಷೋತ್ತಮಮ್ ॥**

ಶಾಸ್ತ್ರಗಳಲ್ಲಿ ಮತ್ತೊಬ್ಬರಿಗೆ ಹಿಂಸೆಯನ್ನು ಮಾಡುವುದು, ಮತ್ತೊಬ್ಬರ ವಸ್ತುವನ್ನು ಕದಿಯುವುದು ಇವೇ ಮೊದಲಾದವು ಕೇಡನ್ನು ತರುವವು ಎಂದು ಹೇಳಿದೆ. ಅವು ಅಪಾಯಕರಗಳು. ಈ ಅಪಾಯವನ್ನು ಉಂಟು ಮಾಡುವವನ್ನು ಬಿಡಬೇಕು. ಉಪಾಯಗಳನ್ನೂ ಬಿಡಬೇಕು. ಉಪಾಯ=ಒಳ್ಳೆಯದನ್ನು ಉಂಟುಮಾಡುವುದು—ಶ್ರೇಯಸ್ಸಾಧನ.

ಮಧ್ಯಮವಾದ ವೃತ್ತಿಯನ್ನು ಅವಲಂಬಿಸಬೇಕು. ದೇವತೆಗಳಿಗೂ ಒಡೆಯನಾದ ಪುರುಷಶ್ರೇಷ್ಠನು ಕಾಪಾಡಿಯೇ ಕಾಪಾಡುತ್ತಾನೆಂದು ದೃಢವಾಗಿ ನಿಶ್ಚಯ ಮಾಡಿಕೊಂಡು ಅವನಲ್ಲಿ ತನ್ನನ್ನೂ ತನಗೆ ಸೇರಿದವನ್ನೂ ಒಪ್ಪಿಸಬೇಕು. ಆ ಪುರುಷಶ್ರೇಷ್ಠನನ್ನು ರಕ್ಷಕನೆಂದು ಅರಿಯಬೇಕು.

ಹೀಗೆಂದು ಮಾತೆಯು ಹೇಳಿದಳು. ಇಂದ್ರನಿಗೆ ಮಧ್ಯಮಸ್ಥಿತಿಯ ಸ್ವರೂಪ ತಿಳಿಯಲಿಲ್ಲ. ಅದಕ್ಕಾಗಿ ಅವಳನ್ನೇ ಕುರಿತು ಕೇಳುತ್ತಾನೆ.

**ಉಪಾಯಾಪಾಯಯೋರ್ಮಧ್ಯೇ ಕೀದೃಶೀಸ್ಥಿತಿ ರಂಬಿಕೇ ।**
**ಅಪಾಯೋಪಾಯತಾ ಮೇವ ಕ್ರಿಯಾಸರ್ವಾವಲಂಬತೇ ।**
**ಸ್ವೀಕಾರೇ ವ್ಯತಿರೇಕೇ ವಾ ನಿಷೇಧ ವಿಧಿಶಾಸ್ತ್ರಯೋಃ ।**
**ದೃಶ್ಯತೇ ಕರ್ಮಣೋವ್ಯಕ್ತಮುಪಾಯೋಪಾಯಸಂಜ್ಞತಾ ॥**

ಅಮ್ಮಾ ! ಎಲ್ಲಾ ಕಾರ್ಯವೂ ಉಪಾಯವಾಗಿರುವಿಕೆಯನ್ನೋ ಅಥವಾ ಅಪಾಯವಾಗಿರುವಿಕೆಯನ್ನೋ ಹೊಂದಿದೆ. ಅವುಗಳ ಸ್ವರೂಪವೇ ಅಂತಹದು. ಮಾಡಕೂಡದೆಂಬ ನಿಷೇಧ ಶಾಸ್ತ್ರವನ್ನೋ, ಮಾಡಬೇಕೆಂಬ ವಿಧಿಶಾಸ್ತ್ರವನ್ನೋ ಸ್ವೀಕರಿಸಿದರೆ ಅಥವಾ ಬಿಟ್ಟರೆ, ಮಾಡುವ ಆ ಕಾರ್ಯಕ್ಕೆ ಸ್ಪಷ್ಟವಾಗಿ ಅಪಾಯ ಅಥವಾ ಉಪಾಯ ಸಂಜ್ಞೆ—ಹೆಸರು ಬರುತ್ತದೆ. ಮಾಡಕೂಡದ್ದನ್ನು ಮಾಡಿದರೆ ಅಪಾಯ. ಮಾಡದೇಬಿಟ್ಟರೆ ಅದೇ ಉಪಾಯವಾಗುತ್ತದೆ. ಮಾಡಬೇಕಾದುದನ್ನು ಮಾಡಿದರೆ ಉಪಾಯವಾಗುತ್ತದೆ ; ಅದನ್ನೇ ಬಿಟ್ಟರೆ ಅಪಾಯವಾಗುತ್ತದೆ. 'ಈ ಕಾರ್ಯವು ಅಪಾಯವನ್ನುಂಟು ಮಾಡತಕ್ಕದ್ದು, ಆದುದರಿಂದ ಇದನ್ನು ಮಾಡಕೂಡದು' ಎಂಬ ಭಾವನೆ ಉಂಟಾಗುತ್ತದೆ. ಆದುದರಿಂದ ಇದಕ್ಕೆ ಅಪಾಯ ಎಂದು ಹೆಸರು. 'ಈ ಕಾರ್ಯವನ್ನು ಮಾಡಿದರೆ ನಮ್ಮ ಇಷ್ಟಸಿದ್ಧಿಯಾಗುತ್ತದೆ' ಎಂಬ ಭಾವನೆ ಉಂಟಾಗುತ್ತದೆ. ಅದಕ್ಕೆ ಉಪಾಯ ಎಂದು ಹೆಸರು. ಹೀಗಿರುವಾಗ ಮಧ್ಯಮ ಸ್ಥಿತಿಯಲ್ಲಿದ್ದು ನಾನು ಮಾಡುವ ವ್ಯಾಪಾರವಾವುದು ? ಆ ಸ್ಥಿತಿಯ ಸ್ವರೂಪವೆಂತಹದು ? ಎಂದು ಅವಳನ್ನೇ ಕೇಳುತ್ತಾನೆ.

ಅತ್ರ ಪುನಃಪ್ರತ್ಯುಕ್ತಮ್—ಈ ವಿಷಯದಲ್ಲಿ ಮತ್ತೆ ಅವಳು ಹೇಳುವ ಉತ್ತರ :

ತ್ರಿವಿಧಾಂ ಪಶ್ಯ ದೇವೇಶ ಕರ್ಮಣೋ ಗಹನಾಂ ಗತಿಮ್ ।
ನಿಷೇಧ ವಿಧಿಶಾಸ್ತ್ರೇಭ್ಯಃ ತಾಂ ವಿಧಾಂಚ ನಿಬೋಧಮೇ ॥

ಎಲೌ ಇಂದ್ರನೇ ! ನಿಷೇಧಶಾಸ್ತ್ರಗಳಿಂದಲೋ ವಿಧಿಶಾಸ್ತ್ರಗಳಿಂದಲೋ ಹೇಳಲ್ಪಡುವ ಕರ್ಮಗಳ ರೀತಿಯು ಗಹನವಾದದ್ದು; ನೆರವೇರಿಸಲು ಕಷ್ಟವಾದದ್ದು. ಅವುಗಳ ಬಗೆ ಮೂರು ವಿಧವಾಗಿವೆ. ಅವನ್ನು ನಾನು ಹೇಳುತ್ತೇನೆ ಕೇಳು.

ಅನರ್ಥಸಾಧನಂ ಕಿಂಚಿತ್ ಕಿಂಚಿಚ್ಚಾಪ್ಯರ್ಥಸಾಧನಮ್ ।
ಅನರ್ಥ ಪರಿಹಾರಾಯ ಕಿಂಚಿತ್ ಕರ್ಮೋಪದಿಶ್ಯತೇ ।
ತ್ರೈರಾಶ್ಯಂ ಕರ್ಮಣಾ ಮೇವಂ ವಿಜ್ಞೇಯಂ ಶಾಸ್ತ್ರಚಕ್ಷುಷಾ ॥

ಕೆಲವು ಕರ್ಮಗಳು ಕೇಡನ್ನುಂಟುಮಾಡತಕ್ಕವು. ಕೆಲವು ಇಷ್ಟವಾದವನ್ನು ತರುತ್ತವೆ. ಮತ್ತೆ ಕೆಲವು ಕೇಡನ್ನು ನೀಗಿಸತಕ್ಕವು. ಈ ರೀತಿ ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳು ಮೂರು ಗುಂಪಾಗಿವೆ. ಇವನ್ನು ಶಾಸ್ತ್ರವೆಂಬ ಕಣ್ಣಿನಿಂದ ನೋಡಿ ತಿಳಿಯಬೇಕು. ಅಂದರೆ ಶಾಸ್ತ್ರವನ್ನು ಓದಿ ಅಥವಾ ಅರಿತವರಿಂದ ಕೇಳಿ ತಿಳಿಯಬೇಕು.

ಅಪಾಯೋಪಾಯ ಸಂಜ್ಞೌತು ಪೂರ್ವರಾಶೀಪರಿತ್ಯಜೇತ್ ।

ಅಪಾಯವನ್ನುಂಟು ಮಾಡುವ ಮತ್ತು ಉಪಾಯವಾಗಿರುವ ಅಪಾಯ ಉಪಾಯ ಎಂಬ ಹೆಸರುಳ್ಳ ಮೊದಲನೆಯ ರಾಶಿಗಳನ್ನು ಬಿಡಬೇಕು. ಅಂದರೆ ಅಪಾಯ ಕರ್ಮಗಳನ್ನೂ ಉಪಾಯ ಕರ್ಮಗಳನ್ನೂ ಬಿಡಬೇಕು ಎಂದರ್ಥ. ಇವೆರಡೂ ಸೇರಿ ಒಂದು ಗುಂಪಾಯಿತು.

ತೃತೀಯೋ ದ್ವಿವಿಧೋರಾಶಿಃ ಅನರ್ಥ ಪರಿಹಾರಕಃ ।
ಪ್ರಾಯಶ್ಚಿತ್ತಾತ್ಮಕಃ ಕಶ್ಚಿತ್ ಉತ್ಪನ್ನಾನರ್ಥನಾಶನಃ ॥

ಎರಡನೆಯ ರಾಶಿಗೆ ಸೇರಿದ್ದು ಮೂರನೆಯದು—ಅನರ್ಥವನ್ನು ಹೋಗಲಾಡಿಸತಕ್ಕದ್ದು, ಉಂಟಾದ ಕೇಡನ್ನು ಹೋಗಲಾಡಿಸತಕ್ಕದ್ದು. ಅದೊಂದು ಪ್ರಾಯಶ್ಚಿತ್ತರೂಪವಾದದ್ದು.

ತಮಂಶಂನ್ನೈವ ಕುರ್ವೀತ ಮನೀಷೀ ಪೂರ್ವ ರಾಶಿವತ್ ।
ಕ್ರಿಯಮಾಣಂ ನಕಸ್ಮೈಚಿತ್‌ಯತ್ ಅರ್ಥಾಯ ಪ್ರಕಲ್ಪತೇ ॥

ನಾವು ಯಾವ ಕಾರ್ಯವನ್ನು ಮಾಡುತ್ತೇವೋ ಅದು ಯಾವುದಾದರೂ ಪ್ರಯೋಜನಕ್ಕಾಗಿ ಮಾಡಲ್ಪಟ್ಟದ್ದಾಗಿರಕೂಡದು ಹಾಗೆ ಪ್ರಯೋಜನಕ್ಕಾಗಿ ಮಾಡಲ್ಪಡುವುದನ್ನು ಪಂಡಿತನಾದವನು ಹಿಂದಿನ ರಾಶಿಯಂತೆ ಮಾಡಲೇಕೂಡದು. ನಾವು ಮಾಡುವ ಕಾರ್ಯವು ಯಾವ ಪ್ರಯೋಜನಕ್ಕೂ ಆಗಕೂಡದು. 'ಅಂದರೆ ಈ ಇಷ್ಟಸಿದ್ಧಿಗಾಗಿ ಈ ಕಾರ್ಯವನ್ನು ಮಾಡುತ್ತೇನೆ' ಎಂದು ಉದ್ದೇಶಮಾಡಿ ಮಾಡಕೂಡದು ಎಂದಾಯಿತು. ಪಂಡಿತನಾದವನು ಆಭಾಗವನ್ನು ಹಿಂದಿನರಾಶಿ ಯಂತೆ ಮಾಡಲೇ ಕೂಡದು.

**ಅಕ್ರಿಯಾವತ್ ಅನರ್ಥಾಯ ಕರ್ಮತತ್ತು ಸಮಾಚರೇತ್ ।**
**ಏಷಾಸಾ ವೈದಿಕೀನಿಷ್ಠಾ ಹ್ಯುಪಾಯಾಪಾಯಮಧ್ಯಮಾ ॥**

ಮಾಡಿದರೂ ಮಾಡದಂತೆಯೂ, ಯಾವ ಪ್ರಯೋಜಕ್ಕೂ ಅಲ್ಲದ್ದೂ ಯಾವ ಕೆಲಸವೋ ಅದನ್ನು ಮಾಡಬೇಕು. ಉಪಾಯ ಮತ್ತು ಅಪಾಯಗಳ ನಡುವೆ ಇರುವ ನೆಲೆ ಇದು. ಇದೇ ವೇದದಲ್ಲಿ ಹೇಳಿರುವುದು—ವೈದಿಕೀನಿಷ್ಠೆ.

**ಅಸ್ಯಾಂ ಸ್ಥಿತೋ ಜಗನ್ನಾಥಂ ಪ್ರಪದ್ಯೇತ ಜನಾರ್ದನಮ್ ।**
**ಸಕೃದೇವ ಹಿಶಾಸ್ತ್ರಾರ್ಥಃ ಕೃತೋऽಯಂತಾರಯೇನ್ನರಮ್ ॥**

ಈ ಸ್ಥಿತಿಯಲ್ಲಿದ್ದು ಜಗತ್ತಿಗೆ ಒಡೆಯನಾದ ಜನಾರ್ದನನನ್ನು ಶರಣು ಹೋಗಬೇಕು. ಶಾಸ್ತ್ರದ ಸಾರವಾದ ಈ ಕಾರ್ಯವನ್ನು ಒಂದು ಸಲ ಮಾಡಿದರೆ ಸಾಕು. ಅದು ಮನುಷ್ಯನನ್ನು ಉದ್ಧಾರಮಾಡುತ್ತದೆ.

**ಉಪಾಯಾಪಾಯ ಸಂಯೋಗೇ ನಿಷ್ಠಯಾ ಹೀಯತೇऽನಯಾ ।**
**ಅಪಾಯ ಸಂಪ್ಲವೇ ಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್ ॥**

ಉಪಾಯ ಮತ್ತು ಅಪಾಯಗಳು ಸೇರಿದರೆ ಈ ಸ್ಥಿತಿಯಿಂದ ಅದು ನಾಶ ವಾಗುತ್ತದೆ. ಅವುಗಳ ಒಟ್ಟುಗೂಡುವಿಕೆಯಿಂದ ಉಂಟಾಗುವ ಫಲವು ಪ್ರಯೋಜ ನಕ್ಕೆ ಬರುವುದಿಲ್ಲ. ಅಪಾಯ=ಪಾಪ ಉಂಟಾದರೆ ಒಡನೆ ಪ್ರಾಯಶ್ಚಿತ್ತವನ್ನು ಮಾಡಬೇಕು.

**ಪ್ರಾಯಶ್ಚಿತ್ತಿರಿಯಂ ಸಾತ್ರಯತ್ ಪುನಃಶರಣಂ ವ್ರಜೇತ್ ।**
**ಉಪಾಯಾನಾ ಮುಪಾಯತ್ವ ಸ್ವೀಕಾರೇऽ ಪ್ಯೇತದೇವಹಿ ॥**

ಪ್ರಾಯಶ್ಚಿತ್ತವಾವುದೆಂದರೆ ಮತ್ತೆ ಭಗವಂತನನ್ನು ಮರೆಹೋಗುವುದೇ—ಶರಣಾಗತಿ ಮಾಡುವುದೇ ಆಗಿದೆ. ಉಪಾಯಗಳಿಗೂ ಉಪಾಯತ್ವವನ್ನು ಸ್ವೀಕರಿಸಿ

ದರೂ ಅಂದರೆ ನಾವು ಅನುಷ್ಠಿಸುವ ಉಪಾಯಗಳೂ–ಶ್ರೇಯಸ್ಸಾಧನಗಳೂ ಭಗವಂತನನ್ನು ಹೊಂದಲು ನೇರವಾದ ಸಾಧನಗಳು ಎಂಬ ಭಾವನೆಯನ್ನು ಮಾಡಿದರೆ, ಆವಾಗಲೂ ಇದೆ ಪ್ರಾಯಶ್ಚಿತ್ತ–ಮತ್ತೇ ಶರಣು ಹೋಗುವುದೇ.

ಅವಿಪ್ಲವಾಯ ಧರ್ಮಾಣಾಂ ಪಾಲನಾಯಕುಲಸ್ಯಚ ।
ಸಂಗ್ರಹಾಯಚ ಲೋಕಸ್ಯ ಮರ್ಯಾದಾಸ್ಥಾಪನಾಯಚ ॥
ಪ್ರಿಯಾಯ ಮಮವಿಷ್ಣೋಶ್ಚ ದೇವದೇವಸ್ಯ ಶಾರ್ಙ್ಗಿಣಃ ।
ಮನೀಷೀವೈದಿಕಾಚಾರಂ ಮನಸಾऽಪಿನಲಙ್ಘಯೇತ್ ॥

ಪ್ರಪನ್ನನಾದ ಪಂಡಿತನು, ಧರ್ಮಗಳು ಬಿಟ್ಟುಹೋಗದೆ ಇರುವುದಕ್ಕಾಗಿಯೂ ಅಂದರೆ ಅವು ನಾಶವಾಗದೆ ಇರುವುದಕ್ಕಾಗಿಯೂ, ಮನೆತನದ ರಕ್ಷಣೆಗಾಗಿಯೂ ಅಂದರೆ ಕುಲಧರ್ಮ—ಪದ್ಧತಿಯನ್ನು ತಪ್ಪಿಸದೆ ಇರುವುದಕ್ಕಾಗಿಯೂ ವೇದದಲ್ಲಿ ಹೇಳಿರುವ ನಡೆವಳಿಕೆಗಳನ್ನು ಮನಸ್ಸಿನಲ್ಲೂ ಮೀರಿ ನಡೆಯಕೂಡದು. ಇವನು ಒಂದುವೇಳೆ ಹಾಗೆ ಮೀರಿ ನಡೆದರೆ ಲೋಕದವರೆಲ್ಲರೂ 'ತಿಳಿದವನೇ ಈ ರೀತಿ ಮಾಡುವುದರಿಂದ ಅಜ್ಞರಾದ ನಾವೂ ಏತಕ್ಕೆ ಮಾಡಬಾರದು' ? ಎಂದು ಅವನನ್ನೇ ಅನುಸರಿಸಿ ಅಧರ್ಮವನ್ನು ಮಾಡಲೆಸಗುತ್ತಾರೆ. ಆವಾಗ ಇವನು ಕೆಟ್ಟು ಪಾಪಕ್ಕೆ ತುತ್ತಾಗುವುದಲ್ಲದೆ ಅವರೆಲ್ಲರನ್ನೂ ಪಾಪಿಷ್ಠರನ್ನಾಗಿ ಮಾಡಿದ ಪಾಪವೂ ಇವನಿಗೆ ಸೇರುತ್ತದೆ. ಲೋಕದ ಶಿಸ್ತನ್ನೂ ಕೆಡಿಸಿದಂತಾಗುತ್ತದೆ. ಇದು ನನಗೆ ಸಮ್ಮತವಲ್ಲದ್ದು. ಅಲ್ಲದೆ ಇದರಿಂದ ದೇವತೆಗಳಿಗೂ ದೇವನಾಗಿರುವ, ಶಾರ್ಙ್ಗವೆಂಬ ಬಿಲ್ಲನ್ನು ಕೈಯಲ್ಲಿ ಧರಿಸಿರುವ ನನ್ನ ಪ್ರಿಯನಾದ ವಿಷ್ಣುವಿಗೆ ಕೋಪವುಂಟಾಗುತ್ತದೆ. ಮನಸ್ಸಿನಿಂದಲೂ ಮೀರಕೂಡದೆಂದರೆ, ಶರೀರದಿಂದ ಮೀರಿ ನಡೆಯಕೂಡದೆಂಬುದನ್ನು ಹೇಳಬೇಕಾದುದಿಲ್ಲ ಎಂದರ್ಥವಾಗುತ್ತದೆ. ಶಾಸ್ತ್ರದಲ್ಲಿ ಹೇಳಿರುವ ಆಚಾರದಂತೆ ನಡೆದರೆ ನನಗೂ ನನ್ನ ಪತಿಯಾದ ವಿಷ್ಣುವಿಗೂ ಸಂತೋಷವಾಗುತ್ತದೆ.

ಯಥಾಹಿ ವಲ್ಲಭೋರಾಜ್ಞೋನದೀಂ ರಾಜ್ಞಾಪ್ರವರ್ತಿತಾಮ್ ।
ಲೋಕೋಪಯೋಗಿನೀಂ ರಮ್ಯಾಂ ಬಹುಸಸ್ಯವಿವರ್ಧಿನೀಮ್ ।
ಲಂಘಯನ್ ಶೂಲಮಾರೋಹೇತ್ ಅನಪೇಕ್ಷೋऽಪಿತಾಂಪ್ರತಿ ।
ಏವಂವಿಲಂಘಯನ್ ಮರ್ತ್ಯೋ ಮರ್ಯಾದಾಂ ವೇದನಿರ್ಮಿತಾಮ್ ।
ಪ್ರಿಯೋऽಪಿ ನಪ್ರಿಯೋऽಸೌಮೇ ಮದಾಜ್ಞಾವ್ಯತಿವರ್ತನಾತ್ ॥

ಒಬ್ಬ ರಾಜನು ಎಲ್ಲೋ ಹರಿಯುತ್ತಿರುವ ನದಿಯನ್ನು ತನ್ನ ರಾಜ್ಯದ ಕಡೆ ಹರಿಯುವಂತೆ ಅಣೆಕಟ್ಟನ್ನು ಕಟ್ಟಿಯೋ ಅಥವಾ ನೆಲವನ್ನು ಅಗೆದು ತಗ್ಗು

ಮಾಡಿಯೋ ತರುತ್ತಾನೆಂದು ಭಾವಿಸೋಣ. ಆ ನದಿಯು ಅವನ ರಾಜ್ಯದಲ್ಲಿ ಹರಿದು ಅನೇಕ ವಿಧವಾದ ಪೈರುಪಚ್ಚೆಗಳನ್ನು ಬೆಳೆಸಲು ಅನುವಾಗಿದೆ–ನೋಡಲು ಅಂದವಾಗಿಯೂ ಇದೆ. ಜನರೂ ಅದರ ಉಪಯೋಗವನ್ನು ಪಡೆಯುತ್ತಿದ್ದಾರೆಂದೂ ತಿಳಿಯೋಣ. ಹೀಗಿರುವಾಗ ರಾಜನಿಗೆ ಬಹಳ ಬೇಕಾದವನೊಬ್ಬನು ತನಗೆ ಅದರ ಉಪಯೋಗ ಬೇಡವೆಂದು ಅದನ್ನು ಕೆಡಿಸಲು ಪ್ರಯತ್ನಪಟ್ಟರೆ ಅದರಿಂದ ಕೋಪಗೊಂಡ ರಾಜನು ಅವನನ್ನು ಗಲ್ಲಿಗೆ ಏರಿಸುತ್ತಾನಲ್ಲವೆ ?

ಹಾಗೆ ವೇದದಿಂದ ಕಟ್ಟಲ್ಪಟ್ಟ–ಕಟ್ಟುಪಾಡನ್ನು ಅಂದರೆ ಶ್ರುತಿ ಪ್ರಮಾಣ ದಿಂದ ಏರ್ಪಡಿಸಲ್ಪಟ್ಟ ಧರ್ಮವಾದ ನಡವಳಿಕೆಗಳನ್ನು ಮನುಷ್ಯನು ಅನುಸರಿಸಿ ನಡೆಯಬೇಕು. ಅದನ್ನು ಮೀರಿನಡೆಯುವವನು ಒಂದು ವೇಳೆ ನನ್ನ ಪ್ರೀತಿಗೆ ಪಾತ್ರನಾಗಿದ್ದರೂ ಅವನು ನನ್ನ ಅಪ್ಪಣೆಯನ್ನು ಮೀರಿ ನಡೆಯುವುದರಿಂದ ನನಗೆ ಬೇಡದವನೇ ಆಗುತ್ತಾನೆ.

**ಉಪಾಯತ್ವಗ್ರಹಂ ತತ್ರವರ್ಜಯೇತ್ ಮನಸಾಸುಧೀಃ ॥**
**ಚತುರ್ಥಮಾಶ್ರಯನ್ನೇವಮುಪಾಯಂ ಚರಣಾಶ್ರಯಮ್ ।**
**ಅತೀತ್ಯಸಕಲಂ ಕ್ಲೇಶಂ ಸಂವಿಶತ್ಯಮಲಂಪದಮ್ ॥**

ಬುದ್ಧಿವಂತನಾದವನು ಭಗವಂತನ ಚರಣವನ್ನು ಆಶ್ರಯಿಸುವ ರೂಪವಾದ ನಾಲ್ಕನೆಯ ಉಪಾಯವನ್ನು ಆಶ್ರಯಿಸುತ್ತಾ ಅದರಲ್ಲಿ ಉಪಾಯತ್ವಬುದ್ಧಿಯನ್ನು ಬಿಡಬೇಕು. ಎಲ್ಲಾ ಕಷ್ಟಗಳನ್ನೂ ನೀಗಿ ಯಾವವಿಧವಾದ ದೋಷವೂ ಇಲ್ಲದ ಸ್ಥಾನವನ್ನು ಹೊಗುತ್ತಾನೆ–ಪ್ರವೇಶಿಸುತ್ತಾನೆ.

**ಉಪಾಯಾಪಾಯ ನಿರ್ಮುಕ್ತಾಂ ಮಧ್ಯಮಾಂಸ್ಥಿತಿ ಮಾಸ್ಥಿತಾ ।**
**ಶರಣಾಗತಿ ರಗ್ರ್ಯೈಷಾಸಂಸಾರಾರ್ಣವತಾರಿಣೀ ॥**

ಮಧ್ಯಮವಾದ ಸ್ಥಿತಿಯಲ್ಲಿ ಇರುವ ರೂಪವಾದ ಈ ಶರಣಾಗತಿಯು ಶ್ರೇಷ್ಠ ವಾದದ್ದು ; ಉಪಾಯ ಮತ್ತು ಅಪಾಯದಿಂದ ಬಿಡಲ್ಪಟ್ಟದ್ದು, ಸಂಸಾರವೆಂಬ ಸಮುದ್ರವನ್ನು ದಾಟಿಸತಕ್ಕದ್ದು.

**ಇದಂ ಶರಣಮಜ್ಞಾನಾಂ ಇದಮೇವ ವಿಜಾನತಾಮ್ ।**
**ಇದಂ ತಿತೀರ್ಷತಾಂ ಪಾರಂ ಇದಮಾನಂತ್ಯಮಿಚ್ಛತಾಮ್ ॥**

ಇದು ಏನೂ ಅರಿಯದವರಿಗೆ ರಕ್ಷಣೆ ಕೊಡತಕ್ಕದ್ದು ; ಹಾಗೆಯೇ ಹೆಚ್ಚಾಗಿ ತಿಳಿದವರಿಗೂ, ಸಂಸಾರದ ಕಡಲನ್ನು ದಾಟಲು ಬಯಸುವವರಿಗೆ ಇದು ದಡ, ಕೊನೆ ಇಲ್ಲದ್ದನ್ನು ಪಡೆಯಬೇಕೆಂದು ಬಯಸುವವರಿಗೂ ಇದೇ ಸಾಧನ.

ಪ್ರಾಯಶ್ಚಿತ್ತಪ್ರಸಂಗೇತು ಸರ್ವಪಾಪಸಮುದ್ಭವೇ ।
ಮಾಮೇಕಾಂ ದೇವದೇವಸ್ಯ ಮಹಿಷೀಂಶರಣಂ ವ್ರಜೇತ್ ॥

ಹೆಚ್ಚಾದ ಪಾಪಮಾಡಿ ಅದನ್ನು ಪರಿಹಾರ ಮಾಡಿಕೊಳ್ಳಲು ಪ್ರಾಯಶ್ಚಿತ್ತ ಮಾಡಿಕೊಳ್ಳುವ ಸಂದರ್ಭ ಒದಗಿದರೆ, ದೇವತೆಗಳಿಗೂ ದೇವನಾದ ನಾರಾಯಣನ ಪಟ್ಟಮಹಿಷಿಯಾದ ನನ್ನನ್ನು ಶರಣು ಹೋಗಬೇಕು.

ಅಪಾಯಾತ್ ವಿರತಃ(ಅಪಾಯ ವಿರತಃ)ಶಶ್ವತ್ ಮಾಂಚೈವ ಶರಣಂಗತಃ ।
ತನೂಕೃತ್ಯಾಖಿಲಂಪಾಪಂ ಮಾಂಪ್ರಾಪ್ನೋತಿ ನರಃಶನೈಃ ॥

ಅಪಾಯದಿಂದ ಬಿಡುಗಡೆ ಹೊಂದಿದವನಾಗಿ ಅಂದರೆ ಅಪಾಯವನ್ನುಂಟು ಮಾಡುವುದನ್ನು ಬಿಟ್ಟು ಅಡಿಗಡಿಗೂ ನನ್ನನ್ನೇ ಶರಣು ಹೊಂದುವವನು, ಎಲ್ಲಾ ಪಾಪವನ್ನೂ ಕ್ರಮವಾಗಿ ನೀಗಿ ಮೆಲ್ಲಗೆ ನನ್ನನ್ನು ಹೊಂದುತ್ತಾನೆ.

ಅಥೋಪಾಯ ಪ್ರಸಕ್ತೋಽಪಿ ಭುಕ್ತ್ವಾ ಭೋಗಾನ್ ಅನಾಮಯಾನ್ ।
ಅಂತೇ ವಿರಕ್ತಿಮಾಸಾದ್ಯ ವಿಶತೇವೈಷ್ಣವಂ ಪದಮ್ ॥

ಉಪಾಯದಲ್ಲಿ ನೆಲೆಸಿರುವವನೂ ಕೂಡ ಯಾವವಿಧವಾದ ತೊಂದರೆಯೂ ಇಲ್ಲದ (ರೋಗವನ್ನುಂಟುಮಾಡದ) ಭೋಗಗಳನ್ನು ಅನುಭವಿಸುತ್ತಾನೆ. ಕೊನೆಯಲ್ಲಿ ಆ ಭೋಗಗಳಲ್ಲಿ ಪ್ರೀತಿ ಇಲ್ಲದವನಾಗಿ ವೈರಾಗ್ಯವನ್ನು ಹೊಂದಿ ವಿಷ್ಣುವಿನ ಸಂಬಂಧವಾದ ಸ್ಥಾನವನ್ನು–ವೈಕುಂಠವನ್ನು ಪ್ರವೇಶಿಸುತ್ತಾನೆ.

ಉಪಾಯಃ ಸುಕರಃ ಸೋಽಯಂ ದುಷ್ಕರಶ್ಚಮತೋಮಮ ।
ಶಿಷ್ಟೈರ್ನಿಷೇವ್ಯತೇ ಸೋಽಯ ಮಕಾಮಹತಚೇತಸೈಃ ॥

ಈ ಉಪಾಯವು ಆಚರಿಸಲು ಸುಲಭವಾದದ್ದು, ಹಾಗೆಯೇ ಕಷ್ಟವಾದದ್ದೂ ಕೂಡ ; ಎಂಬುದು ನನ್ನ ಅಭಿಪ್ರಾಯ, ಏಕೆಂದರೆ ಉಪಾಯ ಮತ್ತು ಅಪಾಯಗಳ ಮಧ್ಯಮವಾದ ನಿಷ್ಠೆಯಾದದ್ದು ಬಹಳ ಕಷ್ಟಸಾಧ್ಯವಾದದ್ದು. ಆಸೆಯನ್ನು ಬಿಟ್ಟಮನಸ್ಸುಳ್ಳ ಶಿಷ್ಟರು ಇದನ್ನು ಆಶ್ರಯಿಸುತ್ತಾರೆ, ಎನ್ನುತ್ತಾಳೆ ಶ್ರೀದೇವಿ.

ಹೀಗೆ ಬೇರೆ ಅಧ್ಯಾಯದಲ್ಲಿ ಪ್ರಪನ್ನನು ಅನುಸಂಧಾನ ಮಾಡುವರೀತಿಯನ್ನು ಕುರಿತು ಹೇಳಿದೆ :

ಪ್ರಾತಿಕೂಲ್ಯಂ ಪರಿತ್ಯಕ್ತಮಾನುಕೂಲ್ಯಞ್ಚಸಂಶ್ರಿತಮ್ ।
ಅಪಾಯೇಭ್ಯೋ ನಿವೃತ್ತ್ಯೋಽಸ್ಮಿ ಪಾತಕೇಭ್ಯೋಭವೋದಧೌ ॥

**ತಥಾಪ್ಯತ್ರಪ್ರವೃತ್ತಿರ್ಯಾ ತ್ವತ್ಸ್ಮೃತೇಃಸಾವಿನಶ್ಯತು ।**
**ಆಲಸಸ್ಯಾಲ್ಪ ಶಕ್ತೇಶ್ಚಯಥಾವಚ್ಚಾವಿಜಾನತಃ ॥**

ನಾನು ಪ್ರಾತಿಕೂಲ್ಯವನ್ನು ಬಿಟ್ಟೆ. ಅನುಕೂಲ್ಯವನ್ನು ಆಶ್ರಯಿಸಿದೆ. ಸಂಸಾರದ ಕಡಲಿನಲ್ಲಿ ಅಪಾಯವನ್ನುಂಟುಮಾಡುವ ಪಾಪಗಳಿಂದ ಹಿಂತಿರುಗಿದೆ ; ಅಂದರೆ ಮಾಡುವುದನ್ನು ಬಿಟ್ಟೆ. ಹಾಗಿದ್ದರೂ ನಿನ್ನ ಸ್ಮರಣಕ್ಕೆ ಪ್ರವೃತ್ತಿ ಯಾವುದೋ ಅದೂ ನಾಶವಾಗಲಿ. ನಾನು ಸೋಮಾರಿ, ಅಲ್ಪವಾದಶಕ್ತಿ ಉಳ್ಳವನು. ನಿನ್ನ ಸ್ಮರಣಕ್ಕೆ ಪ್ರವರ್ತಿಸುವ ರೀತಿಯನ್ನೂ ಸರಿಯಾಗಿ ನಾನರಿಯೆ. ಆದುದರಿಂದ ಆ ಪ್ರವೃತ್ತಿಯೂ ನಾಶವಾಗಲಿ.

**ಉಪಾಯಾಶ್ಚೋದಿತಾಃ ಶಾಸ್ತ್ರೈರ್ನಮೇಸ್ಯುಃತಾರಕಾಸ್ತ್ರಯಃ ।**
**ತಥಾಪ್ಯತ್ರ ಪ್ರವೃತ್ತಿರ್ಯಾ ತ್ವದಾಜ್ಞಾ ಪಾಲನಂತುತತ್ ॥**

ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಸಂಸಾರದಿಂದ ದಾಟಿಸಲು ಉಪಾಯಗಳಾದ [1]ಮೂರು ಉಪಾಯಗಳೂ ನನಗೆ ಬೇಡ. ಆದರೂ ಅಲ್ಲಿ ಪ್ರವೃತಿಯು ಯಾವು ದುಂಟೋ ಅದು ಏತಕ್ಕೆಂದರೆ ನಿನ್ನ ಅಪ್ಪಣೆಯನ್ನು ಪರಿಪಾಲಿಸವುದಕ್ಕಾಗಿ ಅಷ್ಟೆ.

**ಅತೋಽಹಮನುಪಾಯತ್ವಾತ್ ಕೃಪಣೋಽಕಿಂಚನೋಽಗತಿಃ ।**
**ಛಾಯಾಮಾಶ್ರಿತ್ಯವರ್ತೇಯ ತ್ವದೀಯಾಂತಾಪಹಾರಿಣೀಮ್ ॥**

ನಾನು ಕೃಪಣನು. ನಿನ್ನನ್ನು ತೃಪ್ತಿಪಡಿಸಲು ಏನೂ ಇಲ್ಲದವನು. ಆದುದ ರಿಂದ ನನಗೆ ನಿನ್ನನ್ನು ಬಿಟ್ಟು ಬೇರೆ ಗತಿಯೂ ಇಲ್ಲ. (ಸಂಸಾರದ) ಬೇಗೆಯನ್ನು ನೀಗಿಸುವ ನಿನ್ನ ನೆರಳನ್ನು ಆಶ್ರಯಿಸಿ ನಡೆದುಕೊಳ್ಳುತ್ತೇನೆ. ಇವೇ ಮೊದಲಾಗಿ ಹೇಳಿದೆ.

ಆಮೇಲೆಯೂ ಹೀಗೆ ಹೇಳಲ್ಪಟ್ಟಿದೆ.

**ಸಕೃದೇವಂ ಪ್ರಪನ್ನಸ್ಯ ಕೃತ್ಯಂನೈವಾನ್ಯ ದಿಷ್ಯತೇ ।**
**ಉಪಾಯಾಪಾಯಮುಕ್ತಸ್ಯ ವರ್ತಮಾನಸ್ಯ ಮಧ್ಯತಃ ॥**

'ನರಸ್ಯ ಬುದ್ಧಿ ದೌರ್ಬಲ್ಯಾತ್ ಉಪಾಯಾನ್ತರಮಿಷ್ಯತೇ' ಇತಿ. ಉಪಾಯ ದಿಂದಲೂ ಅಪಾಯದಿಂದಲೂ ಬಿಡುಗಡೆಯನ್ನುಹೊಂದಿರುವ ಅಂದರೆ ಅವೆರಡನ್ನೂ ಬಿಟ್ಟಿರುವ, ಮಧ್ಯಮದ ನೆಲೆಯಲ್ಲಿರುವ ಮನುಷ್ಯನು ಒಂದುಬಾರಿ ಈ ರೀತಿ ಪ್ರಪತ್ತಿ ಮಾಡಿದರೆ, ಅವನಿಗೆ ಮಾಡಬೇಕಾದ ಕಾರ್ಯವು ಬೇರೆ ಯಾವುದೂ ಇಲ್ಲ.

1. ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ.

ಮನುಷ್ಯನ ಬುದ್ಧಿ ದೌರ್ಬಲ್ಯದಿಂದ ಅಂದರೆ ಅವನಿಗೆ ದೃಢವಾದ ನಂಬಿಕೆ ಇಲ್ಲದೆ ಇರುವುದರಿಂದ, ಬೇರೆ ಉಪಾಯವು ಹೇಳಲ್ಪಟ್ಟಿದೆ, ಎಂದು ಹೇಳಿದೆ.

ಹಾಗೆಯೇ ಬೇರೆಕಡೆ ಅಧ್ಯಾಯದಲ್ಲಿ—ಅತ್ರಿ ಅನಸೂಯಾದೇವಿ ಇವರ ಸಂವಾದದಲ್ಲಿ,

**ಪ್ರಪತ್ತಿಂ ತಾಂ ಪ್ರಯುಞ್ಜೀತ ಸ್ವಾಙ್ಗೈಃಪಞ್ಚಭಿರಾವೃತಾಮ್ ।**

ಅದಕ್ಕೆ ಸೇರಿದ ಐದು ಅಂಗಗಳಿಂದ ಕೂಡಿದ ಆ ಪ್ರಪತ್ತಿಯನ್ನು ಪ್ರಯೋಗಿಸಬೇಕು ಎಂದು ಆರಂಭಿಸಿ "ಪ್ರಾತಿಕೂಲ್ಯಮ್" ಇವೇ ಮೊದಲಾದವನ್ನು ಹಿಂದಿನಂತೆ ಹೇಳಿ, ಕೊನೆಯಲ್ಲಿ ಅತ್ರಿಯು ಅನಸೂಯಗೆ ಹೀಗೆ ಹೇಳಿದ್ದಾರೆ.

**ಭೂಯಸ್ತ್ವಂ ಶೃಣುಸಂಕ್ಷೇಪ ಮನಸೂಯೇಽನಸೂಯಯಾ ।**
**ಶ್ರುತ್ವಾಚ ಕುರು ಯತ್ನೇನ ರಕ್ಷಾಚಾಪ್ಯಪ್ರಮಾದಿನೀ ॥**

ಎಲೌ ಅನಸೂಯೆ ! ಅಸೂಯೆ ಇಲ್ಲದೆ ಸಂಕ್ಷೇಪವಾಗಿ ನಾನು ಹೇಳುವುದನ್ನು ಮತ್ತೆ ಕೇಳು. ಕೇಳಿ ಪ್ರಮಾದವಿಲ್ಲದ ರಕ್ಷೆಯನ್ನು ಅಂದರೆ ರಕ್ಷಣೋಪಾಯವನ್ನು ಪ್ರಯತ್ನದೊಡನೆ ಮಾಡು.

**ಲಕ್ಷ್ಮೀನಾರಾಯಣಾಕಾರಾಭವಿತ್ರೀತೇ ಮನಸ್ಥಿತಿಃ ।**
**ಅಪಾಯಾನ್ ಸಂಪರಿತ್ಯಜ್ಯ ಸ್ವೀಕೃತ್ಯಾಪ್ಯನುಕೂಲತಾಮ್ ॥**

ಅಪಾಯವಾದವನ್ನು ಬಿಟ್ಟು ಅನುಕೂಲವಾದವನ್ನು ಸ್ವೀಕರಿಸಿ ನಿನ್ನ ಮನಸ್ಸಿನ ಸ್ಥಿತಿಯು ಲಕ್ಷ್ಮೀನಾರಾಯಣಾಕಾರವಾಗಿರಲಿ ; ಅಂದರೆ ಯಾವಾಗಲೂ ಮನಸ್ಸಿನಲ್ಲಿ ಲಕ್ಷ್ಮೀನಾರಾಯಣರನ್ನೇ ಚಿಂತಿಸುತ್ತಿರು.

**ಲಕ್ಷ್ಮೀನಾರಾಯಣೌ ವಿಶ್ವಮಿತಿ ಭಾವೇಕೃತ ಸ್ಥಿತಿಃ ।**
**ಅಪಾಯಾನ್ ಸಂಪರಿತ್ಯಜ್ಯ ಪಾತಕಾನ್ ಭವಸಾಗರೇ ॥**

ಸಂಸಾರ ಸಮುದ್ರದಲ್ಲಿ ಅಪಾಯಕರಗಳಾದ ಪಾಪಗಳನ್ನು ಬಿಟ್ಟು ಲಕ್ಷ್ಮೀನಾರಾಯಣರೇ ಪ್ರಪಂಚವೆಂಬ ಭಾವನೆಯಲ್ಲಿರು.

**ದೈವಾದ್ವಾಯದಿವಾ ಮೋಹಾತ್ ಅಪಾಯಸ್ಯ ಪರಿಪ್ಲವೇ ।**
**ಭಜಮಾನಾಥತಾವೇವ ಲಕ್ಷ್ಮೀನಾರಾಯಣಾವುಭೌ ॥**

ಅಕಸ್ಮಾತ್ತಾಗಿಯೋ ಅಂದರೆ ಮಾಡಬೇಕೆಂದು ಮನಸ್ಸಿಲ್ಲದೆಯೋ ಅಥವಾ ಅಜ್ಞಾನದಿಂದಲೋ ಅಪಾಯವುಂಟಾದರೆ ಆ ಲಕ್ಷ್ಮೀನಾರಾಯಣರಿಬ್ಬರನ್ನೇ ಸೇವಿಸು.

ಶಶ್ವಚ್ಛಾಸುಕರಾನ್ ಸರ್ವಾನ್ ಉಪಾಯಾನ್‌ಜಹತೀ ಸ್ವಯಮ್ ।
ಅಲಿಪ್ತಾ ಕರಣೇ ತೇಷಾಂ ಲೋಕಸಂಗ್ರಹಚೇತಸಾ ॥

ಬಾರಬಾರಿಗೂ ಕಷ್ಟವಾಗಿರುವ ಎಲ್ಲಾ ಉಪಾಯಗಳನ್ನೂ ನೀನು ಬಿಡುವಳಾಗು. ಲೋಕಸಂಗ್ರಹಕ್ಕಾಗಿ ಅಂದರೆ ಲೋಕದ ಜನರು ಅವುಗಳನ್ನು ಮಾಡಲೆಂದು ಅವುಗಳ (ಕರ್ಮಗಳ)ನ್ನು ಮಾಡು. ಮಾಡುವಾಗ ಅದರ ಸಂಬಂಧವನ್ನು ಬಿಡು.

ಆಕಿಞ್ಚನ್ಯಂ ಸಮಾಲಮ್ಬ್ಯಬುದ್ಧ್ಯೈವ ದೃಢಯಾಸ್ವಯಮ್ ।
ಸರ್ವಥಾ ಸರ್ವದೇಶೇಷು ಸರ್ವಾವಸ್ಥಾಸು ಸರ್ವದಾ ॥
ರಕ್ಷಿಷ್ಯತಿ ಹರಿಃ ಶ್ರೀಮಾನ್ ಆಶ್ರಿತಾನಿತಿ ನಿಶ್ಚಯಾತ್ ।
ಆತ್ಮಾತ್ಮೀಯಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ ।
ಉಪಾಯಂ ವೃಣು ಲಕ್ಷ್ಮೀಶಂ ತಮೇಪೇಯಂ ವಿಚಿನ್ತಯ (ನ್ಯಾಚ) ॥

'ನನ್ನಲ್ಲಿ ನಿನ್ನನ್ನು ತೃಪ್ತಿಪಡಿಸುವ ಯಾವಉಪಾಯವೂ ಇಲ್ಲ' ಕುಲ, ಜ್ಞಾನ, ದ್ರವ್ಯ ಇವೇ ಮುಂತಾದವುಗಳ ಸಂಪತ್ತು ನನ್ನಲ್ಲಿ ಯಾವವೂ ಇಲ್ಲ ಎಂಬುದೇ ಆಕಿಂಚಿನ್ಯ. ಹೀಗೆಂಬ ದೃಢವಾದ ಬುದ್ಧಿಯಿಂದ, "ಎಲ್ಲಾ ವಿಧದಿಂದಲೂ, ಎಲ್ಲಾ ದೇಶಗಳಲ್ಲೂ, ಎಲ್ಲಾ ಅವಸ್ಥೆಯಲ್ಲೂ ಯಾವಾಗಲೂ ಶ್ರಿಯಃಪತಿಯಾದ ನಾರಾಯಣನು ತನ್ನನ್ನುಆಶ್ರಯಿಸಿದವರನ್ನು ಕಾಪಾಡುತ್ತಾನೆ" ಎಂಬ ನಿಶ್ಚಯದಿಂದ ಅವನಲ್ಲಿ ನಿನ್ನ ಮತ್ತು ನಿನಗೆ ಸಂಬಂಧ ಪಟ್ಟವುಗಳ ರಕ್ಷಣೆಯ ಭಾರವನ್ನು ಇಡು. ಅವನನ್ನೇ ಉಪಾಯವಾಗಿ ವರಿಸು, ಅವನನ್ನೇ ನಾವು ಹೊಂದಬೇಕಾದದ್ದು ಎಂದೂ ಚಿಂತಿಸು.

ಇತಿತೇ ಸಕಲಂಭದ್ರೇ ಶಾಸ್ತ್ರ ಶಾಸ್ತ್ರಾರ್ಥ ತತ್ಫಲಮ್ ।
ದರ್ಶಿತಂ ಪರಮೇತತ್ ತ್ವಂ(ಪರಮಂತತ್ತ್ವಂ)ಗೋಪಾಯ ಸ್ವೇನತೇಜಸಾ ॥

ಎಲೌ ಮಂಗಳಕರಳೇ ! ನಿನಗೆ ಎಲ್ಲಾಶಾಸ್ತ್ರಗಳೂ ಏತಕ್ಕೆ ಹೊರಟಿವೆ ಎಂಬುದನ್ನೂ ಅವುಗಳು ಹೊರಟಫಲವನ್ನೂ ಮತ್ತು ಅವುಗಳ ಅರ್ಥವನ್ನೂ ಕೊನೆಯಲ್ಲಿ ಅವು ಏನನ್ನು ಮುಟ್ಟುತ್ತವೆ ಎಂಬುದಾಗಿ ಅದರ ಪ್ರಯೋಜನವನ್ನೂ ತಿಳಿಸಿದ್ದಾಯಿತು. ಇನ್ನು ಈ ಶ್ರೇಷ್ಠವಾದ ತತ್ತ್ವವನ್ನು ನಿನ್ನ ತೇಜಸ್ಸಿನಿಂದ–ಶಕ್ತಿಯಿಂದ ಅಡಗಿಸಿ–ಗುಟ್ಟಾಗಿ ಇಟ್ಟುಕೊ ಎಂದು ಅತ್ರಿಮಹರ್ಷಿಗಳು ತನ್ನಪತ್ನಿಯಾದ ಅನಸೂಯೆಗೆ ಹೇಳಿದರು.

ಅಹಿರ್ಬುಧ್ನ್ಯರು ಮೂಲಮಂತ್ರದ ನಮಶ್ಶಬ್ದಕ್ಕೆ ವ್ಯಾಖ್ಯಾನಮಾಡುವ ನೆಪದಿಂದ ಈ ಶಾಸ್ತ್ರಾರ್ಥವನ್ನೇ ವಿವರಿಸಿದ್ದಾರೆ, ಅದರ ಕ್ರಮ ಹೀಗಿದೆ :

ಪ್ರೇಕ್ಷಾವತಃ ಪ್ರವೃತ್ತಿರ್ಯಾ ಪ್ರಹ್ವೀಭಾವಾತ್ಮಿಕಾಸ್ವತಃ ।
ಉತ್ಕೃಷ್ಟಂ ಪರಮುದ್ದಿಶ್ಯ ತನ್ನಮಃ ಪರಿಗೀಯತೇ ॥

ಶ್ರೇಷ್ಠನಾದ ಮತ್ತೊಬ್ಬನನ್ನು ಉದ್ದೇಶ್ಯ ಮಾಡಿ, ಬುದ್ಧಿವಂತನಾದವನು ತಾನಾಗಿಯೇ ನಮಸ್ಕಾರ ಮಾಡುತ್ತಾನೆ-ಕೋಲಿನಂತೆ ಭೂಮಿಯಲ್ಲಿ ಬಿದ್ದು ಸಾಷ್ಟಾಂಗ ಪ್ರಣಾಮ ಮಾಡುತ್ತಾನೆ. ಹೀಗೆ ಬಗ್ಗುವಿಕೆಯ ರೂಪವಾದ ಪ್ರವೃತ್ತಿ ಯಾವುದುಂಟೋ ಅದು ನಮಃ ಎಂದು ಹೇಳಿಸಿಕೊಳ್ಳಲ್ಪಡುತ್ತದೆ. ಪ್ರಹ್ವೀಭಾವ= ನಮ್ರನಾಗುವಿಕೆ, ಬಗ್ಗುವಿಕೆ. ಲೋಕದಲ್ಲಿ ತನಗಿಂತ ಉತ್ಕೃಷ್ಟನಾದ ಒಬ್ಬ ಪುರುಷನನ್ನು ಕಂಡರೆ ಇದು ಒಳ್ಳೆಯದು ಇದು ಕೆಟ್ಟದ್ದು ಎಂಬ ತಿಳಿವಳಿಕೆ ಉಳ್ಳವ ನಿಗೆ ತಾನಾಗಿಯೇ ಅವನನ್ನು ಗೌರವಿಸಬೇಕೆಂದು ಮನಸ್ಸು ಉಂಟಾಗುತ್ತದೆ. ಒಡನೆ ಸಾಂಷ್ಟಾಂಗ ಪ್ರಣಾಮಮಾಡಲು ತೊಡಗುತ್ತಾನೆ. ಅವನಿಂದ ಯಾವ ಪ್ರಯೋಜನ ವನ್ನೂ ಅಪೇಕ್ಷಿಸದೆ ಈ ರೀತಿ ಬಗ್ಗುವಿಕೆಯೇ ನಮಶ್ಶಬ್ದದ ಅರ್ಥ ಎಂದಾಯಿತು. ಪ್ರಹ್ವೀಭಾವ ಸಿದ್ಧಿಗಾಗಿ ಇಬ್ಬಗೆಯಾದ ಚೇತನರನ್ನು ಹೇಳುತ್ತಾರೆ.

ಲೋಕೇಚೇತನವರ್ಗಸ್ತು ದ್ವಿಧೈವ ಪರಿಕೀರ್ತ್ಯತೇ ।
ಜ್ಯಾಯಾಂಶ್ಚೈವ ತಥಾಜ್ಯಾಯಾನ್ನೈವಾಭ್ಯಾಂ ವಿದ್ಯತೇಪರಃ॥

ಲೋಕ್ಯತೇ ಅನೇನೇತಿ ಲೋಕಃ=ಇದರಿಂದ ನೋಡಲ್ಪಡುತ್ತದೆ ಎಂಬ ನಿರ್ವಚನದಂತೆ ಲೋಕಶಬ್ದಕ್ಕೆ ಶಾಸ್ತ್ರ ಎಂದರ್ಥವಾಗುತ್ತದೆ. ಶಾಸ್ತ್ರವೆಂಬ ಕಣ್ಣಿನಿಂದ ಅರಿತವರು ನೋಡುತ್ತಾರೆ, ಶಾಸ್ತ್ರದಲ್ಲಿ ಚೇತನವರ್ಗವು ಜ್ಯಾಯಾನ್=ಶ್ರೇಷ್ಠವಾ ದದ್ದು ಅಜ್ಯಾಯಾನ್=ಶ್ರೇಷ್ಠವಲ್ಲದ್ದು ಎಂದು ಎರಡು ಬಗೆಯಾಗಿದೆ. ಇವೆರಡ ಕ್ಕಿಂತ ಮತ್ತೊಂದು ಬೇರೆಯಾದದ್ದಿಲ್ಲ. ಜ್ಯಾಯಸ್ಸಿನ ಲಕ್ಷಣವನ್ನು ಹೇಳುತ್ತಾರೆ.

ಕಾಲತೋ ಗುಣತಶ್ಚೈವ ಪ್ರಕರ್ಷೋ ಯತ್ರ ತಿಷ್ಠತಿ ।
ಶಬ್ದಸ್ತಂ ಮುಖ್ಯಯಾ ವೃತ್ತ್ಯಾ ಜ್ಯಾಯಾನಿತ್ಯವಲಂಬತೇ ॥

ಯಾವ ಚೇತನನಲ್ಲಿ ಕಾಲಪ್ರಯುಕ್ತವಾದ ಉತ್ಕರ್ಷ-ಹಿರಿಮೆ, ದೇಶಪ್ರಯು ಕ್ತವಾದ ಉತ್ಕರ್ಷ ಮತ್ತು ಗುಣದಿಂದ ಉಂಟಾದ ಉತ್ಕರ್ಷ ಇವು ಇವೆಯೋ ಆ ಚೇತನನನ್ನು 'ಜ್ಯಾಯಾನ್' ಎಂಬ ಶಬ್ದವು ಮುಖ್ಯವಾದ ವೃತ್ತಿಯಿಂದ ಆಶ್ರಯಿಸಿದೆ-ಹೇಳುತ್ತದೆ ಎಂದರ್ಥ. ಇದರಿಂದ ನಿತ್ಯತ್ವ ವಿಭುತ್ವ [1]ಮೂರು ವಿಧ ವಾದ ಪರಿಚ್ಛೇದವಿಲ್ಲದಿರುವಿಕೆಯೂ ಹೇಳಿದಂತಾಯಿತು.

---

1. "ಇದು ಇಲ್ಲಿದೆ, ಅಲ್ಲಿ ಇಲ್ಲ" ಎಂಬುದು ದೇಶ ಪರಿಚ್ಛೇದ. "ಈವಾಗ ಇದೆ, ನೆನ್ನೆ ಇರಲಿಲ್ಲ. ನಾಳೆ ಇರುವುದಿಲ್ಲ" ಎಂಬುದು ಕಾಲ ಪರಿಚ್ಛೇದ. "ಈ ಪದಾರ್ಥದಲ್ಲಿದೆ. ಆ ಪದಾರ್ಥದಲ್ಲಿಲ್ಲ" ಎಂಬುದು ವಸ್ತು ಪರಿಚ್ಛೇದ.

**ಅತಶ್ಚೇತನ ವರ್ಗೋಽನ್ಯಃ ಸ್ಮೃತಃ ಪ್ರತ್ಯವರೋಬುಧೈಃ ।**
**ಅಜ್ಯಾಯಾಂಶ್ಚಾನ ಯೋರ್ಯೋಗಃ ಶೇಷಶೇಷಿತಯೋಚ್ಯತೇ ।**

ಇದಕ್ಕಿಂತ ಬೇರೆಯಾದ ಚೇತನವರ್ಗವು ಪ್ರತ್ಯವರಃ=ಕಡಿಮೆಯಾದದ್ದು, ಅಜ್ಯಾಯಾನ್ ಎಂದೂ ಬುದ್ಧಿವಂತರಿಂದ ಸ್ಮರಿಸಲ್ಪಡುತ್ತದೆ. ಈ ಉತ್ಕೃಷ್ಟ ಅಪಕೃಷ್ಟರಿಗೆ ಸಂಬಂಧವು ಶೇಷ ಶೇಷಿಭಾವವೆಂದು ಅಂಗೀಕರಿಸಲ್ಪಡುತ್ತದೆ ಇನ್ನು ಅಜ್ಯಾಯಸ್ಸುಗಳನ್ನೂ ಜ್ಯಾಯಾನನ್ನೂ [1]ಶೃಂಗಗ್ರಾಹಿಕ ವಾಗಿ ತೋರಿಸುತ್ತಾರೆ.

**ಅಜ್ಯಾಯಾಂಸೋಽಪರೇ ಸರ್ವೇ ಜ್ಯಾಯಾನೇಕೋಮತಃಪರಃ।**
**ನನ್ತೃ ನನ್ತವ್ಯಭಾವೇನ ತೇಷಾಂತೇನ ಸಮನ್ವಯಃ ॥**

ಭಗವಂತನಿಗಿಂತ ಬೇರೆಯಾದ ಎಲ್ಲಾ ಜೀವಗಳೂ ಅಜ್ಯಾಯಾಂಸರು, ಪರಮಪುರುಷನೊಬ್ಬನೇ ಜ್ಯಾಯಾನ್. ಭಗವಂತನಿಗೂ ಇವರಿಗೂ ನನ್ತೃ ನನ್ತವ್ಯ ಭಾವದಿಂದ ಸಂಬಂಧ. ಅಂದರೆ ಎಲ್ಲರಿಂದಲೂ ನಮಸ್ಕಾರ ಮಾಡಿಸಿಕೊಳ್ಳುವ ಯೋಗ್ಯತೆ ಅವನೊಬ್ಬನಿಗೇ ಇದೆ. ಇತರರೆಲ್ಲರೂ ಅವನಿಗೆ ನಮಸ್ಕಾರ ಮಾಡುವವರೇ ಆಗಿದ್ದಾರೆ.

ನಂತೃವು ಯಾರು ನನ್ತವ್ಯ ನಾವನು ಎಂಬುದನ್ನು ವಿಭಾಗಿಸಿ ತೋರಿಸುತ್ತಾರೆ.

**ನನ್ತವ್ಯಃ ಪರಮಃಶೇಷೀ ಶೇಷಾನಂತಾರ ಈರಿತಾಃ ।**
**ನನ್ತೃನನ್ತವ್ಯ ಭಾವೋಽಯಂ ನ ಪ್ರಯೋಜನಪೂರ್ವಕಃ ॥**

ಎಲ್ಲಕ್ಕಿಂತಲೂ ಉತ್ಕೃಷ್ಟನಾದವನು ಆ ಪರಮಾತ್ಮನೇ. ಅವನೇ ಶೇಷಿ. ಚೇತನರು ನಂತಾರರು–ನಮಸ್ಕಾರ ಮಾಡುವವರು ಅವರು ಶೇಷರು.

**ಪರಗತ ಅತಿಶಯಾಧಾನೇಚ್ಛಯಾ । ಉಪಾದೇಯತ್ವಮೇವ ಯಸ್ಯಸ್ವ ರೂಪಂಸಃ ಶೇಷಃ ॥**

ಪರನು ತನ್ನ ಇಷ್ಟದಂತೆ ವಿನಿಯೋಗಿಸಲು ತಕ್ಕವಾನಾಗಿರುವಿಕೆಗೆ ಶೇಷತ್ವ ಎಂದು ಹೆಸರು. ಯಾವನ ಸ್ವರೂಪವು ಶ್ರೇಷ್ಠನಿಗೆ ಸಂಬಂಧಿಸಲ್ಪಟ್ಟ ಹೆಚ್ಚಳವನ್ನು ಉಂಟುಮಾಡುವಸಲುವಾಗಿಯೇ ಸ್ವೀಕರಿಸಲು ತಕ್ಕದ್ದಾಗಿದೆಯೋ ಅವನು ಶೇಷನು, ಅಂದರೆ ಈ ನಂತೃನಂತವ್ಯ ಭಾವವು ಯಾವುದಾದರೂ ಪ್ರಯೋಜನವನ್ನು

---

1. ಹಸು, ಎತ್ತು, ಎಮ್ಮೆ ಇವನ್ನು ಅರಿಯದವನಿಗೆ ಅವುಗಳ ಕೊಂಬನ್ನು ಹಿಡಿದು ಎಳೆದು ಇದು ಹಸು, ಎತ್ತು ಮತ್ತು ಎಮ್ಮೆ ಎಂದು ತೋರಿಸುವುದು.

ಉದ್ದೇಶಪೂರ್ವಕವಾಗಿ ಮಾಡಿಬಂದುದಲ್ಲ; ಒಂದು ಉಪಾಧಿಯಿಂದ ಬಂದುದಲ್ಲ, ಸ್ವಭಾವ ಪ್ರಯುಕ್ತವಾದದ್ದು ಎಂದರ್ಥ.

ಇಲ್ಲಿಯವರೆಗೂ ನೀಚೀಭಾವವಾದ ಶರೀರದ ವ್ಯಾಪಾರಕ್ಕೆ ತಾನೇ ಪುರುಷಾರ್ಥವುಳ್ಳದ್ದಾಗಿರುವುದರಿಂದ ನಮಶ್ಶಬ್ದದ ಅರ್ಥಇರುವಿಕೆಯನ್ನು ಹೇಳಿದ್ದಾಯಿತು. ಇನ್ನು ಆ ಕಾಯಿಕವ್ಯಾಪಾರಕ್ಕೆ ಕಾರಣವಾದ ಶೇಷತ್ವಾನುಸಂಧಾನಕ್ಕೆ ಅದರ ಅರ್ಥ ಇರುವಿಕೆಯನ್ನು ಹೇಳುತ್ತಾರೆ.

ನೀಚೋಚ್ಚಯೋಃಸ್ವಭಾವೋಽಯಂ ನನ್ತ್ಯ ನನ್ತೃವ್ಯತಾತ್ಮಕಃ ।
ಉಪಾಧಿರಹಿತೇನಾಯಂ ಯೇನಭಾವೇನ ಚೇತನಃ ॥
ನಮತಿ ಜ್ಯಾಯಸೇ ತಸ್ಮೈ ತೇದ್ವಾನಮನ ಮುಚ್ಯತೇ ।

ಅವನು ಉತ್ಕೃಷ್ಟನು, ನಾನು ಅವನಿಗಿಂತ ನಿಕೃಷ್ಟನು—ಕಡಿಮೆಯವನು ಎಂಬ ಈ ಭಾವನೆಯು ನಮಸ್ಕಾರವನ್ನು ಪಡೆಯುವಿಕೆ ಮತ್ತು ನಮಸ್ಕಾರ ಮಾಡುವಿಕೆ ಇವುಗಳಿಗೆ ಕಾರಣವಾದುದು. ಬೇರೆ ಪ್ರಯೋಜನವನ್ನು ಬಯಸದೆ ಯಾವ ಶೇಷ-ಶೇಷಿಭಾವದ ಅನುಸಂಧಾನದಿಂದ ಚೇತನನು ಶ್ರೇಷ್ಠನಾದವನಿಗೆ ಶರೀರದಿಂದ ಬಗ್ಗಿ ನಮಸ್ಕಾರಮಾಡುತ್ತಾನೋ ಅದು ನಮಶ್ಶಬ್ದದ ಅರ್ಥ, ಅಥವಾ ಶೇಷ-ಶೇಷಿಭಾವದ ಅನುಸಂಧಾನವೇ ಅದು ಎಂದು ಹೇಳಲ್ಪಡುತ್ತದೆ.

ಅದನ್ನು ಉಪಪಾದನೆ ಮಾಡುತ್ತಾರೆ.

ಭಗವಾನ್ ಮೇಪರೋಽನಿತ್ಯಮಹಂ ಪ್ರತ್ಯವರಸ್ಸದಾ ।
ಇತಿಭಾವೋನಮಃ ಪ್ರೋಕ್ತೋನಮಸಃ ಕಾರಣಂ ಹಿಸಃ ॥

ಭಗವಂತನು ನನಗೆ ನಿತ್ಯವಾಗಿ ಪರಃ—ಶೇಷಿಯು. ನಾನು ಯಾವಾಗಲೂ ಪ್ರತ್ಯವರಃ—ಶೇಷಭೂತನು ಎಂದು ಎಣಿಸುವುದೇ ಅಂದರೆ ಶೇಷ ಶೇಷಿಜ್ಞಾನವೇ ನಮಸ್ ಎಂದು ಹೇಳಲ್ಪಡುತ್ತದೆ. ನಮಸಃ ಕಾರಣಂ ಹಿಸಃ—ಆ ಶೇಷ ಶೇಷಿಭಾವಜ್ಞಾನವು 'ನಮಃ' ಎಂಬ ವಾಚಿಕನಮಸ್ಕಾರಕ್ಕೂ ದಂಡರೂಪವಾಗಿ ಬಿದ್ದು ಮಾಡುವ ಕಾಯಿಕ—ಮೈಗೆ ಸಂಬಂಧವಾದ ನಮಸ್ಕಾರಕ್ಕೂ ಕಾರಣವಾಗುತ್ತದೆ. ಆದುದರಿಂದ ನಮ್ಯತೇಯೇನ ಎಂಬ ಕರಣವ್ಯುತ್ಪತ್ತಿಯಿಂದ ನಮಶ್ಶಬ್ದವು ಅದನ್ನು ಹೇಳುತ್ತದೆ ಎಂದು ಅಭಿಪ್ರಾಯ.

ಹಿಂದಿನ ಯೋಜನೆಯಲ್ಲಿ—ಪದಗಳ ಜೋಡಣೆಯಲ್ಲಿ ಭಾವವ್ಯುತ್ಪತ್ತಿಯಿಂದ ನಮನಂ—ನಮಃ ಎಂದು ಹೇಳಿದೆ. ಈ ಯೋಜನೆಯಲ್ಲಿ ನಮ್ಯತೇಯೇನ ನಮಸ್ಕರಿಸಲ್ಪಡುತ್ತದೆ. ಬಗ್ಗಲ್ಪಡುತ್ತದೆ. ಯೇನ—ಯಾವುದರಿಂದ ಎಂಬ ಕರಣವ್ಯುತ್ಪತ್ತಿ

ಯಿಂದ ನಮನ ಕಾರಣವಾಗಿರುವ ಶೇಷ ಶೇಷಿ ಭಾವಾನುಸಂಧಾನವೇ ನಮಶ್ಶಬ್ದಾರ್ಥ ಎಂದು ಹೇಳಲ್ಪಟ್ಟಂತಾಯಿತು.

ಇನ್ನು ಮುಂದೆ ಶರಣಾಗತಿ ರೂಪವಾದ ಸಾಧ್ಯೋಪಾಯಾರ್ಥವಾಗಿರುವಿಕೆಯನ್ನು ನಮಸ್ಸಿಗೆ ಹೇಳುತ್ತಾರೆ—ವ್ಯುತ್ಪತ್ತಿ ಭೇದದಿಂದ.

**ನಾಮಯತ್ಯಪಿವಾದೇವಂ ಪ್ರಹ್ವೀಭಾವಯತಿ ಧ್ರುವಮ್ ।**
**ಪ್ರಹ್ವೀಭವತಿ ನೀಚೇಹಿ ಪರೋನೈಚ್ಯಂವಿಲೋಕಯನ್ ।**
**ಅತೋವಾ ನಮ ಉದ್ದಿಷ್ಟಂಯತ್ತ್ನಾಮಯತಿಸ್ವಯಮ್ ॥**

ಅಪಿವಾ—ಅಥವಾ, ಯಾವ ತಾನು ದೇವನನ್ನು ನಿಶ್ಚಲನಾದ ಸರ್ವೋತ್ಕೃಷ್ಟನನ್ನು ಬಗ್ಗುವಂತೆ ಮಾಡುತ್ತದೆಯೋ ಆದುದರಿಂದಲೇ ನಮ ಎಂಬುದು ಶರಣವರಣವಾಗಿ ಉದ್ದೇಶಿಸಲ್ಪಟ್ಟಿದೆ. ಅದನ್ನು ವಿವರಿಸುತ್ತಾರೆ. ಉತ್ಕೃಷ್ಟನಾದವನು ನೀಚನಲ್ಲಿ ದೈನ್ಯವನ್ನು ನೋಡಿ ಬಗ್ಗುತ್ತಾನಷ್ಟೆ. ಈ ಯೋಜನೆಯಲ್ಲಿ ಶರಣಾಗತಿಯೇ ನಮಶ್ಶಬ್ದದ ಅರ್ಥ.

ಶರಣಾಗತಿ ರೂಪವಾದ ನಮಸ್ಸಿಗೆ ಪೂರ್ಣವಾಗಿರುವಿಕೆಯನ್ನು ಹೇಳುತ್ತಾರೆ.

**ವಾಚಾನಮಃಇತಿ ಪ್ರೋಚ್ಯಮನಸಾ ವಪುಷಾ ಚ ಯತ್ ।**
**ತನ್ನಮಃಪೂರ್ಣ ಮುದ್ದಿಷ್ಟಮತೋನ್ಯನ್ನ್ಯೂನ ಮುಚ್ಯತೇ ॥**

ಮಾತಿನಿಂದ 'ನಮಃ' ಎಂದು ಹೇಳಿ ಮನಸ್ಸಿನಿಂದ ಶರಣಾಗತಿಯನ್ನು ಅನುಷ್ಠಾನಮಾಡಿ ಅದರ ಪರೀವಾಹವಾಗಿ ಶರೀರದಿಂದಲೂ ಕೂಡ ಅದನ್ನು ತೋರ್ಪಡಿಸುವ ವ್ಯಾಪಾರವು ಯಾವುದು ಮಾಡಲ್ಪಡುತ್ತದೆಯೋ ಆ ನಮಸ್ಸು—ಆ ಶರಣವರಣವು ಪೂರ್ಣವೆಂದು ಹೇಳಲ್ಪಟ್ಟಿದೆ. ಅದಕ್ಕಿಂತ ಬೇರೆಯಾದದ್ದು ಅಂದರೆ ಅವುಗಳಲ್ಲಿ ಒಂದು ಅಥವಾ ಎರಡು ಕಡಿಮೆಯಾಗಿರುವುದು ಅಪೂರ್ಣವಾದದ್ದು, ಉಪಾಯವಾಗಿ ಹೇಳಲ್ಪಟ್ಟ ಶರಣಾಗತಿಗೆ ಶರೀರ, ಮಾತು ಮತ್ತು ಮನಸ್ಸು ಈ ಕರಣ ಪೂರ್ತಿ ಇರಬೇಕು.

'ಇನ್ನು ಮುಂದೆ ಅಙ್ಗಪೂರ್ತಿಯನ್ನು ಕೇಳು' ಎನ್ನುತ್ತಾರೆ.

**ಇಯಂ ಕರಣಪೂರ್ತಿಸ್ಸ್ಯಾದಙ್ಗಪೂರ್ತಿಮಿಮಾಂಶೃಣು ।**
**ಶಾಶ್ವತೀಮಮ ಸಂಸಿದ್ಧಿರಿಯಂ ಪ್ರಹ್ವೀಭವಾಮಿಯತ್ ॥**
**ಪುರುಷಂ ಪರಮುದ್ದಿಶ್ಯ ನಮೇಸಿದ್ಧಿರಿತೋನ್ಯಥಾ ।**
**ಇತ್ಯಙ್ಗಮುದಿತಂ ಶ್ರೇಷ್ಠಂ ಫಲೇಪ್ಸಾತದ್ವಿರೋಧಿನೀ ॥**

ಮೊದಲು ಸಾತ್ತ್ವಿಕ ತ್ಯಾಗವನ್ನು ಹೇಳುತ್ತಾರೆ. ಉತ್ಕೃಷ್ಟನಾದ ಭಗವಂತನನ್ನು ಉದ್ದೇಶಮಾಡಿ ಪ್ರಹ್ವೀಭವನ–ನಮಸ್ಕಾರ ಮಾಡುವಿಕೆ ಎಂಬ ಯಾವುದನ್ನು ಮಾಡುತ್ತೇನೋ ಈ ಶರಣಾಗತಿಯು ನನಗೆ ಶಾಶ್ವತವಾದ ಸಿದ್ಧಿಯು–ಪರಮ ಪ್ರಯೋಜನ ರೂಪವಾದದ್ದು. ಈ ಶರಣವರಣಕ್ಕಿಂತಲೂ ಬೇರೆಯಾದ ಸಿದ್ಧಿಯು–ಪ್ರಯೋಜನವು ಇಲ್ಲ. ಇದರಿಂದ ಕರ್ತೃತ್ವವೇ ಮೊದಲಾದ ತ್ಯಾಗ ರೂಪವಾದ ಅಙ್ಗವು ಹೇಳಲ್ಪಟ್ಟಿದ್ದಾಯಿತು. ಇದು ಶ್ರೇಷ್ಠವಾದ ಅಙ್ಗವೆಂದರ್ಥ, ಈ ಅಙ್ಗಕ್ಕೆ ಫಲದ ಅಪೇಕ್ಷೆ ಇದ್ದರೆ ಅದು ವಿರೋಧವಾಗುತ್ತದೆ. (ಇದರಲ್ಲಿ ಕರ್ತೃತ್ವತ್ಯಾಗ ಮಮತಾತ್ಯಾಗಾದಿಗಳೂ ಅಡಗಿವೆ).

ಕಾರ್ಪಣ್ಯವನ್ನು ಎರಡನೇ ಅಂಗವಾಗಿ ಹೇಳುತ್ತಾರೆ.

**ಅನಾದಿ ವಾಸನಾರೋಹಾದ ನೈಶ್ವರ್ಯಾತ್ಸ್ವಭಾವಜಾತ್ ।**
**ಮಲಾವಕುಂಠಿ ತತ್ತ್ವಾಚ್ಚದೃಕ್ಕ್ರಿಯಾ ವಿಹತಿರ್ಹಿಯಾ ॥**
**ತತ್ಕಾರ್ಪಣ್ಯಂ ತದುದ್ಬೋಧೋ ದ್ವಿತೀಯಂ ಹ್ಯಂಗಮಿಷ್ಯತೇ ।**
**ಸ್ವಸ್ವಾತನ್ತ್ರ್ಯಾವಭೋಧಸ್ತು ತದ್ವಿರೋಧ ಉದೀರ್ಯತೇ ॥**

ಜೀವನಿಗೆ ಜ್ಞಾನ ಮತ್ತು ಶಕ್ತಿಗಳ ಸಂಕೋಚವುಂಟಾಗಿದೆ. ಇದಕ್ಕೆ ಕಾರಣವೇನೆಂದರೆ ವಿಷಯ ಸುಖಗಳನ್ನು ಅನುಭವಿಸಬೇಕೆಂಬ ಆಸೆ ಇವನಿಗೆ ಮನಸ್ಸಿನಲ್ಲಿ ಬೆಳೆದುಬಂದಿದೆ. ಇದು ಜನ್ಮಾಂತರಗಳಲ್ಲಿ ಅವುಗಳನ್ನು ಅನುಭವಿಸುವುದೇ ಪದ್ಧತಿಯಾಗಿರುವುದರಿಂದ ಆ ದುರ್ವಾಸನೆ ಇವನ ಮನದಲ್ಲಿ ಅಂಟಿದೆ. ಇವನು ಪರತಂತ್ರ. ಇದು ಸ್ವತಃ–ತಾನಾಗಿಯೇ ಸಿದ್ಧವಾಗಿರುವುದು. ಮನಸ್ಸು ನಿರ್ಮಲವಾಗಿಲ್ಲ. ಈ ಎಲ್ಲಾ ಕಾರಣಗಳಿಂದಲೂ ಇವನ ಜ್ಞಾನ ಮತ್ತು ಶಕ್ತಿಗಳ ಸಂಕೋಚ ಉಂಟಾಗಿದೆ. "ನನಗೆ ಜ್ಞಾನವಿಲ್ಲ ; ಏನನ್ನೂ ಅರಿಯದವನು. ಶಕ್ತಿ ಇಲ್ಲ" ಎಂಬ ತಿಳಿವಳಿಕೆಗೆ ಕಾರ್ಪಣ್ಯವೆಂದು ಹೆಸರು. ಇದು ಅಕಿಂಚನತ್ವರೂಪವಾದದ್ದು. ನಿನ್ನನ್ನು ತೃಪ್ತಿಪಡಿಸಲು, ನನ್ನಲ್ಲಿ ಯಾವುದೂ ಇಲ್ಲವೆಂಬ ಈ ಜ್ಞಾನವೇ ಆಕಿಂಚನ್ಯ ಇದು ಎರಡನೇಯ ಅಂಗ. ಇದರ ವಿರೋಧಿ ಯಾವುದೆಂದರೆ ನಾನು ಸ್ವತಂತ್ರ ಎಂಬ ಜ್ಞಾನ. ಈ ನೆನೆಪು ಬಂದರೆ ಆಕಿಂಚನ್ಯದ ಅನುಸಂಧಾನ ಉಂಟಾಗುವುದಿಲ್ಲ ಅಲ್ಲವೆ?

ಮೂರನೆಯ ಅಂಗವಾದ ಮಹಾವಿಶ್ವಾಸವನ್ನು ಹೇಳುತ್ತಾರೆ.

**ಪರತ್ವೇಸತಿ ದೇವೋಽಯಂ ಭೂತಾನಾ ಮನುಕಂಪನಃ ।**
**ಅನುಗ್ರಹೈಕಧೀರ್ನಿತ್ಯ ಮಿತ್ಯೇತತ್ತು ತೃತೀಯಕಮ್ ॥**

ಎಲ್ಲಕ್ಕಿಂತಲೂ ಮಿಗಿಲಾದವನಾದರೂ, ಎಲ್ಲಾ ಭೂತಗಳ ವಿಷಯದಲ್ಲೂ ದಯೆ ಉಳ್ಳವನಾದುದರಿಂದ, ನನ್ನ ವಿಷಯದಲ್ಲೂ ಯಾವಾಗಲೂ ಅನುಗ್ರಹ

ಮಾಡಬೇಕೆಂದೇ ಮನಸ್ಸುಳ್ಳವನಾಗಿರುವನು. ಆದುದರಿಂದ ನನ್ನನ್ನೂ ಅವಶ್ಯವಾಗಿ ಕಾಪಾಡುತ್ತಾನೆ. ನಾನು ಅನುಷ್ಠಾನಮಾಡಿರುವ ಈ ಕಾರ್ಯವೆಂಬ ವ್ಯಾಜಮಾತ್ರದಿಂದಲೇ ನನ್ನಲ್ಲಿ ಅನುಗ್ರಹಮಾಡುವನು ! ಎಂಬ ಬುದ್ಧಿಯು ಮೂರನೆಯ ಅಂಗ, ಇದಕ್ಕೆ ವಿರೋಧಿಯನ್ನು ತೋರಿಸುತ್ತಾರೆ.

**ಉಪೇಕ್ಷಕೋ ಯಥಾಕರ್ಮಫಲ ದಾಯೀತಿಯಾಮತಿಃ ।**

**ವಿಶ್ವಾಸಾತ್ಮಕ ಮೇತತ್ತು ತೃತೀಯಂ ಹನ್ತಿವೈಸದಾ ॥**

[1]ನಮೇದ್ವೇಷ್ಯೋಽಸ್ತಿನಪ್ರಿಯಃ=ನನಗೆ ದ್ವೇಷಿಯಾದವನೂ ಇಲ್ಲ, ಪ್ರಿಯನಾದವನೂ ಇಲ್ಲ, ಎಂದು ತಾನೇ ಹೇಳಿರುವುದರಿಂದ, ಉದಾಸೀನನಾದ ಭಗವಂತನು ಕರ್ಮಕ್ಕೆ ತಕ್ಕಂತೆ ಫಲವನ್ನು ಕೊಡುವವನು ಈ ಅಲ್ಪಕಾರ್ಯಕ್ಕೆ ಅಷ್ಟೊಂದು ದೊಡ್ಡ ಫಲವನ್ನು ಹೇಗೂ ಕೊಡಲಾರ ಎಂಬ ಬುದ್ಧಿಯು ಮೂರನೆದಾದ ಮಹಾವಿಶ್ವಾಸವೆಂಬ ಅಂಗವನ್ನು ಯಾವಾಗಲೂ ಹಾಳುಮಾಡುತ್ತದೆ.

ನಾನು ಮಾಡುವ–ಮಾಡಿರುವ ದುಷ್ಕರ್ಮಗಳು ಬಹಳವಾಗಿವೆ. ಮಹಾಪಾತಕರೂಪವಾದವು. ಪ್ರಪತ್ತಿಯಾದರೋ ಅಲ್ಪಕಾಲ ಸಾಧ್ಯವಾದದ್ದು. ಅದು ಇಷ್ಟೊಂದು ಪಾಪವನ್ನೆಲ್ಲಾ ಹೇಗೆ ಹಾಳುಮಾಡಬಲ್ಲದು ? ಎಂಬುದೇ ಮಹಾವಿಶ್ವಾಸವನ್ನು ಕೆಡಿಸತಕ್ಕಬುದ್ಧಿ,

ನಾಲ್ಕನೆಯ ಅಂಗವಾದ ಗೋಪ್ತೃತ್ವವರಣವನ್ನು ಹೇಳುತ್ತಾರೆ.

**ಏವಂಭೂತೋಽಪ್ಯಶಕ್ತಸ್ಸನ್ನ ತ್ರಾಣಂಭವಿತುಂಕ್ಷಮಃ ।**

**ಇತಿಬುಧ್ಯಾಸ್ಯದೇವಸ್ಯ ಗೋಪ್ತೃಶಕ್ತಿನಿರೂಪಣಮ್ ।**

**ಚತುರ್ಥಮಙ್ಗಮುದ್ದಿಷ್ಟಮ್ ॥**

ಈ ರೀತಿ ಅನುಗ್ರಹಮಾಡುವುದೇ ಮುಖ್ಯವಾದ ಸ್ವಭಾವ (ಬುದ್ಧಿ) ಉಳ್ಳವನಾಗಿ, ರಕ್ಷಣೆಮಾಡಲು ಕಾದುಕೊಂಡಿರುವನಾಗಿದ್ದರೂ, ಅಶಕ್ತನಾಗಿದ್ದು ರಕ್ಷಕನಾಗಲು ಸಮರ್ಥನಾಗಲಾರ, ಹೀಗೆಂಬ ಬುದ್ಧಿಯಿಂದ ಕೂಡಿರುವವನಿಗೆ ಆ ತಿಳುವಳಿಕೆ ಹೋಗುವುದಕ್ಕಾಗಿ 'ಈ ದೇವನಿಗೆ ಗೋಪ್ತೃಶಕ್ತಿ ನಿರೂಪಣಮ್= ನಿನ್ನಲ್ಲಿ ಕಾಪಾಡುವ ಶಕ್ತಿ ಇದೆ. ನನಗೆ ರಕ್ಷಕನಾಗು–ನನ್ನನು ಕಾಪಾಡು' ಎಂದು ಭಗವಂತನನ್ನು ಪ್ರಾರ್ಥಿಸುವುದು ನಾಲ್ಕನೆಯ ಅಂಗವಾಗಿ ಹೇಳಲ್ಪಟ್ಟಿದೆ. ಅದಕ್ಕೆ ವಿರೋಧಿಯನ್ನು ತೋರಿಸುತ್ತಾರೆ.

1. ಭಗವದ್ಗೀತೆ. ೯–೨೯.

**ಅಮುಷ್ಯ ವ್ಯಾಹತಿಃ ಪುನಃ ।**
**ಉದಾಸೀನೋಗುಣಾಭಾವಾದಿತ್ಯುತ್ಪ್ರೇಕ್ಷಾ ನಿಮಿತ್ತಜಾ ॥**

ಈ ಗೋಪ್ತೃತ್ವವರಣಕ್ಕೆ, "ಶಕ್ತಿರೂಪಗುಣವಿಲ್ಲದಿರುವುದರಿಂದ ಉದಾಸೀನನಾಗಿರುತ್ತಾನೆ-ರಕ್ಷಕನಾಗಿ ಆಗಲಾರ." ಹೀಗೆಂಬಬುದ್ಧಿಯು ವಿರೋಧಿಯಾಗುತ್ತದೆ.

ಐದನೆಯ ಅಙ್ಗವನ್ನು ಹೇಳುತ್ತಾರೆ.

**ಸ್ವಸ್ಯ ಸ್ವಾಮಿನಿ ವೃತ್ತಿರ್ಯಾ ಪ್ರಾತಿಕೂಲ್ಯಸ್ಯವರ್ಜನಮ್ ।**
**ತದಙ್ಗಂಪಂಚಮಂ ಪ್ರೋಕ್ತಮಾಜ್ಞಾವ್ಯಾ ಘಾತವರ್ಜನಮ್ ॥**

ತನಗೆ ಸ್ವಾಮಿಯಲ್ಲಿ ಅಪ್ಪಣೆಯನ್ನು ಮೀರಿ ನಡೆಯುವಿಕೆಯನ್ನು ಬಿಡುವುದು ಯಾವುದುಂಟೋ ಅದೇ ಪ್ರಾತಿಕೂಲ್ಯವರ್ಜನ ಎಂಬುದು. ಇದನ್ನು ಐದನೆಯ ಅಂಗವೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

**ಅಶಾಸ್ತ್ರೀಯೋಪ ಸೇವಾತುತದ್ವ್ಯಾಘಾತ ಉದೀರ್ಯತೇ ।**

ಶಾಸ್ತ್ರದಲ್ಲಿ ಹೇಳಲ್ಪಡದೇ ಇರುವುದನ್ನು ಮಾಡುವುದೇ ಇದರ ವಿರೋಧಿ.

ಆರನೆಯ ಅಂಗವನ್ನು ಹೇಳುತ್ತಾರೆ.

**ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ ।**
**ಅತಸ್ತದಾನುಕೂಲ್ಯಂಮೇಕಾರ್ಯಮಿತ್ಯೇವ ನಿಶ್ಚಯಃ ।**
**ಷಷ್ಠಮಙ್ಗಂಸಮುದ್ದಿಷ್ಟಂ ತದ್ವ್ಯಾಘಾತೋನಿರಾಕೃತಿಃ ॥**

ಜಂಗಮಸ್ಥಾವರಗಳಾದ-ಸಂಚರಿಸುವ ಅಥವಾ ಸಂಚರಿಸದೇ ಇರುವ ಎಲ್ಲಾ ಪದಾರ್ಥಗಳೂ ಭಗವಂತನಿಗೆ ಶರೀರಗಳು. ಆದುದರಿಂದ ಅವುಗಳಿಗೆ ಅನುಕೂಲವಾದವನ್ನೇ ಮಾಡಬೇಕು ಎಂಬ ನಿಶ್ಚಯರೂಪವಾದ ಆನುಕೂಲ್ಯ ಸಂಕಲ್ಪವು ಆರನೆಯ ಅಂಗವಾಗಿ ಹೇಳಲ್ಪಟ್ಟಿದೆ. ಅದಕ್ಕೆ ವಿರೋಧಿಯಾದದ್ದು ನಿರಾಕೃತಿಃ= ಭೂತದ್ರೋಹ.

ಇದೇ ಪರಿಕರಾನು ಸನ್ಧಾನದರೀತಿ ಎಂದು ಸೂಚಿಸಲ್ಪಟ್ಟಿತು; ಹೇಗೆ ಎಂದರೆ ಈ ಆತ್ಮ ನಿಕ್ಷೇಪವೇ ನನಗೆ ಮೋಕ್ಷ, ಇದಕ್ಕಿಂತ ಬೇರೆ ಮೋಕ್ಷ ಇಲ್ಲ. ಆದುದರಿಂದ ಅಕಿಞ್ಚನನಾಗಿ ಬೇರೆಗತಿಯಿಲ್ಲದ ನಾನು, ಶ್ರೀಮನ್ನಾರಾಯಣನು ಈ ವ್ಯಾಜ ಮಾತ್ರದಿಂದ ಎಲ್ಲಾ ಪ್ರಕಾರದಿಂದಲೂ ಖಂಡಿತವಾಗಿ ನನ್ನನ್ನು ರಕ್ಷಿಸುತ್ತಾನೆ. "ಓ ಲಕ್ಷ್ಮಿಯೊಡಗೂಡಿದ ನಾರಾಯಣನೇ ! ನೀನೇ ನನಗೆ ರಕ್ಷಕನಾಗಬೇಕು. ನಿನಗೆ

ಇನ್ನು ಮುಂದೆ ಪ್ರಾತಿಕೂಲ್ಯವನ್ನು ಮಾಡುವುದಿಲ್ಲ. ಅನುಕೂಲನಾಗಿಯೇ ನಡೆದು ಕೊಳ್ಳುತ್ತೇನೆ" ಎಂದು ಅನುಸನ್ಧಾನಮಾಡಿ—ಮನಸ್ಸಿನಲ್ಲಿ ನೆನಪುಮಾಡಿ ತನ್ನನ್ನು ಶ್ರೀಮನ್ನಾರಾಯಣನ ಕಮಲದಂತಿರುವ ಪಾದಗಳಲ್ಲಿ ಸಭರವಾಗಿ—ಅತಿಶಯ ದೊಡನೆ (ಜವಾಬ್ದಾರಿಯೊಡನೆ) ಇಟ್ಟು ನಿರ್ಭರನಾಗಿ, ಅಂದರೆ ಇನ್ನು ತನ್ನನ್ನು ಕಾಪಾಡಿಕೊಳ್ಳುವ ಹೊರೆ ತನ್ನದಲ್ಲ ಎಂಬ ಭಾವನೆಯುಳ್ಳವನಾಗಿ, ನಿರ್ಭಯ ನಾಗಿ—ಹೆದರಿಕೆ ಇಲ್ಲದವನಾಗಿ, ನಿಸ್ಸಂಶಯನಾಗಿ—ಸಂದೇಹವಿಲ್ಲದವನಾಗಿ ಸಂತೋಷ ಪಡೆದ ಮನಸ್ಸುಳ್ಳವನಾಗಿ ಇರುತ್ತೇನೆ ಎಂದು ಅನುಸನ್ಧಾನಮಾಡಬೇಕು. ಇದು ಸ್ಥೂಲವಾದ ನಮನದ ಅರ್ಥ. ಇದನ್ನು ಅಂಗ ಉಪಾಂಗಗಳೊಡನೆ ಹೇಳಿ ಯಾಯಿತು.

**ಪೂರ್ಣಮಙ್ಗೈರುಪಾಙ್ಗೈಶ್ಚ ನಮನಂ ತೇಪ್ರಕೀರ್ತಿತಮ್ ।**
**ಸ್ಥೂಲೋಽಯಂ ನಮಸಸ್ತ್ವಾರ್ಥ ಸೂಕ್ಷ್ಮಮನ್ಯನ್ನಿಶಾಮಯ ॥**

'ಇದಕ್ಕೆ ಬೇರೆಯಾದ ಸೂಕ್ಷ್ಮವಾದ ಅರ್ಥವನ್ನು ಹೇಳುತ್ತೇನೆ ಕೇಳು' ಎನ್ನುತ್ತಾರೆ. 'ನಮಃ' ಎಂಬಲ್ಲಿ ಎರಡು ಅಕ್ಷರಗಳು ಇವೆ. 'ನ' ಎಂಬುದೊಂದು, 'ಮ' ಎಂಬುದೊಂದು. ಇವೆರಡರ ಅರ್ಥವನ್ನು ಹೇಳುತ್ತಾರೆ.

**ಚೇತನಸ್ಯಯದಾಮಮ್ಯಂ ಸ್ವಸ್ಮಿನ್ ಸ್ವೀಯೇಚವಸ್ತುನಿ ।**
**ಮಮೇತ್ಯಕ್ಷರ ದ್ವಂದ್ವಂ ತದಾ ಮಮ್ಯ ಸ್ಯ ವಾಚಕಮ್ ॥**

ಚೇತನನಿಗೆ ಯಾವಾಗ ಮೌಢ್ಯದೆಶೆಯಲ್ಲಿ—ತಿಳಿವಳಿಕೆ ಇಲ್ಲದಿರುವಿಕೆಯ ಅವಸ್ಥೆ ಯಲ್ಲಿ ತನ್ನಲ್ಲೂ, ತನಗೆ ಸೇರಿದ ಮನೆ, ಭೂಮಿ, ನೆಲ ಮುಂತಾದವಲ್ಲಿ, ಮಮ್ಯಂ —ನಾನು ನನಗಾಗಿ ಇದ್ದೇನೆ ; ಇವೂಕೂಡ ನನಗೆ ಸಂಬಂಧ ಪಟ್ಟವು ಎಂಬ ಅಭಿಮಾನ ವಿಶೇಷವು ಉಂಟಾಗುತ್ತದೋ ಆವಾಗ 'ಮಮ' ಎಂಬ ಅಕ್ಷರದ್ವಂದ್ವವು ಮಮ್ಯಕ್ಕೆ ವಾಚಕವಾಗುತ್ತದೆ ವಿಪರೀತವಾದ ಅಹಙ್ಕಾರ ಮಮಕಾರಕ್ಕೆ ವಾಚಕವಾಗುತ್ತದೆ. ಇದನ್ನೇ ವಿವರಿಸುತ್ತಾ ಅರ್ಥವನ್ನು ಹೇಳುತ್ತಾರೆ.

**ಅನಾದಿ ವಾಸನಾರೂಢ ಮಿಥ್ಯಾಜ್ಞಾನ ನಿಬನ್ಧನಾ ।**
**ಆತ್ಮಾತ್ಮೀಯ ಪದಾರ್ಥಸ್ಥಾಯಾ ಸ್ವಾತನ್ತ್ರ್ಯ ಸ್ವತಾಮತಿಃ ।**
**ಮೇನೇತ್ಯೇವಂ ಸಮೀಚೇನ ಬುದ್ಧ್ಯಾ ಸಾತ್ರನಿವಾರ್ಯತೇ ॥**

ಬಹಳ ಕಾಲದಿಂದ ಬೆಳೆದು ಬಂದಿರುವ ಯಾವ ಮಿಥ್ಯಾಜ್ಞಾನವುಂಟೋ ಅದ ರಿಂದ ಉಂಟಾದ ಆತ್ಮವಿಷಯವಾಗಿಯೂ ಹಾಗೆಯೇ ಆತ್ಮೀಯ-ತನಗೆಸೇರಿದ ವಸ್ತುಗಳ ವಿಷಯವಾಗಿಯೂ ಇರುವ 'ನಾನು ಸ್ವತಂತ್ರ-ನಾನು ನನಗಾಗಿ,

ಇವೂಕೂಡ ನನಗೆ ಸಂಬಂಧಪಟ್ಟವು ಎಂಬ ಸ್ವಾತಂತ್ರ್ಯಬುದ್ಧಿ, ಸ್ವಶೇಷತ್ವ ಬುದ್ಧಿಯೂ ಕೂಡ ಸಮೀಚೀನ ಬುದ್ಧಿಯಿಂದ ತಡೆಯಲ್ಪಡುತ್ತದೆ.

ಸಮೀಚೀನ ಬುದ್ಧಿಯನ್ನು ಸ್ಪಷ್ಟಪಡಿಸುತ್ತಾರೆ :

ನಾಹಂ ಮಮ ಸ್ವತನ್ತ್ರೋಽಹಂ ಸಾಸ್ಮೀತ್ಯಸ್ಯಾರ್ಥ ಉಚ್ಯತೇ ।
ನಮೇದೇಹಾದಿಕಂ ವಸ್ತು ಸಶೇಷಃ ಪರಮಾತ್ಮನಃ ।
ಇತಿ ಬುಧ್ಯಾ ನಿವರ್ತನ್ತೇ ತಾಸ್ತಾಸ್ಸ್ವೀಯಾ ಮನೀಷಿಕಾಃ ॥

ನಾನು ನನಗಾಗಿ ಅಲ್ಲ, ನಾನು ಸ್ವತಂತ್ರನಲ್ಲ, ದೇಹವೇ ಮೊದಲಾದ ವಸ್ತುಗಳೂ ನನಗಲ್ಲ. ನಾನು ನನ್ನ ಶರೀರವೇ ಮೊದಲಾದವೂ ಪರಮಾತ್ಮನಿಗೆ ಶೇಷಭೂತವಾದವು. ಹೀಗೆಂಬುದು ನಮಸ್ಸಿನ ಅರ್ಥ, ಈ ಬುದ್ಧಿಯಿಂದ, ತಾನು ಸ್ವತಂತ್ರನೆಂಬ ಬುದ್ಧಿ, ತನಗೆ ಸಂಬಂಧಪಟ್ಟವೆಂಬ ಬುದ್ಧಿ ಇವೆಲ್ಲಾ ಹಿಂತಿರುಗುತ್ತವೆ.

ಅನಾದಿವಾಸನಾಜಾತೈರ್ಬೋಧೈ ಸ್ತೈಸ್ತೈರ್ವಿಕಲ್ಪಿತೈಃ ।
ರೂಷಿತಂ ಯದ್ದೃಢಂ (ಚಿತ್ತಂ) ತತ್ತತ್ಸ್ವಾತನ್ತ್ರ್ಯಸ್ವತ್ವಧೀಮಯಮ್ ॥
ತತ್ತದ್ವೈಷ್ಣವ ಸಾರ್ವಾ(ರ್ಥ್ಯ) ತ್ಮ್ಯಪ್ರತಿಬೋಧ ಸಮುತ್ಥಯಾ ।
ನಮಇತ್ಯೇತಯಾ ವಾಚಾ ನನ್ವಾ ಸ್ವಸ್ಮಾದ ಪೋಹ್ಯತೇ ॥

'ಮೇನ=ನನಗೆ ಅಲ್ಲ' ಎಂಬ ಬುದ್ಧಿಯಿಂದ ವಿಪರೀತ ಬುದ್ಧಿಯು ತಳ್ಳಲ್ಪಟ್ಟರೂ-ನಿವರ್ತಿತವಾದರೂ ನಮಶ್ಶಬ್ದಕ್ಕೆ ನಿವರ್ತಕತ್ವವು ಬರುವುದಿಲ್ಲ. ಆದುದರಿಂದ 'ನಮಮೇತಿಚಶಾಶ್ವತಮ್' ಎಂದು ಹೇಳುವ ಅದಕ್ಕೆ ಸಾರತ್ವವು ಹೇಗೆ ? ಎಂಬ ಸಂದೇಹವುಂಟಾದರೆ ಹೇಳುತ್ತಾರೆ : "ಅನಾದಿವಾಸ ನಾಜಾತೈಃ" ಎಂಬುದಾಗಿ ಅನಾದಿಯಾದ ವಾಸನೆಯಿಂದ ಉಂಟಾದಕೆಲವುವೇಳೆ ಸ್ವಾತಂತ್ರ್ಯವಿಷಯುವಾಗಿಯೂ, ಕೆಲವುವೇಳೆ ಅನ್ಯವಿಷಯುವಾಗಿಯೂ ಆ ಆ ತಿಳವಳಿಕೆಯಿಂದ ದೃಢವಾಗಿಅಂಟಲ್ಪಟ್ಟ (ಸ್ವಾತಂತ್ರ್ಯ ಸ್ವತ್ವಧೀಮಯಮ್=ಸ್ವಾರ್ಥದಲ್ಲಿ ಮಯಟ್ ಪ್ರತ್ಯಯ ಬಂದಿದೆ,) ಆ ಆ ಪದಾರ್ಥಗಳ ಜ್ಞಾನವು ವಿಷ್ಣು ಸರ್ವಾತ್ಮಕ, ಸರ್ವಶರೀರಕ, ಸರ್ವಶೇಷಿ ಎಂಬ ಜ್ಞಾನದಿಂದ ನೀಗಲ್ಪಡುತ್ತದೆ, 'ನಮ' ಎಂಬ ಪದವೇ ಸ್ವಾರ್ಥವನ್ನು ತಿಳಿಸುವ ಮೂಲಕ ವಿಪರೀತವಾದ ಅಹಙ್ಕಾರ ಮಮಕಾರಗಳನ್ನು ಹೋಗಲಾಡಿಸಲು ಸಮರ್ಥವಾಗುತ್ತದೆ.

ಇತಿತೇಸೂಕ್ಷ್ಮ ಉದ್ದಿಷ್ಟಃಪರಮನ್ಯನ್ನಿಶಾಮಯ ।

ಹೀಗೆ ನಿನಗೆ ಸೂಕ್ಷ್ಮವಾದ ಅರ್ಥವನ್ನು ಹೇಳಿದ್ದಾಯಿತು. ಎನ್ನುತ್ತಾರೆ. ಮೂರನೆಯದಾದ ಶ್ರೇಷ್ಠವಾದ ಅರ್ಥವನ್ನು ಹೇಳುವುದಕ್ಕಾಗಿ ಶಿಷ್ಯನನ್ನು ತನ್ನ ಕಡೆಗೆ ಗಮನ ಕೊಡುವಂತೆ ಮಾಡಲು ಪರಮನ್ಯನ್ನಿಶಾಮಯ—ಬೇರೆಯಾದ ಪರಾರ್ಥವನ್ನು ಹೇಳುತ್ತೇನೆ ಕೇಳು ಎನ್ನುತ್ತಾರೆ.

ಪನ್ಥಾನಕಾರ ಉದ್ದಿಷ್ಟೋ ಮಃಪ್ರಧಾನ ಉದೀರ್ಯತೇ ।
ವಿಸರ್ಗಃ ಪರಮೇಶಸ್ತು ತತ್ರಾರ್ಥೋಽಯಂ ನಿರುಚ್ಯತೇ ॥
ಅನಾದಿಃ ಪರಮೇಶೋಽಯಂ ಶಕ್ತಿಮಾನ್ ಪುರುಷೋತ್ತಮಃ ।
ತತ್ಪ್ರಾಪ್ತಯೇ ಪ್ರಧಾನೋಽಯಂ ಪನ್ಥಾನಮನ ನಾಮವಾನ್ ।
ಇತಿತೇ ತ್ರಿವಿಧಃ ಪ್ರೋಕ್ತೋ ನಮಶ್ಶಬ್ದಾರ್ಥ ಈದೃಶಃ ॥

'ನಮಃ' ಎಂಬಲ್ಲಿ ನಕಾರಕ್ಕೆ ಪಂಥಾಃ—ದಾರಿ ಎಂದರ್ಥ. ಮಕಾರಕ್ಕೆ ಪ್ರಧಾನ—ಮುಖ್ಯ ಎಂದರ್ಥ, ವಿಸರ್ಗಕ್ಕೆ ಈಶ್ವರ ಎಂದರ್ಥ. ತತ್ರ—ನಮಸ್ಸಿನ ನಕಾರ ಮಕಾರ ವಿಸರ್ಗಗಳಲ್ಲಿ ಅಯಮರ್ಥಃನಿರುಚ್ಯತೇ—ಈ ಹೇಳುವ ವಾಕ್ಯಾರ್ಥವು ವರ್ಣವಿಭಾಗಮಾಡಿ—ಒಡೆದು ಹೇಳಲ್ಪಡುತ್ತದೆ.

ಈ ಯೋಜನೆಯಲ್ಲಿ ವರ್ಣಭೇದದಿಂದ ಭಿನ್ನಾರ್ಥವುಳ್ಳ ನಮಸ್ಸಿಗೆ ವಾಕ್ಯಾರ್ಥವನ್ನು ಹೇಳುತ್ತಾರೆ. 'ಅನಾದಿಃ—ಮೊದಲಿಲ್ಲದವನು' ಎಂದು ಆರಂಭಿಸಿ, ಈ ಸರ್ವೇಶ್ವರನು ಶ್ರೀಗೆ ಗಂಡನು. ಆ ಈತನು ತನ್ನನ್ನು ಹೊಂದಲು 'ನಮನ' ಎಂಬ ಹೆಸರುಳ್ಳವನು ನಮಶ್ಶಬ್ದವಾಚ್ಯನಾದವನು. ಪ್ರಧಾನವಾದ ದಾರಿ ಉಪಾಯ. ಮೊದಲಿಲ್ಲದೆಯೂ, ಎಲ್ಲಕ್ಕೂ ಒಡೆಯನಾಗಿಯೂ, ಸಮರ್ಥನಾಗಿಯೂ ಇರುವ ಯಾವ ಪುರುಷ ಶ್ರೇಷ್ಠನಾದ ವಿಷ್ಣುವುಂಟೋ, ಅವನನ್ನು ಹೊಂದಲೋಸುಗ ಅವನು ಪ್ರಧಾನಉಪಾಯ ಅಥವಾ ಅಯಂನಮನನಾಮವಾನ್—ಸಾಧ್ಯೋಪಾಯವು ಪ್ರಪತ್ತಿಯು ಅವನನ್ನುಹೊಂದಲು ಭಕ್ತ್ಯಾದಿಗಳಿಗಿಂತಲೂ ಪ್ರಧಾನವಾದ ಉಪಾಯವು.

ಪ್ರಪತ್ತಿಯ ತೀರ್ಮಾನವಾದ ಲಕ್ಷಣವನ್ನು ಆಚಾರ್ಯರು ನಿಕ್ಷೇಪರಕ್ಷೆಯಲ್ಲಿ, ಅನನ್ಯ ಸಾಧ್ಯ ಸ್ವಾಭೀಷ್ಟಸಾಧನ ಸಮರ್ಥ ವಶೀಕರಣಂ ಶರಣಾಗತಿಃ—ಮತ್ತಾವುದರಿಂದಲೂ ಸಾಧಿಸಲು ಆಗದ ತನ್ನ ಇಷ್ಟಾರ್ಥವನ್ನು ಸಾಧಿಸಲು ಕಾರಣನಾದ ಸಾಮರ್ಥ್ಯವುಳ್ಳವನನ್ನು ಅಧೀನ ಮಾಡಿಕೊಳ್ಳುವಿಕೆಗೆ ಶರಣಾಗತಿ ಎಂದು ಹೇಳಿದ್ದಾರೆ. ಆದುದರಿಂದ ಈ ಕಾರ್ಯವು ಅವನನ್ನು ನಮ್ಮ ವಶಮಾಡಿ ಇಷ್ಟಾರ್ಥವನ್ನು ಸಾಧಿಸುತ್ತದೆ ಎಂದು ಹೇಳಿದಂತಾಯಿತು.

ಹೀಗೆ ನಮಶ್ಶಬ್ದದ ಅರ್ಥವು ಮೂರುವಿಧವಾಗಿ ಹೇಳಲ್ಪಟ್ಟಿತು ಎನ್ನುತ್ತಾರೆ. ಹೀಗೇ ಬೇರೆ ಬೇರೆ ಶಾಸ್ತ್ರಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟ ಶಾಸ್ತ್ರಾರ್ಥಗಳಿಗೆ ಮೂಲವಾದದ್ದು.

[1]ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಎಂಬ ಗೀತಾಚಾರ್ಯನ ಸಂಕ್ಷೇಪವಾದ ವಾಣಿ. ಇದಕ್ಕೆ ಶ್ರೀ ಭಗವದ್ರಾಮಾನುಜರು ಹೇಳಿರುವ ಅರ್ಥವನ್ನು ಅವರ ಮಾತಿನಿಂದಲೇ ಹೇಳಿ ವಿವರಿಸೋಣ.

ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ರೂಪಾನ್ ಸರ್ವಾನ್ ಧರ್ಮಾನ್ ಪರಮ ನಿಶ್ಶ್ರೇಯಸ ಸಾಧನ ಭೂತಾನ್ ಮದಾರಾಧನತ್ವೇನ ಅತಿಮಾತ್ರಪ್ರೀತ್ಯಾ ಯಥಾಧಿಕಾರಂ ಕುರ್ವಾಣಏವೋಕ್ತರೀತ್ಯಾ ಫಲಕರ್ಮಕರ್ತೃತ್ವಾದಿ ಪರಿತ್ಯಾಗೇನ ಪರಿತ್ಯಜ್ಯ ಮಾಮೇಕಮೇವ ಕರ್ತಾರಮಾರಾಧ್ಯಂ ಪ್ರಾಪ್ಯಮುಪಾಯಾಚಾನುಸಂಧತ್ಸ್ವ–ಏಷಏವಸರ್ವಧರ್ಮಾಣಾಂ ಶಾಸ್ತ್ರೀಯ ಪರಿತ್ಯಾಗ ಇತಿ.

[2]ನಿಶ್ಚಯಂ ಶೃಣುಮೇತತ್ರ ತ್ಯಾಗೇಭರತಸತ್ತಮ ।
ತ್ಯಾಗೋಹಿ ಪುರುಷವ್ಯಾಘ್ರ ತ್ರಿವಿಧಸ್ಸಂ ಪ್ರಕೀರ್ತಿತಃ ॥ ಇತ್ಯಾರಭ್ಯ
[3]ಸಂಗಂತ್ಯಕ್ತ್ವಾಫಲಂ ಚೈವ ಸತ್ಯಾಗ ಸ್ಸಾತ್ವಿಕೋಮತಃ ।
[4]ನಹಿದೇಹಭೃತಾ ಶಕ್ಯಂ ತ್ಯಕ್ತುಂಕರ್ಮಾಣ್ಯಶೇಷತಃ ।
ಯಸ್ತುಕರ್ಮಫಲತ್ಯಾಗೀ ಸತ್ಯಾಗೀತ್ಯಭಿಧೀಯತೇ ॥

ಇತ್ಯಧ್ಯಾಯಾದೌ ಸುದೃಢಮುಪಪಾದಿತಮ್. ಅಹಂತ್ವಾಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ. ಏವಂ ವರ್ತಮಾನಂ ತ್ವಾಂಮತ್ಪ್ರಾಪ್ತಿ ವಿರೋಧಿಭ್ಯೋಽನಾದಿ ಕಾಲಸಂಚಿತಾನಂತಾಕೃತ್ಯಾಕರಣ ಕೃತ್ಯಾಕರಣರೂಪೇಭ್ಯಸ್ಸರ್ವೇಭ್ಯಃ ಪಾಪೇಭ್ಯೋ ಮೋಕ್ಷಯಿಷ್ಯಾಮಿ. ಮಾಶುಚಃ ಶೋಕಂ ಮಾಕೃಥಾಃ

**ಅವತಾರಿಕೆ :** ಹೀಗೆ ವಿಸ್ತಾರವಾಗಿಯೂ ಸಂಗ್ರಹವಾಗಿಯೂ ಹೇಳಲ್ಪಟ್ಟ ಕರ್ಮಯೋಗ ಮೊದಲಾದ ಮೂರಕ್ಕೂ ಸಮುದಾಯವಾಗಿ ಬೇಕಾದ ಮುಖ್ಯ ಸಾರವಾದ ನೆನಪನ್ನು (ಫಲತ್ಯಾಗ, ಮಮತಾತ್ಯಾಗ, ಕರ್ತೃತ್ವತ್ಯಾಗ) ತೋರಿಸಿ, ಅದರಿಂದಲೇ ಇವಕ್ಕೆ ಹಿಂದಿನ ಶ್ಲೋಕವಾದ 'ಮನ್ಮನಾಭವ' ಎಂಬುದರಲ್ಲಿ ಹೇಳಿದ–ಭಗವಂತನ ಹತ್ತಿರಕ್ಕೆ ಹೋಗುವುದೆಂಬ–ಇಷ್ಟಕ್ಕೆ ತಡೆಯೆಲ್ಲವೂ ಹೋಗುವುದು ಎಂದು ಹೇಳುತ್ತಾರೆ.

1. ಭಗವದ್ಗೀತೆ. ೧೮-೬೬.
2. ಭಗವದ್ಗೀತೆ. ೧೮–೪.
3. ಭಗವದ್ಗೀತೆ. ೧೮-೯.
4. ಭಗವದ್ಗೀತೆ. ೧೮–೧೧

ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಎಂಬುದಾಗಿ ಹೇಳಲ್ಪಡುವ ಇವು–ಬಹಳ ಹೆಚ್ಚಾದ ಫಲವಾದ ಮೋಕ್ಷಕ್ಕಾಗಿ ಮಾಡಬೇಕಾದವು. ಇವನ್ನು ಮೆಟ್ಟಲು ಮೆಟ್ಟಲಾಗಿ ಕ್ರಮವಾಗಿಯೋ ಅಥವಾ ನೇರವಾಗಿಯೋ ಮಾಡಬಹುದು.

ಈ ಎಲ್ಲಾ ಧರ್ಮಗಳಲ್ಲಿ ನಿನಗೆ ಯಾವುದು ಮಾಡಲು ಸಾಧ್ಯವೋ ಅದನ್ನು ನನ್ನ ಪೂಜೆ ಎಂದು ಹೆಚ್ಚಾದ ಪ್ರೀತಿಯಿಂದ ಮಾಡುತ್ತಾ, '[1]ನಿಶ್ಚಯಂ ಶೃಣುಮೇ ತತ್ರ' ಎಂದು ಆರಂಭಿಸಿ 'ಸತ್ಯಾಗೀತ್ಯಭಿಧೀಯತೇ' ಎಂದು ಈ ಅಧ್ಯಾಯದ ಮೊದಲಲ್ಲಿ ಹೇಳಿರುವ ರೀತಿ [2]ಮೂರುಸಂಗತಿಗಳನ್ನು ಬಿಡಬೇಕು. ಫಲ ಕರ್ಮ ಕರ್ತೃತ್ವಾದಿ ಪರಿತ್ಯಾಗವೇ ಈ ಮೂರು ಸಂಗತಿಗಳು. [3]ನನ್ನೊಬ್ಬನನ್ನೇ ಎಲ್ಲಾ ಕೆಲಸಗಳನ್ನೂ ಮಾಡುವವನನ್ನಾಗಿಯೂ, ಎಲ್ಲಾ ಕೆಲಸಗಳಿಂದಲೂ ಸಂತೋಷಪಡಿಸಲು ತಕ್ಕವನನ್ನಾಗಿಯೂ ಹೊಂದಲು ತಕ್ಕವನನ್ನಾಗಿಯೂ [4]ಎಲ್ಲಾ ಸುಖಗಳನ್ನೂ ಕೊಡುವವನನ್ನಾಗಿಯೂ ನೆನೆ. ಈ ಸಂಗತಿಗಳು ಈ ಅಧ್ಯಾಯದ ಮೊದಲಿನಲ್ಲಿ ಚೆನ್ನಾಗಿ ಹೇಳಲ್ಪಟ್ಟಿದೆ. ಈ ರೀತಿ ಇರುವ ನಿನಗೆ ನನ್ನನ್ನುಹೊಂದುವುದಕ್ಕೆ ತಡೆಯಾಗಿರುವ–ಬಹಳಕಾಲದಿಂದ ಮಾಡಲ್ಪಟ್ಟ–ಲೆಕ್ಕವಿಲ್ಲದ, 'ಮಾಡು' ಎಂದು ಹೇಳಿದ್ದನ್ನು ಬಿಡುವುದು, 'ಮಾಡಬೇಡ' ಎಂಬುದನ್ನು ಮಾಡುವುದು ಎಂಬ ಎರಡು ವಿಧವಾದ ಎಲ್ಲಾ

1. ಭಗವದ್ಗೀತೆ, ೧೮–೪, ೧೧.

2. ಮೂರನ್ನೂ ಇದರ ಫಲವನ್ನು ಬಿಡುವುದು ಒಂದು. ಭಗವಂತನಿಗೆ ಸೇವಕನಾದವನು ಐಶ್ವರ್ಯ ಮೊದಲಾದವನ್ನು ಪೂರ್ತಿಯಾಗಿ ಬಿಡಬೇಕು ; ಮೋಕ್ಷವನ್ನೂ ತನಗಾಗಿ ಎಂದೂ ಅಪೇಕ್ಷಿಸಕೂಡದೆಂದು ತಾತ್ಪರ್ಯ.

3. ಒಬ್ಬನನ್ನೇ : ಬೇರೆಧರ್ಮಗಳನ್ನು ಮಾಡುವವನು, ತಾನು ಅವುಗಳನ್ನು ಮಾಡುವವನನ್ನಾಗಿಯೂ, ಇಂದ್ರನೇಮೊದಲಾದವರನ್ನು ಸಂತೋಷ ಪಡಿಸುವುದಾಗಿಯೂ, ಸುವರ್ಗ ಮೊದಲಾದವನ್ನು ಪಡೆಯಲುತಕ್ಕವೆಂದೂ, ತಾನು ಮಾಡುವ ಕರ್ಮಗಳು ಅವುಗಳಿಗೆ ಸಾಧನವಾಗಿಯೂ ನೆನೆಯುತ್ತಾನೆ. ಈ ರೀತಿ ಅರ್ಜುನನು ನೆನೆಯಕೂಡದೆಂದೂ, ಈ ನಾಲ್ಕೂ ಭಗವಂತನೇ ಎಂದೂ ನೆನೆಯಬೇಕೆಂದು ಅಭಿಪ್ರಾಯ.

4. ಒಡನೆಯೇ ನಾಶವಾಗುವ–ಒಬ್ಬನಿಂದ ಮಾಡಲ್ಪಟ್ಟ–ಯಾಗ. ಧ್ಯಾನ ಮೊದಲಾದ ಕರ್ಮಗಳು ಕಾಲಕಳೆದು ಬರುವ ಫಲಗಳನ್ನು ಕೊಡಲಾರವು. ಮೊದಲಿಂದ ಇರುವವನೂ, ಸ್ಥಿರವಾಗಿರುವವನೂ ಎಲ್ಲವನ್ನು ಅರಿತವನೂ, ಎಣಿಸಿದಂತೆ ನಡೆಯಿಸಲು ಸಮರ್ಥನೂ, ಕೇಳಿದ್ದನ್ನು ಕೊಡುವವನೂ, ಎಲ್ಲಾ ಕರ್ಮಗಳಿಂದಲೂ ಸಂತೋಷಪಡುವವನೂ ಆದ ಭಗವಂತನೇ ಎಲ್ಲಾಕರ್ಮಗಳಿಗೂ ಫಲವನ್ನು ಕೊಡುತ್ತಾನೆ, ಹೀಗೆಂದು ನೆನೆಯಬೇಕು—ಭಾವಿಸಬೇಕೆಂದು ತಾತ್ಪರ್ಯ.

ಪಾಪಗಳೆನ್ನೂ [1]ನಾನು ಹೋಗುವಂತೆ ಮಾಡುತ್ತೇನೆ. ನೀನು ಸ್ವಲ್ಪವೂ [2]ದುಃಖಿಸಬೇಡ. ಕೆಳಗೆ ಹೇಳಿದ ಅರ್ಥದಲ್ಲಿ ಕೆಲವು ಪ್ರಶ್ನೆಗಳು ಉಂಟಾಗುತ್ತವೆ. ಅದಕ್ಕಾಗಿ ಭಾಷ್ಯಕಾರರು ಎರಡನೆಯ ಅರ್ಥವನ್ನು ಹೇಳುತ್ತಾರೆ.

ಆ ಪ್ರಶ್ನೆಗಳು ಯಾವವೆಂದರೆ :

೧. ಕೆಳಗೆ ಭಗವಂತನು ಕರ್ಮಯೋಗ ಮೊದಲಾದ ಮೂರನ್ನೂ ಹೇಳಿದನು· ಆ ಮೇಲೆ ಬಹಳ ಶ್ರೇಷ್ಠ ರಹಸ್ಯವಾಗಿಯೂ ಗೀತಾ ಶಾಸ್ತ್ರಕ್ಕೆ ಮುಖ್ಯ ತಾತ್ಪರ್ಯವಾದ ಭಕ್ತಿಯೋಗವನ್ನೂ ಖಂಡಿತವಾಗಿಯೂ ಮಾಡೆಂದು ಹೇಳಿದನು. ಅನಂತರ ಮೂರಕ್ಕೂ ಸಮಾನವಾದ ಮೂರು ಸಂಗತಿಗಳನ್ನು ಬಿಡುವುದು ಎಂಬುದನ್ನು ಮತ್ತೆ ಏಕೆ ಹೇಳಬೇಕು ?

೨. ಈ ಶ್ಲೋಕದಲ್ಲಿ "ಮಾಶುಚಃ–ದುಃಖಿಸಬೇಡ" ಎಂದು ಹೇಳಿದೆ. ಇದಕ್ಕೆ ಮೊದಲು ಅರ್ಜುನನಿಗೆ ಎರಡು ಸಲ ದು:ಖಬಂದಿದೆ. ಮೊದಲಿನ ದುಃಖ ಬಂಧುಗಳು ಸತ್ತು ಹೋಗುತ್ತಾರೆಂಬುದು, ಅದು ಆತ್ಮವನ್ನೂ ಶರೀರವನ್ನೂ ಕುರಿತು ಭಗವಂತನು ಹೇಳಿದ್ದರಿಂದ ಅವನ ಮನಸ್ಸು ನಿರ್ಮಲವಾಗಿ ಅದು ಇದ್ದ ಜಾಗ ತಿಳಿಯದೆ ಹೋಯಿತು.

ದೈವೀ ಸಂಪತ್ತು ಆಸುರೀಸಂಪತ್ತು ಇವನ್ನು ಕೇಳಿದಾಗ ತಾನು ಯಾವ ಪಂಗಡಕ್ಕೆ ಸೇರಿದವನೆಂದು ಒಂದು ದುಃಖ ಉಂಟಾಯಿತು, ಆವಾಗ ಭಗವಂತನು :

**[3]ದೇವೀ ಸಂಪದ್ವಿಮೋಕ್ಷಾಯ ನಿಬನ್ಧಾಯಾಸುರೀಮತಾ ।**
**ಮಾಶುಚಸ್ಸಂಪದಂ ದೈವೀಂ ಅಭಿಜಾತೋಽಸಿ ಪಾಂಡವ ॥**

1. ನಾನು–ಫಲವನ್ನು ಕೊಡುವುದಕ್ಕೆ ತಕ್ಕಂತೆ ಎಲ್ಲವನ್ನೂ ತಿಳಿದವನಾಗಿಯೂ, ಯಾವುದನ್ನೂ ಮಾಡಲು ಶಕ್ತಿಯುಳ್ಳವನಾಗಿಯೂ, ಹೆಚ್ಚಾದ ದಯೆಉಳ್ಳನಾನು.

2. ಹಿಂದಿನ ಶ್ಲೋಕದಲ್ಲಿ ಭಗವಂತನನ್ನು ಹೊಂದುವದು ಹೇಳಲ್ಪಟ್ಟಿತು. ಈ ಶ್ಲೋಕವು ಅದಕ್ಕೆ ತಡೆಗಳು ಹೋಗುವುದನ್ನು ಹೇಳುತ್ತದೆ.

3. ಗೀತೆ ೧೬–೫. **ದೈವೀಸಂಪತ್** — ದೇವಹುಟ್ಟು, ಅದೆಂದರೆ ಭಗವಂತನ ಕಟ್ಟಳೆಯಂತೆ ನಡೆಯುವುದು; ಇದು ದೊಡ್ಡ ಸಂಪತ್ತು, ಈವಾಗ ಇರುವ ಸಂಸಾರವನ್ನು ಹೋಗಿಸಿ ಭಗವಂತನ ಹತ್ತಿರ ಹೋಗುವುದಕ್ಕೆ ಮೆಟ್ಟಲು ಮೆಟ್ಟಲಾಗಿ ಸಹಾಯವಾಗುವುದು.

**ಆಸುರೀಸಂಪತ್ತು** — ಅಸುರ ಹುಟ್ಟು(ಭಗವಂತನ ಅಪ್ಪಣೆಯನ್ನುಮೀರಿನಡೆಯುವುದು) ಅಧೋಗತಿಯನ್ನುಂಟುಮಾಡುತ್ತದೆ. ಈವಾಗ ಇರುವ ಸ್ಥಿತಿಗಿಂತ ಇನ್ನೂ ಕೆಳಗೆ ಕೆಳಗೇ ಹೋಗುವಂತೆ ಮಾಡುವುದು.

ಅಪ್ಪಾ ಅರ್ಜುನ ! ನೀನು ದೇವ ಹುಟ್ಟಿನಲ್ಲಿ ಹುಟ್ಟಿದವನು, ದೊಡ್ಡ ಧರ್ಮಿಷ್ಠನಾದ ಪಾಂಡುಮಹಾರಾಜನ ಮಗನಲ್ಲವೆ ? ಎಂದನು.

ಈ ಮಾತನ್ನು ಕೇಳಿದಾಗ ಅರ್ಜುನನಿಗೆ ಆ ದುಃಖ ಹೋಯಿತು.

ಈವಾಗ ಅವನಿಗೆ ಯಾವ ದುಃಖ ಬಂದಿತು ? "ಏತಕ್ಕೆ ದುಃಖ ಪಡಬೇಡ" ಎಂದು ಭಗವಂತನು ಹೇಳುತ್ತಾನೆ ? ಹಿಂದೆ ಹೇಳಿದ ವಿಷಯಗಳು ಇವನಿಗೆ ತಿಳಿಯಲಿಲ್ಲವೇ ? ಅವುಗಳನ್ನು ಮಾಡಲು ಶಕ್ತಿ ಇ ? ಅವನು ಹೇಳಿದ ಕರ್ಮ ಯೋಗ ಮೊದಲಾದವುಗಳಲ್ಲಿ ಇದು ತಾನೆ ಮುಖ್ಯವಾದದೆಂದು ತೀರ್ಮಾನಿಸಲು ಆಗಲಿಲ್ಲವೆ ?

ಅಲ್ಲದೆ ಫಲವು ಸಿಕ್ಕುವುದೋ ಇಲ್ಲವೋ ಎಂಬ ಸಂದೇಹವೋ? ಅವನು ಶ್ರೇಷ್ಠನಾದ ಕ್ಷತ್ರಿಯ ಮತ್ತು ಧರ್ಮಿಷ್ಠ, ಹೇಳಿದ್ದನ್ನೆಲ್ಲ ಅರಿಯತಕ್ಕವನು, ಎಲ್ಲಾ ಒಳ್ಳೆಯ ಕರ್ಮಗಳನ್ನೂ ಮಾಡತಕ್ಕವನು, ಇದು ಮುಖ್ಯವಾದದ್ದೆಂದು ತೀರ್ಮಾನಮಾಡುವವನು, ಭಗವಂತನಲ್ಲಿ ಹೆಚ್ಚಾದ ನಂಬಿಕೆಯುಳ್ಳವನು, ಆದುದ ರಿಂದ ಇವೆಲ್ಲಾ ಅವನಿಗೆ ಉಂಟಾಗವು. ಬೇರೆ ಯಾವ ದುಃಖವೆಂದರೆ ಭಕ್ತಿಯೋಗ ಮಾಡುವುದರಲ್ಲೂ, ಅದರ ಫಲ ಸಿಕ್ಕುವುದರಲ್ಲೂ, ಬಹಳ ಕಾಲವಾದ ಮೇಲೆ ಅದರ ಫಲ ದೊರಕುವುದರಿಂದಲೂ, ಬೇಗನೆ ಭಗವಂತನನ್ನು ಹೊಂದಬೇಕೆಂಬ ಹಂಬಲ ದಿಂದಲೂ ಅವನಿಗೆ ಈ ದುಃಖವು ಉಂಟಾಯಿತು. ಅದಕ್ಕಾಗಿ ಲಘುವಾದ, ಬೇಗನೆ ಫಲವನ್ನು ಕೊಡುವ ಶರಣಾಗತಿಯೆಂಬ ಉಪಾಯವನ್ನು ಹೇಳುತ್ತಾನೆ, ಎಂದು ಆಚಾರ್ಯರು ಹೇಳುತ್ತಾರೆ.

ಈ ಮಾತು ಈ ಸಂದರ್ಭಕ್ಕೆ ಹೊಂದುತ್ತದೆ.

**ಅಥವಾ ಸರ್ವಪಾಪ ವಿನಿರ್ಮುಕ್ತಾತ್ಮರ್ಥ ಭಗವತ್ಪ್ರಿಯ ಪುರುಷ ನಿರ್ವತ್ರ್ಯ ತ್ವಾದ್ಭಕ್ತಿಯೋಗಸ್ಯ ತದಾರಂಭ ವಿರೋಧಿ ಪಾಪಾನಾಮಾನಂತ್ಯಾತ್ ತತ್ಪ್ರಾ ಯಶ್ಚಿತ್ತರೂಪೈರ್ಧರ್ಮೈರ ಪರಿಮಿತಕಾಲ ಕೃತ್ಯೈಸ್ತೇಷಾಂ ದುಸ್ತರತಯಾ ಆತ್ಮನೋ ಭಕ್ತಿಯೋಗಾರಂಭಾನರ್ಹತಾ ಮಾಲೋಚ್ಯ ಶೋಚತೋಽರ್ಜುನಸ್ಯ ಶೋಕ ಮಪನು ದನ್ ಶ್ರೀ ಭಗವಾನುವಾಚ. ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಾಂ ಶರಣಂ ವ್ರಜೇತಿ, ಭಕ್ತಿ ಯೋಗಾರಂಭ ವಿರೋಧ್ಯನಾದಿ ಕಾಲಸಂಚಿತಾನಾನಾ ವಿಧಾನಂತ ಪಾಪಾನುಗುಣಾನ್ ತತ್ತತ್ಪ್ರಾಯಶ್ಚಿತ್ತರೂಪಾನ್ ಕೃಚ್ಛ್ರ ಚಾಂದ್ರಾಯಣ ಕೂಶ್ಮಾಂಡ ವೈಶ್ವಾನರ ವ್ರಾತಪತಿ ಪವಿತ್ರೇಷ್ಟಿ ತ್ರಿವೃದಗ್ನಿಷ್ಟೋಮಾದಿಕಾನ್ ನಾನಾ ವಿಧಾನಂತಾನ್ತ್ವಯಾ ಪರಿಮಿತಕಾಲ ವರ್ತಿನಾ ದುರನುಷ್ಠಾನಾನ್ ಸರ್ವಾನ್ ಧರ್ಮಾನ್ ಪರಿತ್ಯಜ್ಯ ಭಕ್ತಿಯೋಗಾರಂಭ ಸಿದ್ಧಯೇ ಮಾಮೇಕಂ ಪರಮ ಕಾರುಣಿಕಮನಾಲೋಚಿತ ವಿಶೇಷಾ ಶೇಷ ಲೋಕಶರಣ್ಯಮಾಶ್ರಿತ ವಾತ್ಸಲ್ಯ**

**ಜಲಧಿಂ ಶರಣಂಪ್ರಪದ್ಯಸ್ವ ಅಹಂ ತ್ವಾ ಸರ್ವ ಪಾಪೇಭ್ಯೋ ಯಥೋದಿತ ಸ್ವರೂಪ ಭಕ್ತ್ಯಾರಂಭ ವಿರೋಧಿಭ್ಯಃ ಸರ್ವೇಭ್ಯಃ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥**

ಅರ್ಜುನ ! ಭಕ್ತಿಯೋಗವನ್ನು ಆರಂಭಿಸುವುದಕ್ಕೆ[1] ತಡೆಯಾದ ಪಾಪಗಳನ್ನು ನೀನು ಇದು ಮೊದಲು ಎಂದು ಇಲ್ಲದೆ ಮಾಡಿರುವೆ. ಅವು ಎಷ್ಟೋ ವಿಧಗಳು, ಅವುಗಳಿಗೆ ಲೆಕ್ಕವಿಲ್ಲ, ಅವುಗಳನ್ನು ನೀಗಿಸಲು ಶಾಸ್ತ್ರದಲ್ಲಿ ಹೇಳಿರುವ ಕೃಚ್ಛ್ರಚಾಂದ್ರಾಯಣ, **ಕೂಶ್ಮಾಂಡ ಹೋಮ, ವೈಶ್ವಾನರೇಷ್ಟಿ, ವ್ರಾತಪತೀಷ್ಟಿ, ಪವಿತ್ರೇಷ್ಟಿ, ತ್ರಿವತ್ ಅಗ್ನಿಷ್ಟೋಮ**–ಇವೇ ಮೊದಲಾದ ಅನೇಕ ವಿಧವಾದ—ಲೆಕ್ಕವಿಲ್ಲದ [2]ಪ್ರಾಯಶ್ಚಿತ್ತಗಳನ್ನು ಮಾಡಬೇಕು, ಅದಕ್ಕೆ ಬಹಳ ಕಾಲಬೇಕು.

ಒಂದು ಜನ್ಮದಲ್ಲಿ [3]ಮಾಡಲು ಸಾಧ್ಯವಿಲ್ಲ. ಮಾಡುವುದೂ ಕಷ್ಟ, ಆದುದರಿಂದ ನೀನು ಅವನ್ನು ಮಾಡಲು ಸಮರ್ಥನಾಗಲಾರೆ. ಅವುಗಳನ್ನು ಮಾಡಿದರೆ ಉಂಟಾಗುವ ಭಕ್ತಿ ನಿನಗೆ ಬರುವುದಕ್ಕೆ ಅವುಗಳನ್ನು ಮಾಡಲಾಗದೆ ದುಃಖಪಡುವ ನೀನು ಅಳತೆ ಮಾಡಲಾಗದ ದಯೆಯುಳ್ಳವನೂ, ತಾರತಮ್ಯವನ್ನು ನೋಡದೆ ಎಲ್ಲಾ ಪ್ರಪಂಚವನ್ನು ಕಾಪಾಡುವವನೂ, ತನ್ನನ್ನು ಹೊಂದಿದವರು ಎಷ್ಟೋ ತಪ್ಪನ್ನು ಮಾಡಿದರೂ ಅವುಗಳನ್ನು ಗಮನಿಸದೆ ಅವರಲ್ಲಿ ಅಳತೆಯಿಲ್ಲದ ಪ್ರೀತಿಯನ್ನು ಮಾಡುವವನೂ ಆದ ನನ್ನನ್ನು[4] ಒಬ್ಬನನ್ನೇ ಶರಣು ಹೋಗು. ಅನಂತರ ನಾನು ಭಕ್ತಿ ಯೋಗಕ್ಕೆ ವಿಘ್ನವನ್ನು ಉಂಟು ಮಾಡುವ ನಿನ್ನ ಎಲ್ಲಾ ಪಾಪಗಳನ್ನೂ

1. ಶ್ಲೋಕದಲ್ಲಿ 'ಎಲ್ಲಾ ಪಾಪಗಳಿಂದಲೂ' ಎಂಬುದಕ್ಕೆ ಭಕ್ತಿಯೋಗವನ್ನು ಮಾಡುವುದು—ಹೊಂದಬೇಕಾದ ಫಲವಾಗಿದೆ. ಆದುದರಿಂದ ಅದಕ್ಕೆ ಅಡ್ಡಿಯನ್ನುಂಟು ಮಾಡುವ ಎಲ್ಲಾ ಪಾಪ ಎಂದು ತಾನೇ ಅರ್ಥ.

2. ಶ್ಲೋಕದಲ್ಲಿ 'ಧರ್ಮ' ಎಂಬ ಪದಕ್ಕೆ ಈ ಯೋಜನೆಯಲ್ಲಿ ಶಾಸ್ತ್ರದಲ್ಲಿ ಪಾಪಗಳಿಗೆ ಪ್ರಾಯಶ್ಚಿತ್ತವಾಗಿ ಹೇಳಿರುವ ಧರ್ಮಗಳು ಎಂದರ್ಥ. 'ಎಲ್ಲಾ ಧರ್ಮಗಳನ್ನೂ' ಎಂದು ಶ್ಲೋಕದಲ್ಲಿ ಹೇಳಿರುವುದಕ್ಕೆ ತಾತ್ಪರ್ಯ–ಅವುಗಳು ಅನೇಕ ವಿಧಗಳು ಎಂದು ಅವುಗಳಿಗೆ ಲೆಕ್ಕವಿಲ್ಲ ಎಂದು.

3. ಈ ಅರ್ಥದಲ್ಲಿ ನಿತ್ಯಗಳಾಗಿಯೂ ನೈಮಿತ್ತಿಕಗಳಾಗಿಯೂ ಇರುವ ಎಲ್ಲಾ ಕರ್ಮಗಳನ್ನೂ ಬಿಡ ಹೇಳಲಿಲ್ಲ. ಮಾಡಲಾಗದ ಪ್ರಾಯಶ್ಚಿತ್ತಗಳನ್ನು ತಾನೆ ಬಿಡಹೇಳಿದ್ದು.

4. ಒಬ್ಬನನ್ನೇ ಎಂದು ಹೇಳಿದ್ದು ಎಲ್ಲಾ ಧರ್ಮಗಳನ್ನೂ ಎಂಬುದಕ್ಕೆ ಎದುರಾಗಿ–ಬದಲಾಗಿ. ಆದುದರಿಂದ ಭಗವಂತನಲ್ಲಿ ಶರಣಾಗತಿ ಮಾಡುವುದು ಒಂದೇ ಎಲ್ಲಾ ವಿಧವಾದ ಪ್ರಾಯಶ್ಚಿತ್ತ ಎಂದು ಅಭಿಪ್ರಾಯ.

ಪ್ರಾಯಶ್ಚಿತ್ತ ಮಾಡದೆಯೇ ಹೋಗಲಾಡಿಸುತ್ತೇನೆ, ನೀನು [1]ದುಃಖಿಸಬೇಡ. ಈ ಯೋಜನೆಯಲ್ಲಿ ಹೇಳಿರುವ ಅರ್ಥ ನಮ್ಮಂತಹವರು ಉದ್ಧಾರವಾಗಲು ಹಾದಿಯಾಗಿದೆ.

ಈ ರೀತಿಯಾದ ಪ್ರಪತ್ತಿ ನಿಷ್ಠನಿಗೆ ಎಲ್ಲೂ ತೊಂದರೆಗೆ ಅವಕಾಶವೇ ಇಲ್ಲ. ಈಗ ವಿವರಿಸಿ ಹೇಳಿದ್ದೇ ತ್ಯಾಗ ಶಬ್ದದ ಅರ್ಥ.

ಅಲ್ಲದೆ ಎಲ್ಲಾ ಶಾಸ್ತ್ರಾರ್ಥವೂ ಶಿಷ್ಟರ ಅನುಷ್ಠಾನದಿಂದಲೇ ಕೊನೆಯಲ್ಲಿ ವ್ಯವಸ್ಥಾಪನೆ ಮಾಡಲ್ಪಡುತ್ತದೆ, ಇದಕ್ಕೆ ಸ್ಮೃತಿಯಲ್ಲಿ—

**ಅಸ್ವರ್ಗ್ಯಂ ಲೋಕ ವಿದ್ವಿಷ್ಟಂ ಧರ್ಮ(ರ್ಮ್ಯ) ಮಪ್ಯಾಚರೇನ್ನತು ।**

ಸ್ವರ್ಗವನ್ನು ಕೊಡದೆ ಮತ್ತು ಜನರಿಗೆ ಹಿಡಿಸದೇ ಇರುವುದು ಧರ್ಮವಾಗಿದ್ದರೂ—ಧರ್ಮಕ್ಕೆ ಸಂಬಂಧವಟ್ಟಿದ್ದರೂ ಅದನ್ನು ನಡೆಸಕೂಡದು, ಮಾಡಕೂಡದು ಎಂದು ಹೇಳಿದೆ.

1. ಭಕ್ತಿಯೋಗವನ್ನು ಮಾಡಲಾಗದವನು ಈ ಶರಣಾಗತಿಯನ್ನು ಮಾಡಬಹುದು. ಆವಾಗ 'ಧರ್ಮ ಎಂಬುದು ಭಕ್ತಿಯೋಗವೂ ಅದರ ಅಂಗಗಳಾದ ಕರ್ಮಯೋಗ ಮೊದಲಾದವೂ. 'ಪಾಪ' ಎಂಬ ಶಬ್ದಕ್ಕೆ ಭಗವಂತನ ಹತ್ತಿರಕ್ಕೆ ಹೋಗಲು ತಡೆಮಾಡುವ ಎಲ್ಲಾ ಪಾಪಗಳೂ ಎಂದರ್ಥ. ಇದು ಅಲ್ಲದೆ ಯಾವ ಯಾವನಿಗೆ ಯಾವ ಯಾವ ಫಲದಲ್ಲಿ ಆಸೆ ಇದೆಯೋ, ಅದಕ್ಕೆ ಬೇಕಾದ ಉಪಾಯವನ್ನು ಮಾಡಲು ಆಗದಿದ್ದರೆ ಆವನು ಆ ಉಪಾಯವನ್ನು ಬಿಟ್ಟು ಭಗವಂತನೊಬ್ಬನನ್ನೇ ಶರಣಾಗತಿ ಮಾಡಬೇಕು ಎಂದು ತೋರಿಸಲ್ಪಡುತ್ತದೆ.

ಶ್ರೀಭಾಷ್ಯಕಾರರು ಈ ಶ್ಲೋಕಕ್ಕೆ ಅರ್ಥವನ್ನು ಬರೆಯುವಿಕೆಯಲ್ಲಿ ಭಕ್ತಿಯೋಗವು ಮೋಕ್ಷವನ್ನು ಕೊಡುತ್ತದೆ ಎಂದು ಬರೆದಿದ್ದಾರೆ, ಆದುದರಿಂದ ಅವರನ್ನು ದೈವವೆಂದು ನೆನೆಸಿರುವ ನಮ್ಮಂತವರು ಭಕ್ತಿಯೋಗವನ್ನು ಮಾಡುವುದು ತಪ್ಪು ಎಂದು ಹೇಳಿದರೆ, ಅವರ ಮನಸ್ಸಿಗೆ ಹೆಚ್ಚಾಗಿ ನೋವಾಗುವಂತಾಗುವುದು, ಆದರೆ ಭಕ್ತಿಯೋಗವನ್ನು ನಮ್ಮಿಂದ ಮಾಡಲಾಗದು ಎಂದು ಮಾತ್ರ ಹೇಳಬಹುದು. ಅಲ್ಲದೆ ನನ್ನನ್ನೂ ಶರಣು ಹೋಗು (ಗಿಂಜಿಕೇಳು) ಎಂದು ಭಗವಂತನು ಅಪ್ಪಣೆ ಮಾಡಿರುವಾಗ, ನಾವು ಹಾಗೆ ಕೇಳಿಕೊಳ್ಳದಿದ್ದರೂ, ಅವನೇ ನಮ್ಮ ಇಷ್ಟವನ್ನು ಕೊಡುತ್ತಾನೆಂದು ಹೇಳಿ, ನಾವು ಶರಣಾಗತಿ ಮಾಡದೆ ಇರುವುದು ಸರಿಯಲ್ಲ. ಒಬ್ಬರಿಂದಲೂ ಅರಿಯಲಾಗದ, ಶಾಸ್ತ್ರದಲ್ಲಿ ಮರೆಯಾಗಿರುವ ಒಳ್ಳೆಯ ವಿಷಯಗಳನ್ನು, ಸಂಗತಿಗಳನ್ನು ತೋರಿಸಿ ನಡೆಸುವುದಕ್ಕಾಗಿ ಶ್ರೀಭಾಷ್ಯಕಾರರಿಂದ ಏರ್ಪಡಿಸಲ್ಪಟ್ಟ ಗ್ರಂಥಗಳಿಗಿಂತ ಬೇರೆ ಅವರ ಅಭಿಪ್ರಾಯವಾದ ಆ ಸಂಗತಿಗಳನ್ನು ಬೇರೆ ಯಾವ ದಾರಿಯಿಂದ ಅರಿಯಬಹುದು ? ಆ ದಾರಿಯು ಅವರ ಪುಸ್ತಕಕ್ಕೆ ಒಪ್ಪುವಂತಿಲ್ಲದೆ ಇದ್ದರೆ ಅವರ ಅಭಿಪ್ರಾಯವನ್ನು ಇದ್ದ ಹಾಗೆ ತಿಳಿಯಬೇಕೆಂದು ತಪಿಸುವ ಒಬ್ಬರು ಅದನ್ನು ಹೇಗೆ ನಂಬಬಹುದು?

ಪ್ರಪತ್ತಿ ಧರ್ಮವನ್ನು ಲೋಕದಲ್ಲಿ ಸ್ಥಿರಪಡಿಸುವ ಹಿಂದಿನ ಆಚಾರ್ಯರುಗಳ ನಡತೆಯನ್ನು ವಿಚಾರ ಮಾಡದೇ ಇರುವವರು ಈ ಶರಣಾಗತಿಯು ಉಪಾಯವಲ್ಲ ಎಂದು ಹೇಳುತ್ತಾರೆ. ಅವರ ಸಂದೇಹವು ಶಾಸ್ತ್ರವೆಂಬ ಕಡಲಿನಲ್ಲಿ ತೇಲುವ ತೆಪ್ಪದಂತೆ, ಅಂದರೆ ತೆಪ್ಪದಲ್ಲಿರುವವರಿಗೆ ಸಮುದ್ರದ ಆಳ ಗೊತ್ತಾಗುವುದಿಲ್ಲ ಎಂದು ಅಭಿಪ್ರಾಯ. ಶಾಸ್ತ್ರವನ್ನು ಚೆನ್ನಾಗಿ ವಿಮರ್ಶೆ ಮಾಡಿದರೆ ಅದರ ಒಳಗಿನ ಅರ್ಥವು ತಿಳಿಯುತ್ತದೆ. ಈ ವಿಷಯದಲ್ಲಿ ಹಿಂದಿನ ಆಚಾರ್ಯರುಗಳ ನಡವಳಿಕೆಗಳನ್ನು ಸಂಕ್ಷೇಪವಾಗಿ ಕಾರಿಕಾರೂಪದಲ್ಲಿ ವೇದಾಂತಾಚಾರ್ಯರು ನಿಕ್ಷೇಪ ರಕ್ಷೆಯಲ್ಲಿ ಹೇಳಿರುವುದನ್ನು ಬರೆದು ವಿವರಿಸೋಣ. ಆಚಾರ್ಯರಲ್ಲಿ ಹೇಗೆ ಭಕ್ತಿ ಇಡಬೇಕೆಂಬುದನ್ನು ತಿಳಿಯೋಣ.

## ಗುರುಭಕ್ತಿ

**ಆತ್ಯನ್ತಿಕೀ ತಥಾಭಕ್ತಿಃ ಯಥಾ ದೇವೇ ತಥಾಗುರೌ।**
**ತದುಕ್ತಿ ಮನ್ತ್ರತಾ ತೇನ ನಿತ್ಯಂ ಸ್ವವ್ಯಪದೇಶನಮ್॥**

ದೇವರಲ್ಲಿ ಯಾವ ರೀತಿ ಭಕ್ತಿಯನ್ನು ಮಾಡಬೇಕೋ ಹಾಗೆ ಗುರುವಿನಲ್ಲೂ ಮಾಡಬೇಕು—ಇಡಬೇಕು. ಗುರುವಿನ ಮಾತೇ–ಉಪದೇಶವೇ ಮನ್ತ್ರವೆಂದು ಭಾವಿಸಬೇಕು. ನಿತ್ಯವೂ ಅವನನ್ನು ಮುಂದಿಟ್ಟೇ ತನ್ನನ್ನು ಹೇಳಿಕೊಳ್ಳಬೇಕು–"ಅವನ ಶಿಷ್ಯ ನಾನು, ಅವನ ಅನುಗ್ರಹದಿಂದ ನಾನು ಇದ್ದೇನೆ" ಇವೇ ಮೊದಲಾಗಿ—

**ಭಕ್ತ್ಯಾ ತದ್ವಸ್ತು ತದ್ವಾಸ್ತು ಪ್ರಭೃತಿಷ್ವಪಿ ಮಾನನಾ।**
**ಗುರುವತ್ ಗುರುವರ್ಗಸ್ಯ ನಿತ್ಯಮೇವಾನುದರ್ಶನಮ್॥**

ಗುರುವಿಗೆ ಸಂಬಂಧ ಪಟ್ಟ ಪದಾರ್ಥಗಳನ್ನು, ಮನೆ ಮುಂತಾದವುಗಳನ್ನು ಭಕ್ತಿಯಿಂದ ಗೌರವಿಸಬೇಕು, ಅಲ್ಲದೆ ಗುರುವಿನಂತೆ ಗುರುವಿಗೆ ಸೇರಿದವರನ್ನೂ ನಿತ್ಯವೂ ಕಾಣಬೇಕು.

**ಆರಭ್ಯ ಸ್ವಗುರೋರಾಚ ಭಗವತ್ತೋಽಯಥಾಗಮಮ್ ।**
**ತತ್ತದಾಚಾರ್ಯ ವಂಶಸ್ಯಾಸಾವಸಾವಿತಿ ಚಿನ್ತನಮ್ ॥**

ತನ್ನ ಗುರುವನ್ನು ಆರಂಭಿಸಿ ಭಗವಂತನವರೆಗೂ ಬೆಳೆದು ಇರುವ ಆ ಆ ಆಚಾರ್ಯ ಪರಂಪರೆಯನ್ನು 'ಇವರು ಇವರು' ಎಂದು ಅವರ ನಾಮಗಳನ್ನು ಹೇಳಿ ಚಿಂತನಮಾಡಬೇಕು.

**'ಆಚಾರ್ಯಾಣಾ ಮಸಾವಸಾ ವಿತ್ಯಾಭಗವತ್ತಃ'** ಎಂಬ ಶ್ರುತಿ ಇದಕ್ಕೆ ಪ್ರಮಾಣವಾಗಿದೆ. ರಹಸ್ಯತ್ರಯಸಾರದಲ್ಲಿ ಗುರುಪರಂಪರಾಸಾರದಲ್ಲಿ ಇದರ ವಿವರಣೆ ಇದೆ.

## ಶ್ರೀತತ್ತ್ವದ ವರ್ಣನೆ

**ಅರ್ಥಸ್ವಭಾವಾನುಷ್ಠಾನ ಲೋಕದೃಷ್ಟಿಗುರೂಕ್ತಿಭಿಃ ।**
**ಶ್ರುತ್ಯಾಸ್ಮೃತ್ಯಾಚ ಸಂಸಿದ್ಧಾಂ ಘಟಕಾರ್ಥಾವಲಮ್ಬನಮ್ ॥**

ಇದು ಜಗನ್ಮಾತೆಯಾದ ಲಕ್ಷ್ಮಿಯ ಸಂಬಂಧವಾದ ಶ್ಲೋಕ.

ಒಂದು ಪ್ರಯೋಜನವನ್ನು ಅಪೇಕ್ಷಿಸುವವನು ಶಕ್ತರಾದ ರಾಜನೇ ಮೊದಲಾದವರನ್ನು ಆಶ್ರಯಿಸುತ್ತಾನೆ. ಅವನು ಆಶ್ರಯಿಸಲು ತಕ್ಕವನಾಗಲು ಪುರೋಹಿತರೇ ಮೊದಲಾದವರನ್ನು ಮೊದಲು ಆಶ್ರಯಿಸಿ ಅವರ ಮೂಲಕ ಅವರನ್ನು ನೋಡುತ್ತಾನೆ. ಆವಾಗ ಇಷ್ಟವನ್ನು ಹೊಂದಲು ಅನುಕೂಲವಾಗುತ್ತದೆ. ಈ ರೀತಿ ಒಂದು ಚೇತನನು ಅಧಿಗಮ್ಯನಾಗಲು (ಅವನ ಹತ್ತಿರಕ್ಕೆ ಹೋಗಲು) ಉಪಾಯವಾಗಿ ವರಿಸಲ್ಪಟ್ಟ ಮತ್ತೊಂದು ಚೇತನನನ್ನು ಪುರುಷಕಾರನೆಂದು ವ್ಯವಹರಿಸುತ್ತಾರೆ. ಈ ಪುರುಷಕಾರನು ಫಲಕ್ಕೆ ಪರಂಪರೆಯಿಂದ ಕಾರಣನಾಗುತ್ತಾನೆ.

ಅಪರಾಧವನ್ನು ಮಾಡಿರುವವರಿಗೆ ಹಿತವನ್ನು ಬಯಸುವವಳಾಗಿ ದಂಡಧರನಾದ ಅಂದರೆ ತಪ್ಪುಮಾಡಿದವರನ್ನು ಶಿಕ್ಷಿಸಲು ಕೈಯಲ್ಲಿ ದಂಡವನ್ನು ಹೊತ್ತಿರುವ, ಸರ್ವೇಶ್ವರನ ಕೋಪವನ್ನು "[1]ಲೋಕದಲ್ಲಿ ತಪ್ಪುಮಾಡದವನು ಯಾವನು ? ಎಂದು ಹೇಳಿ ಆರುವಂತೆ ಮಾಡಿ ಅವನಿಗೆ ಸಹಜವಾದ ಕಾರುಣ್ಯವು ಇವರಿಗೆ ಉಜ್ಜೀವಕವಾಗಿ ಮಾಡಿಕೊಡುವುದರಿಂದಲೂ ತಾಯಿತನಕ್ಕೆ ಬೇಕಾದ ವಾತ್ಸಲ್ಯದ ಅತಿಶಯದಿಂದಲೂ ಇವಳು ಪುರುಷಕಾರ ಭೂತಳಾದಳು.

ಇವಳಿಗೆ ಮಾರ್ದವವೇ ಸ್ವಭಾವವಾಗಿ ಇರುವುದರಿಂದ ಇವಳನ್ನು ಮುಂದಿಟ್ಟರೆ, ಶ್ರಿಯಃಪತಿಯು ಇವಳ ಮಾತನ್ನು ಮೀರಲು ಸಮರ್ಥನು ಹೇಗೆ ಆಗಲಾರನೋ ಆ ರೀತಿ ಇರುವವಳಾಗಿದ್ದಾಳೆ. ಇದು ಅರ್ಥಸ್ವಭಾವ. ಈಶ್ವರನಿಗೆ ಪಿತೃತ್ವಕ್ಕೆ ಅನುರೂಪವಾದ ಪ್ರತಾಪ್ರೋಷ್ಮಳತ್ವ–ಪರಾಕ್ರಮ ವಿರೋಣದರಿಂದ ಬಿಸಿಯಾಗಿರುವಿಕೆ–ಕೋಪವಾಗಿರುವಿಕೆ ಇದೆ : ಹಾಗೆ ಇದರ ಸಂಬಂಧವೇ ಇಲ್ಲದೆ ಮಾತೃತ್ವಪ್ರಯುಕ್ತವಾದ ವಾತ್ಸಲ್ಯ ಇವೇ ಮೊದಲಾದವು ಹೆಚ್ಚಾಗಿ "ನಕಶ್ಚಿನ್ನಾಪರಾಧ್ಯತಿ–ತಪ್ಪನ್ನು ಮಾಡದವನು ಯಾವನೊಬ್ಬನೂ ಇಲ್ಲ" "ಮರ್ಷಯಾಮೀಹ

**ಪಿತೇವ ತ್ವತ್ಪ್ರೇಯಾನ್ ಜನನಿ ಪರಿಪೂರ್ಣಾಗಸಿಜನೇ**
**ಹಿತಸ್ರೋತೋವೃತ್ತ್ಯಾ ಭವತಿಚಕದಾಚಿತ್ಕಲುಷಧೀಃ ।**
**ಕಿಮೇತನ್ನಿರ್ದೋಷಃ ಕ ಇಹಜಗತೀತಿತ್ವಮುಚಿತೈರುಪಾಯೈ**
**ರ್ವಿಸ್ಮಾರ್ಯ ಸ್ವಜನಯಸಿ ಮಾತಾತದಸಿನಃ ॥**

ಶ್ರೀ ಗುಣರತ್ನಕೋಶ— ಶ್ಲೋಕ ೫೨.

**ದುರ್ಬಲಾ**—ಅಪರಾಧ ಮಾಡಿದ್ದರೂ ಅವರು (ರಾಕ್ಷಸಿಯರು) ಬಲಹೀನರು ಆದುದ ರಿಂದ ಅವನ್ನು ಸಹಿಸಿಕೊಂಡಿದ್ದೇನೆ" ಎಂಬುವುದೇ ಸ್ವಭಾವವಾಗಿರುವಿಕೆಯೂ ವಾಲ್ಲಭ್ಯಾತಿಶಯದಿಂದ ಇವಳನ್ನು ಮುಂದಿಟ್ಟರೆ ಅವನು ಅವಳ, ಮಾತನ್ನು ಒದರಲಾರ–ತಿರಸ್ಕರಿಸಲಾರ—ಎಂಬ ರೀತಿಯಲ್ಲಿರುವಿಕೆ, ಭಗವಂತನ ನಿಗ್ರಹವನ್ನು ಹೋಗಲಾಡಿಸುವ ಸಾಮರ್ಥ್ಯ. ಈ ರೀತಿಯಾದ ಅರ್ಥಸ್ವಭಾವದಿಂದ ಇವಳನ್ನು ಹೊಂದುವವರಿಗೆ ಮತ್ತೊಂದು ಪುರುಷಕಾರದ ಅಪೇಕ್ಷೆ ಬೇಕಾಗಿ ಅನವಸ್ಥೆ ಬರುವುದಿಲ್ಲ.

**ಅನುಷ್ಠಾನವಾದರೋ**—ಪ್ರಹ್ಲಾದನ ವಿಷಯದಲ್ಲಿ ಹೆಚ್ಚಾದ ವಾತ್ಸಲ್ಯ ವಿರೋಣದರಿಂದ ಅವನಿಗೆ ಹೆಚ್ಚಾಗಿ ದ್ರೋಹವನ್ನು ಮಾಡಿದ ಅವನ ತಂದೆಯಾದ ಹಿರಣ್ಯಕಶಿಪುವಿನ ವಿಷಯದಲ್ಲಿ ಭಗವಂತನಿಗೆ ಕೋಪವುಂಟಾಯಿತು. ನೃಸಿಂಹಾವ ತಾರವನ್ನು ತಾಳಿದನು. ಅವನನ್ನು ಸಂಹರಿಸಿದನು, ಆವಾಗ ಅವನನ್ನು ಕೊಂದರೂ ಅವನ ಕೋಪ ಕಡಿಮೆಯಾಗಲೇ ಇಲ್ಲ. ಇದಕ್ಕೆ ಕಾರಣ ಭಕ್ತನ ವಿಷಯದಲ್ಲಿ ಅವನು ಮಾಡಿದ ಹಿಂಸೆ, ಬ್ರಹ್ಮಾದಿಗಳೆಲ್ಲರೂ ಬಂದರು. ಅವರೂ ಅವನ ಹತ್ತಿರ ಹೋಗಲು ಹಿಂಜರಿದರು. ಅವರು ಲಕ್ಷ್ಮಿಯನ್ನು ಮರೆಹೊಕ್ಕರು, ಅವಳನ್ನು ಮುಂದಿಟ್ಟು ಅವನ ಹತ್ತಿರಕ್ಕೆ ಹೋದರು. ದೇವನು ಶಾಂತನಾದನು, ಆಗ ಆ ಲಕ್ಷ್ಮೀನರಸಿಂಹನನ್ನು ಸ್ತೋತ್ರ ಮಾಡಿದರು. ಕಾರ್ಯಸಿದ್ಧಿಯಾಯಿತು. ಈ ಕಥೆ ಪುರಾಣ ಪ್ರಸಿದ್ಧವಾದುದು. **ಸೀತಾಮುವಾಚಾತಿಯಶಾಃ ರಾಘವಂಚ ಮಹಾ ವ್ರತಮ್। ಸೀತಾಸಮಕ್ಷಂಕಾಕುತ್ಥ್ಸಂ॥** "ವನವಾಸದ ಸಂದರ್ಭದಲ್ಲಿ, ಹೆಚ್ಚಾಗಿ ಕೀರ್ತಿ ಯನ್ನು ಪಡೆದ ಲಕ್ಷ್ಮಣನು ಸೀತೆಯನ್ನು ಕುರಿತು ಹೇಳಿದನು ; ಮಹಾ ವ್ರತಶಾಲಿ ಯಾದ ರಾಮನನ್ನೂ ಕುರಿತು ಹೇಳಿದನು. ಸೀತೆಯ ಎದುರಿಗೆ ರಾಮನನ್ನು" ಇವೇ ಮೊದಲಾದವು ರಾಮಾಯಣದಲ್ಲೂ ಇದೆ.

ಲೋಕದೃಷ್ಟಿಯಾದರೋ, ಅಂತಃಪುರ ಪರಿಜನರು ಹೆಚ್ಚಾಗಿ ತಪ್ಪುಮಾಡಿ ದ್ದರೂ ರಾಜರು ಅವರ ಅಲ್ಪವಾದ ಸಮಾಧಾನ ಮಾಡುವಿಕೆ–ನಮಸ್ಕಾರ ಮಾಡುವಿಕೆ ಮುಂತಾದವುಗಳಿಂದಲೇ ಅವರನ್ನು ಕ್ಷಮಿಸುವುದನ್ನು ನೋಡಿದ್ದೇವೆ. ಈ ಅರ್ಥವು "[1]**ಮಾತರ್ಲಕ್ಷ್ಮಿ ಯಥೈವಮೈಥಿಲಜನಃ**" ಎಂಬ ಶ್ಲೋಕದಲ್ಲೂ ಹೇಳತಕ್ಕದ್ದಾಗಿದೆ. ಓತಾಯಿ ಸೀತೆ !

**ಮಾತರ್ಲಕ್ಷ್ಮಿ ಯಥೈವ ಮೈಥಿಲ ಜನಸ್ತೇನಾಧ್ವನಾ ತೇವಯಂ**
**ತ್ವದ್ದಾಸ್ಯೈಕರಸಾಭಿಮಾನ ಸುಭಗೈರ್ಭಾವೈರಿಹಾಮುತ್ರಚ ।**
**ಜಾಮಾತಾದಯಿತಸ್ತವೇತಿ ಭವತೀ ಸಂಬನ್ಧ ದೃಷ್ಟ್ಯಾಹರಿಂ**
**ಪಶ್ಯೇಮ ಪ್ರಣಯಾದಯಾಮಚ ಪರೀಚಾರಾನ್ ಪ್ರಹೃಷ್ಯೇಮಚ ॥**

ಶ್ರೀಗುಣರತ್ನಕೋಶ ೫೧.

ಹೇಗೆ ಜನಕ ಚಕ್ರವರ್ತಿಗೆ ಸಂಬಂಧಪಟ್ಟವರು, ನಂಟರು ರಾಮನನ್ನು 'ನಿನ್ನ ತಂದೆಯ ಅಳಿಯ, ಸೀತೆಯ ಗಂಡ' ಎಂಬುದಾಗಿ ನಿನ್ನ ಸಂಬಂಧದ ದೃಷ್ಟಿಯಿಂದಲೇ ಶುಶ್ರೂಷೆ ಮಾಡುವುದು ಮುಂತಾದವುಗಳಿಂದ ಸಂತೋಷಗೊಳ್ಳುತ್ತಾರೋ ಹಾಗೆ ನಾವೂ ಕೂಡ ನಿನಗೆ ದಾಸರಾಗಿರುವುದೇ ನಮಗೆ ಇಷ್ಟ ಎಂಬ ಅಭಿಮಾನದಿಂದ ಭೋಗ್ಯಗಳಾದ ಭಾವದಿಂದ ಅಂದರೆ ಶರೀರ–ಮಾತು–ಮನಸ್ಸು ಇವುಗಳ ವ್ಯಾಪಾರ ದಿಂದ ಈ ಲೋಕದಲ್ಲೂ ಪರಲೋಕದಲ್ಲೂ ಹರಿಯನ್ನು ನಿನ್ನ ಸಂಬಂಧದ ದೃಷ್ಟಿ ಯಿಂದ ನೋಡುತ್ತೇವೆ. 'ನಮ್ಮ ತಾಯಿಯ ವಲ್ಲಭ' ಎಂಬ ಈ ರೀತಿಯಿಂದ ನೋಡುತ್ತೇವೆ. ಸ್ನೇಹದಿಂದ ಶುಶ್ರೂಷೆಯನ್ನೂ ಮಾಡುತ್ತೇವೆ ಸಂತೋಷ ವನ್ನೂ ಹೊಂದುತ್ತೇವೆ.

ಈ ಶ್ಲೋಕದಲ್ಲಿ, ಕೊನೆ ಇಲ್ಲದಷ್ಟು ಅಪರಾಧ ಮಾಡಿದ್ದರೂ, ಹೇಳಿದ ಪುರುಷಕಾರವನ್ನು ಮುಂದುಮಾಡಿ ಮಾಡಲ್ಪಟ್ಟ ಅಲ್ಪವಾದ ವ್ಯಾಜದಿಂದ ಭಗ ವಂತನು ಕ್ಷಮಿಸುತ್ತಾನೆಂಬ ಅರ್ಥವು ಬೇಕಾದದ್ದು ಎಂಬ ಅಭಿಪ್ರಾಯ

ಗುರೂಕ್ತಿಗಳಾದರೋ ಶ್ರೀಪರಾಂಕುಶರೇ ಮೊದಲಾದವರ ಅಕಲಕಿಲ್ಲೇ ಇವೇ ಮೊದಲಾದ ಸೂಕ್ತಿಗಳು.

**[1]ಅಗಲಕಿಲ್ಲೇನಿರೈಯುಮೆನ್ರು ಅಲರ್‌ಮೇಲ್ ಮಙ್ಗೈಯುರೈ ಮಾರ್ಪಾ**
**ನಿಗರಿಲ್ ಪುಗಳಾಯುಲಗಮೂನ್ರುಡೈಯಾಯ್ ಎನ್ನೈಯಾಳ್ವಾನೇ**
**ನಿಗರಿಲ ಮರರ್ ಮುನಿಕ್ಕಣಙ್ಗಳ್ ವಿರುಮ್ಬುಮ್ ತಿರುವೇ ಙ್ಗಡತ್ತಾನೇ**
**ಪುಗಲೊನಿಲ್ಲಾ ಅಡಿಯೇನ್ ಉನ್ನಡಿಕ್ಕೀಳಮರ್‌ನ್ದು ಪುಗನ್ದೇನೇ**

ತಾವರೆಯ ಹೂವಿನ ಮೇಲೆ ಅದರ ವಾಸನೆಯು ಒಂದು ರೂಪವನ್ನು ಹೊಂದಿದಿಯೋ ಎಂಬಂತೆ ಇರುವ, ಯಾವಾಗಲೂ ಯೌವನವಾಗಿಯೇ ಇರುವ ಶ್ರೀದೇವಿಯು ಜೊತೆಯಲ್ಲಿ ಯಾವಾಗಲೂ ನಿನ್ನೊಡನೆ ಸೇರಿದ್ದರೂ ನಿನ್ನ ಎದೆಯು ಒಂದೊಂದು ಕ್ಷಣವೂ ಹೊಸದಾಗಿ ತೋರಿ ಮನೋಹರವಾಗಿರುವುದರಿಂದ ಅದನ್ನು ಒಂದು ಕ್ಷಣವೂ ಬಿಟ್ಟು ಇರಲಾಗದು ಎಂದು ಹೇಳಿಕೊಂಡು, ಯಾವಾ ಗಲೂ ವಾಸಮಾಡುವ ಶ್ರೇಷ್ಠವಾದ ಎದೆಯುಳ್ಳವನೇ ! ಅಳತೆ ಇಲ್ಲದ ದಯೆಯೆಂಬ ಗುಣವುಳ್ಳವನೇ ! ಮೂರು ಲೋಕಗಳಿಗೂ ಸ್ವಾಮಿಯಾಗಿ ಅವುಗಳನ್ನು ರಕ್ಷಿಸುವ ಜವಾಬ್ದಾರಿಯುಳ್ಳವನೇ ! ನೀಚನಾದ ನನ್ನನ್ನೂ ನಿನಗೆ ಅಂತರಂಗವಾದ ಕೆಲಸ ಗಳನ್ನು ಮಾಡುವಂತೆ ಮಾಡಿ ನಿನ್ನ ಸೌಶೀಲ್ಯವೆಂಬ ಗುಣವನ್ನು ತೋರಿಸಿದವನೇ ! ನಿನ್ನ ಅಪ್ಪಣೆಯನ್ನು ಮಾಡುತ್ತಲೂ, ನಿನ್ನ ಗುಣವನ್ನು ಅನುಭವಿಸಿಕೊಂಡೂ ಈ

1. ತಿರವಾಯ್‌ಮೊಳಿ. ೬–೧೦–೧೦.

ರೀತಿ ಇರುವ ಎರಡು ವಿಧವಾದ ನಿತ್ಯಸೂರಿಗಳ ಗುಂಪೂ ಆಸೆಪಟ್ಟು ಬಂದು ಸೇವಿಸುವಂತೆ ತಿರುಮಲೆಯಲ್ಲಿ (ತಿರುಪತಿಯಲ್ಲಿ) ನೀನು ಎಲ್ಲರಿಗೂ ಸುಲಭವಾಗಿ ದಯೆಮಾಡಿಸಿರುವವನೇ ! ನನಗೆ ನಿನ್ನನ್ನು ಬಿಟ್ಟು ಬೇರೆ ಉಪಾಯವಿಲ್ಲ.

ಆದುದರಿಂದ ಲಕ್ಷ್ಮಿಯನ್ನು ಪುರುಷಕಾರವಾಗಿ ಸ್ವೀಕರಿಸಿ, ಅವಳೊಡನೆ ಸೇರಿರುವ ನಿನ್ನ ಪಾದಗಳನ್ನು ಉಪಾಯವಾಗಿ ನೆನೆದು ನನ್ನನ್ನು ಕಾಪಾಡುವ ಭಾರವನ್ನು ಬೇರೆ ಪ್ರಯೋಜನವನ್ನು ಹುಡುಕದೆ ಮನಸ್ಸಿನಿಂದ ಸಮರ್ಪಣೆ ಮಾಡಿದ್ದೇನೆ, ಈವಾಗ ನನ್ನ ಎಲ್ಲಾ ಅಡಚಣೆಗಳೂ ಹೋಗಿ, ನಿನಗೆ ಎಲ್ಲಾ ಜಾಗಗಳಲ್ಲೂ, ಎಲ್ಲಾ ಕಾಲಗಳಲ್ಲೂ, ಎಲ್ಲಾ ಅವಸ್ಥೆಗಳಲ್ಲೂ ಎಲ್ಲಾ ವಿಧವಾದ ಕೈಂಕರ್ಯಗಳನ್ನು ನಾನು ಮಾಡಬೇಕು.

ಈ ಪಾಶುರದಲ್ಲಿ ಶ್ರೀಯು, ಪುರುಷಕಾರವಾಗಿಯೂ, ಭಗವಂತನ ಜೊತೆಯಲ್ಲಿ ಪ್ರಪತ್ತಿ ಮಾಡುವವನ ಭಾರವನ್ನು ತೆಗೆದುಕೊಳ್ಳುವುದರಿಂದ ಉಪಾಯವಾಗಿಯೂ ಇದ್ದಾಳೆ. ಇವಳಿಗೆ ಎರಡು ಆಕಾರಗಳಿವೆ. ಭಗವಂತನಿಗೆ ಪುರುಷಕಾರವೆಂಬ ಆಕಾರವಿಲ್ಲ, ಈ ದೇವಿಯ ಹಿರಿಮೆಯನ್ನು ತೋರಿಸುವುದಕ್ಕಾಗಿ ಪಾಶುರದ ಮೊದಲ ಭಾಗದಲ್ಲಿ ಆ ಆಕಾರಕ್ಕೆ ಬೇಕಾಗುವಂತೆ ಯಾವಾಗಲೂ ಭಗವಂತನೊಡನೆ ಇರುವುದು ಹೇಳಲ್ಪಡುತ್ತದೆ. ಭಗವಂತನೇ ಪ್ರಪನ್ನನ ರಕ್ಷಣಾ ಭಾರವನ್ನು ಒಪ್ಪುತ್ತಾನೆ. ಲಕ್ಷ್ಮಿಯು ಅದನ್ನು ಮಾಡುವುದಿಲ್ಲ. ಎಂದು ಹೇಳಲು ಈ ಪಾಶುರ ಬರಲಿಲ್ಲ, ಇಬ್ಬರೂ ಈ ಕಾರ್ಯವನ್ನು ಸೇರಿಯೇ ಮಾಡುತ್ತಾರೆ. ಈ ಅರ್ಥವು ದ್ವಯವೆಂಬ ಮಂತ್ರದಿಂದಲೂ ಶರಣಾಗತಿ ಗದ್ಯದಿಂದಲೂ ಏರ್ಪಡುತ್ತದೆ.

ಅವುಗಳಲ್ಲಿ ಶ್ರೀಯನ್ನೂ ಪುರಸ್ಕರಿಸಿದ್ದಾರೆ ಎಂದರ್ಥ. ಇವಕ್ಕೆ ಮೂಲವಾದ ಸೂಕ್ಷ್ಮ ವಿಶೇಷ ರೂಪಗಳಿಂದ ಶ್ರುತಿಗಳನ್ನೂ.

[1]ಚಂದ್ರಾಂ ಪ್ರಭಾಸಾಂ ಮುಂತಾದವನ್ನು ನೋಡಿಕೊಳ್ಳುವುದು. ಶ್ರುತಿ ಮೂಲವಾದ ಸ್ಮೃತಿಗಳು ಯಾವವೆಂದರೆ "ವಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಶ್ರಿಯಮ್–ಮಾತುಗಳಿಗೆ ಸಿಲುಕದ ಹರಿಯನ್ನು ಶರಣು ಹೋಗಲು ಅಪೇಕ್ಷಿಸುವವನು ಯಾವಾಗಲೂ ಲಕ್ಷ್ಮಿಯನ್ನು ಶರಣು ಹೋಗಬೇಕು– ಪುರುಷಕಾರದ ಭಾವದಿಂದ ಎಂದು ಅಭಿಪ್ರಾಯ"ಇವೇ ಮೊದಲಾದವು ಶೌನಕಾದಿಗಳ ವಾಕ್ಯಗಳು, ಈ ರೀತಿ ಇವಳಿಗೆ ಸರ್ವೇಶ್ವರನ ಪಾದಗಳ ಘಟಕತ್ವವು–ಸೇರಿಸುವಿಕೆಯು ಬಹಳ ಪ್ರಮಾಣ ಸಿದ್ಧವಾಗಿರುವುದರಿಂದ ಇಲ್ಲಿಯೂ ಈ ವಿವಕ್ಷೆಯನ್ನು ತೆಗೆದುಕೊಳ್ಳುವುದು ಉಚಿತವಾಗಿದೆ.

1. ಶ್ರೀಸೂಕ್ತ.

**ವಿಶೇಷಣವಿಶೇ (ವಿಶೇಷೇಣಾವಿಶೇ) ಷೇಣಾಪ್ಯಾಕಾರ ತ್ರಯಶಾಲಿನಾ ।**
**ವಿಶಿಷ್ಟಸ್ಯಪರಸ್ಯೈವೋಪಾಯತ್ವೇನ ಪರಿಗ್ರಹಃ ॥**

ದ್ವಯ ಮಂತ್ರದಲ್ಲಿ 'ಶ್ರೀಮತ್' ಎಂಬ ಶಬ್ದ ಇದೆ. ಇದು 'ಮತುಪ್' ಪ್ರತ್ಯಯಾಂತವಾದದ್ದು. ಇದರಿಂದ 'ಶ್ರೀ'ಗೆ ವಿಶೇಷಣತ್ವ ಉಂಟಾಯಿತು. ಅಂದರೆ ಶ್ರೀಯಿಂದ ಕೂಡಿದ ಎಂದರ್ಥವಾಯಿತು. ಹಾಗೆ ಕೂಡಿದವನು ನಾರಾಯಣನು, ಅವನೇ ವಿಶೇಷ್ಯ-ಪ್ರಧಾನ, ಇಲ್ಲಿ ಶ್ರೀಗೆ ಇರುವ ವಿಶೇಷಣತ್ವವು ಭಗವಂತನ ಗುಣ, ವಿಗ್ರಹ ರೂಪಗಳಿಂದ ಬೇರೆ ವಿಶೇಷಣಗಳಿಗಿಂತ ವೈಲಕ್ಷಣ್ಯ-ವ್ಯತ್ಯಾಸ, ಶರಣ ವರಣಕ್ಕೆ ಮುಖ್ಯವಾದ ಕರ್ಮವಾಗಿರುವಿಕೆಗೆ ಯೋಗ್ಯತೆ ಇರುವುದೇ ಮೊದ ಲಾದದ್ದು, ಅದನ್ನು ತೋರಿಸುವುದಕ್ಕಾಗಿಯೇ ಪೂರ್ವಖಂಡದಲ್ಲಿ 'ಶ್ರೀಮತ್' ಎಂದು ಬೇರೆಯಾಗಿ ಹೇಳಿದ್ದು. ಮುಂದೆ ಹೇಳುವ ನಾಲ್ಕು ಶ್ಲೋಕಗಳಲ್ಲಿ ಈ ಶ್ರೀಗೆ ಇತರ ವಿಶೇಷಣಗಳಿಗಿಂತ ವೈಲಕ್ಷಣ್ಯ ವಿವರಿಸಲ್ಪಡುತ್ತದೆ. ಅದು ಇಲ್ಲಿಯೇ ಸುಗಮ ವಾಗಿದೆ. ಆದುದರಿಂದಲೇ ಮುಂದಿನ ಎರಡು ಶ್ಲೋಕಗಳಿಗೆ ಲಕ್ಷ್ಮೀ ವಿಷಯಕ ವಾಗಿಯೇ ವ್ಯಾಖ್ಯಾನ ಮಾಡುವುದು ಯುಕ್ತವಾಗಿದೆ. ಸ್ವಾರಸ್ಯವೂ ಹೌದು. ಭಗವಂತನ ವಿಷಯವಾಗಿ ಅಲ್ಲ.

ಆಕಾರತ್ರಯಶಾಲಿನಾ—ಪುರುಷಕಾರತ್ವ, ಉಪಾಯತ್ವ ಉಪೇಯತ್ವ ರೂಪ ವಾದ ಮೂರು ಆಕಾರಗಳಿಂದ ಕೂಡಿರುವ ಎಂದರ್ಥ. 'ಆಕಾರತ್ರಯ ಎಂಬುದಕ್ಕೆ ನೃಸಿಂಹರಾಜೀಯದಲ್ಲಿ ಲಕ್ಷ್ಮಿಗೆ ಅಸಾಧಾರಣವಾದ, ತನಗೂ ತನ್ನ ಗಂಡನಿಗೂ ಸಾಧಾರಣವಾದ, ತನಗೂ ತನ್ನ ಪ್ರಜೆಗಳಿಗೂ ಸಾಧಾರಣವಾದ ಆಕಾರದಿಂದ ಎಂಬುದಾಗಿ ವರ್ಣಿತವಾಗಿದೆ. ಇವೆಲ್ಲಕ್ಕಿಂತಲೂ ಪ್ರಪನ್ನನನ್ನು ಕುರಿತು ಅಸಾಧಾರಣ ವಾದ ನಿರಪೇಕ್ಷತ್ವವಾದ ಆಕಾರದಿಂದ ಭಕ್ತ ಪ್ರಪನ್ನ ಇವರಿಗೆ ಅಸಾಧಾರಣವಾದ ರಕ್ಷಕತ್ವ ಅಕಾರದಿಂದಲೂ, ಉಪಾಯತ್ವದಿಂದಲೂ ಶ್ರೀಮಚ್ಛಬ್ದಕ್ಕೆ ಸ್ವೀಕಾರ ಎಂಬುದು ಸಾಧಿಸಲು ತಕ್ಕದ್ದಾಗಿದೆ ಎಂದು ಹೇಳಿದೆ.

ಈ ರೀತಿಯಾದ ಆಕಾರತ್ರಯದಿಂದ ಕೂಡಿದ ಶ್ರೀಯಿಂದ ವಿಶಿಷ್ಟನಾದ ಪರ ನಾದ-ಶ್ರೇಷ್ಠನಾದ ನಾರಾಯಣನಿಗೇ ಉಪಾಯವಾಗಿರುವಿಕೆ ಎಂದು ಸ್ವೀಕರಿಸಬೇಕು.

**ನಿರುಪಾಧಿಕ ಶೇಷಿತ್ವ ತದಭಿವ್ಯಾಪ್ತ್ಯಭೇದಕೈಃ ।**
**ಆಜೀವ ತತ್ತ್ವತದ್ಭಾಸ ತ್ರಿವಿಧಾತ್ಮಾಧಿಕತ್ವಧೀಃ ।**

ಯಾವವಿಧವಾದ ಉಪಾಧಿಯೂ ಇಲ್ಲದ ಶೇಷಿತ್ವವು—ಸ್ವಾಮಿನಿಯಾಗಿರುವಿಕೆ ಶ್ರೀಗೇ ಇರುವುದೆಂದು ಮುಂದೆ ಹೇಳಲ್ಪಡುತ್ತದೆ. ಅದಕೆ, ಸಂಬಂಧಪಟ್ಟವು— ಆದರೊಡನೆ ಇರುವ ನಿಯನ್ತೃತ್ವ—ನಿಯಮಿಸುವಿಕೆ, ಆಧಾರತ್ವ—ಆಧಾರವಾಗಿರು

ವಿಕೆ, ಕಾರಣತ್ವ–ಕಾರಣವಾಗಿರುವಿಕೆ, ರಕ್ಷಕತ್ವ–ಕಾಪಾಡುವಿಕೆ ಇವೇಮೊದಲಾದವು ಬೇರೆಯವುಗಳಿಗಿಂತ ಭೇದವನ್ನು ತೋರಿಸುವ ವಿಶೇಷಗಳು. ಅವುಗಳಿಂದಲೂ ಘಟಕ ವಾಗುವಿಕೆಯ ಪ್ರಯೋಜನದಿಂದ ಮತ್ತು ವಿಶೇಷಣಗಳಿಂದ ಕೂಡಿರುವಿಕೆಯಿಂದಲೂ ಕೂಡ ಹಿಂದೇ ಹೇಳಲ್ಪಟ್ಟ ತತ್ತ್ವಕ್ಕೆ (ಶ್ರೀತತ್ತ್ವಕ್ಕೆ) ಮೂರು ವಿಧವಾದ ಜೀವ ಕ್ಕಿಂತಲೂ ಹೆಚ್ಚಾಗಿರುವಿಕೆ–ಬದ್ಧ ಮುಕ್ತ ನಿತ್ಯರಿಗಿಂತಲೂ ಅಧಿಕವಾಗಿರುವಿಕೆ ಹೇಳಲ್ಪಟ್ಟಿತು. ಇದರಿಂದ ಈ ತತ್ತ್ವವು ಜೀವಕೋಟಿಯಲ್ಲಿ ಸೇರಿದ್ದಲ್ಲ ಎಂದು ಅರಿಯಬೇಕೆಂದಾಯಿತು.

**ಯದಿಚ್ಛಯೈವ ಯತ್ಪ್ರೀತ್ಯೈ ಶಾಸನಂ ನಿಗ್ರಹಾದಿಚ ।**
**ತತ್ರ ನಿಗ್ರಾಹ್ಯಜಾತೀಯ ವಿಸಜಾತೀಯತಾಮತಿಃ ॥**

ಯಾವಳ ಇಷ್ಟದಿಂದಲೇ ಯಾವಳ ಪ್ರೀತಿಗಾಗಿಯೇ ಅಪ್ಪಣೆಮಾಡುವುದು ಮತ್ತು ಕೋಪಿಸಿಕೊಳ್ಳುವುದು ದಂಡಿಸುವುದು ಇವೆಲ್ಲಾ ಆಗುತ್ತದೋ ಅವಳ ನಿಗ್ರಹ ಕ್ಕೆಯೋಗ್ಯವಾದ ಜಾತಿಗಿಂತಲೂ ಬೇರೆ ಜಾತಿಯಳು ಅವಳು ಎಂಬ ಬುದ್ಧಿ ಉಂಟಾ ಗುತ್ತದೆ. ಶ್ರೀಕೂರೇಶರು ಶ್ರೀಸ್ತವದಲ್ಲಿ "[1]ಯಸ್ಯಾವೀಕ್ಷ್ಯಮುಖಂ ತದಿಂಗಿತ **ಪರಾಧೀನೋವಿಧತ್ತೇಽಖಿಲು ಕ್ರೀಡೇಯುಂಖಲು ನಾನ್ಯಥಾಸ್ಯಾರಸದಾಸ್ಯಾದೈಕ ರಸ್ಯಾತ್‌ತಯಾ**—ಪರಮಾತ್ಮನು ಲಕ್ಷ್ಮಿಯ ಮುಖವನ್ನು ನೋಡುತ್ತಾನಂತೆ. ಆಗ ಅವಳ ಮನಸ್ಸಿನ ಅಭಿಪ್ರಾಯವನ್ನು–ಇಂಗಿತವನ್ನು ತಿಳಿದು ಅದಕ್ಕೆತಂಕ್ಕತೆ ಪ್ರಪಂಚದ ಸೃಷ್ಟಿಸುವಿಕೆ–ಕಾಪಾಡುವಿಕ ಮತ್ತು ಸಂಹಾರಮಾಡುವಿಕೆ ಮುಂತಾದ ಕಾರ್ಯವನ್ನು ಮಾಡುತ್ತಾನಂತೆ, ಹಾಗೆಯೇ ಜೀವರಾಶಿಗೆ ಅವುಗಳ ಕರ್ಮಕ್ಕೆ-ತಕ್ಕಂತೆ, ಸ್ವರ್ಗ ಅಥವಾ ನರಕ ಮೋಕ್ಷ ಇವನ್ನು ಕೊಡುತ್ತಾನಂತೆ. ಲಕ್ಷ್ಮಿಯು ಮತ್ತು ಹರಿಯು ಸಮಗ್ರಸಮತೆ ಉಳ್ಳ ಅಭಿರುಚಿಉಳ್ಳವರು, ಹಾಗಿಲ್ಲದಿದ್ದರೆ ಸೃಷ್ಟಿಯ ಸ್ವಾರಸ್ಯವೂ ಅವರಿಗೆ ರುಚಿಕರವಾಗಲಾರದು ಎಂದುಹೇಳಿ ಕೊಂಡಾಡಿದ್ದಾರೆ.

ಭಗವಂತನು ಜೀವಜಾತಕ್ಕಿಂತಲೂ ಅಧಿಕನಾಗಿದ್ದಾನೆ. ಯಾವಳಿಗಾಗಿ ಈ ಶಾಸನಾದಿಗಳು ಮಾಡಲ್ಪಡುತ್ತದೋ ಆ ಶ್ರೀತತ್ವದಲ್ಲಿ ಆ ಜೀವಗಳಿಗಿಂತ ಹೆಚ್ಚಾಗಿಯೂ ಗೌರವಿಸಬೇಕಾದುದರಿಂದ ನಿಕೃಷ್ಟತಮವಾದ ಜೀವಜಾತೀಯತ್ವ ಬುದ್ಧಿಯು ಕೂಡದು. ಲಕ್ಷ್ಮಿಯು ನಿಗ್ರಹಕ್ಕೆ ಯೋಗ್ಯವಾದ ಜಾತಿಗಿಂತ ಬೇರೆ ಯವಳಾದರೆ ಭಗವಂತನಿಗಿಂತ ಹೆಚ್ಚಿನವಳಾದರೂ ಆಗಬೇಕು ಅಥವಾ ಸಮನಾಗಿ ಇರುವವಳಾದರೂ ಆಗಬೇಕು. ಹಾಗಾದರೆ ಒಂದು ದೇಶಕ್ಕೆ ಇಬ್ಬರು ರಾಜರಂತಾ

1. ಶ್ರೀಸ್ತವ. ೧. **ಸ್ವಸ್ತಿ ಶ್ರೀರ್ದಿಶತಾತ್ ಅಶೇಷ ಜಗತಾಂಸರ್ಗೋಪಸರ್ಗಸ್ಥಿತೀಃ ।**
**ಸ್ವರ್ಗಂದುರ್ಗತಿಮಾ ಪವರ್ಗಿಕಪದಂ ಸರ್ವಂಚ ಕುರ್ವನ್ ಹರಿಃ ॥**

ಎಂಬುದು ಮೊದಲಿನ ಅರ್ಥ.

ಯಿತು. ಇವನು ಹೇಳುವುದು ಅವನಿಗಾಗದೆ ನಿತ್ಯವೂ ಪರಸ್ಪರ ಯುದ್ಧ, ಒಬ್ಬರಿಗೊಬ್ಬರಿಗೆ ಹೊಡೆದಾಟ ಆಗಬೇಕಾದ ಸಂಭವವುಂಟಾಗುತ್ತದಲ್ಲವೇ ? ಎಂದರೆ—

**ಏಕೇತರ ಸಮಸ್ತಾನಾಂ ಸ್ವನಿಷ್ಠೈಕಾರ್ಥತಾಸ್ಥಿತೇಃ ।**
**ದ್ವಿಷ್ಠೇತದನ್ಯಶೇಷಿತ್ವೇ ದ್ವೈರಾಜ್ಯಾದಿ ಭಯೋಜ್ಝಿತಿಃ ॥**

ಇವರಿಬ್ಬರಿಗಿಂತ ಬೇರೆಯಾದವೆಲ್ಲಕ್ಕೂ ಇವರಿಬ್ಬರೂ ಶೇಷಿಗಳಾದರೂ ಪರಮಾತ್ಮನೊಬ್ಬನಿಗಿಂತ ಬೇರೆಯಾದವು ಪರಮಾತ್ಮನ ಪ್ರಯೋಜನಕ್ಕೆ ಎಂಬುದು ಪ್ರಮಾಣಗಳಿಂದ ಸಿದ್ಧವಾಗಿದೆ. ಅವಳೂ ಅವನಿಗಾಗಿರುವವಳು. ಅವನೊಬ್ಬನಿಗೆ ಶೇಷಭೂತಳು. [1]ಸ್ವತಃಶ್ರೀಸ್ತ್ವಂ ವಿಷ್ಣೋಃ ಸ್ವಮಸಿ=ಓ ಲಕ್ಷ್ಮಿ! ಸ್ವಭಾವದಿಂದಲೇ ನೀನು ವಿಷ್ಣುವಿನ ಸೊತ್ತು (i. e., unconditionally). ನಿನ್ನ ಇಷ್ಟದಿಂದಲೇ ವಿಶೇಷಣಭೂತಳಾಗಿದ್ದೀಯೆ ಎಂದು ಪರಾಶರಭಟ್ಟರ ಸೂಕ್ತಿ.

ಅವನೊಬ್ಬನಿಗೇ ತನ್ನಲ್ಲಿರುವ ಅನನ್ಯಶೇಷತೆಯಿಂದ ಕೂಡಿರುವಿಕೆ. ಆದುದರಿಂದ ಲಕ್ಷ್ಮಿಗೆ ಆಧಿಕ್ಯಾದಿಗಳು ಇಲ್ಲ, ಇವರಿಬ್ಬರಿಗೂ ಎಲ್ಲವೂ ಅನುಕೂಲವಾದ ಶೇಷಭಾವದಲ್ಲೇ ಇರುವವು. ಆದುದರಿಂದ ದ್ವೈರಾಜ್ಯ ಬರುವುದಿಲ್ಲ.

**ಪ್ರಭಾದಿತ್ಯ ಪ್ರಕಾರೇಣ ಮಿಥೋಽತಿಶಯದಾಯಿನೋಃ ।**
**ತದನ್ಯವಸ್ತ್ವಸಂಭಾವ್ಯ ಸ್ವತೋಽತಿಶಯದರ್ಶನವತ್ ॥**

ಲಕ್ಷ್ಮಿಯಿಂದ ಭಗವಂತನಿಗೆ ಅತಿಶಯ—ಹೆಚ್ಚಳ ಉಂಟಾಗುತ್ತದೆ ಎಂದರೆ ಆವನೇ ಅತಿಶಯ ಉಳ್ಳವನೆಂಬುದು ಅವನಿಗೆ ಹೇಗೆ ಹೊಂದುತ್ತದೆ ? ಎಂದರೆ, ಇಬ್ಬರಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಅತಿಶಯ ಉಂಟಾಗುತ್ತದೆ ಎಂದು ಹೇಳಿರುವುದರಿಂದ ಇವರಿಬ್ಬರೂ ಪರಸ್ಪರ ಅತಿಶಯವನ್ನುಂಟುಮಾಡುವವರೇ ಆಗಿದ್ದಾರೆ. ಹಾಗಿದ್ದರೂ ಲಕ್ಷ್ಮಿಯು ಭಗವಂತನನ್ನು ಆಶ್ರಯಿಸಿರುವುದರಿಂದ, ಸೂರ್ಯನಲ್ಲಿರುವ ಅತಿಶಯಕ್ಕೆ ಪ್ರಭೆಯು ಕಾರಣ. ಅದರಿಂದ ಇವನಿಗೆ ಹೆಚ್ಚು ಕಾಂತಿಯುಳ್ಳವನೆಂದು ಪ್ರಸಿದ್ಧಿ. ಆದರೂ ಈ ಹೆಚ್ಚು ಕಾಂತಿಯು—ಪ್ರಕಾಶವು ಸೂರ್ಯನದು ಎನ್ನುವಂತೆ ಇಲ್ಲೂ ತಿಳಿಯತಕ್ಕದ್ದು.

ಲಕ್ಷ್ಮಿಯ ಅತಿಶಯವು ಧರ್ಮಿಯ ಅಧೀನವಾದರೆ, ಅದು ಹೇಗೆತಾನೆ ಅತಿಶಯವುಳ್ಳವಳಾಗುತ್ತಾಳೆ ? ಧರ್ಮಿಗೆ ಅಧೀನವಾಗಿದ್ದರೂ ಸ್ವತಸ್ತ್ವ=ತನಗೇ ಸೇರಿದ್ದು—ತನ್ನಿಂದಲೇ ಆದದ್ದು ಎಂದು ಹೇಳಲು ಇಷ್ಟವಾದರೆ ಚೇತನ ಸಾಮಾನ್ಯಕ್ಕೂ ತಾನಾಗಿಯೇ ಅತಿಶಯ ಉಳ್ಳದ್ದಾಗಿರುವಿಕೆ ಉಂಟಾಗಲಿ ಎಂದರೆ ಲಕ್ಷ್ಮೀ

1. ಶ್ರೀ ಗುಣರತ್ನಕೋಶ–೩೧.

ಗತವಾದ ಭಗವದಧೀನಸ್ವಭಾವಕ್ಕೆ ಲಕ್ಷ್ಮಿಯ ಇಚ್ಛೆಯೇ ಅಧೀನವಾಗಿರೋಣದ ರಿಂದ ಲಕ್ಷ್ಮಿಯಲ್ಲಿರುವ ಅತಿಶಯಕ್ಕೆ ಸ್ವತಸ್ತ್ವಕ್ಕೆ ಕುಂದಿಲ್ಲ, ಇಬ್ಬರಿಗೂ ಪರಸ್ಪರ ಅಧೀನವಾದ ಅತಿಶಯವಾಗಿರುವಿಕೆ ಇದ್ದರೂ ಭಟ್ಟಪಾದರು—

[1]ಯುವತ್ವಾದೌ ತುಲ್ಯೇಽಪ್ಯಪರವಶತಾ ಶತ್ರುಶಮನ
ಸ್ಥಿರತ್ವಾದೀನ್ಕೃತ್ವಾಭಗವತಿಗುಣಾನ್ ಪುಂಸ್ತ್ವಸುಲಭಾನ್ ।
ತ್ವಯಿಸ್ತ್ರೀತ್ವೈಕಾನ್ತಾನ್ ಮದ್ರಿಮಪತಿಪಾರಾರ್ಥ್ಯಕರುಣಾ
ಕ್ಷಮಾದೀನ್ ವಾಭೋಕ್ತುಂಭವತಿ ಯುವಯೋರಾತ್ಮನಿಭಿದಾ ॥

ಓ ತಾಯಿ ! ಯೌವನ ಮತ್ತು ಇತರ ಗುಣಗಳು ನಿನಗೂ ನಿನ್ನ ಪತಿಗೂ ಸಮಾನವಾಗಿವೆ. ಆದರೂ ಅವುಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಈ ವ್ಯತ್ಯಾಸವು ನಿಮ್ಮಿಬ್ಬರ ಒಪ್ಪಿಗೆಯಿಂದ ಆದುದು. ನಿನ್ನ ಮತ್ತು ನಿನ್ನಪತಿಯ ಸಹಜವಾದ ಸ್ವಭಾವದಿಂದಾದುದು. ಅದೂ ನಿನ್ನ ಪ್ರೀತಿಗಾಗಿ ನೀನು ನಿನ್ನಗಂಡನಿಗೆ, ಪುರುಷರಿಗೆ ಸಂಬಂಧಪಟ್ಟ ಸ್ವಾತಂತ್ರ್ಯ, ಶತ್ರುಗಳನ್ನು ಅಡಗಿಸುವ ಸಾಮರ್ಥ್ಯ ಮತ್ತು ಸ್ಥಿರ ವಾಗಿರುವಿಕೆ ಇವನ್ನು ಕೊಟ್ಟು ಮೃದುವಾಗಿರುವಿಕೆ (ಹೃದಯದಲ್ಲಿ), ಪತಿಗೆ ಅಧೀನವಾಗಿರುವಿಕೆ, ದಯೆ ಮತ್ತು ಸಹನೆ ಇವೇ ಮುಂತಾದ ಸ್ತ್ರೀಸಹಜವಾದ ಗುಣಗಳನ್ನು ನಿನಗಾಗಿ ಇಟ್ಟುಕೊಂಡಿದ್ದೀಯೆ. ಈ ಗುಣಗಳನ್ನು ಅನುಭವಿಸು ವುದಕ್ಕಾಗಿಯೇ ನಿಮ್ಮಲ್ಲಿ ಭೇದ, ಎಂದು ಹೇಳುವ ರೀತಿಯಲ್ಲಿ ಜ್ಞಾನಶಕ್ತ್ಯಾದಿಗುಣ, ಅನುಗ್ರಹಾದಿವ್ಯಾಪಾರ ಇವುಗಳಿಗೆ ಅನ್ಯೋನ್ಯವಾಗಿ ಅಧೀನವಾಗಿ ಇಲ್ಲದಿರುವಿಕೆಯೇ ಇಬ್ಬರಿಗೂ ಭೋಗ್ಯವಾಗಿರುವುದರಿಂದ ಸ್ವತಃ–ತಾನಾಗಿಯೇ ಅತಿಶಯವಾಗಿರು ವಿಕೆಗೆ ಭಂಗವೇನೂ ಇಲ್ಲ. ಈ ರೀತಿ ಈ ಶ್ಲೋಕಗಳಿಗೆ ಸಾಂಪ್ರದಾಯಿಕವಾದ– ಉಪದೇಶಪರಂಪರೆಯಿಂದ ಬಂದ ಅರ್ಥ.

## ಪರಮೈಕಾಂತಿಯ ಲಕ್ಷಣ

ಅನನ್ಯ ದೇವತಾऽನನ್ಯೋಪಾಯತಾऽನನ್ಯ ಸಾಧ್ಯತಾ ।
ಶುದ್ಧತತ್ಪರಿವಾರೇಷು ಸಪರ್ಯಾಭರ್ತ್ಯ ಭೃತ್ಯವತ್ ।
ಆಗುರೋರನ್ಯ ದೇವತ್ವೇವರ್ಜನಂ ನಿಷ್ಕ್ರಿಯಾವಧಿ ॥

ಬೇರೆ ದೇವತೆಯನ್ನು ಆಶ್ರಯಿಸದೆ ಇರುವಿಕೆ, ಮೋಕ್ಷಕ್ಕಾಗಿ ಅವನನ್ನುಬಿಟ್ಟು ಬೇರೆ ಉಪಾಯ ಇಲ್ಲದಿರುವಿಕೆ, ಪ್ರಪತ್ತಿಯನ್ನು ಬಿಟ್ಟು ಮತ್ತೊಂದು ಸಾಧಿಸಲು ತಕ್ಕದ್ದು-ಬೇಕಾದದ್ದು ಇಲ್ಲದಿರುವಿಕೆ. ಇವೆಲ್ಲ ಪರಮೈಕಾಂತಿಯಾದ ಮುಮುಕ್ಷುವಿನ

1. ಶ್ರೀ ಗುಣರತ್ನಕೋಶ–೩೪.

ಲಕ್ಷಣ. ಆ ರೀತಿ ಪರಮಾತ್ಮನೇ ಸರ್ವಸ್ವ ಎಂಬುದಾಗಿ ಇರುವ ಪರಿಶುದ್ಧವಾದ ಪರಿವಾರಗಳಲ್ಲಿ ಗಂಡನ ಸೇವಕರಲ್ಲಿ ಭಾರ್ಯೆಯಾದವಳು ಉಪಚಾರ ಮಾಡುವಂತೆ ಶುಶ್ರೂಷೆ ಮಾಡಬೇಕು. ಗುರುವಿನವರೆವಿಗೂ ಇರುವ ಹಿಂದಿನ ಪರಂಪರೆಯಲ್ಲಿ ಬೇರೆ ದೇವತೆಯೆಂಬ ಭಾವನೆಯನ್ನು ಬಿಡಬೇಕು. ಪ್ರಾಯಶ್ಚಿತ್ತಾದಿಗಳನ್ನು ಆಚರಿಸಕೂಡದು.

**ಕೃತಪ್ರೇಷಣ ನಿರ್ದೇಶ ನ್ಯಾಯೇನ ಫಲಚಿನ್ತನಮ್ ।**
**ಫಲಕೋಟಿ ನಿವೇಶೇನ ಪರೋಪಾಯ ಪ್ರತಿಷ್ಠಿತ್ಯೈ ಃ ।**
**ನಿಜಕರ್ಮಾದಿ ಭಕ್ತ್ಯನ್ತ ಪರಾಜ್ಞಾ ಪರಿಪಾಲನಮ್ ॥**

ಇದರ ವಿವರಣೆ—

**[1]ಶರೈಸ್ತು ಸಂಕುಲಾಂಕೃತ್ವಾ ಲಂಕಾಂಪರಬಲಾರ್ದನಃ ।**
**ಮಾಂನಯೇದ್ಯದಿ ಕಾಕುತ್ಸ್ಥಃ ತತ್ತಸ್ಯ ಸದೃಶಂ ಭವೇತ್ ॥**

ಹನುಮಂತನನ್ನು ಕುರಿತು ಸೀತೆಯು ಹೇಳುವ ಮಾತಿದು:"ಓ ಹನುಮಂತನೆ! ಶತ್ರುಗಳನ್ನು ನಿಗ್ರಹಿಸುವ ಅಪಾರವಾದ ಸಾಮರ್ಥ್ಯವುಳ್ಳ ರಾಮನು ಲಂಕಾಪಟ್ಟಣವನ್ನು ಬಾಣಗಳಿಂದ ಗಡಬಿಡಿಗೊಳಿಸಿ ಕಷ್ಟಪಡುವಂತೆ ಮಾಡಿ ಅಂದರೆ ಬಾಣ ಪ್ರಯೋಗದಿಂದ ಹಾಳುಮಾಡಿ ನನ್ನನ್ನು ಒಯ್ದರೆ, ಅದು ಅವನಿಗೆ ತಕ್ಕುದ್ದಾಗಿದೆ" ಎಂದು. ಇಲ್ಲಿ ಸೀತೆಯು ರಾಮನ ಹತ್ತಿರ ಹೋಗಿ ಸೇರಲು ತನ್ನ ಪ್ರಯತ್ನ ಯಾವುದೂ ಇಲ್ಲ ಎಂದು ಹೇಳಿದಂತಾಯಿತು. ಆ ನ್ಯಾಯದಿಂದ ಪ್ರಪನ್ನನ ವಿಷಯದಲ್ಲಿ ಭಗವಂತನು ತನ್ನ ಪ್ರಯತ್ನದಿಂದ ತಾನೇ ಸಾಧಿಸುತ್ತಾನೆ ಎಂದು ಆ ಶರಣಾಗತಿಯ ಫಲದಲ್ಲಿ ಅವನು ಯೋಚಿಸಕೂಡದೆಂದಾಯಿತು.

ವರ್ಣಾಶ್ರಮಾದಿ ಧರ್ಮಗಳನ್ನು ಬಿಡದೆ ಮಾಡಬೇಕು. ನಿತ್ಯವಾಗಿ ದಾಸ್ಯವ್ಯಾಪಾರವನ್ನೇ ಮಾಡುವ ಸ್ವಭಾವವುಳ್ಳ ಮುಕ್ತನಂತೆ ಇವನೂ ಕೂಡ ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿ ಅಧಿಕಾರ, ಕಾಲ ಇವಕ್ಕೆ ತಕ್ಕಂತೆ ಭಗವಂತನ ಆಜ್ಞೆಯನ್ನು ನೆರವೇರಿಸಬೇಕು. ಹಾಗಿಲ್ಲದಿದ್ದರೆ—

'ಸಂಧ್ಯಾಹೀನೋಽಶುಚಿರ್ನಿತ್ಯಮನರ್ಹಸ್ಸರ್ವಕರ್ಮಸು—ಸಂಧ್ಯಾವಂದನಾದಿಗಳನ್ನು ಮಾಡದೆ ಇರುವವನು ಅಶುಚಿಯು. ಯಾವಕರ್ಮಮಾಡಲೂ ಅರ್ಹನಲ್ಲ' ಎಂದು ಹೇಳಿರುವುದರಿಂದ ಭಗವಂತನ ಅರ್ಚನಾದಿಗಳಲ್ಲೂ ಅಧಿಕಾರವಿಲ್ಲದವನಾಗುತ್ತಾನೆ, ಅದಕ್ಕೆ ಯೋಗ್ಯತೆ ಸಿದ್ಧಿಸಲು, ತನಗೆ ಇಲ್ಲಿಯವರೆಗೂ ಉಂಟಾಗಿರುವ ಭಗವದ್ಭಕ್ತಿ, ಜ್ಞಾನ ಇವು ಶಿಥಿಲವಾಗದಿರುವುದಕ್ಕಾಗಿಯೂ, ಮುಂದೆ ಮುಂದೆ

1. ರಾಮಾಯಣ. ಸುಂ. ಕಾ. ೨೯—೩೦.

ಅವು ಬೆಳೆಯುವುದಕ್ಕಾಗಿಯೂ, ತನ್ನ ಅನುಷ್ಠಾನದಿಂದ ಇತರರನ್ನು ಪ್ರವರ್ತಿಸು ವಂತೆ ಮಾಡಬೇಕೆಂಬ ಭಗವಂತನ ಅಪ್ಪಣೆಯನ್ನು ಕಾಪಾಡುವುದಕ್ಕಾಗಿಯೂ ಆ ಆ ಧರ್ಮಗಳನ್ನು ಆಚರಿಸಬೇಕು. ಎಲ್ಲಾ ವಿಧವಾದ ಬಂಧುವೂ ಅವನೇ ಎಂಬುದ ರಲ್ಲಿ ಪ್ರಮಾಣ ವಚನಗಳು.

**ಸತೀವ ಪ್ರಿಯಭರ್ತಾರಂ ಜನನೀವ ಸ್ತನಂಧಯಮ್ ।**
**ಆಚಾರ್ಯಂ ಶಿಷ್ಯವನ್ಮಿತ್ರಂ ಮಿತ್ರವಲ್ಲಾಳಯೋದ್ಧರಿಮ್ ॥**
**ಸ್ವಾಮಿತ್ವೇನ ಸುಹೃತ್ವೇನ ಗುರುತ್ವೇನಚ ಸರ್ವದಾ ।**
**ಪಿತೃತ್ವೇನ ತಥಾಭಾವ್ಯೋ ಮಾತೃತ್ವೇನಚ ಮಾಧವಃ ॥**

ಪತಿವ್ರತೆಯಾದ ಹೆಂಗಸು ತನ್ನ ಗಂಡನನ್ನು ಯಾವರೀತಿ ಅನುರಾಗದಿಂದ ಉಪ ಚರಿಸುತ್ತಾಳೋ ಹಾಗೆ ಭಗವಂತನ ಆರಾಧನವೇಳೆಯಲ್ಲಿ ಭಾವಿಸಬೇಕು. ತಾಯಿಯಾ ದವಳು ಹಾಲನ್ನು ಕುಡಿಯುವ ಶಿಶುವಿನಲ್ಲಿ ಎಷ್ಟು ವಾತ್ಸಲ್ಯದಿಂದ(ಕರುವಿನಲ್ಲಿ ಹಸು ವಿಗೆ ಇರುವ ಪ್ರೀತಿಯಂತೆ ಇರುವ ಪ್ರೀತಿ ವಾತ್ಸಲ್ಯ) ವರ್ತಿಸುತ್ತಾಳೋ ಹಾಗೆ ಆರಾ ಧನ ವೇಳೆಯಲ್ಲಿ ಮಾತೃತ್ವಾದಿಗಳಿಂದ ಅನುಸಂಧಾನ ಮಾಡಬೇಕು. ಶಿಷ್ಯನು ಆಚಾರ್ಯ ನನ್ನು ಭಕ್ತಿಯಿಂದ ಶುಶ್ರೂಷೆಮಾಡುವಂತೆಯೂ, ಮಿತ್ರನು ಮಿತ್ರನನ್ನು ಪ್ರೀತಿಸು ವಂತೆಯೂ ಭಕ್ತನು ದೇವನಲ್ಲಿ ನಡೆದುಕೊಳ್ಳಬೇಕು. ಸ್ವಾಮಿಯಾಗಿಯೂ, ಸ್ನೇಹಿತ ನಾಗಿಯೂ ಗುರುವಾಗಿಯೂ ತಂದೆತಾಯಿಯಾಗಿಯೂ ಪರಮಾತ್ಮನನ್ನು ಭಾವಿಸಿ ಪೂಜಿಸಬೇಕು. ಇದು ಸಂಬಂಧವರ್ಗಕ್ಕೆ ತಕ್ಕ ಆರಾಧನದಲ್ಲಿ ಪ್ರಮಾಣ ಇದು.

ಇನ್ನು ಪರತ್ವಕ್ಕೆ ಅನುರೂಪವಾದುದಲ್ಲಿ–ತಕ್ಕದಲ್ಲಿ ಪ್ರಮಾಣ—

**ಯಥಾ ಯುವಾನಂ ರಾಜಾನಂ ಯಥಾಚ ಮದಹಸ್ತಿನಮ್ ।**

ರಾಜನನ್ನು ಹೆದರಿಕೆಯಿಂದ ಆರಾಧನೆಮಾಡುತ್ತಾರೆ. ಮದಿಸಿರುವ ಆನೆ ಯನ್ನು ಹಾಗೆಯೇ ಹೆದರಿ ಸ್ನಾನ ಮೊದಲಾದವನ್ನು ಮಾಡಿಸಿ ಸೇವೆಮಾಡುತ್ತಾರೆ. ಹಾಗೆಯೇ ಭಗವಂತನನ್ನು ಭಯ ಭಕ್ತಿಗಳಿಂದ ಪೂಜಿಸಬೇಕು.

ಸೌಲಭ್ಯದ ಆನುರೂಪ್ಯದಲ್ಲಿ ಪ್ರಮಾಣ.

**ಯಥಾ ಪ್ರಿಯಾತಿಥಿಂ ಯೋಗ್ಯಂ ಭಗವಂತಂ ತಥಾಽರ್ಚಯೇತ್ ।**

ಪ್ರಿಯವಾದ ಅತಿಥಿಯನ್ನು ಸೌಲಭ್ಯಾದಿ ಗುಣಗಳಿಂದ ಉಂಟಾದ ಭಕ್ತಿಯಿಂದ ಆದರದಿಂದ ಪೂಜಿಸುತ್ತಾರೆ, ಹಾಗೆ ಭಗವಂತನನ್ನು ಪೂಜಿಸಬೇಕು. ಸ್ನೇಹ ವಿಶೇಷಾ ರಾಧನದಲ್ಲಿ ಪ್ರಮಾಣ.

**ಯಥಾಚ ಪುತ್ರಂ ದಯಿತಂ ತಥೈವೋಪಚರೇದ್ಧರಿಮ್ ।**

ಪ್ರೀತಿಗೆ ಪಾತ್ರನಾದ ಮಗನಿಗೆ ತಾಯಿತಂದೆಗಳು ಪ್ರೀತಿಯಿಂದ ಉಪಚಾರ ಮಾಡುತ್ತಾರಲ್ಲವೆ ? ಹಾಗೆ ಪೂಜಿಸಬೇಕು.

ಈ ರೀತಿ ನಿತ್ಯವೂ ಶರೀರಬೀಳುವವರೆಗೂ ನಿತ್ಯನೈಮಿತ್ತಿಕವಾದ ಕರ್ಮಗಳನ್ನು ಭಗವದಾಜ್ಞೆಯೆಂದು ಪ್ರೀತಿಯಿಂದ ಮಾಡಬೇಕು. ಈ ವ್ಯಾಪಾರಗಳು ತಾನಾಗಿಯೇ ಪ್ರೀತಿಯನ್ನುಂಟುಮಾಡತಕ್ಕವು. ರುಚಿಕರವಾಗುವುವು. ಸ್ವಯಂಸ್ವಾದುತ್ವ ಉಳ್ಳವು. ಈ ರೀತಿ ಮಾಡುವ ಪಪ್ರನ್ನನಿಗೆ ತನ್ನವ್ಯಾಪಾರಗಳಲ್ಲಿ "ಇವು ಮೋಕ್ಷಕ್ಕೆ ಉಪಾಯಗಳು. ಮೋಕ್ಷವನ್ನು ಗಳಿಸಲು ಇವನ್ನು ಮಾಡುತ್ತೇನೆ" ಎಂಬ ಬುದ್ಧಿಯೂ ಉಂಟಾಗಕೂಡದು.

ಇದನ್ನೇ ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹ ರಕ್ಷಯಲ್ಲಿ—

**ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವಕಾರಿತಃ ।**
**ಉಪಾಯತಾಂ ಪರಿತ್ಯಜ್ಯ ॥**

ಎಂದು ಹೇಳಿದ್ದಾರೆ.

ಪ್ರೀತ್ಯೈವ—ಪ್ರೀತಿಯಿಂದಲೇ, ಕೇವಲ ಪ್ರೀತಿಯೇ ಪ್ರಯೋಜನವಾಗಿ ಎಂದು ಇಲ್ಲಿಯ ಏವಕಾರಕ್ಕೆ ಅರ್ಥ. ಉಪಾಯತ್ವಬುದ್ಧಿ ಕೂಡದು. ಇದು ನಾವು ಹೊಂದುವ ಮೋಕ್ಷವೇ ಮೊದಲಾದ ಇಷ್ಟಾರ್ಥಗಳಿಗೆ ಸಾಧನ ಎಂಬ ಬುದ್ಧಿಯನ್ನು ಬಿಡಬೇಕು ಎಂದರ್ಥ.

**ನ್ಯಾಸವಿದ್ಯಾನುರೂಪೈಸ್ತು ವ್ಯಾಪಕೈರ್ಯದಿವೇತರೈಃ ।**
**ಯದಿವಾ ಸ್ತುತಿಗೀತಾದ್ಯೈರ್ಯಥೇಷ್ಟಂ ಚಿತ್ತರಞ್ಜನಮ್ ॥**

ನ್ಯಾಸವಿದ್ಯೆಗೆ ತಕ್ಕ ಬೇರೆವ್ಯಾಪಾರಗಳಿಂದಲೋ ಅಂದರೆ ಭಗವಂತನ ಕೈಙ್ಕರ್ಯಕ್ಕಾಗಿ ಹೂವಿನ ಮಾಲೆಯನ್ನು ಕಟ್ಟಿ ಸಮರ್ಪಣೆ ಮಾಡುವುದು. ದೇವರ ಗುಡಿಯನ್ನು ಗುಡಿಸಿ, ಸಾರಿಸಿ ರಂಗೋಲೆಯಿಂದ ಅಲಂಕರಿಸುವುದು, ದೀಪವನ್ನು ಹಚ್ಚುವುದು ಇವೇ ಮೊದಲಾದವುಗಳಿಂದಲೋ ಅಥವಾ ಮನಸ್ಸಿಗೆ ಸಂತೋಷವನ್ನು ಉಂಟುಮಾಡುವ ಭಗವಂತನ ಸ್ತೋತ್ರ ಹೇಳುವುದು—ಹಾಡುವುದು, ಯೋಗ್ಯತೆ ಇದ್ದರೆ ಶ್ರೀ ಭಾಷ್ಯ—ಕುರುಕೇಶಾದಿಗಳ ದ್ರಾವಿಡ ಪ್ರಬಂಧ ಇವುಗಳ ಪರಿಚಯ ಮಾಡಿಕೊಳ್ಳುವುದು ಇವೇ ಮೊದಲಾದ ವ್ಯಾಪಾರಗಳಿಂದ ಕಾಲವನ್ನು ಕಳೆಯಬೇಕು.

**ಪರಪ್ರಸಾದಮಾತ್ರಾತ್ ತತ್ಸಾಕ್ಷಾತ್ಕಾರಾದಿ ಸಂಭವೇ ।**
**ಪ್ರಾಚೀನೋಪಾಯ ನಿಷ್ಠಾಯಾಮಶೈಥಿಲ್ಯಂ ಫಲಾವಧಿ ॥**

ಪರಮಾತ್ಮನ ಅನುಗ್ರಹದಿಂದ ಅವನ ಸಾಕ್ಷಾತ್ಕಾರಾದಿಗಳು ಉಂಟಾದರೆ, ಹಿಂದೆ ಅನುಷ್ಠಿಸಿದ ಉಪಾಯ–ಪ್ರಪತ್ತಿ, ಆದರಲ್ಲಿ ಫಲ ಬರುವವರೆಗೂ ಶೈಥಿಲ್ಯ ಬುದ್ಧಿ–ಸಡಿಲವಾದ ಮನಸ್ಸು ಉಂಟಾಗಕೂಡದು. ಸಾಕ್ಷಾತ್ಕಾರ ಶಕ್ತಿಯನ್ನು ಕಂಡು ಭಕ್ತಿಯೋಗವನ್ನು ಆದರಿಸಿ, ಮಾಡಲ್ಪಟ್ಟ ಪ್ರಪತ್ತಿಯನ್ನು ಬಿಡುವುದು ಯುಕ್ತವಲ್ಲ ಎಂದು ಅಭಿಪ್ರಾಯ.

**ಶುದ್ಧೇಷು ಯದ್ವಾಮಿಶ್ರೇಷು ಸಂಸ್ಕಾರಾಚಾರವರ್ತ್ಮಸು ।**
**ಅಧಿಕಾರೋಪದೇಶಾದೇರಾನುರೂಪ್ಯೇಣವರ್ತನಮ್ ॥**

ಶುದ್ಧ ಅಥವಾ ಮಿಶ್ರಗಳಾದ, ಸಂಸ್ಕಾರ, ಆಚಾರ ಈ ವಿಷಯಗಳಲ್ಲಿ—ಹಾದಿ ಗಳಲ್ಲಿ, ಅಧಿಕಾರ ಮತ್ತು ಉಪದೇಶ ಇವಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ಉದಾ : ಕೆಲವರು ಶಿಖೆಯನ್ನು ಶಿರಸ್ಸಿನ ಹಿಂಭಾಗದಲ್ಲಿ ಧರಿಸುತ್ತಾರೆ. ಮತ್ತೆ ಕೆಲವರು ತಲೆಯ ಮುಂದೆ ಧರಿಸುತ್ತಾರೆ. ಗಯೆಯಲ್ಲಿ ಶ್ರಾದ್ಧ ಮಾಡಬೇಕಾದರೆ ಅಲ್ಲಿಯ ಮಾಹಾತ್ಮ್ಯದ ಕ್ರಮದಲ್ಲಿ ಅಲ್ಲಿಯವರನ್ನೇ ಪಿತೃ ಭೋಜನಕ್ಕೆ ನಿಮಂತ್ರಿಸಬೇಕೆಂಬ ವಿಧಿ ಇದೆ. ವಿಂಧ್ಯದ ಉತ್ತರ ದಕ್ಷಿಣಗಳಲ್ಲಿ ಆಚಾರ ವ್ಯತ್ಯಾಸ ಇದ್ದರೂ ಅದರಂತೆ ನಡೆದು ಕೊಳ್ಳುವುದು ಇವೇ ಮೊದಲಾದವು,

**ಅನ್ತಿಮ ಶ್ವಾಸಕಾಲೇಽಪಿ ಶಕ್ತಿತಃ ಸಾವಧಾನತಾ ।**
**ಅನುಪಪ್ಲವ ಪರ್ಯನ್ತ ಜ್ಞಾನ(ನಿ)ಪ್ರಾಧಾನ್ಯಸಂಗ್ರಹಃ ॥**

ಪ್ರಾಣ ಹೋಗುವವರೆಗೂ ಶಕ್ತಿ ಇದ್ದಷ್ಟು ಎಚ್ಚರಿಕೆಯಾಗಿರಬೇಕು, ಪ್ರಜ್ಞೆ ತಪ್ಪುವವರೆಗೂ ಹಿಂದೆ ಹೇಳಿದಂತೆ ಜ್ಞಾನಿಯು ಮುಖ್ಯವಾಗಿ ನಡೆದುಕೊಳ್ಳ ಬೇಕಾದವನ್ನು ಸಂಗ್ರಹಿಸಲಾಗಿದೆ.

**ಅಶೇಷಜನ್ತುಸೌಹಾರ್ದಮಾತ್ಮಮಾಹಾತ್ಮ್ಯಗೋಪನಮ್ ॥**

ಎಲ್ಲಾ ಪ್ರಾಣಿಗಳಲ್ಲಿಯೂ ಪ್ರೀತಿ–ಸ್ನೇಹದಿಂದ ನಡೆದುಕೊಳ್ಳಬೇಕು. ತನ್ನ ಪ್ರಭಾವವನ್ನು ಹೇಳಿಕೊಳ್ಳಕೂಡದು–ಗುಟ್ಟಾಗಿ ಇಟ್ಟುಕೊಳ್ಳಬೇಕು.

**ಅಮಾನಿತ್ವಾದಿ ಸಂಪತ್ತಿರ್ಮಾನಸ್ಯಾಪ್ಯವಧೂನನಮ್ ॥**

ಮಾನ ಶಬ್ದಕ್ಕೆ ಆತ್ಮಗೌರವ, ಮರ್ಯಾದೆ, ಗರ್ವ, ಅಹಂಕಾರ ಇವೆಲ್ಲಾ ಅರ್ಥ. ಪ್ರಕೃತದಲ್ಲಿ ಇತರರನ್ನು ಮರ್ಯಾದೆ ಇಲ್ಲದೆ ಕಾಣುವುದು, ಅಹಂಕಾರ ಇಲ್ಲದಿರುವಿಕೆ, ಇವು ಅಮಾನಿತ್ವ ಎಂಬುದರ ಅರ್ಥ. ಈ ಸಂಪತ್ತು ಬೇಕು. ಗರ್ವ ವನ್ನು ಬಿಡಬೇಕು ಎಂಬ ಗುಣಗಳು ಪ್ರಪನ್ನನಿಗೆ ಇರಬೇಕು. ಜೀವನಿಗೆ ಶರೀರದ

ಸಂಬಂಧದಿಂದ ಅನೇಕವಾದ ಗುಣಗಳು ಉಂಟಾಗುತ್ತವೆ. ಅವುಗಳಲ್ಲಿ ಆತ್ಮವನ್ನು ಅರಿಯಲು ಸಹಾಯವಾದ ಗುಣಗಳನ್ನು ಗೀತಾಚಾರ್ಯ ಹೇಳಿದ್ದಾನೆ.

೧ ೨ ೩ ೪ ೫
*ಅಮಾನಿತ್ವಮದಮ್ಭಿತ್ವಂ ಅಹಿಂಸಾಕ್ಷಾನ್ತಿರಾರ್ಜವಮ್ ।
೬ ೭ ೮ ೯
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥೭॥
೧೦ ೧೧
ಇಂದ್ರಿಯಾರ್ಥೇಷು ವೈರಾಗ್ಯಂ ಅನಹಙ್ಕಾರ ಏವಚ ।
೧೨
ಜನ್ಮಮೃತ್ಯು ಜರಾವ್ಯಾಧಿ ದುಃಖದೋಷಾನುದರ್ಶನಮ್ ॥೮॥
೧೩ ೧೪
ಅಸಕ್ತಿರನಭಿಷ್ವಙ್ಗಃ ಪುತ್ರದಾರ ಗೃಹಾದಿಷು ।
೧೫
ನಿತ್ಯಂಚ ಸಮಚಿತ್ತತ್ವಂ ಇಷ್ಟಾನಿಷ್ಟೋಪಪತ್ತಿಷು ॥೯॥
೧೬
ಮಯಿಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
೧೭ ೧೮
ವಿವಿಕ್ತದೇಶ ಸೇವಿತ್ವಂ ಅರತಿರ್ಜನಸಂಸದಿ ॥೧೦॥
೧೯ ೨೦
ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।
ಏತಜ್ಜ್ಞಾನಮಿತಿಪ್ರೋಕ್ತಂ ಅಜ್ಞಾನಂ ಯದತೋಽನ್ಯಥಾ ॥೧೧॥

೧. [1]ಹಿರಿಯರನ್ನು ಅಲಕ್ಷ್ಯವಾಗಿ ಕಾಣದೆ ಇರುವುದು

೨. [2]ಒಳ್ಳೆಯ ಕಾರ್ಯಗಳನ್ನು ಕೀರ್ತಿಗಾಗಿ ಮಾಡದೆ ಇರುವುದು.

*ಶ್ರೀ ಭಗವದ್ಗೀತಾ. ೧೩ನೇ ಅಧ್ಯಾಯ. ಶ್ಲೋಕ. ೭–೧೧.

1. ನಾನು ಓದಿದವನು, ಒಳ್ಳೆಯ ಕುಲದಲ್ಲಿ ಹುಟ್ಟಿದವನು, ಹಣವಂತನು, ಎಂದು ಒಬ್ಬನು ಎಣಿಸುವುದರಿಂದ ಗರ್ವ ಉಂಟಾಗುತ್ತದೆ ಅದರಿಂದ ಹಿರಿಯರನ್ನು ಲಕ್ಷ್ಯ ಮಾಡದಿರುವುದು ಉಂಟಾಗುತ್ತದೆ. ಈ ಗರ್ವವೂ ಅದರ ಕಾರ್ಯವಾದ ಅಲಕ್ಷ್ಯ ಮಾಡುವುದೂ ಇಲ್ಲದಿರುವುದು.

2. ಒಳ್ಳೆಯ ಕಾರ್ಯಗಳನ್ನು ವೇದವು ಮಾಡುವಂತೆ ಹೇಳುತ್ತದೆ. ಆದುದರಿಂದ ಅವುಗಳನ್ನು ಮಾಡತಕ್ಕವು–ಕರ್ತವ್ಯ ಎಂಬ ಅಭಿಪ್ರಾಯದಿಂದ ಅವುಗಳನ್ನು ಮಾಡಬೇಕು. ನಾಲ್ಕು ಜನರು ನನ್ನನ್ನು ಕೊಂಡಾಡಬೇಕೆಂದು ನೆನೆದು ಮಾಡದಿರುವಿಕೆ.

೩. ಮನಸ್ಸು, ಮಾತು, ಶರೀರ—ಇವುಗಳಿಂದ ಉಂಟಾಗುವ [1]ತೊಂದರೆಯನ್ನು ಮಾಡದಿರುವುದು.

೪. ಮತ್ತೊಬ್ಬರು ತೊಂದರೆಯನ್ನು ಮಾಡಿದರೂ ಅವರ ವಿಷಯದಲ್ಲಿ [2]ಮನಸ್ಸು ಕೆಡದೆ ಇರುವುದು.

೫. ಮತ್ತೊಬ್ಬರ ವಿಷಯದಲ್ಲಿ ಮನಸ್ಸು, ಮಾತು, ಶರೀರ ಇವು ಮೂರೂ ಹೊಂದಿಕೊಂಡು ಇರುವುದು. ಅದಾದರೋ—ಬಾಯಿನಿಂದಲೂ ಶರೀರದಿಂದಲೂ ಒಬ್ಬನನ್ನು ಕೊಂಡಾಡುವಾಗ ಮನಸ್ಸೂ ಆ ಕಾರ್ಯಕ್ಕೆ ಹೊಂದಿಕೊಂಡಿರಬೇಕು.

೬. ಆತ್ಮಾವಿನ ನಿಜಸ್ಥಿತಿಯನ್ನು ತಿಳಿಸುವ ಆಚಾರ್ಯನ ಹತ್ತಿರ ನಮಸ್ಕರಿಸುವುದು, ವಿನಯದಿಂದ ತಿಳಿಯದ ವಿಷಯಗಳನ್ನು ಕೇಳುವುದು, ಅವನಿಗೆ ಶುಶ್ರೂಷೆ ಮಾಡುವುದೇ ಮೊದಲಾದವುಗಳಲ್ಲಿ ಆಸೆ.

೭. ಆತ್ಮವನ್ನು ಅರಿಯುವುದಕ್ಕೂ ಆ ಅರಿವಿಗೆ ಸಹಾಯವಾದ ಕಾರ್ಯಗಳನ್ನು ಮಾಡುವುದಕ್ಕೂ ಮನಸ್ಸು, ವಾಕ್ಕು, ಶರೀರ ಇವು ಹೇಗೆ ಇರಬೇಕೆಂದು ಶಾಸ್ತ್ರದಲ್ಲಿ ಹೇಗೆ ಹೇಳಿದೆಯೋ ಹಾಗೆ ಇರುವುದು.

೮. ಆತ್ಮವನ್ನು ಕುರಿತು ಶಾಸ್ತ್ರದಲ್ಲಿ ಹೇಳಿರುವ ಸಂಗತಿಗಳನ್ನು ಚೆನ್ನಾಗಿ ಅರಿತು ಅದರಲ್ಲಿ ಸಂದೇಹವಿಲ್ಲದೆ [3]ಸ್ಥಿರವಾಗಿ ನಂಬುವುದು.

೯. ಆತ್ಮವನ್ನು ಬಿಟ್ಟು ಬೇರೆ ಸಂಗತಿಗಳಿಂದ ಮನಸ್ಸನ್ನು ತಿರುಗಿಸುವುದು.

1. ತೊಂದರೆ (ಹಿಂಸೆ) ಎಂಬ ಮಾತಿಗೆ ತೊಂದರೆಯನ್ನು ಉಂಟು ಮಾಡುವುದಕ್ಕಾಗಿಯೇ ಮಾಡುವ ಕೆಲಸ ಎಂದು ಅರ್ಥ. ವೈದ್ಯನು ಸ್ವಲ್ಪ ತೊಂದರೆಯನ್ನು ಕೊಟ್ಟು, ಸುಖವನ್ನು ಉಂಟು ಮಾಡುವುದರಿಂದ, ಆ ತೊಂದರೆಯು ಹಿಂಸೆಯಲ್ಲ, ಇಲ್ಲಿ "ಇನೊಬ್ಬರಿಗೆ" ಎಂದು ಹೇಳಿದರೂ, ಶಾಸ್ತ್ರದಲ್ಲಿ ಹೇಳದ ವಿಧವಾಗಿ ಒಬ್ಬನು ತನಗೆ ಮಾಡುವ ತೊಂದರೆಯು ಹಿಂಸೆಯೇ. ಅದೂ ಕೂಡದು.

2. ಮನಸ್ಸು ಇರಬೇಕಾದ ರೀತಿ–ಆಸೆ ಮುಂತಾದವು ಇಲ್ಲದಿರುವಿಕೆ. ಮಾತು ಇರಬೇಕಾದ ರೀತಿ–ಸುಳ್ಳನ್ನು ಹೇಳದೆ ಇರುವುದೇ ಮೊದಲಾದವು, ಶರೀರವು ಇರಬೇಕಾದ ರೀತಿ–ಶಾಸ್ತ್ರವು ತಿನ್ನಕೂಡದೆಂದು ಹೇಳಿರುವವನ್ನು ತಿನ್ನದೇ ಇರುವುದು ಮುಂತಾದವು ಮನಸ್ಸು ವಾಕ್ಕು ಶರೀರ ಹೀಗೆ ಇರಬೇಕೆಂದು ಪ್ರತ್ಯಕ್ಷದಿಂದಲೂ ಯುಕ್ತಿಯಿಂದಲೂ ಕಂಡುಹಿಡಿಯಲಾಗುವುದಿಲ್ಲ, ಶಾಸ್ತ್ರದಿಂದಲೇ ತಿಳಿಯಬೇಕಾಗಿದೆ.

3. ವೇದವನ್ನು ಒಪ್ಪದವರೊಡನೆಯೂ, ವೇದವನ್ನು ಒಪ್ಪಿಕೊಂಡು ತಪ್ಪಾಗಿ ಅರ್ಥವನ್ನು ಹೇಳುವರೊಡನೆಯೂ ಸೇರಿ ಅವರ ಮಾತನ್ನು ಕೇಳಿ ಮನಸ್ಸು ಕೆಡದೆ ಇರುವುದು.

೧೦. ಆತ್ಮವನ್ನು ಬಿಟ್ಟು ಬೇರೆ ವಿಷಯಗಳಲ್ಲಿ ಇರುವ [1]ದೋಷಗಳನ್ನು ನೋಡಿ ಜುಗುಪ್ಸೆಪಡುವುದು.

೧೧. ದೇಹವನ್ನು ಆತ್ಮವೆಂದು ನೆನೆಯದೇ ಇರುವುದು, ದೇಹಕ್ಕೆ ಸಂಬಂಧಪಟ್ಟ ವಸ್ತುಗಳನ್ನು ತನಗೆ ಸೇರಿದವೆಂದು ನೆನೆಯದೇ ಇರುವುದು.

೧೨. ಜೀವನಿಗೆ ದೇಹ ಇರುವಾಗ ಹುಟ್ಟುವಿಕೆ, ಮುದಿತನ, ರೋಗ, ಇನ್ನೂ ಕೆಲವು ದುಃಖಗಳು ಇವೇ ಮೊದಲಾದ ತೊಂದರೆಗಳು [2]ಬರದೆ ಇರಲಾರವು ಎಂದು ನೆನೆಯುವುದು.

೧೩. ಆತ್ಮವನ್ನು ಬಿಟ್ಟು [3]ಬೇರೆ ವಸ್ತುಗಳಲ್ಲಿ ಆಸೆ ಇಲ್ಲದಿರುವಿಕೆ.

೧೪. ಮಗ, ಹೆಂಡತಿ, ಮನೆ, ಮೊದಲಾದವುಗಳಲ್ಲಿ [4]ಶಾಸ್ತ್ರದಲ್ಲಿ ಹೇಳಿರುವ ಕೆಲಸಗಳಿಗೆ ಸಹಾಯವಾಗಿ ಇಟ್ಟುಕೊಳ್ಳುವುದನ್ನು ಬಿಟ್ಟು ಹೆಚ್ಚಾದ ಅಭಿಮಾನವಿಲ್ಲದಿರುವಿಕೆ.

1. ಈ ರೀತಿ ನೆನೆಸುವುದರಿಂದಲೇ ದೇಹ ಸಂಬಂಧವು ಪೂರ್ಣವಾಗಿ ಹೋಗಬೇಕೆಂಬ ನೆನಪು ಬಲವಾಗುತ್ತದೆ.

2. ಶ್ಲೋಕದಲ್ಲಿ ತೊಂದರೆಗಳನ್ನು ನೆನೆಯುವುದು ಎಂದು ಹೇಳಿದ್ದರೂ, ಅಕ್ಕಿಯನ್ನು ಎತ್ತಿಕೊಂಡು ಹೊಟ್ಟನ್ನು ತಳ್ಳುವಂತೆ ದೇಹವನ್ನು ಇಟ್ಟುಕೊಂಡು ತೊಂದರೆಗಳನ್ನು ತಳ್ಳಲಾಗದೆಂದು ತೋರಿಸಲು ಭಾಷ್ಯದಲ್ಲಿ "ಬರದೇ ಇರಲಾರದು" ಎಂದು ಹೇಳಿದೆ. ನೆನೆಯುವುದು (ಅನುದರ್ಶನಮ್) ಎಂಬುದು ಬಾರಿ ಬಾರಿಗೂ ನೆನೆಯುವುದು.

3. ಕಣ್ಣು ಮೊದಲಾದ ಇಂದ್ರಿಯಗಳಿಗೂ ವಿಷಯಗಳಿಗೂ ಒಂದಕ್ಕೊಂದು ತಾಗುವಿಕೆಯಿಂದ ಉಂಟಾಗುವ ಸುಖಗಳಲ್ಲಿ ಆಸೆಯಿಲ್ಲದೆ ಇರುವುದನ್ನು ೧೦ನೇ ಗುಣವಾಗಿ ಹೇಳಲ್ಪಟ್ಟಿತು. ಇಲ್ಲಿ ನೆನಪಿನಿಂದ ಬರುವ ಸುಖಗಳೂ ಹೇಳಲ್ಪಡುತ್ತವೆ.

4. ನೆನಪಿನಿಂದ ಬರುವ ಸುಖಗಳಲ್ಲಿ ಆಸೆಯನ್ನು (ಮಗ, ಹೆಂಡತಿ, ಮನೆ ಮೊದಲಾದವುಗಳಲ್ಲಿ ಸಂಗವನ್ನು) ಬಿಡಬೇಕೆಂದರೆ ಗೃಹಸ್ಥಾಶ್ರಮದಲ್ಲಿ ಇರುವವನಿಗೆ ಇವುಗಳಲ್ಲಿ ಆಸೆಯನ್ನು ಬಿಡಬೇಕೆಂಬುದಾಗಿ ಆಗುತ್ತದೆ. ಬಿಟ್ಟರೆ, ಅವನ ಕಾರ್ಯಗಳು ಹೇಗೆ ನಡೆಯುತ್ತವೆ ಎಂದರೆ, ಉತ್ತರ–ಮಾಡಬೇಕೆಂಬ ಕಾರ್ಯಗಳಿಗೆ ಸಹಾಯವಾದ ವಸ್ತುಗಳನ್ನು ಪೂರ್ತಿಯಾಗಿ ಬಿಡಬೇಕೆಂದು ಅಭಿಪ್ರಾಯ ಅಲ್ಲ. ಆ ಕೆಲಸಗಳನ್ನು ಮಾಡುವುದಕ್ಕಾಗಿ ಅವುಗಳಲ್ಲಿ ನಮಗೆ ಎಷ್ಟು ಪ್ರೀತಿ ಬೇಕೋ ಅಷ್ಟು ಮಾತ್ರ ಅವುಗಳಲ್ಲಿ ಇಡಬೇಕು. ಅದಕ್ಕಿಂತ ಹೆಚ್ಚಾಗಿ ಇಡಕೂಡದು. ಇದನ್ನು ತೋರಿಸಲು ಶ್ಲೋಕದಲ್ಲಿ "ಅಭಿಷ್ವಙ್ಗಃ—ಹೆಚ್ಚಾದ ಪ್ರೀತಿ ಇಲ್ಲದಿರುವುದು" ಎಂದು ಹೇಳಲ್ಪಟ್ಟಿದೆ.

೧೫. ಮನಸ್ಸಿಗೆ ಹಿಡಿಸುವ ವಸ್ತುಗಳು ಒದಗಿದರೆ ಸಂತೋಷವಿಲ್ಲದಿರುವಿಕೆಯೂ, ಮನಸ್ಸಿಗೆ ಹಿಡಿಸದ ವಸ್ತುಗಳು ಬಂದರೆ ದುಃಖವಿಲ್ಲದಿರುವಿಕೆಯೂ.[1]

೧೬. ಮತ್ತೊಬ್ಬರನ್ನು[2] ನೆನೆಯದೆ ಎಲ್ಲಾ ಪ್ರಪಂಚಕ್ಕೂ ರಾಜನಾದ ನನ್ನ ಹತ್ತಿರ ಸ್ಥಿರವಾದ ಭಕ್ತಿ.

೧೭. ಜನರಿಲ್ಲದ ಜಾಗದಲ್ಲಿ ವಾಸಮಾಡುವುದು.

೧೮. ಆತ್ಮನನ್ನು ಕುರಿತು ಸ್ಮರಿಸದ ಹತ್ತು ಜನ ಕೂಡಿ ಇರುವ ಜಾಗದಲ್ಲಿ ಜುಗುಪ್ಸೆ.

೧೯. ಆತ್ಮಾವಿನ ಜ್ಞಾನವು ಯಾವಾಗಲೂ ಎಡೆಬಿಡದೆ ಇರುವುದು.

೨೦. ಆತ್ಮಾವಿನ ನಿಜಸ್ಥಿತಿಯನ್ನು ತಿಳಿಸುವ ವಿಚಾರದಲ್ಲಿ ಆಸೆ ಇರುವವನಾಗಿ ಇರುವುದು. ಇವೆಲ್ಲಾ ಆತ್ಮವನ್ನು ನೋಡಲು ಸಹಾಯವಾಗಿ ಇರುವವು ; ಆತ್ಮನಿಗೆ ಶರೀರ ಸಂಬಂಧದಿಂದ ಈ ಗುಣಗಳು ಉಂಟಾಗುತ್ತವೆ. ಇವನ್ನು ಬಿಟ್ಟು ಬೇರೆಯವು ಅದಕ್ಕೆ ಅಡ್ಡಿಯನ್ನುಂಟುಮಾಡುವವು.[3]

ಈ ಗುಣಗಳೆಲ್ಲಾ ಪ್ರಪನ್ನನಿಗೆ ಇರಬೇಕು.

1. ಬೀದಿಯಲ್ಲಿ ಹೋಗುವಾಗ, ಒಬ್ಬನನ್ನು ಕಂಡರೆ, ಅವರು ನಮ್ಮನ್ನು ಮರ್ಯಾದೆಯನ್ನು ಮಾಡಬೇಕೆಂದು ತೋರುತ್ತದೆ. ಅದರಿಂದ ಶರೀರಕ್ಕೆ ಏನು ? ಒಂದೂ ಇಲ್ಲ, ಮಾಡಿದರೆ ಸಂತೋಷಪಡುವುದು. ಇಲ್ಲದಿದ್ದರೆ ದುಃಖಪಡುವುದು—ಇವೇ ಮೊದಲಾದವು ಇಲ್ಲದಿರುವುದು, ಇಲ್ಲಿ ನೆನಪಿನಿಂದ ಬರುವ ಸುಖಗಳಲ್ಲೂ ದುಃಖಗಳಲ್ಲೂ ಮನಸ್ಸು ಕೆಡದೆ ಇರುವುದನ್ನು ಹೇಳುವುದು, ಶರೀರದಲ್ಲಿ ವಸ್ತುಗಳ ಸಂಬಂಧದಿಂದ ಉಂಟಾಗುವ ಸುಖ ಮತ್ತು ದುಃಖ ಇವು ಖಂಡಿತ ಉಂಟಾಗುತ್ತವೆ. ಆದರಿಂದ ಮನಸ್ಸು ವ್ಯತ್ಯಾಸವಾಗದೆ ಇರುವುದಿಲ್ಲ. ಆದುದರಿಂದ ಅವನ್ನು ಇಲ್ಲಿ ಹೇಳಿಲ್ಲ. ಈ ಶ್ಲೋಕದಲ್ಲಿ ಮಕ್ಕಳು ಹೆಂಡತಿಗಳನ್ನು ಹೇಳಿರುವುದರಿಂದ ಹೀಗೆಯೋ ಅರ್ಥ ಹೇಳಬೇಕು.

2. ಭಗವಂತನನ್ನು ಬಿಟ್ಟು ಬೇರೆ ದೇವತೆಗಳ ಹತ್ತಿರ ಇರುವ ಭಕ್ತಿ ಬೇರು ಸಹಿತ ಹೋಗುವುದಕ್ಕೂ ಅದು ಭಗವಂತನ ಹತ್ತಿರ ಸ್ಥಿರವಾಗಿ ನಿಲ್ಲುವುದಕ್ಕೂ ಉಪಯೋಗವಾದ ಭಗವಂತನ ಗುಣ 'ನನ್ನ ಹತ್ತಿರ' ಎಂಬ ಮಾತಿನಿಂದ ಹೇಳಲ್ಪಡುತ್ತದೆ ಎಂದು ಅಭಿಪ್ರಾಯ. ಬೇರೆ ದೇವತೆಗಳ ಹತ್ತಿರ ಭಕ್ತಿ ಇಲ್ಲದಿದ್ದರೆ ತಾನೆ ಭಗವಂತನಲ್ಲಿ ಭಕ್ತಿ ಸ್ಥಿರವಾಗಿ ನಿಲ್ಲುತ್ತದೆ.

3. ೭ ನೆಯ ಶ್ಲೋಕವನ್ನು ಆರಂಭಿಸಿ ೧೧-ಶ್ಲೋಕದವರೆಗೂ ಆತ್ಮವನ್ನು ನೋಡಲು ಸಹಾಯಕವಾದ ೨೦ ಗುಣಗಳು ಹೇಳಲ್ಪಟ್ಟವು. ಇವುಗಳಲ್ಲಿ ಆತ್ಮವು ದೇಹಕ್ಕಿಂತ ಬೇರೆ ಎಂಬ ನೆನಪು ೧೦ ನೆಯ ಗುಣ. ಈ ನೆನಪು ಬಲವಾಗಿ ದೇಹವನ್ನು ಪೂರ್ತಿಯಾಗಿ ಬಿಟ್ಟುಬಿಡಬೇಕೆಂದು ಆತುರ ಉಂಟಾಗುವುದಕ್ಕೆ ದೇಹದೊಡನೆ ಸೇರಿರುವವರೆಗೂ

ಹುಟ್ಟುವಿಕೆ ಮೊದಲಾದ ತೊಂದರೆಗಳು ಖಂಡಿತವಾಗಿಯೂ ಇವೆಯೆಂದು ಬಾರಿಬಾರಿಗೂ ನೆನೆಯಬೇಕು. ಇದು ೧೨ ನೆಯ ಗುಣ. ಆತ್ಮವನ್ನು ಇದ್ದಹಾಗೆ ಅರಿಯುವಿಕೆ ಮಾತ್ರ ಸಾಲದು. ಅದನ್ನು ಯಾವಾಗಲೂ ಎಡಬಿಡದೆ ನೆನೆಸಿಕೊಂಡಿರಬೇಕು. ಇದು ೧೦ ನೆಯ ಗುಣ. ಮತ್ತೊಂದನ್ನು ನೆನೆಯುವುದು ಇದಕ್ಕೆ ಅಡ್ಡಿಯನ್ನುಂಟುಮಾಡುತ್ತದೆ. ಇದಿಲ್ಲದೆ ಇರುವುದು ೯ ನೆಯ ಗುಣ. ಆತ್ಮವನ್ನು ನೆನೆಸಿಕೊಂಡಿರುವುದಕ್ಕೆ ಜನದ ಸಮೂಹವೂ ತೊಂದರೆಯನ್ನುಂಟುಮಾಡುತ್ತದೆ. ಅದಕ್ಕಾಗಿ ಜನರಿಲ್ಲದ ಜಾಗದಲ್ಲಿ ಇರಬೇಕು. ಇದು ೧೭ ನೆಯ ಗುಣ. ಜನಗಳು ಸತ್ತ್ವಗುಣ ಮೇಲಿಟ್ಟವರಾಗಿದ್ದರೆ—ಅಂದರೆ ಸತ್ತ್ವಗುಣ ಇತರ ಎರಡು ಗುಣಕ್ಕಿಂತ ತಲೆಯೆತ್ತಿದ್ದಾಗಿದ್ದರೆ ಅವರೊಡನೆ ಸೇರಿರುವುದರಿಂದ ಆತ್ಮಾವಿನ ನೆನಪಿಗೆ ಸಹಾಯವಾಗುತ್ತದೆ. ಅವರೊಡನೆ ಮಾತ್ರ ಸೇರಿರುವುದು ೧೮ ನೆಯ ಗುಣ. ಯಾವ ನೆನಪೂ ಆತ್ಮಾವಿನ ನಿಜವಾದ ಅರಿವು ಸ್ಥಿರವಾಗಿ ನಿಲ್ಲುವುದಕ್ಕೆ ಸಹಾಯವಾಗಿರಬೇಕು. ಬೇರೆ ನೆನಪು ಕೂಡದು, ಇದು ೨೦ ನೆಯ ಗುಣ. ಆತ್ಮವನ್ನು ಬಿಟ್ಟು ಬೇರೆಯವುಗಳಲ್ಲಿ ಆಸೆಯನ್ನು ಬಿಡಬೇಕು. ಇದು ೧೦, ೧೩, ೧೪, ೧೫ ನೆಯ ಗುಣಗಳಾಗಿ ಹೇಳಲ್ಪಟ್ಟಿದೆ. 'ಒಳ್ಳೆಯ ಕೆಲಸಗಳನ್ನು ಮಾಡುತ್ತಾನೆ' ಎಂದು ನಾಲ್ಕು ಜನ ಕೊಂಡಾಡುವರನ್ನು ಆಸೆ ಪಡಕೂಡದು, ಕೊಂಡಾಡುವದೂ ಒಂದು ಫಲತಾನೇ. ಈ ಆಸೆ ಇಲ್ಲದಿರುವುದನ್ನು ೨ ನೆಯ ಗುಣವಾಗಿ ಹೇಳಿದೆ. 'ಎಲ್ಲವೂ ಭಗವಂತನ ಶರೀರವಾಗಿರುವುದರಿಂದ ಅವರುಗಳಿಗೆ ಅನುಕೂಲವಾಗಿ ಇರಬೇಕು. ಆದುದರಿಂದ ನಮಗೆ ಒಬ್ಬನು ತೊಂದರೆಯನ್ನುಂಟು ಮಾಡಿದರೂ ಅವನಿಗೆ ತೊಂದರೆಯನ್ನುಂಟುಮಾಡಬೇಕೆಂಬ ಎಣಿಕೆಯೇ ಉಂಟಾಗಕೂಡದು. ಆ ತೊಂದರೆಯನ್ನು ಸಹಿಸಿಕೊಳ್ಳಬೇಕು. ಅವನ ವಿಷಯದಲ್ಲಿ ಒಳ್ಳೆಯ ಮಾತು ಕಾರ್ಯ ಇವು ಬರಬೇಕು. ಹಾಗೆಯೇ ಮನಸ್ಸಿನ ಭಾವನೆಯೂ ಇರಬೇಕು. ಈ ಮೂರನ್ನೂ ೩, ೪, ೫ ನೆಯ ಗುಣಗಳಾಗಿ ಹೇಳಿದೆ. ಒಬ್ಬನಿಗೆ ವಿದ್ಯೆಯಿಂದಲೂ ಒಳ್ಳೆಯ ಹುಟ್ಟಿನಿಂದಲೂ, ಹಣದಿಂದಲೂ ಹೆಮ್ಮೆ ಉಂಟಾಗಿ ದೊಡ್ಡವರನ್ನು ಅಲಕ್ಷ್ಯವನ್ನು ಮಾಡಲು ಒದಗಬಹುದು. ಆ ಗರ್ವ, ಅಲಕ್ಷ್ಯ ಇವನ್ನು ಮಾಡಕೂಡದು. ತನ್ನ ನೀಚ ತನವನ್ನೇ ನೆನಸಿಕೊಂಡಿರಬೇಕು. ಇದು ಮೊದಲನೆಯಗುಣ. ಎಲ್ಲಕ್ಕೂ ಅಡಿಪಾಯವಾಗಿರುವುದು ಮೂರು ಗುಣಗಳು. ಒಳ್ಳೆಯ ವಿಷಯಗಳನ್ನು ಹೇಳಿಕೊಂಡಿರುವ ಒಳ್ಳೆಯ ಆಚಾರ್ಯನ ಹತ್ತಿರ ಯಾವಾಗಲೂ ವಿನಯವಾಗಿಯೇ ಇರುವುದು, ಶಾಸ್ತ್ರದಲ್ಲಿ ಹೇಳಿರುವ ರೀತಿ ಮನಸ್ಸು, ಮಾತು, ಶರೀರ ಶುದ್ಧವಾಗಿರುವುದು ಶಾಸ್ತ್ರದಲ್ಲಿ ಹೇಳಿರುವ ಸಂಗತಿಗಳಲ್ಲಿ ಸ್ಥಿರವಾದ ನಬಿಂಕೆ ಇವು ೬, ೭, ೮ ನೆಯ ಗುಣಗಳು. ಹೇಳಲ್ಪಟ್ಟ ಗುಣಗಳೆಲ್ಲ ಇದ್ದರೂ ಭಗವಂತನ ಹತ್ತಿರ ಸ್ಥಿರವಾದ ಭಕ್ತಿ ಇಲ್ಲದಿದ್ದರೆ ಆತ್ಮವನ್ನು ಇದ್ದ ಹಾಗೆ ನೋಡಲಾಗದು. ಆದುದರಿಂದ ಭಗವಂತನ ಭಕ್ತಿಯನ್ನು ೧೬ ನೆಯ ಗುಣವಾಗಿ ಹೇಳಿದೆ.

ಇದು ಬಹಳ ಮುಖ್ಯವಾದದು ಆದುದರಿಂದಲೇ ಭಾಷ್ಯಕಾರರು ಶರಣಾಗತಿ ಗದ್ಯದಲ್ಲಿ "ಪರಭಕ್ತಿ ಪರಜ್ಞಾನ ಪರಮಭಕ್ತ್ಯೇಕಸ್ವಭಾವಂ ಮಾಂಕುರೀಷ್ವ" ಎಂದು ಭಗವಂತನನ್ನು ಪ್ರಾರ್ಥಿಸಿದ್ದಾರೆ. ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಹೆಚ್ಚಾದ ಬಯಕೆ ಕಣ್ಣಿನಿಂದ ನೋಡಬೇಕೆಂಬ ಬಯಕೆ, ಪರಭಕ್ತಿ, ಹಾಗೆ ಸಾಕ್ಷಾತ್ಕಾರವಾದರೆ ಅದು ಆಗುತ್ತಲೇ ಇರುವುದು—ಉತ್ತರೋತ್ತರ ಸಾಕ್ಷಾತ್ಕಾರವೇ ಪರಜ್ಞಾನ. ಪರಮಭಕ್ತಿ ಯಾದರೋ ಸಾಕ್ಷಾತ್ಕಾರವಾದರೆ, ಅದನ್ನು ಯಾವಾಗಲೂ ಅನುಭವಿಸಬೇಕೆಂಬ ಬಯಕೆ, "ಸಾಕ್ಷಾತ್ಕೃತೇನಿರಂತರಾನುಬುಭೂಷಾ" ಎಂದು ನ್ಯಾಯಸಿದ್ಧಾಂಜನದ ಟೀಕೆ.

ಇನ್ನು ಉಳಿದ ಕಾರಿಕಾ ಭಾಗದ ಅರ್ಥವಿವರಣೆ.

**ಚಿರಂ ಶೋಧಿತಪಾತ್ರೇಷು ದೀಪವತ್ ಕೃಪಯಾ ಸ್ವಯಾ ।**
**ಆರುರುಕ್ಷುಭಿರಧ್ವಾನಂ ರಹಸ್ಯಾರ್ಥ ಸಮರ್ಪಣಮ್ ।**
**ಇತಿ ಶುಶ್ರುಮ ಪೂರ್ವೇಷಾಂ ಪ್ರಪನ್ನಾನಾಂ ಮಹೀಯಸಾಮ್ ॥**

ಒಂದು ದೀಪದಲ್ಲಿ ಎಣ್ಣೆಬತ್ತಿಗಳು ಮುಗಿದು, ಉರಿಯುವಿಕೆ ಕಡಿಮೆಯಾಗುತ್ತಾ ಬರುತ್ತಿದ್ದಾಗ ಪಕ್ಕದಲ್ಲಿ ಎಣ್ಣೆ ಬತ್ತಿಗಳು ಪುಷ್ಕಲವಾಗಿರುವ-ತುಂಬಿರುವ ದೀಪವನ್ನು ಅದರಿಂದ ಹಚ್ಚಿ ಹೆಚ್ಚಾದ ಪ್ರಕಾಶವನ್ನು ಪಡೆಯುವಂತೆ ಮೋಕ್ಷ ಮಾರ್ಗವನ್ನು ಹತ್ತಿಹೋಗಬೇಕೆಂಬ ಅಪೇಕ್ಷೆ ಉಳ್ಳವರು ಬಹಳ ಕಾಲ ಶಿಕ್ಷಿಸಿ ಪರೀಕ್ಷೆ ಮಾಡಿ ಶುದ್ಧವಾಗಿರುವ-ದೋಷವಿಲ್ಲದ ಶಿಷ್ಯರಲ್ಲಿ ರಹಸ್ಯವಾದ ಅರ್ಥವನ್ನು ಉಪದೇಶಿಸಿ ಇಡಬೇಕು. ಇದು ಮಹಾನುಭಾವರಾದ ಹಿಂದಿನ ಪ್ರಪನ್ನರು ಮಾಡಿರುವ ಸಂಪ್ರದಾಯಾಭಿವೃದ್ಧಿಯ ರೀತಿ. ಹೀಗೆಂದು ಕೇಳಿದ್ದೇವೆ. 'ಸಮ್ಯಕ್ ಪ್ರದೀಯತೇ ಅಸ್ಮೈ=ಚೆನ್ನಾಗಿ ಇವನಿಗೆ ಕೊಡಲ್ಪಡುತ್ತದೆ' ಎಂದು ಸಂಪ್ರದಾಯಶಬ್ದದ ಅರ್ಥ.

**ಅದ್ಯಾಪಿಕ್ವಾಪಿ ಕೇಷಾಂಚಿದವನ್ಧ್ಯಂ ಕಾಲಯಾಪನಮ್ ।**

ಈವಾಗಲೂ ಎಲ್ಲೋ ಕೆಲವರು ವ್ಯರ್ಥವಾಗಿ ಕಾಲಕಳೆಯದಂತೆ ಹಿಂದೆ ಹೇಳಿದ ರೀತಿಯಲ್ಲಿ ನಡೆದು ಕೊಳ್ಳುತ್ತಾರೆ.

**ತದೇವಮೇತಾನ್ ಸತ್ತ್ವಸ್ಥಾನ್ ಅನ್ಯಾನಪ್ಯನುಪಪ್ಲವಾನ್ ।**
**ಪ್ರಪನ್ನಾನ್ ಪ್ರತಿಸಂಧಾಯ ಶ್ರದ್ಧತ್ಸ್ವೋಪಾಯಮೀದೃಶಮ್ ॥**

ಈ ರೀತಿ ಸತ್ವಗುಣ ಮೇಲಾಗಿ ಸಾತ್ವಿಕರೀತಿಯಲ್ಲಿ ಇರುವ ಮತ್ತು ಇನ್ನೊಬ್ಬರಿಗೆ ತೊಂದರೆಯನ್ನುಂಟುಮಾಡದೆಯೂ ಇರುವ ಬೇರೆ ಪ್ರಪನ್ನರನ್ನೂ ಕುರಿತು ಈ ರೀತಿ ಹೇಳಿದ್ದಾಯಿತು. ಇಂತಹ ಉಪಾಯವನ್ನು ನಂಬು.

**ತ್ಯಕ್ತ್ವಾ ಪುತ್ರಾಂಶ್ಚದಾರಾಂಶ್ಚ ರಾಘವಂ ಶರಣಂಗತಃ।**
**ವಿಭೀಷಣೋಽಪಿ ನನ್ವೇವಂ ತದಾಜ್ಞಾಮನ್ವವರ್ತತ ॥**

ವಿಭೀಷಣನೂ ಕೂಡ ಹೆಂಡತಿ-ಮಕ್ಕಳನ್ನು ಬಿಟ್ಟು ರಾಮನನ್ನು ಮರೆಹೊಕ್ಕನು. ಹೀಗೆಯೇ ಅವನ ಅಪ್ಪಣೆಯನ್ನು ಅನುಸರಿಸಿ ನಡೆದನು.

**ತ್ರಿವರ್ಗಕಾಂಕ್ಷಿಣಶ್ಚಾನ್ಯೇಸ್ವಾಭೀಷ್ಟೇಸಾಧನಾಂತರಮ್ ।**
**ತ್ಯಕ್ತ್ವಾ ಪ್ರಪೇದಿರೇ ನಿತ್ಯಂ ನ ತು ವೇಲಾಮಲಂಘಯನ್ ॥**

ಮೋಕ್ಷವನ್ನು ಬಿಟ್ಟು ಧರ್ಮ ಅರ್ಥ ಕಾಮಗಳೆಂಬ ತ್ರಿವರ್ಗ ಪುರುಷಾರ್ಥ ಗಳನ್ನು ಬಯಸುವವರೂ ಬೇರೆ ಸಾಧನವನ್ನು ಬಿಟ್ಟು ಶರಣಾಗತಿಯೆಂಬ ಸಾಧನ ವನ್ನೇ ಆಚರಿಸಿ ತಮ್ಮ ಇಷ್ಟಾರ್ಥವನ್ನು ಪಡೆದರು. ಅವರೂ ಶಾಸ್ತ್ರೀಯ ಪದ್ಧತಿ ಯೆಂಬ ಎಲ್ಲೆಕಟ್ಟನ್ನು ಮೀರಿ ನಡೆಯಲಿಲ್ಲ.

## ಸಚ್ಛಿಷ್ಯ ಮತ್ತು ಸದಾಚಾರ್ಯರ ಲಕ್ಷಣ

**ತಥಾಸಾತ್ಯಕಿ ತನ್ತ್ರೇಚ ಪ್ರೋಕ್ತಂ ಭಗವತಾ ಸ್ವಯಮ್ ।**
**ಪ್ರಪತ್ತಿ ಮಧಿಕೃತ್ಯೈವ ಸಚ್ಛಿಷ್ಯಾಚಾರ್ಯಲಕ್ಷಣಮ್ ॥**

ಭಗವಂತನು ಸಾತ್ಯಕಿತನ್ತ್ರದಲ್ಲಿ ಪ್ರಪತ್ತಿಯನ್ನು ಕುರಿತು ಹೇಳಿದ್ದಾನೆ: ಆ ಸಂದರ್ಭದಲ್ಲಿ ಒಳ್ಳೆಯ ಶಿಷ್ಯನ ಸ್ವರೂಪ ಎಂತಹದು ? ಆಚಾರ್ಯನ ಲಕ್ಷಣ ವೇನು ? ಎಂಬುದನ್ನೂ ತಾನೇ ಹೆಳಿದ್ದಾನೆ.

**ತ್ರಿಷುವರ್ಣೇಷು ಸಂಭೂತೋ ಮಾಮೇವ ಶರಣಂಗತಃ ।**
**ನಿತ್ಯನೈಮಿತ್ತಿಕ ಪರೋ ಮದೀಯಾರಾಧನೇರತಃ ।**
**ಆತ್ಮೀಯ ಪರಕೀಯೇಷು ಸಮೋ ದೇಶಿಕ ಉಚ್ಯತೇ ॥**

ಬ್ರಾಹ್ಮಣಾದಿ ಮೂರು ವರ್ಣಗಳಲ್ಲಿ ಹುಟ್ಟಿ ನನ್ನನ್ನೇ ಶರಣು ಹೋಗಬೇಕು. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ಮಾಡುವುದರಲ್ಲೇ ಆಸಕ್ತನಾಗಿ ನನ್ನ ಪೂಜೆ ಯಲ್ಲೇ ನಿರತನಾಗಿರಬೇಕು. ತನಗೆ ಸೇರಿದವರಲ್ಲೂ ಹಾಗೆಯೇ ಇತರರಿಗೆ ಸೇರಿದವ ರಲ್ಲೂ ಒಂದೇಸಮನಾಗಿ ಇರಬೇಕು. ಇಂತಹವನು ಆಚಾರ್ಯನು ಎನಿಸಲ್ಪಡುತ್ತಾನೆ,

**ಆಸ್ತಿಕೋ ಧರ್ಮಶೀಲಶ್ಚ ಶೀಲವಾನ್ ವೈಷ್ಣವಾರ್ಚಕಃ ।**
**ಗಂಭೀರಶ್ಚತುರೋಧೀರಃ ಶಿಷ್ಯ ಇತಿತ್ಯಭಿಧೀಯತೇ ॥**

ಲೋಕಾಂತರ ಇದೆ ಎಂಬ ತಿಳುವಳಿಕೆ ಉಳ್ಳವನಾಗಿ ಧರ್ಮವಾದ ನಡವಳಿಕೆ ಯಲ್ಲಿರಬೇಕು. ಒಳ್ಳೆಯ ಸ್ವಭಾವವುಳ್ಳವನಾಗಿ ವಿಷ್ಣುವಿನ ಭಕ್ತರನ್ನು ಪೂಜಿಸಬೇಕು. ಚೆಲ್ಲಾಟವಿಲ್ಲದೆ ಗಂಭೀರನಾಗಿ ಬುದ್ಧಿವಂತನಾಗಿರಬೇಕು. ಧೈರ್ಯಶಾಲಿಯಾಗಿರ ಬೇಕು. ಇಂತಹ ಗುಣಉಳ್ಳವನು ಶಿಷ್ಯ ಎನಿಸಿಕೊಳ್ಳಲು ತಕ್ಕವನಾಗುತ್ತಾನೆ. ಹೀಗೆ.

## ಪೀಠಿಕೆಯ ಸಿಂಹಾವಲೋಕನ

ಸರ್ವೇಶ್ವರನು ಶೇಷಿಯಾಗಿ, ನಾವುಗಳು ಅತನಿಗೆ ಶೇಷಭೂತರಾಗಿ ಇದ್ದೇವೆ. ಇವೆಲ್ಲ ಆ ಸರ್ವೇಶ್ವರನ ಪ್ರಯೋಜನಕ್ಕಾಗಿಯೇ ಹೊರತು ನಮ್ಮ ಪ್ರಯೋಜನ ಕ್ಕಲ್ಲ. ಚೇತನನ ಮೋಕ್ಷಪ್ರಾಪ್ತಿರೂಪ ಕಾರ್ಯಸಾಧನಕ್ಕೆ.

**ಅಧಿಷ್ಠಾನಂತಥಾಕರ್ತಾಕರಣಂಚ ಪೃತಗ್ವಿಧಮ್ ।**
**ವಿವಿಧಾಚ ಪೃಥಕ್ಚೇಷ್ಟಾದೈವಂಚೈವಾತ್ರ ಪಂಚಮಮ್ ॥**

ಎಂಬ ಶ್ಲೋಕದಲ್ಲಿ ತೋರಿ ಬರುವಂತೆ ಕರ್ತಾವಾದ ತನ್ನ ಕಾರ್ಯವೂ ದೈವವಾದ ಶ್ರಿಯಃಪತಿಯ ಕಾರ್ಯವೂ ಎರಡೂ ಆವಶ್ಯಕವು. ಇವುಗಳಲ್ಲಿ ಶ್ರೀಯಃ ಪತಿಯ ಕಾರ್ಯವು ಪ್ರಧಾನವಾದುದಾಗಿ ಕರುಣೆಯಿಂದಕೂಡಿದುದಾಗಿ ಸಿದ್ಧೋಪಾಯ ವೆಂದೆನಿಸುತ್ತದೆ. ಅಂತಹ ಕಾರುಣ್ಯವು ತನ್ನಲ್ಲಿ ಪುಷ್ಟಿಯಾಗಿ ಪ್ರವಹಿಸಲು ಕಾರಣ ವಾಗಿ ಜೀವಾತ್ಮನ ಕಾರ್ಯಗಳು ಭಕ್ತಿಪ್ರಪತ್ತಿಗಳಾಗಿ ಸಾಧ್ಯೋಪಾಯಗಳೆನಿಸುತ್ತವೆ.

ಹೀಗೆ ಪ್ರಯೋಜನ ಪ ರ ಂ ಪ ರೆ ಗ ಳ ನ್ನು ನಮಗೆ ಉಂಟುಮಾಡುವ ಕೃಪೆಯಿಂದ ಕೂಡಿದ ಸರ್ವೇಶ್ವರನು ' ಕೃ ಷ್ಣಂ ಧ ರ್ಮಂ ಸ ನಾ ತ ನ '=ಶ್ರೀ ಕೃಷ್ಣನು ಅನಾದಿಯಾಗಿರುವ ಧರ್ಮವು ಎಂದು ಸಿದ್ಧೋಪಾಯನೆಂದು ಹೇಳಲ್ಪ ಟ್ಟಿರುತ್ತದೆ. **"ಯೇಚ ವೇದವಿದೋವಿಪ್ರಾಃಯೇಚಾ ಸ್ಯಾತ್ಮವಿದೋ ಜನಾಃ ತೇವದಂತಿ ಮಹಾತ್ಮಾನಂ ಕೃಷ್ಣಂಧರ್ಮಂ ಸನಾತನಮ್"** ಎಂಬುದು ಪೂರ್ಣವಾದ ಶ್ಲೋಕವು ಇವನಿಗೆ ಪ್ರಸನ್ನತೆಯನ್ನುಂಟುಮಾಡುವ ಭಕ್ತಿ ಪ್ರಪತ್ತಿಗಳು ಸಾಧ್ಯೋ ಯಗಳು. ಈ ಉಪಾಯಗಳನ್ನುಜೀವನು ಅನುಷ್ಠಿಸಿದರೆ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.ಅವನಿಗೆ ಪ್ರಿಯತಮನಾಗುತ್ತಾನೆ. ಪರಮಾತ್ಮನು ಕೇವಲ ಶ್ರವಣ ಮನನ ನಿದಿಧ್ಯಾಸನಾದಿಗಳಿಂದ ಲಭ್ಯನಲ್ಲ. ಈ ಪರಮಾತ್ಮನು ಯಾವ ಉಪಾಸಕ ನನ್ನು ಯೋಗ್ಯನನ್ನಾಗಿ ಭಾವಿಸುವನೋ (ವರಿಸುವನೋ) ಅವನಿಂದ ಹೊಂದಲ್ಪ ಡುತ್ತಾನೆ. ಅಂತಹ ಉಪಾಸಕನಿಗೆ ಈ ಪರಮಾತ್ಮನು ತನ್ನ ದಿವ್ಯ ಮಂಗಳ ವಿಗ್ರಹ ವನ್ನು ಪ್ರಕಾಶಿಸುವ ಹಾಗೆ ಮಾಡುತ್ತಾನೆ. ಅಲ್ಲದೆ ಪರಿಪೂರ್ಣವಾದ ತನ್ನ ಅನುಭವವನ್ನೂ ಉಂಟುಮಾಡುತ್ತಾನೆ. ಈ ಅರ್ಥವುಳ್ಳ ಶ್ರುತಿ.

**ನಾಯಮಾತ್ಮಾ ಪ್ರವಚನೇನ ಲಭ್ಯೋನಮೇಧಯಾನ ಬಹುನಾಶ್ರುತೇನ ।**
**ಯಮೇವೈಷವೃಣತೇ ತೇನಲಭ್ಯಃತಸ್ಯೈಷ ಆತ್ಮಾ**
**ವಿವೃಣತೇ ತನೂಂಗ್ ಸ್ವಾಮ್ ॥**

ಎಂಬುದು. ಹಾಗೆ ಪ್ರಿಯತಮನೆಂದು ಭಾವಿಸು ಬೇಕಾದರೋ, ಪ್ರೀತರೂಪಾ ಪನ್ನಾವಾದ ಏಕಾಂತ ಮನಸ್ಸಿನಿಂದ ಭಗವದುಪಾಸನೆ ಮಾಡಿಯೇ ತೀರಬೇಕು ಅಥವಾ ಶರಣಾಗತಿಯನ್ನು ಮಾಡಬೇಕು ಆದುದರಿಂದ ಭಗವದುಪಾಸನ ಶರಣಾ ಗತಿಗಳು ಆವಶ್ಯಕವು, ಇವುಗಳ ಅವಶ್ಯಕತೆಯೇ ಇಲ್ಲದೆ ಪ್ರಿಯತಮನಾಗಿ ಎಂದಿಗೂ ಭಾವಿಸಲಾರನು. ಆದುದರಿಂದ ಸಿದ್ಧೋಪಾಯನಾದ ಸರ್ವೇಶ್ವರನ ಕೃಪೆಯೂ, ಸಾಧ್ಯೋಪಾಯವಾದ ಭಕ್ತಿಯಾಗಲಿ ಪ್ರಪತ್ತಿಯಾಗಲಿ ಎರಡೂ ಮುಕ್ತೈಶ್ವರ್ಯ ಪ್ರಾಪ್ತಿಗೆ ಆವಶ್ಯಕವೆಂಬ ಭಾವವು.

ಸುಕೃತ ಪರಿಪಾಕವಿದ್ದುದಾದರೆ, ಕರುಣಾಸಾಗರನಾದ ಶ್ರಿಯಃಪತಿಯು ಯಾವಾಗಲೂ ಸಿದ್ಧೋಪಾಯನಾಗಿದ್ದುಕೊಂಡು, ಈತನ ಮೂಲಕ ವ್ಯಾಜರೂಪಗಳಾದ ಸಾಧ್ಯೋಪಾಯಗಳಲ್ಲಿ ಒಂದನ್ನು ಅನುಷ್ಠಿಸುವಹಾಗೆಮಾಡಿ, ಆತನ ಪಾಪಗಳನ್ನೆಲ್ಲಾ ನಿರ್ಮೂಲ ಮಾಡಿ, ಆತನನ್ನು ಪ್ರಿಯತಮನಾಗಿ ಎಣಿಸಿ, ಆತನಿಗೆ ಅಂತಿಮಸ್ಮೃತಿ, ದೇಹಾವಸಾನ, ಬ್ರಹ್ಮನಾಡೀಪ್ರವೇಶ, ಅರ್ಚಿರಾದಿಗಮನ, ದಿವ್ಯ ವೈಕುಂಠಪ್ರಾಪ್ತಿ, ತನ್ನೊಡನೆ ಸಾಯುಜ್ಯ, ಪರಿಪೂರ್ಣನಾದ ತನ್ನ ಅನುಭವ, ಇವೆಲ್ಲವನ್ನೂ ತಾನೇ ಆವಾಗಲೂ ಸಿದ್ಧೋಪಾಯನಾಗಿ ಮಾಡಿಸುವನೆಂಬುದು ಮುಖ್ಯ ತಾತ್ಪರ್ಯ.

## ಪ್ರಪತ್ತಿಯು ಮೋಕ್ಷಕ್ಕೆ ನೇರವಾದ ಕಾರಣ

**[1]ನ್ಯಾಸಃ ಪ್ರೋಕ್ತೋಽತಿರಿಕ್ತಂತಪಇತಿ ಕಥಿತಃ ಸ್ವಧ್ವರಶ್ಚಾಸ್ಯ ಕರ್ತಾ**
**ಅಹಿರ್ಬುಧ್ನ್ಯೋಪ್ಯನ್ವವಾದೀದಗಣಿದಿವಿಷದಾಮುತ್ತಮಂಗುಹ್ಯಮೇತತ್ ।**
**ಸಾಕ್ಷಾನ್ಮೋಕ್ಷಾಯಚಾಸೌ ಶ್ರುತ ಇಹತುಮುಧಾಬಾಧಶಜ್ಞಾಗುಣಾಢ್ಯೇ**
**ತನ್ನಿಷ್ಠೋಹ್ಯನ್ಯನಿಷ್ಠಾನ್ ಪ್ರಭುರತಿಶಯಿತುಂ ಕೋಟಿಕೋಟ್ಯಂಶತೋಽಪಿ॥**

ಇಲ್ಲಿ ಒಂದು ಆಕ್ಷೇಪ– ಪ್ರಪತ್ತಿಗೆ ಮಂತ್ರವಾದದ್ದು ದ್ವಯಮಂತ್ರ, ಅದನ್ನು ಚೇತನನು ತಾನೇ ಉಚ್ಚರಿಸಿದರೆ ಮಾತ್ರ ಅದು ಮೋಕ್ಷಕ್ಕೆ ನೇರವಾದ ಕಾರಣವಾಗುವುದಿಲ್ಲ. ಈ ಮಂತ್ರವು ಹೇಗೋ ಪ್ರಪತ್ತಿಯನ್ನು ಮಾಡುವಂತೆ ಮಾಡಿ ಅದರ ಮೂಲಕ ಮೋಕ್ಷವನ್ನು ಕೊಡುತ್ತದೆ ; ಎಂದು ಹೇಳಿದೆ. ಹೀಗಾದರೆ ಪ್ರಪತ್ತಿಯೂ ನೇರವಾಗಿ ಮೋಕ್ಷವನ್ನು ಕೊಡದೆ ಅದು ಭಕ್ತಿಯೋಗವನ್ನು ಮಾಡುವಂತೆ ಮಾಡಿ ಅದರ ಮೂಲಕ ಮೋಕ್ಷವನ್ನು ಕೊಡುತ್ತದೆಯೇ ಹೊರತು ಮೋಕ್ಷಕ್ಕೆ ನೇರವಾದ ಕಾರಣವಾಗುವುದಿಲ್ಲ, ಎಂಬುದು ಅದು.

ಇದಕ್ಕೆ ಬದಲು–ಪ್ರಪತ್ತಿಯನ್ನು ಮೋಕ್ಷಕ್ಕೆ ನೇರವಾದ ಕಾರಣವಾಗಿ ಶ್ರುತಿಯೇ ಹೇಳುತ್ತದೆ. ಮತ್ತು ಕರ್ಮಯೋಗ–ಜ್ಞಾನಯೋಗ–ಭಕ್ತಿಯೋಗ ಎಂಬ ಬೇರೆ ಉಪಾಯಗಳಿಗಿಂತ ಪ್ರಪತ್ತಿಯು ಬಹಳ ಶ್ರೇಷ್ಠವಾದದ್ದೆಂದು ಉಪ-ನಿಷತ್ತು ಮೊರೆಯಿಡುತ್ತದೆ. ಅಲ್ಲದೆ ಪ್ರಪತ್ತಿಯನ್ನು ಮಾಡಿದವನನ್ನು ಶ್ರೇಷ್ಠವಾದ ಒಂದು ಯಾಗವನ್ನು ಮಾಡಿದವನೆಂದೂ ವೇದವು ಕೊಂಡಾಡುತ್ತದೆ. ಈ ಅಭಿಪ್ರಾಯವನ್ನು ಅನುಸರಿಸಿಯೇ ಅಹಿರ್ಬುಧ್ನ್ಯನೆಂದು ಹೇಳಲ್ಪಡುವ ಶಿವನೂ ತನ್ನ ಸಂಹಿತೆಯಲ್ಲಿ ಪ್ರಪತ್ತಿಯನ್ನು ಅನುಷ್ಠಿಸಿದವನನ್ನು ದೊಡ್ಡಯಾಗವನ್ನು ಮಾಡಿದವನೆಂದು ಹೇಳಿರುವನು. ಮತ್ತು ಉಪನಿಷತ್ತು ನ್ಯಾಸವಿದ್ಯೆಯನ್ನು ಪ್ರಕಟಿ

1. ನ್ಯಾಸವಿಂಶತಿ–೯.

ಸುವ ಜಾಗದಲ್ಲಿ ಈ ಪ್ರಪತ್ತಿವಿದ್ಯೆಯು ದೇವತೆಗಳಿಗೂ ಅರಿಯಲಾಗದ ಶ್ರೇಷ್ಠವಾದ ಒಂದು ಪರಮ ರಹಸ್ಯವೆಂದು ಹೇಳಿದೆ. ಹೀಗೆ ಮೋಕ್ಷಕ್ಕೆ ನೇರವಾದ ಕಾರಣವಾಗಿಯೂ ಮಿಕ್ಕ ಎಲ್ಲಾ ಉಪಾಯಗಳಿಗಿಂತ ಉತ್ತಮವಾದದ್ದೆಂದೂ ಉಪನಿಷತ್ತುಗಳಲ್ಲೂ, ಸಂಹಿತೆಗಳಲ್ಲೂ ಕೊಂಡಾಡಲ್ಪಟ್ಟು ಹಲವು ಹಿರಿಮೆಯನ್ನು ಹೊಂದಿದ ಪ್ರಪತ್ತಿಯ ಹಿರಿಮೆಯನ್ನು ಕಡಿಮೆಮಾಡುವ ಆಕ್ಷೇಪಗಳೂ ಪ್ರಪತ್ತಿಯು ಫಲಿಸುವುದರಲ್ಲಿ ಸಂದೇಹಪಟ್ಟು ಹೇಳುವ ಮಾತುಗಳೂ ಇವೆಲ್ಲವೂ ವ್ಯರ್ಥವಾದ ವಾದವೇ ಆಗುತ್ತದೆ. ಎಷ್ಟೇ ಆದರೂ ಅದರ ಹಿರಿಮೆಯನ್ನು ಕಡಿಮೆ ಮಾಡಲಾಗುವುದಿಲ್ಲ. ಈ ರೀತಿಯಾದ ಪ್ರಪತ್ತಿಯನ್ನುಮಾಡಿದವನ ಹಿರಿಮೆಯಲ್ಲಿ ಕೋಟಿ ಕೋಟಿಯಲ್ಲಿ ಒಂದುಭಾಗವನ್ನೂ ಮಿಕ್ಕ ಉಪಾಯಗಳನ್ನು ಮಾಡಿದವರು ಹೊಂದಲಾರರು ಎಂದು ಪ್ರಪತ್ತಿ ಮಾಡಿದವರ ಹಿರಿಮೆಯನ್ನು ಶ್ರೀ ಪಾಂಚರಾತ್ರದಲ್ಲಿ ವಿವರವಾಗಿ ಹೇಳಿದೆ.

## ಪ್ರಪತ್ತಿಯು ಪ್ರತ್ಯೇಕವಾದ ಉಪಾಯ

**[1]ನಾನಾಶಬ್ದಾದಿ ಭೇದಾದಿತಿತು ಕಥಯತಾ ಸೂತ್ರಕಾರೇಣ ಸಮ್ಯಕ್**
**ನಾಸೋಪಾಸೇವಿಭಕ್ತೇ ಯಜನಹವನವಚ್ಛಬ್ದಭೇದಾದ ಭಾಕ್ತಾತ್ ।**
**ಆಖ್ಯಾರೂಪಾದಿ ಭೇದಃ ಶ್ರುತ ಇತರಸಮಃ ಕಿಂಚ ಭಿನ್ನೋಽಧಿಕಾರಃ**
**ಶೀಘ್ರಪ್ರಾಪ್ತ್ಯಾದಿಭಿಃ ಸ್ಯಾಜ್ಜ ಗುರಿತಿಚ ಮಧೂಪಾಸನಾದೌ ವ್ಯವಸ್ಥಾಮ್ ॥**

ಮತ್ತೆ ಒಂದು ಆಕ್ಷೇಪ–ಕೆಳಗೆ ಹೇಳಿರುವ ಪ್ರಪತ್ತಿಯ ಮಾಹಾತ್ಮ್ಯವನ್ನು ಒಪ್ಪುತ್ತೇವೆ. ಆದರೆ ಶ್ರೀಗೀತಾ ಭಾಷ್ಯದಲ್ಲಿ ಚರಮಶ್ಲೋಕ ವ್ಯಾಖ್ಯಾನ ಮಾಡುವಾಗ ಪ್ರಪತ್ತಿಯುನ್ನು ಭಕ್ತಿಯೋಗಕ್ಕೆ ಅಂಗವಾಗಿ ಹೇಳಿ ವಿವರಿಸಿರುವುದರಿಂದ ಆ ಅಂಗಪ್ರಪತ್ತಿಯನ್ನು ಕುರಿತಿದ್ದೇ ಆಗುತ್ತವೆ ಆ ಮಾಹಾತ್ಮ್ಯದಮಾತುಗಳೆಲ್ಲಾ, ಅಲ್ಲದೆ ಶ್ರೀಭಾಷ್ಯದಲ್ಲಿ ಬ್ರಹ್ಮವಿದ್ಯೆಗಳಿಗೆ ವಿವರವನ್ನು ಹೇಳುವ ೧೧ನೇ ಪಾದದಲ್ಲಿ ಪ್ರಪತ್ತಿಯನ್ನು ಮೋಕ್ಷಕ್ಕೆ ನೇರವಾದ ಒಂದು ಉಪಾಯವೇ ಎಂಬುದಕ್ಕೆ ಸರಿಯಾದ ನ್ಯಾಯವೂ ಯಾವುದೂ ಇಲ್ಲವಲ್ಲಾ ಎಂಬುದೇ ಅದು.

ಇದಕ್ಕೆ ಸಮಾಧಾನ ಹೀಗೆ: ಬ್ರಹ್ಮಸೂತ್ರದಲ್ಲಿ ಸೂತ್ರಕಾರರಾದ ವ್ಯಾಸಮಹರ್ಷಿಗಳು ಸದ್ವಿದ್ಯೆ–ದಹರವಿದ್ಯೆ–ವೈಶ್ವಾನರವಿದ್ಯೆ ಮೊದಲಾದ ಬ್ರಹ್ಮವಿದ್ಯೆಗಳು ಒಂದೊಕ್ಕೊಂದು ಬೇರೆಯಾದವು ಎಂದು ಸಾಧಿಸುವಾಗ ಒಂದೊಂದು ವಿದ್ಯೆಯಲ್ಲೂ ಭಗವಂತನ ಬೇರೆ ಬೇರೆಯಾದ ಗುಣವನ್ನು ಗುರಿಯಾಗಿಟ್ಟು ಆ ಆ ಗುಣದಿಂದ ಕೂಡಿದ ಭಗವಂತನನ್ನು ಉಪಾಸಿಸಬೇಕಾದುದರಿಂದ ಆ ರೀತಿ ವಿಧಿಸುವ

1. ನ್ಯಾಸವಿಶಂತಿ ೧೦.

ವಿಧಿವಾಕ್ಯ ಮುಂತಾದವೂ ಬೇರೆಯಾಗುವುದರಿಂದ ಆ ಆ ವಿದ್ಯೆಯೂ ಬೇರೆಯಾಗುವು ದಾಗಿ ಹೇಳಿದ್ದಾರೆ. ಅಲ್ಲದೆ ವಿಧಿಯ ಭಾಗಗಳು ಒಂದೇ ವಸ್ತುವನ್ನು ಉಪಾಸಿಸುವು ದನ್ನು ಹೇಳಿದರೂ ಗುರುತಿಸಿರುವ ಆ ಆ ಗುಣದೊಡನೆ ಕೂಡಿರುವ ಭಗವಂತ ನನ್ನು ಉಪಾಸಿಸುವುದನ್ನು ವಿಧಿಸುವ ಮಾತೂ ಆ ಆ ಗುಣದ ಭೇದದಿಂದ ಬೇರೆ ಯಾಗುತ್ತದೆ ಎಂಬುದು ಲಕ್ಷಣದ ರೀತಿಯಲ್ಲವೇ ! ಆದರೆ ಶರಣು ಹೊಂದುವುದನ್ನು ಹೇಳುವ ವಿಧಿವಾಕ್ಯವು, ಭಕ್ತಿಯೋಗವನ್ನು ವಿಧಿಸುವ ವಿಧಿವಾಕ್ಯಕ್ಕಿಂತ ಬೇರೆಯಾಗು ವುದಕ್ಕೆ ಮುಖ್ಯವಾದ ಶಕ್ತಿಯುಂಟು, 'ಯಾಗ', 'ಹೋಮ', 'ದಾನ' ಮುಂತಾದ ಶಬ್ದಗಳು ಬೇರೆ ಬೇರೆ ಕಾರ್ಯಗಳನ್ನು ಬೋಧಿಸುವಂತೆ 'ಭಕ್ತಿಯನ್ನು ಮಾಡು' 'ಪ್ರಪತ್ತಿಯನ್ನು ಮಾಡು' ಎಂದು ವಿಧಿಸುವ ಮಾತುಗಳೂ ಒಂದು ಪ್ರಯಾಸವೂ ಇಲ್ಲದೆ ನೇರವಾಗಿಯೇ ಭಕ್ತಿಯನ್ನೂ ಪ್ರಪತ್ತಿಯನ್ನೂ ಮೋಕ್ಷಕ್ಕೆ ನೇರವಾದ ಕಾರಣವಾಗಿ ಹೇಳಿವೆ. ಆದುದರಿಂದ ಬ್ರಹ್ಮವಿದ್ಯೆಗಳಲ್ಲಿ ಒಂದಾಗಿರುವ ನ್ಯಾಸವಿದ್ಯೆ ಯೆಂಬ ಪ್ರಪತ್ತಿಯು ಭಕ್ತಿಯೋಗದಂತೆ ಮೋಕ್ಷಕ್ಕೆ ನೇರವಾದ ಸಾಧನವೆಂದು ಅಭಿಪ್ರಾಯವನ್ನು ಹೊಂದಿಯೇ ವ್ಯಾಸಮಹರ್ಷಿಗಳು ವಿಧಿವಾಕ್ಯ ಬೇರೆಯಾದರೆ ಬ್ರಹ್ಮವಿದ್ಯೆಗಳೂ ಬೇರೆಯಾಗುತ್ತವೆ ಎಂದು ಸೂತ್ರಿಸಿದ್ದಾರೆ. ಅಲ್ಲದೆ ಭಕ್ತಿಯೋಗ ದಲ್ಲಿ ಸದ್ವಿದ್ಯೆ–ದಹರ ವಿದ್ಯೆ ಮುಂತಾದ ಹೆಸರು ಬೇರೆಯಾದರೆ ಆ ಆ ವಿದ್ಯೆಗಳು ಬೇರೆಯಾಗುವಂತೆ ಇಲ್ಲಿ ನ್ಯಾಸವಿದ್ಯೆ ಎಂದು ಪ್ರತ್ಯೇಕವಾದ ಹೆಸರು ಇರುವುದ ರಿಂದಲೂ ಪ್ರಪತ್ತಿಯು ಭಕ್ತಿಯೋಗದಂತೆ ಬೇರೆಯಾದ ಮೋಕ್ಷಸಾಧನವೆಂದು ತಿಳಿಯುತ್ತದೆ.

ಭಕ್ತಿಯೋಗದಲ್ಲಿ ಒಂದೊಂದು ವಿದ್ಯೆಯಲ್ಲೂ ಅವಕ್ಕೆ ಅವಕ್ಕೆಂದು ಏರ್ಪಡಾದ ಆ ಆ ಗುಣಗಳೊಡನೆ ಬ್ರಹ್ಮವನ್ನು ಉಪಾಸಿಸಬೇಕಾಗಿರುವುದರಿಂದ ಆ ಆ ವಿದ್ಯೆಯ ರೂಪವೂ ಬೇರೆಯಾಗುತ್ತದೆ. ಇಲ್ಲಿ ಪ್ರಪತ್ತಿವಿದ್ಯೆಯಲ್ಲೂ ಅಭಯವನ್ನು ಕೊಡಲು ಸಮರ್ಥನಾಗಿ ಕರುಣೆ ತುಂಬಿ ನಿಂತಿರುವ ಭಗವಂತನನ್ನು ಮತ್ತೊಂದು ಉಪಾಯವನ್ನು ಎದರು ನೋಡದೆ ಮೋಕ್ಷವನ್ನು ಕರುಣಿಸಿ ಕಾಪಾಡುವವನನ್ನಾಗಿ ಅನುಸಂಧಾನ ಮಾಡಿಯೇ ಭರನ್ಯಾಸವನ್ನು ಮಾಡಬೇಕಾ ದುದರಿಂದ ಪ್ರಪತ್ತಿಯ ರೂಪವೂ ಬೇರೆಯಾಗುತ್ತದೆ. ಮತ್ತು ಭಕ್ತಿಯೋಗಕ್ಕೆ ವರ್ಣಾಶ್ರಮಧರ್ಮಗಳ ಅನುಷ್ಠಾನ ಮುಂತಾದವು ಅಂಗವಾಗುತ್ತವೆ. ಪ್ರಪತ್ತಿ ಗಾದರೋ ಆನುಕೂಲ್ಯಸಂಕಲ್ಪ ಮುಂತಾದ ಐದು ಅಂಗಗಳು ಮಾತ್ರ ಇವೆ.

ಆದುದರಿಂದ ಭಕ್ತಿಗೂ ಪ್ರಪತ್ತಿಗೂ ಅಂಗಗಳೂ ಬೇರೆಯಾಗುತ್ತವೆ. ಈ ರೀತಿ ಇನ್ನೂ ಕೆಲವು ವಿಶೇಷಗಳುಂಟು. ಅಲ್ಲದೆ ಭಕ್ತಿಗೂ ಪ್ರಪತ್ತಿಗೂ ಹೊಂದಾಣಿಕೆ ಯನ್ನು ವಿಚಾರಮಾಡಿದರೂ ವ್ಯತ್ಯಾಸವೇ ತಿಳಿಯುತ್ತದೆ. ಭಕ್ತಿಯನ್ನು ಮಾಡು ವವನಿಗೆ ಫಲವನ್ನು ಕೊಡಲು ತೊಡಗಿರುವ ಕರ್ಮಗಳನ್ನು, ಅವುಗಳ ಫಲ

ವನ್ನು ಅನುಭವಿಸಿ ನಾಶಗೊಳಿಸಿದ ನಂತರ ಮೋಕ್ಷವನ್ನು ಹೊಂದಲು ಅವಕಾಶ. ಪ್ರಪತ್ತಿಯನ್ನು ಮಾಡುವವನಿಗೋ ಈ ಶರೀರದ ಕೊನೆಯಲ್ಲಿಯೋ ಅಥವಾ ತಾನು ಅಪೇಕ್ಷಿಸಿದ ಕಾಲದಲ್ಲಿಯೋ ಮೋಕ್ಷವನ್ನು ಹೊಂದಲು ಅವಕಾಶವಿದೆ. ಈ ರೀತಿ ಮಾಡುವವನಿಗೆ ಒಳಗಿನ ಸ್ಥಿತಿಯೂ ಬೇರೆಯಾಗುತ್ತದೆ. ಭಕ್ತಿಯೋಗದಲ್ಲಿ ಸದ್ವಿದ್ಯೆ ಮಧುವಿದ್ಯೆ ಮುಂತಾದವುಗಳಿಗೆ ವಿಶೇಷವನ್ನು ಅಂದರೆ ಅವುಗಳ ಒಳಗಿನಸ್ಥಿತಿಯನ್ನೂ ಎಲ್ಲೆಯನ್ನೂ ವಿಚಾರಮಾಡಿ ನಿರ್ಣಯಿಸುವಾಗ ಕೆಲವು ವಿದ್ಯೆಗಳು ಕಾಲವು ಕಡಿಮೆಯಾಗಿಯೂ ಕೊಂಚ ಕಾಲದ ಫಲಗಳನ್ನು ಕೊಡುವುದಾಗಿಯೂ ಇವೆ. ಆ ಆ ಫಲಗಳನ್ನು ಅಪೇಕ್ಷಿಸುವವನು ಅದಕ್ಕೆ ತಕ್ಕ ವಿದ್ಯೆಯನ್ನು ಮಾಡಬೇಕು ಎಂದು ನಿರ್ಣಯಿಸಿದ್ದಾರೆ. ಭಕ್ತಿಯೋಗ, ಪ್ರಪತ್ತಿ ಎರಡಕ್ಕೂ ವಿಶೇಷವಾಗಿ ಭೇದವನ್ನು ಹೇಳುವ ಶಾಸ್ತ್ರಗಳು ಇವೆ—ಅದುದರಿಂದ ಭಕ್ತಿಯೋಗದಂತೆಯೇ ಪ್ರತ್ಯೇಕವಾದ ವಿದ್ಯೆಯಾಗಿ ನಿಂತು ಮೋಕ್ಷಕ್ಕೆ ನೇರವಾದ ಕಾರಣವೆಂದು ಕಾಣಬಹುದು,

ಶ್ರೀ ಗೀತಾಭಾಷ್ಯದಲ್ಲಿ ಪ್ರಪತ್ತಿಯನ್ನು ಭಕ್ತಿಯೋಗಕ್ಕೆ ಅಂಗವಾಗಿ ಮಾತ್ರ ಹೇಳಿರುವುದನ್ನು ತೆಗೆದುಕೊಂಡು ಪ್ರಪತ್ತಿಯು ಸ್ವತಂತ್ರವಾಗಿ ಮೋಕ್ಷವನ್ನು ಕೊಡತಕ್ಕದ್ದಲ್ಲ ಎಂದು ಅರಿಯಕೂಡದು. ಪ್ರಪತ್ತಿಯು ಭಕ್ತಿಗೆ ಅಂಗವಾಗಿಯೂ ಇದೆ. ಸ್ವತಂತ್ರವಾಗಿ ತಾನೇ ಭಕ್ತಿಯೋಗದಂತೆ ಮೋಕ್ಷಕ್ಕೆ ನೇರವಾದ ಸಾಧನ ವಾಗಿಯೂ ಇದೆ. ಎರಡು ಸ್ವಭಾವಗಳೂ ಉಂಟು. ಎರಡು ಸ್ವಭಾವವುಳ್ಳ ಒಂದಕ್ಕೆ ಒಂದು ಜಾಗದಲ್ಲಿ ಒಂದು ಸ್ವಭಾವವನ್ನು ಮಾತ್ರ ಹೇಳಿರುವುದನ್ನು ಕಂಡು ಮತ್ತೊಂದು ಸ್ವಭಾವ ಇಲ್ಲವೆಂದು ಹೇಳಕೂಡದಲ್ಲವೇ ! ಮತ್ತು ಗದ್ಯದಲ್ಲಿ ಶ್ರೀ ಭಾಷ್ಯಕಾರರು ಪ್ರಪತ್ತಿಯು ಮೋಕ್ಷಕ್ಕೆ ನೇರವಾದ ಕಾರಣವೆಂದು ಸ್ಪಷ್ಟವಾಗಿಯೇ ವಿವರಿಸಿ ಹೇಳಿದ್ದಾರೆ.

ಶ್ರೀ ವೈಕುಂಠ ಗದ್ಯದಲ್ಲಿ—**ಪರಮಪುರುಷಂ ಭಗವನ್ತಂ ಶ್ರೀಮನ್ನಾರಾಯಣಂ ಸ್ವಾಮಿತ್ವೇನ ಸುಹೃತ್ತ್ವೇನ ಗುರುತ್ವೇನ ಚ ಪರಿಗೃಹ್ಯ**—ಪುರುಷಶ್ರೇಷ್ಠನಾದ ಭಗವಂತನಾದ ಲಕ್ಷ್ಮಿಯೊಡಗೂಡಿದ ನಾರಾಯಣನನ್ನು ಸ್ವಾಮಿಭಾವದಿಂದಲೂ, ಸ್ನೇಹಿತನ ಭಾವದಿಂದಲೂ ಮತ್ತು ಗುರುವಿನ ಭಾವದಿಂದಲೂ ಸ್ವೀಕರಿಸಿ ಅಂದರೆ ಭಾವನೆ ಮಾಡಿ, ಆಶ್ರಿತರಲ್ಲಿ ವಾತ್ಸಲ್ಯವೆಂಬ ಗುಣಕ್ಕೆ ಮುಖ್ಯವಾದ ಸಮುದ್ರದಂತಿರುವ ಮಹತ್ತಾದ ಐಶ್ವರ್ಯವುಳ್ಳ ನಾರಾಯಣನ ಎರಡು ತಾವರೆಗಳಂತಿರುವ ಅಡಿಗಳನ್ನು **ಅನನ್ಯಾತ್ಮಸಂಜೀವನೇನ ತದ್ಗತಸರ್ವಭಾವೇನ ಶರಣ ಮನುವ್ರಜೇತ್**—ತನ್ನ ಆತ್ಮವನ್ನು ಉಜ್ಜೀವಿಸಿಕೊಳ್ಳಲು–ಕಾಪಾಡಿಕೊಳ್ಳಲು ಭಗವಂತನ ಅಡಿದಾವರೆಯನ್ನು ಹೊಗುವುದಕ್ಕಿಂತ ಬೇರೆ ಸಂಜೀವನೀ ಔಷಧಿಯೇ ಇಲ್ಲ ಎಂಬ ಭಾವನೆಯಿಂದಲೂ ಅವನಲ್ಲೇ ತನ್ನ ಮನಸ್ಸಿನ ಭಾವನೆ–ಬಯಕೆಗಳೆಲ್ಲವನ್ನೂ ಇಟ್ಟು ಮರೆ ಹೋಗಬೇಕು ಎಂದು ಹೇಳಿದ್ದಾರೆ.

ಒಟ್ಟಿನಲ್ಲಿ ಈ ಶ್ಲೋಕಕ್ಕೆ ತಾತ್ಪರ್ಯವಾದರೋ–[1]**ನಾನಾಶಬ್ದಾದಿ ಭೇದಾತ್** —ಬಹಳ ಸಲ ಆವೃತ್ತಿಮಾಡಿ ಭಗವಂತನನ್ನು ಉಪಾಸನೆ ಮಾಡಬೇಕಾದ ರೂಪವುಳ್ಳ ಬ್ರಹ್ಮವಿದ್ಯೆಯೂ, ಒಂದೇಸಲ ಆವರ್ತಿಸಲ್ಪಡುವ ಅಂದರೆ ಒಂದು ಸಲ ಮಾಡಿದರೆ ಸಾಕಾಗುವ ನ್ಯಾಸವಿದ್ಯಾ ರೂಪವಾದ ಬ್ರಹ್ಮವಿದ್ಯೆಯೂ ನಾನಾ–ಬೇರೆ ಬೇರೆಯಾದವು ; ಏತಕ್ಕೆಂದರೆ ಶಬ್ದಾದಿಭೇದಾತ್–ಯಜೇತ, **ಜುಹುಯಾತ್**— ಯಾಗಮಾಡಬೇಕು ಹೋಮಮಾಡಬೇಕು ಎಂಬ ಶಬ್ದಭೇದದ ಹಾಗೆ ಉಪಾಸೀತ, ಶರಣಂವ್ರಜ ಎಂಬ ಮುಖ್ಯವಾದ ಶಬ್ದಭೇದದಿಂದ. '**ಶಬ್ದಾದಿಭೇದಾತ್**' ಎಂಬ ಆದಿಪದದಿಂದ **ಆಖ್ಯಾಭೇದ, ರೂಪಭೇದ** ಮತ್ತು **ಅಧಿಕಾರಿಭೇದವೂ** ಗ್ರಹಿಸಲ್ಪಡುತ್ತದೆ.

[2]**ಸರ್ವವೇದಾನ್ತಪ್ರತ್ಯಯಂ ಚೋದನಾದ್ಯ ವಿಶೇಷಾತ್ ।**

ಎಂಬ ಸೂತ್ರದ ಭಾಷ್ಯದಲ್ಲಿ ಭಾ ಷ್ಯ ಕಾ ರ ರು '**ಚೋದನಾದಿ**' ಎಂಬಲ್ಲಿ ಆದಿಪದದಿಂದ '**ಏಕಂವಾ ಸಂಯೋಗ ರೂಪಚೋದನಾಖ್ಯಾ ವಿಶೇಷಾತ್**' ಎಂದು ಕರ್ಮಕಾಂಡದ ಬೇರೆ ಶಾಖೆಯ ಅಧಿಕರಣದ ಸೂತ್ರದಲ್ಲಿ ಹೇಳಲ್ಪಟ್ಟ ಸಂಯೋಗ ರೂಪ ಆಖ್ಯಾ ಇವು ಗ್ರಹಿಸಲ್ಪಡುತ್ತದೆ ಎಂದು ಹೇಳಿದ್ದಾರೆ. ನ್ಯಾಸ ಉಪಾಸನ ಎಂಬ ಹೆಸರಿನ ಭೇದವಿದೆ. ಇದು ಆಖ್ಯಾಭೇದವಾಯಿತು. ರೂಪ ಭೇದವೂ ಇದೆ. ಹೇಗೆಂದರೆ ಆಕಿಂಚನನ ಅಂದರೆ ಬೇರೆ ಯಾವ ಉಪಾಯವನ್ನು ಅನುಷ್ಠಾನ ಮಾಡುವುದರಲ್ಲೂ ಸಾಮರ್ಥ್ಯವಿಲ್ಲದವನ ಭರವನ್ನು–ಜವಾಬ್ದಾರಿಯನ್ನು ಸ್ವೀಕರಿಸುವಿಕೆ ರೂಪವಾದ ಬೇರೆ ಉಪಾಯದ ಸ್ಥಾನದಲ್ಲಿ ಇರುವಿಕೆ ನ್ಯಾಸವಿದ್ಯೆಗೆ ವೇದ್ಯಾಕಾರವಾಗಿದೆ. ಉಪಾಸನಕ್ಕಾದರೋ ಅಪಹತಪಾಪ್ಮತ್ವಾದಿಗಳು ವೇದ್ಯಾಕಾರವು. ಇದೇ ರೂಪಭೇದವಾಯಿತು. ಫಲ ಕೊಡಲು ಆರಂಭಿಸಿರುವ ಕರ್ಮವನ್ನು ನಾಶಮಾಡುತ್ತಾ ಬ್ರಹ್ಮಪ್ರಾಪ್ತಿರೂಪವಾದ ಫಲ ನ್ಯಾಸವಿದ್ಯೆಗೆ ಕೇವಲ ಬ್ರಹ್ಮಪ್ರಾಪ್ತಿ ಮಾತ್ರವೇ ಉಪಾಸನಕ್ಕೆ ಫಲ. ಈ ರೀತಿಯಾದ ಫಲವನ್ನು ಅಪೇಕ್ಷಿಸುವ ಅಧಿಕಾರಿಯೂ ಬೇರೆ. ಹೀಗೆಯೇ ಮಧುವಿದ್ಯೆ, ಪಞ್ಚಾಗ್ನಿವಿದ್ಯೆ ಇವುಗಳನ್ನು ಅನುಷ್ಠಿಸುವನಿಗೂ ಸದ್ವಿದ್ಯಾನಿಷ್ಠನಿಗೂ ವಸ್ವಾದಿಪದಗಳನ್ನು ಹೊಂದಿ ಬ್ರಹ್ಮಪ್ರಾಪ್ತಿಯನ್ನು ಹೊಂದಬೇಕೆಂಬ ಅಪೇಕ್ಷೆಯೂ, ಕೇವಲ ಬ್ರಹ್ಮಪ್ರಾಪ್ತಿ ಕಾಮನೆಯೂ ಈ ರೀತಿ ಅಧಿಕಾರವು ಭಿನ್ನವಾಗಿದೆ. ಹಾಗೆಯೇ ನ್ಯಾಸಕ್ಕೂ ಉಪಾಸನಕ್ಕೂ ಅಧಿಕಾರಿ ಫಲ ಇವುಗಳ ಭೇದದಿಂದಲೂ ಭೇದವು ಸಿದ್ಧಿಸುತ್ತದೆ.

1. ಬ್ರಹ್ಮಸೂತ್ರ. ೩–೩–೫೮.
2. ಬ್ರಹ್ಮಸೂತ್ರ. ೩–೩–೧. (೩೫೫).

ಇಲ್ಲಿಯುವರೆಗೂ ಪ್ರಪತ್ತಿ ಶಬ್ದದ ಅರ್ಥ ವಿವರಣೆ ಮಾಡಿ ಅದನ್ನು ಅನುಷ್ಠಿಸಬೇಕೆಂಬುದರಲ್ಲಿ ಶಾಸ್ತ್ರಪ್ರಮಾಣಗಳನ್ನು ತಕ್ಕಮಟ್ಟಿಗೆ ತೋರಿಸಿ ವಿವರಿಸಿದ್ದಾಯಿತು. ಇನ್ನು ಇದರ ಸ್ವರೂಪ, ಲಕ್ಷಣ, ಅನುಷ್ಠಾನಗಳನ್ನು ತಿಳಿಯೋಣ.

## ಸ್ವರೂಪ ವಿಚಾರ

ಪ್ರಪದನ ರೂಪವಾದ ಜ್ಞಾನ ಸ್ಮೃತಿರೂಪವಾದದ್ದೋ ಅಥವಾ ಅನುಭವ ರೂಪವಾದದ್ದೊ ?

ಸಕೃತ್=ಒಂದೇಸಲ, ಅಸಕೃತ್=ಬಹಳಸಲ ಎಂಬ ವಿಕಲ್ಪಮಾಡಲು ಆಗದಿರುವುದರಿಂದ ಮೊದಲನೆಯದಾದ ಸ್ಮೃತಿರೂಪವಾದದ್ದೆಂದು ಹೇಳಲಾಗುವುದಿಲ್ಲ. ಸ್ಮೃತಿಯಾದರೊ ಒಂದು ವಿಷಯವನ್ನು ಹೆಚ್ಚಾಗಿ ಕೇಳಿ ಅದನ್ನು ಮನಸ್ಸಿನಲ್ಲೇ ಹೀಗೆಂದು ಮನನಮಾಡಿ ಉಂಟಾದ ಸಂಸ್ಕಾರದಿಂದ ವಿಕಾಸವಾಗತಕ್ಕದ್ದು ಅದು. ಆದುದರಿಂದ ಸಕೃತ್ ಸ್ಮೃತಿಗೆ ವಿಧಿಸುವಿಕೆ ಕೂಡುವುದಿಲ್ಲ. ಆದುದರಿಂದಲೇ ಸರಸ್ವತೀಯನದಿಗೆ ಸಮಾನವಾದ ಒಡಕು ಒಡಕಾದ ಸ್ಮರಣಸಂತತಿಗೂ ವಿಧಿಸುವಿಕೆ ಉಂಟಾಗುವುದೇ ಇಲ್ಲ, ತೈಲಧಾರೆಯಂತೆ ಅವಿಚ್ಛಿನವಾದ ಸ್ಮೃತಿಯು ಪರಂಪರೆಯಾಗಿರುವಿಕೆ ಅದು ಎಂದರೆ ಅದು ಧ್ಯಾನರೂಪವಾಗಿರೋಣದರಿಂದ ಭಕ್ತಿಯು ಎಲ್ಲೆಕಟ್ಟೇ ಆಯಿತು. ಅದನ್ನು ಮೀರಿದ್ದಾಗಲಿಲ್ಲ.

ಎರಡನೆಯದಾದ ಅನುಭವರೂಪವಾದದ್ದು ಎಂಬುದೂ ಕೂಡುವುದಿಲ್ಲ. ಅಲೌಕಿಕವಾದ ಅರ್ಥದ ವಿಷಯವಾಗಿರುವಿಕೆಯಿಂದ, ಮೋಕ್ಷದಲ್ಲಿ ನಾವು ಅನುಭವಿಸುವ ಅನುಭವ ಬೇರೆ ಲೋಕಕ್ಕೆ ಸಂಬಂಧ ಪಟ್ಟದ್ದು ತಾನೇ ಅದು. ಅದನ್ನು ಕಣ್ಣಿನಿಂದ ನಾವು ನೋಡಲಾಗುತ್ತದೆಯೇನು? ಈಗಿನ ಪ್ರತ್ಯಕ್ಷವೇ ಮೊದಲಾದವುಗಳ ಫಲವಾಗಿರುವಿಕೆ ಹೊಂದುವುದಿಲ್ಲ. ಶಾಸ್ತ್ರ ಫಲವಾಗಿರುವಿಕೆಯಾದಲ್ಲಿ ವಿಧಿಸಲಾಗದ ಜ್ಞಾನದ ವಾದಪ್ರಸಂಗ ಉಂಟಾಗುವುದರಿಂದ ಅದನ್ನು ವಿಧಿಸಬೇಕಾದುದಿಲ್ಲ ಎಂದು ಅಭಿಪ್ರಾಯ. ಯೋಗಬಲದಿಂದ ಉಂಟಾದ ಮನಸ್ಸಿನಿಂದ ಹುಟ್ಟುವಿಕೆ ಆದಲ್ಲಿ ಅದು ಅದನ್ನು ಮೋಕ್ಷದ ಹೊಟ್ಟೆಯಲ್ಲೇ ಇಟ್ಟಂತಾಯಿತು-ಅಂದರೆ ಮೋಕ್ಷವೇ ಆಯಿತು ಎಂದು ಅಭಿಪ್ರಾಯ, ಇಂದ್ರಿಯಗಳ ಅಪೇಕ್ಷೆ ಇಲ್ಲದ್ದಾದರೆ, ಆತ್ಮಸ್ವರೂಪ ಮಾತ್ರಕ್ಕಿಂತ ಬೇರೆಯಾದ ಪ್ರಕಾಶಕ್ಕೆ ಸಂಸಾರಾದಶೆಯಲ್ಲಿ ಸಿದ್ಧಿಸದೇ ಇರುವುದರಿಂದ ಅದೂ ಅಲ್ಲ. ಆದುದರಿಂದ ಪ್ರಪದನ ರೂಪವಾದ ಜ್ಞಾನ ಸ್ಮೃತಿರೂಪವಾದದ್ದೂ ಅಲ್ಲ ಅಥವಾ ಅನುಭವ ರೂಪವಾದದ್ದೂ ಅಲ್ಲ ಅಂದರೆ ಈ ಮಾತು ಸರಿಯಲ್ಲ.

ಲೋಕದಲ್ಲಿ [1]ಪ್ರಾರ್ಥನೆಯೇ ಮೊದಲಾದ ಸ್ವರೂಪವುಳ್ಳ ಬುದ್ಧಿಯೂ ಅದರ ವಿಧಿಯೂ ಕಾಣುತ್ತದೆ. ಅದಿಲ್ಲ ಎಂದು ಮರೆಮಾಚಲಾಗುವುದಿಲ್ಲ. ಹಿತೈಷಿಗಳು ಜನರನ್ನು "ದಾನಶೀಲನಾದ ಒಬ್ಬದೊರೆಯನ್ನು ಪ್ರಾರ್ಥನೆ ಮಾಡಿ, ನಿಮ್ಮ ಇಷ್ಟಾರ್ಥ ಕೈಗೂಡುತ್ತದೆ" ಎನ್ನುತ್ತಾರೆ. ಆ ಮಾತನ್ನು ಕೇಳಿದವರು ಅವರಿಗೆ ವಿಧೇಯರಾದವರು ಹಾಗೆಯೇ ಮಾಡುತ್ತಾರೆ. ಇಷ್ಟಾರ್ಥವನ್ನೂ ಪಡೆಯುತ್ತಾರೆ. ಅದರಂತೆ ಇಲ್ಲೂ ಮೋಕ್ಷವೆಂಬ ಫಲವನ್ನು ಉದ್ದೇಶಮಾಡಿ ಪ್ರಾರ್ಥನೆ ಮೊದಲಾದ ರೂಪವಾದ ಬುದ್ಧಿಯು ವಿಧಿಸಲ್ಪಡುತ್ತದೆ ಎಂದು ಅದರ ಅನುಷ್ಠಾನ ಸರಿಯಾಗಿ ಆಯಿತು—ಸ್ಥಿರವಾಯಿತು. ಅನುಷ್ಠಾನಕ್ಕೆ ಬೇಕಾಗದ ಸ್ಮೃತಿತ್ವ ಅನುಭವತ್ವ ಮೊದಲಾದ ಯೋಚನೆ ಮಾಡಬೇಕಾಗಿಲ್ಲ. ಅದು ಗುಣಸ್ವಭಾವವುಳ್ಳದ್ದೋ ಅಥವಾ ದ್ರವ್ಯಸ್ವಭಾವವುಳ್ಳದ್ದೋ ಎಂದು ಚಿಂತಿಸದಂತಾಯಿತು. ಅದನ್ನು ನಾವು ತಿರಸ್ಕರಿಸಬೇಕಾದುದೇಸರಿ.

## ಗುರು ಲಘು ವಿಕಲ್ಪ ವಿಚಾರ

ಮೋಕ್ಷವನ್ನು ಪಡೆಯಲು ಲಘುವಾದ 'ಅಂದರೆ ಹಗುರವಾದ ಶ್ರಮವಿಲ್ಲದ ಉಪಾಯ **ಪ್ರಪತ್ತಿ**'. **ಗುರುವಾದ**—ಕಷ್ಟಸಾಧ್ಯವಾದ ಉಪಾಯ ಭಕ್ತಿ. ಹೀಗಿರುವಾಗ ಬಹಳ ಕಾಲ ಶ್ರಮಪಟ್ಟು ಸಾಧಿಸಬೇಕಾದ ಅನೇಕ ವಿಘ್ನಗಳಿಂದ ಕೂಡಿದ ಭಕ್ತಿಯ ಹಾದಿಯನ್ನು ಯಾವನು ತಾನೇ ಹಿಡಿದಾನು ? ಪ್ರವೃತ್ತಿ ಲಕ್ಷಣವಾದ ಧರ್ಮದ ಈ ಮಾರ್ಗವನ್ನು ಓರೆಗಣ್ಣಿನಿಂದಲೂ ಒಬ್ಬನೂ ನೋಡಲಾರ. ಅಲ್ಲದೆ ಭಕ್ತಿಯೇ ಮೊದಲಾದ ಉಪಾಯಗಳ ಅನುಷ್ಠಾನಗಳೂ ಸ್ವರೂಪಕ್ಕೆ ವಿರುದ್ಧವಾದವು. ಹಾಲು ಕುಡಿಯುವ ಶಿಶುವಿಗೆ ತಾಯಿಯಾದವಳು ತನ್ನ ಮಗುವಿನಲ್ಲಿ ತನಗೆ ಇರುವ ವಾತ್ಸಲ್ಯದಿಂದ ತಾನೆ. ಅದು ಹೆಚ್ಚಾಗಿ ಅಳದಂತೆ ನೋಡಿ ಆ ಆ ವೇಳೆಯಲ್ಲಿ ಹಾಲನ್ನು ಕುಡಿಸುತ್ತಾಳೆ. ಮಗುವು ಈ ರೀತಿ ಹಾಲನ್ನು ಕುಡಿಸುವ ವ್ಯಾಪಾರಕ್ಕಾಗಿ ತನ್ನ ತಾಯಿಗೆ ಸಂಬಳ ಕೊಡುತ್ತದೇನು ? ಆದುದರಿಂದ ತನ್ನವರಲ್ಲಿ ಹೆಚ್ಚಾದ ಪ್ರೀತಿಯುಳ್ಳ ಭಗವಂತನು ತನಗೆ ಸೇರಿದವರನ್ನು ಕಾಪಾಡಿಯೇ ಕಾಪಾಡುತ್ತಾನೆ. ಇದಕ್ಕಾಗಿ ನಾವು ಮಾಡಬೇಕಾದ ವ್ಯಾಪಾರ ಯಾವುದೂ ಇಲ್ಲ, ಎಂದರೆ ಈ ವಾದವು ಶಾಸ್ತ್ರಮರ್ಯಾದೆಗೆ ಮೀರಿದ್ದು.

1. **ಅಸಮರ್ಥಸ್ಯ ಸಮರ್ಥಮುದಿಶ್ಯ ಸ್ವಾಭಿಮತ ಫಲಸ್ಯ ತತ್ಸಾಧ್ಯತಯಾ ಇಷ್ಟ(ತ್ವ) ಪ್ರಕಾಶನಮ್ ಪ್ರಾರ್ಥನಮ್** = ಸಾಮರ್ಥ್ಯವಿಲ್ಲದವನಿಗೆ ಸಮರ್ಥನನ್ನು ಕುರಿತು ತನಗೆ ಇಷ್ಟವಾದ ಪ್ರಯೋಜನಕ್ಕಾಗಿ ಅದನ್ನು ಸಾಧಿಸಲು ತಕ್ಕದ್ದನ್ನಾಗಿ ಮಾಡಲು ತನ್ನ ಇಷ್ಟವನ್ನು ಪ್ರಕಾಶಪಡಿಸುವಿಕೆ (ಸಾಮರ್ಥ್ಯವಿಲ್ಲದವನು ತನ್ನ ಇಷ್ಟಸಿದ್ಧಿಗಾಗಿ ಸಮರ್ಥನ ಹತ್ತಿರ ತನ್ನ ಇಷ್ಟವನ್ನು ಅವನು ಸಾಧಿಸಲು ತಕ್ಕದೆಂಬುದಾಗಿ ತೋರಿಸಿಕೊಳ್ಳುವಿಕೆ).

**ಅಪ್ರಾರ್ಥಿತೋ ನ ಗೋಪಾಯೇತ್**—ಪ್ರಾರ್ಥಿಸದೆ ಇದ್ದರೆ ಅವರನ್ನು ಅವನು ಕಾಪಾಡಲಾರ ಎಂದು ಅದೇ ಶಾಸ್ತ್ರದಲ್ಲಿ ಹೇಳಿದೆ.

ವ್ಯಾಜರೂಪವಾದ ಭರನ್ಯಾಸ ಮೂಲಕವಾಗಿ ಶ್ರಿಯಃಪತಿಯು ರಕ್ಷಿಸುವವನೇ ವಿನಾ ಬೇರೆ ಇಲ್ಲ. [1]"**ಮಾಮೇವಯೇ ಪ್ರಪದ್ಯನ್ತೇ ಮಾಯಾಮೇತಾಂತರಂತಿತೇ**—ನನ್ನ ಚರಣಾರವಿಂದವನ್ನು ಶರಣವಾಗಿ ಯಾರು ಆಶ್ರಯಿಸುತ್ತಾರೋ ಅವರು ಸಂಸಾರ ರೂಪವಾದ ಪ್ರಕೃತಿಸಂಬಂಧವನ್ನು ದಾಟುವರು" ಎಂದು ಶ್ರೀಕೃಷ್ಣ ಪರಮಾತ್ಮನು ಉಪದೇಶಿಸಿರುತ್ತಾನೆ. ಆದುದರಿಂದ ಅಂತಹ ಶರಣಾಗತಿಯನ್ನು ಒಳಗೊಂಡಿರುವ ಸದ್ವಾರಕ (ಒಂದರ ಮೂಲಕ) ಅದ್ವಾರಕ (ಸ್ವತಂತ್ರ ವಾಗಿ) ಪ್ರಪತ್ತಿಗಳೇ ಮೋಕ್ಷೋಪಾಯಗಳು. ಇನ್ನು ಯಾವುವೂ ಅಲ್ಲವೆಂಬ ಭಾವವು.

೧. ಸದ್ವಾರಕ ಪ್ರಪತ್ತಿ ನಿಷ್ಠನು—ಈತನು ಭಕ್ತಿಯೋಗನಿಷ್ಠನೆಂದೂ ಅಙ್ಗ ಪ್ರಪತ್ತಿ ನಿಷ್ಠನೆಂದೂ, ಉಪಾಸನಾನಿಷ್ಠನೆಂದೂ, ಗುರೂಪಾಯಾನಿಷ್ಠನೆಂದೂ ಹೇಳಲ್ಪಡುತ್ತಾನೆ.

೨. ಅದ್ವಾರಕ ಪ್ರಪತ್ತಿ ನಿಷ್ಠನು—ಈತನು ಪ್ರಪತ್ತಿ ನಿಷ್ಠನೆಂದೂ ಅಥವಾ ಸ್ವತಂತ್ರಪ್ರಪತ್ತಿ ನಿಷ್ಠನೆಂದೂ ಭರನ್ಯಾಸ ಅಥವಾ ಶರಣಾಗತಿ ನಿಷ್ಠನೆಂದೂ ಲಘೂಪಾಯ ನಿಷ್ಠನೆಂದೂ ಹೇಳಲ್ಪಡುವನು. ಹೀಗೆ ಮೋಕ್ಷಾಧಿಕಾರಿಗಳು ಎರಡುವಿಧ. ಇದನ್ನೇ **ಪ್ರಪನ್ನಾದನ್ಯೇಷಾಂ ನದಿಶತಿ ಮುಕುನ್ದೋನಿಜಪದಮ್** ಎಂದು ಆಚಾರ್ಯರು ಅಧಿಕಾರಿ ವಿಭಾಗಾಧಿಕಾರದಲ್ಲಿ ಹೇಳಿದ್ದಾರೆ—ಪ್ರಪತ್ತಿ ಮಾಡದವರಿಗೆ **ಮುಕುನ್ದನು**—ಮುಕ್ತಿಯನ್ನುಕೊಡುವ ಶ್ರೀಹರಿಯು '**ತದ್ವಿಷ್ಣೋಃ ಪರಮಂಪದಂ**' ಎಂದು ಹೇಳುವ ತನ್ನ ಸ್ಥಾನವಾದ ದಿವ್ಯ ವೈಕುಂಠವನ್ನು ನದಿಶತಿ—ಕೊಡುವುದಿಲ್ಲ, ತೋರಿಸುವುದಿಲ್ಲ.

ಹೀಗೆ ಅವರು ಹೇಳಲು ಸಾಧನವೇನೆಂದರೆ ಶ್ರೀಪರಾಶರರು '**ತಾವದಾರ್ತಿಸ್ತಥಾವಾಂಛಾ**' ಎಂಬ ಶ್ಲೋಕದಲ್ಲಿ ಶರಣಾಗತಿಯ ಆವಶ್ಯಕತೆಯನ್ನು ಉಪಪಾದಿಸಿರುತ್ತಾರೆ. ಶ್ರೀವ್ಯಾಸ ಮಹರ್ಷಿಯು—

**[2]ಸರ್ವೇಷಾಮೇವ ಲೋಕಾನಾಂ ಪಿತಾಮಾತಾಚ ಮಾಧವಃ ।**
**ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ ॥**

1. ಗೀತೆ. ೭–೧೪.
2. ಭಾ. ಆರ. ೧೯೨–೫೬.

ಎಂದು ಹೇಳಿರುತ್ತಾರೆ. ಇದು ಮಾರ್ಕಂಡೇಯರು ಯುಧಿಷ್ಠಿರಾದಿಗಳನ್ನು ಕುರಿತು ಹೇಳಿರುವ ಪರಮ ಹಿತೋಪದೇಶವು. ಶ್ರೀಕೃಷ್ಣನೇ ಪುರುಷೋತ್ತಮ ನಾದುದರಿಂದ ಆತನಲ್ಲಿ ಶರಣಾಗತಿಯನ್ನು ಅನುಷ್ಠಿಸಿರಿ ಎಂದು ಉಪದೇಶಿಸಿರು ತ್ತಾರೆ. ಹಾಗೆಯೇ ವಾಲ್ಮೀಕಿರಾಮಾಯಣದಲ್ಲೂ—

ವಿದಿತಸ್ಸಹಿ ಧರ್ಮಜ್ಞಃ ಶರಣಾಗತ ವತ್ಸಲಃ ।
ತೇನಮೈತ್ರೀ ಭವತು ತೇ ಯದಿಜೀವಿತು ಮಿಚ್ಛಸಿ ॥

'ತಮೇವಶರಣಂಗಚ್ಛ' 'ರಾಘವಂಶರಣಂಗತಃ' ಇವೇ ಮೊದಲಾದ ಪ್ರಮಾಣ ಗಳಿವೆ. 'ತಮೇವಂ ವಿದ್ವಾನಮೃತ ಇಹಭವತಿ' ಮುಂತಾದ ಶ್ರುತಿಪ್ರಮಾಣಗಳೂ ಉಂಟು.

ಶಾಸ್ತ್ರವನ್ನು ಬಿಟ್ಟರೆ ದೈವವೂ ಇಲ್ಲ. ಶೇಷಶೇಷಿ ಭಾವವೂ ಇಲ್ಲ.

ಆತ್ಮನು—

ದೇಹೇಂದ್ರಿಯ ಮನಃ ಪ್ರಾಣ ಧೀಭ್ಯೋಽ ನನ್ಯ ಸಾಧನಃ ।

ಎಂಬ ಶ್ರೀಯಾಮುನೇಯರ ಶ್ರೀಸೂಕ್ತಿಯಲ್ಲಿ ಹೇಳಿರುವಂತೆ ಇಂದ್ರಿಯ ಮನಸ್ಸು, ಪ್ರಾಣ, ಬುದ್ಧಿ, ಇವುಗಳಿಗಿಂತಲೂ ವಿಲಕ್ಷಣನು. ಅಣುಸ್ವರೂಪನು. ಅವನ ಸ್ವರೂಪಕ್ಕೆ ಕೆಳಗೆ ವಿವರಿಸಲ್ಪಡುವ ಕಾರಣಗಳಿಂದ—ಭಕ್ತಿ ಪ್ರಪತ್ತಿಗಳು ವಿರುದ್ಧಗಳು.

೧. ಇವು ಸ್ವರೂಪಕ್ಕೆ ಅನಧಿಕರಣವಾದ ಅಂದರೆ ಸ್ವರೂಪವನ್ನು ಆಶ್ರ ಯಿಸಿ ಇರದ ವರ್ಣಾಶ್ರಮಾದಿಗಳ ನಿಬಂಧನವಾಗಿ ಇವೆ.

೨. ಬ್ರಾಹ್ಮಣ್ಯಾದಿ ಭ್ರಮೆಯುಳ್ಳ ಅಧಿಕಾರಿಗೆ ಸಂಬಂಧ ಪಟ್ಟವಾಗಿವೆ

೩. ಅಹಙ್ಕಾರ ಗರ್ಭವಾಗಿವೆ.

೪. ಕರ್ಮದಿಂದ ಸಂಪಾದಿಸಲ್ಪಟ್ಟ ಇಂದ್ರಿಯ ಶರೀರ ಇವುಗಳಿಂದ ಸಾಧಿ ಸಲ್ಪಡತಕ್ಕವಾಗಿವೆ.

೫. ಇವನು ಪರಮಾತ್ಮನಿಗೇ ಶೇಷಭೂತನು. ಅಂತಹ ಶೇಷತ್ವ ಸ್ವರೂ ಪಕ್ಕೆ ಅನುರೂಪವಲ್ಲದ್ದಾಗಿರುವುದರಿಂದ ಅನಿಷ್ಟವನ್ನುಂಟುಮಾಡುತ್ತವೆ.

೬. ಅತ್ಯಂತವಾಗಿ ಪರತನ್ತ್ರಸ್ವರೂಪನು ಇವನು. ಆ ಸ್ವರೂಪಕ್ಕೆ ವಿರುದ್ಧವಾಗಿ ತನ್ನನ್ನು ಕಾಪಾಡಿಕೊಳ್ಳುವ ವ್ಯಾಪಾರವಾಗಿವೆ ಇವು.

೭. ಬೇರೆ ದೇವತೆಗಳನ್ನು ಕುರಿತು ಯಾಗಮಾಡುವಿಕೆ ಮುಂತಾದವು ಕಲೆತಿರುವುದರಿಂದ ಇವನ ಪರಮೈಕಾನ್ತಿತ್ವಕ್ಕೆ ವಿರುದ್ಧವಾಗಿವೆ ಇವು.

೮. ಬೇರೆ ಪ್ರಯೋಜನಕ್ಕೆ ವಿಹಿತವಾಗಿರುವುದರಿಂದ ಅನರ್ಥವನ್ನು ತರ ತಕ್ಕವು.

೯. ಪ್ರಾಪ್ಯನಾವನೋ ಅವನೇ ಪ್ರಾಪಕನೂ ಆಗಿದ್ದಾನೆ, ಯಾವನನ್ನು ನಾವು ಹೊಂದಬೇಕೋ ಅವನೇ ಹೊಂದಿಸುವವನಾಗಿದ್ದಾನೆ, ಆದುದರಿಂದ ಭಕ್ತಿಯು ಪ್ರಾಪ್ಯಕ್ಕೆ ಅನುಗುಣವಲ್ಲದ್ದಾಯಿತು.

೧೦. 'ಅಥಪಾತಕ ಭೀತಸ್ತ್ವಂ—ನೀನು ಪಾಪಕ್ಕೆ ಅಂಜಿದವನಾಗಿ' ಎಂದು ಹೇಳಿರುವುದರಿಂದ ಪಾತಕ ಶಬ್ದದಿಂದ ಹೇಳಲ್ಪಟ್ಟಿರುವುದರಿಂದ ನಿಂದಿತವಾಗಿದೆ. ಆಚಾರ್ಯರು ಪ್ರೀತಿಯಿಂದ ಸ್ವೀಕರಿಸಲು ತಕ್ಕದ್ದಲ್ಲವಾಗಿವೆ.

೧೧. ಕೃತಯುಗವೇ ಮುಂತಾದವಕ್ಕೆ ತಕ್ಕದ್ದಾಗಿದ್ದರೂ ಕಲಿಯುಗಕ್ಕೆ ತಕ್ಕದ್ದಲ್ಲ.

೧೨. ಪರಸ್ಯ ಬುದ್ಧಿ ದೌರ್ಬಲ್ಯಾತ್—ಬುದ್ಧಿಬಲಸಾಲದವನು ಅವಲಂಬಿಸ ತಕ್ಕದ್ದು ಎಂದು ಹೇಳಿರುವುದರಿಂದ ಇವನ್ನು ಅನುಷ್ಠಾನ ಮಾಡಕೂಡದು.

ಈ ಕಾರಣಗಳಿಂದ ಭಕ್ತ್ಯಾದಿಗಳು ಸ್ವರೂಪ ವಿರುದ್ಧಗಳು ಎಂದು ಇತರರು ಹೇಳುತ್ತಾರೆ. ಈ ಕಾರಣಗಳು ಸರಿಯಾದವಲ್ಲ, ಹೇತ್ವಾಭಾಸಗಳು.

ಈವಾಗ ಅವರು ಹೇಳುವ ಒಂದೊಂದು ಕಾರಣವನ್ನೂ ವಿಚಾರಮಾಡೋಣ :

೧. ಸ್ವರೂಪಾನಧಿಕರಣವಾದ ಅಂದರೆ ಸ್ವರೂಪಕ್ಕೆ ಸಂಬಂಧಪಡದ— ಸ್ವರೂಪದಲ್ಲಿಲ್ಲದ ವರ್ಣಾಶ್ರಮಾದಿ ನಿಬಂಧನವಾಗಿರೋಣದರಿಂದ ಸ್ವರೂಪ ವಿರುದ್ಧ ಎಂಬುದು ಮೊದಲನೆಯ ಕಾರಣ.

ಆತ್ಮನು ದೇಹಾದಿಗಳಿಗಿಂತ ವಿಲಕ್ಷಣನಾಗಿರುವುದರಿಂದ ಸ್ವರೂಪದಲ್ಲಿ ವರ್ಣಾಶ್ರಮಾದಿಗಳಿಲ್ಲ ಎಂದು ತಿಳಿದವನಿಗೆ 'ನಾನು ಬ್ರಾಹ್ಮಣನು, ನಾನು ಕ್ಷತ್ರಿಯನು' ಎಂದು ಹೇಳುವ ಹಾಗೆ ಉಂಟಾಗುವ ಅಭಿಮಾನದ ಕಾರಣದಿಂದ ಮಾಡಬೇಕಾದ ವರ್ಣಾಶ್ರಮಾದಿ ಧರ್ಮಗಳೂ ಅವುಗಳೊಡನೆ ಸಂಬಂಧಿಸಿದ ಭಕ್ತ್ಯಾದಿ ಉಪಾಯಾನ್ತರಗಳೂ ಅನುಷ್ಠಿಸಲು ತಕ್ಕವಲ್ಲವಾದುದರಿಂದ ಈ ವರ್ಣಾಶ್ರಮಾದಿ ನಿಬಂಧನವಾದ ಧರ್ಮಗಳು ಸ್ವರೂಪ ವಿರುದ್ಧಗಳು ಎಂದು ಹೇಳುವುದಕ್ಕೆ ತಡೆಯೇನು? ಎಂದರೆ ಇದೂ ಹೊಂದಾಣಿಕೆ ಇಲ್ಲದ ಮಾತು. ಹೇಗೆಂದರೆ ಸ್ವರೂಪದಲ್ಲಿ ಬ್ರಾಹ್ಮಣತ್ವಾದಿ

ಗಳಿಲ್ಲ ಎಂದು ತಿಳಿದವನಾಗಿದ್ದರೂ ಕರ್ಮ ವಿಶೇಷಗಳ ಕಾರಣದಿಂದ ಬ್ರಾಹ್ಮಣತ್ವಾದಿ ವಿಶಿಷ್ಟವಾದ ಶರೀರದೊಡನೆ ಕಟ್ಟಲ್ಪಟ್ಟವನಾಗಿರುವುದರಿಂದ ಆ ಶರೀರದ ಸಂಬಂಧದ ಕಾರಣ ಉಂಟಾಗುವ ಹಸಿವು ಬಾಯಾರಿಕೆ ಮುಂತಾದವುಗಳಿಗೆ ಪರಿಹಾರ ಮಾಡುವ ರೀತಿಯಲ್ಲಿ, ಆ ಶರೀರವನ್ನು ಬಿಡುವವರೆಗೂ ಆ ಆ ವರ್ಣಾಶ್ರಮಾದಿಗಳಿಗೂ ತನ್ನಶಕ್ತಿಗೂ ತಕ್ಕಂತೆ ಬೇಡವಾದವನ್ನು ಹೋಗಲಾಡಿಸುವುದಕ್ಕೂ ಇಷ್ಟವಾದವನ್ನು ಹೊಂದುವುದಕ್ಕೂ ಶಾಸ್ತ್ರಗಳಲ್ಲಿ ವಿಧಿಸಿರುವ ಧರ್ಮಗಳನ್ನು ಬಿಡಕೂಡದು. ಆದುದರಿಂದ ಈ ಧರ್ಮಗಳನ್ನು ದೇಹಾತ್ಮ ವಿವೇಕ ಮೂಲಕ ಸ್ವರೂಪವಿರುದ್ಧಗಳೆಂದು ಹೇಳಿ ಇವಕ್ಕೆ ತ್ಯಾಜ್ಯತೆಯನ್ನು ಹೇಳಲಾಗುವುದಿಲ್ಲ.

ಹಸಿವನ್ನು ಊಟದಿಂದ ಪರಿಹಾರ ಮಾಡಿಕೊಳ್ಳುತ್ತೇವೆ, ಬಾಯಾರಿಕೆಯನ್ನು ಅನುಪಾನದಿಂದ ನೀಗಿಸಿಕೊಳ್ಳುತ್ತೇವೆ. ಇದನ್ನು ನಾವು ಕಂಡಿದ್ದೇವೆ. ಹಾಗೆ ಶಾಸ್ತ್ರದಿಂದಲೇ ಇಷ್ಟಪ್ರಾಪ್ತಿಗೂ ಅನಿಷ್ಟನಿವೃತ್ತಿಗೂ ಉಪಾಯವನ್ನು ಅರಿಯಬೇಕಾಗಿದೆ. ಆ ಉಪಾಯವು ಕರ್ಮದಿಂದ ಬಂದಿರುವ ಶರೀರದ ಮೂಲಕ ಶಾಸ್ತ್ರದಲ್ಲಿ ಹೇಳಿರುವ ಧರ್ಮದ ಆಚರಣೆಯಿಂದ ಸಾಧಿಸಲು ತಕ್ಕದ್ದಾಗಿದೆ. ಆದುದರಿಂದ ದೇಹಾತ್ಮ ವಿವೇಕವು ಶಾಸ್ತ್ರವಿಹಿತವಾದ ಧರ್ಮದ ಅನುಷ್ಠಾನಕ್ಕೆ ನಿಯಾಮಕವೇ ಹೊರತು. ಸ್ವರೂಪವಿರುದ್ಧವೆಂಬ ಮಾತಿಗಲ್ಲ ಎಂದು ಭಾವ, ಅಂತೂ ಮೊದಲನೆಯ ಕಾರಣ ಪ್ರಯೋಜನವಿಲ್ಲದ್ದಾಯಿತು.

**೨. ಸ್ವರೂಪದಲ್ಲಿ ಬ್ರಾಹ್ಮಣ್ಯಾದಿ ಭ್ರಮವೇ ಅಧಿಕಾರವಾದರೆ ದೋಷವೇನು ?**

ಎಂದರೆ, ಸ್ವರ್ಗವೇ ಮೊದಲಾದ ಪರಲೋಕದ ಸುಖವನ್ನು ಅನುಭವಿಸುವವನು ಭೋಕ್ತೃವು ಆತ್ಮನು. ಅವನಿಗೆ ತಾನು ದೇಹಾದಿಗಳಿಗಿಂತ ವಿಲಕ್ಷಣನು ಎಂಬ ಜ್ಞಾನ ಇರಬೇಕು. ಮತ್ತು ಬ್ರಾಹ್ಮಣನೇ ಮೊದಲಾದ ಯೋನಿಯಲ್ಲಿ ಹುಟ್ಟಿರಬೇಕು. ಅಂತಹವನಿಗೆ ಜ್ಯೋತಿಷ್ಟೋಮಾದಿಯಾಗಗಳು ವಿಧಿಸಲ್ಪಡುತ್ತವೆ. ಹೀಗಿರುವುದರಿಂದ ಅವನಿಗೆ ತಾನು ಅಂದರೆ ಆತ್ಮನು ದೇಹಾದಿ ವಿಲಕ್ಷಣನು ಎಂಬ ತಿಳಿವಳಿಕೆ ಇದ್ದೇ ಇರುತ್ತದೆ. ಭ್ರಾಂತಿಗೆ ಅವಕಾಶವೇ ಇರುವುದಿಲ್ಲ.

ಆದುದರಿಂದ ಎಲ್ಲಾ ಧರ್ಮಗಳನ್ನು ಅನುಷ್ಠಿಸುವುದಕ್ಕೂ ಉಪಯುಕ್ತವಾದದ್ದು ಮುಖ್ಯವಾಗಿ ಬೇಕಾದದ್ದು ಪ್ರಕೃತಿ ಆತ್ಮ ಇವುಗಳ ವಿವೇಕ ಜ್ಞಾನ. ಇದು ಭಕ್ತ್ಯಾದಿಗಳನ್ನು ಅನುಷ್ಠಿಸುವುದಕ್ಕೆ ಅವಶ್ಯವಾಗಿರಬೇಕಾದುದರಿಂದ ವಿರೋಧವೇನೂ ಇಲ್ಲ, ಈ ಸಂದರ್ಭದಲ್ಲಿ ರಹಸ್ಯತ್ರಯಸಾರದಲ್ಲಿ **'ಉಪಾಸನಾದಿ ಕಳುಕ್ಕು ವಿರೋಧಮ್ ಕಣ್ಡಿಲೋಮ್''** ಎಂದಿದೆ, ಎಲ್ಲೂ ಕಂಡಿಲ್ಲ ಎಂದರ್ಥ, ಸ್ವಾಮಿ ದೇಶಿಕರವರು ನೋಡದೆ ಇರುವ ಗ್ರಂಥವಿಲ್ಲ. ಸರ್ವತನ್ತ್ರಸ್ವತಂತ್ರರೆಂಬ ಬಿರುದನ್ನು

ಪಡೆದವರು. ಅವರು ೧೦೫ ವರುಷಗಳು ಬದುಕಿದ್ದರು. ಗ್ರಂಥಾವಲೋಕನ ಮತ್ತು ಗ್ರಂಥರಚನೆ ಇವುಗಳಲ್ಲೇ ಕಾಲವನ್ನು ಕಳೆದರು. ದೇಹಾತ್ಮ ಭ್ರಾಂತಿಯಿಲ್ಲದೆ ವಿವೇಕಜ್ಞಾನ ಉಂಟಾದವನಿಗೆ ಉಪಾಸನವು ಮೋಕ್ಷೋಪಾಯವಾಗಿ ಕೂಡದೆಂಬುದಕ್ಕೆ ಪ್ರಮಾಣವನ್ನು ತಾವು ಎಲ್ಲೂ ಕಾಣಲಿಲ್ಲವೆಂದು ಹೇಳುತ್ತಾರೆ.

**೩. ಉಪಾಸನಾದಿಗಳು ಅಹಂಕಾರಗರ್ಭವಾದುದರಿಂದ ಸ್ವರೂಪ ವಿರುದ್ಧವೆಂಬ ವಾದದ ನಿರಸನೆ.**

ಇಲ್ಲಿ ಆದಿಪದದಿಂದ ಭರನ್ಯಾಸವೂ ಕರ್ಮಯೋಗಾದಿಗಳೂ ಹೇಳಲ್ಪಟ್ಟವು.

ಇವು ಅಹಂಕಾರ ಮಮಕಾರ ಗರ್ಭಗಳು. ಹೇಗೆ ಎಂದರೆ "**ಅಹಂಕರಿಷ್ಯೆ**= ನಾನು ಮಾಡುತ್ತೇನೆ, ಎಂದು ಹೇಳಬೇಕು. ಅಲ್ಲದೆ ಇದರ ಪ್ರಯೋಜನ ನನಗೆ," ಎಂಬ ಭಾವನೆಗಳೂ ಉಂಟಾಗುತ್ತವೆ ಅಲ್ಲವೇ ? ಸರ್ವೇಶ್ವರನ ಕೃಪೆಯು ತನಗೆ ಉತ್ತಾರಕವೆಂಬ ಜ್ಞಾನವಿಲ್ಲದೆ 'ಮೋಕ್ಷಪ್ರಾಪ್ತಿಯನ್ನು ಈ ಉಪಾಯದ ಮೂಲಕ ಸಾಧಿಸುವೆನು' ಎಂಬ ಭಾವನಾಗರ್ಭವಾಗಿ ಹೇಳಿಕೊಳ್ಳಬೇಕಾಗುತ್ತಲ್ಲವೆ ? ಕರ್ಮಗಳ ಪ್ರಥಮ ಪ್ರಯತ್ನದಲ್ಲಿ ಸರ್ವೇಶ್ವರನು ಕೊಟ್ಟ ಸ್ವಾತಂತ್ರ್ಯವನ್ನು ದುರುಪಯೋಗ ಮಾಡುವುದರಿಂದ ಅಹಂಕಾರ ಮಮಕಾರ ಗರ್ಭಿತವೆಂದು ಭಾವಿಸಿ "**ಮದಿರಾಬಿಂದು ಮಿಶ್ರಮಾನ ಶಾತಕುಂಭಮಯಕುಂಭಗತ ಸಲಿಲಂಪೋಲೆ ಅಹಂಕಾರ ಮಿಶ್ರಂ**= ಚಿನ್ನದಿಂದ ಮಾಡಲ್ಪಟ್ಟ ಬಿಂದಿಗೆಯಲ್ಲಿ ನೀರುತುಂಬಿ, ಅದರೊಳಗೆ ಒಂದುತೊಟ್ಟು ಹೆಂಡವನ್ನು ಬಿಟ್ಟರೆ ಹೇಗೆ ಅದು ಅಪವಿತ್ರವಾಗುತ್ತದೋ ಹಾಗೆ ಆಗುತ್ತದೆ" ಈ ಉಪಾಸನಾದಿಗಳು ಎಂದು ಅನುಮಾನ ಮಾಡಿದರೆ, ಉಪಾಸನವೆಂಬ ಪಕ್ಷದಲ್ಲಿ ಅಹಂಕಾರ ಗರ್ಭತ್ವವೆಂಬ ಹೇತುವೇ ಇಲ್ಲ. ಆದುದರಿಂದ ಹೇತ್ವಸಿದ್ಧಿ ದೋಷವುಂಟಾಗುತ್ತದೆ ಹೇಗೆಂದರೆ–"**ಸ್ವಶೇಷ ಭೂತೇನ ಮಯಾ ಸ್ವೀಯೈಸ್ಸರ್ವ ಪರಿಚ್ಛದೈಃ ವಿಧಾತುಂ ಪ್ರೀತಮಾತ್ಮಾನಂ ದೇವಃ ಪ್ರಕ್ರಮತೇ ಸ್ವಯಂ**=ತನಗೆ ಶೇಷಭೂತನಾದ ನನ್ನಿಂದ ಎಲ್ಲಾ ಉಪಕರಣಗಳಿಂದಲೂ ತನ್ನನ್ನು ಪ್ರೀತನನ್ನಾಗಿ ಮಾಡಲು ಸ್ವಾಮಿಯು ತಾನೇ ಪ್ರಾರಂಭಿಸುತ್ತಾನೆ".

ಎಂದು ಅಹಂಕಾರ ಮಮಕಾರ ತ್ಯಾಗಪೂರ್ವಕವಾಗಿ ತನ್ನ ಸರ್ವವ್ಯಾಪಾರಗಳೂ ಭಗವದಧೀನವೆಂಬ ಅನುಸಂಧಾನಪೂರ್ವಕವಾಗಿ ಉಪಾಸನ ಪ್ರಾರಂಭಮಾಡಬೇಕೆಂಬುದಾಗಿ ಶಾಸ್ತ್ರವಿಧಿಸಿರುವುದರಿಂದ ಹೇತುವೇ ಪಕ್ಷದಲ್ಲಿಲ್ಲದ ವಾದವಾಗುತ್ತದೆ ಅದು. ಶಾಸ್ತ್ರಜ್ಞಾನವಿರುವರಿಗಾದರೋ ಶೇಷತ್ವಜ್ಞಾನವೇನು ಪರಾತ್ತು [1]ತಚ್ಛ್ರುತೇಃ ಎಂದು ಬ್ರಹ್ಮಸೂತ್ರದಲ್ಲಿ ತೋರುವ ಪಾರತಂತ್ರ್ಯವೇನು ಇವುಗಳ ಜ್ಞಾನವಿರುವುದರಿಂದ.

1. ಬ್ರಹ್ಮಸೂತ್ರ. ೧ನೇ ಅಧ್ಯಾಯ. ೨ನೇ ಪಾದ.

ಸ್ವತಂತ್ರಕರ್ತೃತ್ವರೂಪ ಅಹಂಕಾರ ಜ್ಞಾನವು ಉಂಟಾಗುವುದೇ ಇಲ್ಲ. ಉಪಾಸೀತ' ಇವೇ ಮೊದಲಾದ ವಿಧಿಯೇ ಇದೆ. ಇದನ್ನು ನಿರಾಕರಿಸಿ ಉಪಾಸನಾದಿಗಳು ಅಹಂಕಾರ ಗರ್ಭವೆಂಬುದು ಶಾಸ್ತ್ರವನ್ನು ಒಪ್ಪದೆ ಇರುವಾಗ ಹೇಳುವ ಮಾತಾಗಿದೆ.

ಅನೇಕ ಮಹರ್ಷಿಗಳೇ ಮೊದಲಾದವರು ಈ ಉಪಾಸನೆಗೆ ತುಂಬಾ ಮಹಿಮೆ ಯನ್ನು ಹೇಳಿ, ತಾವೂ ಅನುಷ್ಠಿಸಿ, ತಮ್ಮ ಶಿಷ್ಯರುಗಳಿಗೂ ವಿಶದವಾಗಿ ಉಪದೇಶಿಸಿ ದ್ದಾರೆ. ಶ್ರೀ ನಾರದ ಭಗವಾನ್‌ರವರು ಪ್ರಹ್ಲಾದ ಧ್ರುವರುಗಳಿಗೂ, ಶ್ರೀ ಕಪಿಲಭಗವಾನ್‌ರವರು ತಮ್ಮ ತಾಯಿ ದೇವಹೂತಿಗೂ ಸಹ ಅಹಂಕಾರ ಗರ್ಭವಾದ ವಿಷಯವನ್ನು ವಿವೇಕವಿಲ್ಲದೆ ಉಪದೇಶಿಸಿದರೆಂದು ಹೇಳಲು ಸಾಧ್ಯವೇ ? ಆದುದರಿಂದ ಶಾಸ್ತ್ರಾನುಗುಣವಾದ ವಾದವು ಗ್ರಹಿಸತಕ್ಕದ್ದಾಗಿದೆ. ಶಾಸ್ತ್ರವನ್ನು ದೂರೀಕರಿಸಿದ ವಾದವು ಸರಿಯಾದುದಲ್ಲ. ಶಾಸ್ತ್ರ ಸಮ್ಮತವಾದುದು ಎಂದಿಗೂ ಸ್ವರೂಪವಿರುದ್ಧವಾಗಲಾರದು.

**೪. ಭಕ್ತಿಯೋಗಕ್ಕೆ ಶರೀರೋಪಾಧಿಯ ಅಪೇಕ್ಷೆ ಇರುವುದರಿಂದ ಸ್ವರೂಪ ವಿರುದ್ಧವೆಂಬ ವಾದದ ಖಂಡನವು.**

ಪ್ರಾರಬ್ಧಕರ್ಮದಿಂದ ಸಂಪಾದಿಸಲ್ಪಟ್ಟು ಪ್ರಾರಬ್ಧಕರ್ಮಾನುಭವಕ್ಕಾಗಿ ಉಂಟಾದ ಇಂದ್ರಿಯಗಳೂ ಶರೀರವೂ ಆಗಿರುವ ಉಪಾಧಿಗಳ ಮೂಲಕವಾಗಿ ಉಪಾಸನವನ್ನು ಅನುಷ್ಠಿಸಬೇಕಾಗಿರುವುದರಿಂದ ಕರ್ಮ ಯೋಗವೇ ಮೊದಲಾದವು ಉಪಾಧಿಗಳು ಯಾವುವೂ ಇಲ್ಲದ ಆತ್ಮಸ್ವರೂಪಕ್ಕೆ ವಿರುದ್ಧವಾದವು ಎಂದು ಪೂರ್ವಪಕ್ಷವಾದವನ್ನು ತರುವವರಿಗೆ ಆತ್ಮಸ್ವರೂಪದ ಯಥಾರ್ಥಜ್ಞಾನವೂ ಗುರು ಗಳ ಮೂಲಕ ಮಂತ್ರೋಪದೇಶ ರೂಪದಲ್ಲಿ ದ್ವಯಮಂತ್ರದ ಶ್ರವಣವೂ ಕೂಡ ಮನಸ್ಸು-ಕಿವಿ ಮುಂತಾದ ಇಂದ್ರಿಯಗಳ ಅಪೇಕ್ಷೆಯಿಂದ ನಡೆಯಬೇಕಾಗಿರುವು ದರಿಂದ ಪೂರ್ವಪಕ್ಷಿಗಳು ಆವಶ್ಯಕವೆಂದು ಹೇಳುವ ಉಪಾಯಗಳೂ ಕೂಡ ಸಮಾನವಾದ ದೋಷಗಳಿಂದ ಕೂಡಿದವೇ ಆಗುತ್ತವೆ. ಪೂರ್ವಪಕ್ಷಿಗಳು, ಶೇಷತ್ವ ಜ್ಞಾನಕ್ಕೆ ಅತ್ಯಾವಶ್ಯಕವಾದುದು ಆತ್ಮಸ್ವರೂಪದ ಯಥಾರ್ಥಜ್ಞಾನ ಮತ್ತು ದ್ವಯಮಂತ್ರೋಪದೇಶ ಎಂಬುದನ್ನು ಒಪ್ಪುತ್ತಾರೆ. ಇವುಗಳಿಗೆ ಕರಣ ಕಳೇ ಬರಗಳ ಅಪೇಕ್ಷೆ ಬೇಕೇ ಬೇಕಾಗುತ್ತದೆಯಾದುದರಿಂದ ಅವರು ಆರೋಪಿಸಿದ ದೋಷವೇ ಅವರಿಗೆ ಅಭಿಮತವಾದ ಪ್ರವೃತ್ತಿಗಳಲ್ಲೂ ಉಂಟೆಂಬ ಭಾವ. ಯಾವ ಪ್ರವೃತ್ತಿಗಳಿಗೆಯಾಗಲಿ ಇಂದ್ರಿಯಗಳು ಶರೀರ ಇವುಗಳಿಲ್ಲದೆ ಸಾಧ್ಯವೇ ಇಲ್ಲ.

ಸರ್ವೇಶ್ವರನು ನಿರ್ಹೇತುಕಕೃಪಾಳುವಾದುದರಿಂದ ಶೇಷತ್ವಾನುಸಂಧಾನ ಪೂರ್ವಕವಾದ ಸ್ವಯತ್ನ ನಿವೃತ್ತ್ಯುಪಾಯಾನುಸಂಧಾನದಿಂದಲೇ ರಕ್ಷಿಸುವನು ಎಂದು ಹೇಳುವಾಗ, ಇವುಗಳು ತಾನೇ ಕರಣ ಕಳೇಬರಗಳ ಸಹಾಯವಿಲ್ಲದೇ

ನಡೆಯುತ್ತವೆಯೇನು ? ಆದುದರಿಂದ ಇವೆಲ್ಲಾ ಸಮಾನವಾದ ದೋಷದಿಂದ ಕೂಡಿದವೇ ಆಗುತ್ತವೆ ಎಂದು ಭಾವ.

**೫. ಜೀವನು ಪರಮಾತ್ಮನಿಗೆ ಶೇಷಭೂತನು. ಆದುದರಿಂದ ಇವನು ತನ್ನನ್ನು ತಾನು ರಕ್ಷಿಸಿಕೊಳ್ಳಬೇಕಾದುದಿಲ್ಲ.**

ಏತಕ್ಕೆಂದರೆ ಇವನ ರಕ್ಷಣೆಯ ಹೊಣೆ ಶೇಷಿ=ಯಜಮಾನನು ಆದ ಪರಮಾತ್ಮನಿಗೇ ಸೇರಿದ್ದು. ಅಲ್ಲದೆ ಇವನಿಗೆ ಆ ಶಕ್ತಿಯೂ ಇಲ್ಲ. ಏತಕ್ಕೆಂದರೆ ಅತ್ಯನ್ತ ಪರತನ್ತ್ರನಿವನು=ಅವನಿಗೆ ಅಧೀನನು. ಆದುದರಿಂದ ಇವನಿಗೆ ತನ್ನನ್ನು ಕಾಪಾಡಿಕೊಳ್ಳಲು ಮಾಡಬೇಕಾದ ಒಂದು ಕಾರ್ಯ=ಉಪಾಯ ಉಂಟು ಎಂದು ವಿಧಿಸುವುದೂ—ಅದು ಇವನಿಗೆ ಸಾಧ್ಯವಾಗಿ [1]ಸಾಧ್ಯೋಪಾಯ ಎಂಬ ಹೆಸರನ್ನು ಹೊಂದುವುದು ಎಂದು ಹೇಳುವುದೂ ಕೂಡುತ್ತದೋ ? ಎಂದರೆ ಇದು ಸಾಧ್ಯೋಪಾಯದ ಆವಶ್ಯಕವಿಲ್ಲದೇನೇ ಸಿದ್ಧೋಪಾಯನು ರಕ್ಷಿಸಿಬಿಡುವನು. ಆದುದರಿಂದ ಸಿದ್ಧೋಪಾಯನೇ ಸಾಕು ಎಂದು ಮಾಡಿದ ವಾದವನ್ನು ನಿರಸನ ಮಾಡುವ ಸಂದರ್ಭದಲ್ಲಿ ರಹಸ್ಯತ್ರಯಸಾರದಲ್ಲಿ ಸರ್ವಮೋಕ್ಷ ಪ್ರಸಙ್ಗ ಉಂಟಾಗುತ್ತದೆಂದು ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಪರಿಹರಿಸಿದ್ದಾರೆ ಆಚಾರ್ಯರು. ಈ ಮುಮುಕ್ಷುವು ಮಾಡಿದ ಒಂದು ಶಾಸ್ತ್ರಸಿದ್ಧವಾದ ವ್ಯಾಜರೂಪವಾದ ಭಕ್ತ್ಯುಪಾಯ ಅಥವಾ ಭರಸಮರ್ಪಣ ಇವನ್ನು ಅಙ್ಗೀಕರಿಸದೆ ಆತ್ಮನಿಗೆ ಮೋಕ್ಷವನ್ನು ಕೊಟ್ಟರೆ ಅನಾದಿಯಾಗಿ ಬಹುಕಾಲಕ್ಕೆ ಮೊದಲೇ ಮೋಕ್ಷವನ್ನು ಕೊಡಬೇಕಾಗಿದ್ದಿತು.

ಎಂಬ ಆಕ್ಷೇಪವು ಉಂಟಾಗುತ್ತದೆಂಬ ಭಾವವು. ಹಿಂದೆಯೇ ಶೇಷತ್ವ ಪಾರತನ್ತ್ರ್ಯಜ್ಞಾನವಿತ್ತಲ್ಲಾ ಆಗಲೇ ಸರ್ವೇಶ್ವರನು ಏತಕ್ಕೆ ಮುಕ್ತಿಯನ್ನು ಕೊಡಲಿಲ್ಲ ? ಹೀಗೆ ಎಲ್ಲರಿಗೂ ಮೊದಲೇ ಜ್ಞಾನವಿದ್ದುದರಿಂದ ಎಲ್ಲರೂ ಮುಕ್ತರಾಗಿರಬೇಕೆಂಬ ತಾತ್ಪರ್ಯ. ಈ ಆಕ್ಷೇಪಣೆಗೆ ಸಮಾಧಾನವಾಗಿ ಪೂರ್ವಪಕ್ಷಿಯು ಹೇಳಬಹುದು : ಏನೆಂದರೆ, ಸರ್ವೇಶ್ವರನು ಸರ್ವಸ್ವತಂತ್ರನು. ಚೇತನರು ಅವನಿಗೆ ಅಧೀನರು. ತನಗೆ ಯಾವಾಗ ಇಷ್ಟಬಂದಿತೋ, ಆಗ ಮುಕ್ತರನ್ನಾಗಿ ಮಾಡುವನು ಎಂದರೆ ಅದು ಸರಿಯಲ್ಲ. ಈಶ್ವರನು ಕೇವಲ ಸ್ವಾತಂತ್ರ್ಯದಿಂದ ಇಷ್ಟಬಂದಾಗ ಮುಕ್ತರನ್ನಾಗಿ ಮಾಡುವನು ಎಂದರೆ ವೈಷಮ್ಯ=ಪಕ್ಷಪಾತ ನೈರ್ಘೃಣ್ಯ=ದಯೆಯಿಲ್ಲದಿರುವಿಕೆ ಎಂಬದೋಷಗಳು ಅವನಿಗೆ ಬರುತ್ತವೆ. ಸರ್ವೇಶ್ವರನು, ಮುಮುಕ್ಷುಗಳ ತಾರತಮ್ಯವನ್ನು ಪರಿಗಣಿಸದೇ ತನ್ನಿಷ್ಟಾನುಸಾರ ಅನುಗ್ರಹಿಸು

1. ಯಾವುದೂ ತನಗೆ ಸಾಧ್ಯವಿಲ್ಲದೆ ದುಸ್ಥಿತಿಯಲ್ಲಿರುವವನಿಗೆ ಅದು ಸಾಧ್ಯೋಪಾಯವೆಂದು ನಾಮಕರಣ ಮಾಡುವುದೂ ಹಾಸ್ಯಾಸ್ಪದವಲ್ಲವೋ ಎಂಬ ಭಾವವು. ಯಾವುದು ಸಮಂಜಸವಲ್ಲವೋ ಅದು ಹಾಸ್ಯಾಸ್ಪದವೇ ಎಂಬ ತಾತ್ಪರ್ಯವು.

ವನು. ಆದರೆ, ತನ್ನ ಶಾಸ್ತ್ರಾನುಸಾರ ಐಹಿಕಕರ್ತ್ರವ್ಯೋಪಾಯವನ್ನು ಅನುಷ್ಠಿಸಿದವನೂ ಅನುಷ್ಠಿಸದೇ ಇರುವವನೂ, ಮಹಾಭಾಗವತನೂ ಮಹಾತಾಮಸನೂ ಎಲ್ಲರೂ ಒಂದೇ ಆಗುವುದರಿಂದ ಪಕ್ಷಪಾತಾದಿದೋಷಗಳಿಗೆ ಗುರಿಯಾಗುವನು ಎಂಬ ಭಾವ. ಅದೂ ಅಲ್ಲದೆ ಮೋಕ್ಷೋಪಾಯಗಳನ್ನು ವಿಧಿಸಿರುವ ಶಾಸ್ತ್ರಗಳೆಲ್ಲಾ, ವ್ಯರ್ಥಗಳಾಗುವುವು ಉಪನಿಷತ್ತುಗಳೂ ಬ್ರಹ್ಮಸೂತ್ರಗಳೂ ಗೀತೋಪನಿಷತ್ತು, ಮಹಾಭಾರತ, ಭಾಗವತ, ರಾಮಾಯಣಾದಿಗಳೂ ಆಳ್ವಾರಾಚಾರ್ಯರುಗಳ ದಿವ್ಯಪ್ರಬಂಧಗಳೂ ಎಲ್ಲವೂ ನಿರರ್ಥಕಗಳಾಗುವುವು.

ಸರ್ವೇಶ್ವರನೇ ಉಪಾಯಾನುಷ್ಠಾನದ ಅಪೇಕ್ಷೆಯಿಲ್ಲದೆ ಮುಮುಕ್ಷುವನ್ನು ರಕ್ಷಿಸಿಬಿಡುವನು ಎಂಬವಾದಕ್ಕೆ ಮೂರುದೋಷಗಳು ತಪ್ಪಿದ್ದಲ್ಲವೆಂದು ಹೇಳಿದರು.

(ಅ) ಅನಾದಿಕಾಲದಲ್ಲೇ ಸರ್ವಮುಕ್ತಿ ಪ್ರಸಂಗವು, ಲೀಲಾವಿಭೂತಿಯೇ ಇಲ್ಲವಾಗಬೇಕು.

(ಆ) ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಸರ್ವೇಶ್ವರನಿಗುಂಟಾಗಬೇಕು.

(ಇ) ಮೋಕ್ಷಶಾಸ್ತ್ರಗಳೆಲ್ಲಾ ನಿರರ್ಥಕವಾಗಬೇಕು.

ಹೀಗೆ ದೋಷಗಳು ಬಂದರೆ, ಈ ಚೇತನನ ಸ್ವರೂಪಯೋಗ್ಯವಾದ ಅಮೋಘ ಗುಣಗಳಾದ ಶೇಷತ್ವ ಪಾರತಂತ್ರ್ಯಗಳು ನಿರರ್ಥಕವಾದವು ಆಗಲಿಲ್ಲವೋ ಅವುಗಳಿಂದೇನು ಪ್ರಯೋಜನ ? ಎಂದರೆ—ಉಪಾಯದಶೆಯಲ್ಲೂ ಫಲದಶೆಯಲ್ಲೂ ಅಶೇಷತ್ವ ಪಾರತಂತ್ರ್ಯಗಳ ಉಪಯೋಗವಿದೆ.

ಹೀಗೆ ತಾನು ಶೇಷನಾದುದರಿಂದಲೇ ಸರ್ವೇಶ್ವರನು ತನಗೆ ಇಷ್ಟವಾದ ವಿಷಯವನ್ನು ಎಂದರೆ ತಾನು ಶಾಸ್ತ್ರಗಳಲ್ಲಿ ಹೆಚ್ಚಾದ ದಯೆಯಿಂದ ವಿಧಿಸಿರುವ ಸಾಧ್ಯೋಪಾಯಗಳನ್ನು ಆಶ್ರಯಿಸುವುದರಲ್ಲಿ ಎಂದರೆ ಅನುಷ್ಠಿಸುವುದರಲ್ಲಿ ಯೋಗ್ಯತೆಯೂ ಆಭರಣಕ್ಕೆ ಯಜಮಾನನು ತನ್ನ ಆಭರಣವನ್ನು ರಕ್ಷಿಸುವುದರಲ್ಲಿ ಯೋಗ್ಯತೆಯೂ ಉಂಟಾಗುತ್ತದೆ. ಹೀಗೆ ಶೇಷಶೇಷಿಗಳು ಇಬ್ಬರಿಗೂ ಈ ಉಪಾಯಾನುಷ್ಠಾನದಿಂದ ಔಚಿತ್ಯಉಂಟು. ಶೇಷತ್ವ ಎಂದರೆ ಯಥೇಷ್ಟ ವಿನಿಯೋಗಾರ್ಹತ್ವ—ಯಜಮಾನನು ತನ್ನ ಇಷ್ಟಬಂದಂತೆ ಉಪಯೋಗ ಮಾಡಿಕೊಳ್ಳುವ ಯೋಗ್ಯತೆ ಇರುವಿಕೆ. ಆದುದರಿಂದ ಈ ಚೇತನನಿಗೆ ಕರಣಕಳೇಬರಾದಿಗಳನ್ನೂ ಶಾಸ್ತ್ರವನ್ನೂ ಶಾಸ್ತ್ರಬೋಧಕರಾದ ಗುರುಗಳನ್ನೂ ಕೊಟ್ಟು, ಗುರುಮುಖದಿಂದ ತಾನು ಶಾಸ್ತ್ರಗಳಲ್ಲಿ ಬೋಧಿಸಿರುವಹಾಗೆ ಉಪಾಯಾನುಷ್ಠಾನ ಮಾಡಿ ತನ್ನ ಪ್ರೀತಿಯನ್ನು ಸಂಪಾದಿಸಿಕೊಳ್ಳಲೆಂದು ಈತನನ್ನು ವಿನಿಯೋಗಿಸಿರುತ್ತಾನೆ. ಹಾಗೆ ಆತನನ್ನು ಆ ಸಾಧ್ಯೋಪಾಯದ ಮೂಲಕ ಆಶ್ರಯಿಸಿದರೆ ಒಳ್ಳೆಯ ಪುತ್ರನು

ತನ್ನ ಒಳ್ಳೆಯ ನಡತೆಯಿಂದ ತಂದೆಯನ್ನು ಪ್ರೀತಿಗೊಳಿಸುವ ಹಾಗೆ ಈ ಶೇಷನಾದ ಪುತ್ರನು ಲೋಕಪಿತಾವನ್ನು ಸಂತೋಷ ಪಡಿಸುತ್ತಾನೆ. ಆತನ ಶಾಸ್ತ್ರ ವಿಧಿಯ ಮೂಲಕ ಅನುಸರಿಸಿ ನಡೆಸಿದ ಸಾಧ್ಯೋಪಾಯದಿಂದ ಸರ್ವಶೇಷಿಯು ಸಂತೋಷವನ್ನು ಪಡೆಯುತ್ತಾನೆ. ಹೀಗೆ ಶೇಷನಿಗೆ ಔಚಿತ್ಯವು. ಶೇಷಿಗೆ ಹೇಗೆ ಔಚಿತ್ಯವೆಂದರೆ, ಈ ಚೇತನನು ತನ್ನ ಆಭರಣವು ತುಂಬಾ ಹೃದ್ಯವಾದದ್ದು. ಇದು ಕಾರಣಾಂತರದಿಂದ ತನ್ನಲ್ಲಿರದೆ ಬೇರೆಕಡೆ ಇದ್ದಿತು. ಲೆಕ್ಕವಿಲ್ಲದ ಹಾಗೆ ಇರುವ ಆಭರಣಗಳನ್ನು ಹೊಂದಿರುವ ಒಬ್ಬರಾಜನು ಒಂದು ಆಭರಣವನ್ನು ಪ್ರತ್ಯೇಕ ಮಾಡಿ ತಾನು ಧರಿಸಿದರೆ ಅದರಲ್ಲಿ ಏನೋ ಒಂದು ವಿಧ ಹೆಚ್ಚಿಗೆ ಹೇಗೆ ಗೋಚರ ವಾಗುತ್ತದೋ, ಹಾಗೆಯೇ ಬದ್ಧಚೇತನರೆಲ್ಲಾ ಶೇಷಭೂತರಾದರೂ, ತಾನೇ ಅನುಗ್ರಹಿಸಲು ಯೋಗ್ಯವಾಗಿ ರಕ್ಷ್ಯವಸ್ತುವಾಗಿರುವವನು ತನ್ನ ಇಷ್ಟಾನುಸಾರ ನಡೆಸಿದ ಸಾಧ್ಯೋಪಾಯವನ್ನು ಅನುಷ್ಠಿಸಿದವನೆಂದು ಆತನನ್ನು ಮುಖ್ಯವಾಗಿ ವರಿಸಿರುವುದರಿಂದ ಶೇಷಿಯಾದ ತನಗೆ ಔಚಿತ್ಯ ಉಂಟಾಯಿತೆಂಬ ಭಾವವು. ಸಾಧ್ಯೋಪಾಯದಿಂದ ಔಚಿತ್ಯ ಹೊಂದಿದವನನ್ನೇ ಶೇಷಿಯಾದ ತಾನು ರಕ್ಷಿಸಿರು ವುದರಿಂದ ತನಗೂ ಔಚಿತ್ಯವೆಂಬ ಭಾವವು.

### ೬. ಸಾಧ್ಯೋಪಾಯಾನುಷ್ಠಾನದಲ್ಲಿ ಪಾರತಂತ್ರ್ಯಕ್ಕೆ ಹಾನಿ ಇಲ್ಲ.

ಸರ್ವೇಶ್ವರನಿಗೆ ಸಂಪೂರ್ಣವಾಗಿ ಅಧೀನನಾಗಿರುವುದರಿಂದ ಆತನು ನಮಗೆ ಎಲ್ಲಾಕಾರ್ಯಗಳಲ್ಲೂ ಕೊಟ್ಟಿರುವ ಪ್ರಥಮ ಪ್ರವೃತ್ತಿಯಲ್ಲಿನ ಸ್ವಾತಂತ್ರ್ಯ ವನ್ನು ವಹಿಸಿ ಸರ್ವೇಶ್ವರನಿಗೆ ತುಂಬಾ ಇಷ್ಟಗಳಾದ ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳನ್ನು ಅನುಷ್ಠಿಸೋಣವೂ ಅದರ ಫಲವನ್ನು ಹೊಂದುವುದಕ್ಕೆ ಸರ್ವೇಶ್ವರನ ಅನುಗ್ರಹವನ್ನು ಎದರು ನೋಡುತ್ತಿರಬೇಕಾದುದೂ ಎರಡೂ ಸಿದ್ಧಿಸುತ್ತವೆ. ಅವನಿಗೆ ಅಭಿಮತವಾಗಿರುವುದನ್ನು ಅನುಷ್ಠಿಸೋಣವು ಶೇಷತ್ವದ ಪ್ರಯೋಜನವೂ, ಮೋಕ್ಷಾದಿ ಫಲಪ್ರಾಪ್ತಿಯು ಅವನ ಅನುಗ್ರಹಾನುಸಾರವಾಗಿ ಉಂಟಾಗೋಣವೂ ಪಾರತನ್ತ್ರ್ಯದ ಪ್ರಯೋಜನವು ಎಂಬ ಭಾವವು. ಸರ್ವೇಶ್ವರನು ಈ ಚೇತನನಿಗೆ ಕರಣಕಳೇಬರ ಯೋಗ, ಜ್ಞಾನ, ವಿವೇಕದಾನ ಶಾಸ್ತ್ರಪ್ರದಾನ ಮೊದಲಾದ ಸೌಕರ್ಯಗಳನ್ನುಂಟುಮಾಡಿ ಪ್ರತಿಯೊಂದು ಕಾರ್ಯದಲ್ಲಿಯೂ [1]"ಕೃತಪ್ರಯತ್ನಾಪೇಕ್ಷಸ್ತು" ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವ ಹಾಗೆ, ಸ್ವಾತನ್ತ್ರ್ಯವನ್ನು ಕೊಟ್ಟು ಸರ್ವೇಶ್ವರನು ತನಗೆ ಇಷ್ಟವಾದುದನ್ನು ಅವಲಂಬಿಸು ಎಂದರೆ ಆ ಸ್ವಾಮಿಯಿಂದ ಕೊಡಲ್ಪಟ್ಟ ಸ್ವಾತನ್ತ್ರ್ಯವನ್ನು ತಲೆಯಿಂದಹೊತ್ತು ಆ ಅಭಿಮತಾನುಷ್ಠಾನವು ಶೇಷತ್ವದಿಂದುಂಟಾದ ಪ್ರಯೋಜನವಲ್ಲವೇ ಎಂಬ

1. ಬ್ರಹ್ಮಸೂತ್ರ. ೨. ೩. ೪೧.

ಅಭಿಪ್ರಾಯ. ಹೀಗೆ ಅನುಷ್ಠಿಸಿ ಬಿಟ್ಟ ಫಲಸಂಗದಲ್ಲಿ ಮಮತೆಯನ್ನಿಡದೆ ಇದ್ದು ಪೂರ್ಣ ಪರತನ್ತ್ರನಾಗಿ ಇದ್ದುಕೊಂಡು ಆತನು ಅನುಗ್ರಹಿಸಿದ ಫಲವನ್ನು ಹೊಂದುವಿಕೆಯೂ ಪಾರತನ್ತ್ರ್ಯದ ಪರಾಕಾಷ್ಠೆಯಲ್ಲವೇ ಎಂಬ ಭಾವವು. ಈ ಸಾಧ್ಯೋಪಾಯಗಳನ್ನು ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿ ಅನುಷ್ಠಿಸಿರುವುದರಿಂದ ಶೇಷತ್ವ ಪಾರತನ್ತ್ರ್ಯಗಳೆರಡೂ ಚೆನ್ನಾಗಿ ಪ್ರದರ್ಶಿಸಲ್ಪಟ್ಟವೇವಿನಾ ಪೂರ್ವಪಕ್ಷಿಯು ಹೇಳುವ ಹಾಗೆ ಇಲ್ಲದೆ ಅಹಂಕಾರ ಮಮಕಾರ ಪ್ರದರ್ಶನವೆಂಬ ಭಾವವಲ್ಲವು.

ಈ ಶೇಷತ್ವ ಪಾರತನ್ತ್ರ್ಯಗಳೆರಡೂ ಮುಕ್ತನಾಗಿ ದಿವ್ಯವೈಕುಂಠದಲ್ಲಿರುವ ದೆಶೆಯಲ್ಲಿ ಶ್ರಿಯಃಪತಿಗೆ ಇಷ್ಟವಾದ ಕೈಙ್ಕರ್ಯವನ್ನು (ಇದು ಶೇಷತ್ವದ ವೃತ್ತಿಯು) ಅವನು ಆಜ್ಞಾಪಿಸಿದ ರೀತಿಯಲ್ಲಿ (ಇದು ಪಾರತನ್ತ್ರ್ಯ ವೃತ್ತಿಯು) ನಡೆಸುವುದಕ್ಕೆ ಸಾಧನವಾಗುತ್ತವೆ. ಸರ್ವೇಶ್ವರನ ಅಭಿಮತಕ್ಕೆ ಅನುಸಾರವಾಗಿಯೂ, ಆತನು ವಿಧಿಸಿರುವ ಮರ್ಯಾದೆಗಳಿಗೆ ಅಧೀನವಾಗಿಯೂ ಕೈಙ್ಕರ್ಯಗಳನ್ನೆಸಗುವುದರಿಂದ ಶೇಷತ್ವ ಪಾರತನ್ತ್ರ್ಯಗಳ ಸ್ವರೂಪಕ್ಕೆ ಅನುಗುಣವಾಗಿಯೇ ಅನುಷ್ಠಿಸಿದಂತಾಯಿತೆಂಬ ಅಭಿಪ್ರಾಯ.

ಈ ಸಂದರ್ಭದಲ್ಲಿ ಪೂರ್ವಪಕ್ಷಿಗಳು ಹೇಳಬಹುದೇನೆಂದರೆ, ಶೇಷತ್ವ ಪಾರತನ್ತ್ರ್ಯಗಳು ಸಾರ್ಥಕ್ಯವನ್ನು ಹೊಂದ ಬೇಕಾದರೆ ಸ್ವರಕ್ಷಣಾರ್ಥವಾಗಿ ಯಾವ ವಿಧವಾದ ವ್ಯಾಪಾರವೂ ಕೂಡದು ಎಂದು ಊಹಿಸಿ, ಆ ಸಂದರ್ಭದಲ್ಲಿ ಉಂಟಾಗುವ ದೋಷಗಳನ್ನು ತಿಳಿಸುತ್ತಾರೆ.

ಈ ಶೇಷತ್ವ ಪಾರತನ್ತ್ರ್ಯಗಳ ಮೂಲಕವಾಗಿ ತನ್ನ ರಕ್ಷಣೆಗಾಗಿ ತಾನು ಏನೊಂದೂ ವ್ಯಾಪಾರವನ್ನೂ ಸ್ವತಂತ್ರಿಸಿ ಮಾಡಕೂಡದೆಂದು ಹೇಳುವವರಿಗೂ (ಹೀಗೆ ಹೇಳುವವರು ಪೂರ್ವಪಕ್ಷಿಗಳು) ತಾವು ಎಂದರೆ ಅಂತಹ ಪೂರ್ವಪಕ್ಷಿಗಳೂ ಶಾಸ್ತ್ರವು ವಿಧಿಸಿರುವ ರೀತಿಯಲ್ಲಿ ಸಙ್ಕಲ್ಪಿಸಿ ಭಗವತ್ಪ್ರೀತ್ಯರ್ಥಮ್ ಭಗವತ್ಕೈಙ್ಕರ್ಯ ರೂಪಮ್ ಎಂದು ಹೇಳಿ ಫಲವನ್ನು ಅಪೇಕ್ಷಿಸಿ ಅನುಷ್ಠಿಸುವ ಕೈಙ್ಕರ್ಯದಲ್ಲೂ ಸಾಧ್ಯೋಪಾಯವಾಗಿ ವಿಧಿಸಲ್ಪಟ್ಟಿರುವ ಪ್ರಪತ್ತಿಯಲ್ಲೂ ಕೂಡ ಈ ಕೈಙ್ಕರ್ಯವೂ, ಈ ಪ್ರಪತ್ತಿಯೂ ಪ್ರವೃತ್ತಿರೂಪವಾಗಿ ಶೇಷತ್ವ ಪಾರತನ್ತ್ರ್ಯ ಸ್ವರೂಪಕ್ಕೆ ವಿರೋಧವಾದುದರಿಂದ ಅಧಿಕಾರವಿಲ್ಲ ಎಂದಾಗುತ್ತದೆ. ಸ್ವರಕ್ಷಣಾರ್ಥವಾಗಿ ಯಾವ ವ್ಯಾಪಾರವೂ ಕೂಡದು ಎಂದು ಪೂರ್ವಪಕ್ಷಿಗಳು ಹೇಳಿದರು. ಅವರೇ ಭಗವತ್ಕೈಙ್ಕರ್ಯಗಳನ್ನು ಅನುಷ್ಠಿಸಬಹುದು ಎಂದೂ ಸಾಧ್ಯೋಪಾಯವು ಪ್ರಪತ್ತಿಯೇ ವಿನಾ ಉಪಾಸನವಲ್ಲವೆಂದೂ ಹೇಳುವರು. ಸ್ವರಕ್ಷಣಾರ್ಥವಾಗಿ ಯಾವ ವ್ಯಾಪಾರವೂ ಕೂಡದು ಎಂದರೆ ಭಗವತ್ಪ್ರೀತ್ಯರ್ಥಂ ಭಗವತ್ಕೈಙ್ಕರ್ಯರೂಪಂ ಎಂದು ಸಙ್ಕಲ್ಪಿಸಿ

ಕೈಙ್ಕರ್ಯಗಳನ್ನು ಮಾಡುವುದೂ ಪ್ರಪತ್ತಿಯನ್ನು ಅನುಷ್ಠಿಸುವುದೂ ಕೂಡ ಈ ಶೇಷತ್ವ ಪಾರತನ್ತ್ರ್ಯ ರೂಪ ಸ್ವರೂಪಕ್ಕೆ ವಿರೋಧವಾದವು ; ಆದುದರಿಂದ ಇವು ಗಳಿಗೂ ಕೂಡ ಅಧಿಕಾರವಿಲ್ಲವೆಂದು ಒಪ್ಪಿಕೊಳ್ಳಬೇಕಾಯಿತು ಎಂದು ಆಕ್ಷೇಪ ಗಳನ್ನು ಹೇಳಬಹುದು ; ಪೂರ್ವಪಕ್ಷಿಗಳು ಪ್ರಪತ್ತಿಯನ್ನು 'ಸಾಧ್ಯೋಪಾಯ' ಎಂದು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿದೆಯೆಂಬುದನ್ನು ಒಪ್ಪಿಕೊಳ್ಳುವರು ಎಂದೂ ಆಯಿತು. ಅದಕ್ಕೆ ಪೂರ್ವಪಕ್ಷಿಗಳು ಪ್ರತಿಯಾಗಿ ಹೇಳುವುದೇನೆಂದರೆ—

(ಅ) ತಾನು ಶೇಷನು ಶ್ರಿಯಃಪತಿಯು ಶೇಷೀ ಎಂಬ ಸಂಬಂಧ ಜ್ಞಾನವು ಗುರುವಿನ ಮೂಲಕ ಉಪದೇಶವನ್ನು ಹೊಂದಿದ ವೇಳೆಯಲ್ಲೇ ಸಿದ್ಧಿಸುತ್ತದೆ.

(ಆ) ಸ್ವರಕ್ಷಣೆಯಲ್ಲಿ ತನಗೆ ಯಾವುದೊಂದು ವ್ಯಾಪಾರವೂ ಇಲ್ಲ ಎಂಬುದು ಅಶಕ್ತನಾದುದರಿಂದಲೇ ಸಿದ್ಧವಾಗಿದೆ.

(ಇ) ಶಾಸ್ತ್ರ ಪ್ರಮಾಣದಲ್ಲಿ ಆಸಕ್ತರಾಗಿರುವವರಿಗೆ "ಅಮೃತಸ್ಯೈಷಸೇತುಃ = ಸಂಸಾರದಿಂದ ದಾಟಿಸಿ ಮೋಕ್ಷಕ್ಕೆ ಮಾರ್ಗ ತೋರಿಸುವವನು ಸರ್ವೇಶ್ವರನೇ" ಇವೇ ಮೊದಲಾದ ಶಾಸ್ತ್ರವಾಕ್ಯ ಶ್ರವಣ ಕಾಲದಲ್ಲೇ ಸರ್ವೇಶ್ವರನ ಉಪಾಯತ್ವದಲ್ಲಿ ಸಂಪೂರ್ಣ ನಂಬಿಕೆ ಸಿದ್ಧಿಸುವುದು.

ಈ ಮೂರರಲ್ಲಿ ಯಾವುದಾದರೂ ಒಂದು ಭಾವನೆಯೇ ಅಧಿಕಾರಿ ವಿಶೇಷಣ ವಾಗಿ ಪ್ರಪತ್ತಿಯಾಗುವುದರಿಂದ ಕೃತಿಸಾಧ್ಯ ಭಾವನೆಯಿಂದ ವಿಧೇಯವಾದದ್ದು. ಯಾವುದೂ ಇಲ್ಲ, ಆದುದರಿಂದ ಏನೊಂದು ಅನುಷ್ಠಾನವೂ ಇಲ್ಲ. ಆದುದರಿಂದ ಸ್ವರಕ್ಷಣಕ್ಕಾಗಿ ಇಲ್ಲಿ ಯಾವ ಪ್ರವೃತ್ತಿಯೂ ಇಲ್ಲ ಎಂದು ಪೂರ್ವಪಕ್ಷಿಗಳ ಅಭಿಪ್ರಾಯ.

ಈ ಅಭಿಪ್ರಾಯದಲ್ಲಿ ಉಂಟಾಗುವ ಕೊರತೆಗಳನ್ನು ವಿಮರ್ಶೆ ಮಾಡೋಣ.

## ಶೇಷತ್ವಜ್ಞಾನಮಾತ್ರ ಪ್ರಪತ್ತಿ ಅಲ್ಲ

**ಕುಯೋನಿಷ್ವಪಿ [1]ಸಂಜಾತೋಯಸ್ಸಕೃಚ್ಛರಣಂಗತಃ ।**
**ತಂ ಮಾತಾ ಪಿತೃಹಸ್ತಾರಯಮಪಿ ಪಾತಿಭವಾರ್ತಿಹಾ ॥**

ಇದು ಸನತ್ಕುಮಾರ ಸಂಹಿತೆಯಲ್ಲಿ ಹೇಳಿರುವ ಮಾತು.

1. ಸನತ್ಕುಮಾರ ಸಂಹಿತೆ.

**ಇದರ ಅರ್ಥ :** ಮನುಷ್ಯನು ಯಾವ ಕೆಟ್ಟ ಜಾತಿಯಲ್ಲಿ ಹುಟ್ಟಿದವನೇ ಆಗಿರಲಿ, ಅವನು ಒಂದು ಸಲ ಪರಮಾತ್ಮನನ್ನು ಮರೆ ಹೋದರೆ ಸಾಕು—ಶರಣಾಗತಿಯನ್ನು ಮಾಡಿದರೆ ಸಾಕು, ಅವನು ತನ್ನ ತಾಯಿ ತಂದೆಗಳನ್ನು ಕೊಂದವನೇ ಆಗಿದ್ದರೂ ಹುಟ್ಟುವಿಕೆ ಸಾಯುವಿಕೆಯೆಂಬ ಸಂಸಾರದ ದುಃಖವನ್ನು ಹೋಗಲಾಡಿಸುವ ಪರಮಾತ್ಮನು ಅವನನ್ನು ಕಾಪಾಡುತ್ತಾನೆ. ಉಪಾಸನಾದಿಗಳು ತ್ರೈವರ್ಣಿಕರಿಗೆ ಮಾತ್ರ ಅಧಿಕಾರ ವಿರುವವು. ಆದರೂ ಇದು ಸರ್ವರಿಗೂ ಸೇರಿದ್ದಾಗಿದೆ. ಎಲ್ಲರಿಗೂ ಪ್ರಪತ್ತಿಯ ಅನುಷ್ಠಾನಕ್ಕೆ ವಿರೋಧವಿಲ್ಲ. **ಸತ್ಯಂವದ—ನಿಜವನ್ನು ನುಡಿ, ಧರ್ಮಂಚರ—ಧರ್ಮಕಾರ್ಯವನ್ನು ಮಾಡು** ಎಂಬ ಈ ನಿಯಮಗಳು ಎಲ್ಲರಿಗೂ ಸಮಾನವಾದವು ತಾನೆ. ಹಾಗೆಯೇ ಇದೂ ಕೂಡ, ಕಾಗೆ ಮುಂತಾದವೂ ಪ್ರಪನ್ನರಾದವು ಎಂದು ಶಾಸ್ತ್ರಗಳಲ್ಲಿ ಕೇಳಿದ್ದೇವೆ.

**[1]ಮಾಂಹಿಪಾರ್ಥ ! ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ ।**
**ಸ್ತ್ರಿಯೋವೈಶ್ಯಾಸ್ತಥಾ ಶೂದ್ರಾ ಸ್ತೇಽಪಿಯಾನ್ತಿಪರಾಂಗತಿಮ್ ॥**

ಎಲೌ ಅರ್ಜುನ ! ಕೆಟ್ಟಯೋನಿಯಲ್ಲಿ ಹುಟ್ಟಿದವರಾದರೂ ಸ್ತ್ರೀಗಳು ವೈಶ್ಯರು ಹಾಗೆಯೇ ಅಂತ್ಯಜರು ನನ್ನನ್ನು ಆಶ್ರಯಿಸಿದ ಮಾತ್ರದಿಂದಲೇ ಶ್ರೇಷ್ಠವಾದ ಗತಿಯನ್ನು ಪಡೆಯುತ್ತಾರೆ, ಎಂದು ಗೀತಾಚಾರ್ಯನು ಹೇಳಿದ್ದಾನೆ. ಭಗವಂತನ ಆಶ್ರಯಣ ಮಾತ್ರ ಎಲ್ಲರಿಗೂ ಸಾಧಾರಣವಾದುದೆಂದು ಶರಣ್ಯನು ತಾನೇ ಹೇಳಿದ್ದಾನೆ.

ಧರ್ಮವ್ಯಾಧನೇ ಮೊದಲಾದವರು ತಮ್ಮ ಹಿಂದಿನ ಜನ್ಮದಲ್ಲಿ ಅಭ್ಯಾಸಮಾಡಿದ ಉಪಾಸನೆಯನ್ನಾರಂಭಿಸಿ ಆ ಅಭ್ಯಾಸಬಲದಿಂದ ಸಿದ್ಧಿಯನ್ನು ಪಡೆದರು; ಸನ್ಯಾಸಿನಿಯಾದ ಶಬರಿಯು ಹೇಗೆ ಬೇಡರಜಾತಿಯಲ್ಲಿ ಹುಟ್ಟಿ ಸಿದ್ಧಿಯನ್ನು ಪಡೆದಳೋ ಹಾಗೆ.

**[2]ಧರ್ಮವ್ಯಾಧಾದಯೋಽಪ್ಯನ್ಯೇ ಪೂರ್ವಾಭ್ಯಾಸಾಜ್ಜುಗುಪ್ಸಿತೇ ।**
**ವರ್ಣಾವರತ್ವೇ ಸಂಪ್ರಾಪ್ತಾ ಸ್ಸಂಸಿದ್ಧಿಂ ಶ್ರಮಣೀ ಯಥಾ ॥**

ಎಂದು ಶ್ರೀವಿಷ್ಣುಧರ್ಮದಲ್ಲಿ ಹೇಳಲ್ಪಟ್ಟಿದೆ.

ಹೀಗೆ ಉಪಾಸನವು ತ್ರೈವರ್ಣಿಕರಿಗೇ ಆರಂಭಿಸಲು ತಕ್ಕದ್ದು ಎಂಬಂತೆ ಪ್ರಪತ್ತಿಯಲ್ಲಿ ಒಂದು ನಿಯಾಮಕವಿಲ್ಲ. ಇದಕ್ಕೆ ಆಕಿಂಚನ್ಯವೇ ಅಧಿಕಾರ, ಅದೊಂದಿದ್ದರೆ ಸಾಕು. ತ್ರೈವರ್ಣಿಕನಾಗಿರಲಿ ಅಥವಾ ಅದಿಲ್ಲದವನಾಗಿರಲಿ ಎಂಬುದು ಅಭಿಪ್ರಾಯ.

1. ಗೀತೆ. ೯–೩೨.
2. ವಿಷ್ಣುಧರ್ಮ. ೧೦–೨–೨೯.

ಈ ಸಂದರ್ಭದಲ್ಲಿ—

**ನ ಜಾತಿಭೇದಂ ನಕುಲಂ ನಲಿಙ್ಗಂ ನಗುಣಕ್ರಿಯಾ ।**
**ನದೇಶ ಕಾಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ ॥**

ಎಂಬ ಶ್ಲೋಕವು ಅನುಸಂಧೇಯವು. ಪ್ರಪದನರೂಪವಾದ ಈ ಯೋಗವು ಜಾತಿ ಕುಲಗಳ ಉತ್ಕೃಷ್ಟತೆ ನಿಕೃಷ್ಟತೆಯನ್ನಾಗಲಿ ಸ್ತ್ರೀಪುರುಷ ಭೇದವನ್ನಾಗಲಿ ಗುಣಕ್ರಿಯೆಗಳ ಉತ್ತಮಾಧಮಸ್ಥಿತಿಯನ್ನಾಗಲಿ, ದೇಶ ಕಾಲ ಅವಸ್ಥೆಗಳ ಯೋಗ್ಯಾಯೋಗ್ಯತೆಗಳನ್ನಾಗಲಿ, ಅಪೇಕ್ಷಿಸುವುದಿಲ್ಲ

ಈ ಅಭಿಪ್ರಾಯವನ್ನು ತಿರುಮಳಿಶೈಯಾಳ್ವಾರವರು ರಚಿಸಿದ—

**[1]ಕುಲಙ್ಗಳಾಯ ಈರೆರಣ್ಡಿಲ್ ಒನ್ರಿಲುಮ್ ಪಿರನ್ದಿಲೇನ್**
**ನಲಙ್ಗಳಾಯ ನರ್ಕಲೈಕಳ್ನಾಲಿಲುಮ್ ನವಿನ್ರಿಲೇನ್**
**ಪುಲನ್ಗಳೈನ್ದುಮ್ ವೆನ್ರಿಲೇನ್ ಪೊರಿಯಿಲೇನ್ ಪುನಿದನಿನ್**
**ಇಲಙ್ಕುಪಾದಮನ್ರಿ ಮತ್ತೋರ್ ಪತ್ರಿಲೇನ್ ಎಮ್ಮೀಶನೇ**

ಎಂಬೀ ಪಾಶುರದಲ್ಲಿ ಕಾಣಬಹುದು.

ಓ ಪರಿಶುದ್ಧನಾದ ನಮ್ಮ ಸ್ವಾಮಿಯೇ ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ರೂಪವಾದ ವರ್ಣಗಳಲ್ಲಿ ಒಂದು ವರ್ಣದಲ್ಲೂ ನಾನು ಹುಟ್ಟಲಿಲ್ಲ. ಚೇತನರ ಅಧಿಕಾರಕ್ಕೂ ಗುಣಗಳಿಗೂ ತಕ್ಕಂತೆ ಪ್ರಿಯಹಿತಗಳನ್ನು ವಿಧಿಸುವ ವಿಲಕ್ಷಣವಾದ ಶಾಸ್ತ್ರಗಳನ್ನೂ ಅಧಿಕರಿಸಲೂ–ಕಲಿಯಲೂ ಇಲ್ಲ. ಇಂದ್ರಿಯಗಳು ನನ್ನನ್ನು ತಮ್ಮ ಅಧೀನವಾಗಿ ಹಿಡಿದು ಎಳೆದುಕೊಂಡು ಹೋಗಲಾಗಿ ನಾನು ಅವು ಹೋದಂತೆಯೇ ತಿರಿಯುತ್ತಿದ್ದೇನೇ ಹೊರತು, ಅವುಗಳಲ್ಲಿ ಒಂದು ಇಂದ್ರಿಯವನ್ನೂ ಶಿಕ್ಷಿಸಲು ಸಮರ್ಥನಾಗಲಿಲ್ಲ. ಆದುದರಿಂದಲೇ ಶಬ್ದಾದಿ ವಿಷಯ ಪ್ರವಣನಾಗಿಯೇ–ಅವನ್ನು ಅನುಭವಿಸುವನಾಗಿಯೇ ಆದೆನು. ಆದುದರಿಂದ ಒಂದು ವಿಧವಾದ ಉಪಾಯವನ್ನೂ ಅನುಷ್ಠಿಸಲು ಅಯೋಗ್ಯನಾಗಿ ಇದ್ದರೂ 'ನಿನ್ನ ಪಾದವೇ ಉಪಾಯ' ಎಂಬ ಅಧ್ಯವಸಾಯ ಮಾತ್ರ- -ನಿಶ್ಚಯ ಮಾತ್ರ ಕಡಿಮೆ ಯಾಗದೆ ನಿಂತಿದೆ ಎನ್ನುತ್ತಾರೆ.

ಯಾಮುನಾಚಾರ್ಯರು ತಾವು ರಚಿಸಿರುವ ಸ್ತೋತ್ರರತ್ನದಲ್ಲಿ ದೊಡ್ಡ ಕುಲ ದಲ್ಲಿ ಹುಟ್ಟಿಕೆಯೂ ಜೀವನು ಅಧೋಗತಿಗೆ ಹೋಗುವುದನ್ನು ತಡೆಯಲಾರದೆಂಬು ದನ್ನು ವ್ಯಕ್ತಪಡಿಸಿದ್ದಾರೆ.

1. ತಿರುಚ್ಚನ್ದ ವಿರುತ್ತಂ. ೯೦.

[1]ಜನಿತ್ವಾಹಂ ವಂಶೇಮಹತಿ ಜಗತಿ ಖ್ಯಾತಯಶಸಾಂ
ಶುಚೀನಾಂ ಯುಕ್ತಾನಾಂ ಗುಣ–ಪುರುಷ–ತತ್ವಸ್ಥಿತಿವಿದಾಂ ।
ನಿಸರ್ಗಾ ದೇವ ತ್ವಚ್ಚರಣ–ಕಮಲ–ಏಕಾಂತ–ಮನಸಾಂ
ಅಧೋಧಃ ಪಾಪಾತ್ಮಾ ಶರಣದ ನಿಮಜ್ಜಾಮಿ ತಮಸಿ ॥

ಜಗತ್ತಿನಲ್ಲಿ ಪ್ರಸಿದ್ಧವಾದ ಕೀರ್ತಿಯುಳ್ಳವರೂ, (ಕರ್ಮಾನುಷ್ಠಾನದಿಂದ) ಶುಚಿಯಾದವರೂ. (ಕರ್ಮ–ಜ್ಞಾನ–ಭಕ್ತಿ) ಯೋಗನಿರತರೂ, ಪ್ರಕೃತಿ ಪುರುಷ (ಜೀವಾತ್ಮ)ರ ಯಥಾವತ್ತಾದ ಸ್ವರೂಪ ತಿಳಿದವರೂ, ಸ್ವಭಾವವಾಗಿಯೇ ನಿನ್ನ ಚರಣಕಮಲಗಳನ್ನೇ ಮುಖ್ಯಗುರಿಯಾಗಿಟ್ಟುಕೊಂಡಿರುವ ಮನಸ್ಸುಳ್ಳವರೂ ಆದ ಮಹಾತ್ಮರ ಶ್ರೇಷ್ಠವಾದ ವಂಶದಲ್ಲಿ ಜನಿಸಿ, ಪಾಪಾತ್ಮನಾದ ನಾನು ಎಲೈ, ಆಶ್ರಯ ನೀಡುವ ಸ್ವಾಮಿಯೇ ! (ಅಜ್ಞಾನವೆಂಬ) ತಮಸ್ಸಿನಲ್ಲಿ ಕೆಳ ಕೆಳಗೆ ಮುಳುಗಿಹೋಗುತ್ತಿದ್ದೇನೆ.

ಪ್ರಖ್ಯಾತರಾದ ಮಹಾತ್ಮರ ವಂಶದಲ್ಲಿ ಜನಿಸಿ, ಪಾಪಾತ್ಮನಾಗಿರುವ ನಾನು ಅಜ್ಞಾನವೆಂಬ ಕತ್ತಲೆಯಲ್ಲಿ ಬಹಳ ಕೆಳಕ್ಕೆ ಮುಳುಗಿ ಹೋಗುತ್ತಿದ್ದೇನೆ, ಎಂದು ಹೇಳಿದ್ದಾರೆ.

ಆದುದರಿಂದ ತ್ರೈವರ್ಣಿಕತ್ವಾದಿಗಳು ಅಧಿಕಾರವಲ್ಲ ಎಂದು ಹೇಳಿದಂತಾಯಿತು. ಮತ್ತಾವುದೆಂದರೆ, ಶರಣ್ಯನ ವಿಷಯವಾದ ಜ್ಞಾನ. ಶರಣಾಗತಿ ವಿಷಯಕವಾದ ಜ್ಞಾನ ಇವುಗಳೊಡನೆ ಆಕಿಂಚನ್ಯಾದಿಗಳು ಇವುಗಳುಳ್ಳ ಎಲ್ಲಾ ಜಾತೀಯರಿಗೂ ಈ ಪ್ರಪತ್ತಿಯಲ್ಲಿ ಅಧಿಕಾರ ಉಂಟೆಂದಾಯಿತು.

ಇದನ್ನೇ ಆಚಾರ್ಯರು ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ಒಂದು ಕಾರಿಕೆಯಲ್ಲಿ ಸಂಗ್ರಹಿಸಿ —

ಅತಸ್ತ್ರೈವರ್ಣಿ ಕತ್ವಾದೇ ರ್ಭಾವೋऽಭಾವೋಪಿ ಕಸ್ಯಚಿತ್ ।
ನಾಧಿಕಾರಃ ಪ್ರಪತ್ತೇಸ್ಸ್ಯಾದಾಕಿಂಚನ್ಯಮನಾಶ್ರಿತಃ ॥

ಎಂದು ಹೇಳಿದ್ದಾರೆ. ಈ ರೀತಿ ಅಧಿಕಾರ ವಿಷಯದಲ್ಲಿ ಉಂಟಾಗುವ ಸಂದೇಹದ, ಕ್ಷೋಭವನ್ನು=ಕುಲಕಾಟ–ಕಳವಳವನ್ನು ನೀಗಿಸಿ, ಸ್ವರೂಪ ವಿಷಯದಲ್ಲಿ ಉಂಟಾಗುವ ಕ್ಷೋಭವನ್ನು ನೀಗಿಸಲು ಆಚಾರ್ಯರು ಅಲ್ಲಿ ಹೇಳುವ ಮಾತಿದು.

ತ್ವಮೇವೋಪಾಯ ಭೂತೋಮೇ ಭವೇತಿಪ್ರಾರ್ಥನಾಮತಿಃ ।
ಶರಣಾಗತಿ ರಿತ್ಯುಕ್ತಾಸಾದೇವೇऽಸ್ಮಿ ನ್ಪ್ರಯುಜ್ಯತಾಮ್ ॥

1. ಸ್ತೋತ್ರರತ್ನ. ೬೧.

**[1]ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸ ಪೂರ್ವಕಮ್ ।**
**ತದೇಕೋಪಾಯತಾಯಾಚ್ಞಾ ಪ್ರಪತ್ತಿ ಶ್ಶರಣಾಗತಿಃ ॥**

'ನೀನೇ ನನಗೆ ಉಪಾಯನಾಗು'—ಹೀಗೆಂದು ಪ್ರಾರ್ಥನೆಯರೂಪವಾದ ಬುದ್ಧಿಯು ಶರಣಾಗತಿ ಎಂಬುದಾಗಿ ಹೇಳಲ್ಪಟ್ಟಿದೆ. ಆ ಶರಣಾಗತಿಯನ್ನು ಈ ಒಡೆಯನಲ್ಲಿ ಪ್ರಯೋಗಿಸೋಣವಾಗಲಿ.

ತನಗೆ ಬೇಕಾದುದನ್ನು ಬೇರೊಬ್ಬನಿಂದ ಉಂಟುಮಾಡಿಕೊಡಲು–ಪೂರೈಸಲು ಆಗದಿರುವಾಗ, ದೃಢವಾದ ನಂಬಿಕೆಯನ್ನು ಮುಂದಿಟ್ಟು, ಸಮರ್ಥನಾದ ಒಬ್ಬನನ್ನು "ನೀನೇ ಉಪಾಯವಾಗಿರಬೇಕು, ಸಾಧನವಾಗಿರಬೇಕು, ಸಲಕರಣೆಯಾಗಿರಬೇಕು" ಎಂದು ಪ್ರಾರ್ಥಿಸುವುದೇ ಪ್ರಪತ್ತಿ, ಅದೇ ಶರಣಾಗತಿ, ಎಂದು ಕೆಲುವೆಡೆ ಉಪಾಯವಾಗಿರುವಿಕೆಯೇ ಅಂಗಿ–ಪ್ರಧಾನ ಎಂಬುದಾಗಿ ತೋರುತ್ತದೆ.

**ನಾರಾಯಣಂ ಸಲಕ್ಷ್ಮೀಕಂ ಪ್ರಾಪ್ತುಂ ತಚ್ಚರಣದ್ವಯಮ್ ।**
**ಉಪಾಯ ಇತಿ ವಿಶ್ವಾಸೋ ದ್ವಯಾರ್ಥ ಶ್ಶರಣಾಗತಿಃ ॥**

ಲಕ್ಷ್ಮೀಯೊಡಗೂಡಿದ ನಾರಾಯಣನನ್ನು ಹೊಂದಲು ಅವನ ಎರಡು ಪಾದಗಳೇ ಉಪಾಯ—ಸಾಧನ. ಹೀಗೆಂಬ ನಂಬಿಕೆಯೇ ದ್ವಯಮಂತ್ರದ ಅರ್ಥ. ಅದೇ ಶರಣಾಗತಿ. ಹೀಗೆಂದು ವಿಶ್ವಾಸಕ್ಕೆ ಕೆಲವೆಡೆ ಪ್ರಾಧಾನ್ಯ ಹೇಳಿದೆ.

**[2]ನಿಕ್ಷೇಪಾಪರ ಪರ್ಯಾಯೋ ನ್ಯಾಸಃ ಪಂಚಾಂಗ ಸಂಯುತಃ ।**

ಐದು ಅಂಗಗಳಿಂದ ಕೂಡಿದ ಸಮರ್ಪಣ ಎಂಬ ಮತ್ತೊಂದು ಹೆಸರು ನ್ಯಾಸವೇ. ಇವೇ ಮೊದಲಾದವುಗಳಲ್ಲಿ ಆತ್ಮನಿಕ್ಷೇಪಕ್ಕೆ ಕೆಲವಡೆ ಅಂಗಿತ್ವ ಹೇಳಿದೆ. ಅಂತೂ, ಉಪಾಯತ್ವಪ್ರಾರ್ಥನೆ, ವಿಶ್ವಾಸ, ಆತ್ಮನಿಕ್ಷೇಪ ಇವುಗಳಿಗೆ ಅಂಗಿತ್ವ ವನ್ನು ಒಂದೊಂದೆಡೆಯಲ್ಲಿ ಒಂದೊಂದು ವಿಧವಾಗಿ ಹೇಳಿವೆ.

ನಿಕ್ಷೇಪ=ಇಡುವಿಕೆ, ಸಮರ್ಪಿಸುವಿಕೆ, ಇದರ ಅರ್ಥವನ್ನು ಕೊಡುವ ಬೇರೆ ಶಬ್ದ ನ್ಯಾಸ ಎಂಬುದು. ಇದು ಐದು ಅಂಗಗಳಿಂದ ಕೂಡಿದ್ದು.

ರಾಜನ ಭೃತ್ಯನಲ್ಲಿ 'ಇವನು ರಾಜನೇ' ಇವೇ ಮೊದಲಾದ ವ್ಯಪದೇಶದಂತೆ ಅಂಗಗಳನ್ನು–ಅಪ್ರಧಾನಗಳನ್ನು ಪ್ರಧಾನಗಳನ್ನಾಗಿ ಹೇಳುವುದೂ ಲೋಕದಲ್ಲಿ ಉಂಟು.

---

1. ಭರತಮುನಿ.
2. ಲಕ್ಷ್ಮೀತಂತ್ರ. ೧೭–೭೪.

[1]"ಓಮಿತ್ಯಾತ್ಮಾನಂಯುಞ್ಜೀತ—ಪ್ರಣವದಿಂದ ಆತ್ಮವಸ್ತುವನ್ನು ಸೇರಿಸಬೇಕು". "ಹವಿರ್ಗೃಹೀತ್ವಾತ್ಮರೂಪವಮ್"—ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು—ಇವೇ ಮೊದಲಾದವುಗಳಿಂದ ಈ ಪ್ರಪತ್ತಿಯು ಒಂದು ಯಾಗವಾಯಿತು. ಆತ್ಮ ಸಮರ್ಪಣವು ಆತ್ಮಯಾಗ. ನ್ಯಾಸ ನಿಕ್ಷೇಪ ತ್ಯಾಗ ಇವೇ ಮೊದಲಾದ ಶಬ್ದಗಳೂ ಇದು ಒಂದು ಯಾಗವೆಂಬುದನ್ನು ದೃಢಪಡಿಸುತ್ತವೆ.

'ವಾಯುವ್ಯಗ್^ಂಶ್ವೇತ ಮಾಲಭೇತ ಅಗ್ನೀಷೋಮೀಯಂ ಪಶುಮಾಲಭೇತ' ಇವೇ ಮೊದಲಾದ ಸಂದರ್ಭಗಳಲ್ಲಿ ಪ್ರಯೋಗಿಸಲ್ಪಟ್ಟ ಆ ಪಶುಹಿಂಸೆಯನ್ನುಬೋಧಿಸುವ ಆಲಂಭ ಶಬ್ದವು ಪಶುಹಿಂಸೆ ಮಾತ್ರವನ್ನೇ ಬೋಧಿಸದೆ ಪೂರ್ತಿಯಾದ ಅಗ್ನೀಷೋಮೀಯ ಯಾಗವನ್ನೆಲ್ಲಾ ಹೇಗೆ ಬೋಧಿಸುತ್ತದೋ ಹಾಗೆ, "ಶರಣಂವ್ರಜ—ಶರಣವನ್ನು ಹೊಂದು" ಇವೇ ಮೊದಲಾದ (ವ್ರಜ, ಗಚ್ಛ, ವೃಣು) ಧಾತುಗಳು ನ್ಯಾಸ, ನಿಕ್ಷೇಪ, ತ್ಯಾಗ ಮೊದಲಾದ ಶಬ್ದಗಳಿಂದ ಹೇಳಲ್ಪಟ್ಟ ಆತ್ಮ ಹವಿಸ್ಸಮರ್ಪಣ ರೂಪಯಾಗವನ್ನು ಹೇಳೋಣವು ಶಾಸ್ತ್ರಮರ್ಯಾದೆಗೂ ಅನುರೂಪವಾದುದು. "ಅಗ್ನಿಷೋಮೀಯಂ ಪಶುಮಾಲಭೇತ" ಎಂಬವಾಕ್ಯದಿಂದ ಪಶುಹನನ ಮಾತ್ರವೇ ಹೇಳಲ್ಪಡದೆ ಆ ಯಾಗವೇ ಹೇಗೆ ಹೇಳಲ್ಪಡುತ್ತದೋ ಹಾಗೆಯೇ ಶರಣಂ ವ್ರಜ ಇವೇ ಮೊದಲಾದ ವಾಕ್ಯಗಳಿಂದ ಆ ಶರಣಾಗತಿಯಾದ ಆತ್ಮನಿಕ್ಷೇಪವೇ ಹೇಳಲ್ಪಟ್ಟಿತೆಂಬ್ಯಭಾವವು. ಏಕೆಂದರೆ ಪಶುವಿನ ಆಲಂಭವು ಹೇಗೆ ಯಾಗದ ಏಕದೇಶವೋ ಹಾಗೆ ಶರಣವನ್ನುಹೊಂದುವುದೂ ಕೂಡ ಆತ್ಮಯಾಗದ ಏಕದೇಶವು.

ಈ ಆತ್ಮನಿಕ್ಷೇಪವೂ ಆತ್ಮಯಾಗದ ಹಾಗೆ ಎಲ್ಲಿ ಹೇಳಲ್ಪಟ್ಟಿರುತ್ತದೆ ? ಎಂದರೆ—

ಅ) 'ನಮಸಾಯೋ ಕರೋದ್ದೇವೇಸಸ್ವಧ್ವರ ಇತೀರಿತಃ' ಇಲ್ಲಿ ಭರನ್ಯಾಸವನ್ನು ಯಾವನು ದೇವನಲ್ಲಿ ನಮಸ್ಸಿನಿಂದ ಮಾಡಿದನೋ ಅವನು ಒಳ್ಳೆಯ ಯಾಗವನ್ನು ಮಾಡಿದವನೆಂದು ಹೇಳಲ್ಪಡುತ್ತಾನೆ.

ಆ) "ಬ್ರಹ್ಮಣೇತ್ವಾ ಮಹಸಓಮಿತ್ಯಾತ್ಮಾನಂ ಯುಂಜೀತ" ಮಹಾತೇಜೋರೂಪನಾದ ಪರಬ್ರಹ್ಮನಾದ ನಿನಗೆ ಈ ಆತ್ಮ ಹವಿಸ್ಸನ್ನು ಸಮರ್ಪಿಸುವೆನು ಎಂಬುದಾಗಿ ಆತ್ಮವನ್ನು ಸ್ವಾಮಿಪಾದಾರವಿಂದದಲ್ಲಿಡತಕ್ಕದ್ದು.

ಇ) "ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮಂತ್ರತಃ ।
ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ ॥"

---

1. ತೈ. ನಾ. ೪–೫೧.

"ವಸುರಣ್ಯೋ ವಿಭೂರಸಿ" ಎಂಬ ಮಂತ್ರಮೂಲಕವಾಗಿ ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು ಅನಾದಿಯಾದ ಅಚ್ಯುತನೆಂಬ ಅಗ್ನಿಯಲ್ಲಿ 'ಓಂ' ಎಂಬ ಪ್ರಣವವನ್ನು ಉಚ್ಚರಿಸುತ್ತಾ ಹೋಮ ಮಾಡತಕ್ಕದ್ದು, ಆ "ವಸುರಣ್ಯೋ" ಎಂಬ ಪ್ರಪದನಕರಣ ಮಂತ್ರವು ಯಾವುದೆಂದರೆ—

**"ವಸುರಣ್ಯೋ ವಿಭೂರಸಿ ಪ್ರಾಣೇತ್ವಮಸಿ ಸಂಧಾತಾ ಬ್ರಹ್ಮಂಸ್ತ್ವಮಸಿ ವಿಶ್ವಸೃಕ್ ತೇಜೋದಾಸ್ತ್ವಮಸ್ಯಗ್ನೇರ್ವರ್ಚೋದಾಸ್ತ್ವಮಸಿ ಸೂರ್ಯಸ್ಯದ್ಯುಮ್ನೋದಾಸ್ತ್ವಮಸಿ ಚಂದ್ರಮಸ ಉಪಯಾಮ ಗೃಹೀತೋಽಸಿ ಬ್ರಹ್ಮಣೇತ್ವಾ ಮಹಸ ಓಮಿತ್ಯಾತ್ಮಾನಂ ಯುಞ್ಜೀತೈತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ ಯ ಏವಂವೇದ ಬ್ರಹ್ಮಣೋ ಮಹಿಮಾನ ಮಾಪ್ನೋತಿ ತಸ್ಮಾದ್ ಬ್ರಹ್ಮಣೋಮಹಿಮಾನ ಮಿತ್ಯುಪನಿಷತ್".**

[1]**ವಸುರಣ್ಯಃ** ವಸುಗಳಿಂದ ಪ್ರಾಪ್ಯನು 'ರಣಗತೌ' ಎಂಬುದಲ್ಲವೇ ಧಾತು. ಅಂದರೆ ವಸುಶಬ್ದದಿಂದ ಉಪಲಕ್ಷಿತರಾದ ಸಮಸ್ತದೇವತೆಗಳಿಗೂ ಉಪಾಸ್ಯನು, **ವಿಭೂರಸಿ**=ಸರ್ವವ್ಯಾಪಕನಾಗಿರುತ್ತೀಯೆ. **ಪ್ರಾಣೆ**=ಪ್ರಾಣಶಬ್ದದಿಂದ ಹೇಳಲ್ಪಟ್ಟ ಕಾರ್ಯಕಾರಣದಲ್ಲಿ, **ತಮಸ್ವಿ ಸಂಧಾತಾ**=ನೀನು ಸಂಯೋಜಕನಾಗಿದ್ದೀಯೆ, ಕೂಡಿಸುವವನಾಗಿರುತ್ತೀಯೆ **ಬ್ರಹ್ಮನ್ ತ್ವಮಸಿ ವಿಶ್ವಸ್ಕೃಕ್**—ಓ ಪರಬ್ರಹ್ಮನೇ ! ನೀನೇ ಎಲ್ಲಾ ಪ್ರಪಂಚಕ್ಕೂ ಸೃಷ್ಟಿಕರ್ತ. **ತೇಜೋದಾಸ್ತ್ವಮ ಸ್ಯಗ್ನೇಃ**—ಅಗ್ನಿಗೆ ನೀನೇ ತೇಜಸ್ಸನ್ನು ಕೊಟ್ಟವನು. **ವರ್ಚೋದಾ ಸ್ತ್ವಮಸಿಸೂರ್ಯಸ್ಯ**=ಸೂರ್ಯನಿಗೆ ತೇಜಸ್ಸನ್ನು ಕೊಟ್ಟವನೂ ನೀನೇ, **ದ್ಯುಮ್ನೋದಾ ಸ್ತ್ವಮಸಿ ಚಂದ್ರಮಸಃ**=ಚಂದ್ರನಿಗೆ ಕಾಂತಿಯನ್ನು ಕೊಟ್ಟವನೂ ನೀನೇ. **ಉಪಾಯಾಮ**=ನಿನ್ನನ್ನು ಶರಣುಹೊಂದೋಣ **ಗೃಹೀತೋಽಸಿ**=ಬಹಳಕಾಲ ಕಳೆದಮೇಲೆ ನೋಡಲ್ಪಟ್ಟವನಾಗಿರುತ್ತೀಯೆ. ಯಾವ ಪ್ರಯೋಜನಕ್ಕೋಸ್ಕರ ಎಂದರೆ ಹೇಳಲ್ಪಡುತ್ತದೆ, **ಬ್ರಹ್ಮಣೇತ್ವಾಮಹಸೇ**= ಮಹತ್ತಾದ ಮಹಿಮೆಯುಳ್ಳ ಪರಬ್ರಹ್ಮನಾದ ನಿನಗೆ ಎಂದರೆ ನಿನ್ನನ್ನು ಹೊಂದುವುದಕ್ಕಾಗಿ 'ಓಂ' ಎಂಬ ಪ್ರಣವ ಮಂತ್ರವನ್ನುಚ್ಚರಿಸುವುದು ಮಾತ್ರವೇ ಅಲ್ಲದೆ **ಆತ್ಮಾನಂಯುಂಜೀತ**=ಆತ್ಮ ಸಮರ್ಪಣ ರೂಪವಾದ ಶರಣಾಗತಿಯನ್ನು ಅನುಷ್ಠಿಸತಕ್ಕದ್ದು, ಈ ಸಂದರ್ಭದ ಭಾಷ್ಯದಲ್ಲಿ ಶ್ರೀ ರಂಗ ರಾಮಾನುಜ ಸ್ವಾಮಿಗಳು **"ಓಮಿತಿಮಂತ್ರೇಣಾಪಿ ಭಗವಚ್ಛೇಷತ್ವಪ್ರತಿಪಾದಕೇನಪುನರಾತ್ಮ ಸಮರ್ಪಣಂ ಕರ್ತವ್ಯ ಮೇವೇತ್ಯರ್ಥಃ"** ಎಂದು ಬರೆದಿರುತ್ತಾರೆ. ಇದರಿಂದ ಕೇವಲ ಪ್ರಾರ್ಥನೆ ಸಾಲದು, ಶರಣಾಗತಿಯ ಅನುಷ್ಠಾನವೂ ಆವಶ್ಯಕವೆಂಬುದು ಸಿದ್ಧವು. **ಏತದ್ವೈ ಮಹೋಪನಿಷದಂ**=ಇದಲ್ಲವೇ ಮಹೋಪನಿಷತ್ಪ್ರತಿಪಾದ್ಯವು. ಇಲ್ಲಿ ಮಹೋಪ

1. ತೈ. ನಾ. (೭೮) (ಅನು. ೬೩).

ನಿಷತ್ತೆಂಬ ಹೆಸರುಳ್ಳ ಉಪನಿಷತ್ತನ್ನು ಮಾತ್ರ ಗ್ರಹಿಸಲು ಯಾವ ನಿಯಮವೂ ಇಲ್ಲದಿರುವುದರಿಂದ 'ಮಹತ್ಯಃ ಉಪನಿಷದಃ ಮಹೋಪನಿಷದಃ' ಎಂದು ವಿಗ್ರಹ ಹೇಳಬೇಕು. ಆದರಿಂದ ನ್ಯಾಸಕ್ಕೆ ಎಲ್ಲಾ ಉಪನಿಷತ್ತುಗಳಲ್ಲೂ ಹೇಳಿರುವಿಕೆ ಸಿದ್ಧಿಸುತ್ತದೆ. ದೇವಾನಾಂ ಗುಹ್ಯಮ್=ದೇವತೆಗಳಿಗೂ ಅರಿಯಲಸದಳವಾದದ್ದು ಎಂದರ್ಥ.

ಅಂತೂ ಯಾಗವೆಂದರೆ ಈ ದೇವತೆಗೆ ಈ ಹವಿಸ್ಸು ಎಂಬ ಒಂದು ಬುದ್ಧಿ ವಿಶೇಷ. ಈ ರೀತಿ ನನ್ನ 'ಆತ್ಮ' ಎಂಬ ರುಚಿಕರವಾದ ಹವಿಸ್ಸು ಶ್ರೀಯೊಡನೆ ಇರುವ ನಾರಾಯಣನಿಗಾಗಿಯೇ ಎಂಬ ಈ ರೀತಿಯಾದ ಒಂದು ಬುದ್ಧಿ ವಿಶೇಷವು ಈ ಜಾಗದಲ್ಲಿ ಆತ್ಮಯಾಗ ಎಂದು ಹೇಳಿಸಿಕೊಳ್ಳುವಂತಹದಾಗಿದೆ. ಈ ಹವಿಸ್ಸು ರುಚಿಕರವಾದದ್ದು ಎಂಬುದು ಹೇಗೆ? ಎಂದರೆ ಅಪಹತ ಪಾಪ್ಮತ್ವಾದಿ ಗುಣಾಷ್ಟಕಗಳಿಂದಲೂ ಆನಂದಾದಿಗುಣಗಳಿಂದಲೂ ಪರಿಶುದ್ಧನಾಗಿ ಶ್ರುತಿಯಲ್ಲಿ—[1]"ಅಹಮನ್ನಂ ಅಹಮನ್ನಂ" ಎಂದು ಹೇಳಿರುವ ಹಾಗೆ ಬಹು ಭೋಗ್ಯವಾದದ್ದು ಈ ಹವಿಸ್ಸು.

ಸಾಧಾರಣವಾಗಿ ಯಾಗಗಳಲ್ಲಿ ಒಂದು ದೇವತೆಯ ಉದ್ದಿಶ್ಯವಾಗಿ ಒಂದು ವಿಧವಾದ ಹವಿಸ್ಸಿನ ಸಮರ್ಪಣವು. ಇದನ್ನು ಅಗ್ನಿಮುಖದಲ್ಲಿ ದ್ರವ್ಯತ್ಯಾಗ ಮೂಲಕ ಸಮರ್ಪಿಸತಕ್ಕದ್ದು, ಈ ಸಂದರ್ಭದಲ್ಲಾದರೋ ಆತ್ಮಯಾಗವು ತುಂಬಾ ವಿಲಕ್ಷಣವಾದುದು.

ಅ) ಯಜಮಾನನು ಹವಿಸ್ಸನ್ನು ಇತರ ಯಾಗಗಳಲ್ಲಿ ಸಮರ್ಪಿಸುವನು, ಇಲ್ಲಾದರೋ [2]"ಯಜ್ಞಸ್ಯಾತ್ಮಾ ಯಜಮಾನಃ" ಎಂದು ಹೇಳಿರುವ ಹಾಗೆ ಸಮರ್ಪಿಸುವ ಯಜಮಾನನೂ ತಾನೇ, ಹವಿಸ್ಸೂ ತಾನೇ; ತಾನೇ ತನ್ನನ್ನೇ ಸಮರ್ಪಿಸಿಕೊಳ್ಳುವುದು.

ಆ) ಸಾಧಾರಣವಾಗಿ ಒಂದು ಹವಿಸ್ಸು ಒಂದು ದೇವತೆಗೆ ಮಾತ್ರವೇ ಸಮರ್ಪಿಸಲ್ಪಡುತ್ತದೆ. ಇಲ್ಲಿಯಾದರೋ ಈ ಆತ್ಮಹವಿಸ್ಸು ಲಕ್ಷ್ಮೀ ನಾರಾಯಣರಿಬ್ಬರಿಗೂ ಉದ್ದೇಶಿಸಿ ಸಮರ್ಪಿಸಲ್ಪಡುತ್ತದೆ. ನಿಗಮಾಂತದೇಶಿಕರು ಇದನ್ನು ಶ್ರೀಸ್ತುತಿಯಲ್ಲಿ "ಉದ್ದೇಶ್ಯತ್ವಂ [3]ಜನನಿ ಭಜತೋರುಜ್ಝಿತೋಪಾಧಿಗಂಧಂ ಪ್ರತ್ಯಗ್ರೂಪೇ ಹವಿಷಿಯುಂ

1. ತೈ. ಉ. ಭೃಗುವಲ್ಲೀ. ೧೫.

2. ತೈ. ಉ. ನಾ. ೧೪೯.

3. ಶ್ರೀ ಸ್ತುತಿ. ೭.

ವಯೋ ರೇಕಶೇಷಿತ್ವಯೋಗಾತ್" ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಆದರೆ ಒಂದು ಹವಿಸ್ಸಿಗೆ ಇಬ್ಬರು ದೇವತೆಗಳು ಉದ್ದೇಶವಾಗಿರಬಹುದೋ ಎಂದರೆ ಅನೇಕ ಸಂದರ್ಭಗಳಲ್ಲಿ ಹಾಗೆ ಉಂಟು. [1]"ತ್ವಂನೋಅಗ್ನೆ" ಎಂದು ಆರಂಭಿಸಿ ಆಜ್ಯಾಹುತಿಯನ್ನು "ಅಗ್ನೀವರುಣಾಭ್ಯಾಂ ಇದಂನಮಮ" ಎಂದು ಕೊಡುವುದುಂಟು.

೩) ಯಾಗದಲ್ಲಿ ಹವಿಸ್ಸಮರ್ಪಣೆಯು ಮುಖ್ಯವಾಗಿ ಕಾರ್ಯರೂಪವಾದ್ದು. ಈ ಯಾಗದಲ್ಲಾದರೋ ಕರ್ಮವಿದ್ದರೂ ಮುಖ್ಯವಾಗಿ ಜ್ಞಾನರೂಪವಾದುದು. ಹೀಗೆ ಆತ್ಮಯಾಗವು ವಿಲಕ್ಷಣವಾದುದು ಎಂಬ ಭಾವವು.

ಮುಮುಕ್ಷುವು ಮಾಡುವ ಆತ್ಮಹವಿಸ್ಸಮರ್ಪಣವೇನೋ ಅಙ್ಗಿ ಎಂದು ಒಪ್ಪಿಕೊಳ್ಳಬಹುದು, ಇತರ ಪುರುಷಾರ್ಥಗಳಿಗಾಗಿ ಮಾಡುವ ಪ್ರಪತ್ತಿಯಲ್ಲಿ ಅಙ್ಗಿಯು ಆತ್ಮಸಮರ್ಪಣವಲ್ಲವಷ್ಟೇ, ಆ ಸಂದರ್ಭದಲ್ಲಿ ಹೇಗೆ ಎಂದು ಪ್ರಶ್ನಿಸಬಹುದಲ್ಲವೇ ಎಂದರೆ ಆತ್ಮನಿಕ್ಷೇಪವು ಮೂರು ಅಂಶಗಳುಳ್ಳದ್ದು ; ಸ್ವರೂಪ, ಫಲ, ರಕ್ಷಾಭರಸಮರ್ಪಣ ಇವೇ ಆ ಮೂರು. ಮೋಕ್ಷಾರ್ಥಿಯಾಗಿದ್ದರೆ ಇವು ಮೂರೂ ಆತ್ಮನಿಕ್ಷೇಪದಲ್ಲಿಯುಂಟು. ಮೋಕ್ಷಾರ್ಥಿಯಲ್ಲದಿದ್ದರೆ ರಕ್ಷಾಭರಸಮರ್ಪಣ ಮಾತ್ರವೇ ಆದುದರಿಂದ ರಕ್ಷಾಭರಸಮರ್ಪಣವು ಎಲ್ಲಾ ಪ್ರಪತ್ತಿಗಳಿಗೆ ಸಾಧಾರಣವಾದುದು.

[2]ಅತ್ರರಕ್ಷಾ ಭರನ್ಯಾಸ ಸ್ಸಮಸ್ಸರ್ವ ಫಲಾರ್ಥಿನಾಂ ।
ಸ್ವರೂಪ ಫಲನಿಕ್ಷೇಪ ಸ್ತ್ವಧಿಕೋ ಮೋಕ್ಷಕಾಂಕ್ಷಿಣಾಮ್ ॥

ಎಂದು ಆಚಾರ್ಯರು ಸಾಙ್ಗಪ್ರಪದನಾಧಿಕಾರದಲ್ಲಿ ಹೇಳಿದ್ದಾರೆ. ಆದುದರಿಂದ ಆತ್ಮ ನಿಕ್ಷೇಪವೇ ಅಙ್ಗಿಯೇ ಹೊರತು ಮತ್ತೊಂದಿಲ್ಲ. ಮೋಕ್ಷಾರ್ಥಿಯು ಮಾಡುವ ಪ್ರಪತ್ತಿಯಲ್ಲಿ ಆತ್ಮ ರಕ್ಷಾಭರ ಸಮರ್ಪಣವೇ ಅಙ್ಗಿ. ಅದು ಒಂದು ಆತ್ಮ ಹವಿಸ್ಸಮರ್ಪಣ ರೂಪಯಾಗ. ಈ ಹವಿಸ್ಸಿಗೆ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರು ಎಂದು ನಾವು ತಿಳಿದಂತಾಯಿತು.

ಸ್ವತಂತ್ರ ಪ್ರಪತ್ತಿನಿಷ್ಠನಲ್ಲದ ಭಕ್ತ್ಯುಪಾಯನಿಷ್ಠನಿಗೂ ಆತ್ಮ ಸ್ವರೂಪ ಸಮರ್ಪಣವಿಲ್ಲ ; ಹಾಗೆಯೇ ಮುಮುಕ್ಷುವಲ್ಲದ ಇತರರು ಮಾಡುವ ಶರಣಾಗತಿಯಲ್ಲೂ ಇಲ್ಲ. ಆದುದರಿಂದ ಎಲ್ಲಾ ಪ್ರಪತ್ತಿಗಳಿಗೂ ಸಾಧಾರಣವಾದ ಅಙ್ಗಿಯು ರಕ್ಷಾಭರಸಮರ್ಪಣ ಎಂದು ಹೇಳಲ್ಪಟ್ಟಿತು.

---

1. ತೈ. ಸಂ. ೨. ೫. ೭೨.
2. ರಹಸ್ಯತ್ರಯಸಾರ. ೧೨–೬.

ಇದರ ಮೇಲೆ ಇನ್ನೊಂದು ಆಕ್ಷೇಪವು ತೋರಿಬರುತ್ತದೆ. ಜ್ಯೋತಿಷ್ಟೋಮಾದಿಗಳಲ್ಲಿ ಹವಿಸ್ಸಮರ್ಪಣೆಯಿದ್ದರೂ ರಕ್ಷಾಭರಸಮರ್ಪಣೆ ಇಲ್ಲ. ಹೀಗಿರುವಾಗ ಈ ಪ್ರಪತ್ತಿಯಲ್ಲೂ ರಕ್ಷಾಭರಸಮರ್ಪಣೆಯನ್ನು ಏತಕ್ಕೆ ಅಙ್ಗಿಯಾಗಿ ಅಙ್ಗೀಕರಿಸಬೇಕು ? ಎಂದರೆ—

**ಹವಿಸ್ಸಮರ್ಪಣಾದತ್ರ ಪ್ರಯೋಗ ವಿಧಿಶಕ್ತಿತಃ ।**
**ಆತ್ಮರಕ್ಷಾಭರನ್ಯಾಸೋಽಕಿಂಚನಸ್ಯಾತಿರಿಚ್ಯತೇ ॥**

**ಅರ್ಥ :** **ಅತ್ರ** = ಈ ಪ್ರಪತ್ತಿ ಪ್ರಕರಣದಲ್ಲಿ, **ಆತ್ಮರಕ್ಷಾಭರನ್ಯಾಸಃ** = ಆತ್ಮರಕ್ಷಣ ಭರವನ್ನು ಸಮರ್ಪಿಸೋಣವು, **ಅಕಿಂಚನಸ್ಯ** = ಅಕಿಂಚನನಾಗಿ ಮೋಕ್ಷಾರ್ಥಿಯಾಗಿ ಪ್ರಪತ್ತಿ ಮಾಡಿದವನಿಗೆ, **ಹವಿಸ್ಸಮರ್ಪಣಾತ್** = ಹವಿಸ್ಸಮರ್ಪಣವಾದ ಆತ್ಮಯಾಗಕ್ಕಿಂತಲೂ ಅಥವಾ ಎಲ್ಲಾ ವಿಧ ಹವಿಸ್ಸಮರ್ಪಣವಿರುವ ಯಾಗಕ್ಕಿಂತಲೂ, **ಅತಿರಿಚ್ಯತೇ** = ಅಧಿಕವಾದುದು ; ಶ್ರೇಷ್ಠವಾದುದು. ಏಕೆಂದರೆ—ಹೇಳುತ್ತಾರೆ. **ಪ್ರಯೋಗ ವಿಧಿ ಶಕ್ತಿತಃ** = ಪ್ರಯೋಗವಿಧಿಯ ಸಾಮರ್ಥ್ಯದಿಂದ, ಪ್ರಯೋಗವನ್ನು ವಿಧಿಸುವ ವಿಧಿಯು ಪ್ರಯೋಗ ವಿಧಿಯು ; ಪ್ರಪದನಾನುಷ್ಠಾನ ಪ್ರಕಾರವನ್ನು ಬೋಧಿಸುವ ವಿಧಿಯು ಯಾವುದೆಂದರೆ—

೧. **ಆತ್ಮಾತ್ಮೀಯ ಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ ।**
**ಉಪಾಯಂವೃಣು ಲಕ್ಷ್ಮೀಶಂ ತಮುಪೇಯಂ ವಿಚಿಂತ್ಯಚ ॥**

ಆತ್ಮಾತ್ಮೀಯ ಉಪಾಯ ಫಲಾದಿಗಳ ಸಮಸ್ತಭರವನ್ನೂ ಲಕ್ಷ್ಮೀಪತಿಯ ಪಾದಾರವಿಂದದಲ್ಲಿ ಸಮರ್ಪಿಸಿ ಆತನನ್ನೇ ಪ್ರಾಪ್ಯನೆಂದು ನಂಬಿ, ಆ ಲಕ್ಷ್ಮೀಪತಿಯನ್ನೇ ಉಪಾಯವಾಗಿ ವರಿಸು ಎಂಬುದು ಇದರ ಅರ್ಥ.

೨. ಇನ್ನೊಂದು ಪ್ರಯೋಗವನ್ನು ವಿಧಿಸುವ ಪ್ರಮಾಣವೂ ಉಂಟು.

**ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿಮಂತ್ರತಃ ।**
**ಜಹುಯಾತ್ಪ್ರಣವೇನಾಗ್ನಾ ವಚ್ಯುತಾಖ್ಯೇಸನಾತನೇ ॥**

ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು "ವಸುರಣ್ಯೋ ವಿಭೂರಸಿ" ಎಂಬ ಮಂತ್ರ ಮೂಲಕವಾಗಿ ಸನಾತನನಾದ ಅಚ್ಯುತನೆಂಬ ಅಗ್ನಿಯಲ್ಲಿ 'ಓಂ' ಎಂದು ಪ್ರಣವವನ್ನು ಉಚ್ಚರಿಸುತ್ತಾ ಹೋಮಮಾಡತಕ್ಕದ್ದು.

ಈ ಎರಡು ವಚನಗಳಲ್ಲೂ ಆತ್ಮ ಆತ್ಮೀಯ–ತಾನು ಮತ್ತು ತನಗೆ ಸೇರಿರುವ ಎಲ್ಲಾದಕ್ಕೂ ಸಂಬಂಧಪಟ್ಟ ಭರನ್ಯಾಸವು ಇಡಬೇಕೆಂದು ವಿಧಿಸಿರುವುದರಿಂದ ಬೇರೆ

ಯಾಗಗಳಲ್ಲಿ ಭರನ್ಯಾಸ ಇಲ್ಲದ್ದರಿಂದ ಅವುಗಳಿಗಿಂತ ಇಲ್ಲಿ ಯಾಗದಲ್ಲಿ ಭರನ್ಯಾಸವು ಅಧಿಕವಾಗಿದೆ ಎಂದರ್ಥ.

ಈ ಎರಡರಲ್ಲಿ ಒಂದನೆಯ ಪ್ರಯೋಗ ವಿಧಿಯಲ್ಲಿ "ಭರಂನಿಕ್ಷಿಪ್ಯ" ಎಂದು ಕಂಠೋಕ್ತವಾಗಿದೆ, ಎರಡನೆಯದರಲ್ಲಿ ಪ್ರಕರಣವನ್ನು ಪರ್ಯಾಲೋಚಿಸಿದರೆ "ಓಮಿತ್ಯಾತ್ಮಾನಂ ಯುಂಜೀತ"ಎಂದು ಅಕಿಂಚನಾಧಿಕಾರಿಯ ವಿಷಯವಾದುದರಿಂದ, ರಕ್ಷಾಭರಸಮರ್ಪಣವಿಲ್ಲದೆ ಉಪಾಯತ್ವವೇ ಸಿದ್ಧಿಸುವುದಿಲ್ಲವಾದುದರಿಂದ ಈ ಪ್ರಯೋಗವಿಧಿಯಲ್ಲೂ ರಕ್ಷಾಭರನ್ಯಾಸವು ಹೇಳಲ್ಪಟ್ಟಿತೆಂದು ಗ್ರಹಿಸಬಹುದು. ಹೇಗೆಂದರೆ : "ಓಂ ಇತ್ಯಾತ್ಮಾನಂ ಯುಂಜೀತ" ಎಂದಿರುವುದರಿಂದ 'ಓಂ' ಎಂಬ ಪ್ರಣವಮಂತ್ರವು ಹವಿಸ್ಸಮರ್ಪಣಕ್ಕೆ ಕರಣ ಮಂತ್ರವಾಯಿತು.

**ಆ ಪ್ರಣವದಲ್ಲಿ ಅಕಾರವಾಚ್ಯನಾದ ಲಕ್ಷ್ಮೀವಿಶಿಷ್ಟ ಶ್ರೀಮಹಾವಿಷ್ಣುವಿನಲ್ಲಿ ಮಕಾರವಾಚ್ಯನಾದ ಜೀವನ ಸಮರ್ಪಣವು ತೋರಿಬರುತ್ತದೆ. ಅಕಾರದಲ್ಲಿ ತೋರುವ ಅವರಕ್ಷಣೆ ಎಂಬ ಧಾತುವಿನ ವ್ಯುತ್ಪತ್ತಿಯ ಮೂಲಕ ರಕ್ಷಣೆಯಲ್ಲಿ ಸರ್ವಸಮರ್ಥ ನಾದವನಲ್ಲಿ ರಕ್ಷ್ಯ ವಸ್ತುವಾದ ಆತ್ಮವಸ್ತುವನ್ನು ಸಮರ್ಪಿಸುವೆನೆಂದು ಅನುಸಂಧಾನ ದಿಂದ, ರಕ್ಷಾಭರನ್ಯಾಸವು ಕಂಠೋಕ್ತವಾಗಿ ಇಲ್ಲದಿದ್ದರೂ ಅರ್ಥವಾಗಿ ಭಾವಿಸ ಬಹುದು.**

ಇನ್ನೊಂದು ಪ್ರಯೋಗ ವಿಧಿಯು ಕಠವಲ್ಲಿಯಲ್ಲಿ "**ಸತ್ಯಂತದ್ದ್ವಯಂ ಸಕೃ ದುಚ್ಚಾರೋಭವತಿ**" ಎಂದು ಹೇಳಿರುವ ಹಾಗೆ ದ್ವಯೋಚ್ಚಾರಣೆಯ ಮೂಲಕ ಶರಣಾಗತಿಯು ದ್ವಯದ ಉತ್ತರಖಂಡದಲ್ಲಿ ಆತ್ಮನಿಕ್ಷೇಪವು ಸೂಚಿತವು.

ಹೀಗೆ ಈ ಪ್ರಯೋಗ ವಿಧಿಗಳಲ್ಲಿ ಆತ್ಮಾತ್ಮೀಯ ಭರನ್ಯಾಸವು ಹೇಳಲ್ಪಟ್ಟಿ ತ್ತೆಂದು ಭಾವಿಸಬಹುದು. ಇತರ ಯಾಗಗಳಲ್ಲಿ ಹವಿಸ್ಸಮರ್ಪಣವಿದ್ದರೂ ಈ ರಕ್ಷಾ ಭರನ್ಯಾಸ ಇಲ್ಲ. ಆದುದರಿಂದ ಇತರ ಯಾಗಗಳಿಗಿಂತ ಈ ಆತ್ಮಯಾಗದಲ್ಲಾದರೋ ಆತ್ಮರಕ್ಷಾಭರ ಸಮರ್ಪಣವು ಅಧಿಕವೆಂದು ಪ್ರಯೋಗ ವಿಧಿಪ್ರಮಾಣಗಳ ಸಾಮರ್ಥ ದಿಂದ ಗ್ರಹಿಸಬಹುದೆಂಬುದು ತಾತ್ಪರ್ಯವು. ಹಾಗಾದರೆ ನೀವು ಆತ್ಮರಕ್ಷಾಭರದ ನ್ಯಾಸವನ್ನು ಪ್ರಪತ್ತಿ ಎಂದು ಹೇಳುತ್ತೀರಿ. ಶ್ರೀರಾಮಮಿಶ್ರರೇ ಮೊದಲಾದವರು ತನ್ನ ಪ್ರಯತ್ನದ ನಿವೃತ್ತಿಯೇ ಪ್ರಪತ್ತಿ ಎನ್ನುತ್ತಾರೆ. ಆದುದರಿಂದ ನೀವು ಹೇಳುವುದಕ್ಕೆ ವಿರೋಧವುಂಟಾಯಿತಲ್ಲ ಎಂದರೆ ಇದನ್ನು ಆಚಾರ್ಯರು ಈ ಕಾರಿಕೆ ಯಲ್ಲಿ ಅವರ ತಾತ್ಪರ್ಯವನ್ನು ವಿವರಿಸುತ್ತಾರೆ—

೧. **ಅತಶ್ಶ್ರೀರಾಮಮಿಶ್ರಾದ್ಯೈರ್ಭನ್ಯಾಸವಿವಕ್ಷಯಾ ।**
**ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿರಿತಿಲಕ್ಷಿತಃ ॥**

ಅತಃ = ಆ ಕಾರಣದಿಂದಲೇ ಎಂದರೆ ಹಿಂದೆ ಉದಾಹರಿಸ್ಪಟ್ಟ ಅನೇಕ ಪ್ರಮಾಣಗಳಿಂದಲೂ ಈ ಪ್ರಯೋಗವಿಧಿ ಸಾಮರ್ಥ್ಯದಿಂದಲೂ ಆತ್ಮರಕ್ಷಾಭರನ್ಯಾಸವೇ ಅಕಿಂಚನನ ಪ್ರಪತ್ತಿಯಲ್ಲಿ ಅಙ್ಗಿಯಾದುದರಿಂದಲೇ, ಶ್ರೀರಾಮಮಿಶ್ರಾದ್ಯೈಃ = ಶ್ರೀರಾಮಮಿಶ್ರರೇ ಮೊದಲಾದ ಪೂರ್ವಾಚಾರ್ಯರುಗಳಿಂದ, ಭರನ್ಯಾಸವಿವಕ್ಷಯಾ = ಆತ್ಮರಕ್ಷಾಭರನ್ಯಾಸವೇ ಪ್ರಪತ್ತಿಯು ಎಂದು ಹೇಳಬೇಕೆಂಬ ತಾತ್ಪರ್ಯದಿಂದ, ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿರಿತಿ = ಭರನ್ಯಾಸ ಮಾಡಿದನಂತರ ಉತ್ತರ ಕಾಲದಲ್ಲಿ ಬೇರೇ ಉಪಾಯಾನುಷ್ಠಾನ ರೂಪವಾದ ಪ್ರಪತ್ತಿಯಿಂದ ನಿವೃತ್ತಿ ಎಂಬ ವಿಷಯವೇ ಪ್ರಪತ್ತಿಯೆಂದೂ ಅಥವಾ ಬೇರೆಉಪಾಯಗಳಲ್ಲಿ ಪ್ರವರ್ತಿಸಲು ಸಾಮರ್ಥ್ಯವಿಲ್ಲದುದರಿಂದ ಅದರಿಂದ, ನಿವೃತ್ತಿ = ಹಿಂತಿರುಗುವಿಕೆ ಅಂದರೆ ಮಾಡದೇ ಇರುವಿಕೆ ಈ ರೂಪವಾದ ಆಕಿಂಚನ್ಯವೇ ಪ್ರಪತ್ತಿಯೆಂದೂ, ಲಕ್ಷಿತಃ = ಲಕ್ಷಣವಾಗಿ ಹೇಳಲ್ಪಟ್ಟಿತು.

ಇದರ ಅಭಿಪ್ರಾಯ ಇಷ್ಟೇ. ದೇಹವನ್ನು ಧರಿಸಿರುವ ಆತ್ಮನಿಗೆ ಎಲ್ಲಾ ಪ್ರವೃತ್ತಿಯಿಂದ ನಿವೃತ್ತಿ ಎಂಬುದು ಸಾಧ್ಯವೇ ಇಲ್ಲ. ನಿತ್ಯನೈಮಿತ್ತಿಕ ಕರ್ಮಗಳನ್ನು ಬಿಡುವುದು ಸ್ವಪ್ರವೃತ್ತಿ ನಿವೃತ್ತಿ ಎಂಬುದರಿಂದ ಎಂದಿಗೂ ಸರಿಯಾದುದಲ್ಲ. ಆದುದರಿಂದ ಸ್ವಪ್ರವೃತ್ತಿ ನಿವೃತ್ತಿ ಶಬ್ದದಿಂದ ಭಗವಂತನಿಗಿಂತ ಬೇರೆಯಾದ ಬೇರೆಉಪಾಯಗಳಲ್ಲಿ ಪ್ರವೃತ್ತಿಯಿಂದ ತಡೆಯುವುದು–ತೊಡಗದಿರುವುದು ಎಂದು ಅರ್ಥಮಾಡತಕ್ಕದ್ದು. ಇಂತಹ ಪ್ರವೃತ್ತಿ ನಿವೃತ್ತಿಯು, ಭಗವಂತನೇ ಉಪಾಯವೇವಿನಾ ಇತರರಲ್ಲ ಎಂದು ನಂಬಿ, ಅವನಲ್ಲೇ ಸಮಸ್ತ ಭರವನ್ನು ಸಮರ್ಪಿಸುವುದಲ್ಲದೇ ಉಂಟಾಗಲಾರದು. ಎಲ್ಲೆಲ್ಲಿ ಸ್ವವ್ಯಾಪಾರತ್ಯಾಗವಿರಬೇಕೋ ಅಲ್ಲಲ್ಲಿ ರಕ್ಷಾಭರನ್ಯಾಸವಿದ್ದೇ ಇರಬೇಕು ಎಂದು ವ್ಯಾಪ್ತಿಯನ್ನೂ ಹೇಳಬಹುದು. ಆದುದರಿಂದ ಶ್ರೀರಾಮಮಿಶ್ರಾದಿಗಳು ಪ್ರಪತ್ತಿ ಲಕ್ಷಣವನ್ನು ಉಪದೇಶಿಸಿದುದು ಆತ್ಮರಕ್ಷಾಭರನ್ಯಾಸದ ಅಭಿಪ್ರಾಯಕ್ಕೆ ವಿರೋಧವಿಲ್ಲದೆ ಆ ಅಭಿಪ್ರಾಯವನ್ನೇ ಚೆನ್ನಾಗಿ ಸಮರ್ಥಿಸಿ ಹೇಳಿದರೆಂಬ ಭಾವವು. ಭರನ್ಯಾಸವನ್ನು ಮಾಡದೆ ರಕ್ಷಾಪೇಕ್ಷೆಯನ್ನು ಮಾಡಿದರೆ ಸ್ವಪ್ರವೃತ್ತಿ ನಿವೃತ್ತಿಯು ಎಂದಿಗೂ ಸಿದ್ಧಿಸದು.

ಒಂದು ಹೆಚ್ಚಾಗಿ ಬೆಲೆ ಬಾಳುವ ಒಡವೆಯನ್ನು ರಕ್ಷಿಸುವ ಶಕ್ತಿಯಿಲ್ಲದವನು ಅದನ್ನು ತನ್ನಲ್ಲಿಯೇ ಇಟ್ಟುಕೊಂಡು ಇನ್ನೊಬ್ಬ ಶಕ್ತನನ್ನು ಕಾಪಾಡು ಎಂದು ಪ್ರಾರ್ಥಿಸುವುದರಿಂದ ತನ್ನ ಇಷ್ಟಾರ್ಥವೂ ಸಿದ್ಧಿಸುವುದಿಲ್ಲ ಮತ್ತು ಆಭರಣವು ತನ್ನಲ್ಲಿಯೇ ಇರುವುದರಿಂದ ಸ್ವಪ್ರವೃತ್ತಿ ನಿವೃತ್ತಿಯೂ ಸಿದ್ಧಿಸದು. ಶಕ್ತನು ಅದನ್ನು ಕಾಪಾಡಬೇಕಾದರೆ ಆಭರಣವನ್ನು ಅವನಲ್ಲಿ ಸಮರ್ಪಿಸಿ ರಕ್ಷಾಭರವನ್ನೂ ಅವನಲ್ಲಿಡತಕ್ಕದ್ದು. ಶ್ರೀರಾಮಮಿಶ್ರಾದಿಗಳು ಹೇಳಿದುದು ಸ್ವಪ್ರವೃತ್ತಿನಿವೃತ್ತಿಯೇ ಪ್ರಪತ್ತಿ ಎಂದು. ಇಲ್ಲಿ ಕಾರಿಕೆಯಲ್ಲಾದರೋ, ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿಃ

ಎಂದು ಹೇಳಿರುವುದರ ಅಭಿಪ್ರಾಯವು ಪ್ರಪತ್ತ್ಯುತ್ತರಕಾಲದಲ್ಲಿ ಯಾವು ದೊಂದಕ್ಕೂ ಅದರ ವಿಷಯವಾದ ಪ್ರವೃತ್ತಿಯೂ ಬೇಡವೆಂದೂ ಸೂಚಿಸುತ್ತದೆ. ಇದೇ ಅವರ ತಾತ್ಪರ್ಯ ಎಂಬಭಾವವು.

ಈ ಶ್ಲೋಕದಲ್ಲಿ ಹೇಳಿರುವ ಶ್ರೀರಾಮಮಿಶ್ರರು ಯಾರು ಎಂಬುದರಲ್ಲಿ ಶ್ರೀ ಶೇಟ್ಟಲೂರು ನರಸಿಂಹಾಚಾರ್ಯರವರು ಉಯ್ಯಕ್ಕೊಂಡಾರರು ಎಂದು ಬರೆದಿರುತ್ತಾರೆ. ಉಯ್ಯಕ್ಕೊಂಡಾರರು ನಾಥಮುನಿಗಳ ಶಿಷ್ಯರು. ಇವರಿಗೆ ಪುಂಡರೀಕಾಕ್ಷರೆಂಬ ಹೆಸರುಂಟು. ಶ್ರೀರಾಮಮಿತ್ರರೆಂಬ ಹೆಸರುಂಟೆಂಬುದು ತಿಳಿಯದು. ರಹಸ್ಯತ್ರಯಸಾರಕ್ಕೆ ಸಾರದೀಪಿಕೆಯೆಂಬ ಒಂದು ವ್ಯಾಖ್ಯಾನವುಂಟು. ಅದನ್ನು ಬರೆದವರು, ಶೋಮಾಶಿಯಾಂಡಾನ್ ಎಂದು ಬರೆದಿರುತ್ತಾರೆ. ಇದೇ ಸರಿಯಾದ ಅಭಿಪ್ರಾಯವಾಗಿ ತೋರುತ್ತದೆ. ಯಾಮುನೇಯರ ಗುರುವಾದ ಮಣಕ್ಕಾಲ್‌ನಂಬಿಗೂ ಶ್ರೀರಾಮಮಿಶ್ರರೆಂಬ ಹೆಸರುಂಟು.

ಈ ಅಭಿಪ್ರಾಯಗಳು ಮುಂದಿನ ಕಾರಿಕೆಯಲ್ಲಿ ಸ್ಫುಟವಾಗಿ ಉಪಪಾದಿ ಸಲ್ಪಡುತ್ತವೆ. ರಕ್ಷಾಪೇಕ್ಷೆಯೇ ಸಾಲದೇ ? ಭರನ್ಯಾಸವು ಹೇಗೆ ಆವಶ್ಯಕವು ? ಎಂಬುದು ಕೆಲವರ ಆಕ್ಷೇಪವು, ರಕ್ಷಾಪೇಕ್ಷೆಯನ್ನು ಯಾಚಿಸಿದನಂತರ ಸ್ವಪ್ರವೃತ್ತಿ ನಿವೃತ್ತಿಯುಂಟಾಗಬೇಕೆಂದೂ ಅದೇ ಪ್ರಪತ್ತಿ ಎಂದೂ ಪೂರ್ವಾಚಾರ್ಯರುಗಳು ಹೇಳಿದರು. ಇದು ಆತ್ಮಾತ್ಮೀಯ ಭರನ್ಯಾಸವಿಲ್ಲದೆ ಉಂಟಾಗದೆಂದು ಮುಂದಿನ ಕಾರಿಕೆಯಿಂದ ಉಪದೇಶಿಸುತ್ತಾರೆ.

## ಭರನ್ಯಾಸದ ಆವಶ್ಯಕತೆ

**ಅಕೃತೇತು ಭರನ್ಯಾಸೇ ರಕ್ಷಾಪೇಕ್ಷಣ ಮಾತ್ರತಃ ।**
**ಪಶ್ಚಾತ್ಸ್ವಯತ್ನವಿರತಿರ್ನ ಪ್ರಸಿಧ್ಯತಿ ಲೋಕವತ್ ॥**

**ಭರನ್ಯಾಸೇ**=ಭರನ್ಯಾಸವು **ಅಕೃತೇತು** ಮಾಡಲ್ಪಡದೇ ಇರಲಾಗಿ, ಇಲ್ಲಿ ತು ಶಬ್ದವು ಶಙ್ಕಾವನ್ನು ವ್ಯಾವರ್ತಿಸುತ್ತದೆ. ಇಲ್ಲಿ ಶಙ್ಕಾ ಯಾವುದೆಂದರೆ ಭರನ್ಯಾಸ ವಿಲ್ಲದೆ ಸ್ವಪ್ರಯತ್ನ ನಿವೃತ್ತಿರೂಪವಾದ ನಿರ್ಭರತ್ವವು ಉಂಟಾಗುವುದಿಲ್ಲವೆಂದು ಹೇಳಲ್ಪಟ್ಟಿತು ; ಹಾಗಾದರೆ ಹೇಗೆ ಭರನ್ಯಾಸವಿಲ್ಲದೆ ಕೇವಲ ರಕ್ಷಾಪೇಕ್ಷಣ ಮಾತ್ರದಿಂದ ಸ್ವಪ್ರಯತ್ನ ನಿವೃತ್ತಿ ಯುಂಟಾಗುತ್ತದೆ ? ಎಂಬುದು ಶಙ್ಕಾ ; ಈ ಶಙ್ಕಾವ್ಯಾವೃತ್ತಿಯು ಇಲ್ಲಿ ಹೇಳಲ್ಪಡುತ್ತದೆ. ಭರನ್ಯಾಸವು ಮಾಡಲ್ಪಡದೇ ಹೋದರೆ, **ರಕ್ಷಾಪೇಕ್ಷಣಮಾತ್ರತಃ**=ರಕ್ಷಾಪೇಕ್ಷೆಯನ್ನು ಮಾಡುವುದರ ಮಾತ್ರ ದಿಂದಲೇ, **ಸ್ವಯತ್ನವಿರತಿಃ**=ಸ್ವಪ್ರಯತ್ನದಿಂದ ನಿವೃತ್ತಿಯು, **ನಪ್ರಸಿಧ್ಯತಿ**=ಸಿದ್ಧಿ ಸುವುದಿಲ್ಲ. ಹೇಗೆಂದರೆ, **ಲೋಕವತ್**=ಲೋಕ ದೃಷ್ಟಾಂತದಲ್ಲಿ ಹೇಗೋ ಹಾಗೆ.

ಒಬ್ಬನು ತನ್ನ ಧನವನ್ನು ಈ ಆಪತ್ಕಾಲದಲ್ಲಿ ತನ್ನ ಅಪೇಕ್ಷೆಯಿಲ್ಲದೆಯೇ ನೀನೇ ರಕ್ಷಿಸತಕ್ಕದ್ದೆಂದು ಪ್ರಾರ್ಥಿಸಿ ತನ್ನಧನವನ್ನು ಒಬ್ಬಸಮರ್ಥನಲ್ಲಿಟ್ಟರೆ ತಾನು ನಿರ್ಭರನಾಗಿ ಆ ಧನದ ರಕ್ಷಣೆಯಲ್ಲಿ ಯಾವ ವಿಧವಾಗಿಯೂ ಪ್ರವರ್ತಿಸದೆ ಯೋಚನೆ ಇಲ್ಲದೆ ಇರಬಹುದು. ಆದರೆ ಹಾಗೆಮಾಡದೆ ಧನವನ್ನು ತನ್ನಲ್ಲಿಯೇ ಇಟ್ಟು 'ಅದನ್ನು ರಕ್ಷಿಸು' ಎಂಬ ಪ್ರಾರ್ಥನೆ ಮಾತ್ರದಿಂದ ಸ್ವಪ್ರವೃತ್ತಿ ನಿವೃತ್ತಿ ರೂಪ ನಿರ್ಭರತ್ವವು ಉಂಟಾಗಲಾರದು. ಯಾವಾಗ ಕಳ್ಳರು ಬಂದು ಕದ್ದೊಯ್ವರೋ ಎಂಬ ಹೆದರಿಕೆಯೂ ಯೋಚನೆಯೂ ಅದಕ್ಕಾಗಿ ಪ್ರವೃತ್ತಿಯೂ ತಪ್ಪಿದ್ದಲ್ಲ.

ಆದುದರಿಂದ ಶ್ರೀರಾಮಮಿಶ್ರರ ಸ್ವಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿಯು ಎಂದು ಹೇಳಿದ ಲಕ್ಷಣವಾಕ್ಯದ ತಾತ್ಪರ್ಯವೇನೆಂದರೆ : ಆತ್ಮರಕ್ಷಾ ಭರವು— ಓ ಕೃಪಾಸಾಗರನೇ! ನಿನ್ನದೇ ವಿನಾ ನನಗೆ ಅದರಲ್ಲಿ ಸ್ವಲ್ಪವೂ ಸಂಬಂಧವಿಲ್ಲ ಎಂದು ಹೇಳಿ ಭರನ್ಯಾಸಮಾಡಿದರೆ ಅನಂತರ ಅದರಿಂದ ಸ್ವಪ್ರವೃತ್ತಿಯ ನಿವೃತ್ತಿಯು ಉಂಟಾಗಿ ತನಗೆ ಆಕಿಂಚನ್ಯವು ಪ್ರಾಪ್ತವಾಗುತ್ತದೆ ಎಂಬ ತಾತ್ಪರ್ಯವು.

೨. ಹಾಗೆಯೇ ಭರತಮುನಿಗಳ ಲಕ್ಷಣವಾಕ್ಯವಾದ :

**ಅನನ್ಯ ಸಾಧ್ಯೇಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಮ್ ।**
**ತದೇಕೋಪಾಯತಾಯಾಚ್ಞಾ ಪ್ರಪತ್ತಿ ಶ್ಶರಣಾಗತಿಃ ॥**

ಎಂಬುದರ ಅಭಿಪ್ರಾಯವೇನೆಂದರೆ, ಗೋಪ್ತೃತ್ವವರಣ ರೂಪವಾದ ಅಙ್ಗವಿಲ್ಲದೆ ಸಮರ್ಪಿಸಿದ ಭರನ್ಯಾಸವನ್ನು ಅಙ್ಗೀಕರಿಸುವುದಿಲ್ಲವಾದುದರಿಂದ ಈ ಆವಶ್ಯಕವಾದ ಅಙ್ಗವಾಗಿರುವ ಉಪಾಯತ್ವ ಪ್ರಾರ್ಥನೆಯಿಂದ ಭರಸ್ವೀಕಾರ ಸಿದ್ಧಿಯುಂಟಾಗುತ್ತದೆ ಎಂಬುದು.

೩. ಹಾಗೆಯೇ ಲಕ್ಷ್ಮೀತಂತ್ರದ ಲಕ್ಷಣವಾಕ್ಯವಾದ **'ಆತ್ಮಾತ್ಮೀಯ ಭರನ್ಯಾಸೋಹ್ಯಾತ್ಮನಿಕ್ಷೇಪ ಉಚ್ಯತೇ'** ಆತ್ಮಭರನ್ಯಾಸವೂ ಮತ್ತು ಉಪಾಯ ಫಲಾದಿಗಳ ಭರನ್ಯಾಸವೂ, ಆತ್ಮನಿಕ್ಷೇಪ ರೂಪ ಅಙ್ಗಿ ಎಂದು ಹೇಳಿಸಿಕೊಳ್ಳುತ್ತದೆ.

ಹೀಗೆಯೇ **ಅಹಿರ್ಬುಧ್ನ್ಯ ಸಂಹಿತೆ ಸಾತ್ಯಕಿತಂತ್ರ** ಮೊದಲಾದ ಬಹುಪ್ರಮಾಣ ಗಳು ಭರನ್ಯಾಸವೇ ಲಕ್ಷಣವಾಗಿ ಹೇಳುತ್ತವೆ. ಆದುದರಿಂದ ಇದೇ ಅಙ್ಗಿ ಎಂದು ಭಾವಿಸಿ ಇದಕ್ಕೆ ವಿರೋಧವಿಲ್ಲದೆ ಇತರ ಲಕ್ಷಣವಾಕ್ಯಗಳನ್ನು ಅನ್ವಯಿಸತಕ್ಕದ್ದು ನ್ಯಾಯವೆಂದು ಭಾವವು. ಈ **"ಆತ್ಮಾತ್ಮೀಯ ಭರನ್ಯಾಸಃ"** ಎಂಬುದಕ್ಕೆ ತನ್ನ ಮತ್ತು ತನಗೆ ಸೇರಿದವರ ಎಂದು ಅರ್ಥವಾಗುತ್ತದೆ. ಅದೂ ತಪ್ಪಾಗುವುದಿಲ್ಲ.

ಸ್ವಾಮಿ ನಿಗಮಾಂತ ದೇಶಿಕರ ನ್ಯಾಸವಿಂಶತಿಯ "ಆತ್ಮಾತ್ಮೀಯ ಸ್ವರೂಪ ನ್ಯಸನ ಮನುಗತಂ ಯಾವದರ್ಥಂ ಮುಮುಕ್ಷೋಃ" ಎಂಬ ೧೪ನೆಯ ಶ್ಲೋಕ ವ್ಯಾಖ್ಯಾನದಲ್ಲಿ ಆತ್ಮೀಯ ಎಂಬುದಕ್ಕೆ ಉಪಾಯ ಫಲಾದಿ ಎಂದು ವ್ಯಾಖ್ಯಾನ ಮಾಡಿರುವುದರಿಂದ ಆತ್ಮಭರವೇನು ಆತ್ಮೀಯವಾದ ಉಪಾಯ ಫಲಗಳೇನು ಇವುಗಳ ಭರನ್ಯಾಸವೆಂದು ಅರ್ಥ ಮಾಡುವುದೂ ಸರಿಯಾದುದರಿಂದ ಇವೂ ಕೂಡ ಅಲ್ಲಿಯೂ ಅಂತರ್ಗತವು. ಇದು ಯಥಾಶ್ರುತ ಭರನ್ಯಾಸ ಪರವಾದ ವಾಕ್ಯ. ಆಚಾರ್ಯರು ಮೂಲಗ್ರಂಥವಾದ ನ್ಯಾಸವಿಂಶತಿಯನ್ನೂ ಅದಕ್ಕೆ ತಮ್ಮ ಅಭಿಪ್ರಾಯವಾದ ವ್ಯಾಖ್ಯೆಯನ್ನೂ ತಾವೇ ಬರೆದಿದ್ದಾರೆ.

ಈ ಮೂರು ಲಕ್ಷಣವಾಕ್ಯಗಳಿಗೂ ಅರ್ಥ ಹೇಳಿ ಸಮನ್ವಯಮಾಡಿ ಪರಸ್ಪರ ವಿರೋಧವಿಲ್ಲವೆಂದು ತೋರಿಸುವುದೇ ಮುಖ್ಯವು.

ಮೂರನೆಯದರಲ್ಲಿ ಅಙ್ಗಿಯು ಸಾಕ್ಷಾತ್ತಾಗಿ ಹೇಳಲ್ಪಟ್ಟಿತು. ಮೊದಲನೆಯ ದರಲ್ಲಿ ಸ್ವಪ್ರವೃತ್ತಿ ನಿವೃತ್ತಿಗೂ ಭರನ್ಯಾಸಕ್ಕೂ ವ್ಯಾಪ್ಯವ್ಯಾಪಕ ಭಾವರೂಪದಲ್ಲಿ ಅಙ್ಗಾಙ್ಗಿ ಭಾವವಿರುವುದರಿಂದ ಅಭೇದವು ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಎಲ್ಲಿ ಭರನ್ಯಸನವಿದೆಯೋ ಅಲ್ಲಿ ಸ್ವಪ್ರವೃತ್ತಿ ನಿವೃತ್ತಿಯುಂಟು. ಎಲ್ಲಿ ಭರನ್ಯಸನ ವಿಲ್ಲವೋ, ಅಲ್ಲಿ ಸ್ವಪ್ರವೃತ್ತಿ ನಿವೃತ್ತಿ ಇರುವುದಿಲ್ಲ ಎಂದು ಎರಡಕ್ಕೂ ಸಾಮಂಜಸ್ಯ ವನ್ನು ಹೇಳತಕ್ಕದ್ದು.

ಎರಡನೆಯದರಲ್ಲಿ ಉಪಾಯತ್ವ ಪ್ರಾರ್ಥನೆಗೂ, ಭರನ್ಯಾಸಕ್ಕೂ ಜನ್ಯಜನಕ ಭಾವ ಇರುವುದರಿಂದ ಅಙ್ಗಾಙ್ಗಿ ಭಾವದಿಂದ ಎರಡಕ್ಕೂ ಅಭೇದ ಹೇಳಲ್ಪಟ್ಟಿತು. ಈ ರೀತಿ ಅಭಿಪ್ರಾಯವಿರುವುದರಿಂದ ಸಾಮಾಂಜಸ್ಯ ಉಂಟಾಗುತ್ತದೆ.

**ಹೀಗೆ ಈ ಮೂರು ಲಕ್ಷಣವಾಕ್ಯಗಳು ಪರಸ್ಪರ ವಿರುದ್ಧವಾದವಲ್ಲ.** ಮೂರೂ ಐಕಕಂಠ್ಯದಿಂದ ಭರನ್ಯಾಸವೇ ಅಙ್ಗಿ ಎಂದು ಸ್ಥಾಪಿಸುತ್ತವೆಂದು ತಿಳಿಸು ವುದಕ್ಕಾಗಿ ಆಚಾರ್ಯರು ರಹಸ್ಯತ್ರಯಸಾರದಲ್ಲಿ ಒಂದು ಕಾರಿಕೆಯನ್ನು ಅನು ಗ್ರಹಿಸಿದ್ದಾರೆ. ಹೀಗೆ ಮೂರು ವಾಕ್ಯಗಳ ತಾತ್ಪರ್ಯಗಳನ್ನೂ ಚೆನ್ನಾಗಿ ವಿಮರ್ಶಿಸಿ ತಿಳಿದು ಐಕಕಂಠ್ಯವನ್ನು ಸ್ಥಾಪಿಸುವವನೇ ಜ್ಞಾತಾ ಎಂದು ಹೇಳುತ್ತಾರೆ.

## ಪ್ರಪತ್ತಿ ಲಕ್ಷಣವಾಕ್ಯಗಳಿಗೆ ಐಕಕಂಠ್ಯದ ವರ್ಣನೆ

**ಆಕಿಂಚನ್ಯ ಭರನ್ಯಾಸೋಪಾಯತ್ವ ಪ್ರಾರ್ಥನಾತ್ಮನಾಮ್ ।**
**ತ್ರಯಾಣಾಂ ಸೌಹೃದಂ ಸೂಕ್ಷ್ಮಂ ಯಃ ಪಶ್ಯತಿ ಸಪಶ್ಯತಿ ॥೪೦॥**

ಆಕಿಂಚನ್ಯ ಭರನ್ಯಾಸೋಪಾಯತ್ವ ಪ್ರಾರ್ಥನಾತ್ಮನಾಮ್=ಶ್ರೀರಾಮ ಮಿಶ್ರರ ವಾಕ್ಯದಲ್ಲಿ ತೋರುವ, (೧) ಆಕಿಂಚನ್ಯವೇನು ಲಕ್ಷ್ಮೀತಂತ್ರವಾಕ್ಯದಲ್ಲಿ ಹೇಳಲ್ಪಟ್ಟ, (೨) ಭರನ್ಯಾಸವೇನು ಭರತಮುನಿಯ ವಾಕ್ಯದಲ್ಲಿ ತೋರುವ, (೩) ಉಪಾಯ ಪ್ರಾರ್ಥನೆ ಏನು ಈ ರೂಪಗಳಾಗಿರುವ, ತ್ರಯಾಣಾಂ=ಈ ಮೂರಕ್ಕೂ ಕೂಡ. ಸೂಕ್ಷ್ಮಂ=ಮಂದವಾದ ಬುದ್ಧಿಯುಳ್ಳವರಿಗೆ ತೋರಲು ಅಸಾಧ್ಯವಾದ, ಸೌಹೃದಂ=ಒಂದಕ್ಕೊಂದಕ್ಕೆ ಅನ್ಯೋನ್ಯವಾಗಿರುವ ಸ್ನೇಹವನ್ನು ಅಂದರೆ ಐಕಕಂಠ್ಯವನ್ನು, ಯಃ=ಯಾವನು, ಪಶ್ಯತಿ=ಜ್ಞಾನವೆಂಬ ಕಣ್ಣಿನಿಂದ ನೋಡುತ್ತಾನೋ ಅಂದರೆ ತಿಳಿಯುತ್ತಾನೋ, ಸಃ=ಅವನೇ, ಪಶ್ಯತಿ=ಸರಿಯಾದ ಅರ್ಥವನ್ನು ಗ್ರಹಿಸಿದ ಬುದ್ಧಿವಂತನು.

ಅ) ಆಕಿಂಚನ್ಯವೆಂದರೆ ತನ್ನನ್ನು ಕಾಪಾಡಿಕೊಳ್ಳಲು ಉಪಾಯಾಂತರದಲ್ಲಿ ಪ್ರವೃತ್ತಿ ಇಲ್ಲವಲ್ಲ ಎಂಬುದಾಗಿ ತನ್ನ ಅಶಕ್ತಿ ಪ್ರದರ್ಶನ.

ಆ) ಭರನ್ಯಾಸವೆಂದರೆ ತನ್ನನ್ನು ಕಾಪಾಡಿಕೊಳ್ಳಲು ಉಪಾಯಾಂತರ ಪ್ರವರ್ತಿಸುವುದಕ್ಕೆ ತಾನು ಅಶಕ್ತನಾಗಿರುವೆನಲ್ಲಾ ಎಂದು ಸ್ವರಕ್ಷಾ ಭರವನ್ನು ಶಕ್ತನಲ್ಲಿ ಸಮರ್ಪಿಸುವುದು.

ಇ) ಉಪಾಯತ್ವಪ್ರಾರ್ಥನೆ ಎಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ ಪ್ರವೃತ್ತಿಗೆ ತಾನು ಅಶಕ್ತನಾಗಿದ್ದೇನೆ, ಆದುದರಿಂದ ಆ ಉಪಾಯಾಂತರ ಸ್ಥಾನದಲ್ಲಿ ನೀನೇ ನಿಂತು ರಕ್ಷಿಸಬೇಕೆಂಬ ಪ್ರಾರ್ಥನೆ.

ಹೀಗೆ ಮೂರೂ ಒಂದೇ ಅಭಿಪ್ರಾಯ ಉಳ್ಳವೇ ವಿನಾ ಬೇರೆ ಬೇರೆ ಅಲ್ಲ. ಆಕಿಂಚನ್ಯ ಪ್ರದರ್ಶನದಲ್ಲೂ ಉಪಾಯಪ್ರಾರ್ಥನೆಯಲ್ಲೂ ಅಭಿಪ್ರಾಯಗಳು ಒಂದೇ ಆಗಿ ಇನ್ನೂ ಭರವನ್ನು ಸಮರ್ಪಿಸದೇ ಇರುವ ಸ್ಥಿತಿಯು. ಇಷ್ಟೇ ವ್ಯತ್ಯಾಸ, ಇದಲ್ಲದೆ ಮೂರಕ್ಕೂ ಅಭಿಪ್ರಾಯದಲ್ಲಿ ವ್ಯತ್ಯಾಸವೇನೂ ಇಲ್ಲ. ಇವೆರಡರೊಂದಿಗೂ ಭರಸಮರ್ಪಣವು ಆವಶ್ಯಕವಾಗಿ ಅವುಗಳ ಪ್ರಾಧಾನ್ಯವನ್ನು ತಿಳಿಸುವುದಕ್ಕಾಗಿ ಹಾಗೆ ಶ್ರೀರಾಮಮಿಶ್ರರೂ ಭರತಮುನಿಗಳೂ ಹೇಳಿದರೆ ವಿನಾ ಬೇರೆ ಇಲ್ಲ. ಎಲ್ಲಾ ಒಂದೇ ಅಭಿಪ್ರಾಯಗಳುಳ್ಳವೆಂಬ ಭಾವ ಆಕಿಂಚನ್ಯವಿದ್ದರೇನೇ ಭರನ್ಯಾಸವು. ಎಲ್ಲಿ ಆಕಿಂಚನ್ಯವಿದೆಯೋ ಅಲ್ಲಿ ಭರನ್ಯಾಸವು. ಆಕಿಂಚನ್ಯವಿಲ್ಲದಿದ್ದರೆ ಭರನ್ಯಾಸವಿಲ್ಲ ಎಂದು ತೋರಿಸುವುದಕ್ಕಾಗಿ ಹಾಗೆ ಹೇಳಿದರು ಎಂಬ ಭಾವ.

ಭರನ್ಯಾಸಮಾಡುವುದಕ್ಕೆ ಮುಂದಿನಕಾಲಕ್ಕೆ ಸಂಬಂಧಪಟ್ಟ ಸ್ವಪ್ರವೃತ್ತಿ ನಿವೃತ್ತಿ ಎಂದರೆ ಬೇರೆ ಉಪಾಯದಲ್ಲಿ ಪ್ರವರ್ತಿಸಲು ಅಶಕ್ತನೇ ಆದುದರಿಂದ ಅದರಿಂದ ತಾನು ನಿವೃತ್ತಿಯನ್ನು ಹೊಂದಿದ್ದೇನೆಂದು ಆಕಿಂಚನ್ಯವನ್ನು ಪ್ರದರ್ಶಿಸಿ, ನೀನೇ ಆ ಸ್ಥಾನದಲ್ಲಿ ನಿಂತು ಅದರ ಫಲವನ್ನು ಉಂಟುಮಾಡತಕ್ಕದ್ದು ಎಂಬ ಭಾವ ವುಂಟಾಗುತ್ತದೆ. ಸ್ವಪ್ರವೃತ್ತಿ ನಿವೃತ್ತಿಯು ಭರನ್ಯಾಸದ ಉತ್ತರಕಾಲಕ್ಕೆ ಸಂಬಂಧ ಪಟ್ಟಿದ್ದಾದರೆ, ಭರನ್ಯಾಸವನ್ನು ಅಙ್ಗೀಕರಿಸಿದಂತಾಯಿತು; ಆಗ ಸ್ವಪ್ರವೃತ್ತಿ ನಿವೃತ್ತಿ ಎಂದರೆ ಉಪಯಾನುಷ್ಠಾನಮಾಡಿ ತಾನು ಕೃತ ಕೃತ್ಯನಾದುದರಿಂದ ಅದಕ್ಕಾಗಿ ಮುಂದಕ್ಕೆ ಯಾವ ಪ್ರವೃತ್ತಿಯೂ ಇಲ್ಲದೆ ಇರುವ ಅವಸ್ಥೆಯೇ ಪ್ರವೃತ್ತಿ ನಿವೃತ್ತಿ ಎಂಬುದರ ಅರ್ಥ.

ಭರತಮುನಿಯ ವಾಕ್ಯದಲ್ಲಾದರೋ ಉಪಾಯತ್ವ ಪ್ರಾರ್ಥನೆಯಿಂದಲೇ ಭರನ್ಯಾಸ ಕಾರ್ಯ ಉಂಟಾಗುವುದರಿಂದ ಹಾಗೆ ಹೇಳಲ್ಪಟ್ಟಿತೇ ವಿನಾ ಗೋಪ್ತೃತ್ವ ವರಣರೂಪ ಅಙ್ಗಕ್ಕಿಂತಲೂ ಇದು ಬೇರೆಯಾದುದಲ್ಲ, ಹೀಗೆ ಈ ವಾಕ್ಯಗಳಲ್ಲಿ ಅಡಗಿರುವ ಸೂಕ್ಷ್ಮಾರ್ಥವನ್ನು ಗ್ರಹಿಸಿದವನೇ ಕುಶಲಿಯೇ ವಿನಾ ಅಙ್ಗಗಳಾದ ಇವು ಗಳನ್ನು ಅಙ್ಗಿ ಎಂದು ಭಾವಿಸುವವನು ಕುಶಲಿಯಲ್ಲ.

ಆದುದರಿಂದ ಶ್ರೀರಾಮಮಿಶ್ರರ ವಾಕ್ಯಕ್ಕೂ, ಭರತಮುನಿಗಳ ವಾಕ್ಯಕ್ಕೂ ಮತ್ತು ಲಕ್ಷ್ಮೀತಂತ್ರ ಅಹಿರ್ಬುಧ್ನ್ಯ ಸಂಹಿತಾ ಮೊದಲಾದ ವಾಕ್ಯಗಳಿಗೂ ಅತ್ಯಂತ ಸಾಮಂಜಸ್ಯ ಉಂಟೇ ಹೊರತು ಪರಸ್ಪರ ವಿರೋಧವಿಲ್ಲ. ಈ ಸೂಕ್ಷ್ಮವನ್ನು ಎಲ್ಲರೂ ಗ್ರಹಿಸಲಾರರು ಎಂಬ ಭಾವ. ಅಂತಹ ಸೂಕ್ಷ್ಮವನ್ನು ಗ್ರಹಿಸಿದವರೇ ಬಲ್ಲವರು ಎಂದು "ಯಃ ಪಶ್ಯತಿಸ ಪಶ್ಯತಿ" ಎಂದು ಹೇಳಿರುತ್ತಾರೆ. ಈ ಮೂರು ಲಕ್ಷಣವಾಕ್ಯ ಗಳಿಗೂ ಐಕಕಂಠ್ಯವು ಸಾಙ್ಗಪ್ರಪದನಾಧಿಕಾರದ ಆದಿ ಶ್ಲೋಕದಲ್ಲಿ ಕೂಡ ವ್ಯಕ್ತವು, ಹೇಗೆಂದರೆ—

**ಅಮೂಭೀಷ್ಟೇದುಷ್ಸಾಧೇ ಸ್ವತ ಇತರ ತೋವಾ ಕ್ವಚನ ತ**
**ದ್ಭರನ್ಯಾಸಂ ಯಾಙ್ಞಾನ್ವಿತ ಮಭಿವದನ್ತಿ ಪ್ರಪದನಮ್ ।**
**ಇತಃ ಪಶ್ಚಾದಸ್ಮದ್ಯತನ ನಿರಪೇಕ್ಷೇಣ ಭವತಾ**
**ಸಮರ್ಥ್ಯೋಽಸಾವರ್ಥ ಸ್ತ್ವಿತಿ ಮತಿವಿಶೇಷಂ ತ (ದ) ಮು ವಿದುಃ ॥**

ಇಷ್ಟಾರ್ಥವು ತನ್ನಿಂದಲೋ ಅಥವಾ ಇತರ ಉಪಾಯದಿಂದಲೋ ಸಾಧಿಸಲು ಆಗದಿರಲಾಗಿ (ಶಕ್ತವಾದ) ಒಂದೆಡೆ ಯಾಚನೆಯಾಡಗೂಡಿದ ಅದರ ಭರದ— ಹೊಣೆಯ ನ್ಯಾಸ—ಇಡುವಿಕೆಗೆ ಪ್ರಪದನ ಎನ್ನುತ್ತಾರೆ. ಇನ್ನು ಮುಂದೆ ನಮ್ಮ ಪ್ರಯತ್ನವನ್ನು ಅಪೇಕ್ಷಿಸದೆ (ಭಗವಂತನಾದ) ನೀನೇ ಈ ಪ್ರಯೋಜನವನ್ನು ಸಾಧಿಸಲು ತಕ್ಕದ್ದು ಎಂಬ ಈ ಬುದ್ಧಿ ವಿಶೇಷವು ಅದು ಎನ್ನುತ್ತಾರೆ.

ಹೀಗೆ ಪ್ರಪತ್ತಿಯ ಸ್ವರೂಪ ವಿಚಾರದ ನಡುವೆ ಪೂರ್ವಪಕ್ಷಿಗಳು ಕೇಳುವ ಅದರ ಲಕ್ಷಣವನ್ನು ನಿಷ್ಕೃಷ್ಟವಾಗಿ ಅರಿತಾಯಿತು ; ಅದನ್ನು ವಿಧಿಸುವ ಪ್ರಮಾಣಾದಿಗಳನ್ನೂ ತಿಳಿದಂತಾಯಿತು.

ಇನ್ನುಮುಂದೆ ಭಕ್ತಿಪ್ರಪತ್ತಿಗಳ ಸ್ವರೂಪ ವಿಷಯದಲ್ಲಿ ಅವರಿಗೆ ಉಂಟಾಗಿರುವ ಅಭಿಪ್ರಾಯಭೇದಗಳ ಉಳಿದ ಅಂಶಗಳನ್ನು ವಿಮರ್ಶೆ ಮಾಡೋಣ.

ಕೆಲವರು ಶೇಷತ್ವಜ್ಞಾನವಿದ್ದರೆ ಸಾಕು; ಅದೇ ಪ್ರಪತ್ತಿ ಎಂದು ಹೇಳುತ್ತಾರೆ. ಅದು ಸರಿ ಅಲ್ಲ. ಈ ವಾದಕ್ಕೆ ಬೇರೆ ಬಾಧಕವೂ ಇದೆ ಎಂದು ಆಚಾರ್ಯರು ಹೇಳುತ್ತಾರೆ.

**ವಾಕ್ಯ ಮಾತ್ರೇಣ ಸಿದ್ಧತ್ವಾತ್ಸಿದ್ಧೋಪಾಯ ಇಹೋಚ್ಯತೇ ।**
**ಪ್ರಪತ್ತಿರಿತಿವಾದಸ್ತು ವಿಧಿನಾತ್ರವಿಹನ್ಯತೇ ॥**

**ಇದರ ಅರ್ಥ :** ಈ ಪ್ರಪತ್ತಿ ಪ್ರಕರಣದಲ್ಲಿ ಶೇಷತ್ವಜ್ಞಾನವು 'ನ್ಯಾಸ ಇತಿ ಬ್ರಹ್ಮ' ಎಂದು ಶ್ರುತಿಯಲ್ಲಿ ನ್ಯಾಸಬ್ರಹ್ಮ ಎಂಬ ಶಬ್ದಗಳು ಸಮಾನಾಧಿಕರಣಗಳಾಗಿ ಹಾಗೆ ಹೇಳಿರುವುದರಿಂದ, ನ್ಯಾಸ ಬ್ರಹ್ಮ ಇವೆರಡೂ ಸಿದ್ಧೋಪಾಯಗಳೇ ಆದವು. ಪರಬ್ರಹ್ಮನು ಹೇಗೆ ಸಿದ್ಧೋಪಾಯನೋ ಹಾಗೆಯೇ ಪ್ರಪತ್ತಿಯೂ ಸಿದ್ಧೋಪಾಯ ಎಂಬುದು ವಾಕ್ಯದಿಂದ ಸಿದ್ಧಿಸುವುದು. ಪ್ರಕೃತವಾದ ಬ್ರಹ್ಮದಲ್ಲಿ ಸಿದ್ಧತ್ವವು, ಜ್ಞಾನ ವಿಷಯಕವಾದ ವ್ಯಾಪಾರವಿಲ್ಲದೆ ವಾಕ್ಯ ಶ್ರವಣ ಮಾತ್ರದಿಂದ ಅರಿಯಲ್ಪಡುವಿಕೆ 'ಬ್ರಹ್ಮವು ಸಿದ್ಧೋಪಾಯ' ಎನ್ನುವುದು. ಕೃತಿಸಾಧ್ಯತ್ವವುಂಟಾದರೆ ಉಪಾಯತ್ವ. ಈ ರೀತಿ ಸಿದ್ಧೋಪಾಯ ಎಂದು ಹೇಳಿಸಿಕೊಳ್ಳಲು ಯೋಗ್ಯವಾದ ಪ್ರಪತ್ತಿ ಶೇಷತ್ವಜ್ಞಾನವೇ. ಹೀಗೆಂಬ ವಾದವೂ ಕೂಡ ಅತ್ರ—ಇಲ್ಲಿ ಶರಣಂ ವ್ರಜ ಎಂಬ ವಿಧಿವಾಕ್ಯದಲ್ಲಿ ವಿಧಿನಾ-ಸ್ವರಸವಾಗಿ ತೋರುವ ವಿಧಿ ಪ್ರತ್ಯಯದಿಂದ ವಿಹನ್ಯತೇ—ಬಾಧಿಸಲ್ಪಡುತ್ತದೆ. ಕೃತಿ ಸಾಧ್ಯತ್ವವಲ್ಲವೇ ವಿಧ್ಯರ್ಥ. ಶೇಷತ್ವಜ್ಞಾನವಾದರೋ ಕೃತಿಸಾಧ್ಯವಲ್ಲವಾದುದರಿಂದ ಅದರ ವಿಷಯವಾದ ವಿಧಿ ಇಲ್ಲ, ಮತ್ತೇನೆಂದರೆ ಭರನ್ಯಾಸವೇ ಕೃತಿಸಾಧ್ಯವಾಗಿರೋಣದರಿಂದ ಅದೇ ವಿಧೇಯ—ಅದೇ ಪ್ರಪತ್ತಿ ಎಂಬುದರ್ಥ.

ಆದುದರಿಂದ ಶೇಷತ್ವಜ್ಞಾನ ಮಾತ್ರವೇ ಸಾಲದು. ಭರನ್ಯಾಸವೂ ಆವಶ್ಯಕವೆಂದು ನಿಗಮನವು.

## ಭಗವಂತನಲ್ಲಿ ಉಪಾಯತ್ವ ಜ್ಞಾನವೇ ಪ್ರಪತ್ತಿ ಎಂಬ ಪಕ್ಷದ ನಿರಸನ

'ಶರಣಂ ವ್ರಜ' ಎಂಬಲ್ಲಿ ವ್ರಜ ಶಬ್ದವು ವ್ರಜಗತೌ ಎಂಬ ಧಾತುವಿನ ಲೋಟ್‌ಲಕಾರದ ಮಧ್ಯಮ ಪುರುಷದ ಏಕವಚನರೂಪ, ಗತ್ಯರ್ಥವುಳ್ಳವುಗಳೆಲ್ಲಾ ಬುದ್ಧ್ಯರ್ಥದಲ್ಲೂ ಪ್ರಯೋಗವುಳ್ಳವುಗಳಾದುದರಿಂದ 'ಶರಣಂ ವ್ರಜ' ಎಂಬಲ್ಲಿ ಕೃತಿಸಾಧ್ಯವಾದುದು ಯಾವುದೂ ಇಲ್ಲ. ಶರಣಂ ವ್ರಜ=ಶರಣವೆಂದು ತಿಳಿ ಎಂದರ್ಥ. ಆದುದರಿಂದ ಪ್ರಪತ್ತಿಗೆ ಅನುಷ್ಠಾನ ಬೇಕಿಲ್ಲ. ಕೇವಲ ಜ್ಞಾನಮಾತ್ರವೇ ಎಂಬುದಾಗಿ ಪೂರ್ವಪಕ್ಷ.

ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ: 'ಶರಣಂ ವ್ರಜ' ಎಂದು ಹೇಳಿರುವುದು 'ಇಮಮರ್ಥಂಜಾನೀಹಿ—ಈ ಅರ್ಥವನ್ನು ಅರಿ', ಶ್ರೀ ಕೃಷ್ಣನಾದ ನಾನು 'ಶರಣ= ಉಪಾಯ' ಎಂಬ ಅಭಿಪ್ರಾಯವನ್ನು ಅರ್ಜುನನಾದ ನೀನು ತಿಳಿಯತಕ್ಕದ್ದು. ಇಷ್ಟುಮಾತ್ರ ಅಭಿಪ್ರಾಯವುಳ್ಳದ್ದಾಗಿ ಅನುಷ್ಠಾನ ಪರವಲ್ಲದ್ದಾದರೆ, ಇದು ಶಬ್ದ ಸ್ವಾರಸ್ಯ ವಿರುದ್ಧ, ವ್ರಜ ಎಂಬುದು ಲೋಟ್, ಅದಕ್ಕೆ ಕೃತಿಸಾಧ್ಯ=ಕಾರ್ಯದಿಂದ ಸಾಧಿಸಲುತಕ್ಕದ್ದು, ಮಾಡಲುತಕ್ಕದ್ದು ಎಂಬ ಕೃತಿಸಾಧ್ಯವಾದ ವಿಧಿಯಲ್ಲೇ ಅರ್ಥ ಸ್ವಾರಸ್ಯವಿರುವುದರಿಂದ ಅದಕ್ಕೆ ವಿರುದ್ಧವಾಯಿತು, 'ಶರಣಂ ವ್ರಜ' ಎಂಬುದಕ್ಕೆ ಶರಣಾಗತ್ಯನುಷ್ಠಾನದಲ್ಲಿ ಅರ್ಥ ಸ್ವಾರಸ್ಯವೇವಿನಾ ಜ್ಞಾನಮಾತ್ರೋಪದೇಶದಲ್ಲಿ ಸ್ವಾರಸ್ಯವಿಲ್ಲ ಎಂಬ ಭಾವವು.

ಇಷ್ಟು ಮಾತ್ರವೇ ಅಲ್ಲ, ಇನ್ನೊಂದು ದೋಷವೂ ಉಂಟು. ಅದೇನೆಂದರೆ 'ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಂಗೈಃ ಪಂಚಭಿರಾವೃತಾಂ' ಎಂಬ ಲಕ್ಷ್ಮೀ ತಂತ್ರದ ವಾಕ್ಯದಲ್ಲಿ ಪ್ರಯುಂಜೀತ—ಪ್ರಯೋಗಿಸಬೇಕು, ಅನುಷ್ಠಿಸಬೇಕು ಎಂಬರ್ಥ ವಾಗುವುದರಿಂದ ಬೇರೆ ಅರ್ಥವನ್ನು ಹೇಳುವುದು ತಪ್ಪಾಗುತ್ತದೆ. ಪರಿಕರದೊಡ ಗೂಡಿದ ಪ್ರಪತ್ತಿಯು ಇಲ್ಲಿ ವಿಧಿಸಲ್ಪಡುತ್ತದೆ. ಅಲ್ಲದೆ ಇಲ್ಲಿ ಇನ್ನೊಂದು ದೋಷವೂ ಉಂಟು. ಅದೇನೆಂದರೆ—ಸ್ವರೂಪದ ಅಂಶದಲ್ಲಿ ಉಂಟಾಗುವ ವ್ಯಾಮೋಹವನ್ನು ಅನುವಾದಮಾಡಿ ಅದಕ್ಕೆ ಉತ್ತರವನ್ನು ಹೇಳುತ್ತಾರೆ ಆಚಾರ್ಯರು.

ಸರ್ವೇಶ್ವರನು ಮೋಕ್ಷೋಪಾಯವು ಎಂದು ಇಷ್ಟುಮಾತ್ರವೇ ಹೇಳತಕ್ಕದ್ದಾಗಿ ಮೋಕ್ಷಾಧಿಕಾರಿಗೆ ಬೇರೆ ವಿಧಿರೂಪದಲ್ಲಿ ವಿಧಿಸತಕ್ಕದ್ದು ಯಾವುದೂ ಇಲ್ಲದಾಗಿ, ಇಷ್ಟಕ್ಕೇ ಬಿಟ್ಟುಬಿಟ್ಟರೆ 'ಶರಣಂ ವ್ರಜ' ಎಂಬ ಈ ಸಂದರ್ಭವು ಈಗ ಉದ್ದಿಶ್ಯವಾದ ಭಕ್ತಿಯೋಗಕ್ಕೆ ಬೇಕಾಗಿರುವ ತತ್ತ್ವೋಪದೇಶವನ್ನು ಮಾತ್ರ ಮಾಡಿದ ಹಾಗಾಗುತ್ತದೆ. ಪ್ರಪತ್ತಿರೂಪ ಸಾಧ್ಯೋಪಾಯ ವಿಧಿಯನ್ನು ಬೋಧಿಸದಂತಾಗಲಿಲ್ಲ. ಭಾಷ್ಯಕಾರರು ಇದನ್ನು ಮೋಕ್ಷೋಪಾಯವಿಧಿ ಎಂಬುದಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಅದಕ್ಕೆ ವಿರೋಧವಾಗುತ್ತದೆ.

ಹೀಗೆ ಉಪಾಯತ್ವಾಧ್ಯವಸಾಯ—ಉಪಾಯವಾಗಿರುವುದು ಎಂಬ ನಿಶ್ಚಯ ಇಷ್ಟುಮಾತ್ರ ಪ್ರಪತ್ತಿ ಎಂಬ ಪಕ್ಷವನ್ನು ನಿರಾಕರಿಸಿ, ಸ್ವಯತ್ನ ನಿವೃತ್ತಿ—ತಾನು ಯಾವ ಪ್ರಯತ್ನವನ್ನೂ ಮಾಡದಿರುವುದೇ ಪ್ರಪತ್ತಿ ಎಂದು ಕೆಲವರು ಹೇಳುವರು—ಅವರ ಮತವನ್ನು ತಿರಸ್ಕರಿಸುತ್ತಾರೆ.

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ—ಎಲ್ಲಾ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣುಹೋಗು" ಎಂಬ ಕೃಷ್ಣನ ವಾಕ್ಯಕ್ಕೆ ಸ್ವರಕ್ಷಣಕ್ಕಾಗಿ ಎಲ್ಲಾ ಪ್ರವೃತ್ತಿಗಳನ್ನೂ ಬಿಡತಕ್ಕದ್ದು ಎಂದು ಏರ್ಪಟ್ಟಿತು. ಇಲ್ಲಿ ಅದೇ ವಿಧಿಸಲ್ಪಡುತ್ತದೆ. ಇದೇ ಪ್ರಪತ್ತಿಯೆಂದು ಭಾವಿಸತಕ್ಕದ್ದೇ ವಿನಾ, ಬೇರೆ ಇನ್ನು ಯಾವ ಪ್ರವೃತ್ತಿರೂಪವಾದ ಪ್ರಪತ್ತ್ಯನುಷ್ಠಾನವೂ ಸರಿಯಲ್ಲ ಎಂದು ಕೆಲವರ ಅಭಿಪ್ರಾಯ. ಇದು ಸರಿಯಲ್ಲ ಎಂದು ಎರಡು ಕಾರಣಗಳಿಂದ ತಿಳಿಸುತ್ತಾರೆ.

೧. ತನ್ನನ್ನು ಕಾಪಾಡಿಕೊಳ್ಳುವುದಕ್ಕಾಗಿ ಎಲ್ಲಾ ಧರ್ಮಗಳನ್ನೂ ಬಿಡುವುದೂ ಕೂಡ ಸ್ವರಕ್ಷಣಾರ್ಥವಾಗಿ ಮಾಡುವ ಒಂದು ಉಪಾಯವಾಗಲಿಲ್ಲವೋ ? ಆಗ ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯಾಗಲೇ ಇಲ್ಲ. ತನ್ನ ಮಾತಿಗೇ ವಿರೋಧ ಉಂಟಾಯಿತಲ್ಲವೇ ? ಎಂಬ ಭಾವವು.

೨. ಅಂಗದೊಡಗೂಡಿದ ಪ್ರಪದನವನ್ನು ವಿಧಿಸುವ ಅನೇಕ ಪ್ರಮಾಣಗಳಿವೆ. ಅವುಗಳಿಗೆಲ್ಲಾ ವಿರೋಧವೂ ಆಗುತ್ತದೆ.

'ಸ್ವವಚನವಿರೋಧ' ಎಂಬುದಕ್ಕೆ ವ್ಯಾಖ್ಯಾಖ್ಯಾಕಾರರ ವಿವರಣೆ ಹೀಗಿದೆ :

ಕೃತಿಯಿಂದ ಸಾಧಿಸಲ್ಪಡದೇ ಇರುವುದಕ್ಕೆ ವಿಧಿ ಬೇಕಾದುದಿಲ್ಲ—ಅದು ವಿಧಾನಕ್ಕೆ ಅನರ್ಹವಾಯಿತು. ಆದುದರಿಂದ 'ವಿಧಿಸಲ್ಪಡುತ್ತದೆ' ಎಂಬ ಮಾತಿಗೆ ವಿರೋಧ ಉಂಟಾಯಿತು. ಕೃತಿ ಸಾಧ್ಯವಾದರೆ ಅದೇ ಸ್ವರಕ್ಷಣಾರ್ಥ ಸ್ವವ್ಯಾಪಾರ ವಾದುದರಿಂದ 'ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯೇ ಪ್ರಪತ್ತಿ' ಎಂಬ ತನ್ನ ಮಾತಿಗೆ ವಿರೋಧ ಎಂದು ತಾತ್ಪರ್ಯ.

ಇನ್ನೂ ಅದರ ವಿವರಣೆ : ಎಲ್ಲಾ ತನ್ನ ಯತ್ನದ ನಿವೃತ್ತಿಯು ಪ್ರಪತ್ತಿ ಎಂದು ಹೇಳಲ್ಪಡುತ್ತದೆಯೇ ? ಅಥವಾ ಉಪಾಯಾಂತರ ವಿಷಯವಾದ ತನ್ನ ಪ್ರಯತ್ನದ ನಿವೃತ್ತಿಯು ಅದೋ ? ಎಂದು ವಿಕಲ್ಪಮಾಡಿ ಮೊದಲನೆಯದರಲ್ಲಿ ನಿವೃತ್ತಿ ವಿಷಯವಾದ ಸ್ವಯತ್ನಕ್ಕೆ ಬಿಡಲು ಆಗದಿರುವುದರಿಂದ ಸ್ವವ್ಯಾಘಾತ ಉಂಟಾಗುತ್ತದೆ.ಅಂದರೆ ಮನುಷ್ಯನು ಒಂದುಕ್ಷಣವೂ ಯಾವ ಯತ್ನವನ್ನೂ ಮಾಡದೆ ಇರಲಾರ. "ಜಾತುತಿಷ್ಠತ್ಯಕರ್ಮಕೃತ್" ಆದುದರಿಂದ ಅದಕ್ಕೆ ತಡೆಯಾಯಿತು.

ಎರಡನೆಯದರಲ್ಲೂ, ಬೇರೆ ಉಪಾಯದ ಅನುಷ್ಠಾನವು ಅಶಕ್ತಿಸಿದ್ಧವೋ ಅಥವಾ ಬುದ್ಧಿಪೂರ್ವಕವಾದದ್ದೋ ಎಂದು ವಿಕಲ್ಪಮಾಡಿ ಮೊದಲನೆಯದರಲ್ಲಿ ಅನಾದಿ ಯಾಗಿ ಮುಕ್ತಿಯೂ ಬರಬೇಕಾದ ಪ್ರಸಂಗ ; ಅಶಕ್ತಿಯು ಮೊದಲಿನಿಂದಲೂ ಉಪಾಯಾನುಷ್ಠಾನಕ್ಕೆ ಇದ್ದೇ ಇದೆ. ಆದುದರಿಂದ, ಕೊನೆಯದರಲ್ಲಿ, ಅದು ಭರ ನ್ಯಾಸದಿಂದ ಸಾಧ್ಯವಲ್ಲದ್ದರಿಂದ ಪ್ರಪತ್ತಿಯಲ್ಲ ಎಂದು ತಿಳಿಯತಕ್ಕದ್ದು, ಎಂದು ಅಭಿಪ್ರಾಯ. ಅಂದರೆ—

ಧರ್ಮತ್ಯಾಗಕ್ಕೂ—ತನ್ನನ್ನು ಕಾಪಾಡಿಕೊಳ್ಳುವುದಕ್ಕಾಗಿ ಮಾಡುವ ವ್ಯಾಪಾರ ನಿವೃತ್ತಿಗೂ, ತನ್ನನ್ನು ಕಾಪಾಡಿಕೊಳ್ಳುವುದಕ್ಕಾಗಿ ತಾನು ಮಾಡುವ ವ್ಯಾಪಾರ ರೂಪವಾದುದರಿಂದ ವಿಧೇಯತ್ವವು ಕೂಡುವುದಿಲ್ಲ.

'ನಾನು ಮೌನವಾಗಿರುವವನು' ಎಂದು ಹೇಳುವವನ ವಾಕ್ಯದಂತೆ ವ್ಯಾಘಾತ ಗ್ರಸ್ತವಾಗಿದೆ—ವ್ಯಾಘಾತದಿಂದ ಕೂಡಿದೆ ಮೌನಿಯಾದವನು ಮಾತನಾಡುತ್ತಾನೇನು ? ಅವನ ಮಾತು ಎಷ್ಟು ಅಸಂಬದ್ಧವೋ ಹಾಗೆ ಇವನದೂ ಕೂಡ ಎಂದು ಭಾವ. 'ನನ್ನ ತಾಯಿ ಬಂಜೆ' ಎಂದ ಒಬ್ಬನು ಹೇಳಿದಂತೆ. ಬಂಜೆಯಾಗಿದ್ದರೆ ಇವನನ್ನು ಹೇಗೆ ಹೆರುತ್ತಿದ್ದಳು ?

ಹೀಗೆ ಎರಡು ಕಾರಣಗಳಿಂದ ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯೇ ಪ್ರಪತ್ತಿಯೆಂಬ ಅಭಿಪ್ರಾಯವು ಸರಿಯಲ್ಲ ಎಂದು ತೋರಿಸಿ, ಈ ಪಕ್ಷದವರು ಪ್ರಪತ್ತಿಯು ಬೇಕಿಲ್ಲ ಎನ್ನುವ ತಮ್ಮ ಅಭಿಪ್ರಾಯದ ಮೇಲೆ ಆಪಾದಿಸುವ ದೋಷ ಗಳಿಗೆ ಸಮಾಧಾನವನ್ನು ಹೇಳುತ್ತಾರೆ ಆಚಾರ್ಯರು.

ಪ್ರಪದನಕ್ಕೆ ಸಾಧ್ಯೋಪಾಯ ರೂಪದಲ್ಲಿ ಸಾಧನತ್ವವನ್ನಾಗಲಿ ಅಥವಾ ಸಿದ್ಧೋಪಾಯತ್ವಕ್ಕೆ ಸಹಕಾರಿಯಾಗಿರುವುದನ್ನಾಗಲಿ ಅಙ್ಗೀಕರಿಸಿದರೆ, ಸಿದ್ಧೋ ಪಾಯವಾದ ಸರ್ವೇಶ್ವರನ ಏಕತ್ವ—ಒಬ್ಬನೇ ಎನ್ನುವುದಕ್ಕೂ, ಸಿದ್ಧತ್ವ—ಸಿದ್ಧೋಪಾಯನೆಂಬ ಭಾವಕ್ಕೂ, ಪರಮಚೇತನತ್ವ—ಆತನು ಸರ್ವೋತ್ಕೃಷ್ಟ ಚೇತನನು ಎಂಬುದರಿಂದ ಆ ಚೇತನ ಭಾವಕ್ಕೂ, ಪರಮ ಕಾರುಣಿಕತ್ವ—ಪರಮ ಕಾರುಣಿಕನೆಂಬ ಭಾವಕ್ಕೂ, ಸರ್ವಶಕ್ತಿತ್ವ—ಸರ್ವಶಕ್ತಿಯುಳ್ಳ ಭಾವಕ್ಕೂ, ನಿರಪೇಕ್ಷತ್ವ—ಆತನು ಯಾವುದನ್ನೂ ಅಪೇಕ್ಷಿಸದೇ ಇರುವ ಭಾವಕ್ಕೂ ಇವೇ ಮೊದಲಾದ ಗುಣವಿಶೇಷಗಳಿಗೆ ವಿರೋಧವು. ಅಲ್ಲದೆ ಸಾಧ್ಯೋಪಾಯ ಸಾಪೇಕ್ಷತ್ವವಿರುವದರಿಂದ ಈಶ್ವರನ ಪರಿಪೂರ್ಣತ್ವಕ್ಕೆ ವಿರೋಧವೂ ಉಂಟಾಗುತ್ತದೆ. ಹೀಗೆಂದು ಅವರು ಪ್ರಪತ್ತಿಯ ವಿಷಯದಲ್ಲಿ ಹೇಳುವ ದೋಷಗಳು.

೧. ಸಾಧ್ಯೋಪಾಯ ಒಂದು ಬೇಕು ಎಂಬುದರಿಂದ ಸಿದ್ಧೋಪಾಯನಾಗಿ ಒಬ್ಬನೇ ಎಂಬುದಕ್ಕೆ ಕುಂದಕವು.

೨. ಸಾಧ್ಯೋಪಾಯವೂ ಒಂದು ಬೇಕು ಎಂದರೆ ಸಿದ್ಧತ್ವಕ್ಕೆ ಹಾನಿಯು.

೩. ಗೋಪ್ತೃತ್ವವರಣದಮೂಲಕ ಅಂದರೆ 'ನನ್ನನ್ನು ಕಾಪಾಡು. ಅದಕ್ಕೆ ನಿನ್ನನ್ನು ವರಿಸಿದ್ದೇನೆ' ಎಂದು ತನ್ನ ಅಭಿಪ್ರಾಯವನ್ನು ತಿಳಿಸಬೇಕು ಎಂದರೆ ಸರ್ವೋತ್ಕೃಷ್ಟ ಚೇತನತ್ವಕ್ಕೆ ಕುಂದಕವು. ಸರ್ವಜ್ಞನಾದುದರಿಂದ ತಾನೇ ತಿಳಿಯ ತಕ್ಕದ್ದು.

೪. ಸಾಧ್ಯೋಪಾಯದಿಂದ ಆತನನ್ನು ವಶಮಾಡಿಕೊಳ್ಳಬೇಕು ಎಂದರೆ ಆತನ ಪರಮ ಕಾರುಣಿಕತ್ವಕ್ಕೆ ಭಂಗವು.

೫. 'ಪ್ರಪತ್ತಿಯ ಸಹಕಾರಿತ್ವವಿಲ್ಲದೆ ರಕ್ಷಿಸುವವನಲ್ಲ' ಎಂದರೆ ಪ್ರಪತ್ತಿ ಯಿಲ್ಲದೆ ಆತನಿಗೆ ರಕ್ಷಿಸಲು ಶಕ್ತಿಯಿಲ್ಲವೆಂದಾಗಿ ಸರ್ವಶಕ್ತಿತ್ವಕ್ಕೆ ವಿರೋಧವು.

೬. ಶಕ್ತನಾಗಿದ್ದರೂ ಪ್ರಪತ್ತಿಯ ಸಹಕಾರಿತ್ವವನ್ನು ಅಪೇಕ್ಷಿಸುವನೆಂದರೆ ಆತನ ನಿರಪೇಕ್ಷತ್ವಕ್ಕೆ ಕುಂದಕವು.

ಈ ರೀತಿ ಇವರು ಹೇಳುವ ಇವೆಲ್ಲಾ ಶ್ರುತಿಸ್ಮೃತಿಗಳಿಗೆ ವಿರೋಧವಾದವು. ವ್ಯಾಪ್ತಿಶೂನ್ಯತ್ವವೇ-ವ್ಯಾಪ್ತಿ ಇಲ್ಲದಿರೋಣವೇ ಮೊದಲಾದ ದೋಷಗಳಿಂದ ತರ್ಕಾ ಭಾಸಗಳು-ಕುತರ್ಕಗಳು.

**ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ**=ಮೋಕ್ಷವನ್ನು ಹೊಂದಲು ಬಯ ಸಿದವನಾಗಿ ನಾನು (ನಿನ್ನನ್ನು) ಮರೆಹೊಕ್ಕಿದ್ದೇನೆ.

**ಯಮೇವೈಷ ವೃಣುತೇ ತೇನಲಭ್ಯಃ**=ಯಾವನನ್ನು ಇವನು ವರಿಸುತ್ತಾನೋ ಅವನಿಂದ ಹೊಂದಲು ಸಾಧ್ಯವಾಗುತ್ತಾನೆ.

**ಓಮಿತ್ಯಾತ್ಮಾನಂ ಯುಂಜೀತ**='ಓಂ' ಎಂಬ ಪ್ರಣವವನ್ನು ಉಚ್ಚರಿಸಿ ತನ್ನನ್ನು ಅವನೊಡನೆ ಸೇರಿಸಬೇಕು.

**ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮಂತ್ರತಃ । ಜುಹುಯಾತ್ಪ್ರಣವೇ ನಾಗ್ನಾಅಚ್ಯುತಾಖ್ಯೇ ಸನಾತನೇ**=ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು 'ವಸುರಣ್ಯ' ಎಂಬ ಮಂತ್ರದಮೂಲಕ ಅಂದರೆ ಅದನ್ನು ಉಚ್ಚರಿಸುತ್ತಾ ಅಚ್ಯುತ ನೆಂಬ ಹೆಸರುಳ್ಳ ಸನಾತನವಾದ ಅಗ್ನಿಯಲ್ಲಿ ಪ್ರಣವದಿಂದ ಹೋಮ ಮಾಡಬೇಕು.

ಇವೇ ಮೊದಲಾದ ಶ್ರುತಿಗಳಲ್ಲಿ ಸಾಧ್ಯೋಪಾಯ ಸಾಪೇಕ್ಷನು ಪರಮಾತ್ಮನು ಎಂದು ಹೇಳಿದೆ.

ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾವಾ[1] ಮಹಾಮತೇ ।
ಪ್ರಾಪ್ಯೋಽಹಂ ನಾನ್ಯಥಾ ಪ್ರಾಪ್ಯೋ ಮಮಕೈಙ್ಕರ್ಯಲಿಪ್ಸುಭಿಃ ॥

ನನಗೆ ಕೈಙ್ಕರ್ಯವನ್ನು ಮಾಡಬೇಕೆಂದು ಬಯಸುವವರಿಗೆ, ಹೆಚ್ಚಾಗಿ ನನ್ನಲ್ಲಿ ಭಕ್ತಿಮಾಡುವವರಿಗೂ ಅಥವಾ ನನ್ನಲ್ಲಿ ಪ್ರಪತ್ತಿ ಮಾಡುವವರಿಗೂ ನಾನು ಸಿಕ್ಕುತ್ತೇನೆ. ಖಂಡಿತವಾಗಿಯೂ ನನ್ನನ್ನು ಹೊಂದಲು ಬೇರೆ ದಾರಿಯೇ ಇಲ್ಲ ಎಂಬ ಸ್ಮೃತಿಗೂ ವಿರೋಧ. ವಿಭೀಷಣ, ಗಜೇಂದ್ರ, ಕಾಕ, ಕಾಳಿಯ, ಗೊಲ್ಲರು ಇವೇ ಮೊದಲಾದವರು ಪ್ರಪದನವನ್ನು ಅನುಷ್ಠಿಸಿದರೆಂದು ಪುರಾಣಾದಿಗಳಲ್ಲಿ ಹೇಳಲ್ಪಟ್ಟಿದೆ.

[2]ಕಯಾಧುಸುತ ವಾಯಸ ದ್ವಿರದ ಪುಙ್ಗವ ದ್ರೌಪದೀ-
ವಿಭೀಷಣ ಭುಜಙ್ಗಮ ವ್ರಜಗಣಾಮ್ಬರೀಷಾದಯಃ ।
ಭವತ್ಪದಸಮಾಶ್ರಿತಾ ಭಯ ವಿಮುಕ್ತಿಮಾಪ್ರುರ್ಯಥಾ
ಲಭೇಮಹಿ ತಥಾವಯಂ ಸಪದಿ ರಙ್ಗನಾಥತ್ವಯಾ ॥

ಓ ರಂಗನಾಥ ! ನಿನ್ನ ಪಾದಗಳನ್ನು ಶರಣು ಹೊಂದಿ ಕೆಲವರು ಹಲವು ವಿಧದಿಂದ ತಮ್ಮ ತಮ್ಮ ಭಯವನ್ನು ನೀಗಿದ್ದಾರೆ, ಪ್ರಹ್ಲಾದನಿಗೆ ತಂದೆಯಾದ ಹಿರಣ್ಯಕಶಿಪುವಿನಿಂದ ಉಂಟಾದ ಭಯ ನೀಗಿತು. ಸೀತೆಯಲ್ಲಿ ಅಪರಾಧಮಾಡಿದ ಕಾಗೆಯು ರಾಮನ ಬ್ರಹ್ಮಾಸ್ತ್ರದಿಂದ ಉಂಟಾದ ಭಯವನ್ನು ಹೋಗಲಾಡಿಸಿಕೊಂಡಿತು. ಗಜೇಂದ್ರನು ಮೊಸಳೆ ಬಾಯಿಂದ ಬಿಡಲ್ಪಟ್ಟನು. ದ್ರೌಪದಿಗೆ

1. ಉಪಾಯ ಭಕ್ತಿಃ ಪ್ರಾರಬ್ಧ ವ್ಯತಿರಿಕ್ತಾಘನಾಶಿನೀ ।
ಸಾಧ್ಯಭಕ್ತಿಸ್ತು ಸಾಹನ್ತ್ರೀ ಪ್ರಾರಬ್ಧಸ್ಯಾಪಿಭೂಯಸೀ ॥

ಇದು ಸಾತ್ಯಕಿ ತನ್ತ್ರದ ಶ್ಲೋಕ. (ಸಾಧನ ಭಕ್ತಿ) ಭಕ್ತಿಯೋಗವು ಪ್ರಾರಬ್ಧಕ್ಕಿಂತ ಬೇರೆಯಾದ ಪಾಪವನ್ನು ನಾಶಮಾಡುತ್ತದೆ.

ಸಾಧ್ಯಭಕ್ತಿ ಪ್ರಾರಬ್ಧಕರ್ಮಗಳು ಎಷ್ಟೇ ಇದ್ದರೂ ಅವೆಲ್ಲವನ್ನೂ ಹಾಳುಮಾಡುತ್ತದೆ.

ಈ ಶ್ಲೋಕದಿಂದ ನಾವು ಅರಿಯುವ ವಿಷಯ, ಭಕ್ತಿಯೋಗವೂ, ಪ್ರಪತ್ತಿಯೂ ಬೇರೆಬೇರೆಯಾದವು. ಎರಡೂ ಒಂದೇ ಅಲ್ಲ ಎಂದು ಸ್ಪಷ್ಟವಾಗಿ ತಿಳಿಯಬಹುದು.

2. ಅಭೀತಿಸ್ತವ-೧೧.

ದುಶ್ಶಾಸನನೇ ಮೊದಲಾದವರಿಂದ ಬಂದ ಅನಿಷ್ಟವು ತೊಲಗಿತು. ವಿಭೀಷಣನು ನಿನ್ನನ್ನು ಮರೆಹೊಕ್ಕು ನಿಷ್ಕಂಟಕವಾದ ಲಂಕೈಶ್ವರ್ಯವನ್ನು ಪಡೆದ, ನಿನ್ನ ಪಾದಗಳಿಂದ ತುಳಿಯಲ್ಪಟ್ಟ ಕಾಳಿಂಗ ಸರ್ಪಕ್ಕೆ ಆ ಕಷ್ಟವು ನೀಗಿತು. ಅಂಬರೀಷ ಮಹಾರಾಜನು ದುರ್ವಾಸ ಮಹರ್ಷಿಯು ಶಾಪದಿಂದ ತಪ್ಪಿಸಿಕೊಂಡನು. ಇನ್ನೂ ಕೆಲವರು ನಿನ್ನನ್ನು ಶರಣು ಹೋಗಿ ಭಯದಿಂದ ಬಿಡಲ್ಪಟ್ಟವರಾಗಿ ಒಳ್ಳೆಯದನ್ನು ಹೊಂದಿದ್ದಾರೆ. ಹಾಗೆಯೇ ನಾವೂ ನಿನ್ನನ್ನು ಶರಣುಹೊಂದಿದ ಕೂಡಲೇ ಭಯವಿಲ್ಲದವರಾಗಿ ಬಾಳುವೆವು ಎಂದು ವೇದಾಂತಾಚಾರ್ಯರು ಅಭೀತಿಸ್ತವದಲ್ಲಿ ಪ್ರಾರ್ಥನೆಮಾಡಿದ್ದಾರೆ.

ಈ ಸಂದರ್ಭದಲ್ಲಿ ಪರೀಕ್ಷಿತ್ ಮಹಾರಾಜನ ಮತ್ತು ಖಟ್ವಾಙ್ಗನ ಕಥೆಯನ್ನು ಅರಿಯೋಣ. ಅಲ್ಪ ಕಾಲದಲ್ಲಿಯೇ ಉಪಾಯಪೂರ್ತಿಯಾಗಿ ಮೋಕ್ಷವನ್ನು ಪಡೆಯಬಹುದೆಂದು ತಿಳಿಯಬಹುದು.

ಪರೀಕ್ಷಿತ್ತು ಕಾಡಿಗೆ ಬೇಟೆಗೆ ಹೋದಾಗ ಋಷಿಗೆ ಅಪಚಾರ ಮಾಡಿದನು. ಇದರ ಪರಿಣಾಮವಾಗಿ ತಾನು ಏಳುದಿನದಲ್ಲಿ ಸಾಯುವೆನೆಂದು ಅರಿತನು. ...ಟ್ಟರೊಳಗೆ ಶ್ರೇಯಸ್ಸನ್ನು ಪಡೆಯಬೇಕೆಂದು ಬಯಸಿದನು. ಅದೃಷ್ಟವಶದಿಂದ ಶ್ರೀ ಶುಕ ಮಹರ್ಷಿಯು ಭೇಟಿಯಾಯಿತು. ಪ್ರಾರ್ಥನೆ ಮಾಡಿದನು. ಅವರ ಅನುಗ್ರಹಕ್ಕೆ ಪಾತ್ರನಾಗಿ ಶ್ರೀಕೃಷ್ಣನ ಕಥೆಯನ್ನು ಅವರ ಮುಖದಿಂದ ಕೇಳಿ ಬ್ರಹ್ಮಭಾವ-ಮೋಕ್ಷ ಅದನ್ನು ಪಡೆದನೆಂದು ಶ್ರೀಭಾಗವತ ಕಥೆಯಲ್ಲಿದೆ.

ಖಟ್ವಾಙ್ಗನೆಂಬ ಒಬ್ಬ ರಾಜರ್ಷಿಯು ಇದ್ದನು. ಬಹಳ ಧರ್ಮಿಷ್ಠ ಮತ್ತು ಜ್ಞಾನಿ. ಪ್ರಪಂಚವೆಲ್ಲಾ ಬ್ರಹ್ಮಾತ್ಮಕವಾದದ್ದೆಂಬುದನ್ನು ಅರಿತಿದ್ದನು. ಆದರೂ ದೇವತೆಗಳಿಗೂ ಅಸುರರಿಗೂ ಯುದ್ಧವೊದಗಿದಾಗ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಅವರ ಸಹಾಯಕ್ಕಾಗಿ ಹೋಗಿ ಅವರಿಗೆ ಒಳ್ಳೆಯದನ್ನು ಮಾಡಿ ಅವರ ಪ್ರೀತಿಗೆ ಪಾತ್ರನಾದನು. ಅವರು ಇವನಿಗೆ ವರವನ್ನು ಕೊಡುತ್ತೇವೆಂದಾಗ ತನ್ನ ಆಯಸ್ಸು ಎಷ್ಟು ಮಿಕ್ಕಿದೆ ಎಂದು ತಿಳಿಸಿದರೆ ಸಾಕೆಂದನು. ಅವರು 'ಒಂದು[1] ಮುಹೂರ್ತ ಅಂದರೆ ಎರಡು ಘಳಿಗೆ ಮಾತ್ರ ಮಿಕ್ಕಿದೆ' ಎಂದರು. ಒಡನೆ ವೇಗವಾಗಿ ತನ್ನ ವಿಮಾನದಿಂದ ಮರ್ತ್ಯಲೋಕಕ್ಕೆ ಹಿಂತಿರುಗಿದನು. ಆಗ ಈ ಮಾತನ್ನು ಹೇಳುತ್ತಾನೆ.

ಯಥಾ ನಬ್ರಾಹ್ಮಣೇಭ್ಯಸ್ಸಕಾಶಾದಾತ್ಮಾಪಿಮೇಪ್ರಿಯತರಃ—ಆತ್ಮವು ಎಲ್ಲರಿಗೂ ಪ್ರಿಯತಮವಾದದ್ದು. ನನಗೆ ನನ್ನ ಆತ್ಮಕ್ಕಿಂತ ಬ್ರಹ್ಮ ಜ್ಞಾನಿಗಳು ಪ್ರಿಯತಮರು. ಅವರ ಇಷ್ಟಾರ್ಥವನ್ನು ಈಡೇರಿಸುವುದು ಇಷ್ಟವಾದದ್ದು ಎಂದು ನನ್ನ ಭಾವನೆ. ಹಾಗೆ ನನ್ನ ಆತ್ಮವು ಅದಕ್ಕಿಂತ ಪ್ರಿಯವಾದದ್ದಲ್ಲವೆಂದು ನಾನು ಭಾವಿಸಿದ್ದರೆ,

1. ಮುಹೂರ್ತಮಲ್ಪಕಾಲಸ್ಸ್ಯಾತ್ ಘಟಿಕಾದ್ವಿತ್ತಯೇಽಪಿಚಾ ॥
ಎಂದು ಕೋಶ ಹೇಳುತ್ತದೆ.

ನಚ ಸ್ವಧರ್ಮೋಲ್ಲಂಘನಂ ಮಯಾಕದಾಚಿದಪ್ಯನುಷ್ಠಿತಂ—ನಾನು ಯಾವಾಗಲೂ ನನ್ನ ಧರ್ಮವನ್ನು ಮೀರಿ ನಡೆಯದೆ ಇದ್ದರೆ, ಸಕಲ ದೇವ ಮಾನುಷ ಪಶುಪಕ್ಷಿವೃಕ್ಷಾದಿಕೇಷ್ವಚ್ಯುತವ್ಯತಿರೇಕವತೀದೃಷ್ಟಿರ್ಮಮಾಭೂತ್ — ದೇವರು, ಮನುಷ್ಯರು, ಪಶುಗಳು, ಪಕ್ಷಿಗಳು, ಮರ ಮುಂತಾದವು ಇವುಗಳಲ್ಲಿ ಅಚ್ಯುತನಿಗಿಂತ ಬೇರೆಯಾದ ದೃಷ್ಟಿ ಇರಲಿಲ್ಲವಾದರೆ, ತಥಾ ತಮೇವಂ ಮುನಿಜನಾನುಸ್ಮೃತಂ ಭಗವಂತಮಸ್ಖಲಿತಗತಿಃ ಪ್ರಾಪಯೇಯಂ—ನಾನು ನಿರ್ವಿಘ್ನವಾಗಿ ಮುನಿಜನರಿಂದ ಧ್ಯಾನಿಸಲ್ಪಟ್ಟ ಪ್ರಭುವನ್ನು ಹೊಂದುವೆನು. ಹೀಗೆಂದು ಹೇಳುತ್ತಿರುವ ಖಟ್ವಾಙ್ಗರಾಜನು ಎಲ್ಲಾ ದೇವತೆಗಳಿಗೂ ಗುರುವಾದ, ಹೀಗೆಂದು ಇಷ್ಟೆಂದು ನಿರ್ದೇಶಮಾಡಿ ಹೇಳಲಾಗದ ಸ್ವರೂಪವುಳ್ಳ, ಸತ್ತಾ ಮಾತ್ರ ಶರೀರನಾದ ಪರಮಾತ್ಮನಾದ ಭಗವಂತ ವಾಸುದೇವನಲ್ಲಿ ತನ್ನ ಮನಸ್ಸನ್ನು ಇಟ್ಟನು ಮತ್ತು ಅವನಲ್ಲೇ ಲಯವಾದನು. ಈ ವಿಷಯದಲ್ಲೂ ಕೂಡ ಪೂರ್ವಕಾಲದಲ್ಲಿ ಸಪ್ತರ್ಷಿಗಳ ಮೂಲಕ ಹೇಳಲ್ಪಡುವ ಶ್ಲೋಕವು ಕೇಳಲ್ಪಡುತ್ತದೆ—

ಖಟ್ವಾಙ್ಗೇನ ಸಮೋನಾನ್ಯಃ[1] ಕಶ್ಚಿದುರ್ವ್ಯಾಂ ಭವಿಷ್ಯತಿ ।
ಯೇನ ಸ್ವರ್ಗಾದಿಹಾಗಮ್ಯ ಮುಹೂರ್ತಂ ಪ್ರಾಪ್ಯಜೀವಿತಮ್ ।
ತ್ರಯೋಽತಿಸಂಹಿತಾಲೋಕಾಬುದ್ಧ್ಯಾ ಸತ್ಯೇನಚೈವಹಿ ॥

ಖಟ್ವಾಙ್ಗನಿಗೆ ಸಮನಾದ ರಾಜನು ಇಡೀ ಪೃಥ್ವಿಯಲ್ಲೇ ಮತ್ತೊಬ್ಬನಿಲ್ಲ. ಇವನು ಒಂದು ಮುಹೂರ್ತಕಾಲ ತಾನು ಬದುಕಿರುವೆನೆಂದು ತಿಳಿದು ಸ್ವರ್ಗದಿಂದ ಭೂಮಂಡಲಕ್ಕೆ ಓಡಿಬಂದು ತನ್ನ ಬುದ್ಧಿಯ ಮೂಲಕ ಮೂರು ಲೋಕವನ್ನೂ ದಾಟಿ ಸತ್ಯಸ್ವರೂಪನಾದ ಭಗವಂತ ವಾಸುದೇವನನ್ನು ಪಡೆದನಲ್ಲಾ! ಕ್ಷಣಕಾಲದಲ್ಲಿಯೇ ಶಾಶ್ವತವಾದ ಭಗವತ್ಕೈಂಕರ್ಯವನ್ನು ಪಡೆದ.

ಈ ಕಥೆಯನ್ನು ಅನುಸಂಧಾನ ಮಾಡುವವರಿಗೆ, ಅನೇಕವಾದ ಜನ್ಮಗಳನ್ನೆತ್ತಿ ಯಾವಾಗಲೂ ತೈಲಧಾರೆಯಂತೆ ಅವಿಚ್ಛಿನ್ನವಾಗಿ ತನ್ನ ಮನಸ್ಸನ್ನು ಭಗವಂತನಲ್ಲಿಟ್ಟು ಧ್ಯಾನಮಾಡುವ ರೂಪವಾದ ಭಕ್ತಿಯೋಗದಿಂದ ಪಡೆಯುವ ಪದವಿಯನ್ನು ಅಲ್ಪಕಾಲ ಸಾಧ್ಯವಾದ ಯೋಗವಿಶೇಷದಿಂದ ಪಡೆಯಬಹುದೆಂಬುದು ವ್ಯಕ್ತವಾಗುತ್ತದೆ. ಪ್ರಣವವೆಂಬ ಬಿಲ್ಲಿನಲ್ಲಿ ಆತ್ಮವೆಂಬ ಬಾಣವನ್ನು ಹೂಡಿ ಬ್ರಹ್ಮವೆಂಬ ಗುರಿಯಲ್ಲಿ ಬಿಟ್ಟ. ಬ್ರಹ್ಮಭಾವವನ್ನು ಪಡೆದ. ಮಾಯೆಯೆಂಬ ಅಸುರನನ್ನು ಸಂಹಾರ ಮಾಡಲು ಸಮರ್ಥನಲ್ಲವೇ ರಾಜ.

---

1. ವಿ. ಪು. ೪. ೪. ೮೨.

ಭಗವಂತನ ಏಕತ್ವ, ಸಿದ್ಧತ್ವ, ಪರಮಚೇತನತ್ವ, ಪರಮಕಾರುಣಿಕತ್ವ, ಸರ್ವಶಕ್ತಿತ್ವ ನಿರಪೇಕ್ಷತ್ವಗಳಿಗೆ ಏನೊಂದೂ ವಿರೋಧವಿಲ್ಲ. ಹಾಗೆ ವಿರುದ್ಧವಾಗಿದ್ದರೆ ಮಹರ್ಷಿಗಳು ಉಪಪಾದನೆ ಮಾಡುತ್ತಿದ್ದರೇ ? ಹಾಗೆಯೇ ಸರ್ವೇಶ್ವರನು ಸರ್ವಜ್ಞನಾಗಿ, ಪರಮಕಾರುಣಿಕನಾಗಿ ಇದ್ದರೂ ಧ್ರುವನು ತಪಸ್ಸನ್ನು ಮಾಡಿದ ನಂತರವೇ, ಅದನ್ನು ಸಾಧನವೆಂದು ಭಾವಿಸಿ ಆತನ ಅಭೀಷ್ಟವನ್ನು ನಡೆಸಿಕೊಟ್ಟನು.

೧. ಎಲ್ಲಿ ಸಹಕಾರಿ ಸಾಪೇಕ್ಷತ್ತ್ವವಿದೆಯೋ ಅಲ್ಲಿ ಏಕತ್ವವಿರುವುದಿಲ್ಲವೆಂದು ಹೇಳಬೇಕಾಗುತ್ತದೆ. ಇದು ಪೂರ್ವಪಕ್ಷಿಗಳ ಮಾತು. ಸಹಕಾರಿ ಸಾಪೇಕ್ಷತ್ತ್ವವಿದ್ದರೂ ಏಕತ್ವವಿರುವುದುಂಟು. ಭಗವಂತನು ಒಬ್ಬನಾಗಿಯೇ ಅನೇಕ ನಿತ್ಯಸೂರಿಗಳ ಸಹಕಾರಿತ್ವವನ್ನು ಹೊಂದಿರುವನು.

೨. ಎಲ್ಲಿ ಸಹಕಾರಿ ಸಾಪೇಕ್ಷತ್ತ್ವವಿದೆಯೋ ಅಲ್ಲಿ ಸಿದ್ಧತ್ವವಿಲ್ಲವೆಂದು ಹೇಳಬೇಕಾಗುತ್ತದೆ ಎಂದೂ ಹೇಳುತ್ತಾರೆ. ಆದರೆ ಸಿದ್ಧತ್ವವಿದ್ದು ಸಹಕಾರಿ ಸಾಪೇಕ್ಷತ್ತ್ವವುಂಟು. ರಾಜರುಗಳು ಸಿದ್ಧರಾಗಿದ್ದರೂ ವಿಶೇಷ ಸಹಕಾರಿ ಸಾಪೇಕ್ಷತ್ತ್ವವುಳ್ಳವರಾಗಿರುತ್ತಾರೆ.

೩. ಹಾಗೆಯೇ ಎಲ್ಲಿ ಸಹಕಾರಿ ಸಾಪೇಕ್ಷತ್ತ್ವವಿದೆಯೋ, ಅಲ್ಲಿ ಪರಮಚೇತನತ್ವವಿಲ್ಲ. ಅಲ್ಲಿ ಪರಮಕಾರುಣಿಕತ್ವವಿಲ್ಲ. ಅಲ್ಲಿ ಸರ್ವಶಕ್ತಿತ್ವವಿಲ್ಲ ಎಂಬುದಾಗಿ ಎಲ್ಲಾ ಹೇಳುತ್ತಾರೆ. ಪರಮಚೇತನನಾದ, ಪರಮಕಾರುಣಿಕನಾದ, ಸರ್ವಶಕ್ತನಾದ ಶ್ರೀರಾಮನು, ಸುಗ್ರೀವಾದಿಗಳ ಸಹಕಾರವನ್ನು ಬಯಸಿದನು.

**'ಪಿಶಾಚಾನ್ ದಾನವಾನ್ ಯಕ್ಷಾನ್, ಅಂಗುಳ್ಯಗ್ರೇಣತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ'** ಎಂದು ಶ್ರೀರಾಮನು ಹೇಳಿಯೂ ಕೂಡ, **ಲೋಕನಾಥಃ ಪುರಂಭೂತ್ವಾ ಸುಗ್ರೀವಂನಾಥಮಿಚ್ಛತಿ ||** ಎಂದು ಹೇಳಿರುವ ಹಾಗೆ ಸುಗ್ರೀವಾದಿಗಳ ಸಹಾಯವನ್ನು ಬಯಸಿದನು. ಹೀಗೆ ವ್ಯಾಪ್ತಿಶೂನ್ಯತೆ ಎಂಬ ದೋಷವೂ ಉಂಟಾಗುವುದರಿಂದ ತರ್ಕಾಭಾನವೆಂಬ ಭಾವವು.

**"ಯತ್ರ ಸಹಕಾರಿಸಾಪೇಕ್ಷತ್ವಮ್ ತತ್ರೈಕತ್ವಾಭಾವ ಸಿದ್ಧತ್ವಾಭಾವಃ ಇತಿ ವ್ಯಾಪ್ತ್ಯಾದ್ಯ ಭಾವತ್ವಾತ್"** ಎಂದು ರಹಸ್ಯತ್ರಯಸಾರದ ಸಾರಾಸ್ವಾದಿನೀ ವ್ಯಾಖ್ಯಾಕಾರರು ಕಾರಣವನ್ನೂ ಹೇಳಿ ಉಪಪಾದನೆ ಮಾಡಿದ್ದಾರೆ. ವ್ಯಾಪ್ತಿಯು ತರ್ಕಕ್ಕೆ ಅಂಗ, ಅದಿಲ್ಲ ಇಲ್ಲಿ. ಆದುದರಿಂದ ಈ ತರ್ಕ ದುಷ್ಟವಾಯಿತು. ಸಹಕಾರವನ್ನು ಅಪೇಕ್ಷಿಸದೆ ಅವನು ಮೋಕ್ಷಪ್ರದನಾದರೆ ಅವನು ಪಕ್ಷಪಾತಿಯಾಗುತ್ತಾನೆ. ಇವೇ ಮೊದಲಾದ ದೋಷಗಳು ಉಂಟಾಗುತ್ತವೆ.

ಈ ಮೇಲೆ ಹೇಳಿದ ಆಕ್ಷೇಪಗಳಿದ್ದರೂ ಇವನ್ನು ಸತ್ತರ್ಕವೆಂದು ಅಂಗೀಕರಿಸಿದರೆ ? ಅಂದರೆ, ಸರ್ವೇಶ್ವರನ ಏಕತ್ವ ಸಿದ್ಧತ್ವ ಪರಮಕಾರುಣಿಕತ್ವಾದಿಗಳಿಗೆ ವಿರೋಧವಾಗುತ್ತದೆ ಎಂಬ ವಾದವು ಸರಿಯಾದದ್ದೆಂದು ಒಪ್ಪಿದರೂ, ಪ್ರಪತ್ತಿಗೆ ಸಾಧನತ್ವವನ್ನು ಒಪ್ಪದವರು ಉಪಾಸನಕ್ಕೆ ಸಾಧನತ್ವವನ್ನು ಒಪ್ಪುತ್ತಾರಲ್ಲಾ ಆಗಲೂ ಏಕತ್ವ, ಸಿದ್ಧತ್ವ, ಪರಮಚೇತನತ್ವ, ಪರಮಕಾರುಣಿಕತ್ವ, ಸರ್ವಶಕ್ತಿತ್ವ, ನಿರಪೇಕ್ಷತ್ವ ಮೊದಲಾದ ಸ್ವಭಾವ ವಿಶೇಷಗಳಿಗೆ ವಿರೋಧವಾಗುವುದಿಲ್ಲವೇ ? ಇಲ್ಲಿ ವಿರುದ್ಧವಲ್ಲವಾದರೆ ಪ್ರಪತ್ತಿ ವಿಷಯದಲ್ಲೂ ವಿರುದ್ಧವಲ್ಲ ಎಂದು ಹೇಳಲು ಅಡ್ಡಿಯೇ ಇಲ್ಲ.

ಈ ಆಕ್ಷೇಪಣೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಉಪಾಸನವೂ ಸಾಧನವಲ್ಲವೆಂದೇ ಹೇಳುತ್ತೇವೆ ಎಂದರೆ ಆಗಲೂ ದೋಷ ತಪ್ಪಿದ್ದಲ್ಲವೆಂದು ತೋರಿಸುತ್ತಾರೆ.

ಉಪಾಸನವೂ ಕೂಡ ಪ್ರಪತ್ತಿಯ ಹಾಗೆ ಸಾಧನವಲ್ಲವೆಂದರೆ 'ಸರ್ವಧರ್ಮಾನ್ ಪರಿತ್ಯಜ್ಯ=ಎಲ್ಲಾ ಧರ್ಮಗಳನ್ನೂ ಬಿಟ್ಟು' ಎಂಬುದಕ್ಕೆ ವ್ಯಾಖ್ಯಾನ ಮಾಡುವಾಗ ಧರ್ಮ ಶಬ್ದವು ಅಲೌಕಿಕ ಶ್ರೇಯಸ್ಸಾಧನವಾದ ಉಪಾಸನೆಯನ್ನು ಹೇಳುತ್ತದೆ ಎಂದು ಹೇಳಿರುವುದರಿಂದ ತನ್ನ ಮಾತಿಗೇ ವಿರೋಧವಾಗುತ್ತದೆ. ಇದನ್ನು ತಪ್ಪಿಸಿಕೊಳ್ಳುವುದಕ್ಕಾಗಿ "ಅರ್ಜುನನು ಧರ್ಮವಲ್ಲದುದನ್ನು ಧರ್ಮವೆಂದು ಭ್ರಮಿಸಿದನಲ್ಲಾ", ಆ ರೀತಿಯಾದ ಧರ್ಮವನ್ನು ಈ 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬಲ್ಲಿ ಧರ್ಮ ಶಬ್ದದಿಂದ ಹೇಳಲ್ಪಟ್ಟಿತು.

ಆ ಕಾರಣದಿಂದ ಸ್ವವಚನ ವಿರೋಧವಿಲ್ಲವೆಂದು ಹೇಳಲುಸಾಧ್ಯವಲ್ಲ ಎಂದರೆ ಆಗಲೂ ದೋಷವು ತಪ್ಪಿದ್ದಲ್ಲವೆಂದು ಆಚಾರ್ಯರು ಆ ದೋಷವನ್ನು ತೋರಿಸುತ್ತಾರೆ.

ಮೊದಲು ತಮ್ಮ ಗ್ರಂಥಗಳಲ್ಲಿ ಧರ್ಮ ಶಬ್ದಕ್ಕೆ ಮೋಕ್ಷಸಾಧನವೆಂದು ಹೇಳಿ, ಈಗ ಸಾಧನವಲ್ಲ ಎಂದರೆ ಸ್ವವಚನ ವಿರೋಧ ಅಲ್ಲವೇ ? ನಿಜವಾಗಿ ಉಪಾಯವಲ್ಲದ್ದನ್ನೇ ಉಪಾಯ ಎಂದು ಉಪದೇಶಿಸಿ ಈ ಅನ್ಯಪರವಾದುದನ್ನು ಹೇಳಿ ಭ್ರಮೆಯನ್ನುಂಟುಮಾಡಿದ್ದಾನೆಂದರೆ—

"ಶೆರುಕ್ಕಡಕ್ಕುಕ್ಕೈಕ್ಕಾಕವೇಣ್ಡಾಚ್ಚುಮ್ಮೈಕಳೈಯೆಡುಪ್ಪಿಕ್ಕೈಯಾಲೆ ಅನ್ಯಪರಮಾನ ಉಪದೇಶತ್ತಾಲೇ ಪಿರನ್ದ ಅರ್ಜುನಬುದ್ಧಿಯಾಲೇ ಧರ್ಮಮೆನ್ರು ತೋತ್ತಿನವತ್ತೈ 'ಸರ್ವಧರ್ಮಾನ್' ಎನ್ನು ಅನುವದಿಕ್ಕಿರದು ಎನ್ನಿಲ್".

ಶೆರಕ್ಕು=ಗರ್ವ, ತನ್ನಿಂದ ಆಗದದ್ದನ್ನು ನಿರ್ವಹಣ ಮಾಡುತ್ತೇನೆ—ಹೊರು ತ್ತೇನೆ ಎಂಬ ಅಭಿಮಾನ. ಇದು ಹೇಗೆಂದರೆ, ಮದಿಸಿದ ಗೂಳಿಯ ಗರ್ವವನ್ನು ಮುರಿಯುವುದಕ್ಕಾಗಿ ಅದರ ಮೇಲೆ ತುಂಬಾ ಭಾರವಾದ ಮರಳು ತುಂಬಿದ ಚೀಲ ಗಳನ್ನು ಹೊರಿಸುವ ಹಾಗೆ, ನಿರರ್ಥಕವಾದ ಉಪದೇಶದಿಂದ ಹುಟ್ಟಿದ ಅಂದರೆ ಉಪಾಯಗಳಲ್ಲದ ಕರ್ಮಯೋಗಾದಿಗಳನ್ನು ಉಪಾಯವೆಂದು ಉಪದೇಶ ಮಾಡುವುದ ರಿಂದ ಹುಟ್ಟಿದ ಅರ್ಜುನನ ಬುದ್ಧಿಗೆ ಧರ್ಮವಾಗಿ ತೋರಿದುದನ್ನು 'ಸರ್ವಧರ್ಮಾನ್' ಎಂಬಲ್ಲಿಯ ಧರ್ಮಶಬ್ದವು ಹೇಳುತ್ತದೆ ಎಂದರೆ ಆಗ ಶಾಸ್ತ್ರವು ಬೋಧಿಸುವ ಕರ್ಮ ಯೋಗಾದಿ ರೂಪವಾದ ನಿವೃತ್ತಿರೂಪಧರ್ಮವೇ ಧರ್ಮವಲ್ಲದಿರುವುದರಿಂದ ಪ್ರವೃತ್ತಿ ರೂಪ ಧರ್ಮವೂ ಧರ್ಮವಲ್ಲದುದಾಗಿ ಶಾಸ್ತ್ರವೇ ಪ್ರಮಾಣವಲ್ಲದೆ ನಿರರ್ಥಕವಾಗಿ ಬಾಹ್ಯ ಕುದೃಷ್ಟಿಗಳ ಅಭಿಪ್ರಾಯಕ್ಕೆ ಸಮಾನವಾಗುತ್ತದೆಂದು ಹೇಳುತ್ತಾರೆ. ಇಲ್ಲಿ ಪೂರ್ವಪಕ್ಷಿಗಳು ಕರ್ಮಯೋಗಾದಿ ಸಾಧನಗಳನ್ನು ಧರ್ಮವಲ್ಲವೆಂದು ಸಮಾಧಾನ ಹೇಳಿದರು. ಆದರೆ ಶಾಸ್ತ್ರಗಳಲ್ಲಿ ಈ ಕರ್ಮಯೋಗಾದಿ ಧರ್ಮಗಳು ಪರಮಧರ್ಮ ಗಳಾಗಿ ಹೇಳಲ್ಪಟ್ಟಿವೆ. ಇದನ್ನು ತೋರಿಸಲು ಮೂರು ಪ್ರಮಾಣಗಳನ್ನು ಉದಾಹರಿಸುತ್ತಾರೆ.

> ಇಜ್ಯಾಚಾರದಮಾ ಹಿಂಸಾದಾನಸ್ವಾಧ್ಯಾಯಕರ್ಮಣಾಮ್ ।
> ಅಯಂತು ಪರಮೋಧರ್ಮೋ ಯದ್ಯೋಗೇನಾತ್ಮದರ್ಶನಮ್ ॥
> ಸರ್ವೇಷಾ ಮೇವ ಧರ್ಮಾಣಾಮುತ್ತಮೋ ವೈಷ್ಣವೋ ವಿಧಿಃ ।
> ನವಿಷ್ಣ್ವಾ ರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಮ್ ॥

೧. ಇಜ್ಯಾ=ಭಗವದಾರಾಧನವೂ, ಆಚಾರ–ನಿತ್ಯ ನೈಮಿತ್ತಿಕ ಕರ್ಮಾನು ಷ್ಠಾನವೂ, ದಮ–ಇಂದ್ರಿಯನಿಗ್ರಹವೂ, ಅಹಿಂಸಾ–ಪ್ರಾಣಿಹಿಂಸೆಮಾಡದಿರೋಣವೂ, ದಾನ–ತನ್ನಲ್ಲಿರುವ ದ್ರವ್ಯ ಮೊದಲಾದವುಗಳನ್ನು ಸತ್ಪಾತ್ರದಲ್ಲಿ ಉಚಿತವಾಗಿ ಫಲಾ ಪೇಕ್ಷೆಯಿಲ್ಲದೆ ಅರ್ಪಿಸೋಣವೂ, ಸ್ವಾಧ್ಯಾಯ–ವೇದಾಧ್ಯಯನ ಮಾಡೋಣವೂ, ಕರ್ಮಣಾಂ–ಸಪ್ತಮ್ಯರ್ಥದಲ್ಲಿ ಷಷ್ಠಿಯು, ಕರ್ಮಗಳ ಮಧ್ಯದಲ್ಲಿ, ಯತ್–ಯಾವುದು ಯೋಗೇನ–ಕರ್ಮಯೋಗಾದಿ ಭಕ್ತಿಯೋಗಗಳ ಮೂಲಕ, ಆತ್ಮದರ್ಶನಮ್-ಮೊದಲು ಆತ್ಮಾವಲೋಕನ ಉಂಟಾಗಿ ಅನಂತರ ಪರಮಾತ್ಮ ಸಾಕ್ಷಾತ್ಕಾರ ಉಂಟಾಗುತ್ತದೊ, ಅಯಂ–ಇದು ಪರಮೋಧರ್ಮಃ–ಸರ್ವೋತ್ಕೃಷ್ಟವಾದ ನಿವೃತ್ತಿ ರೂಪ ಧರ್ಮವು. ಆದುದರಿಂದ ಅರ್ಜುನನ ಬುದ್ಧಿಗೆ ತೋರಿದುದು ಪರಮ ಧರ್ಮವೇ ವಿನಾ ಬೇರೆ ಯಾದುದಲ್ಲ ಎಂಬ ಭಾವ.

೨. ಸರ್ವೇಷಾ ಮೇವ ಧರ್ಮಾಣಾಂ=ಸಮಸ್ತವಾದ ಧರ್ಮಗಳಲ್ಲೆಲ್ಲಾ ವೈಷ್ಣವೋ ವಿಧಿಃ–ಪರತತ್ತ್ವವಾದ ಶ್ರೀ ವಿಷ್ಣುವನ್ನು ಕುರಿತು ಮಾಡುವ ಧರ್ಮವು

ಉತ್ತಮಃ–ಸರ್ವೋತ್ಕೃಷ್ಟವಾದುದು. ಅದು ಯಾವುದೆಂದರೆ ಇಹಲೋಕದ ಸಂಸಾರ ವನ್ನು ಮತ್ತೆ ಹೊಂದದ ಹಾಗೆ ಆತನನ್ನು ಹೊಂದುವ ಉಪಾಯರೂಪವಾದ ಉಪಾಸನವು.

ಇದರ ಮುಂದಿನ ಭಾಗ—

**ರಕ್ಷತೇ ಭಗವಾನ್ ವಿಷ್ಣುರ್ಭಕ್ತಮಾತ್ಮ ಶರೀರವತ್ ॥**

ಭಗವಂತನಾದ ವಿಷ್ಣುವು ತನ್ನ ಶರೀರದ ಹಾಗೆ ಭಕ್ತನನ್ನೂ ರಕ್ಷಿಸುವನು ಎಂಬರ್ಥವು.

ಶ್ರುತಿಯ ಪ್ರಕಾರ ಎಲ್ಲಾ ಜೀವಾತ್ಮರೂ ಆತನಿಗೆ ಶರೀರವು, ಆದುದರಿಂದ ಸರ್ವರೂ ರಕ್ಷ್ಯವರ್ಗಕ್ಕೆ ಸೇರಿದವರೇ, ಆತನು ರಕ್ಷಕನೇ ಸರಿ, ಆದರೂ ಮುಕ್ತಿ ಯನ್ನು ಕೊಟ್ಟು ರಕ್ಷಿಸಬೇಕಾದರೆ ಉತ್ತಮ ವೈಷ್ಣವ ವಿಧಿರೂಪವಾದ ಧರ್ಮವನ್ನು ಅವಲಂಬಿಸಿದವರನ್ನು ರಕ್ಷಿಸುತ್ತಾನೆಯೇ ಹೊರತು ಬೇರೆ ಅಲ್ಲ. ಹಾಗೆ ಮಾಡದೆ ಎಲ್ಲರನ್ನೂ ರಕ್ಷಿಸಿದರೆ ವೈಷಮ್ಯಾದಿಗಳು ಪ್ರಾಪ್ತವಾಗುತ್ತವೆ ಎಂಬ ಅಭಿಪ್ರಾಯ.

೩. ವಿಷ್ಣ್ವಾರಾಧನಾತ್—ದೈವಯಜ್ಞವಾದ ವಿಷ್ಣುವಿನ ಆರಾಧನೆಗಿಂತಲೂ ವೈದಿಕಮ್–ವೇದದಲ್ಲಿ ಹೇಳಲ್ಪಟ್ಟ ಪುಣ್ಯಂಕರ್ಮ–ಪವಿತ್ರಕರವಾದ ಶ್ರೇಯಸ್ಕರವಾದ ಕರ್ಮವು ನವಿದ್ಯತೇ–ಇರುವುದಿಲ್ಲ.

ಇವೇ ಮುಂತಾದ ಪ್ರಮಾಣಗಳಿಂದ ಪರಮ ಧರ್ಮಗಳೆಂದು ಪ್ರಸಿದ್ಧವಾದ ನಿವೃತ್ತಿಧರ್ಮಗಳನ್ನು ಧರ್ಮಗಳಲ್ಲ ಎಂದು ಹೇಳಿದರೆ ಕೈಮುತಿಕ ನ್ಯಾಯದಿಂದ ಪ್ರವೃತ್ತಿ ಧರ್ಮಗಳೂ ಧರ್ಮಗಳಲ್ಲವಾಗಿ ಎಲ್ಲಾ ಶಾಸ್ತ್ರಗಳಿಗೂ ಪ್ರಾಮಾಣ್ಯವಿಲ್ಲದ್ದಾಗಿ ಬಾಹ್ಯ ಕುದೃಷ್ಟಿಪಕ್ಷಗಳಾಗುತ್ತವೆ. ಪ್ರತಿಕಕ್ಷಿಗಳಾದ ವೇದ ಬಾಹ್ಯರು ಮತ್ತು ವೇದಗಳಿಗೆ ಅಪಾರ್ಥಗಳನ್ನು ಹೇಳುವವರು—ಇವರ ಅಭಿಪ್ರಾಯಗಳಲ್ಲಿ ಪ್ರವೇಶ ಉಂಟಾಗುತ್ತದೆ, ಎಂದರೆ ಇವರುಗಳಿಗೆ ಶಾಸ್ತ್ರಗಳು ಹೇಗೆ ನಿರರ್ಥಕವೋ ಹಾಗೆಯೇ ಪ್ರವೃತ್ತಿ ನಿವೃತ್ತಿ ಧರ್ಮಗಳೆಲ್ಲಾ ಧರ್ಮಗಳಲ್ಲವೆಂದು ಹೇಳುವವರಿಗೂ ಶಾಸ್ತ್ರಗಳು ನಿರರ್ಥಕವಾಗುತ್ತವೆ ಎಂದು ಅಭಿಪ್ರಾಯ. ಶಾಸ್ತ್ರಗಳಲ್ಲಿ ಧರ್ಮಗಳೇ ಇಲ್ಲದುದರಿಂದ ವಿಧೇಯಾಂಶವೇ ಇಲ್ಲವಾಗಿ ನಾವು ಧರ್ಮೋಪದೇಶವನ್ನು ಹೊಂದಿ ಧರ್ಮಾನುಷ್ಠಾನ ವನ್ನು ಮಾಡತಕ್ಕದ್ದು ಯಾವುದೂ ಇರುವುದಿಲ್ಲವಾಗುತ್ತದೆಂದು ಭಾವವು.

ಪ್ರಪತ್ತಿಗೆ ಸಾಧನತ್ವವನ್ನಾಗಲಿ, ಸಿದ್ಧಸಾಧನ ಸಹಕಾರಿತ್ವವನ್ನಾಗಲಿ ಸ್ವೀಕರಿ ಸಿದರೆ ಚರಮ ಶ್ಲೋಕ ವಿರೋಧವೆಂಬ ಶಙ್ಕಾಪರಿಹಾರ.

ಆದರೆ ಪ್ರಪತ್ತಿಗೆ ಸಾಧನತ್ವವನ್ನಾಗಲಿ, ಸಿದ್ಧಸಾಧನಕ್ಕೆ ಸಹಕಾರಿ ಎಂಬುದನ್ನಾಗಲಿ ಸ್ವೀಕರಿಸಿದರೆ, ಚರಮ ಶ್ಲೋಕದ 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬಲ್ಲಿ ಸರ್ವಶಬ್ದದಲ್ಲಿ ಇದೂಕೂಡ ಸೇರಿ ಇದೂ ತ್ಯಾಜ್ಯವಲ್ಲವೋ ? ಇದು ಅಲ್ಲ ಎಂದರೆ ಆವಾಗ ಸರ್ವಶಬ್ದಕ್ಕೆ ಸಙ್ಕೋಚವಾದ ಅರ್ಥವನ್ನು ಹೇಳಿದಂತಾಗಲಿಲ್ಲವೋ ? ಎಂದರೆ ಭಕ್ತಿಯೋಗಾದಿಗಳಲ್ಲೂ ಅದು ಸಮಾನವಾದುದೇ ಆಗುತ್ತದೆ. ಅವುಗಳಲ್ಲೂ ಸಾಧನತ್ವ ಬುದ್ಧಿಯನ್ನು ಬಿಡಬೇಕಾಗುತ್ತದೆ.

ಈ ಮಾತು ಪ್ರಪತ್ತಿಯು ಸಾಕ್ಷಾತ್ತಾಗಿ ಅಂದರೆ ನೇರವಾಗಿ ಸಾಧನ ಎಂದರೆ ಅದರ ವಿಷಯವಾಯಿತು. ಹಾಗೆ ನಾವು ಹೇಳುವುದಿಲ್ಲ. ಪ್ರಸಾದನತ್ವವೇಷದಿಂದ ಅಂದರೆ ಅವನ ಅನುಗ್ರಹ ಸಂಪಾದನೆಯ ರೂಪದಿಂದ ಧರ್ಮವಾಯಿತಲ್ಲ. ಆದುದರಿಂದ **'ಸರ್ವ ಧರ್ಮಾನ್ ಪರಿತ್ಯಜ್ಯ=ಎಲ್ಲಾ ಧರ್ಮಗಳನ್ನೂ ಬಿಡತಕ್ಕದ್ದು'** ಎಂದು ಹೇಳಿರುವುದರಿಂದ ಆ ಪ್ರಪತ್ತಿಯನ್ನು ಬಿಡಬೇಕು-ಮಾಡಬೇಕಾದುದಿಲ್ಲ ಎಂದು ಆಕ್ಷೇಪಿಸಿದರೆ, 'ಕೃಷ್ಣಂ ಧರ್ಮಂ ಸನಾತನಮ್' ಸರ್ವೇಶ್ವರನೂ ಸನಾತನ ಧರ್ಮವೆಂದು ಶಾಸ್ತ್ರಗಳು ಸ್ಥಾಪಿಸಿರುವುದರಿಂದ ಅವನನ್ನೂ ಬಿಡಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳಲು 'ಸರ್ವ ಧರ್ಮಾನ್ ಪರಿತ್ಯಜ್ಯ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಧರ್ಮವನ್ನು ಬಿಟ್ಟು ಇತರ ಧರ್ಮಗಳೆಲ್ಲಾ ತ್ಯಾಜ್ಯವೆಂದಲ್ಲವೇ ಅನ್ವಯಿಸತಕ್ಕದ್ದು; ಹಾಗೇ ಹೇಳುವುದರಿಂದ ಸಿದ್ಧೋಪಾಯನು ಧರ್ಮವೆಂದಾದರೂ ಸಿದ್ಧೋಪಾಯವೂ ತ್ಯಾಜ್ಯವಾಗುವುದಿಲ್ಲವೆಂದು ಹೇಳುವೆವು; ಎಂದರೆ ಹಾಗಾದರೆ ಈ ಚರಮ ಶ್ಲೋಕದಲ್ಲೂ 'ಮಾಮೇಕಂ ಶರಣಂ ವ್ರಜ' ಎಂದು ಶರಣಾಗತಿ ರೂಪಧರ್ಮವು ಹೇಳಲ್ಪಟ್ಟಿರುವುದರಿಂದ ನಿಮ್ಮ ವಾದಕ್ಕೆ ಸಮಾನವಾಗಿ ಅದನ್ನು ಬಿಟ್ಟು ಮಿಕ್ಕ ಧರ್ಮಗಳೆಲ್ಲಾ ತ್ಯಾಜ್ಯಗಳೆಂದು ನಾವು ಹೇಳುವೆವು.

ಆದುದರಿಂದ ಪ್ರಪತ್ತಿಯು ಸಾಧನತ್ವ ರೂಪದಲ್ಲಿಯಾಗಲಿ, ಸಿದ್ಧಸಾಧನಕ್ಕೆ ಸಹಕಾರಿ ರೂಪದಲ್ಲಾಗಲಿ ಧರ್ಮವಾಗುವುದರಿಂದ ತ್ಯಾಜ್ಯವೆಂಬುದು ಸಮಂಜಸವಲ್ಲ.

## ಸಿದ್ಧೋಪಾಯ ವಿಷಯದಲ್ಲಿ ಭಕ್ತಿ ಪ್ರಪತ್ತಿಗಳು ಹೇಗೆ ಉಪಕಾರಗಳು ?

ಸಿದ್ಧೋಪಾಯನಿಗೆ ಉಪಚಯಾಪಚಯಗಳು ಅಂದರೆ ವೃದ್ಧಿಹ್ರಾಸಗಳು ಇಲ್ಲ. ಹೀಗಿರುವಾಗ ಈ ಸಾಧ್ಯೋಪಾಯಗಳು ಸಿದ್ಧೋಪಾಯಕ್ಕೆ ವರ್ಧಕವೇ ? ಹಾಗಿಲ್ಲದ ಪಕ್ಷದಲ್ಲಿ ಸಾಧ್ಯೋಪಾಯಗಳ ಅಪೇಕ್ಷೆ ಏತಕ್ಕೆ?

ಸಿದ್ಧೋಪಾಯನು ಸರ್ವದಾ ಸಹಜಕಾರುಣ್ಯ ಪರಿಪೂರ್ಣನು. ಹೀಗಿರುವಾಗ ಅವನಿಗೆ ಯಾವ ಸಹಕಾರಿಯ ಆವಶ್ಯಕತೆಯೂ ಇಲ್ಲ. ಈ ಸಾಧ್ಯೋಪಾಯಗಳು ಸಹಕಾರಿಯಲ್ಲದ ಪಕ್ಷದಲ್ಲಿ ಅವುಗಳ ಅಪೇಕ್ಷೆ ಏತಕ್ಕೆ ?

ಸಿದ್ಧೋಪಾಯನು ಸತ್ಯಸಙ್ಕಲ್ಪನು. ಯಾವುದರ ದ್ವಾರಾ–ಮೂಲಕವೂ ಇಲ್ಲದೆ ಸ್ವತಂತ್ರನಾಗಿ ಸಙ್ಕಲ್ಪಿಸುವ ಶಕ್ತಿಯುಳ್ಳವನು. ಇಂತಹವನು ಸಾಧ್ಯೋಪಾಯಿಗಳ ದ್ವಾರಾ ಸಿದ್ಧೋಪಾಯನಾಗಬೇಕೆ ? ಹಾಗಿಲ್ಲದ ಪಕ್ಷದಲ್ಲಿ ಈ ಸಾಧ್ಯೋಪಾಯಗಳ ಆವಶ್ಯಕತೆ ಏನು? ಇವೇ ಮೊದಲಾದ ಪೂರ್ವಪಕ್ಷಗಳಿಗೆ ಸಮಾಧಾನ—

ಉಪಾಸನವು ಕರ್ಮಯೋಗಾದಿಗಳಿಂದ ಉತ್ಪಾದ್ಯವು–ಅಂದರೆ ಹುಟ್ಟುವಂತಹುದು. ಪ್ರತಿನಿತ್ಯವೂ ಅನುಷ್ಠಿಸಲ್ಪಟ್ಟ ಅಭ್ಯಾಸದಿಂದ ವರ್ಧಕವು, ನಿತ್ಯನೈಮಿತ್ತಿಕ ಕರ್ಮಗಳ ಸಹಕಾರಿಯನ್ನೂ ಅಪೇಕ್ಷಿಸುವಂತಹದು. ಸರ್ವೇಶ್ವರ ದ್ವಾರಾ ಫಲವನ್ನು ಕೊಡತಕ್ಕದ್ದಾಗಿದೆ, ಆದರೆ ಸಿದ್ಧೋಪಾಯನಿಗೆ, ಉಪಾಸನೆಗೆ ಇರುವ ಹಾಗೆ ಉತ್ಪಾದಕತ್ವಾದಿಗಳು ಯಾವುದೂ ಇಲ್ಲ, ಇದು ನಿಶ್ಚಯವಾದದ್ದೇ ಆದರೆ ಈ ಚೇತನನು ಮಾಡಿರುವ ಅನಂತಾಪರಾಧಗಳಿಂದ ಭಗವಂತನ ನಿಗ್ರಹಕ್ಕೆ ಪಾತ್ರನಾಗಿರುತ್ತಾನೆ. ಈ ಸಾಧ್ಯೋಪಾಯಗಳು-ಭಕ್ತಿ ಪ್ರಪತ್ತಿಗಳು-ಅಂತಹ ನಿಗ್ರಹವನ್ನು ಶಮನಮಾಡಿ ಅನುಗ್ರಹ ಸಂಪಾದಕಗಳಾಗುತ್ತವೆ. ಆದುದರಿಂದ ಅವುಗಳು ಅವಶ್ಯಕಗಳು.

ಈ ಭಕ್ತಿ ಪ್ರಪತ್ತಿಗಳು ಸ್ವರ್ಗವೇ ಮೊದಲಾದ ಬೇರೆ ಫಲಗಳಿಗೂ ಉಪಾಯವಾದಾಗ ಜ್ಯೋತಿಷ್ಟೋಮಾದಿಗಳಂತೆ ಅವುಗಳಿಗೆ ತಕ್ಕಂತೆ ಭಗವಂತನ ಪ್ರೀತಿ ವಿಶೇಷವನ್ನು ಉಂಟುಮಾಡಿ ಉಪಕಾರಮಾಡುತ್ತವೆ. ಆ ಆ ಫಲ ವಿಶೇಷಗಳನ್ನು ಅನುಭವಿಸಲು ಅಡಚಣೆಯನ್ನುಂಟುಮಾಡುವ ಪಾಪಗಳನ್ನು ಹೋಗಲಾಡಿಸಿ ಆ ಆ ಅನುಭವಗಳನ್ನು ಕೊಡುತ್ತವೆ.

ಮುಮುಕ್ಷುವಿನ ವಿಷಯದಲ್ಲಾದರೋ ಈ ಸಾಧ್ಯೋಪಾಯಕ್ಕೆ ಪ್ರತಿಬಂಧಕವಾದ ನಿಗ್ರಹವನ್ನು ಶಮನಮಾಡುವುದು ಉಪಕಾರವಾಗಿದೆ, ಜ್ಞಾನಸಙ್ಕೋಚ ಅವಿದ್ಯೆ–ಕರ್ಮ ಇವೇ ಮುಂತಾದ ಅನಿಷ್ಟಗಳನ್ನು ಹೋಗಲಾಡಿಸಿ ಯಾವದಾತ್ಮಭಾವಿಯಾದ ಅಂದರೆ ಆತ್ಮ ಇರುವ ಪರ್ಯಂತ ಪುರುಷಾರ್ಥವನ್ನು ಉಂಟುಮಾಡುವುದು ಸಿದ್ಧೋಪಾಯದ ಹೆಚ್ಚಾದ ಉಪಕಾರ ; ಪರಿಪೂರ್ಣವಾದ ಕೈಙ್ಕರ್ಯವೇ ಪುರುಷಾರ್ಥ.

ಆದುದರಿಂದ ಮುಮುಕ್ಷುವಿನ ಎಲ್ಲಾ ಅನಿಷ್ಟಗಳನ್ನೂ ತೊಲಗಿಸಿ ಪರಿಪೂರ್ಣವಾದ ಕೈಙ್ಕರ್ಯವನ್ನು ಅನುಗ್ರಹಿಸುವ ಫಲ ಪರಂಪರೆಯಲ್ಲವೂ ಸಿದ್ಧೋಪಾಯ ಕಾರ್ಯವೆಂದೂ ಪ್ರಸಾದನವಾದ ಸಾಧ್ಯೋಪಾಯದ ಮೂಲಕ ಬರುತ್ತದೆಂದೂ ಹೇಳುವ ಪ್ರಮಾಣಗಳೆರಡೂ ಸುಸಙ್ಗತಗಳು—ಚೆನ್ನಾಗಿ ಒಪ್ಪುತ್ತವೆ.

ಭಕ್ತ್ಯಾಪರಮಯಾವಾಪಿ ಪ್ರಪತ್ತ್ಯಾ ವಾಮಹಾಯತೇ ।
ಪ್ರಾಪ್ಯೋಽಹಂ ನಾನ್ಯಥಾಪ್ರಾಪ್ಯಃ ।
ಅಮೃತ ಸ್ಯೈಷಸೇತುಃ ||

ಅಹಂತ್ವಾಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥

ಇವೇ ಮೊದಲಾದವು ಈ ಎರಡಕ್ಕೂ ಪ್ರಮಾಣಗಳು.

## ಚರಮಶ್ಲೋಕವು ವಿಧಿವಾಕ್ಯವಲ್ಲ, ಅನುವಾದ ಮಾತ್ರವೇ ಎಂಬ ವಾದದ ಖಂಡನೆ

ಪ್ರಪತ್ತಿಯು ಅವಶ್ಯ ಕರ್ತವ್ಯವೆಂದು ಒಪ್ಪಿದರೂ, ಈ ಪ್ರಪತ್ತಿ ಎಂಬುವ ಉಪಾಯ ವಿಶೇಷವನ್ನು ಅಧ್ಯಾತ್ಮಶಾಸ್ತ್ರ ವಿಧಿಸಬೇಕೇ ?

ಲೋಕದಲ್ಲಿ ಒಬ್ಬನು, ತನ್ನನ್ನು ಕಾಪಾಡಿಕೊಳ್ಳುವ ದಾರಿಯನ್ನು ಅರಿಯದೇ ದುಃಖಿಸುತ್ತಿದ್ದಾನೆಂದು ಭಾವಿಸೋಣ. ಅವನು ಆವಾಗ ತನ್ನ ಹತ್ತಿರದಲ್ಲಿರುವ ಸಮರ್ಥನಾದ ಮತ್ತೊಬ್ಬನನ್ನು ಆಶ್ರಯಿಸಿ 'ನನ್ನನ್ನು ರಕ್ಷಿಸುವ ಭಾರ ನಿನ್ನದು' ಎಂದು ಹೇಳಿ ಅವನನ್ನು ಮರೆಹೋಗುತ್ತಾನಲ್ಲವೇ ! ಹಾಗೆ 'ಈಶಾನೀಶೌ' ಇವೇ ಮೊದಲಾದ ಶ್ರುತಿಗಳಲ್ಲಿ ಹೇಳಿರುವ ರೀತಿಯಲ್ಲಿ ಸರ್ವೇಶ್ವರನು ಸಮರ್ಥನು, ನಾನು ಅಸಮರ್ಥ ಎಂದು ಶಾಸ್ತ್ರಗಳಿಂದ ತಿಳಿದರೆ ಸಾಕು. ಅಷ್ಟುಮಾತ್ರದಿಂದಲೇ ಅವನನ್ನು ಆಶ್ರಯಿಸಲಾರನೋ. ಇದನ್ನು ಶಾಸ್ತ್ರವು ವಿಧಿಸಬೇಕೇ ? ಎಂದು ಕೆಲವರು ಆಕ್ಷೇಪಿಸುತ್ತಾರೆ. ಆದರೆ ಅದು ಸರಿಯಲ್ಲ. ಇದು ಶಾಸ್ತ್ರವನ್ನು ಬಿಟ್ಟು ಮಾಡುವ ವಾದ— ಅತಿವಾದ.

ಸರ್ವೇಶ್ವರನು ಸರ್ವಶಕ್ತ. ಜೀವಾತ್ಮನು ಆತನಿಗೆ ಪರತಂತ್ರ —ಅಧೀನದಲ್ಲಿರುವವನು, ದೀನನಾದವನಲ್ಲಿ ದಯೆಯುಳ್ಳವನು. ದಯೆ ತೋರಿಸುವುದು ಉಚಿತವಾದದ್ದೇ. ಆದರೆ ಲೋಕದಲ್ಲಿ ಒಬ್ಬನನ್ನು ಒಬ್ಬನು ಆಶ್ರಯಿಸುವಾಗ 'ಈ ರೀತಿಯಲ್ಲಿ ಆಶ್ರಯಿಸಿದರೆ ಇವನು ರಕ್ಷಿಸುವನು' ಎಂದು ಕಟ್ಟಳೆಯಿಂದ ಅರಿತಲ್ಲವೇ ಇವನು ಆಶ್ರಯಿಸುವುದು. ಹಾಗೆ ಈ ಪ್ರಪತ್ತ್ಯನುಷ್ಠಾನದ ಸಂದರ್ಭದಲ್ಲೂ ಭಕ್ತ್ಯುಪಾಯಕ್ಕೆ ಸಾಮರ್ಥ್ಯವಿಲ್ಲದ ಅಧಿಕಾರಿಯು ಗುರುಮುಖದಿಂದ ಐದು ಅಂಗಗಳಿಂದ ಕೂಡಿದ ಈ ಪ್ರಪತ್ತಿಯನ್ನು ಅನುಷ್ಠಿಸಿ ಆಶ್ರಯಿಸಿದರೆ ಇವನನ್ನು ಈಶ್ವರನು ರಕ್ಷಿಸುತ್ತಾನೆ ಎಂದು ಹೇಳುವ ಈ ಶಾಸ್ತ್ರಪ್ರಮಾಣದ ಮೂಲಕ—ವಿಧಿವಾಕ್ಯ ಮೂಲಕ ತಿಳಿದು ಹಾಗೆಯೇ ಅನುಷ್ಠಿಸಿದರೆ ಮೋಕ್ಷಪ್ರಾಪ್ತಿಯಾಗುತ್ತದೆ. ಇಲ್ಲದಿದ್ದರೆ ಇಲ್ಲ.

ವಿಧಿವಾಕ್ಯಗಳಾದ "ಓಮಿತ್ಯಾತ್ಮಾನಂ ಯುಂಜೀತ ಏತದ್ವೈ ಮಹೋಪನಿಷದಂ ದೇವಾನಾಂಗುಹ್ಯಂ, ಯ ಏವಂ ವೇದ ಬ್ರಹ್ಮಣೋ ಮಹಿಮಾನಮಾಪ್ನೋತಿ" ಇವೇ ಮೊದಲಾದವುಗಳಲ್ಲಿ ಪ್ರಪತ್ತಿಯು ವಿಧಿಸಿರುವುದರಿಂದ ಅದನ್ನು ಪರಿಕರಗಳೊಂದಿಗೆ ಅನುಷ್ಠಿಸಲೇಬೇಕೆಂಬ ತಾತ್ಪರ್ಯ. ಹೀಗೆ ಪ್ರತ್ಯಕ್ಷಸಿದ್ಧವಾದುದಕ್ಕೆ ಶಾಸ್ತ್ರವಿಧಿ ಬೇಕೇ ಎಂಬ ನ್ಯಾಯವನ್ನು ಆರೋಪಿಸಿ ಹೇಳಿದ ಪೂರ್ವಪಕ್ಷನಿರಸನ ಮಾಡಲ್ಪಟ್ಟಿತು.

ಪರಮಾತ್ಮನು ಸಮರ್ಥನು; ಕರುಣೆಯುಳ್ಳವನು, ಆದುದರಿಂದ ನಾವು ಅವನನ್ನು ಆಶ್ರಯಿಸಿದರೆ ರಕ್ಷಿಸಿಯೇ ರಕ್ಷಿಸುತ್ತಾನೆ–ಹೀಗೆಂಬ ಅನುಮಾನ ಪ್ರಮಾಣ ದಿಂದ ಅವನು ಮೋಕ್ಷಾರ್ಥಿಯನ್ನು ರಕ್ಷಿಸುತ್ತಾನಾದುದರಿಂದ ಇದಕ್ಕೆ 'ಶರಣಂವ್ರಜ' ಎಂಬ ವಿಧಿವಾಕ್ಯ ಬೇಕೆ ? ಆದುದರಿಂದ 'ಶರಣಂ ವ್ರಜ' ಎಂಬುದು ಅನುವಾದವೇ ವಿನಾ ವಿಧಿಯಲ್ಲ ಎಂದು ವಾದಮಾಡಿದರೆ ಅದು ಸರಿಯಲ್ಲ. ಏತಕ್ಕೆಂದರೆ ನಾಸ್ತಿಕ ರಲ್ಲದ ಎಲ್ಲರಿಗೂ ಸರ್ವೇಶ್ವರನೊಬ್ಬನಿದ್ದಾನೆಂಬ ಜ್ಞಾನ ಇರುವುದರಿಂದ ಉಪಾಸನ ವನ್ನೂ ಉಪಾಯವಾಗಿ ವಿಧಿಸುವ ಶಾಸ್ತ್ರಗಳು ಅಂದರೆ ಬ್ರಹ್ಮವಿದ್ಯೆಗಳೆಲ್ಲಾ ಪ್ರಯೋಜನವಿಲ್ಲದವುಗಳಾಗುತ್ತವೆ.

ಆದುದರಿಂದ ಇಲ್ಲಿ ಪ್ರತ್ಯಕ್ಷಾನುಮಾನ ಪ್ರಮಾಣಗಳು ನಿಷ್ಪ್ರಯೋಜನಗಳು. ಶಾಸ್ತ್ರ ಪ್ರಮಾಣವೇ ಸ್ವೀಕರಿಸಲು ತಕ್ಕದ್ದಾಗಿದೆ. ಪ್ರಪತ್ತಿ ವಿಧಾಯಕ ಶಾಸ್ತ್ರ ಗಳಿರುವುದರಿಂದ ಅವುಗಳನ್ನನುಸರಿಸಿದ ಅನುಷ್ಠಾನವೇ ಶಿಷ್ಟಸಮ್ಮತವಾಗುವುದರಿಂದ 'ಮಾಮೇಕಂ ಶರಣಂ ವ್ರಜ' ಎಂಬ ಗೀತೋಪನಿಷತ್ತಿನ ವಾಕ್ಯವು ವಿಧಿಯೇ ವಿನಾ ಅನುವಾದವಲ್ಲ.

ಸಮರ್ಥನಾದವನು ಉಪಾಸನಾದಿಗಳನ್ನು ಮಾಡಬೇಕು. ಅದಕ್ಕೆ ಶಕ್ತಿ ಇಲ್ಲ ದವನು ಪ್ರಪತ್ತಿಯನ್ನು ಅನುಷ್ಠಿಸಬೇಕೆಂಬುದನ್ನು ಅನುಮಾನದಿಂದ ತಿಳಿದು ವ್ಯವಸ್ಥೆ ಮಾಡಿ ಹೇಳಿದರೆ ಭಕ್ತಿ ಶಾಸ್ತ್ರವು ವ್ಯರ್ಥವಾಗುವುದಿಲ್ಲವಷ್ಟೆ? ಎಂದರೆ ಹಾಗೆ ಲೋಕದಲ್ಲಿ ವ್ಯಾಪ್ತಿಕಾಣದೇ ಇರುವುದರಿಂದ ಅನುಮಾನದಿಂದ ಶಕ್ತಾಶಕ್ತಭೇದ ದಿಂದ ಉಪಾಯ ವ್ಯವಸ್ಥೆ ಆಗುವುದಿಲ್ಲ. ಲೋಕದಲ್ಲಿ ಸಮರ್ಥನು ಅಸಮರ್ಥನನ್ನು ರಕ್ಷಿಸುವುದು ವ್ಯಕ್ತವಾಗಿದೆ. ಹೀಗಾಗಿ ನಿಯಮವು ಎಂದರೆ ಸಮರ್ಥನಿಗೆ ಶಾಸ್ತ್ರ ವಿಧಿಯೂ ಉಪಾಸನಾನುಷ್ಠಾನವೂ ಅಸಮರ್ಥನಿಗೆ ಅದು ಬೇಕಿಲ್ಲ ಎಂಬುದನ್ನು ಅನುಮಾನದಿಂದ ಸಾಧಿಸುವುದು ಸಾಧ್ಯವಿಲ್ಲ.

ಮೋಕ್ಷವನ್ನು ಪಡೆಯಲು ಮಾಡುವ ಪ್ರಪತ್ತಿಯ ಹಾಗೆ, ಬೇರೆ ಬೇರೆ ಫಲ ಗಳನ್ನು ಅಪೇಕ್ಷಿಸಿ, ಅದಕ್ಕಾಗಿ ಮಾಡಬೇಕಾದ ಉಪಾಯಗಳನ್ನು ಮಾಡಲು 'ಸಮರ್ಥನಾಗದಿದ್ದರೆ' ಅವುಗಳ ಜಾಗದಲ್ಲಿ ಪ್ರಪತ್ತಿಯನ್ನು ಮಾಡಿದರೆ ಆ ಆ

ಇಷ್ಟಾರ್ಥವನ್ನು ಪಡೆಯುತ್ತಾನೆ. "ಯದ್ಯೇನ ಕಾಮಕಾಮೇನ ನ ಸಾಧ್ಯಂ ಸಾಧನಾಂತರೈಃ" ಎಂದು ಹೇಳಿದೆ. ಆದುದರಿಂದ ಇದನ್ನು ಶಾಸ್ತ್ರ ವಿಧಿಸದೆ ಇದ್ದರೆ ಹಿಂದೆ ವಿಧಿಸಿದ ಉಪಾಯಕ್ಕೆ ಅರ್ಹತೆ ಇಲ್ಲದ್ದರಿಂದ ಆ ಆ ಫಲಗಳೂ ಸಿದ್ಧಿಸುವುದಿಲ್ಲ.

ಸರಿ ಹಾಗಾದರೆ, ಉಪಾಸನೆಯನ್ನು ವಿಧಿಸಿರುವ ಬಲದಿಂದ ಶಕ್ತನಿಗೆ ಅದರಲ್ಲಿ ಪ್ರವೃತ್ತಿಯು ಉಂಟಾಗಲಿ, ಅಶಕ್ತನಿಗಾದರೋ ಲೋಕದಲ್ಲಿರುವಂತೆ ಸಮರ್ಥನನ್ನು ಆಶ್ರಯಿಸುವುದು ತಾನಾಗಿಯೇ ಉಂಟಾಗುತ್ತದೆ. ಆದುದರಿಂದ ಅವನ ವಿಷಯದಲ್ಲಿ ಪ್ರಪತ್ತಿಯನ್ನು ವಿಧಿಸಬೇಕಾಗಿಯೇ ಇಲ್ಲ. ಅದು ವ್ಯರ್ಥ, ಮೋಕ್ಷರೂಪ ಫಲವೂ ಸಿದ್ಧಿಸಿಯೇ ಸಿದ್ಧಿಸುತ್ತದೆ ; ಎಂದರೆ—

ಲೋಕದಲ್ಲಿ ರಾಜಸೇವೆಗಳು ನಡೆದಿರುವುದನ್ನೂ ಸೇವೆ ಮಾಡಿದವನು ಫಲಗಳನ್ನು ಪಡೆದಿರುವುದನ್ನೂ ಕಂಡಿರುತ್ತೇವೆ. ಆ ಸೇವೆಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಶಿಕ್ಷೆಯಾಗುವುದನ್ನು ಕಂಡಿದ್ದೇವೆ. ನಿಷಿದ್ಧವಾದ ದಿನಗಳಲ್ಲಿ ತಂದ ನಿಷಿದ್ಧವಾದ ಹೂವುಗಳಿಂದ ಮಾಲೆ ಮಾಡುತ್ತಾರೆ. ಇದು ಲೌಕಿಕ ವಿಷಯ. ಈ ಲೋಕನ್ಯಾಯವು ಪಾರಲೌಕಿಕ ವಿಷಯದಲ್ಲಿ ಸರಿಹೋಗುವುದಿಲ್ಲ. ಲೋಕದಲ್ಲಿ ಅಸಮರ್ಥನು ಸಮರ್ಥನನ್ನಾಶ್ರಯಿಸಿ ಈ ಲೋಕದ ಫಲವನ್ನು ಹೊಂದುವುದಕ್ಕೆ ಶಾಸ್ತ್ರದ ಆವಶ್ಯಕತೆ ಇಲ್ಲ. ಭಗವತ್ಕೈಂಕರ್ಯಗಳಾದ ಮಾಲಾಕರಣ—ದೇವರಿಗೆ ಹೂವುಗಳನ್ನು ಹಾರವಾಗಿ ಕಟ್ಟಿ ಸಮರ್ಪಿಸುವುದು, ದೀಪವನ್ನು ಹಚ್ಚುವುದು, ಸ್ತೋತ್ರಮಾಡುವುದು, ನಮಸ್ಕಾರ ಮಾಡುವುದು ಇವೇ ಮುಂತಾದವು ಇವೆ. ಇವುಗಳನ್ನು ಶಾಸ್ತ್ರದಲ್ಲಿ ಹೇಳಿರುವ ರೀತಿಯನ್ನು ಬಿಟ್ಟು ಮಾಡಬಹುದೋ ? ಹಾಗೆ ಮಾಡಿದರೆ, ಭಗವತ್ಪ್ರೀತಿಯುಂಟಾಗುವುದಿಲ್ಲ. ಶಾಸ್ತ್ರದಲ್ಲಿ ಹೇಳಿರುವ ಪುಷ್ಪಗಳನ್ನು ಸಂಪಾದಿಸಿ ಹಾರವನ್ನು ಮಾಡಬೇಕು. ತುಳಸಿಯನ್ನು ಶಾಸ್ತ್ರನಿಷಿದ್ಧವಲ್ಲದ ದಿನಗಳಲ್ಲಿ ಆಹರಣಮಾಡಿ ಮಂತ್ರಪೂರ್ವಕವಾಗಿ ಕುಯ್ದು ತಂದು ಸಮರ್ಪಿಸಬೇಕು. ಇಲ್ಲದಿದ್ದರೆ ಪ್ರತ್ಯವಾಯವುಂಟು. ಶುಚಿಯುಳ್ಳವನಾಗಿ ಸ್ತೋತ್ರವನ್ನು ಹೇಳಬೇಕು. ಮೂತ್ರ ವಿಸರ್ಜನಾದಿಗಳನಂತರ ಕೈಕಾಲು ತೊಳೆದುಕೊಂಡು ಶುಚಿಯಾಗಿ ಸ್ತುತಿಸಬೇಕು. ನಮಸ್ಕಾರವನ್ನು "ಯುಗ್ಮಾನೇವತು ಕಾರಯೇತ್" ಎಂಬ ಪ್ರಮಾಣವಿರುವಾಗ ಒಂದುಸಲವಾಗಲಿ ಮೂರುಸಲವಾಗಲಿ ನಮಸ್ಕಾರವಮಾಡಕೂಡದು ; ಮತ್ತು ಒಂದು ಕೈಯಿಂದ ನಮಸ್ಕಾರ ಮಾಡಕೂಡದು. ನಮಸ್ಕಾರ ಅಷ್ಟಾಂಗದೊಡನೆ ಕೂಡಿರಬೇಕು. ಹೀಗೆ ಶಾಸ್ತ್ರದಲ್ಲಿ ಹೇಳಿರುವ ಹಾಗೆ ಭಗವತ್ಸೇವೆಗಳನ್ನು ಮಾಡತಕ್ಕದ್ದು. ಇಲ್ಲವಾದರೆ ಅಪಚಾರಕ್ಕೆ ಕಾರಣವಾಗುತ್ತದೆ.

ಇಂತಹ ಭಗವತ್ಕೈಂಕರ್ಯಗಳನ್ನು ನಡೆಸತಕ್ಕದೆಂಬುದನ್ನು ಶಾಸ್ತ್ರಮೂಲಕ ತಿಳಿದು ಹೇಗೆ ನಡೆಸುತ್ತೇವೋ, ಹಾಗೆಯೇ ಈ ಪ್ರಪತ್ತಿಯ ಸಂದರ್ಭದಲ್ಲೂ

ತಿಳಿಯಬೇಕು. ಅದೃಷ್ಟಫಲವನ್ನು ಕೊಡುವ ಪ್ರಪತ್ತಿಯು ಒಳ್ಳೆಯ ಆಚಾರ್ಯನ ಉಪದೇಶದಿಂದ ಉಂಟಾದ, ಶಾಸ್ತ್ರದಲ್ಲಿ ಹೇಳಿರುವ ಮಂತ್ರಾರ್ಥಜ್ಞಾನ, ಅನುಷ್ಠಾನ ಇವನ್ನು ಒಳಗೊಂಡಿರುತ್ತದೆ. ಇದು ಶಾಸ್ತ್ರವಿಹಿತವಾದ ಉಪಾಯ. ಆದುದರಿಂದ ಶಾಸ್ತ್ರವು ವಿಧಿಸಿದ ರೀತಿಯಲ್ಲಿ ಸದಾಚಾರ್ಯರ ಮೂಲಕ ನಡೆಸತಕ್ಕದ್ದು.

ಹಾಗೆ ಪ್ರಪತ್ತಿಗೆ ಶಾಸ್ತ್ರವಿಧಿಯು ಬೇಕಿಲ್ಲವೆಂದರೆ ರಾಜಸೇವೆಗೆ ಹೇಗೆ ಶಾಸ್ತ್ರವಿಧಿ ಬೇಕಾಗಿಲ್ಲವೋ ಹಾಗೆಯೇ ಭಗವತ್ಸೇವಾರೂಪಕೈಙ್ಕರ್ಯಗಳಿಗೂ ಶಾಸ್ತ್ರವಿಧಿ ಬೇಕಾಗಿಲ್ಲವೆಂದು ಒಪ್ಪಬೇಕಾಗುತ್ತದೆ. ರಾಜಸೇವೆಗೇನೋ ಶಾಸ್ತ್ರವು ಬೇಕಿಲ್ಲ. ಭಗವತ್ಸೇವೆಗೆ ಶಾಸ್ತ್ರವಿಧಿಯಾವಶ್ಯಕ. ಹೇಗೆಂದರೆ ಅಶುಚಿಯಾದ ಪುಷ್ಪದಿಂದ ರಚಿಸಿದ ಪುಷ್ಪಮಾಲೆಯು ಶಾಸ್ತ್ರನಿಷಿದ್ಧವಾಗಿ ಭಗವತ್ಸೇವೆಗೆ ಅನರ್ಹವು. ನೋಡಲು ಚೆನ್ನಾಗಿದ್ದರೆ ರಾಜನಿಗೆ ಅರ್ಹವಾದುದು. ಹಾಗೆಯೇ ಮಿಕ್ಕ ಸೇವೆಗಳಲ್ಲಿಯೂ ಊಹಿಸಬಹುದು. ಭಗವತ್ಕೈಙ್ಕರ್ಯವು ಬಹಳ ಮುಖ್ಯವಾದದ್ದೆಂದು ಎಲ್ಲರೂ ಒಪ್ಪತಕ್ಕದ್ದು.

ಪ್ರಪದನ ಮಂತ್ರವಾದ ದ್ವಯ ಮೊದಲಾದ ಮಂತ್ರಗಳ ಉಪದೇಶವು ಆಚಾರ್ಯಮೂಲಕವಾಗಿ ಶಾಸ್ತ್ರದಲ್ಲಿ ಹೇಳಿರುವ ರೀತಿಯಿಂದ ನಡೆಸತಕ್ಕದ್ದೆಂಬುದು ಸರ್ವಸಮ್ಮತ. ಹಾಗೆಯೇ ಪ್ರಪದನಾನುಷ್ಠಾನಕ್ಕೂ ಶಾಸ್ತ್ರವಿಧಿ ಅತ್ಯಾವಶ್ಯಕವಾಯಿತು.

ಪ್ರಪದನಕ್ಕೆ ಸರ್ವಾಧಿಕಾರತ್ವವುಂಟು.[1] ವೈದಿಕ ಮಂತ್ರೋಪದೇಶಗಳಿಗೆ ಅರ್ಹತೆ ಇಲ್ಲದವರೂ ಮೋಕ್ಷಕ್ಕಾಗಿಯೂ ಇತರ ಫಲಗಳಿಗಾಗಿಯೂ ಶರಣಾಗತಿಯನ್ನು ಮಾಡುತ್ತಾರೆ. ಭಾಷಾ ಮಂತ್ರಾದಿಗಳಿಂದ ಮಾಡಬಹುದೆಂದೂ ಇತರರಿಗೆ ಇಷ್ಟುಮಾತ್ರ ಮಾಡಬೇಕು, ಇದಕ್ಕೆ ಕಡಿಮೆಯಾಗಿಯೂ ಹೆಚ್ಚಾಗಿಯೂ ಮಾಡಕೂಡದು ಎಂದೂ ಶಾಸ್ತ್ರದಲ್ಲಿ ಹೇಳಿದೆ. ಇದನ್ನೆಲ್ಲಾ ಅನುಮಾನ ಪ್ರಮಾಣದಿಂದ ನಿಶ್ಚಯಿಸಲಾಗುವುದಿಲ್ಲ. ಶಾಸ್ತ್ರವನ್ನೇ ಶರಣುಹೋಗಬೇಕು.

ಆ ಶರಣಾಗತಿಯನ್ನು ಮಾಡುವಾಗ ಶರಣ್ಯನು ಎಂತಹವನೆಂಬುದು ತಿಳಿದಿರಬೇಕು. ಆತನ ಸ್ವರೂಪನಿರೂಪಕ ಧರ್ಮಗಳಾವುವು ? (ಸತ್ಯತ್ವ ಜ್ಞಾನತ್ವಾದಿಗಳು ಸ್ವರೂಪ ನಿರೂಪಕ ಧರ್ಮಗಳು) ಆತನು ಸಿದ್ಧೋಪಾಯನಾಗಿರುವುದಕ್ಕೆ ಉಪಯುಕ್ತ ಗುಣಗಳಾವುವು ? (ವಾತ್ಸಲ್ಯಾದಿಗಳು ಉಪಾಯತ್ವಕ್ಕೆ ಬೇಕಾದ ಗುಣಗಳು)

1. ಮಾಂಹಿಪಾರ್ಥವ್ಯಪಾಶ್ರಿತ್ಯ ಯೇಽಪಿಸ್ಯುಃಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿಯಾಂತಿ ಪರಾಂಗತಿಮ್ ॥
ಗೀತೆ. ೯-೩೨

ಆತನು ಯಾವಾಗಲೂ ಲಕ್ಷ್ಮಿಯೊಂದಿಗೇ ಇರುವುದರಿಂದಾಗುವ ಪ್ರಯೋಜನವೇನು ? (ಪುರುಷಕಾರಕ ಪ್ರಯೋಜನ) ಇವೆಲ್ಲಾ ಆವಶ್ಯಕವಾಗಿ ತಿಳಿಯಬೇಕಾದ ವಿಷಯ. ಇದು ಶಾಸ್ತ್ರದಿಂದಲೇ ತಿಳಿಯಬೇಕಾಗಿದೆ. ಹಾಗೆಯೇ ಈ ಶರಣಾಗತಿಯಿಂದಾಗುವ ಪ್ರಯೋಜನವೇನು ? ಮೋಕ್ಷಕ್ಕಾಗಿ ಮಾಡುವ ಶರಣಾಗತಿಗೂ ಇತರ ಫಲಗಳಿಗೆ ಮಾಡುವ ಶರಣಾಗತಿಗೂ ಕ್ರಮದಲ್ಲಿ ವ್ಯತ್ಯಾಸವೇನು ? ಪರಿಕರಗಳಾವುವು ? ಅಙ್ಗಿ ಯಾವುದು ? ಇವೆಲ್ಲಾ ತಿಳಿಯತಕ್ಕ ವಿಷಯಗಳಾಗಿವೆ. ಇವೆಲ್ಲಾ ಶಾಸ್ತ್ರದಿಂದ ತಿಳಿಯತಕ್ಕವುಗಳೇ ವಿನಾ ಕೇವಲ ಅನುಮಾನ ಪ್ರಮಾಣದಿಂದ ಸಾಧಿಸಲು ಅಸಾಧ್ಯ.

ಆದುದರಿಂದ ಶಾಸ್ತ್ರವಿಧಿ ಬಲದಿಂದ ಆವಶ್ಯಕವಾಗಿ ಪ್ರಪತ್ತಿಯು ಮಾಡತಕ್ಕದ್ದೆಂದು ತೀರ್ಮಾನವಾದ ವಿಷಯ.

"ಆಗ್ನೆಯಾಲ್ ಸಪರಿಕರ ಸೇವಾ ವಿಶೇಷಙ್ಗಳ್ ಪೋಲೆ ಸಪರಿಕರ ಭರ ಸಮರ್ಪಣ ಮುಮಿಙ್ಗು ವಿಧೇಯಮಾಗಕ್ಕುರೈಯಿಲ್ಲೈ" ಈ ಮಾತನ್ನು ವೇದಾಂತಾಚಾರ್ಯರು ರಹಸ್ಯತ್ರಯಸಾರದಲ್ಲಿ ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ಹೇಳಿದ್ದಾರೆ. ಇದರ ಅರ್ಥ: ಪರಿಕರದೊಡಗೂಡಿದ ಸೇವಾವಿಶೇಷಗಳ ಹಾಗೆ ಪರಿಕರದೊಡಗೂಡಿದ ಭರಸಮರ್ಪಣವೂ ವಿಧಿಸಲ್ಪಡುತ್ತದೆ—ಅದು ವಿಧೇಯ ಎಂಬುದರಲ್ಲಿ ಯಾವ ಕೊರತೆಯೂ ಇಲ್ಲ.

ಅತೀಂದ್ರಿಯ ಗೋಚರನಾದ ಅಂದರೆ ಕಣ್ಣಿಗೆ ಕಾಣದೆ ಕೇವಲ ಶಾಸ್ತ್ರದಿಂದ ಗೋಚರನಾಗುವ ಶರಣ್ಯನಲ್ಲಿ ಅತೀಂದ್ರಿಯ ಫಲವಾದ ಮೋಕ್ಷಾದಿಗಳಲ್ಲಿ ಪ್ರತ್ಯಕ್ಷಾನುಮಾನ ಪ್ರಮಾಣಗಳು ದುರ್ಬಲಗಳಾದುದರಿಂದ ಶಾಸ್ತ್ರ ಪ್ರಮಾಣ ವಿಧಿ ಬಲದಿಂದಲೇ ಪ್ರಪತ್ತಿಯು ಆವಶ್ಯಕವಾಗಿ ಕರ್ತವ್ಯವು. ಇದು ಗುರುಮುಖದಿಂದ ವರ್ಣಾಶ್ರಮಗಳಿಗೆ ತಕ್ಕ ಕ್ರಮದಲ್ಲಿ ಪರಿಕರಗಳೊಂದಿಗೆ ಅನುಷ್ಠಿಸತಕ್ಕದ್ದು. ಅಧಿಕಾರಾನುಗುಣವಾಗಿ ಯಾವ ಮಂತ್ರದ ಮೂಲಕ ಅನುಷ್ಠಿಸತಕ್ಕದ್ದೆಂಬುದನ್ನು ಶಾಸ್ತ್ರದಿಂದ ತಿಳಿಯಬೇಕು. ಆದುದರಿಂದ 'ಶರಣಂ ವ್ರಜ' ಎಂಬುದು ವಿಧೇಯವೇ ಹೊರತು ಅನುವಾದವಲ್ಲ ; ಎಂದು ಆಚಾರ್ಯರು ನಿರ್ಧರಿಸಿದ್ದಾರೆ.

ಈ ರೀತಿ ಅಧಿಕಾರಕ್ಕೆ ತಕ್ಕಂತೆ ಅಂದರೆ ಭಕ್ತಿಮಾರ್ಗವು ಸಮರ್ಥನಿಗೂ ಅಸಮರ್ಥನಾದ ಅಕಿಂಚನನಿಗೆ ಪ್ರಪದನವು ಎಂದು ಶಾಸ್ತ್ರ ಸಮಾನವಾಗಿ ವಿಧಿಸಿರುವಾಗ ಉಪಾಸನ ಮತ್ತು ಅದಕ್ಕೆ ಸಹಕಾರಿಯಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಾದಿಗಳು ಪರತಂತ್ರವಾದ ತನ್ನ ಸ್ವರೂಪಕ್ಕೆ ವಿರುದ್ಧವಾದವುಗಳೆಂದು ಕೆಲವರು ಹೇಳುವರು. ಅದನ್ನು ಇಲ್ಲಿ ವಿಮರ್ಶೆ ಮಾಡೋಣ.

## ಭಕ್ತ್ಯುಪಾಯವು ಆತ್ಮನಾಶಕವಾಗಿ ಸ್ವರೂಪವಿರುದ್ಧ ಎಂದು ಹೇಳುವ ವಾದ ಸರಿಯಲ್ಲ

ಆತ್ಮಸ್ವರೂಪಕ್ಕೇ ಭಕ್ತ್ಯುಪಾಯಾದಿಗಳು ವಿರುದ್ಧವೆಂಬುದು ;

(೧) ಆತ್ಮಸ್ವರೂಪನಾಶಕತ್ವದಿಂದಲೋ—

(೨) ಅಥವಾ ಆತ್ಮಸ್ವರೂಪದಲ್ಲಿ ಅಸಂಭಾವಿತತ್ವ ಅಂದರೆ ಕೂಡದೆ ಇರುವಿಕೆ ಅದರಿಂದಲೋ

(೩) ಅಥವಾ ಅನರ್ಥವನ್ನು ಉಂಟುಮಾಡುತ್ತದೆ ಎಂಬುದಾಗಿಯೋ ? ಎಂದು ಮೂರು ವಿಧವಾಗಿ ವಿಕಲ್ಪಮಾಡಿ, ಅವುಗಳಲ್ಲಿ ಮೊದಲನೆಯ ಪಕ್ಷವನ್ನು ನಿರಸನಮಾಡುತ್ತಾರೆ ಆಚಾರ್ಯರು.

ನಿತ್ಯಮಾನ ಆತ್ಮಸ್ವರೂಪತ್ತುಕ್ಕು ಇವೈನಾಶಕಙ್ಗಳಾಯ್‌ಕ್ಕೊಂಡು ಸ್ವರೂಪ ವಿರುದ್ಧಙ್ಗಳೆನ್ನ ಕ್ಷೊಣ್ಣಾತು—ಆತ್ಮಸ್ವರೂಪ ನಿತ್ಯವಾದುದು. ಆದುದರಿಂದ ಅದರ ಸ್ವರೂಪಕ್ಕೆ ಇವು ನಾಶಕಗಳು ಹೇಗೆ ಆಗುತ್ತವೆ ? ಎನ್ನುತ್ತಾರೆ. ಹಾಗೆ ಹೇಳುವುದು ಸರಿಯಲ್ಲ ಎಂಬುದು ತಾತ್ಪರ್ಯ.

## ಅಸಂಭಾವಿತವಾಗಿರುವಿಕೆಯಿಂದ ಸ್ವರೂಪವಿರುದ್ಧ ಎಂಬ ಹೇಳಿಕೆಯ ನಿರಸನ

ಜೀವನು ಅಣುಸ್ವರೂಪನು. ಅಂತಹವನಿಗೆ ಕರ್ತೃತ್ವವು ದೇಹಮೂಲಕವಾಗಿಯೇ ವಿನಾ ಸ್ವರೂಪಮೂಲಕವಲ್ಲವು. ಹಾಗೆಯೇ ಗೀತೆಯಲ್ಲೂ ಕರ್ಮಸನ್ಯಾಸವನ್ನು ಬೋಧಿಸುವ ಸಂದರ್ಭದಲ್ಲಿ **"ಬ್ರಹ್ಮಣ್ಯಾಧಾಯ[1] ಕರ್ಮಾಣಿ**— ಕರ್ಮಗಳು ಜೀವಸ್ವರೂಪಕ್ಕೆ ಸೇರಿದವಲ್ಲವಾದುದರಿಂದ ಬ್ರಹ್ಮಣಿ ಎಂದರೆ ಪ್ರಕೃತಿಯಲ್ಲಿ ಸಮರ್ಪಿಸಿ" ಎಂಬರ್ಥವು ಹೇಳಲ್ಪಟ್ಟಿರುತ್ತದೆ. ಹಾಗೆಯೇ **'ನಕರ್ತೃತ್ವಂ[2] ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ'** ಈ ಜೀವಾತ್ಮಸ್ವರೂಪಕ್ಕೆ ಕರ್ತೃತ್ವವು ಸೇರಿದುದಲ್ಲವೆಂದು ಹೇಳಲ್ಪಟ್ಟಿರುತ್ತದೆ. ಇದೂ ಅಲ್ಲದೆ,

**ಪ್ರಕೃತೇಃ ಕ್ರಿಯಮಾಣಾನಿ[3] ಗುಣೈಃ ಕರ್ಮಾಣಿ ಸರ್ವಶಃ ।**
**ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿಮನ್ಯತೇ ॥**

1. ಗೀತೆ. ೫–೧೦. 2. ಗೀತೆ. ೫–೧೪. 3. ಗೀತೆ. ೩–೨೭.

ದೇಹಸಂಬಂಧದಿಂದುಂಟಾಗತಕ್ಕ ಕರ್ಮಗಳಿಗೆ ಸ್ವರೂಪದಿಂದ ತನಗೆ ಸಂಬಂಧ ವಿಲ್ಲ. ಆದರೂ ಆ ಆತ್ಮನು ತಿಳಿವಳಿಕೆಯಿಲ್ಲದೆ 'ನಾನೇ ಆ ಕೆಲಸಗಳನ್ನು ಮಾಡು ತ್ತೇನೆ' ಎಂದು ತಿಳಿಯುತ್ತಾನೆ ಎಂದು ಹೇಳಲ್ಪಟ್ಟಿದೆ. ಮತ್ತು "**ಗುಣಾಗುಣೇಷು ವರ್ತಂತೇ ಇತಿ ಮತ್ವಾನಸಜ್ಜತೇ**" ಸತ್ವರಜಸ್ತಮೋಗುಣಗಳಿಂದ ಯುಕ್ತವಾದ ದೇಹವು ಸತ್ವರಜಸ್ತಮೋಗುಣರೂಪವಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತದೆ ಎಂದು ತಿಳಿದು ಅವುಗಳಲ್ಲಿ ತಾನು ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ. ಇವೇ ಮೊದಲಾದ ಬಹು ಪ್ರಮಾಣಗಳುಂಟು. ಆದುದರಿಂದ ಜೀವಸ್ವರೂಪಕ್ಕೆ ಕರ್ತೃತ್ವವಿಲ್ಲದುದ ರಿಂದ ಭಕ್ತ್ಯಾದಿ ಕರ್ಮಗಳು ಅಸಂಭಾವಿತಗಳಾಗಿ ಸ್ವರೂಪವಿರುದ್ಧವು ಎಂಬುದು ಪೂರ್ವಪಕ್ಷಿಗಳ ತಾತ್ಪರ್ಯ. ಅದನ್ನು ನಿರಸನ ಮಾಡುತ್ತಾರೆ.

**ಪ್ರಪತ್ಯನುಷ್ಠಾನತ್ತಿಲುಮ್, ಕೈಙ್ಕರ್ಯತ್ತಿಲುಮ್ ಪೋಲೆ ಭಕ್ತ್ಯಾದಿ ಗಳಿಲುಮ್. (೧) 'ಕರ್ತಾಶಾಸ್ತ್ರಾರ್ಥವತ್ವಾತ್'. (೨) 'ಪರಾತ್ತು ತಚ್ಛ್ರುತೇಃ' ಎಙ್ಕಿರಪಡಿಯೇ ಭಗವದಧೀನ ಕರ್ತೃತ್ವಮುಂಡಾಗೈಯಾಲುಮ್.**

ಪ್ರಪತ್ತಿಯನ್ನು ಅನುಷ್ಠಿಸುವುದರಲ್ಲೂ ಸಹ ಕೈಙ್ಕರ್ಯ ಮಾಡುವುದರಲ್ಲಿ ಹೇಗೋ ಹಾಗೆ, ಭಕ್ತ್ಯಾದಿಗಳಲ್ಲೂ ಸಹ ಕರ್ತಾ ಶಾಸ್ತ್ರಾರ್ಥವತ್ವಾತ್—ಎಂದರೆ ಶಾಸ್ತ್ರದಲ್ಲಿ ಯಜೇತ, ಉಪಾಸೀತ—ಸ್ವರ್ಗಕಾಮನಾದರೆ ಯಜ್ಞವನ್ನು ಮಾಡು, ಮೋಕ್ಷಾರ್ಥಿಯಾದರೆ ಉಪಾಸನೆಯನ್ನು ಮಾಡು ಎಂಬ ಶಾಸ್ತ್ರಗಳಿಗೆ ಸಾರ್ಥಕ್ಯ ಉಂಟಾಗಬೇಕಾದುದರಿಂದ **ಆತ್ಮಾ ಕರ್ತಾ**=ಆತ್ಮನು ಕರ್ತೃ ಎಂದು ಒಪ್ಪತಕ್ಕದ್ದು. "ಏಷಹಿದ್ರಷ್ಟಾ ಕರ್ತಾ ಭೋಕ್ತಾ ವಿಜ್ಞಾನಾತ್ಮಾ ಪುರುಷಃ" ಇವೇ ಮೊದಲಾದ ಶ್ರುತಿಯೂ ಆತ್ಮನಿಗೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಗಳುಂಟೆಂದು ಹೇಳು ತ್ತದೆ. ಈ ಕರ್ತೃತ್ವವು **ಪರಾತ್ತು ತಚ್ಛ್ರುತೇಃ**=ಭಗವಂತನಿಗೆ ಅಧೀನವಾದುದು ಎಂದೂ ಶಾಸ್ತ್ರದಲ್ಲಿ ಹೇಳಿದೆ.

ಈ ವಿಷಯದಲ್ಲಿ ಪೂರ್ವಪಕ್ಷಿಗೆ ಏನು ಸಮಾಧಾನವೆಂದರೆ ಜೀವನಿಗೆ ಸ್ವರೂಪತಃ ಕರ್ತೃತ್ವವೇ ಇಲ್ಲವೆಂಬ ವಾದ ನಿಜವಾದುದಲ್ಲ. ಆತನಿಗೆ **ಪರಾಯತ್ತಃಕರ್ತೃತ್ವ**= ಪರಮಾತ್ಮನಿಗೆ ಅಧೀನವಾದ ಕರ್ತೃತ್ವ ಉಂಟೆಂದು ಶಾಸ್ತ್ರ ಹೇಳುತ್ತದೆ ಎಂಬುದು ಈ ಎರಡು ಬ್ರಹ್ಮಸೂತ್ರಗಳಿಂದಲೂ, ಶ್ರುತಿಯಿಂದಲೂ ವ್ಯಕ್ತವಾಗಿದೆ. ಆದರೆ ಇನ್ನೊಂದು ಪೂರ್ವಪಕ್ಷವು ಬರಬಹುದು. ಏನೆಂದರೆ ಹೀಗೆ ಜೀವನ ಕರ್ತೃತ್ವವು ಪರಮಾತ್ಮಾಧೀನವಾದರೆ ಪರಮಾತ್ಮನು ಇವನನ್ನು ಒಳ್ಳೆಯ ಕಾರ್ಯಗಳಲ್ಲಿ ಪ್ರವರ್ತಿ ಸುವಂತೆ ಮಾಡುತ್ತಾನೆಂಬುದು ಸಂಗತವಾದರೂ ಈ ಜೀವನು, ನಿಷಿದ್ಧ ಕರ್ಮಗಳಲ್ಲಿ

ಪ್ರವರ್ತಿಸುತ್ತಾನಲ್ಲ-ಆಗ ಅದು ಪರಮಾತ್ಮಾಧೀನ ತಾನೆ? ಹಾಗೆ ಪರಮಾತ್ಮನು ಆ ನಿಷಿದ್ಧ ಕರ್ಮಗಳನ್ನು ಮಾಡುವಂತೆ ಪ್ರೇರಿಸಬಹುದೆ ? ಇದು ನ್ಯಾಯವೆ ? ಅಂದರೆ—

ಕೃತ [1]ಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾ ವೈಯರ್ಥ್ಯಾದಿಭ್ಯಃ ।

ಎಂಬ ಬ್ರಹ್ಮಸೂತ್ರದ ಪ್ರಕಾರ ಪ್ರಥಮ ಪ್ರವೃತ್ತಿಯಲ್ಲಿ ಸರ್ವೇಶ್ವರನು ಜೀವನನ್ನು ಸಙ್ಕಲ್ಪಪ್ರಯತ್ನಗಳಲ್ಲಿ ಸ್ವತಂತ್ರನಾಗಿ ಬಿಟ್ಟುಬಿಡುವುದರಿಂದ ಕರ್ತೃತ್ವವು ಜೀವಾತ್ಮನಿಗೆ ಕೂಡುತ್ತದೆ, ಆದುದರಿಂದ ಜೀವಾತ್ಮನಿಗೆ ಕರ್ತೃತ್ವವಿಲ್ಲ ವೆಂಬ ವಾದವು ಅಸಂಗತವು. ಆದರೆ ಗೀತೆಯಲ್ಲಿ ಹೇಳಿರುವ ಪ್ರಮಾಣಗಳಿಗೆಲ್ಲಾ ತಾತ್ಪರ್ಯವೇನೆಂದರೆ ಈ ಕರ್ಮಗಳೆಲ್ಲಾ ಪೂರ್ವ ಕರ್ಮಾನುಸಾರವಾಗಿ ದೇಹ ಮೂಲಕವಾಗಿ ತನ್ನ ಕರ್ತೃತ್ವ ಮೂಲಕ ನಡೆದರೂ ದೇಹವೇ ನಡೆಸುತ್ತದೆ ಎಂಬ ಅನುಸಂಧಾನವಿರಬೇಕೆಂದೂ ಆ ಕರ್ಮಗಳಲ್ಲಿ ತನಗೆ ಸಂಬಂಧ ಉಂಟೆಂದು ಭಾವಿಸ ಬಾರದೆಂಬ ತಾತ್ಪರ್ಯವು. ಆದುದರಿಂದ ಅಸಂಭಾವಿತವಾದುದರಿಂದ ಸ್ವರೂಪ ವಿರುದ್ಧವೆಂಬ ವಾದವು ಕೂಡುವುದಿಲ್ಲವೆಂಬ ತಾತ್ಪರ್ಯ.

ಈ ವಾಕ್ಯಾರಂಭದಲ್ಲಿ 'ಪ್ರಪತ್ತ್ಯನುಷ್ಠಾನತ್ತಿಲುಮ್ ಕೈಙ್ಕರ್ಯಂ ಪೋಲೆ' ಭಗವದಧೀನ ಕರ್ತೃತ್ವ ಉಂಟು ಎಂದು ಏಕೆ ಹೇಳಲ್ಪಟ್ಟಿತೆಂದರೆ, ಈ ಪೂರ್ವಪಕ್ಷಿ ಗಳು ಭಗವದ್ಭಾಗವತ ಕೈಙ್ಕರ್ಯಗಳು ಆವಶ್ಯಕವೆಂದು ಹೇಳುವರು. ಹಾಗಾದರೆ ಆತ್ಮಾವಿಗೆ ಕೈಙ್ಕರ್ಯಕ್ಕೆ ಕರ್ತೃತ್ವವಿದ್ದರೆ ಪ್ರಪತ್ತ್ಯನುಷ್ಠಾನಕ್ಕಾಗಲಿ ಭಕ್ತ್ಯುಪಾ ಯಾನುಷ್ಠಾನಕ್ಕಾಗಲಿ ಏಕೆ ಕರ್ತೃತ್ವವಿಲ್ಲವೆಂಬವಾದ ಎಂಬ ಅಭಿಪ್ರಾಯ. ಅದ ಕ್ಕಾಗಿ. ಹಾಗೆ ಪ್ರಯೋಗವು ಅಕರ್ತೃತ್ವದಲ್ಲಿ ಮುಂದೆ ಇನ್ನೊಂದು ದೂಷಣ ವನ್ನು ಹೇಳುತ್ತಾರೆ.

**ಆತ್ಮಸ್ವರೂಪ ಮತ್ಯಂತ ನಿರ್ವ್ಯಾಪಾರಮೆನ್ನುಮ್ಪೋದು ಸತ್ವಲಕ್ಷಣಮಾನ ಅರ್ಥಕ್ರಿಯಾಕಾರಿತ್ವಮಿಲ್ಲಾಮೈಯಾಲೇ ತುಚ್ಛತ್ವಂ ಪ್ರಸಙ್ಗಿಕ್ಕೈಯಾಲುಮ್.**

ಆತ್ಮಸ್ವರೂಪವು, ಅತ್ಯಂತ ನಿರ್ವ್ಯಾಪಾರಮೆನ್ನುಮ್ಪೋದು—ಅಣುವಾಗಿರುವು ದರಿಂದ ಸರ್ವವ್ಯಾಪಾರಗಳಿಂದಲೂ ಶೂನ್ಯವಾದುದು ಎಂದು ಹೇಳುವಾಗ ಸತ್ವ ಲಕ್ಷಣಮಾನ—ವಸ್ತುವಿನ ಸತ್ತೆಗೆ, ಇರುವಿಕೆಗೆ, ಲಕ್ಷಣವಾದ ಅರ್ಥಕ್ರಿಯಾ ಕಾರಿತ್ವಂ ಪ್ರಯೋಜನ ರೂಪವಾದ ಒಂದು ವ್ಯಾಪಾರವನ್ನು ಮಾಡೋಣವು ಇಲ್ಲಾ ಮೈಯಾಲೇ—ಈ ಆತ್ಮಾವಿಗೆ ಇಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯವಾಗುವು ದರಿಂದ ತುಚ್ಛತ್ವಂ ಪ್ರಸಙ್ಗಿಕ್ಕೈಯಾಲುಮ್, ಗಗನಾರವಿಂದ=ಆಕಾಶದ ಹೂವು,

1. ಬ್ರಹ್ಮಸೂತ್ರ. ೨-೩-೪೧.

**ಶಶಶೃಂಗ**—ಮೊಲದ ಕೊಂಬು, ಇವುಗಳ ಹಾಗೆ ಸ್ವರೂಪವೇ ಇಲ್ಲದಹಾಗೆ ಆಗುವುದರಿಂದಲೂ ಇದು ಸರಿಯಲ್ಲ.

**ಇದರ ವಿವರಣೆ :** ಇದು ಎರಡನೆಯ ದೋಷ. ಆತ್ಮನು ಅಣುವಾಗಿರುವುದರಿಂದ ಯಾವುದೊಂದು ವ್ಯಾಪಾರವು ಅವನಿಗಿಲ್ಲವೆಂದು ಹೇಳಿಬಿಟ್ಟರೆ, ಆಗ ಆತ್ಮಾವಿಗೆ ಸತ್ತೆಯೇ ಇಲ್ಲ ಎಂದು ಹೇಳಬೇಕಾಗುತ್ತದೆ. ಸತ್ವಸ್ಯ ಲಕ್ಷಣಂ ಅರ್ಥಕ್ರಿಯಾಕಾರಿತ್ವಮ್, ತದಭಾವೇ ತುಚ್ಛತ್ವಮ್, ಎಂದು ಶಾಸ್ತ್ರಕಾರರು ನಿರ್ಣಯಿಸಿದ್ದಾರೆ. ಮೇಲಿನ ಶ್ರುತಿ ವಾಕ್ಯಾನುಸಾರವಾಗಿ ಜ್ಞಾತೃತ್ವವೂ, ಇಚ್ಛೆಸೋಣವೂ, ಪ್ರಯತ್ನವೂ ಇವೆಲ್ಲಾ ಆತ್ಮನಿಗೆ ಇರುವುದರಿಂದ ಸತ್ತೆಗೆ ಲಕ್ಷಣವಾದ ಅರ್ಥಕ್ರಿಯಾಕಾರಿತ್ವವು ಪ್ರಯೋಜನರೂಪವ್ಯಾಪಾರವುಂಟು. ಕರ್ತೃತ್ವಕ್ಕೆ ಇವುಗಳಿರಬೇಕು. ಇವು ಯಾವುದೂ ಇಲ್ಲವೆಂದರೆ ಗಗನ ಪುಷ್ಪದ ಹಾಗೂ, ಮೊಲದ ಕೊಂಬಿನ ಹಾಗೂ, ಸ್ವರೂಪ ಶೂನ್ಯವಾದ ತುಚ್ಛತ್ವವು ಪ್ರಾಪ್ತವಾಗಿರುತ್ತದೆಂಬ ಭಾವ. ಮತ್ತೆ ಒಂದು ಸಂದೇಹ.

ಹೀಗೆ ತುಚ್ಛತ್ವ ವಾದವನ್ನು ತಂದರೆ ಕಾಲವು ವಿಭುವಾದುದು, ಅಚೇತನವು. ಆದುದರಿಂದ ನಿರ್ವ್ಯಾಪಾರವಾದುದು, ಆದುದರಿಂದ ಅದಕ್ಕೆ ತುಚ್ಛತ್ವ ಪ್ರಸಂಗ ಬರುತ್ತದಲ್ಲ ಎಂದರೆ ಕಾಲಕ್ಕೆ ಕ್ಷಣ ಪರಿಣಾಮಾದಿ ರೂಪ ವ್ಯಾಪಾರವೂ, ಉತ್ಪತ್ತಿ ವಿನಾಶರೂಪ ವ್ಯಾಪಾರವೂ ಅದರ ಮೂಲಕ ಉಂಟಾಗುವುದರಿಂದ ತುಚ್ಛತ್ವ ಪ್ರಸಂಗಕ್ಕೆ ಕಾರಣವಿಲ್ಲ. ಅರ್ಥಕ್ರಿಯಾಕಾರಿತ್ವ ಇಲ್ಲಿಯೂ ಉಂಟು ಎಂಬುದು ಸಮಾಧಾನ.

ಜ್ಞಾನಚಿಕೀರ್ಷಾ ಪ್ರಯತ್ನಾಶ್ರಯತ್ವ ರೂಪಮಾನ ಕರ್ತೃತ್ವ ಮಿಲ್ಲೈಯಾಕ್ಕಿ ಆತ್ಮಾವುಕ್ಕು ಸನ್ನಿಧಿಮಾತ್ರಮೇ ವ್ಯಾಪಾರ ಮೆನ್ನಿಲ್, ಭೋಕ್ತೃತ್ವಾದಿಕಳುಮನ್ರಿಕ್ಕೇ ಇವನುಕ್ಕು ಸಂಸಾರಮ್ ಮಿಥ್ಯಾವಾಯ್ ಮೋಕ್ಷೋಪಾಯ ನೈರಪೇಕ್ಷ್ಯಾದಿ ಪ್ರಸಙ್ಗಮ್ ವರುಗೈಯಾಲುಮ್ ಸಾಙ್ಖ್ಯಾದಿಕಳ್ ಶೊಲ್ಲುಮಾಪ್ಪೋಲೆ ಸ್ವರೂಪತ್ತಿಲ್ ಕರ್ತೃತ್ವ ಮಿಲ್ಲಾಮೈಯಾಲೆ ಉಪಾಸನಾದಿಕಳ್ ಸ್ವರೂಪ ವಿರುದ್ಧಙ್ಗಳೆನ್ರು ಶೊಲ್ಲುವು ಮೊಣ್ಣಾದು.

**ಇದರ ಅರ್ಥ ವಿವರಣೆ:** ಜ್ಞಾನ ಚಿಕೀರ್ಷಾ ಪ್ರಯತ್ನಾಶ್ರಯತ್ವ ರೂಪಮಾನ—ಜ್ಞಾತೃತ್ವ ಇಚ್ಛಾರೂಪ ಸಙ್ಕಲ್ಪ, ಪ್ರಯತ್ನ ಇವುಗಳಿಗೆ ಆತ್ಮನು ಆಶ್ರಯವಾಗಿರುವುದರಿಂದ ಅಂತಹ, ಕರ್ತೃತ್ವ ಮಿಲ್ಲೈಯಾಕ್ಕಿ—ಹೀಗೆ ಆತ್ಮನಿಗೆ ಇರುವ ಕರ್ತೃತ್ವವು ಇಲ್ಲವೆಂದು ಹೇಳಿ, ಆತ್ಮಾವುಕ್ಕು—ಆತ್ಮನಿಗೆ ಸನ್ನಿಧಿಮಾತ್ರಮೇ—ಪ್ರಕೃತಿಯ ಹತ್ತಿರವಿರುವುದೇ, ವ್ಯಾಪಾರ ಮೆನ್ನಿಲ್—ವ್ಯಾಪಾರವು ಎಂದು ಪೂರ್ವ

ಪಕ್ಷಿಗಳು ಭಾವಿಸಿದರೆ ಭೋಕ್ತೃತ್ವಾದಿಗಳೂ, ಅನ್ರಿಕ್ಕೇ—ಇಲ್ಲದವುಗಳಾಗಿ ಇವ ನುಕ್ಕು—ಈ ಚೇತನನಿಗೆ ಸಂಸಾರವು ಮಿಥ್ಯೆಯಾಗಿ ಮೋಕ್ಷೋಪಾಯ ನೈರಪೇಕ್ಷ್ಯಾದಿ ಪ್ರಸಙ್ಗಮ್—ಮೋಕ್ಷೋಪಾಯದ ಅನಾವಶ್ಯಕತೆ ಮೊದಲಾದವುಗಳ ಪ್ರಸಙ್ಗವು, ವರುಗೈಯಾಲುಮ್—ಉಂಟಾಗುವುದರಿಂದಲೂ ; ಇಲ್ಲಿ ಆದಿಪದದಿಂದ ನಿರರ್ಥಕ ವೆಂಬ ಭಾವವೂ ಸೂಚಿಸಲ್ಪಟ್ಟಿತು. ಯಾವಾಗ ಸಂಸಾರವೇ ಸುಳ್ಳೋ ಆಗ ಪ್ರಯ ತ್ನವೂ ನಿರರ್ಥಕವೆಂಬ ಭಾವವೂ ತೋರುತ್ತದೆ. ಇದು ಮೂರನೆಯ ದೂಷಣವು.

ಆತ್ಮ ಸ್ವರೂಪದ ಗುಣಗಳು ಜ್ಞಾನಚಿಕೀರ್ಷಾ ಪ್ರಯತ್ನಗಳು. ಇವುಗಳಿಂದಲೇ ಆತ್ಮನಿಗೆ ಕರ್ತೃತ್ವವು, ಉಪಾಧಿಯಾದ ಶರೀರದಮೂಲಕವೂ ಅಲ್ಲದೆ ಸ್ವರೂಪತಃ ಕೂಡ ಉಂಟು. ಈ ಕರ್ತೃತ್ವವು ಮುಕ್ತದೆಶೆಯಲ್ಲಿಯೂ ಉಂಟು. ಮುಕ್ತದೆಶೆಯಲ್ಲಿ ಈ ಆತ್ಮಾವಿಗೆ ದಿವ್ಯ ಮಙ್ಗಳ ವಿಗ್ರಹವು ಉಂಟಾದರೆ ತನ್ಮೂಲಕವಾಗಿಯೂ ಕರ್ತೃತ್ವವುಂಟು, ಆದರೂ ಇವು ಇಲ್ಲವೆಂದೂ ಪ್ರಕೃತಿಯ ಸನ್ನಿಧಿಯಲ್ಲಿ ನಿರ್ವ್ಯಾಪಾರವಾಗಿ ಸುಮ್ಮನೆ ಇದ್ದಾನೆ ಎಂದೂ ಪ್ರಕೃತಿಯಾದ ದೇಹವೇ ಸರ್ವ ವ್ಯಾಪಾರಗಳನ್ನೂ ನಡೆಸುತ್ತದೆ ಎಂದೂ ಸಾಂಖ್ಯನು ಹೇಳುವ ಹಾಗೆ ವಾದಿಸಿದರೆ, ಆಗ ಆತ್ಮಾವಿಗೆ ಭೋಕ್ತೃತ್ವವೂ ಇಲ್ಲವೆಂದಾಗಿ, ಸಂಸಾರ ವೆಂಬುದು ಸುಳ್ಳಾಗಿ. ಮೋಕ್ಷಕ್ಕಾಗಿ ಯಾವ ಉಪಾಯವೂ ಬೇಕಿಲ್ಲವೆಂಬುದಾಗಿ ಆಗುತ್ತದೆ ಎಂದು ಆ ವಾದವನ್ನೂ ಖಂಡಿಸುತ್ತಾರೆ.

ಹೀಗೆ ಆತ್ಮಾವಿಗೆ ಕರ್ತೃತ್ವವು ಅಸಂಭಾವಿತವು. ಆದುದರಿಂದ ಆತ್ಮಸ್ವರೂಪಕ್ಕೆ ವಿರುದ್ಧವೆಂದು ತಂದ ಆಕ್ಷೇಪವನ್ನೂ ಮೂರು ದೂಷಣಗಳಿಂದ ನಿರಸನ ಮಾಡಿರು ತ್ತಾರೆ. ಹೇಗೆಂದರೆ—

೧. ಕರ್ತೃತ್ವವೇ ಆತ್ಮನಿಗೆ ಇಲ್ಲವೆಂದರೆ ಕೈಙ್ಕರ್ಯಾದಿಗಳಿಗೆ ಮಾತ್ರ ಕರ್ತೃತ್ವವು ಹೇಗೆ ? ಶ್ರುತಿಯಲ್ಲಿ ಕರ್ತೃತ್ವ, ಜ್ಞಾತೃತ್ವ, ಭೋಕ್ತೃತ್ವಾದಿ ಗಳುಂಟೆಂದು ಹೇಳುತ್ತದೆಯಲ್ಲಾ ? ಬ್ರಹ್ಮಸೂತ್ರಗಳು ಈಶ್ವರಾಧೀನ ಕರ್ತೃತ್ವ ಉಂಟೆಂದು ಹೇಳುತ್ತದೆಯಲ್ಲಾ ?

೨. ಆತ್ಮನಿಗೆ ಕರ್ತೃತ್ವವಿಲ್ಲವೆಂದರೆ ಅದು ಸತ್ತಾಯುಕ್ತವಾದುದಲ್ಲವೆಂದು ಹೇಳಿದಂತಾಯಿತು. ಸತ್ತೆಯಿಂದ ಕೂಡಿದ ವಸ್ತುವಿನ ಲಕ್ಷಣವು ಅರ್ಥಕ್ರಿಯಾಕಾರಿ ತ್ವವು. ಇದೇ ಇಲ್ಲವೆಂದು ಹೇಳಿದಂತಾಗುವುದರಿಂದ ಆತ್ಮಾವಿಗೆ ತುಚ್ಛತ್ವವು ಏರ್ಪಟ್ಟಿತು.

೩. ಆತ್ಮಾವಿಗೆ ಕರ್ತೃತ್ವವಿಲ್ಲವು. ಪ್ರಕೃತಿಯ ಹತ್ತಿರವಿರುತ್ತದೆ, ಪ್ರಕೃ ತಿಯೇ ಕೆಲಸಮಾಡುತ್ತದೆ ಎಂದು ಹೇಳಿದಂತಾಯಿ ; ಆಗ ಆತ್ಮಾವಿಗೆ ಭೋಕ್ತೃತ್ವ

ವಿಲ್ಲವೆಂದು ಹೇಳಬೇಕಾಗುತ್ತದೆ. ಈ ಸಂಸಾರವೆಲ್ಲಾ ಏನು ಎಂದರೆ ಮಿಥ್ಯೆ ಎಂದು ಅದ್ವೈತಿಗಳು ಹೇಳಿದಂತೆ ಹೇಳಬೇಕಾಗುತ್ತದೆ. ಸಂಸಾರ ಸುಳ್ಳಾದರೆ ಮೋಕ್ಷಕ್ಕಾಗಿ ಏಕೆ ಪ್ರಯತ್ನವು ? ಮೋಕ್ಷ ಶಾಸ್ತ್ರವೆಲ್ಲಾ ಆಗಬೇಕಾಗಿಲ್ಲ. ಇಂತಹ ದೂಷಣೆಗಳುಂಟಾಗುತ್ತವೆ ಎಂಬ ತಾತ್ಪರ್ಯ. ಹೀಗೆ ದೂಷಣೆಗಳನ್ನು ಹೇಳಿ ನಿಗಮನ ರೂಪದಲ್ಲಿ ವಾಕ್ಯ ಪೂರಣ ಮಾಡಿ ಹೇಳುತ್ತಾರೆ. ಹೀಗೆ ದೂಷಣೆ ಗಳುಂಟಾಗುವುದರಿಂದ **ಸಾಂಖ್ಯಾದಿಗಳ್ ಶೊಲ್ಲುಮಾಪ್ಪೋಲೆ**—ಸಾಂಖ್ಯಾದಿಗಳು ಹೇಳುವ ಹಾಗೆ, ಅವರುಗಳು ಹೇಳುವುದೇನೆಂದರೆ ಆತ್ಮವು ಪ್ರಕೃತಿಯ ಹತ್ತಿರ ಸುಮ್ಮನೆ ಕಲ್ಲಿನ ಹಾಗೆ ನಿರ್ವ್ಯಾಪಾರ ಉಳ್ಳದ್ದಾಗಿರುತ್ತದೆ. ಕಾರ್ಯ ಮಾಡುವು ದೆಲ್ಲಾ ಪ್ರಕೃತಿಯೇ, ದೇಹವೇ ಎಂಬುದಾಗಿ **ಸ್ವರೂಪತ್ತಿಲ್**—ಆತ್ಮನ ಸ್ವರೂಪ ದಲ್ಲಿ ಕರ್ತೃತ್ವವಿಲ್ಲದಿರುವದರಿಂದ ಉಪಾಸನಾದಿಗಳು ಸ್ವರೂಪ ವಿರುದ್ಧಗಳೆಂದು **ಶೊಲ್ಲುವುದ್ ವೊಣ್ಣಾದು**—ಹೇಳಲು ಸಾಧ್ಯವಿಲ್ಲವು.

ಹೀಗೆ ಆತ್ಮನಿಗೆ ಕರ್ತೃತ್ವವಿರುವದರಿಂದ ಕರ್ತೃತ್ವವಿಲ್ಲವೆಂಬ ಪೂರ್ವಪಕ್ಷ ವನ್ನು ಖಂಡಿಸಿ ಉಪಾಯಾನುಷ್ಠಾನವು ಆತ್ಮಸ್ವರೂಪಕ್ಕೆ ಅಸಂಭಾವಿತವಾಗಿ ವಿರುದ್ಧವಲ್ಲವೆಂದು ಸ್ಥಾಪಿಸಿದರು,

ಆದರೆ ಭಾರತ ಶಾಂತಿಪರ್ವದಲ್ಲಿ—

[1]**ಅಚೇಷ್ಟಮಾನ ಮಾಸೀನಮ್ ಶ್ರೀಃ ಕಂಚಿದುಪತಿಷ್ಠತಿ ।**
**ಕರ್ಮೀಕರ್ಮಾನು ಸೃತ್ಯಾನ್ಯೋ ನಪ್ರಾಶ್ಯಮಧಿಗಚ್ಛತಿ ॥**

ಆತ್ಮಾ ಏನೊಂದು ಪ್ರಯತ್ನಮಾಡದಿದ್ದರೂ ಈತನಿಗೇ ಐಶ್ವರ್ಯವು ಪ್ರಾಪ್ತ ವಾಗಬಹುದೆಂದು ಹೇಳಿದೆಯಲ್ಲಾ ! ಅಚೇಷ್ಟಮಾನಯಾಸೀನ—ಎಂದು ಹೇಳಿರುವು ದರಿಂದ ನಿರ್ವ್ಯಾಪಾರತ್ವವು ಹೇಳಿದೆಯಲ್ಲವೇ ? ಹಾಗೆಯೇ ಭಕ್ತ್ಯಾದಿ ಉಪಾ ಯಾನುಷ್ಠಾನಗಳಿಲ್ಲದೆ ಇದ್ದರೂ ಸರ್ವೇಶ್ವರನು ನಮ್ಮ ಕೋರಿಕೆಯನ್ನು ಸಫಲ ಮಾಡುವನು ಎಂದು ಅಭಿಪ್ರಾಯವಾಗುವುದಿಲ್ಲವೇ ಎಂದು ಕೇಳಿದರೆ, ಇದು ನಿರ್ವ್ಯಾಪಾರವನ್ನು ಬೋಧಿಸಲು ಹೊರಟ ಶ್ಲೋಕವಲ್ಲ, ಹಿಂದೆ ಮಾಡಿದ ಸುಕೃತ ವಿಶೇಷದ ಫಲವಾಗಿ, ಒಬ್ಬನಿಗೆ ವಿಶೇಷ ಪ್ರಯತ್ನಗಳು ಯಾವದೂ ಇಲ್ಲದೆ ಯಾವುದೋ ಕಾರಣದ ಮೂಲಕ ಸರ್ವೇಶ್ವರನ ಸಙ್ಕಲ್ಪದರೀತಿಯಿಂದ ಧನವು ಲಭಿಸುವುದು. ಇನ್ನೊಬ್ಬನಿಗೆ ಇಂತಹ ಸುಕೃತ ವಿಶೇಷ, ಸ್ವಾಮಿಸಙ್ಕಲ್ಪ ಇವೇ ಮೊದಲಾದವು ಇಲ್ಲವಾದುದರಿಂದ ಎಷ್ಟು ಪ್ರಯತ್ನಪಟ್ಟರೂ ತನ್ನಿಷ್ಟವು ಲಭಿಸದೆ ಹೋಗುತ್ತದೆ ಎಂಬ ತಾತ್ಪರ್ಯದಿಂದ ಹೇಳಿದ ಮಾತು. ಪೂರ್ವಜನ್ಮಗಳಲ್ಲಿ

1. ಭಾರತ ಶಾಂತಿಪರ್ವ.

ಸಂಪಾದಿಸಿದ ಕರ್ಮ ವಿಶೇಷದ ಫಲವನ್ನು ಹೇಳಲು ಹೊರಟ ಶ್ಲೋಕ ಎಂದು ಸಮಾಧಾನ.

## ಅನರ್ಥಾವಹವಾಗಿ ಸ್ವರೂಪ ವಿರುದ್ಧವೆಂಬವಾದದ ನಿರಸನ

ಮೋಕ್ಷ ಪ್ರತಿಕೂಲಂಗಳಾನ ರಾಗಾದ್ಯುಪಾಧಿಕಳಾಲೆವನ್ದ ಕಾಮ್ಯ ನಿಷಿದ್ಧಂಗಳ್ ಪೋಲೆ ಬನ್ಧಕಂಗಳಲ್ಲಾಮೈಯಾಲುಮ್ ಮೋಕ್ಷಾರ್ಥಿತನಕ್ಕೇ ವಿಧಿಕ್ಕೈಯಾಲುಮ್ ಉಪಾಸನಾದಿಕಳುಕ್ಕು ಶಾಸ್ತ್ರ ಮುಖತ್ತಾಲೆ ಅನರ್ಥಾವಹತ್ವರೂಪಮಾನ ಸ್ವರೂಪ ವಿರೋಧಮ್ ಶೊಲ್ಲವೊಣ್ಣಾದು.

ಮುಂದೆ ಮೂರನೆಯ ವಿಕಲ್ಪವನ್ನು ಖಂಡಿಸುತ್ತಾರೆ. ಉಪಾಸನಾದಿಗಳು ಅನರ್ಥವನ್ನುಂಟುಮಾಡುವುವು ; ಹೇಗೆಂದರೆ 'ಈ ಉಪಾಯಗಳ ಮೂಲಕ ಮೋಕ್ಷ ಪ್ರಾಪ್ತಿಯನ್ನು ಸಾಧಿಸಿಕೊಳ್ಳುವೆನು' ಎಂಬ ಅಹಂಕಾರವನ್ನುಂಟುಮಾಡಿ ಈ ಉಪಾಸನಾದಿಗಳು ಅನರ್ಥವನ್ನುಂಟುಮಾಡುವವು. ಉಪಾಸನಾದಿಗಳು ಜ್ಞಾನಿಗಳಿಗೆ "ಅಪಾಯ", "ಭಯಾವಹ," ಶೋಕಜನಕ' ಮತ್ತು ಅಹಂಕಾರ ಮಿಶ್ರ. ಆದುದರಿಂದ ಸ್ವರೂಪ ವಿರುದ್ಧವೆಂದು ಕೆಲವರ ಅಭಿಪ್ರಾಯ.

ಇದನ್ನು ಮೂರು ಕಾರಣಗಳನ್ನು ಹೇಳಿ ನಿರಸನಮಾಡುತ್ತಾರೆ.

ಅಂತಹ ಅನರ್ಥಗಳನ್ನೇನೂ ಈ ಉಪಾಯಗಳು ಉಂಟುಮಾಡಲಾರವು. ಏಕೆಂದರೆ—

(೧) ಐಹಿಕಾಭಿಲಾಷೆಗೋಸ್ಕರ ಮಾಡುವ ಕಾಮ್ಯನಿಷಿದ್ಧಕರ್ಮಗಳ ಹಾಗೆ ಇವು ಬಂಧಕಗಳಲ್ಲವು, ಬಂಧಕಗಳಾದರಲ್ಲವೇ ಅಪಾಯವೆಂದೂ, ಭಯವನ್ನುಂಟು ಮಾಡತಕ್ಕದ್ದೆಂದೂ, ಶೋಕವನ್ನುಂಟುಮಾಡತಕ್ಕದೆಂದೂ ಅಹಂಕಾರ ಮಿಶ್ರವೆಂದೂ ಹೇಳಬಹುದು ? ಹಾಗೆ ಬಂಧಕಗಳಲ್ಲವಲ್ಲಾ ಎಂಬ ಭಾವವು.

(೨) ಇವುಗಳನ್ನು ಮೋಕ್ಷಾರ್ಥಿಯು ಉಪಾಸಿಸ ತಕ್ಕದ್ದೆಂದು [1]ತಜ್ಜಲಾನಿತಿಶಾಂತ ಉಪಾಸೀತ 'ಬ್ರಹ್ಮವಿತ್ ಬ್ರಹ್ಮೈವ ಭವತಿ' [2]'ಬ್ರಹ್ಮವಿದಾಪ್ನೋತಿ ಪರಮ್' [3]ತ ಮೇವಂ ವಿದ್ವಾನ್ ಅಮೃತ ಇಹ ಭವತಿ. [4]ತಂವಿದ್ಯಾಚ್ಛುಕ್ರಮ

1. ಛಾಂ. ೩–೧೪–೧.
2. ತೈ. ಉ. ಆನಂದವಲ್ಲೀ ಅನು. ೧.
3. ಪುರುಷಸೂಕ್ತ ತೈ. ಆ. ೩–೧೩.
4. ಕಠ. ೨–೬–೧೭.

ಮೃತಂ [1]ಯ ಏನಂ ವಿದುರಮೃತಾಸ್ತೇಭವಂತಿ. [2]ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ.

ಇಂತಹ ಅನೇಕ ಶ್ರುತಿಗಳಲ್ಲೆಲ್ಲಾ ಹೇಳಿರುವುದರಿಂದಲೂ ಉಪಾಸನವು ಉಪಾದೇಯವು. ಹಾಗೆಯೇ ಗೀತೆಯಲ್ಲೂ. [3]ನಮಸ್ಯನ್ತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ। ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂವಹಾಮ್ಯಹಂ. [4]ಅನನ್ಯಾಶ್ಚಿನ್ತಯನ್ತೋಮಾಂಸಯೇ ಜನಾಃಪರ್ಯುಪಾಸತೇ।

ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ [5]ಯೇಮಾಂ ನಿತ್ಯಯುಕ್ತಾ ಉಪಾಸತೇ। ತೇಪ್ರಾಪ್ನುವಂತಿಮಾಮೇವ, [6]ಯೇಧ್ಯಾಯನ್ತ ಉಪಾಸತೇ ತೇಷಾಮಹಂ ಸಮುದ್ಧರ್ತಾಮೃತ್ಯು ಸಂಸಾರ ಸಾಗರಾತ್ ॥

ಹೀಗೆ ಅನೇಕ ಪ್ರಮಾಣಗಳಿರುವುದರಿಂದ ಉಪಾಸನಾದಿಗಳು ಅಪಾಯವೂ ಅನರ್ಥಾವಹವೂ ಎಂದು ಹೇಳುವುದು ಹೇಗೆ ಸಾಧ್ಯ ?

(೩) ಇದು ಅನರ್ಥಾವಹವೆಂದು ಶಾಸ್ತ್ರಗಳಲ್ಲಿ ಎಲ್ಲೂ ಹೇಳಿಲ್ಲ. "ನಾನ್ಯಃ ಪಂಥಾ ವಿದ್ಯತೇ ಅಯನಾಯ" ಇತಂಹ ಉಪಾಯಾನುಷ್ಠಾನವಿಲ್ಲದೆ ಪ್ರಾಪ್ಯವನ್ನು ಹೊಂದಲು ಬೇರೆ ಮಾರ್ಗವೇ ಇಲ್ಲ ಎಂದು ಹೇಳಿದೆ. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟೇ ಹಿಂದೆ "ಪ್ರಪನ್ನಾದನ್ಯೇಷಾಂ ನದಿಶತಿಮುಕುಂದೋ ನಿಜಪದಂ" ಎಂದು ಸ್ವಾಮಿ ದೇಶಿಕರು ಹೇಳಿದ್ದಾರೆ. ಆದುದರಿಂದ ಉಪಾಸನಾದಿಗಳಿಗೆ ಜೀವಾತ್ಮ ಸ್ವರೂಪವನ್ನು ಕುರಿತು ನಾಶಕತ್ವವೇನು ಅಸಂಭಾವಿತತ್ವವೇನು ಅನರ್ಥಾವಹತ್ವವೇನು ಈ ಮೂರು ದೋಷಗಳೂ ಇಲ್ಲ, ಈ ವಾದ ಸರಿಯಲ್ಲ. ಅಂತೂ ಆತ್ಮನು ನಿತ್ಯವಾಗಿರೋಣದರಿಂದ ಭಕ್ತಿಯು ಅವನನ್ನು ನಾಶಮಾಡತಕ್ಕದ್ದಲ್ಲ. ಆತ್ಮನಿಗೆ ಪರಾಧೀನ ಕರ್ತೃತ್ವ ವಿರುವುದರಿಂದ ಭಕ್ತಿಗೆ ಅದರ ಮೂಲಕವಾಗಿ ಅಸಾಂಭಾವಿತತ್ವವಿಲ್ಲ. ಮೋಕ್ಷವನ್ನು ಪಡೆಯಬೇಕೆಂಬುವನನ್ನು ಕುರಿತೇ ಹೇಳಿರುವುದರಿಂದ ಆತುರನಾದವನಿಗೆ—ರೋಗ ಗ್ರಸ್ತನಾದವನಿಗೆ ಅಪಥ್ಯವಾದರೆ ಕೇಡುಂಟಾಗುವಂತೆ ಅನರ್ಥಾವಹತ್ವವೂ ಇಲ್ಲ.

1. ತೈ. ಉ. ನಾರಾಯಣೀಯ
2. ಮಾ. ೩–೧೩.
3. ಗೀತೆ. ೯–೧೪.
4. ಗೀತೆ. ೯–೨೭.
5. ಗೀತೆ. ೧೨–೨–೪.
6. ಗೀತೆ. ೧೨–೭.

ಬೇರೆ ದೇವತೆಗಳನ್ನು ಕುರಿತು ಯಾಗ ಮಾಡುವಿಕೆ ಮುಂತಾದವು ಕಲೆತಿರುವು ದರಿಂದ ಇವನ ಪರಮೈಕಾನ್ತಿತ್ವಕ್ಕೆ ವಿರುದ್ಧವಾಗಿವೆ ಇವು, ಎಂಬ ೭ ನೆಯ ವಾದ ಸರಿಯಲ್ಲ ಎನ್ನುವುದು.

೭. ಭಕ್ತಿಯೋಗಕ್ಕೆ ನಿತ್ಯನೈಮಿತ್ತಿಕ ಕರ್ಮಗಳು ಅಙ್ಗಗಳು, ಯಾಗಾದಿ ಗಳು ಬೇರೆ ದೇವತೆಗಳ ಆರಾಧನ ರೂಪವಾಗಿವೆ. ಇವು ಕಲೆತಿರುವುದರಿಂದ ಪರಮೈಕಾನ್ತಿಯಾದ ಅಂದರೆ ಬೇರೆ ದೇವತೆಯನ್ನು ಬಿಟ್ಟಿರುವ, ಹಾಗೆಯೇ ಬೇರೆ ಪ್ರಯೋಜನವನ್ನೂ ಬಿಟ್ಟಿರುವ ನಾರಾಯಣನನ್ನೇ ನಂಬಿರುವ ಇವನಿಗೆ ಇವೆಲ್ಲಾ ವಿರುದ್ಧಗಳಲ್ಲವೇ? ಪ್ರಕೃತಿ ಸಂಬಂಧವಿಲ್ಲದ ಬ್ರಹ್ಮವನ್ನು ಪೂಜಿಸುವರಲ್ಲವೇ ಶುದ್ಧ ಯಾಜಿಗಳು, ಎಂದರೆ ಇದು ಭಾಷ್ಯಾದಿಗಳಲ್ಲಿ ತೀರ್ಮಾನ ಮಾಡಿರುವ ವಿಷಯವನ್ನು ತಿಳಿಯದಿರುವುದರಿಂದ ಉಂಟಾದ ಸಂದೇಹ. ಹೇಗೆಂದರೆ ಪ್ರತರ್ದನಾದಿ ವಿದ್ಯೆ ಗಳಲ್ಲಿ ಪರಮಾತ್ಮನು ಇಂದ್ರಾದಿಗಳ ಶರೀರಕನಾಗಿ ಮೋಕ್ಷವನ್ನು ಬಯಸುವವರಿಗೆ ಉಪಾಸ್ಯನು ಎಂದು ನಿಷ್ಕರ್ಷಿಸಿದ್ದಾರೆ. ಇಲ್ಲಿ ಆದಿಪದದಿಂದ ಮಧುವಿದ್ಯೆಯಲ್ಲಿ ವಸ್ವಾದಿಗಳ ಉಪಾಸನೆ, ಕೈವಲ್ಯೋಪನಿಷತ್ತು ಇವೇ ಮೊದಲಾದವುಗಳಲ್ಲಿ ಹೇಳಲ್ಪಟ್ಟ ರುದ್ರಾನ್ತರ್ಯಾಮಿ ಉಪಾಸನಾದಿಗಳು ಸಂಗ್ರಹಿಸಲ್ಪಟ್ಟಿವೆ.

**ಕಂಚುಕವನ್ನು**=ಅಂಗಿಯನ್ನು ಧರಿಸಿರುವ ರಾಜನಿಗೆ ಅಂಗಿಯಮೇಲೆ ಹಾರವೇ ಮೊದಲಾದುವನ್ನು ಹಾಕಿ ಪೂಜಿಸಿದರೆ ಆ ಪೂಜೆ ರಾಜನಿಗಾಗಿತಾನೇ ಮಾಡುವುದು ಅಂಗಿ ಗಲ್ಲ ತಾನೇ. ಹಾಗೇ ರುದ್ರ, ಇಂದ್ರ ಇವರಿಂದ ಕೂಡಿದ ಪರಮಾತ್ಮನಿಗೇ ಆ ಪೂಜೆ.

ಈ ರೀತಿ ಶರಣ್ಯನೇ ಆರಾಧ್ಯನಾಗಿರುವುದರಿಂದ—ಪೂಜಿಸಲು ತಕ್ಕವನಾಗಿರು ವುದರಿಂದ ಬೇರೆ ದೇವತೆಗಳ ಸಂಬಂಧದಿಂದುಂಟಾದ ಪಾರಮೈಕಾನ್ತ್ಯಕ್ಕೆ ವಿರೋಧ ವಿಲ್ಲದಾಗಿದ್ದರೆ, ದೇವತಾನ್ತರಗಳನ್ನು ಪೂಜಿಸಿದರೂ ತಪ್ಪಿಲ್ಲ. ಇವನ ಪರ ಮೈಕಾನ್ತಿತನಕ್ಕೆ ಕುಂದಿಲ್ಲ ಎಂದಲ್ಲವೇ ಆಗುತ್ತದೆ. ನಿಜವಾಗಿ ನೋಡಿದರೆ ಪರ ಮಾತ್ಮನು ತಾನೆ ಆರಾಧ್ಯನು ಎಂದರೆ ಇಂದ್ರ, ರುದ್ರ, ಯಮ, ವರುಣ ಮುಂತಾದ ದೇವತಾನ್ತರನಾಮಗಳಿಂದ ಕೂಡಿದ ನಿತ್ಯನೈಮಿತ್ತಿಕ ಕರ್ಮ ಗಳಲ್ಲಿ ಕೆಲವು ದೇವತೆಗಳನ್ನು ಸ್ವತನ್ತ್ರವಾಗಿ ಉದ್ದೇಶ ಮಾಡಿ ಸ್ವೀಕರಿಸಿದರೂ, ಹಾಗೆಯೇ ನಿತ್ಯನೈಮಿತ್ತಿಕಗಳಿಗೆ ಹೊರಗಾದ ಬೇರೆ ಫಲಗಳನ್ನು ಉದ್ದೇಶಮಾಡಿ ಮಾಡುವ ಕಾಮ್ಯಕರ್ಮಗಳಲ್ಲಿ ಸ್ವತಂತ್ರವಾಗಿ ಆ ಆ ದೇವತೆಗಳನ್ನು ಉದ್ದೇಶ ಮಾಡಿ ಮಾಡುವುದರಿಂದಲೂ ಇವನ ಪಾರಮೈಕಾನ್ತ್ಯಕ್ಕೆ ವಿರೋಧವೇ ಆಗುತ್ತದೆ.

"ತ್ರೈವರ್ಗಿಕಾಂಸ್ತ್ಯಜೇದ್ಧರ್ಮಾನ್=ಧರ್ಮ, ಅರ್ಥ, ಕಾಮ ಇವುಗಳನ್ನು ಸಂಪಾದಿಸಿಕೊಡುವ ಧರ್ಮಗಳನ್ನು ಬಿಡಬೇಕು" ಎಂದು ಹೇಳಿರುವುದರಿಂದ ಮೋಕ್ಷ

ವನ್ನು ಬಯಸುವವನಿಗೆ ಈ ಕಾಮ್ಯಕರ್ಮಗಳು ನಿಷಿದ್ಧಗಳು, ಅನಿಷ್ಟವಾದ ಫಲವನ್ನು ಕೊಡತಕ್ಕವು. ಆದುದರಿಂದ ಅವು ಬಿಡಲು ತಕ್ಕವು.

"ನಯುಷ್ಮಾಕ್ಮಮಯಾ ಯೂಯಂ ಕದಾಚಿದಪಿ ದೇವತಾಃ=ಎಲೈ ದೇವತೆಗಳಿರಾ ! ಪರಮೈಕಾಂತಿಯಾದ ನನ್ನಿಂದ ನೀವು ಎಂದೂ ಪೂಜಿಸಲು ತಕ್ಕವರಲ್ಲ" ಎಂದು ಹೇಳಿರುವುದರಿಂದ ದೇವತಾಂತರಗಳ ಪೂಜೆಯು ನಿಷಿದ್ಧವಾದುದು. ಆದುದರಿಂದ ದೇವತಾಂತರಗಳ ಪ್ರೀತಿಗಾಗಿ ಮಾಡುವ ನಿತ್ಯ ನೈಮಿತ್ತಿಕ ಕರ್ಮಗಳು ನಿಜವಾಗಿ ನೋಡಿದರೆ ಭಗವಂತನ ಆರಾಧನವಾಗಿವೆ.

**[1]ಜೀವ ಮುಖ್ಯಪ್ರಾಣ ಲಿಙ್ಗಾನ್ನೇತಿ ಚೇನ್ನ ।**
**[2]ಉಪಾಸಾತ್ರೈವಿಧ್ಯಾದಾಶ್ರಿತತ್ವಾದಿಹತದ್ಯೋಗಾತ್ ॥**

ಇವೇ ಮೊದಲಾದ ಸೂತ್ರಭಾಷ್ಯಾದಿಗಳಲ್ಲಿ ಹೇಳಿರುವಂತೆ ಆ ರೀತಿ ಭಗವದಾತ್ಮಕತ್ವಾನು ಸಂಧಾನ ಹೇಳಲ್ಪಟ್ಟಿರುವುದರಿಂದ ಪಾರಮೈಕಾನ್ತ್ಯಕ್ಕೆ ವಿರುದ್ಧವಲ್ಲ; ಅದಿಲ್ಲದಿದ್ದರೆ ವಿರುದ್ಧವಾಗುತ್ತದೆ.

ಅಗ್ನ್ಯಾದಿ ಶಬ್ದಗಳಲ್ಲಿ ಅಗ್ನಿ ಮುಂತಾದ ದೇವತೆಗಳನ್ನು ಶರೀರವಾಗಿ ಉಳ್ಳ ಪರಮಾತ್ಮ ಎಂದು ಅನುಸಂಧಾನಮಾಡುವುದು ಒಂದು ರೀತಿ. ಅಥವಾ—

**[3]ಸಾಕ್ಷಾದಪ್ಯ ವಿರೋಧಂ ಜೈಮಿನಿಃ ।**

ಅಗ್ನಿಶಬ್ದಕ್ಕೆ ಅಗ್ರಂನಯತೀತ್ಯಗ್ನಿಃ ಎಂಬ ವ್ಯುತ್ಪತ್ತಿಯಿಂದ ಅಗ್ರನಯನಾದಿಗಳು=ಮುಂದಕ್ಕೆ ಒಯ್ಯುವುದು, ಶ್ರೈಷ್ಠ್ಯವನ್ನುಂಟುಮಾಡುವುದು ಮುಂತಾದವು ಅರ್ಥವಾಗುತ್ತದೆ, ಆದುದರಿಂದ ನೇರವಾಗಿಯೇ ಈ ಶಬ್ದಗಳೆಲ್ಲಾ ಪರಮಾತ್ಮವಾಚಕಗಳು, ಈ ರೀತಿ ಅರ್ಥ ಹೇಳುವಾಗ ಮೊದಲನೆಯ ರೀತಿ ಬಾದರಾಯಣರದು. ಎರಡನೆಯದು ಜೈಮಿನಿಗಳದು.

ಇವರ ಅಭಿಪ್ರಾಯ ಶಬ್ದಗಳಿಗೆ ಯೋಗಾರ್ಥವನ್ನು ಆಶ್ರಯಿಸಿರುವುದರಿಂದ ಅವಯವಾರ್ಥವು ಪುಷ್ಕಲವಾಗಿದೆ; ಪರಿಪೂರ್ಣವಾಗಿದೆ. ಆದುದರಿಂದ ಭಗವಂತನಲ್ಲೇ

---

1. ಬ್ರಹ್ಮಸೂತ್ರ. ೧–೧–೩೨.

2. ತ್ರೈವಿಧ್ಯಾತ್ = (೧) ಸ್ವರೂಪಾನುಸಂಧಾನ. (೨) ಭೋಕ್ತೃ ಶರೀರಕಾನುಸಂಧಾನ. (೩) ಭೋಗ್ಯಶರೀರಕಾನುಸಂಧಾನ ಈ ರೀತಿ ಮೂರು ವಿಧವಾದ ಉಪಾಸನೆ.

3. ಬ್ರಹ್ಮಸೂತ್ರ. ೧–೨–೨೯.

ಮುಖ್ಯವಾಗಿರುವಿಕೆ, ಉಳಿದೆಡೆ ಗೌಣ ಎಂದು ನಿಶ್ಚಯ. ಇದಿ ಪರಮೈಶ್ವರ್ಯೇ ಎಂಬ ಧಾತುವಿನಿಂದ ನಿಷ್ಪನ್ನವಾದದ್ದು ಇಂದ್ರಶಬ್ದ, ಪರಮೈಶ್ವರ್ಯವುಳ್ಳವನು ಪರಮಾತ್ಮ. ಇಂದ್ರದೇವತೆಯು ಅವನು ಕೊಟ್ಟ ಐಶ್ವರ್ಯವುಳ್ಳವನು. ಆದುದರಿಂದ ಅವನನ್ನು ಹೇಳುವ ಆ ಶಬ್ದ ಮುಖ್ಯವಾದದ್ದಲ್ಲ. ಗೌಣವಾಯಿತು, "ಇಂದ್ರ ಇತ್ಯಾಚಕ್ಷತೆ ಪರೋಕ್ಷೇಣ. ಪರೋಕ್ಷಪ್ರಿಯಾ[1] ಇವಹಿದೇವಾಃ—ಏಷವೈಸಪ್ತದಶಃ ಪ್ರಜಾಪತಿಃ" ಇವೇ ಮೊದಲಾದ ಶ್ರುತಿಗಳು ಈ ಅರ್ಥವನ್ನೂ ದೃಢಪಡಿಸುತ್ತವೆ. ರೂಢ್ಯರ್ಥಕ್ಕೆ ಇಲ್ಲಿ ಅವಕಾಶವಿಲ್ಲ. ದೇವಾಃ—ಪೂಜ್ಯರಾದ ತಂದೆ, ಆಚಾರ್ಯ ಮುಂತಾದವರು ಅವರವರ ಹೆಸರನ್ನು ಬಿಟ್ಟು ತಂದೆ, ಆಚಾರ್ಯ ಮುಂತಾದ ಪರೋಕ್ಷ ನಾಮಧೇಯಗಳಿಂದ ಕರೆಯಲ್ಪಡುತ್ತಾರೆ. ಪರೋಕ್ಷ ನಾಮ ವ್ಯವಹಾರ ಯುಕ್ತವಾದದ್ದೆ.

ಸಂಧ್ಯಾವಂದನದಲ್ಲಿ "ಅಹಸ್ತದವಲುಂಪತು—ರಾತ್ರಿಸ್ತದವಲುಂಪತು—ಹಗಲು ನಾಶಮಾಡಲಿ—ರಾತ್ರಿ ನಾಶಮಾಡಲಿ" ಎಂದು ಹೇಳಿ ತೀರ್ಥಪ್ರಾಶನವನ್ನು ಮಾಡಬೇಕೆಂಬ ವಿಧಿ ಇದೆ, ಹಗಲಿನಲ್ಲಿ ಮಾಡಿದ ಪಾಪಗಳನ್ನೂ ಹಾಗೆಯೇ ರಾತ್ರಿ ಮಾಡಿದ ಪಾಪಗಳನ್ನೂ ಕತ್ತರಿಸಬೇಕಾದರೆ, ನಾಶಮಾಡಬೇಕಾದರೆ, ಕೇವಲ ಹಗಲು ರಾತ್ರಿಗಳಲ್ಲ. ಅವುಗಳನ್ನು ಉಂಟುಮಾಡುವ ಪರಮಾತ್ಮ. ಅವನಲ್ಲವೇ ಈ ಪಾಪಗಳನ್ನು ನೀಗಿಸಲು ಸಮರ್ಥ? ಇದು ಸಂಪ್ರದಾಯವನ್ನು ಅರಿತವರು ಹೇಳಿರುವ ಅರ್ಥ.

ಹಾಗಾದರೆ ಒಂದೇ ಶಬ್ದಕ್ಕೆ ಅಧಿಕಾರಿ ಭೇದದಿಂದ ಎರಡು ಅರ್ಥವನ್ನು ಹೇಳಿಕೊಡುವ ಶಕ್ತಿ ಇರುವುದಾದರೆ ಶಾಸ್ತ್ರಾರ್ಥಕ್ಕೆ ವ್ಯವಸ್ಥೆ ಇಲ್ಲದಿರುವಿಕೆ ಉಂಟಾಗುತ್ತದಲ್ಲವೇ? ಎಂದರೆ ಅದಿಲ್ಲ. ಆತ್ಮ ಸ್ವರೂಪವನ್ನು ಅರಿಯದವನಿಂದಲೋ ಅಗ್ನ್ಯಾದಿಶರೀರದ ಮೂಲಕವಾಗಿಯೋ ಅಥವಾ ನೇರವಾಗಿಯೋ ಮಾಡಲ್ಪಟ್ಟ ಎಲ್ಲಾ ಕರ್ಮಗಳೂ ಭಗವಂತನ ಆರಾಧನ ರೂಪವಾದವೇ. ಇದೇ ಶಾಸ್ತ್ರಾರ್ಥಗಳ ತಿರುಳು. ಆದುದರಿಂದ ವ್ಯವಸ್ಥೆ ಇಲ್ಲದಿರುವಿಕೆ ಏರ್ಪಡಾಗಲಾರದು. ಆತ್ಮ ತತ್ತ್ವವನ್ನು ಅರಿಯದವರಿಗೆ ಅಗ್ನ್ಯಾದಿಗಳಲ್ಲಿ ಮಾತ್ರ ಕೊನೆಗೊಳ್ಳುವ ಬುದ್ಧಿ ಇದ್ದರೂ ಅಂದರೆ ಪರಮಾತ್ಮನಿಗೆ ಅವರು ಶರೀರರು ಎಂಬ ಬುದ್ಧಿ ಇಲ್ಲದಿದ್ದರೂ ನಿಜವಾಗಿ ಅದು ಅಗ್ನ್ಯಾದಿಗಳಲ್ಲಿ ಪರ್ಯವಸಾನವಾಗುವುದಿಲ್ಲ. ಚಾರ್ವಾಕನಿಗೆ ಶರೀರವೇ ಆತ್ಮ ಎಂಬ ಬುದ್ಧಿ ಇದೆ. ಆದರೂ ಮೈಗೆ ಗಂಧವನ್ನು ಲೇಪಿಸುವುದಾದರೂ ಅದು ಆತ್ಮನಲ್ಲಿ ಕೊನೆಗೊಳ್ಳುವಂತೆ ಇಲ್ಲೂ ಪರಮಾತ್ಮನಲ್ಲಿ ಪರ್ಯವಸಾನವಾಗುತ್ತದೆ—ಕೊನೆಗೊಳ್ಳುತ್ತದೆ. ಅದರಲ್ಲಿ ಏನೂ ಅಡ್ಡಿ ಇಲ್ಲ; ಆದರೆ ಆ ಆ ಕರ್ಮಗಳ ಅನುಷ್ಠಾನದಲ್ಲಿ ವೈಕಲ್ಯವಿದೆ. ಆದುದರಿಂದಲೇ—

1. ತೈ. ಬ್ರಾ. ಅ. ೨-೩-೪೭.

[1]ಯೇಽಪ್ಯನ್ಯದೇವತಾ ಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ ।
ತೇಽಪಿಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥

ಇದರ ಅರ್ಥ : ಇಂದ್ರನೇ ಮೊದಲಾದ ದೇವತೆಗಳಲ್ಲಿ ಭಕ್ತಿಯುಳ್ಳವರಾಗಿ ವೇದದಲ್ಲಿ ಮೊದಲಿನ ಭಾಗದಲ್ಲಿ ಹೇಳಿರುವ ಕರ್ಮಗಳನ್ನು ಮಾತ್ರ ಶ್ರದ್ಧೆಯಿಂದ ಮಾಡಿ, ಅವರುಗಳನ್ನು ಮಾತ್ರ ಯಾರು ಸತೋಷ ಪಡಿಸುತ್ತಾರೋ ಅವರೂ ನನ್ನನ್ನೇ ಸಂತೋಷ ಪಡಿಸುತ್ತಾರೆ. ಏತಕ್ಕೆಂದರೆ ಆ ಇಂದ್ರ ಮೊದಲಾದ ದೇವತೆಗಳು ನನ್ನ ಶರೀರಗಳು. ನಾನು ಅವರಿಗೆ ಆತ್ಮನು. ಅವರನ್ನು ಹೇಳುವ ಶಬ್ದಗಳಿಗೂ ನಾನೇ ಅರ್ಥ. ಆದರೆ ಆ ಕರ್ಮಗಳು ನನಗೆ ಪೂಜೆ ಎಂದೂ ಅವುಗಳಿಂದ ನಾನು ತಾನೇ ಸಂತೋಷ ಪಡುತ್ತೇನೆ ಎಂದೂ ಅವರು ತಿಳಿಯಲಿಲ್ಲ. ಉಪನಿಷತ್ತು, ಇಂದ್ರ ಮೊದಲಾದ ದೇವತೆಗಳಿಗೆ ಕರ್ಮಗಳು ಪೂಜೆಯಾಗುವ ರೀತಿಯನ್ನು ಯಾವ ರೀತಿ ಹೇಳುತ್ತದೋ ಅದನ್ನು ಅರಿತು ಅವರು ಪೂಜೆ ಮಾಡಲಿಲ್ಲ. ಉಪನಿಷತ್ತುಗಳು—ಆ ಆ ಕರ್ಮಗಳು ಭಗವಂತನಿಗೆ ಶರೀರವಾದ ಇಂದ್ರನೇ ಮೊದಲಾದವರುಗಳಿಗೆ ಪೂಜೆಯಾಗಿದೆ ; ಆದುದರಿಂದ ಅವರುಗಳಿಗೆ ಆತ್ಮನಾದ ಭಗವಂತನ [2]ಪೂಜೆಯಾಗಿ ತಾನೇ ಆಗುತ್ತದೆ—ಎಂದು ಹೇಳುತ್ತದೆ.

[3]ಯೋಯೋ ಯಾಂಯಾಂ ತನುಂಭಕ್ತಶ್ಶ್ರದ್ಧಯಾರ್ಚಿತು ಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ।
ಸತಯಾಶ್ರದ್ಧಯಾ ಯುಕ್ತಸ್ತಸ್ಯಾರಾಧ ನಮೀಹತೇ ।
ಲಭತೇ ಚ ತತಃ ಕಾಮಾನ್ಮಯೈವ ವಿಹಿತಾನ್ ಹಿತಾನ್ ॥

ಈ ರೀತಿ ಅವರಿಂದ ಸಂತೋಷಪಡಿಸಲ್ಪಟ್ಟ ಇಂದ್ರನೇ ಮೊದಲಾದ ದೇವತೆಗಳು ನನ್ನ ಶರೀರಗಳು ಎಂದು ವೇದವು ಹೇಳುತ್ತದೆ. ಈ ವಿಷಯವನ್ನು ಅವರು ಅರಿಯದೇ ಇದ್ದರೂ, ಯಾವ ಯಾವನು ಯಾವ ಯಾವ ನನ್ನ ಮೈಯಾದ ಆ ಆ ದೇವತೆಗಳನ್ನು ಪ್ರೀತಿಯಿಂದಲೂ, ಶ್ರದ್ಧೆಯಿಂದಲೂ ಪೂಜಿಸುವುದಕ್ಕೆ ಆಸೆಪಡುತ್ತಾನೋ, ಅವನ ಆ ಪ್ರೀತಿಯೂ, ಶ್ರದ್ಧೆಯೂ ನನ್ನ ಶರೀರವನ್ನು ಕುರಿತಿದ್ದು ಎಂದು ನೆನೆದು ನಾನೇ ಅವನ್ನು ಯಾವ ತಡೆಯೂ ಇಲ್ಲದ ಹಾಗೆಯೂ ಸ್ಥಿರವಾಗಿರುವಂತೆಯೂ ಮಾಡುತ್ತೇನೆ.

1 ಭಗವದ್ಗೀತೆ. ೯–೨೩.

2. ಒಬ್ಬ ದೊಡ್ಡ ಅಧಿಕಾರಿಯ (ಉದಾ : ಕಲೆಕ್ಟರ್) ಸೇವಕನು ಮನೆಗೆ ಬಂದರೆ ಅವನಿಗೆ ಮರ್ಯಾದೆಯನ್ನು ಆ ಅಧಿಕಾರಿಯ ಹತ್ತಿರ ಸಮಗಿರುವ ಗೌರವದಿಂದ ಮಾಡುತ್ತೇವೆ. ಅವನಿಗೆ ಮಾಡುವ ಮರ್ಯಾದೆ ಆ ಅಧಿಕಾರಿಗೆ ಸಂಬಂಧಪಟ್ಟದ್ದು; ಅದರಂತೆ.

3. ಗೀತೆ. ೭–೨೧–೨೨.

ಅವನು ತಡೆಯಿಲ್ಲದ ಆ ಶ್ರದ್ಧೆಯಿಂದ ಕೂಡಿದವನಾಗಿ ನನ್ನ ಶರೀರಗಳಾದ ಆ ಆ ದೇವತೆಗಳನ್ನು ಪೂಜಿಸುತ್ತಾನೆ. ಅದರಿಂದ ಅವನು ಬಯಸಿದ ಫಲವನ್ನು ಹೊಂದುತ್ತಾನೆ. ಅದನ್ನು ನಾನೇ ಕೊಡುತ್ತೇನೆ. ಪೂಜೆಮಾಡುವ ವೇಳೆಯಲ್ಲಿ ಪೂಜಿಸಲ್ಪಟ್ಟವರು ನನ್ನ ಶರೀರ ಎಂದೂ ಆಸೆಯಿಂದ ಅವರನ್ನು ಪೂಜಿಸುವುದು ನನ್ನ ಪೂಜೆಯೆಂದೂ ಅವನಿಗೆ ಗೊತ್ತಿಲ್ಲದಿದ್ದರೂ ನಿಜಸ್ಥಿತಿಯಲ್ಲಿ ಅದು ನನ್ನ ಪೂಜೆಯಾದುದರಿಂದ ನಾನೇ ಅವರುಗಳಿಗೆ ಫಲವನ್ನು ಕೊಡುತ್ತೇನೆ ಎನ್ನುತ್ತಾನೆ ಪರಮಾತ್ಮ—ಆದುದರಿಂದ ಈ ಅರ್ಥವೇ ಪರಮಾರ್ಥ.

ಪಾರಮ್ಯೈಕಾಂತ್ಯಕ್ಕೆ ವರ್ಣಾಶ್ರಮ ಧರ್ಮಗಳು ವಿರೋಧಿಗಳಲ್ಲ ಎಂಬುದನ್ನು ಆಚಾರ್ಯರು ತತ್ತ್ವಮುಕ್ತಾಕಲಾಪದಲ್ಲಿ ಹೀಗೆ ಹೇಳುತ್ತಾರೆ.

ಬ್ರಹ್ಮಣ್ಯೈಕಾನ್ತ್ಯ ಭಾಜಾಂ ಮುಹುರನು ಕಥಿತೋ
ಮೋಕ್ಷಧರ್ಮೇಽಪವರ್ಗಃ ।
ತಸ್ಮಾನ್ನಾನಾಽಮರೇಜ್ಯಾ ನ ಭವತಿ ಪರಭಕ್ತ್ಯಙ್ಗಮಿತ್ಯಪ್ಯಯುಕ್ತಂ ।
ಐನ್ದ್ರೇ ಪ್ರಾತರ್ದನಾದಿ ಪ್ರಥಿತನಯವಿದಾಮನ್ತರಾತ್ಮೈಕಲಕ್ಷ್ಯೇ ।
ಷ್ವಗ್ನೀನ್ದ್ರಾದಿ ಪ್ರಯೋಗೇಷ್ವಖಿಲಮಪಿ ವಿಭುಃ ಕರ್ಮ ಭುಙ್ಕ್ತೇ ಸ ಏಕಃ ॥

ಪೂರ್ವಕಾಂಡ ಪ್ರತಿಪಾದ್ಯವಾದ ಕರ್ಮಗಳು ಜ್ಞಾನಕ್ಕೆ ಅಂಗವಾಗಲು ಸಾಧ್ಯವಿಲ್ಲ ಎಂಬ ಆಕ್ಷೇಪವನ್ನು ನಿರಾಕರಿಸುತ್ತಾರೆ:—'ಮೋಕ್ಷಧರ್ಮೇ—ಮೋಕ್ಷಧರ್ಮದಲ್ಲಿ, ಬ್ರಹ್ಮಣಿ ಐಕಾನ್ತ್ಯಭಾಜಾಂ ಅಪವರ್ಗಃ ಮುಹುಃ ಅನುಕಥಿತಃ—ತೇಷಾಮೇಕಾನ್ತಿನಃ ಶ್ರೇಷ್ಠಾಃ ತೇಚೈವಾನನ್ಯ ದೇವತಾಃ' ಇವೇ ಮೊದಲಾದುವುಗಳಲ್ಲಿ ಪರಮಾತ್ಮನೊಬ್ಬನಲ್ಲೇ ನಿಷ್ಠೆಯುಳ್ಳವರಿಗೆ ಮಾತ್ರವೇ ಮೋಕ್ಷ ದೊರಕುವುದೆಂದು ಅನೇಕ ಸಲ ಹೇಳಿದೆ. ತಸ್ಮಾತ್ ನಾನಾಮರೇಜ್ಯಾ ಪರಭಕ್ತ್ಯಙ್ಗಂ ನ ಭವತಿ—ಆದುದರಿಂದ ಇಂದ್ರ, ಅಗ್ನಿ, ಸೂರ್ಯ ಮುಂತಾದ ಅನೇಕ ದೇವತಾರಾಧನ ರೂಪವಾದ ವರ್ಣಾಶ್ರಮ ಧರ್ಮಗಳು ಪರಮಾತ್ಮ ಭಕ್ತಿರೂಪವಾದ ಬ್ರಹ್ಮವಿದ್ಯೆಗೆ ಅಂಗವಾಗಲು ಸಾಧ್ಯವಿಲ್ಲ. ಇತ್ಯಪ್ಯಯುಕ್ತಂ—ಎಂದು ಹೇಳುವುದು ಸರಿಯಲ್ಲ. ಏತಕ್ಕೆಂದರೆ—ಐನ್ದ್ರೇ...ಭುಙ್ಕ್ತೇ—ಐಂದ್ರೀನ್ಯಾಯ ಮತ್ತು ಪ್ರಾತರ್ದನ ನ್ಯಾಯ ಮುಂತಾದ ಪ್ರಸಿದ್ಧ ನ್ಯಾಯದ ತತ್ತ್ವವನ್ನು ಅರಿತಿರುವವರಿಗೆ ಅಗ್ನಿ ಇಂದ್ರಾದಿ ಶಬ್ದಗಳು ಸರ್ವಾಂತರ್ಯಾಮಿಯಾದ ಪರಮಾತ್ಮನನ್ನೇ ಬೋಧಿಸುತ್ತವೆಂಬ ಅರಿವು ಇರುವುದರಿಂದ ಇವರು ಮಾಡುವ ಎಲ್ಲಾ ಕರ್ಮಗಳಿಂದಲೂ ಸರ್ವಾಂತರ್ಯಾಮಿಯಾದ ಆ ಪರಮಾತ್ಮನೊಬ್ಬನೇ ಪೂಜ್ಯನಾಗುತ್ತಾನೆ, ನಾನಾ ದೇವತಾ ಪೂಜೆಯಾಗಿ ಆಗುವುದಿಲ್ಲ.

ಪೂರ್ವ ಮೀಮಾಂಸೆಯಲ್ಲಿ 'ಇನ್ದ್ರ' ಪದಕ್ಕೆ ಗಾರ್ಹಪತ್ಯಾಗ್ನಿ ಅರ್ಥವೆಂದು ಹೇಳಿರುವ 'ಐಂದ್ರೀ' ನ್ಯಾಯದಿಂದಲೂ, ಉತ್ತರ ಮೀಮಾಂಸೆಯಲ್ಲಿ ಮುಮುಕ್ಷು ದೃಷ್ಟಿಯಲ್ಲಿ ಈ ಎಲ್ಲಾ ಪದಗಳೂ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನೂ ಬೋಧಿಸುತ್ತವೆ ಎಂದು ಹೇಳುವ 'ಪ್ರತರ್ದನವಿದ್ಯಾ' ನ್ಯಾಯದಿಂದಲೂ ಇಂದ್ರಾದಿ ಪದಗಳು ಪರಮಾತ್ಮನನ್ನೇ ಬೋಧಿಸುತ್ತವೆ. ಬ್ರಹ್ಮೋಪಾಸಕನ ದೃಷ್ಟಿಯಲ್ಲಿ 'ಅಗ್ನಿ' ಎಂದರೆ ಅಗ್ನಿದೇವನ ಅಂತರ್ಯಾಮಿಯಾದ ಪರಮಾತ್ಮನೇ ಆಗುತ್ತಾನೆ. ಅಗ್ನ್ಯಾದಿ ಪೂಜೆ ಪರಮಾತ್ಮನ ಪೂಜೆಯೇ ಆಗುತ್ತದೆ. ಬ್ರಹ್ಮೋಪಾಸಕರಲ್ಲದವರಿಗೆ ಮಾತ್ರ ಅಗ್ನಿಪೂಜೆ ಅಗ್ನಿಪೂಜೆಯೇ ಆಗುತ್ತದೆ. ಪರಮಾತ್ಮನ ಪೂಜೆಯಾಗುವುದಿಲ್ಲ. ಆದುದರಿಂದ ಅವರಿಗೆ ಆ ಆ ದೇವತೆಯನ್ನು ಪೂಜಿಸಿದ ಫಲ ದೊರೆಯುತ್ತದೆ. ಮೋಕ್ಷವಲ್ಲ. ಹೀಗೆ ವರ್ಣಾಶ್ರಮ ಧರ್ಮಗಳು ಅಧಿಕಾರ ಭೇದದಿಂದ ಇತರ ಫಲಕವೂ ಬ್ರಹ್ಮ ವಿದ್ಯಾಂಗವೂ ಆಗುವುದರಲ್ಲಿ ಯಾವ ತಡೆಯೂ ಇಲ್ಲ.

೮. ಅಭಿಚಾರ—ಮಾಟ ಮುಂತಾದವಂತೆ ಬೇರೇ ಪ್ರಯೋಜನಕ್ಕೆ ವಿಹಿತವಾಗಿರುವುದರಿಂದ ಅನರ್ಥವನ್ನು ತರತಕ್ಕವು. ಆದುದರಿಂದ ಸ್ವರೂಪ ವಿರುದ್ಧ ಎಂದು ಹೇಳುವ ಎಂಟನೆಯ ಕಾರಣವನ್ನೂ—

೯. ಪ್ರಾಪ್ಯನು ಯಾವನೋ ಅವನೇ ಪ್ರಾಪಕನೂ ಆಗಿದ್ದಾನೆ. ಯಾವನನ್ನು ನಾವು ಹೊಂದಬೇಕೋ ಅವನೇ ಹೊಂದಿಸುವನಾಗಿದ್ದಾನೆ. ಆದುದರಿಂದ ಭಕ್ತಿಯು ಪ್ರಾಪ್ಯಕ್ಕೆ ಅನುಗುಣವಲ್ಲದ್ದಾಯಿತು ಎಂಬ ಒಂಬತ್ತನೆಯ ಕಾರಣವನ್ನೂ ಒಟ್ಟಿಗೆ ನಿರಸನಮಾಡುತ್ತಾರೆ. ಇವುಗಳ ಸ್ವರೂಪಗಳೇ ಸಿದ್ಧಿಸುವುದಿಲ್ಲ.

ಇಲ್ಲಿ ಪೂರ್ವಪಕ್ಷವನ್ನು ಮಾಡುವವರ ಅಭಿಪ್ರಾಯ ಹೀಗೆ ಇದೆ. ವೇದಗಳಲ್ಲಿ ಶತ್ರುಪಕ್ಷ ನಿರಸನಕ್ಕಾಗಿ ಕೆಲವು ಯಾಗಗಳು ಹೇಳಲ್ಪಟ್ಟಿವೆ. ಇಂತಹ ಯಾಗಗಳನ್ನು ಮಾಡಿದರೆ ಶತ್ರುವು ಆ ಯಾಗದ ಫಲದಿಂದ ಸಾಯುವನು. ಇದು ಪ್ರತ್ಯಕ್ಷವಾಗಿದೆ. ಇಂತಹ ಯಾಗವನ್ನು ರಾಮಾಯಣದಲ್ಲಿ ನಾವು ಕಾಣಬಹುದು. ರಾವಣನ ಮಗ ಇಂದ್ರಜಿತ್ತು ನಿಕುಂಭಳಾ ಯಾಗವನ್ನು ಮಾಡಲಾರಂಭಿಸಿದನು. ಈ ಮಾರಣ ಹೋಮದ ಸಂಚನ್ನು ವಿಭೀಷಣನು ತಿಳಿದನು. ಒಡನೆ ರಾಮನಿಗೆ ಅದನ್ನು ತಿಳಿಸಿ ಆ ಯಾಗಕ್ಕೆ ವಿಘ್ನವನ್ನು ಉಂಟುಮಾಡಿಸಿದನು. ಲಕ್ಷ್ಮಣನು ಇಂದ್ರಜಿತ್ತನ್ನು ಕೊಂದನು.

ಯಾವುದಾದರೂ ಒಂದು ವ್ಯಾಧಿಗೆ ಆಯುರ್ವೇದದಲ್ಲಿ ಹೇಳಿರುವ ರೀತಿಯಲ್ಲಿ ಔಷಧಿಯನ್ನು ಅನುಪಾನ ಮಾಡಿದರೆ ಅದು ಗುಣವಾಗುತ್ತದೆ. ಆದರಿಂದ ಆ ಆಯುರ್ವೇದದಲ್ಲಿ ನಂಬಿಕೆ ಉಂಟಾಗುತ್ತದೆ. ಹಾಗೆಯೇ ಈ ಅಭಿಚಾರಾದಿ

ಗಳೂ ಶಾಸ್ತ್ರಗಳಲ್ಲಿ ನಂಬಿಕೆಯನ್ನು ಹುಟ್ಟಿಸುತ್ತವೆ. ಆದರೆ ಹೀಗೆ ಯಾಗಗಳ ಮೂಲಕ ಶತ್ರುವನ್ನು ಕೊಲ್ಲುವುದು ಕ್ಷತ್ರಿಯನ ಸ್ವರೂಪಕ್ಕೂ ಪರಾಕ್ರಮಕ್ಕೂ ಕುಂದಕವಾಗಿ ನಿಂದಿತವು.

ಹಾಗೆಯೇ ಅಸಮರ್ಥನಾಗಿ ಪರಾಧೀನನಾಗಿ ಅಕಿಂಚನನಾಗಿರುವ ಈ ಪ್ರಪನ್ನನು ತನ್ನನ್ನು ಸಮರ್ಥನನ್ನಾಗಿಯೂ ಸ್ವತಂತ್ರನನ್ನಾಗಿಯೂ ಸಕಿಂಚನನ್ನಾಗಿಯೂ ಭಾವಿಸಿಕೊಂಡು ಉಪಾಸನದ ಮೂಲಕ ಪ್ರಾಪ್ಯವನ್ನು ಬಲಾತ್ಕರಿಸಿ ಸೇರುವನೆಂಬುದು ಸ್ವರೂಪ ವಿರುದ್ಧವು ; ಎಂದು ತಾತ್ಪರ್ಯ. ಹಾಗಾದರೆ ಉಪಾಸನವನ್ನು ಶಾಸ್ತ್ರದಲ್ಲಿ ವಿಧಿಸಿರುವುದು ಏತಕ್ಕೆಂದರೆ, ಪ್ರಪತ್ತಿಯಲ್ಲಿ ವಿಶ್ವಾಸವನ್ನುಂಟು ಮಾಡುವುದಕ್ಕಾಗಿ ಎಂದು ಭಾವಿಸತಕ್ಕದ್ದು. ನಿಜವಾಗಿ ನೋಡಿದರೆ ಅದು ಸ್ವರೂಪ ವಿರುದ್ಧವಾದುದಾಗಿ ಗುರೂಪಾಯವಾಗಿರುವುದರಿಂದ ಅದಕ್ಕೆ ಬದಲಾಗಿ ಪ್ರಪತ್ತಿಯು ಲಘುವಾಗಿರುವುದರಿಂದ ಇದರಲ್ಲಿ ವಿಶ್ವಾಸ ಹೆಚ್ಚುತ್ತದೆ ಎಂಬ ಭಾವ.

ಪೂರ್ವಪಕ್ಷಿಗಳು ತಮ್ಮ ಅಭಿಪ್ರಾಯ:ವನ್ನು ಸಮರ್ಥನೆ ಮಾಡುವುದಕ್ಕಾಗಿ ವಿಷ್ಣುಧರ್ಮ ಪ್ರಮಾಣವನ್ನು ಉದಾಹರಿಸುತ್ತಾರೆ.

**[1]ಅಥಪಾತಕ ಭೀತಸ್ತ್ವಂ ಸರ್ವಭಾವೇನ ಭಾರತ ।**
**ವಿಮುಕ್ತಾನ್ಯ ಸಮಾರಂಭೋ ನಾರಾಯಣ ಪರೋಭವ ॥**

ಈ ಮಾತನ್ನು ಧರ್ಮ ದೇವತೆಯು ತನ್ನ ಮಗನಾದ ಧರ್ಮರಾಜನಿಗೆ ಹೇಳಿದ್ದು. ಈ ಶ್ಲೋಕದ ಅಭಿಪ್ರಾಯವು ಪೂರ್ವಪಕ್ಷದವರ ಅಭಿಪ್ರಾಯದಂತೆ, **ಪಾತಕ ಭೀತಃ** = ಉಪಾಸನಾದಿಗಳ ಅನುಷ್ಠಾನದಿಂದ ಪಾಪವುಂಟಾಗುತ್ತದೆಂಬ ಹೆದರಿಕೆ ಉಳ್ಳವನಾಗಿ ಆದರಿಂದಲೇ, **ವಿಮುಕ್ತಾನ್ಯ ಸಮಾರಂಭಃ** = ಈ ಉಪಾಸನವೇ ಮೊದಲಾದ ಎಲ್ಲಾ ಕಾರ್ಯಕಲಾಪಗಳನ್ನೂ ಬಿಟ್ಟು, **ನಾರಾಯಣ ಪರೋಭವ** = ಶ್ರೀಮನ್ನಾರಾಯಣನನ್ನೇ ಪ್ರಾಪಕನನ್ನಾಗಿಯೂ ಪ್ರಾಪ್ಯನನ್ನಾಗಿಯೂ ಆಶ್ರಯಿಸು ಎಂಬುದಾಗಿದೆ. ಆದುದರಿಂದ ಉಪಾಸನೆಯೂ ಅಭಿಚಾರಾದಿಗಳ ಹಾಗೆ ಸ್ವರೂಪ ವಿರುದ್ಧವು ಎಂದು ತಾತ್ಪರ್ಯ—ಇದು ಪೂರ್ವಪಕ್ಷಿಗಳ ಅಭಿಪ್ರಾಯ.

೧೦. "ಅಥ ಪಾತಕ ಭೀತಸ್ತ್ವಂ = ನೀನು ಪಾಪಕ್ಕೆ ಅಂಜದವನಾಗಿ" ಎಂದು ಹೇಳಿರುವುದರಿಂದ—ಪಾತಕ ಶಬ್ದದಿಂದ ಹೇಳಲ್ಪಟ್ಟಿರುವುದರಿಂದ ನಿಂದಿತವಾಗಿದೆ. ಆಚಾರ್ಯರು ಪ್ರೀತಿಯಿಂದ ಸ್ವೀಕರಿಸಲು ತಕ್ಕದ್ದಲ್ಲವಾಗಿದೆ ಎಂಬುದರ ನಿರಸನ.

1. ವಿ. ಧ. ೬೬–೨

ಇದನ್ನು ನಾಲ್ಕು ವಿಧವಾಗಿ ವಿಕಲ್ಪಮಾಡಿ ಖಂಡಿಸುತ್ತಾರೆ.

(೧) ಅಭಿಚಾರಾದಿಗಳ ಹಾಗೆ ಸ್ವರೂಪ ವಿರುದ್ಧವೆಂಬುದು ಅಭಿಚಾರವು ಅನರ್ಥ ಫಲಸಾಧಕವಾಗಿರುವ ಹಾಗೆ ಈ ಉಪಾಸನವೂ ಅನರ್ಥ ಫಲವನ್ನು ಸಾಧಿಸುವದರಿಂದ ಸ್ವರೂಪವಿರುದ್ಧವೇ ?

(೨) ಭಕ್ತಿ ವಿಧಿಯು ಪ್ರಪತ್ತಿಯಲ್ಲಿ ವಿಶ್ವಾಸ ಹುಟ್ಟಿಸುವುದಕ್ಕಾಗಿ ಎಂದರೆ ಭಕ್ತಿಮಾರ್ಗವು ಸಾಧನವೇ ಅಲ್ಲದೆ ವ್ಯರ್ಥವಾದ ಆಯಾಸವನ್ನು ಉಂಟುಮಾಡುವುದಾಗಿ ಸ್ವರೂಪ ವಿರುದ್ಧವೇ ?

(೩) ಪ್ರಾಪ್ಯನಿಗೆ ಅನುರೂಪವಾದ ಉಪಾಯವಲ್ಲದಿರುವುದರಿಂದ ಸ್ವರೂಪ ವಿರುದ್ಧವೇ ?

(೪) ಪಾತಕಶಬ್ದದಿಂದ ನಿಂದಿಸಲ್ಪಟ್ಟಿರುವುದರಿಂದ ಶಾಸ್ತ್ರದಲ್ಲಿ ನಿಂದಿತವಾಗಿ ಸ್ವರೂಪ ವಿರುದ್ಧವೇ ? ಇವೇ ನಾಲ್ಕು ವಿಕಲ್ಪಗಳು.

(ಅ) ಅಭಿಚಾರಾದಿಗಳು ಕೊಲೆಯಾದ ದುಷ್ಟ ಫಲಗಳಿಗೆ ಕಾರಣಗಳು. ಆದುದರಿಂದ ಸ್ವರೂಪ ವಿರುದ್ಧಗಳು ಎಂದು ಹೇಳಬಹುದು. ಉಪಾಸನವು ಅನರ್ಥವನ್ನುಂಟುಮಾಡುವ ಫಲವನ್ನು ಕೊಡುವುದಿಲ್ಲ ; ಮೋಕ್ಷಫಲದಾಯಕವೆಂದು ಪ್ರಮಾಣ ಪ್ರಸಿದ್ಧವು, ಹೀಗೆ ಅನರ್ಥಫಲವನ್ನು ಭಕ್ತ್ಯುಪಾಯವು ಕೊಡದೇ ಇರುವುದರಿಂದ ಸ್ವರೂಪ ವಿರುದ್ಧವು ಹೇಗಾದೀತು ಎಂಬ ತಾತ್ಪರ್ಯ. ಆದುದರಿಂದ ಮೊದಲನೆಯ ವಿಕಲ್ಪ ಸರಿಯಾದುದಲ್ಲ.

(ಆ) ಪ್ರಪತ್ತಿ ಭಕ್ತಿ ಇವೆರಡೂ ಪರಸ್ಪರ ಭೇದವುಳ್ಳ ಉಪಾಯಗಳು. ಪ್ರಪತ್ತಿಯು ಲಘುವಾದ - ಸುಲಭವಾದ ಉಪಾಯ, ಭಕ್ತಿಯು ಗುರೂಪಾಯ— ಕಷ್ಟಸಾಧ್ಯವಾದದ್ದು, ಹೀಗಿರುವಾಗ ಏಕಾಧಿಕಾರಿ ವಿಷಯದಲ್ಲಿ ಲಘೂಪಾಯವಾದ ಪ್ರಪತ್ತಿಯಲ್ಲಿ ರುಚಿಯನ್ನುಂಟುಮಾಡುವುದಕ್ಕಾಗಿ ಭಕ್ತಿರೂಪವಾದ ಗುರೂಪಾಯದ ವಿಧಾನ ಎಂದು ಹೇಳಿದರೆ ಈ ಮಾತು ಸಂಗತವಾಗುವುದಿಲ್ಲ. ನೀವು ಹೇಳಬೇಕೆಂದಿರುವುದು ಭಕ್ತಿಯು ಸ್ವೀಕರಿಸತಕ್ಕದ್ದಲ್ಲ, ಪ್ರಪತ್ತಿಯು ಸ್ವೀಕರಿಸತಕ್ಕದ್ದು ಎಂಬುದಲ್ಲವೆ ? ಅದು ಸಿದ್ಧಿಸುವುದಿಲ್ಲ. ವೇದಾಂತಗಳಲ್ಲಿ ಭಕ್ತಿ ಪ್ರಪತ್ತಿಗಳು (ಮೋಕ್ಷರೂಪವಾದ) ಒಂದೇ ಫಲಕ್ಕೆ ಸಾಧನಗಳಾಗಿ ಒಂದಕ್ಕೊಂದಕ್ಕೆ ಅಪೇಕ್ಷೆ ಇಲ್ಲದೆ ವಿಧಿಸಿದೆ. ಭಕ್ತಿಗೆ ಪ್ರಪತ್ತಿಗೆ ಸಮಾನವಾದ ಯೋಗಕ್ಷೇಮವಿದೆ. ಎರಡರಲ್ಲಿ ಒಂದಕ್ಕೆ ಪ್ರರೋಚಕತ್ವ—ರುಚಿಯನ್ನುಂಟುಮಾಡುವಿಕೆ ಇಲ್ಲದಿರುವುದರಿಂದ ಭಕ್ತಿಗೆ ಪ್ರಪತ್ತಿ ಪ್ರರೋಚಕತ್ವ ಉಂಟಾಗುವುದಿಲ್ಲ. ಉಂಟಾದರೂ ಕಷ್ಟವಾದುದಲ್ಲಿ

ಶ್ರಮಸಾಧ್ಯವೆಂದು ಸೋಮಾರಿತನವೇ ಮೊದಲಾದುದರಿಂದ ಪ್ರವರ್ತಿಸದೆ ಇರಬಹುದು. ಹಾಗೆ ಇದ್ದರೆ ಹಗುರವಾದ ಅಂಗಭೂತಾವಾದುದರಲ್ಲಿ–ಅಪ್ರಧಾನವಾದುದಲ್ಲಿ ಅಙ್ಗಿ ಫಲವನ್ನು—ಪ್ರಧಾನದ ಫಲವನ್ನು ಆರೋಪಣೆಮಾಡಿ ಪ್ರರೋಚನೆ ರುಚಿಯುನ್ನುಂಟುಮಾಡಬೇಕು. ಗುರುವಾದುದರಲ್ಲಿ ಲಘುವಿನ ಪ್ರರೋಚನೆ ಅಲ್ಲ. ಸ್ವರಸವಾಗಿಯೇ ಲಘುವಾದುದಲ್ಲಿ—ಹಗುರವಾದುದಲ್ಲಿ ಪ್ರವೃತ್ತಿ ಉಂಟಾಗುತ್ತದೆ; ಪ್ರರೋಚನೆ ಬೇಕಾದುದಿಲ್ಲ, ಎತ್ತು ಧಾನ್ಯವನ್ನು ಹೊರುವಂತೆ ಅಭ್ಯಾಸಮಾಡಿಸಲು ಮರಳಿನಮೂಟೆಯುನ್ನು ಮೊದಲು ಹೊರಿಸುವುದೂ ಅಭ್ಯಾಸ ಪಾಟವಕ್ಕಾಗಿ. ಅಲ್ಲದೆ ಅದರ ಕೊಬ್ಬನ್ನು—ಹೆಮ್ಮೆಯನ್ನು ಅಡಗಿಸುವುದಕ್ಕಲ್ಲ. ಆದುದರಿಂದ ವಿವಕ್ಷಿತ ವಿಪರೀತವಾಯಿತು.

ಆದುದರಿಂದ ಪರಿಶೇಷ ಪ್ರಮಾಣದಿಂದ—ಉಳಿದ ಯಾವುದಾದರೂ ನ್ಯಾಯದಿಂದ "ಅಂಗೇಷು ಫಲಶ್ರುತಿರರ್ಥವಾದಃ=ಅಂಗದಲ್ಲಿ ಫಲವನ್ನು ಹೇಳುವುದು ಅರ್ಥವಾದ" ಎಂಬ ನ್ಯಾಯದಿಂದ ಅಂಗವಾದ ಭಕ್ತಿಯಲ್ಲಿ ಸ್ತೋತ್ರಮೂಲಕ ಅಂಗಿ ಪ್ರರೋಚಕವೆಂದು ಹೇಳಬೇಕಾಯಿತು. ಹಾಗಾದರೂ ಭಕ್ತಿಯು ಉಪಾದೇಯವೇ —ಸ್ವೀಕರಿಸಲು ತಕ್ಕದ್ದೇ ಆಯಿತೇ ಹೊರತು ಅನುಪಾದೇಯವಾದದ್ದೆಂದು ನೀವು ಹೇಳುವ ಸ್ವರೂಪ ವಿರುದ್ಧತ್ವ ಬರುವುದಿಲ್ಲ. ಆದುದರಿಂದ ಸ್ವಪಕ್ಷ ವಿಪರೀತವಾಯಿತು.

(೩) ಮುಂದೆ ಮೂರನೆಯ ವಿಕಲ್ಪವಾದ ಪ್ರಾಪ್ಯಕ್ಕೆ ಅನುರೂಪವಾದುದು ಭಕ್ತ್ಯುಪಾಯವು ಅಲ್ಲ. ಆದುದರಿಂದ ಸ್ವರೂಪ ವಿರುದ್ಧವೆಂಬ ಪಕ್ಷವನ್ನು ಖಂಡಿಸುತ್ತಾರೆ.

ಸರ್ವೇಶ್ವರನನ್ನು ಹೊಂದುವುದಕ್ಕೆ ಇದೇ ಅನುರೂಪವಾದ ಉಪಾಯ ಎಂದು ತಿಳಿಯುವ ಸಂದರ್ಭವು ಶಾಸ್ತ್ರದಿಂದಲೇ ತಿಳಿಯತಕ್ಕದ್ದು, ಆದುದರಿಂದ ಕೇವಲ ಯುಕ್ತಿ ನ್ಯಾಯದಿಂದ ಹೇಳಲಾಗುವುದಿಲ್ಲ, ಶ್ರುತಿಯಲ್ಲಿ ವಿಧಿಸಿರುವುದರಲ್ಲಿ ಒಂದನ್ನು ವಿರುದ್ಧ ತರ್ಕಗಳಿಂದ ಬಾಧಿಸಿದರೆ ಅದಕ್ಕೆ ಸಮಾನವಾದ ವಾದಗಳಿಂದಲೇ ಸರ್ವಶಾಸ್ತ್ರಗಳೂ ಹಾಗೆಯೇ ಪ್ರಪತ್ತಿ ಶಾಸ್ತ್ರವೂ ಕೂಡ ಪ್ರಮಾಣವಲ್ಲದ್ದಾಗಿ ಹೋಗಬಹುದು. ಒಂದು ಉಪಾಯವು ಅನುರೂಪವೇ ಅಲ್ಲವೇ ಎಂದು ನಿರ್ಧರಿಸುವ ಸಂದರ್ಭದಲ್ಲಿ ಶಾಸ್ತ್ರವೇ ಪ್ರಮಾಣವು. '[1]ತರ್ಕಾ ಪ್ರತಿಷ್ಠಾನಾದಪಿ' ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವ ಹಾಗೆ ಬರೀ ವಾದದಿಂದ ಉಪಯೋಗವಿಲ್ಲ. ಒಂದೊಂದು ವಿಷಯದಲ್ಲೂ ಒಬ್ಬೊಬ್ಬನೂ ತನ್ನ ಮನಸ್ಸಿಗೆ ತೋಚಿದ ಯುಕ್ತಿಗಳಿಂದ ಮತ್ತೊಬ್ಬನು

1. ಬ್ರಹ್ಮಸೂತ್ರ. ೨–೪

ಹೇಳಿದ್ದನ್ನು ಒಪ್ಪದೆ ವಾದಮಾಡಬಹುದು, ಶಾಸ್ತ್ರವು "ತಮೇವಂ ವಿದ್ವಾನಮೃತ ಇಹಭವತಿ. ನಾನ್ಯಃ ಪಂಥಾ ವಿದ್ಯತೇ ಅಯನಾಯ" ಎಂಬುದರಿಂದ ಅನುರೂಪ ವಾದ ಉಪಾಯವೆಂದೇ ಹೇಳುತ್ತಿದೆ, ಪ್ರಾಪ್ಯನೂ ಪ್ರಾಪಕನೂ ಸರ್ವೇಶ್ವರನೇ ಆಗಿರುವಾಗ ಅನುರೂಪವಲ್ಲದ ಭಕ್ತ್ಯುಪಾಯವೆಂಬ ಸಾಧ್ಯೋಪಾಯ ಬೇರೆ ಏತಕ್ಕೆ ? ಅನಾವಶ್ಯಕವಲ್ಲವೋ ? ಎಂದು ವಾದ ಮಾಡಿದರೆ ಪ್ರಪತ್ತಿಯ ವಿಷಯ ದಲ್ಲೂ ಆ ವಾದವನ್ನೇ ತಂದು ಅದನ್ನು ಕೂಡ ಬಾಧಿಸಿಬಿಡಬಹುದು. ಪ್ರಪತ್ತಿಯು ಮಾತ್ರ ಅನುರೂಪ, ಭಕ್ತ್ಯುಪಾಯವಲ್ಲ ಎಂಬುದಕ್ಕೆ ತಾನೇ ಪ್ರಮಾಣ ಎಲ್ಲಿರು ತ್ತದೆ ? ಆದುದರಿಂದ ಈ ಕಾರಣದಿಂದಲೂ ಸ್ವರೂಪ ವಿರೋಧವೆಂದು ವಾದಿಸಲು ಸಾಧ್ಯವಿಲ್ಲ.

(ಈ) 'ಪಾತಕ ಶಬ್ದದಿಂದ ನಿಂದಿಸಲ್ಪಟ್ಟಿರುವುದರಿಂದ ನಿಂದಿತವಾಗಿದೆ' ಎಂಬ ನಾಲ್ಕನೆಯ ಪಕ್ಷವನ್ನು ನಿರಸನ ಮಾಡುತ್ತಾರೆ.

ಧ್ಯಾಯೀತ ನಿದಿಧ್ಯಾಸಿತವ್ಯಃ ಉಪಾಸೀತ ಧ್ಯೇಯೋನಾರಾಯಣ ಸ್ಸದಾ — ಹರಿರೇಕಸ್ಸದಾಧ್ಯೇಯಃ — ಸ್ಮರ್ತವ್ಯಃಸತತಂವಿಷ್ಣುಃ — ಮನ್ಮನಾಭವ ಮದ್ಭಕ್ತಃ ಇವೇ ಮೊದಲಾದ ಪ್ರಮಾಣಗಳಿಂದ ಭಕ್ತ್ಯುಪಾಯವು ಭಗವಂತನಿಗೆ ಪರಮಪ್ರಿಯವಾದುದೆಂದು ಶ್ರುತಿಸ್ಮೃತಿಗಳು ಉದ್ಘೋಷಿಸುತ್ತವೆ. ಸ್ವರೂಪ ವಿರುದ್ಧವಾದವುಗಳನ್ನು ಉಪನಿಷತ್ತುಗಳು ಪ್ರತಿಪಾದಿಸುತ್ತವೆಯೇ ? ಆಚಾರ್ಯರು ಮುಂತಾದವರು ಸಿದ್ಧಾಂತ ಸ್ಥಾಪನೆಗಾಗಿ ಸೂತ್ರ, ಭಾಷ್ಯ ಮುಂತಾದ ವನ್ನು ರಚಿಸುತ್ತಿದ್ದರೇ ? ಕಪಿಲಮೂರ್ತಿಯು ತನ್ನ ತಾಯಿಯಾದ ದೇವ ಹೂತಿಗೆ ಉಪದೇಶಿಸುತ್ತಿದ್ದರೇ ? ಶ್ರೀ ಭೀಷ್ಮರು ಯುಧಿಷ್ಠರನಿಗೆ ಅದನ್ನೇ ಉಪದೇಶಿಸುತ್ತಿದ್ದರೇ ? ಶ್ರೀಕೃಷ್ಣ ಭಗವಾನ್‌ರವರು ಅರ್ಜುನನಿಗೆ ಅದನ್ನೇ ಉಪದೇಶಿಸುತ್ತಿದ್ದರೇ ? ಆದುದರಿಂದ ಶಾಸ್ತ್ರವು ಭಕ್ತಿ ಮಾರ್ಗವನ್ನು ಉಪಾಯ ವೆಂದು ವಿಧಿಸಿದೆಯೇ ಹೊರತು ನಿಂದಿಸಿಲ್ಲ. ಈ ಭಕ್ತಿಯನ್ನು ಧರ್ಮ ದೇವತೆಯು ತಾನೇ ತನ್ನ ಮಗನಿಗೆ ಯುಧಿಷ್ಠಿರನಿಗೆ ನಿಂದಿಸಿ ಪಾತಕವದು ಎಂದು ಹೇಳುತ್ತದೆ ಎಂದರೆ ಆ ಮಾತು ಅವೈದಿಕ ಗೋಷ್ಠಿಗೆ ಮಾತ್ರ ರುಚಿಸತಕ್ಕದ್ದಾಗಿದೆ. ಆದರೆ 'ಅಥಪಾತಕ ಭೀತಸ್ತ್ವಂ — ನೀನು ಪಾಪಕ್ಕೆ ಅಂಜಿದವನಾಗಿ' ಎಂಬಲ್ಲಿ ಆ ಪಾತಕ ಶಬ್ದಕ್ಕೆ ಅರ್ಥ ವೇನು ? ಎಂದರೆ ಅನಾದಿಕಾಲದಿಂದ ಕೂಡಿಟ್ಟ ಪಾಪಗಳು ಕೊನೆ ಯಿಲ್ಲದವಾಗಿವೆ. ಅವನ್ನು ಭಕ್ತ್ಯುಪಾಯವು ನಾಶಮಾಡುತ್ತವೆಯೋ ಇಲ್ಲವೋ ಎಂದು ಭಯಪಟ್ಟವನಾದರೆ, ವಿಮುಕ್ತ್ಯಾನ್ಯ ಸಮಾರಂಭಃ — ಅಂತಹ ಪಾತಕ ಗಳನ್ನು ಹೋಗಲಾಡಿಸುವ ಶಕ್ತಿಯುಳ್ಳ ಆದರೆ ಬಹು ಕಷ್ಟಸಾಧ್ಯವಾದ ಕೃಚ್ಛ್ರ,

ಚಾಂದ್ರಾಯಣ, ಕೂಶ್ಮಾಂಡ, ವೈಶ್ವಾನರ, ವ್ರಾತಪತಿ, ಪವಿತ್ರೇಷ್ಟಿ, ತ್ರಿವೃದಗ್ನಿಷ್ಟೋಮ ಮೊದಲಾದ ಇತರ ಕರ್ಮಗಳ ಸಮಾರಂಭಗಳನ್ನು- -ಆರಂಭಿಸಿ ಕಷ್ಟಪಡುವುದನ್ನು ಬಿಟ್ಟು ಅವುಗಳ ಸ್ಥಾನದಲ್ಲಿ ಅಂದರೆ ಅವಕ್ಕೆ ಬದಲಾಗಿ ಸರ್ವಭಾವೇನ —ಅವನೇ ತಂದೆ, ತಾಯಿ, ಸ್ನೇಹಿತ, ಪ್ರಿಯಪುತ್ರ ಎಂಬುದಾಗಿ [1]'ಪಿತಾತ್ವಂ ಮಾತಾತ್ವಂ' ಎಂದೂ [2]ಏಷಹಿಮಾತಾಪಿತಾ ಭ್ರಾತಾ ಸುಹೃದ್ಗತಿಶ್ಚ 'ನಾರಾಯಣಃ ನಿವಾಸಶ್ಶರಣಂಸುಹೃತ್ ಎಂದೂ ಹೇಳಿರುವ ರೀತಿಯಲ್ಲಿ ಭಾವಿಸುತ್ತಾ 'ನಾರಾಯಣ ಪರೋಭವ'—ಶ್ರೀಮನ್ನಾರಾಯಣನಲ್ಲಿ ಶರಣಾಗತಿಯನ್ನು ಮಾಡು ಹೀಗೆಂಬುದಲ್ಲವೇ ಪ್ರಕರಣಕ್ಕೆ ಹೊಂದುವ ಅರ್ಥ. ಆದುದರಿಂದ ಭಕ್ತ್ಯುಪಾಯವು ನಿಂದಿತವು ಎಂಬುದಕ್ಕೆ ಪೂರ್ವಪಕ್ಷಿಗಳಾದ ನಿಮಗೆ ಪ್ರಮಾಣವೇ ಇಲ್ಲ.

೧೧. ಮುಮುಕ್ಷುವಿಗೆ—ಮೋಕ್ಷವನ್ನು ಬಯಸುವವನಿಗೆ, ಶಕ್ತನಿಗೆ ಭಕ್ತ್ಯುಪಾಯವೂ ಅಶಕ್ತನಿಗೆ ಪ್ರಪತ್ತಿಯೂ ಉಪಾದೇಯಗಳು ಎಂದಾಯಿತು.

[3]ವಿಕಲ್ಪೋಽವಿಶಿಷ್ಟತ್ವಾತ್ ।

ಎಂಬ ಸೂತ್ರಕ್ಕೆ ಅನುಗುಣವಾಗಿ—ಭಕ್ತಿಯೋಗವು ವಿಹಿತವಾಗಿದ್ದರೂ ಆಚಾರ್ಯರು ಪ್ರೀತಿಯಿಂದ ಸ್ವೀಕರಿಸಲು ತಕ್ಕದ್ದಲ್ಲವಾಗಿದೆ ಅಂದರೆ ಅದು ಶಿಷ್ಟ ಪರಿಗ್ರಹವಲ್ಲದ್ದು ಎಂಬುದು [4]ಹತ್ತನೆಯ ಕಾರಣ. ಇದನ್ನು ರಹಸ್ಯತ್ರಯ ಸಾರದ ವ್ಯಾಖ್ಯಾನದಲ್ಲಿ ಹನ್ನೊಂದನೆಯದೆಂದು ಪರಿಗಣಿಸಲಾಗಿದೆ.

ಸ್ವರೂಪ ವಿರುದ್ಧ ಎಂಬುದಕ್ಕೆ ಅದರ ನಿರಸನ.

ವಿಹಿತಙ್ಗಳೇ ಯಾಕಿಲುಮ್ ಆಚಾರ್ಯರುಚಿ ಪರಿಗೃಹೀತಙ್ಗಳಲ್ಲಾದ ಪಡಿಯಾಲೇ ಅತಿಥಿ ಸತ್ಕಾರಙ್ಗಳಿಲ್ ವಿಹಿತಂಗಳಾನ ಗವಾಲಂಭನಾದಿಕಳ್‌ಪ್ಪೋಲೆ ಉಪಾಸನಾದಿಕಳ್ ಶಿಷ್ಟ ಪರಿಗ್ರಹ ವಿರುದ್ಧಙ್ಗಳಾಕೈಯಾಲೆ ಅನಾದರಣೀಯಙ್ಗಳನ್ರೋ ? ಎಂಬುದು ರಹಸ್ಯತ್ರಯ ಸಾರದ ಪಙ್ಕ್ತಿ—ಇದರ ಅರ್ಥ ಶಾಸ್ತ್ರ

1. ಯಾಮುನೇಯರ ಸ್ತೋತ್ರರತ್ನ-೬೦.
2. ಸುಬಾಲೋಪನಿಷತ್-ಗೀತೋಪನಿಷತ್.
3. ಬ್ರಹ್ಮಸೂತ್ರ. ೩-೩-೫೭.
4. ಇದನ್ನು ಭಕ್ತಿ ಪ್ರಪತ್ತಿಗಳು ಸ್ವರೂಪ ವಿರುದ್ಧಗಳೆಂಬ ಪಟ್ಟಿಯಲ್ಲಿ ಒಟ್ಟಾಗಿ ಹತ್ತನೆಯದಾಗಿಯೇ ಪರಿಗಣಿಸಲಾಯಿತು. ಇದರ ಕ್ರಮದಲ್ಲಿ ಮುಂದಿನ ಸಂಖ್ಯೆಗಳು ಒಂದೊಂದೂ ಹೆಚ್ಚುತ್ತವೆ.

ದಲ್ಲಿ ಭಕ್ತ್ಯುಪಾಯವು ಮೋಕ್ಷದಾಯಕವೆಂದು ವಿಧಿಸಿದ್ದರೂ, ಪೂರ್ವಾಚಾರ್ಯರುಗಳ ಅಭಿಮತಾನುಸಾರವಾಗಿ ಉಪಾದೇಯಗಳಲ್ಲದುದರಿಂದ, ಅತಿಥಿ ಸತ್ಕಾರಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಲ್ಪಟ್ಟ [1]ಗವಾಲಂಭನಾದಿಗಳ ಹಾಗೆ ಉಪಾಸನವೇ ಮೊದಲಾದವುಗಳು ಶಿಷ್ಟ ಪರಿಗ್ರಹಕ್ಕೆ ವಿರುದ್ಧಗಳಾದುದರಿಂದ ಸ್ವೀಕರಿಸತಕ್ಕದ್ದಲ್ಲವಲ್ಲವೇ?

1. ಒಬ್ಬ ಗೃಹಸ್ಥನು ಮನೆಗೆ ಅತಿಥಿಯಾಗಿ ಬಂದರೆ ಅವನಿಗೆ ಆಸನವನ್ನು ಕೊಟ್ಟು ಕೂರಿಸಬೇಕು. ಅನಂತರ ಅವನ ಕಾಲನ್ನು ತೊಳೆದು ಕೈಗೆ ನೀರನ್ನು ಕೊಡಬೇಕು. ಈ ರೀತಿ ಪಾದ್ಯ ಅರ್ಘ್ಯಗಳನ್ನು ಕೊಟ್ಟು ಸತ್ಕರಿಸಿದ ನಂತರ ಮಧುಪರ್ಕವನ್ನು ಕೊಡಬೇಕು. ಈ ಮಧುಪರ್ಕವನ್ನು ಮೊಸರು, ಜೇನುತುಪ್ಪ ಇವನ್ನು ಕಲಸಿ ಮಾಡಬೇಕು. ಕೆಲವರು ತುಪ್ಪ, ಮೊಸರು, ಜೇನುತುಪ್ಪ ಈ ಮೂರನ್ನೂ ಸೇರಿಸಿ ಮಧುಪರ್ಕವಾಗಿ ಕೊಡಬೇಕೆನ್ನುತ್ತಾರೆ. ಮತ್ತೆ ಕೆಲವರು **ಪಾಙ್ಕ್ತಮೇಕೇಧಾನಾಸ್ಸಕ್ತೂಂಶ್ಚ** (ಆಪಸ್ತಂಬಗೃಹ್ಯ. ಖಂಡ ೧೩. ಸೂತ್ರ ೧೨) ತುಪ್ಪ, ಮೊಸರು, ಜೇನುತುಪ್ಪ, ಹುರಿದ ಗೋಧಿ, ಅಕ್ಕಿಯನ್ನು ಹುರಿದು ಅದರಿಂದ ತಯಾರಾಗಿರುವ ಹಿಟ್ಟು ಈ ಐದನ್ನೂ ಸೇರಿಸಿ ಮಧುಪರ್ಕವಾಗಿ ಕೊಡಬೇಕೆನ್ನುತ್ತಾರೆ. ಮಧುಪರ್ಕವನ್ನು ಪಡೆಯುವವನು ಕ್ಷತ್ರಿಯನೋ, ವೈಶ್ಯನೋ ಆಗಿದ್ದರೆ ಅವನು ಅದನ್ನು ತಿನ್ನದೆ ತನ್ನ ಪುರೋಹಿತನ ಹತ್ತಿರ ಕೊಡಬೇಕು. ಆ ಪುರೋಹಿತನು ಆ ಮಧುಪರ್ಕದ ಅಭಿಮಂತ್ರಣದ ಮೊದಲು ಪ್ರಾಶನದವರೆಗಿರುವ ಕಾರ್ಯವನ್ನು ತಾನೇ ಮಾಡಬೇಕು.

ಅನಂತರ ಪೂಜೆಮಾಡುವವನು "**ಗೌರಿತಿಗಾಂಪ್ರಾಹ** (ಖಂಡ ೧೩–೧೫) ಪಶುವು ಸಿದ್ಧವಾಗಿದೆ. ಇದನ್ನು ತಮಗಾಗಿ ಕೊಂದುಬಿಡಬಹುದೇ, ಬಿಟ್ಟುಬಿಡಬಹುದೇ? ಎಂದು ಕೇಳಬೇಕು". ಒಡನೆಯೇ ಆ ಪೂಜೆಯನ್ನು ಪಡೆಯುವವನು ತನ್ನ ಅಭಿಪ್ರಾಯವನ್ನು ತಿಳಿಸಬೇಕು.

**ಸೂ॥ ಉತ್ತರಯಾಭಿಮನ್ತ್ರ್ಯ ತಸ್ಯೈವ ವಪಾಂ ಶ್ರಪಯಿತ್ವೋಪಸ್ತೀರ್ಣಾಮಭಿಘಾರಿತಾಂ ಮಧ್ಯಮೇನ ಅನ್ತಮೇನವಾ ಪಲಾಶಪರ್ಣೇನೋತ್ತರಯಾಜುಹೋತಿ** (ಖಂಡ ೧೩. ಸೂ. ೧೬). ಪೂಜೆಯನ್ನು ಹೊಂದುವವನು ಪಶುವಿನ (ಹಸುವಿನ) ಮಾಂಸವನ್ನು ತಿನ್ನಲು ಬಯಸಿ ಪಶುವನ್ನು ಕೊಲ್ಲಬೇಕೆಂದು ಅಪೇಕ್ಷಿಸಿದರೆ "**ಗೌರಸ್ಯಪಹತಪಾಪ್ಮಾಽಪಪಾಪ್ಮಾನಂಜಹಿ ಮಮಚಾಮುಷ್ಯಚ** = ಎಲೌ ಹಸುವೇ ! ನೀನು ಪಾಪಗಳು ಇಲ್ಲದವಳಾಗಿ ಆಗುತ್ತೀಯೆ. ನನ್ನ ಮತ್ತು ಪೂಜೆಮಾಡುವವನ ಪಾಪವನ್ನು ನಾಶಮಾಡುವವಳಾಗು" ಎಂಬ ಈ ಮಂತ್ರದಿಂದ ಅಭಿಮಂತ್ರಣ ಮಾಡಬೇಕು. ಅನಂತರ ಪೂಜೆಮಾಡುವವನು ಹಸುವಿನ ವಪೆಯನ್ನು ತೆಗೆದು ಭಾಗಮಾಡಿ ಪಲಾಶ-ಮುತ್ತುಗದ (ತಮಿಳಿನಲ್ಲಿ ಪೊರಶುಮರಮ್) ಮಧ್ಯದ ಎಲೆಯಲ್ಲೋ ಅಥವಾ ಎರಡು ಪಕ್ಕಗಳಲ್ಲಿರುವ ಎಲೆಯಲ್ಲೋ ತುಪ್ಪವನ್ನು ಒರಿಸಿ ಅದರಲ್ಲಿ ವಪೆಯನ್ನು ಎತ್ತಿಟ್ಟು ಅದರ ಮೇಲೆ ತುಪ್ಪವನ್ನು ಬಿಟ್ಟು "**ಅಗ್ನಿಃಪ್ರಾಶ್ನಾತು ಪ್ರಥಮಸ್ಸಹಿವೇದ ಯಥಾಹವಿಃ, ಅರಿಷ್ಟಮಸ್ಮಾಕಂ ಕೃಣ್ವನ್ ಬ್ರಾಹ್ಮಣೋ ಬ್ರಾಹ್ಮಣೇಭ್ಯಃ**" ಎಂಬ ಈ ಮಂತ್ರದಿಂದ ತನ್ನ ಔಪಾಸನಾಗ್ನಿಯಲ್ಲಿ ವಪಾಹೋಮವನ್ನು ಮಾಡಬೇಕು.

ಇದರ ಅರ್ಥ : **ಬ್ರಾಹ್ಮಣೇಭ್ಯಃ** = ಬ್ರಾಹ್ಮಣರಾದ **ಅಸ್ಮಾಕಂ** = ನಮ್ಮ, **ಅರಿಷ್ಟಂ** = ಪಾಪವನ್ನು, **ಕೃಣ್ವನ್** = ನಾಶಮಾಡಿಕೊಂಡು, **ಬ್ರಾಹ್ಮಣಃ** = ಬ್ರಾಹ್ಮಣ ರೂಪವನ್ನು ತಾಳಿದ, **ಅಗ್ನಿಃ** = ಅಗ್ನಿದೇವನು, **ಪ್ರಥಮಃ** = ಮೊದಲನೆಯದಾಗಿ, **ಪ್ರಾಶ್ನಾತು** = ತಿನ್ನಲಿ,

**ಸಹಿ** = ಅವನುತಾನೇ, **ಹವಿಃ** = ಹವಿಸ್ಸಾದದ್ದು, **ಯಥಾ** = ಯಾವರೀತಿ ಇದೆ ಎಂಬುದನ್ನು **ವೇದ** = ತಿಳಿಯುತ್ತಾನೆ.

ಅಗ್ನಿದೇವನು ಈ ಹಸುವಿನ ಮಾಂಸವಾದ ವಪೆಯನ್ನು ಮೊದಲು ತಿಂದು ಅದರಲ್ಲಿ ಯಾವುದಾದರೂ ದೋಷಗಳಿದ್ದರೆ ಅವನ್ನು ಹೋಗಲಾಡಿಸಿ ಆಮೇಲೆ ತಿನ್ನುವವನಿಗೆ ಈ ಮಾಂಸದ ಮೂಲಕ ಯಾವ ಕೆಟ್ಟದ್ದೂ ಆಗದಂತೆ ಅನುಗ್ರಹಿಸಬೇಕೆಂದು ತಾತ್ಪರ್ಯ.

ಮಿಕ್ಕ ಹಸುವಿನ ಅವಯವವನ್ನು ಬೇಯಿಸಿ ಅನ್ನದೊಡನೆ ಪೂಜೆಯನ್ನು ಹೊಂದುವವನಿಗೆ ಕೊಟ್ಟುಬಿಡಬೇಕು.

**ಸೂಚನೆ :** ಇಲ್ಲಿ ಹೇಳಿರುವ ಗೋಮಾಂಸ ಭಕ್ಷಣವು ಕ್ಷತ್ರಿಯ, ವೈಶ್ಯ ಇವರ ವಿಷಯವೇ ಹೊರತು ಉಳಿದವರಿಗೆ ಅಲ್ಲ.

ಈ ರೀತಿ ಗೋವನ್ನು ಕೊಂದು ಮಾಂಸವನ್ನು ಅತಿಥಿಗೆ ಭೋಜನವನ್ನು ಮಾಡಿಸುವುದನ್ನು—

**ಊಢಾಯಾಃ ಪುನರುದ್ವಾಹಂ ಜ್ಯೇಷ್ಠಾಂಶಂಗೋವಧಂ ತಥಾ ।**
**ಕಲೌಪಂಚನಕುರ್ವೀತ ಭ್ರಾತೃಜಾಯಾಂ ಕಮಣ್ಡಲುಮ್ ॥**

ಒಂದು ಸಲ ಮದುವೆ ಮಾಡಿದ ಕನ್ನಿಕೆಗೆ ಮತ್ತೊಂದು ಸಲ ಮದುವೆ ಮಾಡುವುದು, ಆಸ್ತಿಯನ್ನು ಭಾಗಮಾಡುವಾಗ ಹಿರಿಯವನಿಗೆ ಹೆಚ್ಚಾಗಿ ದಾಯ-ಪದಾರ್ಥವನ್ನು ಕೊಡುವುದು, ಹಸುವನ್ನು ಕೊಲ್ಲುವುದು, ಒಬ್ಬನಿಗೆ ಮಗನಿಲ್ಲದಿದ್ದರೆ, ಅವನ ಸಹೋದರನನ್ನು ಸ್ವೀಕರಿಸಿ ಮಗನನ್ನು ಉಂಟುಮಾಡುವುದು, ಮಣ್ಣಿನಿಂದ ಮಾಡಿದ ಕೊಡವನ್ನು ಧರಿಸುವುದು ಇವನ್ನು ಕಲಿಯುಗದಲ್ಲಿ ಮಾಡಕೂಡದೆಂದು ನಿಷೇಧಿಸಿರುವುದರಿಂದ ಈ ಕಾಲದಲ್ಲಿ ಇದನ್ನು ಅನುಷ್ಠಿಸಕೂಡದು.

**ಯಾವದ್ವರ್ಣವಿಭಾಗೋಽಸ್ತಿ ಯಾವದ್ವೇದಃ ಪ್ರವರ್ತತೇ ।**
**ಸಂನ್ಯಾಸಂಚಾಗ್ನಿ ಹೋತ್ರಂಚ ತಾವತ್ಕುರ್ಯಾತ್ಕಲೌಯುಗೇ ॥**

ಬ್ರಾಹ್ಮಣ ಮೊದಲಾದ ಜಾತಿ ವಿಭಾಗವೂ, ವೇದವೂ ಎಷ್ಟು ಕಾಲ ಇರುತ್ತದೋ ಅದುವರೆವಿಗೂ ಸನ್ಯಾಸವನ್ನೂ, ಅಗ್ನಿಹೋತ್ರವನ್ನೂ ಕಲಿಯುಗದಲ್ಲಿ ಮಾಡಬಹುದೆಂದು ವಚನ ಇರುವುದರಿಂದ **"ಕಮಂಡಲು ವಿಧಾರಣಮ್"** ಎಂಬುದಕ್ಕೆ ಸನ್ಯಾಸ ಎಂದು ಅರ್ಥ ಹೇಳುವುದು ಯುಕ್ತವಲ್ಲವೆಂದು ವಿರ್ಪಡುತ್ತದೆ.

**ಸೂ॥ ಯದ್‌ಯುತ್ಸೃಜೇದುಪಾಂಶು ಉತ್ತರಾಂ ಜಪಿತ್ವಾ ಓಮುತ್ಸೃಜತೇ ತ್ಯುಚ್ಚೈಃ** (ಖಂಡ ೨೩. ಸೂತ್ರ ೧೭).

ಪೂಜೆಯನ್ನು ಪಡೆಯುವವನು ಹಸುವನ್ನು ಕೊಲ್ಲದೆ ಬಿಟ್ಟುಬಿಡಬೇಕು ಎಂದು ಅಪೇಕ್ಷಿಸಿದರೆ—

**ಯಜ್ಞೋವರ್ಧತಾಂ ಯಜ್ಞಸ್ಯವೃದ್ಧಿ ಮನುವರ್ಧಾ ಪಚಿತಿರಸ್ಯಪಚಿತಿಂ ಮಾಕುರ್ವಪ ಚಿತೋಽಹಂ ಮನುಷ್ಯೇಷು ಭೂಯಾಸಮ್ । ಗೌರ್ಧೇನು ಭವ್ಯಾಮಾತಾ ರುದ್ರಾಣಾಂ ದುಹಿತಾವಸೂನಾಗ್ಂಸ್ವಸಾದಿತ್ಯಾನಾಮಮೃತಸ್ಯ ನಾಭಿಃ । ಪ್ರಣುವೋಚಶ್ಚಿಕಿತುಷೇಜನಾಯ ಮಾಗಾಮನಾಗಾಮದಿತಿಂವಧಿಷ್ಟ ॥೧೧॥ ಪಿಬತೂದಕಂ ತೃಣಾನ್ಯತ್ತು । ಓ ಮುತ್ಸೃಜತ ।**

**ಯಜ್ಞಃ** = ನನ್ನನ್ನು ಪೂಜಿಸುವುದೆಂಬ ಈ ಯಜ್ಞವು, **ವರ್ಧತಾಂ** = ವೃದ್ಧಿಯನ್ನು ಹೊಂದಲಿ. ಹಸುವನ್ನು ಕೊಲ್ಲದೆ ಬಿಟ್ಟುಬಿಡುವುದರಿಂದ ಈ ಕಾರ್ಯಕ್ಕೆ ಕೊರತೆ ಉಂಟಾಗ ದಿರಲಿ.(**ಹೇ ಗೌಃ** = ಓ ಹಸುವೇ),**ಯಜ್ಞಸ್ಯ** = ನನ್ನನ್ನುಪೂಜಿಸುವುದು ಎಂಬ ಯಾಗದ, **ವೃದ್ಧಿಮನು** = ವೃದ್ಧಿಯನ್ನು ಅನುಸರಿಸಿ, **ಅನುವರ್ಧ** = ವೃದ್ಧಿಯನ್ನು ಹೊಂದು, (**ಹೇ ಗೌಃ** = ಎಲೌ ಹಸುವೇ, **ತ್ವಂ** = ನೀನು),**ಅಪಚಿತಿಃ** = ಪೂಜೆಮಾಡುವುದಕ್ಕೆ ಸಾಧನವಾಗಿ, **ಅಸಿ** = ಆಗಿ ರುವೆ, **ಮಾ** = ನನ್ನನ್ನು, **ಅಪಚಿತಂ** = ಮತ್ತೊಬ್ಬರಿಂದ ಪೂಜಿಸಲ್ಪಟ್ಟವನಾಗಿ, **ಕುರು** = ಮಾಡುವಳಾಗು. ಅಂದರೆ, **ಮನುಷ್ಯೇಷು** = ಮನುಷ್ಯರುಗಳಲ್ಲಿ, **ಅಹಂ** = ನಾನು, **ಅಪಚಿತಃ** = ಪೂಜಿಸಲ್ಪಟ್ಟವನಾಗಿ, **ಭೂಯಾಸಂ** = ಆಗಬೇಕು. ಎಲೌ ಹಸುವೇ ! ನಿನ್ನನ್ನು ಕೊಲ್ಲದೆ ಬಿಟ್ಟುಬಿಡುವುದರಿಂದ ನನ್ನ ಹತ್ತಿರ ಯಾರೂ ಕೊರತೆಯನ್ನು ಹೇಳದೆ ಇರುವುದಲ್ಲದೆ ಮನುಷ್ಯ ಸಮೂಹದಲ್ಲಿ ಯಾರೂ ನನ್ನನ್ನು ಪೂಜಿಸಲೂ ಬೇಕು ಎಂದು ಪ್ರಾರ್ಥಿಸುವುದರಲ್ಲಿ ತಾತ್ಪರ್ಯ.

**ಗೌಃ** = ಈ ಹಸುವು, **ಧೇನುಭವ್ಯಾ** = ಮುಂದೆ ಹಾಲನ್ನು ಕರೆಯುವ ದೊಡ್ಡ ಹಸು ವಾಗಿ ಆಗುವಂತೆಯೂ, **ರುದ್ರಾಣಾಂ** = ರುದ್ರರು ಎಂಬ ದೇವತೆಗಳಿಗೆ, **ಮಾತಾ** = ತಾಯಾ ಗಿಯೂ ಹಸುವಿನಿಂದ ಉಂಟಾದ ತುಪ್ಪ, ಮೊಸರು ಮೊದಲಾದುವುಗಳಿಂದಲೇ ಯಾಗವು ನಡೆಯಬೇಕಾದುದರಿಂದಲೂ, ಯಾಗದಿಂದಲೇ ದೇವತೆಗಳು ತೃಪ್ತಿಯನ್ನು ಹೊಂದಬೇಕಾ ದುದರಿಂದಲೂ ಈ ರೀತಿ ಹೇಳಿದೆ. ಈ ಅಭಿಪ್ರಾಯವನ್ನೇ ಇನ್ನು ಬರುವ ಭಾಗಗಳಿಗೂ ಹೇಳಬೇಕು. **ವಸೂನಾಂ** = ವಸು ಎಂಬ ದೇವತೆಗಳಿಗೆ, **ದುಹಿತಾ** = ಮಗಳಂತೆ ಪ್ರಕಾಶವುಳ್ಳವ ಳಾಗಿಯೂ, **ಆದಿತ್ಯಾನಾಂ** = ಆದಿತ್ಯರೆಂಬ ದೇವತೆಗಳಿಗೆ, **ಸ್ವಸಾ** = ಸಹೋದರಿಯಾಗಿಯೂ, **ಅಮೃತಸ್ಯ** = ದೇವಭಾವವನ್ನು ಹೊಂದುವುದಕ್ಕೆ, **ನಾಭಿಃ** = ನಾಭಿಯಾಗಿಯೂ ಅಂದರೆ ಹೊಕ್ಕಳಿನಂತೆಯೂ (ನಾಭಿಗೆ ನೇರವಾಗಿ ಇರುವ ಮೂಲಾಧಾರ ಎಂಬ ಸ್ಥಾನವು ಶರೀರಕ್ಕೆ ಯಾವ ರೀತಿ ಮುಖ್ಯಾಧಾರವೋ ಆ ರೀತಿಯೇ ದೇವಭಾವವನ್ನು ಹೊಂದುವುದಕ್ಕೆ ಸಾಧನ ವಾದ ಯಾಗಕ್ಕೆ ತುಪ್ಪ, ಮೊಸರು ಮೊದಲಾದವು ಮುಖ್ಯಸಾಧನವಾಗಿ ಇರುವುದರಿಂದಲೂ, ತುಪ್ಪ, ಮೊಸರು ಮೊದಲಾದವಕ್ಕೆ ಹಸುವು ಕಾರಣವಾಗಿರುವುದರಿಂದಲೂ ಈ ರೀತಿ ಹೇಳ ಲ್ಪಟ್ಟಿದೆ). **ಅಸಿ** = ಆಗಿರುವಿ, (**ಏವಂ ಪ್ರಶಸ್ತಾಂ** = ಮೇಲೆ ಹೇಳಿರುವಂತೆ ಶ್ರೇಷ್ಠಳಾದ ನಿನ್ನನ್ನು ಕುರಿತು), **ಚಿಕಿತುಷೇ** = ಅರಿವು ಇರುವ ಜನಗಳನ್ನು ಕುರಿತು, **ಅನಾಗಾಂ** = **ದೋಷ** ವಿಲ್ಲದೆಯೂ, **ಅದಿತಿಂ** = ಕೊಲ್ಲಲು ತಕ್ಕದ್ದಲ್ಲವಾಗಿಯೂ ಇರುವ, **ಗಾಂ** = ಈ ಹಸುವನ್ನು, **ಮಾವಧಿಷ್ಟ** = ಕೊಲ್ಲಬೇಡಿ, **ಉದಕಂ** = ನೀರನ್ನು, **ಪಿಬತು** = ಕುಡಿಯಲಿ, **ತೃಣಾನಿ** = ಹುಲ್ಲು ಗಳನ್ನು, **ಅತ್ತು** = ಮೇಯಲಿ, **ಇತಿ** = ಎಂದು, **ನು** = ಬೇಗನೆ, **ಪ್ರವೋಚಂ** = ಚೆನ್ನಾಗಿ

ಹೇಳುತ್ತೇನೆ, **ಓಮ್** = ಈ ರೀತಿ ಮಾಡುವುದು ನನಗೆ ಸಮ್ಮತವಾದದ್ದೇ, **ಉತ್ಸೃಜತ** = ಬಿಟ್ಟುಬಿಡಿ ಎಂದು ಅತಿಥಿಯು ಹೇಳುತ್ತಾನೆ.

ಇದು ವೇದದಲ್ಲಿ ಮತ್ತು ಸೂತ್ರದಲ್ಲಿ ಹೇಳಿರುವ ರೀತಿ ಆಯಿತು. ಇದರ ಅನುಷ್ಠಾನ ವಿಷಯದಲ್ಲಿ ಭವಭೂತಿಯು ತಾನು ರಚಿಸಿರುವ **ಉತ್ತರ ರಾಮಚರಿತೆ** ಎಂಬ ನಾಟಕ (ನಾಲ್ಕನೆಯ ಅಂಕ, ಮಿಶ್ರ ವಿಷ್ಕಂಭದ ಭಾಗ) ದಲ್ಲಿ ಹೇಳಿರುವ ಮಧುಪರ್ಕದ ವಿಚಾರವನ್ನು ತಿಳಿಯೋಣ

**ಭೋ ದಾಂಡಾಯನ ಕಿಂ ನಾಮಧೇಯ ಏಷ ಮಹತಃ ಸ್ತ್ರೀ ಸಾರ್ಥಸ್ಯಧುರಂಧರೋದ್ಯಾತಿಥಿರಾಗತಃ** = ದಾಂಡಾಯನ ಎಂಬುದು ಒಬ್ಬನ ಹೆಸರು. ಎಲೌ ದಾಂಡಾಯನನೇ ! ಈ ಅಧಿಕವಾದ ಹೆಂಗಸರ ಗುಂಪಿಗೆ ನಿರ್ವಾಹಕನಾಗಿ ಒಬ್ಬ ಅತಿಥಿಯು ಈವಾಗ ಬಂದಿದಾನಲ್ಲ, ಅವನ ಹೆಸರೇನು ? ಎಂದು ತನ್ನ ಸ್ನೇಹಿತನಾದ ಸೌಧಾತಕಿಯನ್ನು ಹಾಸ್ಯವಾಗಿ ನಗುತ್ತಾ ಕೇಳುತ್ತಾನೆ.

**ದಾಂಡಾ : ಧಿಕ್ ಪ್ರಹಸನಂ** = ನಿನ್ನ ಹಾಸ್ಯದ ಮಾತು ನಿಂದಿಸಲು ತಕ್ಕದ್ದಾಗಿದೆ.

**ನನ್ವಯಮೃಶ್ಯ ಶೃಂಗಾಶ್ರಮಾದರುಂಧತೀಂ ಪುರಸ್ಕೃತ್ಯ ಮಹಾರಾಜ ದಶರಥಸ್ಯ ಧರ್ಮದಾರಾನಧಿಷ್ಠಾಯ ಭಗವಾನ್ವಸಿಷ್ಠಃ ಪ್ರಾಪ್ತಃ ತತ್ಕಿಮೇವಂ ಪ್ರಲಪಸಿ ॥**

ಪೂಜ್ಯರಾದ ವಸಿಷ್ಠರು ದಶರಥನ ಮಡದಿಯರಾದ ಕೌಸಲ್ಯೆ ಮುಂತಾದವರಿಗೆ ನಿಯಾಮಕನಾಗಿ ತನ್ನ ಪತ್ನಿಯಾದ ಅರುಂಧತಿಯನ್ನು ಮುಂದಿಟ್ಟು ಋಶ್ಯಶೃಂಗರ ಆಶ್ರಮದಿಂದ ಬಂದಿದ್ದಾರೆ. ನೀನೇನು ಹೀಗೆ ಹರಟುತ್ತೀಯೆ ?

**ಸೌಧಾ : ಹುಂ ವಸಿಷ್ಠಃ** = ವಸಿಷ್ಠರೇನು ?

**ದಾಂಡಾ : ಅಥಕಿಮ್** = ಹೌದು.

**ಸೌಧಾ : ಮಯಾಪುನರ್ಜ್ಞಾತಂ ವ್ಯಾಘ್ರಃ, ವೃಕೋವಾ ಏಷ ಇತಿ** = ಇವನು ಹುಲಿಯೋ, ತೋಳವೋ ಎಂದರಿತೆ.

**ದಾಂಡಾ : ಆಃ ಕಿಮುಕ್ತಂಭವತಾ** = ಏನಂದೆ ? ಚೆನ್ನಾಗಿ ತಿಳಿದೆ.

**ಸೌಧಾ : ತೇನಹ್ಯಾಗಚ್ಛತೈವ ಸಾವರಾಕೀ ಕಪಿಲಾ ಬಲಾತ್ಕೃತ್ಯ ಮಡಮಡಾಯಿತಾ** = ಅವರು ಬಂದೊಡನೆಯೇ ದುರದೃಷ್ಟಶಾಲಿಯಾದ ವರ್ಷದ ಪ್ರಾಯವುಳ್ಳ ಕಪಿಲೆಯು ಬಲಾತ್ಕಾರವಾಗಿ ಸಾಯಿಸಲ್ಪಟ್ಟಿತು. ಸಾಯುವಾಗ ಅದು ಮಡಮಡಾ ಎಂದು ಶಬ್ದ ಮಾಡುತ್ತದೆ. ಆ ರೀತಿ ಶಬ್ದ ಮಾಡುವ ಹಾಗೆ ಮಾಡಲ್ಪಟ್ಟಿತು. (ಅದರಿಂದ ಹುಲಿ ಎಂದು ತಿಳಿದೆ ಎಂದು ಹಿಂದಿನ ವಾಕ್ಯದೊಡನೆ ಸಂಬಂಧ).

**ದಾಂಡಾ : ಸಮಾಂಸೋ ಮಧುಪರ್ಕ ಇತ್ಯಾಮ್ನಾಯಂಬಹುಮನ್ಯಮಾನಾಶ್ಶ್ರೋತ್ರಿ ಯಾಯಾಭ್ಯಾಗತಾಯ ವತ್ಸತರೀಂ ಮಹೋಕ್ಷಂವಾ ಪಚಂತಿ ಗೃಹಮೇಧಿನಃ । ತಂ ಹಿ ಧರ್ಮಂ ಧಾನ್ಯಂ ಸೂತ್ರಕಾರಾಸ್ಸಮಾಮನಂತಿ ॥** = ಗೃಹಸ್ಥಾಶ್ರಮದಲ್ಲಿರುವವರು ಶ್ರೋತ್ರಿಯನು ಅಂದರೆ ವೇದವನ್ನು ಅಭ್ಯಾಸಮಾಡಿದವನು ಅತಿಥಿಯಾಗಿ ಮನೆಗೆ ಬಂದರೆ ಮಾಂಸದೊಡ ಗೂಡಿದ ಮಧುಪರ್ಕವನ್ನು ಕೊಡಬೇಕು ಎಂದು ಧರ್ಮಶಾಸ್ತ್ರ ಹೇಳುತ್ತದೆ. ಅದನ್ನು ಗೌರವಿಸಿದೊಡ್ಡ ಗೂಳಿಯನ್ನೋ ಅಥವಾ ಒಂದುವರ್ಷದ ಹಸುವಿನ ಒಳಪಂಗಡವಾದ ಕಪಿಲೆ ಯನ್ನೋ ಕೊಂದು ಅದನ್ನು ಪಾಕಮಾಡುತ್ತಾರೆ. ಅದೇ ಧರ್ಮವಾದದ್ದೆಂದೂ ಶ್ರೇಯ ಸ್ಸನ್ನುಂಟುಮಾಡತಕ್ಕದೆಂದೂ ಆಪಸ್ತಂಬ ಆಶ್ವಲಾಯನ ಮುಂತಾದ ಸೂತ್ರಕಾರರು ಉಪ ದೇಶಿಸಿರುತ್ತಾರೆ

**ಸೌಧಾ : ಭೋನಿಗೃಹೀತೋಽಸಿ** = ಸೋಲಿಸಲ್ಪಟ್ಟೆ. (ನೀನು ಹೇಳಿದ್ದು ಸರಿಯಿಲ್ಲ).

**ದಾಂಡಾ :** ಹೇಗೆ ?

**ಸೌಧಾ : ಯದಾಗತೇಷು ವಸಿಷ್ಠಮಿಶ್ರೇಷು ಅದ್ಯೈವ ಪ್ರತ್ಯಾಗತಸ್ಯ ರಾಜರ್ಷೇಃ ಜನಕ ರಾಜಸ್ಯ ಭಗವತಾ ವಾಲ್ಮೀಕಿನಾದಧಿಮಧುಭ್ಯಾಮೇವ ನಿರ್ವರ್ತಿತೋ ಮಧುಪರ್ಕಃ। ವತ್ಸತರೀ ಪುನರ್ವಿಸರ್ಜಿತಾ** = ಪೂಜ್ಯರಾದ ವಸಿಷ್ಠರು ಒಂದಿರಲಾಗಿ ಈಗಾಗಲೇ ಹಿಂತಿರುಗಿಬಂದ ರಾಜರ್ಷಿಯಾದ ಜನಕರಾಜನಿಗೆ ಪೂಜ್ಯರಾದ ವಾಲ್ಮೀಕಿ ಋಷಿಗಳು ಮೊಸರು, ಜೇನು ಇವುಗಳಿಂದಲೇ ಮಧುಪರ್ಕ ಮಾಡಿದರು. ವತ್ಸತರಿಯನ್ನಾದರೋ ಬಿಟ್ಟೇ ಬಿಟ್ಟರು. ಕೊಲ್ಲಲೇ ಇಲ್ಲ.

**ದಾಂಡಾ : ನಿವೃತ್ತ ಮಾಂಸಾನಾಮೇವಂ ಕಲ್ಪಂ ವ್ಯಾಹರಂತಿ ಕೇಚಿತ್** = ಕೆಲವು ಧರ್ಮ ಶಾಸ್ತ್ರಕಾರರು ಮಾಂಸವಿಲ್ಲದೆ ಮಧುಪರ್ಕಾನುಷ್ಠಾನವಿಧಿಯನ್ನು ಮಾಂಸವನ್ನು ಬಿಟ್ಟವರಿಗೆ ಹೇಳುತ್ತಾರೆ.

**ನಿವೃತ್ತ ಮಾಂಸಸ್ತತ್ರ ಭವಾನ್ ಜನಕಃ** = ಪೂಜ್ಯನಾದ ಜನಕನು ಮಾಂಸವನ್ನು ಬಿಟ್ಟವನು.

ಯಾವಾಗ ಸೀತೆಯು ಭಾಗ್ಯಹೀನಳಾದಳೋ ಅದನ್ನು ಕೇಳಿ ಜನಕನು ವಾನಪ್ರಸ್ಥ ನಾದನು. ಚಂದ್ರದ್ವೀಪದಲ್ಲಿ ತಪಸ್ಸನ್ನು ಮಾಡುತ್ತಾ ಕಾಲ ಕಳೆದನು. ಅಪ್ತಸ್ನೇಹಿತನಾದ ವಾಲ್ಮೀಕಿಯನ್ನು ನೋಡಲು ಆಶ್ರಮಕ್ಕೆ ಬಂದಿದ್ದಾನೆ ಎಂದನು.

ಈ ಸಂದರ್ಭವನ್ನೆಲ್ಲಾ ನೋಡಿದರೆ ಹಿಂದೆ ಮಾಂಸ ಭಕ್ಷಣವು ದ್ವಿಜರಿಗೆ ಇತ್ತೆಂದೂ ಅದು ಕಲಿಯುಗದಲ್ಲಿ ನಿಷಿದ್ಧವೆಂದೂ—ಶಿಷ್ಟರಿಂದ ಸ್ವೀಕರಿಸಲು ತಕ್ಕದ್ದಲ್ಲವೆಂದೂ ತಿಳಿಯು ತ್ತದೆ. ರಾಮಾಯಣದಲ್ಲಿ ರಾಮನು ಮಾರೀಚನನ್ನು ಸಂಹಾರಮಾಡಿದನಂತರ ಬೇಟೆಯಾಡಿ ಮಾಂಸವನ್ನು ತಂದನು. ಅಗಸ್ತ್ಯಮಹರ್ಷಿಗಳು ಇಲ್ವಲ ವಾತಾಪಿಗಳನ್ನು ನಿಗ್ರಹಿಸಿದರು ಎಂಬ ಈ ಭಾಗಗಳನ್ನು ನಾವು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

ಎಂದು ಹೇಳುವುದೂ ನಿರೂಪಕ ವಾಕ್ಯವಲ್ಲ—ಪಂಡಿತರು ಹೇಳುವ ಮಾತಲ್ಲ. ಎಲ್ಲಾ ಆಚಾರ್ಯರೂ ಪರಿಗ್ರಹಿಸದೆ ಇದ್ದರಲ್ಲವೇ ನಿರಸನ. **'ಅಸ್ವರ್ಗ್ಯಂ ಲೋಕವಿದ್ವಿಷ್ಟಂ ಧರ್ಮಮಪ್ಯಾಚರೇನ್ನತು**=ಸ್ವರ್ಗಾದಿಗಳನ್ನು ಕೊಡದ ಮತ್ತು ಲೋಕದವರು ನಿಂದಿಸಲು ತಕ್ಕ ಧರ್ಮವು ಅದು ಧರ್ಮವಾಗಿದ್ದರೂ ಅದನ್ನು ಆಚರಿಸ ಕೂಡದು' ಎಂಬ ಮಾತೂ ಅಲ್ಲಿಗೆ ತಾನೇ ಹೊಂದುತ್ತದೆ. ಇಲ್ಲಿಯಾದರೋ ಯಾಮುನಾಚಾರ್ಯರೇ ಮೊದಲಾದವರು ಪೂರ್ವಾಚಾರ್ಯರೆಂದು **'ತಸ್ಮೈನಮೋಮುನಿವರಾಯ ಪರಾಶರಾಯ**=ಆ ಪರಾಶರ ಮುನಿ ಶ್ರೇಷ್ಠರಿಗೆ ನಮಸ್ಕಾರ' ಎಂಬುದಾಗಿ ಗೌರವಿಸಿರುವ ಪರಾಶರರೇ ಮುಂತಾದವರು ಅನುಷ್ಠಿಸಿರುವುದರಿಂದ ಎಲ್ಲಾ ಶಿಷ್ಟರಿಂದಲೂ ಬಹಿಷ್ಕರಿಸಲ್ಪಟ್ಟದ್ದೆಂದು ಹೇಳಲಾಗದು.

೧೨. ಈ ಯುಗದಲ್ಲಿ ಭಕ್ತ್ಯಾದಿಗಳಿಗೆ ಅಧಿಕಾರಿಗಳು ಇಲ್ಲದುದರಿಂದ ಇವಕ್ಕೆ ಕಲಿಯುಗದಲ್ಲಿ ಮೋಕ್ಷೋಪಾಯತ್ವವಿಲ್ಲ, ಅದುದರಿಂದಲ್ಲವೆ **'ಕಲೌಸಂಕೀರ್ತ್ಯ ಕೇಶವಮ್**=ಕಲಿಯುಗದಲ್ಲಿ ಕೇಶವನನ್ನು ಕೊಂಡಾಡಿ–ಅವನ ನಾಮವನ್ನು ಉಚ್ಚರಿಸಿ' ಎಂದೂ—

**ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್‌ಗುಣಃ ।**
**ಕೀರ್ತನಾ ದೇವ ಕೃಷ್ಣಸ್ಯ ಮುಕ್ತಬನ್ಧಃ ಪರಂ ವ್ರಜೇತ್ ॥**

"ದೋಷಗಳಿಂದ ತುಂಬಿರುವ ಕಲಿಯುಗದಲ್ಲಿ ಒಂದು ಗುಣವಿದೆ. 'ಕೃಷ್ಣ' ಎಂದು ಅವನ ನಾಮವನ್ನು ಹೇಳಿ ಕೊಂಡಾಡಿದ ಮಾತ್ರದಿಂದಲೇ ಸಂಸಾರದ ಕಟ್ಟನ್ನೆಲ್ಲಾ ಬಿಡಿಸಿಕೊಂಡು ಮೋಕ್ಷವನ್ನು ಪಡೆಯಬಹುದು" ಎಂದು ಹೇಳಿದೆ, ಎಂಬುದು ಸರಿಯಲ್ಲ. ಈ ಯುಗದಲ್ಲೂ ಭಕ್ತಿಸಾರ, ಪರಾಂಕುಶ, ನಾಥಮುನಿಗಳಂತಹ ಮಹರ್ಷಿಗಳು ಅಧಿಕಾರಿಗಳು ಉಂಟೇ ಉಂಟು—ಉಪಾಸನಕ್ಕೆ. ಹಾಗೆ ಇಲ್ಲದಿದ್ದರೆ. ಸಂಕೀರ್ತನಕ್ಕಿಂತ ಬೇರೆಯಾದ ಪ್ರಪತ್ತಿಗೂ ಮಹಾವಿಶ್ವಾಸಾದಿಗಳಿಂದ ಕೂಡಿದ ಅಧಿಕಾರಿಗಳೂ ಸಿಕ್ಕುವುದು ಕಷ್ಟವಾದುದರಿಂದ ಅದಕ್ಕೂ ಇದೇ ಗತಿಯುಂಟಾಗಿ ಅದನ್ನು ಅನುಷ್ಠಿಸುವವರೂ ಒಬ್ಬರೂ ಇಲ್ಲದಂತಾಗುತ್ತದೆ– ಅದೂ ಉಪಾಯವಲ್ಲ ಎಂಬಂತಾಗುತ್ತದೆ.

೧೩. **ನರಸ್ಯ ಬುದ್ಧಿ ದೌರ್ಬಲ್ಯಾತ್**=ಬುದ್ಧಿ ಸಾಲದವನು ಅವಲಂಬಿಸತಕ್ಕದ್ದು ಎಂದು ಹೇಳಿರುವುದರಿಂದ ಇವನ್ನು ಅನುಷ್ಠಾನ ಮಾಡಕೂಡದು ಎಂಬ ಹದಿಮೂರನೆಯ ಹೇತುವನ್ನು ನಿರಾಸಮಾಡುತ್ತಾರೆ.

ಇವ್ವಧಿಕಾರ ವಿರೋಧ ಮರಿಯಾದೆ ಉಪಾಸನಾದಿಗಳಿಲೇ ಪ್ರವರ್ತಿಕ್ಕುಮವನ್ನೈಪ್ಪತ್ತ "ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾಂತರ ಮಿಷ್ಯತೇ" ಎನ್ರದು.

ಆಗ್ಯೈಯಾಲ್ ಇವ್ವು ಪಾಸನಾದಿಗಳುಮ್ ಅಧಿಕಾರ್ಯಂತರತ್ತುಕ್ಕು ಯಥಾಧಿಕಾರ ಮನುಗುಣಙ್ಗಳ್.

ಅಶಕ್ತನಾದವನು ತನ್ನ ಅಧಿಕಾರಕ್ಕೆ ಈ ಭಕ್ತಿಯೋಗವು ವಿರೋಧವೆಂಬುದನ್ನು ತಿಳಿಯದೆ ಉಪಾಸನಾದಿಗಳಲ್ಲಿ ಪ್ರವರ್ತಿಸುವುದನ್ನು ಕುರಿತು, ಮನುಷ್ಯ ಬುದ್ಧಿ ದೌರ್ಬಲ್ಯದಿಂದ ಎಂದರೆ ತಾನು ಅಧಿಕಾರಿಯಾಗಲು ಸಾಧ್ಯವಿಲ್ಲವೆಂಬ ಜ್ಞಾನವಿಲ್ಲದೆ ಉಪಾಯಾಂತರವಾದ ಭಕ್ತಿಯೋಗವನ್ನು ಅಪೇಕ್ಷಿಸುವನು, ಎಂದು ಹೇಳಿರುವುದು. ಇಲ್ಲಿ ಬುದ್ಧಿ ದೌರ್ಬಲ್ಯವನ್ನು ಹೇಳಿರುವುದು ಪೂರ್ವಪಕ್ಷಿಯ ಪ್ರಕಾರ ಸ್ವರೂಪ ವಿರುದ್ಧ ಮೂಲಕವಲ್ಲ. ತಾನು ಅಧಿಕಾರಿಯಲ್ಲ ಎಂಬ ಜ್ಞಾನಶೂನ್ಯತೆ ಎಂದು ಅಭಿಪ್ರಾಯ. ಆದುದರಿಂದ ಇತರರು ಹೇಳುವ ಕಾರಣಗಳು ಒಂದೂ ಸ್ವರೂಪ ವಿರುದ್ಧಗಳಲ್ಲ.

ಅಶಕ್ತನು ಪ್ರಪತ್ತಿಗೆ ಅಧಿಕಾರಿ ಎಂದರೆ ಭಕ್ತಿಗಿಂತ ಹೆಚ್ಚಿಗೆಯಲ್ಲ. ಆದುದರಿಂದ 'ಸ್ನಾನಮಾಡಲು ಶಕ್ತನಲ್ಲದವನಿಗೆ ಮಂತ್ರಸ್ನಾನ' ಎಂದು ಹೇಳುವಂತೆ ಗೌಣವಾಯಿತಲ್ಲ ಎಂದರೆ, ಅಶಕ್ತನಾಗಿಯೂ ಕಾಲದ ವಿಳಂಬವನ್ನು ಸಹಿಸದವನಾಗಿಯೂ ಈ ಪ್ರಪತ್ತಿಯನ್ನು ಸ್ವತಂತ್ರೋಪಾಯವಾಗಿ ಸ್ವೀಕರಿಸಿದವನಾಗಿಯೂ ಇರುವ ಪ್ರಪನ್ನನು '**ಶೆಯ್‌ದ ವ್ವೇಳ್ವಿಯನ್**=ಯಾಗವನ್ನು ಅನುಷ್ಠಿಸಿದವನು, **ಕೃತಕೃತ್ಯ**—ಮಾಡಬೇಕಾದ ಕಾರ್ಯವನ್ನು ಮಾಡಿದವನು, **ಅನುಷ್ಠಿತ ಕ್ರತು ಶತನ್**=ನೂರಾರು ಯಾಗಗಳನ್ನು ಮಾಡಿದವನು' ಎಂದೂ ಆಳ್ವಾರುಗಳೂ ಇತರ ಪ್ರಮಾಣಕಾರರೂ ಕೊಂಡಾಡುತ್ತಾರೆ. ಆದುದರಿಂದ—

**[1]ತಪಸ್ವಿಭ್ಯೋಽಧಿ ಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।**
**ಕರ್ಮಿಭ್ಯಶ್ಚಾಧಿ ಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥**

**ತಪಸ್ವಿಭ್ಯಃ**=ಫಲವನ್ನು ಅಪೇಕ್ಷಿಸಿ ಮಾಡುವ ಕೇವಲ ಕೃಛ್ರಚಾಂದ್ರಾಯಣ ಉಪವಾಸಾದಿಗಳನ್ನನುಷ್ಠಿಸುವವರಿಗಿಂತಲೂ, **ಯೋಗೀ**=ತನ್ನ ಆತ್ಮೋಪಾಸನೆಯನ್ನು ಮಾಡುವವನು **ಅಧಿಕಃ**=ಶ್ರೇಷ್ಠನು, **ಜ್ಞಾನಿಭ್ಯೋಽಪಿ**=ಶಾಸ್ತ್ರಜ್ಞಾನ ನಿಷ್ಠನಿಗಿಂತಲೂ ಯೋಗಿಯು ಶ್ರೇಷ್ಠನೆಂಬುದು, **ಮತಃ**=ನನ್ನ ಅಭಿಪ್ರಾಯ, **ಕರ್ಮಿಭ್ಯಃ**=ಫಲಕಾಮನೆಯಿಂದ ಮಾಡುವ ಕರ್ಮನಿಷ್ಠರುಗಳಿಗಿಂತಲೂ ಕೂಡ ಯೋಗಿಯೇ ಶ್ರೇಷ್ಠನು ಎಂದರೆ ಈ ತಪಸ್ವೀ ಜ್ಞಾನೀ ಕರ್ಮೀ ಎಲ್ಲರೂ ಫಲಕಾಮನೆಯುಳ್ಳವರಾದುದರಿಂದ ಪ್ರವೃತ್ತಿಧರ್ಮನಿಷ್ಠರು. ಯೋಗಿಯಾದರೋ

1. ಗೀತೆ. ೬-೪೬.

ನಿವೃತ್ತಿ ಧರ್ಮನಿಷ್ಠರು. ಆದುದರಿಂದ ಪ್ರವೃತ್ತಿ ಧರ್ಮವೂ ತನ್ನಿಷ್ಠರೂ ಇವರುಗಳಿಗಿಂತ ನಿವೃತ್ತಿ ಧರ್ಮವೂ ತನ್ನಿಷ್ಠರೂ ಶ್ರೇಷ್ಠರೆಂಬ ಭಾವ. ತಸ್ಮಾತ್=ಆ ಕಾರಣದಿಂದ, ಹೇ ಅರ್ಜುನ=ಓ ಅರ್ಜುನನೇ, ಯೋಗೀಭವ=ಶ್ರುತಿಯಲ್ಲಿ ಪ್ರಜಾಪತಿವಾಕ್ಯದಿಂದ ಹೇಳಲ್ಪಟ್ಟ ಪ್ರತ್ಯಗಾತ್ಮೋಪಾಸಕನಾಗು ಎಂಬುದು ಈ ಶ್ಲೋಕಾರ್ಥವು.

ಪ್ರವೃತ್ತಿ ಧರ್ಮಗಳು ಸಂಸಾರಕ್ಕೆ ಹೇತುವು. ನಿವೃತ್ತಿ ಧರ್ಮಗಳು ಮೋಕ್ಷಕ್ಕೆ ಹೇತುವು. ಪ್ರವೃತ್ತಿ ಧರ್ಮಾನುಷ್ಠಾನದಲ್ಲಿ ಫಲಾಕಾಂಕ್ಷೆಯಿಂದ ಅಧಿಕಾರಿಯು ಕರ್ಮಾನುಷ್ಠಾನ ಮಾಡುತ್ತಾನೆ. ಫಲದಲ್ಲಿ ಅಪೇಕ್ಷೆ ಇಲ್ಲದೆ ಭಗವಂತನ ಪ್ರೀತಿಗಾಗಿ ಭಗವನ್ಮುಖೋಲ್ಲಾಸಕ್ಕಾಗಿ ಕರ್ಮಾನುಷ್ಠಾನ ಮಾಡುವವನು ನಿವೃತ್ತಿ ಧರ್ಮಪರನು.

[1]ನಿವೃತ್ತಿ ಲಕ್ಷಣಂ ಧರ್ಮಮೃಷಿರ್ನಾರಾಯಣೋಽಬ್ರವೀತ್ ।
ಪ್ರವೃತ್ತಿ ಲಕ್ಷಣಂ ಧರ್ಮಂ ಪ್ರಜಾಪತಿ ರಥಾಬ್ರವೀತ್
ಪ್ರವೃತ್ತಿಃ ಪುನರಾವೃತ್ತಿಃ ನಿವೃತ್ತಿಃ ಪರಮಾಗತಿಃ ॥

ನಿವೃತ್ತಿ ಧರ್ಮವನ್ನು ನಾರಾಯಣಋಷಿಯೂ, ಪ್ರವೃತ್ತಿ ಧರ್ಮವನ್ನು ಪ್ರಜಾಪತಿಯೂ ಹೇಳಿದರೆಂದು ಮೋಕ್ಷ ಧರ್ಮದಲ್ಲಿ ಹೇಳಿದೆ.

ಪ್ರವೃತ್ತಿ ಧರ್ಮಗಳಿಗಿಂತ ನಿವೃತ್ತಿ ಧರ್ಮಗಳು ಶ್ರೇಷ್ಠಗಳು. ಆ ನಿವೃತ್ತಿ ಧರ್ಮಗಳಿಗಿಂತಲೂ ತನ್ನ ಜೀವಾತ್ಮ ವಿಷಯವಾದ ಉಪಾಸನೆಯು ಶ್ರೇಷ್ಠವು. ಆತ್ಮ ವಿಷಯ ಯೋಗಗಳಿಗಿಂತ [2]ಯೋಗಿನಾಮಪಿ ಸರ್ವೇಷಾಂ ಎಂಬ ಶ್ಲೋಕದಲ್ಲಿ ಹೇಳಿರುವಂತೆ ವಸುದೇವ ನಂದನ ವಿಷಯವಾದ ಯೋಗವು—ಉಪಾಸನೆಯು ಶ್ರೇಷ್ಠವು. ಪರಮಾತ್ಮ ವಿಷಯವಾದ ವಿದ್ಯಾ ವಿಶೇಷಗಳಿಗಿಂತ ಅಂದರೆ ಸದ್ವಿದ್ಯಾದಹರ ವಿದ್ಯಾ ಮುಂತಾದ ಎಲ್ಲಾ ವಿದ್ಯೆಗಳಿಗಿಂತಲೂ ಉಪಾಸನೆಗಳಿಗಿಂತ ನ್ಯಾಸ ನಿಕ್ಷೇಪ ಮುಂತಾದ ಶಬ್ದಗಳಿಂದ ಹೇಳಲ್ಪಟ್ಟ ನ್ಯಾಸವೆಂಬ ವಿದ್ಯಾ ವಿಶೇಷವೇ ಸುಲಭವಾಗಿ ಅನುಷ್ಠಿಸಲು ತಕ್ಕದ್ದಾಗಿಯೂ, ಒಂದೇ ಸಲ ಮಾಡತಕ್ಕದ್ದಾಗಿಯೂ, ಬೇಗನೆ ಫಲವನ್ನು ಕೊಡತಕ್ಕದ್ದಾಗಿಯೂ ಇರುವುದರಿಂದ ಇದು ಶ್ರೇಷ್ಠತಮವಾದದು. ನ್ಯಾಸ ವಿದ್ಯೆಯಲ್ಲಿ ಕಂಠೋಕ್ತವಾಗಿ ಈ ಅರ್ಥವನ್ನು—

1. ಮೋಕ್ಷಧರ್ಮ. ೨೧೯–೩–೪.
2. ಗೀತೆ. ೬–೩೨.

**ತೇಷಾಂತು ತಪಸಾಂನ್ಯಾಸ ಮತಿರಿಕ್ತಂ ತಪಶ್ಶ್ರುತಮ್ ।**
**ಸತ್ಕರ್ಮನಿರತಾಶ್ಶುದ್ಧಾಸ್ಸಾಂಖ್ಯ ಯೋಗವಿದಸ್ತಥಾ ।**
**ನಾರ್ಹಂತಿ ಶರಣ ಸ್ಥಸ್ಯ ಕಲಾಂಕೋಟಿಶತೀಮಪಿ ॥**

**ತೇಷಾಂತಪಸಾಮ್**—ಹಿಂದಿನ ಅನುವಾಕದಲ್ಲಿ ಹೇಳಿದ ನ್ಯಾಸದವರೆವಿಗೂ ಸತ್ಯ, ತಪ, ದಮ ಮುಂತಾದ ತಪಸ್ಸುಗಳ ಮಧ್ಯದಲ್ಲಿ ನ್ಯಾಸಂ ತಪಃ—ನ್ಯಾಸವೆಂಬ ತಪಸ್ಸು(ಪ್ರಥಮಾರ್ಥದಲ್ಲಿ ದ್ವಿತೀಯಾ ವಿಭಕ್ತಿ ಛಾಂದಸ ಪ್ರಯೋಗ), **ಅತಿರಿಕ್ತಂ**—ಹೆಚ್ಚಾದದ್ದು, **ಶ್ರುತಂ**—ವೇದದಲ್ಲಿ ಪ್ರತಿಪಾದಿಸಲ್ಪಟ್ಟಿದೆ. **ಸತ್ಕರ್ಮ ನಿರತಾಃ**—ಕರ್ಮಯೋಗನಿಷ್ಠರು, **ಸಾಂಖ್ಯಯೋಗವಿದಃ**—ಸಂಖ್ಯಾಬುದ್ಧಿಯು, ಜ್ಞಾನಯೋಗ ನಿಷ್ಠರು, **ಶುದ್ಧಾಃ**—ಭಕ್ತಿಯೋಗನಿಷ್ಠರು, **ಶರಣಸ್ಥಸ್ಯ**—ಶರಣಾಗತಿಯನ್ನು ಮಾಡಿದವನ, **ಕಲಾಂಕೋಟಿಶತೀಮಪಿ, ನಾರ್ಹಂತಿ**—ನೂರು ಕೋಟಿಯಲ್ಲಿ ಒಂದು ಭಾಗಕ್ಕೂ ಅರ್ಹರಾಗುವುದಿಲ್ಲ—ಯೋಗ್ಯರಾಗುವುದಿಲ್ಲ.

ನದಿ ಕೆರೆ ಮುಂತಾದವುಗಳಲ್ಲಿ ಇಳಿದು ಮೈಯೆಲ್ಲಾ ನೆನೆಯುವಂತೆ ನೀರಿನಲ್ಲಿ ಮುಳುಗಿ ಮಾಡುವ ಸ್ನಾನ ಅವಗಾಹನ ಸ್ನಾನ. ಇದನ್ನು ಮಾಡುವುದಕ್ಕೆ ಶಕ್ತಿ ಇಲ್ಲದಿದ್ದರೆ "ಮಾನಸಂ ವಿಷ್ಣುಚಿನ್ತನಂ—ಮನಸ್ಸಿನಲ್ಲಿ ವಿಷ್ಣುವನ್ನು ಚಿಂತಿಸುವುದು—ನೆನೆಯುವುದು ಇದೂ ಒಂದು ಸ್ನಾನ ಎಂಬ ವಿಧಿ ಇರುವುದರಿಂದ ಅದು ಬೇರೆ ಸ್ನಾನಗಳು ಉಂಟುಮಾಡುವ ಶುದ್ಧಿಯನ್ನು ಉಂಟುಮಾಡಿ ಭಗವಂತನನ್ನು ಅನುಭವಿಸುವ ರಸವನ್ನೂ—ಆನಂದವನ್ನೂ ಉಂಟುಮಾಡುವಂತೆ, ಉಪಾಸನಾದಿಗಳಲ್ಲಿ ಸಮರ್ಥನಲ್ಲದವನಿಗೆ ಪ್ರಪತ್ತಿಯನ್ನು ವಿಧಿಸಿರುವುದರಿಂದ ಈ ಪ್ರಪತ್ತಿಯು. ಅವುಗಳು ಕೊಡುವ ಐಶ್ವರ್ಯವನ್ನೂ ಆ ಆ ಉಪಾಯಗಳ ನಿಷ್ಪತ್ತಿಗೆ ಉಂಟಾಗುವ ಅಡಚಣೆಗಳನ್ನೂ ನೀಗಿ ಭಕ್ತಿಯನ್ನುಂಟು ಮಾಡುತ್ತದೆ. ಆದುದರಿಂದ ಹೆಚ್ಚಾದ ಪ್ರಭಾವವುಳ್ಳದ್ದಾಯಿತು. ಇವನು ಅಪೇಕ್ಷಿಸಿದ ವೇಳೆಯಲ್ಲಿ ಮೋಕ್ಷವನ್ನು ಕೊಡುತ್ತದೆ, ಭಕ್ತಿಯು ಅಭ್ಯುಪಗತ ಅನಭ್ಯುಪಗತ ಪ್ರಾರಬ್ಧ ಕರ್ಮವನ್ನು ಅನುಭವಿಸಿದ ಮೇಲೆ ತಾನೆ ಮೋಕ್ಷವನ್ನು ತರುತ್ತದೆ.

ಈ ರೀತಿ ಈ ಉಪಾಯದ ಅಧಿಕಾರದಲ್ಲೂ ಸ್ವರೂಪದಲ್ಲೂ ಉಂಟಾಗುವ ಸಂದೇಹಗಳನ್ನು ನೀಗಿಸಿ ಆಯಿತು. ಇನ್ನು ಮುಂದೆ ಅದರ ಪರಿಕರಗಳಲ್ಲಿ ಉಂಟಾಗುವ ಅಜ್ಞಾನವನ್ನು ನೀಗಿಸೋಣ.

**ಈ ಉಪಾಯಕ್ಕೆ ಆನುಕೂಲ್ಯಸಂಕಲ್ಪಾದಿಗಳು ಬೇಕೆ ?**

[1]ಆರ್ತ್ರೋವಾಯದಿವಾದೃಪ್ತಃ ಪರೇಷಾಂ ಶರಣಾಗತಃ ।
ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ ॥

ಬಹುದೈನ್ಯವುಳ್ಳವನಾಗಿಯೋ ಆಗಲಿ ಅಥವಾ ಆ ಶರಣಾಗತಿ ಕಾಲದಲ್ಲೂ ಕೂಡ ಅಹಂಕಾರದಿಂದ ಕೂಡಿದವನಾಗಿದ್ದರೂ, ಅಂತಹ ಮರೆಹೊಕ್ಕವನನ್ನು ಶಾಸ್ತ್ರ ಧರ್ಮ ಸೂಕ್ಷ್ಮವನ್ನು ಅರಿತವನು ತನ್ನ ಪ್ರಾಣವನ್ನು ಕಳೆದುಕೊಂಡಾದರೂ ಕಾಪಾಡಬೇಕು ಎಂದೂ—

[2]ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ ।
ದೋಷೋಯದ್ಯಪಿ ತಸ್ಯಸ್ಯಾತ್ ಸತಾಮೇತದಗರ್ಹಿತಮ್ ॥

ಸ್ನೇಹಭಾವದಿಂದ ಬಂದವನನ್ನು ಬಿಡಲಾರೆ; ಅವನಲ್ಲಿ ತಪ್ಪಿದ್ದರೂ ಸರಿ ಎಂದೂ, 'ಯದಿವಾರಾವಣಸ್ಸ್ವಯಮ್—ರಾವಣನು ತಾನೇ ಬಂದರೂ, ಕಾಪಾಡುವೆನು' ಎನ್ನುವ ಶತ್ರುಗಳನ್ನೂ ಪ್ರೀತಿಸುವ ಶರಣ್ಯನು ಶರಣಾಗತನ ದೋಷಗಳನ್ನು ನೋಡುತ್ತಾನೆಯೇ ?

"ಅನಾಲೋಚಿತ ವಿಶೇಷಾಶೇಷಲೋಕ ಶರಣ್ಯ—ಇವನು ಅನುಕೂಲನು, ಇವನು ಪ್ರತಿಕೂಲನು ಎಂಬುದನ್ನು ಯೋಚಿಸದೇ ಇರುವವನು ಎಲ್ಲರನ್ನೂ ಕಾಪಾಡುವ ಪರಮಾತ್ಮನು" ಎಂದಲ್ಲವೇ ಹಿಂದಿನವರು ಹೇಳುವ ಮಾತು. ಆದುದರಿಂದ ಈ ಆನುಕೂಲ್ಯ ಸಂಕಲ್ಪ-ಪ್ರಾತಿಕೂಲ್ಯವರ್ಜನ ಮೊದಲಾದ ಪರಿಕರಗಳು ಶರಣಾಗತನಾದ ಪ್ರಪನ್ನನಲ್ಲಿ ಆ ಕಾಲದಲ್ಲಿ ತಾನಾಗಿಯೇ ಉಂಟಾಗುವ ಸ್ವಭಾವಗಳು ಆಗುವವು. ಅವುಗಳೇನೂ ಶರಣಾಗತಿಗೆ ಅಙ್ಗವಾಗಿ ಬೇಕಿಲ್ಲ. ಆ ಕಾಲದಲ್ಲಿ ಅಂತಹವನು ಅಂತಹ ಆನುಕೂಲ್ಯಾದ್ಯವಸ್ಥೆಯುಳ್ಳವನಾಗಿ ಆಗುವನು, ಇಷ್ಟು ಮಾತ್ರ ಅಲ್ಲವೋ ? ಎಂದು ಕೆಲವರು ಹೇಳುವರು.

ಇದು ಸಂಗತವಲ್ಲ. ಪ್ರಪತ್ತಿಯನ್ನು ಮಾಡುವಾಗ ಅಂಗಗಳು ಇದ್ದೇ ಇರಬೇಕು. ಪ್ರಪತ್ತಿ ಆದಮೇಲೆ ಒಂದು ವೇಳೆ ಅವನಿಗೆ ಅವು ಇಲ್ಲದಿದ್ದರೂ ಕೊನೆಯಲ್ಲಿ ಪರಿತಾಪಾದಿಗಳು ಉಂಟಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಬುದ್ಧಿ ಉಂಟಾಗುತ್ತದೆ. ಆವಾಗ ಅವುಗಳನ್ನು ಅವಲಂಬಿಸುತ್ತಾನೆ. ಅಂತೂ ಮೋಕ್ಷವನ್ನು ಪಡೆಯಲು ಯಾವ ಅಡ್ಡಿಯೂ ಉಂಟಾಗುವುದಿಲ್ಲ. "ಸಕೃದೇವ ಪ್ರಪನ್ನಾಯ—ಒಂದು ಸಲ ಮಾತ್ರ ಮರೆಹೊಕ್ಕವನನ್ನು ಕೈಬಿಡೆ" ಎಂಬುದು ಭಗವಂತನ ಮಾತು. ಅದು ಎಂದೂ ಸುಳ್ಳಾಗದು.

1. ರಾಮಾ. ಯುದ್ಧ. ೧೮-೨೮.
2. ರಾ. ಯು. ೧೮-೩.

ಹಾಗಿಲ್ಲದಿದ್ದರೆ 'ಷಡ್ವಿಧಾಶರಣಾಗತಿಃ' ಎಂದು ಅಙ್ಗಾಙ್ಗಿ ಸಮುಚ್ಚಯದಿಂದ ಆರುವಿಧ ಎಂಬ ನ್ಯಾಯದಿಂದ ಹೇಳುವ 'ಪ್ರಮಾಣಕ್ಕೂ' ಅನೇನೈವತು ಮನ್ತ್ರೇಣ 'ಸ್ವಾತ್ಮಾನಂಮಯಿನಿಕ್ಷಿಪೇತ್—ಈ ಮಂತ್ರದಿಂದಲೇ ತನ್ನನ್ನು ನನ್ನಲ್ಲಿಡಬೇಕು' ಎಂಬ ಉತ್ಪತ್ತಿವಾಕ್ಯದಲ್ಲಿ ಅಙ್ಗಿಯಾಗಿ ಸಿದ್ಧವಾದ ನಿಕ್ಷೇಪಕ್ಕೆ "ನ್ಯಾಸಃಪಞ್ಚಾಙ್ಗ ಸಂಯುತಃ—ನ್ಯಾಸವು ಐದು ಅಂಗಗಳಿಂದ ಕೂಡಿದ್ದು" "ಸ್ವಾಂಗೈಃಪಞ್ಚಭಿ ರಾವೃತಾಮ್—ಐದು ಅಂಗಗಳಿಂದ ಕೂಡಿದ್ದು" ಎಂದು ಅಙ್ಗಗಳನ್ನೂ ಅಙ್ಗಿ ಯನ್ನೂ ವಿಭಾಗಮಾಡಿ ಹೇಳುವ ಕೆಲವು ಪ್ರಮಾಣಗಳಿಗೆ ವಿರೋಧವುಂಟಾಗು ತ್ತದೆ. ಲೋಕದಲ್ಲಿ ಕಾಪಾಡಲ್ಪಡಬೇಕಾದ ದ್ರವ್ಯವನ್ನು ಶಕ್ತನ ಹತ್ತಿರ ಒಪ್ಪಿ ಸುವ ಮರ್ಯಾದೆಗೂ ಹೊಂದಿಕೆಯಾಗದು. ಬ್ರಹ್ಮಾಸ್ತ್ರಕ್ಕೆ ಸಮಾನವಾದ ಪ್ರಪತ್ತಿಗೆ ಪರಿಕರದ ಅಪೇಕ್ಷೆ ಏಕೆ ಅಂದರೆ ಆ ಅಸ್ತ್ರವೂ ಅಭಿಮನ್ತ್ರಣಾದಿಗಳನ್ನು ಅಪೇಕ್ಷಿಸು ತ್ತದೆ ಅಲ್ಲವೇ ? ಬ್ರಹ್ಮಮಂತ್ರವನ್ನೂ ಉಚ್ಚರಿಸಿ ಪ್ರಯೋಗಿಸಿದ ಅಸ್ತ್ರ ತಾನೆ ಕಾರ್ಯಕರವಾಗುತ್ತದೆ. ಆದುದರಿಂದ ಅಂದರೆ ಹೇಳಲ್ಪಟ್ಟ ತನ್ನ ಅಂಗಗಳ ಅಪೇಕ್ಷೆ ಉಳ್ಳದಾಗಿರುವುದರಿಂದ

**ಪ್ರಪತ್ತೇಃ ಕ್ವಚಿದಪ್ಯೇವಂ ಪರಾಪೇಕ್ಷಾನವಿದ್ಯತೇ ।**
**ಸಾಹಿ ಸರ್ವತ್ರ ಸರ್ವೇಷಾಂ ಸರ್ವಕಾಮಫಲಪ್ರದಾ ॥**

ಪ್ರಪತ್ತಿಗೆ ಇನ್ನೊಂದರ ಅಪೇಕ್ಷೆ ಇಲ್ಲ. ಅದು ಕುರುಕ್ಷೇತ್ರವೇ ಮೊದಲಾದ ದಿವ್ಯಕ್ಷೇತ್ರಗಳ ಅಪೇಕ್ಷೆ ಇಲ್ಲದೆ, ತ್ರೈವರ್ಣಿಕರ ಅಪೇಕ್ಷೆಯೂ ಇಲ್ಲದೆ ಎಲ್ಲರಿಗೂ ಎಲ್ಲೆಡೆ ಯಲ್ಲೂ ಎಲ್ಲಾ ಇಷ್ಟಾರ್ಥವನ್ನೂ ಕೊಡುತ್ತದೆ, ಎಂಬ ಮಾತೂ ಬೇರೆ ಧರ್ಮಗಳ ಅಪೇಕ್ಷೆ ಬೇಕಿಲ್ಲ ಎಂಬ ತಾತ್ಪರ್ಯದಿಂದ ಹೇಳಿದ್ದು. ಹಾಗೆ ಇಲ್ಲದಿದಿದ್ದರೆ ಮಹಾ ವಿಶ್ವಾಸವನ್ನೂ ಬೇಡವೆನ್ನಬಹುದು. ಅದು ಬಹಳ ಮುಖ್ಯವೆಂದು ಎಲ್ಲರೂ ಒಪ್ಪ ತಕ್ಕದ್ದೇ ಆಗಿದೆ. ಲೋಕದಲ್ಲೂ ಆ ಹೆಚ್ಚಾದ ನಂಬಿಕೆ ಇದ್ದರೆ ತಾನೆ ಒಬ್ಬನಲ್ಲಿ ಒಂದು ದ್ರವ್ಯವನ್ನು ನಿಕ್ಷೇಪವಾಗಿ ಇಡಲು ಬಯಸುತ್ತಾನೆ ?

ರಾಮಾಯಣದಲ್ಲಿ ಇಂದ್ರಜಿತುವು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಆಂಜನೇಯ ನನ್ನು ಬಂಧಿಸಿದನು. ಅದು ಬಂಧಿಸಿರುವಾಗಲೇ ಅಜ್ಞರಾದ ರಾಕ್ಷಸರು ಶಣಬು ಹಗ್ಗದಿಂದ ಆತನನ್ನು ಕಟ್ಟಿದರು. ಆಗ ಬ್ರಹ್ಮಾಸ್ತ್ರಕ್ಕೆ ಅಪಮರ್ಯಾದೆಯಾದುದ ರಿಂದ ಅದು ಬಂಧನವನ್ನು ಬಿಟ್ಟು ಬಿಟ್ಟಿತು. ಆದರೆ ಬ್ರಹ್ಮಾಸ್ತ್ರ ಪ್ರಯೋಗಕ್ಕೆ ಬೇಕಾದ [1]ತತಸ್ಸ್ವಯಂ ಭುವೈರ್ಮಂತ್ರೈರ್ಬ್ರಹ್ಮಾಸ್ತ್ರಮಭಿಮನ್ತ್ರಿತಂ ಎಂದು ಹೇಳಿ ರುವ ಹಾಗೆ ಅಙ್ಗಗಳು ಬೇಕೇ ಬೇಕು, ಅವು ಇಲ್ಲದಿದ್ದರೆ ಬ್ರಹ್ಮಾಸ್ತ್ರಪ್ರಯೋಗವು

1. ರಾ. ಸು. ೪೮, ೪೧.

ಕಾರ್ಯಕಾರಿಯಾಗದೆಂಬ ಭಾವ. ಬ್ರಹ್ಮಾಸ್ತ್ರಕ್ಕೆ ಹೇಗೆ ಅಙ್ಗಗಳ ಆವಶ್ಯಕತೆಯುಂಟೋ ಹಾಗೆಯೇ ಪ್ರಪತ್ತಿಗೂ ಸಹ ಅಙ್ಗಗಳ ಆವಶ್ಯಕತೆ ಎಂಬ ಭಾವ. ಬ್ರಹ್ಮಾಸ್ತ್ರದ ಬಂಧನವು ಹೇಗೆ ಇತರಾಸ್ತ್ರ ಬಂಧನವನ್ನಾಗಲಿ ಶಣವಲ್ಕಬಂಧನವನ್ನಾಗಲಿ ಸಹಿಸದೋ ಅಂತಹ ತುಚ್ಛವಾದ ಬಂಧನದಿಂದ ಹೇಗೆ ವ್ಯರ್ಥವಾಗುತ್ತದೋ ಹಾಗೆಯೇ ಪ್ರಪತ್ತಿಯೂ ಅನ್ಯದೇವತಾಶ್ರಯಣ ಮೊದಲಾದವುಗಳಿಂದ ವ್ಯರ್ಥವಾಗುತ್ತದೆಂಬ ಭಾವವೂ ತೋರಿಬರುತ್ತದೆಂಬುದು ಕೆಲವರ ಅಭಿಪ್ರಾಯ. ಆದರೆ **"ಕೌಟಿಲ್ಯೇ ಸತಿ ಶಿಕ್ಷಯಾಪ್ಯನಘಯನ್ ಕೋಡೀಕರೋತಿಪ್ರಭುಃ"** ಎಂದು ರಹಸ್ಯತ್ರಯಸಾರದಲ್ಲಿ ಅಪರಾಧ ಪರಿಹಾರಾಧಿಕಾರದಲ್ಲಿ ವೇದಾಂತಾಚಾರ್ಯರು ಹೇಳಿದ್ದಾರೆ.

ತತ್ವ ಹಿತ ಪುರುಷಾರ್ಥ ವಿವೇಕ ಪೂರ್ವಕವಾಗಿ ಭಗವಂತನನ್ನು ಮರೆಹೊಕ್ಕಿದವನಿಗೆ—ಪ್ರಪನ್ನನಿಗೆ—ಬುದ್ಧಿಪೂರ್ವಕವಾದ ಅಪರಾಧವುಂಟಾಗುವುದೇ ಇಲ್ಲ, ಪ್ರಾರಬ್ಧ ಪಾಪದ ಮೂಲಕ ಒಂದು ವೇಳೆ ಉಂಟಾದರೂ ಅಧಿಕಾರಕ್ಕೆ ತಕ್ಕಂತೆ ಪ್ರಾಯಶ್ಚಿತ್ತ ಮಾಡಿಕೊಳ್ಳುವಂತೆಮಾಡಿ ಕಾಪಾಡುತ್ತಾನೆ. ಕಠಿನ ಪ್ರಾಕೃತಿಕ (ಸ್ವಭಾವವುಳ್ಳವ)ನಿಗೆ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಳ್ಳದಿದ್ದರೂ, ಕುಂಟು, ಕುರುಡು ಮುಂತಾದ ಶಿಕ್ಷೆಯಿಂದ—ರಾಜಪುತ್ರನ ಅಪರಾಧದಂತೆ ಹಗುರವಾದ ಶಿಕ್ಷೆಯಿಂದ ಶಿಕ್ಷಿಸಿ ಆ ಎಲ್ಲಾ ಪಾಪವನ್ನೂ ನಾಶಮಾಡಿ ಇವನನ್ನು ಪಾಪ ಇಲ್ಲದವನಂತೆ ಮಾಡಿ ಶರೀರದ ಕೊನೆಯಲ್ಲಿ ತನ್ನ ಸೇವೆಗೆ ತಕ್ಕವನನ್ನಾಗಿ ಮಾಡಿಕೊಳ್ಳುತ್ತಾನೆ.

ಆದುದರಿಂದ ಹಿಂದೆ ಹೇಳಿದ ಕ್ರಮದಲ್ಲಿ ಶರಣಾಗತಿಮಾಡಿದವನಿಗೆ ಅದು ಎಂದೂ ವ್ಯರ್ಥವಾಗದು—ಭಗವಂತನು ಯಾವಾಗಲೂ ಕೈಬಿಡ ಎಂಬುದು ತೀರ್ಮಾನ.

## ಮಹಾವಿಶ್ವಾಸವೂ ಅಙ್ಗವಲ್ಲವೆಂಬ ವಾದದ ನಿರಸನ

ಈ ರೀತಿಯಲ್ಲಿ ಪ್ರಪತ್ತಿಗೆ ಮತ್ತೊಂದರ ಅಪೇಕ್ಷೆ ಬೇಡವೆಂದರೆ ಮಹಾ ವಿಶ್ವಾಸವೂ ಪ್ರಪತ್ತಿಗೆ ಅಙ್ಗವಲ್ಲದ್ದಾಗುತ್ತದೆ. ಆದರೆ ಮಹಾ ವಿಶ್ವಾಸ ಪ್ರಪತ್ತಿಗೆ ಮುಖ್ಯವಾದ ಅಙ್ಗವೆಂದು ಎಲ್ಲರೂ ಒಪ್ಪುತ್ತಾರೆ.

ಈ ಮಹಾ ವಿಶ್ವಾಸ ಪ್ರಸಂಗದಲ್ಲಿ ಬೇರೆ ಕೆಲವರು ಆಸ್ತಿಕನಿಗೆ ಶಾಸ್ತ್ರವು ಹೇಳಿರುವುದರಲ್ಲಿ ವಿಶ್ವಾಸವು ಹುಟ್ಟಿಯೇ ಹುಟ್ಟುತ್ತದೆ. ಅದಕ್ಕಿಂತ ಹೆಚ್ಚಾದ ಮಹಾ ವಿಶ್ವಾಸ ಒಂದು ಅಙ್ಗವಾಗಿ ಪ್ರಪತ್ತಿಗೆ ಆವಶ್ಯಕವೆಂಬುದು ಹೇಗೆ ? ಶಾಸ್ತ್ರದಲ್ಲಿ ಇರುವ ವಿಶ್ವಾಸವೇ ಸಾಕಾಗಿರುತ್ತದೆಯಲ್ಲ ಎನ್ನುತ್ತಾರೆ. ಆಂದರೆ ಅದೂ ಕೂಡ,

[1]"ನವಿಶ್ವಸೇದ ವಿಶ್ವಸ್ತೇ ವಿಶ್ವಸ್ತೇನಾತಿವಿಶ್ವಸೇತ್. ಅವಿಶ್ವಸ್ತೇ=ವಿಶ್ವಾಸ ವಿಡಲುಯೋಗ್ಯನಲ್ಲದವನಲ್ಲಿ, ನವಿಶ್ವಸೇತ್=ವಿಶ್ವಾಸವನ್ನಿಡಬಾರದು. ವಿಶ್ವಸ್ತೇ= ವಿಶ್ವಾಸವಿಡಬಹುದಾದವನಲ್ಲಿ, ನಾತಿವಿಶ್ವಸೇತ್=ಹೆಚ್ಚು ವಿಶ್ವಾಸವನ್ನಿಡಬಾರದು. ಇವೇ ಮೊದಲಾದ ಪ್ರಮಾಣಗಳಲ್ಲಿ ವಿಶ್ವಾಸ ತಾರತಮ್ಯವು ಪ್ರಸಿದ್ಧವಾದುದರಿಂದ ಈ ಸಂದರ್ಭದಲ್ಲೂ ಮಹಾವಿಶ್ವಾಸವು ಅಙ್ಗವು.

"ರಕ್ಷಿಷ್ಯತ್ಯನುಕೂಲಾನ್ನ ಇತಿಯಾ ಸುದೃಢಾಮತಿಃ ।

ಅನುಕೂಲರಾದ ನಮ್ಮನ್ನು ಕಾಪಾಡಿಯೇ ಕಾಪಾಡುತ್ತಾನೆ ಹೀಗೆಂಬ "ದೃಢ ವಾದ ಬುದ್ಧಿಯು ಯಾವುದುಂಟೋ"

"ಅನನ್ಯ ಸಾಧ್ಯೇಸ್ವಾಭೀಷ್ಟೇ ಮಹಾ ವಿಶ್ವಾಸ ಪೂರ್ವಕವಮ್=ತನ್ನ ಇಷ್ಟಾ ರ್ಥವು ಕೈಗೂಡಲು ಮತ್ತೊಂದರಿಂದ ಸಾಧ್ಯವಿಲ್ಲದಿರುವಾಗ ಮಹಾವಿಶ್ವಾಸ ಪೂರ್ವಕವಾಗಿ" ಇವೇ ಮೊದಲಾದ ಪ್ರಮಾಣಗಳೂ ಮಹಾ ವಿಶ್ವಾಸವು ಅಙ್ಗವೆಂಬು ದನ್ನೂ ದೃಢಪಡಿಸುತ್ತವೆ.

ಈ ರೀತಿ ಅವಿಶ್ವಸ್ತ ವಿಷಯದಲ್ಲೂ ವಿಶ್ವಸ್ತ ವಿಷಯದಲ್ಲೂ ಒಬ್ಬ ಪುರುಷನಿಗೆ ವಿಶ್ವಾಸ ತಾರತಮ್ಯವು ಸಿದ್ಧಿಸಿದರೂ ನಂಬಬಹುದಾದ ಅಂದರೆ ವಿಶ್ವಸ್ತನಾದ ಶರಣ್ಯನ ವಿಷಯದಲ್ಲಿ ವಿಶ್ವಾಸ ತಾರತಮ್ಯವು ಕೂಡುತ್ತದೋ ಎಂದರೆ ಶ್ರೀಮದಷ್ಟಾಕ್ಷರ ಬ್ರಹ್ಮವಿದ್ಯೆಯಲ್ಲಿ,

ಯಸ್ಯಯಾವಾಂಶ್ಚವಿಶ್ವಾಸಸ್ತಸ್ಯ ಸಿದ್ಧಿಶ್ಚತಾವತೀ ।
ಏತಾವಾನಿತಿ ನೈತಸ್ಯ ಪ್ರಭಾವಃ ಪರಿಮೀಯತೇ ॥

ಯಾವನಿಗೆ ಎಷ್ಟೊಂದು ನಂಬಿಕೆಯು ಇದೆಯೋ ಅಷ್ಟೇ ಅದರ ಸಿದ್ಧಿಯೂ ಕೂಡ, ಅದರ ಮಹಾತ್ಮ್ಯವೂ ಅಷ್ಟುಮಾತ್ರ ಎಂಬುದಾಗಿ ಅಳತೆಮಾಡಲ್ಪಡುತ್ತದೆ ಎಂಬುದಾಗಿ ನಾರದೀಯಕಲ್ಪದಲ್ಲಿ ಹೇಳಿದೆ. ಆದುದರಿಂದ ಪುರುಷಭೇದದಿಂದ ಶ್ರೀಮದಷ್ಟಾಕ್ಷರದ ಪ್ರಭಾವ ವಿಷಯದಲ್ಲಿ ವಿಶ್ವಾಸ ತಾರತಮ್ಯವು ಸಿದ್ಧಿಸುವುದರಿಂದ ಈಶ್ವರ ವಿಷಯದಲ್ಲೂ ಪುರುಷ ಭೇದದಿಂದ ವಿಶ್ವಾಸ ತಾರಮ್ಯವು ಕೂಡುತ್ತದೆ.

ಈ ರೀತಿ ಮಹಾವಿಶ್ವಾಸವು ಪ್ರಪತ್ತಿಗೆ ಅಂಗವಾದರೆ, ಮಂದವಿಶ್ವಾಸರಾದ ಪ್ರಪನ್ನರನ್ನೂ ಈಶ್ವರನು ಕೈಬಿಡಲು ಪ್ರಸಂಗಬರುವುದಿಲ್ಲವೇ ? ಹಾಗೆ ಅವನು ಕೈ ಬಿಡುತ್ತಾನೆ ಅಂದರೆ ಆಗ ಅದು ನಮಗೂ ಇಷ್ಟಸಿದ್ಧಿಯಾಗುತ್ತಲ್ಲವೇ ?

1. ಭಾರತ ಉ. ೩೮.೯.

ಅಂದರೆ 'ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ—ಸ್ನೇಹ ಭಾವನೆ ಯಿಂದ ನನ್ನ ಹತ್ತಿರಕ್ಕೆ ಬಂದವನನ್ನು ನಾನೆಂದೂ ಬಿಡೆ' ಎಂಬುದಲ್ಲವೇ ಶರಣ್ಯನ ಮಾತು. ಅದಕ್ಕೆ ವಿರೋಧವುಂಟಾಗುತ್ತದಲ್ಲವೇ ಈ ನಿಮ್ಮ ಅಭಿಪ್ರಾಯ. ಮಂದ ವಿಶ್ವಾಸಿಗಳಾದ, ಪ್ರಪನ್ನರಂತೆ ತೋರುವವರನ್ನೂ ಕೊನೆಯಲ್ಲಿ ಸರ್ವೇಶ್ವರನು ಕಾಪಾಡಿಯೇ ಕಾಪಾಡುತ್ತಾನೆ. ಹೇಗೆಂದರೆ,

"ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಮ್ ।
ಬದ್ಧಃಪರಿಕರಸ್ತೇನ ಮೋಕ್ಷಾಯಾಗಮನಂ ಪ್ರತಿ" ॥

ಒಂದು ಸಲ 'ಹರಿ' ಎಂಬ ಎರಡಕ್ಷರವನ್ನು ಯಾವನಾದರೂ ಹೇಳಿದರೂ ಸರಿ, ಅವನು ಮೋಕ್ಷಕ್ಕೆ ಹೊರಡಲು ಸೊಂಟಕಟ್ಟಿದ್ದಾನೆ, ಎಂದು ತಿಳಿಯಬೇಕು. ಇವೇ ಮೊದಲಾದವುಗಳಲ್ಲೂ, ಇವುಗಳಂತೆ

ತ್ವದಂಘ್ರಿಮುದ್ದಿಶ್ಯ, ಉದೀರ್ಣ ಸಂಸಾರ ಇವೇ ಮೊದಲಾದ ಯಾಮು ನಾರ್ಯರ ಸೂಕ್ತಿಗಳಲ್ಲೂ ನಿನ್ನ ಪಾದಕಮಲವನ್ನು ಉದ್ದೇಶ ಮಾಡಿ ಯಾವನಿಂದಾ ದರೂ ಹೇಗಾದರೂ ಒಂದು ಸಲ ಕೈಮುಗಿಯಲ್ಪಟ್ಟರೆ ಅದೇ ಅವನಲ್ಲಿರುವ ಎಲ್ಲಾ ಕೇಡನ್ನೂ ಹೋಗಲಾಡಿಸಿ ಮಂಗಳವನ್ನುಂಟು ಮಾಡುತ್ತದೆ ಎಂದು ಹೇಳಿರುವ ಹಾಗೆ ಇವನು ಫಲಸಿದ್ಧಿಗೆ ಅಪೇಕ್ಷಿಸಿದ ವೇಳೆಯೊಳಗೆ ಉಪಾಯ ಪೂರ್ತಿಯಾಗು ವಂತೆ ಮಾಡಿ ಕಾಪಾಡುವನು. [1]'ನೇಹಾಭಿಕ್ರಮನಾಶೋಽಸ್ತಿ—ತೊಡಗಿದ್ದಕ್ಕೆ ಕುಂದಿಲ್ಲ' ಎಂದು ಗೀತಾಚಾರ್ಯನು ಹೇಳಿದ್ದಾನಲ್ಲವೇ, ಒಳ್ಳೆಯ ಕಾರ್ಯ ವ್ಯರ್ಥ ವಾಗುವುದಿಲ್ಲ. ವಿಕಲವಾದ ಪ್ರಪತ್ತಿಯೂ ವ್ಯಾಜವಾಗಿರುವುದರಿಂದ ಅದರಿಂದ ವಶಮಾಡಲ್ಪಟ್ಟ ಈಶ್ವರನು ಪೂರ್ಣ ಪ್ರಪತ್ತಿಯನ್ನು ಉಂಟುಮಾಡಿ ಕಾಪಾಡು ತ್ತಾನೆಂದಾಯಿತು.

ಈ ಅರ್ಥವನ್ನೇ ಶಾಂಡಿಲ್ಯಭಗವಾನ್ ಅವರು ದೇವಲನನ್ನು ಕುರಿತು, ಓ ದೇವಲನೇ! ನಿನಗೆ ಇದಕ್ಕೆ ಮೊದಲು ಬಹಳವಾದ ಜನ್ಮಪರಂಪರೆಯು ವ್ಯರ್ಥವಾಗಿ ಹೋಯಿತಷ್ಟೆ. ಈ ಜನ್ಮವೂ ವ್ಯರ್ಥವಾಗಿ ಹೋದ ಜನ್ಮಗಳಲ್ಲಿ ಒಂದು. ವಿಚಾರ ಮಾಡಿ ದೇವನನ್ನು ಶರಣು ಹೋಗು ಎಂದುಹೇಳಿದ್ದಾರೆ. ಇದರಿಂದ ಮಹಾವಿಶ್ವಾಸದ ಆವಶ್ಯಕತೆ ಕಡಿಮೆಯಾಯಿತೆಂದು ತೋರುತ್ತದೆ "ಶರಣ್ಯಂ ಶರಣಂಚ ತ್ವಾಮಾಹು ರ್ದಿವ್ಯಾ ಮಹರ್ಷಯಃ—ಇಂದ್ರಿಯಗಳಿಗೆ ಗೋಚರವಾಗದವನ್ನೂ ಕಾಣುವ ಮಹ ರ್ಷಿಗಳು ನಿನ್ನನ್ನು ಶರಣ್ಯನೆನ್ನುತ್ತಾರೆ. ಇತರರು ಇಲ್ಲ ಎಂಬ ಈ ವಾಕ್ಯದಿಂದ ಪ್ರಪ ತ್ತಿಗೆ ಅಧಿಕಾರಿಗಳು ಮಹರ್ಷಿಗಳು ಮಾತ್ರ ಎಂದು ತೋರುತ್ತದೆ. ಅವರಿಗೆ ಮಾತ್ರ

[1] ಗೀತೆ : ಅಧ್ಯಾಯ-೨ ಶ್ಲೋಕ-೪೦.

ಮಹಾವಿಶ್ವಾಸವಿದೆ, ಇತರರಿಗೆ ಇಲ್ಲವೆಂದಾಗುತ್ತದೆ. ಆದುದರಿಂದ ಪ್ರಪತ್ತಿ ಶಾಸ್ತ್ರಕ್ಕೆ ಪ್ರಾಮಾಣ್ಯವೆಲ್ಲುಂಟು ? ಎಂದರೆ, ಇತರರಿಗೆ ವಿಶ್ವಾಸ ಉಂಟಾಗುವುದಿಲ್ಲ ಎಂಬಲ್ಲಿ ತಾತ್ಪರ್ಯವಿಲ್ಲ. ಇವರ ವಾಕ್ಯವನ್ನು ಅರಿತರೆ ಇತರರಿಗೂ ಪ್ರಾಮಾಣ್ಯವುಂಟಾಗುತ್ತದೆ ಎಂದು ತಾತ್ಪರ್ಯ. ಹೀಗೆ ವಿಶ್ವಾಸ ತಾರತಮ್ಯ ಉಂಟಾಗುವುದರಿಂದ ಶಾಸ್ತ್ರಕ್ಕೆ ಅನುಸಾರವಾಗಿ ಮಹಾವಿಶ್ವಾಸವು ಪ್ರಪತ್ತಿಗೆ ಅಂಗವಾಗಲು ಕುಂದಿಲ್ಲ.

ಆದರೆ ಇದರ ವಿಷಯದಲ್ಲಿ ಮೂರು ವಿಧವಾದ ಸಂದೇಹಗಳುಂಟಾಗುತ್ತವೆ. ೧. ಎರಡು ಫಲಗಳಿಗೆ ಸಾಧನವಾಗಿರುವಿಕೆ. ೨. ಮೋಕ್ಷರೂಪವಾದ ಒಂದೇ ಫಲಕ್ಕೆ ಸಾಧನವಾಗಿರುವಿಕೆ. ೩. ಪ್ರಪನ್ನರಲ್ಲಿ ವಿಳಂಬಾವಿಳಂಬ—ಕಾಲಕಳೆದು ಅಥವಾ ಬೇಗನೆ ಫಲಕೊಡುವಿಕೆ ಎಂಬ ಇವೇ ಮೂರು ಸಂದೇಹಾಸ್ಪದವಾಗಿವೆ.

೧. ಭಕ್ತಿಪ್ರಪತ್ತಿಗಳು ಬುದ್ಧಿಭೇದದಿಂದ ಐಶ್ವರ್ಯ, ಮೋಕ್ಷಗಳೆಂಬ ವಿರುದ್ಧವಾದ ಫಲಗಳನ್ನು ಕೊಡುವುದೆಂಬುದು ಕೂಡುತ್ತದೋ? ಲೋಕನ್ಯಾಯ ವಿರೋಧವಾದುದನ್ನು ಹೇಳಿದರೆ ಒಪ್ಪಬಹುದೇ ? ಒಂದೇ ಬೀಜವು ಬಿತ್ತುವವನ ಇಷ್ಟದಂತೆ ಬೇರೆ ಬೇರೆ ಫಲವನ್ನು ಕೊಡುತ್ತದೋ ? ಎಂದರೆ, ಪ್ರತ್ಯಕ್ಷ ಮತ್ತು ಅನುಮಾನ ಈ ಪ್ರಮಾಣಗಳಿಂದ ಕಾಣಲಾಗದ ವಿಷಯದಲ್ಲಿ ಶಾಸ್ತ್ರವೂ ಪ್ರಮಾಣವಾದದ್ದೇ. **'ನಹಿ ವಚನ ವಿರೋಧೇ ನ್ಯಾಯಃ ಪ್ರಭವತಿ'** ಶಾಸ್ತ್ರ ವಚನಕ್ಕೆ ವಿರೋಧವುಂಟಾದಲ್ಲಿ ಅಂತಹ ಜಾಗದಲ್ಲಿ ನ್ಯಾಯವು ಪ್ರವರ್ತಿಸುವುದಿಲ್ಲ. ಆದುದರಿಂದ ಶಾಸ್ತ್ರವು ಹೀಗೆ ಹೇಳಿರುವುದರಿಂದ ನಾವು ಒಪ್ಪಬೇಕಾದದ್ದೇ.

ಲೋಕರೀತಿಯಿಂದ ಉಂಟಾದ ವಿರೋಧ ಶಂಕೆಗೆ ಲೋಕರೀತಿಯಿಂದಲೂ ಪರಿಹಾರವನ್ನೂ ಕಾಣಬಹುದು, ಲೋಕದಲ್ಲಿ ಧರ್ಮಶೀಲನಾಗಿಯೂ ಉದಾರನಾಗಿಯೂ ಇರುವ ರಾಜನಿಗೆ ಯಾವುದಾದರೂ ಒಂದನ್ನು ಕೊಟ್ಟರೆ ಅದು ಬಾಳುವ ಬೆಲೆಯು ಲಭಿಸುವುದು, ಅದನ್ನೇ ರಾಜಮರ್ಯಾದೆ ಎಂಬ ಬುದ್ಧಿಯಿಂದ ಕೊಟ್ಟರೆ ಈತನು ಅಪೇಕ್ಷಿಸುವ ಇಷ್ಟಾರ್ಥವೆಲ್ಲಾ ಸಿಕ್ಕುತ್ತದೆ. ಹಾಗೆಯೇ ಭಕ್ತಿ ಪ್ರಪತ್ತಿಗಳು ಅಧಿಕಾರಿಯ ಇಷ್ಟಾನುಸಾರ ಬೇರೆ ಬೇರೆ ಫಲಗಳನ್ನು ಕೊಡುತ್ತವೆ.

ಈ ರೀತಿ ಭಕ್ತಿ ಪ್ರಪತ್ತಿಗಳು ನಾನಾವಿಧವಾದ ಫಲಗಳಿಗೆ ಸಾಧನಗಳಾದರೆ ಪ್ರವೃತ್ತಿಧರ್ಮಗಳ ಗುಂಪಿಗೆ ಸೇರಿದವಾದುದರಿಂದ ಮುಮುಕ್ಷುವಿಗೆ ಬಿಡಲು ತಕ್ಕವುತಾನೇ ಎಂದರೆ ಬೇರೆ ಪ್ರಯೋಜನವನ್ನು ಬಯಸುವವನಿಗೆ ಪ್ರವೃತ್ತಿ ಧರ್ಮಗಳ ಗುಂಪಿಗೆ ಸೇರುತ್ತವೆ. ಭಗವಂತನನ್ನು ಶರಣು ಹೋಗಲು ಬಯಸುವವರಿಗೆ ನಿವೃತ್ತಿ ಧರ್ಮಗಳ ಗುಂಪಿಗೆ ಸೇರುತ್ತವೆ ಈ ಅರ್ಥವೂ ನಿತ್ಯನೈಮಿತ್ತಿಕಾದಿ ಕರ್ಮಗಳಿಗೂ ಸಮಾನವಾದದ್ದು. ಸಂಧ್ಯಾವಂದನಾದಿಗಳು ಕೆಲವರಿಗೆ ಪ್ರತ್ಯವಾಯು

ವನ್ನು ಪರಿಹಾರ ಮಾಡುವುದು ಮಾತ್ರ ಪ್ರಯೋಜನವಾಗಿ ಉಳ್ಳದ್ದು. ಕೆಲವರಿಗೆ ಬ್ರಹ್ಮಲೋಕ ಪ್ರಾಪ್ತಿಗೆ ಸಾಧನವಾಗಿವೆ. ಹಾಗೆ ಇಲ್ಲಿಯೂ ಕೂಡುತ್ತದೆ. ಇಲ್ಲಿ ಆದಿ ಶಬ್ದದಿಂದ ಮಾಲಾಕರಣಾದಿ ಅನುಜ್ಞಾಕೈಙ್ಕರ್ಯವು ಗ್ರಹಿಸಲ್ಪಡುತ್ತದೆ. ಆದುದರಿಂದ ಒಂದಕ್ಕೆ ವಿಷಮವಾದ ಎರಡು ಫಲಗಳಿಗೆ ಸಾಧನವಾಗಿರುವಿಕೆಯ ವಿಷಯದಲ್ಲಿ ಉಂಟಾದ ಸಂದೇಹವು ನೀಗಲ್ಪಟ್ಟಿತು.

೨. ಇನ್ನುಮುಂದೆ ವಿಷಮಸ್ವಭಾವವಾದ ಭಕ್ತಿಪ್ರಪತ್ತಿಗಳಿಗೆ ಮೋಕ್ಷ ರೂಪ ವಾದ ಒಂದೇ ಫಲಕ್ಕೆ ಸಾಧನವಾಗಿರುವಿಕೆ ಕೂಡುವುದಿಲ್ಲ ಎಂಬ ಪಕ್ಷವನ್ನು ನಿರಸನ ಮಾಡಲ್ಪಡುತ್ತದೆ.

ಉಪಾಸನಾಧಿಕಾರಿಯು ಈ ಲೋಕಕ್ಕೆ ಹಿಂದಿರುಗಿ ತಿರುಗಿಬಂದು ಕೊನೆಯಲ್ಲಿ ಮೋಕ್ಷವನ್ನು ಪಡೆಯುತ್ತಾನೆ. ಪ್ರಪತ್ತಿ ಮಾಡಿದವನು ಒಂದೇ ಸಲ ಲೋಕಾಂತರಕ್ಕೆ ಪರಮ ಪದಕ್ಕೆ ಸೇರುತ್ತಾನೆ. ಆದುದರಿಂದ ಈ ಭಕ್ತಿ ಪ್ರಪತ್ತಿ ಗಳು ವಿಷಮ ಸ್ವಭಾವವುಳ್ಳವಾದವು. ಆದುದರಿಂದ ಇವು ಮೋಕ್ಷರೂಪ ಒಂದೇ ಫಲಕ್ಕೆ ಸಾಧನವಾಗಲಾರವು ಎಂದರೆ, ಇದಕ್ಕೆ ಲೋಕ ದೃಷ್ಟಾಂತ, ಶಾಸ್ತ್ರಪ್ರಮಾಣ ಇವೆರಡೂ ಉಂಟು. ಲೋಕ ದೃಷ್ಟಾಂತಕ್ಕೆ ಒಬ್ಬನು ವ್ಯವಸಾಯ ಮಾಡಿ ಸ್ವಲ್ಪಕಾಲ ನಿರೀಕ್ಷಿಸಿ, ಫಲಕಾಲದಲ್ಲಿ ಸಾವಿರರೂಪಾಯಿಗಳನ್ನು ಗಳಿಸುತ್ತಾನೆ. ಇನ್ನೊಬ್ಬನು ವಾಣಿಜ್ಯದಿಂದ ಸಾವಿರರೂಪಾಯಿಗಳನ್ನು ಕ್ಲಿಪ್ತಕಾಲದಲ್ಲಿ ಸಂಪಾದಿಸ ಬಹುದು. ಇಲ್ಲಿ ಭಿನ್ನಾಧಿಕಾರಿಗಳು ಸಾವಿರ ರೂಪಾಯಿಗಳ ಸಂಪಾದನೆ ರೂಪವಾದ ಒಂದೇ ಫಲವನ್ನೇ ಹೊಂದಿರುತ್ತಾರೆ. ಹಾಗೆಯೇ ವೇದದಲ್ಲೂ ಮಾನಸಿಕವಾಗಿ ಮಂತ್ರದಿಂದ ಮಾಡುವ ಸ್ನಾನಕ್ಕೂ ಜಲಾಶಯದಲ್ಲಿ ಮುಳುಗಿ ಮಾಡುವ ವಾರುಣ ಸ್ನಾನಕ್ಕೂ ಒಂದೇ ಫಲ ಎಂದು ಹೇಳಲ್ಪಟ್ಟಿದೆ.

೩. ಆರ್ತ ದೃಪ್ತರುಗಳಿಗೆ ಉಪಾಯ ಫಲ ಸಮಾನವಾಗಿದೆ. ಒಬ್ಬನಿಗೆ ಬೇಗನೆ ಮತ್ತೊಬ್ಬನಿಗೆ ಕಾಲಕಳೆದು, ಹೀಗೆ ವೈಷಮ್ಯ–ವ್ಯತ್ಯಾಸ ಹೇಗೆ ಕೂಡು ತ್ತದೆ ಎಂದರೆ, ಸಂಸಾರದ ಬೇಗೆಯಿಂದ ಉಂಟಾದ ತ್ವರೆಯ ತಾರತಮ್ಯದಿಂದ ಮಾಡಲ್ಪಟ್ಟ ಸಂಕಲ್ಪ ಭೇದದಿಂದ ಎಂದು ತಿಳಿಯಬೇಕು. ತ್ವರೆಯ ಮಾಂದ್ಯದಿಂದ ದೂರದ ಕಾಲದ ಅವಧಿಯನ್ನು ಕುರಿತು ಸಂಕಲ್ಪಿಸಿದರೆ ವಿಳಂಬವಾಗಿಯೂ ತ್ವರೆಯು ಹೆಚ್ಚಾಗಿ ಸಮೀಪದ ಕಾಲವನ್ನು ಅವಧಿ ಮಾಡಿ ಸಂಕಲ್ಪಿಸಿದರೆ ಅವಿಳಂಬವಾಗಿಯೂ ಮೋಕ್ಷ ಪ್ರಾಪ್ತಿಯಾಗುತ್ತದೆ. ಈ ರೀತಿ ಮೂರು ಶಙ್ಕೆಗಳೂ ನೀಗಲ್ಪಟ್ಟವು. ಪ್ರಾರಬ್ಧಕರ್ಮದ—ಫಲಕೊಡಲು ಆರಂಭಿಸಿದ ಕರ್ಮದ ಸುಕೃತ ವಿಶೇಷದಿಂದ ಆಳ್ವಾರು ಗಳು, ನಾಥಮುನಿ ಮುಂತಾದವರಿಗೆ ಭಗವತ್ಸಾಕ್ಷಾತ್ಕಾರಾದಿಗಳು ಉಂಟಾದವು. ಕೆಲವರಿಗೆ ಈ ಸಾಕ್ಷಾತ್ಕಾರಾದಿಗಳು ಇಲ್ಲದಿರಲು ಕಾರಣ ಪ್ರಪತ್ತಿ ಕಾಲದಲ್ಲಿ ಅವರು

ಅದನ್ನು ಪಡೆಯಬೇಕೆಂದೂ ಪ್ರಾರಬ್ಧ ಕರ್ಮದ ಪಾಪಾಂಶವೂ ತೊಲಗಬೇಕೆಂದೂ ಸಂಕಲ್ಪಿಸದೇ ಇರುವುದೇ ಕಾರಣವಾಗುತ್ತದೆ. ಪ್ರಾರಬ್ಧ ಕರ್ಮದ ಪಾಪಾಂಶವು ನಶಿಸದೆ ಇರಬಹುದು ಎಂದು ತಾತ್ಪರ್ಯವಾಗುತ್ತದೆ.

ಮೊದಲು ಅಪೇಕ್ಷಿಸಿದ ಫಲಾಂಶವು ಸಕೃತ್ಪ್ರಪತ್ತಿಯಿಂದ ಸಿದ್ಧವಾದರೂ ಆವಾಗ ಅಪೇಕ್ಷಿಸದೇ ಇದ್ದುದನ್ನು ಕುರಿತು ಮುಂದೆ 'ಅದನ್ನು ಪ್ರಾರ್ಥಿಸದೆ ಹೋದೆನಲ್ಲಾ' ಎಂದು ಹೆಚ್ಚಾಗಿ ದುಃಖ ಪಟ್ಟವನಾದರೆ ಮತ್ತೆ ಪ್ರಪತ್ತಿಯನ್ನು ಮಾಡಬಹುದು. ಹೀಗೆ ಮತ್ತೆ ಅನುಷ್ಠಿಸಿದುದರಿಂದ ಬೇರೆ ಉಪಾಯವನ್ನು ಸ್ವೀಕರಿಸಿದಂತೆ ಆಗುವುದಿಲ್ಲ.

ಮತ್ತೆ ಕೆಲವರು ಕೆಲವೆಡೆಗಳಲ್ಲಿ ಫಲಕೈಗೂಡದೆ ಇರಲು ಅದನ್ನು ನೋಡಿ, ಸರಿಯಾಗಿ ಅನುಷ್ಠಿಸಲ್ಪಟ್ಟರೆ ಸಕಲ ಫಲಗಳನ್ನೂ ಸಾಧಿಸಿಕೊಡುವ ಎಂದರೆ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವ ಪ್ರಪತ್ತಿಯ ವಿಷಯದಲ್ಲಿ ಸಾಧ್ಯೋಪಾಯವಾಗಲು ಅರ್ಹವಲ್ಲ ಎಂಬವಾದದ ಮೂಲಕವಾಗಿ ಶಙ್ಕೆಯನ್ನು ಮಾಡುವರು. ಐಶ್ವರ್ಯ, ಮಕ್ಕಳು ಇವುಗಳನ್ನು ಹೊಂದಲು ಪ್ರಪತ್ತಿ ಮಾಡ ಬಹುದು. ಅವು ಅವರಿಗೆ ಲಭಿಸದೇ ಹೋದರೆ ಅದರಲ್ಲಿ ವಿಶ್ವಾಸವನ್ನು ತೊರೆಯ ಬಹುದು. ಇದರಿಂದ ಪ್ರಪತ್ತಿಯು ಸರಿಯಾದ ಸಾಧ್ಯೋಪಾಯವಲ್ಲವೆಂದು ಭಾವಿಸುವುದು ಸರಿಯಲ್ಲ. ಏಕೆಂದರೆ ಪ್ರಪತ್ತಿಯು ದೃಷ್ಟಾದೃಷ್ಟಗಳಾದ ನಾಲ್ಕು ವಿಧವಾದ ಪುರುಷಾರ್ಥಗಳನ್ನು ಸಾಧಿಸಿಕೊಡುವ ಮಾಹಾತ್ಮ್ಯೆಯುಳ್ಳದು, ಶರಣಾಗತನ ಕೋರಿಕೆಯನ್ನು ಸಲ್ಲಿಸುವುದಕ್ಕಾಗಿಯೇ ಸರ್ವೇಶ್ವರನು ಬದ್ಧ ಕಂಕಣ ನಾಗಿದ್ದಾನೆ, ಹೀಗಿರುವಾಗ ಪ್ರಪತ್ತಿಯು ದೃಷ್ಟಾರ್ಥವನ್ನು ಸಾಧಿಸಿಕೊಡದೆ ಹೋದರೆ ಅದನ್ನು ಅನುಷ್ಠಿಸುವ ಕ್ರಮದಲ್ಲಿ ವೈಗುಣ್ಯ ಉಂಟೆಂದು ಭಾವಿಸುವುದು ನ್ಯಾಯವೇವಿನಾ ಅದು ಪ್ರಬಲವಾದ ಉಪಾಯವಾಗಲೇನೂ ಸಂದೇಹವಿಲ್ಲ.

ಕಾಮ್ಯ ಭಾಗದಲ್ಲಿ ಶಾಸ್ತ್ರವು 'ವೃಷ್ಟಿಕಾಮಃ ಕಾರೀರ್‍ಯಾಯಜೇತ—ಮಳೆ ಬೇಕೆಂಬ ಅಪೇಕ್ಷೆಯುಳ್ಳವನು ಕಾರೀರೀ ಯಾಗವನ್ನು ಮಾಡಬೇಕೆಂಬ ವಿಧಿ ಇದೆ. ಈ ಯಜ್ಞದಲ್ಲಿ ಕರ್ಮ ಕರ್ತೃ ಸಾಧನ ವೈಗುಣ್ಯಗಳಿಲ್ಲದಿದ್ದರೆ ಯಜ್ಞ ಪೂರ್ತಿ ಯಾದರೆ ಮಳೆಯು ಬರುತ್ತದೆ. ಇಲ್ಲವಾದರೆ ಯಜ್ಞಾಙ್ಗಗಳಲ್ಲಿ ಏನಾದರೂ ನ್ಯೂನತೆ-ಕಡಿಮೆಯಾಗಿರುವಿಕೆ—ಇದ್ದರೆ ಇಲ್ಲ, ಆಗ ಕಾರೀರೀ ಯಜ್ಞವು ಸತ್ಯವಾದು ದಲ್ಲ ಎಂಬ ಭಾವವು ಹೇಗೆ ಉಂಟಾಗುವುದಿಲ್ಲವೋ, ಹಾಗೆಯೇ ಪ್ರಪತ್ತಿಯೂ ಕೂಡ ದೃಷ್ಟಾರ್ಥದಲ್ಲಿ ಫಲಿಸದೇ ಹೋದರೆ ಮಾಡುವ ಕರ್ಮ, ಕರ್ತೃ—ಮಾಡು ವವನು, ಸಾಧನ-ಸಲಕರಣೆ ಇವುಗಳ ವೈಗುಣ್ಯಗಳಿಂದ ಹಾಗಾಯಿತೆಂದು ತಿಳಿಯ ತಕ್ಕದ್ದೇ ಹೊರತು, ಅಂತಹ ದೋಷಗಳಿಲ್ಲದಿದ್ದರೆ, ಪ್ರಪತ್ತಿಯು ಅಧಿಕಾರಿಯು

ಬಯಸಿದ ಕಣ್ಣಿಗೆ ಕಾಣುವ ಮನೆ, ಮಕ್ಕಳು, ಮುಂತಾದ ಇಷ್ಟಾರ್ಥವನ್ನೂ, ಕಣ್ಣಿಗೆ ಕಾಣದ ಮೋಕ್ಷ ಮುಂತಾದವನ್ನೂ ಸಾಧಿಸಿ ಕೊಡುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಕಾಮ್ಯ ಕರ್ಮಗಳಲ್ಲಿ ಸಾಙ್ಗವಾಗಿ ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿ ಅನುಷ್ಠಾನದಿಂದ ಫಲಸಿದ್ಧಿಯುಂಟೆಂದು ಹೇಗೆ ನಂಬಿಕೆಯೋ ಹಾಗೆಯೇ ಪ್ರಪದನ ದಲ್ಲೂ ಪೂರ್ಣವಾದ ನಂಬಿಕೆ ಇರಬೇಕು.

ಇಲ್ಲಿ ಕರ್ಮವೈಗುಣ್ಯವೆಂದರೆ ಮಹಾವಿಶ್ವಾಸಾದಿಗಳು ಕಡಿಮೆಯಾಗಿರುವಿಕೆ, ಕರ್ತೃ ವೈಗುಣ್ಯವೆಂದರೆ ಪ್ರಪತ್ತಿಗೆ ಹೇಳಿರುವ ಅಧಿಕಾರ ಕಡಿಮೆಯಾಗಿರುವಿಕೆ, ಸಾಧನ ವೈಗುಣ್ಯವೆಂದರೆ ಪ್ರಪತ್ತಿಯ ಅನುಷ್ಠಾನಕ್ಕೆ ಮೂಲವಾದ ಸದುಪದೇಶಾದಿ ಗಳು ಇಲ್ಲದೇ ಇರುವುದು, ಉಪದೇಶಕ್ಕೆ ಸತ್ತ್ವ–ಇರುವಿಕೆ ಪರಂಪರೆಯಿಂದ ಬರುವಿಕೆ, ಹೊಂದುವಿಕೆ, ಇಲ್ಲಿ ಆದಿ ಪದದಿಂದ ಆಚಾರ್ಯಗುಣಾದಿಗಳು ಹೇಳ ಲ್ಪಡುತ್ತವೆ. ಈ ರೀತಿಯಾದ ನ್ಯೂನತೆಗಳು ಇಲ್ಲದೆ ಪ್ರಪತ್ತಿ ಮಾಡಿದರೆ ಅದರ ಫಲವಾಗಿ ಅಪೇಕ್ಷಿಸಿದ ದೃಷ್ಟ ಫಲಗಳೂ ಸಿದ್ಧಿಸುತ್ತವೆ. ಮೋಕ್ಷವನ್ನು ಬಯಸು ವವನಿಗಾದರೋ ಕ್ರಮವಾಗಿ ಈ ನ್ಯೂನತೆಗಳನ್ನೂ ಸರಿಮಾಡಿ ಅದು ಮೋಕ್ಷವನ್ನು ಕೊಡುತ್ತದೆ. ವೈಗುಣ್ಯವಿಲ್ಲದಿದ್ದರಂತೂ ದೃಷ್ಟವಾದ ಫಲಗಳು ಸಿದ್ಧಿಸುವುದನ್ನು ನೋಡಿರುತ್ತೇವೆ. ಮಾಡುವ ಪ್ರಪತ್ತಿಯಲ್ಲಿ ಯಾವ ವೈಗುಣ್ಯವೂ ಇಲ್ಲದೆ ಸಾದ್ಗುಣ್ಯವಿದ್ದರೆ ಒಡನೆಯೇ ಫಲವನ್ನು ಕೊಡುತ್ತಾನೆನ್ನುವುದಕ್ಕೆ ಸಾಕ್ಷಿ— ಪ್ರಹ್ಲಾದ, ಕಾಗೆ, ಗಜೇಂದ್ರ, ದ್ರೌಪದೀ, ವಿಭೀಷಣ, ಕಾಳಿಂಗ ಸರ್ಪ, ಗೊಲ್ಲತಿ ಯರು ಮತ್ತು ಅಂಬರೀಷ ಮುಂತಾದವರು.

ಇಲ್ಲಿ ಪರೀಕ್ಷಿತ್ತಿನ ಕಥೆಯನ್ನೂ ಖಟ್ವಾಂಗನ ಕಥೆಯನ್ನೂ ತಿಳಿಯೋಣ.

ಪರೀಕ್ಷಿನ್ಮಹಾರಾಜನು ಏಳುರಾತ್ರಿಗಳಲ್ಲೇ ಶ್ರೇಯಸ್ಸನ್ನು ಪಡೆಯಲು ಬಯಸಿದವನಾಗಿ, ಶ್ರೀ ಶುಕಮಹರ್ಷಿಗಳ ಪರಮಾನುಗ್ರಹಕ್ಕೆ ಪಾತ್ರನಾಗಿ ಬ್ರಹ್ಮ ಭಾವವನ್ನು ಪಡೆದನು ಎಂಬುದಾಗಿ ಶ್ರೀಮದ್ಭಾಗವತದಲ್ಲಿ ವರ್ಣಿಸಲ್ಪಟ್ಟಿದೆ. ಅಲ್ಲಿಯೇ ಅಲ್ಪಕಾಲದಲ್ಲೇ ಉಪಾಯವು ಪರಿಪೂರ್ತಿಯಾಗುವ ವಿಷಯದಲ್ಲಿ ನಂಬಿಕೆ ಉಂಟಾಗಲು ಉದಾಹರಿಸಲ್ಪಟ್ಟ ಖಟ್ವಾಂಗನ ಕಥೆಯೂ ಇದೆ. ವಿಷ್ಣು ಪುರಾಣ ದಲ್ಲೂ (೪–೪)ಈ ಕಥೆ ಇದೆ. ಖಟ್ವಾಂಗನೆಂಬುವನು ಒಬ್ಬ ರಾಜರ್ಷಿ, ಅವನಿಗೆ ಈ ಜಗತ್ತು ಬ್ರಹ್ಮಾತ್ಮಕವಾದದ್ದೆಂಬುದು ತಿಳಿದಿತ್ತು. ಒಂದು ಸಲ ದೇವತೆಗಳಿಗೂ ರಾಕ್ಷಸರಿಗೂ ಯುದ್ಧವುಂಟಾಯಿತು. ಆ ಸಂದರ್ಭದಲ್ಲಿ ದೇವತೆಗಳು ಇವನನ್ನು ಸಹಾಯಕ್ಕಾಗಿ ಕರೆದರು. ಇವನು ಅವರಿಗೆ ಸಹಾಯ ನೀಡಿದಾಗ ಜಯಗಳಿಸಿದ ದೇವತೆಗಳು ನಿನಗೆ ಇಷ್ಟವಾದ ವರವನ್ನು ಕೇಳು, ಕೊಡುತ್ತೇವೆಂದರು. ಆಗ ಈ ದೊರೆಯು 'ತನಗೆ ಮಿಕ್ಕಿರುವ ಆಯಸ್ಸನ್ನು ಹೇಳಿ' ಎಂದಾಗ ಅವರು ಒಂದು

ಮುಹೂರ್ತ ಕಾಲ ಮಿಕ್ಕಿದೆ ಎಂದರು. ಮುಹೂರ್ತ=ಅಲ್ಪಕಾಲ ಅಥವಾ ಎರಡು ಘಳಿಗೆ ಇದೆ ಎಂದರ್ಥ.

ಇದನ್ನು ಕೇಳಿದೊಡನೆ ಬೇಗನೆ ವಿಮಾನದಿಂದ ರಾಜನು ಹಿಂತಿರುಗಿ ಭೂಲೋಕಕ್ಕೆ ಬಂದನು. ಭಗವಂತನನ್ನು ಪಡೆಯುವೆನೆಂದು ಮನಸ್ಸನ್ನು ನಿಶ್ಚಯ ಮಾಡಿಕೊಂಡು ಪರಮಾತ್ಮನಲ್ಲಿ ತನ್ನನ್ನು—ತನ್ನ ಆತ್ಮವನ್ನು ಕೂಡಿಸಿದನು. ಅವನಲ್ಲೇ ಅಡಗಿದನು—ಲೀನವಾದನು.

ಈ ಕಥೆಯನ್ನು ಕೇಳಿದವರಿಗೆ ಖಂಡಿತವಾಗಿಯೂ, ಅನೇಕ ಜನ್ಮಗಳನ್ನೆತ್ತಿ ಬಿಡದೆ ಮಾಡಬೇಕಾಗಿರುವ ಭಕ್ತಿಯೋಗಕ್ಕಿಂತ ಅಲ್ಪಕಾಲದಲ್ಲೇ ಭಗವಂತನನ್ನು ಪಡೆಯುವ ಉಪಾಯ ಮತ್ತೊಂದು ಇದೆ ಎಂಬುದು ತೋಚದೇ ಇರದು. ಆದುದ ರಿಂದ ಈ ರಾಜನ ಕೊಂಡಾಟದ ವಿಷಯವಾದ ಶ್ಲೋಕ ಹೀಗೆ ಇದೆ :—

ಖಟ್ವಾಙ್ಗೇನ ಸಮೋನಾನ್ಯಃ ಕಶ್ಚಿದುರ್ವ್ಯಾಂ ಭವಿಷ್ಯತಿ ।
ಯೇನ ಸ್ವರ್ಗಾದಿಹಾಗವ್ಯ ಮುಹೂರ್ತಂ ಪ್ರಾಪ್ಯಜೀವಿತಮ್ ।
ತ್ರಯೋಽತಿ ಸಂಹಿತಾ ಲೋಕಾ ಬುದ್ಧ್ಯಾಸತ್ಯೇನ ಚೈವಹಿ । ಇತಿ

ಖಟ್ವಾಂಗನಿಗೆ ಸಮನಾದವನು ಈ ಲೋಕದಲ್ಲಿ ಮತ್ತೊಬ್ಬನಿಲ್ಲ. ತನ್ನ ಆಯುಸ್ಸು ಮುಹೂರ್ತ ಕಾಲ ಮಾತ್ರವಿದೆ ಎಂಬುದನ್ನು ಅರಿತು ಸ್ವರ್ಗದಿಂದ ಇಲ್ಲಿಗೆ ಬಂದು ಪರಮಾತ್ಮನಲ್ಲಿ ಬುದ್ಧಿಯನ್ನಿಟ್ಟು ಅಂದರೆ ಧ್ಯಾನಮಾಡಿ ಮೂರು ಲೋಕವನ್ನೂ ಮೀರಿ ವೈಕುಂಠಕ್ಕೆ ಸೇರಿದನು ಎಂದು. ಇವನು ದೊಡ್ಡ ಬಿಲ್ಲು ಗಾರ, ಗುರಿಯಿಟ್ಟು ಬಾಣ ಪ್ರಯೋಗ ಮಾಡುವ ಚತುರ. ಮಾಯಾಮಯವಾದ ಪ್ರಧಾನವೆಂಬ ಕವಚದಿಂದ ಮುಚ್ಚಲ್ಪಟ್ಟಿದೆ ಬ್ರಹ್ಮವೆಂಬ ಗುರಿ. ಅದನ್ನು ಪ್ರಣವ ವೆಂಬ ಧನುಸ್ಸಿನಲ್ಲಿ ಹೂಡಿದ ಜೀವಾತ್ಮವೆಂಬ ಬಾಣದಿಂದ ಹೊಡೆದ. ಮಾಯೆ ಹೋಯಿತು. ಬ್ರಹ್ಮಭಾವ ಬಂದಿತು ಜೀವನಿಗೆ. ಪರಿಪೂರ್ಣವಾದ ಬ್ರಹ್ಮಾನು ಭವವುಂಟಾಯಿತು.

## ಪ್ರಪತ್ತಿಯು ಸ್ವತಃ ಅಙ್ಗಿಯಾಗಿ ಉಪಾಯವಲ್ಲ. ಅಙ್ಗಿಯಾದ ಉಪಾಸನಕ್ಕೆ ಅಙ್ಗಮಾತ್ರವೆಂಬ ವಾದದ ನಿರಸನ

ಪ್ರಪತ್ತಿಶಾಸ್ತ್ರದೊಡನೆಯೂ ಬೇರೆ ಶಾಸ್ತ್ರಗಳೊಡನೆಯೂ ಏನೊಂದೂ ವ್ಯತ್ಯಾಸವಿಲ್ಲದ ಹಾಗೆ ಎಲ್ಲಾ ಶಾಸ್ತ್ರಗಳಿಗೂ ಪ್ರವರ್ತಕರಾದ ವ್ಯಾಸಾದಿಗಳು (ಇಲ್ಲಿ ಆದಿ ಪದದಿಂದ ಪರಾಶರರು ಗ್ರಹಿಸಲ್ಪಡುತ್ತಾರೆ).

"ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ ॥

ಎಲ್ಲಾ ಶಾಸ್ತ್ರಗಳನ್ನೂ ಕಲಕಿ, ಮಿಶ್ರಮಾಡಿ ಮತ್ತೆ ಮತ್ತೆ ವಿಚಾರ ಮಾಡಿ ಯೋಚಿಸಿ ಇದು ಒಂದು ಚೆನ್ನಾಗಿ ತೀರ್ಮಾನಿಸಲ್ಪಟ್ಟಿತು. ಏನೆಂದರೆ ಯಾವಾಗಲೂ ನಾರಾಯಣನನ್ನು ಧ್ಯಾನಮಾಡಬೇಕು, ಅವನೇ ಚಿಂತಿಸಲು ತಕ್ಕವನು" ಎಂದು.

"ಹರಿರೇಕ ಸ್ಸದಾಧ್ಯೇಯೋ ಭವದ್ಭಿಸ್ಸತ್ವ ಸಂಸ್ಥಿತೈಃ ।

ಒಳ್ಳೆಯ ಚಿತ್ತದಲ್ಲಿರುವ ಅಂದರೆ ಒಳ್ಳೆಯ ಮನಸ್ಸುಳ್ಳ ನಿಮ್ಮಿಂದ ಯಾವಾಗಲೂ ಹರಿಯೊಬ್ಬನೇ ಧ್ಯಾನಮಾಡಲು ತಕ್ಕವನು.

"ಸ್ಮರ್ತವ್ಯಸ್ಸತತಂ ವಿಷ್ಣುಂ—ಯಾವಾಗಲೂ ವಿಷ್ಣುವು ಸ್ಮರಿಸಲು ತಕ್ಕವನು" ಎಂದೂ ಹೇಳಿದ್ದಾರೆ. ಈ ಪ್ರಮಾಣ ವಚನಗಳನ್ನು ನೋಡಿದರೆ, ಆವರ್ತಿಸಲ್ಪಟ್ಟ ಧ್ಯಾನ ಹೇಳಲ್ಪಟ್ಟಿದೆ ಎಂದು ತಿಳಿಯುತ್ತದೆ. ಇದೇ ಮೋಕ್ಷಸಾಧನ, ಹೀಗಿರುವಾಗ ಅನಾವೃತ್ತಿಯಾದ ಪ್ರಪತ್ತಿಯಿಂದ ಹೇಗೆ ಮೋಕ್ಷ? ಎಂಬುದಾಗಿ ಕೆಲವರು ಸಂದೇಹ ಪಡುತ್ತಾರೆ. "ಮಾಮೇವಯೇ ಪ್ರಪದ್ಯನ್ತೇ—ನನ್ನನ್ನೇ ಯಾರು ಶರಣು ಹೋಗುತ್ತಾರೋ" ಇವೇ ಮೊದಲಾದವು ಅಂಗ ಪ್ರಪತ್ತಿ ವಿಷಯವಾದವು. ಹಾಗೆಯೇ ಚರಮ ಶ್ಲೋಕವೂ—ಸರ್ವ ಧರ್ಮಾನ್ ಪರಿತ್ಯಜ್ಯ ಎಂಬಲ್ಲಿ ಮೋಕ್ಷೋಪಾಯಾನ್ತರವನ್ನು ಬಿಡಬೇಕೆಂದು ಹೇಳಿಲ್ಲ. ಪ್ರಪತ್ತಿಯನ್ನು ಭಕ್ತ್ಯಙ್ಗವಾಗಿಯೇ ಹೇಳಿದೆ ಎಂದೂ ಹೇಳುತ್ತಾರೆ. ಇದು ಸರಿಯಲ್ಲ.

"ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ ।
ತೇಽಪಿಮೃತ್ಯುಮತಿಕ್ರಮ್ಯಯಾಂತಿ ತದ್ವೈಷ್ಣವಂ ಪದಮ್ ॥

ಧ್ಯಾನಯೋಗವನ್ನು ಬಿಟ್ಟವರಾಗಿ ಯಾರು ನಿನ್ನನ್ನು ಸ್ವತಂತ್ರ ಸ್ವಭಾವವುಳ್ಳದ್ದಾಗಿ ಶರಣವರಣವನ್ನು ಮಾಡಿದ್ದಾರೋ ಅವರೂ ಕೂಡ ಮೃತ್ಯುವನ್ನು ಮೀರಿ ಆ ವೈಷ್ಣವ ಪದವನ್ನು ಕುರಿತು ಹೋಗುತ್ತಾರೆ" ಎಂದೂ,

ಯದ್ಯೇನ ಕಾಮಕಾಮೇನ ನಸಾಧ್ಯಂ ಸಾಧನಾನ್ತರೈಃ ।
ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚ ಭಕ್ತಿತಃ ॥
ಪ್ರಾಪ್ಯತೇ ಪರಮಂಧಾಮ ಯತೋನಾವರ್ತತೇಯತಿಃ ।
ತೇನ ತೇನಾಪ್ಯತೇ ತತ್ತ್ವನ್ಯಾಸೇನೈವ ಮಹಾಮುನೇ ।
ಪರಮಾತ್ಮಾಚ ತೇನೈ ವ ಸಾಧ್ಯತೇ ಪುರುಷೋತ್ತಮಃ ॥

ಯೇನಕಾಮಕಾಮೇನ=ಬೇರೆ ಪ್ರಯೋಜನವನ್ನು ಅಪೇಕ್ಷಿಸುವವನಿಂದ, ಯತ್=ಯಾವ ಇಷ್ಟವಾದ ಫಲವುಂಟೋ ಅದು ಮುಮುಕ್ಷುಗಳಲ್ಲದವರಿಂದ ಮಾಡಲ್ಪಡುವ ಜ್ಯೋತಿಷ್ಟೋಮಾದಿ ಸಾಧನಾನ್ತರೈಃ=ಬೇರೆ ಸಾಧನಗಳಿಂದ, ನಸಾಧ್ಯಂ=ಸಾಧಿಸಲು ಆಗದೆ ಇರುವುದೋ, ಮುಮುಕ್ಷುಣಾ=ಮೋಕ್ಷಫಲವನ್ನು ಇಚ್ಛಿಸುವವನಿಂದಲೂ, ಯತ್ ಪರಮಂಧಾಮ=ಯಾವ ಶ್ರೇಷ್ಠವಾದ ಸ್ಥಾನವು ಯತಿಃ=ಮನನಶೀಲನು, ಯತಃ=ಯಾವುದರಿಂದ, ನಾವರ್ತತೇ=ಹಿಂತಿರುಗುವುದಿಲ್ಲವೋ (ವೈಕುಂಠವು), ಸಾಂಖ್ಯೇನ=ಜ್ಞಾನಯೋಗದಿಂದ ಹೊಂದಲು ಆಗದೆ ಇರುವುದು, ಯೋಗೇನ=ಕರ್ಮಯೋಗದಿಂದಲೂ, ಚ=ಮತ್ತು, ಭಕ್ತಿತಃ= ಭಕ್ತಿಯೋಗದಿಂದಲೂ, ನ=ಹೊಂದಲು ಆಗದೇ ಇರುವುದೋ, ತತ್ತತ್= ಆ ಆ ಕಾಮ್ಯ ಫಲಗಳು, ತೇನತೇನ= ಆ ಆ ಅಧಿಕಾರಿಗಳಿಂದ, ಮಹಾಮುನೆ !=ಮುನಿಶ್ರೇಷ್ಠನೇ ! ನ್ಯಾಸೇನೈವ=ಈನ್ಯಾಸದಿಂದಲೇ ತಾನೇ ಹೊಂದಲ್ಪಡುತ್ತದೆ. ಪುರುಷೋತ್ತಮಃ=ಪುರುಷ ಶ್ರೇಷ್ಠನಾದ, ಪರಮಾತ್ಮಾಚ=ಪರಮಾತ್ಮನೂಕೂಡ, ಮುಮುಕ್ಷುಣಾ (ಎಂದು ಸೇರಿಸಿಕೊಳ್ಳಬೇಕು)=ಪ್ರಕೃತಿಯ ಕಟ್ಟಿನಿಂದ ಬಿಡಿಸಿಕೊಳ್ಳಲು ಅಪೇಕ್ಷಿಸುವವನಿಂದ ಅಂದರೆ ಆತ್ಮವನ್ನು ಹೊಂದಲು ಬಯಸುವವನಿಂದ, ತೇನೈವ ನ್ಯಾಸೇನ ಸಾಧ್ಯತೇ=ಅದೇ ನ್ಯಾಸದಿಂದ–ಪ್ರಪತ್ತಿಯಿಂದ ಸಾಧಿಸಲ್ಪಡುತ್ತಾನೆ ಎಂದೂ ಇವೇ ಮೊದಲಾದ ವಚನಗಳಿಂದ ಅನನ್ಯಥಾ ಸಿದ್ಧವಾದ ಪ್ರಮಾಣದಿಂದ, ಸ್ವತನ್ತ್ರ ಪ್ರಪತ್ತಿ ಸಿದ್ಧಿಸುತ್ತದೆ. ಈ ನಿಷ್ಠೆ ಉಳ್ಳವನಿಗೆ ಶ್ರೀ ವೈಕುಂಠ ಗದ್ಯದಲ್ಲಿ ಹೇಳಿರುವಂತೆ ಸ್ವಯಂ ಪ್ರಯೋಜನನಾಗಿ 'ಪ್ರತ್ಯಹಮಾತ್ಮೋಜ್ಜೀವನಾಯೈವ ಮನುಸ್ಮರೇತ್=ಪ್ರತಿನಿತ್ಯವೂ ಆತ್ಮೋಜ್ಜೀವನಕ್ಕಾಗಿ ಈ ರೀತಿ ಚಿಂತಿಸುತ್ತಿರಬೇಕು' ಎಂದು ಹೇಳಿರುವಂತೆ ಸದಾ ಧ್ಯಾನ ಮಾಡುತ್ತಿರಬೇಕು. ಧ್ಯೇಯೋ ನಾರಾಯಣಸ್ಸದಾ=ಯಾವಾಗಲೂ ಧ್ಯಾನ ಮಾಡಲು ತಕ್ಕವನು ನಾರಾಯಣನು ಎಂದು ಬೇರೆ ಪ್ರಮಾಣಗಳುಂಟು ನಿತ್ಯ ಚಿಂತನಕ್ಕೆ. ಈ ಧ್ಯಾನವು ರೋಗವಿಲ್ಲದವನಿಗೂ ಆರೋಗ್ಯವನ್ನು ಬಯಸುವವನಿಗೂ ಹಾಲಿನ ಸೇವನೆಯಂತೆ. ರೋಗವಿಲ್ಲದವನು ಭೋಗಕ್ಕಾಗಿ ಹಾಲನ್ನು ಕುಡಿಯುತ್ತಾನೆ. ಆರೋಗ್ಯವನ್ನು ಬಯಸುವವನು ರೋಗ ತೊಲಗಲೆಂದು ಕುಡಿಯುತ್ತಾನಲ್ಲವೇ ? ಹಾಗೆಯೇ ಈ ಧ್ಯಾನವು ಶಕ್ತನ ವಿಷಯದಲ್ಲಿ ಉಪಾಯ ಭಕ್ತಿಯಾಗಿಯೂ ಅಶಕ್ತನ ವಿಷಯದಲ್ಲಿ ಫಲರೂಪ ಭಕ್ತಿಯಾಗಿಯೂ ವಿಧಿಸಲ್ಪಟ್ಟಿದೆ. ತನ್ತ್ರವಾಗಿ ಶಾಸ್ತ್ರೋಕ್ತವಾಗಿ ಅಙ್ಗಗಳೊಡಗೂಡಿದ ಧ್ಯಾನಕ್ಕೆ ಸರ್ವರಿಗೂ ಅಧಿಕಾರವಿಲ್ಲ. ಆದರೂ ಭಗವದ್ವಿಷಯದಲ್ಲಿ ಅಧಿಕಾರಕ್ಕೆ ತಕ್ಕಂತೆ ಧ್ಯಾನ ಮಾಡಬಹುದು. "ನಿರಂತರಂ ನಿನೈಪ್ಪತಾಕ ನೀ ನಿನೈಕ್ಕ ವೇಣುಮೇ =ನಾನು ಯಾವಾಗಲೂ ನಿನ್ನನ್ನು ಸ್ಮರಣೆ ಮಾಡುವಂತೆ ಸಂಕಲ್ಪಿಸಬೇಕು" ಎಂದು ಆಳ್ವಾರರ ಮಾತು.

ಶ್ರೀಭಾಷ್ಯಕಾರರೇ ಸ್ವತಂತ್ರಪ್ರಪತ್ತಿಯೂ ಉಪಾಯವೆಂದೂ ಅಙ್ಗೀಕರಿಸಿರುತ್ತಾರೆ. ಈ ವಿಷಯದಲ್ಲಿ ಆಚಾರ್ಯರು ಅನುಗ್ರಹಿಸಿರುವ ರಹಸ್ಯತ್ರಯಸಾರದ ಪಙ್ತಿಗಳನ್ನು ಉಲ್ಲೇಖಿಸಿ ಅದರ ಅರ್ಥವನ್ನರಿಯೋಣ.

**ಶ್ರೀಭಾಷ್ಯಕಾರರುಮ್ ಇವ್ವುಪಾಯ ನಿಷ್ಠೈಯೈ ಶಿರಿಯಗದ್ಯತ್ತಿಲುಮ್ ಪೆರಿಯ ಗದ್ಯತ್ತಿಲುಮ್. ಅರುಳಿಚ್ಚೆಯ್‌ದು ಶ್ರೀ ವೈಕುಂಠ ಗದ್ಯತ್ತಿಲುಮ್ ಇನ್ನಿಷ್ಠೈಯೈಚ್ಚುರಙ್ಗಕ್ಕಾಟ್ಟಿ, ಯಿರುನ್ದನಾಳ್ ಪ್ರಾಪ್ಯರುಚಿ ಕುಲೈಯಾದೆ ವಳರ್‌ನ್ದು ಪೋರುಮ್ಪಡಿಕ್ಕೀಡಾನ ಅನುಸಂಧಾನ ವಿಶೇಷತ್ತೈ "ತತಶ್ಚಪ್ರತ್ಯಹ ಮಾತ್ಮೋಜ್ಜೀವನಾಯೈವ ಮನುಸ್ಮರೇತ್" ಎನ್ರುತುಡಙ್ಗಿ ಅರುಳಿಚ್ಚೆಯ್‌ದಾರ್.**

ಶ್ರೀಭಾಷ್ಯಕಾರರುಮ್ = ಶ್ರೀಭಾಷ್ಯಕಾರರೂ ಕೂಡ ಹೀಗೆನ್ನಲು ಕಾರಣವೇನೆಂದರೆ, ಶ್ರೀಭಾಷ್ಯಕಾರರು ಸ್ವತಂತ್ರಪ್ರಪತ್ತಿಯನ್ನು ಉಪಾಯವಾಗಿ ಅಙ್ಗೀಕರಿಸಲೇ ಇಲ್ಲವೆಂದು ಹೇಳುವ ಪೂರ್ವಪಕ್ಷಕ್ಕೆ ಸಮಾಧಾನವಾದ ಮಾತಾಗಿರುವುದರಿಂದ ಅವರೂ ಕೂಡ ಎಂದು ಹೇಳಿದ್ದಾರೆ. ಇವ್ವುಪಾಯನಿಷ್ಠೈಯೈ = ಈ ಭರನ್ಯಾಸರೂಪ ಉಪಾಯ ನಿಷ್ಠೆಯನ್ನು, ಶಿರಿಯಗದ್ಯತ್ತಿಲುಮ್ = ಮಿತ ಗದ್ಯದಲ್ಲೂ ಎಂದರೆ ಶ್ರೀರಂಗ ಗದ್ಯದಲ್ಲೂ, ಪೆರಿಯಗದ್ಯತ್ತಿಲುಮ್ = ಪೃಥು ಗದ್ಯದಲ್ಲೂ ಎಂದರೆ ಶರಣಾಗತಿ ಗದ್ಯದಲ್ಲೂ, ಅರುಳಿಚ್ಚೆಯ್‌ದು = ಅನುಷ್ಠಿಸತಕ್ಕದ್ದೆಂದು ಹೇಳಿ, ಶ್ರೀ ವೈಕುಂಠಗದ್ಯದಲ್ಲೂ, ಇನ್ನಿಷ್ಠೈಯೈ = ಈ ಸ್ವತಂತ್ರ ಪ್ರಪತ್ತಿ ನಿಷ್ಠೆಯನ್ನು, ಶುರಙ್ಗಕ್ಕಾಟ್ಟಿ = ಸಂಗ್ರಹವಾಗಿ ತೋರಿಸಿ, ಇರುನ್ದನಾಳ್ = ಪ್ರಪನ್ನನು ಈ ಲೋಕದಲ್ಲಿ ಇರುವ ತನಕ, ಪ್ರಾಪ್ಯರುಚಿಕುಲೈಯಾದೆ = ಪ್ರಾಪ್ಯನಾದ ಶ್ರಿಯಃಪತಿಯನ್ನು ಹೋಗಿ ಸೇರಬೇಕೆಂಬುದರಲ್ಲಿ ಆಶೆಯು ನಷ್ಟವಾಗದ ಹಾಗೆ, ವಳರ್‌ನ್ದು ಪೋರುಮ್ಪಡಿಕ್ಕೀಡಾನ = ವೃದ್ಧಿಯಾಗುತ್ತಾ ಹೋಗುವುದಕ್ಕನುಗುಣವಾದ, ಅನುಸಂಧಾನ ವಿಶೇಷವನ್ನು, ತತಶ್ಚ = ಅನಂತರದಲ್ಲಿ, ಪ್ರತ್ಯಹಂ = ಪ್ರತಿದಿನವೂ, ಆತ್ಮೋಜ್ಜೀವನಾಯ = ಆತ್ಮನ ಉತ್ಕೃಷ್ಟವಾದ ಜೀವನಕ್ಕಾಗಿ ಅಂದರೆ ಕೈಂಕರ್ಯಾಚರಣವೇ ಉತ್ಕೃಷ್ಟವಾದ ಜೀವನ ಅದಕ್ಕಾಗಿ, ಏವಮ್ = ಹೀಗೆಯೆ, ಅನುಸ್ಮರೇತ್ = ಸ್ಮರಿಸತಕ್ಕದ್ದು ಎನ್ರುತುಡಙ್ಗ = ಎಂದಾರಂಭಿಸಿ, ಅರುಳಿಚ್ಚೆಯ್‌ದಾರ್ = ದಯೆಯಿಂದ ಅಪ್ಪಣೆಕೊಡಿಸಿದ್ದಾರೆ.

ಶಿರಿಯ ಗದ್ಯವಾದ ಶ್ರೀರಂಗ ಗದ್ಯದಲ್ಲಿ ಪ್ರಾರಂಭದಲ್ಲಿ ಭಕ್ತಿಯೋಗಕ್ಕೆ ಸಾಮರ್ಥ್ಯವಿಲ್ಲದಿರುವಿಕೆಯನ್ನು, ಭಕ್ತಿಯು ಉಪಾಯವಾಗಿರುವಿಕೆಗೆ ಬೇಕಾದ ಸಮಸ್ತ ಆತ್ಮಗುಣವಿಹೀನರೆಂದು ಹೇಳಿ ಭಗವಂತನ ಮಾಯೆಯಿಂದ ಮುಚ್ಚಲ್ಪಟ್ಟ ಆತ್ಮ ಪ್ರಕಾಶತೆಯಿಂದುಂಟಾದ ಕಾರ್ಪಣ್ಯವನ್ನು ತೋರಿಸಿ, ಅದೃಷ್ಟಸಂತಾರೋಪಾಯಃ = ಸಂಸಾರದ ಕಡಲನ್ನು ದಾಟಲು ಕಾಣದ ಉಪಾಯವುಳ್ಳವನೆಂದು ಹೇಳಿರುವುದ

ರಿಂದ ಅನನ್ಯಗತಿತ್ವವನ್ನು ತೋರ್ಪಡಿಸಿ, 'ನಿಖಿಲಜನ್ತುಜಾತಶರಣ್ಯ' ಎಂದು ಸಂಬೋಧಿಸಿ ಸಾಧಾರಣ ಜಂತುಗಳಿಗೂ ಕೂಡ ಶರಣ್ಯನಾಗಿರುವವನು ಪ್ರಪನ್ನರಾದ ತಮಗೆ ವಿಮುಖನಾಗುವನೇ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ '**ಶ್ರೀಮನ್ನಾರಾಯಣ ತವಚರಣಾರವಿಂದಯುಗಳಂ ಶರಣಮಹಂ ಪ್ರಪದ್ಯೇ**' ಎಂದು ಶರಣಾಗತಿಯನ್ನನುಷ್ಠಿಸಿ, ಹೀಗೆ ಭರನ್ಯಾಸ ಮಾಡುವಾಗ ಮಹಾವಿಶ್ವಾಸವು ತಮಗುಂಟೆಂದು '**ವಿಶ್ವಾಸಪೂರ್ವಕಂ ಭಗವಂತಂ ನಿತ್ಯಕಿಂಕರತಾಂ ಪ್ರಾರ್ಥಯೇ**=ನಂಬಿಕೆಯೊಡನೆ ಭಗವಂತನನ್ನು ಕುರಿತು ತಾನು ಅವನಿಗೆ ಯಾವಾಗಲೂ ಕಿಂಕರನಾಗಿರುವಿಕೆಯನ್ನು ಅನುಗ್ರಹಿಸು' ಎಂದು ಹೇಳಿರುತ್ತಾರೆ. ಪೃಥುಗದ್ಯವಾದ ಶರಣಾಗತಿ ಗದ್ಯದಲ್ಲಿ ಮೊದಲು ಲಕ್ಷ್ಮೀ=ಶ್ರೀ ಶರಣಾಗತಿಯನ್ನು ಪುರುಷಕಾರತ್ವದಿಂದ ಅನುಷ್ಠಿಸಿ ನಂತರ ಶ್ರಿಯಃಪತಿಗೆ ನಮ್ಮ ರಕ್ಷಣೆಗೆ ಬೇಕಾದ ಗುಣಗಳೆಲ್ಲವನ್ನೂ ಅನುಸಂಧಾನ ಮಾಡಿ '**ಅಶರಣ್ಯಶರಣ್ಯ ಅನನ್ಯಶರಣಸ್ತ್ವತ್ಪಾದಾರವಿಂದಯುಗಳಂ ಶರಣಮಹಂಪ್ರಪದ್ಯೇ**=ರಕ್ಷಕರಿಲ್ಲದವರಿಗೆ ರಕ್ಷಣೆಯನ್ನು ಕೊಡುವವನೇ ! ನಾನು ಬೇರೆ ಕಾಪಾಡುವವರಿಲ್ಲದೆ ನಿನ್ನ ಪಾದಾರವಿಂದಗಳನ್ನು ಮರೆಹೊಕ್ಕಿದ್ದೇನೆ' ಎಂದು ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ. ಸರ್ವೇಶ್ವರನು ಪ್ರತಿವಚನರೂಪದಲ್ಲಿ ಅಭಯವನ್ನು '**ನಿತ್ಯಕಿಂಕರೋಭವಿಷ್ಯಸಿ, ಮಾ ತೇಭೂದತ್ರಸಂಶಯಃ**=ನಿತ್ಯ ಕಿಂಕರನಾಗುವೆ. ಇದರಲ್ಲಿ ಸಂದೇಹ ಬೇಡ' ಎಂದು ಅನುಗ್ರಹಿಸಿದ್ದಾನೆ. ಇದನ್ನು ಅನುಸಂಧಾನ ವಿಶೇಷವೆಂದು ಹೇಳಿರುತ್ತಾರೆ ; ಏಕೆಂದರೆ ಭರನ್ಯಾಸವು ಗುರುಮುಖವಾಗಿ ಒಂದು ಸಲ ಅನುಷ್ಠಿಸತಕ್ಕದ್ದು. ಈ ಗದ್ಯಗಳಲ್ಲಿ ಶರಣಮಹಂ ಪ್ರಪದ್ಯೇ ಇವೇ ಮೊದಲಾದವುಗಳನ್ನು ನಿತ್ಯವೂ ಪಠನಮಾಡುವುದರಿಂದ ನಿತ್ಯವೂ ಶರಣಾಗತಿಯನ್ನನುಷ್ಠಿಸಿದ ಹಾಗಲ್ಲ. ಪ್ರತಿದಿನದಲ್ಲೂ ದ್ವಯಮಂತ್ರೋಚ್ಚಾರಣ ರೂಪವಾದ ಜಪವು ಹೇಗೆ ಭರನ್ಯಾಸವಾಗದೆ ಅದರ ಮಾಹಾತ್ಮ್ಯೆಯ ಅನುಸಂಧಾನವೋ ಹಾಗೆಯೇ ಈ ಗದ್ಯಪಠನವೂ ಎಂದು ಭಾವಿಸತಕ್ಕದ್ದು. ಹಾಗಾದರೆ ಈ ಅನುಸಂಧಾನದಿಂದುಂಟಾಗುವ ಪ್ರಯೋಜನವೇನೆಂದು ಕೇಳಬಹುದು. ಫಲರೂಪ ಭಕ್ತಿಯು ಸದಾ ನೆಲೆಗೊಂಡಿರುವುದೇ ಪ್ರಯೋಜನ. ಇದನ್ನೇ ಪ್ರಾಪ್ಯ ರುಚಿಕುಲೈಯಾದೆ ವಳರ್‌ನ್ದು ಪೋರುಮ್ ಪಡಿಕ್ಕೀಡಾನ ಅನುಸಂಧಾನವೆಂದು ಹೇಳಿರುತ್ತಾರೆ.

ಆದರೆ ಶ್ರೀಭಾಷ್ಯಕಾರರು ತಾವು ಬರೆದಿರುವ 'ನಿತ್ಯ'ವೆಂಬ ಭಗವದಾರಾಧನ ಕ್ರಮಾದಿಗಳನ್ನು ತಿಳಿಸುವ ಗ್ರಂಥದಲ್ಲಿ '**ಪ್ರತ್ಯಕ್ಷರೂಪಾನುಧ್ಯಾನೇನ ಧ್ಯಾಯನ್ನಾಸೀತ**' ಎಂದು ಉಪಾಸನರೂಪ ಸಾಕ್ಷಾತ್ಕಾರವನ್ನೇ ಉಪದೇಶಿಸಿರುವ ಹಾಗೆ ತೋರುತ್ತದೆಯಲ್ಲಾ ಎಂದರೆ ಹಾಗಲ್ಲವೆಂದೂ ಅದು ಪ್ರಪನ್ನನಿಗೆ ಬೇಕಾದ ಫಲರೂಪ ಧ್ಯಾನವಾದ ಭಗವತ್ಕೈಂಕರ್ಯೈಕರತಿಯನ್ನು ಪರಮೈಕಾಂತಿತ್ವವನ್ನು ಬೋಧಿಸುತ್ತದೆ ಎಂದು ತಿಳಿಯಬೇಕು. ಈ ಗ್ರಂಥವು ಪ್ರತಿದಿನದಲ್ಲೂ ಪ್ರಪನ್ನನು

ಭಗವತ್ಕೈಂಕರ್ಯ ರೂಪದಲ್ಲಿ ಮಾಡತಕ್ಕ ನಿತ್ಯ ನೈಮಿತ್ತಿಕ ಅನುಷ್ಠಾನಗಳನ್ನು ತಿಳಿಸುವ ಗ್ರಂಥವಾಗಿದೆ. ಶರಣಾಗತಿ ಗದ್ಯದಲ್ಲಿ ಹೇಳಿರುವ ಸ್ವತಂತ್ರ ಪ್ರಪತ್ತಿ ನಿಷ್ಠೆಯನ್ನು ಅನುಷ್ಠಿಸಿದ ನಂತರ ಉತ್ತರಕೃತ್ಯರೂಪದಲ್ಲಿ ಮಾಡುವ ಕೈಂಙ್ಕರ್ಯ ವಿಷಯವಾಗಿದೆ ಈ ಧ್ಯಾನ. ಉಪಾಸನವನ್ನು ಎಂದಿಗೂ ಬೋಧಿಸಲಾರದು. ಫಲರೂಪ ಭಕ್ತಿಗೆ ಸಹಕಾರಿಯಾಗಿ ಪ್ರತಿದಿನವೂ ಮಾಡತಕ್ಕ ನಿತ್ಯಕರ್ಮಾನುಷ್ಠಾನಕ್ಕೆ ಸೇರಿದ ಭಗವದಾರಾಧನಕ್ಕೆ ಅಂಗಭೂತವಾದ ಧ್ಯಾನ ಇದು.

[1]ತರಿತ್ತಿರುನ್ದೇನಾಹವೇ—ತಾರಾಕಣಪ್ಪೋರ್
ವಿರಿತ್ತುರೈತ್ತವೆಮ್‌ನಾಹತ್ತುನ್ನೈ. ತೆರಿತ್ತೆಳುದಿ
ವಾಶಿತ್ತುಮ್‌ಕೇಟ್ಟುಮ್ ವಣಙ್ಗಿವಳಿಪಟ್ಟುಮ್,
ಪೂಶಿತ್ತುಮ್ ಪೋಕ್ಕಿನೇನ್‌ಪೋದು.

**ತಾರಾಗಣಂ ಪೋರ್‌ವಿರಿತ್ತುರೈತ್ತ**=ನಕ್ಷತ್ರಗಳ ಸಂಚಾರವನ್ನು ಜ್ಯೋತಿಶ್ಶಾಸ್ತ್ರದ ಮೂಲಕವಾಗಿ ವಿಸ್ತಾರವಾಗಿ ಹೇಳಿದ, **ವೆನ್ನಾಗತ್ತುನ್ನೈ**=ಶತ್ರುಗಳಿಗೆ ಭಯಂಕರನಾಗಿರುವ ಆದಿಶೇಷನಿಗೆ ಆತ್ಮವಾಗಿರುವ ನಿನ್ನನ್ನು, **ಎಳುದಿ ವಾಶಿತ್ತುಕ್ಕೇಟ್ಟುಮ್**=ಬರೆದು, ಓದಿ, ಕೇಳಿ ಎಂದರೆ ನಿನ್ನ ಮಾಹಾತ್ಮ್ಯ, ದಿವ್ಯಚೇಷ್ಟಿತಗಳು, ನೀನು ಹೇಳಿದ ಶಾಸ್ತ್ರಗಳು, ಇವುಗಳನ್ನು ಬರೆದು ಓದಿ ಮತ್ತೆ ಗುರುಗಳ ಮೂಲಕ ಉಪಾಯ ಯಾವುದೆಂದು ಕೇಳಿ ತಿಳಿದು, **ವಣಙ್ಗಿ**=ನಿನ್ನನ್ನು ಶರಣಾಗತಿಯ ಮೂಲಕ ನಮಸ್ಕಾರವನ್ನು ಮಾಡಿಯೂ, **ವಳಿಪಟ್ಟುಮ್**=ಉಪಚಾರಗಳನ್ನು ಮಾಡಿಯೂ, **ಪೂಶಿತ್ತುಮ್**=ಪೂಜಿಸಿಯೂ, **ಪೋದುಪೋಕ್ಕಿನೇನ್**=ಕಾಲವನ್ನು ಕಳೆದುಕೊಂಡಿರುತ್ತೇನೆ. (ಈ ರೀತಿ ಮಾಡುವುದು ಯಾವುದಕ್ಕಾಗಿ ಎಂದರೆ) **ತರಿತ್ತಿರುನ್ದೇನಾಹವೇ**=ಸತ್ತೆಯನ್ನು ಪಡೆಯುವುದಕ್ಕಾಗಿಯೇ.

**ತಾರಾಗಣಪ್ಪೋರ್**=ನಕ್ಷತ್ರ ಸಮೂಹಗಳ ಸಂಚಾರವನ್ನು ಜ್ಯೋತಿಶ್ಶಾಸ್ತ್ರಮುಖದಿಂದ ವಿಸ್ತಾರವಾಗಿ ಹೇಳಿದ ಶ್ರೇಷ್ಠನಾದ ಅನಂತನಿಗೆ (ಅನಂತಾಳ್ವಾನೆಂದು ಸಂಪ್ರದಾಯದ ಹೆಸರು) ಅಂತರಾತ್ಮನಾದ ನಿನ್ನನ್ನು ವೇದ, ಪಂಚರಾತ್ರ, ಇತಿಹಾಸ ಪುರಾಣ ಮುಂತಾದ ವೇದದ ಉಪಬ್ರಂಹಣಗಳು ಇವೇ ಮೊದಲಾದವನ್ನು, ತನ್ನ ಮೂಲಕವಾಗಿಯೂ ಬ್ರಹ್ಮನ ಮೂಲಕವಾಗಿಯೂ ಕೆಲವು ಮುನಿವರ್ಯರಿಗೆ ತಾನು ಅನ್ತರಾತ್ಮನಾಗಿದ್ದು ಅವರುಗಳಮೂಲಕವೂ ಹೊರಪಡಿಸಿದಂತೆ ಆದಿಶೇಷನಿಗೆ ಅಂತರಾತ್ಮನಾಗಿದ್ದು ಜ್ಯೋತಿಶ್ಶಾಸ್ತ್ರವನ್ನು ಹೊರಪಡಿಸಿ ಕೃಪೆಮಾಡಿದನೆಂಬ ನಿಜಾಂಶವನ್ನು ಹೊರಪಡಿಸುವುದೇ ಈ ವಿಶೇಷಣಕ್ಕೆ ಪ್ರಯೋಜನವೆಂದು ತಿಳಿಯಬೇಕು.

1. ತಿರುಮಳಿಶೈಯಾಳ್ವಾರ್ ಅನುಗ್ರಹಿಸಿರುವ ನಾನ್ಮುಹನ್ ತಿರುವನ್ದಾದಿ. ೬೩.

'ಈ ಪ್ರಪನ್ನನಿಗೆ' 'ಪೂಶಿತ್ತುಮ್ ಪೋಕ್ಕಿನೇನ್ ಪೋದು=ಪೂಜಿಸಿ ಕಾಲಕ್ಷೇಪವನ್ನು ಮಾಡಿದೆನು' ಎಂಬಲ್ಲಿ ಅನನ್ಯ ಪ್ರಯೋಜನವಾದ ಪೂಜಾ ಶಬ್ದವು ಪಾಞ್ಚರಾತ್ರ ಸಂಹಿತೆಯಲ್ಲಿ ಹೇಳಲ್ಪಟ್ಟ ಪೂಜಾಪರವಾದದ್ದು. ಗದ್ಯದಲ್ಲಿ ಧ್ಯಾನ ಶಬ್ದದಿಂದ ಪೂಜಾ ವಿಶೇಷವು ಮನಸ್ಸಿನಲ್ಲೇ ಮಾಡತಕ್ಕದ್ದೆಂದು ಅಭಿಪ್ರಾಯ ಮಾಡಲ್ಪಟ್ಟಿದೆ.

ಈ ರೀತಿ ಬೇರೆ ಪ್ರಯೋಜನಕ್ಕಾಗಿ ಅಲ್ಲದ ಪೂಜಾವಿಶೇಷವನ್ನು 'ಅಥ ಪರಮೈಕಾನ್ತಿನೋಭಗವದಾರಾಧನಪ್ರಯೋಗಂ ವಕ್ಷ್ಯೇ=ಪರಮೈಕಾನ್ತಿಯು ಮಾಡಬೇಕಾದ ಭಗವಂತನ ಆರಾಧನದ ರೀತಿಯನ್ನು ಹೇಳುತ್ತೇನೆ' ಎಂದು ಆರಂಭ ಮಾಡಿ ನಿತ್ಯವೆಂಬ ಗ್ರಂಥದಲ್ಲಿ ರಾಮಾನುಜಾಚಾರ್ಯರು 'ಪೂಜೆಯನ್ನು ಆರಂಭಿಸುವುದಕ್ಕೆ ಮೊದಲು ಪ್ರತ್ಯಕ್ಷ ರೂಪವಾದ ಧ್ಯಾನವನ್ನು ಮಾಡುತ್ತಾ ಕುಳಿತಿರಬೇಕೆಂದು ಹೇಳಿದ್ದಾರೆ. ಸ್ವತಂತ್ರ ಪ್ರಪತ್ತಿ ನಿಷ್ಠನಿಗೆ ಈ ಧ್ಯಾನವು ಸ್ವಯಂ ಪ್ರಯೋಜನವಾದದ್ದು.

ಈ ರೀತಿ ಯಾವಾಗಲೂ ಭಗವಂತನ ಅನುಸಂಧಾನದ—ಧ್ಯಾನದ ಪ್ರವಾಹ ರೂಪವಾದ ಕೈಙ್ಕರ್ಯದಲ್ಲಿ ಭಗವಚ್ಛಾಸ್ತ್ರದಲ್ಲಿ ಹೇಳಲ್ಪಟ್ಟು ಮತ್ತು ವ್ಯಾಸ, ದಕ್ಷ ಮುಂತಾದ ಮಹರ್ಷಿಗಳ ಅಭಿಪ್ರಾಯಗಳಿಗೆ ಹೊಂದಿರುವ ಕಾಲ [1]ವಿಭಾಗ ಐದು. ಕುಲಶೇಖರಾಳ್ವಾರ್ ಅವರು 'ಮರನ್ತಿಗಳುಮ್' ಎಂದು ತಾವು ಹಾಡಿರುವ ಪೆರುಮಾಳ್ ತಿರುಮಳಿಯ ಏಳನೆಯ ಪಾಶುರದಲ್ಲಿ "ಇರಮುಪ್ಪೋಳದೇತ್ತಿ= ಎರಡಾಗಿರುವ ಮತ್ತು ಮೂರಾಗಿರುವ ಎಂದರೆ ಐದಾಗಿ ಇರುವ ಕಾಲದಲ್ಲಿ ಸ್ತೋತ್ರ ಮಾಡಿ ಎಂದರೆ ಪಾಂಚಕಾಲಿಕ ಅನುಷ್ಠಾನಗಳಿಂದ ಭಗವಂತನನ್ನು ಅರ್ಚಿಸಿ" ಎಂದು ಹೇಳಿದ್ದಾರೆ. ಇದನ್ನು ಅನುಸರಿಸಿ ಭಾಷ್ಯಕಾರರೂ ಮತ್ತು ವಂಗಿಪುರದ ನಂಬಿ ಮೊದಲಾದವರೂ ತಮ್ಮ ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ.

ಅಭಿಗಚ್ಛನ್ ಹರಿಂಪ್ರಾತಃ ಪಶ್ಚಾದ್ದ್ರವ್ಯಾಣಿಚಾರ್ಜಯನ್ ।
ಅರ್ಚಯಂಶ್ಚ ತತೋದೇವಂ ತತೋಮನ್ತ್ರಾನ್ ಜಪನ್ನಪಿ ॥
ಧ್ಯಾಯನ್ನಪಿ ಪರಂದೇವಂ ಕಾಲೇಷೂಕ್ತೇಷು ಪಂಚಸು ।
ವರ್ತಮಾನಸ್ಸದಾಚೈವಂ ಪಾಂಚಕಾಲಿಕವರ್ತ್ಮನಾ ॥
ಸ್ವಾರ್ಜಿತೈರ್ಗಂಧ ಪುಷ್ಪಾದ್ಯೈಶ್ಶುಭೈಶ್ಶಕ್ತ್ಯನುರೂಪತಃ ।
ಆರಾಧಯನ್ ಹರಿಂಭಕ್ತ್ಯಾ ಗಮಯಿಷ್ಯಾಮಿವಾಸರಾನ್ ॥

1. ೧. ಅಭಿಗಮನ, ೨. ಉಪಾದಾನ, ೩. ಇಜ್ಯಾ, ೪. ಸ್ವಾಧ್ಯಾಯ, ೫. ಯೋಗ.

**ಪ್ರಾತಃ**=ಪ್ರಾತಃಕಾಲದಲ್ಲಿ, **ಹರಿಂ**=ಪಾಪವನ್ನು ನಾಶ ಮಾಡುವವನಾದ ಭಗವಂತನನ್ನು, **ಅಭಿಗಚ್ಛನ್**=ಅಭಿಗಮನಾರಾಧನವನ್ನು ಮಾಡಿ, **ಪಶ್ಚಾತ್**= ಅನಂತರ, **ದ್ರವ್ಯಾಣಿ**=ಆರಾಧನೆಗೆ ಬೇಕಾದ ತುಳಸೀಪುಷ್ಪ ಮೊದಲಾದ ದ್ರವ್ಯ ಗಳನ್ನು **ಆರ್ಜಯನ್**=ಸಂಪಾದಿಸುವವನಾಗಿ (ಇದರಿಂದ ಎರಡನೆಯ ಉಪಾದಾನ ಕಾಲವು ಹೇಳಲ್ಪಟ್ಟಿತು), **ತತಃ**=ಆನಂತರ, **ದೇವಂ**=ಲೀಲಾಸಕ್ತನಾದ ಸರ್ವೇಶ್ವರ ನನ್ನು, **ಅರ್ಚಯನ್**=ಆರಾಧಿಸುವವನಾಗಿ (ಇದರಿಂದ ಮೂರನೆಯ ಇಜ್ಯಾಕಾಲವು ಬೋಧಿಸಲ್ಪಟ್ಟಿತು) **ತತಃ**=ಆಮೇಲೆ, **ಮನ್ತ್ರಾನ್‌ಜಪನ್ನಪಿ**= ಅಷ್ಟಾಕ್ಷರ. ದ್ವಯ ದ್ವಾದಶಾಕ್ಷರಾದಿ ಮಂತ್ರಗಳನ್ನು ಜಪ ಮಾಡುವವನಾಗಿ (ಇದರಿಂದ ಸ್ವಾಧ್ಯಾಯ ಕಾಲದ ಕಾರ್ಯವನ್ನು ಹೇಳಿದಂತಾಯಿತು) **ಪರಂದೇವಂ**=ಸರ್ವೋತ್ಕೃಷ್ಟನಾಗಿ ರುವ ಸರ್ವೇಶ್ವರನನ್ನು, **ಧ್ಯಾಯನ್ನಪಿ**=ಧ್ಯಾನಿಸುವವನಾಗಿ (ಯೋಗ ಕಾಲ) ಹೀಗೆ **ಉಕ್ತೇಷು ಪಂಚಸು ಕಾಲೇಷು**=ಹೇಳಲ್ಪಟ್ಟ ಐದು ಕಾಲಗಳಲ್ಲೂ, **ವರ್ತ ಮಾನಃ**=ಇರುವವನಾಗಿ, **ಸದಾಚ**=ಯಾವಾಗಲೂ, **ಏವಂ**=ಈ ಪ್ರಕಾರವಾಗಿ **ಪಾಂಚಕಾಲಿಕವರ್ತ್ಮನಾ**=ಐದು ಕಾಲಗಳಲ್ಲೂ ಆರಾಧಿಸುವ ಮಾರ್ಗದಿಂದ, **ಸ್ವಾರ್ಜಿತೈಃ**=ತನ್ನಿಂದಲೇ ಸಂಪಾದಿಸಲ್ಪಟ್ಟ—ಇತರರಿಂದ ಸಂಪಾದಿಸಲ್ಪಟ್ಟದ್ದು ಅಷ್ಟು ಪ್ರಶಸ್ತವಲ್ಲವೆಂಬುದು ಇದರಿಂದ ತೋರಿಸಲ್ಪಟ್ಟದ್ದಾಯಿತು, **ಶುಭೈಃ**= ಮಂಗಳಕರಗಳಾದ **ಗಂಧಪುಷ್ಪಾದ್ಯೈಃ**=ಗಂಧಪುಷ್ಪ ಮೊದಲಾದವುಗಳಿಂದ, ಧೂಪ ದೀಪ ನಿವೇದನ ಮೊದಲಾದವುಗಳು ಆದಿ ಶಬ್ದದಿಂದ ಹೇಳಲ್ಪಟ್ಟವು, **ಶಕ್ತ್ಯನುರೂಪತಃ**=ತನ್ನ ಶಕ್ತಿಗೆ ಅನುಸಾರವಾಗಿ ಹರಿಯನ್ನು **ಭಕ್ತ್ಯಾ**=ಭಕ್ತಿ ಯಿಂದ **ಆರಾಧಯನ್**=ಆರಾಧಿಸುವವನಾಗಿ **ವಾಸರಾನ್**=ದಿನಗಳನ್ನು **ಗಮ ಯಿಷ್ಯಾಮಿ**=ಕಳೆಯುವೆನು ಎಂದರೆ ಕಾಲಯಾಪನೆ ಮಾಡುವೆನು '**ಶಕ್ತ್ಯನು ರೂಪತಃ**'=(ದೇಹಾರೋಗ್ಯಕ್ಕೆ ಅನುಗುಣವಾಗಿ ಎಂದೂ ಅರ್ಥ). ಭಾಷ್ಯಕಾರರ ಅಭಿಪ್ರಾಯಕ್ಕೆ ಮೂಲವಾದ ಶ್ರೀ ವ್ಯಾಸಮಹರ್ಷಿಯು ಹೇಳಿರುವ ಪಾಂಚಕಾಲಿಕ ಅನುಷ್ಠಾನವನ್ನು ತಿಳಿಯೋಣ—'**ಬ್ರಾಹ್ಮೇ ಮುಹೂರ್ತೇ ಉತ್ಥಾಯ**=ಬ್ರಾಹ್ಮ ಮುಹೂರ್ತದಲ್ಲಿ ಹಾಸಿಗೆಯಿಂದ ಎದ್ದು' ಎಂದು ಆರಂಭಿಸಿ **ಅಥಾಗತ್ಯಗೃಹಂ ವಿಪ್ರಸ್ಸ ಮಾಚಮ್ಯ ಯಥಾವಿಧಿ । ಪ್ರಜ್ವಾಲ್ಯ ವಹ್ನಿಂ ವಿಧಿವತ್ ।** ಎಂದು ಮುಗಿಸಿ ಬೆಳಿಗ್ಗೆ ಹೋಮ ಪರ್ಯಂತ ಪೌರ್ವಾಹ್ಣಿಕ ಕ್ರಿಯಾಕಲಾಪವನ್ನೆಲ್ಲಾ ಹೇಳಿ '**ದೇವಾದೀನ್ನ ಮಸ್ಕೃರ್ಯಾದು ಪಹಾರಂ ನಿವೇದಯೇತ್ ॥** 'ಎಂದು ಅಭಿಗಮನವನ್ನು ಹೇಳಿ '**ಉಪೇಯಾದೀಶ್ವರಂಚಾಪಿ ಯೋಗಕ್ಷೇಮಾರ್ಥಸಿದ್ಧಯೇ । ಸಾಧಯೇ ದ್ವಿವಿಧಾನ ರ್ಥಾನ್ ।** ಎಂದು ಉಪಾದಾನವನ್ನು ಹೇಳಿ '**ತತೋ ಮಧ್ಯಾಹ್ನ ಸಮಯೇ**' ಆಮೇಲೆ ಮಧ್ಯಾಹ್ನದ ವೇಳೆಯಲ್ಲಿ ಎಂದಾರಂಭಿಸಿ '**ನವಿಷ್ಣಾರಾಧನಾತ್ಪುಣ್ಯಂ ವಿದ್ಯತೇಕರ್ಮ ವೈದಿಕಂ । ತಸ್ಮಾದನಾದಿಮಧ್ಯಾಂತಂ ನಿತ್ಯಮಾರಾಧಯೇದ್ಧರಿಂ ।**

ತದ್ವಿಷ್ಣೋರಿತಿ ಮಂತ್ರೇಣ ಸೂಕ್ತೇನ ಪುರುಷೇಣಚ । ನೈವಾಭ್ಯಾಂ ಸದೃಶೋ ಮಂತ್ರಃ ವೇದೇಷೂಕ್ತಶ್ಚತುರ್ಷ್ವಪಿ ॥ ಇವೇ ಮೊದಲಾದವು.

ಹೀಗೆ ಪಂಚಕಾಲ ಪರಾಯಣನಾಗಿ ಅಂದರೆ ಐದು ಕಾಲಗಳಲ್ಲೂ ಅನುಷ್ಠಿಸ ಬೇಕಾದ ಕಾರ್ಯಗಳನ್ನು ಮಾಡುತ್ತಾ, ನನಗೆ, ಹಿಂದಿನ ಕರ್ಮಕ್ಕೆ ಅನುಗುಣವಾಗಿ ಯಾವುದಾದರೂ ಕುಲದಲ್ಲಿ ಜನ್ಮ ಬರಲಿ, ನಿನ್ನನ್ನು ಬಿಟ್ಟು ಮತ್ತೊಬ್ಬನಿಗೆ ನನ್ನ ಶರೀರ, ಮನಸ್ಸು, ಮಾತು ಇವುಗಳಿಂದ ಯಾವುದನ್ನೂ ಮಾಡುವುದಿಲ್ಲ, 'ತನಕ್ಕೆ ಯಾಕವೆನ್ನೈಕೊಳ್ಳುಮೀತೇ—ಭಗವಂತನಿಂದ ತನ್ನ ಪ್ರಯೋಜನಕ್ಕಾಗಿಯೇ ನನ್ನ ಕೈಙ್ಕರ್ಯ ಸ್ವೀಕರಿಸಲ್ಪಡಬೇಕು. ಅದೇ ನನಗೆ ಪ್ರಯೋಜನ ಎಂಬ ಭಾವನೆ ಉಂಟಾಗ ಬೇಕು. ಮಮಕಾರವಿರಕೂಡದು, ಚಾರ್ವಾಕರಂತೆ ಮತ್ತೊಬ್ಬರ ಕೊಂಡಾಟಕ್ಕಾಗಿ ಮಾಡುವುದು ತತ್ತ್ವಜ್ಞಾನ, ವೈರಾಗ್ಯ ಇಲ್ಲದವರಂತೆ ಮತ್ತೊಂದು ಪ್ರಯೋಜನ ಕ್ಕಾಗಿ ಮಾಡುವುದು ಇವೆಲ್ಲಾ ಇಲ್ಲದಿರಬೇಕು. ಇವನನ್ನು ಬಿಟ್ಟು ಮತ್ತೊಬ್ಬರ ಕಾಲಿಗೆ ಬೀಳುವುದು ಪ್ರಪನ್ನನಿಗೆ ವಿರುದ್ಧವಾದದ್ದು. ಇದನ್ನೇ ಪೆರಿಯಾಳ್ವಾರವರು 'ಇನಿಪ್ಪೋಯ್ ಒರುವನ್ ತನಕ್ಕು ಪಣಿನ್ದು ಕಡೈತ್ತಲೈನಿರ್ಕ್ಕೈನಿನ್ ಶಾಯ್ಮೈ ಯಳಿವುಕಣ್ಡಾಯ್'—ನಿನ್ನ ದಾಸನಾದ ನನಗೆ ನಿನ್ನನ್ನು ಬಿಟ್ಟು ಇನ್ನೊಬ್ಬರನ್ನು ಆಶ್ರಯಿಸುವುದು ನಿನ್ನ ಅಸಾಮರ್ಥ್ಯವನ್ನು ಪ್ರಕಾಶ ಮಾಡತಕ್ಕದ್ದಾಗಿದೆ. ನಿನ್ನ ಕೈಙ್ಕರ್ಯದ ಅನುಷ್ಠಾನಕ್ಕೆ ಬೇಕಾದ ನಿನ್ನ ಕೃಪೆಗೆ ಪಾತ್ರನಾದ ನನಗೆ ಇನ್ನುಮೇಲೆ ಬೇರೆ ದೇವತೆಗಳ ಹತ್ತಿರ ಹೋಗಿ ಅವನನ್ನು ನಮಸ್ಕರಿಸಿ ಅವನ ಆಲಯದ ಬಾಗಿಲಿನಲ್ಲಿ ಅವನ ಹುಬ್ಬುಗಂಟಿನೊಡನೆ ಕೂಡಿದ ನೋಟಕ್ಕೆ ಸೇವಕ ನಂತೆ ನಿಲ್ಲುವುದು ನಿನ್ನ ತೇಜಸ್ಸಿಗೇ ಕುಂದಲ್ಲವೇ ? ಎಂದು ಪೆರಿಯಾಳ್ವಾರು ಹೇಳಿ ದ್ದಾರೆ.

ಕೂರೈಶೋರು ಇವ್ವೈ ವೇಣ್ಡುವತಿಲ್ಲೆ—ಕೈಙ್ಕರ್ಯದ ಫಲವಾಗಿ ಅನ್ನ ಬಟ್ಟೆ, ಇವನ್ನು ಅಪೇಕ್ಷಿಸುವುದಿಲ್ಲ. ಪ್ರಾರಬ್ಧ ಕರ್ಮಕ್ಕೆ ತಕ್ಕಂತೆ ಇವು ಸಿದ್ಧಿಸು ತ್ತವೆ. ಇವನ್ನು ಭಗವಂತನನ್ನು ಕೊಡೆಂದು ಪ್ರಾರ್ಥಿಸಕೂಡದೆಂದು ಅಭಿಪ್ರಾಯ.

ತತ್ಪಾದ ಭಕ್ತಿಜ್ಞಾನಾಭ್ಯಾಂ ಫಲಮನ್ಯತ್ಕದಾಚನ ।
ನಯಾಚೇತ್ಪುರುಷೋ ವಿಷ್ಣುಂ ಯಾಚನಾನ್ನಶ್ಯತಿಧ್ರುವಮ್ ॥

ಭಗವಂತನ ಕಮಲದಂತಿರುವ ಪಾದಗಳಲ್ಲಿ ನಿರಂತರವಾದ ಭಕ್ತಿ ಇರಬೇಕು. ಅವನ ವಿಷಯವಾದ ಅರಿವು ಇರಬೇಕು. ಇವೆರಡನ್ನೂ ಬಿಟ್ಟು ಬೇರೆ ಯಾವ ಪ್ರಯೋಜನವನ್ನೂ ಯಾವಾಗಲೂ ಬೇಡಕೂಡದು. ಹಾಗೆ ಬೇಡಿದರೆ ಖಂಡಿತ ವಾಗಿಯೂ ಹಾಳಾಗುತ್ತಾನೆ ಎಂದು ಬೇರೆ ಕಡೆ ಹೇಳಿದೆ.

ಬೇರೆ ದೇವತೆಯನ್ನು ಪೂಜಿಸಕೂಡದೆಂಬುದನ್ನು [1]ಉನ್ನಿತ್ತುಮತ್ತೋರ್ರು ದೈವಮ್‌ತೋಿಯಾಳ್ ಅವನ್ನೈಯಲ್ಲಾಲ್=ಅವನನ್ನು ಬಿಟ್ಟು ಬೇರೆ ದೇವತೆ ಯನ್ನು ಉದ್ದೇಶಮಾಡಿ—ಅಂದರೆ ಮನಸ್ಸಿನಲ್ಲಿ ನೆನೆದು ನಮಸ್ಕಾರ ಮಾಡುವುದಿಲ್ಲ. ಹಾಗೆ ಮಾಡಿದರೆ, ಪರಮೈಕಾಂತಿತ್ವಕ್ಕೆ ಅದು ಭಂಜಕ-ನಾಶ ಮಾಡತಕ್ಕದ್ದು ಎಂದು ತಿಳಿದು ಎಂದು ಅಭಿಪ್ರಾಯ. ಹೀಗೆಂದೂ, [2]ದೇವನ್ ಎಮ್ಬೆರುಮಾನುಕ್ಕಲ್ಲಾಲ್ ಪೂವುಮ್ ಪೂಶನೈಯುಮ್ ತಕುಮೋ=ನಾಲ್ಕು ಮುಖವುಳ್ಳ ಬ್ರಹ್ಮನಿಗೆ ತಂದೆ ಯಾಗಿ, ಯಾವ ವಿಧವಾದ ಉಪಾಧಿಯೂ (ಕಾರಣವೂ) ಇಲ್ಲದೆ ಪರದೇವತೆಯಾಗಿ ರುವ, ನಮಗೆ ಒಡೆಯನಾಗಿರುವ ಶ್ರಿಯಃಪತಿಯನ್ನು ಬಿಟ್ಟು ಹೂವೂ ಪೂಜೆಯೂ (ಬೇರೆ ದೇವತೆಗೆ) ತಕ್ಕದ್ದಾಗುತ್ತದೆಯೇ ? ಎಂದೂ [3]ಈನ್ರೋಳಿರುಕ್ಕಮಣೈ ನೀರಾಟ್ಟಿ=ಹೆತ್ತತಾಯಿ ಇರಲಾಗಿ ಅವಳನ್ನು ಬಿಟ್ಟು ಮರದಿಂದ ಮಾಡಲ್ಪಟ್ಟ ಅಚೇತನವಾದ ಪೀಠವನ್ನು ಸ್ನಾನಮಾಡಿಸುತ್ತಾರೇನು ? ಎಂದೂ, [4]ಮತ್ತಿಉಜ್ಞಾರ್ ಪುತುತ್ತೆಯ್‌ವಮ್ ಕೊಣ್ಡಾಡುಮ್ ತೊಣ್ಡೀರ್, ಪೆತ್ತತಾಯಿರುಕ್ಕಮಣೈವೆನ್ನೀ ರಾಟ್ಟುತಿರೋ=ಈ ಲೋಕದಲ್ಲಿ ಇದಕ್ಕಿಂತ ಹೊಸದಾದ ದೈವವನ್ನು ಕೊಂಡಾ ಡುವ, ಬಿಡಲು ತಕ್ಕ ಶಬ್ದಾದಿ ವಿಷಯಗಳಲ್ಲಿ ಚಾಪಲ್ಯವುಳ್ಳವರೇ ! ಹೆತ್ತತಾಯಿಯು ಇರಲಾಗಿ ಮಣೆಯನ್ನು ಬಿಸಿನೀರಿನಿಂದ ಸ್ನಾನಮಾಡಿಸುತ್ತಾರೇನು ? ಮಾಟ್ಟಾತ ತಕವತ್ತಿರೇ=ಭಗವತ್ಕೈಂಕರ್ಯವನ್ನು ಮಾಡದೆ ದಯೆಇಲ್ಲದವರೇ ! ಬ್ರಹ್ಮರುದ್ರ ಮುಂತಾದವರನ್ನೂ ಅವವರಿಗೆ ಒದಗಿದ ಕಷ್ಟಕಾಲದಲ್ಲಿ ಕಾಪಾಡಿದ, ತಾಯಿಗೆ ಸಮನಾದ, ದಯೆಯಿಂದ ಗರ್ಭದಲ್ಲಿರುವ ಶಿಶುವನ್ನು ಕಾಪಾಡುವಂತೆ ನಮ್ಮನ್ನು ಕಾಪಾಡುವವನನ್ನು ಬಿಟ್ಟು ಇವೇ ಮುಂತಾದವುಗಳಿಂದ ಆಳ್ವಾರುಗಳು ಹೇಳಿದ್ದಾರೆ.

ಮುಂದೆ ಆಳ್ವಾರುಗಳ ದಿವ್ಯ ಸೂಕ್ತಿ ಪ್ರಮಾಣಗಳು ಮಾತ್ರವೇ ಅಲ್ಲದೆ, ಅನ್ಯ ದೇವತಾ ಯಜನವನ್ನು ಮಹರ್ಷಿಯೂ ನಿಂದಿಸಿರುತ್ತಾರೆಂದು ಭಾರತ ಅನುಶಾಸನ ಪರ್ವದಲ್ಲಿ ಸಪ್ತರ್ಷಿಗಳ ಸಂವಾದದಲ್ಲಿ ಕಶ್ಯಪ ಮಹರ್ಷಿಯ ಶಪಥವನ್ನು ಆಚಾರ್ಯರು ಉದಾಹರಿಸುತ್ತಾರೆ, ಪ್ರಕರಣವೇನೆಂದರೆ, ಸಪ್ತರ್ಷಿಗಳಾದ ಅತ್ರಿ, ಅರುಂಧತೀ ಸಮೇತರಾದ ವಸಿಷ್ಠರು, ಕಶ್ಯಪ, ಭರದ್ವಾಜ, ಗೌತಮ, ವಿಶ್ವಾಮಿತ್ರ, ಜಮದಗ್ನಿ ಮೊದಲಾದವರು ವನದಲ್ಲಿ ಬಹಳವಾದ ಹಸಿವಿನಿಂದ ಪೀಡಿತರಾಗಿ ಸಂಚರಿಸುತ್ತಿದ್ದರು. ಆವಾಗ ಬಹಳ ಸ್ಥೂಲವಾದ ಶರೀರವುಳ್ಳವನಾಗಿ ಶುನಸ್ಸಖ

1. ತಿರು. ೪. ೬. ೧೦.
2. ತಿರು. ೨. ೨. ೪.
3. ತಿರು. ೨. ೨. ೪.
4. ಪೆರಿ. ತಿರು. ೧೧. ೬. ೬.

ನೆಂಬ ಹೆಸರಿನಿಂದ ಸನ್ಯಾಸವೇಷಧಾರಿಯಾದ ಇಂದ್ರನನ್ನು ಕಂಡು, ಆತನೊಂದಿಗೆ ಎಲ್ಲರೂ ಆಹಾರವನ್ನು ಹುಡುಕುವವರಾಗಿ ಒಂದು ತಾವರೆಕೊಳವನ್ನು ಸೇರಿದರು. ಅಲ್ಲಿ ಅಗ್ನಿ ಸಂಭೂತಳಾದ ಒಬ್ಬ ರಾಕ್ಷಸಿಯು ಇರಲು ಇವರು ಆಕೆಯನ್ನು ಒಂದೊಂದು ಕಮಲದಗೆಡ್ಡೆಯನ್ನು ಕೊಡಬೇಕೆಂದು ಪ್ರಾರ್ಥಿಸಿದರು. ಆಗ ರಾಕ್ಷಸಿಯು ನಿಮ್ಮ ಹೆಸರುಗಳೇನು, ಹಾಗೆ ಹೆಸರಾಗಲು ಕಾರಣವೇನೆಂದು ಕೇಳಲು ಎಲ್ಲರೂ ಕಾರಣ ಸಹಿತವಾಗಿ ತಮ್ಮ ಹೆಸರನ್ನು ಹೇಳಿ ಒಂದೊಂದು ತಾವರೆಗೆಡ್ಡೆಯನ್ನು ಪಡೆದರು. ಶುನಸ್ಸಖನು ತನ್ನ ಹೆಸರನ್ನು ಹೇಳುವಾಗ ಅದು ರಾಕ್ಷಸಿಗೆ ಸರಿಯಾಗಿರುವುದಾಗಿ ತೋರದಿರಲು ಆ ವೇಷದಲ್ಲಿದ್ದ ಇಂದ್ರನು ಕೋಪಗೊಂಡವನಾಗಿ ತನ್ನ ತ್ರಿದಂಡ ದಿಂದ ಹೊಡೆಯಲು ಆಕೆಯು ಭೂಮಿಯಲ್ಲಿ ಬಿದ್ದು ಭಸ್ಮವಾದಳು. ಅನಂತರ ಮಹರ್ಷಿಗಳು ಆ ಸರೋವರದಲ್ಲಿ ಮಿಂದು ಆಹ್ನಿಕಗಳನ್ನು ತೀರಿಸಿ ಕ್ಷುತ್ತಿನಿಂದ ಪೀಡಿತರಾಗಿ ಬಂದು ನೋಡಲು ತಾವರೆಗೆಡ್ಡೆಗಳೊಂದೂ ಇರಲಿಲ್ಲ. ಆಗ ಮಹರ್ಷಿ ಗಳೆಲ್ಲಾ ಶಪಥ ಮಾಡುತ್ತಾರೆ, ಏನೆಂದರೆ, "ಯಾವನು ಈ ತಾವರೆಗೆಡ್ಡೆಯ ಚೌರ್ಯವನ್ನು ಮಾಡಿರುತ್ತಾನೋ ಅವನು ಅಂತಹ ಅನರ್ಥಗಳನ್ನು ಅನುಭವಿಸಲಿ" ಎಂದು ತಾವು ಎಂದಿಗೂ ಈ ಕಳ್ಳತನವನ್ನು ಮಾಡಲಿಲ್ಲವೆಂಬುದಾಗಿ ಹೇಳುವ ಪ್ರಕರಣದಲ್ಲಿ ಕಶ್ಯಪರು ಮಾಡುವ ಶಪಥವು ಇದು.

**[1]ವಿಷ್ಣುಂ ಬ್ರಹ್ಮಣ್ಯ ದೇವೇಶಂ ಸರ್ವದೇವ ನಮಸ್ಕೃತಮ್ ।**
**ತ್ರೈಲೋಕ್ಯ ಸ್ಥಿತಿ ಸಂಹಾರ ಸೃಷ್ಟಿ ಹೇತುಂ ನಿರೀಶ್ವರಮ್ ॥**
**ಆಧಾತಾರಂ ವಿಧಾತಾರಂ ಸಂಧಾತಾರಂ ಜಗದ್ಗುರುಮ್ ।**
**ವಿಹಾಯ ಸಭಜತ್ವನ್ಯಂ ಬಿಸಸ್ತೈನ್ಯಂ ಕರೋತಿಯಃ ॥**
**ವಿಷ್ಣುಧರ್ಮಪರೋನಸ್ಯಾದ್ವಿಷ್ಣುಧರ್ಮಪರಾಙ್ಮುಖಃ ।**
**ಕುಧರ್ಮ (ವೃತ್ತ) ವ್ರತಶೀಲಸ್ಸ್ಯಾದ್ಬಿಸಸ್ತೈನ್ಯಂಕರೋತಿಯಃ ॥**

**ಯಃ**=ಯಾವನು, **ಬಿಸಸ್ತೈನ್ಯಂ ಕರೋತಿ**=ತಾವರೆಗೆಡ್ಡೆಯ ಕಳುವನ್ನು ಮಾಡಿರುತ್ತಾನೋ, **ಸಃ**=ಅವನು, **ಬ್ರಹ್ಮಣ್ಯ ದೇವೇಶಂ**=ಬ್ರಾಹ್ಮಣ, ದೇವತೆ ಗಳು ಇವರುಗಳಿಗೆಲ್ಲಾ ಸ್ವಾಮಿಯಾದ, **ಸರ್ವದೇವ ನಮಸ್ಕೃತಮ್**=ಬ್ರಹ್ಮರುದ್ರ ಇಂದ್ರಾದಿ ಸಕಲ ದೇವತೆಗಳಿಂದಲೂ, ನಮಸ್ಕೃತನಾದ **ತ್ರೈಲೋಕ್ಯ ಸ್ಥಿತಿಸಂಹಾರ ಸೃಷ್ಟಿಹೇತುಮ್**=ಮೂರು ಲೋಕಗಳ ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಕಾರಣಭೂತ ನಾದ **ನಿರೀಶ್ವರಂ**=ತನಗೆ ಯಾರೂ ನಿಯಾಮಕರಿಲ್ಲದೆ ಸರ್ವ ನಿಯಾಮಕನಾದ, **ಆಧಾತಾರಂ**=ಆಸಮಂತಾತ್‌ಧಾರಕಂ ಎಲ್ಲವನ್ನೂ ಪರಿಪೂರ್ಣವಾಗಿ ಧರಿಸಿ ಆಧಾರ ಭೂತನಾಗಿರುವ ಸ್ಥಿತಿ ನಿಯಾಮಕನಾದ, **ವಿಧಾತಾರಂ**=ಸೃಷ್ಟಿಕರ್ತನಾದ, **ಸಂಧಾ**

1. ಇತಿಹಾಸ ಸಮುಚ್ಚಯಮ್. ೧೨–೭೭.

ತಾರಂ=ಒಂದಾಗಿಮಾಡಿ ಧಾತಾರಂ ಎಂದರೆ ಪ್ರಳಯವನ್ನುಂಟು ಮಾಡುವವನಾದ, ಸಮಷ್ಟಿ ವ್ಯಷ್ಟಿ ಭೇದದಿಂದ ಪೌನರುಕ್ತ್ಯ ದೋಷದ ಪರಿಹಾರ, ಜಗದ್ಗುರುಂ= ಲೋಕಕ್ಕೆಲ್ಲಾ ಆದಿಗುರುವಾದ, ವಿಷ್ಣುಂ=ಶ್ರೀ ಮಹಾವಿಷ್ಣುವನ್ನು ವಿಹಾಯ= ಬಿಟ್ಟು ಅನ್ಯಂ=ತುಚ್ಛವಾದ ಅನ್ಯದೇವತೆಯನ್ನು, ಭಜತು=ಭಜಿಸಲಿ. ತಾವರೆ ದಂಟನ್ನು ಕಳವುಮಾಡಿದವನಿಗೆ ಸರ್ವೇಶ್ವರನನ್ನು ಬಿಟ್ಟು ಬೇರೆ ದೇವತೆಯನ್ನು ಭಜನ ಮಾಡಿದ ಮಹಾದೋಷವು ಬರಲಿ ಎಂಬ ಭಾವವು. ಇದರಿಂದ ಅನ್ಯದೇವತಾ ಭಜನವು ತುಂಬಾ ದೋಷವನ್ನು ಉಂಟುಮಾಡತಕ್ಕದ್ದೆಂದೂ ಮಾತಾ ಪಿತೃ ಗುರು ವಧೆಗಳಿಗೆ ಸಮಾನವಾದ ಮಹಾಪಾತಕವೆಂದೂ ಹೇಳಿದಂತಾಯಿತು. ಯಃ= ಯಾವನು, ಬಿಸಸ್ತೈನ್ಯಂ ಕರೋತಿ=ಕಮಲಗಳ ಕಳುವನ್ನು ಮಾಡಿರುತ್ತಾನೋ, ಸಃ=ಅವನು, ವಿಷ್ಣುಧರ್ಮಪರನು ನಸ್ಯಾತ್=ಆಗಬೇಡ. ಇಷ್ಟೇ ಅಲ್ಲ, ವಿಷ್ಣು ಧರ್ಮಕ್ಕೆ ಪರಾಙ್ಮುಖನೂ ಆಗಲಿ, ಕುಧರ್ಮ (ವೃತ್ತ) ವ್ರತಶೀಲಸ್ಯಾತ್=ಕೆಟ್ಟ ಮಾರ್ಗಗಳಲ್ಲಿ ಆತನಿಗೆ ಪ್ರವೃತ್ತಿಯುಂಟಾಗಲಿ ಎಂದರೆ ತಾನು ಕಳ್ಳತನ ಮಾಡಿದ್ದರೆ ತನಗೆ ಈ ಮಹಾದೋಷಗಳೆಲ್ಲಾ ಪ್ರಾಪ್ತವಾಗಲಿ ಎಂಬ ಭಾವವು.

ಆಗ ಇಂದ್ರನು ಆ ಮಹರ್ಷಿಗಳನ್ನು ಕುರಿತು ಈ ರಾಕ್ಷಸಿಯು ನಿಮಗೆ ತೊಂದರೆಮಾಡಿಯಾಳೆಂಬ ಭಯದಿಂದ ನಿಮ್ಮೊಡನೆ ಶುನಸ್ಸಖನಾಗಿ ಬಂದು ಆಕೆಯನ್ನು ಕೊಂದು ನಿಮ್ಮನ್ನು ರಕ್ಷಿಸಿರುವೆನು, ನಿಮ್ಮ ರಕ್ಷಣಾರ್ಥವಾಗಿ ನಿಮ್ಮೊಡನೆಯೇ ಇದ್ದೆನು. ಬಿಸಸ್ತೈನ್ಯವನ್ನು ನಿಮ್ಮ ಪರೀಕ್ಷಾರ್ಥವಾಗಿ ಮಾಡಿದವನು ನಾನೇ ನೀವು ಯಾರೂ ಅಲ್ಲ. ಇದರಿಂದ ನೀವು ತಿಳಿಯತಕ್ಕದ್ದೇನೆಂದರೆ ಎಂತಹ ಕಷ್ಟವಾದ ಅವಸ್ಥೆಯಲ್ಲಾಗಲಿ ಲೋಭವನ್ನು ಬಿಡತಕ್ಕದ್ದು ಎಂದು ಹೇಳಿ ಹೊರಟು ಹೋದನು.

ಅನ್ಯಕೀರ್ತನವು ಕೂಡದು ಎಂಬುದನ್ನು [1]"ವಾಯ್ ಅವನ್ನೈಯಲ್ಲತು ವಾಳತ್ತಾತು=ವಾಗಿಂದ್ರಿಯವು ಅವನನ್ನು ಬಿಟ್ಟು ಅಂದರೆ ಭಗವಂತನನ್ನು ಬಿಟ್ಟು ಮತ್ತಾರನ್ನೂ ಸ್ತೋತ್ರಮಾಡುವುದಿಲ್ಲ ಎಂದೂ, [2]ಶೊನ್ನಾಲ್‌ವಿರೋತಮ್=ಎಂಬ ಪಾಶುರದಲ್ಲಿ, ಎನ್ನಾವಿಲಿನ್ಕವಿಯಾನೊರುವರ್‌ಕ್ಕುಮ್ ಕುರುಕಿಲ್ಲೇನ್=ಎನ್-ಮಮ, ನಾವಿಲ್=ನಾಲಿಗೆಯಲ್ಲಿ, ಇನ್ಕವಿ=ಮಧುರವಾದ ಕವಿತ್ವವು, ಯಾನ್= ನಾನು, ಒರುವರ್ಕ್ಕುಮ್=ಬೇರೆ ಒಬ್ಬರಿಗೂ, ಕುರುಕಿಲೇನ್=ವಿಷಯವನ್ನಾಗಿ ಮಾಡಲಾರೆ" ಎಂಬುದಾಗಿ ಆಳ್ವಾರುಗಳ ಮಾತು.

1. ಮುದಲ್ ತಿರುವನ್ದಾದಿ. ೧೧.
2. ತಿರುವಾಯ್‌ಮೊಳಿ. ೩-೯-೧.

ಈ ಆರಾಧನ ಕ್ರಮಗಳಲ್ಲಿ ಅಧಿಕಾರವಿಲ್ಲದ ಹೆಂಗಸರೇ ಮೊದಲಾದವರೂ, ಗುರು ಪರಮ್ಪರೆಯನ್ನು ಅನುಸಂಧಾನಮಾಡುವುದು, ನೂರೆಂಟು ದಿವ್ಯದೇಶಗಳ ಅನುಸಂಧಾನ, ಸ್ನಾನ, ದ್ವಾದಶ ಊರ್ಧ್ವಪುಂಡ್ರಧಾರಣ, ಭಗವತ್ಪ್ರಬಂಧ ಗಳನ್ನು ಅನುಸಂಧಾನ ಮಾಡುವುದು, ಹೂವು ತುಲಸಿ ಮುಂತಾದವನ್ನು ತರುವುದು. ಭಗವಂತನ ಆರಾಧನ ಮೊದಲಾದ ತಮಗೆ ತಕ್ಕ ನಿತ್ಯ ನೈಮಿತ್ತಿಕ ಕರ್ಮಗಳ ಆಚ ರಣೆ, ಭಗವಂತನ ನಾಮ ಸಂಕೀರ್ತನ ಮಾಡುವುದು. ಮಾಲೆಯನ್ನು ಕಟ್ಟುವುದು. ದೀಪವನ್ನು ಹಚ್ಚುವುದು, ಭಗವಂತನ ಮಂದಿರವನ್ನು ಸಾರಿಸಿ ಶುದ್ಧಿಮಾಡುವುದು, ಸಮಾರಾಧನಕ್ಕೆ ಯೋಗ್ಯರಾದ ಪರಮಭಾಗವತರ ಅಧೀನದಲ್ಲಿದ್ದು ಸಾಧ್ಯವಾದ ಕೈಂಕರ್ಯವನ್ನು ಮಾಡುವುದು ಇವುಗಳಿಂದ ಸಿದ್ಧಿಯನ್ನು ಪಡೆಯಬಹುದು.

ಭಗವದ್ಭಕ್ತರ ಆರಾಧನೆಯು ಭಗವಂತನ ಆರಾಧನಕ್ಕಿಂತಲೂ ಮಿಗಿಲಾ ದುದು ಎಂಬುದನ್ನು—

[1]ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಮ್ ।
ತಸ್ಮಾತ್ಪರತರಂ ಪ್ರೋಕ್ತಂ ತದೀಯಾರಾಧನಂ ಪರಮ್ ॥

ಎಂಬ ಪ್ರಮಾಣ ವಚನದಿಂದ ಅರಿಯಬಹುದು.

ಈ ರೀತಿ ಆರಾಧನ ಯೋಗ್ಯರಾದ ಪರಮಭಾಗವತರಿಗೆ ಪರತಂತ್ರರಾಗಿ ಇರು ವುದು ಮಾತ್ರದಿಂದಲೇ ಆ ಕೈಙ್ಕರ್ಯದ ಫಲ ಸಿದ್ಧಿಸುತ್ತದೋ ಎಂದರೆ ಜಗತ್ತನ್ನು ಸೃಷ್ಟಿಸಿದ ಭಗವಂತನಿಗೆ ವಿಚಿತ್ರವಾದ ಜಗತ್ತನ್ನು ನೋಡುವಿಕೆಯಿಂದ ಉಂಟಾದ ಪ್ರೀತಿಯಂತೆ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯವಿಲ್ಲದ, ಅದರ ಪ್ರಸಕ್ತಿಯೇ ಇಲ್ಲದ ನಿತ್ಯರಿಗೂ ಮುಕ್ತರಿಗೂ ಕೂಡ ಅದನ್ನು ನೋಡುವುದರಿಂದ ಉಂಟಾಗುವ ಪ್ರೀತಿಯು ಹೇಗೆ ಒಂದೇ ಸಮನಾಗಿ ಇದೆಯೋ ಹಾಗೆಯೇ ಇವರಿಗೂ ಫಲ ಸಿದ್ಧಿಸು ವುದರಲ್ಲಿ ಅಡ್ಡಿ ಇಲ್ಲ.

[2]ಧರ್ಮಶ್ಶ್ರುತೋವಾದೃಷ್ಟೋವಾ ಸ್ಮೃತೋವಾ ಕಥಿತೋಽಪಿವಾ ।
ಅನುಮೋದಿತೋವಾ ರಾಜೇನ್ದ್ರ ಪುನಾತಿ ಪುರುಷಂ ಸದಾ ॥

ಧರ್ಮಾನುಷ್ಠಾನವನ್ನು ತಾನೇ ಮಾಡಬೇಕೆಂಬ ಆವಶ್ಯಕತೆಯು ಇರುವುದಿಲ್ಲ. ಅದನ್ನು ಕೇಳಿದರೂ ಸರಿಯೇ, ಅಥವಾ ಕಣ್ಣಿನಿಂದ ನೋಡಿದರೂ ಸರಿಯೇ ಅದನ್ನು

1. ಪಾದೋತ್ತರಮ್. ೨೯–೮೧.
2. ಭಾರತಮ್ ಆಶ್ವಮೇಧಿಕ ೯೬–೩೧. ೧೧೮–೧೪,

ಸ್ಮರಿಸಿದರೂ ಸರಿಯೇ ಅದನ್ನು ಪಠಿಸಿದರೂ ಸರಿಯೇ ಅಥವಾ ಅದನ್ನು ಅಙ್ಗೀಕರಿಸಿದರೂ ಸರಿಯೇ ಈತನಿಗೆ ಪಾಪವು ಪರಿಹಾರವಾಗಿ ಅದರ ಮೂಲಕ ಪವಿತ್ರತೆ ಉಂಟಾಗುತ್ತದೆಂದು ಹೇಳಲ್ಪಟ್ಟಿದೆ. ಆದುದರಿಂದ ಈ ಭಗವದಾರಾಧನಾದಿಗಳಲ್ಲಿ ಅಧಿಕಾರವಿರುವವರಿಗೂ ಅಧಿಕಾರವಿಲ್ಲದವರಿಗೂ ಭೋಗ್ಯತ್ವವು ಸಮವೆಂದು ಹೇಳುವುದಕ್ಕೆ ಏನೂ ಕುಂದಿಲ್ಲ.

ಹೇಗೆ ಭಾಗವತರಿಗೆ ಕಿಂಚಿತ್ಕಾರ—ಯಥೋಚಿತವಾದ ವ್ಯಾಪಾರ ವಿಶೇಷ —ಸೇವೆ ಮಾಡುವುದರಿಂದಲೇ ಕೆಲವರಿಗೆ ಪಾಂಚಕಾಲಿಕವಾದ ಭಗವತ್ಕೈಙ್ಕರ್ಯದ ಸಿದ್ಧಿಯುಂಟಾಗುತ್ತದೋ ಪ್ರಮಾಣ ಬಲದಿಂದ, ಹಾಗೆಯೇ ಪ್ರಣವ, ಸ್ವರ, ಋಷ್ಯಾದಿಗಳು ನ್ಯಾಸ ಮುಂತಾದವು ಇಲ್ಲದೆ ಮೂಲ ಮಂತ್ರ ಜಪದಿಂದ ಫಲಸಿದ್ಧಿಯುಂಟು. "ನಮೋ ನಾರಾಯಣೇತ್ಯುಕ್ತ್ವಾ ಶ್ವಪಾಕಃ ಪುನ ರಾಗಮತ್—ಪ್ರಣವ, ಚತುರ್ಥಿಗಳಿಲ್ಲದೆ ಸ್ವರದಿಂದಲೂ ಉಚ್ಚರಿಸದೆ ಸುಮ್ಮನೆ 'ನಮೋ ನಾರಾಯಣಾ' ಎಂದು ಇಷ್ಟು ಮಾತ್ರ ಉಚ್ಚರಿಸಿದರೆ, ಶ್ವಪಾಕಃ—ನಾಯಿ ಮಾಂಸವನ್ನು ತಿನ್ನುವ ಚಂಡಾಲನೂ ಕೂಡ, ಪುನರಾಗಮತ್—ಪುನಃ ಹಿಂದಿರುಗಿ ಬಂದನು." ಹಾಗೆ ಮಂತ್ರವನ್ನು ಉಚ್ಚರಿಸಿದುದರಿಂದ ಅಧೋಗತಿಯಿಂದ ಹಿಂತಿರುಗಿದನು ಎಂಬ ಭಾವವು ಎಂಬುದಾಗಿ ವರಾಹ ಪುರಾಣದಲ್ಲಿ ಹೇಳಿದೆ.

[1]"ವಾಯಿನಾಲ್ ನಮೋನಾರಣಾವೆನ್ರು ಮತ್ತಕತ್ತಿಡೈಕ್ಕೈಕಳ್ಕೈಕೂಪ್ಪಿ— ವಾಯಿನಾಲ್—ಮಾತಿನಿಂದ, ನಮೋನಾರಣಾವೆನ್ರು—ನಮೋನಾರಾಯಣ ಎಂದು ಹೇಳಿ, ಮತ್ತ ಕತ್ತಿಡ—ತಲೆಯ ಮೇಲೆ ಕೈಕಳ್ಕೈ—ಎರಡೂ ಕೈಗಳನ್ನೂ ಕೂಪ್ಪಿ— ಕೂಡಿಸಿ ನಾಮವನ್ನು ಹೇಳಿದರೆ, ಎಂದೂ ಆಳ್ವಾರರ ಸೂಕ್ತಿ.ತಿರುಮಙ್ಗೈಯಾಳ್ವಾರ್ ಅನುಗ್ರಹಿಸಿರುವ ಪೆರಿಯ ತಿರುಮೊಳಿ ಆರಾಂಪತ್ತು ಪತ್ತಾನ್ದಿರುಮೊಳಿಯ ಪ್ರತಿಯೊಂದು ಪಾಶುರದಲ್ಲೂ "[2]ನಾಮಮ್ ಶೊಲ್ಲಿಲ್ ನಮೋ ನಾರಾಯಣಮೇ"— ಎಂದು ಪಲ್ಲವೀ ರೂಪದಲ್ಲಿ ಇರುತ್ತದೆ. ಹೀಗೆ "ನಾಮಮ್ ಶೊಲ್ಲಿಲ್"—ಪರಮ ಪುರುಷನ ನಾಮಗಳನ್ನು ಹೇಳಲಾಗಿ ನಮಗೆ ಇಷ್ಟಾರ್ಥ ಸಿದ್ಧಿಯುಂಟು. ಅವನು ಎಂತಹವನೆಂದರೆ, ಶ್ರಿಯಃ ಪತಿಯಾಗಿ, ಆಶ್ರಿತ ಸುಲಭನಾಗಿ, ಅತಿಮಾನುಷಚೇಷ್ಟಿತಗಳನ್ನು ನಡೆಸುವ ಸಾಮರ್ಥ್ಯವುಳ್ಳವನಾಗಿ, ವಿರೋಧಿಗಳನ್ನು ನಿರಸನ ಸ್ವಭಾವವುಳ್ಳವನಾಗಿ ನಿತ್ಯ ವಿಭೂತಿ ಲೀಲಾ ವಿಭೂತಿಗಳೆರಡಕ್ಕೂ ಒಡೆಯನಾಗಿರುತ್ತಾನೆ. ಭಗವಂತನ ಹೆಸರನ್ನು ಹೇಳಬೇಕಾದಲ್ಲಿ ನಮೋ ನಾರಾಯಣಾಯ ಎಂದೇ ಹೇಳಿ ಎನ್ನುತ್ತಾರೆ ಆಳ್ವಾರು.

---

1. ಪೆರಿಯಾಳ್ವಾರ್ ತಿರುಮೊಳಿ. ೪-೫-೨.
2. ಪೆರಿಯತಿರುಮೊಳಿ. ೬-೧೦-೧.

ಹೆಂಗಸರೇ ಮುಂತಾದವರಿಗೆ ಇದನ್ನು ಪೂರ್ಣವಾಗಿಯೂ ಸ್ವರಾದಿಗಳೊಡನೆಯೂ ಉಚ್ಚರಿಸಲು ಅಧಿಕಾರವಿಲ್ಲ ಎಂದು ಮಹಾಭಾರತ, ನಾರದೀಯ ಮತ್ತು ವರಾಹ ಪುರಾಣ ಇವುಗಳಲ್ಲಿ ಹೇಳಿದೆ. ಎಂಟು ಗಂಟುಳ್ಳ ಅಂದರೆ ಎಂಟು ಪರ್ವವುಳ್ಳ ಕಬ್ಬಿನ ಜಲ್ಲೆಯಲ್ಲಿ ಮೂಲಭಾಗವನ್ನೂ ತುದಿಯ ಭಾಗವನ್ನೂ ಮತ್ತು ಎಲೆಗಳನ್ನೂ ಕತ್ತರಿಸಿದರೆ ನಡುವೆ ಇರುವ ಭಾಗವು ಎಲ್ಲರಿಗೂ ರುಚಿಕರವಾಗಿ ಉಪಜೀವ್ಯವಾಗಿರುವಂತೆ ಈ ಅಷ್ಟಾಕ್ಷರವುಳ್ಳ ಮೂಲ ಮಂತ್ರವೂ ಬುಡದಲ್ಲಿ ಪ್ರಣವವನ್ನೂ ತುದಿಯಲ್ಲಿ ಚತುರ್ಥಿಯನ್ನೂ ಬಿಟ್ಟು ಉಚ್ಚರಿಸಿದರೆ ಪ್ರಪತ್ತಿ ನಿಷ್ಠರೆಲ್ಲರಿಗೂ ಭಗವಂತನ ಅನುಭವದ ಸ್ಮರಣೆಯ ರಸಕ್ಕೆ ಯಾವ ಅಡ್ಡಿಯೂ ಇಲ್ಲ. ಪರಿಕರದೊಡನೆ ಕೂಡಿದ ವಿಲಕ್ಷಣವಾದ ಭಕ್ತಿಯೋಗವಾದರೆ ತಾನೇ ಕೆಲವರಿಗೆ ವಿರೋಧ. ಕ್ಷಣಮಾತ್ರದಿಂದ ಸಾಧಿಸಲ್ಪಡತಕ್ಕ ಪ್ರಪದನವು ಸಿದ್ಧವಾದರೂ [1]"ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ"= ಅರ್ಥವನ್ನು ಮನಸ್ಸಿನಲ್ಲಿ ನೆನೆಯುತ್ತಾ ದ್ವಯಮಂತ್ರವನ್ನು ಯಾವಾಗಲೂ ಹೇಳುತ್ತಿರು ಎಂದು ಶರಣ್ಯನು ಹೇಳಿದ್ದಾನಲ್ಲವೇ ? ಆದುದರಿಂದ 'ಧ್ಯೇಯೋ-ನಾರಾಯಣಸ್ಸದಾ=ನಾರಾಯಣನು ಯಾವಾಗಲೂ ಧ್ಯಾನಮಾಡಲು ತಕ್ಕವನು, ನಾರಾಯಣನನ್ನು ಯಾವಾಗಲೂ ಚಿಂತಿಸುತ್ತಿರು' ಎಂದು ಹೇಳಿರುವುದೂ ಅಧಿಕಾರಕ್ಕೆ ತಕ್ಕಂತೆ ಕೆಲವರಿಗೆ ಉಪಾಯವಾಗಿಯೂ, ಕೆಲವರಿಗೆ ಅಭಿಗಮನಾದಿಗಳಂತೆ ಫಲರೂಪವಾಗಿಯೂ ಸ್ವೀಕರಿಸುವುದರಿಂದ ಇದು ಸ್ವತಂತ್ರ ಪ್ರಪತ್ತಿಗೆ ವಿರುದ್ಧವಲ್ಲ, ರಾಮಾನುಜರು ಈ ಪ್ರಪತ್ತಿಯು ಅಂಗವಾಗಿರುವ ರೂಪವನ್ನು-ಸ್ವಭಾವವನ್ನು ಶ್ರೀಭಾಷ್ಯ ಗೀತಾಭಾಷ್ಯಾದಿಗಳಲ್ಲಿ ಉದಾಹರಿಸಿದರು. ಸ್ವತಂತ್ರವಾಗಿರುವ ರೂಪವನ್ನು ಗದ್ಯದಲ್ಲಿ ಹೇಳಿದರು.

ಈ ರೀತಿ ಸ್ವತಂತ್ರ ಪ್ರಪತ್ತಿ ಎಂಬುದುಉಂಟಾದರೆ,

**[2]ಕ್ಲೇಶಾನಾಂಚ ಕ್ಷಯಕರಂ ಯೋಗಾದನ್ಯನ್ನ ವಿದ್ಯತೇ ।**

ಕಷ್ಟಗಳನ್ನೂ ಕರ್ಮಗಳನ್ನೂ ನೀಗಿಸುವುದು ಭಕ್ತಿಯೋಗವೆಂಬುದೊಂದೇ ಉಪಾಯ, ಮತ್ತೊಂದಿಲ್ಲ, ಎಂಬುದಾಗಿ ಹೇಳಿರುವ ಪ್ರಮಾಣಗಳ ಗತಿಯೇನು ? ಎಂದರೆ ಅದು ಸಾಮರ್ಥ್ಯವುಳ್ಳ ಬೇರೆ ಅಧಿಕಾರಿಯನ್ನು ಕುರಿತು ಹೇಳಿದ್ದು. ಅಕಿಂಚನನಿಗೆ ಅಲ್ಲ, ಸಕಿಂಚನನಿಗೆ ಹೇಳಿರುವುದು.

1. ಶರಣಾಗತಿಗದ್ಯಮ್

2. ವಿಷ್ಣುಪುರಾಣಮ್. ೬-೭-೨೫.

ಆದುದರಿಂದ ಎಲ್ಲಾ ಇಷ್ಟಾರ್ಥವನ್ನೂ ಉಂಟುಮಾಡಿಕೊಡುವ ಸ್ವತಂತ್ರ ಪ್ರಪತ್ತಿ ವಿಷಯವಾದದ್ದು ಈ ಶ್ಲೋಕ—

**ಸುದುಷ್ಕರೇಣ ಶೋಚೇದ್ಯೋ ಯೇನ ಯೇನೇಷ್ಟಹೇತುನಾ ।**
**ಸಸತಸ್ಯಾಹ ಮೇವೇತಿ ಚರಮಶ್ಲೋಕ ಸಂಗ್ರಹಃ ॥**

ಇದರ ಅರ್ಥ :—ಸುದುಷ್ಕರೇಣ=ಬಹಳ ಕಷ್ಟದಿಂದಲೂ ಸಾಧಿಸಲಾಗದ, ಯೇನ ಯೇನ ಇಷ್ಟಹೇತುನಾ=ಮೋಕ್ಷವೇ ಮೊದಲಾದ ಯಾವ ಯಾವ ಇಷ್ಟವನ್ನೂ ಉಂಟುಮಾಡುವುದಕ್ಕೆ ಕಾರಣವಾದ ಕರ್ಮಯೋಗವೇ ಮೊದಲಾದವುಗಳಿಂದ, ಯಃ=ಯಾವನು, ಶೋಚೇತ್=ದುಃಖಪಡುತ್ತಾನೋ ಅಂತಹ ಅಧಿಕಾರಿಗೆ, ಅಕಿಂಚನನಿಗೆ ಅಹಮೇವ—ನಾನೇ ಆ ಆ ಇಷ್ಟಾರ್ಥದ ಉಪಾಯ, ಇತಿ= ಹೀಗೆಂಬುದು ಚರಮಶ್ಲೋಕದ ಸಾರ.

ಇದು ಅಭಿಪ್ರಾಯ— ಅಲೌಕಿಕ ಶ್ರೇಯಸ್ಸಿಗೆ ಸಾಧನವಾದ ಎಲ್ಲಾ ಧರ್ಮಗಳನ್ನೂ ಆಚರಿಸಲು ಶಕ್ತಿ ಇಲ್ಲದೆ ಬಿಟ್ಟು ದುಃಖಪಡುವ, ಅಕಿಂಚನನಿಗೆ ನನ್ನನ್ನೊಬ್ಬನನ್ನೇ ಉಪಾಯವನ್ನಾಗಿ ವರಿಸುವವನಿಗೆ ಆ ಆ ಉಪಾಯಸ್ಥಾನದಲ್ಲಿ ನಿಂತು ನಾನೇ, ಆ ಆ ಇಷ್ಟಾರ್ಥಗಳು ಈಡೇರಲು ಅಡ್ಡಿಯನ್ನುಂಟುಮಾಡುವ ಪಾಪಗಳನ್ನು ಹೋಗಲಾಡಿಸಿ ಆ ಆ ಫಲಗಳನ್ನು ಕೊಡುತ್ತೇನೆ ಎಂಬುದು ಶರಣ್ಯನ ತಾತ್ಪರ್ಯ.

ಇಲ್ಲಿಗೆ ಪ್ರಪತ್ತಿಯ ಸಂಕ್ಷೇಪವಾದ ವಿವರಣೆ ಮುಗಿಯಿತು.

—□—

**ಸಾರಾಂಶ** :—ಇಲ್ಲಿಯವರೆಗೂ ವಿವರಿಸಿದ ರೀತಿಯಲ್ಲಿ ಭಕ್ತಿಪ್ರಪತ್ತಿಗಳಿಗೇ ಮೋಕ್ಷವನ್ನುಂಟುಮಾಡಿಕೊಡುವ ಸಾಧನತ್ವ ಏರ್ಪಡುವುದರಿಂದ ಇತರರು ಹೇಳುವ ಉಪಾಯಗಳನ್ನು ನಿರಸನಮಾಡಿದಂತಾಯಿತು. ಹೇಗೆ ಎಂದರೆ, ವೇದವನ್ನು ಪ್ರಮಾಣವಾಗಿ ಒಪ್ಪದವರ ಮಧ್ಯದಲ್ಲಿ ಕೆಲವರ ಮತದಲ್ಲಿ (ನಾಸ್ತಿಕ) ದೇಹಕ್ಕಿಂತ ಬೇರೆಯಾದ ಆತ್ಮವನ್ನು ಒಪ್ಪದಿರುವುದರಿಂದ ಮೋಕ್ಷಕ್ಕಾಗಿ ಪ್ರವೃತ್ತಿಯೇ ಉಂಟಾಗುವಂತಿಲ್ಲ. ಬೇರೆ ಕೆಲವರ ಮತದಲ್ಲಿ, (ಬೌದ್ಧ) ಜ್ಞಾನ ಕ್ಷಣಿಕ, ಅದೇ ಆತ್ಮ ಎಂಬುದು ಅವರ ಮತವಾದುದರಿಂದ ಮೋಕ್ಷಕ್ಕಾಗಿ ಪ್ರವರ್ತಿಸುವದು ಯಾವುದು ? ಜ್ಞಾನ ಸಂತಾನಕ್ಕೆ ಎಂದರೆ ಅದು ಸರಿಯಲ್ಲ. ಜ್ಞಾನವು ಕ್ಷಣಕಾಲ ಮಾತ್ರ ಇದ್ದು ನಷ್ಟವಾಗುತ್ತದಲ್ಲವೇ ? ಆತ್ಮನಾಶವಾಯಿತಲ್ಲ ! ಇನ್ನೊಬ್ಬನನ್ನು ಕುರಿತು ಮತ್ತೊಬ್ಬನಿಂದ ಯತ್ನವು ಮಾಡತಕ್ಕದಲ್ಲ. ಆದುದರಿಂದ ಪ್ರವೃತ್ತಿ ಇಲ್ಲ. ಮಗದೊಬ್ಬರ ಮತದಲ್ಲಿ (ಜೈನ) ಧರ್ಮ ಅಧರ್ಮ ಸತ್ವ ಅಸತ್ವ ಇವೇ ಮೊದಲಾದ ಸಪ್ತಭಂಗಿ ರೀತಿಯಿಂದ ಅನೇಕಾಂತವಾದವಾಯಿತು. ಅದರಿಂದ ಪ್ರವೃತ್ತಿ ಇಲ್ಲ.

ವೈಶೇಷಿಕಾದಿಗಳ ಪಕ್ಷದಲ್ಲಿ ಮೋಕ್ಷವು ಪಾಷಾಣ ಕಲ್ಪವಾದದ್ದು—ಗುಂಡು ಕಲ್ಲಿನಂತೆ ಅಗುವುದೇ ಮೋಕ್ಷ. ಇದು ಮೋಕ್ಷವಾದರೆ ಯಾವನಿಗೆ ತಾನೇ ಇಂತಹ ಮೋಕ್ಷವನ್ನು ಪಡೆಯಬೇಕೆಂಬ ಆಸೆ ಉಂಟಾದೀತು ? ಅದಕ್ಕಾಗಿ ಯಾವನೂ ಪ್ರವರ್ತಿಸಲೂ ಆರ.

ಸಾಂಖ್ಯಾದಿ ಪಕ್ಷದಲ್ಲಿ, ಈಶ್ವರನನ್ನು ಅವರು ಒಪ್ಪದೆ ಇರುವುದರಿಂದ ಪುರುಷನಿಗೆ ಮೋಕ್ಷವೋ ಅಥವಾ ಪ್ರಕೃತಿಗೋ ಎಂಬ ಸಂಶಯವುಂಟಾಗುವುದರಿಂದ ಪ್ರವೃತ್ತಿ ಇಲ್ಲ. ಮಾಯಿ ಮತದಲ್ಲಿ ವ್ಯಾವಹಾರಿಕ ವಾಕ್ಯಕ್ಕೆ ಪಾರಮಾರ್ಥಿಕವಾದ ಅಭೇದ ಜ್ಞಾನವನ್ನು ಉಂಟುಮಾಡುವಿಕೆ ಕೂಡುವುದಿಲ್ಲವಾದುದರಿಂದ ಪ್ರವೃತ್ತಿ ಇಲ್ಲ.

ಭಾಸ್ಕರ ಯಾದವರಿಂದ ಹೇಳಲ್ಪಟ್ಟ ಕರ್ಮ ಜ್ಞಾನ ಸಮುಚ್ಚಯವಾದವೂ ಹೇಳಿದ ನ್ಯಾಯದಿಂದ ನಿರಸನ ಮಾಡಲ್ಪಟ್ಟಿತು.

ಶೈವಮತದಲ್ಲಾದರೋ ಪ್ರಾಪ್ಯನು—ಹೊಂದಲ್ಪಡತಕ್ಕವನು ಪಶುಪತಿ. ಅಲ್ಲದೆ ವೇದ ವಿರುದ್ಧವಾದ ಭಸ್ಮಧಾರಣ, ಸುರಾ ಕುಂಭಸ್ಥಾಪನಾದಿಗಳಿಗೆ ಸಾಧನ ವಾಗಿರುವಿಕೆಯನ್ನು ಹೇಳಿರುವುದರಿಂದ ಅವುಗಳ ನಿರಾಸವಾಯಿತು.

ಈ ಗ್ರಂಥದ ಮೊದಲಿನ ಭಾಗದಲ್ಲಿ, ಆರು ವಿಧ ದ್ರವ್ಯಗಳಲ್ಲಿ ಪ್ರಕೃತಿ ಮತ್ತು ಕಾಲ ಎಂಬ ಎರಡು ಜಡ ದ್ರವ್ಯಗಳನ್ನು ನಿರೂಪಿಸಿದ್ದಾಯಿತು ಹಾಗೆಯೇ ಅಜಡ ಜಡ ದ್ರವ್ಯ ಗಳಲ್ಲಿ ನಿತ್ಯ ವಿಭೂತಿಯನ್ನೂ ಧರ್ಮ ಭೂತ ಜ್ಞಾನವನ್ನೂ ಸಾಮಾನ್ಯ ವಾಗಿ ಅರಿತಿದ್ದಾಯಿತು.

ಈ ರೀತಿ ಮತಿಯು ನಿರೂಪಿಸಲ್ಪಟ್ಟಿತು.

ಈ ರೀತಿ ಬೇರೆ ಬೇರೆಯಾಗಿದ್ದು,—ಈ ಪ್ರತೀತಿಯಿಂದ ಜ್ಞಾನದಿಂದ, ದೇಹದಿಂದ ಬೇರೆಯಾದವನು ಆತ್ಮ ಎಂದು ತೋರುತ್ತದಲ್ಲವೇ ?

## ಪರಿಪೂರ್ಣಬ್ರಹ್ಮಾನುಭವ

ಈ ರೀತಿ ಭಕ್ತಿಪ್ರಪತ್ತಿಗಳಿಂದ ವಶೀಕೃತನಾದ ಪರಬ್ರಹ್ಮನು, ಪರ್ಯಙ್ಕ ವಿದ್ಯೆಯಲ್ಲಿ ಹೇಳಿದ ರೀತಿಯಲ್ಲಿ ಈ ಜೀವನು ತನ್ನ ಹತ್ತಿರಕ್ಕೆ ಬಂದುದನ್ನು ಅನು ಮೋದಿಸುತ್ತಾನೆಂದೂ, ಆಜೀವನಿಗೆ ಗುಣಾಷ್ಟಕಗಳ ಆವಿರ್ಭಾವವಾಗುತ್ತದೆಂದೂ ಹಿಂದೆ ಹೇಳಿದ್ದಾಯಿತು. ಭಗವಂತನು ತನ್ನ ದಿವ್ಯಚರಿತ್ರೆಗಳನ್ನು ಇವನ ಬಾಯಿಂದ ಕೇಳಬೇಕೆಂದು ಬಯಸಿ "ಕೋಽಸಿ—ನೀನಾರು" ಎಂದು ಪ್ರಶ್ನಿಸುತ್ತಾ

ನೆಂದೂ, ಅದಕ್ಕೆ ಈ ಮುಕ್ತನಾದ ಜೀವನು "ಋತುರಸ್ಮ್ಯಾರ್ತವೋಽಸ್ಮಿ: ಋತುವಾಗಿದ್ದೇನೆ=ಋತುಗಳೂ ಆಗಿದ್ದೇನೆ" ಇವುಗಳೇ ಮುಂತಾದ ಉತ್ತರಗಳನ್ನು ಹೇಳುತ್ತಾನೆಂದು ಹಿಂದೆ ಹೇಳಿದ್ದಾಯಿತು.

ಇನ್ನು ಮುಂದೆ ಈಮುಕ್ತನು ಪರಿಪೂರ್ಣವಾಗಿ ಪರಬ್ರಹ್ಮನನ್ನು ಅನುಭವಿಸುವ ರೀತಿಯನ್ನು ತಿಳಿಯೋಣ. ಇದನ್ನು ವೇದಾಂತಾಚಾರ್ಯರು 'ಪರಿಪೂರ್ಣಬ್ರಹ್ಮಾನುಭವಾಧಿಕಾರಃ' ಎಂಬುದಾಗಿ ಹೆಸರಿಟ್ಟು ರಹಸ್ಯತ್ರಯಸಾರದಲ್ಲಿ ೨೨ನೆಯ ಅಧಿಕಾರದಲ್ಲಿ ಪೂರ್ತಿಯಾಗಿ ಈ ಅನುಭವವನ್ನು ವರ್ಣಿಸಿದ್ದಾರೆ. ಅದರ ಮೊದಲನೆಯ ಶ್ಲೋಕ ಇದು.

> ವಿತಮಸಿ ಪದೇ ಲಕ್ಷ್ಮೀಕಾಂತಂ ವಿಚಿತ್ರವಿಭೂತಿಕಂ
> ಸಚಿವಗಮಿತಸ್ಸಂಪದ್ಯಾವಿರ್ಭವ ತ್ಸಹಜಾಕೃತಿಃ ।
> ಸ್ಫುಟತದ ಪೃಥಕ್ಸಿದ್ಧ್ಯೃದ್ಧ್ಗುಣಾಷ್ಟಕ ತತ್ಫಲೋ
> ಭಜತಿ ಪರಮಂ ಸಾಮ್ಯಂ ಭೋಗೇನಿವೃತ್ತಿಕಥೋಜ್ಝಿತಮ್ ॥

ಪ್ರತಿಪದಾರ್ಥ:—ವಿತಮಸಿ=ತಮೋ ಗುಣವಿಲ್ಲದ ಶುದ್ಧ ಸತ್ವಮಯವಾದ, ಪದೇ=ಪರಮಪದದಲ್ಲಿ—ತಮಶ್ಶಬ್ದದಿಂದ ಹೇಳಲ್ಪಡುವ ಪ್ರಕೃತಿ ಮಂಡಲದಿಂದ ದಾಟಲ್ಪಟ್ಟ ಸ್ಥಾನದಲ್ಲಿ ಎಂದೂ ಅರ್ಥಮಾಡಬಹುದು. ಇದಕ್ಕೆ ಆಧಾರವಾದ ಶ್ರುತಿ 'ಆದಿತ್ಯವರ್ಣಂ ತಮಸಃ ಪರಸ್ತಾತ್' ಎಂಬುದು. ಸಚಿವಗಮಿತಃ=ಆತಿವಾಹಿಕರಿಂದ ಕ್ರಮವಾಗಿ ಆದರದೊಡನೆ ಹೊಂದಿಸಲ್ಪಟ್ಟವನಾಗಿ ಪ್ರಯಾಣಮಾಡಿಸಲ್ಪಟ್ಟವನಾಗಿ (ಮುಕ್ತನು) ವಿಚಿತ್ರ, ವಿಭೂತಿಕಮ್=ಆಶ್ಚರ್ಯವನ್ನುಂಟುಮಾಡುವ ಲೀಲಾಭೋಗಗಳ ಐಶ್ವರ್ಯದಿಂದ ಕೂಡಿದ, ಲಕ್ಷ್ಮೀಕಾಂತಮ್='ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬುದಾಗಿ ಉತ್ತರಾನುವಾಕದಲ್ಲಿ ಲಕ್ಷ್ಮೀನಾಯಕನಾಗಿರುವಿಕೆಯಿಂದ ಪ್ರಸಿದ್ಧನಾದ ಪುರುಷೋತ್ತಮನಾದ ಶ್ರಿಯಃ ಪತಿಯನ್ನು, ಸಂಪದ್ಯ=ಹೊಂದಿ, ಆವಿರ್ಭವತ್ಸಹಜಾಕೃತಿಃ=ಹುಟ್ಟಿದ ದೇವಾದಿ ಶರೀರದಿಂದ ಬೇರೆಯಾದ, ತನಗೇ ಅಸಾಧಾರಣವಾದ ಜ್ಞಾನಾನನ್ದಾಕಾರವುಳ್ಳವನಾಗಿ, ಸ್ಫುಟತದಪೃಥಕ್ಸಿದ್ಧಿಃ=ಪ್ರತ್ಯಕ್ಷವಾಗಿ ಕಾಣಲ್ಪಟ್ಟ ಪರಮಾತ್ಮಾ ಪೃಥಗ್ಭಾವವುಳ್ಳ ಅಂದರೆ ಶರೀರ ಶರೀರ ಭಾವವುಳ್ಳವನಾಗಿ, ಸಿದ್ಧ್ಯೃದ್ಧ್ಗುಣಾಷ್ಟಕ ತತ್ಫಲಃ=ಅಭಿವ್ಯಕ್ತವಾದ 'ಅಪಹತಪಾಪ್ಮಾ ವಿಜರೋವಿಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಸ್ಸತ್ಯಕಾಮಸ್ಸತ್ಯಸಙ್ಕಲ್ಪಃ' ಎಂಬುದಾಗಿ ಪ್ರಜಾಪತಿ ವಾಕ್ಯದಲ್ಲಿ ಹೇಳಲ್ಪಟ್ಟ ಎಂಟು ಗುಣಗಳು, ಅವುಗಳ ಫಲಗಳು 'ಸಏಕಧಾ ಭವತಿ, ತ್ರಿಧಾಭವತಿ, ಸಂಕಲ್ಪಾದೇವಾಸ್ಯ ಪಿತರಸ್ಸಮುತ್ತಿಷ್ಠನ್ತಿ, ಜಕ್ಷತ್ ಕ್ರೀಡನ್ ರಮಮಾಣಃ' ಇವೇ ಮೊದ

ಲಾದವುಗಳಿಂದ ಹೇಳಲ್ಪಟ್ಟ ರೀತಿಯಲ್ಲಿ ಸಙ್ಕಲ್ಪದಿಂದಲೇ ಮಾತಾಪಿತ್ರಾದಿಗಳ ಸೃಷ್ಟಿ ಸಶರೀರತ್ವ ಶರೀರದೊಡನೆ ಇರುವಿಕೆ ಅಶರೀರತ್ವ ಶರೀರವಿಲ್ಲದಿರುವಿಕೆ ಮುಂತಾದ ರೂಪವಾದ ಫಲಪರ್ವ ವಿಶೇಷವುಳ್ಳವನಾಗಿ, ನಿವೃತ್ತಿಕಥೋಜ್ಝಿತಮ್—ಮತ್ತೆ ಸಂಸಾರವನ್ನು ಹೊಂದುವಿಕೆಯ ವಾಸನೆಯೇ ಇಲ್ಲದ, ಭೋಗೇ—ಭೋಗಮಾತ್ರದಲ್ಲಿ, ಪರಮಂಸಾಮ್ಯಂ—ಬ್ರಹ್ಮದೊಡನೆ ಸಮಾನವಾಗಿರುವಿಕೆಯನ್ನು (ಇದರಿಂದ ಜಗತ್ಕಾರಣತ್ವಾದಿಗಳು ಇವನಿಗಿಲ್ಲ ಎಂಬುದು ವ್ಯಕ್ತವಾಗುತ್ತದೆ.) ಭಜತಿ—ಹೊಂದುತ್ತಾನೆ. ಈ ರೀತಿಯಾದ ಭೋಗವಿಶೇಷವನ್ನು ಹೊಂದಿದವನಿಗೆ ತನ್ನ ಇಚ್ಛೆಯಿಂದಲೋ ಇನ್ನೊಬ್ಬರ ಇಚ್ಛೆಯಿಂದಲೋ ಸಂಸಾರಕ್ಕೆ ಹಿಂತಿರುಗುವಿಕೆ ಇಲ್ಲ ಎಂಬುದು ಹೇಳಿದಂತಾಯಿತು.

ಈ ಶ್ಲೋಕದಲ್ಲಿ ಸಂಙ್ಗ್ರಹವಾಗಿ ಹೇಳಲ್ಪಟ್ಟ ಕೈಙ್ಕರ್ಯಪರ್ಯನ್ತವಾದ ಪರಿಪೂರ್ಣಾನುಭವರೂಪವಾದ ಫಲವನ್ನು ವಿಸ್ತಾರವಾಗಿ, ಪ್ರಶ್ನಪೂರ್ವಕವಾಗಿ ತೋರಿಸುತ್ತಾರೆ.

ಈ ಅರ್ಚಿರಾದಿ ಗತಿವಿಶೇಷದಿಂದ ಪರಮಪದವನ್ನು ಹೋದಿದವನ ಪರಿಪೂರ್ಣವಾದ ಅನುಭವವು ಇರುವರೀತಿಯು ಹೇಗೆ ಎಂದರೆ—

[1]"ಅನೈತ್ತುಲಕಮುಡೈಯ ಅರವಿನ್ದಲೋಚನನೈತಿನತ್ತನೈಯುಂವಿಡಾಳ್—ಎಲ್ಲಾ ಲೋಕಗಳಿಂದ ಕೂಡಿದ ಅಂದರೆ ಲೀಲಾವಿಭೂತಿ ನಿತ್ಯವಿಭೂತಿಗಳಿಂದ ಕೂಡಿದ ತಾವರೆಯಂತೆ ಕಣ್ಣುಳ್ಳ ಪರಮಾತ್ಮನನ್ನು ಎಳ್ಳಿನಷ್ಟು ಭಾಗವನ್ನೂ ಬಿಡುವುದಿಲ್ಲ." ಇವೇ ಮೊದಲಾಗಿ ಹೇಳಿರುವ ರೀತಿಯಲ್ಲಿ ಎಲ್ಲಾ ವಿಧವಾದ ಕೈಙ್ಕರ್ಯವನ್ನೂ ದೇಶವಿಶೇಷದಲ್ಲೂ ಕಾಲವಿಶೇಷದಲ್ಲೂ ಅವಸ್ಥಾ ವಿಶೇಷದಲ್ಲೂ ಸಂಸಾರದೆಶೆಯಲ್ಲಿನಂತೆ ಸಂಙ್ಕೋಚವಿಲ್ಲದಂತೆ ಸರ್ವೇಶ್ವರನ ಕೊನೆಯಿಲ್ಲದ ಶರೀರ ಗುಣ, ಐಶ್ವರ್ಯಮತ್ತು ಅವನ ಕಾರ್ಯಗಳು ಇವುಗಳಲ್ಲಿ ಒಂದೂ ಕಡಿಮೆಯಿಲ್ಲದಂತೆ ಹೆಚ್ಚಾಗಿ ಅನುಭವಿಸುವುದು. ಈ ಅನುಭವವು ಇವನಿಗೂ ಈಶ್ವರನಿಗೂ ಸಮಾನವಾಗಿರುವುದರಿಂದ ಪರಮಸಾಮ್ಯ ಎಂಬುದು.

[2]ನಿರಸ್ತಾತಿಶಯಾಹ್ಲಾದ ಸುಖಭಾವೈಕ ಲಕ್ಷಣಾ ।
ಭೇಷಜಂ ಭಗವತ್ಪ್ರಾಪ್ತಿರೇಕಾನ್ತಾತ್ಯನ್ತಿಕೀಮತಾ ॥

1. ತಿರುವಾಯ್‌ಯೋಳಿ ೬–೭–೧೦.

2. ವಿಷ್ಣುಪುರಾಣಮ್ ೬–೫–೫೯.

ಭಗವಂತನನ್ನು ಹೊಂದಿ ಅನುಭವಿಸುವ ಆನಂದ ಮಿಗಿಲಾದದ್ದು. ಬೇರೆಯು ವನ್ನು ಅನುಭವಿಸುವಾಗ ಉಂಟಾಗುವ ಸಂತೋಷವು ಇದರ ಮುಂದಿಲ್ಲ. ಅವೆಲ್ಲ ವನ್ನೂ ಮೀರಿಸಿದೆ ಭಗವಂತನ ಅನುಭವ ಎಂದರ್ಥ. ಮೇಲೆ ಮೇಲೆ ಅನುಭವಿಸ ಬೇಕು ಎಂಬ ಆಸೆಯನ್ನುಂಟು ಮಾಡುತ್ತದೆ. ಶಬ್ದಾದಿ ವಿಷಯಗಳನ್ನು ಅನುಭವಿ ಸುವ ಸುಖಕ್ಕಿಂತಲೂ ಮಿಗಿಲಾದದ್ದು ಈ ಸುಖಾನುಭವ. ಬೇರೆ ಗುಣ ವಿಗ್ರಹಾದಿ ಗಳನ್ನು ಅನುಭವಿಸಬೇಕೆಂಬ ಬಯಕೆಯೇ ಉಂಟಾಗುವುದಿಲ್ಲ. ಎಲ್ಲಾ ಕಾಲದಲ್ಲೂ ಅನುವರ್ತಿಸುವುದಾಗಿದೆ, ಸಂಸಾರವೆಂಬವ್ಯಾಧಿಗೆ ಔಷಧಿಯಾಗಿದೆ, ಎಂದು ಹೇಳುವ ರೀತಿಯಲ್ಲಿ ಭಗವಸತ್ಸ್ವರೂಪವು ಹೇಗೆ [1]"**ಪುರಾ ಭೂದಸ್ಮಾಕಂ ಪ್ರಥಮಮ ವಿಭಿನ್ನಾತನುಃ**=ಹಿಂದೆ ಮೊದಲು ನಮ್ಮ ಶರೀರವು ಬೇರೆಬೇರೆಯಾಗದೆ ಒಂದೇ ಆಗಿದ್ದಿತು" ಎಂಬ ನ್ಯಾಯದಿಂದ ಅಂತಹ ಅವಸ್ಥೆಯಲ್ಲಿ ಹೇಗೆ ಪ್ರಿಯೆಗೆ ಪ್ರಿಯನ ಸ್ವರೂಪವು ಭೋಗ್ಯವಾಗಿರುತ್ತದೋ ಹಾಗೆ ಭಗವಂತನ ಸ್ವರೂಪವು ಭೋಗ್ಯ ವೆಂದರ್ಥ.

ರಾಜಮಹಿಷಿಗೆ ರಾಜನು ಭೋಗ್ಯನಾದರೆ, ಅವನಿಗೆ ಇಷ್ಟವಾಗಿ ಅವನ ಭೋಗಕ್ಕೆ ತಕ್ಕ-ಭೋಗದ ಸಲಕರಣೆಗಳು ಭೋಗಸ್ಥಾನಗಳೂ ಕೂಡ ಇವಳಿಗೂ ಅನುಕೂಲವಾಗಿರುವಂತೆ ಇಲ್ಲೂ ಇವನಿಗೂ ಭಗವಂತನ ಸ್ವರೂಪಕ್ಕೆ ಸಂಬಂಧಪಟ್ಟ ವೆಲ್ಲಾ ಭೋಗ್ಯವಾಗಿರಲು ಯಾವ ಕುಂದೂ ಇಲ್ಲ.

ಈ ರೀತಿ ಸರ್ವಪ್ರಕಾರದೊಡಗೂಡಿದ ಸರ್ವೇಶ್ವರನು ಭೋಗ್ಯನೆನ್ನುವುದು.

[2]"**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾವಿಪಶ್ಚಿತಾ**=ಅವ್ಯಾ ಕೃತ ಆಕಾಶಶಬ್ದದಿಂದ ಹೇಳಲ್ಪಟ್ಟ ಪರಮಪದದಲ್ಲಿ ಯಾವ ಉಪಾಧಿಯೂ ಇಲ್ಲದ, ಬೇರೆ ಒಂದಕ್ಕೂ ಅಧೀನವಲ್ಲದ, ಸಙ್ಕೋಚವಿಲ್ಲದ—ಎಲ್ಲವನ್ನೂ ವಿಷಯೀಕರಿಸುವ ಜ್ಞಾನವುಳ್ಳವನು ಪರಮಾತ್ಮ. ಅವನೊಡನೆ ಅವನ ಕಲ್ಯಾಣ ಗುಣಗಳನ್ನು ಅನುಭವಿ ಸುತ್ತಾನೆ. [3]"**ರಸಗ್ಂ ಹ್ಯೇವಾಯೊಲಽಬ್ಧ್ವಾನನ್ದೀಭವತಿ**".

ಬ್ರಹ್ಮಕ್ಕಿಂತಲೂ ಅವನ ಗುಣಗಳಿಗೆ ಫಲದಶೆಯಲ್ಲಿ ಪ್ರಾಧಾನ್ಯವನ್ನು ಹೇಳಲು '**ಬ್ರಹ್ಮಣಾಸಹ**=ಬ್ರಹ್ಮದೊಡನೆ ಎಂಬುದಾಗಿ ನಿರ್ದೇಶ. [4]'**ಸಹಯುಕ್ತೇಽ**

1. ಉತ್ತರ ರಾಮ ಚರಿತೆ ?
2. ತೈ. ಉ. ಆನಂದವಲ್ಲೀ. ೨೫.
3. ಆನಂದವಲ್ಲೀ. ೩೧.
4. ಪಾಣಿನಿ ಸೂತ್ರ. ೨೨-೩-೧೯.

ಪ್ರಧಾನೆ—ಸಹಶಬ್ದದಿಂದ ಕೂಡಿದ್ದಾದರೆ ಅಪ್ರಾಧಾನ್ಯವನ್ನು ತೋರಿಸುತ್ತದೆ ಭೋಗ್ಯತೆಯಲ್ಲಿ ಗುಣಗಳಿಗಿಂತ ಬ್ರಹ್ಮಕ್ಕೆ ಅಪ್ರಾಧಾನ್ಯವು ತೋರುತ್ತಿದೆಯಲ್ಲ ಎಂದು ಸಂದೇಹಪಡಕೂಡದು. ಪರಾಶರ ಭಟ್ಟರು ಶ್ರೀಗುಣ ರತ್ನಕೋಶ ಸ್ತೋತ್ರದಲ್ಲಿ "ಶ್ರಿಯಂತ್ವತ್ತೋಪ್ಯುಚ್ಚೈರ್ವಯಮಿಹ ಭಣಾಮಃ ಶೃಣುತರಾಮ್—ನಿನಗಿಂತ ಹೆಚ್ಚಾಗಿ ಇರುವವಳನ್ನಾಗಿ ಲಕ್ಷ್ಮಿಯನ್ನು ಕೊಂಡಾಡುತ್ತೇವೆ. ಹೆಚ್ಚಾಗಿ ಕೇಳೋಣವಾಗಲಿ" ಎಂದು ಹೇಳಿದ್ದಾರೆ. ಅದರಂತೆ ಪರಮಾತ್ಮನಿಗಿಂತ ಅವನ ಕಲ್ಯಾಣಗುಣಗಳು ಭೋಗ್ಯವಾಗಿವೆ ಎಂದು ವರ್ಣಿಸಿದರೆ ಅದು ಪರಮಾತ್ಮನಿಗೇ ಹೆಚ್ಚಳವನ್ನು ಹೇಳುವುದರಲ್ಲಿ ಮುಗಿಯುತ್ತದೆಯಲ್ಲವೇ ? ಅದು ಗುಣವೇ ಆಯಿತೇ ಹೊರತು ದೋಷವಾಗುವುದಿಲ್ಲ.

ಮತ್ತೊಂದು ರೀತಿಯಲ್ಲಿಸಮಾಧಾನ.

ಆದುದರಿಂದಲೇ 'ಪುತ್ರೇಣ ಸಹೌದನಂ ಭುಙ್ಕ್ತೇ'—ಮಗನೊಡನೆ ಊಟ ಮಾಡುತ್ತಾನೆ ಎಂಬಂತೆ ಭೋಕ್ತ್ರಸಾಹಿತ್ಯ ಪರವಾದರೆ, ಅಂದರೆ ಭೋಜನದಲ್ಲಿ ಮಗನಿಗೆ ಪ್ರಾಧಾನ್ಯ ತಂದೆಗೆ ಅಪ್ರಾಧಾನ್ಯ ತೋರುತ್ತದೆ. ಆದುದರಿಂದ ಅದನ್ನು ಬಿಟ್ಟು "ಪಯಸಾಸಹೌದನಂ ಭುಙ್ಕ್ತೇ—ಹಾಲಿನೊಡನೆ ಅನ್ನವನ್ನು (ಊಟವನ್ನು) ತಿನ್ನುತ್ತಾನೆ" ಎಂಬಂತೆ ಭೋಗ್ಯಸಾಹಿತ್ಯಪರವಾದದ್ದೇ 'ಬ್ರಹ್ಮಣಾವಿಪಶ್ಚಿತಾ' ಎಂಬುದು ಬ್ರಹ್ಮಕ್ಕೆ ಅಪ್ರಾಧಾನ್ಯವು ದೋಷವಾಗುವುದಿಲ್ಲ. ಈ ಭೋಗ್ಯಸಾಹಿತ್ಯ ಪಕ್ಷವೇ ಭಾಷ್ಯಕಾರರಿಂದ ಆದರಿಸಲ್ಪಟ್ಟಿದೆ.

ಯಾವ ಕಷ್ಟವೂ ಇಲ್ಲದೆ ಪ್ರಪಂಚ ಸೃಷ್ಟಿರೂಪವಾದ ಕಾರ್ಯವನ್ನು ಮಾಡುವ ಪರಬ್ರಹ್ಮವು 'ಸುಕೃತ'ವೆಂದು ಹೇಳಲ್ಪಡುತ್ತದೆ. ತನಗಿಂತ ಬೇರೆಯಾದ ಕಾರ್ಯವನ್ನು ನಿರ್ಮಾಣ ಮಾಡಿದರೆ ತಾನೇ ಕಷ್ಟದ ಪ್ರಸಕ್ತಿ, ಅಂತಹ ಸುಕೃತ ಶಬ್ದದಿಂದ ನಿರ್ದೇಶಿಸಲ್ಪಟ್ಟ ಬ್ರಹ್ಮವು ರಸವಾಗಿದೆ-ಆನಂದವಾಗಿದೆ. ಆ ಆನಂದವನ್ನು ಹೊಂದುವದರಿಂದ ಇವನೂ ಆನಂದಿಯಾಗುತ್ತಾನೆ. ಆದುದರಿಂದಲೇ ಪ್ರಾಪ್ಯತ್ವ ಮತ್ತು ಉಪಾಯತ್ವವು ಯುಕ್ತವಾಗಿದೆ.

ನಪಶ್ಯೋಮೃತ್ಯುಂ ಪಶ್ಯತಿ ನರೋಗಂ ನೋತದುಃಖತಾಮ್ ।
ಸರ್ವಂಹ ಪಶ್ಯಃ ಪಶ್ಯತಿ ಸರ್ವಮಾಪ್ನೋತಿಸರ್ವಶಃ ॥

ಸರ್ವ ಪ್ರಕಾರ ವಿಶಿಷ್ಟನಾದ ಸರ್ವೇಶ್ವರನು ಭೋಗ್ಯನಾಗಿರುವಾಗ ಅವನನ್ನು ಅನುಭವಿಸುವ ಜೀವನು, ಸಾವು ರೋಗ ದುಃಖ ಯಾವುದನ್ನೂ ಕಾಣನು, ಎಲ್ಲವನ್ನೂ ಕಾಣುತ್ತಾನೆ. ಎಲ್ಲವನ್ನೂ ಎಲ್ಲಾ ವಿಧದಿಂದಲೂ ಹೊಂದುತ್ತಾನೆ. ಹೀಗೆಂಬ ಶ್ರುತಿಸ್ಮೃತ್ಯಾದಿಗಳು ಈ ಅರ್ಥವನ್ನು ಪ್ರಸಿದ್ಧಿಪಡಿಸುತ್ತವೆ.

ಈ ಅರ್ಥವನ್ನು ಭಾಷ್ಯಕಾರರು [1]"ಭೂಮಾಸಂಪ್ರಸಾದಾದಧ್ಯುಪದೇಶಾತ್". ಎಂಬ ಅಧಿಕರಣದಲ್ಲಿ ಸತ್ಯಶಬ್ದದಿಂದ ಹೇಳಲ್ಪಡುವ ಬ್ರಹ್ಮವು ಸುಖರೂಪವಾಗಿರುವುದರಿಂದ ಅದನ್ನು ಅರಿಯಬೇಕು ಎಂದು ಉಪದೇಶಮಾಡಿ, ಹೆಚ್ಚಾದ ಸುಖವೇ ಪರಮ ಪುರುಷಾರ್ಥ ರೂಪವಾಗುತ್ತದೆ. ಅದೇ ಸುಖ ರೂಪವಾಗಿರುವ ಬ್ರಹ್ಮಕ್ಕೆ 'ಇದಕ್ಕಿಂತ ವಿಪುಲವಾದದ್ದು ಹೆಚ್ಚಿಗೆಯಾದದ್ದು ಮತ್ತೊಂದಿಲ್ಲ' ಎಂಬ ವಿಪುಲತೆಯನ್ನು ಅರಿಯತಕ್ಕದ್ದೆಂದು ಹೇಳಿ 'ಭೂಮಾತ್ವೇನ ವಿಜಿಜ್ಞಾಸಿತವ್ಯ' ಎಂದು ಉಪದೇಶ ಮಾಡಿದ್ದಾರೆ. ನಿರತಿಶಯ ಸುಖರೂಪವಾದ ಬ್ರಹ್ಮದ ಲಕ್ಷಣವಿದು ಎಂದು ಹೇಳಿ 'ಯತ್ರನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿಸಭೂಮಾ' ಎಂದು ಹೇಳಿದ್ದಾರೆ. ಇದು ಅದರ ಅರ್ಥ.

ಅವಧಿಯಿಲ್ಲದ ಮತ್ತು ಅದಕ್ಕಿಂತ ಅತಿಶಯವಾದದ್ದು-ಮೀರಿರುವುದು ಬೇರೊಂದಿಲ್ಲದ ಸುಖರೂಪವಾದ ಬ್ರಹ್ಮವು ಅನುಭವಿಸಲ್ಪಡುವುದಾಗಿರುವಾಗ ಅದಕ್ಕಿಂತ ಬೇರೆ ಯಾವುದನ್ನೂ ಇವನು ಕಾಣುವುದಿಲ್ಲ—ಈ ಅನುಭವಿಸುವವನು ಬ್ರಹ್ಮಸ್ವರೂಪ ಮತ್ತು ಅವನ ವಿಭೂತಿ ಇವುಗಳಲ್ಲಿ ಒಳಹೊಕ್ಕಿರುವುದರಿಂದ ಎಲ್ಲಾ ವಸ್ತುಗಳ ಸಮೂಹಕ್ಕೂ ಅವನ ದೆಸೆಯಿಂದ ಐಶ್ವರ್ಯವೆಂಬ ಬೇರೆ ಹೆಸರುಳ್ಳ ವಿಭೂತಿ ಗುಣದಿಂದ ವಿಶಿಷ್ಟವಾದ—ಕೂಡಿದ ನಿರತಿಶಯ ಸುಖರೂಪವಾದ ಬ್ರಹ್ಮವನ್ನು ಅನುಭವಿಸುತ್ತಾ ಅದಕ್ಕಿಂತ ಬೇರೆಯಾದ ವಸ್ತುವು ಇಲ್ಲದಿರುವುದರಿಂದಲೇ ಬೇರೆ ಯಾವುದೊಂದನ್ನೂ ನೋಡುವುದಿಲ್ಲ, ಅನುಭವಿಸಲು ಯೋಗ್ಯವಾದುದೆಲ್ಲವೂ ಸುಖರೂಪವಾಗಿರೋಣದರಿಂದಲೇ ದುಃಖವನ್ನು ನೋಡುವುದಿಲ್ಲ. ಯಾವುದು ಅನುಭವಿಸಲು ಯೋಗ್ಯವಾದದ್ದಾಗಿ ಪುರುಷಾನುಕೂಲವಾಗುತ್ತದೋ ಅದಲ್ಲವೇ ಸುಖ.

**ಇಲ್ಲಿ ಒಂದು ಸಂದೇಹ :** ಇದೇ ಜಗತ್ತು ಬ್ರಹ್ಮಕ್ಕಿಂತ ಬೇರೆಯಾದದ್ದಾಗಿ ಅನುಭವಿಸಲ್ಪಡುವುದಾಗಿ ದುಃಖರೂಪವಾಗಿಯೂ ಅಲ್ಪಸುಖರೂಪವಾಗಿಯೂ ಆಗಿರುತ್ತದೆ. ಅದೇ ಬ್ರಹ್ಮ ವಿಭೂತಿಯಾಗಿರುವಿಕೆಯಿಂದ ತದಾತ್ಮಕವಾಗಿ ಅಂದರೆ ಬ್ರಹ್ಮಾತ್ಮಕವಾಗಿ ಅನುಭವಿಸಲ್ಪಡುವುದಾದರೆ ಸುಖರೂಪವೇ ಆಗುತ್ತದೆ. ಇದು ಹೇಗೆ ? ಎಂದು ಕೇಳಿದರೆ ಅದಕ್ಕೆ ಉತ್ತರ.

ಕರ್ಮವಶ್ಯರಾದ ಕ್ಷೇತ್ರಜ್ಞರಿಗೆ ಬ್ರಹ್ಮಕ್ಕಿಂತ ಬೇರೆಯಾದುದಾಗಿ ಅನುಭವಿಸಲ್ಪಡುವ ಎಲ್ಲಾ ಜಗತ್ತೂ ಕರ್ಮಕ್ಕೆ ಅನುಗುಣವಾಗಿ ದುಃಖವಾಗಿಯೂ ಅಲ್ಪಸುಖವಾಗಿಯೂ ಆಗುತ್ತದೆ-ಆದುದರಿಂದ ಬ್ರಹ್ಮಕ್ಕಿಂತ ಬೇರೆಯಾದುದಾಗಿ ಅಲ್ಪಸುಖವಾಗಿರುವ ರೂಪದಿಂದ ಜಗತ್ತಿನ ಅನುಭವಕ್ಕೆ ಕಾರಣ ಕರ್ಮ, ಕರ್ಮರೂಪ

[1] ಬ್ರಹ್ಮಸೂತ್ರ ೧-೩-೭.

ವಾದ ಅವಿದ್ಯೆಯ ವಾಸನೆಯಿಂದ ಬಿಡಲ್ಪಟ್ಟವನಿಗೆ ಅದೇ ಜಗತ್ತು ಅವನ ವಿಭೂತಿ ಎಂದು ಅರಿತು ಆ ವಿಭೂತಿಯಿಂದ ವಿಶಿಷ್ಟವಾದ ಬ್ರಹ್ಮದ ಅನುಭವದ ಒಳಗೆ ಅಡಗಿರುವುದಾಗಿ ಸುಖವಾಗಿಯೇ ಆಗುತ್ತದೆ.

ಹೇಗೆ ಪಿತ್ತದಿಂದ ಕೂಡಿರುವವನಿಗೆ ತಾನಾಗಿಯೇ ಭೋಗ್ಯವಾಗಿ ರುಚಿಯಾಗಿ ರುವ ಹಾಲು ಕಹಿಯಾಗಿ ತೋಚುವುದಿಲ್ಲವೇ ? ಅದೇ ಪಿತ್ತದಿಂದ ಬಿಡಲ್ಪಟ್ಟವನಿಗೆ ರುಚಿಯಾಗಿಯೇ ಇದೆ, ಹಾಗೆಯೇ ಇಲ್ಲೂ ಕರ್ಮ ಸಂಬಂಧದಿಂದ ದುಃಖ ಮತ್ತು ಅಲ್ಪ ಸುಖ. ಅದು ಹೋದರೆ ಸಂಪೂರ್ಣವಾದ ಸುಖ ಎಂದು ತಿಳಿಯತಕ್ಕದ್ದು.

ಹೀಗೆ ಎಲ್ಲಾ ಪ್ರಕಾರಗಳಿಂದಲೂ ಕೂಡಿದ ಬ್ರಹ್ಮದ ಅನುಭವವೇ ಪರಮ ಪ್ರಾಪ್ಯವಾದರೆ, ವಿಷ್ಣ್ವಾಖ್ಯಂಪರಮಂಪದಂ=ವಿಷ್ಣುವೆಂದು ಹೆಸರುಳ್ಳಪರಮಪದ, ವಿಷ್ಣೋಃ ಪದೇ ಪರಮೇ ತದ್ವಿಷ್ಣೋಃ ಪರಮಂ ಪದಮ್=ವಿಷ್ಣುವಿನ ಶ್ರೇಷ್ಠ ವಾದ ಸ್ಥಾನ, ಯಂಪ್ರಾಪ್ಯನನಿವರ್ತಂತೆ ತದ್ಧಾಮ ಪರಮಂ ಮಮ=ಯಾವ [1]ಜೀವಾತ್ಮ ಸ್ವರೂಪವನ್ನು ಹೊಂದಿ ಮತ್ತೆ ಹಿಂತಿರುಗುವುದಿಲ್ಲವೋ ಅದು ನನ್ನ ಶ್ರೇಷ್ಠವಾದ ಸ್ಥಾನ. ಇವೇ ಮೊದಲಾದವುಗಳಲ್ಲಿ ಪರಮ ಪ್ರಾಪ್ಯವಾಚಿಯಾದ ಪರಮ ಪದ ಶಬ್ದ ಹೇಳಲ್ಪಡುತ್ತದೆ.

ರೂಪವನ್ನೂ, ಸ್ಥಾನವಿಶೇಷವನ್ನೂ ಜೀವಸ್ವರೂಪವನ್ನೂ, ಪರಮ ಪದ ವೆಂದು ಹೇಳಬಹುದೋ ಎಂದರೆ ದಿವ್ಯಾತ್ಮ ಸ್ವರೂಪ, ವಿಗ್ರಹ ಗುಣ ವಿಭೂತಿಗಳ ಮಧ್ಯದಲ್ಲಿ ಮಿಗಿಲಾಗಿ ಅನುಕೂಲವಾಗಿರೋಣದರಿಂದ ಪರಮಪ್ರಾಪ್ಯವಾಗಿರೋಣದ ರಿಂದ ಭಗವತ್ಸ್ವರೂಪವನ್ನು ಪರಮಪದ ಎಂದು ಹೇಳುವುದು. ಈ ಭಗವತ್ಸ್ವ ರೂಪದ ಪರಿಪೂರ್ಣವಾದ ಅನುಭವವು ಭೋಗ್ಯವಾಗಿ, ಎಲ್ಲಕ್ಕಿಂತಲೂ ಶ್ರೇಷ್ಠ ವಾಗಿಯೂ ಇರುವುದು. ಅದನ್ನು ಹೊಂದಬೇಕಾದರೆ ಒಂದು ಸ್ಥಾನ ವಿಶೇಷಕ್ಕೆ ಹೋದರಲ್ಲವೇ ಅದನ್ನು ಪಡೆಯಬಹುದು, ಆದುದರಿಂದ ಆ ಸ್ಥಾನ ವಿಶೇಷವನ್ನು ಪರಮ ಪದ ಎಂದು ಹೇಳುವುದು ಈ ಅನುಭವಕ್ಕೆ ಆಶ್ರಯವಾಗಿದ್ದು ಅನುಭವಿ ಸಲು ತಕ್ಕದ್ದಾಗಿರುವುದರಿಂದ ಭಗವಂತನ ವಿಭೂತಿಯಾಗಿ ಜ್ಞಾನ ಆನಂದ ಲಕ್ಷಣ ವಾದ ತನ್ನ ಸ್ವರೂಪವನ್ನೂ ಪರಮಪದ ವೆನ್ನುವುದು. ಈ ಮೂರಕ್ಕೂ ಬೇರೆಯ ವಕ್ಕೂ ಪ್ರಾಪ್ಯತ್ವವು ಹೊಂದಲು ಯೋಗ್ಯವಾಗಿರುವಿಕೆಯು ಸಮನಾಗಿದೆ.

1. ಭಗವಂತನ ಅನುಭವದ ಅತಿಶಯದಿಂದ ಕೂಡಿದ, ಅಚಿತ್ತಿನಿಂದ ಬಿಡಲ್ಪಟ್ಟ ಬೇರೆಯಾದ ಜ್ಞಾನ, ಆನಂದ ಲಕ್ಷಣವಾದ ವಿಭೂತಿಯಾಗಿರುವಿಕೆಯಿಂದಲೂ ವಿಶೇಷವಾಗಿ ತೋರಿಸುವುದಕ್ಕಾಗಿ ಉಪಚಾರದಿಂದ ತನ್ನ ಸ್ವರೂಪವನ್ನು ಪರಮಪದವೆಂದು ಹೇಳಲ್ಪಡು ತ್ತದೆಂದು ತಾತ್ಪರ್ಯ.

ಇವು ಮೂರಕ್ಕೂ ವಿಭೂತಿಯ ಚೇಷ್ಟಿತಗಳಿಗೂ ಅನುಭವಿಸುವಿಕೆಯಲ್ಲಿ ವ್ಯತ್ಯಾಸವೇನೂ ಇಲ್ಲ, ಸಮಾನವಾಗಿದೆ, ಸಾಮಾನ್ಯವಾಗಿ ಲೀಲಾ ವಿಭೂತಿಯಲ್ಲಿರುವ ಪದಾರ್ಥಗಳು ಅನುಕೂಲಗಳಾಗಿಯೂ, ಪ್ರತಿಕೂಲಗಳಾಗಿಯೂ ಇರುವವು. ಆದರೆ ಮುಕ್ತನಿಗೆ ಕರ್ಮ ಸಂಬಂಧ ರೂಪದೋಷವು ಹೋಗೋಣದರಿಂದ, ಭಗವಂತನಿಗೆ ಹೇಗೆ ಲೀಲಾ ವಿಭೂತಿಯು ಅನುಕೂಲವಾಗಿದೆಯೋ ಹಾಗೆಯೇ ಇವನಿಗೂ ಅನುಕೂಲವಾಗಿದೆ.

ಇದಕ್ಕೆ ದೃಷ್ಟಾಂತವಾಗಿ ಹೇಳುವುದಾದರೆ, ಹಾಲು ಪಿತ್ತದಿಂದ ಕೂಡಿದವನಿಗೆ ಕಹಿಯಾಗಿದೆ. ಅದು ಶಮನವಾದರೆ ರುಚಿಯಾಗಿದೆ, ಹಾಗೆ ಕರ್ಮ ಸಂಬಂಧದಿಂದ ಪ್ರತಿಕೂಲವಾಗಿಯೂ ಅದು ಹೋದರೆ ಅನುಕೂಲವಾಗಿಯೂ ಈ ಲೀಲಾ ವಿಭೂತಿಯ ಪದಾರ್ಥಗಳಾಗುವವು. ಅಲ್ಲದೆ ಇಲ್ಲಿ ಇನ್ನೊಂದು ದೃಷ್ಟಾಂತವನ್ನೂ ಹೇಳಬಹುದು.

ರಾಜಕುಮಾರನು ತಪ್ಪನ್ನು ಮಾಡಿದ್ದಾನೆಂದು ಭಾವಿಸೋಣ, ಅದರ ಪರಿಣಾಮವಾಗಿ ಈ ಇವನಿಗೆ ಕಾರಾಗೃಹ ಪ್ರಾಪ್ತಿಯಾಗುತ್ತದೆಂದೂ ತಿಳಿಯೋಣ, ಆಗ ಅವನಿಗೆ ಅದು ಪ್ರತಿಕೂಲವಾಗಿಯೇ ಆಯಿತು.

ರಾಜನು ತನ್ನ ಮಗನನ್ನು ಅದರಿಂದ ಬಿಡಿಸುವಂತೆ ಮಾಡಿದರೆ, ಅದರಿಂದ ಹೊರಗೆ ಬಂದ ಅದೇ ಮಗನಿಗೆ ತನಗೆ ಸಮನಾಗಿ ಭೋಗವನ್ನು ಅನುಭವಿಸುವಂತೆ ಮಾಡಿದರೆ ಅದು ಎಷ್ಟು ಪ್ರಿಯವಾಗಿದೆಯೋ ಹಾಗೆ ಇವನಿಗೂ ಆಗುತ್ತದೆ. ಆ ಸೆರೆಮನೆಯೂ ತಂದೆಯ ವಿಭೂತಿಯೆಂದು ಹೇಗೆ ಅನುಕೂಲವಾಗಿರುತ್ತದೋ ಹಾಗೆಯೂ ಇದು ಅನುಕೂಲವಾಗಿದೆ. ರಾಜಕುಮಾರನಿಗೆ ಸೆರೆಮನೆಯು ಈವಾಗ ಬೇರೊಂದು ಆಕಾರವಾಗಿರೋಣದರಿಂದ ಅನುಕೂಲವಾಗಿ ತೋರಬಹುದಲ್ಲವೇ ? ಎಂಬ ಸಂದೇಹವನ್ನು ಹೋಗಲಾಡಿಸುವುದಕ್ಕಾಗಿ ಆ ಸೆರೆಯ ಸ್ವರೂಪ ಒಂದೇ ವಿಧವಾಗಿದೆ. ತಂದೆಯ ವಿಭೂತಿಯೆಂದು ಅನುಕೂಲವಾಗುವಂತೆ ಎಂಬ ದೃಷ್ಟಾಂತ ಇಲ್ಲಿ ಹೇಳಿದೆ. ಇಲ್ಲಿ ಸೀತೆಯ ಮಾತನ್ನು ನೆನಪಿಗೆ ತಂದು ಕೊಳ್ಳೋಣ.

**[1]ಯಸ್ತ್ವಯಾಸಹ ಸಸ್ವರ್ಗೋ ನಿರಯೋಯಸ್ತ್ವಯಾವಿನಾ ।**

ಓ ರಾಮ ! ನಿನ್ನೊಡನೆ ಇರುವುದೇ ಸ್ವರ್ಗ, ನಿನ್ನೊಡನೆ ಇಲ್ಲದಿದ್ದರೆ ಅದೇ ನನಗೆ ನರಕ ಎಂದೂ.

1. ರಾಮಾಯಣ ಅಯೋಧ್ಯಾಕಾಂಡ. ೩೦–೧೮.

[1]ನ ಹಿಮೇಜೀವಿತೇ ನಾರ್ಥ್ಥೋ ನೈವಾರ್ಥೈರ್ನಚ ಭೂಷಣೈಃ ।
ವಸಂತ್ಯಾರಾಕ್ಷಸೀಮಧ್ಯೇ ವಿನಾರಾಮಂಮಹಾರಥಮ್ ॥

ಮಹಾರಥಿಕನಾದ ರಾಮನನ್ನು ಬಿಟ್ಟು ರಾಕ್ಷಸಿಯರ ನಡುವೆ ವಾಸ ಮಾಡುವ ನನಗೆ ಬದುಕಿನಿಂದ ಏನು ಪ್ರಯೋಜನ ? ಐಶ್ವರ್ಯದಿಂದ ಏನು ಪ್ರಯೋಜನ ? ಒಡವೆಗಳಿಂದ ತಾನೆ ಏನು ಪ್ರಯೋಜನ? ಎಂದೂ, ಸೀತೆಯು ರಾಮನೊಡನೆ ಇರುವಿಕೆಯ ಮಹಿಮೆಯನ್ನು ಹೇಳಿದ್ದಾಳೆ.

ಅದೇ ರೀತಿಯಲ್ಲಿ ಭಗವಂತನ ಸಂಶ್ಲೇಷ–ಸಂಬಂಧವಿಲ್ಲದೆ ತಾನು ನಿಂತಾಗ ಸ್ವಲ್ಪ ಅನುಕೂಲವಾಗಿಯೂ ತೋಚಿದ ಲೀಲಾವಿಭೂತಿಯ ಪದಾರ್ಥಗಳು ಮುಕ್ತನಾಗಿ ಯಾವಾಗಲೂ ಭಗವಂತನನ್ನು ಅನುಭವಿಸುವ ಇವನಿಗೆ ಅತಿಶಯವಾದ ಭೋಗ್ಯ ವರ್ಗದಲ್ಲಿ ಸೇರಿರುವುದು ಕೂಡುತ್ತದೆ—ಅದು ಯುಕ್ತವೇ ಆಗಿದೆ.

ಹೀಗೆ ಒಂದೇ ವಸ್ತುವೇ ಒಂದು ಕಾಲದಲ್ಲಿ ಮುಕ್ತನನ್ನು ಕುರಿತು ಅನುಕೂಲವಾಗಿಯೂ ಬದ್ಧನನ್ನು ಕುರಿತು ಪ್ರತಿಕೂಲವಾಗಿಯೂ ಇರುವಿಕೆ ವಿರುದ್ಧವಲ್ಲವೆ ? ಒಂದೇ ಕಾಲದಲ್ಲಿ ತಾನೆ ಪ್ರಾತಿಕೂಲ್ಯ ಸ್ವಭಾವವು ಉಂಟಾದರೆ ಸರ್ವಜ್ಞರಾದ ನಿತ್ಯಮುಕ್ತರಿಗೂ ಇವೆರಡೂ ತೋರಬೇಡವೇ ಎಂದರೆ, "ಬದ್ಧರಿಗೆ ಈ ಪದಾರ್ಥ ಸಮೂಹಗಳು ಪ್ರತಿಕೂಲವಾಗಿರಬೇಕು" ಎಂದು ಭಗವಂತನ ಇಚ್ಛೆಯಿಂದ ಇದು ಸಿದ್ಧವಾಗಿರುವುದರಿಂದ ಒಂದೇ ಕಾಲದಲ್ಲಿ ಸಂಬಂಧ ಭೇದದಿಂದ ಇರುವವರಿಗೆ ಅನುಕೂಲ ಪ್ರತಿಕೂಲವಾಗಿರುವಿಕೆಗೆ ತಡೆ ಇಲ್ಲ. ಕರ್ಮಪಾಶದಿಂದ ಕಟ್ಟಲ್ಪಟ್ಟವರಿಗೆ ಪ್ರತಿಕೂಲವೆಂಬುದು ಮುಕ್ತರಿಗೂ ಪ್ರತ್ಯಕ್ಷವಾಗಿರುವಿಕೆಯೂ ವಿರುದ್ಧವಲ್ಲ.

**ಸತತ್ರಪರ್ಯೇತಿ ಜಕ್ಷತ್ಕ್ರೀಡನ್ [2]ರಮಮಾಣ ಸ್ತ್ರೀಭಿರ್ವಾಯಾನೈರ್ವಾ**— ಕರ್ಮಪಾಶದಿಂದ ಬಿಡಲ್ಪಟ್ಟ ಮುಕ್ತಾತ್ಮನು, **ತತ್ರ**—ಪರಮಾತ್ಮನಲ್ಲಿ, **ಪರ್ಯೇತಿ**—ಅವನನ್ನು ಎಲ್ಲಾ ಕಡೆಯೂ ಅನುಭವಿಸುತ್ತಾನೆ, ಅಥವಾ ಅವನನ್ನು ಅನುಸರಿಸಿ ಸಂಚಾರಮಾಡುತ್ತಾನೆ ಎಂದೂ ಅರ್ಥವಾಗುತ್ತದೆ. [3]"**ಕಾಮರೂಪ್ಯನುಸಂಚರನ್**", '**ಯತ್ರ ಯತ್ರಧಾತಾಗಚ್ಛತಿ**' ಹೀಗೆಲ್ಲಾ ಬೇರೇ ಶ್ರುತಿಗಳೂ ಹೇಳುತ್ತವೆ. ಹೆಂಗಸರೊಡನೆ ತಿನ್ನುತ್ತಲೂ ಆಟವಾಡುತ್ತಲೂ—ಅಥವಾ ವಿಮಾನದಲ್ಲಿ ಸಂಚರಿಸುತ್ತಲೂ ಬ್ರಹ್ಮ ವಿಭೂತಿಯನ್ನು ಅನುಭವಿಸುತ್ತಾನೆ ಎಂದು ಅರ್ಥವಾಗುತ್ತದೆ.

1. ರಾಮಾಯಣ ಸುಂದರಕಾಂಡ. ೨೬–೫.
2. ಛಾನ್ದೋಗ್ಯೋಪನಿಷತ್. ೮–೧೨.
3. ತೈತ್ತರೀಯೋಪನಿಷತ್. ದ್ರಾವಿಡ ಪಾಠ. ೧೫. ಆಂಧ್ರ ಪಾಠ. ೪೩.

[1]ಸಯದಿ ಪಿತೃಲೋಕ ಕಾಮೋಭವತಿ, ಸಂಕಲ್ಪಾದೇವಾಸ್ಯ ಪಿತರಃ ಸಮುತ್ತಿಷ್ಠನ್ತಿ । ತೇನ ಪಿತೃ ಲೋಕೇನ ಸಪನ್ನೋ ಮಹೀಯತೇ ॥

ಇವನು ಮುಕ್ತನಾಗಿ ಹಿಂದಿನ ಅನೇಕ ಜನ್ಮಗಳಿಗೆ ಸಂಬಂಧಪಟ್ಟ ಪಿತೃವರ್ಗವನ್ನು ನೋಡಬೇಕೆಂದು ಬಯಸಿದರೆ ಆವಾಗ ಪಿತೃವರ್ಗವು ಇವನ ಸಂಕಲ್ಪ ಮಾತ್ರದಿಂದಲೇ ಏಳುತ್ತದೆ, ಆ ವರ್ಗದೊಡನೆ ಕೂಡಿದವನಾಗಿ ಪೂಜಿಸಲ್ಪಡುತ್ತಾನೆ ಎಂದರ್ಥ.

'ಸಯದಿ ಗೀತವಾದಿತ್ರ ಲೋಕಕಾಮೋಭವತಿ' ॥೮॥

**ಸಯದಿಸ್ತ್ರೀಲೋಕ ಕಾಮೋಭವತಿ, ಸಂಕಲ್ಪಾಧೇವಸ್ಯ ಸ್ತ್ರಿಯಃಸಮುತ್ತಿಷ್ಠನ್ತಿ। ತೇನ ಸ್ತ್ರೀಲೋಕೇನ ಸಂಪನ್ನೋ ಮಹೀಯತೇ ॥೧೦॥**

ಸಂಗೀತ ವಾದ್ಯ ಇವುಗಳನ್ನು ಅಪೇಕ್ಷಿಸಿದರೆ, ಹಾಗೆಯೇ ಸ್ತ್ರೀವರ್ಗವನ್ನು ಅಪೇಕ್ಷಿಸಿದರೆ ಇವನ ಸಂಕಲ್ಪದಿಂದ ಅವುಗಳನ್ನು ಪಡೆದು ಆ ವರ್ಗಗಳಿಂದ ಕೂಡಿದವನಾಗಿ ಪೂಜಿಸಲ್ಪಡುತ್ತಾನೆ. ಯಾವ ಯಾವ ಇಷ್ಟವನ್ನು ಅಪೇಕ್ಷಿಸಿದರೂ ಅವೆಲ್ಲವೂ ಇವನ ಸಂಕಲ್ಪದಿಂದಲೇ ಏಳುತ್ತವೆ, ಉಂಟಾಗುತ್ತವೆ. ಅವುಗಳಿಂದ ಪೂಜಿಸಲ್ಪಡುತ್ತಾನೆ.

ಈಜಕ್ಷಣ, ಕ್ರೀಡನ=ಊಟ ಆಟ, ಸ್ತ್ರೀಯರುಗಳೊಡನೆ ವಿಹರಿಸುವುದು ಇವೇ ಮುಂತಾದವು ಇವನಿಗೆ ಸಂಬಂಧಪಟ್ಟ ವ್ಯಾಪಾರಗಳಾಗಿರುವಾಗ ಇವು ಭಗವಂತನ ಕೈಙ್ಕರ್ಯ ಪರ್ಯನ್ತವಾದ ಅನುಭವವೆನ್ನುವುದು ಹೇಗೆ ಹೊಂದುತ್ತದೆ ಅಂದರೆ ಇವು ಪುಣ್ಯ ಪಾಪ ರೂಪವಾದ ಕರ್ಮಗಳ ಅಪೇಕ್ಷೆ ಇಲ್ಲದ ಭಗವಂತನ ಇಚ್ಛೆಗೆ ಅನುಗುಣವಾದ ತನ್ನ ಇಚ್ಛೆಯಿಂದಾದವು. ಆದುದರಿಂದ ಕರ್ಮಫಲವಿಲ್ಲದ ಅನುಭವ ಪ್ರವಾಹವಾದ ಕೈಙ್ಕರ್ಯದಲ್ಲಿ ಅಡಗಿರುವವು.

ಭಗವಂತನಿಗೆ ಇಷ್ಟವಾದುದನ್ನು ಅನುಸರಿಸುವುದೇ ಕೈಙ್ಕರ್ಯ. ಹೀಗಿರುವುದರಿಂದ ಆ ಆ ಶರೀರಗಳನ್ನು ಸ್ವೀಕರಿಸುವುದರಿಂದ ಮತ್ತು ನಿತ್ಯವಾದ ಅನಿತ್ಯವಾದ ವಿಗ್ರಹದಿಂದಲೂ ಕೂಡ ಜಕ್ಷಣಾದಿ ಆಟವಾಡುವ ಸ್ವಭಾವವುಳ್ಳ ಪರಮ ಪುರುಷನು ತನಗೆ ಶೇಷ ಭೂತರಾದವರನ್ನೂ ಕೂಡ ತನಗೆ ಸಮಾನವಾಗಿ ವಿಹರಿಸುವ ಸ್ವಭಾವವುಳ್ಳವರನ್ನಾಗಿ ಮಾಡಿಯೇ ಮುಕ್ತರಾದವರನ್ನು ನೋಡಿ ಚಕ್ರವರ್ತಿಯಂತೆ ಸಂತೋಷಪಡುತ್ತಾನೆ, ಆದುದರಿಂದ ಜಕ್ಷಣಾದಿಗಳೂ ಕೂಡ ಕೈಙ್ಕರ್ಯದಲ್ಲೇ ಅನ್ತರ್ಭೂತಗಳಾಗಿ—ಒಳಗೊಂಡವಾಗಿ ಇವೆ ಎಂದು ಅಭಿಪ್ರಾಯ.

---

1. ಛಾಂ. ೮-೨-೧.

ಭಗವಂತನ ಇಚ್ಛೆ ಕಾರಣವಾಗಿ ಉಳ್ಳ ಸ್ವೇಚ್ಛಾ ಮೂಲವಾಗಿರೋಣದರಿಂದ ಇಷ್ಟಾನುಸಾರವಾದ ಕೈಙ್ಕರ್ಯದವರೆಗೂ ಇರುವ ಪರಿಪೂರ್ಣವಾದ ಬ್ರಹ್ಮಾನುಭವವು ಪರಬ್ರಹ್ಮವನ್ನು ಹೊಂದುವಿಕೆಯೆಂದು ನಿರ್ಣಯಿಸಲ್ಪಟ್ಟಿತು.

ಈ ರೀತಿ ಅನುಭವವು ಉಂಟಾಗಿ ಅದೇ ಪುರುಷಾರ್ಥವಾದರೂ, ಭೋಗೇ ನಿವೃತ್ತಿ ಕಥೋಜ್ಝಿತಂ—ಈ ಅನುಭವದಲ್ಲಿ- -ಇದು ನಾಶವಾಗುತ್ತದೆ ಎಂಬ ಕಥೆಯೇ ಬಿಡಲ್ಪಟ್ಟಿದೆ" ಎಂದು ನಿತ್ಯವಾಗಿ ಹೇಳಿದ್ದು ಕೂಡುತ್ತದೆಯೇ ? "ಕಲ್ಪಕೋಟಿ ಸಹಸ್ರೇಷು ವಿಷ್ಣುಲೋಕೇಮಹೀಯತೇ—ಸಾವಿರಾರು ಕೋಟಿ ಕಲ್ಪ ಕಾಲಗಳಲ್ಲಿ ವಿಷ್ಣು ಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಪ್ರಕಾಶಿಸುತ್ತಾನೆ" ಎಂದು ಕಾಲದ ಪರಿಮಿತಿಯನ್ನೂ ಮತ್ತೆ ಸಂಸಾರವನ್ನೂ ವಿಷ್ಣು ಲೋಕವನ್ನು ಹೊಂದಿದವನಿಗೆ ಹೇಳಿರುತ್ತದೆಯಲ್ಲವೇ ? ಅಂದರೆ ಈ ಪರಿಪೂರ್ಣ ಬ್ರಹ್ಮಾನುಭವವು ಉಂಟಾದರೆ ಮುಂದೆ ಒಂದು ಕಾಲದಲ್ಲೂ ನಾಶವಾಗುವುದಿಲ್ಲ ಎಂಬುದನ್ನು—

[1]ಪ್ರಾಪ್ಯತೇ ಪರಮಂಧಾಮ ಯತೋನಾವರ್ತತೇಯತಿಃ ॥

ಯತಿಃ—ಬ್ರಹ್ಮನಿಷ್ಠನು ಎಲ್ಲಿಂದ ಹಿಂತಿರಿಗಿ ಬರುವುದಿಲ್ಲವೋ ಅಂತಹ ಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾನೆ.

[2]ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।
ನಾಪ್ನುವಂತಿ ಮಹಾತ್ಮಾನ ಸ್ಸಂಸಿದ್ಧಿಂಪರಮಾಂಗತಾಃ ॥
ಆ ಬ್ರಹ್ಮಭವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯತು ಕೌಂತೇಯ ಪುನರ್ಜನ್ಮನವಿದ್ಯತೇ ॥

ಶ್ರೇಷ್ಠವಾದ ತನ್ನ ರೂಪವನ್ನು ಹೊಂದಿದ ಮಹಾತ್ಮರು ದುಃಖಕ್ಕೆ ಬೀಡಾದ ನಾಶಸ್ವಭಾವವುಳ್ಳ ಮತ್ತೆ ಹುಟ್ಟುವಿಕೆಯನ್ನು ಹೊಂದುವುದಿಲ್ಲ; ಅರ್ಜುನಾ ! ಬ್ರಹ್ಮನ ವಾಸಸ್ಥಾನವನ್ನು ಮೊದಲುಮಾಡಿ ಎಲ್ಲಾ ಲೋಕಗಳೂ ಹಿಂತಿರುಗಿ ಬರತಕ್ಕವು, ಆದರೆ ನನ್ನ ಹತ್ತಿರಕ್ಕೆ ಬಂದ ಮೇಲಂತೂ ಮತ್ತೆ ಜನ್ಮವಿಲ್ಲ.

[3]ಯದಾ ಸಕೇವಲೀ ಭೂತಷ್ಷಡ್ವಿಂಶಮನುಪಶ್ಯತಿ ।
ತದಾಸಸರ್ವಸಿದ್ಧತ್ವಾ ತ್ಪುನರ್ಜನ್ಮನವಿಂದತಿ ॥

1. ಅಹಿರ್ಬುಧ್ನ್ಯ ಸಂಹಿತೆ. ೩೭–೨೬.
2. ಗೀತೆ. ೮–೧೫–೧೬.
3. ಭಾರತ ಶಾನ್ತಿಪರ್ವ. ೩೨೩–೮.

**ಗತ್ವಾ ಗತ್ವಾ ನಿವರ್ತನ್ತೇ ಚಂದ್ರ ಸೂರ್ಯಾದಯೋ ಗ್ರಹಾಃ ।**
**ಅದ್ಯಾಪಿನ ನಿವರ್ತನ್ತೇ ದ್ವಾದಶಾಕ್ಷರ ಚಿನ್ತಕಾಃ ॥**

ಯಾವಾಗ, ಸಃ=ಆ ಜೀವಾತ್ಮನು, ಕೇವಲೀಭೂತಃ=ಪ್ರಕೃತಿಯಿಂದ ಬಿಡಲ್ಪಟ್ಟವನಾಗಿ—ಎಲ್ಲಾ ಕಟ್ಟುಗಳಿಂದಲೂ ಬಿಡಲ್ಪಟ್ಟವನಾಗಿ, ಷಡ್ವಿಂಶಂ=ಪರಮಾತ್ಮನನ್ನು ಅನುಪಶ್ಯತಿ ನೋಡುತ್ತಾನೋ, ತದಾ=ಆವಾಗ, ಸಃ=ಅವನು, ಸರ್ವಸಿದ್ಧತ್ವಾತ್=ಎಲ್ಲಾ ರೀತಿಯಿಂದಲೂ ಸಿದ್ಧಿಯನ್ನು ಹೊಂದಿರೋಣದರಿಂದ, ಪುನರ್ಜನ್ಮ=ಮತ್ತೆ ಹುಟ್ಟುವಿಕೆಯನ್ನು ನವಿಂದತಿ=ಹೊಂದುವುದಿಲ್ಲ.

ಚಂದ್ರ ಸೂರ್ಯ ಮುಂತಾದ ಗ್ರಹಗಳು ಹೋಗಿ ಹೋಗಿ ಹಿಂತಿರುಗುತ್ತವೆ. ದ್ವಾದಶಾಕ್ಷರ ಮಂತ್ರವನ್ನು ಮತ್ತೆ ಮತ್ತೆ ಅನುಸಂಧಾನ ಮಾಡುವವರು ಈವಾಗಲೂ ಹಿಂತಿರುಗುವುದಿಲ್ಲ.

1"**ವಾಯಿನಾಲ್ ನಮೋನಾರಣಾವೆನ್ರು ಮತ್ತಕತ್ತಿಡ್ಕೈಕ್ಕಳೈಕ್ಕೂಪ್ಪಿ ಪೋಯಿನಾಲ್ ಪಿನ್ನೈ ಇತ್ತಿಶೈಕ್ಕೆನ್ರುಮ್ ಪುಣೈಕೊಡುಕ್ಕಿಲುಮ್ ಪೋಕ ವೊಟ್ಟಾರೆ**=ಬಾಯಿಂದ ನಮೋ ನಾರಣಾ ಎಂದು ಹೇಳಿ ತಲೆಯ ಮೇಲೆ ಕೈಗಳನ್ನು ಮುಗಿದು—ಅಂಜಲಿಯನ್ನು ಮಾಡಿ (ಅಂದರೆ ಪ್ರಪತ್ತಿಯನ್ನುಮಾಡಿ ಎಂದರ್ಥ) ಅರ್ಚಿರಾದಿ ಮಾರ್ಗದಿಂದ ಪರಮಪದವನ್ನು ಸೇರಿದರೆ ಮತ್ತೆ 'ಈ ದಿಕ್ಕಿಗೆ—ಸಂಸಾರ ಮಂಡಲಕ್ಕೆ ಹೋಗಿ ಸಂಸಾರವನ್ನು ಪಡೆದು ಮತ್ತೆ ಬರುತ್ತೇನೆ' ಎಂದು ಒಬ್ಬನನ್ನು ತನ್ನ ಬದಲಾಗಿ ಇಟ್ಟರೂ ಅಂದರೆ ಜಾಮೀನಾಗಿ ಒಬ್ಬನನ್ನಿಟ್ಟರೂ ಹೋಗಲು ಬಿಡುವುದಿಲ್ಲವಲ್ಲ.

ಹಾಗಾದರೆ "**ಇಮಾನ್ ಲೋಕಾನ್ಕಾಮಾನ್ನೀ ಕಾಮರೂಪ್ಯನುಸಂಚರನ್**=ಈ ಲೋಕಗಳಲ್ಲಿ ಅಪೇಕ್ಷಿಸಿದ ರೂಪಗಳನ್ನು ಪಡೆದು ಸಂಚರಿಸುತ್ತಾ' -ಎಂದು ಶ್ರುತಿ ಹೇಳುತ್ತದೆ ಅಲ್ಲವೇ ಎಂದರೆ, ಭಗವಂತನ ಕೈಙ್ಕರ್ಯದೊಳಗೊಂಡಿರುವ ಸ್ವೇಚ್ಛಾವಿಹಾರದಿಂದ ಲೀಲಾ ವಿಭೂತಿಗೆ ಪ್ರವೇಶಿಸಿದರೂ ಈ ಅನುಭವದ ಸಂಕೋಚಾದಿಗಳು ಉಂಟಾಗದೆ ಇರುವುದರಿಂದ ಪುನರಾವೃತ್ತಿ ಇಲ್ಲ ಎನ್ನುವುದು, ಭಗವಂತನ ಅವತಾರದಂತೆ ಕರ್ಮದಿಂದ ಉಂಟಾದ ಹುಟ್ಟಲ್ಲ ಆಗ ಅವನದು.

ಈ ರೀತಿ ಉತ್ತರಾವಧಿ ಇಲ್ಲದ ಈ ಅನುಭವವನ್ನು ಹೊಂದುವವರಿಗೆ ಕೊನೆಯ ಶರೀರವು ದೇವಮನುಷ್ಯಾದಿಗಳಲ್ಲಿ ಇಂತಹದಲ್ಲಿ ಎಂದು ತಿಳಿಯದು. ಬ್ರಹ್ಮಾದಿಗಳಿಗೂ ಮೋಕ್ಷ ಉಂಟು.

1. ಪೆರಿಯಾಳ್ವಾರ್ ತಿರುಮೊಳಿ. ೪-೫-೨.

"ತಸ್ಯ ತಾವದೇವಚಿರಂಯಾವನ್ನವಿಮೋಕ್ಷ್ಯೇऽಥ ಸಂಪತ್ಸ್ಯೇ"

ಯಾವಾಗ ಕರ್ಮಬಂಧದ ಬಿಡುಗಡೆ ಆಗುತ್ತದೋ ಅದೇ ತಡ, ಆವಾಗಲೇ ಪರಬ್ರಹ್ಮದ ಪ್ರಾಪ್ತಿ.

ಎಂದು ಶ್ರುತಿ ಹೇಳಿರುವುದರಿಂದ ಭಕ್ತಿಯೋಗ ನಿಷ್ಠನಿಗೂ ಪ್ರಾರಬ್ಧಕರ್ಮದ ಕೊನೆಗೆ ಶರೀರದ ನಿಯಮವಿಲ್ಲದಿರುವುದರಿಂದ ಉತ್ಕೃಷ್ಟವಾದ ಶರೀರದ ಕೊನೆಯಲ್ಲೇ ಮೋಕ್ಷವೆಂಬ ನಿಯಮವಿಲ್ಲ ಎಂದು ತಾತ್ಪರ್ಯ.

[1]ಧರ್ಮವ್ಯಾಧಾದಯೋಽಪ್ಯನ್ಯೇಪೂರ್ವಾಭ್ಯಾಸಾಜ್ಜುಗುಪ್ಸಿತೇ ।
ವರ್ಣಾವರತ್ವೇ ಸಂಪ್ರಾಪ್ತಾ ಸ್ಸಂ ಸಿದ್ಧಿಂ ಶ್ರಮಣೀಯಥಾ ॥

ರಾಮಾಯಣದ ಕಥೆಯಲ್ಲಿ ಬೇಡರಜಾತಿಯಲ್ಲಿ ಹುಟ್ಟಿದ ಶಬರಿಯೆಂಬುವಳು ದಂಡಕಾರಣ್ಯದಲ್ಲಿ ಋಷಿಗಳಿಗೆ ಸೇವೆಮಾಡುತ್ತಿದ್ದಳೆಂದೂ, ಅದರ ಫಲವಾಗಿ ತನ್ನ ಪಾಪವನ್ನು ನೀಗಿ ಆತ್ಮಜ್ಞಾನವನ್ನು ಪಡೆದಳೆಂದೂ, ಕೇಳಿದ್ದೇವೆ. ಶ್ರೀರಾಮನ ಆಗಮನವನ್ನು ಎದುರುನೋಡುತ್ತಾ ಅವನು ಅವಳಿದ್ದ ಪುಣ್ಯಾಶ್ರಮಕ್ಕೆ ಬಂದಾಗ, ಹಣ್ಣು ಹಂಪಲುಗಳನ್ನು ಕೊಟ್ಟು ಸೇವೆಸಲ್ಲಿಸಿ ಅವನ ಅನುಗ್ರಹದಿಂದ ಮೋಕ್ಷವನ್ನು ಪಡೆದಳೆಂದು ತಿಳಿಯುತ್ತೇವೆ. ಹಾಗೆಯೇ ಭಾರತಕಥೆಯಲ್ಲೂ ಧರ್ಮವ್ಯಾಧನೇ ಮೊದಲಾದವರೂ ಕೆಳಮಟ್ಟದ ಜಾತಿಯಲ್ಲಿ ಹುಟ್ಟಿದ್ದರೂ, ಹಿಂದಿನ ಜನ್ಮದಲ್ಲಿ ತಾವು ಮಾಡಿದ ಭಗವಂತನ ಧ್ಯಾನದ ಅಭ್ಯಾಸದಿಂದ ಮೋಕ್ಷವನ್ನು ಪಡೆದರೆಂದು ಅರಿಯುತ್ತೇವೆ. ಘಂಟಾಕರ್ಣನಿಗೂ ಮೋಕ್ಷವಾಯಿತು. ಆದುದರಿಂದ ಉತ್ಕೃಷ್ಟಶರೀರದ ಕೊನೆಯಲ್ಲಿ ಮಾತ್ರ ಮೋಕ್ಷವೆಂಬ ನಿಯಮವಿಲ್ಲವೆಂದಾಯಿತು.

ಕೆಲವರು ಒಂದೇರೂಪವಾದ ಮುಕ್ತಾನುಭವ ಎಂದು ಹೇಳುವುದು ಕೂಡುವುದಿಲ್ಲ. ಅಧಿಕಾರದ ಅವಸ್ಥೆಯಲ್ಲಿ ಅಂದರೆ ಮೋಕ್ಷಕ್ಕಾಗಿ ಕೃಷಿಮಾಡುವ ಸ್ಥಿತಿಯಲ್ಲಿ "ಇವನು ದೇವಶರೀರವುಳ್ಳವನು, ಇವನು ಮನುಷ್ಯ ಶರೀರವುಳ್ಳವನು" ಎಂಬ ಭೇದವಿದೆ. ಹಾಗೆಯೇ ಅವರ ಭೋಗದಲ್ಲಿಯೂ ತಾರತಮ್ಯವಿದೆ. ಹಾಗೆಯೇ ಮನುಷ್ಯ ಶರೀರದಿಂದ ಮೋಕ್ಷವನ್ನು ಪಡೆದವನಿಗೂ ದೇವಶರೀರವನ್ನು ಹೊಂದಿ ಮೋಕ್ಷವನ್ನು ಪಡೆದವನಿಗೂ ಬ್ರಹ್ಮಾನುಭವದಲ್ಲಿ ತಾರತಮ್ಯವುಂಟು ಎನ್ನುವರು.

ಹಾಗೆ ಹೇಳಿದರೆ "ಸೋऽಶ್ನುತೇ ಸರ್ವಾನ್ ಕಾಮಾನ್‌ಸಹ, ಬ್ರಹ್ಮಣಾವಿಪಶ್ಚಿತಾ—ಮುಕ್ತಾತ್ಮನು ಎಲ್ಲವನ್ನೂ ಅರಿಯುವ ಬ್ರಹ್ಮದೊಡನೆ ಕೂಡಿ ಎಲ್ಲಾ

[1] ವಿಷ್ಣುಧರ್ಮ. ೧೦-೨-೨೯.

ಇಷ್ಟಾರ್ಥಗಳನ್ನೂ ಅನುಭವಿಸುತ್ತಾನೆ. "ನಿರಞ್ಜನಃ ಪರಮಂ ಸಾಮ್ಯಮುಪೈತಿ— ಕರ್ಮಬಂಧವಿಲ್ಲದವನಾಗಿ ಬ್ರಹ್ಮದೊಡನೆ ಸಮನಾಗಿರುವಿಕೆಯನ್ನು ಹೊಂದುತ್ತಾನೆ." ಇವೇ ಮೊದಲಾದ ಶ್ರುತಿಗೂ "ಮಮಸಾಧರ್ಮ್ಯಮಾಗತಾಃ —ನನಗೆ ಸಮಾನವಾದ ಧರ್ಮದ ಸ್ವಭಾವವುಳ್ಳವರಾಗುತ್ತಾರೆ" ಇವೇ ಮೊದಲಾದ ಸ್ಮೃತಿ ಮತ್ತು ಯುಕ್ತಿಗಳಿಗೂ ವಿರೋಧವಾಗುತ್ತದೆ.

ಮುಕ್ತಿಯಲ್ಲಿ ತಾರತಮ್ಯವನ್ನು—ಹೆಚ್ಚು ಕಡಿಮೆಯನ್ನು ಒಪ್ಪಿದರೆ, ಸ್ವರ್ಗಾದಿ ಪುರುಷಾರ್ಥಗಳುಂಟಾಗುತ್ತವೆ, ಪರಮಪುರುಷಾರ್ಥವಾಗುವುದಿಲ್ಲ. ಜ್ಯೋತಿಷ್ಟೋಮ ಅಗ್ನಿಷ್ಟೋಮ, ಉಕ್ಥ್ಯ, ಅತಿರಾತ್ರ, ಅಶ್ವಮೇಧ ಮುಂತಾದ ಯಾಗಗಳನ್ನು ಮಾಡಿದರೆ ಆ ಆ ಯಾಗಗಳು ಉಂಟುಮಾಡುವ ಫಲವನ್ನು ಅನುಭವಿಸುವವರೆಗೂ ಸ್ವರ್ಗವಾಸಾದಿ ಸುಖ, ಆ ಫಲವು ಮುಗಿದನಂತರ ಹಿಂದಿನ ಹಾಗೆ ಈ ಲೋಕಕ್ಕೆ ಹಿಂದಿರುಗಬೇಕು, ಆದುದರಿಂದ ಸ್ವರ್ಗಾದಿ ಸುಖವು ಅನಿತ್ಯವಾಯಿತು. ಅದರಂತಾಗುತ್ತದೆ ಮೋಕ್ಷಸುಖವೂ ಕೂಡ. ಆ ರೀತಿ ಶಾಸ್ತ್ರವು ವಿಧಿಸಿಲ್ಲ. "ಕೊನೆಯಿಲ್ಲದ ಮೋಕ್ಷಕ್ಕೆ ಈ ಉಪಾಯಾನುಷ್ಠಾನ, ಅದಕ್ಕಿಂತ ಕಡಿಮೆಯಾದ ಆನಂದಾನುಭವಕ್ಕೆ ಈ ಉಪಾಯಾನುಷ್ಠಾನ" ಎಂದು ಶಾಸ್ತ್ರಗಳಲ್ಲಿ ಎಲ್ಲೂ ಹೇಳಿಲ್ಲ. ಆದುದರಿಂದ ಮೋಕ್ಷಕ್ಕಾಗಿ ವಿಧಿಸುವ ಉಪಾಯವನ್ನು ಅನುಷ್ಠಿಸುವ ಪ್ರಸಕ್ತಿಯೇ ಇಲ್ಲದಂತಾಗುತ್ತದೆ. ಸಾಮಾನ್ಯವಾಗಿ ಉಪಾಯವನ್ನು ಅನುಷ್ಠಾನ ಮಾಡಿದರೆ ಎಲ್ಲರಿಗೂ ಉತ್ಕೃಷ್ಟವಾದ ಮೋಕ್ಷದೊರಕುವಿಕೆ ಅಥವಾ ನಿಕೃಷ್ಟವಾದ ಮುಕ್ತಿಉಂಟಾಗುವಿಕೆಯಪ್ರಸಕ್ತಿಯಾಗುತ್ತದೆ. ಕೊನೆಯ ಶರೀರವು ದೇವಶರೀರವೋ ಅಥವಾ ಮನುಷ್ಯ ಶರೀರವೋ ಎಂಬ ಪರಿಜ್ಞಾನವಿಲ್ಲದೆ ಇರುವುದರಿಂದ ಅದರೊಡಗೂಡಿದ ಮುಕ್ತಿಯಬಯಕೆ ಇಲ್ಲದಿರುವುದರಿಂದ ಅಧಿಕಾರಿಯೇ ಇಲ್ಲದಂತಾಗಿ ಉಪಾಯವನ್ನು ಅನುಷ್ಠಾನಮಾಡುವವರೇ ಇಲ್ಲದಂತಾಗುತ್ತದೆ.

ಇವರು ಮೋಕ್ಷದಲ್ಲಿ ಆತ್ಮಗಳಿಗೆ ದೇವಭಾವ ಮನುಷ್ಯಭಾವ ಮುಂತಾದವನ್ನು ಒಪ್ಪಿರುವುದರಿಂದ ಆನಂದದ ತಾರತಮ್ಯವನ್ನು ಅಂಗೀಕರಿಸಿದರೆ, ಸ್ವರ್ಗವೇ ಮೊದಲಾದ ಪುರುಷಾರ್ಥಗಳಂತೆಯೇ ಈ ಮೋಕ್ಷವೆಂಬ ಪುರುಷಾರ್ಥವೂ— ಪುರುಷನಿಗೆ ಉಂಟಾಗುವ ಪ್ರಯೋಜನವೂ ಆಗುವುದರಿಂದ ಅದು ಪರಮಪುರುಷಾರ್ಥವಾಗುವುದಿಲ್ಲ. ಸ್ವರ್ಗಾದಿಗಳಂತೆ ಅನಿತ್ಯವೇ ಆಗುತ್ತದೆ. "ಈ ಆನಂದವನ್ನು ಅನುಭವಿಸಲು ಈ ಉಪಾಯವನ್ನು ಅನುಷ್ಠಿಸಬೇಕು. ಇದಕ್ಕಿಂತಲೂ ಹೆಚ್ಚಿನ ಆನಂದವನ್ನು ಅನುಭವಿಸಲು ಆ ಉಪಾಯವನ್ನು ಅನುಷ್ಠಿಸಬೇಕು" ಎಂಬುದಾಗಿ ಶಾಸ್ತ್ರಗಳಲ್ಲಿ ಎಲ್ಲೂ ಹೇಳದೇ ಇರುವುದರಿಂದ ಉಪಾಯವನ್ನು ಅನುಷ್ಠಿಸುವ ಪ್ರಸಕ್ತಿಯೇ ಇಲ್ಲದಂತಾಗುತ್ತದೆ ಸಾಮಾನ್ಯವಾಗಿ ಉಪಾಯವನ್ನು ಅನುಷ್ಠಿಸಿದರೆ

ಎಲ್ಲರಿಗೂ ಉತ್ಕೃಷ್ಟವಾದ ಮೋಕ್ಷವೋ ಅಥವಾ ನಿಕೃಷ್ಟವಾದ ಮೋಕ್ಷವೋ ಬರಬೇಕಾಗುತ್ತದೆ.

ಅಲ್ಲದೆ ಕೊನೆಯ ಶರೀರವು, ದೇವ ಶರೀರ ಅಥವಾ ಮನುಷ್ಯ ಶರೀರ ಎಂಬ ತಿಳಿವಳಿಕೆ ಇಲ್ಲದಿದ್ದರೆ, ಅದರಿಂದ ಕೂಡಿದ ಮೋಕ್ಷದ ಆಪೇಕ್ಷೆ ಇಲ್ಲದರಿಂದ ಅಧಿಕಾರಿಯೇ ಇಲ್ಲದುದಾಗಿ ಉಪಾಯವನ್ನು ಅನುಷ್ಠಾನ ಮಾಡಬೇಕಾದ ಪ್ರಸಂಗವೇ ಇಲ್ಲದಾಗುತ್ತದೆ.

ಇದಕ್ಕೆ ಪ್ರಮಾಣ,

[1]ಪುಮಾನ್ನ ದೇವೋ ನನರೋನ ಪಶುರ್ನ್ನಚಪಾದಪಃ ।
ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ॥
[2]ದೇವಾದಿ ಭೇದೇಽ ಪಧ್ವಸ್ತೇನಾಸ್ತ್ಯೇವಾವರಣೋಹಿಸಃ ।
ವಿಭೇದಜನಕೇಜ್ಞಾನೇ ನಾಶ ಮಾತ್ಯನ್ತಿಕಂಗತೇ ॥
ಆತ್ಮನೋಬ್ರಹ್ಮಣೋಭೇದ ಮಸನ್ತಂ ಕಃ ಕರಿಷ್ಯತಿ ॥

ಜೀವನು ದೇವನೂ ಅಲ್ಲ, ಮನುಷ್ಯನೂ ಅಲ್ಲ. ಪಶುವೂ ಅಲ್ಲ ಮತ್ತು ಮರವೂ ಅಲ್ಲ. ಓ ರಾಜನೇ ! ಶರೀರ ಆಕಾರ ಇವುಗಳ ಭೇದಗಳಾದರೋ ಇವೆಲ್ಲಾ ಕರ್ಮದ ಕಾರಣಗಳಿಂದಾದವು. ದೇವತೆ ಮುಂತಾದ ಭೇದಗಳು ನಾಶವಾದರೆ ಆ ಜೀವನಿಗೆ ಉಂಟಾಗಿರುವ ಆ ಆವರಣ- ಆ ಮುಚ್ಚಳವೇ—ಕರ್ಮಸಂಬಂಧವೇ ಇರುವುದಿಲ್ಲ. ಬೇರೆಬೇರೆಯಾದ ಭೇದವನ್ನುಂಟುಮಾಡುವ ಜ್ಞಾನವು ಪೂರ್ತಿಯಾಗಿ ನಾಶವಾದರೆ ಆತ್ಮನಿಗೂ ಪರಮಾತ್ಮನಿಗೂ (ಬ್ರಹ್ಮಕ್ಕೂ) ಇಲ್ಲದಿರುವ ಭೇದವನ್ನು ಯಾವನು ಉಂಟುಮಾಡುತ್ತಾನೆ ? ಇವೇ ಮೊದಲಾದ ಪ್ರಮಾಣಗಳಿಗೆ ವಿರೋಧವೂ ಉಂಟಾದೀತು.

ಆಚಾರದಲ್ಲಿ ಹೆಚ್ಚುಕಡಿಮೆ ಇರುವ ಮುಮುಕ್ಷುಗಳಿಗೆ ಆನಂದದ ಹೆಚ್ಚುಕಡಿಮೆ ಉಂಟು—ಇದಕ್ಕೆ ಪ್ರಮಾಣ.

ಮುಮುಕ್ಷೂಣಾಂ ಸದಾಚಾರ ವೈಕಲ್ಯಂ ಯಾವದಾಯುಷಮ್ ।
ಭವೇದ್ಯದಿ ತದಾನನ್ದೇ ನ್ಯೂನತಾಂಜನಯೇದ್ಧ್ರುವಮ್ ॥

1. ವಿಷ್ಣುಪುರಾಣ, ದ್ವಿತೀಯ ಅಂಶ. ೧೩ನೇ ಅಧ್ಯಾಯ. ೯೮ನೇ ಶ್ಲೋಕ.
2. ವಿಷ್ಣು ಪುರಾಣ. ೧೪ನೇ ಅಧ್ಯಾಯ. ೩೩ನೇ ಶ್ಲೋಕ.

ಮೋಕ್ಷವನ್ನು ಪಡೆಯಬೇಕೆಂಬುವವರಿಗೆ ಅವರು ಬದುಕಿರುವವರೆಗೂ ಒಳ್ಳೆಯ ಆಚಾರದ ನಡೆವಳಿಕೆಯು ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿರದೆ ಸ್ವಲ್ಪ ಕುಂದುಉಳ್ಳದಾಗಿಯೇ ಇರುತ್ತದೆ. ಆದುದರಿಂದ ಅಂತಹ ಆಚಾರವು ಮೋಕ್ಷದಲ್ಲಿ ಉಂಟಾಗುವ ಆನಂದದಲ್ಲಿ ಕಡಿಮೆಯನ್ನುಂಟುಮಾಡಿಯೇ ಮಾಡುತ್ತದೆ—ಇದು ನಿಶ್ಚಯ. ಎಂದು ಕೆಲವರು ಹೇಳುವ ಮಾತು ಒಪ್ಪತಕ್ಕದ್ದಾದರೂ ಮೋಕ್ಷವನ್ನು ಪಡೆಯುವುದಕ್ಕೆ ಮುಂಚೆ ಉಂಟಾಗುವ ಭಗವಂತನ ಅನುಭವದಲ್ಲಿ ಸಙ್ಕೋಚವನ್ನು ಹೇಳುತ್ತದೆ ಅಷ್ಟೆ. ಹಿಂದೆ ಮುಂದೆ ಮೋಕ್ಷವನ್ನು ಪಡೆದವರಿಗೆ ಪ್ರತಿಬಂಧಕವಾದ ಬಂಧದ ಹೋಗುವಿಕೆಯು ಒಬ್ಬನಿಗೆ ಬೇಗನೇ ಹೋಗುತ್ತದೆ. ಮತ್ತೊಬ್ಬನಿಗೆ ತಡವಾಗಿ ಹೋಗುತ್ತದೆ. ಆರೀತಿ ಕಾಲದ ತಾರತಮ್ಯದಿಂದ ಇದಾಗುತ್ತದೆ. ಇದನ್ನು ಎಲ್ಲರೂ ಒಪ್ಪಲೇಬೇಕು. ಅಷ್ಟೇಹೊರತು ಇದರಿಂದ ಆನಂದದ ಪುರುಷಾರ್ಥದ ತಾರತಮ್ಯ ಹೆಚ್ಚುಕಡಿಮೆ ಇಲ್ಲ.

ಆದರೂ ಶ್ರೀ ವಿಷ್ಣುಲೋಕ ಶ್ವೇತದ್ವೀಪ ಮುಂತಾದವುಗಳಲ್ಲಿ ತರತಮಭಾವದಿಂದ ಕೂಡಿದ ಸಾಲೋಕ್ಯ ಸಾರೂಪ್ಯಗಳನ್ನು ಹೊಂದಿರುವವರಿಗೆ ಪುರಾಣಾದಿಗಳಲ್ಲಿ ಮುಕ್ತನು ಎಂದು ಹೇಳುವಿಕೆಯು ಮುಕ್ತತ್ವವ್ಯಪದೇಶವು ಇರುವುದರಿಂದ ಮುಕ್ತಿತಾರತಮ್ಯವು ಪ್ರಮಾಣದಿಂದ ಕೂಡಿದ್ದಾಗುವುದಿಲ್ಲವೇ ? ಎಂದರೆ ಅದು ಅದೂರ ವಿಪ್ರಕರ್ಷದಿಂದ ಅಂದರೆ ಬಹಳ ಹತ್ತಿರ ಇರುವುದರಿಂದ ಆರೀತಿ ಹೇಳುವುದು, ಔಪಚಾರಿಕವಾದದ್ದು, ಒಂದು ಕಾರ್ಯವನ್ನು ಮಾಡಬೇಕಾದವನು ಮುಂದೆ—ಭವಿಷ್ಯತ್ಕಾಲದಲ್ಲಿ ಮಾಡುವವನಾಗಿದ್ದರೂ 'ಇಗೋ ಮಾಡುತ್ತೇನೆ' ಎಂದು ವರ್ತಮಾನಕಾಲವಾಗಿ ಹೇಳುತ್ತಾನಲ್ಲವೇ ? ಇದನ್ನು [1]"ವರ್ತಮಾನಸಾಮೀಪ್ಯೇ ವರ್ತಮಾನವದ್ವಾ" ಎಂದು ಶಾಸ್ತ್ರಕಾರರು ಹೇಳುತ್ತಾರೆ.

**[2]ಲೋಕೇಷು ವಿಷ್ಣೋರ್ನಿವಸನ್ತಿ ಕೇಚಿತ್ ಸಮೀಪ ಮೃಚ್ಛನ್ತಿಚ ಕೇಚಿದನ್ಯೇ।**
**ಅನ್ಯೇತು ರೂಪಂ ಸದೃಶಂಭಜನ್ತೇ ಸಾಯುಜ್ಯ ಮನ್ಯೇಸತುಮೋಕ್ಷಉಕ್ತಃ ॥**

ಕೆಲವರು ವಿಷ್ಣುಲೋಕಗಳಲ್ಲಿ ವಾಸಮಾಡುತ್ತಾರೆ. ಇವರು ಸಾಲೋಕ್ಯವನ್ನು ಪಡೆದವರು, ಇಲ್ಲಿ 'ಲೋಕೇಷು—ಲೋಕಗಳಲ್ಲಿ' ಎಂದೂ 'ಕೇಚಿತ್—ಕೆಲವರು' ಎಂದೂ ಹೇಳಿರುವುದರಿಂದ ಆ ಸ್ಥಾನಕ್ಕೆ ಶುದ್ಧಸತ್ವಕ್ಕಿಂತಲೂ ಬೇರೆಯಾಗಿರುವಿಕೆ ಇರುವುದರಿಂದ ಅವುಗಳಲ್ಲಿ ಇರುವವರಿಗೆ ಮುಕ್ತತ್ವವ್ಯಪದೇಶವು—ಮೋಕ್ಷವನ್ನು ಪಡೆದವರೆಂದು ಹೇಳುವುದು ಬಹಳ ಹತ್ತಿರ ಇರುವುದರಿಂದ ಎಂಬ ಅರ್ಥವು ಸಿದ್ಧವಾ

1. ಪಾಣಿನಿ ಸೂತ್ರ. ೩-೩-೧೩೧.
2. ಶ್ರೀಭಾಗವತ (?)

ಯಿತು. ಕೆಲವರು ಸಾಮೀಪ್ಯವನ್ನು ಹೊಂದಿದವರು ಬೇರೆ ಕೆಲವರು ಸಾರೂಪ್ಯವನ್ನು—ಸಮಾನರೂಪವನ್ನು ಪಡೆದವರು. ಮತ್ತೆ ಕೆಲವರು ಹೆಚ್ಚು ಭಾಗ್ಯವನ್ನು ಪಡೆದವರು,—ಪರಮ ಪದವನ್ನು ಹೊಂದಿ ಸಾಯುಜ್ಯವನ್ನು ಹೊಂದುತ್ತಾರೆ. ಅದೇ ಮೋಕ್ಷವೆನ್ನಲ್ಪಡುತ್ತದೆ, ಬೇರೆಯವುಗಳಲ್ಲಿ ಮೋಕ್ಷಶಬ್ದವು ಉಪಚಾರದಿಂದ ಹೇಳಲ್ಪಡುತ್ತದೆ. ಸಾವಿರದಲ್ಲಿ ನೂರುಗಳು ಅಡಗಿರುತ್ತವಲ್ಲವೇ ? ಹಾಗೆ ಸಾಲೋಕ್ಯಾಗಳಿಲ್ಲವೂ ಪರಮ ಪದವನ್ನು ಹೊಂದಿದರೆ ಬರುವ ಸಾಯುಜ್ಯದಲ್ಲಿ ಅಡಗಿವೆ. ಆದುದರಿಂದ ಪರಮಪದಸ್ಥಾನದಲ್ಲಿ ಉಂಟಾಗುವ ಸಾಯುಜ್ಯದಲ್ಲಿ ಒಬ್ಬೊಬ್ಬರಿಗೂ ವ್ಯತ್ಯಾಸವೇ ಇಲ್ಲ.

**[1]ಮೋಕ್ಷಂಸಾಲೋಕ್ಯ ಸಾರೂಪ್ಯಂ ಪ್ರಾರ್ಥಯೇನಕದಾಚನ ।**
**ಇಚ್ಛಾಮ್ಯಹಂ ಮಹಾಬಾಹೋ ಸಾಯುಜ್ಯಂ ತವಸುವ್ರತ ॥**

ಇದು ಎರಡನೆಯ ಜಿತಂತಾ ಸ್ತೋತ್ರದಲ್ಲಿರುವ ಶ್ಲೋಕ. ಎಲೌ ಉದ್ದವಾದ ತೋಳುಳ್ಳ, ಮರೆಹೊಕ್ಕವರನ್ನು ಕಾಪಾಡುವ ದೀಕ್ಷೆಯನ್ನು ತೊಟ್ಟಿರುವ ಪರಮಾತ್ಮನೇ ! ನಾನು ಎಂದೂ ಸಾಲೋಕ್ಯ ಸಾರೂಪ್ಯ ರೂಪವಾದ ಮೋಕ್ಷವನ್ನು ಪ್ರಾರ್ಥಿಸುವುದಿಲ್ಲ. ನಾನು ಬಯಸುವುದು ನಿನ್ನ ಸಾಯುಜ್ಯ ಮಾತ್ರ, ಎಂಬುವ ಜಾಗದಲ್ಲಿ ಈ ಭೇದಗಳ ಅರ್ಥವನ್ನು ತಿಳಿದುಕೊಳ್ಳಬಹುದು. ಸಾಯುಜ್ಯವೆಂಬುದು ಸಯುಕ್ಕಿನ ಭಾವ. ಹಾಗಾದರೆ ಒಂದೇ ಕ್ರಿಯೆಯಲ್ಲಿ ಅನ್ವಯಿಸುವಿಕೆಯಲ್ಲವೇ ಅದು ? ಇಲ್ಲಿ ಮುಕ್ತನಿಗೆ ಬ್ರಹ್ಮದ ಜಗತ್ತಿನ ಸೃಷ್ಟಿರೂಪವಾದ ಕ್ರಿಯೆಯಲ್ಲಿ ಅನ್ವಯಿಸುವಿಕೆ ಇಲ್ಲವಲ್ಲ ಅಂದರೆ ಸಯುಕ್ಕಾದ ಒಂದುಭೋಗ್ಯದಲ್ಲಿ ಅನುಭವಿಸುವಿಕೆಯಲ್ಲಿ ಭೋಕ್ತೃವಾಗಿ—ಅನುಭವಿಸುವವನಾಗಿ ಜೊತೆಯಲ್ಲಿ ಅನ್ವಯಿಸುವುದನ್ನು ಕೊಡುವನು. ಸಪ್ರಕಾರವಾದ ಅಂದರೆ ವಿಶೇಷಣದೊಡಗೂಡಿದ ಬ್ರಹ್ಮವಾಗಿರುವ ಭೋಗ್ಯದಲ್ಲಿ ಬ್ರಹ್ಮವೂ ಮುಕ್ತನೂ ಕೂಡಿ ಭೋಕ್ತೃಗಳಾಗಿ ಅನ್ವಯಿಸುವುದರಿಂದ ಮುಕ್ತನನ್ನು ಸಯುಕ್ಕೆನ್ನುವುದು. ಲೀಲಾ ವಿಭೂತಿ ನಿತ್ಯವಿಭೂತಿಗಳಲ್ಲಿರುವ ವಸ್ತುಗಳ ಅನುಭವದಲ್ಲಿ ಇವರಿಬ್ಬರೂ ಸಮಾನವಾಗಿ ಅನುಭವಿಸುತ್ತಾರೆಂದು ತಾತ್ಪರ್ಯ. ತನಗೂ ಮತ್ತು ಇತರನಿಗೂ ಸಾಧಾರಣವಾಗಿ ಒಂದೇ ಭೋಗ್ಯದಲ್ಲಿ ಅನ್ವಯಿಸುವಿಕೆಯೇ ಸಯುಕ್ಕಾಗಿರುವಿಕೆ.

ಹಾಗಾದರೆ ಶ್ರುತಿಯು [2]**ಏತಾಸಾಮೇವ ದೇವತಾನಾಗ್ಂ ಸಾಯುಜ್ಯಂ ಸಾರ್ಷ್ಟಿತಾಗ್ಂ ಸಮಾನ ಲೋಕತಾಂಯನ್ತಿ** । ಎಂಬುದಾಗಿ ಸಾಯುಜ್ಯ ಶಬ್ದವನ್ನೂ

1. ಎರಡನೇ ಜಿತಂತಾ ಸ್ತೋತ್ರ, ೩೬.
2. ತೈ. ಬ್ರಾ. ೧೨-೫೬.

ಸಾರ್ಷ್ಟಿತಾಶಬ್ದವನ್ನೂ ಒಂದೇಆಗಿ ಪ್ರಯೋಗಿಸುತ್ತದೆಯಲ್ಲಾ ಎಂದರೆ "ಆರ್ಷ್ಟಿರ್ಹ್ಯ ಶನಂಭೋಗಃ" ಎಂದು ಸಮಾನ ಭೋಗ್ಯವಿರುವಿಕೆ ಎಂದು ಅದರ ಅರ್ಥ.

ಸಾಯುಜ್ಯ ಮುಭಯೋರತ್ರ ಭೋಕ್ತವ್ಯಸ್ಯಾವಿಶಿಷ್ಟತಾ ।
ಸಾರ್ಷ್ಟಿತಾತತ್ರಭೋಗಸ್ಯತಾರತಮ್ಯವಿಹೀನತಾ ॥

ಕಾರಿಕಾದರ್ಪಣವೆಂಬ ಗ್ರಂಥದಲ್ಲಿ ಇದರ ಅರ್ಥ ವಿವರಣೆ ಹೀಗಿದೆ—

ಅತ್ರ=ಈ ಪರಮಪದದಲ್ಲಿ, ಉಭಯೋಃ=ಮುಕ್ತನಿಗೂ ಬ್ರಹ್ಮಕ್ಕೂ, ಭೋಕ್ತವ್ಯಸ್ಯ=ಪರಿಪೂರ್ಣಬ್ರಹ್ಮರೂಪವಾದ ಭೋಗ್ಯಕ್ಕೆ, ಅವಿಶಿಷ್ಟತಾ=ವೈಷಮ್ಯವಿಲ್ಲ–ವ್ಯತ್ಯಾಸವಿಲ್ಲ. ಅದರಲ್ಲಿ ಸಾರ್ಷ್ಟಿತಾ ಭೋಗಸ್ಯ ತಾರತಮ್ಯವಿಹೀನತಾ= ಪರಿಪೂರ್ಣ ಬ್ರಹ್ಮಾನುಭವರೂಪವಾದ ಭೋಗದಲ್ಲಿ ಅನುಕೂಲವಾಗಿರುವಿಕೆಯಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದಿರುವಿಕೆ.

ಹೀಗೆ ಲೋಕದಲ್ಲಿ ಅನುಭವಿಸಲ್ಪಡುವ ಹಾಲು ಮುಂತಾದವಲ್ಲಿ ವ್ಯತ್ಯಾಸವಿಲ್ಲದಿದ್ದರೂ ಒಬ್ಬನಿಗೆ ಹೆಚ್ಚಾಗಿ ಅನುಕೂಲವಾಗಿರುವಿಕೆಯಿಂದ ಹೆಚ್ಚಾದ ಪ್ರೀತಿರೂಪವಾದ ಸುಖವಿದೆ. ಇನ್ನೊಬ್ಬನಿಗೆ ಸ್ವಲ್ಪವಾಗಿ ಅನುಕೂಲವಾಗಿರುವಿಕೆಯಿಂದ ಅಲ್ಪವಾದ ಪ್ರೀತಿಗೆ ಕಾರಣವಾಗಿರುವಿಕೆ. ಈ ವ್ಯತ್ಯಾಸವನ್ನು ನಾವು ನೋಡಿದ್ದೇವೆ. ಹಾಗೆ ಪ್ರಕೃತದಲ್ಲಿ ಬ್ರಹ್ಮಕ್ಕೂ ಮುಕ್ತನಿಗೂ ಅನುಕೂಲವಾಗಿರುವಭಾಗದಲ್ಲಿ ವಿಶೇಷವಿಲ್ಲ ಅಂತೂ ಸಾಯುಜ್ಯಕ್ಕಿಂತಲೂ ಬೇರೆಯಾದದ್ದು ಸಾರ್ಷ್ಟಿತ್ವ. ಆದುದರಿಂದ ಪುನರುಕ್ತಿ—ಹೇಳಿದ್ದನ್ನೇ ಮತ್ತೆ ಹೇಳುವ ರೂಪವಾದ ದೋಷವಿಲ್ಲ.

ಮುಕ್ತನಿಗೂ ಪರಮಾತ್ಮನಿಗೂ ಸಮಾನವಾದ ಭೋಗತ್ವವು ಹೇಗೆ ? ಇವನಿಗೆ ಜಗತ್ತಿನ ಸೃಷ್ಟಿ ಮುಂತಾದ ವ್ಯಾಪಾರವಿಲ್ಲವಲ್ಲ ? ಎಂದರೆ, ಕೃಷಿ=ವ್ಯವಸಾಯ ಮಾಡಿದ ತಂದೆಯೂ ವ್ಯಾಪಾರವನ್ನು ಮಾಡದೆ ಇರುವ ಪುತ್ರಾದಿಗಳೂ ಸಮಾನವಾಗಿ ಆ ಕೃಷಿಯ ಫಲವನ್ನು ಅಂದರೆ ಬತ್ತ, ರಾಗಿ, ಹಣ್ಣು, ಹಂಪಲ ಮುಂತಾದವನ್ನು ಅನುಭವಿಸುತ್ತಾರಲ್ಲವೆ ? ಹಾಗೆ ಜಗತ್ತಿನ ವ್ಯಾಪಾರದಲ್ಲಿ ಉಂಟಾಗುವ ರಸವು ಪ್ರೀತಿಯು, ವ್ಯಾಪರಿಸುವ ಈಶ್ವರನಿಗೂ ನೋಡುತ್ತಲಿರುವ ಮುಕ್ತನಿಗೂ ಸಮಾನವಾಗಿದೆ.

ಸೂತ್ರಕಾರರೂ [1]ಜಗದ್ವ್ಯಾಪಾರವರ್ಜಮ್=ಮುಕ್ತನಿಗೆ ಜಗತ್ತಿನ ಸೃಷ್ಟಿ ನಿಯಮನ ಮುಂತಾದ ಲೀಲೆಬಿಟ್ಟು ಕೊನೆ ಇಲ್ಲದ ಹೆಚ್ಚಾದ ಆನಂದವನ್ನುಂಟು

1. ಬ್ರಹ್ಮಸೂತ್ರ. ೪-೪-೧.

ಮಾಡುವ ಪರಿಪೂರ್ಣವಾದ ಅನುಭವ ಮಾತ್ರದಲ್ಲಿ ಪರಮಸಾಮ್ಯ ಎಂದು ಪ್ರಾರಂಭಿಸಿ, ಭೋಗಮಾತ್ರ ಸಾಮ್ಯಲಿಙ್ಗಾಚ್ಚ ಎಂದು ಹೇಳಿದ್ದಾರೆ, [1]'**ಸೋಽಶ್ನುತೇಸರ್ವಾನ್ಕಾಮಾನ್ತ್ಸಹಬ್ರಹ್ಮಣಾ ವಿಪಶ್ಚಿತಾ**'—ಎಂಬ ಶ್ರುತಿಯಿಂದ ಮುಕ್ತನಿಗೆ ಬ್ರಹ್ಮನು ಅನುಭವಿಸುವ ಭೋಗದಲ್ಲಿ ಮಾತ್ರ ಸಾಮ್ಯ ಎಂದು ಹೇಳುವುದರಿಂದ ಜಗದ್ವ್ಯಾಪಾರವಿಲ್ಲ ಎಂದು ತೋರುತ್ತದೆ.

**[2]ಸಾಮರಸ್ಯಂಹಿಸಾಯುಜ್ಯಂ ವದನ್ತಿಬ್ರಹ್ಮವಾದಿನಃ ।**

ಶಬ್ದದ ಅರ್ಥವನ್ನು ಅರಿತವರಲ್ಲಿ ಶ್ರೇಷ್ಠರೆಂದು ಲೆಕ್ಕಿಸಲ್ಪಡುವವರಲ್ಲಿ ಒಬ್ಬರಾದ ಶಾಕಟಾಯನರು ತಮ್ಮ ನಿರುಕ್ತಿಯಿಂದಲೂ ಭೋಗಸಾಮ್ಯವೇ ಸಾಯುಜ್ಯ ಶಬ್ದದ ಅರ್ಥ ಎಂದು ವ್ಯಕ್ತಪಡಿಸಿದ್ದಾರೆ. ಸಮರಸದಭಾವ ಸಾಮರಸ್ಯ, ಸಮಾನವಾದ ಭೋಗವಾಗಿರುವಿಕೆಯೇ ಅದು.

ಸಾಯುಜ್ಯ ಶಬ್ದಕ್ಕೆ ಐಕ್ಯ—ಒಂದಾಗುವಿಕೆ, ಬ್ರಹ್ಮದೊಡನೆ ಕೂಡುವಿಕೆ ಎಂದು ಅರ್ಥಮಾಡಿದರೆ, [3]**ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋವಿದಧಾತಿ ಕಾಮಾನ್**—ನಿತ್ಯರಾದ ಬಹಳ ಚೇತನರಿಗೆ ಯಾವನಿತ್ಯನಾದ ಒಬ್ಬ ಚೇತನನು ಬಯಕೆಗಳನ್ನು ಈಡೇರಿಸುತ್ತಾನೊ" [4]"**ಪೃಥಗಾತ್ಮಾನಂ ಪ್ರೇರಿತಾರಂಚ ಮತ್ವಾ**—ಆತ್ಮನನ್ನೂ, ಅವನನ್ನು ಪ್ರೇರಿಸುವವನನ್ನೂ ಬೇರೆ ಬೇರೆಯಾಗಿ ತಿಳಿದು" ಇವೇ ಮೊದಲಾದ ಶ್ರುತಿಗಳಿಗೆ ವಿರೋಧವಾಗುತ್ತದೆ. "**ನಿರಞ್ಜನಃ ಪರಮಂಸಾಮ್ಯಮುಪೈತಿ**—ಯಾವ ದೋಷವೂ ಇಲ್ಲದೆ ಪರಮ ಸಾಮ್ಯವನ್ನು ಹೊಂದುತ್ತಾನೆ."

**"ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ॥**
**ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ" ।**

ತಿಳಿಯಾದ ನೀರಿನಲ್ಲಿ ತಿಳಿಯಾದ ನೀರು ತೊಯ್ಯಲ್ಪಟ್ಟದ್ದಾಗಿ ಅದರಂತೆಯೇ ಹೇಗೆ ಆಗುತ್ತದೋ ಹಾಗೆಯೇ ಎಲೌ ಗೌತಮನೇ ! ಆತ್ಮ ಪರಮಾತ್ಮ ತತ್ತ್ವವನ್ನು ಅರಿತವನ ಆತ್ಮವಾಗುತ್ತದೆ. ಇವೇ ಮೊದಲಾದವುಗಳಿಗೆ ವಿರೋಧವಾಗುತ್ತದೆ.

1. ತೈ. ಉಪನಿಷತ್ತು ಆನಂದವಲ್ಲೀ. ೧.
2. ಶಾಕಟಾಯನರು.
3. ಕಠ. ೫–೧೩.
4. ಶ್ವೇತಾಶ್ವತರ. ೧–೬.

ಮೋಕ್ಷವನ್ನು ಕೊಡತಕ್ಕವನಾಗಿಯೂ ಸಮ್ಪ್ರದಾಯ ಪ್ರವರ್ತಕನೂ ಆಗಿರುವ ಶರಣ್ಯನ ಮಾತು ಬಹಳ ಪ್ರಬಲವಾದದ್ದೆಂಬ ಅಭಿಪ್ರಾಯದಿಂದ— "[1]ಮಮಸಾಧರ್ಮ್ಯಮಾಗತಾಃ=ನನಗೆ ಸಮಾನವಾದ ಧರ್ಮವುಳ್ಳವರಾಗಿ ಆಗುತ್ತಾರೆ" ಎಂದು ಗೀತಾಚಾರ್ಯನೂ ಹೇಳಿರುತ್ತಾನೆ ಎಂದು ಪ್ರಮಾಣವನ್ನು ತೋರಿಸುತ್ತಾರೆ. ಇವೆಲ್ಲಾ ಬೇರೆ ಪ್ರಮಾಣಗಳ ಬಲದಿಂದ ವ್ಯಾವಹಾರಿಕ ಸತ್ಯ ವಿಷಯಗಳಾಗ ಲಾರವೋ ? ಎಂದರೆ, ಭಾರತದ ಪ್ರಮಾಣವನ್ನು ತೋರಿಸುತ್ತಾರೆ.

[2]ಪರೇಣ ಪರಧರ್ಮೀಚ ಭವತ್ಯೇಷ ಸಮೇತ್ಯವೈ ।
ವಿಶುದ್ಧಧರ್ಮಾಶುದ್ಧೇನ ಬುದ್ಧೇನಚ ಸ ಬುದ್ಧಿಮಾನ್ ॥

ಏಷಃ=ಈ ಮುಕ್ತನು, ಪರೇಣ=ಬ್ರಹ್ಮದೊಡನೆ, ಸಮೇತ್ಯ=ಕೂಡಿ, ಸಂಶ್ಲೇಷವನ್ನು ಹೊಂದಿ, ಪರಬ್ರಹ್ಮಕ್ಕೆ ಯಾವ ಧರ್ಮಗಳುಂಟೋ ಅವಕ್ಕೆ ಸಮಾನ ವಾದ ಧರ್ಮವುಳ್ಳವನಾಗುತ್ತಾನೆ, ಎಂದು ಸಾಮಾನ್ಯವಾಗಿ ಮೊದಲು ಪ್ರತಿಜ್ಞೆಮಾಡಿ, ವಿಶೇಷವಾಗಿಯೂ ತೋರಿಸುತ್ತಾರೆ. ಅಯಂ=ಮುಕ್ತನು, ವಿಶುದ್ಧೇನ=ಅವಿದ್ಯೆ ಇಲ್ಲದ ಬ್ರಹ್ಮದೊಡನೆ ಕಲೆತು ತಾನೂ ಅವಿದ್ಯೆಯಿಂದ ಬಿಡಲ್ಪಡುತ್ತಾನೆ, ಬುದ್ಧೇನ=ಸರ್ವಜ್ಞನಾದ ಅವನೊಡನೆ ಕಲೆತು ತಾನೂ, ಬುದ್ಧಿಮಾನ್=ಸರ್ವಜ್ಞ ನಾಗುತ್ತಾನೆ. ಅಂದರೆ ಊಹಾಪೋಹಾತ್ಮಕವಾದ ಎಲ್ಲಾ ವಿಷಯಕ್ಕೂ ಸಂಬಂಧ ಪಟ್ಟ ಬುದ್ಧಿವುಳ್ಳವನಾಗಿ ಅವನಿಗೆ ಸಮನಾಗುತ್ತಾನೆ.

ವಿಮುಕ್ತಧರ್ಮಾಮುಕ್ತೇನ ಸಮೇತ್ಯಭರತರ್ಷಭ ।
ವಿಯೋಗಧರ್ಮಿಣಾಚೈವ ವಿಯೋಗಾತ್ಮಾ ಭವತ್ಯಪಿ ॥

ಓ ಭರತ ಕುಲ ಶ್ರೇಷ್ಠನೇ ! ಮುಕ್ತೇನ=ಬನ್ಧವಿಲ್ಲದ ಅವನೊಡನೆ ಕಲೆತು ತಾನೂ ಬಿಡಲ್ಪಟ್ಟ ಸಂಸಾರ ಧರ್ಮವುಳ್ಳವನಾಗುತ್ತಾನೆ. ವಿಯೋಗಧರ್ಮಿಣಾ=ದುಃಖ ದಿಂದ ಬಿಡಲ್ಪಟ್ಟ ಧರ್ಮವುಳ್ಳವನೊಡನೆ ಕಲೆತು ತಾನೂ ದುಃಖದಿಂದ ಬಿಡಲ್ಪಟ್ಟ ಧರ್ಮವುಳ್ಳವನಾಗುತ್ತಾನೆ.

ವಿಮೋಕ್ಷಿಣಾ ವಿಮೋಕ್ಷೀಚ ಸಮೇತ್ಯೈಷ ತಥಾಭವೇತ್ ।
ಶುಚಿಕರ್ಮಣಾಶುಚಿಶ್ಚೈಷಭವತ್ಯಮಿತದೀಪ್ತಿಮಾನ್ ॥

ವಿಮೋಕ್ಷಿಣಾ=ಮಹಾನನ್ದವುಳ್ಳ ಬ್ರಹ್ಮದೊಡನೆ, ಸಮೇತ್ಯ=ಕೂಡಿ, ಏಷಃ=ಇವನು ತಾನೂ, ವಿಮೋಕ್ಷೀಚ=ಮಹಾನನ್ದವುಳ್ಳವನಾಗಿ, ತಥಾ

1. ಗೀತೆ. ೧೪-೨.
2. ಭಾರತ ಶಾಂತಿಪರ್ವ. ೩೧೩-೨೭-೩೧.

ಭವೇತ್=ಹಾಗೆಯೇ ಆಗುತ್ತಾನೆ, ಶುಚಿಕರ್ಮಣಾ=ಕರ್ಮವುಕಾರಣವಾಗಿ ಇಲ್ಲದ ವ್ಯಾಪಾರವುಳ್ಳ ಬ್ರಹ್ಮದೊಡನೆ ಕಲೆತು, ಶುಚಿಃ=ಅಕರ್ಮಮೂಲ ವ್ಯಾಪಾರವುಳ್ಳವ ನಾಗುತ್ತಾನೆ—ಹೆಚ್ಚಾದ ಪ್ರಕಾಶವುಳ್ಳವನಾಗುತ್ತಾನೆ.

ವಿಮಲಾತ್ಮಾಚ ಭವತಿ ಸಮೇತ್ಯವಿಮಲಾತ್ಮನಾ ।
ಕೇವಲಾತ್ಮಾ ತಥಾಚೈಷ ಕೇವಲೇನ ಸಮೇತ್ಯವೈ ॥

ಸತ್ವಾದಿಗುಣಗಳಿಲ್ಲದಿರುವುದರಿಂದ ವಿಮಲವಾದ ಮನಸ್ಸುಳ್ಳವನೊಡನೆ ಕಲೆತು ತಾನೂ ಸತ್ವಾದಿಗುಣಗಳಿಲ್ಲದ ದೋಷವಿಲ್ಲದ ಮನಸ್ಸುಳ್ಳವನಾಗುತ್ತಾನೆ. ಕೇವಲೇನ=ಪ್ರಕೃತಿಗೆ ಸಂಬಂಧಪಟ್ಟ ಶರೀರ ಇಂದ್ರಿಯ ಇವೇ ಮೊದಲಾದವುಗಳಿಲ್ಲದವನೊಡನೆ ಕಲೆತು ತಾನೂ ಪ್ರಾಕೃತವಾದ ದೇಹ ಇಂದ್ರಿಯ ಇವುಗಳಿಲ್ಲದವನಾಗುತ್ತಾನೆ.

ಸ್ವತಂತ್ರಶ್ಚ ಸ್ವತಂತ್ರೇಣ ಸ್ವತಂತ್ರತ್ವಮುಪಾಶ್ನುತೇ ॥

ಸ್ವತಂತ್ರೇಣ=ಅಕರ್ಮವಶ್ಯನಾದ ಅವನೊಡನೆ ಕಲೆತು ತಾನೂ ಅಕರ್ಮವಶ್ಯನಾಗುತ್ತಾನೆ.

ಏತಾವದೇತತ್ಕಥಿತಂಮಯಾ ತೇತಥ್ಯಂ ಮಹಾರಾಜಯಥಾರ್ಥ ತತ್ವಮ್ ।
ಅಮತ್ಸರಸ್ತ್ವಂ ಪ್ರತಿಗೃಹಚಾರ್ಥಂಸನಾತನಂ ಬ್ರಹ್ಮವಿಶುದ್ಧಮಾದ್ಯಮ್ ॥

ಓ ಮಹಾರಾಜನೆ ! ನಿನಗೆ ಈ ನಿಜವಾದ ತತ್ವವನ್ನು ಹೇಳಿರುತ್ತೇನೆ, ಇದರ ಅರ್ಥವನ್ನುತಿಳಿದು ಮಾತ್ಸರ್ಯವಿಲ್ಲದೆ ಬ್ರಹ್ಮವನ್ನು ಭಜನೆಮಾಡು, ಎಂದು ಭಾರತದ ಶಾಂತಿಪರ್ವದಲ್ಲಿ ೩೧೩ನೇ ಅಧ್ಯಾಯದಲ್ಲಿ ವಸಿಷ್ಠಕರಾಳ ಸಂವಾದದಲ್ಲಿ ಹೇಳಿದೆ.

ಈ ವಚನದಲ್ಲಿ ಮುಕ್ತನನ್ನು ಸ್ವತಂತ್ರನೆಂದು ಹೇಳಿರುವುದರಿಂದ ಸ್ವತಂತ್ರೇಶ್ವರಾಭೇದವು ಉಂಟಾಗುವುದಿಲ್ಲವೇ ? ಅಂದರೆ ಇಲ್ಲಿ ಮುಕ್ತನನ್ನು ಸ್ವತಂತ್ರಎನ್ನುವುದು 'ಅಕರ್ಮವಶ್ಯ-ಕರ್ಮಗಳಿಗೆ ಅಧೀನನಲ್ಲ' ಎಂಬ ಅರ್ಥದಲ್ಲಿ ಹೇಳಿದೆ. ವೇದದಲ್ಲಿ ಹೇಳಿರುವ [1]ಸಸ್ವರಾಡ್ಭವತಿ ಎಂದು ಸ್ವಾತಂತ್ರ್ಯವನ್ನು ಹೇಳುವ ಸ್ವರಾಟ್ ಶಬ್ದಕೆ ಭಾಷ್ಯಕಾರರು ಅಕರ್ಮವಶ್ಯನೆಂದು ವ್ಯಾಖ್ಯಾನಮಾಡಿದ್ದಾರೆ.

1. ಬ್ರಹ್ಮಾತ್ಮೈಕತ್ವ ವಿಜ್ಞಾನಾದ್ವಿಮುಕ್ತಸ್ಸರ್ವಬನ್ಧನೈಃ ।
ಬ್ರಹ್ಮಣೈಕ್ಯಂ ಸಮಾಪನ್ನ ಸ್ಸ್ವರಾಡ್ಭವತಿ ಸಂವಿದಾ ॥
ಹೀಗೆಂಬುದು ಮಂತ್ರಭಾಷ್ಯ.

ಹೀಗಾದರೆ ಮುಕ್ತಿದೆಸೆಯಲ್ಲಿ "ಬ್ರಹ್ಮವೇದ ಬ್ರಹ್ಮೈವಭವತಿ"=ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗುತ್ತಾನೆ.

ತದ್ಭಾವಭಾವ ಮಾಪನ್ನಸ್ತದಾಽಸೌಪರಮಾತ್ಮನಾ ।
ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋಭವೇತ್ ॥

ಆವಾಗ ಅವನು ಪರಮಾತ್ಮನೊಡನೆ ಅವನ ಭಾವವನ್ನೇ—ಅವನೊಡನೆ ಒಂದಾಗಿರುವಿಕೆಯನ್ನೇ ಹೊಂದಿದವನಾಗಿ ಭೇದವಿಲ್ಲದವನಾಗುತ್ತಾನೆ. ಭೇದವೂ ಅವನ ಅಜ್ಞಾನದಿಂದ ಆದದ್ದೇ ಆಗಿದೆ." ಇವೇ ಮೊದಲಾದ ಅಭೇದವನ್ನು ಹೇಳುವ ಪ್ರಮಾಣಗಳ ಗತಿಯೇನು ? ಎಂದರೆ ಅದು ಬಹಳ ಸಾಮ್ಯದಿಂದ ಬರ ತಕ್ಕದ್ದೆಂದು ಹೇಳುತ್ತಾರೆ ಆಚಾರ್ಯರು .[1]ಸರಾಷ್ಟ್ರಮಭವದ್ವಿತ್ [2]ವಿಷ್ಣುರೇವ ಭೂತ್ವೇಮಾನ್=ಇವೇ ಮೊದಲಾದವುಗಳಲ್ಲಿ ಅಭೇದ ವ್ಯಪದೇಶವು—ಹೇಳುವಿಕೆಯು ಬೇರೆ ವಿಧವಾದ ಅರ್ಥದಲ್ಲಿ ಹೇಳಿದ್ದಾಗಿದೆ. ರಾಜನು ರಾಷ್ಟ್ರವೇ ಆದನು ಎಂದರೆ ಪ್ರಜೆಗಳೂ ಅವನಂತೆಯೇ ಐಶ್ವರ್ಯದಿಂದ ಕೂಡಿದವರಾಗಿ ಸುಖವಾಗಿ ಇದ್ದಾರೆ ಎಂಬ ಅರ್ಥದಲ್ಲಿ ಹೇಳಿದ್ದಾಗಿದೆ ಈ ಅಭೇದ. ಭೇದ ಶ್ರುತಿಗಳಿಗೆ ಈ ರೀತಿ ಬೇರೆ ಅರ್ಥವನ್ನು ಹೇಳಲಾಗುವುದಿಲ್ಲ.

ಮುಕ್ತಿದೆಸೆಯುಲ್ಲಿ ಐಕ್ಯವನ್ನು ಹೇಳುವ ಜಾಗಗಳೆಲ್ಲವೂ [3]"ರಾಮಸುಗ್ರೀವಯೋರೈಕ್ಯಂದೇವ್ಯೇವಂಸಮಜಾಯತ=ಓ ಸೀತಾಮಾತೇ ! ರಾಮನಿಗೂ ಸುಗ್ರೀವನಿಗೂ ಐಕ್ಯವು ಈ ರೀತಿಯಾಯಿತು" ಎಂದು ಹೇಳುವ ಆಂಜನೇಯನ ಮಾತಿನಂತೆ ಎಂದರಿಯುವುದು; ಭೇದಶ್ರುತಿಗಳಿಗೆ ವಿರೋಧವಿಲ್ಲದೆ ಈ ಐಕ್ಯವನ್ನು ಅರ್ಥ ಮಾಡಬೇಕು.

ಹಾಗಿಲ್ಲದಿದ್ದರೆ—

[4]ಯದಾತು ಮನ್ಯತೇಽನ್ಯೋಽಹಮನ್ಯಏಷಇತಿ ದ್ವಿಜ ।
ತದಾಸಕೇವಲೀಭೂತಃಷಡ್ವಿಂಶ ಮನುಪಶ್ಯತಿ ॥

ಅಯಂಜೀವಃ=ಈ ಜೀವನು, ಯದಾ=ಯಾವಾಗ, ಅಹಂ=ನಾನು, ಅನ್ಯಃ=ಪರಮಾತ್ಮನಿಗಿಂತ ಬೇರೆಯಾದವನು, ಏಷಃ=ಈ ಪರಮಾತ್ಮನು,

1. ತೈತ್ತರೀಯ ಬ್ರಾಹ್ಮಣ. ಅಷ್ಟಕ. ೧.
2. ತೈ. ಸಂ. ೨-೧೬.
3. ರಾಮಾಯಣ ಸುಂದರಕಾಂಡ. ೩೫-೫೧.
4. ಭಾರತ ಶಾಂತಿಪರ್ವ. ೩೨೩-೭೭-೮೦.

ಅನ್ಯಃ = ನನಗಿಂತ ಬೇರೆಯಾದವನು ಎಂಬುದಾಗಿ, ಮನ್ಯತೇ = ತಿಳಿಯುತ್ತಾನೋ, ತದಾ = ಆವಾಗ, ಹೇ ದ್ವಿಜ = ಎಲೌ ಬ್ರಾಹ್ಮಣನೇ ! ಸಃ = ಅವನು, ಕೇವಲೀಭೂತಃ = ಕಟ್ಟಿಲ್ಲದವನಾಗಿ ಮುಕ್ತಿದೆಸೆಯಲ್ಲಿ, ಷಡ್ವಿಂಶಂ = ಪರಮಾತ್ಮನನ್ನು, ಅನುಪಶ್ಯತಿ = ನೋಡುತ್ತಾನೆ, ಅನುಭವಿಸುತ್ತಾನೆ ಎಂದರ್ಥ. ಐಕ್ಯಜ್ಞಾನವು ಉಪಾಧಿಯಿಂದ ಉಂಟಾದುದು ಎಂಬುದಕೆ, ಸ್ಪಷ್ಟವಾದ ವಚನವನ್ನು ತೋರಿಸುತ್ತಾರೆ.

ಅನ್ಯಶ್ಚರಾಜನ್ಸಪರಸ್ತಥಾऽನ್ಯಃ ಪಂಚವಿಂಶಕಃ ।
ತತ್‌ಸ್ಥತ್ವಾದನು ಪಶ್ಯನ್ತಿಹ್ಯೇಕ ಏವೇತಿ ಸಾಧವಃ ॥

ಹೇರಾಜನ್ = ಎಲೌ ದೊರೆಯೆ ! ಸಪರಃ = ಪರಮಾತ್ಮನು, ಅನ್ಯಃ = ನನಗಿಂತ ಬೇರೆಯಾದವನು, ಪಂಚವಿಂಶಕಃ = ಜೀವನೂ ಕೂಡ, ಅನ್ಯಃ = ಪರಮಾತ್ಮನಿಗಿಂತ ಬೇರೆಯಾದವನು. ಹಾಗಾದರೆ ಇಬ್ಬರಿಗೂ, ಐಕ್ಯ = ಒಂದಾಗಿರುವಿಕೆಯನ್ನು ಹೇಳುವ ಮಾತುಗಳ ಗತಿಏನು ? ಎಂದರೆ, ತತ್‌ಸ್ಥತ್ವಾತ್ = ಅನ್ತರ್ಯಾಮಿಯಾಗಿ ಅವನ ಒಳಗೆ ಇರುವುದರಿಂದ, ಏಕಏವೇತಿ = ಒಬ್ಬನೇ ಎಂದು, ಸಾಧವಃ = ಸತ್ಪುರುಷರು, ಪಶ್ಯನ್ತಿ = ನೋಡುತ್ತಾರೆ. ಅಲ್ಲದೆ ನಿಜವಾಗಿ ಒಬ್ಬನೆಂದೇ ನೋಡುವುದಿಲ್ಲ ಎಂದರ್ಥ. ಶ್ರುತ್ಯಾದಿಗಳಲ್ಲಿ ಹೇಳುವ ಐಕ್ಯವ್ಯಪದೇಶವು ಸ್ವರೂಪೈಕ್ಯದಿಂದ ಉಂಟಾದುದಲ್ಲ. ಮತ್ತೇನೆಂದರೆ ಅನ್ತರ್ಯಾಮಿಯಾಗಿ ಅವನ ಒಳಗೇ ಇರುವುದರಿಂದ ಎಂಬುದಾಗಿ ವ್ಯಾಸರೇ ಮೊದಲಾದವರುಗಳಿಂದ ಭಾರತವೇ ಮೊದಲಾದ ಗ್ರಂಥಗಳಲ್ಲಿ ಮಾಡಲ್ಪಟ್ಟ ನಿರ್ವಹಣವು ಯಾವವಿಧದಿಂದಲೂ ವಿರುದ್ಧವಾದುದಲ್ಲ ಎಂಬ ಭಾವವು.

ಇಪ್ಪತ್ತೈದನೆಯ ತತ್ತ್ವವಾದ ಜೀವನನ್ನು ಇಪ್ಪತ್ತಾರನೆಯ ತತ್ತ್ವವಾದ ಪರಮಾತ್ಮನಿಗಿಂತ ವಿಲಕ್ಷಣನು ಬೇರೆ ಎಂಬುದಾಗಿಯೇ ತಿಳಿಯುತ್ತಾರೆಂಬುದಕ್ಕೆ ಪ್ರಮಾಣವನ್ನು ಹೇಳುತ್ತಾರೆ,

ಅನ್ಯಶ್ಚ ರಾಜನ್ಸಪರ ಸ್ತಥಾನ್ಯಃ ಪಂಚವಿಂಶಕಃ ।
ತೇನ್ಯೈತನ್ನಾಭಿ ಜಾನಂತಿಪಂಚವಿಂಶಕ ಮುಚ್ಯುತಮ್ ॥

ತೇನ = ಒಬ್ಬರಿಗೊಬ್ಬರು ಬೇರೆಯಾಗಿಉಳ್ಳ ರೂಪವಿರುವಕಾರಣದಿಂದ, ಏತತ್ = ಈ ಅಚ್ಯುತಂ = ಪರಮಾತ್ಮನನ್ನು, ಪಂಚವಿಂಶಕಂ = ಪೃಥಿವಿಯೇ ಮೊದಲಾದ ಇಪ್ಪತ್ತುನಾಲ್ಕು ತತ್ತ್ವಗಳಿಗಿಂತಲೂ ಬೇರೆಯಾಗಿ, ಪಂಚವಿಂಶತಿ = ಇಪ್ಪತ್ತೈದನೆಯ ತತ್ತ್ವವಾದ ಜೀವನಾಗಿ, ನಾಭಿಜಾನಂತಿ = ಅಂಗೀಕರಿಸುವುದಿಲ್ಲ ಎಂದು ತಾತ್ಪರ್ಯ.

ಭೇದಜ್ಞಾನಕ್ಕೇ ಸಂಸಾರವನ್ನು ನಿವೃತ್ತಿಮಾಡುವುದರಲ್ಲಿ ಕಾರಣವಾಗಿರುವಿಕೆಯನ್ನು ಹೇಳುತ್ತಾರೆ.

ಜನ್ಮಮೃತ್ಯುಭಯಾದ್ಭೀತಾಃ ಸಾಂಖ್ಯಯೋಗಾಶ್ಚ ಕಾಶ್ಯಪ ।
ಷಡ್ವಿಂಶಮನುಪಶ್ಯಂತಿ ಶುಚಯಸ್ತತ್ಪರಾಯಣಾಃ ॥

ಸಂಖ್ಯಾ=ಬುದ್ಧಿಯು, ಅದರ ಸಂಬಂಧಯೋಗವು ಸಾಂಖ್ಯಯೋಗವು, ಜ್ಞಾನಯೋಗ ನಿಷ್ಠರು, ಶುಚಯಃ=ಕರ್ಮದಿಂದ ಪರಿಶುದ್ಧವಾದ ಮನಸ್ಸುಳ್ಳವರು, ತತ್ಪರಾಯಣಾಃ=ಆ ಬ್ರಹ್ಮವೇ ಹೊಂದಲುತಕ್ಕದ್ದೆಂದು ತಿಳಿದಿರುವವರು, ಜನ್ಮ ಮೃತ್ಯುಭಯಾದ್ಭೀತಾಃಸನ್ತಃ=ಹುಟ್ಟುಸಾವು ಈ ರೀತಿಯಾದ ಭಯದಿಂದ ಹೆದರಿದವರಾಗಿ, ಷಡ್ವಿಂಶಂ=ಇಪ್ಪತ್ತಾರನೆಯ ತತ್ತ್ವನಾದ ಪರಮಾತ್ಮನನ್ನು, ಪಶ್ಯನ್ತಿ=ಆತ್ಮಾವಲೋಕನದ ಮೂಲಕ ನೋಡುತ್ತಾರೆ.

ಉತ್ತಮಃ ಪುರುಷಸ್ತ್ವನ್ಯಃ=ಕ್ಷರ-ಬದ್ಧರು ಅಕ್ಷರ-ಮುಕ್ತರು ಇವರುಗಳಿಗಿಂತ ಬೇರೆಯಾದವನು ಎಂದರ್ಥ.

ತತ್ರಯಃ ಪರಮಾತ್ಮಾತು ಸನಿತ್ಯೋ ನಿರ್ಗುಣಃಸ್ಮೃತಃ ।
ಸತು ನಾರಾಯಣೋಜ್ಞೇಯ ಸ್ಸರ್ವಾತ್ಮಾ ಪುರುಷೋಹಿಸಃ ॥

ತತ್ರ=ಜೀವಾತ್ಮನಲ್ಲಿ ಅನ್ತರ್ಯಾಮಿಯಾಗಿ ಕುಳಿತಿರುವ, ಪರಮಾತ್ಮಾ=ಪರಮಾತ್ಮನು, ಸತು=ಅವನಾದರೋ, ನಿತ್ಯಃ=ಯಾವಾಗಲೂ ಇರುವವನು, ನಿರ್ಗುಣಃ=ಸತ್ತ್ವವೇ ಮೊದಲಾದ ಮೂರು ಗುಣವಿಲ್ಲದವನು. ಅವನು ಏನು ರುದ್ರನೇ ಮೊದಲಾದ ಬೇರೆ ದೇವತೆಯೋ ? ಅಂದರೆ, ಸತು=ಅವನಾದರೊ ನಾರಾಯಣೋಜ್ಞೇಯಃ=ನಾರಾಯಣನು ಎಂದು ತಿಳಿಯತಕ್ಕವನು. ಏಕೆಂದರೆ ಸಃ=ಅವನು, ಸರ್ವಾತ್ಮಾ=ಎಲ್ಲಕ್ಕೂ ಅಂತರ್ಯಾಮಿಯಾಗಿ ಇರುವವನು, ಪುರುಷಃ=ಪುರುಷ ಶಬ್ದದಿಂದ ಹೇಳಲ್ಪಡುವವನು ಆದುದರಿಂದ.

ನಲಿಪ್ಯತೇ ಕರ್ಮಫಲೈಃ ಪದ್ಮ ಪತ್ರಮಿವಾಂಭಸಾ।
ಕರ್ಮಾತ್ಮಾತ್ವಪರೋ ಯೋಽಸೌ ಮೋಕ್ಷಬಂಧೈಸ್ಸಯುಜ್ಯತೇ ॥

ಅವನು ಕರ್ಮ ಫಲದಿಂದ ತಾವರೆಯ ಎಲೆಯಮೇಲಿರುವ ನೀರಿನಂತೆ ಅಂಟುವುದಿಲ್ಲ. ಯೋಽಸೌ=ಯಾವ ಈ ಜೀವನು, ಅಪರಃ=ನಿಕೃಷ್ಟನು, ಸತು=ಅವನಾದರೋ, ಕರ್ಮಾತ್ಮಾಸನ್=ಕರ್ಮಕ್ಕೆ ಅಧೀನನಾಗಿ, ಮೋಕ್ಷ ಬಂಧೈಃ=ಮೋಕ್ಷ ಬಂಧನಗಳಿಂದ ಅಂದರೆ ಅದಕ್ಕೆ ಅಡ್ಡಿಮಾಡುವ ಕಟ್ಟುಗಳಿಂದ, ಯುಜ್ಯತೇ=

ಕಟ್ಟಲ್ಪಡುತ್ತಾನೆ. ಈ ರೀತಿ ತತ್ತ್ವವನ್ನು ಉಪದೇಶಿಸಿ ಶಾಸ್ತ್ರಗಳಲ್ಲಿ ಹೇಳಿರುವ ಐಕ್ಯವ್ಯಪದೇಶಕ್ಕೆ ನಿರ್ವಾಹವನ್ನು ಹೇಳುತ್ತಾರೆ.

**ಅಯಃ ಪಿಂಡೇಯಥಾವಹ್ನಿರ್ಭಿನ್ನಸ್ತಿಷ್ಠತ್ಯಭಿನ್ನವತ್ ।**

**ತಥಾವಿಶ್ವಮಿದಂ ದೇವೋ ಹ್ಯಾವೃತ್ಯ ಪರಿತಿಷ್ಠತಿ ।।**

ಕಬ್ಬಿಣದ ಉಂಡೆಯಲ್ಲಿ ಬೆಂಕಿಯು ಇದೆ-ಅದನ್ನು ಕಾಯಿಸಿದರೆ, ಆ ಬೆಂಕಿಯು ಅವಕ್ಕಿಂತಲೂ ಬೇರೆಯಾದದ್ದಾಗಿದ್ದರೂ, ಬೇರೆಯಾದದ್ದಂತೆ ಕಾಣುವುದಿಲ್ಲ. ನಿಜವಾಗಿಯೂ ಅದು ಒಂದೇ ಅಲ್ಲ. ಹಾಗೆ ಈ ಪ್ರಪಂಚವನ್ನು ಈ ದೇವನು— ನಾರಾಯಣನು, ಆವೃತ್ಯ—ವ್ಯಾಪರಿಸಿ, ಪರಿತಿಷ್ಠತಿ—ಒಂದೇ ವಸ್ತುವಿನಂತೆ ಇರುತ್ತಾನೆ. ಆದುದರಿಂದ 'ಕಬ್ಬಿಣವು ಸುಡುತ್ತದೆ' ಎಂದು ಹೇಳುವ ಹಾಗೆ 'ತತ್ತ್ವಮಸಿ—ಅದು ನೀನಾಗಿದ್ದೀಯೆ' ಎಂಬ ಅಭೇದ ವ್ಯಪದೇಶ.

ಇದರಿಂದ ಮುಕ್ತಿಯಲ್ಲಿ ಸ್ವರೂಪೈಕ್ಯಕ್ಕೆ ಬಹಳ ಪ್ರಮಾಣಗಳಿಗೆ ವಿರೋಧವುಂಟಾಗುವುದರಿಂದಲೂ, ಐಕ್ಯವನ್ನು ಹೇಳುವ ಕೆಲವು ವಚನಗಳಿಗೆ ನಿರ್ವಾಹವು "ತತ್ಸ್ಥತ್ವಾದನುಪಶ್ಯಂತಿ—ಅದರೊಳಗೆ ಇರುವುದರಿಂದ ಹಾಗೆ ನೋಡುತ್ತಾರೆ" "ಅಯಃಪಿಂಡೇಯಥಾವಹ್ನಿಃ—ಕಬ್ಬಿಣದ ಉಂಡೆಯಲ್ಲಿ ಹೇಗೆ ಬೆಂಕಿಯೋ" ಇವೇ ಮೊದಲಾದ ಪ್ರಮಾಣಗಳನ್ನು ಅನುಸರಿಸಿ ತೋರಿಸಲ್ಪಡುವುದರಿಂದಲೂ ಮೋಕ್ಷದೆಶೆಯಲ್ಲಿ ಪರಮಸಾಮ್ಯವೇ ಪ್ರಾಮಾಣಿಕವೆಂದು ನಿರ್ಣಯಿಸಲ್ಪಟ್ಟಿದೆ.

ಮುಕ್ತಿದೆಶೆಯಲ್ಲಿ, ಭೇದವನ್ನು ಹೇಳುವ ಪ್ರಮಾಣಗಳು ಹೆಚ್ಚಾಗಿವೆ. ಅಭೇದವನ್ನು ಹೇಳುವ ಪ್ರಮಾಣಗಳು ಕಡಿಮೆ. ಆದುದರಿಂದ ಕಡಿಮೆಯಾಗಿರುವ ಕೆಲವು ಪ್ರಮಾಣಗಳಿಗೆ ಶಾಸ್ತ್ರವು ಒಪ್ಪುವ ರೀತಿಯಲ್ಲಿ ಉಪಚಾರವಾಗಿ ನಯನ ಮಾಡುವುದು ನ್ಯಾಯವೆಂದು ಅಭಿಪ್ರಾಯವಾಗುತ್ತದೆ.

ಆದರೂ ಪರಮಸಾಮ್ಯವು ಎಲ್ಲಾ ವಿಧದಿಂದಲೂ ಸಾಮ್ಯವಲ್ಲವೆ ? ಅದು ಐಕ್ಯದಲ್ಲಿಯೇ ಮುಗಿಯುವುದಿಲ್ಲವೆ ? ಎಂದರೆ, ಹಾಗೆ ಹೇಳಿದರೆ ಭೇದ ಹೇಳುವಿಕೆಗೆ ವಿರೋಧವುಂಟಾಗುತ್ತದೆ.

ಆದುದರಿಂದ ಮುಕ್ತನಿಗೆ ಜ್ಞಾನ ಭೋಗಾದಿಗಳಿಂದ ಬಂದ ಪರಮಸಾಮ್ಯವೇ ಉಂಟು, ಜ್ಞಾನ—ಒಂದೇ ವೇಳೆಯಲ್ಲಿ ಎಲ್ಲಾ ವಿಷಯಗಳನ್ನೂ ಸಾಕ್ಷಾತ್ಕರಿಸುವಿಕೆ-ಕಣ್ಣಿನಿಂದ ನೋಡುವಿಕೆ, ಭೋಗ—ಎಲ್ಲಾ ವಸ್ತುಗಳೂ ಪರಮಾತ್ಮನ ಶರೀರ. ಆ ರೀತಿ ಎಲ್ಲವನ್ನೂ ಶರೀರವಾಗಿ ಉಳ್ಳವನನ್ನಾಗಿಯೂ ಎಲ್ಲಾ ಗುಣಗಳಿಂದಲೂ

ಕೂಡಿರುವವನನ್ನಾಗಿಯೂ ತಿಳಿಯುವುದರಿಂದ ಎಲ್ಲವೂ ತನಗೆ ಅನುಕೂಲವಾಗಿರುವುದು ಎಂಬ ಭಾವನೆ ಇರುವಿಕೆ. ಅಂತಹ ಬ್ರಹ್ಮ ಸ್ವರೂಪದ ಸಾಕ್ಷಾತ್ಕಾರವೇ ಭೋಗವೆನ್ನುವುದು.

ಈ ಸಾಯುಜ್ಯವು ಪರಮಾತ್ಮನಿಗೂ ಜೀವಾತ್ಮನಿಗೂ ಭೇದವನ್ನು ಉಂಟು ಮಾಡುವ ಧರ್ಮವಿಲ್ಲದೆ ಇದ್ದರೆ, ಇವರಿಬ್ಬರೂ ಒಂದೇ ಎಂದಾಗಿ ಐಕ್ಯದಲ್ಲಿಯೇ ಮುಗಿಯುತ್ತದಲ್ಲವೇ ಅಂದರೆ ಪರಮಾತ್ಮನಿಗೇ ಪ್ರತಿನಿಯತವಾದ ಅಂದರೆ ಅವನೊಬ್ಬನಿಗೆ ಮಾತ್ರ ಇರುವ ಧರ್ಮಗಳು ಛತ್ರಚಾಮರಗಳು, ಇವು ಜೀವನಿಗಿಲ್ಲ ಹಾಗೆ ಅಸಾಧಾರಣವಾದ ಆಕಾರವು ಯಾವವೆಂದರೆ—

**ಜಗತ್ಕಾರಣತ್ವ**=ಜಗತ್ತಿಗೆ ಕಾರಣವಾಗಿರುವಿಕೆ ಎಂದರೆ ಸೃಷ್ಟಿಸುವಿಕೆ.

**ಮೋಕ್ಷಪ್ರದತ್ವ**=ಮೋಕ್ಷವನ್ನು ಕೊಡುವಿಕೆ, ಇದು ಜಗತ್ತಿಗೆ ಕಾರಣವಾಗಿರುವುದರಿಂದ ಬಂದ ಧರ್ಮ.

**ಸರ್ವಾಧಾರತ್ವ**=ಎಲ್ಲಕ್ಕೂ ಆಧಾರವಾಗಿರುವಿಕೆ.

**ಸರ್ವನಿಯಂತೃತ್ವ**=ಎಲ್ಲವನ್ನೂ ನಿಯಮಿಸುವಿಕೆ.

**ಸರ್ವಶೇಷಿತ್ವ**=ಎಲ್ಲಕ್ಕೂ ಶೇಷಿಯಾಗಿರುವಿಕೆ ಅಂದರೆ ಯಜಮಾನನಾಗಿರುವಿಕೆ.

**ಸರ್ವಶರೀರಿತ್ವ**=ಎಲ್ಲವನ್ನೂ ಶರೀರವಾಗಿ ಪಡೆಯುವಿಕೆ—ಎಲ್ಲದರೊಳಗೂ ಇರುವಿಕೆ, ಸರ್ವಾಧಾರತ್ವವಾಗಿರುವ ಕಾರಣದಿಂದ ಬಂದ ಧರ್ಮ.

**ಸರ್ವಶಬ್ದವಾಚ್ಯತ್ವ**=ಎಲ್ಲಾ ಶಬ್ದಗಳಿಂದಲೂ ಹೇಳಿಸಿಕೊಳ್ಳಲ್ಪಡುವಿಕೆ-ಅರ್ಥವಾಗಿರುವಿಕೆ. ಸರ್ವಶರೀರಿತ್ವ ಪ್ರಯುಕ್ತವಾದ ಗುಣ.

**ಸರ್ವವೇದವೇದ್ಯತ್ವ**=ಎಲ್ಲಾ ವೇದಗಳಿಂದಲೂ ಅರಿಯಲ್ಪಡುವಿಕೆ. ಇದು ಸರ್ವಶಬ್ದವಾಚ್ಯತ್ವದಿಂದ ಉಂಟಾದುದು.

**ಸರ್ವಲೋಕಶರಣ್ಯತ್ವ**=ಎಲ್ಲ ಲೋಕವೂ, ತನ್ನನ್ನು ಕಾಪಾಡಿಕೊಳ್ಳುವುದಕ್ಕಾಗಿ ಮರೆಹೋಗಲು ತಕ್ಕ ಗುಣವಿರುವಿಕೆ.

**ಸರ್ವಮುಮುಕ್ಷೂಪಾಸ್ಯತ್ವ**=ಮೋಕ್ಷವನ್ನು ಪಡೆಯಲು ಬಯಸುವವರು ಧ್ಯಾನಮಾಡಲು ತಕ್ಕ ಗುಣವಿರುವಿಕೆ.

ಸರ್ವಫಲಪ್ರದತ್ವ=ಎಲ್ಲಾ ಫಲಗಳನ್ನೂ ಕೊಡುವ ಸಾಮರ್ಥ್ಯ ಇರುವಿಕೆ.

ಸರ್ವವ್ಯಾಪ್ತತ್ವ=ಎಲ್ಲಾದರಲ್ಲೂ ಅಡಗಿರುವಿಕೆ.

ಜ್ಞಾನಾನಂದಸ್ವರೂಪತ್ವ=ಒಂದೇ ವೇಳೆಯಲ್ಲಿ ಎಲ್ಲಾ ವಿಷಯಗಳನ್ನೂ ಕಣ್ಣಿಗೆ ಕಂಡಂತೆ ತಿಳಿಯುವುದು ಜ್ಞಾನ ಮತ್ತು ಯಾವಾಗಲೂ ದುಃಖ ಸಂಬಂಧ ವಿಲ್ಲದೆ ಸಂತೋಷವಾಗಿರುವುದು ಆನಂದ ಇವುಗಳೆರಡನ್ನೂ ಸ್ವರೂಪವಾಗಿರುವಿಕೆ ಮೇಲೆ ಹೇಳಿದ ವ್ಯಾಪ್ತಿ ಮತ್ತು ಈ ಜ್ಞಾನಾನಂದ ಸ್ವರೂಪ ಇವು ಅವನ ವಿಭು ಸ್ವರೂಪದ ಧರ್ಮ.

ಲಕ್ಷ್ಮೀಸಹಾಯತ್ವ=ತಾನು ಮಾಡುವ ಕಾರ್ಯಕ್ಕೆ ಜಗನ್ಮಾತೆಯಾದ ಲಕ್ಷ್ಮಿಯ ಸಹಾಯವನ್ನು ಪಡೆಯುವಿಕೆ. ಇವೇ ಮೊದಲಾದವು ಈಶ್ವರನಿಗೇ ಇರುವ ಗುಣಗಳು.

ಇನ್ನು ಪರಮಾತ್ಮನಿಗಿಲ್ಲದ ಮುಕ್ತನಿಗೇ ವ್ಯವಸ್ಥೆಮಾಡಲ್ಪಟ್ಟ ಗುಣಗಳನ್ನು ತಿಳಿಯೋಣ. ಆಧೇಯತ್ವ, ವಿಧೇಯತ್ವ, ಶೇಷತ್ವ, ಅಣುತ್ವ ಇವೇ ಮೊದಲಾದವು. ಇಲ್ಲಿ ಶರೀರವಾಗಿರುವಿಕೆ ಮುಂತಾದವನ್ನು ಸೇರಿಸಿಕೊಳ್ಳಬೇಕು.

ಹೀಗೆ ಮುಕ್ತದಶೆಯಲ್ಲೂ ಶೇಷತ್ವ ವಿಧೇಯತ್ವ ಇವು ವ್ಯವಸ್ಥೆಮಾಡಲ್ಪಟ್ಟ ವಾದರೆ,

"ನ ಸಂಪದಾಂ ಸಮಾಹಾರೇ ವಿಪದಾಂವಿನಿವರ್ತನೇ ।
ಸಮರ್ಥೋವಿದ್ಯತೇಕಶ್ಚಿತ್ತಂವಿನಾಪುರುಷೋತ್ತಮಮ್ ॥

ಐಶ್ವರ್ಯಗಳನ್ನು ಕೊಡುವಿಕೆಯಲ್ಲೂ, ಆಪತ್ತುಗಳನ್ನು ಹೋಗಲಾಡಿಸು ವಿಕೆಯಲ್ಲೂ ಪುರುಷ ಶ್ರೇಷ್ಠನಾದ ಆ ನಾರಾಯಣನೊಬ್ಬನನ್ನು ಬಿಟ್ಟು ಮತ್ತಾರೂ ಸಮರ್ಥರಲ್ಲ" ಎಂದು ಹೇಳಿರುವುದರಿಂದ ಆಪತ್ತುಗಳನ್ನು ಹೋಗಲಾಡಿಸುವಿಕೆ ಯಂತೆ ಆಪತ್ತುಗಳನ್ನು ಉಂಟುಮಾಡುವುದರಲ್ಲೂ ಮರ್ಥ್ಯವಿರುವುದರಿಂದ ಸ್ವತಂತ್ರರಲ್ಲದ ಮುಕ್ತರಿಗೆ ಯಾವುದಾದರೂ ಒಂದು ಕಾರಣವಾಗಿ ಅಂದರೆ ಮುಕ್ತನ ಇಚ್ಛೆಯೇನು ? ಇವನ ಅಜ್ಞಾನವೇನು ? ಈಶ್ವರನ ಇಚ್ಛೆಯೇನು ? ಇವುಗಳಿಂದ ಮತ್ತೆ ಹಿಂತಿರುಗಿ ಈ ಲೋಕಕ್ಕೆ ಬರುವಿಕೆ ಉಂಟಾಗಬಹುದಲ್ಲವೇ ? ಎಂದು ಸಂದೇಹವುಂಟಾದರೆ ಅದು ಇಲ್ಲ,

"ಸಾಯುಜ್ಯಂ ಪ್ರತಿಪನ್ನಾಯೇ ತೀವ್ರಭಕ್ತಾಸ್ತಪಸ್ವಿನಃ ।
ಕಿಙ್ಕರಾಮಮತೇನಿತ್ಯಂ ಭವಂತಿನಿರುಪದ್ರವಾಃ ॥

ಎಂದು ಭಗವಂತನು ತಾನೇ ಹೇಳಿದ್ದಾನಲ್ಲವೆ ?

ತೀವ್ರಭಕ್ತಾಃ=ಪರಮಭಕ್ತಿಯಿಂದ ಪರಿಷ್ಕರಿಸಲ್ಪಟ್ಟ ಮನಸ್ಸುಳ್ಳವರು, (ಭಕ್ತಿನಿಷ್ಠರು ಎಂದು ಅರ್ಥ) ತಪಸ್ವಿನಃ=ನ್ಯಾಸರೂಪವಾದ ತಪಸ್ಸಿನಲ್ಲಿ ನಿಷ್ಠೆ ಹೆಚ್ಚಾದ ಸ್ಥಿತಿಯಲ್ಲಿರುವವರು 'ತಸ್ಮಾನ್ನ್ಯಾಸಮೇಷಾಂತಪಸಾಮತಿರಿಕ್ತಮಾಹುಃ' ಎಂದು ಶ್ರುತಿಯು ನ್ಯಾಸವನ್ನು ಹೆಚ್ಚಾದ ತಪಸ್ಸು ಎಂದು ಹೇಳುತ್ತದಲ್ಲವೆ ? ಅಂತಹವರು ನನ್ನ ಸಾಯುಜ್ಯವನ್ನು ಹೊಂದಿ ನನ್ನ ಕಿಙ್ಕರರಾಗಿ ಯಾವಾಗಲೂ ತೊಂದರೆ ಇಲ್ಲದವರಾಗುತ್ತಾರೆ. 'ನಿತ್ಯಂ' ಎಂದು ಹೇಳಿರುವುದರಿಂದ–ಹಿಂತಿರುಗುವಿಕೆ ಮುಂತಾದ ಸಂದೇಹವಿಲ್ಲದವರಾಗುತ್ತಾರೆ ಎಂದರ್ಥ. ಇದರಿಂದ ಮೊದಲನೆಯದಾದ ಮುಕ್ತನ ಇಚ್ಛೆಯಿಂದ ಹಿಂತಿರುಗುವಿಕೆ ಕೂಡುವುದಿಲ್ಲ.

ಮೋಕ್ಷವನ್ನು ಪಡೆಯಬೇಕೆಂಬ ಸ್ಥಿತಿಯಲ್ಲಿರುವವನಿಗೆ ಅಬ್ರಹ್ಮಾತ್ಮಕವಾಗಿ. ಬ್ರಹ್ಮ ಸ್ವರೂಪವಾದುದೆಂದು ತಿಳಿಯದೆ ಕೇವಲವಾದ ಅಚಿತ್ತನ್ನು ಅನುಭವಿಸುವಿಕೆಯಿಂದ ಉಂಟಾಗುವ ಪುರುಷಾರ್ಥ ಐಶ್ವರ್ಯ. ಹಾಗೆಯೇ ಚಿತ್ತನ್ನು ಅನುಭವಿಸುವುದರಿಂದ ಉಂಟಾಗುವ ಪುರುಷಾರ್ಥ ಕೈವಲ್ಯ, ಇವೆಲ್ಲ ಅಲ್ಪವಾದವು ಮತ್ತು ಸ್ಥಿರವಲ್ಲದವು ಎಂಬ ಇದನ್ನರಿತ ಇವನಿಗೆ ವೈರಾಗ್ಯವುಂಟಾಗಿದೆ. ಆದಕಾರಣ ಈ ಐಶ್ವರ್ಯ ಕೈವಲ್ಯಗಳನ್ನು ಅನುಭವಿಸುವುದಕ್ಕಾಗಿ ತಾನು ಇಷ್ಟಪಟ್ಟು ಮತ್ತೆ ಈ ಲೋಕಕ್ಕೆ ಬರುವಿಕೆ ಎಂಬ ಎರಡನೆಯ ಸಂದೇಹವಿಲ್ಲ.

ಚಿತ್ತು ಅಚಿತ್ತು ಈಶ್ವರ ಎಂಬ ತತ್ತ್ವತ್ರಯದ ವಿಷಯವಾಗಿಯೂ ಯಾವುದನ್ನು ಬಿಡಬೇಕು–ಯಾವುದನ್ನು ಹೊಂದಬೇಕು ಎಂಬ ವಿಷಯವಾಗಿಯೂ ಹಿಂದೆ ಹುಟ್ಟಿದ ಜ್ಞಾನವು ಈವಾಗ ಕತ್ತರಿಸಲ್ಪಡಲಿಲ್ಲ ಅಥವಾ ಸಂಕುಚಿತವಾಗಿಯೂ ಆಗಿಲ್ಲ. ಎಂಬುದಕ್ಕೆ ಕಾರಣವಾದ ಕರ್ಮವು ಸ್ವಲ್ಪವೂ ಬಾಕಿ ಇಲ್ಲದೆ ನಾಶವಾಗಿರೋಣದರಿಂದ ಚೆನ್ನಾಗಿ ಅರಳಿದೆ, ಆದುದರಿಂದ ತನ್ನ ಅಜ್ಞಾನದ ಕಾರಣದಿಂದ ಆವೃತ್ತಿ ಎಂಬ ಮೂರನೆ ಸಂಶಯವಿಲ್ಲ.

ನಾಲ್ಕನೆಯ ಪಕ್ಷದಲ್ಲಿ—೧. ಭಗವಂತನ ವಿಷಯವಾದ ಅಪ್ರೀತಿಯಿಂದಲೋ, ೨. ಭಗವಂತನ ಆಜ್ಞೆಯನ್ನು ಮೀರಿ ನಡೆದುದರಿಂದಲೋ, ೩. ಭಗವಂತನಿಗೆ ವಿರುದ್ಧವಾಗಿ ನಡೆದು ಕೊಂಡಿದ್ದರಿಂದಲೋ, ಎಂದು ವಿಕಲ್ಪಮಾಡಿ ಅವನ್ನು ಕ್ರಮವಾಗಿ ನಿರಸನಮಾಡುತ್ತಾರೆ.

ಮುಮುಕ್ಷುದಶೆಯಲ್ಲಿ ಉಂಟಾದ ಭಕ್ತಿಶಬ್ದದಿಂದ ಹೇಳಲ್ಪಡುವ ಪ್ರೀತಿರೂಪವನ್ನು ತಾಳಿದ ಜ್ಞಾನವು ಈವಾಗ ಮುಕ್ತದಶೆಯಲ್ಲಿ ಶಾಸ್ತ್ರಗಳಿಗೆ ಗೋಚರವಾಗದ ಭಗವಂತನ ವೈಲಕ್ಷಣ್ಯಗಳೆಲ್ಲವೂ ಕಣ್ಣಿಗೆ ಕಾಣುವಂತೆ ಆಗಿರುವುದರಿಂದ ಮಿಗಿಲಾದ

ಪ್ರೀತಿರೂಪವನ್ನು ತಾಳಿದ ಜ್ಞಾನವಾಗಿ ಸಂಪೂರ್ಣವಾಯಿತು. ಹೀಗಿರುವುದರಿಂದ, 'ಸಚಮಮೈಪ್ರಿಯಃ=ಅವನೂ ನನಗೆ ಇಷ್ಟನು' ಎಂದು ಈಶ್ವರನ ಪ್ರೀತಿಯು ಅವನಿಂದಲೂ ಅಡಗಿಸಲು ಆಗದ್ದಾಗಿರುವುದರಿಂದ ದಡಮೀರಿದ್ದಾಗಿ ಇವನೊಡನೆ ಹೆಚ್ಚಾದ ಪಾಪದಿಂದ ಪ್ರೀತಿಗೆ ಅರ್ಹನಲ್ಲದಿದ್ದರೂ ಪ್ರವಾಹವು ಉಕ್ಕಿ ಎತ್ತರದಲ್ಲೂ ಹರಿಯುವಂತಾಯಿತು. ಆದುದರಿಂದ ಭಗವಂತನು ತನ್ನ ಇಷ್ಟದಿಂದ ಇವನನ್ನು ಹಿಂದಕ್ಕೆ ಕಳುಹಲಾರನೆಂದಾಯಿತು, ಕರ್ಮವಿಲ್ಲದಿದ್ದರೂ ಸ್ವತಂತ್ರನಾದ ಈಶ್ವರನ ಇಚ್ಛೆಯಿಂದ ಹಿಂತಿರುಗುವಿಕೆ ಉಂಟೋ ಎಂಬ ಸಂದೇಹಕ್ಕೆ ಎಡೆಯಿಲ್ಲ, ಇವನು ಶಾಸ್ತ್ರಕ್ಕೆ ಅಧೀನವಾಗಿರುವಿಕೆಯನ್ನು ಮೀರಿದವನಾದುದರಿಂದ ಮುಕ್ತದಶೆಯಲ್ಲಿ ಆಜ್ಞೆಯನ್ನು ಮೀರಿ ನಡೆಯುವಿಕೆ ಎಂಬ ದೋಷ ಇವನಿಗಂಟದು, ಭಗವಂತನಿಗೆ ಇಷ್ಟವಾದದ್ದೇ ಇವನಿಗೂ ಇಷ್ಟವಾದದ್ದಾದುದರಿಂದ ಅದಕ್ಕೆ ವಿರುದ್ಧವಾಗಿ ನಡೆಯುವವನಲ್ಲ. ಆದುದರಿಂದ ಕೈಙ್ಕರ್ಯಪರ್ಯನ್ತವಾದ ಪರಿಪೂರ್ಣ ಬ್ರಹ್ಮಾನುಭವರೂಪವಾದ ಮೋಕ್ಷವೆಂಬ ಪುರುಷಾರ್ಥವು ಮುಂದೆ ಆತ್ಮ ಇರುವವರೆಗೂ ಇರತಕ್ಕದ್ದಾಯಿತು.

ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟೇ [1]'ಅನಾವೃತ್ತಿಶ್ಶಬ್ದಾದ್‌ನಾವೃತ್ತಿಶ್ಶಬ್ದಾತ್' ಎಂದು ಸೂತ್ರಕಾರರೂ ಹೇಳಿರುತ್ತಾರೆ.

ಇಲ್ಲಿಗೆ ಪರಿಪೂರ್ಣವಾದ ಬ್ರಹ್ಮಾನುಭವವು ಮುಗಿಯಿತು.

# ಜೀವತತ್ತ್ವ ನಿರೂಪಣೆ

ಪ್ರತ್ಯಕ್ತ್ವ ಚೇತನತ್ವ ಆತ್ಮತ್ವ ಕರ್ತೃತ್ವ ಇವೇ ಮೊದಲಾದವು ಈಶ್ವರ ಜೀವ ಇವುಗಳಿಗೆ ಸಾಧಾರಣವಾದ ಲಕ್ಷಣಗಳು. ಪ್ರತ್ಯಕ್ತ್ವ ಎಂದರೆ ತನಗೆ ತಾನೇ ತೋರುವುದು—ಪ್ರಕಾಶಿಸುವುದು. ಚೇತನತ್ವವೆಂದರೆ ಜ್ಞಾನಕ್ಕೆ ಆಶ್ರಯವಾಗಿರುವಿಕೆ, ಆತ್ಮತ್ವವೆಂದರೆ ಶರೀರಕ್ಕೆ ಪ್ರತಿಸಂಬಂಧಿಯಾಗಿರುವಿಕೆ, ಕರ್ತೃತ್ವವೆಂದರೆ ಸಂಕಲ್ಪಜ್ಞಾನಕ್ಕೆ ಆಶ್ರಯವಾಗಿರುವಿಕೆ.

ಈ ರೀತಿ ಸಾಮಾನ್ಯ ಲಕ್ಷಣಗಳಿಂದ ಕೂಡಿರುವ ಜೀವನಿಗೆ ವಿಶೇಷವಾದ ಲಕ್ಷಣಗಳು ಹೇಳಲ್ಪಡುತ್ತವೆ. ಅಣುವಾಗಿದ್ದುಕೊಂಡು ಚೇತನತ್ವ—ಅಂದರೆ ಚೇತನಧರ್ಮದಿಂದ ಕೂಡಿರುವಿಕೆ. ಸ್ವತಃ—ತಾನಾಗಿಯೇ ಶೇಷನಾಗಿರಲಾಗಿ ಚೇತನತ್ವ. ಈರೀತಿ ಆಧೇಯತ್ವ—ವಿಧೇಯತ್ವ—ಪರಾಧೀನಕರ್ತೃತ್ವ ಮತ್ತೊಬ್ಬ

1. ಬ್ರಹ್ಮಸೂತ್ರ. ೪-೪-೨೨

ನಿಗೆ ಅಧೀನವಾಗಿರುವಿಕೆ. ಅಂದರೆ ಇವನಿಗೆ ಇರುವ ಕರ್ತೃತ್ವವು ಮತ್ತೊಬ್ಬ ನಿಂದ ಕೊಡಲ್ಪಟ್ಟದ್ದು ಎಂದರ್ಥ. ಇವೇ ಮೊದಲಾದವು ಊಹಿಸಲು ತಕ್ಕ ವಾಗಿವೆ.

ಅವನೂ ಕೂಡ ದೇಹ ಇಂದ್ರಿಯ ಪ್ರಾಣ ಮನಸ್ಸು ಇವುಗಳಿಗಿಂತ ವಿಲಕ್ಷಣನು. ಹೇಗೆ 'ನನ್ನ ಶರೀರ' ಎಂದಾಗ 'ನನ್ನ' ಎಂಬ ಪದಾರ್ಥ ಬೇರೆ, 'ಶರೀರ' ಎಂಬ ಪದಾರ್ಥ ಬೇರೆ, ಇಲ್ಲಿ ನನ್ನ ಎಂಬುದು ಜೀವನಿಗೂ ಶರೀರಕ್ಕೂ ಇರುವು ಸಂಬಂಧ ವನ್ನು ತೋರಿಸುತ್ತದೆ. 'ಶರೀರ' ಎಂಬ ಪದವು ಆ ಜೀವನಿಗೆ ಪ್ರತಿಸಂಬಂಧಿಯಾಗಿದೆ– ಅವನಿಗೆ ಸಂಬಂಧಪಟ್ಟದ್ದಾಗಿದೆ. ಸಂಬಂಧ ಎಂಬುದು ದ್ವಿನಿಷ್ಠ–ಎರಡರಲ್ಲೂ ಇರ ತಕ್ಕದ್ದು.

ಆದುದರಿಂದ ಶರೀರವೇ ಆತ್ಮನಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಹಾಗೆಯೇ 'ಕಣ್ಣಿನಿಂದ ನೋಡುತ್ತೇನೆ, ಕಿವಿಯಿಂದ ಕೇಳುತ್ತೇನೆ, ಮಾತಿನಿಂದ ಹೇಳುತ್ತೇನೆ' ಇವೇ ಮೊದಲಾದ ತಿಳಿವಳಿಕೆಯಿಂದ ಹೊರಗಿನ ಇಂದ್ರಿಯಗಳಿಂದಲೂ ಬೇರೆಮಾಡಲ್ಪಟ್ಟವನಾಗಿದ್ದಾನೆ. 'ಮನಸ್ಸಿನಿಂದ ಅರಿಯುತ್ತೇನೆ' ಎಂದು ಮನಸ್ಸಿಗೆ ಜ್ಞಾನದ ಕರಣವಾಗಿರುವಿಕೆ ಅಂದರೆ ಸಾಧನವಾಗಿರುವಿಕೆ ತೋರುತ್ತದೆ. ಹಾಗೆಯೇ 'ನನ್ನ ಪ್ರಾಣಗಳು' ಎಂಬುದಾಗಿ ಬೇರೆಯಾಗಿ ತೋರುತ್ತವೆ. ನಾನು ಬೇರೆ ಪ್ರಾಣ ಬೇರೆ ಎಂದಲ್ಲವೇ ಅರ್ಥವಾಗುತ್ತದೆ. 'ನಾನು ಅರಿಯುತ್ತೇನೆ' ಎಂದಾಗ ನಾನು ಬೇರೆ ಜ್ಞಾನ ಬೇರೆ ಎಂಬುದೂ ಸ್ಪಷ್ಟವಾಗಿ ತೋರುತ್ತದೆ. ಆದು ದರಿಂದ ಜೀವನು–ಮನಸ್ಸು, ಪ್ರಾಣ, ಜ್ಞಾನ ಇವುಗಳಿಗಿಂತ ಬೇರೆಯಾದವನು. ಅಣುಪರಿಮಾಣವುಳ್ಳವನು–ಅಂದರೆ ಅವನ ಅಳತೆ ಚಿಕ್ಕದೆಂದರ್ಥ ; ಅಣು ಸ್ವರೂ ಪನು. ಇವನು ಶರೀರವನ್ನು ಬಿಟ್ಟು ಬೇರೆಲೋಕಕ್ಕೆ ಹೊರಡುತ್ತಾನೆ, ಮತ್ತೆ ಶರೀರವನ್ನು ಹೊಂದುತ್ತಾನೆ ಈ ಲೋಕಕ್ಕೆ ಬಂದು ಕರ್ಮಗಳ ಫಲವನ್ನು ಅನು ಭವಿಸುತ್ತಾನೆ ಎಂಬುದಾಗಿ ಪ್ರಮಾಣಗಳು ಹೇಳುತ್ತವೆ. ಅವನು ಅಣುವಾಗಿದ್ದರೆ ಒಂದೇ ವೇಳೆಯಲ್ಲಿ ಅನೇಕ ವಿಷಯಗಳ ಅನುಭವ ಅವನಿಗೆ ಹೇಗೆ ಉಂಟಾಗುತ್ತದೆ ? ಎಂದು ಸಂದೇಹ ಪಡಕೂಡದು. ಧರ್ಮಭೂತಜ್ಞಾನದ, ವ್ಯಾಪ್ತಿ–ಹರಡುವಿಕೆ ಅದರಮೂಲಕ ಉಂಟಾಗುತ್ತದೆ ಎಂದು ತಿಳಿಯಬೇಕು. ಇದರಿಂದಲೇ ಸೌಭ ರಿಯೇ ಮೊದಲಾದವರಿಗೂ ಮತ್ತು ಮೋಕ್ಷವನ್ನು ಪಡೆದವರಿಗೂ ಒಂದೇವೇಳೆ ಯಲ್ಲಿ ಬಹಳ ಶರೀರಗಳನ್ನು ಪಡೆಯುವಿಕೆ ಉಂಟಾಗುತ್ತದೆ.

ಆಚಾರ್ಯರು 'ತತ್ತ್ವಮುಕ್ತಾಕಲಾಪ' ಎಂಬ ಗ್ರಂಥದಲ್ಲಿ 'ಶರೀರವೇ ಆತ್ಮ' ಎಂಬ ವಾದವು ಸರಿಯಲ್ಲವೆಂದು ಹೀಗೆ ಹೇಳುತ್ತಾರೆ.

[1]ಯೋ ಮೇ ಹಸ್ತಾದಿ ವರ್ಷ್ಮೇತ್ಯವಯುವನಿವಹಾದ್ವ್ಯಾತಿಭಿನ್ನಸ್ಸ ಏಕಃ
ಪ್ರತ್ಯೇಕಂ ಚೇತನತ್ವೇಬಹುರಿಹಕಲಹೋವೀತರಾಗೋನ ಜಾತಃ।
ತತ್ಸಙ್ಘಾತಾತಿರಿಕ್ತೋऽಪ್ಯವಯುವಿನಿ ಕಥಂ ತೇಷ್ವಸಿದ್ಧಾ ಮತಿಸ್ಸ್ಯಾತ್
ಸಙ್ಘಾತತ್ವಾದಿಭಿರ್ವಾ ಘಟ ಇವತದಚಿತ್ಸ್ವಾನ್ಯಮಾತ್ಮೇತ್ಯಗತ್ಯಾ॥

ಇದರ ತಾತ್ಪರ್ಯ 'ನನ್ನ ಕೈ', 'ನನ್ನಕಾಲು' ಎಂದಾಗ 'ನಾನು' ಎಂಬ ಜೀವಾತ್ಮನಿಗಿಂತಲೂ ಕೈ ಕಾಲು ಮುಂತಾದ ಅವಯುವಗಳು ಬೇರೆಯಾಗಿರುವಂತೆ 'ನನ್ನ ಶರೀರ' ಎಂಬ ಅನುಭವವೂ ಬರುವುದರಿಂದ ಅವಯುವಗಳ ಸಮುದಾಯ ರೂಪವಾದ ಶರೀರಕ್ಕಿಂತಲೂ ಬೇರೆಯಾಗಿ ಯಾವನು ತೋರುತ್ತಿರುವನೋ ಅವನೇ ಒಬ್ಬ ಅಖಂಡ ಜೀವನು.

ಶರೀರವೇ ಜೀವ ಎಂದರೆ, ಶರೀರದ ಅವಯುವಗಳಲ್ಲಿ ಪ್ರತಿಯೊಂದರಲ್ಲೂ ಚೈತನ್ಯ ಉಂಟೇ, ಇಲ್ಲವೇ ? ಎಂದು ಕೇಳಿದರೆ ಉಂಟೆಂದೇ ಹೇಳಬೇಕಾಗುತ್ತದೆ. ಏತಕ್ಕೆಂದರೆ ಒಂದೊಂದು ಅವಯುವವೂ ಕಷ್ಟಸುಖಗಳನ್ನು ಅನುಭವಿಸಲು ಸಾಧನ ವಾಗಿರುತ್ತದೆ. ಕಾಲಿನಲ್ಲಿ ನೋವು, ತಲೆಯಲ್ಲಿ ನೋವು–ಕಣ್ಣಿಗೆ ಆನಂದ, ಕಿವಿಗೆ ಇಂಪು ಇವೇ ಮೊದಲಾದವನ್ನು ನಾವು ಅನುಭವಿಸುತ್ತಲೇ ಇದ್ದೇವೆ. ಹೀಗೆ ಪ್ರತಿ ಯೊಂದವಯುವದಲ್ಲೂ ಚೈತನ್ಯವನ್ನು ಒಪ್ಪಿದರೆ ಚೈತನ್ಯವುಳ್ಳವನೇ ಚೇತನನು ಅಥವಾ ಜೀವನೂ ಆದುದರಿಂದ ಈ ಲೋಕವ್ಯವಹಾರಗಳಲ್ಲಿ ಒಂದುಶರೀರದಲ್ಲಿ ಅನೇಕ ಜೀವರನ್ನು ಒಪ್ಪಬೇಕಾಗುತ್ತದೆ. ಹಾಗೆ ಒಪ್ಪಿದರೆ ಒಂದು ರಾಜ್ಯದಲ್ಲಿ ಅನೇಕ ರಾಜರು ಇದ್ದಂತೆ ಇವನು ಹೇಳಿದ್ದು ಅವನಿಗೆ ಒಪ್ಪಿಗೆ ಆಗದೆ ಪರಸ್ಪರ ಜಗಳ ವಾಗುವ ಸಂಭವವೂ ಉಂಟಾಗುತ್ತದೆ. ಕಾಲು ನಡೆಯಬೇಕೆಂದರೆ, ಕಣ್ಣು ಮುಚ್ಚಿ ಕೊಳ್ಳುತ್ತೇನೆ ಎನ್ನುತ್ತದೆ. ಪರಸ್ಪರ ರಾಗದ್ವೇಷಗಳು ಇಲ್ಲದಕಾರಣ ಅಭಿ ಪ್ರಾಯಭೇದವೇ ಆಗಲಿ ಆದರ ಮೂಲಕವಾಗಿ ಜಗಳಗಳೇ ಆಗಲಿ ಆಗುವುದಿಲ್ಲ ವೆಂದರೆ, ವೀತರಾಗೋನಜಾತಃ = ರಾಗಾದಿಗಳೇ ಪ್ರವೃತ್ತಿಗೆ ಕಾರಣವಾದುದರಿಂದ ಅವು ಇಲ್ಲದಿದ್ದರೆ ಜನ್ಮಕ್ಕೂ ಸಂಭವವಿಲ್ಲ. ಜನ್ಮ ಎತ್ತಿರುವುದರಿಂದ ರಾಗಾದಿಗಳು ಇದ್ದೇ ಇರಬೇಕು. ಅದರ ಮೂಲಕ ಜಗಳ ಮುಂತಾದವೂ ಆಗಲೇಬೇಕಾಗುತ್ತವೆ.

ಅವಯುವಗಳಿಗೆ ಪ್ರತ್ಯೇಕ ಚೈತನ್ಯವನ್ನು ಒಪ್ಪದೆ, ಅವಯುವಿಯಾದ ಶರೀರ ದಲ್ಲಿ ಮಾತ್ರ ಅದನ್ನು ಒಪ್ಪಿ ಈ ದೋಷವನ್ನು ಪರಿಹರಿಸಬಹುದಾದರೂ ಪ್ರತ್ಯೇಕ ಅವಯುವಗಳಲ್ಲಿ ಇಲ್ಲದಿರುವ ಒಂದು ಗುಣ ಅವಯುವ ಸಮುದಾಯ ರೂಪವಾದ ಅವಯುವಿಯಲ್ಲಿ ಬರಲು ಸಾಧ್ಯವಿಲ್ಲದ್ದರಿಂದ ಶರೀರದಲ್ಲೂ ಚೈತನ್ಯ ಇಲ್ಲದೇ ಹೋಗ

1. ತತ್ತ್ವಮುಕ್ತಾಕಲಾಪ ಜೀವಸರ ॥೧॥

ಬೇಕಾಗುತ್ತದೆ. ಅವಯುವಗಳಿಗಿಂತಲೂ ಅವಯುವಿ ಬೇರೆಯಾದದ್ದು ಎಂದು ಒಪ್ಪಿದರೂ ಅವಯವಿಯಗುಣಕ್ಕೆ ಅವಯುವಗುಣವೇ ಕಾರಣವಾದುದರಿಂದ ಅವಯುವಗಳಲ್ಲಿ ಇಲ್ಲದಿರುವ ಒಂದು ಗುಣ ಅತಿರಿಕ್ತವಾದ ಅವಯುವಿಯಲ್ಲೂ ಕಾಣಿಸಿಕೊಳ್ಳಲು ಹೇಗೆಸಾಧ್ಯ ? ಇದಲ್ಲದೇ ಆ ಶರೀರ. ಸಂಘಾತರೂಪವಾಗಿರುವುದು ಮುಂತಾದ ಕಾರಣಗಳಿಂದ ಘಟದಂತೆ ಅಚೇತನವೇ ಆಗಬೇಕಾಗುತ್ತದೆಯೇ ಹೊರತು ಚೇತನವಾಗಲು ಸಾಧ್ಯವಿಲ್ಲ. 'ನನ್ನ ಶರೀರ' ಎಂಬ ಅನುಭವದಿಂದ ಶರೀರಕ್ಕಿಂತಲೂ 'ನಾನು' ಎಂಬ ಜೀವ ಬೇರೆಯಾದರೆ, 'ನನ್ನ ಆತ್ಮನು' ಎಂಬ ಅನುಭವವೂ ಇರುವುದರಿಂದ 'ನಾನು' ಎಂಬುವನು ಆತ್ಮನು ಆಗಲಾರನೆಂದರೆ-'ಮಮಾತ್ಮಾ' ಇತಿತು ಅಗತ್ಯಾ—ಶರೀರವೇ ಆತ್ಮನು ಎಂಬ ಪಕ್ಷದಲ್ಲೂ ಈ ಅನುಭವ ಹೊಂದುವುದಿಲ್ಲ. ಆದಕಾರಣ 'ನನ್ನ ಆತ್ಮನು' ಎಂಬ ಪ್ರತೀತಿಯನ್ನು ಇಬ್ಬರೂ ಗೌಣವೆಂದೇ ಒಪ್ಪಬೇಕಾಗಿದೆ. ಈ ಉತ್ತರ ಇಬ್ಬರಿಗೂ ಸಮಾನ, ಅಂದರೆ ಇಲ್ಲಿ ಆತ್ಮನು ಎಂಬುದಕ್ಕೆ 'ಮನಸ್ಸು' ಎಂದು ಅರ್ಥವೇ ಹೊರತು 'ಜೀವ' ಎಂದರ್ಥವಲ್ಲ. ಅಥವಾ ನನ್ನ ಎಂಬ ಷಷ್ಠೀ ವಿಭಕ್ತಿಗೆ ಕೆಲವು ಕಡೆಯಲ್ಲಿ ಅಭೇದವೇ ಅರ್ಥ.

'ರಾಹೋಃ ಶಿರಃ' ಇವೇ ಮೊದಲಾದೆಡೆಗಳಲ್ಲಿ ಇದನ್ನು ಕಾಣಬಹುದು. ತಲೆಯೇ ರಾಹು. ಇದನ್ನು ಎಲ್ಲರೂ ಒಪ್ಪಿರುತ್ತಾರೆ. ಆದುದರಿಂದ ಜೀವನು ಶರೀರಕ್ಕಿಂತಲೂ ಭಿನ್ನನು.

ವಿವೇಕವಿಲ್ಲದ ಪಾಮರನಿಗೆ ಈ 'ನಾನು' ಎಂಬ ಬುದ್ಧಿ, ಚೆನ್ನಾಗಿ ಕಾಯಿಸಿದ ಕಬ್ಬಿಣದ ಗುಂಡಿನಲ್ಲಿ 'ಬೆಂಕಿ' ಎಂಬ ಬುದ್ಧಿಯಂತೆ ಪರಸ್ಪರ ವೈಲಕ್ಷಣಕ್ಕೆ ಕಾರಣವಾದ ಅಂಶಗಳು ಕಾಣದಿರುವುದರಿಂದ ಆತ್ಮನಿಂದ ಕೂಡಿದ ಶರೀರದಲ್ಲೇ ಬಂದರೂ ಚಿಂತೆಯಿಲ್ಲ. ಏತಕ್ಕೆಂದರೆ, ಅವಿವೇಕಿಗೆ ಗೊತ್ತಾಗದಿದ್ದರೂ ವೈದಿಕರಾದ ನಮಗೆ ಶ್ರುತಿಯಲ್ಲಿ ಹೇಳಿರುವ ಮತ್ತೆ ಹುಟ್ಟುವಿಕೆ ಮುಂತಾದ ವೃತ್ತಾಂತಗಳು ಶರೀರಕ್ಕಿಂತಲೂ ಬೇರೆಯಾದ ಆತ್ಮನು ಇಲ್ಲದಿದ್ದರೆ ಸಂಗತವಾಗುವುದಿಲ್ಲ. ಯಾವವಿಧವಾದ ದೋಷವೂ ಇಲ್ಲದ ಸ್ಪಷ್ಟವಾದ ಶ್ರುತಿಗಳೂ ಈ ದೇಹಹೋದರೂ ಬೇರೆ ದೇಹವನ್ನು ಪಡೆಯುವ ಸಾಮರ್ಥ್ಯವುಳ್ಳ ಜ್ಞಾನಾನಂದ ಸ್ವರೂಪಿಯಾದ, ದೇಹಕ್ಕಿಂತ ಬೇರೆಯಾದ ಆತ್ಮನು ಇರುವುದನ್ನು ದೃಢವಾಗಿ ಹೇಳುತ್ತವೆ.

ಶರೀರಕ್ಕಿಂತಲೂ ಬೇರೆಯಾದ ಆತ್ಮನ ಅನುಭವ ಸಾಮಾನ್ಯವಾಗಿ ಲೋಕದಲ್ಲಿ ಬರುವುದು ಅಪರೂಪ, ಇಂತಹ ಗಹನವಾದ ವಿಷಯಗಳಲ್ಲಿ ನಮ್ಮ ಅನುಭವಕ್ಕಿಂತಲೂ ಶಾಸ್ತ್ರವನ್ನು ಪ್ರಮಾಣವಾಗಿ ಒಪ್ಪುವುದೇ ಮೇಲು. ಶಾಸ್ತ್ರಗಳಲ್ಲಿ 'ಪುಣ್ಯಃ ಪುಣ್ಯೇನಕರ್ಮಣಾಭವತಿ, ಪಾಪಃ ಪಾಪೇನ—ಪುಣ್ಯಮಾಡಿದನು ಪುಣ್ಯಜನ್ಮವನ್ನು ಪಡೆಯುತ್ತಾನೆ. ಪಾಪಮಾಡಿದವನು ಪಾಪಮಾಡುವ ನೀಚ ಜನ್ಮ

ವನ್ನೇ ಹೊಂದುತ್ತಾನೆ ಎಂಬುದಾಗಿ ಹೇಳುತ್ತದೆ. ಶರೀರವೇ ಆತ್ಮನಾದರೆ ಈ ಅರ್ಥ ಹೊಂದುವುದಿಲ್ಲ. ಹೀಗೆ ಶ್ರುತವಾದ ಅರ್ಥದ ನಿರ್ವಹಣೆಯು ಶರೀರಕ್ಕಿಂತಲೂ ಬೇರೆಯಾದ ಆತ್ಮನಿಲ್ಲದೇ ಸಾಧ್ಯವಾಗಲಾರದು. ಇದು ಶ್ರುತ್ಯರ್ಥಾಪತ್ತಿ. ಇದರಂತೆ, 'ನಿತ್ಯೋನಿತ್ಯಾನಾಂ'=ನಿತ್ಯರಾದ ಚೇತನರ ಮಧ್ಯದಲ್ಲಿ ನಿತ್ಯನಾದ ಚೇತನನು ಎಂದೂ, 'ನಜಾಯತೇ ಮ್ರಿಯತೇವಾ ವಿಪಶ್ಚಿತ್=ವಿಧವಿಧವಾಗಿರುವುದನ್ನು ನೋಡಲು ತಕ್ಕಜ್ಞಾನವುಳ್ಳವನು ಅಂದರೆ ಈ ಚೇತನನು ಹುಟ್ಟುವುದಿಲ್ಲ ಅಥವಾ ಸಾಯುವುದಿಲ್ಲ' ಇವೇ ಮುಂತಾದ ಶ್ರುತಿಗಳಲ್ಲಿ ಆತ್ಮನಿಗೆ ಹುಟ್ಟು ಸಾವು ಇವು ಇಲ್ಲವೆಂದು ಹೇಳಿದೆ. ಅದುದರಿಂದ ಶರೀರಕ್ಕಿಂತಲೂ ಬೇರೆಯಾದ ಆತ್ಮನು ಇರುವುದು ಸಿದ್ಧವಾಯಿತು ಅವನು ನಿತ್ಯವೆಂದೂ ಸಿದ್ಧವಾಯಿತು.

ಒಬ್ಬನು ಒಂದನ್ನು ಕಣ್ಣಿನಿಂದ ನೋಡುತ್ತಾನೆ; ಅನಂತರ ಅದನ್ನು ಮುಟ್ಟಲು ಬಯಸಿ ಮುಟ್ಟುತ್ತಾನೆ. ಆವಾಗ ನೋಡಿದ್ದನ್ನೇ ಮುಟ್ಟುತ್ತಿದ್ದೇನೆ ಎಂಬ ಪ್ರತ್ಯಭಿಜ್ಞೆ ಉಂಟಾಗುತ್ತದೆ, ಚಕ್ಷುರಿಂದ್ರಿಯದಿಂದ ನೋಡಿದ್ದನ್ನು ತ್ವಗಿಂದ್ರಿಯದಿಂದ ಮುಟ್ಟುತ್ತಾನೆ ಅಲ್ಲವೆ ? ಅದುದರಿಂದ ಚಕ್ಷುರಾದಿ ಬಾಹ್ಯೇಂದ್ರಿಯಗಳಿಗಿಂತಲೂ ಆತ್ಮನು ಭಿನ್ನನು. 'ನೋಡಿದ್ದನ್ನೇ ಮುಟ್ಟುತ್ತೇನೆ' ಎಂಬಲ್ಲಿ ನೋಡುವವನು, ಮುಟ್ಟುವವನು ಇಬ್ಬರೂ ಒಬ್ಬರೇ ಎಂಬುದು ಸ್ಪಷ್ಟ. ಇಂದ್ರಿಯವೇ ಆತ್ಮನಾದರೆ–ನೋಡುವವನು ಚಕ್ಷುರಿಂದ್ರಿಯ ಮುಟ್ಟುವವನು ತ್ವಗಿಂದ್ರಿಯವಾದುದರಿಂದ ಈ ಪ್ರತ್ಯಭಿಜ್ಞೆ ಬರಲು ಸಾಧ್ಯವೇ ಇಲ್ಲ. ಆದುದರಿಂದ ಬಾಹ್ಯೇಂದ್ರಿಯಗಳಿಗಿಂತಲೂ ಆತ್ಮನು ಬೇರೆ ಎಂಬುದು ಸ್ಪಷ್ಟವಾಯಿತು. ಮನಸ್ಸು ಆತ್ಮನಿಗೆ ಸ್ಮೃತಿ=ನೆನಪು ಮುಂತಾದ ಕಾರ್ಯಗಳಿಗೆ ಕರಣವೆಂದೇ ಪ್ರಮಾಣದಿಂದ ಸಿದ್ಧವಾಗಿದೆ. ಆದುದರಿಂದ ಆತ್ಮನಿಗಿಂತಲೂ ಮನಸ್ಸು ಭಿನ್ನವೇ ಆಗಬೇಕು, ಬಣ್ಣವನ್ನು ನೋಡುವುದಕ್ಕೆ ಕಣ್ಣು ಕರಣ–ಸಾಧನ ಹಾಗೆಯೇ ಸ್ಮರಣೆ ಎಂಬ ಕಾರ್ಯಕ್ಕೆ ಕರಣವಾಗಿಯೇ ಮನಸ್ಸನ್ನು ಒಪ್ಪುವುದರಿಂದ ಹೀಗೆ ಕರಣವಾದ ಮನಸ್ಸನ್ನು ಕರ್ತೃವಾದ ಆತ್ಮನೆಂದು ಹೇಳಲು ಸಾಧ್ಯವಿಲ್ಲ. ಪಂಚಪ್ರಾಣಗಳೆಂದು ಪ್ರಸಿದ್ಧವಾದ ಪ್ರಾಣ ವಾಯುಗಳು ಆತ್ಮವೆಂದರೆ ಸಮುದಾಯದಲ್ಲಿ ಚೈತನ್ಯವೇ ಅಥವಾ ಪ್ರತ್ಯೇಕ ಚೈತನ್ಯವೇ ? ಇವೇ ಮುಂತಾದ ನ್ಯಾಯದಿಂದ ಅವೂ ಚೇತನವಾಗಲಾರವು, ಜ್ಞಾನವಂತೂ ಜ್ಞಾತಾವಾದ ಆತ್ಮನ ಧರ್ಮ. ಅದು ಹೇಗೆ ಆತ್ಮನಾಗಲು ಸಾಧ್ಯ ?

ಹೀಗೆ ಆತ್ಮನು ದೇಹೇನ್ದ್ರಿಯ ಮನಃ ಪ್ರಾಣ ಬುದ್ಧಿಗಳಿಗಿಂತ ಬೇರೆಯಾದವನು ನಿತ್ಯನೂ ಕೂಡ–ಹಿಂದೆ ಅನುಭವಿಸಿದ ವಿಷಯವನ್ನು ನೆನೆಸಿಕೊಳ್ಳುವುದರಿಂದ, ಹೀಗೆ ಜೀವನು ನಿತ್ಯನಾದರೆ 'ಜೀವನು ಹುಟ್ಟಿದನು, ಜೀವನು ಸತ್ತನು ಎಂಬ ಪ್ರಸಿದ್ಧಿ ಉಂಟಲ್ಲಾ, ಅದು ಹೇಗೆ ಕೂಡುತ್ತದೆ ಎಂದರೆ, ಜೀವನಿಗೆ ದೇಹ ಸಂಬಂಧ

ಉತ್ಪತ್ತಿ ಎನಿಸುತ್ತದೆ. ದೇಹದ ವಿಯೋಗ-ಬಿಡುವಿಕೆ ನಾಶವೆನಿಸುತ್ತದೆ ಎಂದು ಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಅಂತೂ ಜೀವಸ್ವರೂಪ ನಿತ್ಯವಾದದ್ದೇ. ಆ ಜೀವನು ಪ್ರತಿಯೊಂದು ಶರೀರದಲ್ಲೂ ಬೇರೆ ಬೇರೆಯಾಗಿದ್ದಾನೆ. ಒಂದೇ ಅಳತೆ ಉಳ್ಳ ಎಲ್ಲಾ ಮಡಿಕೆಗಳ ಗುಂಪು ಒಂದು ಇದೆ ಎಂದು ಭಾವಿಸೋಣ, ಅದನ್ನು ನೋಡಿ ಒಬ್ಬನು 'ಇವೆಲ್ಲಾ ಒಂದೇ ಮಡಿಕೆ' ಎನ್ನುತ್ತಾನೆ. ಹಾಗೆಯೇ ಬತ್ತದ ರಾಶಿಯಲ್ಲಿ 'ಒಂದೇ ಬತ್ತ' ಎಂಬ ಪ್ರತೀತಿ ಇದೆ. ಅದರಂತೆ, ಜ್ಞಾನವೇ ಆಕಾರ ವಾಗಿರುವಿಕೆಯಿಂದ ಜೀವ ಒಬ್ಬನೆಂಬ ವ್ಯವಹಾರ ; ಅಷ್ಟೇ ಹೊರತು ಜೀವಸ್ವರೂಪ ಗಳಿಗೆ ಒಂದಾಗಿರುವಿಕೆ ಅಲ್ಲ, ಹಾಗೆ ಹೇಳಿದರೆ 'ನಿತ್ಯೋನಿತ್ಯಶ್ಚೇತನಶ್ಚೇತನಾನಾಂ' ಇವೇ ಮೊದಲಾದ ಪ್ರಮಾಣಗಳಿಗೆ ವಿರೋಧವುಂಟಾಗುತ್ತದೆ. ಚೇತನಗಳು ಬಹಳ ವಾಗಿವೆ ಎಂದಲ್ಲವೆ ಇಲ್ಲಿರುವ ಬಹುವಚನಕ್ಕೆ ಅರ್ಥ.

ಇವನು ಜ್ಞಾನಸ್ವರೂಪನು ಮತ್ತು ಜ್ಞಾನಾಶ್ರಯನೂಕೂಡ, ಇದಕ್ಕೆ ಪ್ರಮಾಣ 'ಏಷಹಿ ದ್ರಷ್ಟಾ ವಿಜ್ಞಾನಾತ್ಮಾಪುರುಷಃ' ಇವೇ ಮೊದಲಾದ ಶ್ರುತಿಗಳು. 'ಏಷಹಿ ದ್ರಷ್ಟಾ' ಎಂಬ ವಾಕ್ಯ ದರ್ಶನಾದಿಗಳನ್ನು ಮಾಡುವ ಲೋಕ ಪ್ರಸಿದ್ಧನಾದವ ನನ್ನೇ ಹೇಳಿ ಅವನು 'ವಿಜ್ಞಾನಾತ್ಮಾ' ಎಂದು ಜ್ಞಾನಸ್ವರೂಪನೆಂದು ಹೇಳುತ್ತದೆ.

ಎರಡನ್ನೂ ಜ್ಞಾನ ಸ್ವರೂಪವೆಂದು ಹೇಳಲು ಹೇಗೆ ಸಾಧ್ಯವೆಂದರೆ, ಎರ ಡಕ್ಕೂ ಅನ್ವಯವಾಗುವ ರೀತಿಯಲ್ಲಿ ಹೇಳುವುದಾದರೆ, "ಅರ್ಥಪ್ರಕಾಶಃಜ್ಞಾನಂ= ಯಾವುದನ್ನಾದರೂ ಪ್ರಕಾಶ ಪಡಿಸುವುದೇ ಜ್ಞಾನ ಎಂದು ಹೇಳಬಹುದು" ಹೀಗೆ ಎರಡಕ್ಕೂ ಸಾಮ್ಯವಿದ್ದರೂ ಆತ್ಮವು ತನ್ನ ಸ್ವರೂಪವನ್ನು ಮಾತ್ರ ಪ್ರಕಾಶಪಡಿಸಿ ಕೊಳ್ಳುವುದೇ ಹೊರತು ಮತ್ತೊಂದನ್ನು ತಿಳಿಯಪಡಿಸುವುದಿಲ್ಲ. ಮತಿಯು- ಜ್ಞಾನವು ತನ್ನನ್ನೂ ತನಗಿಂತಲೂ ಬೇರೆಯಾದ ಘಟವೇ ಮೊದಲಾದ ವಿಷಯ ಗಳನ್ನೂ ತಿಳಿಯಪಡಿಸುತ್ತದೆ. ಆತ್ಮನು ಜ್ಞಾನ ಸ್ವರೂಪನು ಮಾತ್ರ ಎಂದು ಹೇಳುವ 'ವಿಜ್ಞಾನ ಘನಏವ' ಇವೇ ಮೊದಲಾದ ಶ್ರುತಿಗಳೂ ಆತ್ಮನಲ್ಲಿ ಯಾವ ರೀತಿಯಲ್ಲೂ ಜಡಾಂಶದ ಸಂಬಂಧವೇ ಇಲ್ಲ ಎಂಬುದನ್ನು ಹೇಳುತ್ತವೆಯೇ ಹೊರತು ಜ್ಞಾನಕ್ಕೆ ಅವನು ಆಶ್ರಯನಲ್ಲ ಎಂಬುದನ್ನು ಹೇಳಲಿಲ್ಲ. ಈ ವಿಷಯ ದಲ್ಲಿ 'ಯಥಾಸೈಂಧವಘನಃ' ಎಂಬುದಾಗಿ ಉಪ್ಪಿನ ಹರಳನ್ನು ದೃಷ್ಟಾಂತ ಕೊಟ್ಟಿದೆ. ಅದರಲ್ಲಿ ಉಪ್ಪುರಸ ಇಲ್ಲದಿರುವ ಭಾಗ ಹೇಗೆ ಇರುವುದಿಲ್ಲವೋ, ಹಾಗೆ ಆತ್ಮ ನಲ್ಲೂ ಜ್ಞಾನ ಶೂನ್ಯವಾದ ಜಡಭಾಗ ಯಾವುದೂ ಇಲ್ಲ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

'ಅತ್ರಾಯಂ ಪುರುಷಃ ಸ್ವಯಂ ಜ್ಯೋತಿರ್ಭವತಿ' ಎಂದು ಉಪನಿಷತ್ತು ಆತ್ಮ ನನ್ನು ಸ್ವಯಂ ಪ್ರಕಾಶನು ಎಂದು ಹೇಳುತ್ತದೆ. ಆತ್ಮನು 'ನಾನು' ಎಂದು ತನ್ನ

ಇರುವಿಕೆಯನ್ನು ತಾನೇ ತೋರಿಸಿಕೊಳ್ಳುತ್ತಾ ಸ್ವಯಂ ಪ್ರಕಾಶನಾಗುತ್ತಾನೆ. 'ಅಹಂ–ನಾನು' ಎಂಬ ಅನುಭವ ಜಗತ್ತಿನಲ್ಲಿ ಎಲ್ಲರಿಗೂ ಇದೆ. ಹಾಗಾದರೆ ಆತ್ಮನು ನಿತ್ಯನಾದುದರಿಂದ ಸ್ವಯಂ ಪ್ರಕಾಶನೂ ಆದುದರಿಂದ ನಿದ್ರಾವಸ್ಥೆಯಲ್ಲಿ 'ನನಗೆ ಏನೂ ಗೊತ್ತಾಗಲಿಲ್ಲ' ಎಂಬ ಅನುಭವವಿರುವುದರಿಂದ ಆಗ ಆತ್ಮನು ತೋರುತ್ತಿಲ್ಲವೆಂದೇ ಹೇಳಬೇಕಾಗುತ್ತದೆಯಲ್ಲ ಎಂದರೆ, ಇವನು ನಿದ್ರಾವಸ್ಥೆಯಲ್ಲೂ ಸ್ವಯಂ ಪ್ರಕಾಶನಾದ್ದರಿಂದಲೇ 'ನಾನು ಸುಖವಾಗಿ ಮಲಗಿದ್ದೆ–ನಿದ್ರೆಮಾಡಿದೆ' ಎಂಬ ಪ್ರತ್ಯಭಿಜ್ಞೆ–ನೆನಪು ಎಚ್ಚರವಾದ ಮೇಲೆ ಯಾವ ತಡೆಯೂ ಇಲ್ಲದೆ ಉಂಟಾಗುತ್ತದೆ.

ಆತ್ಮನು ನಿಜ ರೂಪದಲ್ಲಿ ಸ್ವತಃ-ತಾನಾಗಿಯೇ ಸುಖಸ್ವರೂಪನು, ಉಪಾಧಿ (ಕರ್ಮ) ವಶದಿಂದ ಅವನಿಗೆ ಸಂಸಾರ-ಹುಟ್ಟುವಿಕೆ ಸಾಯುವಿಕೆ. ಇವನು ಕರ್ತೃವೂ ಆಗುತ್ತಾನೆ ಹಾಗೆಯೇ ಭೋಕ್ತೃವೂ ಆಗುತ್ತಾನೆ. ಮತ್ತೊಂದಕ್ಕೆ ಶರೀರವೂ ಆಗುತ್ತಾನೆ, ತಾನು ಶರೀರವುಳ್ಳವನೂ ಆಗುತ್ತಾನೆ. ಪ್ರಕೃತಿಯ ಅಪೇಕ್ಷೆಯಿಂದ ಶರೀರಿ-ಶರೀರವುಳ್ಳವನು, ಈಶ್ವರನ ಅಪೇಕ್ಷೆಯಿಂದ ಶರೀರ. ಅಂತೂ ಪ್ರತ್ಯಕ್ಷದಿಂದಲೂ ಶ್ರುತಿಯಿಂದಲೂ ಇವನಿಗೆ ಸ್ವಯಂಪ್ರಕಾಶತ್ವ ಸಿದ್ಧವಾಯಿತು. ಪ್ರಯೋಗವೂ ಉಂಟು. **ಆತ್ಮಾ ಸ್ವಯಂಪ್ರಕಾಶಃ, ಜ್ಞಾನತ್ವಾತ್ । ಧರ್ಮಭೂತ ಜ್ಞಾನವತ್ ಇತಿ**—ಜ್ಞಾನದ ಸ್ವಭಾವನಾಗಿರುವುದರಿಂದ ಆತ್ಮನು ಸ್ವಯಂ ಪ್ರಕಾಶನು, ಧರ್ಮಭೂತ ಜ್ಞಾನದಂತೆ ಎಂಬುದು ಉದಾಹರಣೆ. ಧರ್ಮಭೂತ ಜ್ಞಾನವು ತಾನಾಗಿಯೇ ಪ್ರಕಾಶಿಸುತ್ತದೆಯಲ್ಲವೇ ? ಜ್ಞಾನತ್ವ, ಅಣುತ್ವ, ಅಮಲತ್ವ ಇವೇ ಮೊದಲಾದವು ಜೀವನ ಸ್ವರೂಪವನ್ನು ನಿರೂಪಿಸುವ ಧರ್ಮಗಳು.

ಹೀಗೆಂದು ಹೇಳಿದುದರಿಂದ ಒಂದೊಂದು ಕ್ಷಣದಲ್ಲೂ ಜ್ಞಾನವು ಹೊಸದು ಹೊಸದಾಗಿ ಉಂಟಾಗಿ ಎತ್ತಿದ ಕ್ಷಣದಲ್ಲೇ ನಾಶವಾಗುತ್ತದೆ. ಈ ಜ್ಞಾನವು ತನ್ನನ್ನು ಹೊರತು ಬೇರೆ ವಸ್ತುವನ್ನು ತನಗೆ ಗುರಿಯಾಗಿ ಅಂದರೆ ವಿಷಯವಾಗಿ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಹೊರಗಿನ ವಸ್ತುಗಳೇ ಇಲ್ಲ. ಪ್ರತಿಯೊಂದು ಕ್ಷಣದಲ್ಲೂ ಉಂಟಾಗುತ್ತಿರುವ ಜ್ಞಾನಗಳ ಸಂತತಿಯೇ–ಪರಂಪರೆಯೇ ಆತ್ಮ ಎಂದೆನಿಸುತ್ತದೆ ಎಂಬ ಬೌದ್ಧಪಕ್ಷ.

ಭೂಮಿ, ನೀರು, ಬೆಂಕಿ, ಗಾಳಿ ಎಂಬ ತತ್ತ್ವಗಳು ಒಂದಾಗಿ ಸೇರುವಿಕೆಯಿಂದ ಜ್ಞಾನವುಂಟಾಗುತ್ತದೆ, ಅದೇ ಆತ್ಮಾ, ಈ ಆತ್ಮ ವಸ್ತುವು ದೇಹ ಇರುವವರೆಗೂ ಇರತಕ್ಕದ್ದು ಎಂದು ಹೇಳುವ ಚಾರ್ವಾಕ ಪಕ್ಷ.

ಆನೆಯ ದೇಹದಲ್ಲಿ ಆನೆಯ ಅಳತೆಯುಳ್ಳವನಾಗಿಯೂ ಇರುವೆಯ ಶರೀರದಲ್ಲಿ ಇರುವೆಯ ಅಳತೆಯುಳ್ಳವನಾಗಿಯೂ ಇರುವನು ಆತ್ಮ. ಆದುದರಿಂದ ದೇಹಪರಿಮಾಣವುಳ್ಳವನು ಆತ್ಮ ಎಂಬ ಜೈನಪಕ್ಷ.

ಕರ್ತೃತ್ವ ಭೋಕ್ತೃತ್ವಾದಿಗಳು ಪ್ರಕೃತಿಗೇ, ಪುರುಷನಿಗಿಲ್ಲ ಎಂಬ ಸಾಂಖ್ಯಪಕ್ಷ.

ಶಕ್ತಿ ವಿಶಿಷ್ಟಂ ಬ್ರಹ್ಮಕಾರಣಮ್—ಶಕ್ತಿಯಿಂದ ಕೂಡಿದ ಬ್ರಹ್ಮವು ಜಗತ್ತಿಗೆ ಕಾರಣ. ಆದುದರಿಂದ ಬ್ರಹ್ಮಾಂಶೋ ಜೀವಃ—ಬ್ರಹ್ಮದ ಭಾಗವು ಜೀವ ಎಂಬ ಯಾದವಪಕ್ಷ.

ಉಪಾಧಿ ವಿಶಿಷ್ಟ ಬ್ರಹ್ಮಕಾರಣಮ್—ಉಪಾಧಿಯಿಂದ ಕೂಡಿದ ಬ್ರಹ್ಮವು ಜಗತ್ತಿಗೆ ಕಾರಣವು ಆದುದರಿಂದ ಉಪಾಧಿಯಿಂದ ಕೂಡಿದ ಬ್ರಹ್ಮದ ಖಂಡ ಜೀವ ಎಂಬ ಭಾಸ್ಕರಪಕ್ಷ.

ಮಾಯಾ ವಿಶಿಷ್ಟಂ ಬ್ರಹ್ಮಕಾರಣಮ್—ಮಾಯೆಯಿಂದ ಕೂಡಿದ ಬ್ರಹ್ಮವು ಜಗತ್ತಿಗೆ ಕಾರಣ. ಅವಿದ್ಯೆಯಿಂದ ಪರಿಕಲ್ಪಿತವಾದದ್ದು ಒಂದು ಜೀವ—ಅದೇ ಈ ಪ್ರಪಂಚವಾಗಿ ಕಾಣುತ್ತದೆ ಎಂಬ ಮಾಯಾವಾದಿಪಕ್ಷ—ಶಾಙ್ಕರಪಕ್ಷ. ಅಂತಃ ಕರಣಾವಚ್ಛಿನ್ನವಾದ ಅನೇಕ ಜೀವವಾದಪಕ್ಷ ಇವೇ ಮೊದಲಾದ ವಿರುದ್ಧ ಪಕ್ಷಗಳು ನಿರಸನ ಮಾಡಲ್ಪಟ್ಟವು. ಹಾಗೆಯೇ ಆತ್ಮಾ ವಿಭು ಎಂಬ ಪಕ್ಷವೂ ತಳ್ಳಲ್ಪಟ್ಟಿತು.

ಕ್ಷಣಿಕವಾದ ಜ್ಞಾನ ಆತ್ಮನಾಗಲು ಸಾಧ್ಯವಿಲ್ಲ-ಆದುದರಿಂದ ಬೌದ್ಧರು ಹೇಳು ವುದು ಸರಿಯಲ್ಲ.

ಶರೀರದ ಅವಯವಗಳಲ್ಲಿ ಪ್ರತ್ಯೇಕ ಚೈತನ್ಯವೇ ? ಸಮುದಾಯದಲ್ಲಿ ಚೈತನ್ಯವೇ ? ಇವೇ ಮೊದಲಾದ ನ್ಯಾಯದಿಂದ ಚಾರ್ವಾಕಮತ ನಿರಸನ.

ಮುಕ್ತಿಕಾಲದಲ್ಲಿ ದೇಹ ಕಳೆದುಹೋಗುವುದರಿಂದ ಇವನ ಪರಿಮಾಣ ದೇಹಕ್ಕೆ ತಕ್ಕಂತೆ ಆಗುವುದಾದರೆ ಇವನು ಯಾವ ಪರಿಮಾಣವೂ ಇಲ್ಲದವನಾಗಬೇಕಾಗುತ್ತದೆ, ಆತ್ಮನು ದ್ರವ್ಯ ವರ್ಗಕ್ಕೆ ಸೇರಿರುವುದರಿಂದ ಪರಿಮಾಣ ರಹಿತನಾಗಲು ಸಾಧ್ಯವಿಲ್ಲ, ಇವೇ ಮೊದಲಾದ ಅನುಪಪತ್ತಿಗಳಿಂದ ಜೈನ ಮತದ ನಿರಸನ.

ಪುರುಷನು ಅಸಂಗನು, ಉದಾಸೀನ ಸ್ವಭಾವದವನು, ಯಾವ ಅಂಟೂ ಇಲ್ಲ ದವನು, ಇವನಿಗೆ ಸಂಸಾರಬಂಧಾದಿಗಳು ಹೇಗೆ ಸಾಧ್ಯ ?

ಇಂತಹ ನಿರ್ಲಿಪ್ತನಿಗೂ ಸಂಸಾರಭ್ರಮೆ ಮುಂತಾದವು ಬರುವುದಾದರೆ ಇದನ್ನು ನಿವೃತ್ತಿಗೊಳಿಸುವುದಾದರೂ ಹೇಗೆ ಶಕ್ಯ ? ಬಂಧ ಮೋಕ್ಷ ಇತ್ಯಾದಿಗಳು ಎಲ್ಲಾ ಪ್ರಕೃತಿಗೇ ಹೊರತು ಪುರುಷನಿಗೆ ಯಾವುದೂ ಇಲ್ಲ, ಹೀಗೆಂಬುದು ಸರಿಯಲ್ಲ ಹೀಗಾದರೆ ಸಮಸ್ತ ವ್ಯವಹಾರಗಳೂ ಸುಳ್ಳಾಗಬೇಕಾಗುತ್ತದೆ. ಆದುದರಿಂದ ಸಾಂಖ್ಯರಿಗೆ ಒಪ್ಪಿಗೆಯಾದ ಮುಕ್ತಿ ಸಮಂಜಸವಾದದ್ದಲ್ಲ.

ಜೀವ ಜಗತ್ತಿಗೂ, ಬ್ರಹ್ಮನಿಗೂ ಭೇದದಂತೆ ಅಭೇದವೂ ಸುರಕ್ಷಿತವಾಗಿರುವುದರಿಂದ ಸದ್ರೂಪವಾದ ಬ್ರಹ್ಮದಲ್ಲಿ ಜೀವ ಮತ್ತು ಜಗತ್ತಿನಲ್ಲಿರುವ ಎಲ್ಲ ಇಲ್ಲದ ದೋಷಗಳು ಬರುತ್ತವೆ. ಆದುದರಿಂದ ಇದು ಯಾದವಮತ ಸರಿಯಲ್ಲ.

ಉಪಾಧಿಯಿಂದ ಕೂಡಿದ ಬ್ರಹ್ಮಖಂಡ ಜೀವ ಎನ್ನುವ ಭಾಸ್ಕರಮತದಲ್ಲಿ ನಿರವಯವವಾಗಿಯೂ—ಅಂದರೆ ಅವಯವವಿಲ್ಲದ್ದಾಗಿಯೂ ಅಚ್ಛೇದ್ಯವಾಗಿಯೂ ಇರುವ ಬ್ರಹ್ಮದಲ್ಲಿ ಸಂಬಂಧಿಸಲ್ಪಡುವ ಉಪಾಧಿಯೋಗವು ಬ್ರಹ್ಮಕ್ಕೇ ಸಂಸಾರಿತ್ವವನ್ನು ಉಂಟುಮಾಡುತ್ತದೆ. ಸರ್ವಜ್ಞವಾದ ಬ್ರಹ್ಮಕ್ಕೆ ಕಿಂಚಿದ್ಜ್ಞತ್ವವನ್ನುಂಟು ಮಾಡುವುದು ಈ ಉಪಾಧಿಯೋಗ, ಆದುದರಿಂದ ಇದು ಹಾಸ್ಯಾಸ್ಪದವಾಗಿದೆ, ಭಾಸ್ಕರಮತದಲ್ಲಿ.

ಅವಿದ್ಯೆಯಿಂದ ಕೂಡಿದ ಬ್ರಹ್ಮವೇ ಜೀವನಾಗುತ್ತದೆ ಎಂಬ ಏಕಶರೀರಕ ಏಕಾತ್ಮ್ಯ (ಏಕಜೀವ)ವಾದದಲ್ಲಿ ಅವನಿಗೆ ಒಂದೇ ಒಂದು ಶರೀರವೇ ಹೊರತು ಅನೇಕ ಶರೀರಗಳಿರುವುದಿಲ್ಲ. ಬೇರೆ ಬೇರೆಯಾಗಿ ಅನೇಕ ಜೀವರುಗಳು ಇಲ್ಲ ಎಂದರೆ ತನಗೆ ತಾನೇ ಉಪದೇಶ ಮಾಡಿಕೊಳ್ಳಲು ಸಾಧ್ಯವಿಲ್ಲದ್ದಾಗಿ ಬಂಧ ಮೋಕ್ಷ ವ್ಯವಸ್ಥೆಯು ಇಲ್ಲವಾಗುತ್ತದೆ. ಇದು ಸಕಲ ಪ್ರಮಾಣವಿರುದ್ಧ, ಆದುದರಿಂದ ಮಾಯಾವಾದಿ ಮತವು ಒಪ್ಪತಕ್ಕದ್ದಲ್ಲ.

ಜೀವನು ಪರಮಾತ್ಮನ ಪ್ರತಿಬಿಂಬ, ನಾನಾ ವಿಧವಾದ ಜಲಾಶಯಗಳಲ್ಲಿ ಚಂದ್ರನು ಪ್ರತಿಬಿಂಬಿಸಿದಾಗ ಒಂದೇ ಚಂದ್ರ ಅನೇಕವಾಗಿ ಕಾಣುತ್ತಾನೆ. ಜಲಾಶಯಗಳ ಸ್ವಚ್ಛತೆಯ ತಾರತಮ್ಯಕ್ಕೆ ತಕ್ಕಂತೆ ಚಂದ್ರನು ಕೆಲವಲ್ಲಿ ಸ್ವಚ್ಛವಾಗಿಯೂ, ಕೆಲವಲ್ಲಿ ಮಲಿನವಾಗಿಯೂ, ಕೆಲವಲ್ಲಿ ಚಲಿಸುವುದಾಗಿಯೂ ಕೆಲವಲ್ಲಿ ನಿಶ್ಚಲವಾಗಿಯೂ, ಅನೇಕ ವಿಧ ತಾರತಮ್ಯದಿಂದ ಆ ಪ್ರತಿಬಿಂಬಗಳು ತೋರುತ್ತವೆ. ಆ ಜಲಾಶಯಗಳು ಬತ್ತಿಹೋದಾಗ ಆ ಪ್ರತಿಬಿಂಬಗಳೂ ಮರೆಯಾಗುತ್ತವೆ. ಇದರಂತೆ ನಿತ್ಯಶುದ್ಧವಾದ ಪರಬ್ರಹ್ಮವೂ ಕೂಡ ಅನೇಕ ವಿಧವಾದ ಅಂತಃಕರಣಗಳಲ್ಲಿ ಪ್ರತಿಬಿಂಬಿತವಾಗಿ ಅನೇಕ ಎಂದೆನಿಸಿಕೊಳ್ಳುತ್ತದೆ. ಪರಸ್ಪರ ವಿಲಕ್ಷಣಗಳಾಗಿಯೂ ತೋರುತ್ತದೆ. ಇವೇ ಜೀವಪದಾರ್ಥ. ಉಪಾಧಿಗಳಾದ ಅಂತಃಕರಣಗಳು ನಾಶವಾದಾಗ ಪ್ರತಿಬಿಂಬ ಬೇರೆಯಾಗಿ ಕಾಣಿಸಿಕೊಳ್ಳದೆ ಬಿಂಬದೊಂದಿಗೆ ಐಕ್ಯವನ್ನು ಹೊಂದುತ್ತದೆ. ಇದೇ ಮುಕ್ತಿ ಎಂಬುದು ಈ ಪ್ರತಿಬಿಂಬವಾದದಸಾರ.

ಆದರೆ ಉಪಾಧಿ ನಶಿಸಿದಾಗ ಪ್ರತಿಬಿಂಬವೂ ನಶಿಸುವುದು ಲೋಕಾನುಭವ. ಹೀಗಿರುವಾಗ ಈ ಪ್ರತಿಬಿಂಬ ಎಲ್ಲೋ ಇರುವ ಬಿಂಬದೊಂದಿಗೆ ಐಕ್ಯವನ್ನು ಹೊಂದುತ್ತದೆ ಎಂಬುದು ಅನುಭವ ವಿರುದ್ಧ, ಇದರಿಂದ ಉಪಾಧಿ ನಾಶವಾದಾಗ

ಪ್ರತಿಬಿಂಬರೂಪ ಜೀವನಾಶವೇ ಮೋಕ್ಷ ಎಂದಾಗುತ್ತದೆ. ತನ್ನ ನಾಶಕ್ಕಾಗಿ ತಾನೇ ಯಾರೂ ಪ್ರಯತ್ನ ಪಡಲಾರರು, ಆದುದರಿಂದ ಅಂತಃಕರಣಾವಚ್ಛಿನ್ನವಾದ ಅನೇಕ ಜೀವವಾದ ಪಕ್ಷ ಸರಿಯಲ್ಲ [1]ಬ್ರಹ್ಮದತ್ತ ಪಕ್ಷದಲ್ಲಿ,

ಏಕಂ ಬ್ರಹ್ಮೈವ ನಿತ್ಯಂ ತದಿತರ ದಖಿಲಂ ತತ್ರ ಜನ್ಮಾದಿ ಭಾಗಿ
ತ್ವ್ಯಾಮ್ಮಾತಂ ತೇನ ಜೀವೋऽಪ್ಯಚಿದಿವ ಜನಿಮಾನಿತ್ಯನಧ್ಯೇತ್ರ ಚೋದ್ಯಮ್ ॥
ತನ್ನಿತ್ಯತ್ವಂ ಹಿ ಸಾಙ್ಗಶ್ರುತಿಶತಪಠಿತಂ ಸೃಷ್ಟಿವಾದಃ ಪುನಃಸ್ಯಾತ್
ದೇಹಾದಿದ್ವಾರ ತೋऽಸ್ಯೇತ್ಯವಹಿತ ಮನಸಾಮಾವಿರಸ್ತ್ಯೈಕರಸ್ಯಮ್ ॥

ಬ್ರಹ್ಮ ಏಕಮೇವ ನಿತ್ಯಂ=ಬ್ರಹ್ಮ ಒಂದೇ ಯಾವಾಗಲೂ ಇರುವುದು. ಅದಕ್ಕಿಂತಲೂ ಭಿನ್ನವಾದ ಜಗತ್ತೆಲ್ಲವೂ ಅಲ್ಲಿಂದಲೇ ಹುಟ್ಟಿ ಅಲ್ಲೇಲಯುವಾಗುತ್ತದೆ. ಆದುದರಿಂದ ಜೀವೋऽಪ್ಯಚಿದಿವ ಜನಿವಾನ್=ಜೀವನೂ ಸಹ ಜಡವಸ್ತುವಿನಂತೆ ಉತ್ಪನ್ನವಾಗುತ್ತಾನೆ, ಎಂದು ಅವರವಾದ. ವೇದವನ್ನು ಅರಿಯುದವರ ಮಾತಿದು. ಜೀವನು ನಿತ್ಯನೆಂದು ಅನೇಕ ವೇದ ವೇದಾಙ್ಗಗಳೆಲ್ಲವೂ ಸ್ಪಷ್ಟವಾಗಿ ಸಾರುತ್ತವೆ. ಆದುದರಿಂದ ಪ್ರಜಾಪತಿಃ ಪ್ರಜಾ ಅಸೃಜತ=ಪ್ರಜಾಪತಿಯು ಪ್ರಜೆಗಳನ್ನೂ ಸೃಷ್ಟಿಸಿದನು. ಇವೇ ಮೊದಲಾದ ವಾಕ್ಯಗಳಿಗೂ ಜೀವನಿಗೆ ಶರೀರ ಸಂಬಂಧ ವನ್ನು ಉಂಟುಮಾಡಿದನು ಎಂದರ್ಥ.

ಆತ್ಮವಿಭು=ಸರ್ವಗತ ಎಲ್ಲೆಡೆಯಲ್ಲೂ ಇರುವವನು ಎಂಬುದು ಕೇಲವರ ಮತ. ಜಗತ್ತಿನಲ್ಲಿ ಎಲ್ಲಾ ಕಡೆಯಲ್ಲೂ ಮಾನವನು ಇರುತ್ತಾನೆ' ಎಂದು ಹೇಳಿದಾಗ ಮಾನವನ ವಿಭುತ್ವ ತೋರದೆ ಮಾನವ ಜಾತಿಯುವನು ಯಾವನಾದರೂ ಒಬ್ಬನು ಎಲ್ಲೋ ಇದ್ದೇ ಇರುತ್ತಾನೆ ಎಂದು ಅರ್ಥವಾಗುತ್ತದೆ. ಜೀವ ಜಾತೀಯ ವಸ್ತು ಎಲ್ಲಾ ಶರೀರದಲ್ಲೂ ಇರುತ್ತದೆ ಎಂದರ್ಥ. ಇದು ಸಮುದಾಯದ ಅಪೇಕ್ಷೆಯಿಂದ ಹೇಳುವ ಮಾತೆಂದು ತಿಳಿಯಬೇಕು. ಧರ್ಮಭೂತ ಜ್ಞಾನದ ಮೂಲಕ ವ್ಯಾಪಿಸಿರು ಏಕೆ ಇವನಿಗುಂಟು ವಿಭುವಾಗಿದ್ದರೆ, ಈ ಲೋಕದಿಂದ ಹೋಗುವವರು ಎಲ್ಲರೂ ಚಂದ್ರಮನ ಹತ್ತಿರಕ್ಕೆ ಹೋಗುತ್ತಾರೆ, "ತಸ್ಮಾಲ್ಲೋಕಾತ್ ಪುನರೇತ್ಯಾಸ್ಮೈಲೋ ಕಾಯಕರ್ಮಣೇ=ಅಲ್ಲಿಂದ ಈ ಲೋಕಕ್ಕೆ ಕರ್ಮಫಲ ಅನುಭವಿಸಲು ಬರುತ್ತಾರೆ, ಇವೇ ಮೊದಲಾದ ಶ್ರುತಿಗಳು ವ್ಯರ್ಥವಾಗುತ್ತವೆ.

ಜೀವನಿಗೆ ವಿಭುತ್ವವನ್ನು ಒಪ್ಪದಿದ್ದರೆ ಅದೃಷ್ಟದಿಂದ ಉಂಟಾದ ಬೇರೆ ದೇಶದ ಫಲದ ಹೊಂದುವಿಕೆ ಹೇಗೆ ? ದೂರದಲ್ಲಿರುವ ಶತ್ರುವಿನಲ್ಲಿ ದುಃಖವನ್ನೂ ಮಿತ್ರನಲ್ಲಿ ಸುಖವನ್ನೂ, ಅದೃಷ್ಟ ಉಂಟುಮಾಡುತ್ತದೆಯಷ್ಟೆ? ಎಂದು ಕೇಳಬಹುದು. ಜೀವ ನಿಗೆ ಅನ್ಯದೇಶದ ಸಂಬಂಧವಿಲ್ಲದಿದ್ದರೂ ಅದೃಷ್ಟದ ಅಧೀನದಿಂದ ಉಂಟಾಗುತ್ತದೆ.

1. ತತ್ತ್ವಮುಕ್ತಾಕಲಾಪ. ಜೀವಸರ. ೧೬.

## ಜೀವರು ಈಶ್ವರನಿಗಿಂತಲೂ ಹಾಗೆಯೇ ತಮ್ಮಲ್ಲಿ ಒಬ್ಬರಿಗೊಬ್ಬರೂ ಭಿನ್ನರಾಗಿದ್ದಾರೆ

"ಬ್ರಹ್ಮವೇದ ಬ್ರಹ್ಮೈವಭವತಿ=ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗುತ್ತಾನೆ" ಎಂದು ಶ್ರುತಿ ಹೇಳುತ್ತದಲ್ಲಾ, ಜೀವನೂ, ಬ್ರಹ್ಮನೇ ಆಗುತ್ತಾನೆ ಅಂದಲ್ಲವೇ ಅದರ ಅಭಿಪ್ರಾಯ ಅಂದರೆ, 'ಬಹ್ಮೈವಭವತಿ=ಎಂಬುದಕ್ಕೆ ನಿತ್ಯವಾಗಿ ಸಾಕ್ಷಾತ್ಕರಿಸಿದ ಬ್ರಹ್ಮ ಶರೀರ ಭಾವವುಳ್ಳವನಾಗುತ್ತಾನೆ ಎಂದರ್ಥ. ಇದು ಕ್ಲಿಷ್ಟವಾದ ಅರ್ಥಕಲ್ಪನೆ ಆಯಿತಲ್ಲಾ ಎಂದರೆ ನ್ಯಾಯಸುದರ್ಶನ ಎಂಬ ಗ್ರಂಥದಲ್ಲಿ 'ಬ್ರಹ್ಮೈವಭವತಿ' ಎಂಬುದಕ್ಕೆ ಬೇರೆ ರೀತಿ ಅರ್ಥವನ್ನು ಹೇಳಿರುತ್ತಾರೆ. ಅದನ್ನು ವಿವರಿಸೋಣ.

ಏವಶಬ್ದವು ಸಾಮ್ಯವನ್ನು ಹೇಳುತ್ತದೆ. "ಸಾಮ್ಯೇಚೈವಕ್ವಚಿಚ್ಛಬ್ದಃ" ಎಂದು ನಿಘಂಟುವು ಇದನ್ನು ದೃಢಪಡಿಸುತ್ತದೆ. "ಸಾಮ್ಯೇವದ್ವೈವವೇವ" ಎಂದು ನಾನಾರ್ಥ ವೈಜಯಂತಿಯಲ್ಲಿ ಅವ್ಯಯ ಪರ್ಯಾಯ ಸಂಗ್ರಹಾಧ್ಯಾಯದಲ್ಲಿ ವತಿ ಪ್ರತ್ಯಯ ವಾಶಬ್ದ ಏವಂ ಶಬ್ದ ಏವಶಬ್ದ, ಇವಶಬ್ದ ಇವುಗಳಿಗೆ ಸಾಮ್ಯ ಶಬ್ದದ ಪರ್ಯಾಯವಾಗಿ ಪಾಠ ಹೇಳಿದೆ. ಸಾಮ್ಯ-ಹೋಲಿಕೆ, ಈ ಅರ್ಥವನ್ನು ಶ್ರುತಿ ವಾಕ್ಯವೂ ಧೃಢಪಡಿಸುತ್ತದೆ.

[1]"ವೈಷ್ಣವಂ ವಾಮನ ಮಾಲಭೇತ ಸ್ಪರ್ಧಮಾನೋ ವಿಷ್ಣುರೇವ ಭೂತ್ವೇಮಾನ್ ಲೋಕಾನಭಿಜಯತಿ" ವಿಷ್ಣುರೇವ-ವಿಷ್ಣುರಿವ, ವಿಷ್ಣುವಿನಂತೆ ಆಗುತ್ತಾನೆ. ಪಶುಯಾಗ ಮಾಡುವವನು ವಿಷ್ಣುವೇ ಆಗುತ್ತಾನೆ ಎಂದರೆ ಅಸಂಬದ್ಧವಾಗುತ್ತದೆ. ಯಾಗ ಮೋಕ್ಷೋಪಾಯವಲ್ಲ ವಿಷ್ಣುವಿನ ಹಾಗೆ ಆ ಆ ಲೋಕಗಳಲ್ಲಿರುವ ಶತ್ರುಗಳನ್ನು ಜಯಿಸುತ್ತಾನೆ ಎಂದು ಅರ್ಥ. ಐಹಿಕ ಫಲತಾನೆ ಶತ್ರುಜಯಾದಿಗಳು, ಅದುತಾನೆ ಇಲ್ಲಿಗೆ ಹೊಂದುತ್ತದೆ.

ಆದುದರಿಂದ ಬ್ರಹ್ಮ ಸಾಮ್ಯಾಪತ್ತಿಯನ್ನು ಪಡೆಯುತ್ತಾನೆ ಜೀವ. ಆ ಜೀವನು ಮೂರು ವಿಧವಾಗಿರುವನು. ಬದ್ಧ ಮುಕ್ತ ನಿತ್ಯ ಎಂಬಿವೇ ಮೂರು ವಿಧ, ಬದ್ಧರೆಂದರೆ ಹುಟ್ಟುವಿಕೆ ಸಾಯುವಿಕೆ ಎಂಬ ಸಂಸಾರದಿಂದ ಅನುಸರಿಸಲ್ಪಟ್ಟವರು. ಅಂಡಕಟಾಹದೊಳಗಿರುವ ಹದಿನಾಲ್ಕು ಲೋಕಗಳಲ್ಲಿ ಇರುವ ಬ್ರಹ್ಮನಿಂದ ಪ್ರಾರಂಭಿಸಿ ಚಿಕ್ಕಹುಳುವರೆಗಿರುವ ಚೇತನ ವಿಶೇಷಗಳು.

ಶ್ರೀಮನ್ನಾರಾಯಣನ ನಾಭಿಕಮಲದಿಂದ ಬ್ರಹ್ಮ ಹುಟ್ಟಿದನು. ಬ್ರಹ್ಮನಿಂದ ರುದ್ರನು. ಮತ್ತೆ ಬ್ರಹ್ಮನಿಂದ ಸನಕಸನಂದನ ಇವರೇ ಮೊದಲಾದ ಯೋಗಿಗಳು,

1. ತೈತ್ತರೀಯ ಸಂಹಿತಾ. ೨-೧-೧೬,

ನಾರದನೇ ಮೊದಲಾದ ದೇವರ್ಷಿಗಳು, ವಸಿಷ್ಠನೇ ಮೊದಲಾದ ಬ್ರಹ್ಮರ್ಷಿಗಳು, ಮತ್ತು ಪುಲಸ್ತ್ಯ, ಮರೀಚಿ, ದಕ್ಷ, ಕಶ್ಯಪ ಮುಂತಾದ ಒಂಬತ್ತು ಪ್ರಜಾಪತಿಗಳು ಇವರೆಲ್ಲರೂ ಹುಟ್ಟಿದರು. ಇವರುಗಳಿಂದ ದೇವತೆಗಳು, ದಿಕ್ಪಾಲಕರು, ಹದಿನಾಲ್ಕು ಇಂದ್ರರು, ಹದಿನಾಲ್ಕು ಮನುಗಳು, ಅಸುರರು, ಪಿತೃಗಳು ಸಿದ್ಧ,ಗಂಧರ್ವ,ಕಿನ್ನರ, ಕಿಂಪುರುಷ, ವಿದ್ಯಾಧರ ಮುಂತಾದವರು, ವಸುಗಳು, ರುದ್ರರು, ಆದಿತ್ಯರು, ಅಶ್ವಿನೀ ದೇವತೆಗಳು, ದಾನವರು, ಯಕ್ಷರು, ರಾಕ್ಷಸರು, ಪಿಶಾಚರು ಮತ್ತು ಗುಹ್ಯಕರು ಉತ್ಪನ್ನರಾದರು. ಈ ರೀತಿ ದೇವಯೋನಿಗಳು ಬಹುವಿಧರಾಗಿದ್ದಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಅಂತ್ಯಜ ಇವೇ ಮೊದಲಾದ ಜಾತಿ ಭೇದಗಳಿಂದ ಮನುಷ್ಯರೂ ಬಹಳ ರೀತಿಯಾಗಿದ್ದಾರೆ. ತಿರ್ಯಕ್‌ಜಂತುಗಳೂ ಕೂಡ ಪಶು, ಮೃಗ, ಪಕ್ಷಿ, ಸರ್ಪ, ಶಲಭ, ಹುಳು ಈ ಭೇದಗಳಿಂದ ಬಹಳ ವಿಧಗಳಾಗಿವೆ.

ಸ್ಥಾವರಗಳೂ ಕೂಡ ಮರ, ಲತೆ, ಹುಲ್ಲು ಮೊದಲಾದವುಗಳ ಪೊದರು ಬಳ್ಳಿ, ಶಾಖೆಗಳಿಲ್ಲದೆ ಬೆಳೆಯುವ ಬಳ್ಳಿ ಹುಲ್ಲು ಇವೇ ಮೊದಲಾದ ಭೇದಗಳಿಂದ ಬಹಳವಿಧಗಳಾಗಿವೆ. ಮರವೇ ಮೊದಲಾದವುಗಳಿಗೆ ನೀರನ್ನು ಸೆಳೆದುಕೊಳ್ಳುವು ದಕ್ಕೆ ಉಪಯೋಗವಾಗುವ ಅಲ್ಪವಾದ ಜ್ಞಾನದ ಸಂಬಂಧ ಇದ್ದೇಇದೆ. ಅಪ್ರಾಣ ವತ್ಸು ಸ್ವಲ್ಪಾಸಾ—ಪ್ರಾಣವಿಲ್ಲದವುಗಳಲ್ಲಿ ಸ್ವಲ್ಪವಾದ ಬುದ್ಧಿಯು ಇದೆ ಎಂದು ಹೇಳಿದೆ. ಆದುದರಿಂದ ದೇವ, ಮನುಷ್ಯ, ತಿರ್ಯಕ್, ಸ್ಥಾವರ ಈ ಭೇದಗಳಿಂದ ಬೇರೆಬೇರೆಯಾಗಿರುವವರು ಬದ್ಧರು. ಇವರಾದರೋ ಜರಾಯುಜ— ಗರ್ಭಾಶಯದಿಂದ ಹುಟ್ಟುವ ಮನುಷ್ಯ ಪಶುಗಳು ಮೊದಲಾದವು, ಅಣ್ಡಜ— ಮೊಟ್ಟೆಯೊಡೆದು ಹುಟ್ಟುವ ಹಕ್ಕಿ, ಹಾವು, ಮೊದಲಾದವು, ಉದ್ಭಿಜ್ಜ—ಭೂಮಿ ಯನ್ನು ಭೇಧಿಸಿಕೊಂಡು ಹುಟ್ಟುವ ಸಸ್ಯಗಳು, ಮತ್ತು ಸ್ವೇದಜ—ಶಾಖದಿಂದ ಹುಟ್ಟುವ ಹುಳು, ನೊಣ ಮುಂತಾದವು ಆಗುತ್ತಾರೆ. ದೇವತೆಗಳು ಮನುಷ್ಯರು— ಜರಾಯುಜರು. ಅವರಲ್ಲಿ ಬ್ರಹ್ಮ, ರುದ್ರ ಮೊದಲಾದವರು ಮತ್ತು ಸನಕಾದಿ ಗಳೂ, ಸೀತೆ, ದ್ರೌಪದಿ, ದೃಷ್ಟದ್ಯುಮ್ನ ಮುಂತಾದವರು ಭೂತ ವೇತಲಾದಿ ಗಳೂ ಕೂಡ ಅಯೋನಿಜರು. ತಿರ್ಯಗಾದಿಗಳೂ ಕೂಡ ಜರಾಯುಜ ಅಣ್ಡಜ ಸ್ವೇದಜಗಳು ಆಗುತ್ತವೆ. ಸ್ಥಾವರಾದಿಗಳು ಉದ್ಭಿಜ್ಜಗಳು.

ಈ ರೀತಿಯಾದ ಬದ್ಧರು ಪ್ರಕೃತಿಯಿಂದ ಕಟ್ಟಲ್ಪಟ್ಟಿದ್ದಾರೆ. ಆ ಪ್ರಕೃತಿಯ ಸಂಬಂಧ ಅವಿದ್ಯೆಯಿಂದುಂಟಾದ ಕರ್ಮದ ವಾಸನಾರುಚಿಯುಳ್ಳದ್ದು. ಇದು ಯಾವಾಗ ಉಂಟಾಯಿತು? ಎಂದು ಹೇಳುವುದು ಕಷ್ಟವಾಗಿದೆ. ಇದಕ್ಕೆ ಶಾಸ್ತ್ರಕಾರರು ಬೀಜಾಙ್ಕುರ ನ್ಯಾಯವನ್ನು ಉದಾಹರಿಸುತ್ತಾರೆ. ಬೀಜದಿಂದ ಮೊಳಕೆ ಉಂಟಾ ಗುತ್ತದೆ, ಮೊಳಕೆಯಿಂದ ಸಸ್ಯ ಅದು ಮರವಾಗುತ್ತದೆ—ಹಣ್ಣು ಬಿಡುತ್ತದೆ. ಅದರಲ್ಲಿ ಬೀಜವಿದೆ. ಆ ಬೀಜದಿಂದ ಮೊಳಕೆ, ಹೀಗಿರುವಾಗ ಮೊದಲನೆಯ

ಬೀಜ ಹೇಗೆ ಹುಟ್ಟಿತೆಂದರೆ ಮೊಳಕೆಯಿಂದಲೇ ಎಂದು ಹೇಳಬೇಕಾಗುತ್ತದೆ ಅಲ್ಲವೇ? ಹಾಗೆ ಕರ್ಮಸಂಬಂಧದಿಂದ ಈ ವಿಷಮಸಂಸಾರ ಪ್ರವಾಹ, ಹಳ್ಳತಿಟ್ಟನಲ್ಲಿ ಹರಿಯುವ ನೀರಿನ ಪ್ರವಾಹದಂತೆ. ಈ ಕರ್ಮ ಸಂಬಂಧವು ಅನಾದಿಯಾದದ್ದು. ಇದರಿಂದುಂಟಾಗುವ ವ್ಯಾಪಾರವೂ ವಿಚಿತ್ರವಾದದ್ದು. ಆದುದರಿಂದ ಈ ಪ್ರಕೃತಿ ಸಂಬಂಧದಿಂದ ಚಕ್ರದಂತೆ ಸುತ್ತುತ್ತಲಿದ್ದಾರೆ ಈ ಬದ್ಧರು. ಗರ್ಭ, ಹುಟ್ಟು, ಬಾಲ್ಯ, ಯೌವನ, ಜಾಗರ–ಎಚ್ಚರವಾಗಿರುವಿಕೆ, ಸ್ವಪ್ನ. ಸುಷುಪ್ತಿ–ಗಾಢನಿದ್ರೆ, ಮೂರ್ಛೆ (ಅರ್ಧ ಮರಣ), ಮುಪ್ಪು, ಸಾವು ಸ್ವರ್ಗ ಅಥವಾ ನರಕಕ್ಕೆ ಹೋಗುವಿಕೆ ಇವೇ ಮೊದಲಾದ ವಿಧವಿಧವಾದ ಅಶ್ಚರ್ಯಕರವಾದ ಅವಸ್ಥೆಯುಳ್ಳವರಾಗಿ ಇದು ಮೊದಲೆಂಬುದಿಲ್ಲದ, ಕೊನೆಯಿಲ್ಲದ ರೀತಿಯುಳ್ಳ, ಸಹಿಸಲು ಆಗದ ತಾಪತ್ರಯದಿಂದ ತಾಪಗೊಂಡವರಾಗಿ ಸ್ವತಃ ಪ್ರಾಪ್ತವಾದ ಅಂದರೆ ತನಗೆ ಹಕ್ಕಿನಿಂದುಂಟಾದ ಭಗವದನುಭವವನ್ನು ಕಡಿದುಕೊಂಡವರಾಗಿದ್ದಾರೆ.

ಸ್ವಭಾವದಿಂದ ಈ ಆತ್ಮನು ಸುಖಿಯು. ಉಪಾಧಿಗೆ ಅಧೀನನಾಗಿ ಸಂಸಾರವನ್ನು ಪಡೆಯುತ್ತಾನೆ. ಆದರಿಂದ ಬಿಡುಗಡೆಯನ್ನುಪಡೆದು ಮೋಕ್ಷವನ್ನು ಹೊಂದಲು ಅರ್ಹತೆಇವನಿಗಿದೆ.

**[1]ಕರ್ಮಾ ವಿದ್ಯಾದಿಚಕ್ರೇ ಪ್ರತಿಪುರುಷಮಿಹಾನಾದಿ ಚಿತ್ರಪ್ರವಾಹೇ**
**ತತ್ತತ್ಕಾಲೇ ವಿಪಕ್ತಿರ್ಭವತಿ ಹಿ ವಿವಿಧಾ ಸರ್ವಸಿದ್ಧಾನ್ತಸಿದ್ಧಾ ।**
**ತಲ್ಲಬ್ಧಸ್ವಾವಕಾಶಪ್ರಥಮಗುರುಕೃಪಾಗೃಹ್ಯಮಾಣಃ ಕದಾಚಿತ್**
**ಮುಕ್ತ್ಯೈಶ್ವರ್ಯಾನ್ತ ಸಂಪನ್ನಧಿರಪಿ ಭವಿತಾ ಕಶ್ಚಿದಿತ್ಥಂವಿಪಶ್ಚಿತ್ ॥**

ಆಚಾರ್ಯರು, ಜೀವಾತ್ಮನ ಸ್ವರೂಪಾದಿ ವಿಚಾರವನ್ನು ಮುಗಿಸಿ ಪರಮಪುರುಷಾರ್ಥರೂಪವಾದ ಮುಕ್ತಿಯ ವಿಚಾರವನ್ನು ನಿರೂಪಿಸಲು ಪ್ರಾರಂಭಿಸಿರುತ್ತಾರೆ. ಅದರಲ್ಲಿ 'ನಾಭುಕ್ತಂಕ್ಷೀಯತೇ ಕರ್ಮಕಲ್ಪಕೋಟಿಶತೈರಪಿ—ನೂರಾರು ಕಲ್ಪಕೋಟಿ ವರ್ಷಗಳ ಕಾಲವಾದರೂ ಕರ್ಮಫಲವನ್ನು ಅನುಭವಿಸಿಯೇ ತೀರಬೇಕು. ಹಾಗೆ ಅನುಭವಿಸದೆ ಇದ್ದರೆ ಕರ್ಮವು ಕ್ಷೀಣವಾಗುವುದೇ ಇಲ್ಲ. ಇವೇ ಮೊದಲಾದ

1. ತತ್ತ್ವಮುಕ್ತಾಕಲಾಪ ಜೀವಸರ. ೨೫.

ಶಾಸ್ತ್ರಗಳಿಂದ ಕರ್ಮಚಕ್ರ ನಿಲ್ಲಲು ಅವಕಾಶವೇ ಇಲ್ಲವೆಂದು ತೋರುವುದರಿಂದ ಮುಕ್ತಿಗೆ ಹೇಗೆ ಸಂಭವ ? ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ಈ ಸಂಸಾರದಲ್ಲಿ ತಾನು ಮಾಡಿದ ಕರ್ಮದಿಂದ ಅವಿದ್ಯೆ, ಇದರಿಂದ ರಾಗ ದ್ವೇಷಾದಿಗಳು, ಇದರಿಂದ ಮತ್ತೆ ಕರ್ಮಗಳು ಎಂದು ಈ ಚಕ್ರ ಪ್ರತಿಯೊಬ್ಬ ಜೀವಿಗೂ ಅನಾದಿಕಾಲದಿಂದ ವಿಚಿತ್ರ ರೀತಿಯಲ್ಲಿ ಪ್ರವಹಿಸುತ್ತಿದ್ದರೂ, ಈ ಕರ್ಮಗಳ ವಿಚಿತ್ರ ಪರಿಪಾಕವನ್ನು ಎಲ್ಲಾ ಸಿದ್ಧಾಂತದವರೂ ಒಪ್ಪುವುದರಿಂದ, ಕಾಲವಿಶೇಷದಲ್ಲಿ ಕರ್ಮ ಪರಿಪಕ್ವವಾಗಿ ಮುಮುಕ್ಷುವಾಗಲು ಸಾಧ್ಯವಿರುತ್ತದೆಯಷ್ಟೆ !

**ಹಿ**=ಯಾವಕಾರಣದಿಂದ (ಇದರಿಂದ ವಿಷಮವಾದ ವಿಪಾಕಕ್ಕೆ ಎಲ್ಲರಿಂದಲೂ ಕಾಣುವಿಕೆ ಸೂಚಿಸಲ್ಪಡುತ್ತದೆ) **ಇಹ**=ಕಣ್ಣಿಗೆ ಕಾಣುವ ಈ ಲೋಕದಲ್ಲಿ, **ಪ್ರತಿಪುರುಷಂ**=ಪ್ರತಿಯೊಬ್ಬ ಮನಿಷ್ಯನಿಗೂ (ಪ್ರತಿಯೊಬ್ಬನಿಗೂ ಎಂದು ಹೇಳಿರುವುದರಿಂದ ಒಬ್ಬನಿಗೆಬರುವ ಅನುಕೂಲ ಮುಂತಾದವು ಮತ್ತೊಬ್ಬನಿಗೆ ಬರಬೇಕು ಎಂಬ ಅತಿಪ್ರಸಂಗವು ಪರಿಹರಿಸಲ್ಪಟ್ಟಿತು) **ಅನಾದಿ ಚಿತ್ರಪ್ರವಾಹೇ**=ಅನಾದಿ ಭೂತವಾದ ವಿಚಿತ್ರವಾದ ಸುಖದುಃಖಗಳಿಗೆ ಕಾರಣವಾದ ಪ್ರವಾಹದಲ್ಲಿ, (ಅನವಸ್ಥಾ ದೋಷವನ್ನು ಪರಿಹರಿಸುವುದಕ್ಕಾಗಿ ಅನಾದಿಎಂದು ಹೇಳಲ್ಪಟ್ಟಿತು, ಬೀಜಾಙ್ಕುರದಂತೆ ಅನಾದಿಯಾದ ಅನವಸ್ಥೆಗೆ ದೋಷವಿಲ್ಲವೆಂಬ ಭಾವ) ಪ್ರವಾಹವೆಂದರೆ ಇಲ್ಲಿ ವ್ಯಾಪಾರವೆಂದರ್ಥ. **ಕರ್ಮಾವಿದ್ಯಾದಿಚಕ್ರೇ**=ಅವಿದ್ಯಯಾ—ದೇಹವೇ ಆತ್ಮ ಇವೇ ಮೊದಲಾದ ಭ್ರಮದಿಂದ ಕರ್ಮ. ಕರ್ಮದಿಂದ ದೇಹಸಂಬನ್ಧ. ಅದರಿಂದ ವಾಸನೆ, ಅದರಿಂದ ರುಚಿ, ಅದರಿಂದ ಮತ್ತೆ ಕರ್ಮ. ಕರ್ಮದಿಂದ ಅವಿದ್ಯೆ ಈ ರೀತಿಯಿಂದ ಕುಂಬಾರನ ಚಕ್ರದಂತೆ ಸುತ್ತುವುದರಿಂದ ಚಕ್ರೇ ಎಂದು ಹೇಳಲ್ಪಟ್ಟದೆ.

**ತತ್ತತ್ಕಾಲೇ** ಆಆ ಕಾಲಗಳಲ್ಲಿ, **ವಿವಿಧಾ**—ನಾನಾರೂಪವಾದ, **ವಿಪಕ್ತಿಃ**—ಅವಾಗ ಅವಾಗ ಆ ಆ ಫಲಗಳ ಉತ್ಪತ್ತಿಯು, ಒಬ್ಬನಿಗೆ ಪ್ರಜಾಪತಿ ಪದವಿಯನ್ನು ಪಡೆಯಲು ಕಾರಣವಾದ ಕರ್ಮದ ಪರಿಪಾಕ, ಇನ್ನೊಬ್ಬನಿಗೆ ರುದ್ರತ್ವವನ್ನು ಹೊಂದಲು ಕಾರಣವಾದ ಕರ್ಮದ ವಿಪಕ್ತಿ ಇನ್ನೊಬ್ಬನಿಗೆ ಇಂದ್ರ ಪದವಿಯನ್ನು ಪಡೆಯುವುದಕ್ಕೆ ಕಾರಣವಾದ ಕರ್ಮದ ಪರಿಪಾಕ, ಮಗದೊಬ್ಬನಿಗೆ ಮೋಕ್ಷಕ್ಕೆ ಉಪಯೋಗವಾದ ಅನುಕೂಲಕ್ಕೆ ಕಾರಣವಾದ ಕರ್ಮದ ಪರಿಪಾಕ ಎಂದರ್ಥ. **ಭವತಿ** ಉಂಟಾಗುತ್ತದೆ. ಇದು **ಸರ್ವಸಿದ್ಧಾಂತಸಿದ್ಧಾ**—ಚಾರ್ವಾಕರಿಗಿಂತ ಬೇರೆಯಾದ

ಎಲ್ಲಾ ಸಿದ್ಧಾಂತಿಗಳೂ, ಸಂಸಾರವನ್ನು ಹೊಂದುವವರೆಲ್ಲರಿಗೂ ಸಾಮಗ್ರೀ ಪ್ರವಾಹ ವೈಚಿತ್ರ್ಯದಿಂದ ಮೋಕ್ಷಕ್ಕೆ ಕಾರಣ ಬೀಳುವುದನ್ನು ಅಪೇಕ್ಷಿಸುತ್ತಾರೆ. ಆದುವರಿಂದ ಈ ವಿಷಯದಲ್ಲಿ ಒಬ್ಬನೂ ಬೇರೆ ವಿಧವಾಗಿ ತಿಳಿಯಕೂಡದೆಂಬು ದಕ್ಕಾಗಿ ಸರ್ವಸಿದ್ಧಾಂತ ಸಿದ್ಧವಾದದ್ದೆಂದು ಹೇಳುವುದು.

(ಹಿ=ಇಲ್ಲಿ 'ಹಿ' ಶಬ್ದವು ಕಾರಣವನ್ನು ತಿಳಿಸುತ್ತದೆ.ಯಾವುದರಿಂದ ಹೀಗೋ ಆದುದರಿಂದ) **ತಲ್ಲಬ್ಧ**=ಮೋಕ್ಷಕ್ಕೆ ಅನುಕೂಲವಾದ ವಿಪಾಕದಿಂದ ಹೊಂದಲ್ಪಟ್ಟ, **ಸ್ವಾವಕಾಶ**=ಯಾದೃಚ್ಛಿಕಸುಕೃತವೇ ಮೊದಲಾದ ಅವಸರವುಳ್ಳ, **ಪ್ರಥಮಗುರು ಕೃಪಾಗೃಹ್ಯಮಾಣಃ**=ಮೊದಲನೆಯಗುರುವಾದ ಭಗವಂತನ ಕೃಪೆಯಿಂದ ವಿಷಯೀಕರಿಸಲ್ಪಟ್ಟವನಾಗಿ, **ವಿಪಶ್ಚಿತ್**=ತನ್ನ (ಆತ್ಮನ) ಸ್ವರೂಪ, **ಪರ**=(ಪರ ಮಾತ್ಮನ) ಸ್ವರೂಪ, ಉಪಾಯಸ್ವರೂಪ, ಫಲಸ್ವರೂಪ, (ಅದರ) ವಿರೋಧಿ ಸ್ವರೂಪ ಇವುಗಳ ಪ್ರತಿಯೊಂದರ ಬೇರೆಬೇರೆಯಾದ ಜ್ಞಾನವುಳ್ಳ ಪುರುಷನು ಪ್ರಥಮಗುರು...ಣಃ ಎಂದು ಜಾಯಮಾನಕಾಲಕಟಾಕ್ಷವು ಹೇಳಲುತಕ್ಕದ್ದಾಗಿದೆ. ಇವನು ಹುಟ್ಟುವಾಗಲೇ ಭಗವಂತನ ಕೃಪೆಗೆ ಪಾತ್ರನಾಗಿರುವಿಕೆ ಎಂದು ಹೇಳು ವುದೂ ಇಲ್ಲಿ ಒಪ್ಪುತ್ತದೆ. (ಪ್ರಹ್ಲಾದ-ಧ್ರುವ-ನಾರದ ಮುಂತಾದವರು ಉದಾ ಹರಣೆ).

**ಇತ್ಥಮ್**=ಕಡಿಮೆ ಹೆಚ್ಚು ಆದ ಐಶ್ವರ್ಯಾದಿಗಳನ್ನು ಹೊಂದುವನ್ಯಾಯ ದಿಂದ ಮುಕ್ತೈಶ್ವರ್ಯಾನ್ತ ಸಂಪನ್ನಿಧಿರಪಿ, **ಭವಿತಾ**=ಸಾತ್ವಿಕರೊಡನೆ ಮಾತನ್ನಾಡು ವುದು ಮೊದಲಾಗಿ ಉಂಟಾಗುವ ವಿವೇಕ, ನಿರ್ವೇದ ಮುಂತಾದವುಗಳು ಉಂಟಾಗಿ ಮುಕ್ತರು ಅನುಭವಿಸುವ ಐಶ್ವರ್ಯವೇ ಮೊದಲಾದ ಸಂಪತ್ತಿಗೆ ನಿಧಿಯೂ ಆಗು ತ್ತಾನೆ.

ವಿಚಿತ್ರ ಕರ್ಮ ಪ್ರವಾಹದಲ್ಲಿ ಯಾವುದೋ ಒಂದು ಪುಣ್ಯವಿಶೇಷದಿಂದ ಸಂಸಾರಿ ಜೀವನಿಗೆ ಸತ್ಸಹವಾಸಾದಿಗಳು ದೊರೆಯುತ್ತವೆ. ಇದರಿಂದ ಮತ್ತಷ್ಟು ಪುಣ್ಯ ಸಂಚಯವಾಗಿ ಪರಮಾತ್ಮನ ಕೃಪೆಗೆ ಪಾತ್ರನಾಗುತ್ತಾನೆ. ಇದರಿಂದ ಇವನು ಬ್ರಹ್ಮವಿದ್ಯಾನಿಷ್ಠನಾಗುತ್ತಾನೆ. ಕೊನೆಗೆ ಪರಮಾತ್ಮ ಸಾಕ್ಷಾತ್ಕಾರದಿಂದ ಸಂಚಿತ ಕರ್ಮಗಳು ನಾಶವಾಗಿ ಮುಂದಿನ ಕರ್ಮಗಳಿಂದ ನಿರ್ಲಿಪ್ತನಾಗಿ, ಪ್ರಾರಬ್ಧ ಕರ್ಮ ಮುಗಿ ಯುತ್ತಾ ಸರ್ವಕರ್ಮ ಬಂಧಗಳಿಂದಲೂ ಕಟ್ಟುಗಳಿಂದಲೂ ಇವನು ಮುಕ್ತನಾಗು ತ್ತಾನೆ.

ಮೋಕ್ಷದಲ್ಲಿ ಜೀವನಿಗೆ ಕರ್ಮಗಳಿಂದ ಸಂಪೂರ್ಣ ಬಿಡುಗಡೆ ಸಿಕ್ಕುವುದರಿಂದಲೂ ಇದೇ ಅವನ ಅಮೂಲ್ಯ ಸುಖಸ್ವರೂಪವಾಗಿರುವುದರಿಂದಲೂ ಮುಕ್ತೈಶ್ವರ್ಯ ಸಂಪನ್ನಿಧಿ ಶಬ್ದಗಳು ಪ್ರಯುಕ್ತವಾಗಿವೆ.

ಬದ್ಧರು ಇಬ್ಬಗೆಯಾದವರು. **ಶಾಸ್ತ್ರವಶ್ಯಾಃ**=ಶಾಸ್ತ್ರಕ್ಕೆ ಅಧೀನರಾದವರು, ಅದಕ್ಕೆಅಧೀನವಲ್ಲದವರು, ಅವರಮಧ್ಯದಲ್ಲಿ ಇಂದ್ರಿಯಗಳಿಗೆ ಅಧೀನವಾದಜ್ಞಾನ ವುಳ್ಳ ಬದ್ಧರಿಗೆ ಶಾಸ್ತ್ರಗಳಿಗೆ ಅಧೀನವಾಗಿರುವಿಕೆಯುಂಟು. ತಿರ್ಯಕ್ಕುಗಳಿಗೂ ಸ್ಥಾವರಗಳಿಗೂ ಅದು ಇಲ್ಲ. ಶಾಸ್ತ್ರವಶ್ಯರು ಬುಭುಕ್ಷುಗಳು, ಮುಮುಕ್ಷುಗಳೆಂಬ ಎರಡು ಪಂಗಡವುಳ್ಳವರಾಗಿದ್ದಾರೆ. ಅವರಲ್ಲಿ ಬುಭುಕ್ಷುಗಳು ತ್ರೈವರ್ಗಿಕಗಳಾದ ಪುರುಷಾರ್ಥಗಳಲ್ಲಿ ನಿಷ್ಠರು. ಅಂದರೆ, ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳ ಸಾಧನೆಯಲ್ಲಿ ಹೆಚ್ಚಾಗಿ ಆಸಕ್ತಿಯುಳ್ಳವರಾಗಿದ್ದಾರೆ. ಅವರು ಎರಡುಬಗೆಯಾಗಿದ್ದಾರೆ. ಅರ್ಥಕಾಮಪರರು ಒಂದುಬಗೆ ಮತ್ತೊಂದು ಧರ್ಮ ಪರರು, ಕೇವಲ ಅರ್ಥಕಾಮಪರರು ಯಾರೆಂದರೆ ದೇಹವೇ ಆತ್ಮಎಂಬ ಅಭಿಮಾನ ವುಳ್ಳವರು, ಧರ್ಮಪರರೂ, ಕೂಡ, ಧರ್ಮಲಕ್ಷಣದಿಂದ ತೋರಿಸಲ್ಪಟ್ಟ ಯಜ್ಞ, ದಾನ, ತಪಸ್ಸು, ತೀರ್ಥಯಾತ್ರೆ ಮುಂತಾದವಲ್ಲಿ ನಿಷ್ಠರಾಗಿರುವವರು. ಧರ್ಮ ವಾವುದು ಎಂದರೆ "**ಅಲೌಕಿಕ ಶ್ರೇಯಸ್ಸಾಧನಂಧರ್ಮಃ**=ಈಲೋಕಕ್ಕೆ ಸಂಬಂಧ ಪಡದ ಶ್ರೇಯಸ್ಸಿಗೆ ಸಾಧನವಾದದ್ದು "[1]**ಚೋದನಾಲಕ್ಷಣೋಽರ್ಥೋಧರ್ಮಃ**= ವಿಧಿವಾಕ್ಯದಿಂದ ಗಮ್ಯವಾಗಿ-ತೋರಿಸಲ್ಪಟ್ಟದ್ದಾಗಿ ಪ್ರೇರಿಸಲ್ಪಟ್ಟದಾಗಿ, ಸ್ವರ್ಗ ಫಲಕ್ಕೆ ಸಾಧನವಾಗಿರುವಿಕೆ ಮುಂತಾದಲಕ್ಷಣವುಳ್ಳ-ಆಕಾರವುಳ್ಳ ಒಳ್ಳೆಯ ಪ್ರಯೋಜನವನ್ನುಂಟುಮಾಡುವುದು ಧರ್ಮ, ಎಂದು ಅರಿತಂತಾಯಿತು.

1. ಇದು ಜೈಮಿನೀಯ ನ್ಯಾಯಮಾಲಾ—ಪೂರ್ವಮೀಮಾಂಸಾಸೂತ್ರ. ೧-೧-೨.

**ಇದರ ವಿವರಣೆ :** ಲಕ್ಷಣ ಪ್ರಮಾಣಗಳಿಂದ ವಸ್ತುವು ಸಿದ್ಧಿಸುತ್ತದೆ. ಆದುದ ರಿಂದಲೇ "ಮಾನಾಧೀನಾ ಮೇಯಸಿದ್ಧಿರ್ಮಾನ ಸಿದ್ಧಿಶ್ಚಲಕ್ಷಣಾತ್" ಎಂದು ಹೇಳುತ್ತಾರೆ. ಸಂಕೇತಿಯ ಲಕ್ಷಣವೆಂಬುದು, ಲಕ್ಷ್ಯದ ಸಜಾತೀಯವಾದ ಅಂದರೆ ಒಂದೇಗುಂಪಿಗೆ ಸೇರಿದ ವಸ್ತುವಿನ ಆಕಾರವನ್ನು ತೋರಿಸುತ್ತದೆ, ಮತ್ತು ಬೇರೆಗುಂಪಿಗೆ ಸೇರಿದ ಪದಾರ್ಥವನ್ನು, ಈ ಆಕಾರವಿಲ್ಲದುದರಿಂದ ಇದು ಅಲ್ಲವೆಂದು ನಿಷೇಧಿಸುತ್ತದೆ. ಆದುದರಿಂದ ಒಂದೇ ಜಾತಿಗೆ ಸೇರಿದ ಸಜಾತಿಯ ಮತ್ತು ವಿಜಾತಿಯ ಬೇರೆಜಾತಿಗೆಸೇರಿದ ವಸ್ತುವನ್ನು ತಳ್ಳಿಹಾಕುವ ಲಕ್ಷ್ಯ ದಲ್ಲಿ ಇರುವ ಒಂದಾನೊಂದು ಲೋಕಪ್ರಸಿದ್ಧವಾದ ಆಕಾರವು ಲಕ್ಷಣ ಎನ್ನಿಸಿಕೊಳ್ಳಲ್ಪಡುತ್ತದೆ ಎಂದಾಯಿತು. ಆ ಲಕ್ಷಣದಿಂದ ಲಕ್ಷ್ಯವಾದ ಪದಾರ್ಥದಲ್ಲಿ ಗೌರವ ಬುದ್ಧಿ ಉಂಟಾಗಲಾಗಿ ಅದನ್ನು ತಿಳಿಯಲು-ಅಳತೆಮಾಡಲು ತೊಡಗಿದವನು ಪ್ರಮಾಣದಿಂದ ಅದನ್ನು ತಿಳಿಯುತ್ತಾನೆ.

ಅದು ಹೇಗೆಂದರೆ—'ಸಾಸ್ನಾದಿಮತೀಗೌಃ—ಸಾಸ್ನಾ = ಹಸುವಿನ ಕತ್ತಿನಲ್ಲಿ ದೋಸೆಯಂತೆ ಇರುವ ತೊಗಲು. ಇವೇಮೊದಲಾದವನ್ನುಳ್ಳದ್ದು ಹಸುವು 'ಎಂದುದಾಗಿ ಕೇಳಿ ನಾಲ್ಕು ಕಾಲುಗಳುಳ್ಳ ಜೀವಗಳಲ್ಲಿ ಆಲಕ್ಷಣದಿಂದ ಕೂಡಿದ ಪದಾರ್ಥವನ್ನು ಹುಡುಕಿ 'ಇದು ಗೋವು' ಎಂದು ಕಣ್ಣಿನಿಂದ ತಿಳಿಯುತ್ತಾನೆ. ಹೀಗಿರಲಾಗಿ, ಧರ್ಮವು ಕಣ್ಣಿಗೆ ಕಾಣದೇ ಇರುವುದರಿಂದ ಅಲೌಕಿಕವಾಯಿತು. ಅದಕ್ಕೆಲಕ್ಷಣವಿಲ್ಲ. ಆ ವಿಷಯವನ್ನು ಅಳತೆ ಮಾಡಿ ಅರಿಯಲು ಯತ್ನವು ತಾನೆ ಏತಕ್ಕೆ ? ಹೇಗಾದರೂ ಅದು ಉಪಯೋಗವಾದರೂ ಅದರಲ್ಲಿ ಪ್ರಮಾಣವಿದೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಈ ವಿಷಯದಲ್ಲಿ ಪ್ರತ್ಯಕ್ಷಪ್ರಮಾಣವು ಕಾಲಿಡಲಾರದು. ಏತಕ್ಕೆಂದರೆ ಧರ್ಮಕ್ಕೆ ರೂಪಾದಿಗಳಿಲ್ಲ. ಆದುದರಿಂದಲೇ ವ್ಯಾಪ್ತಿಯನ್ನು ಗ್ರಹಿಸಲಾಗದೆ ಇರುವುದರಿಂದ ಅನುಮಾನವೂ ಇಲ್ಲ. ಶಬ್ದಕ್ಕೆ ವಿಷಯವನ್ನು—ಸಂಗತಿಯನ್ನುಗ್ರಹಿಸಬೇಕಾದರೆ ಪ್ರತ್ಯಕ್ಷ ಅನುಮಾನ ಇವೇ ಕಾರಣವಾಗಿದೆ. ಆದುದರಿಂದ ವ್ಯುತ್ಪತ್ತಿ ಇಲ್ಲದ್ದರಿಂದ ಆಗಮವೂ ಅಲ್ಲಿ ಪ್ರವರ್ತಿಸುವುದಿಲ್ಲ. ಆದುದರಿಂದ ಧರ್ಮವು ಲಕ್ಷಣ ಪ್ರಮಾಣ ಇವುಗಳಿಲ್ಲದ್ದು, ಹೀಗೆಂದರೆ ಇದು ಸರಿಯಲ್ಲ.

ಕಣ್ಣು ಮೊದಲಾದವುಗಳಿಗೆ ತೋರಲು ಯೋಗ್ಯವಾದ ಲೌಕಿಕವಾದ ಆಕಾರವು ಅದಕ್ಕೆ ಬೇಡ ಆದರೂ ಚೋದನೆ—(ವಿಧಿ)ಗೆ ಗೋಚರವಾಗುವ ಸ್ವರ್ಗಫಲಸಾಧನತ್ವಮೊದಲಾದ ಆಕಾರವು ಇದೆ. ಆದುದರಿಂದ 'ಅರ್ಥತ್ವೇಸತಿ ಚೋದನಾ ಗಮ್ಯೋಧರ್ಮಃ' = ಪ್ರಯೋಜನವಾಗಿರುವಿಕೆ ಇರಲಾಗಿ ಚೋದನೆಗೆ ಗಮ್ಯವಾದದ್ದು ಧರ್ಮ ಎಂದು ಲಕ್ಷಣವಾಗುತ್ತದೆ. 'ಅರ್ಥೋಧರ್ಮಃ' ಹೀಗೆಂದರೆ ಬ್ರಹ್ಮದಲ್ಲೂ ಚೈತ್ಯವಂದನಾದಿಗಳಲ್ಲೂ, ಘಟಾದಿಗಳಲ್ಲೂ ಈ ಲಕ್ಷಣವಿರುವುದರಿಂದ ಅತಿವ್ಯಾಪ್ತಿ ಬರುತ್ತದೆ. ಅವನ್ನು ಬೇರೆಮಾಡಲು 'ಚೋದನಾಗಮ್ಯಃ' = ವಿಧಿಗೆ ವಿಷಯವಾದದ್ದು, ಎಂದು ಹೇಳಲ್ಪಟ್ಟಿತು. ಅಷ್ಟೇಹೇಳಿದರೆ ವಿಧಿಗೆ ವಿಷಯವಾದ ಅನರ್ಥವಾದ ಫಲವನ್ನುಂಟುಮಾಡುವುದರಿಂದ ಕೇಡನ್ನು ತರುವ ಶ್ಯೇನಾದಿ ಅಭಿಚಾರ (ಮಾಟ) ಕರ್ಮದಲ್ಲಿ ಅತಿವ್ಯಾಪ್ತಿಯಾಗುತ್ತದೆ. ಅದನ್ನು ತಳ್ಳಲು 'ಅರ್ಥಃ' ಎಂದು ಹೇಳಲ್ಪಟ್ಟಿತು. ಶ್ಯೇನಯಾಗಕ್ಕೇನೋ ಶತ್ರುವಧವು ಫಲ, ನರಕವಲ್ಲ ಆದರೂ ಆ ಶತ್ರುವಧ ನರಕಕ್ಕೆ ಕಾರಣವಾಗಿದೆ. ಆ ವಧದ ಮೂಲಕ ಶ್ಯೇನ ಅನರ್ಥವನ್ನುಂಟುಮಾಡುತ್ತದೆ. ಹಾಗಾದರೆ ಅಗ್ನೀಷೋಮೀಯ ಯಾಗದಲ್ಲಿ ಪಶುವನ್ನು ವಧೆಮಾಡಲು ಹೇಳಿದೆ. ಆದುದರಿಂದ ಆ ಪಶುವನ್ನು ಕೊಲ್ಲುವುದರಿಂದ ಅದೂ ನರಕಕ್ಕೆ ಕಾರಣವಾಗುತ್ತದೆಯಲ್ಲ ಎಂದು ಸಂದೇಹಪಡಕೂಡದು. ಆ ಪಶುಹಿಂಸೆಯು ಅಗ್ನಿಷೋಮೀಯಯಾಗದ ಅಂಗ. ಆ ಯಾಗಕ್ಕಾದರೋ ಫಲ ಸ್ವರ್ಗಪ್ರಾಪ್ತಿ. ಅದಲ್ಲದೆ ಬೇರೆ ಇಲ್ಲ. ಯಾವುದರಿಂದ ಚೋದನಾಗಮ್ಯವಾಗಿರಲಾಗಿ ಅಂದರೆ ವಿಧಿಯಿಂದ ತೋರಿಸಲ್ಪಟ್ಟದ್ದಾಗಿ–ಪ್ರೇರಿಸಲ್ಪಟ್ಟದ್ದಾಗಿ ಅರ್ಥತ್ವವು ಧರ್ಮ ಲಕ್ಷಣವಾಯಿತೋ, ಆ ಕಾರಣದಿಂದಲೇ ಗಮ್ಯವಾದ ಧರ್ಮದಲ್ಲಿ ಗಮಕವಾದ–ಚೆನ್ನಾಗಿ ತಿಳಿಪಡಿಸುವ ವಿಧಿವಾಕ್ಯವು ಪ್ರಮಾಣವಾಯಿತು. ಹೇಗೂ ಪ್ರತ್ಯಕ್ಷ ಅನುಮಾನಗಳಿಗೆ ಧರ್ಮವು ವಿಷಯವಾಗುವುದಿಲ್ಲ; ಹಾಗಿದ್ದರೂ ಪ್ರಸಿದ್ಧವಾದುವುಗಳಲ್ಲಿ ಪದಗಳ ಸಮಭಿವ್ಯಾಹಾರದಿಂದ ವ್ಯುತ್ಪತ್ತಿಯು ಉಂಟಾಗುತ್ತದೆ. ಆದುದರಿಂದ ಲಕ್ಷಣ ಪ್ರಮಾಣಗಳಿಂದ ಕೂಡಿರುವುದು ಧರ್ಮವು.

ಧರ್ಮಪರರೂ ಕೂಡ 'ದೇಹಕ್ಕಿಂತ ಬೇರೆಯಾದ ಆತ್ಮವೆಂಬುದು ಒಂದುಇದೆ' ಎಂಬ ಅಭಿಮಾನವುಳ್ಳವರು. ಇವರಿಗೆ ಬೇರೆ ಲೋಕಇದೆ ಎಂಬ ತಿಳಿವಳಿಕೆ ಇದೆ. ಅವರು ಎರಡು ವಿಧವಾದವರು. ಬೇರೆದೇವತೆಗಳನ್ನು ಪೂಜಿಸುವವರು ಒಂದು ಪಂಗಡ. ಮತ್ತೊಂದು ಪಂಗಡದವರು ಭಗವಂತನನ್ನೇ ಪರದೇವತೆಯೆಂದು ತಿಳಿದು ಅವನ ಪೂಜೆಯಲ್ಲೇ ನಿರತರಾದವರು. ಬ್ರಹ್ಮ, ರುದ್ರ, ಅಗ್ನಿ, ಇಂದ್ರ ಇವೇ ಮೊದಲಾದವರನ್ನು ಆರಾಧನೆಮಾಡುವವರು ದೇವತಾಂತರಪರರು. ಭಗವತ್ಪರರಾದರೋ 'ಆರ್ತೋಜಿಜ್ಞಾಸುರರ್ಥಾರ್ಥಿ' [1]ಎಂಬುದಾಗಿ ಗೀತೆಯಲ್ಲಿ ಹೇಳಲ್ಪಟ್ಟ ಅಧಿಕಾರಿಗಳು. ಆರ್ತನಾರೆಂದರೆ ಕಳೆದುಕೊಂಡ ಐಶ್ವರ್ಯವನ್ನು ಪಡೆಯಲು ಅಪೇಕ್ಷೆಯುಳ್ಳವನು. ಅಪೂರ್ವವಾದ ಐಶ್ವರ್ಯವನ್ನು ಹೊಂದಬೇಕೆಂಬ ಅಪೇಕ್ಷೆಯುಳ್ಳವನು ಅರ್ಥಾರ್ಥೀ.

ಮೋಕ್ಷವನ್ನು ಬಯಸುವವರು ಎರಡು ವಿಧರಾಗಿದ್ದಾರೆ. ಕೈವಲ್ಯಪರರು ಮತ್ತು ಮೋಕ್ಷಪರರು ಎಂದು. ಕೈವಲ್ಯವು ಜ್ಞಾನಯೋಗದಿಂದ, ಪ್ರಕೃತಿ

ಆ ಅನುಭವವು ಅರ್ಚಿರಾದಿ

ಮಾರ್ಗದಿಂದ ಪರಮಪದವನ್ನು ಹೊಂದಿದವನಿಗೇ ಉಂಟಾಗುವುದು. ಅವನು ಅದರ ಒಂದು ಮೂಲೆಯಲ್ಲಿದ್ದು ಗಂಡನಿಂದ ಬಿಡಲ್ಪಟ್ಟ (ಅಗಲಿದ) ಹೆಂಡತಿಯ ನ್ಯಾಯದಿಂದ ಭಗವದನುಭವಕ್ಕಿಂತ ಬೇರೆಯಾದ ಸ್ವಾತ್ಮಾನುಭವವೆಂದು ಹೇಳುತ್ತಾರೆ. ಕೆಲವರು ಅರ್ಚಿರಾದಿ ಮಾರ್ಗದಿಂದ ಹೋದವನಿಗೆ ಅವನು ಹಿಂದಿರುಗಿ ಬರುವುದಿಲ್ಲವೆಂದು ಶ್ರುತಿ ಹೇಳುವುದರಿಂದ ಪ್ರಕೃತಿ ಮಂಡಲದಲ್ಲೇ ಒಂದು ದೇಶದಲ್ಲಿ ತನ್ನ ಆತ್ಮವನ್ನು ಅನುಭವಿಸುವುದು ಅದು ಎಂದು ಹೇಳುತ್ತಾರೆ.

ಈವಾಗ ಈ ಕೈವಲ್ಯವಿಷಯದಲ್ಲಿ ವೇದಾಂತಾಚಾರ್ಯರು ತಾವು ರಚಿಸಿರುವ ನ್ಯಾಯ ಸಿದ್ಧಾಞ್ಜನ ಎಂಬ ಗ್ರಂಥದಲ್ಲಿ ಹೇಳಿರುವ ವಿಷಯವನ್ನು ಸ್ವಲ್ಪ ತಿಳಿಯೋಣ.

ಕೈವಲ್ಯವೆಂಬಹೆಸರುಳ್ಳ ಮೋಕ್ಷವು ಸಂಪ್ರದಾಯದಿಂದ ಬಂದಿದ್ದು ಎಂಬುದಾಗಿ ಹೇಳುವ ಪೂರ್ವಪಕ್ಷಿಯ ಅಭಿಪ್ರಾಯವನ್ನು ಹೇಳುವುದು.

## ಕೈವಲ್ಯ ವಿಚಾರ ವಿಮರ್ಶೆ

ತನ್ನ ಆತ್ಮವನ್ನು ಕಾಣುವಿಕೆಯಿಂದುಂಟಾದ ಆನಂದವನ್ನು ಅನುಭವಿಸುವುದೇ ಕೈವಲ್ಯವೆಂಬ ಮೋಕ್ಷ—ಅಂದರೆ ಪ್ರಕೃತಿಯಿಂದ ಬಿಡಲ್ಪಟ್ಟ ಪರಿಶುದ್ಧವಾದ ಆತ್ಮ

1. ಗೀತೆ. ೭-೧೬.

ಸ್ವರೂಪ ಆನಂದಮಯವಾದದ್ದು. ಅದನ್ನು ನೋಡಿ ಆ ಆನಂದವನ್ನು ಅನುಭವಿಸುವುದೇ ಕೈವಲ್ಯವೆಂಬ ಮೋಕ್ಷ. ಇದು ಪೂಜ್ಯರಾದ ಯಾಮುನ ಮುನಿಗಳಿಂದ ಹೇಳಲ್ಪಟ್ಟಿದೆ. ಶ್ರೀ ಭಗವದ್ಗೀತೆಗೆ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹ ರಕ್ಷಾ ಎಂಬ ಹೆಸರಿನಿಂದ ಸಂಕ್ಷೇಪವಾಗಿ ಅದರ ತಾತ್ಪರ್ಯವನ್ನೊಳಗೊಂಡ ಒಂದು ಚಿಕ್ಕ ಗ್ರಂಥವನ್ನು ರಚಿಸಿದ್ದಾರೆ. ಅದರ ಶ್ಲೋಕವಿದು—

**'ಐಶ್ವರ್ಯಾಕ್ಷರ ಯಾಥಾತ್ಮ್ಯ ಭಗವಚ್ಛರಣಾರ್ಥಿನಾಮ್ ।**
**ವೇದ್ಯೋಪಾದೇಯಭಾವಾನಾಮಷ್ಟಮೇಭೇದಉಚ್ಯತೇ ॥**

ಇತಿ—ಹೀಗೆಂದು ಹೇಳಿದ್ದಾರೆ.

ಐಶ್ವರ್ಯ=ಐಶ್ವರ್ಯವೆಂದರೆ ಇಲ್ಲಿ ಪ್ರಜಾಪತಿ ಪಶುಪತಿ ಇವರುಗಳು ಅನುಭವಿಸುವ ಭೋಗಕ್ಕಿಂತಲೂ ಹೆಚ್ಚಾದ ಭೋಗ. **ಅಕ್ಷರಯಾಥಾತ್ಮ್ಯ**= ವಿವಿಕ್ತವಾದ ಅಂದರೆ ಪ್ರಕೃತಿಯಿಂದ ಬಿಡಲ್ಪಟ್ಟ ಆತ್ಮಸ್ವರೂಪ ಇದನ್ನು ಅಪೇಕ್ಷಿಸುವವರು. ಭಗವಚ್ಛರಣಾರ್ಥಿನಾಮ್=ಭಗವಂತನನ್ನು ಶರಣು ಹೋಗಲು ಆಪೇಕ್ಷಿಸುವವರು ಇವರುಗಳಿಗೆ, ವೇದ್ಯಾಃ=ಅಕ್ಷರಂ ಬ್ರಹ್ಮ ಪರಂ ಇವೇ ಮೊದಲಾದವುಗಳಿಂದ ಹೇಳಲ್ಪಟ್ಟ ಶುದ್ಧಾತ್ಮ ಸ್ವರೂಪವೇ ಮೊದಲಾದವು, **ಉಪಾದೇಯಾಃ**=ಆಆ ಇಷ್ಟ ಫಲಗಳಿಗೆ ಯೋಗ್ಯವಾದ ಪರಮ ಪುರುಷ ಚಿಂತನ ಅಂತಿಮ ಪ್ರತ್ಯಯ ಅಂದರೆ ಕೊನೆಯ ನೆನಪು, ಗತಿ ಚಿಂತನ—ಶರೀರವನ್ನು ಬಿಟ್ಟ ನಂತರ ಹೋಗುವ ದಾರಿಯನ್ನು ಯೋಚಿಸುವುದು ತಿಳಿಸುವುದು. ಇವೇ ಮೊದಲಾದವುಗಳೇ ಪದಾರ್ಥಗಳು ಇವುಗಳ ಭೇದಃ– ಆ ಆ ಅಧಿಕಾರಕ್ಕೆ ತಕ್ಕ ವಿಶೇಷಗಳು ಅಷ್ಟಮೇ—ಗೀತೆಯ ಎಂಟನೆಯ ಅಧ್ಯಾಯದಲ್ಲಿ ಉಚ್ಯತೇ—ಹೇಳಲ್ಪಡುತ್ತದೆ ಎಂದು.

ಇಲ್ಲಿ ಐಶ್ವರ್ಯ ಶಬ್ದದಿಂದ ಹೇಳಲ್ಪಟ್ಟ ಪ್ರಾಕೃತ ಭೋಗಕ್ಕಿಂತಲೂ ಅಕ್ಷರ ಶಬ್ದದಿಂದ ಹೇಳಲ್ಪಟ್ಟ ಪ್ರತ್ಯಗಾತ್ಮನ ಯಥಾತ್ಮ್ಯವನ್ನು ಕೈವಲ್ಯವನ್ನು ಬೇರೆಯಾಗಿ ಹೇಳಿರುವುದರಿಂದ ಇವರಿಗೆ ಇದರಲ್ಲಿ ಅಭಿಪ್ರಾಯವು ಇದೆ ಎಂದು ವ್ಯಕ್ತವಾಗುತ್ತದೆ. ಅಲ್ಲದೆ ಚತುಶ್ಲೋಕಿಯಲ್ಲೂ 'ಸಂಸೃತ್ಯಕ್ಷರ ವೈಷ್ಣವಾಧ್ವಸುನೃಣಾಂ ಸಂಭಾವ್ಯತೇ ಕರ್ಹಿಚಿತ್'=ಇಲ್ಲಿ ಸಂಸ್ಕೃತಿ ಶಬ್ದವು ತ್ರಿವರ್ಗದಲ್ಲಿ ಅಡಗಿದ ಎಲ್ಲಾ ಇಷ್ಟಾರ್ಥವನ್ನೂ ತಿಳಿಸುತ್ತದೆ. ಅಕ್ಷರ ಶಬ್ದವಾದರೋ ಪ್ರತ್ಯಗಾತ್ಮನನ್ನು ಅನುಭವಿಸುವದನ್ನು ಹೇಳುತ್ತದೆ. ವೈಷ್ಣವಾಧ್ವ ಶಬ್ದವು ಗತಿವಿಶೇಷದ ಮೂಲಕ ಭಗವಂತನನ್ನು ಹೊಂದುವಿಕೆಯನ್ನು ತಿಳಿಸುತ್ತದೆ. ಇವು ಲಕ್ಷ್ಮಿಯ ಅನುಗ್ರಹವಿಲ್ಲದೆ ಮನುಷ್ಯರಿಗೆ ಶ್ರೇಷ್ಠವಾದ ಸುಖವೋ ಅಥವಾ ಆ ಸುಖಕ್ಕೆ ಸಾಧನವೋ ಹೇಗೂ ಸಿದ್ಧಿಸುವುದಿಲ್ಲ' ಎಂದು ಹೇಳಿದ್ದಾರೆ. ಭಾಷ್ಯಕಾರರೂ ಇವರ ಅಭಿಪ್ರಾಯವನ್ನು ಅನುಸರಿಸಿದ್ದಾರೆ.

ಚತುರ್ವಿಧಾಭಜನ್ತೇಮಾಂ ಜನಾಸ್ಸುಕೃತಿನೋಽರ್ಜುನ ।
1ಆರ್ತೋಜಿಜ್ಞಾಸು ರರ್ಥಾರ್ಥೀ ಜ್ಞಾನೀಚಭರತರ್ಷಭ ॥

ಎಂದು ಗೀತೆಯ ಏಳನೆಯ ಅಧ್ಯಾಯದಲ್ಲಿರುವ ಶ್ಲೋಕದ ವ್ಯಾಖ್ಯಾನದ ಸಂದರ್ಭದಲ್ಲಿ ಕೈವಲ್ಯಾರ್ಥವನ್ನು ಹೇಳುವ ಜಿಜ್ಞಾಸು ಶಬ್ದದ ಅರ್ಥ ವಿವರಣೆಯಲ್ಲಿ ಪ್ರಕೃತಿಯಿಂದ ಬಿಡಲ್ಪಟ್ಟಿದ್ದೇ ಸ್ವರೂಪ, ಕೈವಲ್ಯವೆಂದು ನಿರ್ಣಯಿಸಿದ್ದಾರೆ ಎಂಟನೆಯ ಅಧ್ಯಾಯದ ಆರಂಭದಲ್ಲಿ ಏಳನೆಯ ಅಧ್ಯಾಯದ ಅರ್ಥವನ್ನು ಅನುಕ್ರಮವಾಗಿ ಹೇಳುವಾಗ (ಅನುಕ್ರಮಣಿಕಾ=ವಿಷಯಗಳ ಪಟ್ಟಿ) ಸುಕೃತ= ಅದೃಷ್ಟ ವಿಶೇಷ ಇದರಿಂದ ಉಂಟಾದ ತಾರತಮ್ಯದಿಂದ ತಿಳಿವಳಿಕೆಯ ವೈಶಿಷ್ಟ್ಯದಿಂದ ಐಶ್ವರ್ಯ, ಅಕ್ಷರ, ಭಗವತ್ಪ್ರಾಪ್ತಿ ಇವುಗಳ ಅಪೇಕ್ಷೆಯಿಂದ ಉಪಾಸಕರ ಭೇದ ಎಂಬುದಾಗಿ ಹೇಳಿರುವುದರಿಂದಲೂ ಕೂಡ ಇವುಗಳು ಪರಸ್ಪರ ಭಿನ್ನವಾದವುಗಳು ಎಂಬುದು ವ್ಯಕ್ತವಾಗುತ್ತದೆ. ಹಾಗೆಯೇ ಕೈವಲ್ಯಾರ್ಥಿಗಳ ಆತ್ಮಸ್ವರೂಪವನ್ನು ಮಾತ್ರ ನೋಡಲು ಆಸೆಪಡುವವರ ಸ್ಮರಣದ ರೀತಿಯನ್ನು ಹೇಳುತ್ತಾರೆ' ಎಂದು ಹೇಳಿ.

2ಯದಕ್ಷರಂ ವೇದವಿದೋವದನ್ತಿ ವಿಶನ್ತಿಯದ್ಯತಯೋವೀತರಾಗಾಃ ।
ಯದಿಚ್ಛನ್ತೋ ಬ್ರಹ್ಮಚರ್ಯಂಚರನ್ತಿ ತತ್ತೇಪದಂ ಸಂಗ್ರಹೇಣ ಪ್ರವಕ್ಷ್ಯೇ ॥

ಅಸ್ಥೂಲತ್ವ (ದಪ್ಪನಾಗಿ ಇರುವಿಕೆ ಇಲ್ಲದ) ಮೊದಲಾದ ಗುಣಗಳುಳ್ಳದ್ದಾಗಿ ಯಾವ ಅಕ್ಷರವನ್ನು (ಬ್ರಹ್ಮವನ್ನು) ವೇದವನ್ನು ಅರಿತವರು ಹೇಳುತ್ತಾರೋ, ಬೇರೆ ವಸ್ತುಗಳಲ್ಲಿ ಆಸೆ ಇಲ್ಲದವರು ಯಾವ ಅಕ್ಷರವನ್ನು ಹೊಂದುತ್ತಾರೋ, ಯಾವ ಅಕ್ಷರವನ್ನು ಹೊಂದಬೇಕೆಂದು ಆಸೆಪಟ್ಟು ಹೆಂಗಸರನ್ನು ನೆನೆಯುವುದು ಮೊದಲಾದವನ್ನು ಮಾಡದೆ ಇರುತ್ತಾರೋ ಆ ನಾಲ್ಕು ಆದ ವೇದಗಳಿಂದಲೂ ಅರಿಯಲು ತಕ್ಕ 3ಅಕ್ಷರವನ್ನು ಹೇಗೆ ಧ್ಯಾನಮಾಡಬೇಕೋ ಹಾಗೆ ಸಂಕ್ಷೇಪವಾಗಿ ಹೇಳುತ್ತೇನೆ.

ಎಂಬ ಈ ಶ್ಲೋಕವನ್ನು ಅವತಾರಿಕೆಯಾಗಿಟ್ಟು—

1. ಭಗವದ್ಗೀತೆ. ೭-೧೬.

2. ಭಗವದ್ಗೀತೆ. ೮–೧೧.

3. ಇಲ್ಲಿ ಸ್ವರೂಪದಲ್ಲಿ ಒಂದು ವಿಧವಾದ ವ್ಯತ್ಯಾಸವಿಲ್ಲದ ಭಗವಂತನ ಸ್ವರೂಪದ ಧ್ಯಾನವನ್ನು ಹೇಳಿರುವುದು—ಸ್ವರೂಪದಲ್ಲಿ ವ್ಯತ್ಯಾಸವಿಲ್ಲದ ಜೀವನಸ್ವರೂಪವನ್ನು ಹೊಂದುವುದಕ್ಕಾಗಿ.

[1]ಸರ್ವದ್ವಾರಾಣಿ ಸಂಯಮ್ಯ ಮನೋಹೃದಿನಿರುಧ್ಯಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋಯೋಗಧಾರಣಾಮ್ ॥
ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಂ ಸಯಾತಿ ಪರಮಾಂಗತಿಮ್ ॥

ಅರಿವಿಗೆ ದಾರಿಗಳಾದ ಕಿವಿ ಮೊದಲಾದ ಇಂದ್ರಿಯಗಳನ್ನು ಅವುಗಳ ವಿಷಯ ಗಳಲ್ಲಿ ಹೋಗದಂತೆ [2]ಅಡಗಿಸಿ, ಹೃದಯ ಕಮಲದಲ್ಲಿ ಇರುವ ಅಕ್ಷರವಾಗಿರುವ ನನ್ನಲ್ಲಿ ಮನಸ್ಸನ್ನು [3]ನಿಲ್ಲಿಸಿ ನನ್ನನ್ನೇ [4]ಸ್ಥಿರವಾಗಿ ಧ್ಯಾನಮಾಡುವವನು ನನ್ನನ್ನು ಹೇಳುವ ಒಂದು ಅಕ್ಷರವಾದ ಪ್ರಣವವನ್ನು ಹೇಳಿಕೊಂಡು, ಆ ಅಕ್ಷರಕ್ಕೆ ಅರ್ಥವಾದ ನನ್ನನ್ನು ನೆನೆಸಿಕೊಂಡು ತನ್ನ [5]ಪ್ರಾಣವನ್ನು ತಲೆಯಲ್ಲಿ ಇಟ್ಟು ಶರೀರವನ್ನು ಬಿಡ ತಕ್ಕದ್ದು. ಅವನು ಶ್ರೇಷ್ಠವಾದ ಜಾಗವನ್ನು ಹೊಂದುತ್ತಾನೆ. ಅಂದರೆ ಪ್ರಕೃತಿಯ ನೆನಪು ಇಲ್ಲದೆ ನನ್ನಂತೆ ಇರುವ ಮತ್ತೆ ಹಿಂತಿರುಗಿ ಬರುವುದು ಇಲ್ಲದ [6]ಜೀವ ಸ್ವರೂಪವನ್ನು ಹೊಂದುತ್ತಾನೆ. ಅಂದರೆ ನೋಡುತ್ತಾನೆ ಎಂದು ಹೇಳಿದೆ.

1. ಗೀತೆ ೮–೧೨, ೧೩.

2. ಈ ರೀತಿ ಅಡಗಿಸುವುದನ್ನು ಪ್ರತ್ಯಾಹಾರವೆಂದು ಹೇಳುತ್ತಾರೆ.

3. ಶ್ಲೋಕದಲ್ಲಿ ಮನಸ್ಸನ್ನು ಹೃದಯದಲ್ಲಿ ಇಟ್ಟು ಎಂದಿದೆ ಅದಕ್ಕೆ ಮನಸ್ಸು ಎಂಬ ಇಂದ್ರಿಯವನ್ನು ಹೃದಯವೆಂಬ ಜಾಗದಲ್ಲಿ ಇಟ್ಟು–ಅಂದರೆ ಮನಸ್ಸಿನಿಂದ ಹೃದಯವನ್ನು ನೆನೆಸಿಕೊಂಡು–ಎಂದು ತಾನೆ ಅರ್ಥವಾಗುತ್ತದೆ. ಭಗವಂತನ ಧ್ಯಾನವನ್ನು ಹೇಳಲು ಬಂದ ಸ್ಥಳದಲ್ಲಿ ಹೃದಯವನ್ನು ಧ್ಯಾನಮಾಡುವಂತೆ ಹೇಳುವುದು ಸರಿಯಲ್ಲ, ಆದುದರಿಂದ ಮನಸ್ಸನ್ನುಹೃದಯದಲ್ಲಿರುವ ಭಗವಂತನಲ್ಲಿ ಇಟ್ಟು ಎಂಬ ಅರ್ಥವನ್ನು ಮಾಡಿಕೊಳ್ಳಬೇಕು.

4. ಪ್ರತ್ಯಾಹರ, ಧಾರಣ, ಧ್ಯಾನ ಎಂದು ಯೋಗದ ಹಂತಗಳು ಹೇಳಿವೆ. ಪ್ರತ್ಯಾಹಾರ ಎಂಬುದು ಕಣ್ಣು ಮೊದಲಾದ ಇಂದ್ರಿಯಗಳನ್ನು ಅಡಗಿಸುವುದು. ಧಾರಣೆ ಎಂಬುದು ಮನಸ್ಸನ್ನು, ಧ್ಯಾನಿಸಲು ಬೇಕಾದ ವಸ್ತುವನ್ನು ಬಿಟ್ಟು ಹೊರಗೆ ಹೋಗದಂತೆ ಅದರಲ್ಲಿ ನಿಲ್ಲಿಸುವುದು ಧ್ಯಾನವೆಂಬುದು ಬೇರೆ ವಸ್ತುವಿನ ನೆನಪು ಸಂಬಂಧವಾಗದಂತೆ ಒಂದನ್ನೇ ನೆನಿಸುವುದು, ಈ ಜಾಗದಲ್ಲಿ ಧಾರಣವೆಂದು ಹೇಳಿದ್ದು ಎರಡನೆಯದಾದ ಧಾರಣೆಯನ್ನೇ ಹೇಳಲಿಲ್ಲ ಅದಕ್ಕೆ ಮೇಲ್ಪಟ್ಟ ಧ್ಯಾನವನ್ನೇ ಹೇಳುತ್ತದೆ.

5. ಮೋಕ್ಷವನ್ನು ಆಸೆಪಡುವವನ ಪ್ರಾಣವು ಶರೀರವನ್ನು ಬಿಟ್ಟು ಹೋಗುವ ಕಾಲ ದಲ್ಲಿ ತಲೆಯ ದಾರಿಯಿಂದ ಹೋಗಬೇಕಾದುದರಿಂದ 'ಪ್ರಾಣವನ್ನು ತಲೆಯಲ್ಲಿ ಇಟ್ಟು' ಎಂದು ಹೇಳಿದೆ.

6. ಆತ್ಮವನ್ನು ಮಾತ್ರ ನೋಡಬೇಕೆಂದು ಆಸೆಯುಳ್ಳವನು ಹೊಂದಬೇಕಾದದ್ದು ತನ್ನ ಸ್ವರೂಪ ಮಾತ್ರವೇ, ಆದರೆ ಇವನು ತನ್ನ ಸ್ವರೂಪವನ್ನು ಮಾತ್ರ ಕೊಂಚಕಾಲ ಅನುಭವಿಸಿ, ಅನಂತರ ಭಗವಂತನ ಹತ್ತಿರ ಹೋಗುತ್ತಾನೆ ಸಂಸಾರಕ್ಕೆ ಇವನು ತಿರುಗಿ ಬರುವುದಿಲ್ಲ. ಆದುದರಿಂದ ಜೀವಸ್ವರೂಪವನ್ನೂ ಶ್ರೇಷ್ಠವಾದ ಸ್ಥಾನವೆಂದು ಹೇಳಿದೆ.

ಅಮೇಲೆಯೂ ಕೂಡ "ಈ ರೀತಿ ಐಶ್ವರ್ಯಾರ್ಥಿಗೂ ಕೈವಲ್ಯಾರ್ಥಿಗೂ ತನ್ನ ಪ್ರಾಪ್ತಿಗೆ ಅನುಗುಣವಾದ ಭಗವಂತನ ಉಪಾಸನ ಪ್ರಕಾರವು ಹೇಳಲ್ಪಟ್ಟಿತು. ಅನಂತರ ಜ್ಞಾನಿಯಾದವನಿಗೆ ಭಗವದುಪಾಸನ ರೀತಿಯನ್ನೂ, ಹೊಂದುವ ರೀತಿ ಯನ್ನು ಹೇಳುತ್ತಾರೆ" ಎಂದು ಹೇಳಿ.

[1]ಅನನ್ಯ ಚೇತಾಃ ಸತತಂ ಯೋಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯಯೋಗಿನಃ ॥

ಆರಂಭದ ಮೊದಲು, ಅನಂತರ ಒಂದು ಕಾಲವೂ ಬಿಡದಂತೆ, ಅಂದರೆ ಐಶ್ವರ್ಯ-ಭೋಗ, ತನ್ನನ್ನು ಮಾತ್ರ ಅನುಭವಿಸುವುದು ಇವುಗಳ ಪ್ರಯೋಜನ ಗಳನ್ನು ಅಪೇಕ್ಷಿಸದೆ, ಭಗವಂತನನ್ನು (ನನ್ನನ್ನು) ಬಿಟ್ಟು ಇನ್ನೊಂದು ಜಾಗದಲ್ಲಿ ಮನಸ್ಸನ್ನು ಇಡದೆ-ನನ್ನ ಹತ್ತಿರ ಅಳತೆಯಿಲ್ಲದ ಆಸೆ ಇರುವುದರಿಂದ ನನ್ನನ್ನು ಅರ್ಧಕ್ಷಣ ನೆನಸದೇ ಹೋದರೆ ಧರಿಸಲು ಆಗದಂತೆ ಯಾವನು ಅತಿಯಾದ ಪ್ರೀತಿ ಯಿಂದ ಧ್ಯಾನಮಾಡುತ್ತಾನೋ, ಯಾವಾಗಲೂ ನನ್ನೊಡನೇ ಇರಬೇಕೆಂದು ಆಸೆ ಪಟ್ಟುಇರುವ ಆ ಯೋಗಿ ನನ್ನನ್ನೇ ಹೊಂದುತ್ತಾನೆ. ಕೆಳಗೆ ಹೇಳಿದ ಇಬ್ಬರುಗಳಂತೆ ನನಗೆ ಸಮಾನವಾದ ಐಶ್ವರ್ಯ ಮೊದಲಾದವನ್ನು ಹೊಂದುವುದಿಲ್ಲ. ಕಷ್ಟವಿಲ್ಲದೆ ನನ್ನನ್ನು ಹೊಂದುತ್ತಾನೆ. ನನ್ನನ್ನು ಆಸೆಪಡದೆ ಐಶ್ವರ್ಯ ಮೊದಲಾದವನ್ನು ಆಸೆಪಡುವವರಿಗೆ ಪ್ರಯಾಸವು ಹೆಚ್ಚು. ನನ್ನನ್ನೇ ಹೊಂದಬೇಕೆಂದು ಧ್ಯಾನ ಮಾಡುವವನನ್ನು ಬಿಟ್ಟು ನನ್ನಿಂದ ಬೇರೆಯಾಗಲು ಸಾಧ್ಯವಿಲ್ಲ. ಆದುದರಿಂದ ಅವನ ಧ್ಯಾನವು [2]ಬೇಗನೆ ಪರಿಪಕ್ವವಾಗುವ ಹಾಗೆ ಮಾಡುತ್ತೇನೆ. ಅದಕ್ಕೆ ಉಂಟಾ ಗುವ [3]ತೊಂದರೆಗಳನ್ನು ನೀಗಿಸುತ್ತೇನೆ, ಅವನಿಗೆ ನನ್ನ ಹತ್ತಿರ ಅಳತೆಯಿಲ್ಲದ ಪ್ರೀತಿಯನ್ನುಕೊಡುತ್ತೇನೆ. ನನ್ನೊಡನೆ ಪರಮಪದದಲ್ಲಿ ಒಂದೇ ಮಂಚದಲ್ಲಿ ಅವನು ಕೂರುವವರೆಗೂ ನಡುವೆ ಅವನಿಂದ ಮಾಡಲು ಆಗದ, ಮಾಡಬೇಕಾದ ಎಲ್ಲಾ

1. ಗೀತೆ. ೮–೧೪.

2. ಪಕ್ವವಾಗುವಂತೆ ಮಾಡುವುದೆಂದರೆ–ನೆನಪು ಬೇರೆ ಅಭಿಪ್ರಾಯದೊಡನೆ ಕಲೆಯ ದಂತೆ ಒಂದೇ ಕಂಬಿಯಂತೆ ಇರುವಂತೆಯೂ, ಕಣ್ಣಿನಿಂದ ನೋಡುವಹಾಗೆ ಸ್ವಚ್ಛವಾಗಿ ಇರುವಂತೆಯೂ ಮಾಡಿ, ಭಗವಂತನನ್ನು ನೋಡಬೇಕೆಂದು ಹೆಚ್ಚಾದ ತ್ವರೆ–ಆಸಕ್ತಿ ಉಂಟು ಮಾಡುವದು ಮೊದಲಾದವನ್ನು ಮಾಡುವುದು.

3. ತೊಂದರೆಗಳು–ಕೆಟ್ಟ ಕರ್ಮಗಳು, ರಜೋಗುಣ–ತಮೋಗುಣ ಮೇಲಾಗಿರುವಿಕೆ ಆಶೆಯೂ–ದ್ವೇಷವೂ–ಪ್ರಜ್ಞೆ ತಪ್ಪುವಿಕೆಯೂ ಮೊದಲಾದವುಗಳು.

ಕಾರ್ಯಗಳನ್ನೂ ಮಾಡುತ್ತೇನೆ. ಈ ಕಾರ್ಯವನ್ನು ನನ್ನ ಹೊರೆಯೆಂದು ಭಾವಿಸಿರುತ್ತೇನೆ. ಎನ್ನುತ್ತಾನೆ [1]ಪರಮಾತ್ಮ.

ಅನಂತರ ಅಧ್ಯಾಯದ ಉಳಿದ ಭಾಗದಿಂದ ಜ್ಞಾನಿಗೆ ಮತ್ತು ಕೈವಲ್ಯಾರ್ಥಿಗೆ ಹಿಂತಿರುಗಿ ಬರದೆ ಇರುವಿಕೆ, ಐಶ್ವರ್ಯಾರ್ಥಿಗೆ ಪುನರಾವೃತ್ತಿ ಇದನ್ನು ಹೇಳುತ್ತಾರೆ ಎಂದು ಹೇಳಿ "ಮಾಮುಪೇತ್ಯ=ನನ್ನನ್ನು ಹೊಂದಿ" ಇವೇ ಮೊದಲಾದವನ್ನು "ಪ್ರಭವತ್ಯಹರಾಗಮೇ=ಅಹಸ್ಸು ಬಂದಾಗ ಹುಟ್ಟುತ್ತದೆ" ಎಂಬುವವರೆಗೂ ವ್ಯಾಖ್ಯಾನ ಮಾಡಿ 'ಕೈವಲ್ಯವನ್ನು ಪಡೆದವರಿಗೂ ಪುನರಾವೃತ್ತಿ ಇಲ್ಲ ಎಂದು ಹೇಳುತ್ತಾರೆ' ಎಂದು ಹೇಳಿ 'ಪರಸ್ತಸ್ಮಾತ್ತು=ಅದಕ್ಕಿಂತ ಮೇಲಾದುದು "ಇವೇ ಮೊದಲಾದವನ್ನು "ತದ್ಧಾಮಪರಮಂ ಮಮ" ಅದು ನನ್ನ ಶ್ರೇಷ್ಠವಾದ ಸ್ಥಾನ ಎಂಬುವವರೆಗೂ ವ್ಯಾಖ್ಯಾನ ಮಾಡಲ್ಪಟ್ಟಿತು. ರಾಮಾನುಜರಿಂದ ಆಮೇಲೆಯೂ ಕೂಡ "ಜ್ಞಾನಿಗೆ ಪ್ರಾಪ್ಯವಾದ ಸ್ಥಾನವಾದದ್ದೋ ಅದಕ್ಕಿಂತ ಬಹಳ ಭೇದವುಳ್ಳದ್ದೆಂದು ಎಂದು ಹೇಳುತ್ತಾರೆ" ಎಂದು ಹೇಳಿ "ಪುರುಷಃ ಸ ಪರಃ=ಅವನು ಶ್ರೇಷ್ಠನಾದ ಪುರುಷ" ಎಂಬ ಶ್ಲೋಕವು ವ್ಯಾಖ್ಯಾನ ಮಾಡಲ್ಪಟ್ಟಿತು.

ಇದರ ವಿವರಣೆ :

**ಮಾಮುಪೇತ್ಯ ಪುನರ್ಜನ್ಮ ದುಃಖಾಲಯ ಮಶಾಶ್ವತಮ್ ।**
**ನಾಪ್ನುವನ್ತಿಮಹಾತ್ಮಾನಃ ಸಂಸಿದ್ಧಿಂಪರಮಾಂಗತಾಃ ॥೧೫॥**

ನನ್ನನ್ನು ಹೊಂದಿದವರು ಎಲ್ಲಾ ದುಃಖಗಳಿಗೂ ನೆಲೆಯಾದುದಾಗಿಯೂ, ಎಲ್ಲೋ ಇಲ್ಲದ್ದೂ ಆದ ಹುಟ್ಟನ್ನು ಮತ್ತೆ ಹೊಂದುವುದಿಲ್ಲ. ಏತಕ್ಕೆಂದರೆ, ಅವರು ಹಿರಿಯದಾದ ಮನಸ್ಸುಳ್ಳವರು; ನನ್ನನ್ನು ಸರಿಯಾಗಿ ಅರಿತವರು. ನನ್ನಹತ್ತಿರ ಅಳತೆಯಿಲ್ಲದ ಪ್ರೀತಿಯಿಂದ ನನ್ನನ್ನುಬಿಟ್ಟಿದ್ದರೆ, ಒಂದು ನಿಮಿಷವೂ ಧರಿಸಲಾಗದವರಾಗುತ್ತಾರೆ. ಇವರು ನನ್ನಲ್ಲೇ ಮನಸ್ಸನ್ನು ಇಟ್ಟು ನನ್ನನ್ನೇ ಧ್ಯಾನಮಾಡಿ ಹೆಚ್ಚಾದ ಪ್ರಯೋಜನವಾದ ನನ್ನನ್ನು ಹೊಂದಿರುತ್ತಾರೆ.

---

1. ಇಲ್ಲಿ ಹೇಳಿರುವುದೆಲ್ಲವೂ ಬರಿಯ ಸ್ತೋತ್ರವಲ್ಲ,ಹಾಗೆಯೇ ವೇದವು ಹೇಳುತ್ತದೆ. ಇದೇ ಸಂಗತಿಯು ೧೧ನೇ ಅಧ್ಯಾಯದಲ್ಲಿ ೧೧ನೆಯ ಶ್ಲೋಕದಲ್ಲಿ ಹೇಳಲ್ಪಡುತ್ತದೆ. ಹಣವನ್ನೂ, ಆತ್ಮ ಸ್ವರೂಪ ಮಾತ್ರದ ನೋಡುವಿಕೆಯನ್ನೂ ಆಸೆಪಡುವವರುಗಳು ಧ್ಯಾನ ಮಾಡತಕ್ಕ ಭಗವಂತನ ಗುಣಗಳು ಇವು ಎಂದು ಕೆಳಗೆ ಹೇಳಲ್ಪಟ್ಟಿತು. ಭಗವಂತನನ್ನೇ ಆಸೆಪಡುವವರು ಈ ಗುಣಗಳೊಡನೆ ಧ್ಯಾನಮಾಡಬೇಕೆಂದು ಇಲ್ಲಿ ಹೇಳಿಲ್ಲ. ಉಪನಿಷತ್ತುಗಳಲ್ಲಿ ಅನೇಕ ವಿಧವಾದ ಧ್ಯಾನಗಳು ಹೇಳಲ್ಪಟ್ಟಿವೆ. ಆ ಧ್ಯಾನಗಳನ್ನು ಮಾಡುವಾಗ ಅವುಗಳಿಗೆ ಏರ್ಪಟ್ಟಿರುವ ಗುಣಗಳೊಡನೆ ಧ್ಯಾನ ಮಾಡಬೇಕೆಂದು ಹೇಳಿದೆ, ಅವುಗಳನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಿಲ್ಲ ಎಂದು ತೋಚುತ್ತದೆ.

ಐಶ್ವರ್ಯವನ್ನು ಹೊಂದಿದವರು ಮತ್ತೆ ಹುಟ್ಟುವರು ಎಂಬುದಕ್ಕೂ, ಭಗವಂತನನ್ನು ಹೊಂದಿದವರು ಮತ್ತೆ ಹುಟ್ಟುವುದಿಲ್ಲ ಎಂಬುದಕ್ಕೂ ಕಾರಣ ವನ್ನು ಹೇಳುತ್ತಾರೆ.

ಆಬ್ರಹ್ಮಭವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯತು ಕೌನ್ತೇಯ ಪುನರ್ಜನ್ಮನವಿದ್ಯತೇ ॥೧೬॥

ಬ್ರಹ್ಮಲೋಕವೂ ಸೇರಿ ಬ್ರಹ್ಮಾಂಡದ ನಡುವಿನಲ್ಲಿರುವ ಸುಖಕ್ಕೂ ಐಶ್ವರ್ಯಕ್ಕೂ ತವರುಮನೆಯಾದ ಎಲ್ಲಾ ಲೋಕಗಳೂ ಒಂದೇ ಕಾಲದಲ್ಲಿ ನಾಶ ವಾಗುತ್ತವೆ. ಆದುದರಿಂದ ಅವುಗಳನ್ನು ಹೊಂದಿದವರು ಮತ್ತೆ ಹುಟ್ಟುತ್ತಾರೆ. ಮನೆಯು ಇರುವ ಜಾಗವು ತಿಳಿಯದೇ ನಾಶವಾದರೆ, ಅದರಲ್ಲಿ ಇದ್ದವರು ಇನ್ನೊಂದು ಜಾಗಕ್ಕೆ ಹೋಗದಿರುವರೋ ? ನನ್ನ ಜಾಗವಾದ ಪರಮಪದವು ಸ್ಥಿರವಾದದ್ದು. ಅದಕ್ಕೆ ಒಂದು ಕಾಲದಲ್ಲೂ ನಾಶವಿಲ್ಲ. ಆ ಜಾಗದಲ್ಲಿ ಎಲ್ಲವನ್ನೂ ಅರಿತ-ನೆನಿಸಿದಂತೆ ತಪ್ಪದೆ ನಡೆಸುವ ಎಲ್ಲಾ ಲೋಕಗಳನ್ನೂ ಉಂಟು ಮಾಡಿ. ಕಾಪಾಡಿ, ನಾಶಮಾಡುವ ಆಟವಾಗಿಉಳ್ಳ-ಅಳತೆಯಿಲ್ಲದ ದಯೆಯುಳ್ಳ ಯಾವಾಗಲೂ ಒಂದೇಸಮನಾಗಿ ಇರುವ-ನನ್ನನ್ನು ಹೊಂದಿದವರಿಗೆ ನಾಶಕ್ಕೆ ಹೆಸರೇ ಇಲ್ಲದೆ ಇರುವುದರಿಂದ, ಮತ್ತೆ ಹುಟ್ಟೆ ಇಲ್ಲ.

ಬ್ರಹ್ಮಲೋಕವನ್ನೊಳಗೊಂಡ ಎಲ್ಲಾ ಲೋಕಗಳೂ ಅವುಗಳಲ್ಲಿರುವವರೂ ಇಷ್ಟು ಇಷ್ಟು ಕಾಲವಿದ್ದು ನಾಶವಾಗತಕ್ಕದ್ದೆಂದು ಭಗವಂತನು ಏರ್ಪಾಟು ಮಾಡಿದ್ದಾನೆ ಎಂದು ಹೇಳುತ್ತಾರೆ.

ಸಹಸ್ರಯುಗ ಪರ್ಯನ್ತ ಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂಯುಗ ಸಹಸ್ರಾಂತಾಂ ತೇಽಹೋರಾತ್ರವಿದೋಜನಾಃ ॥೧೭॥

ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವನ್ತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯನ್ತೇ ತತ್ರೈವಾವ್ಯಕ್ತಸಂಜ್ಞಕೇ ॥೧೮॥

ಭೂತಗ್ರಾಮಃ ಸ ಏವಾಯಂ ಭೂತ್ವಾಭೂತ್ವಾಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥಪ್ರಭವತ್ಯಹರಾಗಮೇ ॥೧೯॥

ಮನುಷ್ಯನನ್ನು ಮೊದಲು ಮಾಡಿ ಬ್ರಹ್ಮನವರೆಗೂ ಇರುವವರಿಗೆ ನನ್ನಿಂದ ಏರ್ಪಡಿಸಲ್ಪಟ್ಟ ದಿನಗಳ ಲೆಕ್ಕ ಬಲ್ಲವರು, ಬ್ರಹ್ಮನ ಒಂದು ಹಗಲು ಸಾವಿರ ಚತುರ್ಯುಗ (ನಾಲ್ಕು ಯುಗಗಳು) ಎಂದು ತಿಳಿಯುತ್ತಾರೆ. ರಾತ್ರಿಯು ಅದೇ

ರೀತಿ. ಭೂಲೋಕ, ಭುವರ್ಲೋಕ, ಸ್ವರ್ಗಲೋಕ ಎಂಬ ಲೋಕಗಳಲ್ಲಿ ಶರೀರಗಳಾಗಿಯೂ, ಇಂದ್ರಿಯಗಳಾಗಿಯೂ ಅನುಭವಿಸಲು ತಕ್ಕ ವಸ್ತುಗಳಾಗಿಯೂ, ಅನುಭವಕ್ಕೆ ಬೇಕಾದ ಜಾಗಗಳಾಗಿಯು ಇರುವ ಎಲ್ಲಾ ವಸ್ತುಗಳೂ ಬ್ರಹ್ಮನಿಗೆ ಹೊತ್ತು ಹುಟ್ಟುವ ಕಾಲದಲ್ಲಿ ಪ್ರಕೃತಿಯಿಂದ ಉಂಟಾದ ಅವನ ಶರೀರದಿಂದ ಉಂಟಾಗುತ್ತವೆ. ಅಸ್ತಮನ ಕಾಲದಲ್ಲಿ ಆಶರೀರದಲ್ಲಿಯೇ ಅಡಗುತ್ತವೆ. ಈ ಮೂರು ಲೋಕದಲ್ಲಿರುವ ಕರ್ಮಕ್ಕೆ ವಶವಾದ ಎಲ್ಲಾ ಪ್ರಾಣಿಗಳೂ ಬ್ರಹ್ಮನಿಗೆ ಉದಯವಾಗುವ ವೇಳೆಯಲ್ಲಿ ಉಂಟಾಗಿ ಅಸ್ತಮನಕಾಲದಲ್ಲಿ ಸತ್ತು, ಮತ್ತೆ ಉದಯ ಕಾಲದಲ್ಲಿ ಉಂಟಾಗುತ್ತಾರೆ. ಇವೆಲ್ಲಾ ಈ ರೀತಿಯಿಂದ ಉಂಟಾಗುವುದೂ ಹೋಗುವುದೂ ಆಗಿರುತ್ತವೆ. ಬ್ರಹ್ಮನಿಗೆ ಒಂದುನೂರು ವರ್ಷವಾದನಂತರ ಬ್ರಹ್ಮಲೋಕದವರೆಗೂ ಇರುವ ಲೋಕಗಳೂ. ಅವನ್ನು ಉಂಟುಮಾಡುವ ವಸ್ತುಗಳಲ್ಲಿ ಕ್ರಮವಾಗಿ ಅಡಗಿ ಕೊನೆಯಲ್ಲಿ ನನ್ನ ಹತ್ತಿರ ಬಂದು ಸೇರುತ್ತವೆ. ಬ್ರಹ್ಮನೂ ಹೋಗಿಬಿಡುತ್ತಾನೆ.

ಈ ರೀತಿ ನಾನು ಹೊರತು ಎಲ್ಲಾ ವಸ್ತುಗಳಿಗೂ ಒಂದು ಕಾಲದಲ್ಲಿ ನನ್ನಿಂದ ಹುಟ್ಟೂ, ನನ್ನಲ್ಲಿಬಂದು ಅಡಗುವುದೂ ಇರುವುದರಿಂದ, ಅವರಿಗೂ ನಿಶ್ಚಯವಾಗಿಯೂ ನಾಶವು ಬಂದೇ ಬರುತ್ತದೆ. ಆದುದರಿಂದ ಐಶ್ವರ್ಯವನ್ನು ಹೊಂದಿದವರು ಮತ್ತೆ ಹುಟ್ಟದೇ ಇರಲು ಸಾಧ್ಯವಿಲ್ಲ. ನನಗೂ ನನ್ನ ಜಾಗಕ್ಕೂ ಈರೀತಿ ನಾಶವಿಲ್ಲದಿರುವುದರಿಂದ, ನನ್ನಹತ್ತಿರ ಬಂದವರಿಗೆ ಮತ್ತೆ ಹುಟ್ಟುವಿಕೆ ಇಲ್ಲ. ಶ್ಲೋಕದಲ್ಲಿ 'ಅವ್ಯಕ್ತಾತ್' ಎಂದೂ, 'ವ್ಯಕ್ತ್ಯಾವ್ಯಕ್ತಾತ್' ಎಂದೂ ಎರಡು ಸಂಸ್ಕೃತ ಶಬ್ದಗಳಿವೆ. ಅವುಗಳಲ್ಲಿ 'ಅವ್ಯಕ್ತ' ಎಂಬ ಪದಕ್ಕೆ ಮೂಲಪ್ರಕೃತಿ ಎಂದೂ, 'ವ್ಯಕ್ತಯೇಃ' ಎಂಬ ಪದಕ್ಕೆ ಅದರಿಂದ ಉಂಟಾದ ಮಹತ್ ಮೊದಲಾದವು ಅರ್ಥ ಎಂದೂ ಏರ್ಪಾಡಾಗಿದೆ. ಈ ಜಾಗದಲ್ಲಿ ಆ ರೀತಿ ಅರ್ಥವಿಲ್ಲ. ಏತಕ್ಕೆಂದರೆ ಈ ಜಾಗ ಬ್ರಹ್ಮನಿಗೆ ಹೊತ್ತುಹುಟ್ಟುವ (ಪ್ರಾತಃಕಾಲ) ಕಾಲದಲ್ಲಿ ಉಂಟಾಗುವುವುಗಳನ್ನು ಹೇಳುತ್ತವೆ. ಮಹತ್ ಮೊದಲಾದವು ಬ್ರಹ್ಮನು ಹುಟ್ಟುವುದಕ್ಕೆ ಮುಂಚೇ ಉಂಟಾದವು. 'ಅವ್ಯಕ್ತ' ಎಂಬುವುದು ಬ್ರಹ್ಮನ ಶರೀರವಾಗಿರುವ ಪ್ರಕೃತಿಯನ್ನೂ 'ವ್ಯಕ್ತಯಃ' ಎಂಬುದು ಬ್ರಹ್ಮನಿಂದ ಉಂಟುಮಾಡಲ್ಪಟ್ಟ ಎಲ್ಲಾ ವಸ್ತುಗಳನ್ನೂ ಹೇಳುತ್ತವೆ.

ಕೈವಲ್ಯವನ್ನು (ಜೀವಾತ್ಮವನ್ನು ಮಾತ್ರ ಅನುಭವಿಸುವುದನ್ನು) ಹೊಂದಿದವರೂ ಮತ್ತೆ ಹುಟ್ಟುವುದಿಲ್ಲ ಎಂದು ಹೇಳುತ್ತಾರೆ—

ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತಾತ್ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನವಿನಶ್ಯತಿ ॥

**ಅವ್ಯಕ್ತೋऽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂಗತಿಮ್ ।**
**ಯಂ ಪ್ರಾಪ್ಯ ನ ನಿವರ್ತನ್ತೇ ತದ್ಧಾಮ ಪರಮಂಮಮ ॥**

ಕೆಳಗೆ 'ಅವ್ಯಕ್ತ' ಎಂದು ಹೇಳಲ್ಪಟ್ಟ, ಅರಿವಿಲ್ಲದ ಪ್ರಕೃತಿಗಿಂತ 'ಜೀವ' ಎಂಬ ಪದಾರ್ಥ ಹೆಚ್ಚಾದ ಪ್ರಯೋಜನವುಳ್ಳದ್ದಾಗಿರುವುದರಿಂದ ಶ್ರೇಷ್ಠವಾದುದು, ಯಾವಾಗಲೂ ಅರಿವಿದ್ದುದಾಗಿರುವುದರಿಂದ ಪ್ರಕೃತಿಗಿಂತ ಅದು ಬೇರೆ ಜಾತಿ. ಶಬ್ದ ಮೊದಲಾದ ಪ್ರಮಾಣಗಳಿಂದ ಜೀವ ಎಂಬ ಒಂದು ಏರ್ಪಟ್ಟರೂ (ಸಿದ್ಧವಾದರೂ) 'ನಾನು' ಎಂದು ತನ್ನಿಂದ ತಾನು ತನಗೆ ತೋಚುತ್ತದೆ. ಹುಟ್ಟಿಗೂ ಸಾವಿಗೂ ತಕ್ಕದಲ್ಲದಾಗಿರುವುದರಿಂದ 'ನಿತ್ಯ' ಎಂದು ಹೇಳಲ್ಪಡುತ್ತದೆ. ಅದು ಅಕ್ಷರ ಅಂದರೆ ಎಲ್ಲಾ ಶರೀರಗಳಲ್ಲಿದ್ದರೂ ಅವುಗಳು ನಾಶವಾಗುವಾಗ ಅದಕ್ಕೆ ನಾಶವಿಲ್ಲ. ೧೨ನೇ ಅಧ್ಯಾಯ ೩ನೇ ಶ್ಲೋಕದಲ್ಲೂ, ೧೫ನೇ ಅಧ್ಯಾಯ ೧೬ನೇ ಶ್ಲೋಕದಲ್ಲೂ ಇದು ಅಕ್ಷರ ಎಂದು ಹೇಳಲ್ಪಡುತ್ತದೆ. ವೇದವನ್ನು ಅರಿತವರು ಇದನ್ನು ಪರಮ ಗತಿಯಾಗಿ (ಶ್ರೇಷ್ಠವಾದ ಹೊಂದಲು ತಕ್ಕವಸ್ತುವಾಗಿ) ಹೇಳುತ್ತಾರೆ. ಈ ಅಧ್ಯಾಯದಲ್ಲಿ ೧೩ನೇ ಶ್ಲೋಕದಲ್ಲಿ ಇದನ್ನೇ 'ಪರಮಗತಿ' ಎಂಬ ಶಬ್ದದಿಂದ ಹೇಳಿದೆ. ಅಂದರೆ ಪ್ರಕೃತಿಯನ್ನು ಬಿಟ್ಟು ಬೇರೆಯಾದ ಶುದ್ಧವಾದ ಜೀವಸ್ವರೂಪ ಈ ರೀತಿಯಾದ ಆತ್ಮಸ್ವರೂಪವನ್ನು ಹೊಂದಿದವರು ಮತ್ತೆ ಹುಟ್ಟುವುದಿಲ್ಲ. ಅದು ನನ್ನ ಸೊತ್ತುಗಳಲ್ಲಿ ಹೆಚ್ಚಾದ ಶ್ರೇಷ್ಠವಾದದ್ದು. ಅಂದರೆ—ಅರಿವಿಲ್ಲದ ಪ್ರಕೃತಿ ಎಂಬುದು ಒಂದು ಸೊತ್ತು. ಅದರೊಡನೆ ಸೇರಿರುವ ಜೀವನು ಎರಡನೆಯದು. ಮುಕ್ತನು ಅದನ್ನುಬಿಟ್ಟು ಬೇರೆಯಾದ ಜೀವನು ಮೂರನೆಯದು ಇವನು ಇವುಗಳಲ್ಲಿ ಹೆಚ್ಚಾಗಿ ಶ್ರೇಷ್ಠವಾದವನು. ಏತಕ್ಕೆಂದರೆ ಇವನು ತಿರುಗಿ ಹುಟ್ಟುವುದಿಲ್ಲ.

ಶ್ಲೋಕದಲ್ಲಿ "ಪರಮಂ ಧಾಮ" ಎಂಬ ಶಬ್ದಗಳು ಇವೆ. ಅವುಗಳಿಗೆ ಹೆಚ್ಚಾಗಿ ಉತ್ತಮವಾದ ಸೊತ್ತು ಎಂದು ಅರ್ಥವನ್ನು ಮಾಡಿ, ಕೆಳಗೆ ವ್ಯಾಖ್ಯಾನ ಮಾಡಲ್ಪಟ್ಟಿತು. "ಧಾಮ" ಎಂಬ ಪದವು ಬೆಳಕನ್ನೂ ಹೇಳುತ್ತದೆ. ಆ ಬೆಳಕು ಎಂಬುದು ಇಲ್ಲಿ ಜ್ಞಾನ. ಪ್ರಕೃತಿಯೊಡನೆ ಸೇರಿರುವ ಜೀವನಿಗೆ ಜ್ಞಾನವು ಸ್ವಲ್ಪ ವಾಗಿದೆ. ಮೋಕ್ಷವನ್ನು ಹೊಂದಿದವನ ಜ್ಞಾನಕ್ಕೆ ನಾಶವಿಲ್ಲ. ಆದುದರಿಂದ ಅಳತೆಯಿಲ್ಲದ ಪ್ರಕಾಶವುಳ್ಳವನೇ ಪರಮಂಧಾಮ ಎಂದು ಹೇಳಬಹುದು. ನನಗೆ ಶೇಷಭೂತನಾದವನು.

ಹಿಂದೆ 'ಅಪರೇಯಂ' ಇವೇಮೊದಲಾದುದರಿಂದ ಭಗವಂತನಿಗೆ ಶೇಷಭೂತ ವಾಗಿರುವಿಕೆ ಹೇಳಲ್ಪಟ್ಟಿತು. ಅದು ಸಮಷ್ಟಿ ಚೇತನ ವಿಷಯವಾಯಿತು. ಇಲ್ಲಿ

ಮುಕ್ತನಿಗೂ ಶೇಷತ್ವ ಹೇಳುತ್ತದೆ. ಜ್ಞಾನಿಯು ಹೊಂದುವ ವಸ್ತುವು ಹಿಂದೇ ಹೇಳಲ್ಪಟ್ಟ ಜೀವನಿಗಿಂತ ಹೆಚ್ಚು ಶ್ರೇಷ್ಠವಾದುದೆಂದು ಹೇಳುತ್ತಾರೆ.

**ಪುರುಷಸ್ಸಪರಃ ಪಾರ್ಥಭಕ್ತ್ಯಾಲಭ್ಯಸ್ತ್ವನನ್ಯಯಾ ।**

ಆ ಪರಮ ಪುರುಷನು ಮತ್ತೊಂದರಲ್ಲಿಯೂ ಇಡದ ಹೆಚ್ಚಾದ ಪ್ರೀತಿ–ಭಕ್ತಿಯಿಂದ ಹೊಂದಲು ತಕ್ಕವನು.

ಹೀಗೆಂಬುದಲ್ಲವೇ ಗೀತೆಯಲ್ಲಿರುವ ಶ್ಲೋಕಗಳ ಕ್ರಮ.

ಅನಂತರ **'ಆತ್ಮಯಾಥಾತ್ಮ್ಯವಿದಃ ಪರಮಪುರುಷನಿಷ್ಠಸ್ಯಚ ಸಾಧಾರಣೀಮರ್ಚಿರಾದಿ ತಾಂಗತಿಮಾಹ**–ಜೀವಾತ್ಮವಿನ ನಿಜಸ್ಥಿತಿಯನ್ನು ಅರಿತವನೂ', ಭಗವಂತನನ್ನು ಧ್ಯಾನಮಾಡುವ ಜ್ಞಾನಿಯೂ ಹೋಗುವ ಆ ಅರ್ಚಿರಾದಿ ಎಂಬ ದಾರಿಯನ್ನು ಹೇಳುತ್ತಾರೆ' ಎಂದು ಹೇಳಿದೆ. ಇಲ್ಲಿ ವೇದಾಂತಾಚಾರ್ಯರು ಗೀತಾಭಾಷ್ಯದ ಪಙ್ತಿಗಳನ್ನೇ ಉಲ್ಲೇಖಿಸಿದ್ದಾರೆ. (ನ್ಯಾಯ ಸಿದ್ಧಾಂಜನದಲ್ಲಿ.)

ಅರ್ಚಿರಾದಿ (ಬೆಳಕು ಮೊದಲಾದ) ದಾರಿಯು ಭಗವಂತನ ಸ್ಥಾನಕ್ಕೆ ಹೇಗೆ ಉಂಟೋ, ಹಾಗೆಯೇ ಆತ್ಮಸ್ವರೂಪವನ್ನು ಮಾತ್ರ ಹೊಂದುವವನಿಗೂ ಉಂಟು. ಆ ದಾರಿಯಿಂದ ಹೋದವನು ಮತ್ತೆ ಬರುವುದಿಲ್ಲ. ಈ ಎರಡು ಸಂಗತಿಗಳನ್ನೂ ವೇದವೇ ಪಂಚಾಗ್ನಿ ವಿದ್ಯೆಯನ್ನು ಹೇಳುವ ಜಾಗದಲ್ಲಿ ಹೇಳಿದೆ. ಜೀವನು ಶರೀರವನ್ನುಬಿಟ್ಟು ಹೊರಟು ಸ್ವರ್ಗಕ್ಕೆ ಹೋಗಿ, ಮತ್ತೆ ಬಂದು ಹುಟ್ಟುವ ರೀತಿಯನ್ನು ಹೇಳಿ, ಮೇಲೆ ಜೀವನ ಮತ್ತು ಪ್ರಕೃತಿಯ ನಿಜಸ್ಥಿತಿಯನ್ನು ಹೇಳಿ ಅವುಗಳಲ್ಲಿ ಪ್ರಕೃತಿಯನ್ನು ಬಿಡಬೇಕೆಂದು ತಿಳಿದು, ಯಾರು ಧ್ಯಾನಮಾಡುತ್ತಾರೋ ಅವರುಗಳನ್ನೂ "ಯಾರು ಕಾಡಿನಲ್ಲಿದ್ದುಕೊಂಡು ಭಗವಂತನನ್ನು ಶ್ರದ್ಧೆಯಿಂದ ಧ್ಯಾನಮಾಡುತ್ತಾರೋ, ಅವರುಗಳನ್ನು ಅಮಾನವನು ಈ ದಾರಿಯಿಂಧ ಭಗವಂತನ ಹತ್ತಿರಕ್ಕೆ ಸೇರಿಸುತ್ತಾನೆ. ಅವರು ಸಂಸಾರವೆಂಬ ಸುಳಿಗೆ ಮತ್ತೆ ಬರುವುದಿಲ್ಲ" ಎಂದು ಹೇಳಿದೆ.

ಇವರುಗಳಲ್ಲಿ ಮೊದಲಿನಲ್ಲಿ ಹೇಳಿರುವವರು ಜೀವಾತ್ಮಸ್ವರೂಪವನ್ನು ಧ್ಯಾನಮಾಡುವರು. ಅವರುಗಳನ್ನು ಭಗವಂತನನ್ನು ಧ್ಯಾನಮಾಡುವವರನ್ನೂ ವೇದವು ಬೇರೆಮಾಡಿಯೇ ಹೇಳಿದೆ. ಜೀವಾತ್ಮಸ್ವರೂಪವನ್ನು ಧ್ಯಾನಮಾಡುವವರು ತಮ್ಮನ್ನು ಭಗವಂತನ ಶರೀರಗಳಾಗಿಯೂ ಧ್ಯಾನಮಾಡಬೇಕು. ಇಲ್ಲದಿದ್ದರೆ ಈ ದಾರಿಯೂ ಈ ದಾರಿಯಿಂದ ಭಗವಂತನನ್ನು ಹೊಂದುವುದು ಉಂಟಾಗದು. ಇವೆರಡೂ ಇವರಿಗೆ ಇರುವುದಾಗಿ ವೇದದಲ್ಲಿ ಹೇಳಿದೆ. ಆ ಆ ಧ್ಯಾನದಲ್ಲಿ

ಭಗವಂತನೂ ಸೇರಿರುವುದರಿಂದ, ತಮ್ಮ ಸ್ವರೂಪವನ್ನು ಮಾತ್ರ ಕೊಂಚಕಾಲ ಅನುಭವಿಸಿದಮೇಲೆ ಭಗವಂತನ ಹತ್ತಿರಕ್ಕೆ ಹೋಗುತ್ತಾರೆ. ಭಗವಂತನಿಗೆ ಜೀವರು ಶರೀರವೆಂಬುದು ತಾನೇ ಜೀವನ ನಿಜವಾದ ಸ್ವರೂಪ, ಹಾಗೆಯೇ ವೇದವು ಅಂತರ್ಯಾಮಿ ಬ್ರಾಹ್ಮಣದಲ್ಲಿ ಹೇಳಿದೆ. ಆದುದರಿಂದ ಅಕ್ಷರನಿಷ್ಠನಿಗೂ ಅರ್ಚಿರಾದಿ ಗತಿಯು ಸಿದ್ಧವಾಗಿದೆ. ಹನ್ನೆರಡನೆಯ ಅಧ್ಯಾಯದಲ್ಲಿ "ಯೇತ್ವಕ್ಷರಮ್" ಪ್ರತ್ಯಗಾತ್ಮ ಸ್ವರೂಪವನ್ನು ಯಾರು ಧ್ಯಾನಮಾಡುತ್ತಾರೋ ಎಂಬಲ್ಲಿ "ತೇಪ್ರಾಪ್ನುವಂತಿ ಮಾಮೇವಸರ್ವಭೂತಹಿತೇರತಾಃ" ಎಂಬ ಶ್ಲೋಕದ ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ಅವರೂ ಕೂಡ ನನಗೆ ಸಮಾನವಾದ ಆಕಾರವುಳ್ಳ ಸಂಸಾರವಿಲ್ಲದ ಆತ್ಮವನ್ನು ಹೊಂದಿಯೇ ಹೊಂದುತ್ತಾರೆ ಎಂಬುದಾಗಿ ಹೇಳಲ್ಪಟ್ಟಿದೆ. ಆದುದರಿಂದ ಈ ಕೈವಲ್ಯಮೋಕ್ಷ ಸಂಪ್ರದಾಯದಿಂದ ಬಂದದ್ದು ಎಂದು ಹೇಳುತ್ತಾರೆ. ಆ ಉಲ್ಲೇಖವನ್ನು ಇಲ್ಲಿ ಬರೆದು ಅದರ ಅರ್ಥವನ್ನು ಅರಿಯೋಣ—

ಅಥಾತ್ಮಯಾಥಾತ್ಮ್ಯವಿದಃ ಪರಮಪುರುಷನಿಷ್ಠಸ್ಯ ಚ ಸಾಧಾರಣೀ ಮರ್ಚಿರಾದಿಕಾಂಗತಿಮಾಹ— ದ್ವಯೋರಪ್ಯರ್ಚಿರಾದಿಕಾಗತಿಶ್ಶ್ರುತೌಶ್ರುತಾ ಸಾಚಾ ಪುನರಾವೃತ್ತಿಲಕ್ಷಣಾ- ಯಥಾಪಂಚಾಗ್ನಿವಿದ್ಯಾಯಾಂ "ತದ್ಯಇತ್ಥಂ ವಿದುರ್ಯೇಚ ಮೇಽರಣ್ಯೇಶ್ರದ್ಧಾತಪ ಇತ್ಯುಪಾಸತೇ ತೇಽರ್ಚಿಷಮಭಿಸಂಭವಂ ತ್ಯರ್ಚಿಷೋಽಹರಿ" ತ್ಯಾದೌ ಅರ್ಚಿರಾದಿಕಯಾಗತಸ್ಯಪರಬ್ರಹ್ಮಪ್ರಾಪ್ತಿರಪುನರಾವೃತ್ತಿಶ್ಚಾಮ್ನಾತಾ "ಸ ಏ ನಾನ್‌ಬ್ರಹ್ಮಗಮಯತಿ—ಏತೇನಾ ಪ್ರತಿಪದ್ಯಮಾನಾ ಇಮಂ ಮಾನವ ಮಾವರ್ತಂ ನಾವರ್ತಂತ" ಇತಿ—ನ ಚ ಪ್ರಜಾಪತಿವಾಕ್ಯಾದೌ ಶ್ರುತ ಪರ ವಿದ್ಯಾಂಗ ಭೂತಾತ್ಮ ಪ್ರಾಪ್ತಿವಿಷಯೇಯಂ "ತದ್ಯ ಇತ್ಥಂವಿದುತಿಗತಿಶ್ರುತಿಃ—ಯೇಚೇಮೇ ರಣ್ಯೇಶ್ರದ್ಧಾ ತಪಇತ್ಯುಪಾಸತ" ಇತಿಪರವಿದ್ಯಾಯಾಃ ಪೃಥಕ್ಪ್ರತಿ ವೈಯರ್ಥ್ಯಾತ್—ಪಂಚಾಗ್ನಿವಿದ್ಯಾಯಾಂಚ "ಇತಿತು ಪಂಚಮ್ಯಾಮಾಹುತಾವಾಪಃ ಪುರುಷವಚಸೋಭವಂತೀ" ತಿ ರಮಣೀಯ ಚರಣಾಃ ಕ ಪೂಯಚರಣಾ ಇತಿ ಪುಣ್ಯ ಪಾಪ ಹೇತು ಕೋಮನುಷ್ಯಾದಿಭಾವೋಽಪಾಮೇವಭೂತಾಂತರ ಸಂಸೃಷ್ಟಾನಾಂ ಆತ್ಮನಸ್ತು ತತ್ಪರಿಷ್ವಂಗ ಮಾತ್ರಮಿತಿಚಿದಚಿಕೋರ್ವಿವೇಕಮಭಿಧಾಯ "ತದ್ಯಇತ್ಥಂ ವಿದುಃ—ತೇರ್ಚಿಷ ಮಭಿಸಂಭವಂತಿ—ಇಮಂ ಮಾನವಮಾವರ್ತಂನಾವರ್ತಂತ", ಇತಿ ವಿವಿಕ್ತೇ ಚಿದಚಿದ್ವಸ್ತುನಿತ್ಯಾಜ್ಯತಯಾ ಪ್ರಾಪ್ಯಕಯಾಚ ಯಇತ್ಥಂ ವಿದುಸ್ತೇರ್ಚಿರಾದಿ ನಾಗಚ್ಛಂತಿ ನ ಚ ಪುನರಾವರ್ತಂತ ಇತ್ಯುಕ್ತಮಿತಿಗಮ್ಯತೇ—ಆತ್ಮಯಾಥಾತ್ಮ್ಯ ವಿದಃ ಪರಮಪುರುಷನಿಷ್ಠಸ್ಯಚ ಸ ಏ ನಾನ್ ಬ್ರಹ್ಮಗಮಯತೀ ತಿ ಬ್ರಹ್ಮಪ್ರಾಪ್ತಿ ವಚನಾದಚಿದ್ವಿಯುಕ್ತಮಾತ್ಮವಸ್ತುಬ್ರಹ್ಮಾತ್ಮಕತಯಾ ಬ್ರಹ್ಮಶೇಷಕೈಕರಸಮಿತ್ಯಾನುಸಂಧೇಯಮ್—ತತ್ಕ್ರತು ನ್ಯಾಯಾಚ್ಚ ॥ ಪರಶೇಷಕೈಕರಸತ್ವಂಚ "ಯ ಆತ್ಮನಿತಿಷ್ಠನ್ ಯಸ್ಯಾತ್ಮಾಶರೀರ" ಮಿತ್ಯಾದಿ ಶ್ರುತಿಸಿದ್ಧಂ ॥

ಜೀವಾತ್ಮಾವಿನ ನಿಜಸ್ಥಿತಿಯನ್ನು ತಿಳಿದವನೂ, ಭಗವಂತನನ್ನು ಧ್ಯಾನ ಮಾಡುವ ಜ್ಞಾನಿಯೂ ಹೋಗುವ [1]ಅರ್ಚಿರಾದಿ ಎಂಬ ದಾರಿಯನ್ನು ಹೇಳುತ್ತಾರೆ ಅರ್ಚಿರಾದಿ (ಬೆಳಕು ಮೊದಲಾದ) ದಾರಿ ಭಗವಂತನ ಜಾಗಕ್ಕೆ ಹೋಗುವುದಕ್ಕೆ ಹೇಗೆ ಉಂಟೋ ಹಾಗೆಯೇ ಆತ್ಮಸ್ವರೂಪವನ್ನು ಮಾತ್ರ ಹೊಂದುವವನಿಗೂ ಉಂಟು. ಆ ದಾರಿಯಿಂದ ಹೋದವನು ಹಿಂದಿರುಗಿ ಬರುವುದಿಲ್ಲ. ಈ ಎರಡು ಸಂಗತಿ—ವಿಷಯಗಳನ್ನು ವೇದವೇ [2]ಪಂಚಾಗ್ನಿ ವಿದ್ಯೆಯನ್ನು ಹೇಳುವ ಜಾಗದಲ್ಲಿ ಹೇಳುತ್ತದೆ. ಜೀವನು ಶರೀರವನ್ನು ಬಿಟ್ಟು ಹೊರಟು ಸ್ವರ್ಗಕ್ಕೆ ಹೋಗಿ, ತಿರುಗಿ ಬಂದು ಹುಟ್ಟುವ ರೀತಿಯನ್ನು ಹೇಳಿ, ಮುಂದೆ ಜೀವನ ಮತ್ತು ಪ್ರಕೃತಿಯ ನಿಜ ಸ್ಥಿತಿಯನ್ನು ಹೇಳಿ, ಅವುಗಳಲ್ಲಿ ಪ್ರಕೃತಿಯನ್ನು ಬಿಡಬೇಕೆಂದೂ, ನಿಜವಾದ ಜೀವನ

1. ಬೆಳಕು ಮೊದಲಾದ ದಾರಿಯನ್ನು ಹೇಳಿರುವುದು ಬ್ರಹ್ಮವನ್ನು ಧ್ಯಾನಮಾಡು ವವರು ಪ್ರತಿನಿತ್ಯವೂ ನೆನೆದುಕೊಂಡಿರುವುದಕ್ಕಾಗಿ. ಬೇರೊಂದು (ಧೂಮಾದಿ) ದಾರಿ ಹೇಳಿರುವುದು–ಅದು ಕಡಿಮೆಯಾದದ್ದು; ಆ ದಾರಿಯಲ್ಲಿ ನಾವು ಹೋಗಕೂಡದು ಎಂದು ನೆನೆಯುವುದಕ್ಕಾಗಿ.

2. ವೇದದಲ್ಲಿ ಪಂಚಾಗ್ನಿವಿದ್ಯೆ ಎಂದು ಒಂದು ಧ್ಯಾನವು ಹೇಳಲ್ಪಡುತ್ತದೆ. ಅದರಲ್ಲಿ ಜೀವನು ಸಾಯುವಾಗ ದೊಡ್ಡ ಶರೀರವನ್ನು ಬಿಟ್ಟು ಚಿಕ್ಕ ದೇಹದೊಡನೆ ಹೋಗಿ, ಮತ್ತೆ ದೊಡ್ಡ ಶರೀರದೊಡನೆ ಹುಟ್ಟುವುದನ್ನು ವಿಸ್ತಾರವಾಗಿ ಹೇಳುತ್ತದೆ. ಅವನು ಮೊದಲು ದೇವಲೋಕಕ್ಕೆ ಹೋಗಿ, ಹೆಚ್ಚಾದ ಸುಖವನ್ನು ಅನುಭವಿಸುವುದಕ್ಕೆ ತಕ್ಕ ಅಂದವಾದ ಶರೀರ ವನ್ನು ಹೊಂದುತ್ತಾನೆ. ಅಲ್ಲಿ ಸ್ವಲ್ಪಕಾಲ ಸುಖವನ್ನು ಅನುಭವಿಸಿ, ಆ ಸುಖವನ್ನು ಉಂಟುಮಾಡಿದ ಪುಣ್ಯವು ಮುಗಿದನಂತರ, ಆ ದೇಹವು ಹೋಗಿ, ಚಿಕ್ಕ ದೇಹದೊಡನೆ ಮೇಘಕ್ಕೆ ಬಂದು ಸೇರುತ್ತಾನೆ. ಆವಾಗ ಇದು ಮೇಘ. ಇದು ಅವನ ದೇಹವೆಂದು ಬೇರೆಯಾಗಿ ಮಾಡಲು ಆಗದಂತೆ ಅದರೊಡನೆ ಸೇರಿರುತ್ತಾನೆ. ಅದಾದಮೇಲೆ ಮಳೆಯೊಡನೆ ಕೂಡಿ ಭೂಮಿಗೆ ಬಂದು ಧಾನ್ಯಗಳೊಡನೆ ಸೇರುತ್ತಾನೆ. ಆ ಧಾನ್ಯವು ಬೇಯಿಸಲ್ಪಟ್ಟು ಊಟಮಾಡುವಾಗ, ಒಂದು ಪುರುಷನ ಶರೀರದೊಡನೆ ಬಂದು ಸೇರುತ್ತಾನೆ. ಅನಂತರ ಅವನ ರೇತಸ್ಸಾಗಿ, ಆಗಿ ಒಂದು ಹೆಂಗಸಿನ ಗರ್ಭದಲ್ಲಿ ಬಂದು ಸೇರುತ್ತಾನೆ. ಆವಾಗತಾನೆ ಅವನಿಗೆ ಮನುಷ್ಯ (ಪುರುಷ) ಮೊದಲಾದ ಹೆಸರು ಉಂಟಾಗುತ್ತದೆ. ಜೀವನು ಕ್ರಮವಾಗಿ ದೇವಲೋಕವನ್ನೂ, ಮೇಘವನ್ನೂ, ಧಾನ್ಯವನ್ನೂ, ಪುರುಷನನ್ನೂ, ಹೆಂಗಸನ್ನೂ ಬಂದು ಸೇರುತ್ತಾನೆ. ಈ ಐದನ್ನೂ ಐದು ಅಗ್ನಿಯಾಗಿ ಹೇಳಿ ಇವನು ಅವುಗಳೊಡನೆ ಸೇರುವು ದನ್ನು ಐದು ಹೋಮಗಳಾಗಿ ಹೇಳಿದೆ. ಐದನೆಯ ಹೋಮದಲ್ಲಿ ಅವನಿಗೆ ಪುರುಷನೆಂಬ ಹೆಸರು ಬರುತ್ತದೆ ಎಂದು ಹೇಳಿದೆ. ದೇವಲೋಕವನ್ನು ಬಿಟ್ಟು ಗರ್ಭದಲ್ಲಿ ಬಂದು ಸೇರುವವರೆಗೂ ಜೀವನಿಗೆ ಅರಿವು ಇಲ್ಲದಿರುವುದರಿಂದ ಸುಖವೂ, ದುಃಖವೂ ಇಲ್ಲ. ಈ ಸಂಗತಿಯನ್ನು ತಿಳಿದುಕೊಂಡು, ಒಬ್ಬನು ದೊಡ್ಡ ಶರೀರದೊಡನೆಯೂ, ಚಿಕ್ಕ ಶರೀರ ದೊಡನೆಯೂ ಸೇರಿರುವುದರಲ್ಲಿ ಬೇಸರವುಂಟಾಗಿ ಶರೀರವನ್ನು ಪೂರ್ತಿಯಾಗಿ ಬಿಡುವುದಕ್ಕೆ ಯತ್ನಿಸಬೇಕು. ಇದರ ವಿವರಣೆಯನ್ನು ಮೊದಲಿನ ಭಾಗದಲ್ಲಿರುವ ಪಂಚಾಗ್ನಿವಿದ್ಯೆಯಲ್ಲಿ ತಿಳಿಯಬಹುದು.

ಸ್ವರೂಪವನ್ನು ಹೊಂದಬೇಕೆಂದು ತಿಳಿದು, ಯಾರು ಧ್ಯಾನಮಾಡುತ್ತಾರೋ— ಅವರನ್ನೂ "ಯಾರು ಕಾಡಿನಲ್ಲಿ ಇದ್ದು ಭಗವಂತನನ್ನು ಶ್ರದ್ಧೆಯಿಂದ ಧ್ಯಾನ ಮಾಡುತ್ತಾರೋ ಅವರನ್ನೂ ಅಮಾನವನು ಈ ದಾರಿಯಿಂದ ಭಗವಂತನನ್ನು ಸೇರಿಸುತ್ತಾನೆ. ಅವರು ಸಂಸಾರವೆಂಬ ಸುಳಿಗೆ ಮತ್ತೆ ಬರುವುದಿಲ್ಲ" ಎಂದು ಹೇಳಿದೆ.

ಇವರುಗಳಲ್ಲಿ ಮೊದಲು ಹೇಳಿದವರು ಜೀವಾತ್ಮ ಸ್ವರೂಪವನ್ನು ಧ್ಯಾನಮಾಡುವವರು ಅವರನ್ನೂ, ಭಗವಂತನನ್ನು ಧ್ಯಾನಮಾಡುವವರನ್ನು ವೇದವು ಬೇರೆ ಮಾಡಿಯೇ ಹೇಳುತ್ತದೆ. ಜೀವಾತ್ಮಸ್ವರೂಪವನ್ನು ಧ್ಯಾನಮಾಡುವವರು ತಮ್ಮನ್ನು ಭಗವಂತನ ಶರೀರವಾಗಿಯೂ ಧ್ಯಾನಮಾಡಬೇಕು. ಇಲ್ಲದಿದ್ದರೆ ಈ ದಾರಿಯೂ, ಈ ದಾರಿಯಿಂದ ಭಗವಂತನನ್ನು ಹೊಂದುವಿಕೆಯೂ, ಸಿಕ್ಕುವುದಿಲ್ಲ.

ಇವೆರಡೂ ಇವರುಗಳಿಗೆ ಇರುವುದಾಗಿ ವೇದದಲ್ಲಿ ಹೇಳಿದೆ. ಆ ಧ್ಯಾನದಲ್ಲಿ ಭಗವಂತನೂ ಸೇರಿರುವುದರಿಂದ, ತಾವು ಸ್ವರೂಪವನ್ನು ಮಾತ್ರ ಸ್ವಲ್ಪಕಾಲ ಅನುಭವಿಸಿದ ನಂತರ ಭಗವಂತನ ಹತ್ತಿರಕ್ಕೆ ಹೋಗುತ್ತಾರೆ. ಭಗವಂತನಿಗೆ ಜೀವರು ಶರೀರಗಳು ಎಂಬುದು ತಾನೇ ಜೀವನ ನಿಜವಾದ ಸ್ವರೂಪ. ಈ ರೀತಿಯೇ ವೇದವು ಅಂತರ್ಯಾಮಿ ಬ್ರಾಹ್ಮಣದಲ್ಲಿ ಹೇಳಿದೆ.

## ಕೈವಲ್ಯವೆಂಬ ಮೋಕ್ಷವು
## ಭಾಷ್ಯಕಾರರಿಗೆ ಸಮ್ಮತವಾದುದಲ್ಲ ಎಂಬುದರ ನಿರೂಪಣೆ

**ಈ** ವಿಷಯದಲ್ಲಿ ಹೇಳೋಣ—ಈ ಮೋಕ್ಷವು ಭಾಷ್ಯಕಾರರಿಗೆ ಸಂಮತವಾದುದಲ್ಲ, ಶಾರೀರಕ ಶಾಸ್ತ್ರದಲ್ಲಿ ಸ್ಪಷ್ಟವಾಗಿ ಹೇಳಿದೆ [1]'ವಾಕ್ಯಾನ್ವಯಾತ್' ಎಂಬ ಅಧಿಕರಣದಲ್ಲಿ ಅಮೃತತ್ತ್ವಕ್ಕೆ–ಮೋಕ್ಷಕ್ಕೆ ಪರಮಪುರುಷನ ವೇದನವೇ-ಉಪಾಸನೆಯೇ ಉಪಾಯ ಎಂದು ಹೇಳಿದೆ, ಅವನ ವಿಭೂತಿ ಭೂತನಾದ ಜೀವಾತ್ಮನು ಅವನನ್ನು ಹೊಂದುವವನು ಅವನ ನಿಜವಾದ ಸ್ವರೂಪವನ್ನು ಅರಿಯುವಿಕೆ–ಉಪಾಸನೆ, ಪರಮಪುರುಷನ ಉಪಾಸನೆಗೆ ಉಪಾಯವಾಗುತ್ತದೆಯೇ ಹೊರತು ತಾನಾಗಿಯೇ ನೇರವಾದ ಉಪಾಯವಾಗಲಾರದೆಂದು ಹೇಳಿದೆ. ಆದುದರಿಂದ ಕೈವಲ್ಯವು ಮೋಕ್ಷವಲ್ಲ.

ಹಾಗೆಯೇ ಕಠೋಪನಿಷತ್ತಿನಲ್ಲಿ ಯೇಯಂ [2]ಪ್ರೇತೇವಿಚಿಕಿತ್ಸಾಮನುಷ್ಯೇ= ಮನುಷ್ಯನು ಸತ್ತನಂತರ ಅವನು ಇದ್ದಾನೆ ಎಂದು ಕೆಲವರು ಮತ್ತೆ ಕೆಲವರು ಇಲ್ಲ

1. ಬ್ರಹ್ಮಸೂತ್ರ. ೧. ೪. ೧೯.
2. ನಾಚಿಕೇತವಿದ್ಯೆಯನ್ನು ಗಮನಿಸುವುದು.

ವೆಂದು ಹೀಗೆಲ್ಲಾ ಸಂಶಯ ಪಡುತ್ತಾರೆ'. ಎಂಬ ಈ ಭಾಗವನ್ನು ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಇತರ ವಾದಿಗಳು ಹೇಳುವ ಮೋಕ್ಷದ ಸ್ವರೂಪಗಳನ್ನು ಹೇಳಿ ಅಂದರೆ, ಕೆಲವರು ವಿತ್ತಿ—(ಜ್ಞಾನ) ಮಾತ್ರನಾದ ಆತ್ಮನ ಸ್ವರೂಪದ ನಾಶವೇ ಮೋಕ್ಷವೆನ್ನುತ್ತಾರೆ. ಇತರರು ವಿತ್ತಿಮಾತ್ರನಾಗಿಯೇ ಇರುವವನಿಗೆ ಅವಿದ್ಯೆಯ ನಾಶವೇ ಮೋಕ್ಷವೆನ್ನುತ್ತಾರೆ. ಮತ್ತೆ ಕೆಲವರು ಪಾಷಾಣಕ್ಕೆ -ಕಲ್ಲಿಗೆ ಸಮಾನನಾದ ಆತ್ಮನಿಗೆ, ಜ್ಞಾನವೇ ಮೊದಲಾದ ಎಲ್ಲಾ ವಿಶೇಷಗಳಿಗೆ ಸಂಬಂಧಪಟ್ಟ ಗುಣಗಳ ನಾಶವೇ ಕೈವಲ್ಯರೂಪವೆನ್ನುತ್ತಾರೆ. ಇತರರಾದರೋ ಅಪಹತಪಾಪ್ಮನು-ಪಾಪ ಸಂಬಂಧವಿಲ್ಲದವನು ಪರಮಾತ್ಮನು ಎಂದು ಒಪ್ಪಿ ಅವನಿಗೇ ಉಪಾಧಿಯೊಡನೆ ಕಲೆತಿರುವುದರಿಂದ ಜೀವಭಾವ ಬಂದಿದೆ. ಆ ಉಪಾಧಿ ನೀಗಿದರೆ ಆ ಅಪಹತ ಪಾಪ್ಮ ಭಾವವು ಉಂಟಾಗುತ್ತದೆ. ಅದೇ ಮೋಕ್ಷವೆನ್ನುತ್ತಾರೆ.

"ತ್ರಯ್ಯಂತನಿಷ್ಣಾತಾಸ್ತು ಉಪನಿಷತ್ತುಗಳಲ್ಲಿ ಪರಿಣತರಾದರಾದವರೋ" ಇವೇ ಮೊದಲಾದ ಭಾಗದಿಂದ ಜೀವ ಮತ್ತು ಪರಮಾತ್ಮನ ಸ್ವರೂಪ ಸ್ವಭಾವ ಗಳನ್ನೂ ವಿವರಿಸಿದ್ದಾರೆ. ಎಲ್ಲಾ ಜಗತ್ತಿಗೂ ಒಂದೇ ಕಾರಣವಾಗಿರುವ ಎಲ್ಲಾ ಕೆಟ್ಟ ಗುಣಗಳಿಗೂ ವಿರುದ್ಧವಾದ ಕೊನೆಯಿಲ್ಲದ ಜ್ಞಾನ ಆನಂದ ಇವುಗಳೇ ಮುಖ್ಯವಾದ ಸ್ವರೂಪವಾಗಿಉಳ್ಳ, ಸ್ವಭಾವವಾಗಿಯೇ ಇರುವ ಎಲ್ಲೆ ಇಲ್ಲದ ಶ್ರೇಷ್ಠವಾದ ಲೆಕ್ಕಕ್ಕೆ ಮೀರಿದ ಮಂಗಳಕರವಾದ ಗುಣಗಳಿಗೆ ನೆಲವೀಡಾದ ತನಗಿಂತ ಬೇರೆ ಎಲ್ಲಕ್ಕೂ ವಿಲಕ್ಷಣನಾದ, ಎಲ್ಲಕ್ಕೂ ಆತ್ಮಭೂತನಾದವನು ಪರಬ್ರಹ್ಮ ಆವನಿಗೆ ಶರೀರವಾಗಿ ರೋಣದರಿಂದ ಪ್ರಕಾರಭೂತನಾದ ಅನುಕೂಲವಾದ ಅಳತೆಗೆ ಸಿಕ್ಕದ ಜ್ಞಾನ ಸ್ವರೂಪನಾದ, ಪರಮಾತ್ಮನನ್ನು ಅನುಭವಿಸುವುದೇ ರುಚಿಯಾಗಿ ಉಳ್ಳವನು ಜೀವನು. ಅವನು ಅನಾದಿಯಾದ ಕರ್ಮರೂಪವಾದ ಅವಿದ್ಯೆಯಿಂದ ಅಜ್ಞಾನದಿಂದ ಮುಚ್ಚಲ್ಪಟ್ಟಿದ್ದಾನೆ. ಆ ರೀತಿಯಾದ ಅವನಿಗೆ ಅವಿದ್ಯೆಯನ್ನು ಕತ್ತರಿಸಿ— ನೀಗಿ ಅದರ ಮೂಲಕ ಅವನಿಗೆ ಸ್ವಭಾವವಾದ ಪರಮಾತ್ಮನನ್ನು ಅನುಭವಿಸುವುದೇ ಮೋಕ್ಷ ಎಂದು ಅವರು ಹೇಳುತ್ತಾರೆಂದು ತೀರ್ಮಾನ ಮಾಡಿದ್ದಾರೆ. ಪರಬ್ರಹ್ಮಕ್ಕೆ ಶರೀರವಾಗಿದ್ದಾನೆ ಜೀವ. ಅಳತೆಯಿಲ್ಲದ ಜ್ಞಾನ ಸ್ವರೂಪನಾಗಿದ್ದಾನೆ. ಪರಮಾತ್ಮ ನನ್ನು ಅನುಭವಿಸುವುದೇ ಇವನ ಸ್ವರೂಪವಾಗಿದೆ. ಸರ್ವಕರ್ಮಗಳಿಂದ ಬಿಡಲ್ಪಟ್ಟ ಆತ್ಮಸ್ವರೂಪದ ಹೊಂದುವಿಕೆಯು ಭಗವತ್ಪ್ರಾಪ್ತಿಯನ್ನು ಬಿಟ್ಟಿರದು.

ವೇದಾರ್ಥ ಸಂಗ್ರಹದಲ್ಲಿಯೂ ಕೂಡ 'ತಇಮೇಸತ್ಯಾಃಕಾಮಾ ಅನೃತಪಿ ಧಾನಾಃ' ಜೀವನ ಸ್ವಾಭಾವಿಕಗುಣಗಳಾದ ಸತ್ಯಕಾಮ ಇವೇ ಮೊದಲಾದಗುಣಾಷ್ಟಕ ಗಳು ಜೀವನ ಪ್ರಾಚೀನ ಕರ್ಮಗಳಿಂದ ಮುಚ್ಚಲ್ಪಟ್ಟಿವೆ. ಅನೃತ-ಸ್ವಕರ್ಮ ಎಂದು ರಾಮಾನುಜರು ಹೇಳಿದ್ದಾರೆ. ಆದುದರಿಂದ ಕೈವಲ್ಯದಲ್ಲಿ ಆ ರೀತಿಯಾದ ಕರ್ಮದ ನಾಶ ದಿಂದ ಭಗವಂತನ ಗುಣಾನುಭವವು ಅವಶ್ಯವಾಗಿಯೇ ಆಗುತ್ತದೆಂದು ಅಭಿಪ್ರಾಯ.

ವರದ ವಿಷ್ಣು ಮಿಶ್ರರೂ ಕೂಡ, "ಹಾಗಾದರೆ ಕರ್ಮವು ಸ್ವಲ್ಪವೂ ಶೇಷವಿಲ್ಲದೆ ನಾಶವಾಗದೆ ಇರುವುದರಿಂದ ಕೈವಲ್ಯ ಪ್ರಾಪ್ತಿಯಲ್ಲಿ ಮುಕ್ತನಾಗುವುದಿಲ್ಲ" ಎಂದು ಸಂದೇಹ ಪಟ್ಟು ಹೇಳುತ್ತಾರೆ. ಸತ್ಯ-ಅವನು ಮುಕ್ತನೇ ಅಲ್ಲ ; ಮೋಕ್ಷವು ಪರಮಾತ್ಮನ ಆನಂದಾನುಭವ ರೂಪವಾದದ್ದು, ಅವನಿಗೆ ಬ್ರಹ್ಮಾನಂದಾನುಭವವಿಲ್ಲ— ತನ್ನನ್ನು ಅನುಭವಿಸುವ ಆನಂದ ಮಾತ್ರವಿದೆ. ಸ್ವಾನಂದ ಮಾತ್ರಾನುಭವವೂ ಕೂಡ "ಯೋಗಿನಾಮಮೃತಂ ಸ್ಥಾನಂ ಸ್ವಾತ್ಮಸಂತೋಷಿಣಶ್ಚ ಯೇ"=ಯಾರು ಸ್ವಾತ್ಮಸಂತೋಷಿಗಳೋ ಅವರು ಹೊಂದುವ ಐಶ್ವರ್ಯ ಯೋಗಿಗಳು ಪಡೆಯುವ ಅಮೃತವಾದ ಪದವಿ ಎಂದು ಪರಾಶರರು ಹೇಳುವಂತೆ, ಮುಕ್ತಿಗಿಂತ ಬೇರೆಯಾದ ನಾಶವಾಗದ ಯೋಗಸಾಧ್ಯವಾದ ಐಶ್ವರ್ಯ ಅದು. ಪೂಜ್ಯ ಪರಾಶರ ಭಟ್ಟರೂ ಕೂಡ ಅಧ್ಯಾತ್ಮ ಖಂಡದ್ವಯದ ವ್ಯಾಖ್ಯಾನದಲ್ಲಿ ಐಶ್ವರ್ಯ ಮತ್ತು ಅಕ್ಷರ ಇವೆರಡೂ ಮೋಕ್ಷಕ್ಕಿಂತ ಬೇರೆಯಾದವು ಎಂದು ಹೇಳಿದ್ದಾರೆ.

ಇದು ಒಂದು ವೇಳೆ ಮೋಕ್ಷವಾದರೆ, ಆವಾಗ ಸ್ವಾಭಾವಿಕ ರೂಪವನ್ನು ಹೊಂದದೆ ಅದು ಮೋಕ್ಷವಾಗಲಾರದು. ಒಂದು ವೇಳೆ ಅಲ್ಲಿಗೇ ಮುಗಿದರೆ ಆವಾಗ ಅದು ನಿತ್ಯವಾದ ಸಂಸಾರ ವಿಶೇಷವೇ ಆಗುತ್ತದೆ ಎಂದು ತಿಳಿಯಬೇಕು. ಶರೀರವಿಲ್ಲದವನಿಗೆ ಸಂಸಾರಿತ್ವ ಹೇಗೆ ? ಎಂದರೆ ಪ್ರಲಯದ ಅವಸ್ಥೆಯಲ್ಲಿ ಇರುವಾಗ ಜೀವನು ಸಂಸಾರಿತಾನೇ ? ಆವಾಗ ಮುಂದೆ ಬರುವ ಶರೀರವನ್ನು ಪಡೆಯಲು ಯೋಗ್ಯವಾದ ಸೂಕ್ಷ್ಮವಾದ ಅಚಿತ್ತಿನ ಸಂಬಂಧ ಇದೆ ಎಂದರೆ, ಇವನಿಗೂ ಅಚಿತ್ತಿನ ಸಂಬಂಧವಿದೆ ಎಂದೇ ತಿಳಿಯಬೇಕಾಗುತ್ತದೆ. ಆದುದರಿಂದ ಶರೀರಾರಂಭವು ಉಂಟಾಗುತ್ತದೋ ಇಲ್ಲವೋ ಎಂಬುದೇ ಇಲ್ಲಿ ವಿಶೇಷವಾದ ಸಂಗತಿ. ಇವನಿಗೆ ಅಚಿತ್ತಿನ ಸಂಸರ್ಗ—ಕಲೆಯುವಿಕೆ ಉಂಟು ಎಂಬುದರಲ್ಲಿ ಪ್ರಮಾಣವೇನು? ಎಂದರೆ ತನ್ನ ಮತ್ತು ತನಗಿಂತ ಬೇರೆಯಾದ ಪರಮಾತ್ಮನ ನಿಜವಾದ ಅನುಭವವಿಲ್ಲದಿರುವುದೇ ಮಾಯೆಯೆಂಬ ತೆರೆಯಿಂದ—ಪ್ರಕೃತಿಯಿಂದ ಮುಚ್ಚಲ್ಪಟ್ಟಿರುತ್ತಾನೆ ಜೀವ. ಆದುದರಿಂದ ತನ್ನ ನಿಜವಾದ ರೂಪವನ್ನು ಅರಿಯಲಾರ. ಕಾರಣವೇನೆಂದರೆ ಕರ್ಮ ವಿಶೇಷ.

ವೇದಾರ್ಥ ಸಂಗ್ರಹದಲ್ಲಿ '[1]ಸರ್ವಕರ್ಮವಿನಿರ್ಮುಕ್ತಾತ್ಮ ಸ್ವರೂಪಾವಾಪ್ತಿರ್ಭಗವತ್ಪ್ರಾಪ್ತಿಗರ್ಭಾ । ತ ಇಮೇ ಸತ್ಯಾಃಕಾಮಾ ಅನೃತಪಿಧಾನಾಃ=ಎಲ್ಲಾ ಕರ್ಮದಿಂದಲೂ ಬಿಡಲ್ಪಟ್ಟ ಆತ್ಮಸ್ವರೂಪದ ಹೊಂದುವಿಕೆಯಲ್ಲಿ ಭಗವಂತನ

1. ವೇದಾರ್ಥಸಂಗ್ರಹದಲ್ಲಿ ಸ್ವಪಕ್ಷ ಪ್ರತಿಷ್ಠಾಪನ ಪ್ರಕರಣದಲ್ಲಿ ಪರಮ ಪದಗಳು ಮೂರು ಇವೆ ಎಂಬಲ್ಲಿ ವರ್ಣಿತವಾಗಿದೆ :—

೧. ಪರಸ್ಥಾನ. ೨. ಪ್ರಕೃತಿವಿಯುಕ್ತಾತ್ಮ ಸ್ವರೂಪ. ೩. ಭಗವತ್ಸ್ವರೂಪ.

ಪ್ರಾಪ್ತಿಯು ಸೇರಿರುತ್ತದೆ. ಆ ಈ ಸತ್ಯಕಾಮಗಳೂ ಅನೃತಾಪಿಧಾನಗಳಾಗಿವೆ. (ಛಾಂ. ೮-೩-೨) ಎಂಬಲ್ಲಿ ಗುಣಗಣಕ್ಕೆ ಮರೆಯಾಗಿರುವುದರಿಂದ ಅನೃತ ಶಬ್ದದಿಂದ ಆತ್ಮಕರ್ಮಗಳನ್ನು ಪ್ರತಿಪಾದಿಸಿರುವುದರಿಂದ (ಹೀಗೆನ್ನಬೇಕು) ಕರ್ಮವೆಂಬ ಹೆಸರಿನ ಅವಿದ್ಯೆಯು ಮೂರನೆಯ ಶಕ್ತಿಯೆನಿಸುತ್ತದೆ. ಅದರಿಂದ ಸರ್ವಗತವಾದ ಆ ಕ್ಷೇತ್ರಜ್ಞ ಶಕ್ತಿಯು ಮುಸುಕಲ್ಪಟ್ಟಿರುತ್ತದೆಯಾದ್ದರಿಂದ ಎಲ್ಲಾ ಸಂಸಾರ ತಾಪಗಳನ್ನೂ ಅತಿ ಸಂತತವಾಗಿ ಹೊಂದಿರುತ್ತದೆ, ಎಂದು ಪ್ರತಿಪಾದಿಸಿದ್ದಾರೆ.

ಅವಿದ್ಯೆಯು ನಿಶ್ಶೇಷವಾಗಿ ನಾಶವಾದರೂ ಪರಮಾತ್ಮನ ಯಾಥಾತ್ಮ್ಯಾನುಭವವು ಇವನಿಗೆ ಆಗದಿದ್ದರೆ, ಇತರರಿಗೂ ಅದು ಆಗದೆಯೇ ಇರಲಿ. ಯಾವ ವಿಶೇಷವೂ ಇಲ್ಲದಿರುವುದರಿಂದ ಅದೇ ಸ್ವಾಭಾವಿಕ ರೂಪವಾಗಲಿ. ಅಚಿತ್ತಿನ ಸಂಸರ್ಗವಿದ್ದರೂ ಹೇಗೆ ಇವನು ಸಂಸಾರವನ್ನು ಹೊಂದುವುದಿಲ್ಲ ? ಎಂದರೆ ಕೈವಲ್ಯಕ್ಕೆ ಕಾರಣವಾದ ಕರ್ಮದಿಂದ ಉಂಟಾದ ಭಗವತ್ಸಂಕಲ್ಪವು ಅಂತಹದು ಎಂದು ತಿಳಿಯತಕ್ಕದ್ದು.

ತಾಪತ್ರಯದಿಂದ ಪೀಡಿಸಲ್ಪಟ್ಟ ಇವನು ಈಶ್ವರ ಜ್ಞಾನದಿಂದಲೇ ಪರಿಶುದ್ಧನಾಗಿದ್ದಾನೆ. ಹೀಗಿರುವಾಗ ಆತ್ಮಾನುಭವವನ್ನು ಸ್ಪಷ್ಟವಾಗಿ ಅನುಭವಿಸುವ ವೇಳೆಯಲ್ಲಿ ಈಶ್ವರನನ್ನು ಇವನು ಹೇಗೆ ಮರೆಯುತ್ತಾನೆ ಎಂದರೆ, ಈ ಪ್ರಶ್ನೆ ಚೆನ್ನಾಗಿದೆ; ಇದಕ್ಕೆ ಉತ್ತರವನ್ನು ಶ್ರೀ ವಿಷ್ಣುಚಿತ್ತರು ಬರೆದಿರುವ ಸಙ್ಗತಿಮಾಲೆಯಲ್ಲಿ ಕಾಣಬಹುದು. ಸ್ವರ್ಗವನ್ನು ಪಡೆಯಲೋಸುಗ ಒಬ್ಬನು ಯಾಗ ಮಾಡುತ್ತಾನೆ. ಶಾಸ್ತ್ರದಲ್ಲಿ ಹೇಳುವ ರೀತಿಯಲ್ಲಿ ಮಾಡದೆ ಹೋದರೆ ಅವನು ಬ್ರಹ್ಮರಾಕ್ಷಸನಾಗಿ ಹುಟ್ಟುತ್ತಾನೆಂದು ಅದೇ ಶಾಸ್ತ್ರ ಹೇಳುತ್ತದೆ. ಅದರಂತೆ ಇವನಿಗೆ ಆತ್ಮಾನಂದಾನುಭವವೇ ಪ್ರಿಯವಾಗಿ ಕಾಣುವುದರಿಂದ ಬ್ರಹ್ಮಾನುಭವವಿಲ್ಲದೆ ಅಷ್ಟಕ್ಕೇ ನಿಲ್ಲುತ್ತಾನೆ. ಇದೂ ಅಚಿತ್ತಿನ ಸಂಸರ್ಗದ ಪ್ರಭಾವವೆಂದೇ ತಿಳಿಯಬೇಕಾಗಿದೆ.

ಭಗವಂತನನ್ನು ಅನುಭವಿಸುವುದು ಜೀವನಿಗೆ ಸ್ವಭಾವ ಸಿದ್ಧವಾದದ್ದು. ಹೀಗಿರುವಾಗ ಅಂತಹ ಯೋಗ್ಯತೆ ಇದ್ದರೂ ಅದನ್ನು ಕಳೆದುಕೊಂಡು ಹುರಿದ ಬೀಜದಂತೆ ತನ್ನ ಆತ್ಮತ್ವದ ಅನುಭವದ ಅಭಿಲಾಷೆ ಹೇಗೆ ಉಂಟಾಗುತ್ತದೆ ? ಒಳ್ಳೆಯ ಬೀಜವನ್ನು ಬಿತ್ತಿದರೆ ಮೊಳೆಯುತ್ತದೆ. ಹುರಿದ ಕಾಳನ್ನು ಬಿತ್ತಿದರೆ ಅದು ಮೊಳೆಯುತ್ತದೇನು ? ಹಾಗಲ್ಲವೆ ಆಯಿತು ಈ ಕೈವಲ್ಯವನ್ನು ಪಡೆದವನ ಪಾಡು. ಅದಕ್ಕಿಂತಲೂ ಮಿಗಿಲಿಲ್ಲದ ಆನಂದಮಯನಾದ ಪರಮಾತ್ಮನನ್ನು ಅನುಭವಿಸುವುದನ್ನು ಬಿಟ್ಟು ತನ್ನನ್ನೇ ಅನುಭವಿಸುವ ಬುದ್ಧಿಯು ಇವನಿಗೆ ಹೇಗೆ ಉಂಟಾಯಿತು ? ಎಂದರೆ ಅಲ್ಪವಾದ ಸಂತೋಷವನ್ನುಂಟುಮಾಡುವ ಸ್ವರ್ಗ, ಪಶು, ಪುತ್ರ, ಭಿಕ್ಷೆಮಾಡಿತಂದ ಅನ್ನ ಮುಂತಾದವುಗಳಲ್ಲೇ ತೃಪ್ತಿ ಪಡುವ ಇವನಿಗೆ

[1]ಆಶ್ಚರ್ಯವತ್ಪಶ್ಯತಿ ಕಶ್ಚಿದೇನಂ ಆಶ್ಚರ್ಯವದ್ವದತಿತಥೈವಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಪ್ಯೇನಂ ವೇದನಚೈವ ಕಶ್ಚಿತ್॥

ಆಶ್ಚರ್ಯವೆಂದರೆ, ಹಿಂದೆ ಎಂದೂ ಕಾಣದ ವಸ್ತುವನ್ನು ಅಥವಾ ಘಟನೆಯನ್ನು ಕಂಡರೆ ಮನಸ್ಸಿನಲ್ಲಿ ಉಂಟಾಗುವ ಭಾವ—ಅಚ್ಚರಿ, ಪ್ರತ್ಯಗಾತ್ಮನನ್ನು ಕಂಡರೆ ಅವನನ್ನೇ ಅನುಭವಿಸುವುದು ಅಚ್ಚರಿಯುಳ್ಳದ್ದಾಗುತ್ತದೆ. ಒಬ್ಬನಿಗೆ. ಮತ್ತೊಬ್ಬನು ಅದರ ವಿಷಯವಾಗಿ ಅದನ್ನು ಹಾಗೆಯೇ ಹೇಳುತ್ತಾನೆ. ಮಗದೊಬ್ಬ ಕೇಳುತ್ತಾನೆ. ಇನ್ನೊಬ್ಬನು ಕೇಳಿದರೂ ಇವನನ್ನು ತಿಳಿಯಲಾರ, ಎಂದು ಶ್ರುತಿ ಹೇಳುತ್ತದೆ.

ನಿದ್ದೆಮಾಡಿ ಎದ್ದವನು 'ಸುಖವಾಗಿ ನಿದ್ದೆಮಾಡಿದೆ' ಎಂಬುದಾಗಿ ತನ್ನ ಆಕಾಲದ ಅನುಭವವನ್ನು ಹೇಳಿಕೊಳ್ಳುತ್ತಾನೆ.

"ಸ್ವಾಪೇಸುಖತ್ವಾಭಿಜ್ಞಾನಾತ್ ತದ್ವಿಚ್ಛೇದೇಚರೋಷತಃ ।
ತದರ್ಥಮನ್ಯತ್ಯಾಗಾಚ್ಚ ಶ್ರುತಿಸ್ಮೃತಿಶತೈರಪಿ ॥

ನಿದ್ರೆ ಮಾಡುವಾಗ ಸುಖವಾಗಿದೆ. ಅದಕ್ಕೆ ಅಡಚಣೆ ಉಂಟಾದರೆ ಕೋಪ ಬರುತ್ತದೆ. ನಿದ್ರೆ ಬಂದರೆ ಓದು, ಊಟ ಇವೊಂದೂ ಬೇಡ, ಎಲ್ಲವನ್ನೂ ಬಿಟ್ಟು ಮಲಗಲು ಅಪೇಕ್ಷಿಸುತ್ತಾನೆ. ಶ್ರುತಿ ಮತ್ತು ಸ್ಮೃತಿಯು ಇದನ್ನು ದೃಢಪಡಿಸುತ್ತದೆ" ಎಂದು ವಿಷ್ಣುಚಿತ್ತರು ಹೇಳುತ್ತಾರೆ. ಹಾಗೆಯೇ ಈ ಆತ್ಮಾನುಭವ ಇವನಿಗೆ ಪ್ರಿಯವನ್ನು ಉಂಟುಮಾಡುತ್ತದೆ.

ಈ ಕೈವಲ್ಯಕ್ಕೆ ಮೋಕ್ಷದ ಆಕಾರ ಮತ್ತು ಹೆಸರು ಹೇಗೆ ? ಎಂದರೆ ದುಃಖಕ್ಕೆ ಕಾರಣವಾದ ಶರೀರ ಮತ್ತು ಇಂದ್ರಿಯಗಳ ವ್ಯಾಪಾರಗಳು ಅಡಗಿರುವುದೇ ಕಾರಣ. ಕೇವಲನು ಯಾವ ದಾರಿಯಿಂದ ಹೋಗುತ್ತಾನೆ ? ಎಲ್ಲಿ ನಿಲ್ಲುತ್ತಾನೆ ? ಎಂದರೆ ಯಾವುದೋ ದಾರಿಯಿಂದ ಎಲ್ಲೋ ನಿಲ್ಲುತ್ತಾನೆ ? ಅರ್ಚಿರಾದಿ ಮಾರ್ಗದಿಂದಂತೂ ಇವನು ಹೋಗುವುದಿಲ್ಲ. ಪ್ರಕೃತಿ ಮಂಡಲದ ಹೊರಗೆ ವಾಸವೂ ಇವನಿಗಿಲ್ಲ. ಇವೆರಡನ್ನೂ ಪರಮಾತ್ಮನ ಪ್ರಕರಣದಲ್ಲೇ ಹೇಳಿದೆ.

ತದ್ಯ ಇತ್ಥಂವಿದುಃ ಯೇಚೇಮೇರಣ್ಯೇಶ್ರದ್ಧಾತಪ ಇತ್ಯುಪಾಸತೇ-ತೇರ್ಚಿಷಮಭಿಸಂಭವನ್ತಿ—ತತ್, ಯ, ಇತ್ಥಂ, ವಿದುಃ, ಆ ದೇಹೇನ್ದ್ರಿಯಾದಿ ವಿಲಕ್ಷಣನಾದ ಪರಿಶುದ್ಧನಾದ ಆತ್ಮಸ್ವರೂಪವನ್ನು ಪರಮಪುರುಷಾತ್ಮಕವಾಗಿ ಉಪಾಸನೆ ಮಾಡುವ ಪಞ್ಚಾಗ್ನಿ ವಿದ್ಯಾನಿಷ್ಠರಾವರೋ, ಯೇಚೇಮೇರಣ್ಯೇಶ್ರದ್ಧಾ ತಪಇತ್ಯುಪಾಸತೇ— ವನಕ್ಕೆ ಹೋಗಿ ಸನ್ಯಾಸಿಯಾಗಿ ಶ್ರದ್ಧೆಯೊಡನೆ [2]ಪರಮಂಯೋಮಹತ್ತಪಃ—ಎಂದು

1. ಭಗವದ್ಗೀತೆ. ೨-೨೯.

2. ಮಹಾಭಾರತ, ಅನುಶಾಸಿಕಪರ್ವ, ೧೪೯ನೇ ಅಧ್ಯಾಯ, ೯ನೇ ಶ್ಲೋಕ (ವಿಷ್ಣುಸಹಸ್ರನಾಮ ಸ್ತೋತ್ರ).

ತಪಶ್ಶಬ್ದವಾಚ್ಯನಾದ ಪರಮಪುರುಷನನ್ನು ಜೀವಶರೀರಕನಾಗಿ ಉಪಾಸನೇ ಮಾಡುವ ಸದ್ವಿದ್ಯಾ ದಹರವಿದ್ಯಾದಿ ನಿಷ್ಠರಾಗಿರುವ ಉಪಾಸಕರೂ ಯಾರೋ—ತೇ ರೀತಿ ಎರಡು ಬಗೆಯಾಗಿರುವ ಭಗವದ್ಭಕ್ತರೂ-ಅರ್ಚಿಷಮಭಿಸಮ್ಭವನ್ತಿ, ಅರ್ಚಿರಾದಿಗತಿಯಿಂದ ಪರಮಪದಕ್ಕೆ ಹೋಗಿ ಪರಮ ಪುರುಷನನ್ನು ಅನುಭವಿಸುವರು ಎಂಬ ಈ ವಿಭಾಗಕ್ಕೆ ಪರಮಾತ್ಮಾತ್ಮಕನಾದ ತನ್ನ ಆತ್ಮನ ಅನುಸಂಧಾನ,ಸ್ವಾತ್ಮನನ್ನೇ ಶರೀರವಾಗಿ ಇರುವ ಪರಮಾತ್ಮನ ಅನುಸಂಧಾನ ಇವೇ ಮೂಲವಾಗಿದೆ. ಒಂದು ವೇಳೆ ಅರ್ಚಿರಾದಿ ಮಾರ್ಗದಿಂದ ಇವನಿಗೆ ಗಮನವಾಗಿದ್ದರೆ, ಆವಾಗ ವಿಶಿಷ್ಟವಾದ—ಉತ್ತಮವಾದ ದೇಶವನ್ನು ಹೊಂದಿರುವುದರಿಂದ ಸ್ವಲ್ಪವೂ ಬಾಕಿ ಇಲ್ಲದೆ ಅವಿದ್ಯಾ ನಿವೃತ್ತಿಯೂ ಬ್ರಹ್ಮ ಪ್ರಾಪ್ತಿಯೂ ಉಂಟಾಗುತ್ತಲೇ ಇತ್ತು. ಸಏನಾನ್ ಬ್ರಹ್ಮ ಗಮಯತಿ—ಅವನು (ಅಮಾನವನು) ಇವರನ್ನು ಬ್ರಹ್ಮದ ಹತ್ತಿರ ಕರೆದುಕೊಂಡು ಹೋಗುತ್ತಾನೆ ಎಂಬುದಾಗಿ ಶ್ರುತಿ ಹೇಳುತ್ತದೆ ಅಲ್ಲವೇ ?

[1]ದರ್ಶನಾಚ್ಚ ಎಂಬ ಸೂತ್ರದಲ್ಲಿ ಶ್ರುತಿಯು ಮೂರ್ಧನ್ಯನಾಡಿಯಿಂದ ಹೊರಟು ದೇವಯಾನ ಮಾರ್ಗದಿಂದ ಹೋದವನಿಗೆ ಪರಬ್ರಹ್ಮದ ಹೊಂದುವಿಕೆಯನ್ನು ಹೇಳುತ್ತದೆಯಲ್ಲವೇ ? 'ಏಷಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿ ರುಪಸಂಪದ್ಯಸ್ವೇನರೂಪೇಣಾಭಿನಿಷ್ಪದ್ಯತೇ, ಎಂಬುದಾಗಿ.

ಅಂತೂ ಜ್ಞಾನ ಸಂಕೋಚಕ್ಕೆ ಕಾರಣವಾದ ಅವಿದ್ಯೆಯು ಪೂರ್ತಿಯಾಗಿ ನಾಶವಾಗುವುದರಿಂದ ಸರ್ವಜ್ಞತ್ವಾದಿಗಳು ಉಂಟಾಗಿಯೇ ಆಗುತ್ತದೆ. ಇದನ್ನು ಇಲ್ಲ ಎಂದು ಹೇಳಲಾಗುವುದಿಲ್ಲ—ಪರಿಹರಿಸಲು ಸಾಧ್ಯವೇ ಇಲ್ಲ.

ಪೂಜ್ಯ ಯಾಮುನಾಚಾರ್ಯರೂ [2]'ಸಂಸ್ಸೃತ್ಯಕ್ಷರವೈಷ್ಣವಾಧ್ವಸು—ಐಶ್ವರ್ಯಾರ್ಥಿಗಳು, ಆತ್ಮಾನುಭವವನ್ನು ಅನುಭವಿಸುವವರು, ಗತಿ ವಿಶೇಷದಿಂದ ಭಗವಂತನನ್ನು ಹೊಂದುವರು' ಎಂಬುದಾಗಿ ವಿಷ್ಣುಭಕ್ತನು ಹೋಗುವ ದಾರಿಯನ್ನು ಪ್ರತ್ಯೇಕವಾಗಿ ಹೇಳಿರುತ್ತಾರೆ.

ಅಕ್ಷಿಪುರುಷನು ಪರಮಾತ್ಮನು ಎಂದು ನಿರ್ಣಯ ಮಾಡಲು ಹೊರಟಿದ್ದಾರೆ ರಾಮಾನುಜರು ಶ್ರೀ ಭಾಷ್ಯದಲ್ಲಿ. ಅದಕ್ಕೆ ಮೂಲಭೂತವಾದ ಬ್ರಹ್ಮಸೂತ್ರ [3]"ಶ್ರುತೋಪನಿಷತ್ಕಗತ್ಯಭಿಧಾನಾಚ್ಚ" ಎಂಬುದು. ಇದರ ಅರ್ಥ ಹೀಗಿದೆ : ಉಪನಿಷತ್ಕಃ—ಪರಮಾತ್ಮನು, 'ಶ್ರುತಃ ಉಪನಿಷತ್ಕಃಯೈಸ್ತೇ' ಎಂದು ಅದರ ವಿಗ್ರಹವಾಕ್ಯ. ಯಾರು ಭಗವಂತನನ್ನು ಕೇಳಿದ್ದಾರೊ ಅಂದರೆ ಅವನ ವಿಚಾರವಾಗಿ

1. ಶ್ರೀಭಾಷ್ಯ. ಬ್ರಹ್ಮಸೂತ್ರ. ೪, ೩, ೧೨.
2. ಚತುಶ್ಲೋಕೀ. ೩.
3. ಬ್ರಹ್ಮಸೂತ್ರ. ೧-೨-೧೭.

ಅರಿತಿದ್ದಾರೊ ಅವನ ಉಪಾಸನೆಯನ್ನು ಯಾರು ಮಾಡುತ್ತಾರೋ ಅವರು ಹೋಗುವಗತಿಯು, [1]ಅರ್ಚಿರಾದಿಗಳು. "ತೇಽರ್ಚಿಷಮಭಿಸಮ್ಭವನ್ತಿ-ಅರ್ಚಿಷೋಽಹಃ-ಅಹ್ನ ಆಪೂರ್ಯಮಾಣ ಪಕ್ಷಂ-ಆಪೂರ್ಯಮಾಣಪಕ್ಷಾದ್ಯಾನ್ ಷಡುದಙ್ಙೇತಿಮಾಸಾನ್ ಮಾಸೇಭ್ಯಸ್ಸಂವತ್ಸರಂ—ಸಂವತ್ಸರಾದಾದಿತ್ಯಂ—ಆದಿತ್ಯಾಚ್ಚನ್ದ್ರಮಸಂ—ಚಂದ್ರಮಸೋವಿದ್ಯುತಮ್—ತತ್ಪುರುಷೋಮಾನವಸ್ಸಏನಾನ್ ಬ್ರಹ್ಮಗಮಯತಿ—ಏಷ ದೇವ ಪಥೋ ಬ್ರಹ್ಮಪಥಃ—ಏತೇನ ಪ್ರತಿಪದ್ಯಮಾನಾ ಇಮಂ ಮಾನವ ಮಾವರ್ತ್ತನ್ನಾವರನ್ತೇ" ಎಂಬುದಾಗಿ ಅರ್ಚಿರಾದಿ ಗತಿಯು ಉಪದೇಶಿಸಲ್ಪಟ್ಟಿದೆ.

ಆದುದರಿಂದ ಕೇವಲ ಆತ್ಮನನ್ನು ಅನುಸಂಧಾನ ಮಾಡುವವರಿಗೆ ಅರ್ಚಿರಾದಿ ಮಾರ್ಗದಿಂದ ಹೋಗುವಿಕೆ ಇಲ್ಲ ಇದರ ವಿವರಣೆ ಶ್ರೀಭಾಷ್ಯದಲ್ಲಿ ಹೀಗಿದೆ :—

[2]ಅಪ್ರತೀಕಾಲಮ್ಬನ್ನಯತೀತಿ ಬಾದರಾಯಣ
ಉಭಯಥಾಚ ದೋಷಾತ್ತತ್ಕ್ರತುಶ್ಚ

ಪರಬ್ರಹ್ಮನಿಂದ ಸೃಷ್ಟಿಸಲ್ಪಟ್ಟವನು ಚತುರ್ಮುಖನು. ಆದುದರಿಂದ ಇವನು ಪರಮಾತ್ಮನ ಕಾರ್ಯಭೂತನಾದನು. 'ಯೋ ಬ್ರಹ್ಮಾಣಂ ವಿದಧಾತಿಪೂರ್ವಮ್ = ಯಾವನು ಮೊದಲು ಬ್ರಹ್ಮನನ್ನು ಸೃಷ್ಟಿಸುತ್ತಾನೋ' ಎಂದು ಶ್ರುತಿ ಹೇಳುತ್ತದೆಯಲ್ಲವೇ ?

ಈ ಅರ್ಚಿರಾದಿ ದೇವತಾಗುಣವು ಪರಬ್ರಹ್ಮಕ್ಕೆ ಕಾರ್ಯಭೂತನಾದ ಹಿರಣ್ಯಗರ್ಭನನ್ನು ಉಪಾಸನೆಮಾಡುವ ಪುರುಷನನ್ನು ಹಿರಣ್ಯಗರ್ಭ ಲೋಕಕ್ಕೆ ಒಯ್ಯುತ್ತದೋ ? ಅಥವಾ ಪರಬ್ರಹ್ಮವನ್ನು ಉಪಾಸನೆ ಮಾಡುವವರನ್ನೇ ಪರಮಪದಕ್ಕೆ ಒಯ್ಯುತ್ತದೋ ಅಥವಾ ಪ್ರತ್ಯಗಾತ್ಮನನ್ನು ಬ್ರಹ್ಮಾತ್ಮಕವಾಗಿ ಉಪಾಸನೆ ಮಾಡುವ ಪಞ್ಚಾಗ್ನಿ ನಿಷ್ಠನನ್ನೂ, ಸಾಕ್ಷಾತ್ತಾಗಿ ಸ್ವಾತ್ಮ ಶರೀರಕ ಪರಮಾತ್ಮೋಪಾಸಕರಾದ ಸದ್ವಿದ್ಯಾ ದಹರ ವಿದ್ಯೆಗಳಲ್ಲಿ ನಿಷ್ಠೆಯುಳ್ಳವರನ್ನೂ ಪರಮಪದಕ್ಕೆ ಒಯ್ಯುತ್ತದೋ ? ಎಂಬುದಾಗಿ ಮೂರು ವಿಧವಾದ ಸಂಶಯ.

ಇವುಗಳಲ್ಲಿ ಮೊದಲನೆಯ ಮತವು ಬಾದರಿ ಎಂಬ ಋಷಿಯ ಮತವು.

ಬ್ರಹ್ಮಣಾ ಸಹತೇ ಸರ್ವೇಸಮ್ಪ್ರಾಪ್ತೇಪ್ರತಿಸಞ್ಚರೇ ।
ಪರಸ್ಯಾನ್ತೇ ಕೃತಾತ್ಮಾನಃ ಪ್ರವಿಶನ್ತಿಪರಮ್ಪದಮ್ ॥

1. ಇದರ ವಿವರಣೆ ವಿಶಿಷ್ಟಾದ್ವೈತ ದರ್ಪಣ ಭಾಗ ೧, ಪುಟ-೩೮೦.
2. ಬ್ರಹ್ಮಸೂತ್ರ. ೪-೩-೧೪.

ಈ ಅರ್ಚಿರಾದಿ ದೇವತೆಗಳು ಅಗ್ನ್ಯಾದಿ ದೇವತೆಗಳಿಗೆ ಅಧಿಷ್ಠಾತೃಗಳಾದ ನಿತ್ಯಸೂರಿಗಳು ಎಂಬುದು ಒಂದು ಪಕ್ಷ, ಇದೇ ವೇದಾಂತಾಚಾರ್ಯರಿಗೆ ಸಮ್ಮತವಾದದ್ದು. ವೈದ್ಯುತನು ಮಾತ್ರ ನಿತ್ಯಸೂರಿ—ಇತರ ದೇವತೆಗಳು ಕೇವಲ ಅಗ್ನ್ಯಾದಿಗಳು ಎಂಬುದು ಇನ್ನೊಂದು ಪಕ್ಷ. ಈ ಎರಡು ಪಕ್ಷಗಳನ್ನೂ ಪರಮ ಪದ ಸೋಪಾನ ರಹಸ್ಯದಲ್ಲಿ ಆಚಾರ್ಯರು ಹೇಳಿದ್ದಾರೆ.

ಹಿರಣ್ಯಗರ್ಭಪ್ರಾಪ್ತಿಯಲ್ಲಿ ಪುನರಾವೃತ್ತಿ ಅಂದರೆ ಮತ್ತೆ ಹಿಂತಿರುಗಿ ಈ ಲೋಕಕ್ಕೆ ಬರುವುದುಂಟು. ಆದರೆ ಕಾರ್ಯಾತ್ಯಯೇ—ಕಾರ್ಯವಾದ ಹಿರಣ್ಯಗರ್ಭ ಲೋಕವು ನಾಶವಾಗುವಾಗ, ತದಧ್ಯಕ್ಷೇಣ—ಆ ಹಿರಣ್ಯಗರ್ಭ ಲೋಕಕ್ಕೆ ಅಧಿಪತಿ ಯಾದ ಬ್ರಹ್ಮನೊಡನೆ ಅತಃ ಪರಮ್—ಆ ಹಿರಣ್ಯಗರ್ಭನಿಗಿಂತ ಬೇರೆಯಾದ ಪರ ಬ್ರಹ್ಮವನ್ನು ಹೊಂದುತ್ತಾನೆ.

"ತೇಬ್ರಹ್ಮ ಲೋಕೇತು ಪರಾನ್ತಕಾಲೇ ಪರಾಮೃತಾತ್ಪರಿ ಮುಚ್ಯನ್ತಿಸರ್ವೇ" ಎಂದು ಶ್ರುತಿಯು ಹೇಳುತ್ತದೆ. ಈ ಅರ್ಥವನ್ನು ಈ ಸ್ಮೃತಿಯೂ ದೃಢಪಡಿಸು ತ್ತದೆ. ಪ್ರತಿಸಞ್ಚರೇ=ಪ್ರಳಯದಲ್ಲಿ, ಪರಸ್ಯ=ಬ್ರಹ್ಮಾಯುಸ್ಸಿನ, ಅನ್ತೇ= ಕೊನೆಯಲ್ಲಿ ಬ್ರಹ್ಮನೊಡನೆ ಪರಮಪದವನ್ನು ಹೊಂದುತ್ತಾರೆ ಈ ಆತ್ಮೋಪಾಸಕರು.

ಇದು ಬಾದರಿ ಮಹರ್ಷಿಗಳ ಅಭಿಪ್ರಾಯ.

'ಧೂತ್ವಾಶರೀರ ಮಕೃತಂ ಕೃತಾತ್ಮಾ ಬ್ರಹ್ಮಲೋಕಮಭಿಸಮ್ಭವಾಮಿ= ಅಕೃತವಾಗಿ ಅಂದರೆ ಕ್ರಿಯೆಯಿಂದ ಮಾಡಲ್ಪಟ್ಟದ್ದಲ್ಲ ; ನಿತ್ಯವಾದದ್ದು ಬ್ರಹ್ಮ ಲೋಕ. ಅದನ್ನು ಕೃತನಾಗಿರುವ ಸಂಸಾರಿ ಜೀವನು ಹೊಂದುತ್ತಾನೆ ಈ ಶರೀರ ವನ್ನು ಒದರಿ' ಎಂಬುದು ಜೈಮಿನಿ ಮತ.

ಈ ವಿಷಯದಲ್ಲಿ ಬಾದರಾಯಣರ ಅಭಿಪ್ರಾಯವನ್ನು ಅರಿಯೋಣ.

ಕಾರ್ಯನನ್ನು ಉಪಾಸನೆಮಾಡುವವರನ್ನೇ ಎಂಬುವ ಪಕ್ಷವೂ ಯುಕ್ತವಾದದ್ದಲ್ಲ. ಪರನನ್ನೇ ಉಪಾಸನೆ ಮಾಡುವವರನ್ನು ಒಯ್ಯುತ್ತದೆ ಎಂಬುವ ನಿಯಮವೂ ಕೂಡುವುದಿಲ್ಲ, ಏತಕ್ಕೆಂದರೆ ಎರಡು ವಿಧದಲ್ಲೂ ದೋಷವಿದೆ. 'ಕಾರ್ಯನನ್ನು ಉಪಾಸನೆ ಮಾಡುವವರನ್ನು ಕರೆದೊಯ್ಯುತ್ತದೆ ಆತಿವಾಹಿಕಗಣ' ಎಂಬ ಮತದಲ್ಲಿ 'ಅಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನರೂಪೇಣಾಭಿ ನಿಷ್ಪದ್ಯತೇ'—'ಈ ಶರೀರದಿಂದ ಎದ್ದು ಹೆಚ್ಚಾಗಿ ಪ್ರಕಾಶಿಸುವ ಪರಬ್ರಹ್ಮವನ್ನು ಹೊಂದಿ' ಇವೇ ಮುಂತಾದ ಶ್ರುತಿಗಳು ಕೋಪಿಸಿಕೊಳ್ಳುತ್ತವೆ ಅಂದರೆ ಅವುಗಳ ಅರ್ಥವು ಇಲ್ಲಿ ಹೊಂದುವುದಿಲ್ಲ ; ವ್ಯರ್ಥವಾಗುತ್ತವೆ ಎಂಬ ಭಾವ.

'ಪರಮೇವೋಪಾಸೀನಾನ್'=ಪರಬ್ರಹ್ಮನನ್ನೇ ಉಪಾಸನೆ ಮಾಡುವವರನ್ನು ಒಯ್ಯುತ್ತದೆ' ಎಂದರೆ, ಜೈಮಿನಿ ಋಷಿಗಳು ಹೇಳುವ ನಿಯಮದಲ್ಲಿ 'ತದ್ಯ ಇತ್ಥಂ ವಿದುರ್ಯೇಚೇಮೇಽರಣ್ಯೇಶ್ರದ್ಧಾತಪ ಇತ್ಯುಪಾಸತೇ—ಆ ದೇಹೇಂದ್ರಿಯ ಇವೇ ಮೊದಲಾದವುಗಳಿಗಿಂತ ವಿಲಕ್ಷಣನಾದ ಪರಿಶುದ್ಧನಾದ ಆತ್ಮಸ್ವರೂಪವನ್ನು ಪರಮ ಪುರುಷಾತ್ಮಕವಾಗಿ ಉಪಾಸನೆ ಮಾಡುವ ಪಞ್ಚಾಗ್ನಿ ನಿಷ್ಠರಾವರೋ' ಎಂಬುವ ವಾಕ್ಯವು ಕೋಪಿಸಿಕೊಳ್ಳುತ್ತದೆ. ಆದುದರಿಂದ ಅಪ್ರತೀಕಾಲಮ್ಬನಾನ್ನಯತಿ ಎಂಬುದು ಶ್ರೀ ಬಾದರಾಯಣರ ಅಭಿಪ್ರಾಯ. ಪ್ರತೀಕವೆಂದರೆ ಒಂದು ಭಾಗ-ಚಿದಚಿದ್ವಿಶಿಷ್ಟ ಬ್ರಹ್ಮಸ್ವರೂಪವಾದ ಏಕತ್ವದಲ್ಲಿ—ಒಂದಾಗಿರುವಿಕೆಯಲ್ಲಿ ವಿಶೇಷಣ ವಾಗಿರುವಿಕೆಯಿಂದ ಏಕದೇಶ ಭೂತಗಳಾದ ಚಿತ್ತತ್ತ್ವವೂ ಮತ್ತು ಅಚಿತ್ತತ್ತ್ವವೂ ಪ್ರತೀಕವೆಂದು ಹೇಳಲ್ಪಡುತ್ತವೆ.

ಆ ಚಿದಚಿದ್ವಸ್ತುಗಳಲ್ಲಿ ಬ್ರಹ್ಮದೃಷ್ಟಿಯಿಂದಾದರೂ ಸ್ವರೂಪದಿಂದಲಾದರೂ ಉಪಾಸನೆ ಮಾಡುವವರು ಪ್ರತೀಕಾಲಮ್ಬನರು. ಈ ಅರ್ಥವನ್ನು ಛಾನ್ದೋಗ್ಯದಲ್ಲಿ ಭೂಮ ವಿದ್ಯೆಯಲ್ಲಿ "ಸಯೋಽನಾಮಬ್ರಹ್ಮೇತ್ಯುಪಾಸ್ತೇ=ಯಾವನು ನಾಮವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ" ಎಂದು ಆರಂಭಿಸಿ ಆಶಾಪರ್ಯನ್ತವಾಗಿ ಅಂದರೆ ಆಶೆಯವರೆಗೂ ಅಚಿದ್ವಸ್ತುವಿನ ಉಪಾಸನೆಯನ್ನೂ ಅದರ ಫಲವನ್ನೂ ಹೇಳಿ "ಪ್ರಾಣೋವಾವ ಆಶಾಯಾಭೂಯಾತ್=ಪ್ರಾಣವು ಆಶೆಗಿಂತ ಮಿಗಿ ಲಾದದ್ದು" ಎಂದು ಅಚಿತ್ತಿಗಿಂತ ವಿಲಕ್ಷಣನಾದ ಪ್ರಾಣ ಶಬ್ದದಿಂದ ಹೇಳಲ್ಪಡುವ ಜೀವನ ಉಪಾಸನೆಯನ್ನೂ ಅದರ ಫಲವನ್ನೂ ಹೇಳುತ್ತದೆ. ಈ ರೀತಿ ಪ್ರತೀಕೋ ಪಾಸನವನ್ನು ಮುಗಿಸಿದ ಮೇಲೆ ಅಪ್ರತೀಕಾಲಮ್ಬನದ ಉಪಾಸನೆಯನ್ನು "ಏಷತುವಾ ಅತಿವದತಿ ಯಸ್ಸತ್ಯೇನಾತಿ ವದತಿ ಸತ್ಯತ್ವೇವಂ ವಿಜಿಜ್ಞಾಸಿತವ್ಯಂ= ಯಾವನು ಸತ್ಯಶಬ್ದದಿಂದ ಹೇಳಲ್ಪಡುವ ಪರಮಾತ್ಮನನ್ನು ಉಪಾಸನೆ ಮಾಡುವವ ನಾಗಿ ತಾನು ಉಪಾಸಿಸುವ 'ಸತ್ಯ'ವು ಬಹಳ ಶ್ರೇಷ್ಠವಾದದ್ದು ಎಂಬುದಾಗಿ ಹೇಳು ತ್ತಾನೋ ಅವನು ಅತಿವಾದಿಯಾಗಿ ಆಗುತ್ತಾನೆ. ಸತ್ಯವನ್ನು ಈರೀತಿ ಅರಿಯಬೇಕು "ಭೂಮಾತ್ವೇವ ವಿಜಿಜ್ಞಾಸಿತವ್ಯಃ" ಇವೇ ಮೊದಲಾದ ವಾಕ್ಯಗಳಿಂದ ವಿಧಿಸುವುದ ರಿಂದ ಪ್ರತೀಕೋಪಾಸನೆ ಅಪ್ರತೀಕೋಪಾಸನೆ ಎಂಬ ಭೇದವು ಸ್ಪಷ್ಟವಾಗಿ ಹೇಳ ಲ್ಪಟ್ಟಿರುತ್ತದೆ. ಈರೀತಿ ಚಿದಚಿಚ್ಛರೀರಕ ಪರಮಪುರುಷೋಪಾಸನವನ್ನು ಮಾಡುವ ಭೂಮವಿದ್ಯಾ ಸದ್ವಿದ್ಯಾನಿಷ್ಠರನ್ನೂ ಭೂತಸೂಕ್ಷ್ಮಗಳಿಂದ ಅಪ್ಪಲ್ಪಟ್ಟವನಾಗಿ ಸರ್ವ ಲೋಕಗಳಲ್ಲೂ ಸಂಚರಿಸುವ ಜೀವನನ್ನು ಭೂತಸೂಕ್ಷ್ಮಗಳಿಗಿಂತ ವಿಲಕ್ಷಣನಾಗಿಯೂ, ಜ್ಞಾನವೇ ಆಕಾರವಾಗಿ ಉಳ್ಳವನನ್ನಾಗಿಯೂ, ವಿಕಾರವಿಲ್ಲದವನನ್ನಾಗಿಯೂ "ಯಆತ್ಮನಿ ತಿಷ್ಠನ್ನಾತ್ಮನೋಽನ್ತರಃ-ಯಸ್ಯಾತ್ಮಾ ಶರೀರಮ್" ಇವೇ ಮೊದ ಲಾದ ಶ್ರುತಿಗಳಿಂದ ತಿಳಿಯಲ್ಪಟ್ಟ ಬ್ರಹ್ಮಾತ್ಮಕತ್ವ ವಿಶಿಷ್ಟನಾಗಿಯೂ ಉಪಾಸನೆ

ಮಾಡುವ ಪಞ್ಚಾಗ್ನಿ ವಿದ್ಯಾನಿಷ್ಠನೂ ಎರಡು ವಿಧವಾದ ಉಪಾಸಕರೂ ಅಪ್ರತೀಕಾಲಮ್ಬನರು—ಇಬ್ಬರು ಉಪಾಸಕರನ್ನೂ ಅರ್ಚಿರಾದಿಗಣವು ವೈಕುಂಠವನ್ನು ಒಯ್ಯುತ್ತದೆ 'ತದ್ಯ ಇತ್ಥಂ ವಿದುಃ' ಎಂದು ಪಞ್ಚಾಗ್ನಿ ವಿದ್ಯಾನಿಷ್ಠರುಗಳನ್ನು ಅನುವಾದ ಮಾಡಿ "ಯೇಚೇಮೇರಣ್ಯೇಶ್ರದ್ಧಾ ತಪ ಇತ್ಯುಪಾಸತೇ" ಎಂದು ಸದ್ವಿದ್ಯೆಯೇ ಮೊದಲಾದವುಗಳಲ್ಲಿ ನಿಷ್ಠೆಯುಳ್ಳವರನ್ನೂ ಅನುವಾದ ಮಾಡಿ "ತೇರ್ಚಿಷಮಭಿಸಮ್ಭವನ್ತಿ" ಇವೇ ಮುಂತಾದವುಗಳಿಂದ ಈ ಎರಡು ವಿಧವಾದ ಉಪಾಸಕರಿಗೂ ಅರ್ಚಿರಾದಿಗತಿ ಉಂಟು ಎಂದಲ್ಲವೇ ಹೇಳುತ್ತದೆ ತತ್ಕ್ರತುವೂ ಕೂಡ. "ಯಥಾ ಕ್ರತುರಸ್ಮಿನ್ಲೋಕೇ ಪುರುಷೋ ಭವತಿ ತಥೇತಃಪ್ರೇತ್ಯಭವತಿ—ಈ ಲೋಕದಲ್ಲಿ ಯಾವ ರೀತಿ ಉಪಾಸನೆ ಮಾಡುತ್ತಾನೋ, ಹಾಗೆಯೇ ಇಲ್ಲಿಂದ ಸತ್ತಮೇಲೂ ಆಗುತ್ತಾನೆ" ಎಂದು ತತ್ಕ್ರತು ನ್ಯಾಯದಿಂದ ಪಞ್ಚಾಗ್ನಿವಿದ್ಯಾನಿಷ್ಠರನ್ನೂ ಬ್ರಹ್ಮಪ್ರಾಪ್ತಿಯನ್ನೂ ಅಪುನರಾವೃತ್ತಿಯನ್ನೂ ಹೇಳಿರುವುದರಿಂದ ಪಞ್ಚಾಗ್ನಿ-ವಿದ್ಯಾನಿಷ್ಠರಿಗೆ ಅರ್ಚಿರಾದಿ ಗತಿ ಉಂಟು. ಪ್ರತೀಕೋಪಾಸಕರುಗಳಿಗೆ ಅರ್ಚಿರಾದಿ ಗತಿಯೂ ಇಲ್ಲ—ಪುನರಾವೃತ್ತಿ ಉಂಟು ಎಂಬುದು ತಾತ್ಪರ್ಯ.

ನಾಮಾದಿ ಪ್ರಾಣಪರ್ಯನ್ತವಾಗಿ ಉಪಾಸನೆ ಮಾಡುವವರಿಗೆ.

[1]ವಿಶೇಷಞ್ಚದರ್ಶಯತಿ ।

'ಯಾವನ್ನಾಮ್ನೋಗತಂ ತತ್ರಾಸ್ಯಯಥಾಕಾಮಚಾರೋ ಭವತಿ' ಇವೇ ಮೊದಲಾದ ಭೂಮ ವಿದ್ಯಾನ್ತರ್ಗತ ವಾಕ್ಯವು ಪ್ರತೀಕೋಪಾಸಕರಿಗೆ ಗತಿಯ ಅಪೇಕ್ಷೆಯೇ ಇಲ್ಲದಂತೆ ಪರಿಚ್ಛಿನ್ನವಾದ—ಅಲ್ಪವಾದ ಫಲವಿಶೇಷವನ್ನು ಪ್ರದರ್ಶಿಸುತ್ತದೆ. ಆದುದರಿಂದ "ಬ್ರಹ್ಮಣಾ ಸಹತೇ ಸರ್ವೇ" ಎಂಬ ವಚನವು ಅರ್ಚಿರಾದಿ ಮಾರ್ಗದಿಂದ ಹೋದವರಿಗೆ ಗತಿ ಪ್ರಕಾರವನ್ನು ಹೇಳಲಿಲ್ಲ, ಅರ್ಚಿರಾದಿ ಮಾರ್ಗದಿಂದ ಹೋದವರಿಗೆ ದೇಹಾವಸಾನ ಸಮಯದಲ್ಲಿ ತಾನೆ ಸುಕೃತದುಷ್ಕೃತಗಳು ನಶಿಸಿಹೋಗುವುದರಿಂದ ಹಿರಣ್ಯಗರ್ಭ ಲೋಕಪ್ರಾಪ್ತಿಗೂ ಅಲ್ಲಿಯ ಭೋಗಾನುಭವಕ್ಕೂ ಕಾರಣವಿಲ್ಲದಿರುವುದರಿಂದ ತತ್ಕ್ರತುನ್ಯಾಯದಿಂದ ದೇಹಾವಸಾನವಾದ ಒಡನೆಯೇ ಬ್ರಹ್ಮಪ್ರಾಪ್ತಿಯಾಗುತ್ತದೆ ಎಂದು ಹೇಳುವ ಶ್ರುತಿ ವಿರೋಧವಾಗುವುದರಿಂದಲೂ ಪೂರ್ವ ಪಕ್ಷಿಗಳು ಹೇಳುವ ಅರ್ಥವಲ್ಲ. ಮತ್ತೇನೆಂದರೆ ಪುಣ್ಯಕರ್ಮ ವಿಶೇಷದಿಂದ ಚತುರ್ಮುಖ ಲೋಕವನ್ನು ಹೊಂದಿ 'ತದುಪರ್ಯಪಿಬಾದರಾಯಣಃ—ಬ್ರಹ್ಮೋಪಾಸನೆಯು ದೇವಾದಿಗಳಿಗೂ ಉಂಟು, ಅರ್ಥಿತ್ವ ಸಾಮರ್ಥ್ಯ ಇವು ಇರುವುದರಿಂದ—ಎಂಬ ನ್ಯಾಯದಿಂದ ಸತ್ಯಲೋಕದಲ್ಲಿ ಇದ್ದು ವಿದ್ಯಾನಿಷ್ಪತ್ತಿಯನ್ನು ಪಡೆದ ಯೋಗಿಗಳಿಗೆ ಗತಿ ಪ್ರಕಾರವನ್ನು ಹೇಳುತ್ತದೆ. 'ಬ್ರಹ್ಮಣಾಸಹತೇಸರ್ವೆ' ಇವೇ ಮೊದಲಾದ ವಚನ.

[1] ಬ್ರ. ಸೂ. ೪. ೩. ೧೫.

'ತೇಬ್ರಹ್ಮಲೋಕೇತು' ಇವೇ ಮೊದಲಾದ ಶ್ರುತಿಗೆ ಅರ್ಥವಿದು— ಬ್ರಹ್ಮೈವಲೋಕೋ ಬ್ರಹ್ಮಲೋಕಃ—ಎಂಬ ವ್ಯುತ್ಪತ್ತಿಯಿಂದ, ಶ್ರುತಿಯಿಂದ ಮಾತ್ರ ಚೆನ್ನಾಗಿ ಅರಿಯಲು ತಕ್ಕದಾದುದರಿಂದ ಲೋಕಶಬ್ದ ವಾಚ್ಯವಾದ ಬ್ರಹ್ಮದಲ್ಲಿ ಉಪಾಸನೆಯಲ್ಲಿರುವ ಉಪಾಸಕರು—ಪರಾನ್ತಕಾಲೇ—ಕೊನೆಯ ದೇಹದ ಮುಗಿಯುವಿಕೆಯ ವೇಳೆಯಲ್ಲಿ ಪರಾಮೃತಾತ್—ಎಲ್ಲಕ್ಕಿಂತಲೂ ಶ್ರೇಷ್ಠ ನಾಗಿ ಅಮೃತ ಶಬ್ದವಾಚ್ಯನಾಗಿ ಉಪಾಸನೆಯಿಂದ ಪ್ರೀತಿಗೊಂಡ ಪರಮ ಪುರುಷನಿಂದ ಪರಿಮುಚ್ಯನ್ತಿಸರ್ವೇ=ಬನ್ಧ ವಿಮೋಚನೆಯನ್ನು ಹೊಂದುವರು ಎಂದು ಶ್ರುತಿಯ ಅರ್ಥ. "ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ=ವೇದಾಂತದ ಅರಿವಿನಿಂದ ಚೆನ್ನಾಗಿ ತೀರ್ಮಾನಿಸಲ್ಪಟ್ಟ ಅರ್ಥವುಳ್ಳವರು" ಇವೇ ಮೊದಲಾದ ಪ್ರಕರಣದಿಂದ ಈ ಅರ್ಥವೇ ಉಚಿತವಾಗಿದೆ. "ತದ್ಯ ಇತ್ಥಂ ವಿದುಃ" ಎಂದು ಹೇಳಲ್ಪಟ್ಟ ಪಞ್ಚಾಗ್ನಿಯನ್ನು ಅರಿತವರಿಗೂ ಮೇಲೆ ಬ್ರಹ್ಮಪ್ರಾಪ್ತಿಯನ್ನೂ ಅಪುನರಾವೃತ್ತಿಯನ್ನೂ ಹೇಳುವುದರಿಂದ ತತ್ಕ್ರತು ನ್ಯಾಯದಿಂದ ಅಚಿದ್ವಿಯುಕ್ತ ಜೀವನಿಗೆ ಬ್ರಹ್ಮಾತ್ಮಕದಿಂದ ಉಪಾಸನೆಯು ವಿವಕ್ಷಿತವೆಂದು ತೋರುತ್ತದೆ. ಹಾಗೆಯೇ ಆ ಜಾಗದಲ್ಲಿ ಶ್ರುತಿಯೂ ಕೂಡ "ಇತಿತು ಪಞ್ಚಾಮ್ಯಾಮಾಹುತಾವಾ ಆಪಃ ಪುರುಷವಚಸೋಭವನ್ತಿ—ರಮಣೀಯ ಚರಣಾಃ ಎಂದೂ ಭೂತಾಂತರ ಸಂಸೃಷ್ಟಗಳಾದ ಅಪ್ಪುಗಳಿಗೇ ಕರ್ಮದ ಕಾರಣದಿಂದ ಉಂಟಾದ ಮನುಷ್ಯಾದಿಭಾವ ಎಂದು ಚಿದಚಿದ್ವಿವೇಕವನ್ನು ಪ್ರತಿಪಾದಿಸಿ "ತದ್ಯಇತ್ಥಂವಿದುಃ" ಎಂದು ಭೂತ ಸೂಕ್ಷ್ಮವ್ಯತಿರಿಕ್ತವಾಗಿ ಬ್ರಹ್ಮಾನ್ತರ್ಯಾಮಿಕವಾದ ಸ್ವಾತ್ಮಾವಿನ ಉಪಾಸನೆಯನ್ನೇ ವಿಧಿಸುತ್ತದೆ. ಆದುದರಿಂದ ಹೇಳಲ್ಪಟ್ಟ ಅರ್ಥವೇ ಸರಿಯಾದದ್ದು.

ಶ್ರೀಭಾಷ್ಯದಲ್ಲಿ ಆ ಅಧಿಕರಣದ ಅಂದರೆ ಕಾರ್ಯಾಧಿಕರಣದ ಉಪಸಂಹಾರ ದಲ್ಲಿ ಈ ರೀತಿ ಹೇಳಲ್ಪಟ್ಟಿದೆ. "ತಸ್ಮಾದಚಿನ್ಮಿಶ್ರಂ ಕೇವಲಂ ವಾಚಿದ್ವಸ್ತು ಬ್ರಹ್ಮ ದೃಷ್ಟ್ಯಾ ತದ್ವಿಯೋಗೇನ ಚಯ ಉಪಾಸತೇ, ನತಾನ್ ನಯತಿ। ಅಪಿತು ಪರಂ ಬ್ರಹ್ಮೋಪಾಸೀನಾನಾತ್ಮಾನಞ್ಚ-ಪ್ರಕೃತಿವಿಯುಕ್ತಂ ಬ್ರಹ್ಮಾತ್ಮಕ ಮುಪಾಸೀನಾ ನಾತಿವಾಹಿಕೋಗಣೋನಯತೀತಿ ಸಿದ್ಧಮ್=ಆದುದರಿಂದ ಅಚಿತ್ತಿನಿಂದ ಕಲೆತ ಅಥವಾ ಕೇವಲ ಚಿದ್ವಸ್ತುವನ್ನು ಬ್ರಹ್ಮದೃಷ್ಟಿಯಿಂದ ಅದಿಲ್ಲದೆಯೂ (ಬ್ರಹ್ಮ ದೃಷ್ಟಿ ಇಲ್ಲದೆಯೂ) ಯಾರು ಉಪಾಸನೆಮಾಡುತ್ತಾರೋ, ಅವರನ್ನು ಒಯ್ಯುವು ದಿಲ್ಲ ಮತ್ತೇನೆಂದರೆ ಬ್ರಹ್ಮೋಪಾಸನೆ ಮಾಡುವವರನ್ನೂ ಮತ್ತು ಪ್ರಕೃತಿಯಿಂದ ಬಿಡಲ್ಪಟ್ಟ ಅಂದರೆ ಶುದ್ಧವಾದ ಆತ್ಮವನ್ನು ಬ್ರಹ್ಮಾತ್ಮಕವಾಗಿ ಉಪಾಸನೆ ಮಾಡು ವವರನ್ನೂ ಆತಿವಾಹಿಕ ಗಣವು ಒಯ್ಯುತ್ತದೆ ಎಂಬುದು ಸಿದ್ಧ ಎಂದು ಹೇಳಿದೆ.

ವೇದಾಂತಸಾರದಲ್ಲಿಯೂ ಕೂಡ 'ಪಞ್ಚಾಗ್ನಿವಿತ್ತುಗಳು ಪ್ರಕೃತಿವಿಯುಕ್ತ ವಾದ ಆತ್ಮ ಸ್ವರೂಪವನ್ನು 'ಯ ಆತ್ಮನಿತಿಷ್ಠನ್' ಇವೇ ಮೊದಲಾದವುಗಳಿಂದ

ಬ್ರಹ್ಮಾತ್ಮಕವಾಗಿ ಉಪಸನೆಮಾಡುತ್ತಾರೆ. ಹೀಗೆಂದು ಹೇಳಿ ಪ್ರತೀಕಾಲಮ್ಬನತ್ವವೂ ಇಲ್ಲ, ತತ್ಕ್ರತು ನ್ಯಾಯಕ್ಕೆ ವಿರೋಧವೂ ಇಲ್ಲ. ಇಬ್ಬರೂ ಪರಿಪೂರ್ಣವಾದ ಬ್ರಹ್ಮವನ್ನು ಉಪಾಸನೆ ಮಾಡುತ್ತಾರೆ ಮುಖಭೇದದಿಂದ. ಕೆಲವರು ತನ್ನ ಆತ್ಮವನ್ನೇ ಶರೀರವಾಗಿ ಉಳ್ಳದ್ದು ಬ್ರಹ್ಮ ಎಂದು. ಮತ್ತೆ ಕೆಲವರು ಆತ್ಮವು ಬ್ರಹ್ಮಾತ್ಮಕವಾದದ್ದು ಎಂದು ಇವೇ ಮೊದಲಾಗಿ ಹೇಳಿದೆ.

ಹೀಗೆಯೇ ವೇದಾಂತ ದೀಪದಲ್ಲೂ ಹೇಳಿದೆ. ಪಂಚಾಗ್ನಿ ವಿತ್ತಿಗೆ ಅರ್ಚಿರಾದಿ ಗತಿಯಾದರೋ ಎಲ್ಲಾ ಗ್ರಂಥಗಳಲ್ಲೂ ಯಾವ ತಡೆಯೂ ಇಲ್ಲದೆ ಹೇಳಿದೆ. ಅವನಿಗೆ ಪರಮಾತ್ಮಾತ್ಮಕ ಸ್ವಾತ್ಮಾನುಸಂಧಾತೃತ್ವವು ಸಿದ್ಧವಾಗಿದೆ. ಅವನಿಗೆ ಕೈವಲ್ಯವೇ ಪುರುಷಾರ್ಥವೇ ? ಅಥವಾ ಪರಮಾತ್ಮಾನುಭವವೂ ಕೂಡ ಉಂಟೋ ? ಈ ವಿಷಯದಲ್ಲಿ ಸಂದೇಹ. ಇದರಲ್ಲಿ ಶಾರೀರಕ ಭಾಷ್ಯಾದಿಗಳ ಅನುಸಾರವಾಗಿ ಅವನಿಗೆ ಪರಮಾತ್ಮಾನುಭವ. ಶ್ರೀಮದ್ಗೀತಾಭಾಷ್ಯಾದಿ ಸ್ವಾರಸ್ಯಕ್ಕೆ ಅನುಸಾರವಾಗಿ ಕೈವಲ್ಯವೆಂದು ಅಪೇಕ್ಷಿಸುತ್ತಾರೆ. ಅದರ ಟೀಕೆ ತಾತ್ಪರ್ಯಚಂದ್ರಿಕೆಯಲ್ಲಿ ವೇದಾಂತಾಚಾರ್ಯರು ಎರಡಕ್ಕೂ ವಿರೋಧವಿಲ್ಲದೆ ನಿರ್ವಹಣೆಮಾಡಿದ್ದಾರೆ.

ಅದರ ಸಾರವನ್ನು ಇಲ್ಲಿ ಉದ್ಧರಿಸಿದೆ.

ಆ ನಿರ್ವಹಣಾಕ್ರಮ ಹೀಗಿದೆ :

ಈ ವಿಷಯದಲ್ಲಿ ಅಭಿಪ್ರಾಯವನ್ನು ಪೂರ್ತಿಯಾಗಿ ಅರಿಯದ ಮಂದಮತಿಗಳು "ಈ ನಿಮ್ಮ ಅಭಿಪ್ರಾಯ ಶಾರೀರಕ ಭಾಷ್ಯಕ್ಕೆ ವಿರೋಧವಾಗಿದೆ" ಎಂದು ಸಂದೇಹ ಪಡುತ್ತಾರೆ. ಶ್ರುತಿ ಸೂತ್ರಭಾಷ್ಯ ಮುಂತಾದವುಗಳಲ್ಲಿ ಮತ್ತು ಬೇರೆ ಜಾಗಗಳಲ್ಲೂ ಪಂಚಾಗ್ನಿವಿದ್ಯೆಯನ್ನು ಉಪಾಸನೆ ಮಾಡುವವನಿಗೆ ಪರಮಾತ್ಮಾತ್ಮಕವಾಗಿ ತನ್ನ ಆತ್ಮವನ್ನು ಅನುಸಂಧಾನ ಮಾಡುವಿಕೆಯೂ, ಅರ್ಚಿರಾದಿಗತಿಯೂ ಯಾವ ವ್ಯತ್ಯಾಸವೂ ಇಲ್ಲದೆ ಹೇಳಿದೆ. ಆ ದಾರಿಯಲ್ಲಿ ಹೋದವನನ್ನು ಅರ್ಚಿರಾದಿ ದೇವತೆಗಳು ಬ್ರಹ್ಮದ ಹತ್ತಿರಕ್ಕೆ ಕರೆದುಕೊಂಡು ಹೋಗುವರು ಎಂಬುದಾಗಿ ಶ್ರುತಿಯು ಹೇಳುತ್ತದೆ. ಅದರಂತೆಯೇ ಇಲ್ಲೂ "ತತ್ರಪ್ರಯಾತಾಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ—ಆ ದಾರಿಯಲ್ಲಿ ಪ್ರಯಾಣ ಮಾಡಿದ ಬ್ರಹ್ಮವಿತ್ತುಗಳು ಬ್ರಹ್ಮದ ಹತ್ತಿರ ಹೋಗುತ್ತಾರೆ". ಎಂಬುದನ್ನು ತೀರ್ಮಾನವಾಗಿ ಹೇಳಿದೆ. ಆದುದರಿಂದ ಪಂಚಾಗ್ನಿಯನ್ನು ಅರಿತವನಿಗೆ ಪರಮಾತ್ಮನ ಪ್ರಾಪ್ತಿ ಇದ್ದೇ ಇದೆ ಎಂಬುದಾಗಿ ಸ್ವೀಕರಿಸಲು ತಕ್ಕದ್ದಾಗಿದೆ. ಆ ಹೊಂದುವಿಕೆಯಲ್ಲಿ ಜ್ಞಾನಿಗಳಿಗೆ ಪರಮಾತ್ಮನು ತಾನೂ ಕೂಡಿದವನಿಗೆ ಭೋಗ್ಯನಾಗಿ–ಅನುಭವಿಸಲು ತಕ್ಕವನಾಗಿ ಇರುತ್ತಾನೆ. ಅಕ್ಷರ ಯಾಥಾತ್ಮ್ಯನಿಷ್ಠರಿಗಾದರೆ, ತನ್ನ ಸ್ವರೂಪವೇ ಮೊದಲು ಭೋಗ್ಯವಾಗಿದೆ. ಅನಂತರ ಬ್ರಹ್ಮ ಪ್ರಾಪ್ತಿಯಾಗುತ್ತದೆ. ಮಧುವಿದ್ಯೆಯಲ್ಲಿ

ವಸ್ವಾದಿ ಪದವಿಗಳನ್ನು ಮೊದಲು ಪಡೆದು ಅನಂತರ ಬ್ರಹ್ಮಪ್ರಾಪ್ತಿಯಾಗುತ್ತದೆ ಯಲ್ಲವೇ ? ಹಾಗೆಯೇ ಇಲ್ಲೂ ಎಂದು ತಿಳಿಯಬೇಕಾಗಿದೆ. ಈ ರೀತಿಯಾಗಿ ಮೆಟ್ಟಲು ಮೆಟ್ಟಲಾಗಿ ಹತ್ತುವಿಕೆಯೂ ಹಿಂದಿನ ಸ್ಥಿತಿಗಿಂತ ಬೇರೆಯಾದ ರುಚಿಯು ಭೇದದಿಂದ. ಅದೂ ಈ ಉಪಾಸಕನ ಹಿಂದಿನ ಕರ್ಮ ವಿಶೇಷದಿಂದಾದುದು.

**ಭರತರ್ಷಭ** ।—ಓ ಭರತ ಕುಲಕ್ಕೇ ಶ್ರೇಷ್ಠನಾದವನೆ !

**ಚತುರ್ವಿಧಾಭಜಂತೇಮಾಂ**—ಪುಣ್ಯವನ್ನುಮಾಡಿದ ಜನರು ನನ್ನನ್ನು ನಾಲ್ಕು ಬಗೆಯಾಗಿ ಸೇವೆ ಮಾಡುತ್ತಾರೆ” ಅವರು ಆದೆಂದರೆ, ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀಚ, ಎಂದು ಹಿಂದೆ ಇಲ್ಲಿಯೇ ಹೇಳಿದೆ.

ಇಲ್ಲಿ ಆತ್ಮಯಾಥಾತ್ಮ್ಯವನ್ನು ಅರಿತವನು ಜಿಜ್ಞಾಸುವಿಗಿಂತ ಬೇರೆಯಾದವನು ಎಂದು ಹೇಳಿಲ್ಲ. ಜಿಜ್ಞಾಸುವು ಅರಿಯತಕ್ಕದ್ದು ಎಂದು ಹೇಳಲ್ಪಟ್ಟ ಸ್ವಭಾವ ಮತ್ತು ಬಿಡತಕ್ಕದ್ದು ಎಂದು ಹೇಳಿರುವ ಈ ವಿಷಯಗಳಿಗಿಂತ ಬೇರೆಯಾದ ಜಾಗದಲ್ಲಿ ಪಂಚಾಗ್ನಿ ವಿದ್ಯೆಯನ್ನುಹೇಳಿರುತ್ತದೆ ಮತ್ತು ನಡುವೆ ಕೈವಲ್ಯಾರ್ಥಿಗೇ ಮೂರ್ಧನ್ಯ ನಾಡಿಯಿಂದ ಹೊರಡುವಿಕೆಯೂ ಹಿಂತಿರುಗಿಬರದಿರುವಿಕೆಯೂ ಹೇಳಿದೆ. ಆತ್ಮ್ಯ ಯಾಥಾತ್ಮ್ಯ ಮತ್ತು ಅಕ್ಷರಯಾಥಾತ್ಮ್ಯ ಶಬ್ದಗಳಿಗೆ ಇಲ್ಲಿ ಬೇರೆ ಬೇರೆಯಾದ ಅರ್ಥ ಗಳಿಲ್ಲ, ಎರಡೂ ಒಂದೇ, ಅದರ ಉಪಾಸನೆಯಲ್ಲಿ ಸ್ವಲ್ಪ ವ್ಯತ್ಯಾಸವುಂಟು ಅಕ್ಷರ ಯಾಥಾತ್ಮ್ಯವಿತ್ತುಗಳು ಪರಮಾತ್ಮ ಶರೀರ ಭೂತವಾದ ತನ್ನ ಆತ್ಮವನ್ನು ಉಪಾಸನೆ ಮಾಡುವವರು, ಜ್ಞಾನಿಗಳಾದರೋ ತನ್ನ ಆತ್ಮವೇ ಶರೀರವಾಗಿ ಉಳ್ಳ ಪರಮಾತ್ಮನನ್ನು ಉಪಾಸನೆ ಮಾಡುವವರು. ಇದೇ ವ್ಯತ್ಯಾಸ.

“ತದ್ಯ ಇತ್ಥಂ ವಿದುರ್ಯೇಚೇಮೇರಣ್ಯೇ” ಎಂಬುದಾಗಿ ವಿಭಾಗ ಮಾಡಿ ಹೇಳಿರು ವುದರ ಅಭಿಪ್ರಾಯ ಎಂದು ಭಾಷ್ಯಾದಿಗಳಲ್ಲಿ ಹೇಳಲ್ಪಟ್ಟಿದೆ.

ವೇದಾಂತಸಾರದಲ್ಲಾದರೋ ಇಬ್ಬರೂ ಪರಿಪೂರ್ಣವಾದ ಬ್ರಹ್ಮವನ್ನು ಉಪಾಸನೆ ಮಾಡುತ್ತಾರೆ—ಮುಖಭೇದದಿಂದ. ಸ್ವಾತ್ಮಶರೀರಕವಾದ ಬ್ರಹ್ಮವನ್ನು ಕೆಲವರು, ಬ್ರಹ್ಮಾತ್ಮಕವಾದ ಸ್ವಾತ್ಮವನ್ನು ಮತ್ತಿತರರು, ಎಂದು ಹೇಳಿದೆ. ಆದುದ ರಿಂದಲೇ ಏಳನೇ ಅಧ್ಯಾಯದಲ್ಲಿ ಪ್ರಾರಂಭಿಸಲ್ಪಟ್ಟ ಜಿಜ್ಞಾಸುವು ಪರಮಾತ್ಮನನ್ನು ಹೊಂದಲು ಬಯಸುವ ಜ್ಞಾನಿಗಿಂತ ಬೇರೆಯಾದುದರಿಂದ ಅಬ್ರಹ್ಮಾತ್ಮಕವಾದ ಸ್ವಾತ್ಮಾನುಸಂಧಾನಮಾಡುವವನು ಎಂಬುದಾಗಿ ಭ್ರಾಂತಿಪಡಕೂಡದು. ಅವನನ್ನು ಉದಾರಕೋಟಿ ಮಾತ್ರದಲ್ಲಿ ಇಟ್ಟಿರುತ್ತದೆ. ತನ್ನ ಆತ್ಮವನ್ನು ಅನುಭವಿಸುವ ತಡವನ್ನು ಅಪೇಕ್ಷಿಸದೆ ಇರುವ ಜ್ಞಾನಿಗಿಂತ ಬೇರೆಯಾದುದರಿಂದ ಇವನನ್ನೂ ಉದಾರಿಯೆಂದೇ ಹೇಳುತ್ತದೆ.

'ಅರ್ಚಿರಾದಿಗತಿಯು ಇವನಿಗಿಲ್ಲ' ಎಂಬುದು, ತನ್ನ ಆತ್ಮವು ಬ್ರಹ್ಮಾತ್ಮಕ ವಾದದ್ದೆಂಬುದನ್ನು ಬಿಟ್ಟು (ಮರೆತು) ಕೇವಲ ಸ್ವಾತ್ಮವನ್ನು ಮಾತ್ರ ಉಪಾಸನೆ ಮಾಡುವವನನ್ನು ಕುರಿತು ಹೇಳಿದ್ದು, ಈ ವಿಷಯವೂ ಭಾಷ್ಯಾದಿಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಆದುದರಿಂದ ಅಚಿತ್ತಿನಿಂದ ಕಲೆತ, ಕೇವಲವಾದ ಅಚಿತ್ತೆಂಬ ವಸ್ತುವನ್ನು ಬ್ರಹ್ಮದೃಷ್ಟಿಯಿಂದಲೋ ಅಥವಾ ಅದಿಲ್ಲದೆಯೋ ಯಾರು ಉಪಾಸನೆಮಾಡು ತ್ತಾರೋ ಅವರನ್ನು ಅರ್ಚಿರಾದಿಗಳು ಒಯ್ಯುವುದಿಲ್ಲ, ಮತ್ತೇನೆಂದರೆ ಪರಬ್ರಹ್ಮ ವನ್ನು ಉಪಾಸನೆಮಾಡುವವರನ್ನೂ ಪ್ರಕೃತಿಯಿಂದ ಬಿಡಲ್ಪಟ್ಟ ಆತ್ಮವನ್ನೂ ಬ್ರಹ್ಮಾ ತ್ಮಕವಾದದ್ದನ್ನಾಗಿ ಯಾರು ಉಪಾಸನೆಮಾಡುತ್ತಾರೋ ಅವರನ್ನೂ ಆತಿವಾಹಿಕ ಗಣವು ಒಯ್ಯುತ್ತದೆ. ಇವೇ ಮೊದಲಾದವುಗಳನ್ನು ಭಾಷ್ಯಾದಿಗಳಲ್ಲಿ ಹೇಳಿದೆ.

ಹಾಗಾದರೆ, **ಯೋತುಶಿಷ್ಟಾಸ್ತ್ರಯೋಭಕ್ತಾಃ ಫಲಕಾಮಾಹಿತೇಮತಾಃ । ಸರ್ವೇಚ್ಯವನಧರ್ಮಾಣಃ** — ಉಳಿದ ಮೂರು ವಿಧವಾದ ಭಕ್ತರು ಯಾರುಂಟೋ ಅವರೆಲ್ಲರೂ ತಾವು ಮಾಡಬೇಕಾದ ಧರ್ಮವನ್ನು ಬಿಟ್ಟವರು—ಅದರಿಂದ ಜಾರಿ ದವರು. ಏತಕ್ಕೆಂದರೆ ಅಲ್ಪವಾದ ಫಲಗಳಿಗೆ ಆಸೆಪಟ್ಟವರಲ್ಲವೇ ಅವರು ಎಂದು ಹೇಳಿದೆಯೆಲ್ಲಾ ಬಿಡಲ್ಪಟ್ಟ ಧರ್ಮವುಳ್ಳವರಲ್ಲವೆ? ಈ ರೀತಿಯಾದ ಮೂರು ಭಕ್ತರೂ ಎಂದರೆ,

ಆತ್ಮವನ್ನು ಮಾತ್ರ ಅನುಭವಿಸುವ ಸುಖವು ಸ್ಥಿರವಾದುದಲ್ಲ, ಆದುದರಿಂದ ಚ್ಯವನ ಧರ್ಮ ಸ್ವಭಾವದವರೆಂದು ಹೇಳಿದೆ–ಅಷ್ಟು ಮಾತ್ರದಿಂದ ಮತ್ತೆ ಸಂಸಾರ– ಹುಟ್ಟುವಿಕೆ ಸಾಯುವಿಕೆಯ ಪ್ರಸಕ್ತಿ ಇಲ್ಲ.

**"ಇಂದ್ರಲೋಕಾತ್ಪರಿಭ್ರಷ್ಟೋ ಮಮಲೋಕ ಪರಾಯಣಃ**
**ಪ್ರಮುಕ್ತಸ್ಸರ್ವ ಸಂಸಾರೈರ್ಮಮ ಲೋಕಂಚ ಗಚ್ಛತಿ**

ನನ್ನ ಲೋಕವನ್ನು ಪಡೆಯಬೇಕೆಂದು ಬಯಸುವವನು ಇಂದ್ರಲೋಕದಿಂದ ತಳ್ಳಲ್ಪಟ್ಟವನಾಗಿ ಎಲ್ಲಾ ಸಂಸಾರ (ದುಃಖ) ಗಳಿಂದ ಬಿಡಲ್ಪಟ್ಟವನಾಗಿ ನನ್ನ ಲೋಕವನ್ನೂ ಹೊಂದುತ್ತಾನೆ".

**[1]ಪ್ರಚ್ಯುತೋವಾಏಷೋಽಸ್ಮಾಲ್ಲೋಕಾದಿತೋದೇವಲೋಕಮ್ ।**

ಈ ಯಜ್ಞ ಮಾಡಲು ತೊಡಗಿದವನು ಈ ಲೋಕದಿಂದ ದೇವಲೋಕಕ್ಕೆ ಜಾರಲ್ಪಟ್ಟವನಾಗಿದ್ದಾನೆ ಎಂಬಿವೇ ಮೊದಲಾದವುಗಳಂತೆ ಮುಂದೆ ಮುಂದೆ

1. ತೈತ್ತರೀಯ ಸಂಹಿತೆ, ಕಾಂಡ ೬, ಪ್ರಶ್ನೆ ೧, ೫ನೇ ಹನಸು.

ಹೆಚ್ಚಾದ ಪದವಿಯನ್ನು ಹೊಂದಿದರೂ ಹಿಂದಿನ ಪದವಿಯಂನ್ನು ಕಳೆದುಕೊಂಡ ಮಾತ್ರದಿಂದ ಚ್ಯವನ ಧರ್ಮಸ್ವಭಾವವುಳ್ಳವನೆಂಬ ಮಾತನ್ನುಹೇಳಿಸಿಕೊಳ್ಳಲು ಯಾವ ವಿರೋಧವೂ ಇಲ್ಲ. ಅಳತೆಗೆ ಒಳಪಟ್ಟ ಅಂದರೆ ಅಲ್ಪವಾದ ಸುಖದ ಅನುಭವಿಸು ವಿಕೆಯು ತಡದಿಂದ ಆವಾಗ ಅಪರಿಮಿತವಾದ-ಹೆಚ್ಚಾದ ಸುಖವನ್ನು ಅನುಭವಿಸದೇ ಇರುವುದರಿಂದ ಭ್ರಷ್ಟನು—ಕಳೆದುಕೊಂಡವನು ಎಂಬ ನಿಂದೆಯುಂಕೂಡುತ್ತದೆ.

ಉಪಾಸನೆ ಮಾಡುವಾಗ ಅನುಭವಿಸಿದ ಪರಮಾತ್ಮನಲ್ಲಿ ಫಲದೆಶೆಯಲ್ಲಿ ಸ್ವಲ್ಪ ಕಾಲ ಅನುಭವವು ಕತ್ತರಿಸಲ್ಪಟ್ಟಿತಾದುದರಿಂದಲಾದರೂ, ಹೊಂದಿದುದನ್ನು ಕಳೆದು ಕೊಂಡದ್ದರಿಂದಲೂ ಚ್ಯವನ ಧರ್ಮತ್ವ.

"ಪ್ರತಿಬುದ್ಧಸ್ತುಮೋಕ್ಷಭಾಕ್—ಎಚ್ಚತ್ತವನು ಮೋಕ್ಷವನ್ನು ಹೊಂದು ವನು" ಎಂದು ಒಡನೆ ಮೋಕ್ಷವನ್ನು ಹೊಂದುವಿಕೆಯು ಪ್ರತಿಬುದ್ಧನಿಗೆ ಹೇಳಿದೆ. ಅಷ್ಟು ಮಾತ್ರದಿಂದ ಇನ್ನೊಬ್ಬನಿಗೆ ಮೋಕ್ಷವಿಲ್ಲ ಎಂಬುದಿಲ್ಲ.

"ಭುಕ್ತ್ವಾಚ ಭೋಗಾ ನ್ವಿಪುಲಾಂಸ್ತ್ವಮಂತೇ ಮತ್ಪ್ರಸಾದತಃ ।
ಮಮಾನುಸ್ಮರಣಂ ಪ್ರಾಪ್ಯ ಮಮಲೋಕಮವಾಪ್ಸ್ಯಸಿ ॥

ಈ ಲೋಕದಲ್ಲಿ ಹೆಚ್ಚಾದ ಭೋಗಗಳನ್ನು ಅನುಭವಿಸಿ ನೀನು ಕೊನೆಯಲ್ಲಿ ನನ್ನ ಅನುಗ್ರಹದಿಂದ ನನ್ನ ನೆನಪನ್ನು ಹೊಂದಿ ನನ್ನ ಲೋಕವನ್ನು ಪಡೆಯುವೆ" ಎಂಬಂತೆ (ಇಲ್ಲೂ) ಯಾವ ವಿರೋಧವೂ ಇಲ್ಲ.

ಮೋಕ್ಷವನ್ನು ಬಯಸುವ ಒಬ್ಬನಿಗೆ ನಡುವೆ ಬ್ರಹ್ಮಕಾಯನಿಷೇವಣ— ಬ್ರಹ್ಮನ ಶರೀರವನ್ನು ಹೊಕ್ಕು ಆ ಆನಂದವನ್ನು ಅನುಭವಿಸುವಿಕೆ ಎಂಬ ಸುಖವು ಹೇಳಲ್ಪಡುತ್ತದೆ. ಚಂದ್ರಮಸಸ್ಸಾಯುಜ್ಯಂಗಚ್ಛತಿ. ಚಂದ್ರನೊಡನೆ ಸೇರಿ ಒಂದಾಗು ವಿಕೆ—ಸಯುಗ್ಭಾವಃ, ಬೇರೆಯಾದವುಗಳಿಗೆ ಒಂದೆಡೆ ಸಾಧಾರಣವಾದ ಕೂಡುವಿಕೆ— ಯೋಗ ಅದನ್ನು ತೋರಿಸುತ್ತದೆ. ಸಾಯುಜ್ಯಶಬ್ದನ್ಯಾಸಿ, ಹಾಗೆಯೇ ಇಲ್ಲೂ ಒಂದು ಜಾಗವಿಶೇಷದಲ್ಲಿ ತನ್ನ ಆತ್ಮನನ್ನು ಅನುಭವಿಸುವಿಕೆಯಿಂದ ತಡೆ, ಹೇಗೆ,

ಅಥವಾ ನೇಚ್ಛತೇ ತತ್ರ ಬ್ರಹ್ಮಕಾಯ ನಿಷೇವಣಮ್ ।
ಉತ್ಕ್ರಾಮತಿ ಚ ಮಾರ್ಗಸ್ಥಶ್ಶೀತೀಭೂತೋ ನಿರಾಮಯಃ ॥

ಅಥವಾ ಅಲ್ಲಿ ದಾರಿಯಲ್ಲಿ ಬ್ರಹ್ಮಕಾಯ ನಿಷೇವಣವನ್ನು ಅಪೇಕ್ಷಿಸದೇ ಇದ್ದರೆ, ಯಾವ ವ್ಯಾಧಿಯೂ ಇಲ್ಲದವನಾಗಿ ತಣ್ಣಗಾಗಿ ಮೇಲಕ್ಕೆ ಎದ್ದು ಹೊರಡುತ್ತಾನೆ, ಎಂಬುದಾಗಿ ಹೇಳಿದೆ. ಬ್ರಹ್ಮಕಾಯ ನಿಷೇವಣ ಸಂಬಂಧ ದಿಂದ ಮುಕ್ತನಾದವನಿಗೆ ದೇವಯಾನ ಮಾರ್ಗದಿಂದ ಪರಮಾಕಾಶಗಮನವು ಹೇಳಲ್ಪಟ್ಟ ರೀತಿಯಲ್ಲಿ ಇಲ್ಲಿಯೂ ಸ್ವಾತ್ಮಾನುಭವಸ್ಥಾನದಿಂದ ಹೊರಟವನಿಗೆ

ಪರಮವ್ಯೋಮ ಶಬ್ದದಿಂದ ಹೇಳಲ್ಪಡುವ ವೈಕುಂಠಕ್ಕೆ ಹತ್ತುವಿಕೆಯು ಉಂಟು. ನಡುವೆ ಉಂಟಾದ ಫಲವನ್ನು ಅನುಭವಿಸಿದ ನಂತರ ಅರ್ಚಿರಾದಿ ಗಮನವೂ ಉಂಟು. ಅಥವಾ ದಕ್ಷಿಣಾಯನದಲ್ಲಿ ಸತ್ತವನಿಗೆ ಚಂದ್ರಮನ ಸಾಯುಜ್ಯದಂತೆ (ಅವನೊಡನೆ ಕಲೆಯುವಿಕೆಯಂತೆ) ನಡುವೆ ಫಲವನ್ನು ಅನುಭವಿಸುವಿಕೆಯು ವಿಶ್ರಾಂತಿಗೋಸ್ಕರ. ಹೀಗೆ ಎರಡು ರೀತಿಯಲ್ಲೂ ವಿರೋಧವಿಲ್ಲ. ಇದರಿಂದ ಕೊನೆಯಲ್ಲೇ ಅಪ್ರತೀಕಾಲಂಬನತ್ವ—ಪ್ರತೀಕೋಪಾಸನೆ ಇಲ್ಲದಿರುವಿಕೆ ಎಂಬುದೂ ನಿರಸನಮಾಡಲ್ಪಟ್ಟಿತು. ಮಧುವಿದ್ಯೆಯಂತೆಯೇ ಮೊದಲಿನಲ್ಲೂ ಅವನು ಪ್ರತೀಕೋಪಾಸಕನಲ್ಲ ಎಂಬುದಾಗಿಯೂ ಉಪಪತ್ತಿಹೇಳಲು ತಕ್ಕದ್ದಾಗಿದೆ.

ಸ್ಮೃತಿಯೂ ಇದನ್ನು ದೃಢಪಡಿಸುತ್ತದೆ.

ಸ್ವಾತ್ಮಾನುಭವಸ್ಥಾನವು ಮುಕ್ತಿಸ್ಥಾನಕ್ಕಿಂತ ಕೆಳಮಟ್ಟದ್ದು.

ಯೋಗಿನಾಮಮೃತಂ ಸ್ಥಾನಂ ಸ್ವಾತ್ಮಸಂತೋಷ ಕಾರಿಣಾಮ್ ।
ಏಕಾಂತಿನಸ್ಸದಾ ಬ್ರಹ್ಮಧ್ಯಾಯಿನೋ ಯೋಗಿನೋ ಹಿ ಯೇ ।
ತೇಷಾಂ ತತ್ಪರಮಂ ಸ್ಥಾನಂ ಯದ್ವೈಪಶ್ಯಂತಿ ಸೂರಯಃ ॥

ಅಮೃತ ಸ್ಥಾನದಲ್ಲಿರುವವರಿಗೆ ಮುಕ್ತತ್ವವ್ಯಪದೇಶವು—ಮೋಕ್ಷಪಡೆದವರೆಂದು ಹೇಳುವಿಕೆಯು, ಮುಪ್ಪು ಸಾವು ಮುಂತಾದವು ಇಲ್ಲದಿರುವುದರಿಂದ ಮತ್ತು ಮತ್ತೆ ಹುಟ್ಟುವಿಕೆಗೆ ಕಾರಣವಾದ ಪುಣ್ಯ-ಪಾಪಗಳು ಕಳೆದುಹೋದುದರಿಂದ ಎಂದು ತಿಳಿಯಬೇಕು. ಏಕಾಂಗಿಗಳಾಗಿ ಯಾವಾಗಲೂ ಬ್ರಹ್ಮವನ್ನು ಧ್ಯಾನ ಮಾಡುವವರಿಗೆ ನಿತ್ಯಸೂರಿಗಳು ನೋಡುವ ವೈಕುಂಠ.

ಸ್ಥೂಲಶರೀರವನ್ನು ಕಳೆದುಕೊಂಡವರಿಗೂ ಆ ಆ ಉಪಾಸನ ವಿಶೇಷಕ್ಕೆ ಸಂಬಂಧಪಟ್ಟ, ಮೋಕ್ಷಕ್ಕಿಂತ ಕಡಿಮೆಯಾದ—ಮುಂದಿನ ಫಲವುಂಟೆಂಬುದನ್ನು ಸಾಂಖ್ಯರು ಹೇಳುತ್ತಾರೆ. ಅದನ್ನು ಪ್ರಕೃತಿಲಯವೇ ಮುಂತಾದ ಶಬ್ದದಿಂದ ಅನ್ನುತ್ತಾರೆ.

ಧರ್ಮೇಣ ಗಮನ ಮೂರ್ಧ್ವಂಗಮನಮಧಸ್ತಾದ್ಭವತ್ಯಧರ್ಮೇಣ ।
ಜ್ಞಾನೇನಚಾಪವರ್ಗೋ ವಿಪರ್ಯಯಾದಿಷ್ಯತೇ ಬಂಧಃ ।
ವೈರಾಗ್ಯಾತ್ಪ್ರಕೃತಿಲಯಸ್ಸಂಸಾರೋಭವತಿ ರಾಜಸಾದ್ರಾಗಾತ್ ।
ಐಶ್ವರ್ಯಾದ ವಿಘಾತೋ ವಿಪರ್ಯಯಾತ್ತದ್ವಿಪರ್ಯಾಸಃ ।

ಧರ್ಮದಿಂದ ಮೇಲಕ್ಕೆ ಹೋಗುವಿಕೆಯೂ, ಅಧರ್ಮದಿಂದ ಕೆಳಕ್ಕೆ ಹೋಗುವಿಕೆಯೂ ಉಂಟಾಗುತ್ತದೆ. ತತ್ತ್ವಜ್ಞಾನದಿಂದ ಮೋಕ್ಷವೂ ಅಜ್ಞಾನದಿಂದ ಸಂಸಾರದ ಕಟ್ಟೂ ಆಗುತ್ತದೆ. ವಿಷಯಸುಖಗಳಲ್ಲಿ ಪ್ರೀತಿ ಇಲ್ಲದಿರುವಿಕೆಯಿಂದ

ಪ್ರಕೃತಿಯ ನಾಶ, ರಜೋಗುಣದ ಕಾರಣವಾದ ಆ ಪ್ರೀತಿಯಿಂದ ಸಂಸಾರವು ಉಂಟಾಗುತ್ತದೆ. ಐಶ್ವರ್ಯದಿಂದ ತಡೆಯಿಲ್ಲದಿರುವಿಕೆಯೂ ಅದಿಲ್ಲದಿದ್ದರೆ ಅದೂ ಇಲ್ಲದಿರುವಿಕೆಯೂ ಉಂಟಾಗುತ್ತದೆ.

ವಾಚಸ್ಪತಿಗಳು 'ವಿಪರ್ಯಯಾದಿಷ್ಯತೇ ಬಂಧಃ=ತತ್ತ್ವಜ್ಞಾನವಿಲ್ಲದಿದ್ದರೆ ಬಂಧವುಂಟಾಗುತ್ತದೆ' ಎಂಬಲ್ಲಿ ಹೀಗೆ ವ್ಯಾಖ್ಯಾನಮಾಡಿದ್ದಾರೆ.

ಆ ಬಂಧವೂ ಪ್ರಾಕೃತಿಕ, ವೈಕೃತಿಕ, ದಾಕ್ಷಿಣಿಕವೆಂದು ಮೂರು ವಿಧವಾಗಿದೆ. ಪ್ರಕೃತಿಯನ್ನು ಆತ್ಮವೆಂದು ತಿಳಿದು ಯಾರು ಪ್ರಕೃತಿಯನ್ನು ಉಪಾಸನೆ ಮಾಡುತ್ತಾರೋ ಅವರಿಗೆ ಪ್ರಾಕೃತಿಕ ಬಂಧವು ಉಂಟಾಗುತ್ತದೆ. ಆ ಬಂಧವನ್ನು ಕುರಿತು ಪುರಾಣದಲ್ಲಿ **'ಪೂರ್ಣಂವರ್ಷಸಹಸ್ರಂತು ತಿಷ್ಠಂತ್ಯವ್ಯಕ್ತಚಿಂತಕಾಃ= ಅವ್ಯಕ್ತವನ್ನು** ಚಿಂತನೆ-ಧ್ಯಾನಮಾಡುವವರು ಒಂದು ಸಾವಿರ ವರ್ಷಗಳು ಪೂರ್ತಿಯಾಗಿ ಹಾಗೆಯೇ ನಿಲ್ಲುತ್ತಾರೆ' ಎಂದು ಹೇಳಿದೆ.

ಪ್ರಕೃತಿಯ ವಿಕಾರವಾದ ಪಂಚಭೂತಗಳು ಇಂದ್ರಿಯ ಅಹಂಕಾರ ಬುದ್ಧಿ ಇವನ್ನು ಪುರುಷಬುದ್ಧಿಯಿಂದ ಯಾರು ಉಪಾಸನೆ ಮಾಡುತ್ತಾರೋ ಅವರನ್ನು ಕುರಿತು—

**ದಶಮನ್ವಂತರಾಣೀಹ ತಿಷ್ಠಂತೀಂದ್ರಿಯ ಚಿಂತಕಾಃ ।**
**ಭೌತಿಕಾಸ್ತು ಶತಂಪೂರ್ಣಂ ಸಹಸ್ರಂತ್ವಾಭಿಮಾನಿಕಾಃ ।**
**ಬೌದ್ಧಾ ದಶ ಸಹಸ್ರಾಣಿ ತಿಷ್ಠಂತಿ ವಿಗತಜ್ವರಾಃ ।**
**ತೇಖಲ್ವಮೀ ವಿದೇಹಾ ಯೇಷಾಂ ವೈಕೃತಿಕೋ ಬಂಧಃ ॥**

ಇಂದ್ರಿಯಗಳನ್ನು ಪುರುಷಬುದ್ಧಿಯಿಂದ ಚಿಂತಿಸುವವರು ಹತ್ತು ಮನ್ವಂತರಗಳ ಕಾಲ ಈ ಲೋಕದಲ್ಲಿ ನಿಲ್ಲುತ್ತಾರೆ. ಭೂತಸಂಬಂಧವಾದವುಗಳನ್ನು (ಪಂಚಭೂತಗಳಿಗೆ ಸಂಬಂಧಪಟ್ಟವನ್ನು) ಧ್ಯಾನಮಾಡುವವರು ನೂರು ವರ್ಷಗಳ ಕಾಲವೂ ಅಹಂಕಾರವನ್ನು ಚಿಂತಿಸುವವರು ಸಾವಿರ ವರ್ಷಗಳ ಕಾಲವೂ, ಬುದ್ಧಿಯನ್ನು ಉಪಾಸನೆ ಮಾಡುವವರು ಹತ್ತುಸಾವಿರ ವರ್ಷಗಳ ಕಾಲವೂ ಯಾವ ವಿಧವಾದ ತೊಂದರೆಯೂ-ವ್ಯಾಧಿಯೂ ಇಲ್ಲದೆ ನಿಲ್ಲುತ್ತಾರೆ. ಯಾರಿಗೆ ವೈಕೃತಿ ಬಂಧವುಂಟೋ ಅವರು ಶರೀರವಿಲ್ಲದವರಾಗಿರುತ್ತಾರೆ, ಎಂದು ಹೇಳಿದೆ.

ಈ ರೀತಿ ಅವ್ಯಕ್ತವೇ ಮೊದಲಾದ ತತ್ತ್ವವನ್ನು ಚಿಂತನೆ ಮಾಡುವವರಂತೆ, ಪ್ರತ್ಯಗಾತ್ಮವೆಂಬ ತತ್ತ್ವವನ್ನು ಚಿಂತನೆ ಮಾಡುವವರಿಗೂ ಅದಕ್ಕೆ ತಕ್ಕ ದೇಶ, ಕಾಲ ಅದಕ್ಕಿಂತ ಮಿಗಿಲಾದ ಫಲವೂ ಉಂಟಾಗುತ್ತದೆ. ಆದುದರಿಂದಲೇ ಭೂಮ

ವಿದ್ಯೆಯಲ್ಲಿ ಪ್ರತ್ಯಗಾತ್ಮಮಾತ್ರವನ್ನು ಉಪಾಸನೆ ಮಾಡುವವನಿಗೂ ಅತಿವಾದಿತ್ವ— ತಾನು ಉಪಾಸನೆಮಾಡುವ ದೇವತೆಯೇ ಶ್ರೇಷ್ಠವಾದದ್ದು ಎಂದು ಹೇಳುವಿಕೆಯೂ ಹೇಳಲ್ಪಟ್ಟಿದೆ (ಒಪ್ಪುತ್ತದೆ).

ತನ್ನ ಆತ್ಮವು ಬ್ರಹ್ಮಾತ್ಮಕವಾದದ್ದೆಂದು ಅನುಸಂಧಾನ ಮಾಡಿದರೋ ಬ್ರಹ್ಮವನ್ನು ಹೊಂದುವಿಕೆಯಲ್ಲಿ ಕೊನೆಗೊಳ್ಳುವುದರಿಂದ ಹಿಂತಿರುಗಿ ಬರುವಿಕೆ ಇಲ್ಲ— ಇದೇ ಹೆಚ್ಚಳ. ಆದುದರಿಂದಲೇ ಅಕ್ಷರಾನುಭವಕ್ಕೆ ನಾಶವಾಗುವಿಕೆ—ಕೊನೆಗೊಳ್ಳುವಿಕೆಯಾದರೆ ಅದನ್ನು ಅಪೇಕ್ಷಿಸುವವನಿಗೆ ಐಶ್ವರ್ಯಾರ್ಥಿಗಳಂತೆ ಅಪವರ್ಗವನ್ನು ಅಪೇಕ್ಷಿಸುವ ಅಧಿಕಾರಿಗಳಲ್ಲಿ ಅವನೊಬ್ಬ ಎಂಬುದು ಹೇಗೆ? ಎಂಬುದೂ ನಿರಸನ ಮಾಡಲ್ಪಟ್ಟಿತು.

ಒಬ್ಬನಿಗೆ ಹೊರಗಿನ ವಸ್ತುಗಳೇ ಅನುಭವಿಸಲು ತಕ್ಕವಾಗಿವೆ. ಮತ್ತೊಬ್ಬನಿಗೆ ಒಳಗಿನ ವಸ್ತುಗಳೇ ಭೋಗ್ಯವಾಗಿವೆ. ಈ ರೀತಿ ವಿಭಾಗಮಾಡಬಹುದಾದುದರಿಂದಲೂ ಒಬ್ಬನಿಗೆ ಸಂಸಾರಕ್ಕೆ ಹಿಂತಿರುಗುವಿಕೆಯ ಯೋಗ್ಯತೆ, ಮತ್ತೊಬ್ಬನಿಗೆ ಹಿಂದಿರುಗಿ ಬರದಿರುವ ಯೋಗ್ಯತೆ ಈ ಭೇದದಿಂದಲೂ ಅದರ ಭೇದವು ಉಪಪನ್ನವಾಗುತ್ತದೆ.

ವಿಳಂಬವನ್ನು ಸಹಿಸದೆ ಇರುವವರಿಗಾದರೋ—

**ಸರ್ವಧರ್ಮಾಂಶ್ಚ ಸಂತ್ಯಜ್ಯ ಸರ್ವಕಾಮಾಂಶ್ಚ ಸಾಕ್ಷರಾನ್ ।**
**ಲೋಕವಿಕ್ರಾಂತಚರಣೌ ಶರಣಂ ತೇವ್ರಜಂ ವಿಭೋ ॥**

ಓ ಪ್ರಭು ! ಎಲ್ಲಾ ಧರ್ಮಗಳನ್ನೂ ಬಿಟ್ಟು, ನಾಶ ಸ್ವಭಾವವುಳ್ಳ ಎಲ್ಲಾ ಬಯಕೆಗಳನ್ನೂ ಬಿಟ್ಟು, ಎಲ್ಲಾ ಲೋಕವನ್ನು ಅಳೆದ ನಿನ್ನ ಪಾದಗಳನ್ನು ಮೊರೆ ಹೊಕ್ಕಿರುವೆನು ಎಂಬ ಈ ನಿಷ್ಠೆ—ಹೆಚ್ಚಾದ ಸ್ಥಿತಿ ಇದೆ.

**ಕೈವಲ್ಯಂ ಭಗವಂತಂಚ ಮಂತ್ರೋಽಯಂ ಸಾಧಯಿಷ್ಯತಿ ।**

ಈ ಮಂತ್ರವು ಕೈವಲ್ಯವನ್ನೂ, ಭಗವಂತನನ್ನೂ ಉಂಟುಮಾಡಿಕೊಡುತ್ತದೆ. ಇವೇ ಮೊದಲಾದವುಗಳಲ್ಲೂ ಕೈವಲ್ಯಶಬ್ದದಿಂದ ಆತ್ಮಮಾತ್ರದ ಅನುಭವ ಸುಖವು. ಅದನ್ನು ಅಪೇಕ್ಷಿಸುವವರಿಗೆ ಅದೂ ಹೊಂದಲು ತಕ್ಕದ್ದಾಗಿ ಹೇಳಲ್ಪಟ್ಟಿದೆ. ಇದೂ ಕೂಡ ಬಹಳ ವಿಘ್ನಗಳಿಂದ ಕೂಡಿದೆ. ಆದುದರಿಂದ ಜ್ಞಾನಿಗಳು ಮೊದಲಿನಿಂದಲೂ ಎಚ್ಚತ್ತು ಇದನ್ನು ಬಿಟ್ಟಿದ್ದಾರೆ.

ಕೆಲವರಾದರೋ ಬ್ರಹ್ಮದ ಅನುಭವದ ಸುಖ ಬೇಡ, ಆತ್ಮಾನುಭವದ ಸುಖವೇ ನಿತ್ಯವಾಗಿರಲಿ ಎಂದು ಬಯಸುತ್ತಾರೆ. ಈ ವಿಷಯಕ್ಕೆ ಭಾಷ್ಯಕಾರರೇ

ಮೊದಲಾದವರ ಸಂಪ್ರದಾಯದ ಪ್ರಮಾಣವೂ ಬೇರೆ ಮತ್ತೆ ಯಾವ ಯುಕ್ತಿಯೂ ಕಾಣಲಿಲ್ಲ. ಸ್ವಲ್ಪವೂ ಬಾಕಿಇಲ್ಲದೆ ಕರ್ಮವು ನಾಶವಾದರೆ ಸ್ವಭಾವಸಿದ್ಧವಾದ ರೂಪವು ಆವಿರ್ಭವಿಸುವುದರಿಂದ — ಉಂಟಾಗುವುದರಿಂದ ಬ್ರಹ್ಮಾನುಭವವು ಅವಶ್ಯವಾಗಿ ಆಗಬೇಕು. ಆರೀತಿಯಾದ ಅಂದರೆ ಬ್ರಹ್ಮಾನುಭವವು ಅವಶ್ಯವಾಗಿ ಆಗಲೇಬೇಕಾಗಿರುವ ಕರ್ಮಶೇಷದ ಸಂಬಂಧವಿದ್ದರಾದರೋ ಸಂಸಾರದ ಪ್ರಸಕ್ತಿ ಇದ್ದೇ ಇದೆ. ಮುಪ್ಪು, ಸಾವು ಇವುಗಳಿಗೆ ಕಾರಣವಾದ ಎಲ್ಲಾ ಕರ್ಮದ ನಾಶದಿಂದ ಸಂಸಾರವಿಲ್ಲದಿರುವಿಕೆ–ಅಷ್ಟುಮಾತ್ರದಿಂದ 'ಮುಕ್ತನು' ಎಂದು ಹೇಳುವಿಕೆ. ಬ್ರಹ್ಮಾನುಭವಕ್ಕೆ ತಡೆಯನ್ನುಂಟುಮಾಡುವ ಕರ್ಮಕ್ಕಾದರೋ ನಾಶವಿಲ್ಲದುದರಿಂದ ಅದರ ಅನುಭವವಿಲ್ಲದಿರುವಿಕೆ ಹೇಗೆಂದರೆ, ಈ ರೀತಿಯಾದ ಕರ್ಮವು ಮುಂದೆಯೂ ನಾಶವಾಗುವುದಿಲ್ಲ ಎಂಬುದನ್ನು ನಿಯಮಿಸುವ ಯಾವಪ್ರಮಾಣವೂ ಇಲ್ಲ.

ಪರಪ್ರಾಪ್ತ್ಯಾದಿರಹಿತ ನಿತ್ಯಕೈವಲ್ಯಕಲ್ಪನಾ ।
ಸೂತ್ರಭಾಷ್ಯಶ್ರುತಿ ಸ್ಮೃತ್ಯಾದೀನಾಂ ಬಾಧೇನ ಸಿಧ್ಯತಿ ।
ಅತೋಧಿಕಾರಿಭೇದೇನ ಹ್ಯವಸ್ಥಾಭೇದ ಮಾಶ್ರಿತಾಃ ।
ಅನ್ಯಾಮುಪಿಗತಿಂ ಪ್ರಾಂಚಃ ಪ್ರತೀಚೀಂ ಪ್ರತ್ಯಪಾದಯನ್ ।
ತತ್ರಾ ವೃತ್ತಿ ಪರಪ್ರಾಪ್ತಿ ವೈರೂಪ್ಯಾದೇರಯೋಗತಃ ।
ಅಸ್ಮದುಕ್ತಂ ಶ್ರುತಿ ಸ್ಮೃತ್ಯೋರನಪಾಯಂ ರಸಾಯನಮ್ ॥

"ಪರಬ್ರಹ್ಮವನ್ನು ಹೊಂದದೆ, ನಿತ್ಯವಾದ ಕೈವಲ್ಯವೆಂಬುದು ಒಂದುಂಟು" ಎಂಬುದು ಸೂತ್ರ ಭಾಷ್ಯ ಶ್ರುತಿ ಸ್ಮೃತಿ ಇವುಗಳಿಗೆ ತೊಂದರೆಯಾಗುವುದರಿಂದ ಸಿದ್ಧಿಸುವುದಿಲ್ಲ. ಅದು ಅವುಗಳನ್ನೂ ಬಾಧಿಸಿಯೇ ಸಿದ್ಧಿಸಬೇಕಾಗಿದೆ. ಆದುದರಿಂದ ಹಿಂದಿನವರು, ಅವಸ್ಥೆಗಳ ಭೇದವನ್ನು ಆಶ್ರಯಿಸಿದವರಾಗಿ ಅಧಿಕಾರಿ ಭೇದದಿಂದ ಹೊಸದಾದ ಒಂದು ದಾರಿಯನ್ನು ಪ್ರತಿಪಾದನೆಮಾಡಿದ್ದಾರೆ. ಅದಾವುದೆಂದರೆ, ಅದರಲ್ಲಿ ಮತ್ತೆ ಹುಟ್ಟುವಿಕೆ ಮತ್ತು ಪರಬ್ರಹ್ಮದ ಪ್ರಾಪ್ತಿ ಇವೆರಡೂ ಒಂದಕ್ಕೊಂದು ಕೂಡುವುದಿಲ್ಲವಾದುದರಿಂದ ಅಧಿಕಾರಿ ಭೇದದಿಂದ ಅವಸ್ಥಾಭೇದದಿಂದ ನಾವು ಹಿಂದೆ ಹೇಳಿದುದೇ ದಾರಿ. ಇದೇ ಶ್ರುತಿ ಮತ್ತು ಸ್ಮೃತಿಗಳಿಗೆ ಬಾಧೆಬರದಂತೆ ನಾಶವಾಗದ ಒಂದು ರಸಾಯನ—ಶ್ರೇಷ್ಠವಾದ ರುಚಿಕರವಾದ ಮತ್ತು ಪುಷ್ಟಿಕರವಾದ ಔಷಧಿ.

ಇಲ್ಲಿಯವರೆಗೂ ಮುಮುಕ್ಷುಗಳು ಕೈವಲ್ಯಪರರೆಂದೂ, ಮೋಕ್ಷಪರರೆಂದೂ ಎರಡು ವಿಧವಾಗಿರುವರೆಂದು ಹೇಳಿ ಕೈವಲ್ಯಪರರ ವಿಚಾರವನ್ನು ವಿಸ್ತಾರವಾಗಿ ವಿಮರ್ಶಿಸಿ ತಿಳಿದಿದ್ದಾಯಿತು. ಇನ್ನು ಮೋಕ್ಷಪರರನ್ನು ತಿಳಿಯೋಣ. ಇವರು ಭಕ್ತರು, ಪ್ರಪನ್ನರು ಎಂದು ಎರಡು ವಿಧವಾಗಿ ಇದ್ದಾರೆ. ಭಕ್ತರಾರೆಂದರೆ ವೇದ

ವನ್ನು ಅದರ ಅಂಗಗಳೊಡನೆ ಅಧ್ಯಯನ ಮಾಡಿ ಪೂರ್ವ ಮೀಮಾಂಸೆ ಮತ್ತು ಉತ್ತರ ಮೀಮಾಂಸೆ ಇವನ್ನು ಪರಿಚಯ ಮಾಡಿಕೊಂಡಿರಬೇಕು. ಚಿತ್ತು ಮತ್ತು ಅಚಿತ್ತು ಇವುಗಳ ಸ್ವರೂಪವನ್ನು ಅರಿತು ಅವಕ್ಕಿಂತಲೂ ವಿಲಕ್ಷಣನಾದವನು ಪರಬ್ರಹ್ಮನು–ಅವನು ಆನಂದರೂಪನು, ಕೆಟ್ಟ ಗುಣಗಳಿಲ್ಲದವನು, ಕಲ್ಯಾಣಗುಣಗಳ ಸಮೂಹದಿಂದ ತುಂಬಿದವನು ಎಂಬುದನ್ನು ಮನದಟ್ಟು–ದೃಢ–ಮಾಡಿಕೊಂಡಿರಬೇಕು. ಅವನನ್ನು ಹೊಂದಬೇಕೆಂಬ ಬಯಕೆ ಬೆಳೆದು ಆ ಹೊಂದುವಿಕೆಗೆ ಉಪಾಯವಾದ ಅಂಗದೊಡಗೂಡಿದ ಭಕ್ತಿಯನ್ನು ಸ್ವೀಕರಿಸಿ ಅದರಿಂದ ಮೋಕ್ಷವನ್ನು ಪಡೆಯಲು ಆಸೆ ಪಡೆಯಬೇಕು. ಅಂತಹವರು ಭಕ್ತರು, ತ್ರೈವರ್ಣಿಕರಿಗೆ ಮಾತ್ರ ಈ ಭಕ್ತಿಯಲ್ಲಿ ಅಧಿಕಾರ, ದೇವಾದಿಗಳಿಗೂ ಉಂಟು, ಅರ್ಥಿತ್ವ ಸಾಮರ್ಥ್ಯ ಇವೆರಡೂ ಅವರಿಗೂ ಇರುವುದೇ ಅದಕ್ಕೆ ಕಾರಣ.

ಭಕ್ತಿಶಬ್ದವೂ ಕೂಡ ಪ್ರೀತಿ ವಿಶೇಷದಲ್ಲಿ ರೂಢವಾಗಿದೆ. ಪ್ರೀತಿಯೂ ಕೂಡ ಜ್ಞಾನ ವಿಶೇಷವೇ. [1]ಭಕ್ತಿರಪಿ ನಿರತಿಶಯ ಪ್ರಿಯಾ ಅನನ್ಯ ಪ್ರಯೋಜನ ಸ್ವೇತರ ವೈತೃಷ್ಣ್ಯಾವಹಜ್ಞಾನ ವಿಶೇಷ ಏವ—ಭಕ್ತಿಯೆಂಬುದೂ ನಿರತಿಶಯ ಪ್ರಿಯವಾಗಿ ಮತ್ತೊಂದು ಪ್ರಯೋಜನವನ್ನು (ಬಯಸದೆ) ಮಿಕ್ಕೆಲ್ಲದರಲ್ಲಿಯೂ ವೈರಾಗ್ಯವನ್ನು ಉಂಟುಮಾಡುವ ಜ್ಞಾನವಿಶೇಷವೇ ಎಂದು ವೇದಾರ್ಥಸಂಗ್ರಹದಲ್ಲಿ ರಾಮಾನುಜರು ಹೇಳಿದ್ದಾರೆ.

ಸುಖ ಪ್ರೀತಿ ಇವೆರಡೂ ಒಂದೇ ಅರ್ಥವುಳ್ಳವಲ್ಲವೇ ? ಎಂದರೆ 'ಅಲ್ಲ' ಎಂದೇ ಹೇಳಬೇಕಾಗುತ್ತದೆ. ಯಾವ ಜ್ಞಾನ ವಿಶೇಷದಿಂದ ಅದು (ಸುಖ) ಸಾಧ್ಯವೆಂದು ಹೇಳಲ್ಪಡುತ್ತದೋ, ಆ ಜ್ಞಾನ ವಿಶೇಷವೇ ಸುಖ. ಇಷ್ಟು ಹೇಳಿದಂತಾಯಿತು–ವಿಷಯ ಜ್ಞಾನಗಳು ಸುಖ, ದುಃಖ, ಮಧ್ಯಸ್ಥ ಇವಕ್ಕೆ ಸಾಧಾರಣವಾಗಿವೆ. ಅವೂ ಕೂಡ ವಿಷಯಗಳಿಗೆ ಅಧೀನವಾದ ವಿಶೇಷವುಳ್ಳವುಗಳಾಗಿ ಹಾಗೆ ಆಗುತ್ತವೆ. ಕೆಲವು ಸುಖರೂಪಗಳಾಗಿವೆ. ಕೆಲವು ದುಃಖರೂಪಗಳಾಗಿವೆ. ಕೆಲವು ಅನುಭಯರೂಪಗಳು ಅಂದರೆ ಎರಡೂ ಇಲ್ಲದವು, ಮಧ್ಯಸ್ಥವಾದವು. ಯಾವ ವಿಷಯ ವಿಶೇಷದಿಂದ ಕೂಡಿದ ಜ್ಞಾನವು ಸುಖವನ್ನುಂಟುಮಾಡುತ್ತದೋ ಎಂದರೆ ಇಷ್ಟವಾಗುತ್ತದೋ—ಆ ವಿಷಯದ ಜ್ಞಾನವೇ ಸುಖ. ವರದವಿಷ್ಣುಮಿಶ್ರರೂ ಕೂಡ "ಸುಖದುಃಖೇ ತಾವತ್ ಅನುಕೂಲ ಪ್ರತಿಕೂಲ ವಿಷಯೇ ಜ್ಞಾನೇ ಏವೇತಿ ನ ಗುಣೇಷ್ವನ್ತರ್ಭಾವ ಏವ—ಸುಖ ದುಃಖಗಳಾದರೋ ಅನುಕೂಲ ಪ್ರತಿಕೂಲ ವಿಷಯವಾದ ಜ್ಞಾನವೇ. ಅವುಗಳಿಗೆ ಗುಣದಲ್ಲಿ ಅನ್ತರ್ಭಾವವಿಲ್ಲ ಅಂದರೆ ಗುಣಗಳ

1. ವೇದಾರ್ಥಸಂಗ್ರಹ, ಕನ್ನಡ ಅನುವಾದ ಪು. ೧೧೭,

ಗುಂಪಿಗೆ ಸೇರುವಿಕೆ ಇಲ್ಲ ಎಂದು ಹೇಳಿದ್ದಾರೆ. ಅಂತೂ ಸುಖದುಃಖಗಳು ಬುದ್ಧಿ ವಿಶೇಷಗಳು ಎಂದು ಸಿದ್ಧವಾಯಿತು.

ಭಕ್ತರು ಇಬ್ಬಗೆಯಾಗಿದ್ದಾರೆ, ಅವರು ಯಾರೆಂದರೆ, ಸಾಧನ ಭಕ್ತಿನಿಷ್ಠರು ಒಂದು ಪಂಗಡದವರು, ಮತ್ತೊಂದು ಪಂಗಡದವರು ಸಾಧ್ಯಭಕ್ತಿನಿಷ್ಠರು. ಪರಮಾತ್ಮನನ್ನು ಹೊಂದಲು ಸಾಧನವನ್ನಾಗಿ–ಉಪಾಯವಾಗಿ ಭಕ್ತಿಯಲ್ಲಿ ನಿಷ್ಠೆಯುಳ್ಳವರು ಸಾಧನ ಭಕ್ತಿನಿಷ್ಠರು. **ಸಾಧ್ಯಭಕ್ತಿಃ–ಪ್ರಪತ್ತಿಃ, ತತ್ಪ್ರಾಪ್ತೌ ಸ ಏವಸಾಧನಮಿತಿಮತಿಃ.** ಅವನನ್ನು ಹೊಂದಲು ಅವನೇ ಸಾಧನ-ಉಪಾಯ ಎಂಬ ಬುದ್ಧಿಯುಳ್ಳವರು ಸಾಧ್ಯಭಕ್ತಿನಿಷ್ಠರು. ವ್ಯಾಸರೇ ಮೊದಲಾದವರು ಸಾಧನ ಭಕ್ತಿನಿಷ್ಟರು. ನಾಥಮುನಿ ಮುಂತಾದವರು ಸಾಧ್ಯಭಕ್ತಿನಿಷ್ಠರು.

ಆಕಿಞ್ಚನ್ಯವೇನು (ಬೇರೆ ಉಪಾಯವಿಲ್ಲದಿರುವಿಕೆ) ಅನನ್ಯಗತಿತ್ವವೇನು (ಬೇರೆ ಗತಿ–ದಾರಿ ಇಲ್ಲದೆ ಇರುವಿಕೆ) ಈ ಧರ್ಮಗಳಿಂದ ಕೂಡಿದವನಾಗಿ ಭಗವಂತನನ್ನು ಆಶ್ರಯಿಸಿದವನು ಪ್ರಪನ್ನನು ತ್ರೈವರ್ಗಿಕಪರನು ಮೋಕ್ಷಪರನು ಎಂದು ಅವನು ಎರಡು ಬಗೆಯಾಗಿದ್ದಾನೆ. ಭಗವಂತನಿಂದಲೇ ಧರ್ಮ ಅರ್ಥ ಕಾಮಗಳೆಂಬ ತ್ರಿವರ್ಗಪುರುಷಾರ್ಥಗಳನ್ನು ಬಯಸುವವನು ತ್ರೈವರ್ಗಿಕಪರನು. ಮೋಕ್ಷಪರನಾದರೋ ಸತ್ಪುರುಷರ ಸಹವಾಸದಿಂದ ನಿತ್ಯವಸ್ತು ಅನಿತ್ಯವಸ್ತು ಇವುಗಳ ವಿವೇಕವನ್ನು ಪಡೆದವನಾಗಿ ಸಂಸಾರದಲ್ಲಿ ಜಿಗುಪ್ಸೆ (ನಿರ್ವೇದದಿಂದ) ಯಿಂದ ವೈರಾಗ್ಯವನ್ನು ಹೊಂದುತ್ತಾನೆ. ಅನಂತರ ಅವನಿಗೆ ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ ಉಂಟಾಗುತ್ತದೆ. ಅದರ ಸಿದ್ಧಿಗಾಗಿ **ಆಚಾರ್ಯೋವೇದಸಂಪನ್ನಃ** = ಆಚಾರ್ಯನು ವೇದ ಸಂಪತ್ತನ್ನು ಅಂದರೆ ವೇದದಲ್ಲಿ ಹೇಳಿರುವ ತತ್ತ್ವವನ್ನೆಲ್ಲಾ ಅರಿತವನಾಗಿರಬೇಕು ಎಂಬ ಇವೇ ಮೊದಲಾದ ಲಕ್ಷಣಗಳಿಂದ ಕೂಡಿದ ಒಳ್ಳೆಯ ಆಚಾರ್ಯನನ್ನು ಆಶ್ರಯಿಸುತ್ತಾನೆ. ಆ ಆಚಾರ್ಯನು ಎಂತಹವನಾಗಿರಬೇಕೆಂಬುದನ್ನು ವೇದಾಂತಾಚಾರ್ಯರು ನ್ಯಾಸವಿಂಶತಿಯಲ್ಲಿ ಹೇಳಿದ್ದಾರೆ. ಅದನ್ನರಿಯೋಣ.

> **ಸಿದ್ಧಂ ಸತ್ಸಂಪ್ರದಾಯೇ ಸ್ಥಿರಧಿಯಮನಘಂ ಶ್ರೋತ್ರಿಯಂ ಬ್ರಹ್ಮನಿಷ್ಠಂ**
> **ಸತ್ತ್ವಸ್ಥಂ ಸತ್ಯವಾಚಂ ಸಮಯ ನಿಯತಯಾ ಸಾಧುವೃತ್ತ್ಯಾ ಸಮೇತಮ್।**
> **ಡಮ್ಭಾಸೂಯಾದಿ ಮುಕ್ತಂ ಜಿತ ವಿಷಯಗಣಂ ದೀರ್ಘಬನ್ಧುಂದಯಾಲುಂ**
> **ಸ್ಖಾಲಿತ್ಯೇಶಾಸಿತಾರಂ ಸ್ವಪರ ಹಿತಪರಂ ದೇಶಿಕಂ ಭೂಷ್ಣುರೀಪ್ಸೇತ್ ॥**

ತತ್ತ್ವವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿದ್ದರೆ ತಾನೆ ಪ್ರಪತ್ತಿಯನ್ನು ಮಾಡುವ ರೀತಿ ಗೊತ್ತಾಗುತ್ತದೆ. ಆದುದರಿಂದ ಆ ಅರಿವನ್ನು ಹೊಂದಲು ಕಾರಣವಾದ ಆಚಾರ್ಯನನ್ನು ಮೊದಲು ಚೇತನನು ಹೊಂದಬೇಕು

ಎಂಬುದನ್ನೂ, ಆ ಆಚಾರ್ಯನಿಗೆ ಇರಬೇಕಾದ ಹದಿನಾಲ್ಕು ಗುಣಗಳನ್ನು ಮೊದಲು ವಿಭಾಗಿಸಿ ತೋರಿಸುತ್ತಾರೆ.

ಶ್ರೇಷ್ಠವಾದ ಜೀವನವನ್ನು ಹೊಂದಲು ಅಪೇಕ್ಷಿಸುವ ಶಿಷ್ಯನು ಮೊದಲಿನಲ್ಲಿ ಒಳ್ಳೆಯ ಆಚಾರ್ಯನನ್ನು ಹೊಂದಲು ಅಪೇಕ್ಷಿಸಬೇಕು. ಆ ಆಚಾರ್ಯನಿಗೆ ಇರಬೇಕಾದ ಗುಣಗಳಾವುವು ಎಂದರೆ—

೧. ಶಠಕೋಪರು—ನಾಥಮುನಿ—ಮಡೈಪ್ಪಳ್ಳಿಯಾಚ್ಚಾನ್ (ಕಿಡಾಂಬಿ ಯಾಚ್ಚಾನ್ ಎಂಬುವರು ರಾಮಾನುಜರಿಗೆ ಅಡಿಗೆಮಾಡಿ ಭಿಕ್ಷೆಯನ್ನು ಸಮರ್ಪಿಸುತ್ತಿದ್ದರು. ಆದುದರಿಂದ ಅವರಿಗೆ ಸಾಂಪ್ರದಾಯಿಕವಾದ ಈ ಹೆಸರು ಬಂದಿದೆ, ಮುಂತಾದ ಆಚಾರ್ಯರುಗಳ ಪರಂಪರೆಯಾಗಿ ಬಂದ ಶ್ರೇಷ್ಠವಾದ ಸಂಪ್ರದಾಯದಲ್ಲಿ ಸ್ಥಿರವಾಗಿ ನೆಲೆಸಿರಬೇಕು.

೨. ಇತರರು ಕುಯುಕ್ತಿಗಳಿಂದ ಚಲಿಸುವಂತೆ ಪ್ರಯತ್ನಪಟ್ಟರೂ, ಚಲಿಸದ ಮನಸ್ಸಿನ ದಾರ್ಢ್ಯವುಳ್ಳವನಾಗಿರಬೇಕು.

೩. ಯಾವ ವಿಧವಾದ ದೋಷವೂ ಇಲ್ಲದವನಾಗಿರಬೇಕು.

೪. ವೇದಾನ್ತಗಳನ್ನು ಚೆನ್ನಾಗಿ ಅರಿತವನಾಗಿರಬೇಕು.

ಪರಬ್ರಹ್ಮನಾದ ಪರಮಾತ್ಮನ ಹತ್ತಿರ ಸ್ಥಿರವಾದ ಭಕ್ತಿಯುಳ್ಳವನಾಗಿರಬೇಕು.

೬. ಸತ್ತ್ವಗುಣವು ತಲೆಯೆತ್ತಿ ನಿಂತವನಾಗಿರಬೇಕು.

೭. ವಞ್ಚನೆ ಮೊದಲಾದವು ಇಲ್ಲದೆ ನಿಜವನ್ನೇ ಆಡುವವನಾಗಿರಬೇಕು.

೮. ಆ ಆ ಕಾಲಕ್ಕೆ ತಕ್ಕ ಧರ್ಮವನ್ನು ಅರಿತ ಹಿರಿಯರಿಂದ ವ್ಯವಸ್ಥೆ ಮಾಡಲ್ಪಟ್ಟ ಅನುಷ್ಠಾನದಲ್ಲಿ ನಿರತನಾಗಿರಬೇಕು.

೯. ಮತ್ತೊಬ್ಬರಿಗಾಗಿ ವೇಷವನ್ನು ಹಾಕಿಕೊಳ್ಳುವುದು ಅಂದರೆ ನಿಜವಾಗಿ ತಾನು ಮಾಡದೆ ಇತರರ ತೃಪ್ತಿಗಾಗಿ ಅನುಷ್ಠಾನಾದಿಗಳನ್ನು ಮಾಡುವುದು, ಮತ್ತೊಬ್ಬರ ಉತ್ಕರ್ಷದಲ್ಲಿ ಸಹನೆ ಇಲ್ಲದೆ ಇರುವುದು ಮುಂತಾದ ಕೆಟ್ಟಗುಣಗಳಿಲ್ಲದವನಾಗಿರಬೇಕು.

೧೦. ಇಂದ್ರಿಯಗಳು ಹೋದ ಕಡೆ ಅವನ್ನು ಬಿಡದೆ ಅಡಗಿಸುವವನಾಗಿರಬೇಕು.

೧೧. ಈ ಜನ್ಮದಲ್ಲಿ ಒಳ್ಳೆಯ ದಾರಿಯನ್ನು ತೋರಿಸುವವನಾಗಿ ಮರು ಜನ್ಮದಲ್ಲೂ ಒಳ್ಳೆಯ ಗತಿಯನ್ನು ಹೊಂದುವವರೆಗೂ ಸಹಾಯವನ್ನು ಮಾಡುವವ ನಾಗಿರಬೇಕು.

.೧೨ ಕೃಪೆಯನ್ನು ಅನುಗ್ರಹಿಸುವವನಾಗಿರಬೇಕು ಅಂದರೆ ದಯಾವಂತ ನಾಗಿರಬೇಕು.

೧೩. ಶಿಷ್ಯನು ತಪ್ಪುದಾರಿಗೆ ಹೋದರೆ ದಾಕ್ಷಿಣ್ಯವಿಲ್ಲದೆ ಶಿಕ್ಷಿಸಿ ತಪ್ಪನ್ನು ತಿದ್ದುವನಾಗಿರಬೇಕು.

೧೪. ತನಗೂ ಇತರರಿಗೂ ಒಳ್ಳೆಯದನ್ನೇ ಉಂಟುಮಾಡುವವನಾಗಿರ ಬೇಕು.

ಇವೇ ಆಚಾರ್ಯನಿಗೆ ಮುಖ್ಯವಾಗಿ ಇರಬೇಕಾದ ಗುಣಗಳು.

ನಿಜಸ್ಥಿತಿಯಲ್ಲಿ ಒಳ್ಳೆಯ ಜ್ಞಾನವನ್ನು ಹೊಂದಲು ಅಪೇಕ್ಷಿಸಿಯೇ ಶಿಷ್ಯನು ಒಬ್ಬ ಆಚಾರ್ಯನ ಹತ್ತಿರ ಹೋಗುತ್ತಾನೆ. ಇದನ್ನು ಶಾಸ್ತ್ರವು ವಿಧಿಸಬೇಕಾದುದು ಇಲ್ಲ. ಆದರೂ ಒಬ್ಬನು ಒಬ್ಬ ಆಚಾರ್ಯನನ್ನು ಹೊಂದಲು ಅಪೇಕ್ಷಿಸಿದರೆ, ಈ ಲಕ್ಷಣಗಳುಳ್ಳ ಆಚಾರ್ಯನನ್ನೇ ಆಶ್ರಯಿಸಬೇಕೆಂಬ ವಿಧಿಯಲ್ಲಿ ಶಾಸ್ತ್ರಕ್ಕೆ ತಾತ್ಪರ್ಯ— ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮ ನಿಷ್ಠಮ್—ಆ ಪರಬ್ರಹ್ಮವಸ್ತುವನ್ನು ಅರಿಯಲು ಸಮಿತ್ತನ್ನು (ಉಪಹಾರ ಗಳೊಡನೆ) ಕೈಯಲ್ಲಿ ತೆಗೆದುಕೊಂಡವನಾಗಿ ವೇದವೇದಾಂಗಗಳನ್ನು ಅರಿತ ಬ್ರಹ್ಮ ದಲ್ಲೇ ನಿರತನಾಗಿರುವವನ ಹತ್ತಿರ ಹೋಗಬೇಕು. ಇದು ವಿಧಿ ವಾಕ್ಯ.

ಇಂತಹ ಲಕ್ಷಣಗಳಿಂದ ಕೂಡಿದ ಗುರುವನ್ನು ಆಶ್ರಯಿಸಿ ಅವನ ಮೂಲಕ ಪುರುಷಕಾರಭೂತಳಾದ ಲಕ್ಷ್ಮಿಯನ್ನು ಶರಣುಹೋಗಬೇಕು. ಭಕ್ತ್ಯಾದಿ ಬೇರೆ ಉಪಾಯಗಳಲ್ಲಿ ಅಶಕ್ತನಾಗಿರುವುದರಿಂದ, ಅಕಿಂಚನನಾಗಿರುವುದರಿಂದ ಬೇರೆ ಗತಿಯಿಲ್ಲದೆ ಶ್ರೀಮನ್ನಾರಾಯಣನ ಚರಣಗಳನ್ನೇ ಉಪಾಯವಾಗಿ ಸ್ವೀಕರಿಸ ಬೇಕು; ಅವನೇ ಪ್ರಪನ್ನನು. ಈ ಪ್ರಪತ್ತಿಯನ್ನು ಅನುಷ್ಠಿಸಲು ಎಲ್ಲರಿಗೂ ಅಧಿಕಾರವುಂಟು,

ಏಕಾನ್ತೀ ಪರಮೈಕಾನ್ತೀ ಎಂಬುದಾಗಿ ಪ್ರಪನ್ನನು ಎರಡು ವಿಧ. ಯಾವನು ಮೋಕ್ಷಫಲದೊಡನೆ ಬೇರೆಫಲಗಳನ್ನೂ ಭಗವಂತನಿಂದಲೇ ಅಪೇಕ್ಷಿಸುತ್ತಾನೋ ಅವನು ಏಕಾನ್ತಿಯು. ಬೇರೆ ದೇವತೆಗಳನ್ನು ಆಶ್ರಯಿಸದೇ ಇರುವವನು ಎಂದರ್ಥ. ಭಕ್ತಿ ಜ್ಞಾನ ಇವೆರಡನ್ನುಬಿಟ್ಟು ಬೇರೆ ಯಾವ ಫಲವನ್ನೂ ಭಗವಂತ

ನಿಂದಲೂ ಯಾವನು ಬಯಸುವುದಿಲ್ಲವೋ ಅವನು ಪರಮೈಕಾನ್ತಿಯು. ಅವನು ದೃಪ್ತ‍ಆರ್ತ ಎಂಬ ಭೇದದಿಂದ ಎರಡು ವಿಧವಾಗಿರುವನು.

"ಅವಶ್ಯಮನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಮ್ ।

ಒಳ್ಳೆಯದೋ ಅಥವಾ ಕೆಟ್ಟದ್ದೋ ಆದ ಯಾವ ಕರ್ಮವನ್ನು ನಾವು ಮಾಡಿದ್ದರೂ ಖಂಡಿತವಾಗಿಯೂ ಅದರ ಫಲವನ್ನು ಅನುಭವಿಸಿಯೇ ತೀರಬೇಕು" ಎಂಬುದಾಗಿ ಶಾಸ್ತ್ರ ಹೇಳುವುದರಿಂದ, ಪ್ರಾರಬ್ಧ ಕರ್ಮವನ್ನು ಅಂದರೆ ಫಲವನ್ನು ಅನುಭವಿಸಲು ತೊಡಗಿರುವ ಕರ್ಮವನ್ನು ಅನುಭವಿಸುತ್ತಾ ಈ ಶರೀರದ ಕೊನೆಯಲ್ಲಿಯೇ ಮೋಕ್ಷವನ್ನು ಅಪೇಕ್ಷಿಸುವವನು ದೃಪ್ತನು. ಉರಿಯುತ್ತಿರುವ ಬೆಂಕಿಯ ಮಧ್ಯದಲ್ಲಿ ಇರುವಿಕೆಯಂತೆ ಸಂಸಾರದಲ್ಲಿ ಇರುವಿಕೆಯು ಸಹಿಸಲು ಬಹಳ ಕಷ್ಟವಾಗಿರುವುದರಿಂದ ಪ್ರಪತ್ತಿಯಾದ ಮರುಕ್ಷಣದಲ್ಲೇ ಮೋಕ್ಷವನ್ನು ಬಯಸುವವನು ಆರ್ತನು.

ಮುಕ್ತನಾದವನು ಉಪಾಯವನ್ನು ಸ್ವೀಕರಿಸಿದನಂತರ, ನಿತ್ಯಕರ್ಮ, ನೈಮಿತ್ತಿಕ ಕರ್ಮ, ಭಗವಂತನ ಆಜ್ಞಾಕೈಙ್ಕರ್ಯ, ಅನುಜ್ಞಾಕೈಙ್ಕರ್ಯ ರೂಪಗಳಾದ ಕರ್ಮಗಳನ್ನು ಸ್ವಯಂ ಪ್ರಯೋಜನ ರೂಪವಾಗಿ ಮಾಡುತ್ತಾ ಭಗವಂತನಲ್ಲಿ ಅಪಚಾರಮಾಡದೆ ಇರುವಿಕೆ, ಹಾಗೆಯೇ ಭಾಗವತರಲ್ಲಿ ಅಪಚಾರಮಾಡದೆ ಇರುವಿಕೆ ಇವುಗಳಲ್ಲಿ ನಿರತನಾಗಿರಬೇಕು. ದೇಹವನ್ನು ಬಿಡುವ ವೇಳೆಯಲ್ಲಿ ಸುಕೃತವನ್ನು ಮಿತ್ರರಲ್ಲೂ ದುಷ್ಕೃತವನ್ನು ಶತ್ರುಗಳಲ್ಲೂ ಇಡುತ್ತಾ, ವಾಕ್ಕು ಮನಸ್ಸಿನಲ್ಲಿ [1]ಕೂಡುತ್ತದೆ, ಮನಸ್ಸು ಪ್ರಾಣದಲ್ಲಿ ಇವೇಮೊದಲಾದ ಕ್ರಮದಿಂದ ಹಾರ್ದನಾದ ಪರಮಾತ್ಮನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಾನೆ. ಇಲ್ಲಿ ಆಚಾರ್ಯರು ನಿರ್ಯಾಣಾಧಿಕಾರದ ಪ್ರಾರಂಭ ಶ್ಲೋಕವನ್ನು ಅರಿಯೋಣ.

ಮನಸಿ ಕರಣಗ್ರಾಮಂ ಪ್ರಾಣೇಮನಃ ಪುರುಷೇಚ ತಂ
ಝಟಿತಿ ಘಟಯನ್ ಭೂತೇಷ್ವೇನಂ ಪರೇಚ ತಮಾತ್ಮನಿ ।
ಸ್ವವಿದವಿದುಷೋರಿತ್ಥಂ ಸಾಧಾರಣೇ ಸರಣೇರ್ಮುಖೇ (ಖೈಃ)
ನಯತಿ ಪರತೋನಾಡೀಭೇದೈರ್ಯಥೋಚಿತಮೀಶ್ವರಃ ॥

ವಿವರಣೆ :—ಈಶ್ವರನು, "ಅಸ್ಯಸೋಮ್ಯ ಪುರುಷಸ್ಯ ಪ್ರಯತೋ ವಾಙ್ಮನಸಿಸಮ್ಪದ್ಯತೇ—ಎಲೌ ಸೋಮಾರ್ಹನೆ ! ಲೋಕಾಂತರಕ್ಕೆ ಪ್ರಯಾಣ ಮಾಡುವ ಜೀವನ ವಾಗಿಂದ್ರಿಯವು ಮನಸ್ಸಿನಲ್ಲಿ ಕೂಡುತ್ತದೆ" ಇವೇ ಮೊದಲಾಗಿ

---

1. ಲಯವಲ್ಲ.

ಹೇಳಲ್ಪಟ್ಟ ರೀತಿಯಿಂದ ವಾಗಿಂದ್ರಿಯದಿಂದ ಉಪಲಕ್ಷಿತವಾದ—ತೋರಿಸಲ್ಪಟ್ಟ ಕರ್ಮೇಂದ್ರಿಯಗಳು ಐದು ಜ್ಞಾನೇಂದ್ರಿಯಗಳು ಐದು ಈ ಹತ್ತು ಇಂದ್ರಿಯಗಳ ಸಮೂಹವನ್ನು ಹೇಗೆ ಇವನಿಗೆ ಕಾರ್ಯಮಾಡಲು ಸಾಮರ್ಥ್ಯವಿಲ್ಲವೋ ಆ ರೀತಿಯಲ್ಲಿ ಮನಸ್ಸಿನಲ್ಲಿ ಒಡನೆ ಸೇರಿಸುತ್ತಾ (ಇಲ್ಲಿ ಸಮ್ಪತ್ತಿಯು ಸೇರುವಿಕೆ ಮಾತ್ರ—ಅದರ ಸ್ವಭಾವವನ್ನು ಹೊಂದುವಿಕೆ ಅಂದರೆ ಅದೇ ಆಗುವಿಕೆ ಅಲ್ಲ) ಆ ಇಂದ್ರಿಯಗಳಿಂದ ಕೂಡಿದ ಮನಸ್ಸನ್ನು ಪ್ರಾಣದೊಡನೆ ಕಲೆಯುವಂತೆಮಾಡಿ ಅದನ್ನು ಜೀವನಲ್ಲಿ ಬೇಗನೆ ಕೂಡಿಸುತ್ತಾನೆ. ಅನಂತರ ಪ್ರಾಣ ಇಂದ್ರಿಯ ಇವುಗಳಿಂದ ಕೂಡಿದ ಜೀವನನ್ನು ಪಂಚಭೂತ ಸೂಕ್ಷ್ಮಗಳೊಡನೆ ಸೇರಿಸುತ್ತಾನೆ. ಶರೀರದ ಹಿಂದಿನ ಭಾಗದಲ್ಲಿ (ಬೆನ್ನಿನಲ್ಲಿ) ಕಂಬದಂತಿರುವ ಮೂರು ಎಲಬು ಮುಖ್ಯವಾದವು—ಇದನ್ನು ಶಾಸ್ತ್ರಕಾರರು ತ್ರಿಸ್ಥೂಣವೆನ್ನುತ್ತಾರೆ. ಇದನ್ನು ಕಡೆದು ಪೃಥಿವ್ಯಾದಿ ಐದು ಭೂತಗಳ ಸೂಕ್ಷ್ಮಭಾಗವನ್ನು ಎತ್ತಿ ಅದರೊಡನೆ ಸೇರುವಂತೆ ಮಾಡುತ್ತಾನೆ. ಈ ರೀತಿ ತ್ರಿಸ್ಥೂಣವನ್ನು ಕಡೆಯುವಾಗ ಜೀವನಿಗೆ ಬಹಳ ನೋವಾಗುತ್ತದೆ. ಸ್ವಭಾವದಿಂದಲೇ ಎಲ್ಲರಿಗೂ ಸುಹೃತ್ತಾದ ಪರಮಾತ್ಮನು ಈ ರೀತಿ ಶ್ರಮದಿಂದ ಕೂಡಿದ ಜೀವನನ್ನು ತನ್ನಲ್ಲಿಟ್ಟು ಶ್ರಮವನ್ನು ಹೋಗುವಂತೆ ಮಾಡುತ್ತಾನೆ.

ಈ ರೀತಿಯಾದ ನಿರ್ಯಾಣವು ಬ್ರಹ್ಮವಿತ್ತಿಗೂ ಅಬ್ರಹ್ಮವಿತ್ತಿಗೂ ಸಮಾನವಾಗಿದೆ; ಅಂದರೆ ಅರ್ಚಿರಾದಿ ಮಾರ್ಗದಿಂದ ಹೋಗುವವರಿಗೂ ಧೂಮಾದಿ ಮಾರ್ಗದಿಂದ ಹೋಗುವವರಿಗೂ ಒಂದೇ ರೀತಿಯಾಗಿದೆ. ಯಾವ ಜೀವಾತ್ಮನು ದೀಪದಂತೆ ಹೃದಯದಲ್ಲಿರುವನೋ ಅವನಿಗೆ ಸಂಬಂಧಪಟ್ಟ **'ಸಿತಾ ಸಿತಾಃಕದ್ರು ನೀಲಾಃ ಕಪಿಲಾಃ ಪೀತಲೋಹಿತಾಃ' ।** ಬಿಳುಪು, ಕಪ್ಪು, ಕಂದು (Reddish Brown) ಹೊಂಬಣ್ಣ ಕೆಂಪು ಇವೇ ಮೊದಲಾದ ಬಣ್ಣವುಳ್ಳ ನೂರು ನಾಡಿಗಳಿವೆ, ಅವುಗಳ ಮಧ್ಯದಲ್ಲಿ ಯಾವುದು ಕಳ್ಳರು ಹೋಗುವ ದಾರಿಯಹಾಗೆ ಆತ್ಮಾಪಹಾರಿಗಳು ಅಂದರೆ ಆತ್ಮವೆಂಬುದೇ ಇಲ್ಲ ಎಂದು ಹೇಳುವವರು ಸ್ವರ್ಗ-ನರಕಗಳಿಗೆ ಹೋಗುವ ಬೇರೆದಾರಿಗಳಿಗೆ ಮುಖ (ಬಾಗಿಲು) ಗಳಾದ ನಾಡೀ ವಿಶೇಷಗಳುಂಟೋ ಅವುಗಳಲ್ಲಿ ಹೋಗದಂತೆ ಆ ದಾರಿಯನ್ನು ತಳ್ಳಿ ಅರ್ಚಿರಾದಿ ಮಾರ್ಗಕ್ಕೆ ಮುಖವಾಗಿರುವ ನೂರು ನಾಡಿಗಳಿಗಿಂತ ಮೀರಿದ ಸುಷುಮ್ನಾ ನಾಡಿಯೆಂಬ ಬ್ರಹ್ಮನಾಡಿಯಲ್ಲಿ ಪ್ರವೇಶಿಸುವಂತೆ ಮಾಡುತ್ತಾನೆ, ಎಂದು ಹೇಳಿದೆ.

ಅನಂತರ ಮೋಕ್ಷಕ್ಕೆ ದ್ವಾರಭೂತವಾದ ಸುಷುಮ್ನಾನಾಡಿಯನ್ನು ಪ್ರವೇಶಿಸಿ ಅದರಿಂದ ಬ್ರಹ್ಮರನ್ಧ್ರದ ಮೂಲಕ ಹೊರಗೆ ಬಂದು ಹಾರ್ದನೊಡನೆ ಸೂರ್ಯಕಿರಣದ್ವಾರಾ ಅಗ್ನಿಲೋಕಕ್ಕೆ ಹೋಗಿ ದಿನ, ಪೂರ್ವಪಕ್ಷ, ಉತ್ತರಾಯಣ, ಸಂವತ್ಸರ

ಇವರುಗಳ ಅಭಿಮಾನಿ ದೇವತೆಗಳಿಂದಲೂ ವಾಯುವಿನಿಂದಲೂ ದಾರಿಯಲ್ಲಿ ಸತ್ಕರಿಸಲ್ಪಟ್ಟು, ಸೂರ್ಯಮಂಡಲವನ್ನು ಭೇದಿಸಿ (ನಭೋರನ್ಧ್ರ-ಆಕಾಶದ ತೂತು) ರಥಚಕ್ರದ್ವಾರಾ ಮೂಲಕ ಸೂರ್ಯಲೋಕಕ್ಕೆ ಹೋಗುತ್ತಾನೆ. ಆಮೇಲೆ ಚನ್ದ್ರ ವಿದ್ಯುತ್ ವರುಣ ಇಂದ್ರ ಪ್ರಜಾಪತಿ ಇವರುಗಳು ದಾರಿತೋರಿಸುವವರು-ಆತಿವಾಹಿಕಗಣಗಳು. ಇವರು ಈ ಮುಕ್ತನನ್ನು ತಮ್ಮ ತಮ್ಮ ಲೋಕಗಳಲ್ಲಿ ಆದರಿಸುತ್ತಾರೆ. ಆ ಆ ಎಲ್ಲೆಕಟ್ಟುಗಳಲ್ಲಿ ಅವರುಗಳೊಡನೆ ಆ ಆ ಲೋಕಗಳನ್ನು ದಾಟುತ್ತಾನೆ.

ಪ್ರಕೃತಿಮಂಡಲಕ್ಕೂ ವೈಕುಂಠಕ್ಕೂ ಎಲ್ಲೆಯನ್ನು ನಿಗದಿಮಾಡುವುದು ವಿರಜಾ ನದಿ. ಅದನ್ನು ದಾಟಿ ಸೂಕ್ಷ್ಮಶರೀರವನ್ನು ಬಿಡುತ್ತಾನೆ. (ಇಲ್ಲಿ ವಿರಜಾನದಿಯ ಕರಣಕ್ಕೆ ಮುಂಚೆಯೇ ಸೂಕ್ಷ್ಮಶರೀರ ಪರಿತ್ಯಾಗ-ಕೇವಲ ಮನಸ್ಸಿನಿಂದಲೇ ನದಿಯನ್ನು ದಾಟುವಿಕೆ ಎಂದು ಕೆಲವು ಕಡೆ ಹೇಳಿದೆ) ಅನಂತರ ಅಮಾನವ ಕರಸ್ಪರ್ಶವಾಗುತ್ತದೆ. ಅಪ್ರಾಕೃತವಾದ ದಿವ್ಯ ಮಂಗಲವಿಗ್ರಹವನ್ನು ಹೊಂದುತ್ತಾನೆ. ನಾಲ್ಕುತೋಳುಳ್ಳವನಾಗುತ್ತಾನೆ. ಬ್ರಹ್ಮಾಲಂಕಾರದಿಂದ ಅಲಂಕರಿಸಲ್ಪಡುತ್ತಾನೆ. ವೈಕುಂಠನಗರದ ದ್ವಾರಪಾಲಕರು ಇಂದ್ರ, ಪ್ರಜಾಪತಿ ಎಂಬ ಹೆಸರುಳ್ಳವರು. ಅವರ ಅನುಮತಿಯಿಂದ ಆ ಪಟ್ಟಣವನ್ನು ಪ್ರವೇಶಿಸುತ್ತಾನೆ. ಬಾವುಟಗಳಿಂದ ಅಲಂಕರಿಸಲ್ಪಟ್ಟಿದೆ. ಅದರ ಗೋಪುರ ; ಉದ್ದವಾದ ಪ್ರಾಕಾರವುಳ್ಳದ್ದು ಆ ಪಟ್ಟಣ. ಆ ಗೋಪುರವನ್ನು ದಾಟಿ ಐರಮ್ಮದೀಯವೆಂಬ ಹೆಸರುಳ್ಳ ಅಮೃತ ಸರೋವರ ಸೋಮಸವನವೆಂಬ ಅಶ್ವತ್ಥ (ಅರಳೀಮರ)ಗಳನ್ನು ನೋಡುತ್ತಾನೆ.

"ಶತಂಮಾಲಾಹಸ್ತಾಃ" ಈ ರೀತಿ ಹೇಳಲ್ಪಟ್ಟ ಐದುನೂರು ಅಪ್ಸರಸ್ಸುಗಳ ಗುಂಪಿನಿಂದ ಉಪಚರಿಸಲ್ಪಡುತ್ತಾನೆ. ಬ್ರಹ್ಮಗನ್ಧವೇ ಮೊದಲಾದವುಗಳಿಂದ ಅಲಂಕರಿಸಲ್ಪಡುತ್ತಾನೆ. ಅಲ್ಲಿರುವ ಅನಂತ ಗರುಡ ವಿಷ್ವಕ್ಸೇನರೇ ಮುಂತಾದವರನ್ನು ನಮಸ್ಕರಿಸಿ ಅವರಿಂದ ಗೌರವಿಸಲ್ಪಟ್ಟು ಮಹಾಮಣಿಮಣ್ಡಪಕ್ಕೆ ಬರುತ್ತಾನೆ. ಪರ್ಯಙ್ಕದ ಹತ್ತಿರ ತನ್ನ ಆಚಾರ್ಯರನ್ನು ನಮಸ್ಕರಿಸುತ್ತಾನೆ. ಪರ್ಯಙ್ಕದ ಹತ್ತಿರ ಬಂದು ಅಲ್ಲಿ ಧರ್ಮಾದಿ ಪೀಠದ ಮೇಲೆ ತಾವರೆಯಲ್ಲಿ ಅನಂತನಿದ್ದಾನೆ. ವಿಮಲೆ ಮುಂತಾದವರು ಚಾಮರವನ್ನು ಬೀಸುವರು. ಆ ಅನಂತನಲ್ಲಿ ಶ್ರೀದೇವಿ ಭೂದೇವಿ ನೀಳಾದೇವಿಗಳೊಡನೆ ಶಂಖಚಕ್ರವೇ ಮೊದಲಾದ ದಿವ್ಯಾಯುಧಗಳಿಂದ ಕೂಡಿದವನಾಗಿ ಹೆಚ್ಚಾಗಿ ಪ್ರಕಾಶಿಸುವ ಕಿರೀಟ ಮಕುಟ ತಲೆಯ ಆಭರಣ, ಕಿವಿಯ ಆಭರಣ, ಕತ್ತಿನಲ್ಲಿ ಧರಿಸುವ ಆಭರಣ, ತೋಳಿನ ಆಭರಣ, ಬಳೆ, ಶ್ರೀವತ್ಸವೆಂಬ ಮಚ್ಚೆ, ಕೌಸ್ತುಭಮಣಿ, ಒಂದು ಎಳೆಯಹಾರ, ಮೂರು ಎಳೆಗಳುಳ್ಳಹಾರ, ಪಟ್ಟೆಯವಸ್ತ್ರ, ಒಡ್ಯಾಣ-ಉಡದಾರ, ಕಾಲಿನ ಆಭರಣ, ಇವೇ ಮೊದಲಾದ

ದಿವ್ಯಾಭರಣಗಳಿಂದ ಅಲಂಕರಿಸಲ್ಪಟ್ಟವನಾಗಿರುವ, ಲೆಕ್ಕಕ್ಕೆ ಸಿಕ್ಕದ ಕಲ್ಯಾಣ ಗುಣಗಳಿಗೆ ಸಾಗರದಂತಿರುವ ಭಗವಂತನನ್ನು ನೋಡುತ್ತಾನೆ. ಅವನು-"**ಸ್ವೋಚಿತ ವಿವಿಧ ವಿಚಿತ್ರಾನನ್ತಾಶ್ಚರ್ಯ ನಿತ್ಯನಿರವದ್ಯ ನಿರತಿಶಯ ಸುಗನ್ಧ ನಿರತಿಶಯ ಸುಖಸ್ಪರ್ಶ ನಿರತಿಶಯೌಜ್ವಲ್ಯ ಕಿರೀಟ ಮಕುಟ ಚೂಡಾವತಂಸ ಮಕರ ಕುಂಡಲಗ್ರೈವೇಯಕ ಹಾರಕೇಯೂರ ಕಟಕ ಶ್ರೀವತ್ಸ ಕೌಸ್ತುಭ ಮುಕ್ತಾದಾಮೋದರಬನ್ಧನ ಪೀತಾಮ್ಬರಕಾಞ್ಚೀಗುಣ ನೂಪುರಾದ್ಯಪರಿಮಿತ ದಿವ್ಯಭೂಷಣನು**" ಎಂದು ರಾಮಾನುಜರು ಶರಣಾಗತಿ ಗದ್ಯದಲ್ಲಿ ವರ್ಣಿಸಿರುವಂತೆ, ಅವನ ಆಕಾರಕ್ಕೆ ತಕ್ಕಂತೆ ಒಳ್ಳೆಯ ವಾಸನೆ ಸ್ಪರ್ಶ ಇವುಗಳುಳ್ಳ ದಿವ್ಯಾಭರಣಗಳಿಂದ ಅಲಂಕರಿಸಲ್ಪಟ್ಟಿದ್ದಾನೆ. ಕಿರೀಟ ಮಕುಟ ಎಂಬ ಈ ಎರಡು ಪದಗಳ ಅರ್ಥ ವ್ಯತ್ಯಾಸವನ್ನು ವ್ಯಾಖ್ಯಾಕಾರರು ಈ ರೀತಿ ಹೇಳುತ್ತಾರೆ. ಎಲ್ಲಾ ಲೋಕಕ್ಕೂ ಇವನೇ ಯಜಮಾನನೆಂದು ತೋರಿಸುವುದಕ್ಕಾಗಿ ಧರಿಸಿರುವ ಕಿರೀಟ ಎಂಬ ಈ ಪದದಿಂದ 'ಮಕುಟ'ಕ್ಕೆ ವಿಶೇಷವು ಹೇಳಲ್ಪಟ್ಟಿದೆ. ಧರಿಸುವ ಪುರುಷರ ವ್ಯತ್ಯಾಸದಿಂದ ಮಕುಟಗಳು ಎರಡು ಬಗೆಯಾಗಿವೆ, ಎಂಬುದು ಶಿಲ್ಪಶಾಸ್ತ್ರ ಮೊದಲಾದವುಗಳಲ್ಲಿ ಏರ್ಪಡಿಸಿದೆ.

ಅಲ್ಲದೆ 'ನಾಕುಂಡಲೀ ನಾಮಕುಟೀ. ಕುಂಡಲವಿಲ್ಲದವನೂ ಮಕುಟವಿಲ್ಲದವನೂ ಅಯೋಧ್ಯಾಪಟ್ಟಣದಲ್ಲಿ ಇಲ್ಲ' ಎಂದು ವಾಲ್ಮೀಕಿ ಮಹರ್ಷಿಗಳು ಪ್ರಯೋಗಿಸಿರುವುದರಿಂದ ತಲೆಯಲ್ಲಿ ಧರಿಸಿಕೊಳ್ಳಲು ತಕ್ಕ ಭೂಷಣವನ್ನು ಕುರಿತು ಮಕುಟ ಎಂಬ ಪದ ಹೇಳಲ್ಪಟ್ಟಿದೆ. ಅದೂ ಅಲ್ಲದೆ ಕಿರೀಟದ ಮೇಲಿನ ಭಾಗ 'ಮಕುಟ' ಎಂಬ ಪದದಿಂದ ಹೇಳಲ್ಪಟ್ಟಿರುತ್ತೆ. ಮಕುಟವೆಂದರೆ ಕಿರೀಟದ ತುದಿಯಲ್ಲಿ ಇರುವ ನಾಯಕಮಣಿಗೆ ಆಧಾರವಾಗಿರುವ ಭಾಗ, ಎಂದೂ ಅರ್ಥ ಮಾಡಬಹುದಾಗಿದೆ.

ಈ ರೀತಿಯಾದ ಭಗವಂತನನ್ನು ನೋಡಿ ಅವನ ಪಾದಾರವಿಂದಗಳನ್ನು ತಲೆಯಿಂದ ಮುಟ್ಟಿ ನಮಸ್ಕರಿಸಿ ತನ್ನ ಕಾಲಿನಿಂದ ಮಂಚವನ್ನು ಹತ್ತುತ್ತಾನೆ. ಆಗ ಪರಮಾತ್ಮನು ಹತ್ತಿರಕ್ಕೆ ಬಂದ ಮುಕ್ತಾತ್ಮನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಳ್ಳುತ್ತಾನೆ. "ಕೋಽಸಿ—ನೀನು ಯಾರು" ಎಂದು ಕೇಳುತ್ತಾನೆ. ಅದಕ್ಕೆ ಇವನ ಉತ್ತರ, 'ಬ್ರಹ್ಮಪ್ರಕಾರವಾಗಿದ್ದೇನೆ' ಎಂದು. ಆಗ ಅವನು ಪ್ರೀತಿಯಿಂದ ಇವನನ್ನು ನೋಡುತ್ತಾನೆ. ಈ ಸಂತೋಷದಿಂದ ಇವನು ಅವನನ್ನು ಎಲ್ಲಾ ದೇಶಗಳಲ್ಲೂ ಎಲ್ಲಾ ಕಾಲದಲ್ಲೂ ಎಲ್ಲಾ ಅವಸ್ಥೆಗಳಲ್ಲೂ ಆ ಆ ದೇಶ, ಕಾಲ, ಅವಸ್ಥೆಗಳಿಗೆ ತಕ್ಕಂತೆ ಎಲ್ಲಾ ಕೈಙ್ಕರ್ಯಗಳನ್ನೂ ಮಾಡಲು ಅನುಮತಿಯನ್ನು ಕೇಳುತ್ತಾನೆ. ಅದಕ್ಕೆ ಅವನ ಸಂಮತಿಯಾದ ನಂತರ, ಆಗ ಅಪಹತಪಾಪ್ಮಾದಿ ಗುಣಾಷ್ಟಕಗಳು ಇವನಿಗೆ ಆವಿರ್ಭವಿಸುತ್ತವೆ. ಉತ್ತರಾವಧಿ ಇಲ್ಲದೆ ಪರಬ್ರಹ್ಮವನ್ನು ಅನುಭವಿ

ಸುತ್ತಾ ಆನಂದಿಸುತ್ತಾನೆ. ಈ ಮುಕ್ತಾತ್ಮಾ. ಇವನಿಗೆ ಬ್ರಹ್ಮಸಾಮ್ಯವುಂಟಾಗುತ್ತದೆ ಎಂಬ ಶ್ರುತಿಗೆ ಭೋಗ ಸಾಮ್ಯವು ಉಂಟಾಗುತ್ತದೆ ಎಂದರ್ಥ. ಜಗದ್ವ್ಯಾಪಾರಕ್ಕೆ ಇವನಿಗೆ ಅಧಿಕಾರ ಇಲ್ಲ. ನಾನಾತ್ವವೂ ಎಲ್ಲಾ ಲೋಕ ಸಂಚಾರವೂ ಇವನಿಗೆ ಉಂಟು.

'ಮುಕ್ತನು ಈ ಲೋಕಕ್ಕೆ ಹಿಂತಿರುಗುವುದಿಲ್ಲ' ಎಂದು ಶ್ರುತಿ ಹೇಳುತ್ತದಲ್ಲಾ ಅಂದರೆ ಅದಕ್ಕೆ ಕರ್ಮಕೃತವಾದ ಸಂಸಾರ ಇವನಿಗೆ ಇಲ್ಲ ಎಂದು ತಾತ್ಪರ್ಯ. ಆದುದರಿಂದ ಮುಕ್ತನು ಭಗವತ್ಸಂಕಲ್ಪಕ್ಕೆ ಅಧೀನನಾಗಿ, ತನ್ನ ಇಚ್ಛೆಯಿಂದಲೂ ಕೂಡ ಎಲ್ಲೆಡೆಯಲ್ಲೂ ಸಂಚಾರ ಮಾಡುತ್ತಾನೆ.

ನಿತ್ಯರಾರೆಂದರೆ ಯಾವಾಗಲೂ ಭಗವಂತನ ಇಷ್ಟಕ್ಕೆ ವಿರುದ್ಧವಾಗಿ ನಡೆಯುವಿಕೆ ಇಲ್ಲದಿರುವುದರಿಂದ ಜ್ಞಾನಸಂಕೋಚದ ಪ್ರಸಂಗವೇ ಇಲ್ಲದವರು ಅನಂತಗರುಡ ವಿಷ್ವಕ್ಸೇನ ಮುಂತಾದವರು. ಅವರ ಅಧಿಕಾರ ವಿಶೇಷಗಳೂಕೂಡ ಈಶ್ವರನ ನಿತ್ಯೇಚ್ಛೆಯಿಂದಲೇ ಅನಾದಿಯಾಗಿರುವಿಕೆಯೋ ಸ್ವಭಾವದಿಂದ ವ್ಯವಸ್ಥೆ ಮಾಡಲ್ಪಟ್ಟಿದೆ. ಇವರ ಅವತಾರವಾದರೋ ಭಗವಂತನ ಅವತಾರದಂತೆ ಸ್ವೇಚ್ಛೆಯಿಂದಲೇ ಆಗುತ್ತದೆ. ಈ ರೀತಿ ಬದ್ಧ ಮುಕ್ತ ನಿತ್ಯ ಈ ಭೇದಗಳಿಂದ ಜೀವನು ಭಿನ್ನನಾಗಿದ್ದಾನೆ ಎಂಬುದು ನಿರೂಪಿಸಲ್ಪಟ್ಟಿತು.

ಅಂತೂ ಜೀವನ ಗುರಿ ಮೋಕ್ಷ ಸಾಧನೆಯಲ್ಲಿರಬೇಕು ಎಂದಾಯಿತು. ಪ್ರತಿವಾದಿಗಳು ಹೇಳುವ ಮೋಕ್ಷಗಳು ಪ್ರಮಾಣ ವಿರುದ್ಧವಾದವು, ಎಂಬುದನ್ನು ಆಚಾರ್ಯರು ತತ್ತ್ವಮುಕ್ತಾಕಲಾಪದಲ್ಲಿ ಜೀವಸರದ ಕೊನೆಯ ಶ್ಲೋಕದಲ್ಲಿ ಹೇಳುತ್ತಾರೆ. ಈ ಗ್ರಂಥದಲ್ಲಿ ಹಿಂದೆ ಇತರರು ಹೇಳುವ ಮೋಕ್ಷದ ಸ್ವರೂಪವನ್ನು ಸ್ವಲ್ಪ ಹೇಳಿದ್ದರೂ ಪುನರುಕ್ತಿಯಾಗಲಾರದು ಎಂದು ಭಾವಿಸಿ ಆ ಶ್ಲೋಕವನ್ನು ಇಲ್ಲಿ ವಿವರಿಸೋಣ.

> ಸ್ವಾತನ್ತ್ರ್ಯಂ ಬ್ರಹ್ಮಣೈಕ್ಯಂ ಪಶುಪತಿ ಸಮತಾಂ ವಾಸನೋಚ್ಛೇದ ಮಾತ್ರಂ
> ಧೀಸನ್ತಾನ ಪ್ರಣಾಶಂ ನಿಜಮತಿ ಸುಖಯೋರ್ನಿತ್ಯಯೋಸ್ಸನ್ನಿಕರ್ಷಮ್ ।
> ಚಿತ್ತೇನ ಸ್ವಾತ್ಮ ಸೌಖ್ಯಾನುಭವ ಮುಪಲವದ್ಭಾವ ಮೂರ್ಧ್ವಪ್ರಯಾಣಂ
> ಶೂನ್ಯಾದ್ವೈತಂಚ ಮುಕ್ತೌ ಶ್ರುತಿರುಪಕೃತಯೋ ಕಲ್ಪತಾಂ ಜಲ್ಪತಾಂವಃ ॥

ಇಲ್ಲಿ 'ಸ್ವಾತನ್ತ್ರ್ಯಂ' ಇತ್ಯಾದಿಪದಗಳು ದ್ವಿತೀಯಾಂತ. 'ಮುಕ್ತೌಸ್ವಾತನ್ತ್ರ್ಯಂ ಜಲ್ಪತಾಂವಃ ಶ್ರುತಿಃ ಉಪಕೃತಯೋ ಕಲ್ಪತಾಂ' ಇತ್ಯಾದಿಯಾಗಿ ವಾಕ್ಯರಚನೆ.

೧. ಸ್ವಾತನ್ತ್ರ್ಯಂ=ಪರಿಪೂರ್ಣ ಸ್ವತಂತ್ರತೆಯೇ ಮುಕ್ತಿ ಎಂದು ಸಿದ್ಧ ಸಂಪ್ರದಾಯದವರು ಹೇಳುವರು. ಪ್ರಾಚೀನ ಶೈವ ಭೇದವಿದು.

೨. ಬ್ರಹ್ಮೈಕ್ಯಂ=ಬ್ರಹ್ಮದೊಂದಿಗೆ ಐಕ್ಯವೇ [1]ವಿವರ್ತಾದ್ವೈತಿಗಳ ಮುಕ್ತಿ.

೩. ಪಶುಪತಿ ಸಮತಾಂ='ಮುಕ್ತಾತ್ಮಾನೋಽಪಿಶಿವಾಃ' ಎಂಬುದು ಪಾಶುಪತರ ಮುಕ್ತಿ. ಸ್ವಲ್ಪ ಭೇದವನ್ನು ಒಳಗೊಂಡ ಅಭೇದ ರೂಪವಿದು.

೪. ವಾಸನೋಚ್ಛೇದಮಾತ್ರಂ=ಕ್ಷಣಿಕ ವಿಜ್ಞಾನ ಸಂತಾನ ಉಳಿಯುತ್ತದೆ. ಆದರ ವಾಸನೆಗಳೆಲ್ಲವೂ ತೊಲಗುತ್ತದೆ. ಇದು ವಿಜ್ಞಾನವಾದಿಗಳಾದ ಯೋಗಾಚಾರ ಬೌದ್ಧರ ಮುಕ್ತಿ.

೫. ಧೀಸನ್ತಾನಪ್ರಣಾಶಂ=ಆ ವಿಜ್ಞಾನ ಸಂತತಿಯ ನಾಶವೇ ಮೋಕ್ಷವೆಂಬುದು ಮಾಧ್ಯಮಿಕೈಕದೇಶಿಗಳಾದ ಬೋಧಿಚರ್ಯಾವತಾರಕಾರರಾದ ಪ್ರಜ್ಞಾಕರರ ಮತೀಯ ಪಕ್ಷ.

೬. ನಿಜಮತಿಸುಖಯೋಃ ನಿತ್ಯಯೋಃ ಸನ್ನಿಕರ್ಷಂ=ತನ್ನ ಸ್ವಾಭಾವಿಕವಾದ ನಿತ್ಯಜ್ಞಾನ ನಿತ್ಯಸುಖಗಳ ಅಭಿವ್ಯಕ್ತಿಯೇ ಮುಕ್ತಿ ಎಂಬುದು ನೈಯಾಯಿಕೈಕದೇಶಿಗಳಾದ ಭೂಷಣಕಾರರ ಪಕ್ಷ.

೭. ಚಿತ್ತೇನ ಸ್ವಾತ್ಮಸೌಖ್ಯಾನುಭವಂ=ತನ್ನ ನಿತ್ಯ ಸುಖ ಸ್ವರೂಪದ ಮಾನಸಿಕಾನುಭವವೇ ಮುಕ್ತಿ ಎಂಬುದು ಮೀಮಾಂಸಕೈಕದೇಶಿಗಳಾದ ಕುಮಾರಿಲ ಭಟ್ಟರ ಮತ.

೮. ಉಪಲವದ್ಭಾವಂ='ಪಾಷಾಣ ಕಲ್ಪಮುಕ್ತಿ' ಎಂಬುದು ವೈಶೇಷಿಕರ ಪಕ್ಷ.

1. ವಿವರ್ತಃ ಕಾರ್ಯಾತ್ಮಕ ಪರಿಣಾಮಾಶ್ರಯವಸ್ತ್ವಧಿಷ್ಠಾನತ್ವಮ್=ಕಾರ್ಯರೂಪವಾಗಿ ಪರಿಣಮಿಸಿರುವ ವಸ್ತುವಿನಲ್ಲಿ ಅಧಿಷ್ಠಾನವಾಗಿರುವಿಕೆ, ಕುಳಿತಿರುವಿಕೆ–ಕಾರಣವೇ ಕಾರ್ಯರೂಪದಿಂದ ತೋರುವುದರಿಂದ ಕಾರ್ಯವು ಬೇರೊಂದಿಲ್ಲ. ಆದುದರಿಂದ ಕಾರಣವು ಮಾತ್ರ ಸತ್ಯ ಕಾರ್ಯವು ಸತ್ಯವಲ್ಲವೆಂದು ಶ್ರೀ ಶಂಕರಾಚಾರ್ಯರ ಮತ. ಇವರ ಮತದಂತೆ ಬ್ರಹ್ಮದಲ್ಲಿ ಅವಿದ್ಯೆಯಿಂದ ಜಗದಾದಿಗಳ ಅಧ್ಯಾಸವು ಉಂಟಾಗಿ ರಜತ ಜ್ಞಾನಕ್ಕೆ ಕಾರಣವಾದ ಶುಕ್ತಿಯಲ್ಲಿ ಶುಕ್ತಿಜ್ಞಾನವುಂಟಾಗಿ ರಜತದ ಭ್ರಾಂತಿಯು ನಿವೃತ್ತಿ ಹೊಂದುವಂತೆ ಬ್ರಹ್ಮಜ್ಞಾನದಿಂದ ಜಗದಾದಿಭೇದ ಜ್ಞಾನವು (ಭ್ರಾಂತಿಯು) ನಿವೃತ್ತಿ ಹೊಂದುವುದು. ಬ್ರಹ್ಮವೊಂದೇ ಸತ್ಯ ಜಗತ್ತುಮಿಥ್ಯೆ.

ಏಕ ಏವ ಹಿ ಭೂತಾತ್ಮಾ ಭೂತೇ ಭೂತೇವ್ಯವಸ್ಥಿತಃ ।
ಏಕಧಾ ಬಹುಧಾಚೈವ ದೃಶ್ಯತೇಜಲಚನ್ದ್ರವತ್ ॥

ಪರಿಣಾಮವಾದವು ಶ್ರೀರಾಮಾನುಜಾಚಾರ್ಯರ ಮತ.

೯. ಊರ್ಧ್ವಪ್ರಯಾಣಂ=ಸಂತತೋರ್ಧ್ವಗಮನವೇ ಮುಕ್ತಿ, ಇದು ಜೈನರ ಕಲ್ಪನೆ.

೧೦. ಶೂನ್ಯಾದ್ವೈತಂಚ=ಮತ್ತು ಶೂನ್ಯವೇ ತತ್ತ್ವವಾಗಿರುವುದರಿಂದ ಬ್ರಹ್ಮಾದ್ವೈತದಂತೆ ಶೂನ್ಯಾದ್ವೈತವೇ ಮುಕ್ತಿ ಎಂಬುದು ಮಾಧ್ಯಮಿಕರ ಪಕ್ಷ.

**ಮುಕ್ತೌಜಲ್ಪತಾಂವಃ ಶ್ರುತಿಃ ಉಪಕೃತಯೇ ಕಲ್ಪತಾಂ**=ಇವುಗಳನ್ನು ಮನಸ್ಸು ಬಂದಂತೆ ಮುಕ್ತಿಯಲ್ಲಿ ಹೇಳುವ ನಿಮಗೆ ಶ್ರುತಿ ಉಪಕಾರ ಮಾಡಲಿ! ಶ್ರುತಿಯ ಸಹಾಯದಿಂದ ಅವರು ಸ್ಫೂರ್ತಿಯನ್ನು ಪಡೆಯಲಿ ಎಂದು ತಾತ್ಪರ್ಯ.

ಶ್ರುತಿಯಲ್ಲಿ 'ಇಮಾಸ್ಸರ್ವಾಃ ಪ್ರಜಾಸ್ಸದಾಯತನಾಃ' ಎಂದು ಜಗತ್ತೆಲ್ಲವೂ ಪರಮಾತ್ಮಾಧೀನವೆಂದು ಹೇಳಿದೆ. ಈ ಪರಮಾತ್ಮಾಧೀನತೆಯನ್ನೇ 'ಶೇಷತ್ವ'ವೆಂದು ಹೇಳುತ್ತಾರೆ. 'ಶೇಷ' ಎಂದರೆ ಮತ್ತೊಬ್ಬರಿಗಾಗಿಯೇ ಇರುವುದೆಂದರ್ಥ. ಪರಮಾತ್ಮನ ಆನಂದಕ್ಕಾಗಿಯೇ ಸಕಲ ಚೇತನಾಚೇತನವೂ ಇರುತ್ತದೆ. ತನ್ನ ಆನಂದ ಆನುಷಂಗಿಕ ಎಂಬುದು ಭಕ್ತಿ ಮಾರ್ಗದವರ ನಿರ್ಣಯ. ತನ್ನ ಅಹಂಕಾರವನ್ನು ನಿರ್ಮೂಲನ ಮಾಡಿಕೊಳ್ಳುವುದಕ್ಕೆ ಈ ಶೇಷತ್ವಾನುಸಂಧಾನ ತುಂಬಾ ಸಹಕರಿಸುತ್ತದೆ. ಅಹಂಕಾರ ಕ್ಷಯವೇ ಮುಕ್ತಿಗೆ ಮೂಲ. ಆದುದರಿಂದ ಪರಮಾತ್ಮನ ಅಧೀನದಲ್ಲಿ ರಾಜಕುಮಾರನಂತೆ ಎಲ್ಲೆಯಿಲ್ಲದ ಆನಂದಾನುಭವವೇ ಮುಕ್ತಿ ಎಂಬ ಈ ಸಿದ್ಧಾಂತವೇ ಶ್ರುತ್ಯಾದಿ ಪ್ರಮಾಣಗಳಿಗೆ ಅನುಗುಣವಾಗಿದೆ.

ಇಲ್ಲಿಗೆ ಜೀವ ನಿರೂಪಣ ಕೊನೆಗೊಂಡಿತು.

# ಈಶ್ವರ ನಿರೂಪಣೆ

ಜಗತ್ಪತಿಯಾದ ಪರಮಾತ್ಮನು ಕೇವಲ ಶ್ರುತಿಯಿಂದ ಮಾತ್ರ ಅರಿಯಲ್ಪಡತಕ್ಕವನು. ವ್ಯಾಪ್ತಿಜ್ಞಾನ ಮುಂತಾದ ಗೊಂದಲಗಳಿಂದ ಕೂಡಿದವು ಅನುಮಾನಾದಿಗಳು; ಅವು ಈ ವಿಷಯದಲ್ಲಿ ಪ್ರಮಾಣವಾಗಲಾರವು, ಆ ಪರಮಾತ್ಮನು ಕ್ರೀಡೆ ಮತ್ತು ದಯೆ ಇವೆರಡಕ್ಕೂ ಪರವಶನಾಗಿ ಯಾವ ವೈಷಮ್ಯವೂ ಇಲ್ಲದೆ ಎಲ್ಲರಿಗೂ ಸಮನಾಗಿ ಜೀವಾತ್ಮರ ಕರ್ಮಾನುಗುಣವಾಗಿ ಪ್ರಪಂಚವನ್ನು ಸೃಷ್ಟಿಸುತ್ತಾನೆ.

ಸೃಷ್ಟಿಗೆ ಪ್ರೇರಕವಾಗಿರುವುದು ಕ್ರೀಡೆ ಮತ್ತು ದಯೆ. ಕ್ರೀಡೆಯಿಂದ ಪರಮಾತ್ಮನಿಗೆ ಆನಂದ. ದಯೆಯಿಂದ ಜೀವಾತ್ಮರಿಗೆ ಪುರುಷಾರ್ಥ ಸಿದ್ಧಿ. ಹೀಗೆ ತನ್ನ ಪ್ರಯೋಜನ ಇತರರ ಪ್ರಯೋಜನ ಇವೆರಡೂ ಸೃಷ್ಟಿಯಲ್ಲಿ ಅಡಗಿದೆ. ದಯೆಯಿಂದ ಸೃಷ್ಟಿಯಾದರೂ, ಜೀವಾತ್ಮರ ಕರ್ಮದ ತಾರತಮ್ಯದಿಂದ ಜಗತ್ತಿನಲ್ಲಿ

ತಾರತಮ್ಯವು ತಡೆಯಲಾಗದ್ದಾಗಿದೆ. ಜೀವಾತ್ಮರ ಹಿತಕ್ಕಾಗಿ ಪುಣ್ಯಕ್ಕೆ ತಕ್ಕ ಅನುಗ್ರಹವನ್ನೂ ಪಾಪಕ್ಕೆ ತಕ್ಕ ಶಿಕ್ಷೆಯನ್ನೂ ಕೊಡುವುದು ಅವಶ್ಯಕವಾಗುವುದರಿಂದ ಸ್ವತಃ ಪರಮಾತ್ಮನಿಗೆ ಪಕ್ಷಪಾತಾದಿ ಪ್ರಸಕ್ತಿಯಿಲ್ಲ.

ಜೀವರನ್ನು ಶಿಕ್ಷಿಸಲು ಹೊರಟು ನಿಗ್ರಹವನ್ನು ಮಾಡುವ ಪರಮಾತ್ಮನಿಗೆ ಕೋಪವೂ ಅನಿವಾರ್ಯ. ಹೀಗೆಯೇ ದುಃಖವೂ ಅನಿವಾರ್ಯವಾಗುವುದಲ್ಲವೇ ಎಂದರೆ, ಎಲ್ಲೆ ಇಲ್ಲದ ಶಕ್ತಿಯಿಂದ ಕೂಡಿದ ಆ ಪರಮಾತ್ಮನಿಗೆ ಕೋಪವೂ ಕೂಡ ಸುಖವಾಗಿ ತೀರಿಸಿಕೊಳ್ಳಲು ಶಕ್ಯವಾದ ಕಾರಣ ಆನಂದವನ್ನೇ ಉಂಟುಮಾಡುವುದಾಗಿದೆ. ಅಶಕ್ತರಿಗೆ ಮಾತ್ರವೇ ಕೋಪ ದುಃಖ ಹೇತುವಾಗುತ್ತದೆ. ಕ್ರೀಡಾದಿ ನಿಮಿತ್ತದಿಂದ ಸೃಷ್ಟಿಯನ್ನು ಮಾಡಿದರೆ ಪರಮಾತ್ಮನು ನಿತ್ಯತೃಪ್ತನು ಎಂದು ಹೇಗೆ ಹೇಳುವುದು ಎಂದರೆ, ಭಗವಂತ ಅವಾಪ್ತ ಸಮಸ್ತ ಕಾಮನು, ಅವನಿಗೆ ಆಗ ಬೇಕಾದದ್ದು ಏನೂ ಇಲ್ಲ ಎಂಬ ಶ್ರುತಿವಚನಗಳಿಗೆ, ಅವನ ಇಚ್ಛೆಗಳು ಎಲ್ಲವೂ ತಡೆ ಇಲ್ಲದೇ ಸಿದ್ಧವಾಗುವುದು ಎಂದರ್ಥವೇ ಹೊರತು ಅವನಿಗೆ ಇಚ್ಛೆಯೇ ಇಲ್ಲವೆಂದರ್ಥವಲ್ಲ. ಹಾಗಾದರೆ ಇಚ್ಛೆಎಂಬುದು ಕೊರತೆಯ ಸೂಚಕ. ಪರಮಾತ್ಮನಿಗೆ ಜಗತ್ತನ್ನು ಸೃಷ್ಟಿ ಮಾಡಬೇಕೆಂಬ ಇಚ್ಛೆ ಬಂದರೆ ಅವನಿಗೂ ಕೊರತೆಯನ್ನು ಒಪ್ಪಬೇಕಲ್ಲವೇ? ಅವನು ನಿತ್ಯ ಪರಿಪೂರ್ಣನು, ಎಲ್ಲಾ ಬಯಕೆಗಳನ್ನು ಹೊಂದಿರುವವನು ಎಂಬುದು ಅವನಿಗೆ ಹೇಗೆ ಒಪ್ಪುತ್ತದೆ ಎಂದರೆ ಕ್ರೀಡಾದಿಗಳು ಪೂರ್ಣತೆಯ ಸೂಚಕವೇ ಹೊರತು ಕೊರತೆಯ ಸೂಚಕವಲ್ಲ. ಕೊರಗುವವನು ಕ್ರೀಡಿಸಲಾರ, ಪರೋಪಕಾರವನ್ನೂ ಮಾಡಲಾರ. ಆದುದರಿಂದ ಕ್ರೀಡಾರ್ಥವಾಗಲಿ ಜೀವರ ಹಿತಾರ್ಥವಾಗಲಿ ಬರುವ ಇಚ್ಛಾದಿಗಳು ಪೂರ್ಣತೆಗೆ ಪೋಷಕವೇ ಹೊರತು ವಿರುದ್ಧವಾದವಲ್ಲ.

ಪರಮಾತ್ಮನು ಇದ್ದರೆ ಕಾಣಬೇಕಾಗಿತ್ತು ಎಂದರೆ, ಇದು ಯುಕ್ತವಲ್ಲ. ಏತಕ್ಕೆಂದರೆ ಲೋಕದಲ್ಲಿ ಯಾರಿಗಾದರೂ ತನ್ನ ಅರಿವು ಮಾತ್ರ ಸಹಜ ಸಿದ್ಧವಾಗಿದೆ. ಬೇರೆ ಆತ್ಮನು ಪ್ರತ್ಯಕ್ಷಸಿದ್ಧನಲ್ಲ.

ದೇಹವೇ ಆತ್ಮ ಎಂಬುದು ಚಾರ್ವಾಕರ ಮತ. ಚೈತನ್ಯ ವಿಶಿಷ್ಟ ಶರೀರವೇ ಆತ್ಮಾ ಎಂದು ಅವರು ಹೇಳಿದರೂ, ಎಲ್ಲರಿಗೂ ತನ್ನ ತನ್ನ ವಿಷಯದಲ್ಲಿ ಮಾತ್ರವೇ ಚೈತನ್ಯ ವಿಶಿಷ್ಟ ಆತ್ಮಾನುಭವ ಸಾಧ್ಯವೇ ಹೊರತು ಮತ್ತೊಬ್ಬರ ವಿಷಯದಲ್ಲಿ ಆ ಅನುಭವ ಬರಲು ಸಾಧ್ಯವಿಲ್ಲ. ಮತ್ತೊಬ್ಬನ ಶರೀರದಲ್ಲಿ ಹುಟ್ಟುವ ಚೈತನ್ಯ ನಮಗೆ ಪ್ರತ್ಯಕ್ಷವಾಗುತ್ತಿಲ್ಲವಾದುದರಿಂದ ಬೇರೆಯ ಆತ್ಮಾ ಪ್ರತ್ಯಕ್ಷವಲ್ಲ ಎಂದು ಅವರೂ ಒಪ್ಪಲೇಬೇಕು. ಅನುಮಾನ ಪ್ರಮಾಣವನ್ನು ಅವರು ಒಪ್ಪುವುದಿಲ್ಲ. ತನಗಿಂತಲೂ ಬೇರೆಯಾದ ಆತ್ಮನನ್ನು ಸ್ವೀಕರಿಸಿರುತ್ತಾರೆ.

ಕತ್ತಲಲ್ಲಿರುವ ವಸ್ತು ಕಾಣದಿದ್ದರೂ ಅಲ್ಲಿ ವಸ್ತುವೇ ಇಲ್ಲ ಎಂದು ಹೇಳಲು ಯಾರಿಗೂ ಸಾಧ್ಯವಾಗಲಾರದು. ಕಾಣಲು ಶಕ್ಯವಿದ್ದು ಕಾಣದಿದ್ದರೆ ಮಾತ್ರ ಅದರ ಅಭಾವ ಸಿದ್ಧಿಸುತ್ತದೆ. ಇದನ್ನೇ ಯೋಗ್ಯಾನುಪಲಬ್ಧಿ ಎಂದು ಶಾಸ್ತ್ರಕಾರರು ವ್ಯವಹರಿಸುತ್ತಾರೆ. ಪರಮಾತ್ಮನು ನಮಗಿಂತ ಬೇರೆಯಾದವನು. ಅವರವರಿಗೆ ಅವರವರ ಆತ್ಮ ಮಾತ್ರವೇ ಪ್ರತ್ಯಕ್ಷವಾಗಲು ಸಾಧ್ಯ. ಹೀಗೆ [1]ಯೋಗ್ಯಾನುಪಲಬ್ಧಿ ಇಲ್ಲದ್ದರಿಂದ ಕಾಣದಿರುವ ಮಾತ್ರಕ್ಕೆ ಪರಮಾತ್ಮನನ್ನು ಇಲ್ಲವೆಂದು ಹೇಳಲಾಗುವುದಿಲ್ಲ.

[2]**"ಅಪ್ರತ್ಯಕ್ಷಃ ಪರಾತ್ಮಾತದಿಹ ನ ಘಟತೇಧಾತುರಧ್ಯಕ್ಷಬಾಧಃ ಯೋಗ್ಯಾದೃಷ್ಟೇರಬಾಧಾತ್".**

ಎಂದು ತತ್ತ್ವಮುಕ್ತಾಕಲಾಪ.

**ಪರಾತ್ಮಾ ಅಪ್ರತ್ಯಕ್ಷಃ. ತತ್ ಯೋಗ್ಯಾದೃಷ್ಟೇಃ ಅಭಾವಾತ್ ಇಹಧಾತುಃ ಅಧ್ಯಕ್ಷಬಾಧಃ ನ ಘಟತೇ.**

**ಪರಾತ್ಮಾ**=ಮತ್ತೊಬ್ಬರ ಆತ್ಮವು, **ಅಪ್ರತ್ಯಕ್ಷಃ**=ಕಣ್ಣಿಗೆ ಕಾಣುವುದಿಲ್ಲ, **ತತ್**=ಆದಕಾರಣದಿಂದ, **ಯೋಗ್ಯಾದೃಷ್ಟೇಃ**=ಕಣ್ಣಿಗೆ ಕಾಣುವ ಯೋಗ್ಯತೆ ಇದ್ದು ಕಾಣದೇ ಇರುವಿಕೆ ರೂಪವಾದ ಯೋಗ್ಯಾನುಪಲಬ್ಧಿಯ **ಅಭಾವಾತ್**=ಇಲ್ಲದಿರುವುದರಿಂದ, **ಇಹ**=ಇಲ್ಲಿ, **ಧಾತುಃ**=ಪರಮಾತ್ಮನಿಗೆ, **ಅಧ್ಯಕ್ಷಬಾಧಃ**=ಪ್ರತ್ಯಕ್ಷವಾಗುವುದಕ್ಕೆ ತೊಂದರೆಯು, **ನಘಟತೇ**=ಕೂಡುವುದಿಲ್ಲ.

ಎಂದು ಅನ್ವಯ.

ಆ ಪರಮಾತ್ಮನು ಶರೀರದ ಸಹಕಾರವಿಲ್ಲದೇ ಸಂಕಲ್ಪಮಾತ್ರದಿಂದಲೇ ಎಲ್ಲವನ್ನೂ ಸೃಷ್ಟಿಸಬಲ್ಲನೆಂದು ಶ್ರುತಿಗಳಿಂದ ತಿಳಿದು ಬರುವುದರಿಂದ, ದೇಹವಿಲ್ಲದ ಕಾರಣ ಅವನು ಜಗತ್ಕರ್ತನಾಗಲಾರನೆಂಬ ವಾದವೂ ಸರಿಯಾದುದಲ್ಲ. ವೇದಕ್ಕೆ ವಿರುದ್ಧವಾದ ಅನುಮಾನವಾಗಲಿ, ಪೌರುಷೇಯ ವಾಕ್ಯವಾಗಲಿ ಉಳಿಯಲು ಸಾಧ್ಯವೇ ಇಲ್ಲ. ಆದುದರಿಂದ ಇಂತಹ ಅನುಮಾನಾದಿಗಳಿಂದ ಈಶ್ವರನನ್ನು, ನಿರಾಕರಿಸಲು ಸಾಧ್ಯವಿಲ್ಲ. 'ಸರ್ವೇವೇದಾಯತ್ಪದ ಮಾಮನನ್ತಿ' ಇತ್ಯಾದಿ ಉಪನಿಷತ್ತುಗಳು ಬ್ರಹ್ಮ ಉಪನಿಷತ್ಪ್ರತಿಪಾದ್ಯ, ಜ್ಞಾನಗೋಚರವೆಂದು ಸ್ಪಷ್ಟವಾಗಿ

1. **ಯೋಗ್ಯಾನುಪಲಬ್ಧಿಃ—ಭಾವರೂಪಾವಸ್ಥಾನ್ತರೋಪಲಬ್ಧಿಃ। ಯತ್ರ ಯತ್ಸಂಬನ್ಧಸತ್ತ್ವಂ ತತ್ರ ತತ್ಸಂಬನ್ಧವತ್ತಯಾ ತದುಪಲಂಭಾವಶ್ಯಕತ್ವಂ, ತತ್ರತ್ಯಾನುಪಲಬ್ಧಿಃ ॥**

2. ತತ್ತ್ವಮುಕ್ತಾಕಲಾಪ ೧೪೭.

ಹೇಳಿರುವುದರಿಂದ ಬ್ರಹ್ಮ ಸರ್ವಪ್ರಮಾಣಗಳಿಗೆ ಅಗೋಚರವಾದುದಲ್ಲ ಮತ್ತು ಅವೇದ್ಯವಾದದ್ದೂ ಅಲ್ಲ, ವೇದ್ಯವಾದದ್ದೇ.

[1]ಯತೋವಾಚೋ ನಿವರ್ತನ್ತೇ, ಅಪ್ರಾಪ್ಯಮನಸಾಸಹ ।

ಶಬ್ದ ಮತ್ತು ಮನಸ್ಸಿಗೆ ಬ್ರಹ್ಮಗೋಚರವಲ್ಲ" ಎಂದು ಹೇಳಿರುವುದೂ ಸಹ, ಅನಂತವಾದ ಬ್ರಹ್ಮವನ್ನು ಪೂರ್ಣವಾಗಿ ಶಬ್ದದಿಂದ ಹೇಳಲೂ ಸಾಧ್ಯವಿಲ್ಲ, ನಮ್ಮ ಮನಸ್ಸಿನಿಂದ ಪೂರ್ಣವಾಗಿ ತಿಳಿಯಲೂ ಸಾಧ್ಯವಿಲ್ಲ ಎಂಬ ಅರ್ಥದಲ್ಲಿ ಬಂದಿರುವುದೇ ಹೊರತು, ಬ್ರಹ್ಮಶಬ್ದ ವೇದ್ಯವೇ ಅಲ್ಲ, ಜ್ಞಾನಗೋಚರವೇ ಅಲ್ಲ ಎಂಬ ಅರ್ಥದಲ್ಲಿ ಬಂದಿಲ್ಲ.

ಸರ್ವಕ್ಕೂ ಈಶ್ವರನಾಗಿರುವಿಕೆ, ಎಲ್ಲಕ್ಕೂ ಶೇಷಿಯಾಗಿರುವಿಕೆ, ಎಲ್ಲವನ್ನೂ ವ್ಯಾಪರಿಸುವ ಸ್ವಭಾವ ಇರಲಾಗಿ ಚೇತನಭಾವ ಇರುವಿಕೆ, ಎಲ್ಲಾ ವಿಧವಾದ ಕರ್ಮಗಳಿಂದ ಪೂಜಿಸಲ್ಪಡುವಿಕೆ, ಎಲ್ಲಾ ಕರ್ಮಗಳಿಗೂ ಫಲವನ್ನು ಕೊಡುವಿಕೆ, ಎಲ್ಲಕ್ಕೂ ಆಧಾರವಾಗಿರುವಿಕೆ, ಎಲ್ಲಾ ಕಾರ್ಯವನ್ನೂ ಉಂಟುಮಾಡುವಿಕೆ, ಎಲ್ಲಾ ಶಬ್ದಗಳಿಂದಲೂ ಹೇಳಲ್ಪಡುವಿಕೆ, ಎಲ್ಲಾ ಜ್ಞಾನಕ್ಕೂ ವಿಷಯವಾಗುವಿಕೆ, ಇವೆಲ್ಲಾ ಈಶ್ವರ ಲಕ್ಷಣಗಳು. ಅಲ್ಲದೆ ತಾನು ಮತ್ತು ತನ್ನ ಧರ್ಮಭೂತಜ್ಞಾನ ಈ ಎರಡು ದ್ರವ್ಯಗಳನ್ನು ಬಿಟ್ಟು ಉಳಿದ ಸಮಸ್ತ ದ್ರವ್ಯಗಳೂ ಯಾವನೊಬ್ಬನಿಗೆ ಶರೀರಗಳಾಗಿ ಇರುವುವೋ ಅವನು ಈಶ್ವರತತ್ತ್ವವೆನಿಸಿಕೊಳ್ಳುವನು ; ತನ್ನನ್ನು ಕುರಿತು ತಾನು ಶರೀರವೆನಿಸಿಕೊಳ್ಳಲಾರ. ಹಾಗಾದರೆ ಈ ಲಕ್ಷಣಕ್ಕೆ ಈಶ್ವರನಲ್ಲಿ ಅಸಂಭವ ದೋಷವು ಪ್ರಸಕ್ತವಾಗುವುದು, ಅದನ್ನು ತಪ್ಪಿಸುವುದಕ್ಕಾಗಿ 'ತನ್ನನ್ನು ಬಿಟ್ಟು' ಎಂಬ ಪದವು ಲಕ್ಷಣದಲ್ಲಿ ಸೇರಿಸಲ್ಪಟ್ಟಿರುವುದು. ಆದುದರಿಂದಲೇ ಈಶ್ವರನು ಈಶ್ವರನಿಗೆ ಶರೀರವಾಗದಿದ್ದರೂ ಈಶ್ವರನಿಗಿಂತ ಬೇರೆಯಾದ ಸಮಸ್ತ ದ್ರವ್ಯಗಳೂ ಈಶ್ವರನಿಗೆ ಶರೀರವಾಗಿವೆ. ಆದುದರಿಂದ ಈ ಈಶ್ವರ ಲಕ್ಷಣ ಹೊಂದುತ್ತದೆ.

ಅದರಂತೆಯೇ ತನ್ನ ಧರ್ಮಭೂತಜ್ಞಾನವು ತನ್ನನ್ನು ಕುರಿತು ಶರೀರವೆನಿಸಿಕೊಳ್ಳಲಾರದು. ಹಾಗಾದರೆ ಈ ಲಕ್ಷಣ ಅಸಂಭವವಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗಿ 'ತನ್ನ ಧರ್ಮಭೂತಜ್ಞಾನವನ್ನು ಬಿಟ್ಟು' ಎಂಬ ಪದವು ಲಕ್ಷಣದಲ್ಲಿ ಸೇರಿಸಲ್ಪಟ್ಟಿರುವುದು. ಆದುದರಿಂದಲೇ ಈಶ್ವರನ ಧರ್ಮಭೂತಜ್ಞಾನವು ಈಶ್ವರನಿಗೆ ಶರೀರವಾಗದಿದ್ದರೂ, ಈಶ್ವರಧರ್ಮಭೂತಜ್ಞಾನ ಭಿನ್ನವಾದ ಸಮಸ್ತ ದ್ರವ್ಯಗಳೂ ಈಶ್ವರನಿಗೆ ಶರೀರವಾಗಿವೆಯಾದುದರಿಂದ ಲಕ್ಷಣಕ್ಕೆ ಚ್ಯುತಿಯಿಲ್ಲ. ಈಶ್ವರ

1. ತೈತ್ತಿರೀಯ ಉಪನಿಷತ್ತು ೨೮,

ಧರ್ಮಭೂತಜ್ಞಾನ ದ್ರವ್ಯವೇನೋ ಅಹುದು. ಆದರೂ ಅದಕ್ಕೆ ಅವನನ್ನು ಕುರಿತು ಶರೀರದಭಾವ ಪಡೆಯಲಾಗುವುದಿಲ್ಲ. ಚೈತನ್ಯ ವಿಶಿಷ್ಟಧಾರ್ಯತ್ವಾದಿಗಳಿಗೇ ಶರೀರ ಲಕ್ಷಣವಾಗಿರುವಿಕೆಯಾದುದರಿಂದ ಚೈತನ್ಯದಲ್ಲಿ ತದ್ವಿಶಿಷ್ಟಧಾರ್ಯತ್ವವಿಲ್ಲ.

ಯಾವನೊಬ್ಬನ ಸಂಕಲ್ಪವು ತಡೆಯಲ್ಪಡದದ್ದಾಗುವುದಕ್ಕೆ ತನ್ನ ಇಚ್ಛೆಯೇ ಕಾರಣವಾಗಿರುವುದೋ ಅವನು ಈಶ್ವರತತ್ತ್ವವೆನಿಸಿಕೊಳ್ಳುವನು. ಈ ಲಕ್ಷಣ ದಲ್ಲಿ 'ತನ್ನ' ಎಂಬ ಪದವನ್ನು ಸೇರಿಸದಿದ್ದರೆ ಮೋಕ್ಷಾವಸ್ಥೆಯಲ್ಲಿ ಜೀವನ ಸಂಕಲ್ಪವು ಅಪ್ರತಿಹತವಾಗುವುದಕ್ಕೆ ಅಂದರೆ ತಡೆಯಲ್ಪಡದಾಗುವುದಕ್ಕೆ ಈಶ್ವರೇಚ್ಛೆ ಕಾರಣವಾಗಿ ಇರುವುದರಿಂದ ಈ ಲಕ್ಷಣವು ಜೀವನಲ್ಲಿ ಅತಿ ಪ್ರಸಕ್ತವಾಗು ವುದು, ಅದನ್ನು ತಪ್ಪಿಸುವುದಕ್ಕಾಗಿ ಲಕ್ಷಣದಲ್ಲಿ 'ತನ್ನ' ಎಂಬ ಪದವು ಸೇರಿ ಸಲ್ಪಟ್ಟಿರುವುದು. ಮೋಕ್ಷಾವಸ್ಥೆಯಲ್ಲಿ ಜೀವನ ಸಂಕಲ್ಪವು ಅಪ್ರತಿಹತವಾಗು ವುದಕ್ಕೆ ಈಶ್ವರೇಚ್ಛೆ ಕಾರಣವಾಗಿದ್ದರೂ ತನ್ನ ಇಚ್ಛೆ ಕಾರಣವಾಗಲಿಲ್ಲವಾದುದರಿಂದ ಲಕ್ಷಣಕ್ಕೆ ಅತಿ ಪ್ರಸಂಗದೋಷವಿಲ್ಲ. ಹಾಗೆಯೇ ಯಾವನಿಗೆ ಅಪಹತಪಾಪ್ಮತ್ವವು ಅಂದರೆ ಪಾಪಸಂಬಂಧರಾಹಿತ್ಯವು ತನ್ನ ಇಚ್ಛೆಯಿಂದಲೇ ಉಂಟಾಗಿರುವುದೋ ಅವನು ಈಶ್ವರತತ್ತ್ವವೆನಿಸಿಕೊಳ್ಳುವನು. ಮೋಕ್ಷಾವಸ್ಥೆಯಲ್ಲಿ ಜೀವನಿಗೆ ಉಂಟಾಗುವ ಪಾಪ ಸಂಬಂಧರಾಹಿತ್ಯವು ಈಶ್ವರೇಚ್ಛಾಧೀನವಾಗಿ ಇದ್ದರೂ ತನ್ನ ಇಚ್ಛೆಗೆ ಅಧೀನವಲ್ಲದ ಕಾರಣ ಜೀವನಲ್ಲಿ ಅತಿ ಪ್ರಸಂಗವಿಲ್ಲ.

ಪರಮಾತ್ಮನು ಶಾಶ್ವತವಾದ ಬ್ರಹ್ಮಾನಂದವನ್ನು ಪಡೆಯಬೇಕೆಂದು ಅಪೇಕ್ಷಿಸುವ ಮುಮುಕ್ಷು ಚೇತನರಿಗೆ ಆ ರೀತಿಯಾದ ಫಲವನ್ನು ಪಡೆಯಲು ಉಪಾಸಿಸಲ್ಪಡುತ್ತಾನೆ ಮತ್ತು ನಿತ್ಯ ಕೈಂಕರ್ಯವನ್ನು ಮಾಡಲು ಪರಮಪ್ರಾಪ್ಯನೂ ಆಗಿರುತ್ತಾನೆ. ಅವನೇ ಶ್ರಿಯಃಪತಿಯಾದ ನಾರಾಯಣ.

ಈ ಈಶ್ವರನು ಸೂಕ್ಷ್ಮವಾದ ಚಿತ್ತು ಅಚಿತ್ತು ಇವುಗಳಿಂದ ಕೂಡಿದ ವೇಷ ದಿಂದ—ರೂಪದಿಂದ ಜಗತ್ತಿಗೆ ಉಪಾದಾನ ಕಾರಣವಾಗುತ್ತಾನೆ. ಸಂಕಲ್ಪ ವಿಶಿಷ್ಟವೇಷದಿಂದ ಜಗತ್ತಿಗೆ ನಿಮಿತ್ತಕಾರಣನಾಗುತ್ತಾನೆ. ಕಾಲಾದಿಗಳಿಗೆ ಅಂತರ್ಯಾಮಿ ವೇಷದಿಂದ ಸಹಕಾರಿ ಕಾರಣವೂ ಆಗುತ್ತಾನೆ.

ಕಾರ್ಯರೂಪದಿಂದ ವಿಕಾರವಾಗಲು ತಕ್ಕ ವಸ್ತುವು ಉಪಾದಾನ ಕಾರಣ. ಮಣ್ಣು ಮಡಿಕೆಯ ಆಕಾರವನ್ನು ಹೊಂದುತ್ತದೆ. ಆ ಮಣ್ಣು ಅದಕ್ಕೆ ಉಪಾ ದಾನ ಕಾರಣವಾಯಿತು. ಮಣ್ಣನ್ನು ಮಡಿಕೆಯಾಗುವಂತೆ ಮಾಡುವವನು—ಆ ಪರಿಣಾಮವನ್ನು ಉಂಟುಮಾಡುವವನು ನಿಮಿತ್ತಕಾರಣ. ಕುಂಬಾರನುತಾನೆ ಮಣ್ಣನ್ನು ಮಡಿಕೆಯ ರೂಪಕ್ಕೆ ತರುವವನು. ಆದುದರಿಂದ ಅವನು ನಿಮಿತ್ತ

ಕಾರಣನಾದನು. ಮಣ್ಣನ್ನು ಮಡಿಕೆಯಾಗಿ ಮಾಡಲು ಚಕ್ರದಲ್ಲಿ ಅದನ್ನು ಇಟ್ಟು ಕೋಲಿನಿಂದ ಕುಂಬಾರನು ತಿರುಗಿಸುತ್ತಾನೆ. ಆ ಚಕ್ರವು ತಿರುಗುತ್ತಾ ತಿರುಗುತ್ತಾ ಇರಲಾಗಿ ಕುಂಬಾರನು ಮಣ್ಣನ್ನು ಮಡಿಕೆಯಾಗಿ ಮಾಡುತ್ತಾನೆ. ಆ ದಂಡ-ಕೋಲು, ಚಕ್ರ ಈ ಸಲಕರಣೆಗಳು ಸಹಕಾರಿ ಕಾರಣಗಳು. ಈ ಕಾರಣಗಳ ಲಕ್ಷಣಗಳಿಂದ ಕೂಡಿರುವುದರಿಂದ ಜಗತ್ತಿಗೆ ಕಾರಣವಾಗುವಿಕೆ ನಾರಾಯಣನಿಗೇ ಉಂಟಾಗುತ್ತದೆ.

ಬ್ರಹ್ಮ ರುದ್ರ ಈಶ್ವರ—ಈ ತ್ರಿಮೂರ್ತಿಗಳ ಸತ್ತ್ವಾದಿಗುಣಗಳ ಉನ್ಮೇಷದಿಂದ ಬೇರೆಬೇರೆಯಾದ ಕಲ್ಪಭೇದಗಳಲ್ಲಿ ಸುತ್ತುವ ಚಕ್ರದ ಅರಗಳಂತೆ ಹೆಚ್ಚು ಕಡಿಮೆಯಾದ ಐಶ್ವರ್ಯವುಳ್ಳವರು ಆಗುತ್ತಾರೆ ಎಂಬುದಾಗಿ ಕೆಲವರು ಕಲ್ಪನೆ ಮಾಡುತ್ತಾರೆ. ಅದು ಯುಕ್ತವಲ್ಲ.

ನಾರಾಯಣನೊಬ್ಬನೇ ಪರಬ್ರಹ್ಮ; ಇವನಿಗೆ ಸಮನಾಗಿ ಇರುವವರೂ ಇಲ್ಲ. ಹೆಚ್ಚಿನವರೂ ಇಲ್ಲ. 'ಏಕಮೇವಾದ್ವಿತೀಯಮ್=ಒಂದೇ ಎರಡನೆಯದಿಲ್ಲ', 'ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ=ಇವನಿಗೆ ಸಮನಾಗಿರುವವನೂ, ಹೆಚ್ಚಾಗಿರುವವನೂ ಕಾಣಲ್ಪಡುವುದಿಲ್ಲ'. 'ಪ್ರಶಾಸಿತಾರಂ ಸರ್ವೇಷಾಮ್=ಎಲ್ಲರನ್ನೂ ನಿಯಮಿಸುವವನು ಎಲ್ಲಕ್ಕೂ ನಿಯಾಮಕನು' ಇವೇ ಮೊದಲಾದ ಶ್ರುತಿಗಳು ಈ ಅರ್ಥವನ್ನು ದೃಢಪಡಿಸುತ್ತವೆ.

ಹೀಗೆ ಹೇಳಿದ್ದರಿಂದ, ಮುಕ್ತರಿಗೂ 'ಸ ಸ್ವರಾಟ್ ಭವತಿ=ಸ್ವಾರಾಜ್ಯವುಳ್ಳವನಾಗುತ್ತಾನೆ'. 'ಪರಮಂಸಾಮ್ಯಮುಪೈತಿ=ಶ್ರೇಷ್ಠವಾದ ಸಾಮ್ಯವನ್ನು—ಸಮಾನವಾದ ಭಾವವನ್ನು ಹೊಂದುತ್ತಾನೆ. ಇವೇ ಮೊದಲಾಗಿ ಸ್ವಾರಾಜ್ಯ ಹೋಲಿಕೆ ಮುಂತಾದವನ್ನು ಶ್ರುತಿ ಹೇಳುವುದರಿಂದ ಅವರೂ ಈಶ್ವರರು ಎಂಬ ಸಂದೇಹವು ನೀಗಲ್ಪಟ್ಟಿತು.

> ಸಾಯುಜ್ಯಂ ಪ್ರತಿಪನ್ನಾಯೇ ತೀವ್ರ ಭಕ್ತಾಸ್ತಪಸ್ವಿನಃ ।
> ಕಿಙ್ಕರಾ ಮಮ ತೇ ನಿತ್ಯಂ ಭವನ್ತಿ ನಿರುಪದ್ರವಾಃ ॥

ಸಾಯುಜ್ಯವನ್ನು ಪಡೆದ, ಹೆಚ್ಚಾದ ಭಕ್ತಿಯಿಂದ ಕೂಡಿದವರಾಗಿ ಪರಮೋಕಾನ್ತಿಗಳಾದ ತಪಸ್ವಿಗಳು ನನಗೆ ಶಾಶ್ವತವಾದ ಸೇವಕರಾಗುತ್ತಾರೆ. ಯಾವ ವಿಧವಾದ ತೊಂದರೆಯೂ ಇಲ್ಲದೆ, 'ಪರಾತ್ಪರಂ ಪುರುಷಮುಪೈತಿ ದಿವ್ಯಮ್=ಪರಕ್ಕಿಂತಲೂ ಶ್ರೇಷ್ಠರಾದ, ಬ್ರಹ್ಮರುದ್ರಾದಿಗಳಿಗಿಂತ ಪರನಾದ—ಬೇರೆಯಾದ ದಿವ್ಯವಾದ ಪುರುಷನನ್ನು ಹೊಂದುತ್ತಾನೆ'. ಇವೇ ಮೊದಲಾದ ಶ್ರುತಿಗಳೂ ಮುಕ್ತರು ಈಶ್ವರರಲ್ಲ ಎಂಬುದನ್ನು ದೃಢಪಡಿಸುತ್ತವೆ.

ದೇಶ ಕಾಲ ವಸ್ತುಗಳ ಪರಿಚ್ಛೇದವಿಲ್ಲದ- -ಅಳತೆ ಇಲ್ಲದ, ಆ ಪರಬ್ರಹ್ಮ ಎಲ್ಲಕ್ಕೂ ಆತ್ಮವಾಗಿದೆ, ಬಹಳ ದೊಡ್ಡದಾಗಿದೆ. ತನ್ನನ್ನು ಆಶ್ರಯಿಸಿದವರನ್ನೂ ಬೃಹತ್ತಾಗಿ—ದೊಡ್ಡಸ್ತಿಕೆ ಉಳ್ಳದ್ದನ್ನಾಗಿ ಮಾಡುತ್ತದೆ. ದೇಶದ ಪರಿಚ್ಛೇದರಾಹಿತ್ಯವೆಂದರೆ ಎಲ್ಲ ದೇಶದಲ್ಲೂ ಇರುವಿಕೆ. ಕಾಲಾಪರಿಚ್ಛೇದವೆಂದರೆ ಎಲ್ಲಾ ಕಾಲದಲ್ಲೂ ಇರುವಿಕೆ. ವಸ್ತುವಿನ ಪರಿಚ್ಛೇದ ಇಲ್ಲದಿರುವಿಕೆಯೆಂದರೆ ಎಲ್ಲಾ ವಸ್ತುಗಳಲ್ಲೂ ಸಮಾನಾಧಿಕರಣವಾಗಿರಲು ಯೋಗ್ಯತೆ ಇರುವಿಕೆ. ಅದಿಲ್ಲದೆ ಇದ್ದರೆ ಎಲ್ಲಕ್ಕೂ ಆತ್ಮವಾಗಿರುವಿಕೆಯು ಉಂಟಾಗಲಾರದು.

ಯಾವುದಕ್ಕೆ ಎಲ್ಲಕ್ಕೂ ಆತ್ಮವಾಗಿರುವಿಕೆಯ ಸ್ವಭಾವವುಂಟೋ ಅದಕ್ಕೆ ಸರ್ವಾಧಾರತ್ವ, ಸರ್ವಶೇಷಿತ್ವ, ಸರ್ವನಿಯನ್ತೃತ್ವರೂಪವಾದ ಎಲ್ಲಕ್ಕೂ ಮಿಗಿಲಾದ ಶ್ರೇಷ್ಠವಾದ ಗುಣವಿರುವಿಕೆಯು ಉಂಟಾಗುವುದರಿಂದ 'ಬೃಹನ್ತೋಹ್ಯಸ್ಮಿನ್ ಗುಣಾಃ' ಎಂಬ ಶ್ರುತಿಯಿಂದ ಹೇಳಲ್ಪಡುವ ಗುಣವಿದೆ. ಅದೇ ಬ್ರಹ್ಮಶಬ್ದದ ಪ್ರವೃತ್ತಿನಿಮಿತ್ತ.

'ಅಗ್ನಿಸ್ಸರ್ವಾದೇವತಾಃ=ಅಗ್ನಿಯು ಎಲ್ಲಾ ದೇವತೆಗಳು', 'ಆಪೋವಾ ಇದಗ್ಂಸರ್ವಂ=ಇದೆಲ್ಲವು ಅಪ್ಪು', 'ಬ್ರಾಹ್ಮಣೋವೈಸರ್ವಾದೇವತಾಃ=ಬ್ರಾಹ್ಮಣನು ಎಲ್ಲಾ ದೇವತೆಗಳು', 'ನಕಿರಿನ್ದ್ರತ್ವದುತ್ತರಃ=ಓ ಇನ್ದ್ರ! ನಿನಗಿಂತ ಶ್ರೇಷ್ಠರಿಲ್ಲ' ಎಂಬ ಈ ಎಲ್ಲಾ ವಾಕ್ಯಗಳೂ ಬೇರೆಬೇರೆಯಾದವಕ್ಕೆ ಶ್ರೈಷ್ಠ್ಯವನ್ನು ಹೇಳುತ್ತವೆಯಲ್ಲಾ ಎಂದರೆ ಆ ಆ ಕರ್ಮಗಳ ಪ್ರಾಶಸ್ತ್ಯವನ್ನು ಹೇಳುವುದಕ್ಕಾಗಿ ಆ ಆ ದೇವತೆಗಳ ಕೊಂಡಾಟ ಎಂದು ತಿಳಿಯಬೇಕು. ಅವರುಗಳಿಗೆ ಕಾರಣತ್ವವನ್ನು ಹೇಳಿದರೆ, ಕೊನೆ ಇಲ್ಲದಿರುವಿಕೆ ಉಳ್ಳ ಬ್ರಹ್ಮತ್ವ ಸಿದ್ಧಿ ಉಂಟಾಗುವುದಿಲ್ಲ. ಹಾಗಾದರೆ ನಾರಾಯಣನ ಈ ಮೂರು ವಿಧವಾದ ಕಾರಣಗಳ ಪರ್ಯವಸಾನ-ಮುಗಿಯುವಿಕೆ ಹೇಗೆ ? ಎಂದರೆ, ನ್ಯಾಯದಿಂದ ಕೂಡಿದ ವೇದಾಂತವಾಕ್ಯ ವಿಚಾರದಿಂದ ಅದು ತಿಳಿದುಬರುತ್ತದೆ. ಅದು ಹೇಗೆಂದರೆ, ಮೊದಲು ಪ್ರಕೃತಿಗೆ ಜಗತ್ತಿಗೆ ಕಾರಣವಾಗುವಿಕೆ ಕೂಡುವುದಿಲ್ಲ. ಏತಕ್ಕೆಂದರೆ ಅದಕ್ಕೆ [1]ಈಕ್ಷಣಾದಿಗಳು ನೋಡುವಿಕೆ ಕೂಡುವುದಿಲ್ಲ—ಅಚೇತನವಾದುದರಿಂದ ಕೂಡುವುದಿಲ್ಲ.

ಛಾಂದೋಗ್ಯದಲ್ಲಾದರೋ ಸತ್ ಆಕಾಶ ಪ್ರಾಣಶಬ್ದವಾಚ್ಯವಾದವುಗಳಿಗೆ ಜಗತ್ಕಾರಣತ್ವ ತೋರುತ್ತದೆ. ವಾಜಸನೇಯಕದಲ್ಲಿ ಬ್ರಹ್ಮಶಬ್ದವಾಚ್ಯವಾದುದಕ್ಕೆ

1. ಬಹುಸ್ಯಾಂ ಪ್ರಜಾಯೇಯ—ಸ ಈಕ್ಷತಲೋಕಾನ್ನು ಸೃಜಾಃ । ಇವೇ ಮೊದಲಾದ ಶ್ರುತಿಗಳು.

ಜಗತ್ಕಾರಣತ್ವವು ತೋರುತ್ತದೆ. [1]ಸರ್ವಶಾಖಾಪ್ರತ್ಯಯನ್ಯಾಯದಿಂದ ಕಾರಣ ವಾಕ್ಯಗಳಿಗೆ ಏಕವಿಷಯತ್ವವನ್ನು ಪ್ರತಿಪಾದಿಸಬೇಕು. ಹೀಗಿರುವಾಗ ಛಾಗಪಶು [2]ನ್ಯಾಯದಿಂದ ಸಾಮಾನ್ಯವಾಚಕಗಳಾದ ಸದಾದಿಶಬ್ದಗಳಿಗೆ ವಿಶೇಷವಾದ ಬ್ರಹ್ಮ ದಲ್ಲಿ ಪರ್ಯವಸಾನವನ್ನು ಹೇಳುವುದು ಯುಕ್ತವಾಗಿದೆ.

"ಏಕಃಶಾಸ್ತಾ ನ ದ್ವಿತೀಯೋಽಸ್ತಿಕಶ್ಚಿತ್ = ಕಟ್ಟಳೆಮಾಡುವವನೊಬ್ಬನೇ ಎರಡನೆಯವನಿಲ್ಲ", "ದ್ಯಾವಾಪೃಥಿವೀ ಜನಯುನ್ ದೇವಏಕಃ = ಅಂತರಿಕ್ಷ ಭೂಮಿ ಇವನ್ನು ಸೃಷ್ಟಿಸುತ್ತಾ ದೇವನೊಬ್ಬನೇ" ಇವೇ ಮೊದಲಾದ ಶ್ರುತಿಗಳಿಂದಲೂ ಮತ್ತು ಏಕವಿಜ್ಞಾನದಿಂದ ಸರ್ವವಿಜ್ಞಾನ ಶ್ರವಣದಿಂದ ಒಂದನ್ನರಿತರೆ ಎಲ್ಲವನ್ನೂ ಅರಿತಂತೆ ಎಂಬ ವಾಕ್ಯಗಳಿಂದಲೂ ಕೂಡ ಬ್ರಹ್ಮವೊಂದೇ ಎಂದು ತಿಳಿದುಬರುತ್ತದೆ.

ಈ ರೀತಿ ಹೇಳಲ್ಪಟ್ಟ ನ್ಯಾಯದಿಂದ ಬ್ರಹ್ಮಶಬ್ದಕ್ಕೆ ತೈತ್ತರೀಯಕದಲ್ಲಿ ಹೇಳಲ್ಪಟ್ಟ ಆತ್ಮಶಬ್ದದಿಂದ ಹೇಳಲ್ಪಡುವುದರಲ್ಲಿ ಪರ್ಯವಸಾನವಾಗುವುದರಿಂದ ಆತ್ಮಶಬ್ದವಾಚ್ಯನಾವನು ? ಎಂಬುದನ್ನು ಅರಿಯಲು ಅಪೇಕ್ಷೆಯುಂಟಾದರೆ ಶ್ರುತಿ ಪ್ರಸಿದ್ಧನಾದ ಇಂದ್ರನೋ, ಹಾಗೆಯೇ ಪ್ರಸಿದ್ಧನಾದ ಅಗ್ನಿಯೋ, ಉಪಾಸಿಸಲು ತಕ್ಕವನೆಂದು ಪ್ರಸಿದ್ಧನಾದ ಸೂರ್ಯನೋ, ಕಾರಣತ್ವದಿಂದ ಹೇಳಲ್ಪಟ್ಟ ಚಂದ್ರನೋ, ಅಪೇಕ್ಷಿಸಲ್ಪಟ್ಟದ್ದನ್ನು ಕೊಡುವವನೆಂದು ಹೇಳಲ್ಪಟ್ಟ ಕುಬೇರನೋ ಅಥವಾ ಯಮನೋ ಅಥವಾ ವರುಣನೋ ಎಂದು ಸಂಶಯವುಂಟಾದರೆ ಇವರು ಗಳಿಗೆ ಕರ್ಮಕ್ಕೆ ಅಧೀನವಾಗುವಿಕೆ-ಅಳತೆಗೆ ಸಿಕ್ಕುವ ಐಶ್ವರ್ಯವಿರುವಿಕೆ, ಸಂಹರಿಸಲ್ಪ ಡುವಿಕೆ ಇವುಗಳೆಲ್ಲಾ ಹೇಳಲ್ಪಡುವುದರಿಂದ ಇವರು ಜಗತ್ತಿಗೆ ಕಾರಣಭೂತರಾಗು ವುದಿಲ್ಲ.

ಆದರೆ **ಶ್ವೇತಾಶ್ವತರದಲ್ಲಿ** ಶಿವನಿಗೆ ಕಾರಣತ್ವವು ತೋರುತ್ತದೆ. ಹಾಗೆ **ಅಥರ್ವಶಿಖೆಯಲ್ಲಿ** ಶಂಭು ಶಬ್ದದಿಂದ ಹೇಳಲ್ಪಡುವವನಿಗೆ ಧ್ಯೇಯತ್ವ ಮತ್ತು ಕಾರಣತ್ವವು ತೋರುತ್ತದೆ. ಹಾಗೆ, **ಅಥರ್ವಶಿರಸ್ಸಿನಲ್ಲಿ** ರುದ್ರಶಬ್ದದಿಂದ ಹೇಳಲ್ಪಡುವವನಿಗೆ ಸರ್ವಾತ್ಮಕತ್ವವು ಹೇಳಲ್ಪಡುತ್ತದೆ.

1. ಹೇಗೆ **"ಏಕಂವಾ ಸಂಯೋಗ ರೂಪಚೋದನಾಖ್ಯಾ ವಿಶೇಷಾತ್"** ಎಂಬ ನ್ಯಾಯ ದಿಂದ ಫಲಸಂಯೋಗ, ರೂಪ, ಚೋದನ ಸಮಾಖ್ಯಾರೂಪಗಳಾದ ಧರ್ಮವಿಶೇಷಗಳಿಂದ ವಿದ್ಯಾ ಕರ್ಮ ಲಕ್ಷಣಧರ್ಮಗಳ ಒಂದಾಗುವಿಕೆಯೋ, ಹಾಗೆ ಬಹಳವಾದ ಧರ್ಮಗಳಿಗೆ ಪ್ರತ್ಯಭಿಜ್ಞೆಯ ಐಕ್ಯವು ತೋರುವುದರಿಂದ ಕಾರಣರೂಪಧರ್ಮೈಕ್ಯವು.

2. **'ಪಶುನಾಯಜೇತ** = ಪಶುವನ್ನು ಕೊಂದು ಯಾಗಮಾಡಬೇಕು' ಎಂಬ ವಿಧಿಗೆ ಅನುಸಾರವಾಗಿ ನಾಲ್ಕು ಕಾಲುಗಳುಳ್ಳ ಪ್ರಾಣಿಗಳಿಗೆ ಪಶುವೆಂಬ ಹೆಸರಿರುವುದರಿಂದ ಅವು ಗಳಲ್ಲಿ ಒಂದನ್ನು ಎಂದರ್ಥವಾದರೆ ಆಡನ್ನು ಎಂಬ ವಿಶೇಷದಲ್ಲಿ ಪಶುಶಬ್ದಕ್ಕೆ ಅರ್ಥ.

ತೈತ್ತರೀಯದಲ್ಲಿ ಹಿರಣ್ಯಗರ್ಭನಿಗೆ ಜಗತ್ಕಾರಣತ್ವವು ತೋರುತ್ತದೆ. ಇಲ್ಲಿಯೂ ಸಾಮಾನ್ಯ ವಿಶೇಷ ನ್ಯಾಯದಿಂದ ಶಿವ ಶಂಭು ರುದ್ರ ಶಬ್ದಗಳಿಗೆ ಹಿರಣ್ಯ ಗರ್ಭಶಬ್ದವಾಚ್ಯನಲ್ಲಿ ವಿಶೇಷದಲ್ಲಿ ಪರ್ಯವಸಾನವು ಯುಕ್ತವಾಗಿದೆ.

ಶಿವಶಬ್ದಕ್ಕೆ 'ಶಿವಮಸ್ತು ಸರ್ವಜಗತಾಮ್=ಎಲ್ಲಾ ಜಗತ್ತಿಗೂ ಮಂಗಳ ವಾಗಲಿ', 'ಶಿವಂಕರ್ಮಾಸ್ತು=ಮಂಗಳಕರವಾದ ಕರ್ಮವಾಗಲಿ', 'ಶಿವಾಸ್ತೇ ಸಂತು ಪನ್ಥಾನಃ=ನಿನಗೆ ದಾರಿಗಳು ಮಂಗಳಕರಗಳಾಗಲಿ' ಇವೇ ಮೊದಲಾದವುಗಳಿಂದ ಮಂಗಲ ವಾಚಿತ್ವ ರುದ್ರ ಶಬ್ದಕ್ಕೆ ಅಗ್ನಿವಾಚಕತ್ವ ಹೀಗೆ ಮಹೇಶ್ವರ ಶಂಭು ಇವೇ ಮೊದಲಾದ ಸಾಮಾನ್ಯ ಶಬ್ದಗಳೂ ಕೂಡ ಅವಯವ ಶಕ್ತಿಯಿಂದ ಚತುರ್ಮುಖ ನಲ್ಲಿ ಪರ್ಯವಸಾನವಾಗುತ್ತವೆ.

ಹಾಗಾದರೆ ಕಾರಣ ವಾಚಿಗಳಾದ ಶಿವ ಮೊದಲಾದ ಶಬ್ದಗಳಿಗೆ ಮುಖ್ಯ ವೃತ್ತಿಯಿಂದ ರುದ್ರಪರತ್ವವು ಏತಕ್ಕೆ ಆಗುವುದಿಲ್ಲ ಎಂದು ಸಂದೇಹ ಪಡಕೂಡದು

ಬ್ರಹ್ಮ ರುದ್ರಾದಿಗಳಿಗೂ ಜಗತ್ಕಾರಣತ್ವವು ಕೂಡುವುದಿಲ್ಲ. ಅವರು ಗಳಿಗೂ, ಸೃಜ್ಯತ್ವ=ಸೃಷ್ಟಿಸಲ್ಪಡುವಿಕೆ, ಸಂಹಾರ್ಯತ್ವ=ಸಾಯುವಿಕೆ, ಮತ್ತು ಕರ್ಮಗಳಿಗೆ ಅಧೀನವಾಗುವಿಕೆ ಇವೇ ಮೊದಲಾದವು ಶ್ರುತಿಯಲ್ಲಿ ಹೇಳಲ್ಪಡು ವುದರಿಂದ ಅವರುಗಳೂ ಜೀವರುಗಳೇ.

"ವಿಶ್ವಕರ್ಮಾಹ್ಯಜನಿಷ್ಟದೇವಃ=ಪ್ರಪಂಚವನ್ನು ಸೃಷ್ಟಿಸುವ ದೇವನು ಹುಟ್ಟಿದನು", "ಸಪ್ರಜಾಪತಿರೇಕಃ ಪುಷ್ಕರಪರ್ಣೇಸಮಭವತ್=ಆ ಪ್ರಜಾಪತಿ ಒಬ್ಬನೇ ತಾವರೆಯಲ್ಲಿ ಹುಟ್ಟಿದನು", "ಯೋಬ್ರಹ್ಮಾಣಂವಿದಧಾತಿಪೂರ್ವಂ= ಯಾವನು ಮೊದಲು ಬ್ರಹ್ಮನನ್ನು ಸೃಷ್ಟಿಸುತ್ತಾನೋ" ಇವೇ ಮೊದಲಾದ ಶ್ರುತಿ ಗಳು ಈ ಅರ್ಥವನ್ನು ಹೇಳುತ್ತವೆ.

ರುದ್ರನಿಗೆ ಚತುರ್ಮುಖನಿಂದ ಉತ್ಪತ್ತಿಯು ಹೇಳುತ್ತದೆ. ಅವನು ಅಪಹತ ಪಾಪ್ಮನಲ್ಲ ಅಂದರೆ ಪಾಪ ಸಂಬಂಧವಿಲ್ಲದವನಲ್ಲ. ಆದುದರಿಂದ ಅವನಿಗೆ ಕಾರಣತ್ವ ವಿಲ್ಲ. "ತ್ರ್ಯಕ್ಷಃ ಶೂಲಪಾಣಿಃ ಪುರುಷೋಽಜಾಯತ=ಮೂರು ಕಣ್ಣುಳ್ಳ, ಶೂಲವನ್ನು ಕೈಯಲ್ಲಿ ಹಿಡಿದಿರುವ ಪುರುಷನು ಹುಟ್ಟಿದನು", "ಲಲಾಟಾ ತ್ಕ್ರೋಧಜೋ ರುದ್ರೋಽಜಾಯತ ಸೋಽರೋದೀತ್ತಂ ಪ್ರಜಾಪತಿರಬ್ರವೀತ್= ಹಣೆಯಿಂದ ರುದ್ರನು ಹುಟ್ಟಿದನು. ಅವನು ಅತ್ತನು. ಅವನನ್ನು ಪ್ರಜಾಪತಿಯು ಹೇಳಿದನು", "ಕುಮಾರಕಿಂರೋದಿಷಿ? ಯಚ್ಛ್ರಮಾತ್ತಪಸೋಽಧಿಜಾತೋಽಸೀತಿ= ಮಗುವೇ ಏತಕ್ಕೆ ಅಳುತ್ತೀಯೆ ? ಕಷ್ಟವಾದ ತಪಸ್ಸಿನಿಂದ ಹುಟ್ಟಿರುವೆಯಲ್ಲಾ !" ಸೋಽಬ್ರವೀದನಪಹತಪಾಪ್ಮಾಸ್ಮ್ಯಹಿತ ನಾಮಾ ನಾಮಮೇದೇಹಿ ಪಾಪ್ಮನೋಽಪ

ಹತ್ಮಾ ಇತಿ ತಮಬ್ರವೀದ್ರುದ್ರೋಽಸೀತಿ = ಅವನು ಹೇಳಿದನು ಪಾಪಸಂಬಂಧವಿಲ್ಲದವನಾಗಲಿಲ್ಲ ಹೆಸರಿಡಲ್ಪಡದವನಾಗಿದ್ದೇನೆ. ನನಗೆ ಹೆಸರನ್ನು ಕೊಡು ಪಾಪವನ್ನು ನೀಗಲು ಹೆಸರನ್ನಿಡು ಹೀಗೆಂದು. ಪ್ರಜಾಪತಿಯು ಅವನನ್ನು ಕುರಿತು ರುದ್ರನಾಗಿರುವೆ ಎಂದು ಹೇಳಿದನು". "ಏಕೋಹವೈನಾರಾಯಣ ಆಸೀನ್ನ ಬ್ರಹ್ಮಾನೇ ಶಾನಃ = ನಾರಾಯಣನೊಬ್ಬನೇ ಇದ್ದನು. ಬ್ರಹ್ಮನಿರಲಿಲ್ಲ. ಈಶ್ವರನಿರಲಿಲ್ಲ."

ಆಭೂತ ಸಂಪ್ಲವೇಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾನ್ ।
ಏಕಸ್ತಿಷ್ಠತಿ ವಿಶ್ವಾತ್ಮಾ ಸತು ನಾರಾಯಣಃ ಪ್ರಭುಃ ॥

ಪ್ರಳಯವುಂಟಾಗಲಾಗಿ ಪ್ರಕೃತಿಯಲ್ಲಿ ಮಹತ್ತತ್ತ್ವವು ಅಡಗಲಾಗಿ ಎಲ್ಲಕ್ಕೂ ಆತ್ಮನಾಗಿರುವ ಒಬ್ಬನು ಇದ್ದಾನೆ. ಅವನೇ ಯಜಮಾನನಾದ ನಾರಾಯಣನು. ಇವೇ ಮೊದಲಾದವುಗಳಿಂದ ಅವರಿಗೆ ಕಾರ್ಯತ್ವ ಕರ್ಮವಶ್ಯತ್ವ ಇವೇ ಮೊದಲಾದವನ್ನು ಪ್ರತಿಪಾದಿಸಿರುವುದರಿಂದ ಅವರು ಜಗತ್ತಿಗೆ ಕಾರಣರಲ್ಲ".

ಕಣ್ಠೋಕ್ತ ಕರ್ಮವಶ್ಯತ್ವಕಾರ್ಯತ್ವೇಷು ನ ಹೇತುತಾ ।
ಕಾರ್ಯತಾ ಲೀಲಯಾ ಯುಕ್ತಾ ಕಾರಣಸ್ಯಹತೈನಸಃ ॥

ಕಣ್ಠೋಕ್ತವಾಗಿ—ಸ್ಪಷ್ಟವಾಗಿ ಹೇಳಿರುವ ಕರ್ಮವಶ್ಯತ್ವದಿ ಕಾರ್ಯತ್ವ ಇವುಗಳುಳ್ಳ ಪುರುಷರುಗಳಲ್ಲಿ ಕಾರಣತ್ವವು ಉಂಟಾಗುವುದಿಲ್ಲ. ಹಾಗಾದರೆ ಅಥರ್ವಶಿಖೆಯಲ್ಲಿ 'ಬ್ರಹ್ಮವಿಷ್ಣುರುದ್ರಾಸ್ತೇ ಸರ್ವೇ ಸಂಪ್ರಸೂಯನ್ತೇ = ಬ್ರಹ್ಮ ವಿಷ್ಣು ರುದ್ರ ಇವರೆಲ್ಲರೂ ಹುಟ್ಟುತ್ತಾರೆ' ಎಂದು ಭಗವಂತನಿಗೂ ಉತ್ಪತ್ತಿಯು ಹೇಳಿದೆ. ಅಲ್ಲದೆ ಭಗವಂತನು ಅವತರಿಸಿದಾಗ ಶಾಸ್ತ್ರಗಳಲ್ಲಿ ಹೇಳಿರುವುದನ್ನು ಅವನು ಅನುಷ್ಠಿಸಿದಂತೆಯೂ ಅದರಿಂದ ಉಂಟಾದ ಫಲಗಳನ್ನು ಅನುಭವಿಸಿದಂತೆಯೂ ಕೇಳುತ್ತೇವೆಯಲ್ಲವೇ ? ಎಂದರೆ "ಅಜಾಯಮಾನೋ ಬಹುಧಾವಿಜಾಯತೇ—ಹುಟ್ಟಿಲ್ಲದವನಾಗಿ ಬಹಳವಾದ ರೀತಿಯಲ್ಲಿ ಹುಟ್ಟುತ್ತಾನೆ."

"ನಮೇಪಾರ್ಥಾಸ್ತಿಕರ್ತವ್ಯಮ್ = ಓ ಅರ್ಜುನನೇ ! ಮಾಡಬೇಕಾದದ್ದು ಯಾವುದೂ ನನಗಿಲ್ಲ." "ಧರ್ಮಸಂಸ್ಥಾಪನಾರ್ಥಾಯ = ಧರ್ಮವನ್ನು ಚೆನ್ನಾಗಿ ಸ್ಥಾಪನೆ ಮಾಡುವುದಕ್ಕಾಗಿ ನಾನು ಯುಗ ಯುಗದಲ್ಲೂ ಹುಟ್ಟುತ್ತೇನೆ", "ಇಚ್ಛಾಗೃಹೀತಾಭಿಮತೋರುದೇಹಃ = ತನ್ನ ಅಪೇಕ್ಷೆಯಿಂದ ತನಗೆ ಇಷ್ಟವಾದ ಬಹಳವಾದ ಶರೀರವುಳ್ಳವನಾಗುತ್ತಾನೆ" ಇವೇ ಮೊದಲಾದವುಗಳಿಂದ ಲೀಲೆಗಾಗಿ ಅವನು ಮಾಡುವ ಕಾರ್ಯಗಳು ಎಂದು ವ್ಯಕ್ತವಾಗುತ್ತವೆ. "ಅಜಾಯಮಾನಃ" ಎಂಬ ಶ್ರುತಿಯು ಬೇರೆ ದೇವತೆಗಳಿಗೆ ಸಂಬಂಧಪಟ್ಟದ್ದಾಗಿರಲಿ ಎಂಬ ಸಂದೇಹವುಂಟಾದರೆ 'ಹತೈನಸಃ' = ಆ ದೇವತೆಗಳಿಗೆ ಅಪಹತಪಾಪ್ಮತ್ವವು ಇಲ್ಲ. "ಅಪಹತಪಾಪ್ಮಾ

ದಿವ್ಯೋದೇವ ಏಕೋನಾರಾಯಣಃ" ಎಂಬ ಶ್ರುತಿಯಿಂದ ನಾರಾಯಣನೊಬ್ಬನೇ ಪಾಪಸಂಬಂಧವಿಲ್ಲದವನು—ಅಪಹತಪಾಪ್ಮನು ಎಂಬುದು ವ್ಯಕ್ತವಾಗುತ್ತದೆ. ಇದು ಉಪಲಕ್ಷಣ ಮಾತ್ರ. ಆ ಪ್ರಕರಣದಲ್ಲಿ "ಹ್ರೀಶ್ಚತೇಲಕ್ಷ್ಮೀಶ್ಚಪತ್ನ್ಯೌ" ಎಂಬ ಶ್ರುತಿಯಲ್ಲಿ ಇನ್ನೊಬ್ಬರಿಗೂ ಅನ್ವಯವಾಗದ ಲಕ್ಷ್ಮೀಪತಿತ್ವವು ಶ್ರವಣವಾಗಿರುವುದರಿಂದಲೂ ಕೂಡ ಕಾರಣನು ನಾರಾಯಣನೇ ಎಂದು ತಿಳಿಯಬೇಕು.

ಹಾಗಾದರೆ "ಹಿರಣ್ಯಗರ್ಭಸ್ಸಮವರ್ತತಾಗ್ರೇ ಭೂತಸ್ಯ=ಭೂತಗಳ ಮೊದಲು ಹಿರಣ್ಯಗರ್ಭನಿದ್ದನು", "ಕಾರಣಂತುಧ್ಯೇಯಃ ಸರ್ವೈಶ್ವರ್ಯ ಸಮ್ಪನ್ನಃ ಸರ್ವೇಶ್ವರಃ ಶಮ್ಭುರಾಕಾಶ ಮಧ್ಯೇ=ಎಲ್ಲಾ ವಿಧವಾದ ಐಶ್ವರ್ಯಗಳಿಂದ ಕೂಡಿದ ಎಲ್ಲಕ್ಕೂ ಒಡೆಯನಾದ ಶಮ್ಭುಃ ಆಕಾಶಮಧ್ಯದಲ್ಲಿದ್ದಾನೆ. ಅವನೇ ಜಗತ್ಕಾರಣನು. ಅವನೇ ಧ್ಯಾನಮಾಡಲು ತಕ್ಕವನು", "ದೇವಾಹವೈ ಸ್ವರ್ಗಂ ಲೋಕಮಗಮನ್ ತೇದೇವಾರುದ್ರಮಪೃಚ್ಛನ್=ದೇವತೆಗಳು ಸ್ವರ್ಗಲೋಕಕ್ಕೆ ಹೋದರು. ಆ ದೇವತೆಗಳು ರುದ್ರನನ್ನು ಕೇಳಿದರು." ಎಂದಾರಂಭಿಸಿ, "ನಾನ್ಯಃ ಕಶ್ಚಿನ್ಮತ್ತೋವ್ಯತಿರಿಕ್ತಃ=ನನಗಿಂತ ಬೇರೆಯಾದವನು ಒಬ್ಬನೂ ಇಲ್ಲ" ಇವೇ ಮೊದಲಾದುವುಗಳಿಂದ ಕಾರಣತ್ವ ಮುಮುಕ್ಷುಧ್ಯೇಯತ್ವ, ಇವೇ ಮೊದಲಾದ ಪ್ರಕರಣಗಳಲ್ಲಿ ಬೇರೆ ದೇವತೆಗಳಿಗೂ ಕೂಡ ಅವು ಹೇಳಲ್ಪಟ್ಟಿರುವುದರಿಂದ ಹೇಗೆ ನಾರಾಯಣನಲ್ಲಿ ಪರ್ಯವಸಾನ ಎಂದು ಕೇಳಿದರೆ, ಆಕೃತ್ಯಧಿಕರಣನ್ಯಾಯದಿಂದ ಕಾರಣಾದಿ ಪ್ರಕರಣಗಳಲ್ಲಿಯೂ ಕೂಡ ಆ ಆ ವಾಚಕ ಶಬ್ದಗಳಿಗೆ ಶರೀರಿಪರ್ಯನ್ತ ಅರ್ಥ ಎಂದು ತಿಳಿಯಬೇಕು. ರುದ್ರನೆಂದರೆ ರುದ್ರ ಶರೀರದೊಳಗೆ ಅಂತರ್ಯಾಮಿಯಾಗಿರುವ ಪರಮಾತ್ಮ ಎಂದು ಅರ್ಥ. ಅಥವಾ ಯೌಗಿಕ ವ್ಯುತ್ಪತ್ತಿಯಿಂದಲೂ ಪರಮಾತ್ಮನೇ ಆ ಆ ಶಬ್ದಗಳಿಗೆ ಅರ್ಥ ಎಂದೂ ತಿಳಿಯಬಹುದು. ಆಕಾಶ ಶಬ್ದಕ್ಕೆ—ಆಸಮನ್ತಾತ್‌ಕಾಶತೇ=ಎಲ್ಲಾ ಕಡೆಯಿಂದಲೂ ಪ್ರಕಾಶಿಸುತ್ತಾನೆ. ಕಾಶಯತೀತಿವಾ=ಪ್ರಕಾಶಪಡಿಸಲ್ಪಡುತ್ತಾನೆ ಎಂದರ್ಥ. ಆದುದರಿಂದ ಆಕಾಶ ಶಬ್ದಕ್ಕೆ ಪರಮಾತ್ಮ ಎಂದರ್ಥ.

[1]ಹಿರಣ್ಯಗರ್ಭಸ್ಸಮ ವರ್ತತಾಗ್ರೇಭೂತಸ್ಯ ಜಾತಃ ಪತಿರೇಕ ಆಸೀತ್ ।

ಹಿರಣ್ಯಗರ್ಭ ಶಬ್ದಕ್ಕೆ ಹಿರಣ್ಮಯವಾದ ಚಿನ್ನದಮಯವಾದ ಪರಮವ್ಯೋಮಕ್ಕೆ ಪರಮಾಕಾಶಕ್ಕೆ ಗರ್ಭಭೂತನಾದವನು ಅದರಲ್ಲಿ ಇರುವವನು [2]ದೇವಾನಾಂ ಪೂರಯೋಧ್ಯಾ ತಸ್ಯಾಂಹಿರಣ್ಮಯಃಕೋಶಃ" ಪರಮಪದದಲ್ಲಿ ವಾಸಮಾಡುತ್ತಾ ಸೃಷ್ಟಿಗೆ ಮೊದಲು ಇದ್ದನು.

1. ತೈ. ಸಂ. ೪-೧-೩೧.
2. ತೈ. ಆ. ೧-೧೧೪.

ನಿತ್ಯಸೂರಿಗಳು ವಾಸಮಾಡುವ ಪಟ್ಟಣ ಅಯೋಧ್ಯೆ—ಒಬ್ಬರಿಂದಲೂ ಜಯಿಸಲಾಗದ್ದು ಅದು. ಅದರಲ್ಲಿ ಚಿನ್ನದ ನಿಧಿಯಂತೆ ಪ್ರಕಾಶಿಸುತ್ತಾ ಇರುವವನು ಎಂದು ಶ್ರುತಿ ಹೇಳುತ್ತದೆ. ಹಾಗೆಯೇ ಶಮ್ಭು ಶಬ್ದವೂ ಕೂಡ ಶಂಭವತೀತಿ, ಶಂಭುಃ, ಸುಖರೂಪನು ಆಗುತ್ತಾನೆ ಎಂದರ್ಥ. ಎಲ್ಲರಿಗೂ ಸುಖವನ್ನು ಭಾವಯತಿ ಉಂಟಾಗುವಂತೆ ಮಾಡುತ್ತಾನೆ. ಹೀಗೆಂದೂ ಶಂಭು ಶಬ್ದಕ್ಕೆ ನಿರ್ವಚನ, 'ಸಾಕ್ಷಾದಪ್ಯ ವಿರೋಧಂ ಜೈಮಿನಿಃ' ಎಂಬ ನ್ಯಾಯದಿಂದ ಎಲ್ಲಾ ಶಬ್ದಗಳೂ ನೇರವಾಗಿಯೇ ನಾರಾಯಣನನ್ನು ಹೇಳುತ್ತವೆ ಎಂಬುದು ಜೈಮಿನಿಯೆಂಬ ಋಷಿಯ ಅಭಿಪ್ರಾಯ. ಅದರಂತೆ ನಾರಾಯಣನಲ್ಲಿ ಪರ್ಯವಸಾನ ವಾಗುತ್ತವೆ ಎಂದು ತಾತ್ಪರ್ಯ.

ಇದರ ಸಂಗ್ರಹ ನ್ಯಾಯಸಿದ್ಧಾಂಜನದಲ್ಲಿ—

**ಪರವಿದ್ಯಾಸು ಜೀವೋಕ್ತಿರ್ನಿರುಕ್ತ್ಯಾದೇಃ ಪರಾಶ್ರಯಾ ।**
**ತಲ್ಲಿಙ್ಗಾನನ್ಯಥಾಸಿದ್ಧೌ ತದ್ವಿಶಿಷ್ಟಾವಲಮ್ಬಿನೀ ॥**

ಪರವಿದ್ಯೆಗಳಲ್ಲಿ ಜೀವರನ್ನು ಹೇಳುವಿಕೆಯು, ವೇದಕ್ಕೆ ಸಂಬಂಧಪಟ್ಟ ಅರ್ಥ ವನ್ನು ನಿರ್ಣಯಿಸುವ, ನಿರುಕ್ತವೆಂಬ ವ್ಯಾಕರಣದಲ್ಲಿ ಹೇಳಿರುವಂತೆ ಪ್ರಕೃತಿ ಪ್ರತ್ಯಯ ವಿಭಾಗಗಳ ಕಲ್ಪನೆಯಿಂದ ನಾರಾಯಣನಲ್ಲೇ ಕೊನೆಗೊಳ್ಳುವಿಕೆ ಆಗುತ್ತದೆ.

ಆ ಆ ಲಿಙ್ಗಗಳಿಂದ ಬೇರೆ ಅರ್ಥವನ್ನು ಹೇಳಲಾಗದೆ ಆ ಆ ಜೀವಗಳನ್ನೇ ಹೇಳಬೇಕಾದರೆ ಆ ಆ ಜೀವವಿಶಿಷ್ಟನಾದ ಪರಮಾತ್ಮಪರ್ಯನ್ತವಾಗಿ ಅರ್ಥವನ್ನು ಹೇಳಬೇಕು.

"ತ್ರಿಶೀರ್ಷಾಣಂತ್ವಾಷ್ಟ್ರಮಹನಮ್=ಮೂರು ತಲೆಯುಳ್ಳ ತ್ವಾಷ್ಟ್ರನನ್ನು ಕೊಂದೆನು" ಇವೇ ಮೊದಲಾದವುಗಳಲ್ಲಿ ಹೇಳುವ ತ್ವಾಷ್ಟ್ರವಧಾದಿಗಳಲ್ಲಿ ಇಂದ್ರಾದಿ ಶಬ್ದಗಳಿಗೆ ಅನ್ಯಥಾ ಸಿದ್ಧವಲ್ಲದೆ ಇಂದ್ರನನ್ನೇ ಸೂಚಿಸುವುದರಿಂದ ಇಂದ್ರಾದಿ ವಿಶಿಷ್ಟಪರಮಾತ್ಮಪರ ಎಂದು ತಿಳಿಯಬೇಕು.

"ಜೀವಮುಖ್ಯ [1]ಪ್ರಾಣಲಿಙ್ಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾದಾಶ್ರಿತತ್ವಾ ದಿಹತದ್ಯೋಗಾತ್" ಎಂಬುದಾಗಿ ಬ್ರಹ್ಮಸೂತ್ರವು ಪರಬ್ರಹ್ಮದ ಮೂರು ವಿಧವಾದ

1. ಬ್ರಹ್ಮಸೂತ್ರ. ೧, ೪, ೧೭.

ಉಪಾಸರೆಯನ್ನು ಉಪದೇಶಮಾಡಲು ಆ ಆ ಇಂದ್ರ ಪ್ರಾಣ ಇವೇ ಮೊದಲಾದ ಶಬ್ದಗಳಿಂದ ಹೇಳಿದೆಯೆಂದು ತಿಳಿಯಬೇಕು.

ಎಲ್ಲಕ್ಕೂ ಕಾರಣಭೂತನಾದ ಪರಬ್ರಹ್ಮಕ್ಕೆ ಸ್ವರೂಪದಿಂದ ಅನುಸಂಧಾನ 'ಸತ್ಯಂಜ್ಞಾನಮನಂತಂ ಬ್ರಹ್ಮ', 'ಆನಂದೋ ಬ್ರಹ್ಮ' ಇವೇ ಮೊದಲಾದವುಗಳಲ್ಲಿ. [1]ತತ್ಸೃಷ್ಟ್ವಾ ತದೇವಾನು ಪ್ರಾವಿಶತ್ । ತದನುಪ್ರವಿಶ್ಯ ಸಚ್ಚತ್ಯಚ್ಚಾಭವತ್ । ನಿರುಕ್ತಂಚಾನಿರುಕ್ತಂಚ । ನಿಲಯನಂಚಾನಿಲಯನಂಚ । ವಿಜ್ಞಾನಂಚಾವಿಜ್ಞಾನಂಚ । ಸತ್ಯಂಚಾನೃತಂಚ ಸತ್ಯಮಭವತ್ । ಇವೇ ಮೊದಲಾದವುಗಳಲ್ಲಿ ಭೋಕ್ತೃಶರೀರತೆಯಿಂದಲೂ, ಭೋಗ್ಯಭೋಗೋಪಕರಣ ಶರೀರತೆಯಿಂದಲೂ ಅನುಸಂಧಾನವೆಂದು ತಿಳಿಯಬೇಕು.

ವಿಜ್ಞಾನತ್ವ, ಅವಿಜ್ಞಾನತ್ವಗಳಿಂದ ಕೂಡಿದ ಸತ್ಯ ಅನೃತಶಬ್ದಗಳಿಂದ ಹೇಳಲ್ಪಟ್ಟ ಚೇತನ ಅಚೇತನವೆಂಬ ಹೆಸರು ರೂಪ ಇವನ್ನು ಹೊಂದಿದರೂ. ಬ್ರಹ್ಮವು "ಸತ್ಯಮೇವಾಭವತ್ = ವಿಕಾರವಿಲ್ಲದಿರುವಿಕೆಯನ್ನು ಬಿಡದ ಅಂದರೆ ನಿರ್ವಿಕಾರಲಕ್ಷಣವಾದ ತನ್ನ ಸ್ವಭಾವವುಳ್ಳದ್ದೇ ಆಯಿತು ಎಂದರ್ಥ."

ಯದಿದಂ ಕಿಂಚ । ತತ್ ಸತ್ಯಮಿತ್ಯಾಚಕ್ಷತೇ ।

ಯಾವಕಾರಣದಿಂದ ಚೇತನ ಅಚೇತನ ಸ್ವರೂಪ ಸಮುದಾಯದಲ್ಲಿ ಅನುಪ್ರವೇಶಮಾಡಿರುವಿಕೆ ಉಳ್ಳದ್ದರಿಂದ ತ್ಯಶಬ್ದದಿಂದ ಹೇಳಲ್ಪಡುವ ಬ್ರಹ್ಮಕ್ಕೆ "ಆತ್ಮತ್ವ = ಆತ್ಮಸ್ವಭಾವವುಂಟಾಯಿತೋ" ಆದುದರಿಂದಲೇ ಚೇತನ ಅಚೇತನಾತ್ಮಕವಾದ ಜಗತ್ತನ್ನು ಶಾಸ್ತ್ರವೆಂಬ ಕಣ್ಣುಳ್ಳವರು ಪರಾಶರರೇ ಮುಂತಾದ ಪುರುಷರು.

• "ಹರೇರ್ನ ಕಿಂಚಿತ್ ವ್ಯತಿರಿಕ್ತಮಸ್ತಿ = ಹರಿಗಿಂತ ಬೇರೆಯಾದುದು ಯಾವುದೂ ಇಲ್ಲ", "ಜ್ಯೋತೀಂಷಿವಿಷ್ಣುಃ ಭುವನಾನಿವಿಷ್ಣುಃ = ಜ್ಯೋತಿಸ್ಸುಳ್ಳವು ವಿಷ್ಣುಃ ಪ್ರಪಂಚಗಳು ವಿಷ್ಣುವು" ಎಂದು ಹೇಳುತ್ತಾರೆ ಎಂದರ್ಥ.

ತನ್ನನ್ನು ಉಪಾಸನೆಮಾಡೆಂದು ಉಪದೇಶಿಸುವುದು, ತನ್ನ ಸರ್ವೈಶ್ವರ್ಯ ಪ್ರಪಂಚನ ಮುಂತಾದವುಗಳಿಗೂ ಕೂಡ ಪ್ರಹ್ಲಾದ ವಾಮದೇವ ಮುಂತಾದವರ ಹಾಗೆ ಶಾಸ್ತ್ರದಿಂದ ತಿಳಿದ ಸ್ವಾತ್ಮಶರೀರಕ ಪರಮಾತ್ಮಾನುಸಂಧಾನ ಮೂಲಕವಾಗಿರುವಿಕೆಯಿಂದ ಎಂದು ತಿಳಿಯಬೇಕು. ಎಲ್ಲವೂ ಶರೀರವಾಗಿರುವ ಅವನಿಗೂಕೂಡ ಶಾಸ್ತ್ರದಲ್ಲಿ ಹೇಳಿರುವಂತೆ ಚೇತನ ಅಚೇತನ ವಿಶಿಷ್ಟತೆಯಿಂದಲೂ ಕೂಡ ಉಪಾಸ್ಯತೆಯು ಉಪಪನ್ನವಾಗೋಣದರಿಂದ ತಾನೆ ಹಾಗೆ ಹೇಳುವುದು.

1. ತೈತ್ತರೀಯ ಉಪನಿಷತ್ತು ೧-೩೦.

[1]ಶಾಸ್ತ್ರದೃಷ್ಟ್ಯಾತೂಪದೇಶೋ ವಾಮದೇವವತ್ ।

ಎಂಬ ಈ ಸೂತ್ರದಿಂದ ನಾವು ಈ ಸಂಗತಿಯನ್ನು ಅರಿಯುತ್ತೇವೆ.

ಆ ಆನನ್ದಮಯನಾದ ಆತ್ಮನು 'ಬಹುಸ್ಯಾಂ ಪ್ರಜಾಯೇಯ' ದೇವ ಮನುಷ್ಯ ಮುಂತಾದರೂಪದಿಂದ ಬಹಳವಾಗಿ ಆಗುತ್ತೇನೆ ; ಅದಕ್ಕಾಗಿ ಆಕಾಶಾದಿ ರೂಪದಿಂದ ಹುಟ್ಟುವೆನು ಎಂದು [2]ಸಮಷ್ಟಿ [3]ವ್ಯಷ್ಟಿ ರೂಪವಾದ ಚೇತನ ಅಚೇತನ ವಿಷಯವಾದ ಸಂಕಲ್ಪವನ್ನು ಮಾಡಿತು. 'ಸತಪೋಽತಪ್ಯತ—ಆ ಪರಮಾತ್ಮನು ಸೃಷ್ಟಿಸಬೇಕಾದ ಪದಾರ್ಥಗಳ ವಿಷಯವಾಗಿ ಆಲೋಚನೆಯ ರೂಪವಾದ ತಪಸ್ಸನ್ನು ಮಾಡಿದನು. 'ತಪ ಆಲೋಚನೆ' ಎಂಬುದಲ್ಲವೇ ಧಾತು. ಈ ರೀತಿ ತಪಸ್ಸನ್ನುಮಾಡಿ ಇದೆಲ್ಲವನ್ನೂ ಸೃಷ್ಟಿಸಿದನು. ಸೃಷ್ಟಿಸಿದನು. ಅವನ್ನೇ ಹೊಕ್ಕನು,

ಇಲ್ಲಿ ಒಂದು ಸಂದೇಹಉಂಟಾಗುತ್ತದೆ :—ಯಾವಾಗಲೂ ಎಲ್ಲದರಲ್ಲಿಯೂ ವ್ಯಾಪ್ತಿಯನ್ನು ಹರಡಿರುವಿಕೆಯನ್ನು ಪಡೆದಿರುವ ಬ್ರಹ್ಮಕ್ಕೆ ಸೃಷ್ಟಿ ಕಾಲದಲ್ಲಿ ಅನು ಪ್ರವೇಶವೆಂಬುದಾವುದು ? ಎಂದರೆ—ಹಸುವಿನ ಹೊಟ್ಟೆಯನ್ನು ಹೊಂದಿರುವ ಕರುವಿನಲ್ಲಿ ಗೋತ್ವವೇ ಮುಂತಾದವಂತೆ, ಎಲ್ಲದರಲ್ಲಿಯೂ ವ್ಯಾಪ್ತವಾದ ಬ್ರಹ್ಮಕ್ಕೆ ಬೇರೆಬೇರೆಯಾಗಿ ಪ್ರತಿಒಂದರಲ್ಲಿಯೂ ಎಲ್ಲಾ ವಸ್ತುಗಳಲ್ಲೂ ಪುಷ್ಕಲವಾಗಿ ತೋರಿ ಕೆಗೆ ತಕ್ಕದಾಗಿರುವ ಸ್ಥಿತಿವಿಶೇಷವೇ ಅನುಪ್ರವೇಶ.

ಈ ರೀತಿ ಅನುಪ್ರವೇಶಮಾಡಿ 'ಸಚ್ಚತ್ಯಚ್ಚಾಭವತ್' ಸತ್ತಾಗಿಯೂ ತ್ಯತ್ತಾ ಗಿಯೂ ಆಯಿತು. ಸಚ್ಛಬ್ದದಿಂದ ಯಾವವಿಧವಾದ ವಿಕಾರವೂ ಇಲ್ಲದೆ ಯಾವಾ ಗಲೂ ಒಂದೇ ರೂಪವಾದ ಚೇತನವು ಹೇಳಲ್ಪಡುತ್ತದೆ. ತ್ಯಚ್ಛಬ್ದದಿಂದ ಹಿಂದಿಂದಿನ ಅವಸ್ಥೆಯನ್ನುಬಿಡುವ ರೂಪವಾದ ವಿಕಾರಕ್ಕೆ ಆಸ್ಪದವಾಗಿರುವ ಅಚೇತನವು ಹೇಳಲ್ಪಡುತ್ತದೆ. ಬ್ರಹ್ಮವೇ ಚೇತನ ಅಚೇತನವೆಂಬ ಹೆಸರುಳ್ಳದ್ದಾಗುತ್ತದೆ ಎಂದರ್ಥ.

ಹಾಗಾದರೆ ಬ್ರಹ್ಮಕ್ಕೆ . ಎಲ್ಲಕ್ಕೂ ಉಪಾದಾನ ಕಾರಣವಾಗುವಿಕೆಯಿಂದ ಎಲ್ಲದರ ಭಾವವೂ ಉಂಟಾದರೆ ವಿಕಾರಕ್ಕೆ ಒಳಗಾಗುವಿಕೆ ಉಂಟಾಗುವುದಿಲ್ಲವೇ ? ಅಂದರೆ 'ನಿರುಕ್ತಞ್ಚ.......ಯನಞ್ಚ'. ಜಾತಿ, ಗುಣ, ಕ್ರಿಯೆ ಇವುಗಳು ಇರೋಣ ದರಿಂದ ಜಾತಿ, ಗುಣ ಇವೇ ಮೊದಲಾದವನ್ನು ಹೇಳುವ ಶಬ್ದಗಳಿಂದ ಹೇಳಲ್ಪಡುವ

1. ಬ್ರಹ್ಮಸೂತ್ರ. ೧-೧-೩೧.
2. ತ್ರಿವೃತ್ಕರಣಕ್ಕೆ ಮುಂಚೆ ಆದ ಸೃಷ್ಟಿ.
3. ತ್ರಿವೃತ್ಕರಣವಾದನಂತರ ಆದ ಸೃಷ್ಟಿ.

ಅಚೇತನವು ನಿರುಕ್ತ, ಜಾತಿ ಗುಣಾದಿಗಳಿಲ್ಲದ ಚೇತನಗಳ ಸಮೂಹವು ಅನಿರುಕ್ತ. 'ಏತಾ ಭೂತಮಾತ್ರಾಃ ಪ್ರಜ್ಞಾಮಾತ್ರಾಸ್ವರ್ಪಿತಾಃ' ಹೀಗೆಂಬ ರೀತಿಯಿಂದ ಅಚೇತನವರ್ಗಕ್ಕೆ ಆಧಾರಭೂತವಾದ ಚೇತನಗಳ ಸಮೂಹವು ನಿಲಯನ, ಆಶ್ರಿತವಾದ ಅಂದರೆ ಆಶ್ರಯಿಸಲ್ಪಟ್ಟ ಅಚೇತನ ಸಮೂಹವು ಅನಿಲಯನ. 'ವಿಜ್ಞಾನಞ್ಚಾ ವಿಜ್ಞಾನಞ್ಚ=ಅಜಡಸ್ವರೂಪ ಜಡಸ್ವರೂಪ ಇವೂ', 'ಸತ್ಯಞ್ಚ....ಮಭವತ್' ವಿಕಾರವಿಲ್ಲದಿರುವಿಕೆಯಿಂದ ಸತ್ಯತ್ವಚೇತನಕ್ಕೆ, ಮತ್ತೊಂದಕ್ಕೆ ಹಾಗಿಲ್ಲದಿರುವಿಕೆ. ಅಂತೂ ನಿರುಕ್ತತ್ವ ಅನಿರುಕ್ತತ್ವ ನಿಲಯನತ್ವ ಅನಿಲಯನತ್ವ. ಇವೆಲ್ಲ ಸತ್ಯವೇ ಆಯಿತು.

**ವ್ಯಷ್ಟಿರ್ನಾಮ ಜೀವಾನಾಂ ಕರಣಕಳೇಬರ ಸಂಯೋಗಕರಣಮ್, 'ಜೀವೋಪಕರಣಾನಾಂ ಪ್ರಾಣಾನಾಂ ಉತ್ಪತ್ತ್ಯಾದಿಕಂ ನಿರೂಪಿತಂ. ತೈರ್ಜೀವಸ್ಯ ಸಂಯೋಗಕರಣಂಹಿ ವ್ಯಷ್ಟಿಸೃಷ್ಟಿಃ' ಇತಿ ಚಿಂತಾಮಣೀಕಾರಾಃ ಪ್ರಾಹುಃ ॥**

**ಇದರ ಅರ್ಥ :** ವ್ಯಷ್ಟಿ ಎಂದರೆ ಜೀವರುಗಳಿಗೆ ಇಂದ್ರಿಯ ಶರೀರ ಇವುಗಳೊಡನೆ ಸಂಬಂಧ ಉಂಟುಮಾಡುವಿಕೆ—ಸೇರಿಸುವಿಕೆ, 'ಜೀವರುಗಳಿಗೆ ಸಲಕರಣೆಗಳಾದ ಪ್ರಾಣಗಳಿಗೆ ಉತ್ಪತ್ತಿ ಮುಂತಾದವನ್ನು ನಿರೂಪಣೆಮಾಡಿದ್ದಾಯಿತು. ಅವುಗಳೊಡನೆ ಸೇರಿಸುವಿಕೆಯಲ್ಲವೇ ವ್ಯಷ್ಟಿ ಸೃಷ್ಟಿ ಎಂಬುದು' ಎಂದು ಅಧಿಕರಣ-ಸಾರಾವಳಿಗೆ ಚಿಂತಾಮಣಿ ಎಂಬ ವ್ಯಾಖ್ಯಾನವನ್ನು ಬರೆದಿರುವ ಕುಮರ ವರದಾಚಾರ್ಯರು ಹೇಳಿದ್ದಾರೆ. ಇವರು ವೇದಾಂತಾಚಾರ್ಯರ ಮಕ್ಕಳು.

ಆ ಸೂತ್ರಕ್ಕೆ ಈ ಅರ್ಥ. ಪ್ರಸಿದ್ಧವಾದ ಜೀವಭಾವವುಳ್ಳ ಇಂದ್ರನಿಂದ "ಮಾಮೇವವಿಜಾನೀಹಿ ಮಾಮುಪಾಸ್ವ=ನನ್ನನ್ನೇ ತಿಳಿ, ನನ್ನನ್ನು ಉಪಾಸನೆ ಮಾಡು" ಹೀಗೆಂದು ಉಪಾಸಿಸಲು ಯೋಗ್ಯನಾದ ಬ್ರಹ್ಮಕ್ಕೆ ತನ್ನ ಆತ್ಮೋಪದೇಶವು ಬೇರೆ ಪ್ರಮಾಣದಿಂದ ಹೊಂದಲ್ಪಟ್ಟ ಸ್ವಾತ್ಮಾವಲೋಕನದಿಂದ ಮಾಡಲ್ಪಟ್ಟದ್ದಲ್ಲ; ಮತ್ತೇನೆಂದರೆ, ಶಾಸ್ತ್ರದಿಂದ ಉಂಟಾದ ಜ್ಞಾನದಿಂದ ಸ್ವಾತ್ಮದೃಷ್ಟಿಯಿಂದ ಮಾಡಲ್ಪಟ್ಟದ್ದು.

"ಅನೇನ ಜೀವೇನಾತ್ಮನಾನು ಪ್ರವಿಶ್ಯನಾಮ ರೂಪೇವ್ಯಾಕರವಾಣಿ" ಐತದಾತ್ಮ್ಯಮಿದಂಸರ್ವಂ "ಅನ್ತಃ ಪ್ರವಿಷ್ಟಃಶಾಸ್ತಾಜನಾನಾಗ್ಂ ಸರ್ವಾತ್ಮಾ" "ಯ ಆತ್ಮನಿತಿಷ್ಠನ್ನಾತ್ಮನೋಽನ್ತರೋಯಮಾತ್ಮಾನವೇದ ಯಸ್ಯಾತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ। ಏಷಸರ್ವಭೂತಾನ್ತರಾತ್ಮಾಽಪಹತಪಾಪ್ಮಾ ದಿವ್ಯೋದೇವ ಏಕೋನಾರಾಯಣಃ" ಇವೇ ಮೊದಲಾದ ಶಾಸ್ತ್ರಗಳಿಂದ ಪರಮಾತ್ಮನನ್ನು, ಜೀವಾತ್ಮನನ್ನು ಶರೀರವಾಗಿ ಉಳ್ಳವನನ್ನಾಗಿ ಅರಿತು ಜೀವಾತ್ಮನನ್ನು ಹೇಳುವ 'ನಾನು', 'ನೀನು' ಇವೇ ಮೊದಲಾದ ಶಬ್ದಗಳಿಗೂ ಕೂಡ ಪರಮಾತ್ಮನಲ್ಲಿ

ಮುಗಿಯುವಿಕೆಯನ್ನು ಅರಿತು "ಮಾಮೇವ ವಿಜಾನೀಹಿ । ಮಾಮುಪಾಸ್ವ= ನನ್ನನ್ನೇ ತಿಳಿ. ನನ್ನನ್ನು ಉಪಾಸನೆಮಾಡು" ಎಂದು ಸ್ವಾತ್ಮಶರೀರಕ ಪರಮಾತ್ಮನನ್ನೇ ಉಪದೇಶಮಾಡಿದನು ಎಂದು ಅರ್ಥ. "ವಾಮದೇವವತ್=ವಾಮದೇವನ ಹಾಗೆ, ವಾಮದೇವನು ಪರವಾದ ಬ್ರಹ್ಮಕ್ಕೆ ಎಲ್ಲಕ್ಕೂ ಆತ್ಮವಾಗಿರುವಿಕೆ, ಎಲ್ಲಕ್ಕೂ ಅವನ ಶರೀರವಾಗಿರುವಿಕೆ", ಶರೀರವನ್ನು ಹೇಳುವ ಶಬ್ದಗಳಿಗೆ ಶರೀರವುಳ್ಳವನಲ್ಲಿ "ಪರ್ಯವಸಾನ=ಕೊನೆಗೊಳ್ಳುವಿಕೆಯನ್ನು ಕಂಡು", 'ಅಹಂ—ನಾನು' ಎಂದು ಸ್ವಾತ್ಮವನ್ನು ಶರೀರವಾಗಿ ಉಳ್ಳ ಪರಬ್ರಹ್ಮವನ್ನು ನಿರ್ದೇಶಿಸಿ ಅದರ ಸಾಮಾನಾಧಿಕರಣ್ಯದಿಂದ ಮನು ಸೂರ್ಯ ಮುಂತಾದವರನ್ನು ವ್ಯಪದೇಶಮಾಡುತ್ತಾನೆ.

"ತದ್ಧೈತತ್ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇ । ಅಹಂ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾನ್ನೃಷಿರಸ್ಮಿ ವಿಪ್ರ=ವಾಮದೇವಋಷಿಯು ಶಾಸ್ತ್ರವನ್ನು ಅರಿತು ನಾನು ಮನುವಾದೆ, ಸೂರ್ಯನಾದೆ" ಎಂದು ಹೇಳಿದನು.

ಪ್ರಹ್ಲಾದನೂ ಕೂಡ—

[1]ಸರ್ವಗತ್ವಾದನನ್ತಸ್ಯ ಸ ಏ ವಾಹ ಮವಸ್ಥಿತಃ ।
ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ ॥

ಅನಂತನು ಸರ್ವಗತನಾಗಿರುವುದರಿಂದ ಅವನೇ ನಾನಾಗಿರುತ್ತೇನೆ ; ನನ್ನಿಂದಲೇ ಎಲ್ಲವೂ, ನಾನೇ ಎಲ್ಲವೂ, ಸನಾತನನಾದ ನನ್ನಲ್ಲಿ ಎಲ್ಲವೂ ಎಂದು ಮುಂತಾಗಿ ಹೇಳಿಕೊಂಡಿರುತ್ತಾನೆ. ಇಲ್ಲಿ 'ಅನಂತನು ಸರ್ವಗತನಾಗಿರುವುದರಿಂದ' ಎಂದು ಹೇತುವನ್ನು ಹೇಳಿರುತ್ತದೆ. ತನ್ನ ಶರೀರವಾಗಿರುವ ಚಿದಚಿದ್ವಸ್ತುಗಳೆಲ್ಲಕ್ಕೂ ಆತ್ಮನಾಗಿರುವುದರಿಂದ ಪರಮಾತ್ಮನು ಸರ್ವಗತನಾಗಿರುತ್ತಾನೆ. ಆದುದರಿಂದ ಸರ್ವಶಬ್ದಗಳೂ ಸರ್ವಶರೀರನಾದ ಪರಮಾತ್ಮನನ್ನೇ ಹೇಳುತ್ತವೆ. ಆದುದರಿಂದ ನಾನು ಎಂಬ ಶಬ್ದವು ತನ್ನ ಆತ್ಮನಿಗೆ ಪ್ರಕಾರಿಯಾದ ಪರಮಾತ್ಮನನ್ನೇ ಹೇಳುತ್ತದೆ. ಆದುದರಿಂದ ಇದು ಹೇಳಲ್ಪಡುತ್ತದೆ. "ಆತ್ಮೇತ್ಯೇವತುಗೃಹ್ಣೀಯಾತ್ ಸರ್ವಸ್ಯತನ್ನಿಷ್ಪತ್ತೇಃ=ಆತ್ಮನೆಂದೇ ಗ್ರಹಿಸಬೇಕು, ಏಕೆಂದರೆ ಎಲ್ಲವೂ ಆತನಿಂದಲೇ ಉಂಟಾಗುತ್ತದೆ. ಎಂಬೀ ಅಹಂಗ್ರಹಣೋಪಾಸನೆಯನ್ನು ವಾಕ್ಯಕಾರನು ಹೇಳಿರುತ್ತಾನೆ. ಕಾರ್ಯಾವಸ್ಥೆಯಲ್ಲಿಯೂ ಕಾರಣಾವಸ್ಥೆಯಲ್ಲಿಯೂ ಇರುವವನು ಸ್ಥೂಲಸೂಕ್ಷ್ಮ ಚಿದಚಿದ್ವಸ್ತು ಶರೀರಕನಾದ ಪರಮಾತ್ಮನೇ ಆಗಿರುವುದರಿಂದ ಆತನಿಂದ ಉಂಟಾಗುತ್ತದೆ" ಎಂದಿದೆ.

---

1. ವಿ. ಪು. ೧-೧೯-೮೫.

[1]ಆತ್ಮನೆಂದೇ ಒಪ್ಪಿರುತ್ತಾರೆ. (ಶಾಸ್ತ್ರಗಳು) ತಿಳಿಸಿಕೊಡುತ್ತಲೂ ಇವೆ. ಎಂದು ಸೂತ್ರಕಾರರೂ ಹೇಳಿರುತ್ತಾರೆ.

ಮಹಾಭಾರತದಲ್ಲಿಯೂ ಬ್ರಹ್ಮ ರುದ್ರ ಸಂವಾದದಲ್ಲಿ ಬ್ರಹ್ಮನು ರುದ್ರನನ್ನು ಕುರಿತು "ನಿನ್ನ ಅಂತರಾತ್ಮನೂ ನನ್ನ ಅಂತರಾತ್ಮನೂ ದೇಹಿಗಳೆನಿಸುವ ಇನ್ನಿತರರ ಅಂತರಾತ್ಮನೂ ಆಗಿರುತ್ತಾನೆ. [2]ತವಾನ್ತರಾತ್ಮಾಮಮಚ ಯೇಚಾನ್ಯೇ ದೇಹಿ ಸಂಜ್ಞಿತಾಃ । ಎಂದು ಹೇಳಿದೆ. ರುದ್ರನಿಗೂ ಬ್ರಹನಿಗೂ ಮಿಕ್ಕದೇಹಿಗಳಿಗೂ ಪರಮೇಶ್ವರನಾದ ನಾರಾಯಣನೇ ಅಂತರಾತ್ಮನಾಗಿರುತ್ತಾನೆ. ಮತ್ತು ಅಲ್ಲಿಯೇ ಭಗವಂತನಾದ ಅಪರಿಮಿತ ತೇಜಸ್ಸನಾದ ಭವನಿಗೆ ವಿಷ್ಣುವು ಆತ್ಮನು; ಆದುದರಿಂದ ಆ ಮಹೇಶ್ವರನು ಧನುಸ್ಸಿನ ಹೆದೆಯ ಸಂಸ್ಪರ್ಶವನ್ನು ಸಹಿಸಿಕೊಂಡನು".

[3]ವಿಷ್ಣುರಾತ್ಮಾಭಗವತೋಭವಸ್ಯಾಮಿತ ತೇಜಸಃ ।
ತಸ್ಮಾದ್ಧನುರ್ಜ್ಯಾಸಂಸ್ಪರ್ಶಂ ಸವಿಷೇಹೇ ಮಹೇಶ್ವರಃ ॥

ಎಂದು ಅಲ್ಲಿಯೇ—

[4]ಏತೌದ್ವೌವಿಬುಧ ಶ್ರೇಷ್ಠೌಪ್ರಸಾದಕ್ರೋಧಜೌ ಸ್ಮೃತೌ ।
ತದಾದರ್ಶಿತಪನ್ಥಾನೌ ಸೃಷ್ಟಿಸಂಹಾರಕಾರಕೌ ॥

ಈ ಇಬ್ಬರು ದೇವಶ್ರೇಷ್ಠರು ಪ್ರಸಾದ ಕೋಪದಿಂದ ಹುಟ್ಟಿದವರೆಂದು ಎನಿಸಿಕೊಂಡಿರುತ್ತಾರೆ, ಆತನು ತೋರಿಸಿದ ಹಾದಿಯಿಂದ ಸೃಷ್ಟಿ ಸಂಹಾರವನ್ನು ಮಾಡುವವರಾಗಿರುತ್ತಾರೆ ಎಂದು ಹೇಳಿದೆ, ಅಂತರಾತ್ಮನಾಗಿರುವ ನಾರಾಯಣನು ತೋರಿಸಿದ ದಾರಿಯಿಂದ ಬ್ರಹ್ಮರುದ್ರರು ಸೃಷ್ಟಿಸಂಹಾರರೂಪವಾದ ಕಾರ್ಯವನ್ನು ಮಾಡುತ್ತಾರೆ ಎಂದರ್ಥ. ಇದು ವೇದಾರ್ಥಸಂಗ್ರಹದಲ್ಲಿ ರಾಮಾನುಜರು ಹೇಳಿ ರುವ ಮಾತು.

ಈ ಸಂದರ್ಭದಲ್ಲಿ ನಮ್ಮ ಗ್ರಂಥದ ಮೊದಲನೆಯ ಭಾಗದಲ್ಲಿರುವ ೨೬ನೆಯ ರುದ್ರ ವಿದ್ಯಾ ೨೭ನೆಯ ಚತುರ್ಮುಖ ವಿದ್ಯಾ ಇವುಗಳನ್ನು ಗಮನಿಸುವುದು.

1. ಆತ್ಮೇತಿ ತೂಪಗಚ್ಛನ್ತಿಗ್ರಾಹಯನ್ತಿಚ ॥ ಬ್ರ. ಸೂ. ೪-೧-೩.
2. ಮೋಕ್ಷಧರ್ಮ. ೨೫೧-೪.
3. ಕರ್ಣಪರ್ವ. ೨೫-೫೦.
4. ಭಾರತ ಶಾನ್ತಿಪರ್ವ. ೩೫೦-೧೯.

ಈ ರೀತಿ ಮಹೋಪನಿಷತ್ತು ನಾರಾಯಣೋಪನಿಷತ್ತು ಸುಬಾಲೋಪ ನಿಷತ್ತು, ಮೈತ್ರಾಯಣೀಯ, ಪುರುಷಸೂಕ್ತ, ನಾರಾಯಣಾನುವಾಕ, ಅನ್ತರ್ಯಾಮಿ ಬ್ರಾಹ್ಮಣ ಇವೇ ಮೊದಲಾದವುಗಳಲ್ಲಿ ನಾರಾಯಣನಿಗೇ ಪರಮ ಕಾರಣತ್ವ—ಸರ್ವ ಶಬ್ದ ವಾಚತ್ವ—ಮೋಕ್ಷಪ್ರದತ್ವ—ಜಗಚ್ಛರೀರಕತ್ವ ಇವೇ ಮೊದಲಾದವುಗಳನ್ನು ಪ್ರತಿಪಾದನೆ ಮಾಡಿರುವುದರಿಂದ ಸ್ವಯಂಭು ಹಿರಣ್ಯ ಗರ್ಭ ಪ್ರಜಾಪತಿ ಶಬ್ದ ಗಳಿಗೆ ನಾರಾಯಣನಲ್ಲಿ ಪರ್ಯವಸಾನವು ಯುಕ್ತವೆಂದು ನಾರಾಯಣನೇ ಎಲ್ಲಾ ಜಗತ್ತಿಗೂ ಕಾರಣನು ಎಲ್ಲಾ ವಿದ್ಯೆಗಳಿಂದಲೂ ಅರಿಯಲ್ಪಡುವವನೂ ಆಗಿದ್ದಾನೆ.

ಇವೆಲ್ಲವನ್ನೂ ಅನುಸಂಧಾನ ಮಾಡುವ ವಾತ್ಸ್ಯವರದ ಗುರುಗಳು ತತ್ತ್ವ ನಿರ್ಣಯವೆಂಬ ಪ್ರಕರಣ ಗ್ರಂಥದಲ್ಲಿ ಈ ಎಲ್ಲಾ ನಿಷ್ಕೃಷ್ಟವಾದ ಅರ್ಥಗಳನ್ನೂ ಸಂಗ್ರಹ ಮಾಡಿದ್ದಾರೆ. ತತ್ತ್ವಸಾರದಲ್ಲೂ ಕೂಡ—

ಕಸ್ತ್ವಂ ತತ್ತ್ವವಿದಸ್ಮಿ ವಸ್ತು ಪರಮಂ ಕಿಂ ತರ್ಹಿ ವಿಷ್ಣುಃ ಕಥಂ
ತತ್ತ್ವೇದಂ ಪರತೈತ್ತಿರೀಯಕ ಮುಖ ತ್ರಯ್ಯನ್ತಸಂದರ್ಶನಾತ್ ।
ಅನ್ಯಾಸ್ತರ್ಹಿಗಿರಃ ಕಥಂ ಗುಣವಶಾದತ್ರಾಹ ರುದ್ರಃ ಕಥಂ
ತದ್ದೃಷ್ಟ್ವಾ ಕಥಮುದ್ಭವತ್ಯವತರತ್ಯನ್ಯತ್ಕಥಂ ನೀಯತಾಮ್ ॥

ಇವೇ ಮೊದಲಾದ ಶ್ಲೋಕಗಳಿಂದ ಈ ಅರ್ಥವು ಸಂಗ್ರಹಿಸಲ್ಪಟ್ಟಿದೆ.

ಈ ಶ್ಲೋಕವು ಪ್ರಶ್ನೆ ಉತ್ತರ ಈ ರೂಪವಾಗಿದೆ.

'ಕಸ್ತ್ವಂ' = ನೀನು ಯಾರು? ಎಂಬುದು ಪ್ರಶ್ನೆ. 'ತತ್ತ್ವವಿದಸ್ಮಿ' = ತತ್ತ್ವ ವನ್ನು ತಿಳಿದವನಾಗಿದ್ದೇನೆ ಎಂಬುದು ಆ ಪ್ರಶ್ನೆಗೆ ಉತ್ತರ.

ಅನಂತರದಲ್ಲಿ 'ವಸ್ತು ಪರಮಂ ಕಿಂತರ್ಹಿ' ಎಂದು ಪ್ರಶ್ನವಾಕ್ಯವು. ಆದರೆ ಉತ್ಕೃಷ್ಟವಾದ ತತ್ತ್ವವು ಯಾವುದು ?

'ವಿಷ್ಣುಃ' = ವಿಷ್ಣುವು.

'ಕಥಂ' = ಹೇಗೆ ?

'ತತ್ತ್ವೇದಂಪರ ತೈತ್ತಿರೀಯಕಮುಖ ತ್ರಯ್ಯಂತಸಂದರ್ಶನಾತ್' ಎಂಬುದು ಅದಕ್ಕೆ ಉತ್ತರ.

ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್ ।
ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪ್ರಭುಮ್ ॥

ಇವೇ ಮೊದಲಾದ ಮಂತ್ರಗಳಿಂದ ಪುರುಷಸೂಕ್ತವೇ ಮೊದಲಾದ ಸಕಲ ಬ್ರಹ್ಮವಿದ್ಯಾ ಪ್ರಕರಣಗಳಲ್ಲಿಯೂ ಅರಿಯಲ್ಪಡುವ ಪುರುಷನನ್ನು ಆ ಆ ಶಬ್ದಗಳಿಂದ ಜ್ಞಾಪಕಪಡಿಸಿ, ಅವನಲ್ಲಿ ಮತ್ತೆ ಮತ್ತೆ ನಾರಾಯಣತ್ವವನ್ನು ಅಭ್ಯಾಸ ರೂಪವಾಗಿ ಹೇಳಿರುವುದು ಅಂದರೆ 'ನಾರಾಯಣ ಪರೋಜ್ಯೋತಿರಾತ್ಮಾ ನಾರಾಯಣಃ ಪರಃ–ಅಥ ಪುರುಷೋಹವೈ ನಾರಾಯಣೋಽಕಾಮಯತ ಪ್ರಜಾಸ್ಸೃಜೇಯೇತಿ । ನಾರಾಯಣಾತ್ಪ್ರಾಣೋಜಾಯತೇ । ಮನಸ್ಸರ್ವೇಂದ್ರಿಯಾಣಿಚ । ಖಂಡವಾಯು ಜ್ಯೋತಿರಾಪಃ ಪೃಥಿವೀವಿಶ್ವಸ್ಯಧಾರಿಣೀ । ನಾರಾಯಣಾದ್ಬ್ರಹ್ಮಾಜಾಯತೇ । ನಾರಾಯಣಾದ್ರುದ್ರೋಜಾಯತೇ । ನಾರಾಯಣಾದಿನ್ದ್ರೋಜಾಯತೇ । ಅಥ ನಿತ್ಯೋನಾರಾಯಣಃ । ಬ್ರಹ್ಮಾನಾರಾಯಣಃ । ಶಿವಶ್ಚನಾರಾಯಣಃ । ಶಕ್ರಶ್ಚ ನಾರಾಯಣಃ।ದ್ಯಾವಾಪೃಥಿವ್ಯೌಚನಾರಾಯಣಃ। ಕಾಲಶ್ಚನಾರಾಯಣಃ। ಎಂಬುದಾಗಿ ಹೇಳಿದ್ದನ್ನೇ ಹೇಳಿ ಅವನಲ್ಲಿ ಎಲ್ಲಕ್ಕೂ ಕಾರಣವಾಗಿರುವಿಕೆಯನ್ನುಸ್ಥಿರಪಡಿಸುವುದು.

ಆದುದರಿಂದ ಪರವಿದ್ಯಾಪ್ರಕರಣದಲ್ಲಿ ಎಲ್ಲೆಲ್ಲಿ "ಪರಬ್ರಹ್ಮ—ಪರತತ್ತ್ವ—ಪರಜ್ಯೋತಿಃ ಪರಮಾತ್ಮಾ" ಮೊದಲಾದ ಶಬ್ದಗಳು ಪ್ರಯೋಗಿಸಲ್ಪಟ್ಟಿರುವುವೋ ಅಲ್ಲಲ್ಲಿ ಎಲ್ಲೆಡೆಯಲ್ಲೂ ನಾರಾಯಣನೇ ಪ್ರತಿಪಾದ್ಯನಾಗಿರುವನೆಂದು ನಿಶ್ಚಯಿಸಲ್ಪಡುವುದು ಎಂಬುದು ಉತ್ತರ. ಆದುದರಿಂದ ಪರತ್ವನಿರ್ಣಯದಲ್ಲಿ ನಾರಾಯಣಾನುವಾಕವು ಪರಿಪೂರ್ಣವಾಯಿತು ಎಂದು ಅಭಿಪ್ರಾಯವಾಯಿತು.

"ಇನ್ದ್ರೋಮಾಯಾಭಿಃ ಪುರುರೂಪ ಈಯತೇ" । ನ ಸನ್ನಚಾಸಚ್ಛಿವ ಏವ ಕೇವಲಃ" । ಇವೇ ಮೊದಲಾದ ವಾಕ್ಯಗಳ ಗತಿಏನು ? ಎಂದು ಊಹಿಸಿ "ಇದಿಪರಮೈಶ್ವರ್ಯೇ" ಎಂಬ ಧಾತುವಿನಿಂದ ಉಂಟಾದ ಇನ್ದ್ರಶಬ್ದಕ್ಕೆ ಪರಮೈಶ್ವರ್ಯ ಗುಣದ ಸಂಬಂಧದಿಂದಲೂ ಶಿವ ಮುಂತಾದ ಶಬ್ದಗಳಿಗೂ ಕೂಡ ಮಂಗಲತ್ವಾದಿಗುಣ ಯೋಗದಿಂದಲೂ ಇವೂ ನಾರಾಯಣನನ್ನೇ ಹೇಳುವುವು. ಆದುದರಿಂದ ವಿರೋಧವಿಲ್ಲ ಎಂದು ಅಭಿಪ್ರಾಯಪಟ್ಟು 'ಅನ್ಯಾಸ್ತರ್ಹಿ ಗಿರಃಕಥಂ'—ಬೇರೆವಾಕ್ಯಗಳ ಗತಿ ಏನು ? ಎಂದು ಪ್ರಶ್ನೆ. ಅದಕ್ಕೆ ಸಮಾಧಾನ ಹೇಳಿ ಆಯಿತು.

'ಅತ್ರಾಹರುದ್ರಃಕಥಂ' ಅಥರ್ವಶಿರಸ್ಸಿನಲ್ಲಿ 'ಅಹಮೇಕಃಪ್ರಥಮ ಮಾಸಮ್' = ನಾನೊಬ್ಬನೇ ಮೊದಲಿನಲ್ಲಿದ್ದೆ' ಎಂದು ಹೇಳಿದೆಯಲ್ಲ. ಆ ರುದ್ರವಾಕ್ಯದ ಗತಿಏನು ? ತನ್ನನ್ನೇ ಜಗತ್ಕಾರಣವಾಗಿ ರುದ್ರನು ಹೇಳಿಕೊಂಡಿದ್ದಾನಲ್ಲಾ ಎಂದರೆ "ತದ್ದೃಷ್ಟ್ಯಾ" ಎಂಬುದು ಅದಕ್ಕೆ ಉತ್ತರ. ರುದ್ರನು ತನ್ನನ್ನು ಶರೀರವನ್ನಾಗಿ ಪಡೆದ ಅಂತರ್ಯಾಮಿಯಾದ ಪರಮಾತ್ಮನನ್ನು ಅನುಸಂಧಾನ ಮಾಡುತ್ತಾ ಅಹಂಶಬ್ದ ಪ್ರಯೋಗವನ್ನು ಮಾಡಿರುವನಾದುದರಿಂದ ಈ ವಾಕ್ಯಕ್ಕೂ ಯಾವುದೊಂದು ಅನುಪಪತ್ತಿಯೂ ಇಲ್ಲ.

ಪುನಃ—'ಕಥಮುದ್ಭವತಿ' ಎಂಬುದು ಪ್ರಶ್ನವಾಕ್ಯವು. ಹೀಗೆ ನಾರಾಯಣನೇ ತತ್ತ್ವವೆನಿಸಿಕೊಳ್ಳುವನಾದರೆ ಇವನು ಉತ್ಪತ್ತಿ ಇಲ್ಲದವನಾಗಿರ ಬೇಕಲ್ಲವೇ ? ಹೀಗಿದ್ದರೂ "ಬ್ರಹ್ಮವಿಷ್ಣುರುದ್ರಾಸ್ತೇ ಸರ್ವೇ ಸಂಪ್ರಸೂಯಂತೇ" ಎಂಬ ವಾಕ್ಯದಲ್ಲಿ ಬ್ರಹ್ಮ, ರುದ್ರ, ಇಂದ್ರ ಇವರಿಗೆ ಸಮಾನವಾಗಿ ಇವನಿಗೂ ಉತ್ಪತ್ತಿ ಯನ್ನು ಹೇಳಿರುವುದು ಹೇಗೆ ಸಂಗತವಾದೀತು ? ಎಂದರೆ 'ಅವತರತಿ' ಎಂಬುದು ಇದಕ್ಕೆ ಪ್ರತ್ಯುತ್ತರ. ವಿಷ್ಣುವಿಗೆ ಹೇಳಿರುವ ಉತ್ಪತ್ತಿ ಕರ್ಮವಶ್ಯರಾದ ಬ್ರಹ್ಮ, ರುದ್ರ, ಇಂದ್ರ ಇವೇ ಮೊದಲಾದ ಜೀವರ ಉತ್ಪತ್ತಿಯಂತೆ ಕರ್ಮಾಧೀನವಾಗಿ ಬಂದುದಲ್ಲ ; ಸುಖ, ದುಃಖ, ಭೋಗಕ್ಕಾಗಿಯೂ ಬಂದುದಲ್ಲ. ಸ್ವೇಚ್ಛೆಯಿಂದ ಲೋಕೋಜ್ಜೀವನಕ್ಕಾಗಿ ಮಾಡಿದ ಅವತಾರ ರೂಪವಾಗಿರುವುದು. ಆದಕಾರಣ ತತ್ತ್ವವೆನಿಸಿಕೊಂಡ ನಾರಾಯಣನಿಗೆ ಉತ್ಪತ್ತಿರೂಪ ದೋಷವಿಲ್ಲವೆಂದು ಅರ್ಥ.

ಮತ್ತೆ—'ಅನ್ಯತ್ಕಥಂ' ಎಂಬುದಾಗಿ ಪ್ರಶ್ನವಾಕ್ಯವು. ಹೀಗೆ ನಾರಾಯಣನೇ ತತ್ತ್ವವೆನಿಸಿಕೊಂಡು ನಾರಾಯಣನೇ ಬ್ರಹ್ಮವೆನಿಸಿಕೊಳ್ಳುವನಾದರೆ—ಶ್ವೇತಾಶ್ವತ ರೋಪನಿಷತ್ತಿನಲ್ಲಿ—ಶಿವಮಹೇಶ್ವರಾದಿ ಶಬ್ದಗಳಿಂದ ಹೇಳಲ್ಪಟ್ಟವನಿಗೆ ಬ್ರಹ್ಮತ್ವ ವನ್ನು ಹೇಳುವ ವಾಕ್ಯದ ಗತಿಯೇನು ? ಎಂದರೆ 'ನೀಯತಾಂ' ಎಂಬುದು ಇದಕ್ಕೆ ಪ್ರತ್ಯುತ್ತರ, ಪುರುಷಸೂಕ್ತವನ್ನು ಜ್ಞಾಪಕಪಡಿಸುವ ಅನೇಕ ಪದಗಳು ಈ ಶ್ವೇತಾಶ್ವತರ ಪ್ರಕರಣದಲ್ಲಿ ಪಠಿತಗಳಾಗಿರುವುದರಿಂದ ಅವುಗಳನ್ನು ಅನುಸರಿಸಿ ಶಿವ ಮಹೇಶ್ವರಾದಿ ಶಬ್ದಗಳಿಗೂ ನಾರಾಯಣನಲ್ಲಿ ಪರ್ಯಾವಸಾನವನ್ನು ಹೇಳಿ ಎಲ್ಲಾ ವಾಕ್ಯಗಳನ್ನೂ ನಿರ್ವಹಿಸಬೇಕೆಂಬುದು ಇದರ ಅರ್ಥವಾಗಿದೆ.

ಅಂತು ಪರಮಕಾರಣತ್ವವೂ ಮುಮುಕ್ಷೂಪಾಸ್ಯತ್ವವೂ ಸರ್ವಾಂತರ್ಯಾಮಿ ತ್ವವೂ ಶ್ರೀಮನ್ನಾರಾಯಣನಿಗೇ ಸಲ್ಲುವುದಲ್ಲದೆ ಮತ್ತೊಬ್ಬರಿಗೆ ಸಲ್ಲಲಾರವು. ಆದುದರಿಂದಲೇ ತ್ರಿಮೂರ್ತಿಸಾಮ್ಯ ಐಕ್ಯ ಉತ್ತೀರ್ಣ ವ್ಯಕ್ತ್ಯನ್ತರಪರ ಪಕ್ಷಗಳು ಬುಡವಿಲ್ಲದವು ಎಂದು ತಿಳಿಯಬೇಕು. ಇಲ್ಲಿ ರಹಸ್ಯತ್ರಯಸಾರದ ಪರದೇವತಾ ಪಾರಮಾರ್ಥ್ಯಾಧಿಕಾರದ ಶ್ಲೋಕವನ್ನು ಉದ್ಧರಿಸೋಣ.

ಆತ್ಮೈಕ್ಯಂ ದೇವತೈಕ್ಯಂ ತ್ರಿಕಸಮಧಿಕತಾ (ತ್ರಿಕಸಮಧಿಗತಾ) ತುಲ್ಯತೈಕ್ಯಂ ತ್ರಯಾಣಾಮನ್ಯತ್ರೈಶ್ವರ್ಯ ಮಿತ್ಯಾದ್ಯನಿಪುಣ ಫಣಿತೀರಾದ್ರಿಯನ್ತೇನ ಸನ್ತಃ। ತ್ರಯನ್ತೈರೇಕ ಕಣ್ಠ್ಯೈಸ್ತದನುಗುಣಮನುವ್ಯಾಸ ಮುಖ್ಯೋಕ್ತಿಭಿಶ್ಚ ಶ್ರೀಮಾನ್ನಾ ರಾಯಣೋನಃ ಪತಿ ರಖಿಲತನು ರ್ಮುಕ್ತಿದೋ ಮುಕ್ತಭೋಗ್ಯಃ ॥

ಆತ್ಮೈಕ್ಯಂ=ಇಲ್ಲಿ ಪರಮಾತ್ಮನಿಗೆ ಚೇತನ ಮತ್ತು ಅಚೇತನಾತ್ಮದಿಂದ ಪರಿ ಣಾಮವಾಗೋಣದರಿಂದ ಎಲ್ಲವೂ ಬ್ರಹ್ಮದ್ರವ್ಯ ಎಂಬುದು ಯಾದವ ಮತ್ತ, ಪರ ಮಾತ್ಮನಿಗೆ ಚೇತನಾಚೇತನ ಪ್ರಪಞ್ಚದೊಡನೆ ಭೇದವಿಲ್ಲ ಎಂಬುದು ಮಾಯಿಮತ.

ಅವರು ಹೀಗೆ ಹೇಳುತ್ತಾರೆ—

**ಮಾನಾಭಾವಾದ ಯುಕ್ತೇಶ್ಚ ನಭಿದೇಶ್ವರಜೀವಯೋಃ ।**
**ಜೀವಾನಾ ಮಚಿತಾಂ ಚೈವಮಾತ್ಮನೋನ ಪರಸ್ಪರಮ್ ॥**

ಪ್ರಮಾಣವಿಲ್ಲದುದರಿಂದ ಹಾಗೆಯೇ ಯುಕ್ತಿಯೂ ಇಲ್ಲದುದರಿಂದ ಈಶ್ವರನಿಗೂ ಜೀವಗಳಿಗೂ ಭೇದವಿಲ್ಲ, ಅಚಿತ್ತುಗಳಿಗೂ ಆತ್ಮನಿಗೂ ಚೇತನದಿಂದ, ಚೇತನವಾಗಿರುವಿಕೆಯಿಂದ ಭೇದವು ಇಲ್ಲ. ಜೀವಗಳಿಗೆ ಒಂದಕ್ಕೊಂದಕ್ಕೆ ಭೇದವಿಲ್ಲ. ಇವೆರಡು ಮತವೂ 'ಆತ್ಮೈಕ್ಯಂ' ಎಂಬ ಪದದಿಂದ ಸಂಗ್ರಹಿಸಲ್ಪಟ್ಟಿದೆ, 'ದೇವತೈಕ್ಯಂ'—ಎಲ್ಲಾ ದೇವತೆಗಳಿಗೂ ಒಂದಾಗುವಿಕೆ ಎಂಬುದು ಒಂದು ಪಕ್ಷ, ಆ ಮೂರು ಪಕ್ಷಗಳಲ್ಲಿ—

**ಅವ್ವಿಡತ್ತಿಲ್ ಚೇತನಾ ಚೇತನಙ್ಗಳುಡೈಯ ವತ್ಯನ್ತಭೇದಮ್ ಪ್ರಮಾಣ ಸಿದ್ಧಮಾಕೈಯಾಲೇಯೆಲ್ಲಾಮ್ ಪರದೇವ ತೈಯಾಯಿರುಕ್ಕಿರ ಬ್ರಹ್ಮದ್ರವ್ಯಮೆನ್ಗಿರ ಪಕ್ಷಂ ಘಟಿಯಾದು.**

"**ಪೃಥಗಾತ್ಮಾನಂ ಪ್ರೇರಿತಾರಂಚ ಮತ್ವಾ**=ಆತ್ಮನನ್ನೂ ಅವನನ್ನು ಪ್ರೇರಿಸುವವನನ್ನೂ ಬೇರೆ ಬೇರೆಯಾಗಿ ತಿಳಿದು", "**ಭೋಕ್ತಾ ಭೋಗ್ಯಂಪ್ರೇರಿತಾರಂಚ ಮತ್ವಾ**=ಅನುಭವಿಸುವವನು, ಅನುಭವಿಸಲು ತಕ್ಕದ್ದು, ಇವುಗಳನ್ನು ಪ್ರೇರಿಸುವವನನ್ನೂ—ನಿಯಾಮಕನನ್ನೂ ಅರಿತು" ಎಂಬ ಶ್ರುತಿಗಳಿಂದ ಚೇತನಾಚೇತನಗಳ ಅತ್ಯಂತ ಭೇದವು ಪ್ರತ್ಯಕ್ಷ ಅನುಮಾನ ಆಗಮ ರೂಪಗಳಾದ ಮೂರು ಪ್ರಮಾಣಗಳಿಂದ ಸಿದ್ಧವಾಗಿರುವುದರಿಂದ ಬ್ರಹ್ಮದ್ರವ್ಯ ಎಂಬ ಯಾದವ ಪಕ್ಷವು ಕೂಡುವುದಿಲ್ಲ ಇವುಗಳಿಗೆ ಸ್ವರೂಪದಿಂದಲೇ ಅತ್ಯಂತ ಭೇದವಿದೆ, ಆದುದರಿಂದ ಭಾಸ್ಕರನಿಗೆ ಅಭಿಮತವಾದ ಔಪಾಧಿಕಭೇದವೆಂಬುದೂ ಸಂಗತವಾಗುವುದಿಲ್ಲ.

"**ಸ್ವಭಾವ ಸಿದ್ಧಮಾನ ಜೀವೇಶ್ವರಭೇದ ಮುಮಪ್ಪಡಿಯೆ**=ಸ್ವಭಾವ ಸಿದ್ಧವಾದ ಜೀವನಿಗೂ ಈಶ್ವರನಿಗೂ ಇರುವ ಭೇದವೂ ಹಾಗೆಯೇ" ಎಂದು ಹೇಳಿರುವುದರಿಂದ ಶಙ್ಕರಮತವು ಒಪ್ಪತಕ್ಕದ್ದಲ್ಲ, ಬ್ರಹ್ಮ, ವಿಷ್ಣು, ರುದ್ರ ಈ ರೂಪವಾದ ಪುರುಷತ್ರಯದಲ್ಲೂ ಬೇರೆಯಾಗಿ ತಿಳಿಯಲ್ಪಟ್ಟ ಇವರೆಲ್ಲರೂ ಸಮಾನರು ಎಂಬುದು ಒಂದುಪಕ್ಷ, ಮೂವರೂ ಒಂದು ಎಂಬುದು ಮತ್ತೊಂದು ಪಕ್ಷ. ಇವೆರಡೂ ಸರಿಯಲ್ಲ—'**ಪೃಥಗಾತ್ಮಾನಂ**' ಎಂಬ ಶ್ರುತಿಯೇ ಇವರಿಗೂ ಈಶ್ವರನಿಗೂ ಇರುವ ಭೇದವನ್ನು ಸಮರ್ಥಿಸುತ್ತದೆ. "**ಅಷ್ಟೌವಸವ ಏಕಾದಶರುದ್ರಾಃ ದ್ವಾದಶಾದಿತ್ಯಾಃ**—ವಸುಗಳು ಎಂಟು ಮಂದಿ, ಹನ್ನೊಂದು ರುದ್ರರು, ಹನ್ನೆರಡು ಆದಿತ್ಯರು" ಎಂದು ಹೇಳಿರುವುವರಿಂದ ದೇವತೆಗಳಿಗೆ ಅನ್ಯೋನ್ಯಭೇದವು ಪ್ರಮಾಣ ಸಿದ್ಧವಾಗಿದೆ.

"ಮಮಸಾಧರ್ಮ್ಯಮಾಗತಾಃ=ನನಗೆ ಸಮಾನವಾದ ಧರ್ಮವುಳ್ಳವರಾಗುತ್ತಾರೆ" ಎಂದು ಗೀತಾಚಾರ್ಯನು ಹೇಳಿರುವುದರಿಂದ ಜೀವೇಶ್ವರಾಭೇದವು ಔಪಾಧಿಕವಾದುದಲ್ಲ. "ಅನ್ಯತ್ರೈಶ್ವರ್ಯಂ=ಈ ಮೂವರಿಗಿಂತ ಬೇರೆ ಈಶ್ವರತ್ವ", '**ಉತ್ತೀರ್ಣ ಶಿವಃ ಕಾರಣಮ್**=ಈ ಮೂವರಿಗಿಂತ ಬೇರೆಯಾದ ಶಿವನು ಕಾರಣ' ಎಂಬುದು ಒಂದು ಪಕ್ಷ, ಇವೇ ಮೊದಲಾದ ಅನಿಪುಣ ಫಣಿತೀಃ—ನ್ಯಾಯವನ್ನು ಚೆನ್ನಾಗಿ ಅರಿಯದವರ ಮಾತನ್ನು, ಸನ್ತಃ=ಸಾರವಾದದ್ದು, ಅಸಾರವಾದದ್ದು ಎಂಬ ವಿವೇಕ ಜ್ಞಾನವುಳ್ಳ ಬ್ರಹ್ಮನಿಷ್ಠರು ನಾದ್ರಿಯನ್ತೇ—ಆದರಿಸುವುದಿಲ್ಲ.

ಆ ಮತಗಳು ಉಪಪನ್ನವಾಗುವುದರಿಂದ ದೇವತಾ ವಿಶೇಷ ನಿರ್ಣಯದಲ್ಲಿ ಸಮರ್ಥವಾಗದಿದ್ದರೂ, ವಿರುದ್ಧವಾದ ಪ್ರಮಾಣಗಳು ಬಹಳವಾಗಿರುವುದರಿಂದ ಹೇಗೆ ದೇವತಾ ವಿಶೇಷ ನಿರ್ಣಯ ಎಂದರೆ, ತ್ರಯನ್ತ್ಯೈಃ—**ಏಕಏವರುದ್ರಃ। ನಕಿರಿನ್ದ್ರ್ವದುತ್ತರಃ। ಅಗ್ನಿಸ್ಸರ್ವಾ ದೇವತಾಃ।** ಇವೇ ಮೊದಲಾದ ಕರ್ಮ ಭಾಗದಲ್ಲಿ ಇರುವ ವಾಕ್ಯಗಳಿಗೆ ಕರ್ಮವಿಧಿ ಶೇಷತ್ವವಿರುವುದರಿಂದ ಅಂದರೆ ಆ ಆ ಕರ್ಮಗಳಿಗೆ ತಾಳಸ್ತ್ಯವನ್ನು ಹೇಳುವುದಕ್ಕಾಗಿ ಆ ಆ ದೇವತೆಗಳನ್ನೇ ಹೆಚ್ಚೆಂದು ಹೇಳುವಿಕೆ. ತತ್ತ್ವವಿಷಯದಲ್ಲಿ ಇವಕ್ಕೆ ನಿರ್ಣಯ ಉಂಟುಮಾಡುವ ಸಾಮರ್ಥ್ಯವಿಲ್ಲ—ತತ್ತ್ವಪರವಲ್ಲ ಎಂಬ ಭಾವ. ಆದುದರಿಂದ ಉಪನಿಷತ್ತುಗಳಿಂದ ಎಂದುಹೇಳಿದೆ. ಏಕಕಣ್ಠ್ಯೈಃ= ಪ್ರಮಾಣಗಳು ಬೇರೆ ಮತಗಳಲ್ಲಿ ಒಂದಕ್ಕೊಂದು ವಿರುದ್ಧಗಳಾಗುತ್ತವೆಯೇ ಹೊರತು ಶ್ರೀಮನ್ನಾರಾಯಣನೇ ಪರದೇವತೆ ಎಂಬ ಸಿದ್ಧಾಂತದಲ್ಲಿ ಸ್ವಲ್ಪವೂ ವಿರೋಧವನ್ನುಂಟುಮಾಡಲಾರವು. ಮತ್ತೇನೆಂದರೆ ಇವೆಲ್ಲಾ ಈ ಒಂದರ್ಥದಲ್ಲಿ ಸಸ್ವರಗಳಾಗಿವೆ.

ಆದರೂ ಶೈವಪುರಾಣವೇ ಮೊದಲಾದ ಉಪಬ್ರಹ್ಮಣಗಳು ವಿರೋಧಿಗಳಾಗಿರುವಾಗ ನಾರಾಯಣನೇ ಪರ ದೇವತೆ ಎಂದು ನಿರ್ಣಯಿಸಲು ಸಾಧ್ಯವೋ? ಎಂದರೆ ತದನುಗುಣ, ಮನು ವ್ಯಾಸ ಮುಖ್ಯೋಕ್ತಿಭಿಶ್ಚ='ಅನುಗುಣ' ಎಂದು ಹೇಳಿರುವುದರಿಂದ ಶೈವಪುರಾಣಾದಿಗಳು ಅನುಗುಣವಲ್ಲ ಎಂಬುದು ತೋರಿಸಲ್ಪಡುತ್ತದೆ. ಇದನ್ನು ಶಾರೀರಕ ಶಾಸ್ತ್ರದಲ್ಲಿ ಸ್ಮೃತ್ಯಧಿಕರಣದಲ್ಲಿ ತೀರ್ಮಾನಮಾಡಿದ್ದಾರೆ. ಮನು, ವ್ಯಾಸ, ವಾಲ್ಮೀಕಿ, ಪರಾಶರ, ಶುಕ ಶೌನಕಾದಿಗಳು ಇವರುಗಳ ಉಪಬ್ರಹ್ಮಣಗಳು ಬಹಳವಾಗಿವೆ. ಅವರುಗಳ ಮಾತಿನಿಂದ ನಮಗೆ, ಅಖಿಲತನುಃ=ಚೇತನಾಚೇತನಗಳನ್ನು ಶರೀರವಾಗಿ ಉಳ್ಳ ಶ್ರಿಯಃ ಪತಿಯಾದ ನಾರಾಯಣನು ಮೋಕ್ಷವನ್ನು ಕೊಡುವವನು. ಮುಕ್ತರಿಗೆ ಭೋಗ್ಯವಾದವನು ಅನುಭವಿಸಲು ತಕ್ಕವನು ಎಂಬುದು ವ್ಯಕ್ತವಾಗುತ್ತದೆ.

ಅಂತೂ ನಾರಾಯಣನಿಗೇ ಪರಮಕಾರಣತ್ವ, ಮೋಕ್ಷವನ್ನು ಪಡೆಯಬೇಕೆಂಬ ಅಪೇಕ್ಷೆ ಉಳ್ಳವರಿಂದ ಉಪಾಸನೆ ಮಾಡಿಸಿಕೊಳ್ಳಲು ಅರ್ಹತೆ ಇರುವಿಕೆ, ಎಲ್ಲಕ್ಕೂ

ಅಂತರ್ಯಾಮಿಯಾಗಿ ಇರುವಿಕೆ ಅಂದರೆ ಒಳಹೊಕ್ಕು ನಿಯಮಿಸುವಿಕೆ ಇವೆಲ್ಲಾ ಸಿದ್ಧಿಸುವುದರಿಂದ ಎಲ್ಲವೂ ಬ್ರಹ್ಮದ್ರವ್ಯ ಬ್ರಹ್ಮ ವಿಷ್ಣು ರುದ್ರರು ಸಮರು, ಎಲ್ಲರೂ ಒಂದು, ಈ ಮೂರು ಮಂದಿಗಿಂತ ಬೇರೆಯಾದ ಮತ್ತೊಬ್ಬನು ಈಶ್ವರನೆಂಬ ನಾಲ್ಕು ಪಕ್ಷಗಳೂ ನಿರ್ಮೂಲವಾದವು ಎಂದರಿಯಬೇಕು.

ಪರಸ್ಪರ ಭಿನ್ನರಾದ ಮೂರು ಮಂದಿ ಈಶ್ವರರು ಎಂಬ ಪಕ್ಷವು ಒಬ್ಬನಿಗೇ—

೧. ಸರ್ವಪ್ರಶಾಸಿತೃತ್ವ=ಎಲ್ಲವನ್ನೂ ನಿಯಮಿಸುವಿಕೆ ಎಂಬ ವಾದದಿಂದ ನಿರಸನ ಮಾಡಲ್ಪಟ್ಟಿತು.

೨. "ವಿಷ್ಣುರೇವಪರಂಬ್ರಹ್ಮ ತ್ರಿಭೇದ ಮಿಹಪಠ್ಯತೇ=ವಿಷ್ಣುವೇ ಪರ ಬ್ರಹ್ಮ, ಸುಮ್ಮನೇ ಇಲ್ಲಿ ಮೂರು ವಿಧವಾದ ಭೇದದಿಂದ ಹೇಳಲ್ಪಟ್ಟಿದೆ" ಇವೇ ಮೊದ ಲಾದ ವಚನಗಳ ಆಧಾರದಿಂದ ತ್ರಿಮೂರ್ತಿಗಳ ಐಕ್ಯವಾದವೂ "ಮಮಾನ್ತರಾತ್ಮಾ ತವಚ=ನನಗೂ ಅಂತರಾತ್ಮನವನು ನಿನಗೂ ಕೂಡ ಹಾಗೆಯೇ" ಎಂಬ ಬೇರೆ ವಾಕ್ಯದ ಸ್ವಾರಸ್ಯದಿಂದ ನಿರಸನಮಾಡಲ್ಪಟ್ಟಿತು.

೩. ತ್ರಿಮೂರ್ತಿಗಳಿಗಿಂತ ಬೇರೆಯಾದ ಪುರುಷನು ಅಥವಾ ಕೇವಲ ಚಿನ್ಮಾತ್ರವೇ ಪರತತ್ತ್ವ ಎಂಬ ಪಕ್ಷವೂ ಕೂಡ 'ಸ ಸಂಜ್ಞಾಂಯಾತಿಭಗವಾನೇಕ ಏವ ಜನಾರ್ದನಃ- -ಆ ಜನಾರ್ದನನೊಬ್ಬನೇ ಹೆಸರನ್ನು ಪಡೆಯುತ್ತಾನೆ' ಇವೇ ಮೊದ ಲಾದವುಗಳಿಂದ ಬಾಧಿಸಲ್ಪಟ್ಟಿದೆ.

೪. ವಿಷ್ಣುಗಿಂತ ಬೇರೆಯಾದ ಬ್ರಹ್ಮನೋ ರುದ್ರನೋ ಆದಿತ್ಯನೋ ಯಾವನೋ ಒಬ್ಬನು ಈಶ್ವರನು ಎಂಬ ಪಕ್ಷವೂ ವಿಷ್ಣುವಿಗೇ ಬ್ರಹ್ಮತ್ವವನ್ನು ಸ್ಥಾಪನೆಮಾಡಿರುವುದರಿಂದ ನಿರಸನೆ ಮಾಡಲ್ಪಟ್ಟಿತು.

ಮೂರು ಮೂರ್ತಿಗಳಲ್ಲೂ ಪರಿಪೂರ್ಣನಾಗಿ ತುಂಬಿರುವವನೇ ಈಶ್ವರನು. ದ್ವಿತ್ವಾದಿಗಳಂತೆ [1]ವ್ಯಾಸಜ್ಯವಾಗಲ್ಲ. ಹಾಗಾದರೆ ಮೂರು ಮೂರ್ತಿಗಳು ಸಮರು ಎಂದು ಹೇಳಿದಂತಾಯಿತು ಎಂದರೆ ಪ್ರಜಾಪತಿ ಪಶುಪತಿ ಮೂರ್ತಿಗಳ ಲ್ಲಾದರೋ ಪ್ರಮಾಣ ಬಲದಿಂದ ಜೀವದ್ವಾರದಿಂದ ಆತ್ಮನಾಗಿದ್ದಾನೆ. "ನಮೋ ಹಿರಣ್ಯಗರ್ಭಾಯ ಹರಯೇಶಙ್ಕರಾಯಚ=ಹಿರಣ್ಯಗರ್ಭನಿಗೆ ನಮಸ್ಕಾರ. ಶಙ್ಕರ ನಿಗೆ ನಮಸ್ಕಾರ". ಇವೇ ಮೊದಲಾದ ಜಾಗಗಳಲ್ಲಿ ಹಿರಣ್ಯಗರ್ಭ ಶಙ್ಕರ ಮೂರ್ತಿ

1. ವ್ಯಾಸಜ್ಯವೃತ್ತಿ—ಎಂದರೆ ಘಟ ಪಟ ಇವೆರಡೂಇವೆ ಎಂದಾಗ, ಎರಡು ಎಂಬ ಸಂಖ್ಯೆ ಘಟಪಟಗಳೆರಡರಲ್ಲೂ ಅಡಗಿದೆ—ಸೇರಿದೆ. ಇವೆರಡರಲ್ಲಿ ಒಂದನ್ನು ತೆಗೆದರೆ ಆ ಸಂಖ್ಯೆಗೆ ಅಲ್ಲಿ ಸಂಬಂಧವಿಲ್ಲ.

ಗಳಲ್ಲಿ ಜೀವ ವಿಶೇಷದ ಮೂಲಕ ಭಗವಂತನ ಶರೀರವಾಗಿರುವಿಕೆ. ವಿಷ್ಣುಮೂರ್ತಿಯಲ್ಲಾದರೋ ಅವ್ಯವಹಿತವಾಗಿ—ನೇರವಾಗಿ ಎಂಬ ಭಾವ. ಅವನು ಎಲ್ಲಿಯೂ ತುಂಬಿದ್ದಾನೆಂದು ಶ್ರುತಿಯು ಹೇಳುತ್ತದೆ.

ಶ್ರುತಿಯಾದರೋ ಬ್ರಹ್ಮಕ್ಕೆ ಅವಯುವವಿಲ್ಲದಿರುವಿಕೆಯನ್ನೂ ವಿಚಿತ್ರವಾದ ಸೃಷ್ಟಿಯನ್ನೂ ಹೇಳುತ್ತದೆ.

ಇವೆಲ್ಲವನ್ನೂ [1]"ಕೃತ್ಸ್ನಪ್ರಸಕ್ತಿರ್ನಿರವಯತ್ವ ಶಬ್ದಕೋಪೋವಾ" ಇವೇ ಮೊದಲಾದ ವ್ಯಾಸಸೂತ್ರಗಳನ್ನು ಅರಿತರೆ ನಮ್ಮ ಸಂದೇಹವೆಲ್ಲವೂ ಹೋಗುತ್ತವೆ. ಮೊಸರಾಗಿ ಪರಿಣಮಿಸುವ ಹಾಲಿಗೆ ಯಾವ ವಿಧವಾದ ಸಹಕಾರವೂ ಬೇಕಾಗಿಲ್ಲ. ಹೆಪ್ಪನ್ನು ಹಾಕುವುದು ರುಚಿಗಾಗಿಯೇ ಹೊರತು ಮೊಸರಾಗಿ ಪರಿಣಮಿಸುವುದಕ್ಕಲ್ಲ. ಹಾಗೆಯೇ ಒಬ್ಬೊಂಟಿಗವಾದ ಬ್ರಹ್ಮಕ್ಕೆ ಜಗತ್ಕಾರಣತ್ವವು ಕೂಡುತ್ತದೆ. ದೇವಾದಿಗಳು ತಮ್ಮ ಲೋಕದಲ್ಲಿ ತಮಗೆ ಇಷ್ಟವಾದ ಕಾರ್ಯಗಳನ್ನು ಸಂಕಲ್ಪ ಮಾತ್ರದಿಂದಲೇ ಹೇಗೆ ಸೃಷ್ಟಿಸುತ್ತಾರೋ ಹಾಗೆಯೇ ಬ್ರಹ್ಮವೂ ತನ್ನ ಸಂಕಲ್ಪದಿಂದಲೇ ತಾನೇ ಜಗತ್ತನ್ನು ಸೃಷ್ಟಿಸಬಹುದು.

ಹಾಗಾದರೆ ಬ್ರಹ್ಮಕ್ಕೆ ದೃಷ್ಟಾಂತವಾಗಿ ಹೇಳಿದ ಹಾಲಿನ ಹಾಗೆ ಬ್ರಹ್ಮವೂ ಸಾವಯುವವೋ ಅಂದರೆ ಆ ಸಂದೇಹವನ್ನು ಈ ಪ್ರಕೃತ ಸೂತ್ರದಿಂದ ಆರಂಭವಾಗುವ ಅಧಿಕರಣ ನೀಗಿಸುತ್ತದೆ.—ಬ್ರಹ್ಮಕ್ಕೆ ಜಗತ್ಕಾರಣತ್ವವು ಉಂಟಾಗುತ್ತದೆಯೋ ಇಲ್ಲವೋ ಎಂಬುದು ಸಂಶಯು. ಉಂಟಾಗುವುದಿಲ್ಲ ಎಂಬುದು ಪೂರ್ವಪಕ್ಷ–ಏತಕ್ಕೆಂದರೆ–ನಿರವಯುವವಾದ ಬ್ರಹ್ಮಕ್ಕೆ ಜಗದುಪಾದಾನತ್ವವನ್ನು ಅಙ್ಗೀಕರಿಸಿದರೆ ಕೃತ್ಸ್ನಬ್ರಹ್ಮವೂ ಅಂದರೆ ಪರಿಪೂರ್ಣವಾದ ಬ್ರಹ್ಮವೂ ಜಗತ್ತಿನ ಆಕಾರವಾಗಿ ಪರಿಣಮಿಸುವುದರಿಂದ ನಿತ್ಯವಿಭೂತಿಯಲ್ಲಿ—ವೈಕುಂಠದಲ್ಲಿ ವ್ಯಾಪರಿಸಿರುವಿಕೆಯು ಬ್ರಹ್ಮಕ್ಕೆ ಕೂಡದೇ ಹೋಗುತ್ತದೆ. ಅಲ್ಲಿ ಅದು ಇಲ್ಲದೆ ಇರಬೇಕಾಗುತ್ತದೆ. ಈ ಸಂದೇಹವನ್ನು ಪರಿಹರಿಸುವುದಕ್ಕಾಗಿ ಬ್ರಹ್ಮಕ್ಕೆ ಅವಯುವಗಳೊಡನೆ ಕೂಡಿರುವಿಕೆಯನ್ನು ಅಂದರೆ ಸಾವಯುವತ್ವವನ್ನು ಅಂಗೀಕರಿಸಿ, ಅವಯುವಗಳೊಡನೆ ಕೂಡಿದ ಒಂದು ಅಲ್ಲಿದೆ ಮತ್ತೊಂದು ಇಲ್ಲಿದೆ ಎಂದರೆ "ಏಕಮೇವಾ ದ್ವಿತೀಯಮ್—ಒಂದೇ ಎರಡನೆಯದು ಇಲ್ಲ" ಎಂದು ಹೇಳಿದ ನಿರವಯತ್ವವು ವಿರುದ್ಧವಾಗುತ್ತದೆ. ಇದನ್ನು ಹೇಳುವ ಸೂತ್ರ [2]"ಕೃತ್ಸ್ನಪ್ರಸಕ್ತಿರ್ನಿರವಯತ್ವ ಶಬ್ದಕೋಪೋವಾ".

1. ಬ್ರಹ್ಮಸೂತ್ರ. ೨, ೧, ೨೬.
2. ಬ್ರಹ್ಮಸೂತ್ರ. ೨, ೧, ೨೬.

**ಅರ್ಥ :**—ಬ್ರಹ್ಮಕ್ಕೆ ಕಾರಣವಾಗುವಿಕೆಯನ್ನು ಹೇಳಿದರೆ ಕೃತ್ಸ್ನವಾದ ಬ್ರಹ್ಮಕ್ಕೂ ಕಾರ್ಯವಾಗಿರುವಿಕೆಯಿಂದ ಉಪಯೋಗವು ಪ್ರಸಕ್ತವಾಗುತ್ತದೆ—ಅದಕ್ಕಾಗಿ ಸಾವಯವತ್ವವನ್ನು ಹೇಳಿದರೆ 'ಏಕಮೇವ' ಎಂದು ಹೇಳಿದ ನಿರವಯತ್ವ ಶಬ್ದಕ್ಕೆ ಕೋಪವು-ಬಾಧವು ಪ್ರಸಕ್ತವಾಗುತ್ತದೆ.

**ಇನ್ನೂ ಇದರ ವಿವರಣೆ** :—"**ಸದೇವ ಸೋಮ್ಯೇದಮಗ್ರ ಆಸೀತ್**=ಎಲೌ ಸೋಮ್ಯನೇ ! ಸೃಷ್ಟಿಗೆ ಮೊದಲು ಇದು ಸತ್ತಾಗಿಯೇ ಇದ್ದಿತು", "**ಇದಂ ವಾ ಅಗ್ರೇನೈವ ಕಿಞ್ಚನಾಸೀತ್**=ಸೃಷ್ಟಿಗೆ ಮೊದಲು ಇದು ಇದ್ದಿತು ಬೇರೆಯಾವುದೂ ಇರಲಿಲ್ಲ", "**ಆತ್ಮಾವಾ ಇದಮೇಕ ಏವಾಗ್ರ ಆಸೀತ್**=ಮೊದಲು ಆತ್ಮಶಬ್ದದಿಂದ ಹೇಳಲ್ಪಡುವ ಇದು ಒಂದೇ ಇದ್ದಿತು" ಇವೇ ಮೊದಲಾದವುಗಳಲ್ಲಿ ಭಾಗವಿಲ್ಲದ ನಿರವಯವವಾದ ಬ್ರಹ್ಮವೊಂದೇ, "ಬಹುಸ್ಯಾಮ್=ಬಹಳವಾಗುತ್ತೇನೆ" ಎಂದು ಸಂಕಲ್ಪಮಾಡಿ ಆಕಾಶ, ವಾಯು ಮೊದಲಾದ ವಿಭಾಗವನ್ನೂ ಪಡೆದು ಚತುರ್ಮುಖನೇ ಮೊದಲಾಗಿ ಚಿಕ್ಕಹುಳುವಿನವರೆಗೂ ಇರುವ ಕ್ಷೇತ್ರಜ್ಞ ವಿಭಾಗವನ್ನೂ ಪಡೆದಿದ್ದಾಯಿತು. ಹೀಗಿರುವಾಗ ಕಾರಣಭೂತವಾದ ಬ್ರಹ್ಮಕ್ಕೆ ನಿರವಯವತ್ವವನ್ನು ಹೇಳುವ ಶಬ್ದಗಳು ಬಾಧಿತವಾಗುತ್ತವೆ. ಅದು ಅವಯವವಿಲ್ಲದ್ದಾದರೆ ಬಹುಭವನವು-ಬಹುವಾಗುವಿಕೆಯು ಕೂಡುವುದಿಲ್ಲ. ಕಾರ್ಯತ್ವಕ್ಕೆ ಉಪಯೋಗವಾಗದ ಅಂಶದ ಇರುವಿಕೆಯೂ ಕೂಡುವುದಿಲ್ಲ. ಉಪಪನ್ನವಾಗುವುದಿಲ್ಲ. ಆದುದರಿಂದ ಅಸಮಂಜಸವಾದಂತೆ ತೋರುತ್ತದೆ. ಆದುದರಿಂದ ಬ್ರಹ್ಮಕಾರಣತ್ವವು ಉಪಪನ್ನವಾಗುವುದಿಲ್ಲ.

ಈ ಪಕ್ಷವನ್ನು ನಿರಸನಮಾಡುತ್ತಾರೆ.

[1]**ಶ್ರುತೇಸ್ತು ಶಬ್ದಮೂಲತ್ವಾತ್ ।**

ತು ಶಬ್ದವು ಪಕ್ಷವನ್ನು ವ್ಯವಚ್ಛೇದ ಮಾಡುತ್ತದೆ. ಹಿಂದಿನ ಪಕ್ಷವು ಸರಿಯಲ್ಲ. **ಶ್ರುತೇಃ**=ಬ್ರಹ್ಮಸದ್ಭಾವದಲ್ಲಿ—ಇರುವಿಕೆಯಲ್ಲಿ ಶ್ರುತಿಯು ಪ್ರಮಾಣವಾಗಿರುವುದರಿಂದ ಈರೀತಿಯಾದ ಪ್ರಸಂಗವುಂಟಾಗುವುದಿಲ್ಲ, ಶಬ್ದಮೂಲತ್ವಾತ್—ಶ್ರುತಿರೂಪವಾದ ಶಬ್ದವನ್ನೇ ಮೂಲವಾಗಿ ಹೊಂದಿರುವುದರಿಂದ ನಿರವಯತ್ವ, ಕಾರಣತ್ವ, ಸರ್ವಶಕ್ತಿತ್ವಾದಿಗಳು ಬೇರೆಪ್ರಮಾಣಗಳಿಗೆ ವಿಷಯವಾಗದ ಬ್ರಹ್ಮಕ್ಕೆ ಕೂಡುತ್ತವೆ. ಎಂದು ಶ್ರುತಿಯಿಂದ ಮಾತ್ರ ತಿಳಿಯಬೇಕಾಗಿದೆ. (ಮೊಸರಾಗಿ ಪರಿಣಮಿಸುವ ಹಾಲಿಗೆ ಸಹಕಾರಿಯ ಅಪೇಕ್ಷೆಯೇ ಇಲ್ಲ. ಹಾಗೆ ಒಬ್ಬೊಂಟಿಗವಾದ ಬ್ರಹ್ಮಕ್ಕೆ ಜಗತ್ತಿಗೆ ಕಾರಣವಾಗುವಿಕೆ ಒಪ್ಪುತ್ತದೆ. ಅದು ಅಪರಿಮಿತವಾದ ಶಕ್ತಿ ಉಳ್ಳದ್ದು).

1. ಬ್ರ. ಸೂ. ೨. ೧. ೨೭.

1ಆತ್ಮನಿಚೈವಂ ವಿಚಿತ್ರಾಶ್ಚಹಿ ।

ಆತ್ಮನಿಚ=ಆತ್ಮನಲ್ಲೂ, ಈರೀತಿಯಾದ ಜೀವಾತ್ಮನಲ್ಲೂ ಅಚೇತನವಾದ ದೇಹದಲ್ಲಿ ಇರುವ ಜಡತ್ವಾದಿ ಧರ್ಮಗಳು ಇಲ್ಲ. ಏವಂ=ಈರೀತಿ ಬ್ರಹ್ಮದಂತೆ ಅಚೇತನಕ್ಕಿಂತ ವಿಲಕ್ಷಣವಾಗಿರುವಿಕೆ ಇದೆ. ವಿಚಿತ್ರಾಶ್ಚಹಿ=ಅಚೇತನಗಳಾದ ಅಗ್ನಿಜಲಾದಿಗಳಲ್ಲೂ ಶಕ್ತಿಗಳು ವಿಚಿತ್ರಗಳಾಗಿ ಅಲ್ಲವೇ ಕಾಣಲ್ಪಡುತ್ತದೆ. ಅಗ್ನಿಯಲ್ಲಿ ಇರುವ ಔಷ್ಣ್ಯ ಬಿಸಿಯಾಗಿರುವಿಕೆಯೆಂಬ ಶಕ್ತಿಯು ಜಲದಲ್ಲಿ ಕಾಣುವುದಿಲ್ಲ. ಜಲದಲ್ಲಿ ಇರುವ ಶೈತ್ಯವು ಬೆಂಕಿಯಲ್ಲಿ ಕಾಣುವುದಿಲ್ಲ. ಹಾಗೆಯೇ ಚಿತ್ತು ಮತ್ತು ಅಚಿತ್ತು ಇವುಗಳಿಗಿಂತ ವಿಲಕ್ಷಣವಾದ ಬ್ರಹ್ಮದಲ್ಲಿ ಕೇವಲ ಶಾಸ್ತ್ರ ಮಾತ್ರದಿಂದ ಅರಿಯಲ್ಪಡುವ ಸರ್ವಶಕ್ತಿಯೋಗವೂ—ಸಂಬಂಧವೂ ಕೂಡುತ್ತದೆ ಎಂದು ತಾತ್ಪರ್ಯ.

2ಸ್ವಪಕ್ಷದೋಷಾಚ್ಚ ।

ಪ್ರಧಾನವೇ ಮೊದಲಾದವುಗಳಿಗೆ ಕಾರಣ ಹೇಳುವ ಪಕ್ಷದಲ್ಲಿ ದೋಷ ಉಂಟಾಗುತ್ತದೆ. ಅದರಿಂದಲೂ ಬ್ರಹ್ಮವೇ ಜಗತ್ಕಾರಣ. ದೋಷವಾವುದೆಂದರೆ ಪ್ರಧಾನವು ಲೋಕದಲ್ಲಿರುವ ವಸ್ತುವಿನ ಜಾತಿಗೇ ಸೇರಿದ್ದಾಗಿದೆ. ಆದುದರಿಂದ ಲೋಕದಲ್ಲಿ ನೋಡಲ್ಪಟ್ಟ ದೋಷಗಳಿಗೆ ಅದರಲ್ಲೇ ಪ್ರಸಕ್ತಿವುಂಟಾಗುತ್ತದೆ. ಕಾರಣದಲ್ಲಿ ಇರುವ ಗುಣಗಳಲ್ಲಿವೇ ಕಾರ್ಯದಲ್ಲಿ ಅಂಟುತ್ತವೆ. ಆದುದರಿಂದ ಎಲ್ಲಕ್ಕಿಂತಲೂ ವಿಲಕ್ಷಣವಾದ ಬ್ರಹ್ಮಕ್ಕೇ ಜಗತ್ಕಾರಣತ್ವವನ್ನು ಒಪ್ಪಿಕೊಳ್ಳಬೇಕು.

ಪ್ರಧಾನಕ್ಕೆ ಕಾರಣತ್ವವನ್ನು ಹೇಳುವ ಪಕ್ಷದಲ್ಲಿ ನಿರವಯುವವಾದ ಪ್ರಧಾನಕ್ಕೆ ಜಗತ್ಕಾರಣತ್ವವು ಉಂಟಾಗುವುದಿಲ್ಲ. ಸತ್ವ, ರಜಸ್ಸು, ತಮಸ್ಸು ಇವುಗಳು ಪ್ರಧಾನದ ಅವಯುವಗಳು ಎಂದರೆ, ಸತ್ವ, ರಜಸ್ಸು, ತಮಸ್ಸು ಇವುಗಳ ಸಮೂಹವೇ ಪ್ರಧಾನವೋ ಅಥವಾ ಸತ್ವ, ರಜಸ್ಸು ತಮಸ್ಸು ಇವುಗಳಿಂದ ಆರಂಭಿಸಲ್ಪಟ್ಟದ್ದಕ್ಕೆ ಪ್ರಧಾನ ಭಾವವೋ ಎಂದು ವಿಕಲ್ಪಮಾಡಿ ಮೊದಲನೆಯ ಪಕ್ಷದಲ್ಲಿ—ಸಮೂಹ ಪಕ್ಷದಲ್ಲಿ ಅವುಗಳಿಗೆ ಅವಯುವವಿಲ್ಲದಿರುವಿಕೆ ಇರುವುದರಿಂದ ಅವಕ್ಕೆ ಸ್ಥೂಲದ್ರವ್ಯಾರಂಭಕತ್ವವೇ ಇಲ್ಲ. ಪ್ರದೇಶ ಭೇದವನ್ನು ಅಪೇಕ್ಷಿಸದೆ ಕೂಡುವ ಅವುಗಳಿಗೆ ಸ್ಥೂಲವಾದ ದ್ರವ್ಯವನ್ನು ಆರಂಭಿಸುವಿಕೆ ಸಿದ್ಧಿಸುವುದಿಲ್ಲ. ಪರಮಾಣು ಕಾರಣವಾದದಲ್ಲೂ ಅವು ನಿರಂಶಗಳು ನಿಷ್ಪ್ರದೇಶಗಳು ಅಲ್ಲೂ ಇದೇ ಗತಿ. ಸೇರಲ್ಪಡದ ಪ್ರದೇಶ ಭೇದವಿಲ್ಲದ ಸಂಯೋಗವುಳ್ಳ ಅವಕ್ಕೆ ಸ್ಥೂಲದ್ರವ್ಯಾರಂಭಕತ್ವವು ಇಲ್ಲ.

1. ಬ್ರ. ಸೂ. ೨, ೧, ೨೮.
2. ಬ್ರ. ಸೂ. ೨, ೧, ೨೯.

ಪ್ರಥಮಪಕ್ಷೇ "ತೇಷಾಂ ನಿರವಯತ್ವೇನಾ ಸಂಯುಕ್ತ ಪ್ರದೇಶಭೇದರಹಿತ ಸಂಯೋಗವತಾಂ ನ ಸ್ಥೂಲದ್ರವ್ಯಾರಂಭಕತ್ವಮ್" ಎಂಬುದು ಶಾರಿರಕ ಶಾಸ್ತ್ರಾರ್ಥ ದೀಪಿಕೆಯ ಪ್ರಾಜ್ಞ್ಯಿ. ಎರಡನೆಯ ಪಕ್ಷದಲ್ಲಿ ತನ್ನಿಂದ ಒಪ್ಪಲ್ಪಟ್ಟ ಪ್ರಧಾನವೇ ಪರಮಕಾರಣ ಎಂಬ ಮಾತು ಸಿದ್ಧಿಸುವುದಿಲ್ಲ. ಅವುಗಳಿಂದ ಆರಬ್ಧವಾದದ್ದು ಬೇರೆಯಾಯಿತಲ್ಲವೇ? 'ತತ್ತ್ವಗಳು ಇಪ್ಪತ್ತನಾಲ್ಕು' ಎಂದು ಪ್ರಧಾನ ಕಾರಣವಾದಿಗಳು ಸಾಂಖ್ಯರು ಹೇಳುವ ಮಾತು. ಅದು ಸಿದ್ಧಿಸದೇ ಹೋಯಿತೆಂಬ ಭಾವ. ಆದುದರಿಂದ ಈ ಎರಡು ಪಕ್ಷಗಳೂ ದುಷ್ಟವಾದವು. ಆದುದರಿಂದ ಪ್ರಧಾನಕ್ಕೆ ಕಾರಣತ್ವವು ಸಂಭವಿಸುವುದಿಲ್ಲ. ಬ್ರಹ್ಮಕ್ಕೇ ಜಗತ್ಕಾರಣತ್ವವು ನ್ಯಾಯವಾಗಿದೆ.

**[1]ಸರ್ವೋಪೇತಾಚ ತದ್ದರ್ಶನಾತ್ ।**

ಪರದೇವತೆಯು ಸರ್ವೋಪೇತಾ—ತಾನು ಇತರ ವಸ್ತುಗಳಿಗಿಂತ ವಿಲಕ್ಷಣೆಯಾಗಿರುವುದರಿಂದ ಜಗತ್ತಿಗೆ ಉಪಾದಾನವಾಗಿರುವಿಕೆ ನಿಮಿತ್ತವಾಗಿರುವಿಕೆ ಇವುಗಳಿಗೆ ಅನುಗುಣವಾದ ಸರ್ವಶಕ್ತಿತ್ವಾದಿಗಳೊಡನೆ ಕೂಡಿದೆ. ಇದು ಯುಕ್ತಿಮಾತ್ರದಿಂದಲ್ಲ. ತದ್ದರ್ಶನಾಚ್ಚ— ಆ ಸರ್ವಶಕ್ತಿತ್ವವೇ ಮೊದಲಾದ ಶ್ರುತಿತೋರಿಸುವುದರಿಂದಲೂ ಕಾರಣತ್ವವು ಸಿದ್ಧ, ಶ್ರುತಿಯಾದರೋ—

**ಪರಾಸ್ಯ ಶಕ್ತಿರ್ವಿವಿಧೈವಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾಚ ।**

ಇವೇ ಮೊದಲಾದವು.

**[2]ವಿಕರಣತ್ವಾನ್ನೇತಿಚೇತ್ತದುಕ್ತಮ್ ।**

ಈ ರೀತಿ ಹೇಳಿದ ಅರ್ಥವನ್ನು ದೃಢವನ್ನಾಗಿ ಮಾಡಲು ಹಿಂದೆ ಹೇಳಿದ ಅರ್ಥವನ್ನು ನೆನಪಿಗೆ ತರುತ್ತಾರೆ. ವಿಕರಣತ್ವಾತ್ = ಕರಣರಹಿತವಾಗಿರೋಣದರಿಂದ ಕರಣ—ಶರೀರ "ನತಸ್ಯಕಾರ್ಯಂ ಕರಣಂಚ ವಿದ್ಯತೇ" ಇವೇ ಮೊದಲಾದುವುಗಳಿಂದ ಈಶ್ವರನು ಶರೀರವಿಲ್ಲದವನು ಆಗಿರುವುದರಿಂದ ಶರೀರದಿಂದ ಕೂಡಿದ ಕುಂಬಾರನೇ ಮೊದಲಾದವರಿಗೇ ಮಡಕೆ ಕುಡಿಕೆ ಮುಂತಾದ ಕಾರ್ಯಗಳನ್ನು ಮಾಡುವಿಕೆ ನೋಡುವುದರಿಂದ ಶರೀರವಿಲ್ಲದ ಈಶ್ವರನಿಗೆ ಕಾರಣತ್ವವು ಇಲ್ಲ—ಕೂಡುವುದಿಲ್ಲ ಎಂದರೆ, ಇತಿಚೇತ್ತದುಕ್ತಮ್ = ಈಶಙ್ಕೆಗೆ ಏನು ಪರಿಹಾರವನ್ನು ಹೇಳಬೇಕೋ ಅದನ್ನು ಶ್ರುತೇಸ್ತುಶಬ್ದಮೂಲತ್ವಾತ್ಆತ್ಮನಿಚೈವಾಂ—ವಿಚಿತ್ರಾಶ್ಚಹಿ ಎಂಬ ಹಿಂದಿನ ಸೂತ್ರಗಳಲ್ಲಿ ಹೇಳಲ್ಪಟ್ಟಿತು. ಸರ್ವಶಕ್ತಿಗಳಿಂದ ಕೂಡಿದ ಶ್ರುತಿಪ್ರತಿಪಾದ್ಯವಾದ ಬ್ರಹ್ಮಕ್ಕೆ ಸರ್ವವಿಧ ಕಾರಣತ್ವವೂ ಕೂಡುತ್ತದೆ ಎಂಬ ತಾತ್ಪರ್ಯ.

1. ಬ್ರ. ಸೂ. ೨. ೧. ೩೦.
2. ಬ್ರ. ಸೂ. ೨. ೧. ೩೧.

ಹಾಗಾದರೆ 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿಯಿಂದ ಬ್ರಹ್ಮ ವೊಂದೇ ಸತ್ಯ, ಅದು ನಿರ್ಗುಣವಾದದ್ದು, ಅದಕ್ಕಿಂತ ಬೇರೆಯಾದ ಜ್ಞಾತೃಜ್ಞೇ ಯಾದಿಗಳು ಅಂದರೆ ಅರಿಯುವವನು ಅರಿಯಲ್ಪಡುವುದು ಇವೇ ಮೊದಲಾದವು ಅದರಲ್ಲೇ ಪರಿಕಲ್ಪಿಸಲ್ಪಟ್ಟಿದ್ದು. ಇವೆಲ್ಲಾ ಮಿಥ್ಯೆ=ಸುಳ್ಳು. ಬ್ರಹ್ಮವು ಅವಿದ್ಯೆ ಯಿಂದ ಸಂಸಾರವನ್ನು ಹೊಂದುತ್ತದೆ—'ತತ್ತ್ವಮಸಿ=ಅದು ನೀನು ಆಗಿದ್ದಿಯೆ' ಇವೇ ಮೊದಲಾದ ಅಭೇದಜ್ಞಾನವು ಆ ಸಂಸಾರವನ್ನು ನೀಗಿಸುತ್ತದೆ. ಆದುದ ರಿಂದ ನಿರ್ವಿಶೇಷ ಚಿನ್ಮಾತ್ರ ಬ್ರಹ್ಮದಲ್ಲಿ—ಯಾವ ವಿಧವಾದ ವಿಶೇಷವೂ ಇಲ್ಲದ 'ಚಿತ್' ಎಂಬುದು ಮಾತ್ರವಾದ ಬ್ರಹ್ಮದಲ್ಲಿ ವೇದಾಂತಗಳಿಗೆ ತಾತ್ಪರ್ಯ ಎಂದು ಬೇರೆ ಮತದವರುಗಳಿಂದ ಪ್ರತಿಪಾದಿಸಲ್ಪಟ್ಟಿರುವುದರಿಂದ ಹೇಗೆ ನಾರಾಯಣನಲ್ಲಿ ತಾತ್ಪರ್ಯ ಎಂದು ? ಅವನು ಸಮಸ್ತವಾದ ಕಲ್ಯಾಣ ಗುಣಗಳಿಂದ ತುಂಬಿದವನು ಎಂಬುದಾಗಿ ಹೇಳುವುದೂ ಕೂಡ ಹೇಗೆ ಹೊಂದುತ್ತದೆ ಎಂದರೆ, ಇದು ಉತ್ತರ.

ಕಾರಣತ್ವವನ್ನು ಪ್ರತಿಪಾದಿಸುವ ಶ್ರುತಿಗಳಿಂದ ನಾರಾಯಣನಿಗೆ ಕಾರಣತ್ವವು ಸಿದ್ಧಿಸಲಾಗಿದೆ. ಭೇದ ಮತ್ತು ಅಭೇದ ಶ್ರುತಿಗಳಿಗೆ ಘಟಕ ಶ್ರುತಿಯಿಂದ ವಿಷಯ ಭೇದದಿಂದ ವಿರೋಧವು ಪರಿಹರಿಸಲ್ಪಡುತ್ತದೆ. ನಿರ್ಗುಣವನ್ನು ಹೇಳುವ ಶ್ರುತಿ ಗಳಿಗೆ ಅವನಿಗೆ ಯಾವ ವಿಧವಾದ ಹೇಯಗುಣವೂ-ಕೆಟ್ಟಗುಣವೂ ಇಲ್ಲ ಎಂಬುದು ತಾತ್ಪರ್ಯ. ಜ್ಞಾತೃಜ್ಞೇಯ ಇವನ್ನು ಕಲ್ಪಿಸುವ ಅವಿದ್ಯೆಯೇ ಪ್ರಮಾಣವಾದದ್ದಲ್ಲ. ಪ್ರಪಂಚವೆಲ್ಲವೂ ಬ್ರಹ್ಮಕಾರ್ಯ, ಇದು ಸತ್ಯವಾದದ್ದು. ಅವಿದ್ಯೆಯಿಂದ ಸಂಸಾರವಾ ದರೆ ಜೀವನಲ್ಲಿ ಇರುವ ದೋಷಗಳೆಲ್ಲವೂ ಬ್ರಹ್ಮದಲ್ಲೂ ಉಂಟಾಗಬೇಕಾಗುತ್ತದೆ. ಅದನ್ನು ಹೋಗಲಾಡಿಸುವುದು ಮತ್ತೊಂದು ಇದೆ ಎಂದು ಹೇಳಲೂ ಆಗದು. ಆದುದರಿಂದ ಅದ್ವೈತವಾದವು ಅಸಂಭವವಾದದ್ದು—ಉಂಟಾಗ ತಕ್ಕದ್ದಲ್ಲ. ನಿರ್ವಿಶೇಷವಾದ—ಯಾವವಿಧವಾದ ಧರ್ಮವೂ ಇಲ್ಲದ ಚಿನ್ಮಾತ್ರ ಬ್ರಹ್ಮವು ಸಿದ್ಧಿ ಸುವುದಿಲ್ಲ. ಆದಕಾರಣ ನಾರಾಯಣನಿಗೇ ಜಗತ್ಕಾರಣತ್ವ, ಮೋಕ್ಷವನ್ನೂ ಕೊಡು ವಿಕೆ ಇವೇ ಮೊದಲಾದ ಗುಣಗಳ ಸಂಬಂಧವು ಕೂಡುತ್ತದೆ. ಬ್ರಹ್ಮವು ವಿಶೇಷ ದಿಂದ ಕೂಡಿದ್ದೇ, ಸೂಕ್ಷ್ಮವಾದ ಚಿತ್ತು ಅಚಿತ್ತು ಇವುಗಳಿಂದ ಕೂಡಿದ ಬ್ರಹ್ಮವು ಕಾರಣ, ಸ್ಥೂಲವಾದ ಚಿತ್ತು ಮತ್ತು ಅಚಿತ್ತುಗಳಿಂದ ವಿಶಿಷ್ಟವಾದ ಬ್ರಹ್ಮಕಾರ್ಯ, ಕಾರಣಕ್ಕಿಂತ ಬೇರೆಯಾಗದೆ ಇರುವುದು ಕಾರ್ಯ ಎಂಬುದು ವಿಶಿಷ್ಟಾದ್ವೈತ ವೇದಾಂತಗಳ ಸಂಪ್ರದಾಯ—ಉಪಾದೇಶ ಪರಂಪರೆ.

ಈ ರೀತಿ ಈಶ್ವರನನ್ನು ಅಂಗಿಕರಿಸಿರೋಣದರಿಂದ ನಿರೀಶ್ವರವಾದಿಗಳಾದ ಸಾಂಖ್ಯ ಮತ್ತು ಮೀಮಾಂಸಕ ಮುಂತಾದವರ ಮತವು ನಿರಸನಮಾಡಲ್ಪಟ್ಟಿದ್ದಾ ಗಿದೆ. ಈಶ್ವರನಿಗೇ ಉಪಾದಾನತ್ವವನ್ನು ಸ್ವೀಕರಿಸಿರುವುದರಿಂದ ಯೋಗ ಪಾಶು ಪತ ಮತ್ತು ನೈಯಾಯಿಕ ಮತಗಳು ತಳ್ಳಿದಂತಾದವು. ಅವರು ಈಶ್ವರನು

ಕೇವಲ ನಿಮಿತ್ತ ಕಾರಣನು ಮಾತ್ರ ಎನ್ನುತ್ತಾರೆ. ಈಶ್ವರನಿಗೆ ಕಾರ್ಯವನ್ನು ಕುರಿತು ಉಪಾದಾನತ್ವ, ನಿಮಿತ್ತತ್ವ ಇವುಗಳು ಉಂಟು. ಹಾಗೆ ಅದನ್ನು ಮಾಡುವಿಕೆ ಅಂದರೆ ಕರ್ತೃತ್ವ, ಪ್ರೇರಕತ್ವ, ನಿಯನ್ತೃತ್ವ ಪ್ರಕಾಶಯಿತೃತ್ವ—ಪ್ರಕಾಶಪಡಿಸುವಿಕೆ, ಅನುಮನ್ತೃತ್ವ ಸಹಕಾರಿತ್ವ ಉದಾಸೀನತ್ವಾದಿಗಳೂ ಇವನಲ್ಲಿ ಕೂಡುತ್ತವೆ.

ಬಾಲ್ಯ, ಯೌವನ, ಮುಂತಾದ ಅವಸ್ಥೆಗಳ ದೋಷಗಳು ಹೇಗೆ ಶರೀರಕ್ಕೆ ಮಾತ್ರ ಸಂಬಂಧ ಪಟ್ಟವುಗಳಾಗಿ ಜೀವನಿಗೆ ಸಂಬಂಧಪಟ್ಟವಲ್ಲವೋ ಹಾಗೆ ಚಿತ್ತು ಮತ್ತು ಅಚಿತ್ತುಗಳನ್ನು ಶರೀರವಾಗಿ ಉಳ್ಳ ಪರಮಾತ್ಮನಿಗೂ ಕೂಡ, ಆ ವಿಕಾರಗಳೆಲ್ಲಾ ಚಿದಚಿತ್ತುಗಳಿಗೆ ಮಾತ್ರವೇ ಹೊರತು ಈಶ್ವರನಿಗೆ ಸಂಬಂಧಪಟ್ಟವಲ್ಲ. ಆದುದರಿಂದ ನಿರ್ವಿಕಾರ ಶ್ರುತಿಗಳಿಗೆ ವಿರೋಧವಿಲ್ಲ. ಆಧೇಯತ್ವ—ವಿಧೇಯತ್ವ ಶೇಷತ್ವಾದಿಗಳು ಶರೀರ ಲಕ್ಷಣಗಳು, ಈ ಲಕ್ಷಣಗಳೆಲ್ಲಾ ಜಗತ್ತಿನಲ್ಲಿವೆ. ಈಶ್ವರನಲ್ಲಿ ಇದು ಅಡಗಿರುವುದರಿಂದ ಅವನು ಆಧಾರನಾದ. ಜಗತ್ತು ಆಧೇಯವಾಯಿತು. ಅವನ ಇಷ್ಟಕ್ಕೆ ಅನುಸಾರವಾಗಿ ಇದರ ಪ್ರವೃತ್ತಿ ಇರುವುದರಿಂದ ವಿಧೇಯವಾಯಿತು. ಎಲ್ಲಾ ವಿಧದಿಂದಲೂ ಇದು ಅವನಿಗೆ ಅತಿಶಯವನ್ನು ಉಂಟು ಮಾಡುವುದೇ ಸ್ವರೂಪವಾಗಿ ಉಳ್ಳದ್ದಾದುದರಿಂದ ಇದು ಶೇಷವಾಯಿತು. ಅವನು ಶೇಷಿಯಾದ. ಆದುದರಿಂದ ಜಗಚ್ಛರೀರನಾದ ಈಶ್ವರನಿಗೆ ಆ ಶರೀರದ ದೋಷಗಳು ಯಾವವೂ ಅಂಟುವುದಿಲ್ಲ, ಅವನು ದೋಷವಿಲ್ಲದವನಾದನು.

ಪರಬ್ರಹ್ಮಕ್ಕೆ ಜಗದುಪಾದಾನವಾಗಿರುವಿಕೆಯೂ ಮತ್ತು ಅದಕ್ಕೆ ನಿಮಿತ್ತವಾಗಿರುವಿಕೆಯೂ ಎಂಬುದನ್ನು ಆಚಾರ್ಯರು ತತ್ತ್ವಮುಕ್ತಾಕಲಾಪದಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಆ ಶ್ಲೋಕಗಳನ್ನು ಇಲ್ಲಿ ಉದ್ಧರಿಸಿ ವಿವರಿಸೋಣ.

**ಅಸ್ಯೈವಾಚಿನ್ತ್ಯಶಕ್ತೇರಖಿಲ ಜನಯಿತುಃ ಸ್ಯಾದುಪಾದಾನ ಭಾವಃ**
**ಸೂಕ್ಷ್ಮಾವ್ಯಕ್ತಾದಿದೇಹಃ ಪರಿಣಮತಿಯತೋಽನೇಕಧಾ ಸ್ಥೂಲವೃತ್ತ್ಯಾ ।**
**ನಿಷ್ಕೃಷ್ಟೇಽಸ್ಮಿನ್ ಶರೀರಿಣ್ಯಮಲಗುಣಗಣಾಲಙ್ಕೃತಾನನ್ತರೂಪೇ**
**ಸಂಪದ್ಯನ್ತೇ ಸಮಸ್ತಾಸ್ಸಮುಚಿತ ಗತಯೋ ನಿರ್ವಿಕಾರಾದಿ ವಾದಾಃ ॥**

'ಭಗವಂತನ ಶಕ್ತಿಯು ಇಷ್ಟು ಮಟ್ಟಿಗೆ ಮಾತ್ರವಿದೆ' ಎಂದು ನಾವು ಯೋಚಿಸುವುದಕ್ಕೂ ಆಗುವುದಿಲ್ಲ. ಅವನು ಅದ್ಭುತವಾದ ಶಕ್ತಿಯುಳ್ಳವನು. ಅವನು ಎಲ್ಲಾ ಜಗತ್ತಿಗೂ ನಿಮಿತ್ತಕಾರಣನೂ ಹಾಗೆಯೇ ಉಪಾದಾನಕಾರಣನೂ ಆಗುವುದರಲ್ಲಿ ಯಾವ ವಿರೋಧವೂ ಇಲ್ಲ. ಪರಮಾತ್ಮನು ಉಪಾದಾನಕಾರಣನಾದರೆ ವಿಕಾರವುಳ್ಳವನಾಗಬೇಕಾಗುತ್ತದೆಯಲ್ಲಾ ಎಂದರೆ—ಸೂಕ್ಷ್ಮಚಿದಚಿಚ್ಛರೀರಕ

ನಾದ ಪರಮಾತ್ಮನೇ ಸ್ಥೂಲ ಚಿದ್‌ಚಿಚ್ಛರೀರಕನಾಗಿ ಅನೇಕ ರೀತಿಯಾದ ರೂಪವುಳ್ಳವನಾಗುತ್ತಾನೆ.

ಪ್ರಳಯಕಾಲದಲ್ಲಿ ಚಿತ್ ಮತ್ತು ಅಚಿದ್ವಸ್ತುಗಳು ಸೂಕ್ಷ್ಮಾವಸ್ಥೆಯಲ್ಲಿದ್ದು ಸೃಷ್ಟಿಯ ಅನಂತರ ಸ್ಥೂಲವಾದ ನಾಮ—ಹೆಸರು ಮತ್ತು ರೂಪಗಳನ್ನು ಹೊಂದುತ್ತವೆ. ಇವುಗಳ ಅನ್ತರ್ಯಾಮಿಯಾಗಿರುವ ಪರಮಾತ್ಮನಿಗೆ ಇವು ಶರೀರವಾಗಿರುವುದರಿಂದ ಪ್ರಳಯ ಕಾಲದಲ್ಲಿ ಸೂಕ್ಷ್ಮಚಿದಚಿಚ್ಛರೀರಕನಾದ ಪರಮಾತ್ಮನು ಸೃಷ್ಟಿ ಕಾಲದಲ್ಲಿ ಸ್ಥೂಲಚಿದಚಿಚ್ಛರೀರಕನಾಗುತ್ತಾನೆ.

ಇವುಗಳಲ್ಲಿ ಅಚಿತ್ತಿಗೆ ಸಾಕ್ಷಾತ್ತಾಗಿ ಸ್ವರೂಪದಲ್ಲೇ ಪರಿಣಾಮವೂ ಚಿತ್ತಿಗೆ ಧರ್ಮಭೂತಜ್ಞಾನದಲ್ಲಿ ಪರಿಣಾಮವೂ ಈಶ್ವರನಿಗೆ ಆ ಆ ವಸ್ತುವಿನ ಅನ್ತರ್ಯಾಮಿತ್ವ ಪರಿಣಾಮವೂ ಉಂಟಾಗುತ್ತವೆ. ಹೀಗೆ ಮೂರರಲ್ಲೂ ಅದರದರ ಸ್ವರೂಪಕ್ಕೆ ತಕ್ಕಂತೆ ರೂಪ ಪರಿಣಾಮವು ಬರುವುದರಿಂದ ಹಿಂದಿನ ಅವಸ್ಥೆಯಿಂದ ಕೂಡಿದ ದ್ರವ್ಯವು ಮುಂದಿನ ಅವಸ್ಥಾವಿಶಿಷ್ಟ ದ್ರವ್ಯಕ್ಕೆ ಉಪಾದಾನವಾಗುವುದರಿಂದ ಸರ್ವಶರೀರಿಯಾದ ಪರಮಾತ್ಮನೇ ಎಲ್ಲಕ್ಕೂ ಉಪಾದಾನ ಕಾರಣನಾಗುತ್ತಾನೆ.

ಆದರೆ ಈ ವಿಷಯದಲ್ಲಿ ಒಂದು ಸಂದೇಹವುಂಟಾಗುತ್ತದೆ. ಅದೇನೆಂದರೆ ಉಪನಿಷತ್ತುಗಳಲ್ಲಿ ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಬ್ರಹ್ಮವೇ ಕಾರಣವೆಂದು ಹೇಳಿದೆ. ಈ ಮೂರಕ್ಕೂ ಕಾರಣವಾಗಿರುವುದೇ ಉಪಾದಾನಕಾರಣ. ಆದರೆ ಲೋಕದಲ್ಲಿ ಮಣ್ಣು ಮುಂತಾದ ಉಪಾದಾನವಾದ ವಸ್ತುಗಳೆಲ್ಲ ವಿಕಾರವನ್ನು ಹೊಂದುತ್ತವೆ. ಇದರಂತೆ ಜಗತ್ತಿಗೆ ಉಪಾದಾನವಾಗಿ ಪರಿಣಾಮ ಹೊಂದಿದರೆ ಬ್ರಹ್ಮವೂ ಸಹ ವಿಕಾರ ಉಳ್ಳದ್ದಾಗಿ ಆಗಬೇಕಾಗುತ್ತದೆಯಲ್ಲವೇ ? ಹಾಗಾದರೆ ಸಾಮಾನ್ಯವಾಗಿ ವಿಕಾರವನ್ನು ಹೊಂದುವ ಪದಾರ್ಥಗಳೆಲ್ಲಾ ನಾಶವನ್ನೂ ಹೊಂದುತ್ತವೆಯಲ್ಲವೆ ? ಈ ಕಾರಣಗಳಿಂದ ವಿಕಾರಕ್ಕೆ ಅವಕಾಶವಿಲ್ಲದೇ ಬ್ರಹ್ಮ ಉಪಾದಾನವಾಗಲು ಸಾಧ್ಯವೇ ?

ಎಂದರೆ 'ಬ್ರಹ್ಮ' ಎಂಬುದು ಒಂದು ದೃಷ್ಟಿಯಿಂದ ಅಖಂಡತತ್ತ್ವವಾದರೂ, ಸವಿಶೇಷವಾದ ದೃಷ್ಟಿಯಲ್ಲಿ ಅದು ಸಖಂಡವೂ ಆಗುತ್ತದೆ. ಕೇವಲ ಪರಬ್ರಹ್ಮತತ್ತ್ವ ನಿರ್ಲಿಪ್ತಸ್ವಭಾವವಾದ ಕಾರಣ ಜಗತ್ಕಾರಣವಾಗಲಾರದು. ಕೇವಲ ಜಡವಾದ ಪ್ರಕೃತಿಯೂ ಜಗತ್ಕಾರಣವಾಗಲಾರದು. ಚೇತನಾಚೇತನ ವಿಶಿಷ್ಟ ವಸ್ತುವೇ ಜಗತ್ಕಾರಣ. ಇದೇ ಬ್ರಹ್ಮಪದಾರ್ಥ, ಇದರಲ್ಲಿ ವಿಶೇಷ್ಯಾಂಶವೇ ಸಚ್ಚಿದಾನಂದ ಪರಬ್ರಹ್ಮ, ಚೇತನಾಚೇತನಗಳು ವಿಶೇಷಣ, ವಿಶಿಷ್ಟವಾದ ಪರಮಾತ್ಮನಲ್ಲಿ ಅಂತರ್ಯಾಮಿತ್ವರೂಪದಲ್ಲಿ ಪರಿಣಾಮ ಬಂದರೂ ವಿಕಾರದ ಪ್ರಸಕ್ತಿ ಇಲ್ಲ.

ವಿಶೇಷಣವಾದ ಚೇತನಾಚೇತನಗಳಲ್ಲಿ ವಿಕಾರಗಳುಂಟು. ಹೀಗೆ ವಿಕಾರಗಳು ಸಾಕ್ಷಾತ್ತಾಗಿ ಅಂದರೆ ನೇರವಾಗಿ ಚೇತನಾಚೇತನಗಳಿಗೆ ಬರುತ್ತವೆ. ಪರಮಾತ್ಮನು ಇವುಗಳ ಅಂತರ್ಯಾಮಿಯಾದ್ದರಿಂದ ಅವನೂ ಇವುಗಳೊಡನೆ ಉಪಾದಾನನಾಗುತ್ತಾನೆ. ಚೇತನಾಚೇತನಗಳು ಸೂಕ್ಷ್ಮಾವಸ್ಥೆಯಲ್ಲಿದ್ದಾಗ ಪರಮಾತ್ಮನೇ ಸೂಕ್ಷ್ಮಚಿದಚಿದಂತರ್ಯಾಮಿಯಾಗುತ್ತಾನೆ. ಅವು ಸ್ಥೂಲಾವಸ್ಥೆಯನ್ನು ಹೊಂದಿದಾಗ ಪರಮಾತ್ಮನೂ ಸಹ ಸೂಕ್ಷ್ಮಾಂತರ್ಯಾಮಿತ್ವವನ್ನು ಬಿಟ್ಟು ಸ್ಥೂಲಾಂತರ್ಯಾಮಿತ್ವವನ್ನು ಪಡೆಯುತ್ತಾನೆ. ಅವಸ್ಥಾಂತರವನ್ನು ಹೊಂದುವುದು ಸಮಾನವಾದ್ದರಿಂದ ಪರಮಾತ್ಮನಿಗೂ ಉಪಾದಾನತ್ವ ಸಾಕ್ಷಾತ್ತಾಗಿಯೇ ಬರುತ್ತದೆ.

ಪರಿಣಾಮಗಳೆಲ್ಲವೂ ವಿಕಾರವಾಗುವುದಿಲ್ಲ, ಮುದ್ದೆಯಾಗಿದ್ದ ಮಣ್ಣು ಘಟವಾದಾಗ ಪೂರ್ವ ರೂಪವನ್ನು ಕೆಡಿಸಿಕೊಂಡು ಉತ್ತರ ರೂಪವನ್ನು ತಾಳುವುದರಿಂದ ಇದು ವಿಕಾರವಾಗುತ್ತದೆ. ಪರಮಾತ್ಮನ ಈ ಅಂತರ್ಯಾಮಿತ್ವಾವಸ್ಥೆಯಿಂದ ಮೂಲ ರೂಪಕ್ಕೆ ಯಾವ ಕುಂದೂ ಇಲ್ಲವಾದ್ದರಿಂದ ನಿರ್ವಿಕಾರತ್ವಕ್ಕೆ ಯಾವ ತೊಂದರೆಯೂ ಇಲ್ಲ. ಹೀಗೆ ಪರಮಾತ್ಮನಿಗೆ ನಿರ್ವಿಕಾರತ್ವವೂ ಉಪದಾನತ್ವವೂ ಹೊಂದುತ್ತದೆ.

ನಿಮಿತ್ತತ್ವ ಉಪಾದಾನತ್ವ ಪರಸ್ಪರ ವಿರುದ್ಧವಲ್ಲ.

**ಕರ್ತೋಪಾದಾನಮೇವ ಸ್ವಸುಖ ಮುಖಗಣೇ ಸ್ವಪ್ರಯತ್ನ ಪ್ರಸೂತೇ**
**ಸಂಯೋಗಂಸ್ವಸ್ಯ ಮೂರ್ತ್ಯೆಸ್ಸ್ವಯಮಪ ಜನಯನ್ನೀಶ್ವರೋऽಪ್ಯೇವ ಮಿಷ್ಟಃ ।**
**ಸರ್ವೋಪಾದಾನಭಾವ ಸ್ತ್ವತ ಇಹ ಘಟತೇ ಸರ್ವಕರ್ತರ್ಯಮುಷ್ಮಿನ್ ಸರ್ವ**
**ಶ್ರುತ್ಯೈಕರಸ್ಯ ಪ್ರಣಯಿಭಿರುಚಿತಂ ದ್ವಾರಮತ್ರಾಭ್ಯುಪೇತಂ ॥**

ಲೋಕದಲ್ಲಿ ಮಣ್ಣು ಉಪಾದಾನವಾಗಿಯೂ, ಕುಂಬಾರನು ನಿಮಿತ್ತವಾಗಿಯೂ ಇರುವುದನ್ನು ಕಾಣುತ್ತೇವೆ. ಪ್ರಕೃತದ ಪರಮಾತ್ಮನೊಬ್ಬನೇ ನಿಮಿತ್ತಕಾರಣವಾಗಿಯೂ ಉಪಾದಾನಕಾರಣವಾಗಿಯೂ ಆಗಲು ಸಾಧ್ಯವೇ ? ಎಂದರೆ—

ನಿಮಿತ್ತಕಾರಣನಾಗಿರುವ ಚೇತನನೇ ತನ್ನ ಪ್ರಯತ್ನದಿಂದ ತಾನು ಪಡೆದ ಸುಖಾದಿಗುಣಗಳಿಗೆ ತಾನೇ ಉಪಾದಾನ ಕಾರಣನೂ ಆಗುತ್ತಾನೆ. ಇಲ್ಲಿ ತಾನು ಸುಖಿಯಾಗಿ ಬಾಳಬೇಕೆಂಬ ಬಯಕೆಯಿಂದ ಚೇತನನು ಮಾಡುವ ಯತ್ನ ಆ ಸುಖದ ಉತ್ಪತ್ತಿಗೆ ಕಾರಣವಾದುದರಿಂದ ಉಪಾದಾನ ಕಾರಣವಾಯಿತು. ಕುಂಬಾರನು ಮಡಿಕೆ ಮಾಡುವವನಾದುದರಿಂದ ಕರ್ತೃವಾದ—ಅದರ ಉತ್ಪತ್ತಿಗೆ ಕಾರಣನಾದ; ನಿಮಿತ್ತಕಾರಣನಾದ. ಮಣ್ಣು ಉಪಾದಾನ ಕಾರಣವಾಗಿ ಮಡಿಕೆಯಾಯಿತು; ಹಾಗೆ ಇಲ್ಲಿ ಆ ಚೇತನನೂ ನಿಮಿತ್ತಕಾರಣನಾದ.

ಏವ ಮನೀಶ್ವರೇಷ್ವಪಿ ಬುದ್ಧಿಪೂರ್ವ ಸ್ವಜ್ಞಾನ ಸುಖಾದ್ಯುತ್ಪಾದನೇ ನಿಮಿತ್ತೋಪಾದಾನತ್ವ ಸಮುಚ್ಚಯಃ ಸಿದ್ಧಃ । ಇದು ನ್ಯಾಯಸಿದ್ಧಾಂಜನದ ಪಙ್ಕ್ತಿ, ಈಶ್ವರ ಪರಿಚ್ಛೇದದಲ್ಲಿ. ಅಬುದ್ಧಿ ಪೂರ್ವಕವಾದ ಜ್ಞಾನದಲ್ಲಿ ಕರ್ತೃತ್ವವು ಉಂಟಾಗದಿದ್ದರೂ ಬುದ್ಧಿಪೂರ್ವಕವಾದ ಜ್ಞಾನದಲ್ಲಿ ಅದಕ್ಕೆ ಅನುಕೂಲವಾದ ಜ್ಞಾನ, ಚಿಕೀರ್ಷೆ—ಮಾಡಬೇಕೆಂಬ ಬಯಕೆ ಇವೇ ಮೊದಲಾದವು ಇರೋಣದ ರಿಂದ ನಿಮಿತ್ತತ್ವವು ಉಂಟಾಗುತ್ತದೆ.

ಹೀಗೆ ಅನೀಶ್ವರರಾದವರಲ್ಲೂ ಕೂಡ ಬುದ್ಧಿಪೂರ್ವಕವಾದ ತನ್ನ ಜ್ಞಾನ ಸುಖ ಇವೇ ಮೊದಲಾದವನ್ನು ಉತ್ಪತ್ತಿಮಾಡುವುದರಲ್ಲಿ ನಿಮಿತ್ತತ್ವ ಉಪಾದಾನತ್ವ ಇವೆರಡೂ ಕೂಡುತ್ತದೆ.

**ಹಾಗೆ ಈಶ್ವರೋಽಪಿ ಮೂರ್ತೈಃ ಸ್ವಸ್ಯ ಸಂಯೋಗಂ ಸ್ವಯಂ ಉಪಜನಯನ್ ಏವಂ ಇಷ್ಟಃ** — ಈಶ್ವರನೂ ಸಹ ವಿಭುವಾದುದರಿಂದ ಮೂರ್ತವಾದ ಘಟಪಟಾದಿ ಗಳೊಡನೆ ತನ್ನ ಸಂಯೋಗವನ್ನು ತಾನೇ ಮಾಡುವುದರಿಂದ ಘಟೇಶ್ವರ ಸಂಯೋಗಕ್ಕೆ ನಿಮಿತ್ತವೂ ಉಪಾದಾನವೂ ಆಗುತ್ತಾನೆ. ಹಾಗಾದರೆ ಸಾಕ್ಷಾತ್ತಾಗಿ ಪರಮಾತ್ಮನೇ ಉಪಾದಾನವಾಗಲಿ ಮಧ್ಯದಲ್ಲಿ ಚಿತ್ ಮತ್ತು ಅಚಿದ್ವಸ್ತುಗಳನ್ನು ನಿಲ್ಲಿಸಬೇಕಾದರೆ– ಸಕಲ ವಿಧವಾದ ಶ್ರುತಿಗಳಿಗೂ ಸಾಮರಸ್ಯವನ್ನು ಬಯಸುವ ಆಚಾರ್ಯರು ಈ ಉಪಾದಾನತ್ವವಲ್ಲದ್ದಕ್ಕೆ ತಕ್ಕ ಮಾಧ್ಯಮವಾಗಿ ಮಾತ್ರ ಚಿತ್ ಮತ್ತು ಅಚಿದ್ವಸ್ತು ಗಳನ್ನೂ ಅಂಗೀಕರಿಸಿರುವರು.

ಪರಮಾತ್ಮನೇ ಸರ್ವ ಜಗತ್ತಿಗೂ ಉಪಾದಾನವೆಂದು 'ತದಾತ್ಮಾನಗ್ಂಸ್ವಯ ಮಕುರುತ' ಇವೇ ಮೊದಲಾದ ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿದೆ. 'ನಿರವದ್ಯಂ ನಿರಂಜನಂ' ಎಂದು ಪರಮಾತ್ಮನು ಯಾವ ವಿಧವಾದ ದೋಷವೂ ಇಲ್ಲದವನೆಂಬುದೂ ಸ್ಪಷ್ಟವಾಗಿದೆ. ಈ ಎರಡನ್ನೂ ಸಮನ್ವಯಗೊಳಿಸುವ ದೃಷ್ಟಿಯಿಂದ ಪರಮಾತ್ಮನು ಚೇತನಾಚೇತನ ಶರೀರಕನಾಗಿರುವುದರಿಂದ ಅವನೇ ಎಲ್ಲಕ್ಕೂ ಉಪಾದಾನ ಕಾರಣ ನೆಂದು ಆಚಾರ್ಯರು ಹೇಳಿರುವರು. ಇದರಿಂದ ವಿಕಾರಾದಿಗಳು ಪರಮಾತ್ಮನ ಶರೀರ ವಾದ ಅಚಿತ್ತಿನಲ್ಲಿ ಉಳಿಯುತ್ತಿವೆ. ಪರಮಾತ್ಮನು ಅಂತರ್ಯಾಮಿಯಾಗಿರುವುದರಿಂದ ಹಿಂದೆ ಹೇಳಿದ ರೀತಿಯಲ್ಲಿ ಅದರ ಉಪಾದಾನನೂ ಆಗುತ್ತಾನೆ. ಹೀಗೆ ಎಲ್ಲಾ ಶ್ರುತಿಗೂ ಸಮನ್ವಯ ಈ ಸಿದ್ಧಾಂತದಲ್ಲೇ ಕೂಡುತ್ತದೆ.

ಜಗದುಪಾದಾನತ್ವದಲ್ಲಿ ಪರಮತಗಳ ಅಭಿಪ್ರಾಯ ಹೀಗಿದೆ—

**ಸಾವಿದ್ಯಂ ಕೇಽಪಿ ಸೋಪಾಧಿಕಮಥ ಕತಿಚಿಚ್ಛಕ್ತಿಭಿರ್ಜುಷ್ಟಮನ್ಯೇ ಸ್ವೀಕೃತ್ಯೈಕಾದ್ವಿತೀಯ ಶ್ರುತಿಮಪಿ ಜಗದುಸ್ತದ್ವಿಶಿಷ್ಟೈಕ್ಯನಿಷ್ಠಾಮ್ । ನಿತ್ಯತ್ವಂ**

ವಿಗ್ರಹತ್ವಂ ಪ್ರಕೃತಿಪುರುಷಯೋರ್ಹೇತುತಾಂ ವಿಶ್ವಕರ್ತುಃ ತದ್ವೈಶಿಷ್ಟ್ಯಂಚ ಶಾಸ್ತ್ರ ಪ್ರಥಿತ ಮಜಹತಾಂ ಕೋಽಪರಾಧೋಽತಿರಿಕ್ತಃ ॥

ಪರಮಾತ್ಮನಿಗೆ ಜಗದುಪಾದಾನತ್ವವನ್ನು ಹೇಳಬೇಕಾದರೆ ಇಂತಹ ಮಾಧ್ಯಮ ಎಲ್ಲರಿಗೂ ಅತ್ಯಾವಶ್ಯಕವೆಂಬುದನ್ನು ಪ್ರದರ್ಶಿಸುತ್ತಾರೆ.

ಕೇಽಪಿಬ್ರಹ್ಮಸಾವಿದ್ಯಂ=ಕೆಲವರು ಬ್ರಹ್ಮ ಅವಿದ್ಯಾ ವಿಶಿಷ್ಟವಾಗಿರುವುದೆಂದು ಹೇಳುತ್ತಾರೆ. ಇದು ನಿರ್ವಿಶೇಷಾದ್ವೈತಿಗಳಾದ ಶಾಂಕರಪಕ್ಷ. ಶುದ್ಧ ಬ್ರಹ್ಮ ನಿರ್ವಿಕಾರವಾದುದರಿಂದ ಅದಕ್ಕೆ ಜಗದುಪಾದಾನತ್ವ ಸ್ವತಃ ಬರುವಂತಿಲ್ಲ. ಅವಿದ್ಯೆ ಯಿಂದ ಕೂಡಿದ ಬ್ರಹ್ಮವೇ ಉಪಾದಾನವೆಂದು ಅವರ ಅಭಿಪ್ರಾಯ.

**ಅಥ ಕತಿಚಿತ್ ಸೋಪಾಧಿಕಂ**=ಮತ್ತೆ ಕೆಲವರು ಬ್ರಹ್ಮ ಅವಿದ್ಯೆಯಿಂದ ಉಪಹಿತವಾಗಿರುವುದು ಎಂದು ಹೇಳುತ್ತಾರೆ. ಇದು ಭಾಸ್ಕರಾಚಾರ್ಯರ ಮತ. ಇವರ ಮತದಲ್ಲಿ ಜಡವಾದ ಉಪಾಧಿ ಸತ್ಯ ಎಂಬುದು ಮೊದಲನೆಯ ಪಕ್ಷಕ್ಕಿಂತಲೂ ವಿಶೇಷ.

ಅನ್ಯೇಶಕ್ತಿಭಿಃಜಿಷ್ಟಂ ಸ್ವೀಕೃತ್ಯ ಏಕಾದ್ವಿತೀಯಶ್ರುತಿಮುಪಿತದ್ವಿಶಿಷ್ಟೈಕ್ಯ ನಿಷ್ಠಾಂಜಗದುಃ=ಬೇರೆ ಕೆಲವರು ಬ್ರಹ್ಮ ಮೂರು ಶಕ್ತಿಗಳಿಂದ ಕೂಡಿರುವು ದೆಂದೂ ಹೇಳಿ 'ಏಕಮೇವಾದ್ವಿತೀಯಂ' ಇವೇ ಮೊದಲಾದ ಐಕ್ಯಶ್ರುತಿಯು ಆ ಅವಿದ್ಯಾದಿ ವಿಶಿಷ್ಟವಾದ ಬ್ರಹ್ಮದ ಏಕತ್ವವನ್ನು ಬೋಧಿಸುತ್ತದೆ ಎಂದು ಹೇಳು ವರು. ಇದು ಯಾದವಪ್ರಕಾಶರದು. ಬ್ರಹ್ಮದಲ್ಲಿ ಶಕ್ತಿತ್ರಯವಿರುವುದೆಂದೂ ಚಿಚ್ಛಕ್ತಿವಿಶಿಷ್ಟಾಂಶ—ಚಿಚ್ಛಕ್ತಿಯಿಂದ ಕೂಡಿದ ಭಾಗ ಚಿದಾಕಾರವಾಗಿಯೂ, ಅಚಿ ಚ್ಛಕ್ತಿಯಿಂದ ಕೂಡಿದ ಭಾಗ ಅಚಿದಾಕಾರವಾಗಿಯೂ, ಈಶ್ವರ ಶಕ್ತಿ ವಿಶಿಷ್ಟಾಂಶ ಈಶ್ವರಾಕಾರವಾಗಿಯೂ ಪರಿಣಮಿಸುತ್ತದೆ. ಹೀಗೆ ಶಕ್ತಿತ್ರಯ ವಿಶಿಷ್ಟವಾದ ಬ್ರಹ್ಮ ಜಗತ್ತಿಗೆ ಉಪಾದಾನ ಎಂದು ಹೇಳುವುರು.

ಒಟ್ಟಿನಲ್ಲಿ ಶುದ್ಧ ಬ್ರಹ್ಮಕ್ಕೆ ಜಗದುಪಾದಾನತ್ವ ಬರಲು ಸಾಧ್ಯವಿಲ್ಲ ವೆಂಬುದೂ, ಇದಕ್ಕಾಗಿ ಬ್ರಹ್ಮಕ್ಕೆ ಸತ್ಯ ಅಥವಾ ಮಿಥ್ಯೆಯಾದ ಮತ್ತೊಂದು ವಸ್ತುವು ಆವಶ್ಯಕವೆಂಬುದೂ ತಿಳಿದಂತಾಯಿತು. ಇದರಿಂದ 'ಏಕಮೇವಾ ದ್ವಿತೀಯಂ ಬ್ರಹ್ಮ' ಎಂಬಿವೇ ಮೊದಲಾದ ಶ್ರುತಿಗಳಿಗೆ ವಿರೋಧವಿಲ್ಲವೆಂಬುದೂ ಎಲ್ಲರಿಗೂ ಸಮ್ಮತವೆಂದೂ ತಿಳಿದಂತಾಯಿತು.

ಹೀಗಿರುವಾಗ—ಪ್ರಕೃತಿ ಪುರುಷಯೋಃ ನಿತ್ಯತ್ವಂ, ವಿಗ್ರಹತ್ವಂ, ವಿಶ್ವಕರ್ತುಃ ಹೇತುತಾಂ, ತದ್ವೈಶಿಷ್ಟ್ಯಂಚ ಶಾಸ್ತ್ರಪ್ರಥಿತಂ ಅಜಹತಾಂ ಅತಿರಿಕ್ತಃ ಅಪ

ರಾಧಃಕಃ ?—ಶಾಸ್ತ್ರದಲ್ಲಿ ಹೇಳಿದಂತೆ ಚೇತನಾಚೇತನವರ್ಗವೆಲ್ಲವೂ ನಿತ್ಯ, ಮತ್ತು ಪರಮಾತ್ಮ ಶರೀರ ಭೂತ, ಜಗತ್ತನ್ನು ಸೃಷ್ಟಿಸುವ ಪರಮಾತ್ಮನು ಚೇತನಾ ಚೇತನರ ವಿಲಕ್ಷಣ ಪರಿಣಾಮಗಳಿಗೆಲ್ಲಕ್ಕೂ ಕಾರಣ, ಇಂತಹ ಚಿದಚಿದ್ವಿಶಿಷ್ಟನಾಗಿಯೇ ಎಂದೂ ಅವನಿರುವನು. ಇವೇ ಮೊದಲಾಗಿ ಶಾಸ್ತ್ರಸಿದ್ಧವಾದವನ್ನು ತಳ್ಳಿಹಾಕದೇ ಒಪ್ಪಿರುವ ನಾವು ಮಾಡಿರುವ ಅಪರಾಧವಾದರೂ ಏನು ? ಉಳಿದವರು ಶಾಸ್ತ್ರದಲ್ಲಿ ಹೇಳಿರುವ ಕೊಂಚ ಭಾಗವನ್ನು ಒಪ್ಪಿರುವಾಗ ನಾವು ಶಾಸ್ತ್ರದಲ್ಲಿ ಹೇಳಿರುವುದೆಲ್ಲ ವನ್ನೂ ಸಮನ್ವಯ ಮಾಡಿದ್ದೇವೆ ಎಂದು ಅಭಿಪ್ರಾಯ. ಆ ಈಶ್ವರನೂ ಕೂಡ ವಿಭುಸ್ವರೂಪವುಳ್ಳವನೂ ಆಗಿದ್ದಾನೆ. ವಿಭುತ್ವವೆಂದರೆ ವ್ಯಾಪಕತ್ವ—ಎಲ್ಲಾ ಕಡೆಯೂ ಹರಡಿರುವಿಕೆ.

[1]ಯಚ್ಚ ಕಿಞ್ಚಿ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿವಾ ।
ಅನ್ತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ ॥

ಈ ಪ್ರಪಞ್ಚದಲ್ಲಿ ಯಾವುದು ಕಾಣಲ್ಪಡುತ್ತದೋ ಅಥವಾ 'ಇದೆ' ಎಂದು ಕೇಳಲ್ಪಡುತ್ತದೋ, ಆ ಎಲ್ಲಾ ವಸ್ತುಗಳ ಒಳಗೂ ಹೊರಗೂ ವ್ಯಾಪಿಸಿ ನಾರಾಯಣನು ನಿಂತಿದ್ದಾನೆ, ಎಂಬುದಾಗಿ ಶ್ರುತಿ ಹೇಳುತ್ತದೆ. ಸರ್ವದ್ರವ್ಯ ಸಂಯೋಗಿತ್ವಂ ವಿಭುತ್ವಂ ಎಂದು ನ್ಯಾಯಸಿದ್ಧಾಞ್ಜನ ವ್ಯಾಖ್ಯೆಯಾದ ರತ್ನ ಪೇಟಿಕಾದಲ್ಲಿ ಹೇಳಿದ್ದಾರೆ—ಅಂದರೆ ಎಲ್ಲಾ ದ್ರವ್ಯದಲ್ಲೂ ಸಂಬಂಧವಿರುವಿಕೆಯೇ ವಿಭುತ್ವವೆಂದಾಯಿತು. ನ್ಯಾಯಸಿದ್ಧಾಞ್ಜನದಲ್ಲಿ ಸರ್ವಮೂರ್ತ ದ್ರವ್ಯ ಸಂಯೋ ಗಿತ್ವಂ ವಿಭುತ್ವಂ ಎಂದು ಹೇಳಿದ್ದಾರೆ. ಮೂರ್ತತ್ವವೆಂದರೆ—ಒಂದು ಆಕಾರ ಹೊಂದಿರುವಿಕೆ; ರೂಪವನ್ನು ಹೊಂದಿರುವಿಕೆ—ಗೊತ್ತಾದ ಒಂದು ಅಳತೆಯಿಂದ ಕೂಡಿರುವಿಕೆ ಅಥವಾ ಚಲನೆಯಿಂದ ಕೂಡಿರುವಿಕೆ. "ಪರಿಚ್ಛಿನ್ನಪರಿಮಾಣವತ್ತ್ವಮ್ ಕ್ರಿಯಾವತ್ತ್ವಂವಾ ಮೂರ್ತತ್ವಂ ಎಂದೂ ಅರ್ಥಮಾಡಿದ್ದಾರೆ ಶಾಸ್ತ್ರಕಾರರು. ಅಂತಹ ಮೂರ್ತದ್ರವ್ಯದೊಡನೆ ಸಂಬಂಧ ಇರುವಿಕೆ ವಿಭುತ್ವವೆಂದಾಯಿತು. ನ್ಯಾಯಮತದಲ್ಲಿ ಪೃಥಿವಿ, ಜಲ, ತೇಜಸ್ಸು, ವಾಯು ಮತ್ತು ಮನಸ್ಸು ಇವು ಮೂರ್ತದ್ರವ್ಯಗಳೆಂದು ಪರಿಗಣಿಸಿದ್ದಾರೆ. 'ಕ್ರಿಯಾಶ್ರಯತ್ವಂ ಮೂರ್ತತ್ವಂ' ಎಂದು ನ್ಯಾಯಬೋಧಿನಿಯಲ್ಲಿ ಹೇಳಿದೆ. ಅಂತೂ ಇಂತಹ ಮೂರ್ತದ್ರವ್ಯ ಗಳೆಲ್ಲೆಲ್ಲಾ ಈಶ್ವರನ ಸಂಬಂಧವಿದ್ದೇ ಇದೆ ಎಂದು ನಾವು ತಿಳಿದಂತಾಯಿತು.

ಈಶ್ವರನ ಈ ವ್ಯಾಪಕತ್ವವು ಸ್ವರೂಪದಿಂದ, ಧರ್ಮಭೂತ ಜ್ಞಾನದಿಂದ ಮತ್ತು ವಿಗ್ರಹದಿಂದ ಎಂಬ ಈ ಮೂರು ವಿಧಗಳಿಂದ ಕೂಡಿದೆ. ಅವನೂ ಕೂಡ

1. ತೈತ್ತರೀಯೋಪನಿಷತ್ । ನಾ (೨೫) ॥೯೪॥

ಅನಂತನೆಂದು ಹೇಳಲ್ಪಡುತ್ತಾನೆ. ಅನಂತನೆಂದರೆ ಮೂರು ವಿಧವಾದ ಅಳತೆ ಇಲ್ಲದವನು. ದೇಶ, ಕಾಲ, ವಸ್ತು ಇವುಗಳ ಅಳತೆಗೆ ಮೀರಿದವನು. 'ಇಲ್ಲಿ ಇದ್ದಾನೆ, ಅಲ್ಲಿ ಇಲ್ಲ' ಎಂಬುದು ದೇಶ ಪರಿಚ್ಛೇದ, ಇದು ಪರಮಾತ್ಮನಿಗೆ ಇಲ್ಲ. ಅವನು ಸರ್ವವ್ಯಾಪಿ, ಎಲ್ಲೆಡೆಯಲ್ಲೂ ಇದ್ದಾನೆ. 'ಈ ಕಾಲದಲ್ಲಿ ಇದ್ದಾನೆ, ಹಿಂದಿನ ಕಾಲದಲ್ಲಿದ್ದನು, ಮುಂದೆ ಇರುವುದಿಲ್ಲ' ಎಂಬುದು ಕಾಲಪರಿಚ್ಛೇದ. ಅದಿಲ್ಲದವನು—'ಅವನು ಯಾವಾಗಲೂ ಇರುವವನು. 'ಈ ಪದಾರ್ಥ ದಲ್ಲಿದ್ದಾನೆ, ಆದರಲ್ಲಿ ಇಲ್ಲ' ಎಂಬುದು ವಸ್ತುಪರಿಚ್ಛೇದ. ಅದಿಲ್ಲದವನು ; ಎಲ್ಲದ ರಲ್ಲೂ ಇದಾ ನೆ. "ಸತ್ಯತ್ವ-ಜ್ಞಾನತ್ವ-ಆನಂದತ್ವ-ಅಮಲತ್ವ" ಮುಂತಾದವು ಈಶ್ವರನ ಸ್ವರೂಪವನ್ನು ನಿರೂಪಣೆ ಮಾಡಿಕೊಡುವ ಧರ್ಮಗಳು. ಈಶ್ವರನು ಎಂತಹವನು ಎಂದರೆ 'ಈ ಸತ್ಯತ್ವಾದಿ ಗುಣಗಳುಳ್ಳವನೇ ಅವನು' ಎಂಬುದಾಗಿ ಅವನ ಸ್ವರೂಪವನ್ನು ಇವು ತೋರಿಸುತ್ತವೆ. ಆದುದರಿಂದ ಇವು ಅವನ ಸ್ವರೂಪ ನಿರೂಪಕ ಧರ್ಮಗಳು. ಜ್ಞಾನ, ಶಕ್ತಿ ಮುಂತಾದವು ಅವನ ನಿರೂಪಿತ ಸ್ವರೂಪ ಧರ್ಮಗಳು. ಅಂದರೆ ಅವನ ಸ್ವರೂಪ ಇಂತಹುದು ಎಂದು ನಾವು ತಿಳಿದನಂತರ ಆ ಸ್ವರೂಪದಲ್ಲಿರುವ ಧರ್ಮಗಳು. ಸರ್ವಜ್ಞತ್ವ ಸರ್ವಶಕ್ತಿತ್ವಾದಿಗಳು ಸೃಷ್ಟಿಗೆ ಉಪಯೋಗವಾಗುವ ಧರ್ಮಗಳು. ಜೀವಿಗಳ ಕರ್ಮಗಳೆಲ್ಲವನ್ನೂ ಅರಿತಿದ್ದ ರಲ್ಲವೇ ಅವುಗಳಿಗೆ ತಕ್ಕಂತೆ ಸೃಷ್ಟಿಸುವುದು ? ಆ ಸಾಮರ್ಥ್ಯ ಇವನಿಗೇ ಇರುವುದು ವಾತ್ಸಲ್ಯ, ಸೌಶೀಲ್ಯ, ಸೌಲಭ್ಯಾದಿಗಳು ಅವನನ್ನು ನಾವು ಆಶ್ರಯಿಸುವುದಕ್ಕೆ ಉಪಯುಕ್ತವಾದ ಧರ್ಮಗಳು. ಕಿರಿಯರಲ್ಲಿ ಇರುವ ಪ್ರೀತಿಗೆ ವಾತ್ಸಲ್ಯವೆಂದು ಹೆಸರು. ದೋಷಾನಾದರಃ—ತಪ್ಪನ್ನು ಕಾಣದಿರುವಿಕೆ. ಅದೂ ಪ್ರೀತಿಯಕಾರ್ಯವೇ ಆಯಿತು. ತನಗಿಂತ ಕಡಿಮೆಯಾದವರಲ್ಲಿ ಚೆನ್ನಾಗಿ ಹೊಂದಿಕೊಂಡಿರುವಿಕೆಯು ಸೌಶೀಲ್ಯ. ಎಲ್ಲರಿಗೂ ಸುಲಭನಾಗಿರುವಿಕೆಗೆ ಸೌಲಭ್ಯವೆಂದು ಹೆಸರು. ಕಾರುಣ್ಯಾದಿ ಗಳು ರಕ್ಷಣೆಗೆ ಉಪಯೋಗವಾಗುವ ಧರ್ಮಗಳು.

ಈ ಈಶ್ವರನು ಅಣ್ಡದ ಸೃಷ್ಟಿಯಾದನಂತರ ಚತುರ್ಮುಖ, ದಕ್ಷ, ಕಾಲ ಇವೇ ಮೊದಲಾದವುಗಳಲ್ಲಿ ಅನ್ತರ್ಯಾಮಿಯಾಗಿದ್ದು ಸೃಷ್ಟಿಯನ್ನು ಮಾಡು ತ್ತಾನೆ. ವಿಷ್ಣುವಿನ ಅವತಾರ ರೂಪದಿಂದ ಮತ್ತು ಮನು ಕಾಲ ಇವೇ ಮೊದ ಲಾದವರ ಅನ್ತರ್ಯಾಮಿಯ ರೂಪದಿಂದಿದ್ದು ಕಾಪಾಡುವವನಾಗಿದ್ದಾನೆ. ರುದ್ರ ಕಾಲ ಯಮ ಇವೇ ಮೊದಲಾದವರ ಅನ್ತರ್ಯಾಮಿಯಾಗಿದ್ದು ಸಂಹಾರವನ್ನೂ ಮಾಡುತ್ತಾನೆ. ಆದುದರಿಂದ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವವನೂ ಆಗಿದ್ದಾನೆ.

ಈ ರೀತಿಯಾದ ಈಶ್ವರನು—೧. ಪರ, ೨. ವ್ಯೂಹ, ೩. ವಿಭವ, ೪. ಅನ್ತರ್ಯಾಮಿ, ೫. ಅವತಾರ ರೂಪದಿಂದ ಐದು ವಿಧವಾಗಿದ್ದಾನೆ.

ಇವುಗಳಲ್ಲಿ, ೧. ಪರನಾರೆಂದರೆ :—ಶ್ರೀ ವೈಕುಂಠವೆಂಬ ದಿವ್ಯಲೋಕ ವಿದೆ. ಪರಬ್ರಹ್ಮದ ಐಶ್ವರ್ಯದ ಮೂರು ಭಾಗ ಅದರಲ್ಲಿ ಅಡಗಿದೆ. ಉಳಿದ ಒಂದು ಭಾಗ ಈ ಹದಿನಾಲ್ಕು ಲೋಕಗಳನ್ನೊಳಗೊಂಡ ಬ್ರಹ್ಮಾಂಡ ದಲ್ಲಿ, ಆದುದರಿಂದಲೇ ಅದಕ್ಕೆ ತ್ರಿಪಾದ್ವಿಭೂತಿ ಎಂದು ಹೆಸರು. ಅದರಲ್ಲಿ ಶ್ರೀ ವೈಕುಠವೆಂಬ ಒಂದು ದೇಶ. ಆದೇಶದಲ್ಲೂ ಶ್ರೀ ವೈಕುಂಠವೆಂಬ ಒಂದು ನಗರವಿದೆ. ಇವೆಲ್ಲಾ ದಿವ್ಯವಾಗಿವೆ—ಆಶ್ಚರ್ಯವನ್ನುಂಟುಮಾಡತಕ್ಕ ವಾಗಿವೆ. ಆ ಪಟ್ಟಣದಲ್ಲಿ ಶ್ರೀ ವೈಕುಂಠವೆಂಬ ದಿವ್ಯ ವಿಮಾನವಿದೆ. ತ್ರಿಪಾದ್ವಿ ಭೂತಿಯಲ್ಲಿ ಕುಮುದ ಕುಮುದಾಕ್ಷ ಪುಣ್ಡರೀಕ ವಾಮನ ಶಙ್ಕುಕರ್ಣ ಸರ್ಪ (ರ್ವ)ನೇತ್ರ, ಸುಮುಖ, ಸುಪ್ರತಿಷ್ಠಿತ ಎಂಬುವರು ವೈಕುಂಠವೆಂಬ ಪಟ್ಟಣದ ಪಾಲಕರಾಗಿದ್ದಾರೆ. ಇವರು ದಿವ್ಯವಾದ ಕತ್ತಿ, ಗುರಾಣಿ ಮುಂತಾದ ಆಯುಧ ಗಳನ್ನು ಧರಿಸಿದ್ದಾರೆ. ದಿವ್ಯವಾದ ಒಡವೆಗಳನ್ನೂ ಧರಿಸಿದ್ದಾರೆ. ಬಹಳ ಮಂದಿ ಪರಿಜನರನ್ನೂ ಹೊಂದಿದ್ದಾರೆ. ಛತ್ರ, ಚಾಮರ ಮುಂತಾದ ಹೊರಗಣ ಅಂಗ ಗಳನ್ನು ಪಡೆದಿದ್ದಾರೆ. ಇವರಿಂದ ರಕ್ಷಿಸಲ್ಪಟ್ಟಿದ್ದಾಗಿದೆ ಆ ದಿವ್ಯನಗರ. ಅದರಲ್ಲಿ ಒಂದು ದಿವ್ಯವಾದ ಆಲಯ (ಅರಮನೆ) ಇದೆ. ಆ ಅಲಯದ ನಾಲ್ಕು ಪಕ್ಕ ಗಳಲ್ಲೂ ನಾಲ್ಕು ಬಾಗಿಲುಗಳಿವೆ. ಒಂದೊಂದು ಬಾಗಿಲಿನಲ್ಲೂ ಇಬ್ಬಿಬ್ಬರು ದ್ವಾರ ಪಾಲಕರಿದ್ದಾರೆ. ಅವರು ಚಣ್ಡ–ಪ್ರಚಣ್ಡ, ಭದ್ರ–ಸುಭದ್ರ, ಜಯ–ವಿಜಯ, ಧಾತೃ–ವಿಧಾತೃ ಎಂಬ ಹೆಸರುಳ್ಳವರಾಗಿದ್ದಾರೆ.

ಇಂತಹ ದಿವ್ಯಾಲಯದಲ್ಲಿ ರತ್ನಖಚಿತವಾದ ಅಂದವಾದ ಒಂದು ಮಹಾಮಣಿ ಮಂಟಪವಿದೆ. ಅದರಲ್ಲಿ ಒಂದು ಸಿಂಹಾಸನ, ಅದಕ್ಕೆ ಎಂಟು ಕಾಲುಗಳಿವೆ. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ, ಅಧರ್ಮ, ಅಜ್ಞಾನ, ಅವೈರಾಗ್ಯ ಮತ್ತು ಅನೈಶ್ವರ್ಯ ಎಂಬಿವೇ ಅಷ್ಟಪಾದಗಳು. ಅದರ ಮೇಲೆ ಶೇಷಪರ್ಯಙ್ಕ. ಮಂಚದ ಆಕಾರವಲ್ಲಿರುವ ಆದಿಶೇಷ. ಅದರ ಮೇಲೆ ಶಙ್ಖಚಕ್ರ ಮೊದಲಾದ ದಿವ್ಯಾಯುಧಗಳಿಂದ ಕೂಡಿದ ನಾಲ್ಕು ತೋಳುಳ್ಳ ಪರಮಾತ್ಮನಿದ್ದಾನೆ. ಅವನೇ ಪರವಾಸುದೇವ. ಅವನ ಶರೀರ ದಿವ್ಯವಾದದ್ದು. ಶ್ರೀದೇವಿ, ಭೂದೇವಿ, ನೀಳಾ ದೇವಿಗಳೊಡನೆ ಅವನು ಅಲ್ಲಿ ಕುಳಿತಿದ್ದಾನೆ. ಕಿರೀಟ, ಕಿವಿಯ ಆಭರಣ, ಕತ್ತಿನಲ್ಲಿ ಹಾರ, ಕೈಬಳೆ ಮುಂತಾದ ದಿವ್ಯಾಭರಣಗಳಿಂದ ಅಲಙ್ಕರಿಸಲ್ಪಟ್ಟಿದ್ದಾನೆ. ಪೀತಾಂಬರವನ್ನು ಧರಿಸಿದ್ದಾನೆ. ಅವನ ಹೃದಯದಲ್ಲಿ ಶ್ರೀವತ್ಸವೆಂಬ ಮಚ್ಚೆ ಇದೆ. ಕೌಸ್ತುಭವೆಂಬ ನಾಯಕಮಣಿ ಅವನ ಹಾರದಲ್ಲಿ ಇದೆ. ಚಿನ್ನದ ಉಡದಾರ ಮತ್ತು ಮುತ್ತಿನ ಡಾಬು ಇವುಗಳಿಂದ ಅವನ ಶರೀರದ ಕಾಂತಿ ಆಶ್ಚರ್ಯಕರವಾಗಿದೆ.

ಅವನು ಅನಂತ ಗರುಡ ವಿಷ್ವಕ್ಸೇನ ಮುಂತಾದ ನಿತ್ಯಪುರುಷರಿಂದ ಸೇವಿ ಸಲ್ಪಡುತ್ತಿದ್ದಾನೆ. ಮುಕ್ತರೆಲ್ಲರೂ ಸಾಮಗಾನಮಾಡುತ್ತಿದ್ದಾರೆ ಆ ಆಸ್ಥಾನದಲ್ಲಿ.

ಜ್ಞಾನಶಕ್ತಿ ಮುಂತಾದ ಬಹಳವಾದ ಕಲ್ಯಾಣಗುಣಗಳಿಂದ ಕೂಡಿದವನಾಗಿ ಪರಬ್ರಹ್ಮ ಪರವಾಸುದೇವ ಮುಂತಾದ ಶಬ್ದಗಳಿಂದ ಹೇಳಲ್ಪಡುತ್ತಾನೆ, ಆ ನಾರಾಯಣ. ಇಂತಹ ವೈಕುಂಠನಾಥನನ್ನು ನಾವು ಧ್ಯಾನಮಾಡಬೇಕಾದ ರೀತಿ ಇದು.

ಸವ್ಯಂ ಪಾದಂ ಪ್ರಸಾರ್ಯ ಶ್ರಿತದುರಿತಹರಂ ದಕ್ಷಿಣಂಕುಂಚಯಿತ್ವಾ
ಜಾನುನ್ಯಾಧಾಯಸವ್ಯೇತರ ಮಿತರಭುಜಂ ನಾಗಭೋಗೇ ನಿಧಾಯ ।
ಪಶ್ಚಾದ್ಬಾಹುದ್ವಯೇನ ಪ್ರತಿಭಟಶಮನೇ ಧಾರಯನ್ಶಂಖಚಕ್ರೇ
ದೇವಿಭೂಷಾದಿಜುಷ್ಟೋ ಜನಯತು ಜಗತಾಂಶರ್ಮ ವೈಕುಂಠನಾಥಃ ॥

ಆಶ್ರಿತರ ಪಾಪವನ್ನು ನೀಗಿಸುವುದು ಅವನ ಪಾದಗಳು. ಆದುದರಿಂದಲೇ ದೇವಾಲಯಗಳಲ್ಲಿ 'ಶಠಾರಿ' ಎಂಬ ಭಗವಂತನ ಪಾದಗಳನ್ನು ದೇವರ ದರ್ಶನ ಕ್ಕಾಗಿ ಹೋದವರ ತಲೆಯಮೇಲೆ ಪೂಜಾರಿಗಳು ಇಡುತ್ತಾರೆ—ನಾವು ಅವನ್ನು ಧರಿಸುವಂತೆ ಮಾಡುತ್ತಾರೆ, ಇಂತಹ ಪಾದಗಳಲ್ಲಿ ಎಡಗಾಲನ್ನು ಆಶೇಷ ಪರ್ಯಙ್ಕದಲ್ಲಿ ಚಾಚಿದ್ದಾನೆ. ಬಲಗಾಲನ್ನು ಮಡಿಸಿದ್ದಾನೆ. ಆ ಕಾಲಿನ ಮಂಡಿಯ ಮೇಲೆ ಬಲಗೈಯನ್ನು ಇಟ್ಟಿದ್ದಾನೆ. ಎಡಗೈಯನ್ನು ಆದಿಶೇಷನ ಶರೀರದಮೇಲೆ ಇಟ್ಟಿದ್ದಾನೆ. ಹಿಂದಿನ ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಿದ್ದಾನೆ. ಅವು ಅವನನ್ನು ಎದುರಿಸಿದವರನ್ನು ಶಮನಮಾಡುತ್ತದೆ. ಅಡಗಿಸುವಿಕೆಯನ್ನು ಉಂಟು ಮಾಡುತ್ತವೆ. ಶ್ರೀದೇವಿ ಭೂದೇವಿಗಳು ಅವನ ಕಾಲುಗಳನ್ನು ಒತ್ತುತ್ತಾ ಅವುಗಳ ಪರಿಸರದಲ್ಲಿ ಕುಳಿತಿದ್ದಾರೆ. ನೋಡಿದವರಿಗೆ ಅಚ್ಚರಿಯನ್ನು ಉಂಟುಮಾಡುತ್ತವೆ—ಅವನ ದಿವ್ಯವಾದ ಒಡವೆಗಳಿಂದ ತುಂಬಿದ ಮೂರ್ತಿ ಮತ್ತು ಮುಗುಳನಗೆಯಿಂದ ಕೂಡಿದ ನೋಟ. ಇಂತಹ ಪರಮಾತ್ಮನು ಜಗತ್ತಿಗೆ ಮಂಗಳವನ್ನುಂಟುಮಾಡಲಿ ಎಂಬುದು ಈ ಶ್ಲೋಕದ ತಾತ್ಪರ್ಯ.

೨. ವ್ಯೂಹವೆಂದರೆ ಆ ಪರವಾಸುದೇವನೇ ಉಪಾಸನಕ್ಕಾಗಿಯೂ ಜಗತ್ತಿನ ಸೃಷ್ಟಿ ಮುಂತಾದವುಗಳಿಗೂ ವಾಸುದೇವ ಸಙ್ಕರ್ಷಣ ಪ್ರದ್ಯುಮ್ನ ಅನಿರುದ್ಧ ಭೇದ ದಿಂದ ನಾಲ್ಕು ವಿಧವಾಗಿ ಇದ್ದಾನೆ. ಅದರಲ್ಲಿ ಷಾಡ್ಗುಣ್ಯದಿಂದ ಪರಿಪೂರ್ಣ ನಾದವನು ವಾಸುದೇವನು. ಜ್ಞಾನ ಬಲಗಳಿಂದ ಕೂಡಿರುವವನು ಸಂಕರ್ಷಣನು. ಐಶ್ವರ್ಯ ವೀರ್ಯಗಳಿಂದ ಕೂಡಿರುವವನು ಪ್ರದ್ಯುಮ್ನನು. ಶಕ್ತಿ, ತೇಜಸ್ಸು ಗಳಿಂದ ಕೂಡಿದವನು ಅನಿರುದ್ಧನು, ಈ ರೀತಿ ಗುಣಗಳ ವಿಭಾಗ.

ಈ ಗುಣಗಳಲ್ಲಿ ಜ್ಞಾನ, ಬಲೈಶ್ವರ್ಯ, ವೀರ್ಯಶಕ್ತಿ ತೇಜಸ್ಸುಗಳೆಂಬ ಆರು ಗುಣಗಳು ಪರತ್ವಕ್ಕೆ ಉಪಯುಕ್ತಗಳಾಗಿವೆ. ಜ್ಞಾನವಾವುದೆಂದರೆ ಸರ್ವಸಾಕ್ಷಾತ್ಕಾರ; ಎಲ್ಲವನ್ನೂ ಕಾಣುವಿಕೆ, ಬಲವಾವುದೆಂದರೆ ಲೀಲಾವಿಭೂತಿ, ನಿತ್ಯವಿಭೂತಿಗಳೆಂಬ

ಎರಡು ವಿಭೂತಿಗಳೆನ್ನೂ ಧರಿಸುವ ಸಾಮರ್ಥ್ಯ. ಐಶ್ವರ್ಯವಾವುದೆಂದರೆ ನಿಯನ್ತೃತ್ವ-ನಿಯಮಿಸುವಿಕೆ. ಜಗತ್ತಿಗೆ ಉಪಾದಾನವಾಗಿದ್ದರೂ ಯಾವವಿಧವಾದ ವಿಕಾರವಿಲ್ಲದಿರುವುದು ವೀರ್ಯವೆಂಬ ಗುಣ. ಶಕ್ತಿಃ ಅಘಟಿತ ಘಟನಾರೂಪಾ— ಆಗದ ಕಾರ್ಯವನ್ನೂ ಆಗುವಂತೆ ಮಾಡುವ ಸಾಮರ್ಥ್ಯ, ಶಕ್ತಿಯೆನಿಸಿಕೊಳ್ಳುತ್ತದೆ ಭಗವಂತನದು. ತೇಜಸ್ಸು ಎಂದರೆ ತಾನು ಮಾಡುವ ಕಾರ್ಯಗಳಲ್ಲಿ ಬೇರೆಯವರ ಸಹಾಯವನ್ನು ಅಪೇಕ್ಷಿಸದೆ ಇರುವಿಕೆ.

ಸೌಶೀಲ್ಯ-ವಾತ್ಸಲ್ಯ-ಸ್ವಾಮಿತ್ವ ಇವೇ ಮುಂತಾದವು ಸೌಲಭ್ಯಕ್ಕೆ ಉಪಯುಕ್ತಗಳಾಗಿವೆ. ಈ ಗುಣಗಳೆಲ್ಲವೂ ಎಲ್ಲಾ ಕಾಲದಲ್ಲೂ ಭಗವಂತನ ಸ್ವರೂಪವನ್ನು ಆಶ್ರಯಿಸಿದವುಗಳಾಗಿವೆ. ಪರ ವ್ಯೂಹ, ವಿಭವ, ಅನ್ತರ್ಯಾಮಿ, ಅರ್ಚಾವತಾರ ಮುಂತಾದ ವಿಭಾಗಗಳಲ್ಲಿ ಗುಣಗಳ ನಿಯಮವನ್ನು ಹೇಳುವುದೆಲ್ಲಾ ಆ ಆ ರೂಪಗಳನ್ನು ಇಟ್ಟು ಅನುಸನ್ಧಾನ ಮಾಡುವವರಿಗೆ ಸರ್ವೇಶ್ವರನನ್ನು ಯೋಗದೆಶೆಯಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ಮಾತ್ರ ಹೇಳಿರುವುದೇ ಹೊರತು, ಇತರ ಗುಣಗಳ ವ್ಯಾಪ್ತಿ—ಹರಡುವಿಕೆ ಅವುಗಳಲ್ಲಿ ಇಲ್ಲ ಎಂಬುದಕ್ಕಲ್ಲ. ಹಾಗಿಲ್ಲದಿದ್ದರೆ ಪರವ್ಯೂಹಾದಿ ಎಲ್ಲಾ ವಿಗ್ರಹಗಳಲ್ಲೂ ಭಗವಂತನು ಪೂರ್ಣವಾಗಿ ಇದ್ದಾನೆ ಎಂದು ಹೇಳುವ ಬಹಳ ಪ್ರಮಾಣಗಳಿಗೆ ವಿರೋಧವುಂಟಾಗುತ್ತದೆ.

ಹಾಗಾದರೆ ಈ ಯೋಗಿಗಳಿಗೆ ಈಶ್ವರನು ತನ್ನ ಗುಣವಿಶೇಷಗಳನ್ನು ವ್ಯವಸ್ಥೆ ಮಾಡಿ ಸಾಕ್ಷಾತ್ಕಾರವನ್ನುಂಟುಮಾಡುವುದೂ ಏತಕ್ಕೆ ? ಅಲ್ಲದೆ ಏತಕ್ಕೆ ಆ ಆ ರೂಪಾನುಸನ್ಧಾನ ನಿಷ್ಠರಿಗೆ ಅನುಸನ್ಧಾನ ಮಾಡಲು ತಕ್ಕ ಗುಣವಿಶೇಷಗಳು ವ್ಯವಸ್ಥೆ ಮಾಡಲ್ಪಟ್ಟವುಗಳಾಗಿವೆ ? ಎಲ್ಲವೂ ಉಪಾಸ್ಯನ ಗುಣಗಳಾಗಿರುವಾಗ ಹೀಗೆ ವ್ಯವಸ್ಥೆ ಮಾಡಲ್ಪಟ್ಟಗುಣಗಳು ಎನ್ನಬಹುದೋ ? ಎಂದರೆ, ಎಲ್ಲಾ ಉಪಾಸ್ಯನ ಗುಣಗಳಾಗಿದ್ದರೂ ಶ್ರೀಭಾಷ್ಯದಲ್ಲಿ ಗುಣೋಪಸಂಹಾರ ಪಾದದಲ್ಲಿ ಆ ಆ ವಿದ್ಯಾ ವಿಶೇಷಗಳಲ್ಲಿ, ಆ ಆ ಗುಣಗಳನ್ನು ಪ್ರಧಾನವಾಗಿ ಇಟ್ಟು ಉಪಾಸನೆಮಾಡಬೇಕೆಂದು ನಿಯಮಿಸಿದೆ ಹಿರಣ್ಯಶ್ಮಶ್ರು ಸಂಯದ್ವಾಮತ್ವಾದಿ ಗುಣವಿಶೇಷಗಳನ್ನು. ಹಾಗೆಯೇ ಭಗವಚ್ಛಾಸ್ತ್ರದಲ್ಲಿ ಹೇಳಲ್ಪಟ್ಟ ರೂಪವಿಶೇಷಾನುಸನ್ಧಾನಕ್ಕೆ ಗುಣವಿಶೇಷಗಳು ನಿಯತಗಳಾಗಿವೆ. ಹೀಗೆ ನಿಯಮಿಸಲ್ಪಟ್ಟ ಜಾಗಗಳಲ್ಲಿ ಪರರೂಪದಲ್ಲಿ ಜ್ಞಾನವೇ ಮೊದಲಾದ ಆರು ಗುಣಗಳೂ ವೇದ್ಯಗಳಾಗಿವೆ.

ವ್ಯೂಹಗಳು ನಾಲ್ಕೆಂದೂ, ಮೂರು ಎಂದೂ ಶಾಸ್ತ್ರಗಳು ಹೇಳುತ್ತವೆ. ನಾಲ್ಕು ವ್ಯೂಹವಾದರೆ ವ್ಯೂಹ ವಾಸುದೇವ ರೂಪಕ್ಕೆ ಪರರೂಪಕ್ಕಿಂತ ಅನುಸನ್ಧಾನ ಮಾಡಬೇಕಾದ ಗುಣಭೇದವು ಇಲ್ಲದಿರುವುದರಿಂದ ತ್ರಿವ್ಯೂಹವೆನ್ನುವುದು.

ಈ ಚತುರ್ವ್ಯೂಹ ಪಕ್ಷವನ್ನು-

ಗುಣೈಃಷಡ್ಭಿಸ್ತ್ವೇತೈಃ ಪ್ರಥಮ ತರಮೂರ್ತಿಸ್ತವಬಭೌ ।
ತತ ಸ್ತಿಸ್ರ ಸ್ತೇಷಾಂ ತ್ರಿಯುಗ ಯುಗಳೈರ್ಹಿ ತ್ರಿಭಿರಭೂಃ ॥

ಹೇ ತ್ರಿಯುಗ=ಎಲೌ ಷಡ್ಗುಣ ಸಮ್ಪನ್ನನೇ—ಆರು ಗುಣಗಳಿಂದ ಕೂಡಿದವನೇ ! ತವ=ನಿನ್ನ, ಪ್ರಥಮತರಮೂರ್ತಿಃ=ವ್ಯೂಹ ವಾಸುದೇವಮೂರ್ತಿಯು, ಏತೈಃಷಡ್ಭಿರ್ಗುಣೈಃ=ಉಪಾಸಕರಿಗೆ ಅನುಸಂಧಾನ ಮಾಡಲು ತಕ್ಕ ಈ ಆರು ಗುಣಗಳಿಂದ, ಬಭೌ=ಪ್ರಕಾಶಿಸುತ್ತಿತ್ತು. ತತಃ=ಆಮೇಲೆ, ತೇಷಾಂ=ಆ ಷಡ್ಗುಣಗಳ ಮಧ್ಯದಲ್ಲಿ, ತ್ರಿಭಿರ್ಯುಗಳೈಃ=ಜ್ಞಾನಬಲ ಎಂಬ ಒಂದು ಯುಗಳ–ಎರಡರ ಒಟ್ಟು, ಐಶ್ವರ್ಯ ವೀರ್ಯ—ಐಶ್ವರ್ಯ ವೀರ್ಯ ಎಂಬ ಮತ್ತೊಂದು ಯುಗಳ, **ಶಕ್ತಿತೇಜ**=ಶಕ್ತಿ ತೇಜಸ್ಸು ಎಂಬ ಮಗದೊಂದು ಯುಗಳ ಈ ರೀತಿಯಾದ ಆ ಆ ಮೂರ್ತಿಗಳನ್ನು ಉಪಾಸನೆ ಮಾಡುವವನು ಅನುಸಂಧಾನ ಮಾಡಲು ತಕ್ಕವುಗಳಿಂದ ಕೂಡಿದ, ತಿಸ್ರಃ=ಸಙ್ಕರ್ಷಣ ಪ್ರದ್ಯುಮ್ನ ಅನಿರುದ್ಧಮೂರ್ತಿಗಳು, ಅಭೂಃ=ಪ್ರಕಾಶಿಸುತ್ತಿದ್ದವು (ಭಾದೀಪ್ತೌ ಎಂಬ ಧಾತು. ಅದರ ಲಙ್‌ಲಕಾರ).

'ತ್ರಿಯುಗ' ಎಂಬ ಪದಕ್ಕೆ ಬೇರೆ ವ್ಯಾಖ್ಯಾಕಾರರು ಹೇಳಿರುವ ಅರ್ಥ ಹೀಗಿದೆ.

**ಅಂಭಸ್ಯಪಾರೇ ಭುವನಸ್ಯಮಧ್ಯೇನಾಕಸ್ಯಪೃಷ್ಠೇಮಹತೋಮಹೀಯಾನ್**=ಎಂಬುದಾಗಿ ವೇದದಲ್ಲಿ ಹೇಳಲ್ಪಟ್ಟ ಮೂರುಸ್ಥಾನವುಳ್ಳವನೇ ! ಕ್ಷೀರಾಬ್ಧಿ, ಶ್ರೀ ಶೈಲ, ಪರಮಪದ ರೂಪವಾದ ಮೂರು ಸ್ಥಾನಗಳು ಕ್ರಮವಾಗಿ ಈ ಶ್ರುತಿಗೆ ಅರ್ಥ ಎಂಬುದಾಗಿ ಕೆಲವರ ಅಭಿಪ್ರಾಯ.

ಅಥವಾ ಜ್ಞಾನಾದಿ ಯುಗಳತ್ರಯಗಳಿಂದ ತುಂಬಿದವನೇ ಎಂಬುದು ಅರ್ಥ ಎಂಬುದು ಕೆಲವರ ಅಭಿಪ್ರಾಯ.

**'ಆಪೋನಾರಾಃ'** ಹೀಗೆಂದು ಹೇಳಲ್ಪಟ್ಟ ಜಲದಲ್ಲಿ, ಕಾರ್ಯಾವಸ್ಥವಾದ ಪ್ರಪಂಚ ಮಧ್ಯದಲ್ಲಿ, ಪರಮಪದದಲ್ಲಿ ಎಂಬುದಾಗಿ ಕ್ರಮವಾಗಿ ಅರ್ಥ ಎಂದು ಬಹಳ ಮಂದಿಗಳ ಅಭಿಪ್ರಾಯ.

**ಯುಗಳೈಸ್ತ್ರಿಭಿರ್ಹಿ**=ಒಂದೊಂದು ಯುಗಳವನ್ನೂ, **ಆವಿಷ್ಕಾರ**=ಪ್ರಕಟನೆ ಮಾಡಲು ಸಾಧನವಾದ ಒಂದೊಂದು ಮೂರ್ತಿ ಉಳ್ಳವನಾಗಿ, **ತ್ರಿಧಾಅಭೂಃ**=ಮೂರು ವಿಧವಾಗಿ ಆದೆ ಎಂದರ್ಥ.

**'ತ್ರಿಭಿರ್ಯುಗಳೈಃ'** ಎಂದು ಸಾಮಾನ್ಯವಾಗಿ ಬಂದ ರೂಪಗಳಿಗೆ ಪ್ರತಿನಿಯಂತವಾಗಿ (ಅಸಾಧಾರಣವಾಗಿ) ಹೇಳಲ್ಪಟ್ಟ ಗುಣದ್ವಂದ್ವಗಳು ಯಾವವು ? ಮತ್ಸ್ಯ,

ಕೂರ್ಮ ಮೊದಲಾದ ಮೂರ್ತಿಗಳಲ್ಲಿ ವೇದಗಳ ಅಪಹರಣ ಮುಂತಾದವುಗಳ ಹಾಗೆ ಈ ಪರವ್ಯೂಹಗಳಲ್ಲೂ ಪ್ರತಿನಿಯತವಾದ ಕ್ರಿಯಾ ವಿಶೇಷವಿಲ್ಲದಿದ್ದಾಗ ಇವುಗಳಿಗೆ ವೈಯರ್ಥ್ಯವು ಪ್ರಸಂಗಿಸುವುದರಿಂದ ಈ ಕ್ರಿಯಾ ವಿಶೇಷಗಳಾದರೂ ಯಾವುವು ? ಧ್ಯಾನಾಲಂಬನವಾಗಿ ಇರುವಿಕೆಯು ಸರ್ವಮೂರ್ತಿ ಸಾಧಾರಣವಲ್ಲವೇ ಎಂದರೆ ಈ ಪರವ್ಯೂಹಗಳಲ್ಲಿ ಗುಣ ಕ್ರಿಯಾ ವಿಭಾಗಗಳನ್ನು,

ಷಾಡ್ಗುಣ್ಯಾದ್ವಾಸುದೇವಃ ಪರ ಇತಿ ಸಭವಾನ್ ಮುಕ್ತಭೋಗ್ಯೋ ಬಲಾಢ್ಯಾತ್ ಬೋಧಾತ್ಸಂಙ್ಕರ್ಷಣ ಸ್ತ್ವಂಹರಸಿ ವಿತನುಷೇ ಶಾಸ್ತ್ರ ಮೈಶ್ವರ್ಯವೀರ್ಯಾತ್ ।
ಪ್ರದ್ಯುಮ್ನಸ್ಸರ್ಗಧರ್ಮೌ ನಯಸಿ ಚ ಭಗವನ್ ಶಕ್ತಿತೇಜೋಽನಿರುದ್ಧೋ ಬಿಭ್ರಾಣಃ ಪಾಸಿ ತತ್ವಂಗಮಯಸಿ ಚ ತಥಾ ವ್ಯೂಹ್ಯರಙ್ಗಾಧಿರಾಜ ॥

ಎಂಬ ಶ್ಲೋಕದಲ್ಲಿ ಸಂಗ್ರಹಿಸಲ್ಪಟ್ಟಿವೆ.

('ಷಾಡ್ಗುಣ್ಯಾತ್' ಎಂಬುದು ತ್ರಿವ್ಯೂಹ ಪಕ್ಷಾಭಿಪ್ರಾಯ. ಅದರಲ್ಲಿ ಮುಕ್ತಭೋಗ್ಯಃ ಇಲ್ಲಿಯವರೆಗೂ ಹೇಳಲ್ಪಟ್ಟವನು ಪರವಾಸುದೇವನು. 'ಬಲಾಢ್ಯಾತ್' ಇವೇ ಮೊದಲಾದವುಗಳಿಂದ ಮೂರು ವ್ಯೂಹಗಳು ಹೇಳಲ್ಪಡುತ್ತವೆ.)

ಹೇರಙ್ಗಾಧಿರಾಜ=ಓ ಶ್ರೀರಂಗನಾಥನೇ ! ಸಭವಾನ್=ಸರ್ವೋತ್ಕೃಷ್ಟವಾದ ಸ್ವರೂಪ ಸ್ವಭಾವಗಳಿಂದ ಕೂಡಿದ ನೀನು, ಪರೋವಾಸುದೇವ ಇತಿ=ಪರವಾಸುದೇವನೆಂಬ ಹೆಸರುಳ್ಳ ರೀತಿಯಿಂದ-ಪರವಾಸುದೇವ ವಿಗ್ರಹ ವಿಶಿಷ್ಟವಾದ ರೀತಿಯಿಂದ ಎಂಬುದು ತಾತ್ಪರ್ಯ. ಷಾಡ್ಗುಣ್ಯಾನ್ಮುಕ್ತ ಭೋಗ್ಯಃ=ಆರು ಗುಣ ಸಮುದಾಯವು ಇವನ ಗುಣ ವಿಭಾಗ, ಮುಕ್ತರಿಗೆ ಭೋಗವನ್ನು ಕೊಡುವ ಸಂಬಂಧವುಳ್ಳ ರೀತಿಯಿಂದ ನಿತ್ಯವಾಗಿ ಇರುವಿಕೆ ಇವನ ವ್ಯಾಪಾರ ಎಂದು ಹೇಳಿದಂತಾಯಿತು. ವ್ಯೂಹ್ಯ=ಭಾಗವಾಗಿ, ಆ ಆ ವ್ಯೂಹ ವಿಗ್ರಹಗಳಿಂದ ಕೂಡಿರುವ ರೀತಿಯಿಂದ ಬೇರೆಯಾಗಿ ಎಂದು ತಾತ್ಪರ್ಯ. ತ್ವಂಸಙ್ಕರ್ಷಣಸ್ಸನ್=ನೀನು ಸಙ್ಕರ್ಷಣನಾಗಿ, ಬಲಾಢ್ಯಾತ್=ಬಲದಿಂದ ಕೂಡಿದ, ಬೋಧಾತ್=ಜ್ಞಾನದಿಂದ, ಹರಸಿ=ಜಗತ್ತಿನ ಸಂಹಾರವನ್ನು ಮಾಡುತ್ತೀಯೆ, ಶಾಸ್ತ್ರಂಚವಿತನುಷೇ=ಶಾಸ್ತ್ರವನ್ನೂ ಹೆಚ್ಚಾಗಿ ವಿಸ್ತಾರ ಮಾಡುತ್ತೀಯೆ. ಇದು ರುದ್ರಾಧಿಷ್ಠಾತನಾಗಿರುವುದು. ಜಗತ್ತಿನ ಸಂಹಾರ ಮತ್ತು ಶಾಸ್ತ್ರಕರಣ ಇದು ಅವನ ವ್ಯಾಪಾರ. ಪ್ರದ್ಯುಮ್ನಸ್ಸನ್ ಐಶ್ವರ್ಯ ವೀರ್ಯಾತ್=ಐಶ್ವರ್ಯದೊಡನೆ ಕೂಡಿದ ವೀರ್ಯದಿಂದ, ಸರ್ಗಧರ್ಮೌನಯಸಿ=ಸೃಷ್ಟಿಯನ್ನೂ ಧರ್ಮವನ್ನೂ ಪ್ರವರ್ತನ ಮಾಡುತ್ತೀಯೆ. ಇದು ಚತುರ್ಮುಖನಿಗೆ ಅಧಿಷ್ಠಾತನಾಗಿರುವುದು. ಸೃಷ್ಟಿಯನ್ನು ಮಾಡುವುದು ಮತ್ತು ಧರ್ಮ ಪ್ರವರ್ತನ ಇವು ಅವನ ವ್ಯಾಪಾರ, ಅನಿರುದ್ಧಸ್ಸನ್=ಅನಿರುದ್ಧನಾಗಿ ಶಕ್ತಿತೇಜಃ=ಶಕ್ತಿ ಮತ್ತು

ತೇಜಸ್ಸನ್ನು ಧರಿಸಿದವನಾಗಿ, ಪಾಸಿ—ಪ್ರಪಂಚದ ರಕ್ಷಣೆಯನ್ನು ಮಾಡುತ್ತೀಯೆ, ತತ್ತ್ವಂಗಮಯಸಿಚ—ಇಲ್ಲಿ ಗತ್ಯರ್ಥವು ಬುದ್ಧ್ಯರ್ಥದಲ್ಲಿದೆ; ಬೋಧಿಸುತ್ತೀಯೆ ಎಂದರ್ಥ. ರಕ್ಷಣ ಮತ್ತು ತತ್ತ್ವಜ್ಞಾನ ಇದು ಅವನ ವ್ಯಾಪಾರ. ಈ ರೀತಿ ಯಾಗಿ ಪ್ರತಿವ್ಯೂಹಕ್ಕೂ ನಿಯತವಾದ ವ್ಯಾಪಾರವು ಹೇಳಲ್ಪಟ್ಟಿತು; ಗುಣಗಳೂ ಹೇಳಲ್ಪಟ್ಟವು.

ಭಗವಚ್ಛಾಸ್ತ್ರದಲ್ಲಿ ನಾನಾ ವಿಧವಾದ ಸಂಹಿತೆಗಳಲ್ಲಿ, ಅಲ್ಲೊಂದು ಇಲ್ಲೊಂದು ಹೇಳಿರುವ ಇವುಗಳನ್ನು ಅಂದರೆ ವಿಶಕಲಿತವಾಗಿ ಹೇಳಿರುವ ವಿಸ್ತಾರವಾಗಿ ಹೇಳಿ ರುವ ವಿಷಯಗಳೆಲ್ಲವನ್ನೂ ಎಲ್ಲರಿಗೂ ಸುಲಭವಾಗಿ ಅರಿಯುವಂತೆ ಮಾಡಲು ಒಟ್ಟುಗೂಡಿಸಿ ಈ ಶ್ಲೋಕದಲ್ಲಿ ತೋರಿಸಲ್ಪಟ್ಟಿತು. ಈ ಶ್ಲೋಕ ಮತ್ತು ಮುಂದಿನ ಶ್ಲೋಕ ಇವುಗಳನ್ನು ಕೂರೇಶರೆಂಬ ರಾಮಾನುಜ ಶಿಷ್ಯರು ರಂಗರಾಜ ಸ್ತವವೆಂಬ ಸ್ತೋತ್ರದಲ್ಲಿ ಹೇಳಿದ್ದಾರೆ. ಚತುರ್ವ್ಯೂಹಗಳಲ್ಲಿ ಒಂದೊಂದಕ್ಕೂ ನಾಲ್ಕು ಅವಾಂತರ ಅವಸ್ಥೆಗಳುಂಟು–ಒಳಗಿನ ಸ್ಥಿತಿಯುಂಟು, ಈ ರೀತಿ ಉಪಾಸನೆ ಯನ್ನು ಆ ಆ ಗುಣ ಮತ್ತು ಪರಿಚ್ಛದ ಭೇದಗಳೆಲ್ಲವೂ ಶ್ರೀಪಾಞ್ಚರಾತ್ರಗಳಲ್ಲಿ ಪ್ರಸಿದ್ಧವಾಗಿವೆ. ಅವನ್ನೂ ಕೂಡ,

ಜಾಗ್ರತ್ಸ್ವಪ್ನಾತ್ಯಲಸ ತುರೀಯ ಪ್ರಾಯಧ್ಯಾತೃಕ್ರಮವದುಪಾಸ್ಯಃ ।
ಸ್ವಾಮಿಂಸ್ತತ್ತದ್ಗುಣ ಪರಿಬರ್ಹಶ್ಚಾತುರ್ವ್ಯೂಹ್ಯಂವಹಸಿ ಚತುರ್ಧಾ ॥

ಎಂಬ ಈ ಶ್ಲೋಕದಲ್ಲಿ ಸಂಗ್ರಹಿಸಿ ಹೇಳಿದ್ದಾರೆ—

ಶ್ರೀ ಸಾತ್ವತದಲ್ಲಿ "ಸರ್ವಕ್ರಿಯಾವಿನಿರ್ಮುಕ್ತಮಮೂರ್ತಂ ಪರಮಾರ್ಥತಃ । ಚಾತುರಾತ್ಮ್ಯಂತದಾದ್ಯಂವೈ" ಇವೇ ಮೊದಲಾದವುಗಳಲ್ಲಿ ಸಙ್ಕರ್ಷಣಾದಿವ್ಯೂಹಗಳು ನಿರ್ವ್ಯಾಪಾರಗಳು ಎಂದು ಹೇಳಿರುವಾಗ ಇಲ್ಲಿ ಕ್ರಿಯೆಗಳ ವಿಭಾಗವನ್ನು ಹೇಳಿರು ವುದು ಕೂಡುತ್ತದೆಯೋ ಎಂದರೆ ಆ ಸಂದೇಹವನ್ನು ಕೂರೇಶರು ಇದರಲ್ಲಿ ನೀಗಿಸಿದ್ದಾರೆ.

ಪರಮಪದದಲ್ಲಿ ಶುದ್ಧ ಸತ್ವದ್ರವ್ಯ ಪರಿಣಾಮರೂಪವಾದ, ಕೈಕಾಲು ಇವುಗಳಿಲ್ಲದ ಸ್ಥೂಲಾಕಾರವಾದ ಬಹಳ ಎತ್ತರ ಮತ್ತು ವಿಸ್ತಾರವುಳ್ಳ ವಿಶಾಖ ಯೂಪವೆಂಬ ಹೆಸರುಳ್ಳ ಭಗವಂತನ ಒಂದು ರೂಪ ವಿಶೇಷವಿದೆ. ಅದರಲ್ಲಿ ಮೇಲಿನ ಮತ್ತು ಕೆಳಗಿನ ಪ್ರದೇಶಗಳಲ್ಲಿ, ಜಾಗ್ರತ್ಸ್ವಪ್ನ ಸುಷುಪ್ತಿ ತುರೀಯ ಎಂಬ ಹೆಸರುಳ್ಳ ನಾಲ್ಕು ಸ್ಥಾನಗಳಿವೆ. ಅವುಗಳಲ್ಲಿ ವಿಶಾಖಯೂಪದ ಬುಡದಿಂದ ಮೇಲೆ ಮಧ್ಯ ಪ್ರದೇಶದಲ್ಲಿ ಒಂದೆಡೆ, ಜಾಗ್ರತ್ ಎಂಬ ಹೆಸರುಳ್ಳ ಸ್ಥಾನವಿದೆ. ಅದಕೆ, ಮೇಲೆ ಸ್ವಪ ವೆಂಬ ಹೆಸರುಳ್ಳದು . ಅದಕೆ, ಮೇಲೆ ಸುಷುಪ್ತಿ ಸಂಜ್ಞಕ

ವಾದದ್ದು, ತುದಿಯ ಪ್ರದೇಶದಲ್ಲಿ ತುರೀಯ ಸಂಜ್ಞಕವಾದ ಸ್ಥಾನ, ಈ ರೀತಿ ಇವೆ. ಅದರಲ್ಲಿ ಜಾಗ್ರತ್ಸ್ಥಾನದಲ್ಲಿ ಜಾಗ್ರದ್ವ್ಯೂಹವೆಂಬ ಹೆಸರುಳ್ಳ ವಾಸುದೇವ-ಸಙ್ಕರ್ಷಣ ಮೊದಲಾದ ನಾಲ್ಕು ಮೂರ್ತಿಗಳು ವಿಶಾಖಯೂಪದ ನಾಲ್ಕು ಕೊಂಬೆಗಳಂತೆ ಸುತ್ತಲೂ ಪೂರ್ವದ ಕಡೆ ಮೊದಲಾಗಿ ನಾಲ್ಕು ದಿಕ್ಕುಗಳಲ್ಲೂ ಇವೆ. ಈ ಚತುಷ್ಟಯದ ವ್ಯಾಪಾರವೇನೆಂದರೆ ಪ್ರಪಂಚದ ಸೃಷ್ಟಿ ಸ್ಥಿತಿ ಮುಂತಾದವು. ಬಿಳಪು ಕೆಂಪು ಮುಂತಾದ ಬಹಳ ಶ್ರೇಷ್ಠವಾದ ಬಣ್ಣಗಳು, ಎಲ್ಲಾ ಆಯುಧಗಳು ಮತ್ತು ಸಲಕರಣೆಗಳು ಇವನ್ನು ಹೊಂದಿರುವಿಕೆ.

ಸ್ವಪ್ನಸ್ಥಾನದಲ್ಲಿ ಸ್ವಪ್ನಸಂಜ್ಞಕವಾದ ವಾಸುದೇವಾದಿ ನಾಲ್ಕು ವ್ಯೂಹಗಳು ಹಿಂದಿನ ಹಾಗೆ ಇವೆ. ಅವುಗಳ ವಿಶೇಷವಾದರೋ, ಸೃಷ್ಟಿಸ್ಥಿತ್ಯಾದಿ ವ್ಯಾಪಾರಗಳ ಇಚ್ಛೆ ಮಾತ್ರ. ವ್ಯಾಪಾರವಾವುದೂ ಇಲ್ಲ, ಜಾಗ್ರದ್ವ್ಯೂಹವನ್ನು ಕುರಿತು ಕಾರಣವಾಗಿರುವಿಕೆ ಮಾತ್ರ ಇದರ ವಿಶೇಷ. ಬಿಳಪು, ಕೆಂಪು ಮುಂತಾದ ವರ್ಣಗಳು ಹಿಂದಿನಷ್ಟು ಉತ್ಕೃಷ್ಟವಾಗಿಲ್ಲ. ಆಯುಧಾದಿಗಳನ್ನು ಹೊಂದುವಿಕೆಯಲ್ಲೂ ಧ್ವಜವೇ ಮೊದಲಾದ ಉಪಕರಣವಿಲ್ಲದಿರುಕೆ ಈ ಜಾಗದ, ವ್ಯೂಹಗಳ ಹೆಚ್ಚಳ. ಸುಷುಪ್ತ ಸ್ಥಾನದಲ್ಲಿಯೂ ಕೂಡ ಸುಷುಪ್ತ ಸಂಜ್ಞಕವಾದ ಚಾತುರ್ವ್ಯೂಹವು ಹಿಂದಿನ ಹಾಗೆಯೇ ಇದೆ. ಅದರ ವಿಶೇಷವಾದರೋ ಸೃಷ್ಟ್ಯಾದಿ ಇಚ್ಛೆಯೂ ಇಲ್ಲ, ಮತ್ತೇನೆಂದರೆ ಸ್ವಾನಂದಾನುಭವಮಾತ್ರ—ತನ್ನ ಆನಂದವನ್ನು ಅನುಭವಿಸುವಿಕೆ ಮಾತ್ರ. ಅದರಲ್ಲಿ ಪೂರ್ವಭಾಗದಲ್ಲಿ ಇರುವ ವಾಸುದೇವನೆಂಬ ವ್ಯೂಹಕ್ಕೆ ಕೈಕಾಲು ಇವೇ ಮೊದಲಾದವುಗಳಿಂದ ಕೂಡಿದ ವಿಗ್ರಹವು ಇಲ್ಲ. ಆದರೆ ವಿಶಾಖಯೂಪಕ್ಕೆ ಕೊಂಬೆಯಹಾಗೆ ಪರಿಣಾಮವನ್ನು ಹೊಂದಿದ ಶುದ್ಧಸತ್ತ್ವದ್ರವ್ಯದ ಒಂದು ಭಾಗದಿಂದ ಶರೀರವಾಗಿರುವಿಕೆಯಿಂದ ಸಂಬಂಧಮಾತ್ರ ಮತ್ತು ಷಾಡ್ಗುಣ್ಯವನ್ನು ಪ್ರಕಾಶಿಸುವುದು ಮಾತ್ರ. ದಕ್ಷಿಣ ಭಾಗವೇ ಮೊದಲಾದವುಗಳಲ್ಲಿ ಇರುವ ಸಙ್ಕರ್ಷಣ ಮೊದಲಾದ ಸಂಜ್ಞೆಯುಳ್ಳ ಎರಡನೆಯದೇ ಮೊದಲಾದ ಮೂರ್ತಿಗಳಿಗೂ ಕೂಡ ಕೈಕಾಲು ಇವುಗಳಿಂದ ಕೂಡಿದ ವಿಗ್ರಹ ಉಳ್ಳದ್ದಾಗಿದ್ದರೂ ಆಯುಧಾದಿಗಳು ಇಲ್ಲ. ಆದರೆ ಅಂಗೈಗಳಲ್ಲಿ ರೇಖಾ ರೂಪವಾದ—ಗೀಟಿನಂತಿರುವ ಶಙ್ಖ, ನೇಗಿಲು ಮುಂತಾದ ಆಯುಧಗಳ ಗುರುತನ್ನು ಪಡೆದಿರುವಿಕೆ ಮಾತ್ರ. ಸಿತ ರಕ್ತ—ಬಿಳುಪು, ಕೆಂಪು ಮುಂತಾದ ಬಣ್ಣಗಳ ಭೇದವಿಲ್ಲದಿರುವಿಕೆಯೂ ಉಂಟು.

ತುರೀಯ ಸ್ಥಾನದಲ್ಲಿಯೂ ಕೂಡ ತುರೀಯವೆಂಬ ಹೆಸರುಳ್ಳ ಚಾತುರ್ವ್ಯೂಹವು ಹಿಂದಿನ ಹಾಗೆಯೇ ಇದೆ. ಅದರ ವಿಶೇಷವಾದರೋ ನಾಲ್ಕಕ್ಕೂ ಕೈಕಾಲು ಇವುಗಳಿಂದ ಕೂಡಿದ ವಿಗ್ರಹವಿಲ್ಲ, ಆದರೆ ಸುಷುಪ್ತ ವಾಸುದೇವನಂತೆ ಶರೀರ ಇರುವಿಕೆ. ಆದುದರಿಂದಲೇ ಚೇತನ ವ್ಯಾಪಾರ ಚಿಹ್ನೆ ಇಲ್ಲದಿರುವಿಕೆಯೂ ಕೂಡ, ಮುಂದಿನ ಭಾಗದಲ್ಲಿರುವ ವಾಸುದೇವನಿಗೆ ಷಾಡ್ಗುಣ್ಯವನ್ನು ಪ್ರಕಾಶ

ಪಡಿಸುವಿಕೆ, ಬೇರೆಯವಕ್ಕೆ ಆ ಆ ಎರಡು ಗುಣಗಳ ಪ್ರಕಾಶನವೂ ಕೂಡ ಉಂಟು. ಈ ರೀತಿ ಚಾತುರ್ವ್ಯೂಹಗಳಿಗೆ ಜಾಗ್ರತ್ಸ್ವಪ್ನ ಮುಂತಾದ ಹೆಸರು ಇರುವಿಕೆ, ವ್ಯಾಪಾರ ಹೆಚ್ಚಾಗಿರುವಿಕೆ, ಕಡಿಮೆಯಾಗಿರುವಿಕೆ ವ್ಯಾಪಾರವಿಲ್ಲದೆ ಇರುವಿಕೆ ರೂಪವಾದ ಲೋಕದಲ್ಲಿ ನೋಡಿದ್ದಕ್ಕೆ ಸದೃಶವಾಗಿರುವಿಕೆಯು ಪ್ರಯುಕ್ತವಾದದ್ದು. ಆ ಆ ಸ್ಥಾನಗಳಿಗಾದರೋ ಆ ಆ ಚಾತುರ್ವ್ಯೂಹದ ಸಂಬಂಧ ಪ್ರಯುಕ್ತವಾದದ್ದೆಂದು ಅರಿಯಬೇಕು.

ಹೀಗೆ ಹೇಳಿದ ಅರ್ಥಗಳಲ್ಲಿ ಪ್ರಮಾಣವು ಲಕ್ಷ್ಮೀತಂತ್ರದಲ್ಲಿ "**ಪೂಜಿತ ಸ್ತೇಜಸಾಂರಾಶಿಃ**" ಎಂದಾರಂಭಮಾಡಿ "**ಸದಾದ್ಯಾವತ್ಪದಾಂತರಂ**" ಎಂಬಲ್ಲಿಯವರೆಗೂ ನೋಡತಕ್ಕದ್ದು.

ವಿಷ್ವಕ್ಸೇನ ಸಂಹಿತೆಯಲ್ಲಿ ಜಾಗ್ರದಾದಿ ಪದಭೇದಗಳಲ್ಲಿರುವ ವಿಶೇಷಗಳೆಲ್ಲವನ್ನು ಈ ರೀತಿ ಹೇಳಿದೆ.

"**ಸುಷುಪ್ತಿಸ್ವಪ್ನ ಸಂಜ್ಞಂಯಂಜ್ಞಾಗ್ರತ್ಸಂಜ್ಞಂ ಚಾತುರಾತ್ಮ್ಯಂ ಮಹಾಭಾಗ**" ಎಂದು ಆರಂಭಿಸಿ,

**ಉಪಾಸಕಾನು ಗ್ರಹಾರ್ಥಂ ಸ್ವಪ್ನಾದಿಪದ ಸಂಜ್ಞಿತಂ '**
**ಸ್ವಪ್ನಾದ್ಯವಸ್ಥಾಭೇದಾಸ್ತುಧ್ಯಾಯಿನಾಂ ಖೇದಶಾನ್ತಯೇ ।**
**ತತ್ತತ್ಪದಸ್ಥ ಜೀವಾನಾಂ ತನ್ನಿವೃತ್ಯರ್ಥಮೇವಚ ।**
**ಸ್ವಪ್ನಾದ್ಯವಸ್ಥಾ ಜೀವಾನಾಮಧಿಷ್ಠಾತಾರ ಏವತೇ ॥**

ಎಂಬಲ್ಲಿ ಹೇಳಲ್ಪಟ್ಟ ವಿಶೇಷಗಳು. **ಎಲೌ ಮಹಾಭಾಗನೇ**=ಭಾಗ್ಯಶಾಲಿಯೇ ! ಸುಷುಪ್ತಿ, ಸ್ವಪ್ನ, ಜಾಗ್ರತ ಮುಂತಾದ ಸಂಜ್ಞೆಯುಳ್ಳ ವ್ಯೂಹಗಳೆಲ್ಲವೂ ಆ ಆ ಅವಸ್ಥೆಗಳಲ್ಲಿರುವ ಜೀವಗಳ—ಉಪಾಸಕರ ಅನುಗ್ರಹಕ್ಕಾಗಿ, ಆ ಆ ಅವಸ್ಥೆಗಳಲ್ಲಿರುವ ಜೀವಿಗಳ ದುಃಖವನ್ನು ನೀಗಿಸುವುದಕ್ಕಾಗಿ, ಅವರುಗಳ ಅಧಿಷ್ಠಾತೃವಾಗಿ ಇವೆ. **ಜಾಗರಾವಸ್ಥೆ**=ಎಚ್ಚರವಾಗಿರುವ ಸ್ಥಿತಿ, **ಸ್ವಪ್ನಃ**=ಸ್ವಪ್ನದ ಸ್ಥಿತಿ, ಈ ಸ್ಥಿತಿಯಲ್ಲಿ ಇಂದ್ರಿಯಗಳ ವ್ಯಾಪಾರವು ಹೊರಗಿನ ವಸ್ತುಗಳೊಡನೆ ಸಂಬಂಧಿಸಿವೆ. **ಅತ್ಯಲಸ**=ಸುಷುಪ್ತಿಸ್ಥಿತಿ—ಗಾಢನಿದ್ರೆ ; ಇಂದ್ರಿಯ ವ್ಯಾಪಾರವಾವದೂ ಇಲ್ಲದಿರುವಿಕೆ. ನನ್ನನ್ನೂ ಮತ್ತು ಬೇರೆ ಯಾವುದನ್ನೂ ಅರಿಯೆ ಎಂಬ ಸ್ಥಿತಿ. **ತುರೀಯ**=ತುರೀಯಾವಸ್ಥೆ ಅದು ಯಾವುದೆಂದರೆ ಮೂರ್ಛಾವಸ್ಥೆ. ಜಾಗ್ರತ್ಪ್ರಾಯರು ಸ್ವಪ್ನಾದ್ಯವಸ್ಥಾಪ್ರಾಯರಾದ ಧ್ಯಾನಮಾಡುವವರು—ಉಪಾಸಕರು ಯಾರೋ ಅವರು ತನ್ನ ಆತ್ಮನನ್ನು ಆ ಆ ಅವಸ್ಥಾ ವಿಶಿಷ್ಟವಾಗಿರುವಂತೆ ಧ್ಯಾನಮಾಡುತ್ತಾರೆ. ಆ ಉಪಾಸಕರಿಂದ ಕ್ರಮವಾಗಿ ಉಪಾಸಿಸಲು ಯೋಗ್ಯನಾಗುತ್ತಾನೆ. ವ್ಯೂಹಾವಸ್ಥೆಯಲ್ಲಿರುವ

ಭಗವಂತನು ಅಲ್ಲಿ ಜಾಗ್ರುವಾದಿಸ್ಥಾನದಿಂದ ಕೂಡಿದ ಧ್ಯಾತೃಗಳಿಂದ ಉಪಾಸಿಸಲ್ಪಡುವ ವ್ಯೂಹ ವಾಸುದೇವನು ಕ್ರಮವಾಗಿ ಜಾಗ್ರತ್ ಸ್ವಪ್ನ ಸುಷುಪ್ತ ಮೂರ್ಛಾ ಎಂದು ವ್ಯಪದೇಶಿಸಲ್ಪಡುತ್ತಾನೆ. ಹೀಗೆಯೇ ಸಙ್ಕರ್ಷಣಾದಿಗಳಲ್ಲಿಯೂ ಕೂಡ. ಈ ಅರ್ಥವು ಈ ಶ್ಲೋಕದ ಪೂರ್ವಾರ್ಧದಿಂದ ಹೇಳಲ್ಪಟ್ಟಿದೆ. ಉತ್ತರಾರ್ಧದಲ್ಲಿ; ಎಲೌ ಸ್ವಾಮಿಯೇ, ತತ್ತದ್ಗುಣ ಪರಿಬರ್ಹಃ=ಪರಿಚ್ಛದಃ, ಆ ಆ ಸ್ಥಾನಗಳಲ್ಲಿ ಅನುಗುಣವಾದ ಗುಣವಾದ ಉಪಕರಣವುಳ್ಳವನಾಗಿ ಆ ಆ ಧ್ಯಾನಮಾಡುವವರಿಂದ ಉಪಾಸ್ಯನಾಗುತ್ತೀಯೆ, ಈ ರೀತಿ ಚಾತುರ್ವ್ಯೂಹವನ್ನು-ಶ್ರೀ ವಾಸುದೇವ ಸಙ್ಕರ್ಷಣ ಪ್ರದ್ಯುಮ್ನ ಅನಿರುದ್ಧ ಭೇದದಿಂದ ಬೇರೆಯಾದುದನ್ನು; ಚತುರ್ಧಾ ವಹಸಿ=ಒಂದದನ್ನೂ ಜಾಗ್ರತ್, ಸ್ವಪ್ನ, ಅತ್ಯಲಸ ತುರೀಯ ಈ ರೀತಿ ನಾಲ್ಕು ಪ್ರಕಾರದಿಂದ ವಹಿಸಿ—ನಿರ್ವಾಹ ಮಾಡುತ್ತೀಯೆ.

ಪಂಡಿತರಾದ ರಾಮಾನುಜರು ಈ ಶ್ಲೋಕದ ವ್ಯಾಖ್ಯಾನ ಮಾಡುವಾಗ—

"ತತ್ತದುಪಾಸಕ ಭೇದೇನ=ಆ ಆ ಉಪಾಸಕ ಭೇದದಿಂದ, ಚತುರ್ಧಾವ್ಯವಸ್ಥಿತಂ=ನಾಲ್ಕುವಿಧವಾಗಿ ವ್ಯವಸ್ಥೆಮಾಡಲ್ಪಟ್ಟ ಚಾತುರ್ವ್ಯೂಹ್ಯಂ=ನಾಲ್ಕು ವಿಧವಾದ ವ್ಯೂಹಭಾವವನ್ನು, ವಹಿಸಿ=ವಹಿಸುತ್ತಿಯೇ, ನಾಲ್ಕು ವ್ಯೂಹಗಳಲ್ಲಿ ಒಂದೊಂದಕ್ಕೂ ನಾಲ್ಕು ಒಳಗಿನ ಅವಸ್ಥೆಗಳು ಉಂಟಾಗುತ್ತವೆ. ಈ ರೀತಿ ಉಪಾಸನವನ್ನು ಆ ಆ ಗುಣಪರಿಬರ್ಹಃ ಉಪಕರಣ ಭೇದಗಳು ಎಲ್ಲವೂ ಶ್ರೀ ಪಾಂಚರಾತ್ರತನ್ತ್ರಗಳಲ್ಲಿ ಪ್ರಸಿದ್ಧವಾಗಿದೆ ಎಂದು ರಾಮಾನುಜ ವಿಪಶ್ಚಿತ್-ಪಂಡಿತರು ಈ ಶ್ಲೋಕ ವಾಖ್ಯಾನ ಮಾಡುವ ಸಂದರ್ಭದಲ್ಲಿ ಈ ರೀತಿ ವಿವರಿಸಿದ್ದಾರೆ.

ಜಾಗ್ರತ್ಪ್ರಾಯತ್ವವೆಂದರೆ ಬೇರೆ ವಿಷಯಗಳಲ್ಲಿ ಬಹಳವಾದ ಸಞ್ಚಾರವಿದ್ದರೂ ಭಗವಂತನಲ್ಲಿ ಸ್ಮರಣವಿರುವಿಕೆ, ಸ್ವಪ್ನಪ್ರಾಯತ್ವವೆಂದರೆ ಅಲ್ಪಾಲ್ಪ-ಕೊಂಚ ಕೊಂಚ ವಿಷಯಾನ್ತರ ಸಞ್ಚಾರವಿದ್ದರೂ ಹೆಚ್ಚಾದ ಪರಿಚಯವಿರೋಣದರಿಂದ ಭಗವಂತನ ಸ್ಮರಣ ಬಾಹುಳ್ಯ. ಅಥವಾ ಧ್ಯಾನ ಪರಿಪಾಕದಿಂದ ಬಹಿರಿನ್ದ್ರಿಯ ವ್ಯಾಪಾರಗಳಿಗೆ ವಿರೋಧವಿದ್ದರೂ, ಸ್ವಪ್ನವನ್ನು ಕಾಣುವ ಪುರುಷನ ಹಾಗೆ ವಿಷಯಗಳಲ್ಲಿ ಅನ್ತರಿನ್ದ್ರಿಯಗಳಿಗೆ-ಒಳಗಿನ ಇಂದ್ರಿಯಗಳಿಗೆ ವ್ಯಾಪಾರವಿರುವಿಕೆ. ಅತ್ಯಲಸಪ್ರಾಯತ್ವವೆಂದರೆ ಅದಕ್ಕಿಂತಲೂ ಅಧಿಕವಾದ ಪರಿಪಾಕವುಳ್ಳವನಿಗೆ ಗಾಢನಿದ್ರೆಯಲ್ಲಿ ಇರುವವನಂತೆ ವಿಷಯಗಳಲ್ಲಿ ಅನ್ತರಿಂದ್ರಿಯಕ್ಕೂ ವ್ಯಾಪಾರವಿಲ್ಲದಿರುವಿಕೆ. ಗಾಢನಿದ್ರೆಯಲ್ಲಿರುವವನಿಗೆ—ಸುಷುಪ್ತಾವಸ್ಥೆಯಲ್ಲಿ ಯಾವನಾದರೂ ಹೊಡೆದರೆ ನೋವು ಕಾಣುತ್ತದೆ—ಅದರ ಅನುಭವವಾಗುತ್ತದೆ. ಅವರ ಹಾಗೆ ವಿಷಯಾನ್ತರದಲ್ಲಿ ಸಂಚಾರವಿಲ್ಲದಿದ್ದರೂ, ಸ್ವಪ್ನದಲ್ಲಿ ಉಂಟಾಗುವ ಸುಖದುಃಖ ಇವೇ ಮೊದಲಾದವುಗಳಿಂದ ಸ್ವಲ್ಪ ಮುಚ್ಚಲ್ಪಟ್ಟ—ತಡೆಯಲ್ಪಟ್ಟ ಭಗವಂತನ ಸ್ಮರಣವಿರುವಿಕೆ.

ತುರೀಯು ಪ್ರಾಯತ್ವವೆಂದರೆ, ಮೂರ್ಛೆಯಲ್ಲಿ ಕೇವಲ ಸ್ವಾತ್ಮಾನುಭವದ ಹಾಗೆ ತೈಲ ಧಾರೆಯಂತೆ ಅವಿಚ್ಛಿನ್ನವಾದ ಭಗವಂತನ ಸ್ಮರಣಸನ್ತತಿ ಇರುವಿಕೆ ಎಂದರ್ಥ. ಸಾರಾಸ್ವಾದಿನೀಯೆಂಬ ರಹಸ್ಯತ್ರಯಸಾರದ ವ್ಯಾಖ್ಯಾನದಲ್ಲಿ ತುರೀಯು ಪ್ರಾಯತ್ವವೆಂದರೆ, ಪುಷ್ಕಲವಾದ ಅಂದರೆ ಪೂರ್ತಿಯಾಗಿ ತುಂಬಿದ ಧ್ಯಾನದ ಪರಿಪಾಕ ಮಹಿಮೆಯುಳ್ಳವನಿಗೆ ಮೂರ್ಛೆಗೊಂಡ ಪುರುಷನಂತೆ ವಿಷಯ ವ್ಯಾಪಾರಗಳಿಗೆ ಯೋಗ್ಯತೆಯುಳ್ಳ ಗುರುತೂ ಇಲ್ಲದಿರುವಿಕೆ, ಸುಷುಪ್ತಿಯಲ್ಲಿರುವನಂತೆ, ವ್ಯಾಪಾರಕ್ಕೆ ಯೋಗ್ಯವಾದ ಗುರುತಾದ ಉಸಿರನ್ನು ಎಳೆದುಕೊಳ್ಳುವಿಕೆ ಬಿಡುವಿಕೆ ಮುಂತಾದವು ಮೂರ್ಛೆಗೊಂಡವನಲ್ಲಿ ಕಾಣುವುದಿಲ್ಲ. ಈ ರೀತಿ ನಾಲ್ಕುವಿಧವಾದ ಅವಸ್ಥೆಯುಳ್ಳವರು ಧ್ಯಾನಮಾಡುವವರು.

**ಇದು ಅಭಿಪ್ರಾಯ :** ಹೇಗೆ ಉಪಾಸಕರು ತಮ್ಮ ಅವಸ್ಥೆಯನ್ನು ಜಾಗತ್ಪ್ರಾಯತ್ವಾದಿ ರೂಪದಿಂದ ನಾಲ್ಕುವಿಧವಾಗಿ ವಹಿಸುತ್ತಾರೋ ಅದರಂತೆ ಉಪಾಸ್ಯನಾದ ನೀನೂ ಚಾತುರ್ವ್ಯೂಹ ರೂಪವಾದ ನಿನ್ನ ಅವಸ್ಥೆಯನ್ನೂ ಜಾಗ್ರದ್ವ್ಯೂಹತ್ವಾದಿ ರೂಪದಿಂದ ನಾಲ್ಕುವಿಧವಾಗಿ ವಹಿಸುತ್ತೀಯೆ. ಇಲ್ಲಿ ಆಶ್ರಿತರ ಆಕಾರದ ಅನುಕರಣದ ವರ್ಣನೆಯಿಂದ ಆಶ್ರಿತರಲ್ಲಿ ಭಗವಂತನ ಹೆಚ್ಚಾದ ಪ್ರೀತಿಯುತೋರಲ್ಪಡುತ್ತದೆ. ತತ್ಕ್ರತುನ್ಯಾಯ ವಿಪರೀತವಾಗಿದೆ. ಇದೇ ವಿಚಿತ್ರ ಎಂದು ಆಶ್ಚರ್ಯವೂ ಕೂಡ.

[1]ಕೇಶವನೇ ಮೊದಲಾದ ಹನ್ನೆರಡು ರೂಪಗಳೂ ವ್ಯೂಹಾಂತರಗಳು, ವಾಸುದೇವಾದಿ ನಾಲ್ಕು ವ್ಯೂಹಗಳಿಂದಲೂ ಮೂರು ಮೂರಾಗಿ ಕ್ರಮವಾಗಿ ಉಂಟಾದವು. ಇವು ದ್ವಾದಶ ಮಾಸಗಳಿಗೂ ದ್ವಾದಶ ಆದಿತ್ಯರಿಗೂ ಅಧಿದೈವತಗಳು. [2]ಊರ್ಧ್ವಪುಂಡ್ರಗಳಲ್ಲಿ ಕೇಶವಾದಿ ವ್ಯೂಹಗಳ ಇಡುವಿಕೆಯು -ಅವಸ್ಥಾಪನವು ಆವಾಹನವು ಧ್ಯಾನ ವಿಧಿಸುತ್ತದೆ. ಅವುಗಳಲ್ಲಿ ಚಿನ್ನದ ಕಾಂತಿಯುಳ್ಳ ಕೇಶವನು ಚತುಶ್ಚಕ್ರಧರನು.

**ಚತುಶ್ಚಕ್ರಂನಮಸ್ಯಾಮಿ ಕೇಶವಂ ಕನಕ ಪ್ರಭಮ್ ।**

ಎಂಬುದು ಅವನನ್ನು ಧ್ಯಾನಮಾಡುವ ಮಂತ್ರ. ಬ್ರಹ್ಮನ ಯಾಗವೇದಿಕೆಯಲ್ಲಿ ಅವತರಿಸಿ ಹೆಚ್ಚಾದ ಕಾರ್ಯಗಳನ್ನು ಮಾಡುವ ಅಂದರೆ ಆಶ್ಚರ್ಯ ಚೇಷ್ಟಿತನಾದ ಹಸ್ತಿಗಿರಿವರದನು ಕೇಶವನೆಂದು ಹೆಸರನ್ನು ಪಡೆದು 'ಕೀಳು ದೆಸೆಯಿಲುಮ್ ನೆತ್ತಿಯಿಲುಮ್ —ಪೂರ್ವ ದಿಕ್ಕಿನಲ್ಲೂ (ಭಾಗವತರ) ಹಣೆಯಲ್ಲೂ ಪ್ರಕಾಶ

---

1. ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರ.

2. ಕೆಳಗಿನಿಂದ ಮೇಲಕ್ಕೆ ಹಣೆ ಮೊದಲಾದ ಜಾಗಗಳಲ್ಲಿ ಪವಿತ್ರವಾದ ಬಿಳಿಯ ಮಣ್ಣು (ಬಿಳಿಯ ನಾಮ), ಗೋಪಿಚಂದನ ಮುಂತಾದವನ್ನು ಧರಿಸುವುದು. ಇದು ಜಾತಿಯ ಚಿಹ್ನೆ.

ವುಳ್ಳ ನಾಲ್ಕು ಚಕ್ರಾಯುಧಗಳೊಡನೆ ಒರೆಹಚ್ಚಿದ ಚಿನ್ನದಂತೆ ಕೆಂಪಾದ ಬಣ್ಣವುಳ್ಳ ಬೆಟ್ಟದಂತೆ ನಿಂತು ನನ್ನನ್ನು ಕಾಪಾಡುತ್ತಾನೆ ಎಂದು ವೇದಾಂತಾಚಾರ್ಯರು 'ಪನ್ನಿರುನಾಮಮ್' ಎಂಬ ದಿವ್ಯ ಪ್ರಬಂಧದಲ್ಲಿ ಕೊಂಡಾಡಿದ್ದಾರೆ.

**ನಾರಾಯಣಂ ಘನಶ್ಯಾಮಂ ಚತುಶ್ಶಙ್ಖಂನಮಾಮ್ಯಹಮ್ ।**

ವೇದವೆಂಬ ಶಾಸ್ತ್ರವನ್ನು ಪ್ರವರ್ತನಮಾಡಿ ಕೃಪೆಯಿಂದ ರಕ್ಷ್ಯವಸ್ತುವೆಂದು ನನ್ನನ್ನು ಸ್ವೀಕರಿಸು.

ದೇವತೆ:—ನಾರಾಯಣನು; ಬಣ್ಣ: —ನೀಲ; ಆಯುಧ:—ನಾಲ್ಕು ಶಂಖ. ದಿಕ್ಕು :—ಪಶ್ಚಿಮ; ಪುಂಡ್ರಸ್ಥಾನ :—ಹೊಟ್ಟೆ.

**ಮಾಧವಂ ಮಣಿಭಙ್ಗಾಭಂ ಚಿನ್ತಯಾಮಿ ಚತುರ್ಗದಮ್ ।**

ಎದೆಯಲ್ಲೂ ಮೇಲಿನ ದಿಕ್ಕಿನಲ್ಲೂ ಇದ್ದು ಪ್ರೀತಿಯಿಂದ ನನ್ನ ಮನಸ್ಸಿನಲ್ಲಿ ಕಮಲದ ಮೇಲೆ ಪ್ರಕಾಶಿಸುವ ಲಕ್ಷ್ಮಿಯೊಡನೆ ಪ್ರವೇಶಿಸಿ, ಕಾಪಾಡುತ್ತಾನೆ.

ದೇವತೆ :—ಮಾಧವ : ಬಣ್ಣ :—ಇಂದ್ರನೀಲ, ಆಯುಧ :—ನಾಲ್ಕು ಗದೆ, ದಿಕ್ಕು :—ಊರ್ಧ್ವ ದಿಕ್ಕು ; ಪುಣ್ಡ್ರಸ್ಥಾನ :—ಎದೆ.

**ಚನ್ದ್ರಭಾಸಂ ಚತುಶ್ಶಾರ್ಙ್ಗಂ ಗೋವಿನ್ದಮಭಿಸಂಶ್ರಯೇ ।**

ಆ ಮಹಾಕೃಪಾಶಾಲಿಯಾದ ಹಸ್ತಿಗಿರಿಯಲ್ಲಿರುವ ಆ ದೇವನು ಗೋವಿಂದ ನಾಗಿಯೂ ಚಂದ್ರನಂತೆ ಶೀತಳನಾಗಿಯೂ ಇದ್ದು ದಕ್ಷಿಣ ದಿಕ್ಕಿನಲ್ಲೂ ನನ್ನ ಕತ್ತಿನ ಒಳಭಾಗದಲ್ಲೂ ಇದ್ದು ನಾಲ್ಕು ಬಿಲ್ಲುಗಳನ್ನು ಧರಿಸಿ ನನ್ನನ್ನು ಆಳಬೇಕು.

ದೇವತೆ :—ಗೋವಿಂದನು; ಬಣ್ಣ :—ಚಂದ್ರ; ಆಯುಧ :—ನಾಲ್ಕು ಬಿಲ್ಲು; ದಿಕ್ಕು :—ದಕ್ಷಿಣ; ಪುಣ್ಡ್ರಸ್ಥಾನ :—ಒಳಗಿನ ಕತ್ತು.

**ವಿಷ್ಣುಂ ಚತುರ್ಹಲಂ ವನ್ದೇ ಪದ್ಮಕಿಂಜಲ್ಕಸಂನಿಭಮ್ ।**

ವಿಷ್ಣುವಾಗಿದ್ದು ಹೊಟ್ಟೆಯ ಬಲಭಾಗದಲ್ಲೂ ಉತ್ತರ ದಿಕ್ಕಿನಲ್ಲೂ ಇದ್ದು ಹೊಂಬಣ್ಣದ ಮೈಯುಳ್ಳವನಾಗಿ ಕೈಗಳಲ್ಲಿ ನಾಲ್ಕು ನೇಗಿಲುಗಳನ್ನು ಹಿಡಿದು ನನ್ನ ದುಃಖವನ್ನು ನೀಗಿಸಲಿ.

ದೇವತೆ :—ವಿಷ್ಣು; ಬಣ್ಣ :—ಹೊನ್ನಿನ ಬಣ್ಣ ; ಆಯುಧ :— ನಾಲ್ಕು ನೇಗಿಲು; ದಿಕ್ಕು :—ಉತ್ತರ; ಪುಂಡ್ರಸ್ಥಾನ :—ಹೊಟ್ಟೆಯ ಬಲಭಾಗ.

**ಚತುರ್ಮುಸಲಮಬ್ಜಾಭಂ ಸಂಶ್ರಯೇ ಮಧುಸೂದನಮ್ ॥**

ವರ್ಷಾಕಾಲ ಮೇಘದಂತೆ ಕೃಪಾಸಮುದ್ರನಾದ ಹಸ್ತಿಗಿರಿನಾಥನು ಮಧು ಸೂದನನಾಗಿ (ಇದ್ದು) ನನ್ನ ಬಲದ ತೋಳು ಮತ್ತು ಆಗ್ನೇಯ ದಿಕ್ಕು ಈ ಸ್ಥಾನ ಗಳಲ್ಲಿ ಇದ್ದು ತಾವರೆಯ ಬಣ್ಣವುಳ್ಳವನಾಗಿ ನಾಲ್ಕು ಒನಕೆಗಳನ್ನು ಧರಿಸಿದವ ನಾಗಿ ಅನಾದಿಯಾಗಿರುವ ನನ್ನ ಕರ್ಮಗಳನ್ನು ನೀಗಿಸುತ್ತಾನೆ.

ದೇವತೆ :—ಮಧುಸೂದನ; ಬಣ್ಣ :—ತಾವರೆ; ಆಯುಧ:—ನಾಲ್ಕು ಕಲಪೆ (ಒನಕೆ); ದಿಕ್ಕು :—ಆಗ್ನೇಯ; ಪುಣ್ಡ್ರಸ್ಥಾನ :—ಬಲತೋಳು.

**ಅಗ್ನಿವರ್ಣಂ ಚತುಃಖಡ್ಗಂ ಭಾವಯಾಮಿ ತ್ರಿವಿಕ್ರಮಮ್ ।**

ದೇವತೆ :—ತ್ರಿವಿಕ್ರಮ; ಬಣ್ಣ :—ಅಗ್ನಿ; ಆಯುಧ :—ನಾಲ್ಕು ಕತ್ತಿ; ದಿಕ್ಕು—ನೈರ್‌ಋತ್ಯ ; ಪುಣ್ಡ್ರಸ್ಥಾನ :—ಕತ್ತಿನ ಬಲಭಾಗ.

**ವಾಮನಂಬಾಲ ಸೂರ್ಯಾಭಂ ಚತುರ್ವಜ್ರಂ ವಿಭಾವಯೇ ।**

ದೇವತೆ :—ವಾಮನ; ಬಣ್ಣ :—ಎಳೆಯ ಸೂರ್ಯ; ಆಯುಧ :—ನಾಲ್ಕುವಜ್ರ; ದಿಕ್ಕು:—ವಾಯುವ್ಯ; ಪುಣ್ಡ್ರಸ್ಥಾನ:—ಹೊಟ್ಟೆಯ ಎಡದ ಭಾಗ.

**ಶ್ರೀಧರಂ ಪುಣ್ಡರೀಕಾಭಂ ಚತುಷ್ಪಟ್ಟಿಸಮಾಶ್ರಯೇ ।**

ದೇವತೆ :—ಶ್ರೀಧರ; ಬಣ್ಣ :—ಬಿಳಿದಾವರೆ; ಆಯುಧ :—ನಾಲ್ಕು ಪಟ್ಟ ಕತ್ತಿಗಳು; ದಿಕ್ಕು :—ಈಶಾನ್ಯ; ಪುಣ್ಡ್ರಸ್ಥಾನ :—ಎಡದತೋಳು.

**ಚತುರ್ಮುದ್ಗರ ಮಭ್ಯೇಮಿಹೃಷೀಕೇಶಂ ತಟಿತ್ಪ್ರಭಮ್ ।**

ದೇವತೆ :—ಹೃಷೀಕೇಶ; ಬಣ್ಣ :—ಮಿಂಚು; ಆಯುಧ :—ನಾಲ್ಕು ಚಮಟಿಗೆ; ಜಾಗ:—ಕೆಳಗಿನಭಾಗ; ಪುಂಡ್ರಧಾರಣ :—ಕತ್ತಿನ ಎಡದಭಾಗ.

**ಪಞ್ಚಾಯುಧಂ ಪದ್ಮನಾಭಂ ಪ್ರಣಮಾಮ್ಯರ್ಕರೋಚಿಷಮ್ ।**

ದೇವತೆ :—ಪದ್ಮನಾಭ; ಬಣ್ಣ :—ಸೂರ್ಯ; ಆಯುಧ :—ಚಕ್ರ, ಶಂಖ ಕತ್ತಿ, ಬಿಲ್ಲು, ದಣ್ಡ ಎಂಬ ಐದು ಆಯುಧಗಳು. ಸ್ಥಾನ :—ಮನಸ್ಸು; ಪುಣ್ಡ್ರ ಸ್ಥಾನ :—ಹಿಂಭಾಗ.

**ದಾಮೋದರಂ ಚತುಷ್ಪಾಶಮಿನ್ದ್ರಕೋಪನಿಭಂ ಭಜೇ ।**

ದೇವತೆ : —ದಾಮೋದರ ; ಬಣ್ಣ : —ಬಾಲಸೂರ್ಯ ; ಆಯುಧ:— ನಾಲ್ಕುಪಾಶ ; ಜಾಗ :—ಶರೀರದ ಒಳಭಾಗ ಹೊರಭಾಗ ; ಪುಂಡ್ರಧಾರಣ :— ಕತ್ತಿನ ಹಿಂಭಾಗ.

೩. ವಿಭವಗಳಾವುವೆಂದರೆ—ಪದ್ಮನಾಭನೇ ಮೊದಲಾದ ಮೂವತ್ತು (ಶಿಲ್ವಾನ-ಚಿಲ್ಲರೈ) ರೂಪಗಳು–ಇಲ್ಲಿ 'ಮೊದಲಾದ' ಎಂಬ ಪದದಿಂದ ಧ್ರುವ ಮೊದಲಾದ ಹೆಸರುಳ್ಳ ರೂಪಗಳ ಸಙ್ಗ್ರಹ, ಶ್ರೀಸಾತ್ವತಾದಿಗಳಲ್ಲಿ,

ಪದ್ಮನಾಭೋಧ್ರುವೋಽನನ್ತಶ್ಶಕ್ತ್ಯಾತ್ಮಾ ಮಧುಸೂದನಃ ।
ವಿದ್ಯಾಧಿದೇವಃ ಕಪಿಲೋ ವಿಶ್ವರೂಪೋವಿಹಙ್ಗಮಃ ॥
ಕ್ರೋಡಾತ್ಮಾ ಬಡಬಾವಕ್ತ್ರೋಧರ್ಮೋವಾಗೀಶ್ವರಸ್ತಥಾ ।
ದೇವ ಏಕಾರ್ಣವಶಯಃ ಕೂರ್ಮಃ ಪಾತಾಳಧಾರಕಃ ॥
ವರಾಹೋ ನಾರಸಿಂಹಾಶ್ಚಾಪ್ಯಮೃತಾಹರಣಶ್ಚವೈ ।
ಶ್ರೀಪತಿರ್ದಿವ್ಯದೇಹೋಥಕಾನ್ತಾತ್ಮಾಽಮೃತಧಾರಕಃ ।
ರಾಹುಜಿತ್ಕಾಲನೇಮಿಘ್ನಃ ಪಾರಿಜಾತಹರೋಮಹಾನ್ ।
ಲೋಕನಾಥಸ್ತು ಶಾನ್ತಾತ್ಮಾದತ್ತಾತ್ರೇಯೋ ಮಹಾಪ್ರಭುಃ ॥
ನ್ಯಗ್ರೋಧ ಶಾಯೀಭಗವಾನೇಕ ಶೃಙ್ಗತನುಸ್ತತಃ ।
ದೇವೋವಾಮನದೇಹಸ್ತು ಸರ್ವವ್ಯಾಪೀ ತ್ರಿವಿಕ್ರಮಃ ॥
ನರೋನಾರಾಯಣಶ್ಚೈವ ಹರಿಃ ಕೃಷ್ಣಸ್ತಥೈವಚ ।
ಜಲತ್ಪರಶು ಧೃಗ್ರಾಮೋ ರಾಮಶ್ಚಾನ್ಯೋಧನುರ್ಧರಃ ॥
ವೇದವಿದ್ಭಗವಾನ್ಕಲ್ಕೀ ಪಾತಾಳಶಯನಃ ಪ್ರಭುಃ ॥

ಎಂದು ಹೇಳಿವೆ. ಇವುಗಳಲ್ಲಿ 'ಏಕಶೃಙ್ಗತನುಃ' ಎಂಬ ಶಬ್ದದಿಂದ ಮತ್ಸ್ಯಾವತಾರವೆಂದು ತಿಳಿಯಬೇಕು. ಈ ಅರ್ಥವನ್ನು ಸಂಹಿತಾಂತರಗಳಲ್ಲಿ ಹೇಳಿರುವುದರಿಂದ ಇಲ್ಲಿ ಹೇಳದಿದ್ದರೂ ಅದನ್ನು ನಾವು ತಿಳಿಯತಕ್ಕದ್ದು.

ವಿಷ್ವಕ್ಸೇನ ಸಂಹಿತೆಯಲ್ಲಿ 'ಷಟ್ತ್ರಿಂಶದ್ಭೇದ ಭಿನ್ನಾಸ್ತು ಪದ್ಮನಾಭಾದಿಕಾಃ ಸ್ಮೃತಾಃ=ಪದ್ಮನಾಭಾದಿಗಳು ಮೂವತ್ತಾರು ಭೇದವುಳ್ಳವರು ಎಂದೂ, ಅಹಿರ್ಬುಧ್ನ್ಯ ಸಂಹಿತೆಯಲ್ಲಿ 'ವಿಭವಾಃ ಪದ್ಮನಾಭಾದ್ಯಾಃ ತ್ರಿಂಶಚ್ಚ ನವಚೈವಹಿ— ಮೂವತ್ತೊಂಭತ್ತು' ಎಂದು ಸಂಖ್ಯಾಭೇದಗಳು ಹೇಳಿರುವುದರಿಂದ ಆ ಎಲ್ಲವನ್ನೂ ಒಟ್ಟುಗೂಡಿಸುವುದಕ್ಕಾಗಿ ಮೂವತ್ತು 'ಶಿಲ್ವಾನ' ಎಂದು ಹೇಳಿರುವುದು ಮೂವತ್ತಕ್ಕೆ ಮೇಲೆ ನಲವತ್ತರವರೆಗೆ ಯಾವದಾದರೂ ಸಂಖ್ಯೆ ಉಳ್ಳದ್ದು ಎಂದು ಅದರ ಅರ್ಥ.

ಈ ರೀತಿ ವಿಭವಗಳು ಮೂವತ್ತು ಆರಾದ ಎಂದರೆ [1]ದಶಾವತಾರ ಗಳನ್ನು ವಿಶೇಷವಾಗಿ ವಿಭವಗಳು ಎಂದು ಹೇಳುವುದಕ್ಕೆ ಕಾರಣ—

[2]ಪರಿತ್ರಾಣಾಯ ಸಾಧೂನಾಂ ವಿನಾಶಾಯಚದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

'ದುಷ್ಟ ಶಿಕ್ಷಣ ಶಿಷ್ಟರಕ್ಷಣಕ್ಕಾಗಿ ಲೋಕದಲ್ಲಿ ನಷ್ಟವಾದ ಧರ್ಮವನ್ನು ಬೇರೂರುವಂತೆ ಮಾಡಲು ಪ್ರತಿಯುಗದಲ್ಲೂ ನಾನು ಅವತರಿಸುತ್ತೇನೆ' ಎಂದು ಶ್ರೀಕೃಷ್ಣನು ಹೇಳಿದ ರೀತಿಯಲ್ಲಿ ಅವತಾರ ಪ್ರಯೋಜನವುಂಟೆಂದು ಎಲ್ಲಾ ಲೋಕಕ್ಕೂ ಪ್ರಸಿದ್ಧಿಪಡಿಸುವುದೇ ಪ್ರಯೋಜನ. ವೇದಾಹರಣ ಕ್ಷೀರೋದ ಮಥನ ಇವೇ ಮೊದಲಾದವು. ಪದ್ಮನಾಭಾದಿ ವಿಭವಗಳಿಗೂ ಕೂಡ ಭಗವಂತನ ಅವತಾರವಾಗಿರುವಿಕೆಯೇ ಗುಣವ್ಯಾಪಾರಗಳಿಂದ ಪ್ರಕಾಶಪಡಿಸಲ್ಪಡುತ್ತದೆ ಎಂದು 'ಚಿನ್ನಂರೂಪಙ್ಗಳ್' ಎಂದು ಹೇಳಲ್ಪಟ್ಟಿತು. ಮತ್ಸ್ಯಾದಿ ಶರೀರವನ್ನು ಹೊಂದಿದರೂ ತನ್ನ ಸ್ವಭಾವವನ್ನು ಬಿಡದೇ ಇರುವಿಕೆ ಉಂಟೆಂದು ಸತ್ಪುರುಷರಿಗೆ ಅವತಾರದ ರಹಸ್ಯದ ಜ್ಞಾನವನ್ನು ಉಂಟುಮಾಡುವುದಕ್ಕಾಗಿ–ಸಿದ್ಧಿಗಾಗಿ ಎಂದು ತಿಳಿಯಬೇಕು.

ಈ ವಿಭವಗಳಲ್ಲಿ ಈಶ್ವರನು ಆ ಆ ಕಾರ್ಯವಿಶೇಷಗಳಿಗೆ ತಕ್ಕಂತೆ ಬೇಕಾದ ವೇಳೆಯಲ್ಲಿ ತಾನು ಅಪೇಕ್ಷಿಸಿದ ಗುಣಗಳನ್ನು ಪ್ರಕಾಶಪಡಿಸದೆಯೂ, ಪ್ರಕಾಶ ಪಡಿಸಿಯೂ ಪ್ರವರ್ತಿಸುತ್ತಾನೆ.

ರಾಮಾವತಾರದಲ್ಲಿ ಸಾಮಾನ್ಯವಾಗಿ ಜ್ಞಾನಬಲಗಳಿಗೆ ಮರೆಮಾಚಿಕೊಳ್ಳುವಿಕೆ ಇದೆ. ವಿಶ್ವಾಮಿತ್ರ ಋಷಿಯಿಂದ ಬಲಾತಿಬಲಗಳ ಮತ್ತು ಅಸ್ತ್ರಗಳ ಪ್ರಯೋಗ ಮತ್ತು ಉಪಸಂಹಾರಗಳ ಮಂತ್ರಗಳನ್ನು ಉಪದೇಶಪೂರ್ವಕವಾಗಿ ಪಡೆಯು ವುದನ್ನು ಕಾಣುತ್ತೇವೆ. ಜಟಾಯುವಿಗೆ ಪರಗತಿಯನ್ನು ಕೊಡುವಿಕೆ ಮತ್ತು ದಕ್ಷಿಣ ಸಮುದ್ರವನ್ನು ದಾಟಬೇಕಾದ ಸಂದರ್ಭದಲ್ಲಿ ತಾನು ಪ್ರಾಯೋಪವೇಶ ಮಾಡಿದರೂ ಸಮುದ್ರರಾಜನು ಬಾರದೆ ಇರುವಾಗ ಕೋಪಗೊಂಡನು.

೧. ಮತ್ಸ್ಯಾವತಾರ :—ವೇದವನ್ನು ಅಪಹರಿಸಿದ ದೈತ್ಯರನ್ನು ನಿರಸನ ಮಾಡಿ ಬ್ರಹ್ಮನಿಗೆ ವೇದ ಪ್ರಮಾಣವನ್ನು ಕೊಡುವುದಕ್ಕಾಗಿ ಅವತರಿಸಿದ್ದು.

1. ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಽಥ ವಾಮನಃ ।
ರಾಮೋರಾಮಶ್ಚ ರಾಮಶ್ಚ ಕೃಷ್ಣಃ ಕಲ್ಕೀ ತಿ ತೇ ದಶ ॥
2. ಭಗವದ್ಗೀತೆ. ೪–೮.

೨. ಕೂರ್ಮಾವತಾರ :—ದೇವತೆಗಳಿಗೆ ಮುಪ್ಪು, ಸಾವು ಇಲ್ಲದಂತೆ ಮಾಡಲು ಅಮೃತವನ್ನು ಉತ್ಪತ್ತಿಮಾಡುವುದಕ್ಕಾಗಿ ಮನ್ದರ ಪರ್ವತವನ್ನು ಕ್ಷೀರಸಾಗರದಲ್ಲಿ ಹಾಕಿದಾಗ ಅದು ಮುಳುಗಲು ಆರಂಭಿಸಿತು. ಅದಕ್ಕೆ ಆಧಾರ ವಾಗಿರುವುದಕ್ಕಾಗಿ ಅವತಾರಮಾಡಿದ್ದು.

೩. ವರಾಹಾವತಾರ :—ಸಂಸಾರವೆಂಬ ಸಾಗರದಲ್ಲಿ ಮುಳುಗಿ ತೊಳಗುವ ಜನರನ್ನು ಉದ್ಧರಿಸಲು, ಮೇಲಕ್ಕೆ ಎತ್ತಲು ಬಯಸಿದವನಾಗಿ ತನ್ನ ಮಹಿಷಿ–ಭೂ ದೇವಿಯನ್ನು ಉದ್ಧಾರಮಾಡಲು ಅವತರಿಸಿದ್ದು.

೪. ನರಸಿಂಹಾವತಾರ :—ಆಶ್ರಿತನನ್ನು ಕಾಪಾಡಲು ಮಹಾಸುರನ ಗೃಹದ ಕಂಬದಲ್ಲಿ ಉಂಟಾದ ಅವತಾರ.

೫. ವಾಮನಾವತಾರ :—ತ್ರಿವಿಕ್ರಮನಾಗಿ ತನ್ನ ಕಮಲದಂತಿರುವ ಪಾದ ದಿಂದ ಹುಟ್ಟಿದ ನೀರಿನಿಂದ ಜಗತ್ತಿನ ಪಾಪವನ್ನು ನೀಗಿಸಿ ಜಗತ್ತನ್ನು ರಕ್ಷಿಸಲು ಅವತಾರ ಮಾಡಿದ್ದು.

೬. ಪರಶುರಾಮಾವತಾರ :—ದುಷ್ಟ ಕ್ಷತ್ರಿಯರನ್ನು ನಿರಸನಮಾಡಲೋ ಸುಗ ಅವತರಿಸಿದ್ದು.

೭. ರಾಮಾವತಾರ :—ಶರಣುಹೊಂದಿದವರನ್ನು ಕಾಪಾಡುವುದು, ಧರ್ಮ ವನ್ನು ಸ್ಥಾಪಿಸುವುದು ಇದಕ್ಕಾಗಿ ಅವತರಿಸಿದ್ದು.

೮. ಬಲಭದ್ರಾವತಾರ :—ಪ್ರಲಂಬ ಮೊದಲಾದವರನ್ನು ನಿರಸನಮಾಡಲು ಅವತರಿಸಿದ್ದು

೯. ಕೃಷ್ಣಾವತಾರ :—ಮೋಕ್ಷಕ್ಕೆ ಉಪಾಯವನ್ನು ಹೇಳಿಕೊಡುವುದ ಕ್ಕಾಗಿ ಅವತರಿಸಿದ್ದು.

೧೦. ಕಲ್ಕ್ಯವತಾರ :—ಅಧರ್ಮಿಗಳನ್ನು ತೊಡೆದುಹಾಕಿ ಪರಿಪೂರ್ಣ ವಾದ ಧರ್ಮವನ್ನು ಪ್ರವರ್ತಿಸುವಂತೆ ಮಾಡಲು ಆಗಿದ್ದು.

ಈ ರೀತಿ ಹತ್ತು ಅವತಾರಗಳಲ್ಲಿ ಒಂದೊಂದು ಅವತಾರವೂ ಅನನ್ತಪ್ರಕಾರ ವಾಗಿದೆ. ಪದ್ಮನಾಭಾದಿಗಳು ಮೂವತ್ತಾರು ಅವತಾರಗಳುಂಟು. ಮತ್ತೆ ದಧಿಭಕ್ತ ಹಯಗ್ರೀವ ನರನಾರಾಯಣಾದಿಗಳೂ ಕೂಡ. ಈರೀತಿ ಇವು ಮುಖ್ಯ ಗೌಣ ಪೂರ್ಣಾಂಶ ಆವೇಶ ಎಂಬ ಹೆಸರುಳ್ಳ ಒಳಭೇದದಿಂದ ಬಹುಪ್ರಕಾರವಾಗಿವೆ. ಅವುಗಳಲ್ಲಿ ಉಪಾಸ್ಯಗಳು ಯಾವುವು; ಉಪಾಸನೆಮಾಡಲು ಕೂಡದವು ಯಾವುವು

ಎಂಬ ಈ ವಿಭಾಗವನ್ನು ನೋಡತಕ್ಕದ್ದಾಗಿದೆ. ಅವತಾರಗಳಿಗೆ ಇಚ್ಛೆಯೇ ಕಾರಣ; ಕರ್ಮವಲ್ಲ. ಪ್ರಯೋಜನವಂತೂ ದುಃಷ್ಟರನ್ನು ನಿರಸನಮಾಡಿ ಸತ್ಪುರುಷರನ್ನು ಕಾಪಾಡುವುದೇ ಆಗಿದೆ.

ಈವಾಗ ಈ ವಿಭವಾವತಾರಗಳನ್ನು ಹೇಳಿ ಪವಿತ್ರರಾಗೋಣ. [1]ವಿಭವಗಳಲ್ಲಿ ಮೂವತ್ತಾರು ಅವತಾರಗಳೇ ಪ್ರಧಾನಗಳೆಂದು ವಿಷ್ವಕ್ಸೇನ ಸಂಹಿತೆಯಲ್ಲಿ ಹೇಳಿದೆ. ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಭಗವಂತನ ಮೂವತ್ತೊಂಬತ್ತು ಅವತಾರಗಳು ಪ್ರಧಾನಗಳಾಗಿರುವವು ಎಂದು ಹೇಳಿದೆ ; ಅವು ಯಾವವು ? ಎಂದರೆ—

೧. ಪದ್ಮನಾಭ, ೨. ಧ್ರುವ, ೩. ಅನಂತ, ೪. ಶಕ್ತ್ಯಾತ್ಮಾ, ೫. ಮಧುಸೂದನ, ೬. ವಿದ್ಯಾಧಿದೇವ, ೭. ಕಪಿಲ, ೮. ವಿಶ್ವರೂಪ, ೯. ವಿಹಂಗಮ, ೧೦. ಕ್ರೋಡಾತ್ಮಾ, ೧೧. ಬಡಬಾವಕ್ತ್ರ, ೧೨. ಧರ್ಮ, ೧೩. ವಾಗೀಶ್ವರ, ೧೪. ಏಕಾಂಭೋನಿಧಿಶಾಯಿ, ೧೫. ಕೂರ್ಮ, ೧೬. ವರಾಹ, ೧೭. ನಾರಸಿಂಹ, ೧೮. ಪೀಯೂಷಾಹರಣ, ೧೯. ಶ್ರೀಪತಿ ೨೦. ಅಮೃತಾಧಾರಕ, ೨೧. ರಾಹುಜಿತ್, ೨೨. ಕಾಲನೇಮಿಘ್ನ, ೨೩. ಪಾರಿಜಾತಾಹರಣ, ೨೪. ಲೋಕನಾಥ, ೨೫. ಶಾಂತಾತ್ಮಾ, ೨೬. ದತ್ತಾತ್ರೇಯ, ೨೭. ನ್ಯಗ್ರೋಧಶಾಯಿ, ೨೮. ಏಕಶೃಂಗತನು (ಮತ್ಸ್ಯ), ೨೯. ವಾಮನ, ೩೦. ತ್ರಿವಿಕ್ರಮ, ೩೧. ನರ, ೩೨. ನಾರಾಯಣ, ೩೩. ಹರಿ, ೩೪. ಪರಶುರಾಮ, ೩೫. ಶ್ರೀರಾಮ, ೩೬. ಕೃಷ್ಣ, ೩೭. ವೇದವಿತ್, ೩೮. ಕಲ್ಕಿ, ೩೯. ಪಾತಾಳಶಾಯಿ.

ಈ ಅವತಾರಗಳೊಳಗೆ ಏಳು, ಇಪ್ಪತ್ತಾರು, ಮೂವತ್ತನಾಲ್ಕನೆಯ ಅವತಾರಗಳಾದ ಕಪಿಲ ದತ್ತಾತ್ರೇಯ ಪರಶುರಾಮಾವತಾರಗಳು ಆವೇಶಾವತಾರಗಳಾದುದರಿಂದ ಅವುಗಳನ್ನು ಬಿಟ್ಟು ಉಳಿದವುಗಳನ್ನು ಮೂವತ್ತಾರೆಂದು ಹೇಳುವುದರಲ್ಲಿ ವಿರೋಧವೇನೂ ಇಲ್ಲ.

"ಚಾಪಮಾನಯ ಸೌಮಿತ್ರೇ=ಎಲೌ ಲಕ್ಷ್ಮಣನೇ, ಬಿಲ್ಲನ್ನು ತಾ ; ಬಾಣ ಪ್ರಯೋಗ ಮಾಡಿ ಈ ಸಮುದ್ರವನ್ನು ಬತ್ತಿಸುತ್ತೇನೆ. ಕಪಿಗಳೆಲ್ಲವೂ ನಡೆದೇ ಆಚೆಯ ದಡವನ್ನು ಸೇರಲಿ" ಎಂಬಲ್ಲಿಯೂ "ಜಗತ್ಸಶೈಲಂ ಪರಿವರ್ತಯಾಮ್ಯಹಂ =ಪರ್ವತಗಳೊಡನೆ ಕೂಡಿದ ಪ್ರಪಂಚವನ್ನೇ (ಪರಿವರ್ತನೆ) ಅದಲು ಬದಲು ಮಾಡುತ್ತೇನೆ" ಎಂಬಲ್ಲಿಯೂ ಇವನ್ನು ಕಾಣಬಹುದು.

ಕೃಷ್ಣಾವತಾರದಲ್ಲಿ ಜರಾಸನ್ಧ ಯುದ್ಧ, ಕಾಲನೇಮಿಯ ಸಂದರ್ಭ ಇವೇ ಮೊದಲಾದವುಗಳಲ್ಲಿ ಓಡಿಹೋಗುವಿಕೆ ಇವುಗಳಲ್ಲಿಯೂ ಮತ್ತು ಸಾಂದೀಪನಿಯ

1. ತತ್ತ್ವಶುದ್ಧಿ, ಪುಟ-೫೦೦.

ಹತ್ತಿರ ಗುರುಕುಲವಾಸ ಮುಂತಾದವುಗಳಲ್ಲಿಯೂ ಜ್ಞಾನಬಲಗಳ ಮರೆಮಾಚುವಿಕೆ ಯನ್ನು ಕಾಣಬಹುದು. ಇವೆಲ್ಲಾ ವಿಚಿತ್ರವಾದ ಅವನ ಕರ್ಮಗಳು ಎಂದು ತಿಳಿಯು ಬೇಕು.

ವ್ಯೂಹಗಳಲ್ಲಿ ಒಳಗಿನ ಭೇದಗಳಿರುವಂತೆ ವಿಭವಗಳಲ್ಲೂ ಅವಾನ್ತರ ಭೇದ ಗಳು ಉಂಟೋ ಎಂದರೆ "**ಕೃಷ್ಣರೂಪಾಣ್ಯಸಂಖ್ಯಾನಿ**=ಕೃಷ್ಣ ರೂಪಗಳು ಮದನ ಗೋಪಾಲ, ಚತುರ್ಭುಜಗೋಪಾಲ ಇವೇ ಮೊದಲಾದ ರೂಪದಿಂದಲೂ ಅನನ್ತ ಗಳು ; ಹಾಗೆಯೇ ಲಕ್ಷ್ಮೀನೃಸಿಂಹ, ಯೋಗಾನರಸಿಂಹ, **ಚತುರ್ಭುಜ**=ನಾಲ್ಕು ತೋಳುಗಳುಳ್ಳ ನರಸಿಂಹ, **ಅಷ್ಟಭುಜ**=ಎಂಟು ತೋಳುಗಳುಳ್ಳ ನರಸಿಂಹ ಇವೇ ಮೊದಲಾದ ರೂಪಗಳಿಂದಲೂ ಅನನ್ತಗಳಾಗಿವೆ.

ಆವೇಶಾವತಾರ ಭೇದಗಳನ್ನೂ ನಾವು ನೋಡಬಹುದು. ಕೆಲವು ಜೀವ ಗಳನ್ನು ವಿಗ್ರಹ ವಿಶೇಷದಿಂದಲೂ ಶಕ್ತಿ ವಿಶೇಷದಿಂದಲೂ ಅಧಿಷ್ಠಿಸಿ ಅತಿಶಯವಾದ ಕಾರ್ಯಗಳನ್ನು ನಡೆಸುವುದೂ ವಿಭವ ಭೇದ. ವ್ಯಾಸ ಜಾಮದಗ್ನ್ಯಾದಿಗಳನ್ನು ವಿಗ್ರಹ ವಿಶೇಷದಿಂದ ಅಧಿಷ್ಠಿಸಿ ಅಂದರೆ ಆ ಆ ಜೀವ ಶರೀರದಲ್ಲಿ ಅನುಪ್ರವೇಶ ಮಾಡಲ್ಪಟ್ಟ ಮುಖ್ಯವಾದ ವಿಗ್ರಹ ವಿಶೇಷದಿಂದ ಕೂಡಿದವನಾಗಿ ಆ ಆ ಜೀವರು ಗಳನ್ನು ನಿಯಮಿಸುವಿಕೆ—ಮುಂತಾದವು.

ವಿಗ್ರಹ ವಿಶೇಷದಿಂದ ಅಧಿಷ್ಠಿಸುವುದೆಂದರೆ, "**ಸೃಷ್ಟಿಂತತಃ ಕರಿಷ್ಯಾಮಿ ತ್ವಾಮಾವಿಶ್ಯ ಪ್ರಜಾಪತೇ**=ಓ ಬ್ರಹ್ಮನೇ! ನಿನ್ನನ್ನು ಹೊಕ್ಕು ಅನಂತರ ಸೃಷ್ಟಿಯನ್ನು ಮಾಡುತ್ತೇನೆ." ಇವೇ ಮೊದಲಾದ ರೀತಿಯಲ್ಲಿ ಆ ಆ ಜೀವ ಶರೀರದಲ್ಲಿ ಅನುಪ್ರವಿಷ್ಟವಾದ ಮುಖ್ಯ ವಿಭವ ವಿಗ್ರಹ ವಿಶೇಷದೊಡನೆ ಕೂಡಿದವನಾಗಿ ಆ ಆ ಜೀವರುಗಳನ್ನು ನಿಯಮಿಸುವಿಕೆ.

ಶಕ್ತಿವಿಶೇಷದಿಂದ ಅಧಿಷ್ಠಿಸುವುದೆಂದರೆ, ವಿಗ್ರಹವಿಲ್ಲದೆ ಶಕ್ತಿಮಾತ್ರದಿಂದ ಆ ಆ ಜೀವರುಗಳನ್ನು ಉಪಬ್ರಂಹಿಸಿ ನಿಯಮಿಸುವುದು. ಅಂದರೆ, ಅತಿಶಯಿತವಾದ ಕಾರ್ಯಗಳನ್ನು ಮಾಡುವುದು, ವ್ಯಷ್ಟಿಸೃಷ್ಟಿ ಸಂಹಾರಾದಿಗಳನ್ನು ಮಾಡುವುದು. ವ್ಯಷ್ಟಿಸೃಷ್ಟಿ ಮಾಡುವುದು ಹಿರಣ್ಯಗರ್ಭ ಕರ್ತೃಕವಾದದ್ದು, ಸಂಹಾರ ಮಾಡುವುದು ರುದ್ರಕರ್ತೃಕವಾದದ್ದು, ವ್ಯಾಸ ಜಾಮದಗ್ನ್ಯ ಮುಂತಾದವರು ಮಾಡತಕ್ಕದ್ದು ಶಾರೀರಕ ಶಾಸ್ತ್ರ ಮತ್ತು ಭಾರತ ಇವುಗಳ ನಿರ್ಮಾಣ, ಕ್ಷತ್ರಿಯಕುಲವನ್ನು ನಾಶಮಾಡುವುದು ಇವೇ ಮೊದಲಾದವು.

ಅರ್ಚಾವತಾರ ಸ್ವರೂಪವನ್ನು ಹೇಳುತ್ತಾರೆ ಆಚಾರ್ಯರು:—ಪರ ವ್ಯೂಹವಿಭವ ರೂಪಗಳು ಆಶ್ರಿತರಿಗಾಗಿ '**ತಾಮರ್ಚಯೇತ್**=ಅದನ್ನು ಅರ್ಚನೆ ಮಾಡಬೇಕು'

ಇವೇ ಮೊದಲಾಗಿ ಶಾಸ್ತ್ರಗಳಲ್ಲಿ ಹೇಳುವಂತೆ ತನ್ನ ಭಕ್ತರ, ಅರ್ಚನ, ನಮಸ್ಕಾರ, ಯಜನ, ಚಿಂತನ ಇವೇ ಮೊದಲಾದ ಪ್ರಯೋಜನ ಸಿದ್ಧಿಗಾಗಿ, ಅವರು ಪರವಾಸು ದೇವನಂತೆಯೋ, ಸಙ್ಕರ್ಷಣಾದಿ ವ್ಯೂಹದಂತೆಯೋ, ರಾಮಕೃಷ್ಣ ನೃಸಿಂಹ ಮುಂತಾದ ವಿಭವದ ಹಾಗೋ ತಮ್ಮ ಇಷ್ಟದಂತೆ ಚಿನ್ನ, ಬೆಳ್ಳಿ ಮುಂತಾದವುಗಳಿಂದ ಒಂದು ವಿಗ್ರಹವನ್ನು ಮಾಡಿ ಅದರಲ್ಲಿ ಪರರೂಪದಿಂದಲೋ, ವ್ಯೂಹರೂಪ ದಿಂದಲೋ, ವಿಭವರೂಪದಿಂದಲೋ ಯಾವುದಾದರೂ ಒಂದು ರೂಪವನ್ನು ಹೊಂದಿ ಇಲ್ಲಿ ಸಾನ್ನಿಧ್ಯವನ್ನು ಮಾಡಬೇಕೆಂದು ಶಾಸ್ತ್ರಮಂತ್ರಗಳಿಂದ ಆವಾಹನಾದಿ ಗಳನ್ನು ಮಾಡಿ ಅಪೇಕ್ಷಿಸಿದರೆ, ಅದರಂತೆ,

**ಬಿಂಬಾಕೃತ್ಯಾತ್ಮನಾಬಿಂಬೇ ಸಮಾಗತ್ಯಾವತಿಷ್ಠತೇ ।**

ಭಕ್ತನು ಬರಮಾಡಿದ ವಿಗ್ರಹದ ಆಕೃತಿಗೆ ಸಮಾನವಾದ ಆಕೃತಿಯುಳ್ಳ ಅಪ್ರಾಕೃತವಾದ ದಿವ್ಯಮಂಗಳ ವಿಗ್ರಹದೊಡನೆ ಬಿಂಬೇ–ಪ್ರತಿಮೆಯಲ್ಲಿ, ಸಮಾಗತ್ಯ —ಬಂದು, ನೀರಿನಲ್ಲಿ ಹಾಲಿನಂತೆ ವಿಭಾಗ ಮಾಡಲು ಆಗದ ಸಂಶ್ಲೇಷ ವಿಶೇಷವನ್ನು ಹೊಂದಿ, ಅವತಿಷ್ಠತೇ—ಪರವ್ಯೂಹಾದಿಗಳಂತಲ್ಲದೆ ಮಾಂಸಚಕ್ಷುಸ್ಸುಗಳಿಗೂ ಅನು ಭಾವಿಸಲು ತಕ್ಕವನಾಗಿ ಇರುತ್ತಾನೆ. ಶ್ರೀರಂಗಾದಿ ಕ್ಷೇತ್ರಗಳಲ್ಲಿ ಸ್ಥಿರ ಪ್ರತಿಷ್ಠಿತ ವಾಗಿ ಇರುವ ಸ್ವಭಾವದಂತೆ ಆ ವಿಗ್ರಹದಲ್ಲಿ ಇರುವುದು ಅರ್ಚಾವತಾರ. ಭಗವಂತನು ಅಪ್ರಾಕೃತ ಶರೀರದಿಂದ ಕೂಡಿದವನಾಗಿಯೇ ಬಂದು ತಂಗುತ್ತಾನೆ. ಪೂಜೆ ಮಾಡುವವನು ಹೇಳಿದಂತೆ ಕೇಳುವವನಾಗಿ ಅಂದರೆ ಅರ್ಚಕ ಪರಾಧೀನನಾಗಿ ಸ್ನಾನ, ಭೋಜನ, ಆಸನ, ಶಯನ ಇವುಗಳಲ್ಲಿ ಇರುವವನಾಗಿ ಎಲ್ಲವನ್ನೂ ಸಹಿಸಿ ಕೊಳ್ಳುತ್ತಾನೆ. ಅರ್ಚಕನು ಉತ್ಸವಾದಿಗಳಲ್ಲಿ ದೇವರ ಪ್ರತಿಮೆಯನ್ನು ಪೀಠದಲ್ಲಿ ಇರಿಸಿ ಹಗ್ಗದಿಂದ ಕಟ್ಟಿ ಆನೆ, ಕುದುರೆ, ತೇರು ಮುಂತಾದವುಗಳಲ್ಲಿ ಕೂರಿಸುವುದನ್ನು ನೋಡುತ್ತೇವೆ ಅಲ್ಲವೇ ? ಹೀಗೆ ಪರಿಪೂರ್ಣನಾಗಿ ಭಕ್ತರ ಉದ್ಧಾರಕ್ಕಾಗಿ ಗೃಹ, ಗ್ರಾಮ, ನಗರ, ಪರಿಶುದ್ಧವಾದ ದೇಶ, ಬೆಟ್ಟ ಮುಂತಾದವುಗಳಲ್ಲಿ ಇರುವ ಮೂರ್ತಿ ವಿಶೇಷವು ಅರ್ಚಾವತಾರ.

ಅದೂ ಕೂಡ ಸ್ವಯಂವ್ಯಕ್ತ ದೈವ ಸೈದ್ಧ ಮಾನುಷ ಈ ಭೇದಗಳಿಂದ ನಾಲ್ಕು ವಿಧವಾಗಿದೆ.

ಸ್ವಯಂವ್ಯಕ್ತ :—ತಾನಾಗಿಯೇ ಬಂದು ಈ ಲೋಕದಲ್ಲಿ ತಂಗಿ ಭಕ್ತರನ್ನು ಅನುಗ್ರಹಿಸುವುದು. ಶ್ರೀರಂಗ, ತಿರುಪತಿ ಮುಂತಾದ ಕ್ಷೇತ್ರಗಳಲ್ಲಿ ಇರುವ ಅರ್ಚಾ ಮೂರ್ತಿಗಳು ಈ ರೀತಿಯಾದವು.

ದೈವ:—ದೇವತೆಗಳನ್ನು ಅನುಗ್ರಹಿಸುವುದಕ್ಕಾಗಿ ಅವತರಿಸುವುದು. ಬ್ರಹ್ಮನು ಭೂಲೋಕಕ್ಕೆ ಬಂದು ಕಂಚೀ ಪಟ್ಟಣದಲ್ಲಿ ವೇಗವತೀ ನದೀ ತೀರದಲ್ಲಿ ಯಾಗ

ಮಾಡಿದಂತೆಯೂ ಆ ಸಂದರ್ಭದಲ್ಲಿ ಹೋಮ ಕುಂಡದಲ್ಲಿ—ಯಾಗವೇದಿಕೆಯಲ್ಲಿ—ಹಸ್ತಿಗಿರಿ ವರದನ ಉದ್ಭವವೆಂದೂ ಹಸ್ತಿಗಿರಿ ಮಾಹಾತ್ಮ್ಯದಲ್ಲಿ ಹೇಳಿದೆ—ಸಿದ್ಧರಿಂದ ಪ್ರತಿಷ್ಠಿತವಾದದ್ದು ಸೈದ್ಧ, ಮನುಷ್ಯರಿಂದ ಪ್ರತಿಷ್ಠಿತವಾದದ್ದು ಮಾನುಷ.

ಆಚಾರ್ಯರು ಅನ್ತರ್ಯಾಮಿ ಸ್ವರೂಪವನ್ನು ಹೇಳುತ್ತಾರೆ—**ಸರ್ವರು ಡೈಯವುಮ್ ಹೃದಯಙ್ಗಳಿಲೆ ಸೂಕ್ಷ್ಮಮಾಯ್ ಇರುಪ್ಪದೊರು ರೂಪವಿಶೇಷತ್ತೈ ಕ್ಕೊಣ್ಡು ನೀಕ್ಕಿರನಿಲೈ ಅನ್ತರ್ಯಾಮ್ಯವತಾರಮ್.**

ಅನ್ತರ್ಯಾಮಿ ರೂಪವು ಪರವ್ಯೂಹಾದಿಗಳಲ್ಲಿ ಅನ್ತರ್ಗತ—ಅವುಗಳೊಡನೆಯೇ ಸೇರಿದ್ದೆಂದೂ ಭಗವದ್ರೂಪವು ತ್ರಿಪ್ರಕಾರ—ಮೂರು ವಿಧ ಎಂದೂ ಕೆಲವೆಡೆ ಹೇಳಿದೆ. ಇದರ ಅಭಿಪ್ರಾಯ ಈ ಅನ್ತರ್ಯಾಮಿ ರೂಪವು ಪರರೂಪದ ಪರಿಣಾಮ ವಿಶೇಷವೆಂಬುದರಿಂದ ಹೀಗೆ ಹೇಳಿದೆ. ಇನ್ನು ಕೆಲವೆಡೆ ಶಾಸ್ತ್ರಗಳಲ್ಲಿ ಭಗವದ್ರೂಪ, ಪಂಚ ಪ್ರಕಾರವೆಂದು ಹೇಳಿದೆ. ಅದನ್ನು ಅನುಸರಿಸಿ ಈವಾಗ ಅನ್ತರ್ಯಾಮಿ ರೂಪ ಬೇರೆ ಎಂಬ ಅಭಿಪ್ರಾಯದಿಂದ '**ಸರ್ವರು ಡೈಯವುಮ್**' ಎಂದು. ಇಲ್ಲಿ ಸರ್ವದ ಎಲ್ಲದರ ಹೃದಯದಲ್ಲೂ ಎಂದು ಹೇಳದೆ ಸರ್ವರ-ಎಲ್ಲರ ಹೃದಯದಲ್ಲೂ ಎಂದು ಹೇಳಿರುವುದರಿಂದ, ಧ್ಯಾನಾರ್ಹವಾದ ಹೃದಯವಿಲ್ಲದ ತಿರ್ಯಗಾದಿಗಳಲ್ಲಿ ಈ ಅನ್ತರ್ಯಾಮಿ ರೂಪವಿಲ್ಲ ಎಂದು ಹೇಳಿದ ಹಾಗಾಯಿತು. ಸೂಕ್ಷ್ಮವೆಂದು ಹೇಳಿರುವುದರಿಂದಲೂ, ರೂಪ ವಿಶೇಷ ಎಂದು ಹೇಳಿರುವುದರಿಂದಲೂ ಈ ಅನ್ತರ್ಯಾಮಿ ರೂಪವು ಸ್ವರೂಪಾನ್ತರ್ಯಾಮಿಯ ಹಾಗೆ ವಿಭುವಾಗಿಲ್ಲದೆ ಹೃದಯದ ಅಳತೆಗೆ ತಕ್ಕಂತೆ "**ನೀಲತೋಯದ ಮಧ್ಯಸ್ಥಾವಿದ್ಯುಲ್ಲೇಖೇವ ಭಾಸ್ವರಾ । ನೀವಾರ ಶೂಕವತ್ತನ್ವೀ ಪೀತಾಭಾಸ್ಯಾತ್ ತನೂಪಮಾ । ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾವ್ಯವಸ್ಥಿತಃ**" ಎಂದು ಹೇಳುವ ಹಾಗೆ ಸೂಕ್ಷ್ಮವಾಗಿಯೂ, ಅಪ್ರಾಕೃತವಾಗಿಯೂ ಇರುವುದು ಎಂದು ಜ್ಞಾಪಿಸಲ್ಪಟ್ಟಿದೆ. ಪರರೂಪವು ಬಹಳ ದೊಡ್ಡದಾದುದರಿಂದ ಅದನ್ನು ತೆಗೆದುಕೊಂಡು ಹೃದಯ ದೇಶದಲ್ಲಿ ಸನ್ನಿಧಾನಮಾಡುವುದು ಉಪಪನ್ನವಾಗುವುದಿಲ್ಲ ಎಂಬ ಭಾವದಿಂದ 'ಸೂಕ್ಷ್ಮ' ಎಂದು ಹೇಳಿದೆ. ಹಾಗೂ ಇದು ಪರರೂಪದ ಪರಿಣಾಮವಾದರೂ ಅದರಂತಿಲ್ಲದೆ ದೇಶ ವಿಪ್ರಕರ್ಷವಿಲ್ಲದೆ ಎಲ್ಲರ ಹೃದಯದಲ್ಲೂ ಸನ್ನಿಹಿತನಾಗಿ ನಿಲ್ಲುವ ಸ್ಥಿತಿಯೆಂಬ ಹಿರಿಮೆಯನ್ನು ಇಟ್ಟು, ಇದನ್ನು ಪ್ರತ್ಯೇಕವಾದ ಒಂದು ಅವತಾರದ ಪ್ರಕಾರವಾಗಿ ಹೇಳಿದೆಯಾದುದರಿಂದ ಯಾವ ವಿರೋಧವೂ ಇಲ್ಲ ಎಂದು ತಾತ್ಪರ್ಯ.

ಅನ್ತರ್ಯಾಮಿತ್ವವು ಎರಡು ಬಗೆಯಾದದ್ದು, ಸ್ವರೂಪಾನ್ತರ್ಯಾಮಿತ್ವ ಮತ್ತು ಹಾರ್ದಾನ್ತರ್ಯಾಮಿತ್ವ ಎಂದು. ವೇದಾನ್ತಗಳಲ್ಲಿ "**ಯಃ ಪೃಥಿವ್ಯಾಂ ತಿಷ್ಠನ್**", "**ಯ ಆತ್ಮನಿತಿಷ್ಠನ್**" ಇವೇ ಮೊದಲಾದವುಗಳಲ್ಲಿ ದಿವ್ಯಾತ್ಮ ಸ್ವರೂಪ

ವನ್ನೇ ಸರ್ವಾನ್ತರ್ಯಾಮಿಯಾಗಿ ನಿರ್ಣಯಿಸಿರುವಾಗ ಹೃದಯದಲ್ಲಿರುವ ಸೂಕ್ಷ್ಮ ರೂಪ ವಿಶಿಷ್ಟನನ್ನು ಅನ್ತರ್ಯಾಮಿ ಎಂದು ಹೇಳಬಹುದೋ ಎಂದರೆ ಈ ರೀತಿ ಹೇಳುವುದಕ್ಕೆ ಕಾರಣವನ್ನು ಹೇಳುತ್ತಾರೆ ಆಚಾರ್ಯರು.

ಇದು "ಸರ್ವಾನ್ತರ್ಯಾಮಿಯಾನ ದಿವ್ಯಾತ್ಮಸ್ವರೂಪತ್ತೈ ಅನುಸನ್ಧಿಕ್ಕ ಇಳಿ ವಾರ್ಕುೞ ತುರೈಯಾಕ" ಇದೇ ಮೊದಲಾದವುಗಳಿಂದ. ಅಗಾಧವಾದ ಕೆರೆಯಲ್ಲಿ ಸ್ನಾನ ಮೊದಲಾದವುಗಳಿಗೆ ಇಳಿಯುವರಿಗೆ ಸೋಪಾನಾದಿಗಳಿಂದ ಕೂಡಿದ ಒಂದು ತೊರೆಯಿಲ್ಲದೆ ಪ್ರವೇಶಿಸಲು ಆಗದಹಾಗೆ ವಿಭುವಾಗಿ ಧ್ಯಾನಾದಿಗಳಿಗೆ ಅಗೋಚರ ವಾದ ಭಗವಂತನ ಸ್ವರೂಪದ ಧ್ಯಾನದಲ್ಲಿ ಪ್ರವೇಶಿಸುವ ಯೋಗಿಗಳಿಗೂ ದಿವ್ಯ ಮಂಗಳ ವಿಗ್ರಹ ವಿಶಿಷ್ಟವಾಗಿರುವಿಕೆಯಿಂದ ದೇಶವಿಪ್ರಕರ್ಷ-ದೂರದೇಶದಲ್ಲಿ ರುವಿಕೆ ಇಲ್ಲದೆ ಸುಲಭವಾಗಿ ಇರುವನು ಈ ಅನ್ತರ್ಯಾಮಿ. ಈ ಅನ್ತರ್ಯಾಮಿಯ ಉಪಾಸನವಿಲ್ಲದೆ ಪ್ರವೇಶಿಸಲು ಸಾಧ್ಯವಿಲ್ಲದಿರುವುದರಿಂದ ಇದು ದಿವ್ಯಾತ್ಮ ಸ್ವರೂಪಕ್ಕೆ ತುರೈ-ದ್ವಾರವಾಗಿ ಹೇಳಲ್ಪಟ್ಟಿದೆ.

**ಅಷ್ಟಾಙ್ಗಯೋಗ ಸಿದ್ಧಾನಾಂ ಹೃದ್ಯಾಗನಿರತಾತ್ಮನಾಮ್ ।**
**ಯೋಗಿನಾ ಮಧಿಕಾರಸ್ಸ್ಯಾದೇಕಸ್ಮಿನ್ ಹೃದಯೇಶಯೇ ॥**

ಅನ್ತರ್ಯಾಮಿ ವಿಗ್ರಹಕ್ಕೆ ಶುಭಾಶ್ರಯತ್ವದಲ್ಲಿ ಪ್ರಮಾಣವಾಗಿದೆ ಈ ಶ್ಲೋಕ. ಯಮನಿಯಮಾದಿ ಅಷ್ಟಾಙ್ಗಯೋಗದಿಂದ ಸಿದ್ಧಿಯನ್ನು ಪಡೆದು ಆತ್ಮಾವಲೋಕನವನ್ನು ಹೊಂದಿದ, ಹೃದ್ಯಾಗ-ಮಾನಸಪೂಜೆಯಲ್ಲಿ ನಿರತರಾದ ಯೋಗಿನಾಂ—ಬ್ರಹ್ಮೋಪಾಸಕರಿಗೆ ಏಕಸ್ಮಿನ್—ಒಂದೇ ಮೂರ್ತಿಯಾಗಿ ಇರುವ ಹೃದಯೇಶಯೇ—ಹೃದಯಾಕಾಶದಲ್ಲಿ ಇರುವ ಅನ್ತರ್ಯಾಮಿ ವಿಗ್ರಹದಲ್ಲಿ ಅಧಿ ಕಾರಃಸ್ಯಾತ್—ಅಧಿಕಾರವಿದೆ. ಇವೇ ಮೊದಲಾದವುಗಳಲ್ಲಿ ಹೇಳಿರುವುದರಿಂದ ಅನ್ತ ರ್ಯಾಮಿ ರೂಪವೆಂದೂ ಹೇಳಲ್ಪಟ್ಟಿದೆ. ಇಲ್ಲಿ ಆದಿಶಬ್ದದಿಂದ,

**ಮನ್ತ್ರಸ್ಸಮಾಧಿವಿಷಯೋ ನಾನಾಭೂಮಿಜಯೇಷುಚ ।**
**ನಿರಾಕಾರೋನಿರಙ್ಗಶ್ಚ ಸ್ಮರ್ತವ್ಯೋಬ್ರಹ್ಮಲಕ್ಷಣಃ ॥**
**ತತ್ಪ್ರಾಪ್ತ್ಯುಪಾಯೋ ಪ್ರಥಮೋ ಯಾಗಹೋಮಾದಿಕೇತು ವೈ ।**
**ಸಾಕಾರಂ ಸಂಸ್ಮರೇತ್ಸಾಙ್ಗಮ್ ॥**

ಎಂದು ನಿರಾಕಾರವಾದ ಸರ್ವಾನ್ತರ್ಯಾಮಿಯಾದ ದಿವ್ಯಾತ್ಮಸ್ವರೂಪ ಚಿಂತ ನಕ್ಕೆ ದಿವ್ಯಮಂಗಳ ವಿಶಿಷ್ಟ ಹಾರ್ದಧ್ಯಾನವು ದ್ವಾರವಾಗಿ ಹೇಳಲ್ಪಟ್ಟಿರುವುದರಿಂದ, ಈ ಧ್ಯಾನ ವಿಷಯವಾದ ಹಾರ್ದಸ್ವರೂಪವು ಅನ್ತರ್ಯಾಮಿ ರೂಪ ವಿಶೇಷವೆಂದು ಹೇಳಲ್ಪಟ್ಟಿದೆ. ಇಲ್ಲಿ 'ನಿರಾಕಾರೋನಿರಙ್ಗಶ್ಚ—ಯಾವ ವಿಧವಾದ ಆಕಾರ ಅವಯವ

ಗಳಿಲ್ಲದ ಬ್ರಹ್ಮದ ಸ್ವರೂಪವು ಸ್ಮರಣ ಯೋಗ್ಯವಾದದ್ದು, ಎಂದು ದಿವ್ಯಾತ್ಮ ಸ್ವರೂಪ ವಿಷಯವಾದ ಸಮಾಧಿಯನ್ನು ಹೇಳಿ, ಅವನನ್ನು ಹೊಂದಲು ಮೊದಲು ಯಾಗಹೋಮಾದಿಗಳಲ್ಲಿ ಆಕಾರದೊಡಗೂಡಿದ ಬ್ರಹ್ಮವನ್ನು ಧ್ಯಾನಮಾಡಬೇಕು ಎಂದು ಹೇಳಿರುವುದರಿಂದ ಈ ಪ್ರಕರಣದಲ್ಲಿ ಇದು ದ್ವಾರವಾಗಿ ಹೇಳಲ್ಪಡುತ್ತದೆ ಎಂದು ತಾತ್ಪರ್ಯ.

ಈ ರೀತಿ ವ್ಯೂಹ, ವಿಭವ, ಅರ್ಚಾನ್ತರ್ಯಾಮ್ಯವತಾರಗಳನ್ನು ನಿರೂಪಣೆ ಮಾಡಿದ್ದಾಯಿತು. ಇವುಗಳೆಲ್ಲಾ ಶುದ್ಧಸತ್ತ್ವದ್ರವ್ಯಗಳಾಗಿರುವುದರಿಂದ ಈ ರೂಪಗಳಿಗೆ ಲೋಕದಲ್ಲಿ ನೋಡಲ್ಪಟ್ಟ ರೀತಿಯಿಂದ ಇರುವಿಕೆ ಇಲ್ಲ. ದೋಷಗಳಿಂದ ಕೂಡಿರುವಿಕೆ, ಜ್ಞಾನಸಙ್ಕೋಚವಾಗಿರುವಿಕೆ, ಕರ್ಮದಿಂದ ಹುಟ್ಟುವಿಕೆ, ಸುಖದುಃಖ ಇವುಗಳನ್ನು ಅನುಭವಿಸುವಿಕೆ ಇವುಗಳಿಲ್ಲ. ರಜಸ್ಸು, ತಮಸ್ಸು ಇವುಗಳ ಸಂಬಂಧವಿಲ್ಲದೆ, ಸತ್ತ್ವಾಶ್ರಯವಾದ ದ್ರವ್ಯವು ಉಪಾದಾನವಾಗಿರುವುದರಿಂದ ಸಾತ್ವತಾದಿ ಸಂಹಿತೆಗಳಲ್ಲಿ ಇದಕ್ಕೆ ಶುದ್ಧ ಸೃಷ್ಟಿ ಎಂದು ಹೆಸರಿಟ್ಟಿದ್ದಾರೆ. ದಿವ್ಯಾತ್ಮ ಸ್ವರೂಪ ಭಿನ್ನವಾದ ದ್ರವ್ಯವಾಗಿದ್ದರೂ ತ್ರಿಗುಣದ್ರವ್ಯಮಯವಾಗಿಲ್ಲ. ವ್ಯಾಪಾರಾದಿಗಳಿದ್ದರೂ ಅದಕ್ಕೆ ಕರ್ಮಾದಿಗಳ ಸಂಬನ್ಧವಿಲ್ಲ; ಆದುದರಿಂದ ಶುದ್ಧಸೃಷ್ಟಿತ್ವವು ಕೂಡುತ್ತದೆ ಎಂದು ಅಭಿಪ್ರಾಯ.

ಪರಮಾತ್ಮನ ವಿಗ್ರಹಾದಿಗಳು ನಮ್ಮ ಶರೀರಾದಿಗಳಂತೆ ಜಡವಾಗಿರಲು ಸಾಧ್ಯವಿಲ್ಲ. ಪರಮಾತ್ಮನ ದಿವ್ಯಮಂಗಳ ವಿಗ್ರಹಕ್ಕೆ ಕಾರಣವಾದ ನಿತ್ಯವಿಭೂತಿ, ಅಜಡ ಮತ್ತು ಸ್ವಪ್ರಕಾಶ, ತ್ರಿಗುಣದ್ರವ್ಯ ಶುದ್ಧಸೃಷ್ಟಿ. ಈ ವಿಚಾರವು ಇಲ್ಲಿ ಭಗವಂತನ ಅವತಾರಕ್ಕೆ ಸಂಬಂಧಪಟ್ಟಂತೆ ಇಲ್ಲಿ ಪ್ರಸಕ್ತವಾಗಿದೆ. ಆದರೂ ಈ ಸಂದರ್ಭದಲ್ಲಿ ನಿತ್ಯವಿಭೂತಿಯಲ್ಲಿರುವ ಪೃಥಿವ್ಯಾದಿ ತತ್ತ್ವಗಳ ವಿಚಾರವನ್ನು ಸ್ವಲ್ಪ ಅರಿಯೋಣ.

ಅತ್ರತ್ಯಕ್ಷ್ಮಾದಿ ತತ್ತ್ವಕ್ರಮ ನಿಯತಗುಣ ಪ್ರಕ್ರಿಯಾದ್ಯೈಕರೂಪ್ಯಾತ್ |
ನಿತ್ಯೇಽಪಿಸ್ಯಾನ್ನಿಮಿತ್ತಾನುಗತಿ ನಿಯಮಿತಸ್ತತ್ತದಾಖ್ಯಾ ವಿಶೇಷಃ ||

ಈ ಲೀಲಾವಿಭೂತಿಯಲ್ಲಿರುವ ಪೃಥಿವ್ಯಾದಿಗಳ ಹಾಗೆ ಅಪ್ರಾಕೃತವಾದ ಪೃಥಿವ್ಯಾದಿಗಳಲ್ಲೂ ಗುಣನಿಯಮಗಳು ಸಮನಾಗಿರುವುದು ಮಾತ್ರವೇ ಹೊರತು, ಅವು ಹೊಸದಾಗಿ ಪರಿಣಾಮಗಳನ್ನು ಹೊಂದುವುದಿಲ್ಲ, ಆದುದರಿಂದ ಲೀಲಾವಿಭೂತಿಯಲ್ಲಂತೆಯೇ ಆ ಆ ಗುಣಗಳ ಸಾಮ್ಯದಿಂದಲೇ ಆ ಆ ತತ್ತ್ವಗಳ ಹೆಸರುಗಳು ಅಲ್ಲಿ ಬಂದಿವೆ ಎಂದು ತಿಳಿಯಬೇಕು.

ಈ ಅವತಾರಗಳೆಲ್ಲವೂ ಐನ್ದ್ರಜಾಲಿಕವಲ್ಲ. ಇಂದ್ರಜಾಲ ವಿದ್ಯೆಯಿಂದ ಸೃಷ್ಟಿ ಮಾಡಿತೋರಿಸುವುದು ಐನ್ದ್ರಜಾಲಿಕ, ಅದು ಸುಳ್ಳಾದುದು. ಅದರಂತಿಲ್ಲ ಇವನ

ಅವತಾರ. ಸತ್ಯವಾದುದು, ಹಾಗಾದರೆ ಶರೀರ ಸಂಬನ್ಧಪ್ರಯುಕ್ತವಾಗಿ ಕ್ಷೇತ್ರಜ್ಞರಂತೆ ಅಜ್ಞತ್ವ ಅಲ್ಪಶಕ್ತಿತ್ವ ಮೊದಲಾದ ದೋಷಗಳು ಪ್ರಸಕ್ತವಾಗಬೇಕಾದುದರಿಂದ ಈಶ್ವರ ಸ್ವಭಾವಕ್ಕೆ ಧಕ್ಕೆ ಬರುವುದಿಲ್ಲವೇ ? ಇವುಗಳಲ್ಲಿ ಕೆಲವು ರೂಪಗಳು ಭೂತ ಸಙ್ಘಾತಾತ್ಮಕಗಳಾಗಿ ಕಾಣುವುದರಿಂದ ಇವುಗಳೆಲ್ಲಾ ಶುದ್ಧ ಸತ್ವಮಯಗಳು ಎಂಬುದು ಕೂಡುತ್ತದೋ ? ಇವು ಕರ್ಮ ಮತ್ತು ಅವುಗಳ ಫಲಗಳೊಡನೆ ಸಂಬನ್ಧ ವಲ್ಲದವು ಎಂಬುದು ತಾನೆ ಹೊಂದುತ್ತವೆಯೇ ? ಎಂದರೆ—

ಗೀತಾಚಾರ್ಯನು—

"ಬಹೂನಿಮೇವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂವೇದ ಸರ್ವಾಣಿ ನತ್ವಂವೇತ್ಥಪರಂತಪ ॥

ಎಲೈ ಅರ್ಜುನ ! ನನಗೂ ನಿನಗೂ ಅನೇಕ ಜನ್ಮಗಳು ಕಳೆದುಹೋದವು; ಎಲೈ ಪರಂತಪನೇ, ನಾನು ಅವುಗಳನ್ನೆಲ್ಲಾ ತಿಳಿದಿರುತ್ತೇನೆ, ನೀನು ತಿಳಿದಿಲ್ಲ," ಎನ್ನುತ್ತಾನೆ. ಇದು ಇವನ ಜನ್ಮವು ಸತ್ಯವಾಗದಿದ್ದರೆ, 'ಬಹಳವಾದವು, ಕಳೆದು ಹೋದವು' ಎಂಬ ಈ ಮಾತುಗಳು ಸ್ವರಸವಾಗಲಾರವು. ತವಚ—ನಿನಗೂ ಕೂಡ ಎಂದು ದೃಷ್ಟಾಂತ ರೂಪವಾಗಿ ಹೇಳಿರುವುದರಿಂದ ಈ ಮಾತು ಭಗವಂತನ ಜನ್ಮವು ಸತ್ಯವಾದುದು ಎಂಬುದನ್ನು ಸಮರ್ಥನ ಮಾಡದಿದ್ದರೆ ಪ್ರಯೋಜನವಿಲ್ಲದ್ದಾಗುತ್ತದೆ, ಆದುದರಿಂದ ಐನ್ದ್ರಜಾಲಿಕದ ಹಾಗೆ ಮಿಥ್ಯೆಯಲ್ಲ ಸತ್ಯ ಎಂದು ತಿಳಿಯಬೇಕು.

ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

ನಾನು ಜನ್ಮ ರಹಿತನೂ ಅವ್ಯಯ-ನಾಶವಾಗದ ಸ್ವಭಾವುಳ್ಳವನೂ ಪ್ರಾಣಿ ಗಳಿಗೆ ನಿಯಾಮಕನೂ ಆಗಿದ್ದರೂ, ನನ್ನ ಪ್ರಕೃತಿಯನ್ನು ಆಶ್ರಯಿಸಿ ನನ್ನ ಮಾಯೆಯ ಮೂಲಕ ಅವತಾರಮಾಡುತ್ತೇನೆ, ಎನ್ನುತ್ತಾನೆ.

ಇಲ್ಲಿ 'ಅಜೋಽಪಿಸನ್—ಅವ್ಯಯಾತ್ಮಾಪಿಸನ್—ಈಶ್ವರೋಽಪಿಸನ್' ಎಂದು ಹೇಳಿರುವುದರಿಂದ ನಮ್ಮಗಳಂತೆ ಜ್ಞಾನಾದಿಸಙ್ಕೋಚವಿಲ್ಲದೆ ಅವತಾರದಶೆಯಲ್ಲೂ ಅಜಹತ್ಸ್ವಭಾವತ್ವತ್ವ=ಅಂದರೆ ತನ್ನ ಸ್ವಭಾವವನ್ನು ಬಿಡದಿರುವಿಕೆಯನ್ನೂ 'ಪ್ರಕೃತಿಂ ಸ್ವಾಮವಷ್ಟಭ್ಯ' ಎಂಬಲ್ಲಿ 'ಸ್ವಾಂತ=ತನ್ನದೇ ಆದ' ಎಂಬುದರಿಂದ ಅವ ತಾರ ವಿಗ್ರಹಕ್ಕೆ ಗುಣತ್ರಯಮಯವಾದ ಭೂತ ಸಙ್ಘಾತಾತ್ಮಕತ್ವವಲ್ಲದೆ ಶುದ್ಧ ಸತ್ವಮಯವೂ; 'ಆತ್ಮಮಾಯಯಾ' ಎಂಬ ಅಂಶದಲ್ಲಿ 'ಮಾಯಾವಯುನಂಜ್ಞಾನಂ' ಎಂಬ ರೀತಿಯಲ್ಲೇ ಮಾಯಾ ಶಬ್ದವು ಇಚ್ಛಾರೂಪವಾದ ಜ್ಞಾನಪರವಾದುದರಿಂದ

ಜನ್ಮಕ್ಕೆ ಪುಣ್ಯ ಪಾಪ ಇವೇ ಮೊದಲಾದವು ಕಾರಣವಾಗಿರುವಿಕೆ ಅಲ್ಲದೆ ತನ್ನ ಇಚ್ಛೆಯು ಮಾತ್ರ ಕಾರಣವಾಗಿರುವಿಕೆಯೂ ಸೂಚಿತವಾಗುತ್ತದೆ.

ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಮೊದಲನೆಯ ಶ್ಲೋಕದಲ್ಲಿ ಅವನ ಜನ್ಮಕ್ಕೆ ನಮ್ಮಗಳಂತೆ ಕರ್ಮವಿಪಾಕಕಾಲವಲ್ಲದೆ ಧರ್ಮ ರಕ್ಷಣಮಾಡಬೇಕಾದ ಕಾಲವೇ ಕಾಲ ಎಂಬುದೂ ಸ್ಪಷ್ಟವಾಗಿ ತಿಳಿಯುತ್ತದೆ.

"ಎಲೈ ಅರ್ಜುನ ! ಯಾವಾಗ ಧರ್ಮದ ಅವನತಿಯು ಆಗುವುದೋ, ಅಧರ್ಮದ ಉನ್ನತಿ ಆಗುವುದೋ ಆಗ ನಾನು ಅವತಾರ ಮಾಡುತ್ತೇನೆ" ಎನ್ನುತ್ತಾನೆ ಗೀತಾಚಾರ್ಯ,

"ಸಾಧುಗಳ ರಕ್ಷಣೆಗಾಗಿಯೂ ದುಷ್ಟರ ವಿನಾಶಕ್ಕಾಗಿಯೂ ಮತ್ತು ಧರ್ಮದ ಸಂಸ್ಥಾಪನೆಗಾಗಿಯೂ ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ" ಎಂಬ ಎರಡನೆಯ ಶ್ಲೋಕದಲ್ಲಿ ಜನ್ಮಕ್ಕೆ ಸುಖ ದುಃಖಾನುಭವವು ಪ್ರಯೋಜನವಲ್ಲದೆ ಸಾಧುಪರಿತ್ರಾಣ ಮೊದಲಾದುವೇ ಪ್ರಯೋಜನವೆಂಬುದನ್ನೂ ಅರಿಯಬಹುದು.

ಜನ್ಮ ಕರ್ಮಚ ಮೇದಿವ್ಯಮೇವಂಯೋ ವೇತ್ತಿತತ್ತ್ವತಃ ।
ತಕ್ತ್ವಾ ದೇಹಂ ಪುನರ್ಜನ್ಮನೈತಿ ಮಾಮೇತಿ ಸೋಽರ್ಜನ ॥

ಎಲೈ ಅರ್ಜುನ ! ಯಾವನು ಹೀಗೆ ನನ್ನ ದಿವ್ಯವಾದ ಅವತಾರವನ್ನೂ ಕರ್ಮವನ್ನೂ ಯಥಾರ್ಥವಾಗಿ ತಿಳಿಯುತ್ತಾನೋ ಅವನು ದೇಹವನ್ನು ತ್ಯಾಗ ಮಾಡಿದಮೇಲೆ ಮತ್ತೆ ಜನ್ಮವನ್ನು ಹೊಂದುವುದಿಲ್ಲ; ನನ್ನನ್ನೇ ಹೊಂದುತ್ತಾನೆ. ಎಂಬ ಈ ಶ್ಲೋಕದಲ್ಲಿ ಈ ಅರ್ಥವನ್ನು ಅನುಸಂಧಾನಮಾಡುವವರಿಗೆ ಫಲವನ್ನೂ ಹೇಳಿದ್ದಾನೆ.

ಈ ಅರ್ಥವನ್ನು—ಶಾಸ್ತ್ರವನ್ನು ಸ್ವೀಕರಿಸಿ (ನಂಬಿ) ಸದಾಚಾರ್ಯನ ಉಪ ದೇಶದ ಮೂಲಕವಾಗಿ ಸಂಶಯ ವಿಪರ್ಯವಿಲ್ಲದೆ ತಿಳಿದು (ಇದು ಈ ಶ್ಲೋಕದಲ್ಲಿ 'ತತ್ವತಃ' ಎಂಬ ಪದದ ತಾತ್ಪರ್ಯ) ಅನುಸನ್ಧಾನಮಾಡುವವರಿಗೆ ಒಂದೇ ಜನ್ಮ ದಲ್ಲಿ ತನ್ನ ಅಧಿಕಾರಕ್ಕೆ ಅನುಗುಣವಾಗಿ ಅಪೇಕ್ಷಿಸಿದ ಉಪಾಯ ಪೂರ್ತಿಯಾಗಿ ಬೇರೆ ಜನ್ಮವನ್ನು ಅನುಭವಿಸದೆ ಮುಕ್ತರಾಗಬಹುದು ಎಂಬುದನ್ನು "ಬಹೂನಿಮೇವ್ಯ ತೀತಾನಿ" ಎಂದು ಆರಂಭಿಸಿ ಐದು ಶ್ಲೋಕದಿಂದ ಹೇಳಿದ್ದಾನೆ. ಉಪಾಯಪೂರ್ತಿ

ಯೆಂದರೆ ಜನ್ಮಾನ್ತರವನ್ನು ಆರಂಭ ಮಾಡುವ ಪಾಪದ ಅಂಶವನ್ನು ಹೋಗಲಾಡಿಸುವುದಕ್ಕೆ ಸಮರ್ಥವಾದ ಪುಷ್ಕಲವಾದ ಉಪಾಯದ ನಿಷ್ಪತ್ತಿ— ಉಂಟುಮಾಡುವಿಕೆ, ಪ್ರಾರಬ್ಧ ಕರ್ಮದ ಕೊನೆಯಲ್ಲೇ ಮೋಕ್ಷವೆಂಬುದು ಔತ್ಸರ್ಗಿಕವಾದದ್ದು. ಆದರೆ ಈ ಅವತಾರ ರಹಸ್ಯ ಚಿನ್ತನ ವಿಧಾನವು ಅದಕ್ಕೆ ಅಪವಾದವಾದದ್ದು. ಆದುದರಿಂದ ಒಂದೇ ಜನ್ಮದಲ್ಲಿ ಮೋಕ್ಷವುಂಟು ಎಂದು ಹೇಳಿದುದು ವಿರುದ್ಧವಲ್ಲ ಎಂದು ತಾತ್ಪರ್ಯ. 'ಮುಕ್ತರಾಗಬಹುದು' ಎಂಬುದು ಈ ಅವತಾರ ಚಿನ್ತನವು ಕರ್ಮಯೋಗಾದಿಗಳ ಹಾಗೆ ಉಪಾಸನಕ್ಕೆ ಅಂಗವಲ್ಲ. ಇದು ಇಲ್ಲದಿದ್ದರೂ ಮುಕ್ತರಾಗುತ್ತಾರೆ. ಇದು ಉಂಟಾದರೆ ಜನ್ಮಾಂತರವನ್ನು ಎತ್ತದೆ ಮುಕ್ತರಾಗಬಹುದು.

ಈ ಅವತಾರ ರಹಸ್ಯ ಜ್ಞಾನ ಚಿರಕಾಲ ಸಾಧ್ಯವಾದ ಭಕ್ತಿಯೋಗಕ್ಕೆ ಪ್ರತಿನಿತ್ಯವೂ ಮಾಡಬೇಕಾದ ಅಭ್ಯಾಸಕ್ಕೆ ಹೆಚ್ಚಳವನ್ನು ಉಂಟುಮಾಡುವಿಕೆಯಿಂದ ಉಪಕಾರಕವಾದರೂ ಕ್ಷಣ ಕರ್ತವ್ಯವಾದ ಪ್ರಪತ್ತಿಗೆ ಇದು ಹೇಗೆ ಉಪಕಾರಮಾಡುತ್ತದೆ? ಎಂದರೆ, ಈ ಅನುಸಂಧಾನವು ಸ್ವತಂತ್ರ ಪ್ರಪತ್ತಿನಿಷ್ಠನಿಗೆ ಶರಣ್ಯನ ಸೌಶೀಲ್ಯ ವಾತ್ಸಲ್ಯ, ಸತ್ಯಕಾಮತ್ವ, ಸತ್ಯಸಂಕಲ್ಪತ್ವ, ಕಾರುಣ್ಯ ಇವೇ ಮೊದಲಾದ ಗುಣ ವಿಶೇಷಗಳ ತಿಳಿವಳಿಕೆಯನ್ನುಂಟುಮಾಡುವ ಮೂಲಕ ಉಪಾಯವನ್ನು ಅನುಷ್ಠಾನ ಮಾಡುವ ಕ್ಷಣದಲ್ಲಿ ಮಹಾವಿಶ್ವಾಸಾದಿಗಳನ್ನು ಸ್ಥಿರಪಡಿಸಿ ಉಪಕಾರವನ್ನು ಉಂಟುಮಾಡುತ್ತದೆ.

ಇಲ್ಲಿಯವರೆಗೂ ಪರ ವ್ಯೂಹ ವಿಭವ ಅನ್ತರ್ಯಾಮಿ ವಿಗ್ರಹಗಳು ಶುದ್ಧ ಸತ್ವಮಯವಾಗಿರುವುದರಿಂದ ಹೇಯ ಗುಣಗಳನ್ನು ಪ್ರತಿಭಟಿಸುವುದರಿಂದ—ಎದುರಿಸಿ ಅವು ಅಂಟದಂತೆ ಮಾಡುವುದರಿಂದ—ಆ ವಿಗ್ರಹಗಳು ಮುಮುಕ್ಷುಗಳಿಗೆ ಉಪಾಸನೆ ಮಾಡಲು ತಕ್ಕವು ಎಂದು ಹೇಳಿ ಆಯಿತು. ಆದರೆ ಅರ್ಚಾವತಾರ ವಿಗ್ರಹವು ಪ್ರಾಕೃತವಾಗಿದೆ. ಇದನ್ನು ನಾವು ಕಣ್ಣಿನಿಂದಲೇ ಕಾಣುತ್ತಿದ್ದೇವೆ. ಅದು ಚಿನ್ನ, ಬೆಳ್ಳಿ ಮುಂತಾದ ಲೋಹಮಯವಾಗಿದೆ ; ಅಥವಾ ಶಿಲಾದಾರುಮಯವಾಗಿದೆ. ಅದು ಶುಭಾಶ್ರಯವಲ್ಲದುದರಿಂದ ಅದಕ್ಕೆ ಮುಮುಕ್ಷೂಪಾಸ್ಯತ್ವವು ಹೇಗೆ ? ಎಂದರೆ—

ಪಂಚೋಪನಿಷದಾತ್ಮಾನಂ ದಿವ್ಯಮಂಗಳ ವಿಗ್ರಹಮ್ ।
ಸ್ವಾಮಿನ್ ಲಕ್ಷ್ಮೀಶ ಭಗವನ್ ಸನ್ನಿರುನ್ಧ್ಸ್ವವಿಗ್ರಹೇ ॥

"ಎಲೌ, ಲಕ್ಷ್ಮಿಗೆ ಪತಿಯಾದ ಪೂಜ್ಯನಾದ ಸ್ವಾಮಿಯೆ! (ಪಂಚೋಪನಿಷತ್ಸ್ವರೂಪವಾದ ದಿವ್ಯಮಂಗಳ ಶರೀರದೊಡನೆ) ಈ ವಿಗ್ರಹದಲ್ಲಿ ಪಂಚೋಪನಿಷನ್ಮಂತ್ರದಿಂದ ಸಾನ್ನಿಧ್ಯವನ್ನು ಮಾಡು" ಎಂದು ಈ ರೀತಿಯಲ್ಲಿ ಆ ಮನ್ತ್ರಗಳನ್ನು ಹೇಳಿ ಪ್ರಾರ್ಥನೆ ಮಾಡಿದರೆ ಅವನು ಅಪ್ರಾಕೃತ ವಿಗ್ರಹದಿಂದ ಕೂಡಿದ ವೇಷದಿಂದ ಅಲ್ಲಿ

ಅಧಿಷ್ಠಾನ ಮಾಡುತ್ತಾನೆ ಎಂದು ಶಾಸ್ತ್ರಗಳು ಹೇಳುತ್ತವೆ. ಅವನನ್ನು ಉಪಾಸನೆ ಮಾಡಿದರೆ ಮೋಕ್ಷವನ್ನು ಪಡೆಯಬಹುದು.

ಭಗವಂತನ ದಿವ್ಯ ಶರೀರ ನಿತ್ಯವಾದುದು, ಪೌಷ್ಕರಾಗಮದಲ್ಲಿ ಸರ್ವಜಗತ್ಕಾರಣನಾದ ಪರಮಾತ್ಮನಿಂದಲೇ, ತನ್ನ ಶರೀರ ನಿತ್ಯವೆಂದು ಹೇಳಲ್ಪಟ್ಟಿದೆ, ಏಕಾಯನ ಶಾಖೆಯವರೂ 'ನಿತ್ಯಾಽಲಿಗಾಸ್ವಭಾವ ಸಂಸಿದ್ಧಿಃ' ಎಂಬುದಾಗಿ ಹೇಳಿ ನಿತ್ಯತ್ವವನ್ನು ಹೇಳಿದ್ದಾರೆ. ಛಾಂದೋಗ್ಯ ವಾಕ್ಯಕಾರರಾದ ಬ್ರಹ್ಮನಂದಿಗಳೂ 'ರೂಪಂವಾಽತೀಂದ್ರಿಯ ಮಂತಃಕರಣ ಪ್ರತ್ಯಕ್ಷಂ—ಅವನರೂಪವನ್ನು ಈ ಇಂದ್ರಿಯಗಳಿಂದ ನಾವು ನೋಡಲು ಸಾಧ್ಯವಿಲ್ಲ; ಆದುದರಿಂದಲೇ ಅರ್ಜುನನಿಗೆ ಶ್ರೀಕೃಷ್ಣ, ದಿವ್ಯಂ ದದಾಮಿ ತೇ ಚಕ್ಷುಃ—ಈ ಕಣ್ಣಿನಿಂದ ನನ್ನ ವಿಶ್ವರೂಪವನ್ನು ನೋಡಲು ಸಾಧ್ಯವಿಲ್ಲ-ದಿವ್ಯ ಚಕ್ಷುಸ್ಸನ್ನು ಕೊಡುತ್ತೇನೆ' ಎಂದನು. ಅಂತಃಕರಣಕ್ಕೆ ಪ್ರತ್ಯಕ್ಷವಾಗುತ್ತದೆ ಎಂದು ಹೇಳಿರುವರು. ಮೋಕ್ಷಧರ್ಮದಲ್ಲಿ ವ್ಯಾಸರು ಹೇಳಿರುವ ಮಾತು :

ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರ ಜಂಗಮಮ್ ।
ಋತೇತಮೇಕಂ ಪುರುಷಂ ವಾಸುದೇವಂ ಸನಾತನಮ್ ॥

ಪ್ರಪಂಚದಲ್ಲಿರುವ ಸ್ಥಾವರ ಜಂಗಮ ವಸ್ತುಗಳೆಲ್ಲಾ ಅನಿತ್ಯವಾದವು. ಪುರುಷ ಶಬ್ದದಿಂದ ಹೇಳಲ್ಪಡುವ ಆ ವಾಸುದೇವನೊಬ್ಬನೇ ನಿತ್ಯನಾದವನು ಎಂದು. ಸಾವಯವವಾದರೆ ಉತ್ಪತ್ತಿವಿನಾಶಾದಿಗಳು ಉಂಟಾಗಬೇಕಲ್ಲವೆ ? ಅಂದರೆ ಕರ್ಮಫಲಾನುಭವಕ್ಕಲ್ಲ. ಅವನ ಶರೀರ, ಅವನ ನಿತ್ಯವಾದ ಇಚ್ಛೆಯಿಂದ ಸಿದ್ಧವಾಗಿ ಪರಮಪದದಲ್ಲಿರುವ ನಿತ್ಯಸೂರಿ ಮತ್ತು ಭಕ್ತರಿಗೆ ಆನಂದವನ್ನುಂಟುಮಾಡುವುದಕ್ಕಾಗಿ ಅವನು ದಿವ್ಯ ಶರೀರವನ್ನು ಹೊಂದಿರುತ್ತಾನೆ. ಅಸ್ತ್ರ ಭೂಷಣಾದಿಗಳನ್ನು ಹೊಂದಿರುವನು. ಇವು ಜಡವಸ್ತುಗಳಲ್ಲವೆಂದು ರಹಸ್ಯಾದಿ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟಿದೆ.

'[1]ನತೇ ರೂಪಂ ನಚಾಕಾರೋನಾಯುಧಾನಿ ನಚಾಸ್ಪದಮ್—ನಿನಗೆ ರೂಪವಿಲ್ಲ, ಆಕಾರವಿಲ್ಲ. ಆಯುಧಗಳಿಲ್ಲ' ಎಂಬುದಾಗಿ ಜಿತಂತಾ ಸ್ತೋತ್ರದಲ್ಲಿ ಹೇಳಿರುವುದರ ಅಭಿಪ್ರಾಯ 'ವಿಶ್ವಾಕಾರನಾದವನಿವನು' ಇವೇ ಮೊದಲಾಗಿ ಅರ್ಥ ಹೇಳಬೇಕು. ವಿಷಯ ಭೇದವನ್ನು ಹೇಳಿ 'ನಿರ್ಗುಣಶ್ಚ—ಗುಣೇಸರ್ವವಿದ್ಯಃ' ಎಂಬ

1. "ಅಪಾರ್ಥ ಇತಿ ನಿಶ್ಚಿತಃ ಪ್ರಹರಣಾದಿ ಯೋಗಸ್ತ್ವವ—ಭಗವಂತನು ಶರಣಾಗತರ ರಕ್ಷಣಕ್ಕಾಗಿ ನಂದಕಾದಿ ಆಯುಧಗಳನ್ನು ಕೈಯಲ್ಲಿ ಹಿಡಿದಿದ್ದಾನೆ" ಎಂದು ಅಭೀತಿಸ್ತವದಲ್ಲಿ ಆಚಾರ್ಯರು ಕೊಂಡಾಡಿದ್ದಾರೆ.

ಶ್ರುತಿವಾಕ್ಯಗಳಿಗೆ ಹೇಯ ಗುಣವಿಲ್ಲ—ಒಳ್ಳೆಯ ಗುಣಗಳಿವೆ ಎಂದು ವಿಧಿ ನಿಷೇಧ ಗಳ ಸಮನ್ವಯ ಮಾಡುವಂತೆ—ನಿರಾಕಾರ ಸಾಕಾರರೂಪಗಳನ್ನು ಅರಿಯಬೇಕು. ಹಾಗೆಯೇ ಇಲ್ಲೂ ಆಕಾರವಿರುವಿಕೆ, ಆಕಾರವಿಲ್ಲದಿರುವಿಕೆಯನ್ನು ತಿಳಿಯಬೇಕು.

'ಅಜಾಯಮಾನೋ ಬಹುಧಾ ವಿಜಾಯತೇ' ಎಂದು ಒಂದೇ ವಾಕ್ಯದಲ್ಲಿ ಪರ ಮಾತ್ಮನು ಹುಟ್ಟುವುದಿಲ್ಲ, ಅನೇಕ ರೀತಿಯಲ್ಲಿ ಹುಟ್ಟುತ್ತಾನೆ ಎಂದು ಶ್ರುತಿ ಹೇಳುತ್ತದೆಯಲ್ಲವೇ ? ನಹಿಂಸ್ಯಾತ್-ಪ್ರಾಣಿಹಿಂಸೆ ಕೂಡದು ಎಂಬ ನಿಷೇಧವಿದ್ದರೂ 'ಪಶುಮಾಲಭೇತ' ಎಂದು ಪ್ರಾಣಿಹಿಂಸೆಯನ್ನು ಶ್ರುತಿ ಹೇಳುತ್ತದೆಯಲ್ಲವೇ ?

**ಸುರೂಪಾಂ ಪ್ರತಿಮಾಂ ವಿಷ್ಣೋಃ ಪ್ರಸನ್ನವದನೇಕ್ಷಣಾಂ ।**
**ಕೃತ್ವಾಽಽತ್ಮನಃ ಪ್ರೀತಿಕರೀಂ ಸುವರ್ಣ ರಜತಾದಿಭಿಃ ॥**

ತನಗೆ ಪ್ರೀತಿಯನ್ನುಂಟು ಮಾಡುವ ಅಂದವಾದ ಪ್ರಸನ್ನವಾದ ಮುಖ, ಕಣ್ಣು ಉಳ್ಳ ವಿಷ್ಣುವಿನ ಪ್ರತಿಮೆಯನ್ನು ಚಿನ್ನ ಬೆಳ್ಳಿ ಮುಂತಾದವುಗಳಿಂದ ಮಾಡಿ,

**ತಾಮರ್ಚಯೇ ತ್ತಾಂಪ್ರಣಮೇತ್ತಾಂಯಜೇ ತ್ತಾಂ ವಿಚಿಂತಯೇತ್ ।**
**ವಿಶತ್ಯಪಾಸ್ತದೋಷಸ್ತು ತಾಮೇವ ಬ್ರಹ್ಮರೂಪಿಣೀಮ್ ॥**

ಅದನ್ನು ಅರ್ಚನೆ ಮಾಡಬೇಕು, ನಮಸ್ಕರಿಸಬೇಕು, ಪೂಜಿಸಬೇಕು ಮತ್ತು ಧ್ಯಾನಮಾಡಬೇಕು. ಹೀಗೆ ಮಾಡಿದರೆ ತತ್ಕ್ರತು ನ್ಯಾಯದಿಂದ ಅದರ ಸ್ವರೂಪ ವನ್ನು—ಅದಕ್ಕೆ ಬೇರೆಯಾಗದ ರೂಪವನ್ನು ಹೊಂದುತ್ತಾನೆ ಎಂದು ಪೂಜ್ಯ ಶೌನಕರು ಹೇಳಿದ್ದಾರೆ.

ಈರೀತಿ ಅವತಾರ ರಹಸ್ಯವೂ, ಅರ್ಚಾವತಾರವೂ ಆಯಾಸವಿಲ್ಲದೆ ಮೋಕ್ಷ ವನ್ನು ತರತಕ್ಕದ್ದಾಗಿರುವಾಗ ಹಾಗೆಯೇ ಶ್ರೀ ಶೌನಕಾದಿ ಮಹರ್ಷಿಗಳೂ ಉಪದೇಶಾದಿಗಳನ್ನು ನಡೆಸಿರುವಾಗ, ಬೇರೆ ಜನ್ಮದ ವಿಳಂಬವನ್ನು ಸಹಿಸದ ಆಳ್ವಾ ರುಗಳು ಪರರೂಪವನ್ನು ಏಕೆ ಅನುಸನ್ಧಾನ ಮಾಡಿದರು ? ಎಂದರೆ, ಆಳ್ವಾರು ಗಳೂ ಈ ಅವತಾರ ರಹಸ್ಯತೆಯನ್ನು ಅರ್ಚಾವತಾರ ವೈಲಕ್ಷಣ್ಯವನ್ನೂ ಪ್ರಚುರ ವಾಗಿ—ಬಹಳವಾಗಿ, ಆಶ್ರಯಣದೆಶೆಯಲ್ಲೂ ಭೋಗದೆಶೆಯಲ್ಲೂ ಅನುಸನ್ಧಾನ ಮಾಡಿ ಇದಕ್ಕೆ ಮೂಲಬಲವಾಗಿ ಪರತ್ವವನ್ನು-ಪರರೂಪವನ್ನು ಕಂಡರು. "ಕಣ್ಡು ಪೋನ್ದಾರ್ಕಳ್ ಪೇರಣಿಯಾಕಪ್ಪರತ್ವತ್ತೈ" ಎಂದು ರಹಸ್ಯತ್ರಯ ಸಾರದವಚ್ಚ್ತೈ. ಸರ್ವಕಾರಣವಾದುದರಿಂದ ಪರರೂಪವನ್ನು ಕಂಡದುಮಾತ್ರ ಹೊರತು ಅವತಾರ ರಹಸ್ಯದಲ್ಲೂ, ಅರ್ಚಾವತಾರ ವೈಲಕ್ಷಣ್ಯದಲ್ಲೂ ಅವರುಗಳಿಗೆ ಈಡುಪಾಡು– ಮನಸ್ಸನ್ನು ಇಡುವಿಕೆ ಎಂದು ಜ್ಞಾಪಿತವಾಗುತ್ತದೆ,

ಈರೀತಿ ಸ್ವಾಧೀನವಾದ ಮೂರುವಿಧ ಚೇತನರು ಅಚೇತನಗಳು ಉಳ್ಳವನಾಗಿ, ಪಂಚಪ್ರಕಾರವಾದ ವಿಗ್ರಹವುಳ್ಳವನಾಗಿ ಇರುವ ಈಶ್ವರನ ಸ್ವರೂಪವನ್ನು ಸತ್ಯತ್ವಾದಿಗಳಿಂದ ಸ್ಪಷ್ಟವಾಗಿ ನಿರೂಪಿಸಿ, ನಿತ್ಯನಾದ ಅವನಿಗೆ ಸ್ಥಿತಿ ಭೇದವನ್ನೂ ಸಾಮಾನ್ಯವಾಗಿ ಹೇಳಿರುವುದರಿಂದ ಮೇಲೆ ಅವನಿಗೆ ಪ್ರವೃತ್ತಿ ಭೇದವನ್ನು ನಿರೂಪಿಸುತ್ತಾರೆ.

**ಇಪ್ಪಡಿಯಿರುಕ್ಕಿರ ಈಶ್ವರನ್ ತನ್ನಾನನ್ದತ್ತುಕ್ಕು ಪರೀವಾಹಮಾಹ ಪಣ್ಣುಂ ವ್ಯಾಪಾರಙ್ಗಳ್ ಸಕಲಜಗತ್ಸೃಷ್ಟಿ ಸ್ಥಿತಿ ಸಂಹಾರಮೋಕ್ಷ ಪ್ರದತ್ವಾದಿಕಳ್.**

“ಇಪ್ಪಡಿಯಿರುಕ್ಕಿರ = ಈ ರೀತಿ ಇರುವ” ಎಂಬ ಅನುವಾದದಿಂದ ಅವಾಪ್ತ ಸಮಸ್ತಕಾಮನಾಗಿ ಅಂದರೆ ಎಲ್ಲಾ ಇಷ್ಟಾರ್ಥಗಳನ್ನು ಹೊಂದಿರುವ, ಆನಂದ ಸ್ವರೂಪನಾಗಿಯೂ ಇರುವ ಇವನಿಗೆ ಒಂದು ವ್ಯಾಪಾರಬೇಕೋ ? ಎಂಬ ಸಂದೇಹ ವುಂಟಾಗುತ್ತದೆ. ಈ ಸಂದೇಹವನ್ನು ಹೋಗಲಾಡಿಸಲು ತೊಡಗಿ, “**ಆನನ್ದತ್ತುಕ್ಕು ಪರೀವಾಹಮಾಹ ಪಣ್ಣುಮ್**” ಎಂದು, ಇದರಿಂದ ಅವಾಪ್ತಸಮಸ್ತ ಕಾಮನಾಯ್ ಆನನ್ದಸ್ವರೂಪನಾಗಿಯೂ ಇದ್ದರೂ “**ಲೋಕವತ್ತು [1]ಲೀಲಾಕೈವಲ್ಯಮ್**” ಎಂಬುವ ರೀತಿಯಲ್ಲೇ ಸಾರ್ವಭೌಮನಾದವನು ಚೆಂಡಾಡುವ ವ್ಯಾಪಾರದಂತೆ ತನ್ನ ಪರಿಪೂರ್ಣವಾದ ಆನನ್ದಕ್ಕೆ ದಾರಿಯಾಗಿ ವ್ಯಾಪಾರವುಂಟಾಗಬಹುದೆಂದು ಸಮಾಧಾನ ತೋರುತ್ತದೆ. ಆ ವ್ಯಾಪಾರವು ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರ ಮೋಕ್ಷವನ್ನು ಕೊಡುವಿಕೆ ಮುಂತಾದವು. ಈ ರೀತಿ ಹೇಳಲ್ಪಟ್ಟ, ಐದು ಅವಸ್ಥೆಗಳಲ್ಲೂ ಭಗವಂತನು ಶ್ರೀವಿಶಿಷ್ಟನಾಗಿಯೇ ಇದ್ದಾನೆ. ಇದು ವೇದವೇ ಮೊದಲಾದ ಪ್ರಮಾಣಗಳಿಂದ ಸಿದ್ಧವಾದ ಅರ್ಥ.

**ಶ್ರಿಯಾಸಹತು ದಾಮ್ಪತ್ಯಂ ಶಾಶ್ವತಂ ತತ ಏವ ತು ।**
**ತಯೋಃ ಸಾಮ್ಯೈಕ್ಯ ಶಕ್ತಿತ್ವ ತದ್ವತ್ವಾದಿಗಿರಾಂಗತಿಃ ॥**

ಲಕ್ಷ್ಮಿಯೊಡನೆ ಕೂಡಿರುವಿಕೆ ರೂಪವಾದ ದಾಂಪತ್ಯವು ಸ್ಥಿರವಾದುದು. ಒಂದು ಗಳಿಗೆಯೂ ಅವಳನ್ನು ಬಿಟ್ಟು ಇವನು ಇರುವುದಿಲ್ಲ. ವೇದವು ಇವರಿಬ್ಬರನ್ನೂ ಸಮವಾಗಿ ಪ್ರತಿಪಾದಿಸುತ್ತದೆ. ‘ಅಸ್ಯೇಶಾನಾಜಗತಃ = ಈ ಜಗತ್ತಿಗೆ ಒಡತಿ’ ಎಂದು ಇವಳನ್ನು ಕೊಂಡಾಡುವ ಶ್ರುತಿಯು ಈಶಾನ ಶಬ್ದದಿಂದ ಇವಳನ್ನು ಹೇಳಿದರೆ, “ಈಶಾನೋಭೂತಭವ್ಯಸ್ಯ = ಹಿಂದೆ ಕಳೆದು ಹೋದ ಮತ್ತು ಮುಂದೆ ಬರುವ ಸಕಲ ವಸ್ತುಗಳಿಗೂ ಇವನು ಒಡೆಯ” ಎಂದು, ಅದೇ ಈಶಾನ ಶಬ್ದದಿಂದ ಅವನನ್ನು ಕೊಂಡಾಡಿದೆ. ಎರಡು ಕಡೆಯೂ ಈಶಾನತ್ವವು ಶ್ರವಣವಾಗಿದೆ. ಹಾಗೆಯೇ “ವಿಷ್ಣು ಪತ್ನೀ” “ಶ್ರಿಯಃಪತಿಃ” ಎಂದು ಪರಸ್ಪರ ಪತಿಪತ್ನೀ ಶಬ್ದಗಳಿಂದ ಹೇಳಲ್ಪಟ್ಟ ಸ್ವಾಮಿತ್ವವು ತೋರುವುದರಿಂದ ಇಬ್ಬರಿಗೂ ಸಾಮ್ಯವೇ–

1. ಬ್ರಹ್ಮಸೂತ್ರ. ೨. ೧. ೩೩.

ಒಂದಾಗಿರುವಿಕೆಯೇ ಇದೆ; ಇವರುಗಳಲ್ಲಿ ಒಬ್ಬರು ಮುಖ್ಯ, ಮತ್ತೊಬ್ಬರು ಅಧೀನ ಎಂಬುವುದು ತೋಚುವುದಿಲ್ಲ. "ನರನಾರೀಮಯೋ ಹರಿಃ—ಹರಿಯು ಮನುಷ್ಯ ಮತ್ತು ಸ್ತ್ರೀ ಇವರ ವಿಕಾರವಾಗಿದ್ದಾನೆ-ಸ್ವರೂಪವಾಗಿದ್ದಾನೆ. "ನಾರಾಯಣಾತ್ಮಿಕಾಂ ದೇವೀಮ್—ದೇವಿಯು ನಾರಾಯಣ ಸ್ವರೂಪಳಾಗಿದ್ದಾಳೆ" ಎಂದು ಬ್ರಹ್ಮಾಣ್ಡ ಪುರಾಣ, ಕಾಶ್ಯಪ ಪುರಾಣ ವಚನಗಳಿವೆ. ಇದಕ್ಕೆ ಅನುಸಾರವಾಗಿ,

ತ್ವಂಯಾದೃಶೋಽಸಿ ಕಮಲಾಮಪಿ ತಾದೃಶೀಂತೇ
ದಾರಾನ್ವದಂತಿಯುವಯೋರ್ನತು ಭೇದಗನ್ಧಃ ।
ಮಾಯಾವಿಭಕ್ತ ಯುವತೀತನು ಮೇಕಮೇವ
ತ್ವಾಂ ಮಾತರಞ್ಚ ಪಿತರಞ್ಚಯುವಾನ ಮಾಹುಃ ॥

ನೀನು ಹೇಗೆ ಇದೆಯೋ ಹಾಗೆಯೇ ಲಕ್ಷ್ಮಿಯು ನಿನಗೆ ತಕ್ಕ ಹೆಂಡತಿ ಎಂದು ಹೇಳುತ್ತಾರೆ. ನಿಮ್ಮ ಇಬ್ಬರಿಗೂ ಸ್ವಲ್ಪವೂ ಭೇದವೇ ಇಲ್ಲ, ನೀನು ನಿನ್ನ ಮಾಯೆ ಯಿಂದ ಸ್ತ್ರೀರೂಪವನ್ನು ವಿಭಾಗ ಮಾಡಿಕೊಂಡಿದ್ದೀಯೆ. ನೀನೊಬ್ಬನೇ ಇರುವವನು. ಆದುದರಿಂದ ನಿನ್ನನ್ನು ತಾಯಿ ತಂದೆ ಯುವಕ ಎಂದು ಹೇಳುತ್ತಾರೆ. "ಏಷ ಹಿ ಮಾತಾ ಪಿತಾ ಭ್ರಾತಾ ಸುಹೃದ್ಗತಿಶ್ಚ ನಾರಾಯಣಃ" ಎಂದು ಉಪನಿಷತ್ತು ಹೇಳುತ್ತದೆ. ಹೀಗೆ ವಿಷ್ಣುವಿನ ವೈಭವವನ್ನು ಕೊಂಡಾಡಿದ್ದಾರೆ, 'ಸದೇವ ಸೋಮ್ಯ ಇದಮಗ್ರ ಆಸೀತ್' ಹೀಗೆಂಬ ಉಪನಿಷತ್ತಿನಲ್ಲಿ ಹೇಳಿರುವ ಸತ್ ಶಬ್ದದಿಂದ ಕೂಡಿರುವ ಭಗವಂತನೇ ಶ್ರೀ ಶಬ್ದದಿಂದ ಹೇಳಲ್ಪಡುತ್ತಾನೆ. ಭಗವಂತನೇ ಸ್ತ್ರೀ ರೂಪವಾದ ನಿತ್ಯವಾದ ಬೇರೆ ಶರೀರವನ್ನು ಹೊಂದಿ 'ಶ್ರೀ' ಎಂದು ಹೇಳಲ್ಪಡುತ್ತಾನೆ. ಅಥವಾ ಭಗವಂತನ ಸ್ವರೂಪದ ಒಂದು ಭಾಗವು ಬೇರೆಯಾಗಿ ಪರಸ್ಪರ ಭೋಕ್ತೃತ್ವಕ್ಕೋಸ್ಕರ—ಅಂದರೆ ನಾನು ನೀನು ಎಂದು ಅನುಭವಿಸುವುದಕ್ಕೋಸ್ಕರ ಯಾವಾಗಲೂ ಸ್ವೀಕರಿಸಲ್ಪಟ್ಟ ಶ್ರೀರೂಪವುಳ್ಳವನು ಅಥವಾ ದೈತ್ಯರಿಗೆ ಮೋಹ ವನ್ನು ಉಂಟುಮಾಡಲು ಮೋಹಿನಿಯ ರೂಪವೆತ್ತಿದಂತೆ ತಾನೆ ಭೋಗಕ್ಕೋಸ್ಕರ ಒಂದುವೇಳೆ ಕಾಂತೆಯ ವಿಗ್ರಹವುಳ್ಳವನಾಗಿದ್ದಾನೆ. ಅವನೇ ಶ್ರೀ ಎಂಬುದಾಗಿಯೋ ಅಥವಾ ಭಗವಂತನ ಸ್ವರೂಪದ ಒಂದು ಭಾಗವೇ ಬೇರೆಯಾಗಿ ಅಹಂತೆಯಿಂದ ಅಂದರೆ ನಾನು ಎಂಬ ಭಾವನೆಯಿಂದ ಒಬ್ಬೊಬ್ಬರು ಅನುಭವಿಸುವುದಕ್ಕೋಸ್ಕರ ಯಾವಾಗಲೂ ಸ್ವೀಕರಿಸಲ್ಪಟ್ಟ ಶ್ರೀರೂಪವುಳ್ಳವನೂ ಆಗಿದ್ದಾನೆ. ಎಂಬ ಇದೇ ಶ್ರೀಶಬ್ದದ ಅರ್ಥ ಹೀಗೆಂಬುದು ಐಕ್ಯವಾದವು.

ಜಗದುತ್ಪಾದಿಕಾ ಶಕ್ತಿಸ್ತವ ಪ್ರಕೃತಿರಿಷ್ಯತೇ ।
ಸೈವನಾಮಸಹಸ್ರೇಷು ಲಕ್ಷ್ಮೀಃ ಶ್ರೀರಿತಿ ಕೀರ್ತ್ಯತೇ ॥

ಪ್ರಪಂಚವನ್ನು ಸೃಷ್ಟಿಸುವ ನಿನ್ನ ಶಕ್ತಿಯು ಪ್ರಕೃತಿ ಎಂದು ಹೇಳಲ್ಪಡುತ್ತದೆ. ಅದೇ ಸಹಸ್ರನಾಮಗಳಲ್ಲಿ 'ಲಕ್ಷ್ಮೀ, ಶ್ರೀ' ಎಂದು ಹೇಳಲ್ಪಡುತ್ತದೆ ; ಎಂದು ವಚನ ವಿರುವುದರಿಂದ ಶಕ್ತಿತ್ವವಾದವು.

**ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ ।**

ಓ ಬ್ರಾಹ್ಮಣಶ್ರೇಷ್ಠನೆ ! ಹೇಗೆ ವಿಷ್ಣುವು ಎಲ್ಲದರಲ್ಲೂ ಇದ್ದಾನೋ, ಸರ್ವ ವ್ಯಾಪಿಯೋ, ಹಾಗೆಯೇ ಇವಳೂ ಸರ್ವವ್ಯಾಪಿಯಾಗಿದ್ದಾಳೆ.

**ಆಕ್ರಮ್ಯ ಸರ್ವಾಂತು ಯಥಾ ತ್ರಿಲೋಕೀಂ**
**ತಿಷ್ಠತ್ಯಯಂದೇವವರೋಽಸಿತಾಕ್ಷಿ ।**
**ತಥಾಸ್ಥಿತಾ ತ್ವಂ ವರದೇ ತಥಾಪಿ ॥**

ಓ ಕಪ್ಪಾದ ಕಣ್ಣುಳ್ಳವಳೇ ! ಈ ದೇವಶ್ರೇಷ್ಠನು ಮೂರು ಲೋಕವನ್ನೂ ಆಕ್ರಮಿಸಿ ಹೇಗೆ ನಿಂತಿದ್ದಾನೋ, ಹಾಗೆಯೇ ನೀನೂ ಕೂಡ ಆಕ್ರಮಿಸಿ ಅಂದರೆ ವಶಮಾಡಿಕೊಂಡು ಇರುತ್ತೀಯೆ, ಹೀಗೆಂಬುದು ತದ್ವತ್ತ್ವಾವಾದ–ಅವನಂತೆ ನೀನು ಇರುವೆ ಎಂಬ ವಾದ.

ಇವೆಲ್ಲವೂ ಶಾಶ್ವತವಾದ–ನಿತ್ಯವಾದ ದಾಂಪತ್ಯ ಇವರದು ಎಂಬ ಪಕ್ಷದಲ್ಲಿ ಸುಲಭವಾಗಿ ನಿರ್ವಾಹಮಾಡಲು ತಕ್ಕಪ್ರಮಾಣಗಳಾಗಿವೆ. '**ತದ್ವತ್ತ್ವಾದಿಗಿರಾಂ**' ಎಂಬಲ್ಲಿ ಆದಿಶಬ್ದದಿಂದ "ವಿಷ್ಣೋಃಶ್ರೀರನಪಾಯಿನೀ=ಲಕ್ಷ್ಮಿಯು ವಿಷ್ಣುವನ್ನು ಬಿಟ್ಟಿರದವಳು", "**ನಾನಯೋರ್ವಿದ್ಯತೇಪರಮ್**=ಇವರಿಗಿಂತ ಬೇರೆಯಾವುದೂ ಇಲ್ಲ" ಎಂದು ವ್ಯತಿರೇಕದ್ವಿತ್ವಾದಿ ನಿರ್ದೇಶಗಳು ನೋಡಲು ತಕ್ಕವಾಗಿವೆ. "**ವ್ಯತಿರೇಕದ್ವಿತ್ವ**=ಬೇರೆ ಎರಡರ ಭಾವವಿಲ್ಲ".

ಜ್ಞಾನ ಆನಂದ ಇವೇ ಮುಂತಾದವು ಇವಳಿಗೂ ಅವನಿಗೂ ಸಮವಾಗಿವೆ. ಜಗತ್ತನ್ನು ಸೃಷ್ಟಿಸುವುದೂ ಇವರಿಬ್ಬರಿಗೂ ಸೇರಿದೆ. [1]"**ಆನೀದವಾತಗ್ಂ ಸ್ವಧಯಾ ತದೇಕಂ**" ಎಂದು ಸ್ವಧಾಶಬ್ದದಿಂದ ಹೇಳಲ್ಪಡುವ ಲಕ್ಷ್ಮೀವಿಶಿಷ್ಟನಾದ ಪರಮಾತ್ಮ ನಿಗೆ ಸೃಷ್ಟಿಗೆ ಮುಂಚೆ 'ಆನೀತ್' ಇರುವಿಕೆಯನ್ನು ಪ್ರತಿಪಾದಿಸಿರುವುದರಿಂದ ಜಗಜ್ಜನಕತ್ವವು ಸಿದ್ಧಿಸುವುದು. '**ಸ್ವಧಾತ್ವಂ ಲೋಕಪಾವನೀ**' ಎಂಬುದಾಗಿ ಲಕ್ಷ್ಮಿಯನ್ನು ಇಂದ್ರನು ಸ್ತೋತ್ರ ಮಾಡಿದ್ದಾನೆ. ಇದು ಪರಾಶರರು ವಿಷ್ಣು ಪುರಾಣದಲ್ಲಿ ಹೇಳಿರುವ ಮಾತು; ಇದು ಉಪಬ್ರುಹ್ಮಣಗ್ರಂಥ. ಆದುದರಿಂದ ಸ್ವಧಾ ಶಬ್ದಕ್ಕೆ ಲಕ್ಷ್ಮೀವಾಚಕತ್ವವು ಸಿದ್ಧಿಸಿದೆ. ಸಾಯಣಭಾಷ್ಯದಲ್ಲಿ, ಸ್ವಧಾ

1. ತೈತ್ತಿರೀಯ ಬ್ರಾಹ್ಮಣ ಅಷ್ಟಕ. ೨–೮–೭೪.

ಶಬ್ದಕ್ಕೆ ಬ್ರಹ್ಮವಸ್ತುವು ತನ್ನಲ್ಲಿ ಆಶ್ರಯವನ್ನು ಪಡೆದಿರುವ ಮಾಯೆ ಎಂದು ಅರ್ಥ ಹೇಳಿದ್ದಾರೆ. ಅದರೊಡನೆ ಬ್ರಹ್ಮವು ಚೇಷ್ಟಿಸಲ್ಪಟ್ಟಿತು. ಇಲ್ಲಿ ಚಲನವು ಚೇಷ್ಟೆಯಲ್ಲ. ಆದರೆ ಸದ್ಭಾವಮಾತ್ರ–ಇರುವಿಕೆಮಾತ್ರ ಎಂದು ಅಭಿಪ್ರಾಯ ಪಟ್ಟು 'ಅವಾತ' ಎಂದು ಹೇಳಿದೆ. ಗಾಳಿಯಿಲ್ಲದೆ–ನಿಶ್ಚಲವಾಗಿದ್ದಿತು ಎಂದರ್ಥ.

"ಅಸ್ಯಾಮಮಚ ಶೇಷಂಹಿ ವಿಭೂತಿರುಭಯಾತ್ಮಿಕಾ=ಲೀಲಾವಿಭೂತಿ ಮತ್ತು ನಿತ್ಯವಿಭೂತಿ ಎಂದು ಹೇಳಲ್ಪಡುವ ಈ ಐಶ್ವರ್ಯವು ಇವಳಿಗೂ ನನಗೂ ಶೇಷವಾದದ್ದು".

**ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾಕಾರುಣ್ಯ ರೂಪಯಾ ।**
**ರಕ್ಷಕಃ ಸರ್ವಸಿದ್ಧಾನ್ತೇ ವೇದಾನ್ತೇಷುಚ ಗೀಯತೇ ॥**

ದಯೆಯೇ ಮೂರ್ತಿವೆತ್ತಂತ್ತಿರುವ ಲಕ್ಷ್ಮಿಯೊಡನೆ ನಾರಾಯಣನು ರಕ್ಷಕ ನಾಗಿದ್ದಾನೆ ಎಂದು ಎಲ್ಲಾ ವೇದಾಂತಗಳೂ ಸಾರುತ್ತವೆ.

"ಸಂಸಾರಾರ್ಣವತಾರಿಣೀಮ್=ಸಂಸಾರವೆಂಬ ಕಡಲನ್ನು ದಾಟಿಸುವವಳು".

**ವಾಚಃ ಪರಂಪ್ರಾರ್ಥಯಿತಾ ಪ್ರಪದ್ಯೇತ್ ನಿಯತಃ ಶ್ರಿಯಮ್ ।**

**ವಾಚಃಪರಂ**=ವಾಚಾಮಗೋಚರನಾದ. ಅಂದರೆ ಮಾತುಗಳಿಗೆ ಸಿಲುಕದ ಹರಿಯನ್ನು, **ಪ್ರಾರ್ಥಯಿತಾ**=ಶರಣುಹೊಂದಲು ಅಪೇಕ್ಷಿಸುವವನು, **ನಿಯತಂ**= ನಿಯಮವಾಗಿ, **ಶ್ರಿಯಂ ಪ್ರಪದ್ಯೇತ್**=ಪುರುಷಾಕಾರವಾಗಿ ಶ್ರೀಯನ್ನು ಶರಣು ಹೋಗಬೇಕು". ಇದು ಶೌನಕರ ಮಾತು. "**ಆತ್ಮವಿದ್ಯಾಚ ದೇವಿತ್ವಂ ವಿಮುಕ್ತಿ ಫಲದಾಯಿನೀ**=ಎಲೌ ದೇವಿಯೇ, ನೀನು ಮೋಕ್ಷವನ್ನು ಕೊಡುವ ಆತ್ಮವಿದ್ಯೆ ಯಾಗಿರುವೆ"

**ಯಾ ಮಾಲಮ್ಬ್ಯ ಸುಖೇನೇಮಂ ದುಸ್ತರಂ ಹಿ ಗುಣೋದಧಿಮ್ ।**
**ನಿಸ್ತರನ್ತ್ಯಚಿರೇಣೈವ ವ್ಯಕ್ತಧ್ಯಾನಪರಾಯಣಾಃ ॥**

ಸ್ಪಷ್ಟವಾಗಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ನಿರತರಾದವರು ದಾಟಲು ಅಸಾಧ್ಯವಾದ ಈ ಸತ್ವ ರಜಸ್ಸು ತಮಸ್ಸು ಎಂಬ ಗುಣಗಳೆಂಬ ಸಮುದ್ರ ವನ್ನು, ಯಾವಳನ್ನು ಆಶ್ರಯಿಸಿ ಸುಖವಾಗಿ ಬೇಗನೇ ದಾಟುತ್ತಾರೋ, ಇವೆಲ್ಲಾ ಪ್ರಮಾಣಗಳು.

**ಶೃಣಾತಿ ನಿಖಿಲಾನ್ದೋಷಾನ್ ಶ್ರೀಣಾತಿಚಗುಣೈರ್ಜಗತ್ ।**
**ಶ್ರೀಯತೇ ಚಾಖಿಲೈರ್ನಿತ್ಯಂಶ್ರಯತೇಚ ಪರಂ ಪದಮ್ ॥**
**ಶ್ರಯನ್ತೀಂ ಶ್ರೀಯಮಾಣಾಞ್ಚ ಶೃಣತೀಂ ಶೃಣ್ವತೀಮಪಿ ॥**

ಶ್ರೀ ಶಬ್ದದ ವ್ಯುತ್ಪತ್ತಿಯನ್ನು ಈ ಕಾರಿಕೆಯಲ್ಲಿ ವಿಧವಿಧವಾಗಿ ತೋರಿಸಿ ಶ್ರೀಯ ಗುಣಗಳ ಅನುಸಂಧಾನ ಮಾಡುತ್ತಾರೆ ಶಾಸ್ತ್ರಕಾರರು. ಶೃಣಾತಿ ನಿಖಿಲಾನ್ ದೋಷಾನ್ ಇತಿಶ್ರೀಃ=ಎಂದು ವ್ಯುತ್ಪತ್ತಿಯಾದರೆ, ಲಕ್ಷ್ಮ್ಯಾಸಹ ಹೃಷೀಕೇಶಃ=ಎಂದೂ, "ವೇರಿಮಾರಾದ ಪೂಮೇಲಿರುಪ್ಪಾಳ್ ವಿನೈತೀರ್ಕ್ಕುಮ್= ಪರಿಮಳವು-ಸುವಾಸನೆಯು ಬದಲಾಯಿಸದ, ಕಮಲಪುಷ್ಪದಲ್ಲಿರುವ ಲಕ್ಷ್ಮಿಯು ಉಪಾಯಕ್ಕೆ ವಿರೋಧವನ್ನುಂಟುಮಾಡುವ ವಿರೋಧರೂಪವಾದ ಕರ್ಮಗಳೆಲ್ಲ ವನ್ನೂ ಆಶ್ರಿತರಿಗೆ ಹೋಗಲಾಡಿಸುವವಳು ಎಂದೂ ಹೇಳಿರುವುದರಿಂದ ಅವಳನ್ನು ಆಶ್ರಯಿಸಿದರೆ ನಮ್ಮ ಪಾಪವೆಲ್ಲವೂ ನೀಗುತ್ತದೆ ಎಂದಾಯಿತು.

'ಶ್ರೀಣಾತಿಚ ಗುಣೈರ್ಜಗತ್' ಶ್ರೀಣಾತಿ–ಪರಿಪಕ್ವಂಕರೋತಿ' ಎಂಬ ನಿರುಕ್ತಿ ಯಿಂದ, ಶ್ರೀಞ್ ಪರಿಪಾಕ ಎಂಬಧಾತುವಿನಿಂದ ಉಂಟಾಗಿದೆ, 'ಶ್ರೀ' ಎಂಬುದು ತನ್ನ ಕಾರುಣ್ಯಾದಿಗುಣಗಳಿಂದ 'ನಿನ್‌ತಿರುವರುಳಮ್ ಪಙ್ಗಯತ್ತಾಳ್ ತಿರುವರುಳುಙ್ಗೊಣ್ಡುತನ್' ತಿರುವರುಳಂ=ನಿಮ್ಮ ಶ್ರೀಮತ್ಕೃಪೆಯನ್ನೂ, ಪಙ್ಗಯತ್ತಾಳ್ ತಿರುವರುಳಮ್=ತಾವರೆಯಲ್ಲಿ ವಾಸಮಾಡುವ ಲಕ್ಷ್ಮಿಯ ಶ್ರೀಮತ್ಕೃಪೆಯನ್ನೂ ಕೊಂಡು-ನಿಮ್ಮಿಬ್ಬರ ಕಾರುಣ್ಯವನ್ನೂ ಉಪಾಯವಾಗಿ ಅವಲಂಬಿಸಿ, ನಿನ್‌ಕೋಯಿಲ್=ನಿನ್ನ ದಿವ್ಯವಿಮಾನಾದಿಗಳಲ್ಲಿ, ಶೀತ್ತು=ಪ್ರದಕ್ಷಿಣೆ ಮಾಡಿ, ಇವೇ ಮೊದಲಾದ ಕೈಙ್ಕರ್ಯಗಳನ್ನು ಮಾಡಿ, ಎಂದು ಆಳ್ವಾರವರು ಹೇಳಿ ರುವ ರೀತಿಯಲ್ಲಿ ಆಶ್ರಿತರಿಗೆ ಕೈಙ್ಕರ್ಯ ಪರ್ಯನ್ತಗುಣಪರಿಪಾಕವನ್ನುಂಟುಮಾಡು ತ್ತದೆ. ಪರಮಪದದಲ್ಲಿ ಮಾಡಲ್ಪಡುವ ಕೈಂಕರ್ಯ ಪರ್ಯನ್ತವಾದ ವೈಭವವನ್ನುಂಟು ಮಾಡುತ್ತದೆ. ಅಂತಹ ಮಹಿಮೆಯುಳ್ಳದ್ದು ನಿನ್ನ ನಾಮ ಎಂದು ಅರ್ಥವಾಗುತ್ತದೆ.

ಶ್ರೀಯತೇಚಾಖಿಲೈರ್ನಿತ್ಯಂ=ಯಾವಾಗಲೂ ಎಲ್ಲರಿಂದಲೂ ಆಶ್ರಯಿಸಲ್ಪ ಡುತ್ತಾಳೆ. ಶ್ರಯತೇಚ=ಎಲ್ಲವನ್ನೂ ತಾನು ಆಶ್ರಯಿಸಿದ್ದಾಳೆ. ಪರಂಪದಂ ಶ್ರಯನ್ತೀಂ=ಪರಮಪದವನ್ನು ಆಶ್ರಯಿಸಿರುವವಳಾಗಿದ್ದಾಳೆ. ಶ್ರೀಯಮಾಣಾಞ್ಚ=ಕಾಂತಿಯಿಂದ, ವೈಭವದಿಂದ ಕೂಡಿದ್ದನ್ನಾಗಿ ಮಾಡುತ್ತಾಳೆ. ಶೃಣತೀಂ ಶೃಣ್ವತೀಮಪಿ=ಪಾಪವನ್ನು ನೀಗಿಸುತ್ತಾ ಪ್ರಾಣಿಗಳ ಕಷ್ಟಸುಖಗಳನ್ನು ಕಿವಿಗೊಟ್ಟು ಕೇಳುತ್ತಾಳೆ.

ಶೃಣೋತಿ=ಕೇಳುತ್ತಾಳೆ, ಶ್ರಾವಯತಿ=ಕೇಳುವಂತೆ ಮಾಡುತ್ತಾಳೆ, ಆದು ದರಿಂದ ಶ್ರೀ ಶಬ್ದವಾಚ್ಯವಾಗಿದ್ದಾಳೆ ಎಂದು ಅರ್ಥಮಾಡಿದ್ದರೆ, ಅಪರಾಧ ಮಾಡುವ ನಮ್ಮನ್ನು ಸರ್ವೇಶ್ವರನ ಪಾದಾರವಿಂದಗಳಲ್ಲಿ ತೋರಿಸಿ ಕಾಪಾಡ ಬೇಕು ಎಂದು ಹೇಳಿ ಆಶ್ರಿತರ ಆರ್ತಧ್ವನಿಯನ್ನು ಕೇಳಿಸಿ ಸರ್ವೇಶ್ವರನಿಗೆ ವಿಜ್ಞಾಪಿಸಿ ಆಶ್ರಿತರ ದುಃಖವನ್ನು ಕಡಿಮೆ ಮಾಡುತ್ತಾಳೆ. ಇದು ಪುರುಷಕಾರ ಕೃತ್ಯ.

'ಮತ್ಪದ ದ್ವಂದ್ವ ಮೇಕಂ ಯೋ ಪ್ರಪದ್ಯಂತೇ ಪರಾಯಣಮ್।
ಉದ್ಧರಿಷ್ಯಾಮ್ಯಹಂ ದೇವಿ ಸಂಸಾರಾತ್ಸ್ವಯಮೇವತಾನ್ ॥

ಎಲೌ ದೇವಿ ! ಮುಖ್ಯವಾದ ಆಶ್ರಯಸ್ಥಾನವಾದ, ನನ್ನ ಎರಡು ಕಾಲಿಗೂ ಬಿದ್ದು ಯಾರು ನನ್ನನ್ನು ಮರೆಹೋಗುವರೋ ಅವರನ್ನು ನಾನೇ ಈ ಸಂಸಾರದಿಂದ ಎತ್ತುತ್ತೇನೆ' 'ಆನೃಶಂಸ್ಯಂಪರೋ ಧರ್ಮಃ—ಕ್ರೂರವಾಗಿಲ್ಲದಿರುವಿಕೆ ಶ್ರೇಷ್ಠವಾದ ಧರ್ಮ' ಇವೇ ಮೊದಲಾದ ಮಾತುಗಳನ್ನು ಅವನಿಂದ ಕೇಳಿ ಒಳ್ಳೆಯ ಸಂದರ್ಭದಲ್ಲಿ ಅವನನ್ನು ಆಶ್ರಯಿಸುವಂತೆ ಮಾಡುತ್ತಾಳೆ.

ವೈಕುಂಠೇತು ಪರೇಲೋಕೇ ಶ್ರಿಯಾಸಾರ್ಧಂಜಗತ್ಪತಿಃ ।
ಆಸ್ತೇ ವಿಷ್ಣುರ ಚಿನ್ತ್ಯಾತ್ಮಾ ಭಕ್ತೈರ್ಭಾಗವತೈಃಸಹಃ ॥

ಶ್ರೇಷ್ಠವಾದ ವೈಕುಣ್ಠ ಲೋಕದಲ್ಲಿ ಯಾವನ ಸ್ವರೂಪವನ್ನು ನಾವು ಯೋಚಿಸಲೂ ಆಗದೋ, ಜಗತ್ತಿಗೆಲ್ಲಾ ಒಡೆಯನಾದ ಅಂತಹ ವಿಷ್ಣುವು ಭಕ್ತರಾದ ಅನಂತ ಗರುಡ ಮೊದಲಾದ ನಿತ್ಯಸೂರಿಗಳೊಡನೆಯೂ ಉಪಾಯಾನುಷ್ಠಾನಮಾಡಿ ಮೋಕ್ಷವನ್ನು ಪಡೆದಿರುವ ಭಾಗವತರೊಡನೆಯೂ ಕೂಡಿದವನಾಗಿ ಲಕ್ಷ್ಮಿಯೊಡನೆ ಕುಳಿತಿದ್ದಾನೆ. ಇವೇ ಮೊದಲಾದವೂ, ದ್ವಯ ಮಂತ್ರದ ಉತ್ತರ ಭಾಗವೂ ಕೂಡ ಇದಕ್ಕೆ ಪ್ರಮಾಣವಾಗಿವೆ ಎಂದು ತಿಳಿಯಬೇಕು.

ಹೀಗೆ ಜ್ಞಾನ ಆನಂದ ಮುಂತಾದ ಗುಣಗಳು ಇವರಿಬ್ಬರಲ್ಲಿಯೂ ಸಮವಾಗಿದೆ. ಜಗಜ್ಜನಕತ್ವ, ಶೇಷಿತ್ವ, ಶರಣ್ಯತ್ವ, ಪ್ರಾಪ್ಯತ್ವ ಇವೆಲ್ಲಾ ಇಬ್ಬರಿಗೂ ಉಂಟು. ಆದುದರಿಂದ ಸಾಮ್ಯವನ್ನು ಹೇಳುವ ಮಾತುಗಳಿಗೆ ನಿರ್ವಾಹವು—ಉಪಪತ್ತಿಯು ಸ್ಪಷ್ಟವಾಗಿದೆ. ಏಕತ್ವವಾದಗಳೂ ಕೂಡ ಮಿಥುನ ರೂಪವಾಗಿ ಬಹಳ ಸಮವಾಗಿರೋಣದರಿಂದ ನಿರ್ವಾಹ ಮಾಡಬಹುದಾಗಿದೆ.

"ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಮ್—ಸಮಾನವಾದ ಸ್ವಭಾವ, ವಯಸ್ಸು ನಡತೆ ಶ್ರೇಷ್ಠವಾದ ಹುಟ್ಟು" ಇವೆಲ್ಲಾ ಇವರಿಬ್ಬರಿಗೂ ಎರಡು ರೂಪದಲ್ಲಿದ್ದರೂ ಸಾಮ್ಯವಿದೆ.

ಇವರಿಬ್ಬರಲ್ಲಿ ಸ್ತ್ರೀರೂಪ ಒಂದು, ಮತ್ತೊಂದು ಗಂಡುರೂಪ, ಇವಳು ಶೇಷಳು, ಅವನು ಶೇಷಿ, ಇವಳು ಅವನ ಶರೀರ, ಅವನು ಶರೀರಿ. ಈ ರೀತಿ ಇವಳು ಬೇರೆ ಅವನು ಬೇರೆ ಎಂಬ ಭೇದಕ ಧರ್ಮಗಳು ಇರುವಾಗ ಹೇಗೆ ಅತ್ಯನ್ತ ಸಾಮ್ಯ—ಸಮವಾಗಿರುವಿಕೆ ? ಅತ್ಯನ್ತಸಾಮ್ಯವಿದ್ದರೂ ಇಬ್ಬರೂ ಒಂದೇ ಎಂಬ ಐಕ್ಯವನ್ನು ಹೇಳುವುದೂ ಹೇಗೆ ಕೂಡುತ್ತದೆ ? ಧರ್ಮಿಗಳು ಬೇರೆಬೇರೆಯಾಗಿ

ದ್ದಾರಲ್ಲ ಎಂದರೆ ಪ್ರಕಾರವು (ಹೋಲಿಕೆಯು) ಒಂದಾಗಿದೆ. . ಆದುದರಿಂದ ಐಕ್ಯವೆನ್ನುವುದು. ಎಲ್ಲಾ ಪ್ರಪಂಚಕ್ಕೂ ಇವನೂ ಶೇಷಿ ಅವಳೂ ಶೇಷಿ. ಸರ್ವ ಶೇಷಿತ್ವರೂಪವಾದ ಒಂದೇ ಧರ್ಮಕ್ಕೆ ಆಶ್ರಯವಾಗಿರುವಿಕೆಯಿಂದ ಇಬ್ಬರೂ ಒಂದು ಎನ್ನುವುದು.

ಮಹೇನ್ದ್ರನು ದೇವತೆಯಾಗಿರುವ ಯಾಗದಲ್ಲಿ ಕೇವಲ ಇಂದ್ರನಿಗೆ ಮಾತ್ರ ದೇವತೆಯಾಗಿರುವಿಕೆ ಇಲ್ಲ ; ಮಹತ್ವದಿಂದ ಕೂಡಿರುವ ಇಂದ್ರನಿಗೇ ಅದು. ಅಗ್ನೀಷೋಮೀಯ ಯಾಗದಲ್ಲಿ ಕೇವಲ ಅಗ್ನಿಗೆ ಅಲ್ಲ ಅಥವಾ ಕೇವಲ ಸೋಮನಿಗಲ್ಲ— ದೇವತಾತ್ವ. ಮತ್ತೇನೆಂದರೆ ಪರಸ್ಪರ ಕೂಡಿರುವವರಿಗೆ. ಹಾಗೆಯೇ ಇವರಿಬ್ಬರಿಗೂ.

"ಅಸ್ಯಾ ಮಮಚ ಶೇಷಂಹಿ ವಿಭೂತಿ ರುಭಯಾತ್ಮಿಕಾ — ಈ ಐಶ್ವರ್ಯವು— ಉಭಯ ವಿಭೂತಿಯು ಕೇವಲ ನನಗೆ ಮಾತ್ರ ಸೇರಿದ್ದಲ್ಲ; ಅವಳಿಗೂ ನನಿಗೂ ಇಬ್ಬರಿಗೂ ಸೇರಿದ್ದು ಎಂದು ಪರಮಾತ್ಮನೇ ಹೇಳಿದ್ದಾನೆ." "ಮಕಾರಸ್ತುತಯೋರ್ದಾಸಃ — ಮಕಾರವಾಚ್ಯನಾದ ಜೀವನು ಅವರಿಬ್ಬರಿಗೂ ದಾಸನು" ಇವೇ ಮೊದಲಾದ ವಾಕ್ಯಗಳನ್ನು ಪರ್ಯಾಲೋಚನೆ ಮಾಡಿದರೆ, ಇವರಿಬ್ಬರಿಗೂ ವ್ಯಾಸಕ್ತವಾದ— ಇವರಿಬ್ಬರಲ್ಲಿಯೂ ವಿಭಾಗ ಮಾಡಿಕೊಂಡಿರುವ ದೇವತಾತ್ವವು ತೋರುವುದರಿಂದ ಅಗ್ನೀಷೋಮೀಯನ್ಯಾಯ. ದ್ವಯವನ್ನು ಪರ್ಯಾಲೋಚನೆ ಮಾಡಿದರೆ ಲಕ್ಷ್ಮೀ ವಿಶಿಷ್ಟನಾದವನಿಗೆ ದೇವತಾತ್ವವು ತೋರುವುದರಿಂದ ಮಹೇನ್ದ್ರನ್ಯಾಯ. ಪ್ರಮಾಣಾನುಸಾರವಾಗಿ ಲಕ್ಷ್ಮಿಯೊಡನೆ ಅವನು ಕೂಡಿರುವುದರಿಂದ ಎಲ್ಲಾ ಆತ್ಮಗಳೆಂಬ ಹವಿಸ್ಸಿಗೆ ಉದ್ದೇಶ್ಯವಾದ ಒಂದೇ ದೇವತೆ ಲಕ್ಷ್ಮೀವಿಶಿಷ್ಟನಾದ ನಾರಾಯಣ, ಎಂಬುದಾಗಿಯಾದರೂ ನಿರ್ವಾಹಮಾಡಲು ತಕ್ಕದ್ದಾಗಿದೆ.

ಕಾರ್ಯಕ್ಕೆ ಉಪಯೋಗವಾದ ಅಪೃಥಕ್‌ಸಿದ್ಧ ವಿಶೇಷಣಕ್ಕೆ ಶಕ್ತಿಶಬ್ದದಿಂದ ಹೇಳಲ್ಪಡುವಿಕೆ. ಇವಳನ್ನು ಬಿಟ್ಟು ಅವನಿಲ್ಲ. ಶ್ರೀಮನ್ನಾರಾಯಣನೇ ನಾರಾಯಣನು ಆಂದಾಗ ಲಕ್ಷ್ಮಿಗೆ ಕಾರ್ಯೋಪಯುಕ್ತವಾದ ಅಪೃಥಕ್ಸಿದ್ಧ ವಿಶೇಷಣವಾಗಿರುವಿಕೆ ಇರುವುದರಿಂದ ಶಕ್ತಿಶಬ್ದ ಮುಖ್ಯಾರ್ಥವು ಕೂಡುತ್ತದೆ.

ಅವನ ಪತ್ನಿಯಾಗಿರುವಿಕೆ ರೂಪದಿಂದ ವಿಶೇಷಣವಾಗಿದ್ದಾಳೆ, ಅಥವಾ ಸೃಷ್ಟ್ಯಾದಿ ವ್ಯಾಪಾರಗಳು ಇವರಿಬ್ಬರಿಗೂ ಸಮಾನವಾದ ಲೀಲೆಯಾಗಿದೆ. ಆ ಸೃಷ್ಟ್ಯಾದಿಗಳಿಗೆ ಇವಳು ಪ್ರೇರಕಳು. "ಯಸ್ಯಾ ವೀಕ್ಷ್ಯಮುಖಂತದಿಙ್ಗಿತಪರಾಧೀನೋ ವಿಧತ್ತೇಽಖಿಲಮ್—ಯಾವಳ ಮುಖವನ್ನು ನೋಡಿ ಅವಳ ಒಳ ಅಭಿಪ್ರಾಯವನ್ನು ಅರಿತು ಅದಕ್ಕೆ ಅಧೀನವಾಗಿ ಎಲ್ಲವನ್ನೂ ಸೃಷ್ಟಿಸುತ್ತಾನೋ ಪರಮಾತ್ಮಾ" ಅಂತಹವಳಾಗಿದ್ದೀಯೇ ನೀನು ಎಂದು ಕೂರೇಶರು ಸ್ತೋತ್ರ ಮಾಡಿ

ದ್ದಾರೆ. ಆ ಪ್ರೇರಣೆಯು ಸೃಷ್ಟಿಗೆ ಸಹಕಾರಿ ಕಾರಣವಾಯಿತು. ಆದುದರಿಂದ ಇವಳು ಶಕ್ತಿಶಬ್ದದಿಂದ ಹೇಳಲ್ಪಡುತ್ತಾಳೆ.

ಎಲ್ಲೆಡೆಯೂ ಹೆಣ್ಣುಗಂಡು ರೂಪವಾದ ದ್ವಂದ್ವದಲ್ಲಿ—ಹೆಂಗಸಿನಲ್ಲಿ 'ಶಕ್ತಿ' ಶಬ್ದ ಪ್ರಯೋಗವನ್ನು ಕಾಣುತ್ತೇವೆ. 'ಶಿವಃ ಶಕ್ತ್ಯಾಯುಕ್ತೋಯದಿ ಭವತಿ'—ಇವೇ ಮೊದಲಾದ ಪ್ರಯೋಗಗಳಲ್ಲಿ ಪಾರ್ವತಿಯಲ್ಲಿ ಶಕ್ತಿವಾದವನ್ನು—ಶಕ್ತಿ ಶಬ್ದದಿಂದ ಹೇಳುವಿಕೆಯನ್ನು ಕಾಣುತ್ತೇವೆ.

'ಶಕ್ತಿಚಕ್ರಸ್ಯ ನಾಯಿಕಾಮ್—ಸ್ತ್ರೀ ಸಮೂಹಕ್ಕೆ ಒಡತಿಯನ್ನು' ಎಂಬ ಈ ಜಾಗದಲ್ಲಿ ಶಕ್ತಿಶಬ್ದವು ಹೆಂಗಸರಲ್ಲಿ ಪ್ರಯೋಗಿಸಲ್ಪಟ್ಟಿದೆ.

ಲಕ್ಷ್ಮಿಯು ಈಶ್ವರನಿಂದ ಬೇರೆಯಾದವಳಾದರೆ ಅವಳ ಶರೀರವೂ ನಿತ್ಯವಾದದ್ದಾದರೆ ಭಗವಚ್ಛಾಸ್ತ್ರದಲ್ಲಿ ಅವಳು ಭಗವಂತನ ಪರಿಣಾಮ ಸ್ವರೂಪಳು ಎಂದು ಹೇಳಿದೆಯಲ್ಲಾ ಅದರ ಗತಿಯೇನೆಂದರೆ ವ್ಯೂಹದಂತೆ ಅವತಾರವೇ ಮೊದಲಾದ ವಿಷಯಗಳವು.

**ರಾಘವತ್ವೇಽಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ ।**

ಅವನು ರಾಮನಾಗಿ ಹುಟ್ಟಿದಾಗ ಇವಳು ಸೀತೆಯಾಗಿ ಜನಿಸಿದಳು ; ಅವನು ಕೃಷ್ಣನಾಗಿ ಜನಿಸಿದಾಗ ಇವಳು ರುಕ್ಮಿಣಿಯಾಗಿ ಹುಟ್ಟಿದಳು. ಇವೇ ಮೊದಲಾದ ವಾಕ್ಯಗಳಿಂದ ಅರಿಯಲ್ಪಡುವ ಸೀತಾದಿ ಅವತಾರವಿಷಯಗಳವು. ಎಲ್ಲವೂ ಭಗವದಾತ್ಮಕವಾಗಿರೋಣವರಿಂದ ಲಕ್ಷ್ಮ್ಯವತಾರಕ್ಕೆ ಲಕ್ಷ್ಮಿಯ ಇಚ್ಛೆಯಿಂದಲೋ ಅಥವಾ ಭಗವದಿಚ್ಛೆಯಿಂದಲೋ ಸೀತೆ, ರುಕ್ಮಿಣಿ ಇತ್ಯಾದಿ ಕಾರ್ಯದಶೆಯನ್ನು ಹೊಂದಿದ್ದರೂ ಕೂಡ ಲಕ್ಷ್ಮಿಗೂ ಭಗವದಾತ್ಮಕತೆ ಇರುವುದರಿಂದ ಭಗವದವಸ್ಥಾಭೇದವೇ ಆಯಿತು. ಇಚ್ಛೆಯಾದರೋ, ವಿಷಯದ ಪ್ರೀತಿಯಿಂದ ಹೊಂದಲ್ಪಡತಕ್ಕದ್ದು. ಹೀಗೆ ಶ್ರೀಯೂ ಕೂಡ ಪ್ರಣಯದಿಂದ ಪ್ರೀತಿಯಿಂದ ಹೊಂದಲು ತಕ್ಕವಳಾಗಿರುವುದರಿಂದ ಇಚ್ಛಾ, ಸ್ವಯಂಪ್ರಕಾಶವಾಗಿರುವುದರಿಂದ ಸಂವಿತ್, ಸ್ವರೂಪನಿರೂಪಕವಾಗಿರುವುದರಿಂದ ಅಹನ್ತೆ ಎಂಬುದಾಗಿ ಹೇಳಲ್ಪಡುತ್ತಾಳೆ.

ಇಲ್ಲಿ ಹೇಳಬೇಕಾದ ವಿಷಯಗಳೆಲ್ಲವನ್ನೂ ರಾಮಮಿಶ್ರರು (ಶೋಮಾಶಿಯಾಣ್ಡಾನ್) ಷಡರ್ಥಸಂಕ್ಷೇಪದಲ್ಲಿ ಹೇಳಿದ್ದಾರೆ. ಅಲ್ಲಿರುವ ಗ್ರಂಥಭಾಗ ಇದು—"ಸಮಾನನಯಾತ್ ಮಹಿಷ್ಯಾದಿ ಸಿದ್ಧಿಶ್ಚ." ಇವರಿಬ್ಬರೂ ಒಂದೇ ಸ್ಥಾನದಲ್ಲಿರುವುದರಿಂದ—ಲಕ್ಷ್ಮಿಗೆ ಸ್ಥಾನಸಾಮ್ಯ ಇರುವುದರಿಂದ ಅವಳು ನಾರಾಯಣನ ಪಟ್ಟಮಹಿಷಿಯಾಗಿದ್ದಾಳೆ ಎಂಬುದು ಸಿದ್ಧಿಸುತ್ತದೆ. ಆ ಗ್ರಂಥದಲ್ಲಿ ದಿವ್ಯಸ್ಥಾನ

ವನ್ನು ಮೊದಲು ಪ್ರಸ್ತಾಪಿಸಿ ಅನಂತರ ಇವಳ ವಿಷಯವು ಪ್ರಸ್ತಾಪವಾಡ ಲ್ಪಟ್ಟಿದೆ. ಇಲ್ಲಿ ಒಂದು ಸಂದೇಹ. ಇವಳಿಗೆ ಶೇಷಿತ್ವವಿಶಿಷ್ಟವಾದ ಪತ್ನೀತ್ವವು ಸಿದ್ಧಿಸುವುದಿಲ್ಲ. ಏತಕ್ಕೆಂದರೆ ಭಗವಂತನಿಗೆ ಶೇಷಭೂತವಾದ ಪ್ರಪಂಚಕ್ಕೆ ಭಗವಂತ ನಿಗಿಂತ ಬೇರೆಯಾದ ಲಕ್ಷ್ಮಿಗೆ ಶೇಷತ್ವವು ಕೂಡುವುದಿಲ್ಲ. ಆದುದರಿಂದ '**ಅಸ್ಯೇಶಾನಾಜಗತೋ ವಿಷ್ಣುಪತ್ನೀ**=ಇವಳು ಈ ಜಗತ್ತಿಗೆ ಒಡತಿ—ಪ್ರಪಂಚವು ಇವಳಿಗೆ ಶೇಷಭೂತವಾದದ್ದು' ಎಂದು ಹೇಳುವುದು ಹೊಂದುವುದಿಲ್ಲ. (ಆದುದರಿಂದಲೇ ಅನುವಾದವೂ ಅಲ್ಲ) ಮತ್ತೂ ಒಂದು ಆಕ್ಷೇಪಣೆ—ಮಹಿಷಿಯಾಗಿರುವಿಕೆ ಇವೇ ಮುಂತಾದವು ಪರವಸ್ತುವಿನ ಶರೀರ. ಹಾಗಿಲ್ಲದಿದ್ದರೆ ಏಕಮೇವ—ಒಂದೇ ತತ್ತ್ವವೆಂದು ಹೇಳುವುದು ಹೊಂದುವುದಿಲ್ಲ; ಎಂದರೆ—

ಈಶ್ವರನ ಧರ್ಮಭೂತ ಜ್ಞಾನದಂತೆ ಲಕ್ಷ್ಮಿಗೆ ಈಶ್ವರ ಶರೀರವಾಗಿರುವಿಕೆ ಇಲ್ಲದಿದ್ದರೂ ಏಕಮೇವ—ಒಂದೇ ತತ್ತ್ವವೆಂದು ಹೇಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಆನಂದಾದಿಗಳು ಬೇರೆಯಾಗಿ ಇಲ್ಲದೆ ಶರೀರದಲ್ಲಿಯೇ ಒಂದಾಗಿದೆ. ಕೇವಲ ಆತ್ಮಸ್ವರೂಪದಿಂದ ಧರಿಸಲು ಯೋಗ್ಯವಾದ ಆನಂದಾದಿ ಗಳಿಗೆ ಯಾವ ರೀತಿಯಾದ ಅಪೃಥಕ್ ಸಿದ್ಧತ್ವವೋ ಹಾಗೆ ಆ ಅಪೃಥಕ್ ಸಿದ್ಧತ್ವವು ಸಂಕಲ್ಪದಿಂದ ಧಾರ್ಯವಾದ—ಧರಿಸಲ್ಪಡುವ ಶರೀರಕ್ಕೆ ಇಲ್ಲ. ಆದುದರಿಂದ ಪರಸ್ಪರ ಶೇಷಶೇಷಿಭಾವವಿಲ್ಲ. ಹೀಗೆಂದರೆ ಅದು ಸರಿಯಲ್ಲ. ಶಾಸ್ತ್ರದಲ್ಲಿ ಅದು ಉಂಟೆಂದು ನಿರ್ಧರಿಸಲ್ಪಟ್ಟಿದೆ.

ಹಾಗಾದರೆ '**ಗುಣಾನಾಞ್ಚ ಪರಾರ್ಥತ್ವಾದ ಸಮ್ಬನ್ಧಃ ಸಮತ್ವಾತ್ಸ್ಯಾತ್**' ಎಂಬ ನ್ಯಾಯದಿಂದ ಭಗವಂತನಿಗೆ ಶೇಷಭೂತವಾದ ಪ್ರಪಂಚಕ್ಕೆ ಭಗವಂತನಿಗೆ ಶೇಷಭೂತಳಾದ ಲಕ್ಷ್ಮಿಗೆ ಶೇಷವಾಗುವಿಕೆ ಇಲ್ಲ. ಎಂದರೆ ಇದು ಸರಿಯಲ್ಲ— ಗಂಡನಿಗೆ ಸೇರಿದ ದ್ರವ್ಯವು ಹೆಂಡತಿಗೂ ಉಂಟು. ಇದು ಲೋಕದಲ್ಲಿ ಸಿದ್ಧ ವಾಗಿದೆ—ಕಾಣುತ್ತೇವೆ. ಆದುದರಿಂದ **ಉಭಯಾಧಿಷ್ಠಾನಞ್ಚೈಕಂ ಶೇಷಿತ್ವಮ್**= ಇಬ್ಬರಲ್ಲಿಯೂ ಈ ಒಂದೇ ಶೇಷಿತ್ವವು ಅಧಿಷ್ಠಿತವಾಗಿದೆ—ಕುಳಿತಿದೆ; ಆಶ್ರಯಿ ಸಿದೆ. **ಅವಿಭಾಗಸ್ಮೃತೇಃ**=ಸ್ಮೃತಿಯೂ ಈ ಶೇಷಿತ್ವವನ್ನು ಪಾಲುಮಾಡದೆ ಒಟ್ಟಾಗಿಯೇ ಇದೆ ಎನ್ನುತ್ತದೆ.

"**ಧರ್ಮೇಚಾರ್ಥೇಚ ನಾತಿಚರಿತವ್ಯಾ ಪಾಣಿಗ್ರಹಣಾದ್ಧಿ ಸಹತ್ವಂ ಕರ್ಮಸು ತಥಾಪುಣ್ಯಫಲೇಷು ದ್ರವ್ಯಪರಿಗ್ರಹೇಚ ॥**

ಧರ್ಮ ಕಾರ್ಯದಲ್ಲೂ, ಅರ್ಥದಲ್ಲೂ—ಹಣದ ಅನುಭವದಲ್ಲೂ ಇವಳು ಮೀರತಕ್ಕವಳಲ್ಲ, ಪಾಣಿಗ್ರಹಣವಾದುದರಿಂದಲೇ ಕರ್ಮಗಳಲ್ಲಿ ಸಹತ್ವ—ಕೂಡಿರು ವಿಕೆ ಉಂಟಾಯಿತು. ಹಾಗೆಯೇ ಪುಣ್ಯಫಲಾನುಭವದಲ್ಲೂ. ದ್ರವ್ಯವನ್ನು

ಸ್ವೀಕರಿಸುವಿಕೆಯಲ್ಲೂ ಬಾಧ್ಯತೆಉಳ್ಳವಳಾದಳು. ಇದು ಕೇವಲ ಉಪಲಕ್ಷಣ. [1]"ಪತ್ನೀಹಿಪಾರೀಣ ಹ್ಯಸ್ಯೇಶೆ" ಎಂಬ ಶ್ರುತಿಯಿಂದ ಹೆಂಗಸಿಗೂ ಕೂಡ ಮದುವೆ ಯಿಂದ ಗಂಡನ ಯಾಜಮಾನ್ಯವು ಉಂಟೆಂದು ಸೂಚಿಸಲ್ಪಟ್ಟಿದೆ. ಹಾಗಾದರೆ—

'ಭಾರ್ಯಾಪುತ್ರಶ್ಚದಾಸಶ್ಚತ್ರಯಏವಾಧನಾಃಸ್ಮೃತಾಃ ।

ಹೆಂಡತಿ, ಮಗ, ಸೇವಕ ಈ ಮೂವರೂ ಧನವಿಲ್ಲದವರು—ಹಣಕ್ಕೆ ಯಜ ಮಾನರಲ್ಲ' ಎಂದು ಸ್ಮರಿಸಲ್ಪಟ್ಟಿದೆಯಲ್ಲಾ, ಆದುದರಿಂದ ಅದಕ್ಕೆ ವಿರೋಧವಾಯಿ ತಲ್ಲಾ ಎಂದರೆ ಬಹಳ ಶ್ರುತಿ ಸ್ಮೃತಿ ಇವಕ್ಕೆ ವಿರುದ್ಧವಾಗಿರುವುದರಿಂದ ಆ ವಚನಕ್ಕೆ 'ಅಧನ' ಎಂದರೆ ಸ್ವಾತಂತ್ರ್ಯವಿಲ್ಲದವರು ಎಂದು ಅರ್ಥ ಹೇಳಬೇಕು. ಹಾಗಿಲ್ಲ ದಿದ್ದರೆ ಮೀಮಾಂಸೆಯಲ್ಲಿ "ಲಿಂಗವಿಶೇಷ ನಿರ್ದೇಶಾತ್ಪುಂಯುಕ್ತಮೈತಿಶಾಯನಃ' ಎಂದು ಸ್ತ್ರೀಗೂ ಯಾಗಾಧಿಕಾರವನ್ನು ಹೇಳುವ ಅಧಿಕರಣಕ್ಕೆ ವಿರೋಧವಾಗುತ್ತದೆ. ನೀತಿಯನ್ನರಿತವರೂ ಹೀಗೆ ಹೇಳಿದ್ದಾರೆ.

ಅನ್ಯತರಾನಿಚ್ಛಾಯಾಂ ತ್ಯಾಗ ಏವ ನ ಸಂವರ್ತೇತ—ಈ ದಂಪತಿಗಳ ಲ್ಲೊಬ್ಬರು ಅಪೇಕ್ಷಿಸದೆ ಇದ್ದರೂ [2]ತ್ಯಾಗವೇ ಉಂಟಾಗುವುದಿಲ್ಲ ಎಂದು.

ಆರನೆಯ ಅಧಿಕಾರ ಲಕ್ಷಣದಲ್ಲಿ ದಮ್ಪತಿಯು—ಗಂಡ ಹೆಂಡರು ಬೇರೆ ಬೇರೆ ಯಾಗ ಮಾಡಬೇಕೆ ? ಅಥವಾ ಒಟ್ಟಾಗೆಯೋ ? ಎಂದು ವಿಚಾರ ಮಾಡಿ 'ಯಜೇತ' ಎಂಬ ಆಖ್ಯಾತ ಪ್ರತ್ಯಯದಲ್ಲಿರುವ ಸಂಖ್ಯೆಯು ಏಕವಚನ. ಅದಕ್ಕೆ ಗುಣಭೂತ ವಾದ ಉಪಾದೇಯಕ್ಕೆ ಸೇರಿದ್ದು ಎಂದು ಅಪೇಕ್ಷಿಸಲ್ಪಟ್ಟಿರುವಿಕೆ ಇರುವುದರಿಂದ ಒಬ್ಬೊಬ್ಬರೂ ಮಾಡಬೇಕು ಎಂದು ಪ್ರಾಪ್ತವಾದರೆ ಯಜ್ಯರ್ಥವು ತ್ಯಾಗಾತ್ಮಕ ವಾದದ್ದು. ಆ ತ್ಯಾಗವೂ ತನ್ನ ದ್ರವ್ಯಕ್ಕೆ ಔದಾಸೀನ್ಯವನ್ನು ಹೇಳತಕ್ಕದ್ದು. ಉದಾಸೀನವಾಗಿರಬೇಕೆಂಬ ತಿಳುವಳಿಕೆಯು ಪತ್ನಿಯ ಅನುಮತಿಯಿಂದ ಸಂಪಾ ದಿಸಲ್ಪಡತಕ್ಕದ್ದು. ಹಾಗಿಲ್ಲದಿದ್ದರೆ, ದಂಪತಿಗಳಿಗೆ ಭಾಗವಿಲ್ಲದೆ ಇರುವುದರಿಂದ ಒಂದೇ ಆಸ್ತಿ ಅವರಿಬ್ಬರಿಗೂ ಆದುದರಿಂದ ಸ್ವಾಮ್ಯ ಇಬ್ಬರಿಗೂ ಸಮಾನವಾಗಿದೆ. ಪತ್ನಿಯ ಸ್ವಾಮ್ಯವು ಹೋಗದಿದ್ದರೆ ಗಂಡನ ಸ್ವಾಮ್ಯವೂ ಹೋಗುವುದಿಲ್ಲ. ಆದು ದರಿಂದ, ಔದಾಸೀನ್ಯವನ್ನು ಬೋಧಿಸುವ ಸ್ವರೂಪವುಳ್ಳ ತ್ಯಾಗವೇ ಉಂಟಾಗುವು

1. ತೈ. ಸಂ. ೬. ೨. ೧.

2. ಕೃಚ್ಛ್ರಾಚರಣ ದಾನ ಮುಂತಾದವುಗಳನ್ನು ಮಾಡುವಾಗ ಧರ್ಮಪತ್ನಿಯಿಂದ ನೀರನ್ನು ಹಾಕಿಸಿಕೊಂಡು ಧಾರೆಯೆರೆಯುವುದು.

ದಿಲ್ಲ. ಆದುದರಿಂದ ತ್ಯಾಗದ ಸ್ವರೂಪ ಸಿದ್ಧಿಗಾಗಿ ಪತ್ನಿಯ ಅನುಮತಿಯು ಅಪೇಕ್ಷಿ ಬೇಕಾಯಿತು. ಇಲ್ಲಿ ಅನುಮತಿಯೂ ಕೂಡ ತ್ಯಾಗ (ದಾನ) ಮಾಡುವವನಿಗೆ ಪ್ರತಿ ಕೂಲವಾಗಿ ನಡೆಯದೇ ಇರುವುದು—ತಡೆಯದೇ ಇರುವುದು. ಅಥವಾ ತ್ಯಾಗ ಮಾಡುವವನಿಗೆ ಅನುಗುಣವಾಗಿ ನಡೆದುಕೊಳ್ಳುವಿಕೆ. ಆದುದರಿಂದ ಯಾಜಮಾನ ನಿಗೆ ಪತ್ನಿಯನ್ನು ಅಪೇಕ್ಷಿಸದೆ ಪ್ರಯೋಗವು (ಯಾಗ ಮಾಡುವಿಕೆಯು) ಉಂಟಾ ಗದೇ ಇರುವುದರಿಂದ ದಂಪತಿಗಳಿಗೆ ಒಟ್ಟಾಗಿಯೇ ಪ್ರಯೋಗ ಅಂದರೆ ಇಬ್ಬರೂ ಸೇರಿಯೇ ಮಾಡಬೇಕು. ಪ್ರತ್ಯೇಕವಲ್ಲ. ದಂಪತಿಗಳಿಗೆ ವಿಭಾಗಮಾಡಲ್ಪಟ್ಟ ದ್ರವ್ಯದ ಇರುವಿಕೆಯಾದರೆ ತ್ಯಾಗವು ನೆರವೇರುವುದಿಲ್ಲ, 'ನಹ್ಯನಿರ್ವೃತ್ತಿಃ ಪೃಥಕ್ತ್ವೇ= ತ್ಯಾಗಕ್ಕೇ ಅನಿರ್ವೃತ್ತಿ ವಚನವು ಹೇಗೆ ಕೂಡುತ್ತದೆ? ಎಂದು ಅಭಿಪ್ರಾಯ. ಈ ರಾಮಮಿಶ್ರರ ಮಾತಿನಿಂದ ದಿವ್ಯ ದಂಪತಿಗಳಿಗೆ ಜಗತ್ತು ಶೇಷವಾಗಿರುವಿಕೆಯೇ ಸ್ವಾರಸ್ಯವಾದದ್ದು ಎಂದು ಉಪಪಾದನೆ ಮಾಡಲ್ಪಟ್ಟಿತು.

ಇದೇ ಅರ್ಥವನ್ನು **ಆಖ್ಯಾತೋಪಾತ್ತ ಸಂಖ್ಯಾಯಾಃ ಗುಣಭೂತೋಪಾ ದೇಯ ಕರ್ತೃಗಾಮಿತ್ವೇನ ವಿವಕ್ಷಿತತ್ವಾತ್ ಏಕೈಕಶಃಪ್ರಯೋಗೇ ಪ್ರಾಪ್ತೇ ಸಹೈವ ಯಜೇಯಾತಾಮ್. ತಥಾ ಹಿ ಕರ್ಮ ಸಮಗ್ರಂ ಭವತೀತಿ ಸಿದ್ಧಾಂತಿತಮ್,** ಎಂದು ಸಿದ್ಧೋಪಾಯ ಶೋಧನಾಧಿಕಾರದಸಾರವಿವರಣೀ ವ್ಯಾಖ್ಯೆಯಲ್ಲಿ ಹೇಳಿದೆ.

ಭಗವಂತನಿಗೆ ಶೇಷಭೂತವಾಗಿದೆ ಈ ಪ್ರಪಂಚ. ಅದಕ್ಕೆ ಅವನಿಗೆ ಶೇಷ ಭೂತಳಾದ ಲಕ್ಷ್ಮಿಯನ್ನು ಕುರಿತೂ ಶೇಷತ್ವವು ಉಪಪನ್ನವಾಗುತ್ತದೆ. ಯಾಗದಲ್ಲಿ 'ವ್ರೀಹೀನ್ಪ್ರೋಕ್ಷತಿ-ಯಾಗಕ್ಕೆ ಬೇಕಾದ ವ್ರೀಹಿಯನ್ನು ಪ್ರೋಕ್ಷಿಸಬೇಕು. ಪ್ರೋಕ್ಷಣವಾಗದಿರುವ ಬತ್ತ ಮುಂತಾದವು ಯಾಗಕ್ಕೆ ಉಪಯೋಗವಿಲ್ಲ ಎಂದು ಹೇಳಿದೆ. ಹೀಗೆ ಯಾಗದಲ್ಲಿ ಉಪಯೋಗಿಸಬೇಕಾದ ಪದಾರ್ಥಗಳಿಗೆ ಹೇಳಿರುವ ಪ್ರೋಕ್ಷಣಮುಂತಾದವು ಪ್ರಕರಣದಿಂದ ತಿಳಿಯಲ್ಪಟ್ಟಿದೆ. ಈ ಪ್ರೋಕ್ಷಣಾದಿ ಗಳು ಯಾಗಕ್ಕೆ ಅಂಗವಾಗಿದ್ದರೂ ಶ್ರುತ್ಯಾದಿವಶದಿಂದ ಯಾಗಕ್ಕೆಬೇಕಾದ ವ್ರೀಹ್ಯಾದಿಗಳ ಪ್ರಯೋಜನಕ್ಕಾಗಿಯೂ ಆದವು. ಅವುಗಳಿಗೂ ಅಂಗವಾದವು. ಹಾಗೆ ಭಗವಂತನಿಗೆ ಶೇಷಭೂತವಾದ ಪ್ರಪಂಚ, ಭಗವಂತನಿಗೆ ಶೇಷಭೂತಳಾದ ಲಕ್ಷ್ಮಿಗೂ ಶೇಷಭೂತವಾಯಿತು. ಇದನ್ನೇ ರಾಮಮಿಶ್ರರು **'ಶೇಷತ್ವಮನ್ಯ ತ್ರಾಪಿ, ಅವಿರೋಧಾತ್'** ಎಂದು ಹೇಳಿದ್ದಾರೆ.

**ಅಕಾರಾರ್ಥೋ ವಿಷ್ಣುರ್ಜಗದುದಯರಕ್ಷಾ ಪ್ರಲಯಕೃತ್**
**ಮಕಾರಾರ್ಥೋಜೀವ ಸ್ತದುಪಕರಣಂ ವೈಷ್ಣವಮಿದಮ್ ।**
**ಉಕಾರೋಽನನ್ಯಾರ್ಹಂ ನಿಯಮಯತಿ ಸಂಬನ್ಧಮನಯೋ**
**ಸ್ತ್ರಯೀಸಾರಸ್ತ್ರ್ಯಾತ್ಮಾ ಪ್ರಣವ ಇಮಮರ್ಥಂ ಸಮದಿಶತ್ ॥**

ಅಕಾರ ಉಕಾರ ಮಕಾರ ಈ ಮೂರು ಅಕ್ಷರಗಳು ಸೇರಿ 'ಓಮ್' ಎಂಬ ಪ್ರಣವವಾಗಿದೆ. ಪ್ರಪಂಚದ ಸೃಷ್ಟಿ, ರಕ್ಷಣೆ, ನಾಶ ಇವನ್ನು ಮಾಡುವ ವಿಷ್ಣುವು ಅಕಾರದ ಅರ್ಥವಾಗಿದ್ದಾನೆ. ಮಕಾರದ ಅರ್ಥವು ಜೀವಾತ್ಮನು. **ಇದಂ**=ಈ ಆತ್ಮವಸ್ತು ಸಮೂಹವು, **ವೈಷ್ಣವಂ**=ವಿಷ್ಣುವಿನಿಂದ ಉಂಟಾದುದು; ಮತ್ತು **ತದುಪಕರಣಂ**=ಆ ಪ್ರಸಿದ್ಧನಾದ ಮಹಾವಿಷ್ಣುವಿನ ಸ್ವತ್ತಾಗಿ ಆತನಿಗೆ ಶೇಷ ಭೂತವಾದುದು. **ಉಕಾರಃ**=ಏವ ಎಂಬ ಅವಧಾರಣಾರ್ಥವುಳ್ಳದ್ದು. **ಅನ-ನ್ಯಾರ್ಹಂ**=ಲಕ್ಷ್ಮೀ, ಭಾಗವತರು ಮತ್ತು ಭಗವಂತನಾದ ವಿಷ್ಣು ಇವರಿಗೆ ಮಾತ್ರವೇ ಶೇಷಭೂತನಾಗಿರಲು ಯೋಗ್ಯನು; (ಜೀವ), ಇತರರಿಗಲ್ಲ ಎಂಬುದಾಗಿ **ನಿಯಮಯತಿ**=ನಿಯಮಿಸುತ್ತದೆ. ಎಂದರೆ ಭಗವಂತನಲ್ಲದೆ ಇನ್ನು ಯಾರಿಗೂ ಈ ಜೀವಾತ್ಮನು ಶೇಷಭೂತನಲ್ಲ ಎಂಬುದು ಅರ್ಥ. ಯಾವಾಗ ವಿಷ್ಣುವಿಗೆ ಶೇಷಭೂತನೆಂದಾಯಿತೋ ಆವಾಗ ಆತನ ಪತ್ನೀ ಮತ್ತು ಆತನಿಗೆ ಪ್ರಿಯರಾದ ಭಾಗವತರಾದ ವೈಷ್ಣವರಿಗೂ ಶೇಷಭೂತನು ಎಂಬರ್ಥವು. **ಅನಯೋಃ**=ಈ ಪರಮಾತ್ಮ ಜೀವಾತ್ಮರುಗಳಿಗೆ, ಈ ಉಕಾರವು, **ಸಂಬಂಧಂ**=ಶೇಷಿಶೇಷ ಸಂಬಂಧ ವನ್ನೂ. **ನಿಯಮಯತಿ**=ದೃಢೀಕರಿಸಿ ಹೇಳುತ್ತದೆ. **ತ್ರಯೀಸಾರಃ**=ಋಗ್ವೇದ, ಯಜುರ್ವೇದ, ಸಾಮವೇದಗಳಾದ ಮೂರಕ್ಕೂ ತ್ರಯೀ ಎಂದು ಹೆಸರು. ಅವುಗಳ ಸಾರಭೂತವಾದ, **ತ್ರ್ಯಾತ್ಮಾ**=ಮೂರು ಅಕ್ಷರಗಳಾದ ಅಲ್ಲಿ ಅಕಾರ, ಉಕಾರ, ಮಕಾರಗಳನ್ನೇ ಸ್ವರೂಪವಾಗಿಉಳ್ಳ, **ಪ್ರಣವಃ**=ಓಂಕಾರವು, **ಅರ್ಥಂ**=ಈ ಅಭಿಪ್ರಾಯವನ್ನು, **ಸಮುದಿಶತ್**=ಚೆನ್ನಾಗಿ ಪ್ರತಿಪಾದಿಸುತ್ತದೆ. ಈ ಶ್ಲೋಕದಿಂದ ಪ್ರಣವಾರ್ಥವು ಉಪದೇಶಿಸಲ್ಪಟ್ಟಿತು.

ಈ ರೀತಿಯಾಗಿ ಕೂರೇಶರ ಪುತ್ರರಾದ ಪರಾಶರಭಟ್ಟರು ಅಷ್ಟಶ್ಲೋಕಿಯಲ್ಲಿ 'ಉ'ಕಾರಕ್ಕೆ ಅರ್ಥಹೇಳಿರುವಾಗ ಉಕಾರಕ್ಕೆ ಲಕ್ಷ್ಮೀವಾಚಕತ್ವವು ಹೇಗೆ ಎಂದು ಸಂದೇಹವುಂಟಾದರೆ, ನ್ಯಾಯಸಿದ್ಧಾಞ್ಜನದಲ್ಲಿ 'ಶ್ರುತಿಶ್ಚ=ವೇದವೂ ಕೂಡ' ಎಂದು ಪ್ರಾರಂಭ ಮಾಡಿ—

**ಅಕಾರೇಣೋಚ್ಯತೇ ವಿಷ್ಣುಃ ಸರ್ವಲೋಕೇಶ್ವರೋಹರಿಃ ।**
**ಉದ್ಧೃತಾ ವಿಷ್ಣುನಾ ಲಕ್ಷ್ಮೀರುಕಾರೇಣೋಚ್ಯತೇ ತಥಾ ।**
**ಮಕಾರಸ್ತು ತಯೋರ್ದಾಸ ಇತಿ ಪ್ರಣವಲಕ್ಷಣಮ್ ॥**

ಎಲ್ಲಾ ಲೋಕಕ್ಕೂ ಒಡೆಯನಾದ ಹರಿಯು ಅಕಾರದಿಂದ ಹೇಳಲ್ಪಡುತ್ತಾನೆ. ವಿಷ್ಣುವಿನಿಂದ ಉದ್ಧಾರಮಾಡಲ್ಪಟ್ಟ ಅಂದರೆ ದುಷ್ಟರಾಕ್ಷಸನಿಂದ ಸಮುದ್ರ ದೊಳಕ್ಕೆ ಒಯ್ಯಲ್ಪಟ್ಟವಳಾಗಿದ್ದಾಗ ವರಾಹಾವತಾರ ಮಾಡಿ ಅವನನ್ನು ಕೊಂದು ತರಲ್ಪಟ್ಟವಳಾದ ಭೂಮಿರೂಪವಾದ ಲಕ್ಷ್ಮಿಯು ಉಕಾರದಿಂದ ಹೇಳಲ್ಪಡು

ತ್ತಾಳೆ. ಮಕಾರವಾಚ್ಯನಾದ ಜೀವನು ಅವರಿಬ್ಬರಿಗೂ ದಾಸನು, ಇದು ಪ್ರಣವದ ಲಕ್ಷಣ" ಎಂದು ಹೇಳುತ್ತದೆ ಎಂದಿದ್ದಾರೆ.

ಬೇರೆಬೇರೆ ಮಂತ್ರಗಳಲ್ಲಿ ಬೇರೆಬೇರೆ ಜಾಗಗಳಲ್ಲಿ ಬಹಳವಾಗಿ ಅರ್ಥ ಹೇಳುವ ಹಾಗೆ ಪ್ರಣವಕ್ಕೂ ಬಹಳ ಅರ್ಥಗಳು ಅಲ್ಲಲ್ಲಿ ಪ್ರತಿಪಾದಿಸಲ್ಪಟ್ಟಿವೆ; ಅರ್ಥ ವಿರೋಧವೇನೂ ಇಲ್ಲ; "ಅಸ್ಯೇ [1]ಶಾನಾಜಗತೋ ವಿಷ್ಣುಪತ್ನೀ" "[2]ಈಶ್ವರೀ ಸರ್ವ ಭೂತಾನಾಮ್" ಇವೇ ಮೊದಲಾದವು ಪ್ರಮಾಣ.

**ಅಸ್ಯೇಶಾನಾ**=ಭೂಮಿ, ದಿಕ್ಕು. "**ವಿಶ್ವವ್ಯಚಾ ಇಷಯನ್ತೀ ಸುಭೂತಿಃ ಶಿವಾನೋ ಅಸ್ತ್ವದಿತಿರುಪಸ್ಥೇ**" ಹೀಗೆಂದು ಅದಿತಿ ಶಬ್ದವು ಶ್ರವಣವಾಗು ವುದರಿಂದ ಅದಿತಿ ಶಬ್ದಕ್ಕೆ ಭೂ ವಿಷಯದಲ್ಲಿ ಪ್ರಸಿದ್ಧವಾಗಿರೋಣದರಿಂದ ಅದರ ಸಾಮಾನಾಧಿಕರಣ್ಯವಿರುವುದರಿಂದ ಮೊದಲನೆಯ ಶ್ರುತಿಯಾದ '**ಅಸ್ಯೇಶಾನಾ**' ಎಂಬುದು ಭೂ ವಿಷಯವಾದುದೆಂದು ಕೆಲವರು ಹೇಳುತ್ತಾರೆ. '**ಇಷಯನ್ತೀ**' ಎಂಬುದಾಗಿ ಅನ್ನಾಕಾರ ಪರಿಣಾಮಕ್ಕೆ ಕಾರಣವಾಗಿರುವುದರಿಂದಲೂ ಕೂಡ ಭೂ ವಿಷಯವೆನ್ನುತ್ತಾರೆ.

ದಿಕ್ಕಿನ ವಿಷಯವಾದದ್ದೆಂದು ಕೆಲವರು ಕುದೃಷ್ಟಿಗಳು ಹೇಳುತ್ತಾರೆ. ಅವರು ಹಾಗೆ ಹೇಳಲು '**ಊರ್ಧ್ವಾದಿಶಾಂ ವಿಷ್ಣುಪತ್ನ್ಯ ಘೋರಾಸ್ಯೇಶಾನಾ ಜಗತೋ ಯಾಮನೋತಾ**' ಎಂದು ಉತ್ತರಮಂತ್ರವರ್ಣವು ಕಾರಣವಾಗಿದೆ. ಶ್ರುತಿ ಲಿಂಗಾದಿ ವಿರೋಧವಿರುವುದರಿಂದ ದಿಕ್ಕಿನ ವಿಷಯವೇ ಇಲ್ಲಿ ಸಂಗತವಾಗುವುದಿಲ್ಲ. '**ಈಶಾನಾ**' ಎಂಬ ಪದವು ಶ್ರುತವಾಗಿರುವುದರಿಂದ 'ವಿಷ್ಣುಪತ್ನೀ' ಇವೇ ಮೊದಲಾದ ಲಿಂಗ ದಿಂದ ವಿರುದ್ಧವಾಗಿದೆ ಎಂದು ಅಭಿಪ್ರಾಯ. ಸ್ಮೃತಿ ಪುರಾಣಾದಿಗಳಿಗೂ ಆ ಅರ್ಥವಿರುದ್ಧವಾದದ್ದು. ಶೇಷವಾಗಿರುವಿಕೆಗೆ ಉಭಯಾಧಿಷ್ಠಾನ ಭಾವದಲ್ಲಿ ಸಮ್ಮತಿಯನ್ನು ತೋರಿಸುತ್ತಾರೆ. ಪರಾಶರ ಮಾತಿನಿಂದ—

**ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ ||**

ಓ ಬ್ರಾಹ್ಮಣ ಶ್ರೇಷ್ಠನೇ ! ಹೇಗೆ ವಿಷ್ಣುವು ಎಲ್ಲದರಲ್ಲೂ ಅಡಗಿದ್ದಾನೋ ಹಾಗೆಯೇ ಇವಳೂ ಕೂಡ. **ನಾನಯೋರ್ವಿದ್ಯತೇಪರಮ್**=ಇವರಿಬ್ಬರಿಗಿಂತ ಬೇರೆಯಾದದ್ದಿಲ್ಲ, ಇವೇ ಮೊದಲಾದವು. **ಏಕತತ್ವಮಿವೋದಿತೌ**=ಒಂದೇ ತತ್ವ ದಂತೆ ಹೇಳಲ್ಪಟ್ಟಿದ್ದಾರೆ.

1. ತೈ. ಸಂ. ಕಾಂ. ೪-೪-೩೭.
2. ತೈ. ಉ. ನಾ. ೩೩.

ಲಕ್ಷ್ಮ್ಯಾಃ ಸಮಸ್ತ ಚಿದಚಿತ್ಪ್ರಪಞ್ಚೋ ವ್ಯಾಪ್ಯಸ್ತದೀಶಸ್ಯ ತು ಸಾಪಿ ಸರ್ವಮ್।
ತಥಾಪಿ ಸಾಧಾರಣಮೀಶಿತೃತ್ವಂ ಶ್ರೀ ಶ್ರೀಶಯೋರ್ದ್ವಾಚ ಸದೈಕಶೇಷೀ ॥

ಎಲ್ಲಾ ಚಿದಚಿದ್ವಿಶಿಷ್ಟವಾದ ಪ್ರಪಂಚವೂ ಲಕ್ಷ್ಮಿಗೆ ವ್ಯಾಪ್ಯವಾದದ್ದು— ಅವಳ ವ್ಯಾಪ್ತಿಯಿಂದ ಕೂಡಿದ್ದು. ಅವಳ ಒಡೆಯನಿಗಾದರೋ ಅವಳೂ ಮತ್ತು ಎಲ್ಲವೂ ವ್ಯಾಪ್ತಿಯಿಂದ ಕೂಡಿದ್ದು. ಆದರೂ ಲಕ್ಷ್ಮಿಗೂ, ಲಕ್ಷ್ಮೀಪತಿಗೂ ಇವುಗಳಿಗೆ ಸ್ವಾಮಿಯಾಗಿರುವಿಕೆಯು ಸಾಧಾರಣವಾದದ್ದು. ಅವರಿಬ್ಬರೂ ಯಾವಾಗಲೂ ಶೇಷಿಯಾಗಿದ್ದಾರೆ. ಈ ಅರ್ಥವು ಅಹಿರ್ಬುಧ್ನ್ಯ ಸಂಹಿತೆ, ಲಕ್ಷ್ಮೀ ತನ್ತ್ರ ಮುಂತಾದವುಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ; ಅಲ್ಲಿ ಅರಿಯತಕ್ಕದ್ದು.

ಇದರಿಂದ ಭೂಮ್ಯಾದಿಗಳೂ ಲಕ್ಷ್ಮಿಯ ಅಂಶ ಎಂಬುದು ಸಿದ್ಧಿಸಿತು. ಅವಳು ಈಶ್ವರ ಕೋಟಿಯಲ್ಲಿ ಸೇರಲ್ಪಟ್ಟಿದ್ದಾಳೆ. ಎಲ್ಲವೂ ಅವಳಿಗೆ ಶರೀರ ವಾಗಿವೆ. ಜೀವಕೋಟಿಯಲ್ಲಿ ಸೇರಿದ ಭೂಮ್ಯಾದಿಗಳೂ ಅವಳ ಶರೀರವಾಗಿರುವು ದರಿಂದ ಲಕ್ಷ್ಮಿಯ ಅಂಶವಾಗಿರುವಿಕೆ ಆಯಿತು. ಐಕ್ಯವಲ್ಲ. ಈ ಅಭಿಪ್ರಾಯ ವನ್ನು ತಿಳಿದೇ, ಪರಾಶರಭಟ್ಟರು ಶ್ರೀಗುಣರತ್ನ ಕೋಶದಲ್ಲಿ—

[1]ಭೋಗ್ಯಾನಾಮಪಿ ನಾನ್ತರೀಯಕತಯಾ ಪುಷ್ಪಾಙ್ಗರಾಗೈಸ್ಸಮಂ
ನಿರ್ವೃತ್ತ್ತ ಪ್ರಣಯಾತಿ ವಾಹನವಿಧೌ ನೀತಾಃ ಪರೀವಾಹತಾಮ್ ।
ದೇವಿತ್ವಾಮನು ನೀಲಯಾ ಸಹ ಮಹೀದೇವ್ಯಃ ಸಹಸ್ರಂತಥಾ
ಯಾಭಿಸ್ತ್ವಂಸ್ತನ ಬಾಹುದೃಷ್ಟಿಭಿರಿವಸ್ವಾಭಿಃ ಪ್ರಿಯಂಶ್ಲಾಘಸೇ ॥

ಓ ಲಕ್ಷ್ಮೀ ಮಾತೆ! ನಿನ್ನ ಪತಿಯು ನಿನಗಿಂತ ಕಡಿಮೆಯಾದ ದೃಷ್ಟಿಯಲ್ಲಿ ಸ್ಥಾನದಲ್ಲಿ ಭೂಮಿ ನೀಳಾ ಮತ್ತು ಸಾವಿರಾರು ಇತರ ರಾಣಿಗಳನ್ನು ಹೊಂದಿ ದ್ದಾನೆ. ಅವರೆಲ್ಲರೂ ನಿಮ್ಮಿಬ್ಬರ ಭೋಗಕ್ಕಾಗಿ ಇರುವ ಹೂವು ಅಂಗರಾಗ ಮುಂತಾದವುಗಳಂತೆ ಉಪಕರಣಗಳಾಗಿದ್ದಾರೆ. ನಿಮ್ಮಿಬ್ಬರ ಪರಸ್ಪರ ಅನುರಾಗ ಪ್ರವಾಹದ ಹೊರಗಂಡಿ (ಹೊರಕ್ಕೆ ಹೋಗುವ ಮಾರ್ಗ)ಗಳು. ಅವರೆಲ್ಲರೊಡನೆ ನೀನು ನಿನ್ನ ಸ್ತನ, ತೋಳು, ನೋಟ ಇವುಗಳಂತೆ ನಿನ್ನ ಪ್ರಿಯನನ್ನು ಸಂತೋಷ ಪಡಿಸುತ್ತೀಯೆ. ಯಾರಲ್ಲಿಯೂ ಕೆಟ್ಟಭಾವನೆ ಇಲ್ಲ.

ಅನುಪ್ರವೇಶದಿಂದಲೇ ಅಲ್ಲವೆ ಅನಂತ ವಿಷ್ವಕ್ಸೇನ ಮುಂತಾದವರಿಗೆ ಸಂಕರ್ಷಣಾದ್ಯಾತ್ಮಕತ್ವವು ಹೇಳಲ್ಪಡುತ್ತದೆ. ಅದರಂತೆಯೇ ಭೂಮ್ಯಾದಿಗಳಿಗೆ ಲಕ್ಷ್ಮ್ಯಂಶದ ಭಾವದ ಹೇಳಿಕೆ ಎಂದು ತಾತ್ಪರ್ಯ. ಬ್ರಹ್ಮಕ್ಕೆ ಪತ್ನೀ ಪರಿಜನ

[1] ಶ್ರೀಗುಣರ ರತ್ನಕೋಶ. ೨೬.

ಇವೇ ಮುಂತಾದವರೊಡನೆ ಕೂಡಿ ಇರುವಿಕೆಯನ್ನು ಪ್ರತಿಪಾದಿಸುವ ಆಗಮಕ್ಕೆ ಆದಿಲ್ಲದೆ ಇರುವಿಕೆಯನ್ನು ಪ್ರತಿಪಾದಿಸುವ ಆಗಮದೊಡನೆ ವಿರೋಧವುಂಟಾಗುತ್ತದೆಯಲ್ಲವೇ ? ಅಂದರೆ, ಆ ಆ ಉಪಾಸನೆಗಳ ಒಳಗಿನ ಭೇದಕ್ಕೆತಕ್ಕಂತೆ ಇವುಗಳ ವಿನಿಯೋಗವೇ ಹೊರತು ಬ್ರಹ್ಮಕ್ಕೆ ಭ್ರಾಂತಿದೆಶೆಯಲ್ಲಿ ಪತ್ನೀ ಪರಿಜನ ಮುಂತಾದವರೊಡನೆ ಕಲೆತಿರುವಿಕೆ, ಶುದ್ಧದೆಶೆಯಲ್ಲಿ ಇಲ್ಲದಿರುವಿಕೆ ಎಂದೋ ಅಥವಾ ಕಾರ್ಯಾವಸ್ಥೆಯಲ್ಲಿ ಪತ್ನೀ ಪರಿಜನಗಳೊಡನೆ ಕೂಡಿರುವಿಕೆ, ಕಾರಣಾವಸ್ಥೆಯಲ್ಲಿ ಇಲ್ಲದಿರುವಿಕೆ ಎಂದೋ ಹೇಳಕೂಡದು. ಹಿಂದೆಯೇ ಈ ವಿಷಯದಲ್ಲಿ ದೋಷವನ್ನು ಹೇಳಿಯಾಯಿತು.

ಆ ಆ ವ್ಯೂಹಗಳಿಗೆ ಅನುರೂಪವಾಗಿ ಅಂದರೆ ಅವಕ್ಕೆತಕ್ಕಂತೆ ಲಕ್ಷ್ಮ್ಯಾದಿ ವ್ಯೂಹಾದಿಗಳು 'ರಾಘವತ್ವೇಽಭವತ್ಸೀತಾ' ಇವೇ ಮೊದಲಾದ ಶಾಸ್ತ್ರಗಳಲ್ಲಿ ಸಿದ್ಧವಾಗಿವೆ. ವ್ಯೂಹಾದಿಗಳಲ್ಲಿ ಅಙ್ಗಾಙ್ಗಿ ಭಾವವು ಭಗವಂತನ ಸಂಕಲ್ಪಕ್ಕೆ ಅಧೀನವಾದದ್ದು; ಈಶ್ವರನಿಗೆ ಎಲ್ಲೆಡೆಯೂ ಒಂದೇ ಆಗಿದೆ. ಕೆಲವೆಡೆಯಲ್ಲಿ ಗುಣಗಳ ಆವಿರ್ಭಾವ—ಮತ್ತೆ ಕೆಲವೆಡೆಗಳಲ್ಲಿ ಗುಣಗಳತಿರೋಭಾವ ಇವೆಲ್ಲಾ ಅವನ ಸಂಕಲ್ಪಕ್ಕೆ ಸೇರಿದ್ದಾಗಿದೆ.

ಯನ್ತ್ರವಿಶೇಷ ಮೊದಲಾದವುಗಳಲ್ಲಿ ವಾಸುದೇವಾದಿಗಳಿಗೆ ಅಙ್ಗತ್ವಹೇಳಿದೆಯಲ್ಲ "ವಕ್ಷ್ಯೇಸೌದರ್ಶನಂ ಮನ್ತ್ರಮ್—ಸುದರ್ಶನ ಮನ್ತ್ರವನ್ನು ಹೇಳುವೆನು" ಎಂದು ಆರಂಭಿಸಿ—

**ಸ್ಥಾಪಯೇತ್ಸರ್ವಮಧ್ಯೇತು ಚಕ್ರರಾಜಂ ಸುವಿಗ್ರಹಮ್ ।**
**ಅಷ್ಟದಿಕ್ಷು ನೃಸಿಂಹಞ್ಚ ಸ್ಥಾಪಯೇತ್ಸುಸಮಾಹಿತಃ ॥**

ಮಧ್ಯದಲ್ಲಿ ಅಂದವಾದ ಚಕ್ರರಾಜನ ವಿಗ್ರಹವನ್ನಿಡಬೇಕು. ಎಂಟು ದಿಕ್ಕುಗಳಲ್ಲೂ ಎಚ್ಚರಿಕೆಯಿಂದ, ಒಂದೇಮನಸ್ಸಿನಿಂದ ನೃಸಿಂಹನನ್ನು ಇಡಬೇಕು. ಎಂದು ಹೇಳಿರುವುದರಿಂದ ವಾಸುದೇವಾದಿಗಳಿಗೆ ಅಂಗತ್ವ—ಲಕ್ಷ್ಮೀಸುದರ್ಶನಾದಿಗಳಿಗೆ ಪ್ರಾಧ್ಯಾನತೆ ತೋರುತ್ತದಲ್ಲಾ ಅಂದರೆ, ಅಲ್ಲಿ ಲಕ್ಷ್ಮೀಸುದರ್ಶನಾತ್ಮಕ ಬ್ರಹ್ಮವನ್ನು ಕುರಿತು ವಾಸುದೇವಾತ್ಮಕ ಬ್ರಹ್ಮಕ್ಕೆ ತನ್ನ ಇಚ್ಛೆಯಿಂದ ಅಙ್ಗತ್ವವು ಇದೆ ಎಂದು ಅಭಿಪ್ರಾಯ. ಬೇರೆ ಆಗಮದಲ್ಲಿ ಹೇಳುವ ರುದ್ರಾದಿಗಳಿಗೂ ಭಗವಂತನ ಶೇಷತ್ವವು ಬರಲಿ ಎಂದರೆ, ಇದು ಎಲ್ಲಾ ಆಗಮಕ್ಕೂ ಸಂಬಂಧಪಟ್ಟ ಮಾತಲ್ಲ. ಆಗಮ ಪ್ರಾಮಾಣ್ಯದಲ್ಲೂ ಶ್ರೀಭಾಷ್ಯದಲ್ಲಿ ಪಞ್ಚರಾತ್ರಕ್ಕೆ ಪ್ರಾಮಾಣ್ಯವನ್ನು—ಪಾಂಚರಾತ್ರಾಧಿಕರಣದಲ್ಲೂ ಸ್ಥಾಪಿಸಲ್ಪಟ್ಟಿದೆ. ನ್ಯಾಯಪರಿಶುದ್ಧಿಯಲ್ಲೂ ಆಚಾರ್ಯರು ಸ್ಥಾಪಿಸಿದ್ದಾರೆ. ಯನ್ತ್ರಾದಿಗಳೇ ಮಾನ್ಯವಾದವಲ್ಲ. ಅವು

ಬುಡವಿಲ್ಲದವು—ಆಧಾರವಿಲ್ಲದವು ಎಂದರೆ, ತಾಪನೀಯೋಪನಿಷತ್ತು ಮುಂತಾದವು ಗಳಲ್ಲಿ ಅವುಗಳ ಮಹಿಮೆಯನ್ನು ನಾವು ನೋಡಬಹುದು. ಅಲ್ಲದೆ ಪ್ರತ್ಯಕ್ಷವಾಗಿ ಫಲವನ್ನು ಪಡೆಯುವುದನ್ನೂ ನಾವು ಕಾಣುತ್ತಿದ್ದೇವೆ. ಆದುದರಿಂದ ಸುದರ್ಶನಾದಿಗಳಿಗೆ ಪಾರಮ್ಯವನ್ನೂ—ಶ್ರೇಷ್ಠತೆಯನ್ನೂ ಭಗವಂತನಿಗೆ ಅಪಾರಮ್ಯವನ್ನೂ ನಾವು ಭಾವಿಸಬಾರದು. ಅಥವಾ ಯನ್ತ್ರಶಾಸ್ತ್ರವೇ ಅಪ್ರಮಾಣವಾದದ್ದೇ ಎಂದಾಗಲಿ ಸಂದೇಹ ಪಡಕೂಡದು. ಪ್ರಕೃತದಲ್ಲಿ ನಾವು ಅರಿಯಬೇಕಾದ ಸಾರಾಂಶ ವಿಷ್ಟೆ :—

ಭಕ್ತಿ ಪ್ರಪತ್ತಿರೂಪಜ್ಞಾನವು ಪದ್ಮದಲ್ಲಿ ವಾಸಮಾಡುವ ಲಕ್ಷ್ಮಿಯ ಗಂಡನಾದ ನಾರಾಯಣನೊಬ್ಬನನ್ನೇ ವಿಷಯೀಕರಿಸುತ್ತದೆ—ಅವನನ್ನೇ ಪರಿಪೂರ್ಣವಾಗಿ ಅನುಭವಿಸಬೇಕು. ಎಂಬ ಅರ್ಥವನ್ನು ಕೊಡುವ ದಿವ್ಯಸೂರಿಗಳಾದ ಆಳ್ವಾರುಗಳ ಮಾತಾದ [1]"ತಾಮರೈಯಾಳ್ ಕೇಳ್ವನ್ ಒರುವನೈಯೇನೋಕ್ಕುಮುಣರ್ವು" ಎಂಬ ಪಾಶರದ ಭಾಗಕ್ಕೂ "ಯಾಗದಲ್ಲಿ ಪತ್ನೀಗೆ ಪಾರಾರ್ಧ್ಯದಿಂದ ಒಬ್ಬನೇ ಯಜಮಾನ" ಎಂದು ಹೇಳುವ ಹಾಗೆಯೇ ಹೊರತು ಇವಳಿಗೆ ಅನ್ವಯವಿಲ್ಲವೆಂಬುದಲ್ಲ. ಪತ್ನಿ ಯಿಲ್ಲದೆ ಇದ್ದರೆ ಯಾಗವೇ ಸಿದ್ಧಿಸುವುದಿಲ್ಲ. ಒಬ್ಬನನ್ನೇ—ಇಲ್ಲಿ ನಾರಾಯಣನೊಬ್ಬ ನನ್ನೇ ಎಂದು ಹೇಳದೆ ಲಕ್ಷ್ಮೀ ವಿಶಿಷ್ಟನಾದ ಒಬ್ಬನನ್ನೇ ಎಂದು ವಿಶಿಷ್ಟವಾಚಕ ಶಬ್ದದ ಹೆಸರಿನಲ್ಲಿ ಏಕತ್ವವಾಚಕ ಶಬ್ದ ಪ್ರಯೋಗವೂ ಶ್ರೀಮನ್ನಾರಾಯಣ ಎಂದಾಗ ಶ್ರೀಮಚ್ಛಬ್ದದ ಪ್ರವೃತ್ತಿ ನಿಮಿತ್ತವೂ ಶ್ರೀಗೆ ನಾರಾಯಣನೊಡನೆ ನಿತ್ಯ ವಾದ ಸಂಬಂಧವನ್ನು ಹೇಳುತ್ತದೆ. ಇದನ್ನು ಅರಿತೇ [2]"**ತದನ್ತರ್ಭಾವಾತ್ತ್ವಾಂನ ಪೃಥಗಭಿಧತ್ತೇಶ್ರುತಿರಪಿ**—ಅವನಲ್ಲಿಯೇ ನೀನು ಒಳಸೇರಿರುವೆ—ಅಡಗಿರುವೆ, ಆದುದರಿಂದಲೇ ವೇದವೂ ಪ್ರತ್ಯೇಕವಾಗಿ ನಿನ್ನನ್ನು ಹೇಳುವುದಿಲ್ಲ" ಎಂದು ಅಭಿ ಯುಕ್ತರ ಮಾತು.

"**ಎ ಮ್ಪೆರುಮಾನೈಚ್ಚೊನ್ನ ಇಡಮೆಲ್ಲಾಮ್ ಪಿರಾಟ್ಟಿಯೈಯುಮ್ ಶೊಲ್ಲಿತ್ತಾಮ್**—ಭಗವಂತನನ್ನು ಹೇಳುವ ಜಾಗಗಳೆಲ್ಲವೂ ಲಕ್ಷ್ಮಿಯನ್ನೂ ಹೇಳುತ್ತದೆ" ಎಂಬುದಾಗಿ ಪ್ರಾರಂಭ ಮಾಡಿ ಭಾಷ್ಯಕಾರರು ತಮ್ಮ ಪ್ರಿಯ ಶಿಷ್ಯರಾದ ಕಿಡಾಂಬಿ

1. ಮುದಲ್ ತಿರುವನ್ದಾದಿ—೬೭.

"ಜ್ಞಾನವೆಂಬುದು ಲಕ್ಷ್ಮಿಯ ಗಂಡನನ್ನು—ಶ್ರೀಪತಿಯನ್ನು ಕುರಿತಲ್ಲದೆ ಬೇರೆ ವಿಷಯ ಗಳನ್ನು ಕುರಿತು ನಿಲ್ಲುವುದಿಲ್ಲ" ಎಂದು ಹೇಳಿದ ಪೊಯ್‌ಕೈಯಾಳ್ವಾರ್ ಮಾತಿನ ಅಭಿಪ್ರಾಯ ಭಗವಂತನನ್ನು ಬಿಟ್ಟು ಇತರ ವಿಷಯಗಳಲ್ಲಿ ಉಂಟಾಗುವ ಜ್ಞಾನವು ಜ್ಞಾನವಲ್ಲ, ಅದು ಅಜ್ಞಾನವೇ ಎಂಬುದು ಇದರ ಅರ್ಥ.

2. ಶ್ರೀಗುಣರತ್ನಕೋಶಮ್—೨೮.

ಯಾಚ್ಚಾನ್ ಅವರಿಗೆ ಉಪದೇಶಿಸಿದರು. ಈ ತತ್ತ್ವಾರ್ಥವನ್ನು ಅವರು ನಂಜೀಯರಿಗೆ ಹೇಳಿದರು. ಅವರು ಅದನ್ನು ಸಂಗ್ರಹ ಮಾಡಿ ಮುಂದಿನ ಪರಂಪರೆಗೆ ಹೇಳಿದರು. ಆದುದರಿಂದ, ಪರಂಪರೆಯಾಗಿ ಬಂದ ಸಂಪ್ರದಾಯಾರ್ಥವಿದು.

ಹೀಗೆ ನಿತ್ಯವಾದ ಪತಿಪಾರಾರ್ಥ್ಯವಿರುವುದರಿಂದ ಕಾಮ್ಯ ಪ್ರಧಾನವಾದ ಅಧಿಕಾರಾರ್ಚನ ರೂಪದಲ್ಲೂ ವಿಷ್ಣುಪತ್ನೀತ್ವ ಸುಪ್ರತಿಷ್ಠಿತವಾಗಿದೆ—ಸ್ಥಿರವಾಗಿದೆ. ಅಧಿಕಾರಾರ್ಚನ ರೂಪವಾವುದೆಂದರೆ ತನಿಕ್ಕೋಯಿಲ್ ನಾಚ್ಚಿಯಾರ್, ದೇವಾಲಯಗಳಲ್ಲಿ ಪ್ರತ್ಯೇಕವಾಗಿ ಲಕ್ಷ್ಮಿಯ ದೇವಾಲಯವಿರುವಿಕೆ. ಲಯ-ಎದೆಯಲ್ಲಿ ಇರುವ ಶ್ರೀರೂಪ, ಭೋಗ-ಭಗವಂತನ ಪಕ್ಕದಲ್ಲಿ ಇರುವ ನಾಚ್ಚಿಯಾರ್, ಈ ಲಯ ಭೋಗ ರೂಪವಾದ ಅರ್ಚನೆಗಳಲ್ಲಿ ಮಾತೃತ್ವ ಪ್ರಯುಕ್ತವಾದ ನಮಸ್ಕಾರ ಮಾಡುವಿಕೆ ಮುಂತಾದ ಆಚಾರಗಳಿಗೆ ಕಡಿಮೆಯಿಲ್ಲ.

ಹೀಗೆ ಪಾಂಚರಾತ್ರಾದಿ ಶಾಸ್ತ್ರಗಳಲ್ಲಿ ಅರ್ಚನಂತ್ರಿ ವಿಧಮ್=ಅರ್ಚನೆಯು ಮೂರು ವಿಧ ಎಂದು ಆರಂಭಿಸಿ,

**ಕೇವಲೇನತು ಯಾಗೇನ ಪೃಥಗ್ಭೂತೇನ ನಾರದ ।**
**ಪೂಜನಂ ಕಮಲಾ ದೀನಾಮಧಿಕಾರ ಭಿಧಸ್ಸ್ಮೃತಃ ॥**

ಎಲೌ ನಾರದನೇ ! ಭಗವಂತನ ಪೂಜೆಯಿಲ್ಲದೆ ಕಮಲಾದಿಗಳ ಪೂಜನೆಯನ್ನು ಪ್ರತ್ಯೇಕವಾಗಿ ಮಾಡಬೇಕು ; ಅದು ಅಧಿಕಾರ ಭೇದವುಳ್ಳದ್ದು, ಎಂದು ಹೇಳಿದೆ.

ಇವುಗಳಲ್ಲಿ ಭೋಗಾರ್ಚನರೂಪವು ಮೋಕ್ಷ ಪ್ರಧಾನವಾಗಿದೆ. ಅಧಿಕಾರಾರ್ಚನ ರೂಪವು ಕಾಮ್ಯ ಪ್ರಧಾನವಾಗಿದೆ ಎಂದು ಭಗವಚ್ಛಾಸ್ತ್ರ ಹೇಳುತ್ತದೆ. ಇದರಲ್ಲಿ ಭೋಗವು ಪತಿಯ ಅರ್ಚನೆಯೊಡನೆ ಕೂಡಿದ್ದು. ಅಧಿಕಾರಾರ್ಚನವು ತದ್ರಹಿತ-ಅಂದರೆ ಪತಿಯರ್ಚನೆ ಇಲ್ಲದ್ದು.

ಭಗವಂತನ ಅರ್ಚಾರೂಪವೂ ಕಾಮ್ಯಪ್ರಧಾನವೆಂದೂ ಮೋಕ್ಷ ಪ್ರಧಾನವೆಂದೂ ಎರಡು ವಿಧ. ಕಾಮ್ಯ ಪ್ರಧಾನ ಮದನಗೋಪಾಲಾದಿ ರೂಪವು. ಮೋಕ್ಷ ಪ್ರಧಾನವಾದವು ರಾಮಕೃಷ್ಣಾದಿರೂಪವು.

ವಿಷ್ಣುವಿನ ಅರ್ಚಾರಹಿತವಾಗಿದ್ದರೂ ಕಾಮ್ಯ ಪ್ರಧಾನವಾದ ತನಿಕ್ಕೋಯಿಲ್ ನಾಚ್ಚಿಯಾರಿಗೆ—ಅಧಿಕಾರಾರ್ಚನಕ್ಕೆ ಭಾಸ್ಕರ ಪ್ರಭಾನ್ಯಾಯದಿಂದ ವಿಷ್ಣುವನ್ನು ಬಿಡದೆ ಇರುವಿಕೆಯು ವಿಷ್ಣ್ವವಿನಾಭಾವವು ಸಿದ್ಧವಾಗಿದೆ. ಲಯಭೋಗಾರ್ಚನಗಳಲ್ಲಿ ಪ್ರವೃತ್ತರಾಗಿ ಅನನ್ಯ ಪ್ರಯೋಜನರಾದ ಮುಮುಕ್ಷುಗಳಿಗೂ ಕಾಮ್ಯ

ಪ್ರಧಾನವಾದ ಭಗವಂತನ ರೂಪದ ಹಾಗೆ ಮಾತೃತ್ವ ಪ್ರಯುಕ್ತವಾದ ನಮಸ್ಕಾರ ಮಾಡುವಿಕೆ ಮುಂತಾದ ಉಪಚಾರಗಳಿಗೆ ಕುಂದಿಲ್ಲ.

ಆಚಾರ್ಯರು ಈ ರೀತಿ ಪ್ರಮಾಣಗಳನ್ನು ತೋರಿಸಿ ಸಂಪ್ರದಾಯವನ್ನು ಅನುಸರಿಸಿ ನಿರೂಪಣೆ ಮಾಡಿದ್ದರೂ ಕೆಲವು ವಾದಿಗಳು 'ತಾವು ತಿಳಿದಿರುವುದೇ ಸರಿ' ಎಂದು ಬೇರೆ ದಾರಿಯನ್ನು ಹಿಡಿದಿದ್ದಾರೆ, ಅವರನ್ನು ಕುರಿತು ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಅವರು ಹೇಳುವ ಮಾತಿದು.

**ದೃಢಪೂರ್ವಶ್ರುತೋಮೂರ್ಖೋಽಧರ್ಮ್ಯಜ್ಞಾಮವಿಶಾರದಃ ।**
**ವೃದ್ಧಾನ್ನ ಪೃಚ್ಛನ್ ಸಂದೇಹಾನಂಧಶ್ಶ್ವಭ್ರಮಿವರ್ಚ್ಛತಿ ॥**

ಇದು ಭಾರತದಲ್ಲಿ ಕರ್ಣಪರ್ವದಲ್ಲಿ ೭೨ನೆಯ ಶ್ಲೋಕ. ಇದು ತಾನು ಮಾಡಿದ ಪ್ರತಿಜ್ಞಾಪರಿಪಾಲನ ಧರ್ಮಲೇಶಕ್ಕಾಗಿ ಗುರುತರವಾದ ಭ್ರಾತೃವಧದಲ್ಲಿ ತೊಡಗಿದ ಅರ್ಜುನನನ್ನು ಸಮಾಧಾನ ಮಾಡುವುದಕ್ಕಾಗಿ ಶ್ರೀ ಕೃಷ್ಣನ ಮಾತು-ಮೊದಲು ಕೇಳಿರುವ ಅರ್ಥವನ್ನು ಬಿಡದವನಾಗಿಯೂ, ತಾನಾಗಿಯೇ ಧರ್ಮ ಸೂಕ್ಷ್ಮಗಳನ್ನು ವಿವೇಚನೆ ಮಾಡಲು ಅಶಕ್ತನಾಗಿಯೂ, ಆದುದರಿಂದಲೇ ಧರ್ಮ ಗಳನ್ನು ತಿಳಿಯದವನಾಗಿಯೂ ಇರುವ ಒಬ್ಬನು, ತನಗೆ ಸಂದೇಹವಾದ ಅರ್ಥ ಗಳನ್ನು ಹಿರಿಯರ ಹತ್ತಿರ ಕೇಳದವನಾಗಿದ್ದು ಕುರುಡನಾದವನು ಹೇಗೆ ಹಳ್ಳದಲ್ಲಿ ಬೀಳುವನೋ, ಹಾಗೆ ಅನರ್ಥದಲ್ಲಿ ಬೀಳುತ್ತಾನೆ.

**ಅನ್ಯಥಾಮನ್ದಬುದ್ಧೀನಾಂ ಪ್ರತಿಭಾತಿದುರಾತ್ಮನಾಮ್ ।**
**ಕುತರ್ಕ (ವ್ಯಾಳದಷ್ಟಾನಾಂ) ಜ್ಞಾನ ದುಷ್ಟಾನಾಂ-**
**ವಿಭ್ರಾಂತೇಂದ್ರಿಯ ವಾ (ಜಿ) ದಿನಾಮ್ ॥**

ಇದು ಇತಿಹಾಸ ಸಮುಚ್ಚಯದಲ್ಲಿ ೩೩ನೆಯ ಅಧ್ಯಾಯದಲ್ಲಿ ೧೧೮ನೆಯ ಶ್ಲೋಕ. ಮಂದ ಬುದ್ಧಿಗಳಾಗಿ ಸತ್ಪುರುಷರನ್ನು ನಿನ್ದಿಸುವವರಾಗಿ, ಕುತ್ಸಿತ ವಾದ ತರ್ಕದಿಂದ ದುಷ್ಟರಾಗಿ ಭ್ರಾನ್ತಿಗೊಂಡ ಇಂದ್ರಿಯವುಳ್ಳವರಾದ ವಾದಿಗಳಿಗೆ ಬೇರೆ ಬೇರೆ ವಿಧವಾಗಿ ಎಲ್ಲಾ ಅರ್ಥಗಳೂ ತೋಚುತ್ತವೆ ಎಂದು ಇದರ ಅರ್ಥ. ಈ ಎರಡು ಶ್ಲೋಕಗಳಲ್ಲಿ ಹೇಳಲ್ಪಟ್ಟವರ ಸ್ಥಿತಿ ಈ ಗೃಹೀತಗ್ರಾಹಿಗಳಿಗೆ ಬರುತ್ತದೆ.

ಆದುದರಿಂದ ಸಿದ್ಧೋಪಾಯ ಶಬ್ದವಾಚ್ಯದ ವಿಮರ್ಶದಲ್ಲಿ 'ನಾನಯೋರ್ವಿದ್ಯತೇ ಪರಮ್'' — ಇವರಿಬ್ಬರೇ ಉತ್ಕೃಷ್ಟರು—ನಿರುಪಾಧಿಕಶೇಷಿಗಳು. ಇವರಿಗಿಂತ ಶ್ರೇಷ್ಠವಾದದ್ದು ಮತ್ತೊಂದಿಲ್ಲ.

**ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮಃ ।**

ಹೇಗೆ ಎಲ್ಲರಿಂದಲೂ ಇವನು ಉಪಾಯವಾಗಿದ್ದಾನೆ ಎಂದು ಅರಿಯಲ್ಪಟ್ಟು ಆಶ್ರಯಿಸಲ್ಪಟ್ಟಿದ್ದಾನೋ, ಹಾಗೆಯೇ ಅವನಿಗೆ ಅನುಗುಣವಾಗಿ ರಕ್ಷಣ ಸಂಕಲ್ಪ ದವಳು ಇವಳೂ ಕೂಡ. ಇಬ್ಬರಿಗೂ ಒಂದೇ ಅಭಿಪ್ರಾಯವಿದೆ ಎಂಬುದರಲ್ಲಿ ಇದು ಪ್ರಮಾಣ, ಅಲ್ಲದೆ ಇವರಿಬ್ಬರೂ ಶೇಷಿಗಳು ಎಂಬುದರಲ್ಲಿ—

**ಅಸ್ಯಾ ದೇವ್ಯಾ ಮನಸ್ತಸ್ಮಿನ್ ತಸ್ಯಚಾಸ್ಯಾಂ ಪ್ರತಿಷ್ಠಿತಮ್ ॥**

ಇದು ಇವರಿಬ್ಬರಿಗೂ ಇರುವ ಪರಸ್ಪರ ಪ್ರಾವಣ್ಯದಲ್ಲಿ ಪ್ರಮಾಣ.

**ವ್ಯಾಪಕಾವತಿ ಸಂಶ್ಲೇಷಾದೇಕ ತತ್ತ್ವಮಿವೋದಿತೌ ॥**

ಇದು ಸ್ವರೂಪರೂಪಾದಿಗಳಲ್ಲಿ ಅಗಲದಿರುವ ಸಂಬಂಧ ವಿಶೇಷದಲ್ಲಿ ಪ್ರಮಾಣ.

ಹೀಗೆ **'ಗಾಢೋಪಗೂಢಾನಿತೆ** ಎಂಬುವಹಾಗೆ ಸುಶ್ಲಿಷ್ಟವಾದ—ಚೆನ್ನಾಗಿ ಸಂಬಂಧವನ್ನು ಪಡೆದಿರುವ ವಿಶಿಷ್ಟತತ್ತ್ವವು ಇರುವ ಸ್ಥಿತಿ—ಲಕ್ಷ್ಮೀವಿಶಿಷ್ಟವಾದ ನಾರಾಯಣತತ್ತ್ವವು ಎಲ್ಲಾ ಅವಸ್ಥೆಯಲ್ಲೂ ಎಲ್ಲಾ ಪ್ರಕಾರದಲ್ಲೂ ಸೇರಿಯೇ ಇರುವ ಸ್ಥಿತಿಯು ಭಙ್ಗವಾಗದ ಹಾಗೆ, ವಿಶೇಷಣದೊಡನೆ ದ್ವಯದಲ್ಲಿ ಪೂರ್ವೋತ್ತರ ಖಂಡದಲ್ಲಿ ಇರುವ ನಾರಾಯಣ ಶಬ್ದವು ಶ್ರೀ ವಿಶಿಷ್ಟವಾಗಿಯೇ ಹೇಳುವ ರೀತಿಯನ್ನು ಅನುಸಂಧಾನ ಮಾಡುವುದು ಸತ್ವಸ್ಥರಿಗೆ ಆವಶ್ಯಕವು.

**ಸ್ಫಾರಾಸ್ತೀರ್ಣಭುಜಙ್ಗಪುಙ್ಗವವಪುಃ ಪರ್ಯಙ್ಕವರ್ಯಂಗತೌ**
**ಸರ್ಗಸ್ಥಿತ್ಯವಸಾನ ಕೇಳಿರಸಿಕೌ ತೌ ದಮ್ಪತೀನಃ ಪತೀ ।**
**ನಾ ಭೀಪಙ್ಕಜಶಾಯಿನಃ ಶ್ರುತಿಸುಖೈರನ್ಯೋನ್ಯಬದ್ಧಸ್ಮಿತೌ**
**ಡಿಮ್ಭಸ್ಯಾಮ್ಬುಜಸಂಭವಸ್ಯ ವಚನೈರೋನ್ತತ್ಸದಿತ್ಯಾದಿಭಿಃ ॥**

ಈ ಶ್ಲೋಕವು ವೇದಾಂತಾಚಾರ್ಯರು ರಚಿಸಿರುವ ನ್ಯಾಯಸಿದ್ಧಾಞ್ಜನ ಗ್ರಂಥದ ಈಶ್ವರ ಪರಿಚ್ಛೇದದ ಕೊನೆಯ ಶ್ಲೋಕ.

ಲಕ್ಷ್ಮೀ ಮತ್ತು ನಾರಾಯಣ ಈ ದಿವ್ಯದಂಪತಿಗಳು ಶ್ರೀ ವೈಕುಂಠದಲ್ಲಿ ಆನಂದಮಯ ರತ್ನಮಂಟಪದಲ್ಲಿ ವಿಸ್ತಾರವಾಗಿ ಹರಡಿದ ಆದಿಶೇಷನ ಶರೀರ ವೆಂಬ ಮಂಚದಲ್ಲಿ ಕುಳಿತಿದ್ದಾರೆ. ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳೆಂಬ ಆಟದಲ್ಲಿ ವಿನೋದವನ್ನು ಅನುಭವಿಸುತ್ತಿದ್ದಾರೆ. ನಾರಾಯಣನ ಹೊಕ್ಕಳಿನಿಂದ ತಾವರೆಯ ದಂಟೊಂದು ಹೊರಟಿದೆ. ಅದರಲ್ಲಿ ಒಂದು ಕಮಲವು ಅರಳಿದೆ. ಅದರಲ್ಲಿ ಒಂದು ಶಿಶು ಹುಟ್ಟಿ ಮಲಗಿದೆ. ಅದೇ ಚತುರ್ಮುಖ ಬ್ರಹ್ಮ. ಅವನು

[1]'ಓಂ ತತ್ಸತ್' ಇದೇ ಮೊದಲಾದ ಶಬ್ದಗಳನ್ನು ಹೇಳುತ್ತಾನೆ. ಇದು ಇವರಿಗೆ ಕೇಳಲು ಇಂಪಾಗಿದೆ. ಆದುದರಿಂದ ಇವರು ಪರಸ್ಪರ ನಗುತ್ತಾ ಆ ಶಬ್ದಗಳನ್ನು ಕೇಳುತ್ತಿದ್ದಾರೆ. ಇಂತಹ ದಿವ್ಯದಂಪತಿಗಳು ಇಬ್ಬರೂ ನಮಗೆ ಒಡೆಯರು.

ಇಲ್ಲಿಗೆ ಈಶ್ವರ ನಿರೂಪಣೆ ಮುಗಿಯಿತು.

# ಅದ್ರವ್ಯದ ನಿರೂಪಣೆ

ಈ ರೀತಿ ಪ್ರಕೃತಿ, ಕಾಲ, ಈಶ್ವರ, ಜೀವ, ನಿತ್ಯವಿಭೂತಿ, ಧರ್ಮಭೂತ ಜ್ಞಾನ ಎಂದು ದ್ರವ್ಯ ಅರು ವಿಧ ಎಂದು ಹೇಳಿ ಕ್ರಮವಾಗಿ ಆರು ದ್ರವ್ಯಗಳನ್ನು ಸಾಮಾನ್ಯವಾಗಿ ನಿರೂಪಿಸಿದ್ದಾಯಿತು. ಹೀಗೆ ದ್ರವ್ಯ ನಿರೂಪಣೆ ಆದನಂತರ ಕ್ರಮಪ್ರಾಪ್ತವಾದ ಅದ್ರವ್ಯದ ನಿರೂಪಣೆ ಮಾಡಬೇಕಾಗಿದೆ.

ಆ ದ್ರವ್ಯಗಳಲ್ಲಿ ವ್ಯವಸ್ಥಿತವಾಗಿಯೂ, ಅವುಗಳೊಡನೆ ಅವಿನಾಭೂತ ವಾಗಿಯೂ ಇರುವ ರೂಪರಸಾದಿ ಅದ್ರವ್ಯವರ್ಗ ಎಲ್ಲರಿಗೂ ಅನುಭವಸಿದ್ಧವಾಗಿದೆ. 'ಗಂಧವತಿ ಪೃಥಿವೀ=ಗಂಧವುಳ್ಳದ್ದು ಪೃಥಿವಿ' ಎಂದಾಗ ಗಂಧಾದಿ ಅದ್ರವ್ಯ ಗಳ ಮೂಲಕವೇ ದ್ರವ್ಯವನ್ನು ತಿಳಿಯಬೇಕು. ಹೀಗೆ ಅದ್ರವ್ಯವಾದ ಗಂಧವನ್ನು ತಿಳಿಯದೆ ದ್ರವ್ಯವಾದ ಪೃಥಿವಿಯನ್ನು ತಿಳಿಯುವಂತಿಲ್ಲ. ಹಾಗೆಯೇ ಪೃಥಿವಿ ಯನ್ನು ತಿಳಿಯದೆ ಗಂಧವನ್ನೂ ತಿಳಿಯುವಂತಿಲ್ಲ. 'ನೀಲೋಘಟಃ=ಕಪ್ಪಾದ ಘಟ' ಎಂಬ ಪ್ರತ್ಯಕ್ಷಬಂದಾಗ ಕಪ್ಪುಬಣ್ಣ ಅದಕ್ಕೆ ಆಶ್ರಯವಾದ ಘಟದ್ರವ್ಯ ಎರಡೂ ಅದರಲ್ಲಿ ತೋರುವುದು ಎಲ್ಲರಿಗೂ ಅನುಭವಸಿದ್ಧವಾಗಿದೆ. ಈ ಆನು

1. ವೇದದಲ್ಲಿ ಹೇಳಿರುವ ಯಜ್ಞ ಮೊದಲಾದ ಕರ್ಮಗಳು, ಪ್ರಣವ ತತ್, ಸತ್, ಎಂಬ ಶಬ್ದಗಳೊಡನೆ ಸೇರಿವೆ. ಆ ಕರ್ಮಗಳಿಗೆ ಅಂಗವಾಗಿ ಅವುಗಳನ್ನು ಆರಂಭಿಸುವಾಗ ಮೊದಲಿನಲ್ಲಿ ಪ್ರಣವವನ್ನು ಹೇಳಬೇಕು. ಇದು ತಾನೆ ಅವುಗಳಿಗೆ ಪ್ರಣವದೊಡನೆ ಸೇರುವಿಕೆ. ತತ್, ಸತ್ ಎಂಬ ಎರಡು ಶಬ್ದಗಳೂ ಆ ಆ ಕರ್ಮಗಳ ಹಿರಿಮೆಯನ್ನು ಹೇಳುತ್ತವೆ. ವೇದವನ್ನು ಹೇಳುವವರು (ತ್ರೈವರ್ಣಿಕರು) ಈ ಮೂರು ಶಬ್ದಗಳನ್ನೂ ಕರ್ಮಗಳನ್ನು ಆರಂಭಿಸುವಾಗ ಹೇಳಬೇಕು. ಹಾಗೆಯೇ ವೇದಗಳೂ ಈ ಮೂರು ಶಬ್ದ ಗಳೊಡನೆ ಸೇರಿವೆ. ಈ ರೀತಿ ಇವುಗಳಿಗೆ ಈ ಸೇರಿರುವಿಕೆಯನ್ನು ಭಗವಂತನೇ ಏರ್ಪಡಿ ಸಿದ್ದಾನೆ. ಇವುಗಳಿಗೆ ಈ ಸಂಬಂಧ ಗುರುತು.

ಉಪನಿಷತ್ತುಗಳಿಂದ ಬ್ರಹ್ಮವನ್ನು ಅರಿತವರು ಪ್ರಣವವನ್ನು ಹೇಳುವಾಗ, ಅದರ ಅರ್ಥವಾದ ಬ್ರಹ್ಮವನ್ನು ಅರಿತು ಈ ಕರ್ಮಗಳು ಭಗವಂತನಿಗೆ ಸಂತೋಷವನ್ನು ಉಂಟು ಮಾಡುತ್ತದೆ ಎಂದು ನೆನೆಸುತ್ತಾರೆ. ಬ್ರಹ್ಮವನ್ನು ಅರಿಯದವರೂ ಪ್ರಣವದ ಅರ್ಥವನ್ನು ತಿಳಿಯದಿದ್ದರೂ ಅದನ್ನು ಹೇಳುವ ಮಾತ್ರದಿಂದಲೇ ಕ್ಷೇಮವನ್ನು ಪಡೆಯುತ್ತಾರೆ.

ಭವದಲ್ಲಿ ಅನ್ಯೋನ್ಯಾಶ್ರಯಾದಿ ದೋಷಗಳ ಪ್ರಸಕ್ತಿಯೇ ಇಲ್ಲ. ಆದುದರಿಂದ ಆಧಾರವಾಗಿತೋರುವ ವಸ್ತುವನ್ನು ದ್ರವ್ಯವೆಂದೂ, ಸ್ವತಂತ್ರವಾಗಿ ಇರಲಾರದೆ, ದ್ರವ್ಯದಲ್ಲಿ ಆಧೇಯವಾಗಿ ತೋರುವುದನ್ನು ಅದ್ರವ್ಯ ಎಂದೂ ತಿಳಿಯತಕ್ಕದ್ದಾಗಿದೆ. ದ್ರವ್ಯಭಿನ್ನವಾದುದು (ಉಪಾದಾನವಲ್ಲದುದು) ಅದ್ರವ್ಯವೆನಿಸಿಕೊಳ್ಳುವುದು.

ಸಂಯೋಗ ರಹಿತಮದ್ರವ್ಯಮ್—ಸಂಯೋಗವಿಲ್ಲದ್ದು ಅದ್ರವ್ಯ. ಸಂಯೋಗ ವೆಂಬ ಸಂಬಂಧವು ದ್ರವ್ಯಗಳಿಗೇ ಪರಸ್ಪರವಾಗಿ ಉಂಟಾಗುವುದಲ್ಲದೆ ಅದ್ರವ್ಯಗಳಿಗಾಗಲಿ ದ್ರವ್ಯ ಅದ್ರವ್ಯಗಳಿಗಾಗಲಿ ಉಂಟಾಗುವುದಿಲ್ಲ. ಇವೆಲ್ಲಾ ಅದರ ಲಕ್ಷಣ. ಆ ಅದ್ರವ್ಯವು ಸತ್ತ್ವ, ರಜಸ್ಸು, ತಮಸ್ಸು, ಶಬ್ದ, ಸ್ಪರ್ಶ, ರೂಪ, ರಸ, ಗನ್ಧ, ಸಂಯೋಗ, ಶಕ್ತಿ ಎಂದು ಹತ್ತು ರೀತಿಯಾಗಿದೆ. ಈ ರೀತಿಯಾದ ಅದ್ರವ್ಯಗಳಲ್ಲೇ ಗುರುತ್ವ ದ್ರವತ್ವ ಸ್ನೇಹ ಸಂಸ್ಕಾರ ಸಂಖ್ಯಾ ಪರಿಮಾಣ ಪೃಥಕ್ತ್ವ ವಿಭಾಗ ಪರತ್ವ ಅಪರತ್ವ ಕರ್ಮ ಸಾಮಾನ್ಯ ಸಾದೃಶ್ಯ ವಿಶೇಷ ಸಮವಾಯ ಅಭಾವ ವೈಶಿಷ್ಟ್ಯ ಇವೇ ಮುಂತಾದವುಗಳಿಗೆ ಆ ಆ ಸಂದರ್ಭಗಳಿಗೆ ತಕ್ಕಂತೆ ಅನ್ತರ್ಭಾವ. ಇವುಗಳಲ್ಲೂ ಕೆಲವುಗಳಿಗೆ ಅನನ್ತರ್ಭಾವವು— ಅವುಗಳೊಡನೆಯೇ ಸೇರದಿರುವಿಕೆಯು ಉಂಟೆಂದು ಆಚಾರ್ಯರು ಅಭಿಪ್ರಾಯಪಡುತ್ತಾರೆ. ಅದು ಸಯೂಥ್ಯಸಮ್ಮತವಾದದ್ದು. ಸಮಾನವಾದವರು ಒಪ್ಪಿರುವ ಏಕತ್ವಾದಿಗಳು ಅದ್ರವ್ಯಭೇದಗಳೆಂದು ತತ್ತ್ವಮುಕ್ತಾಕಲಾಪದಲ್ಲಿ ನಿರೂಪಿಸಿದ್ದಾರೆ.

**[1]ಕೈವಲ್ಯಂ ನೈಕ ಸಂಖ್ಯಾ ಪರವಿರಹತಯಾ ನಾಪಿಮುಖ್ಯಾನ್ಯಭಾವೌ ಸಂಘಾ**
**ತೈಕ್ಯಂತುರಾಶಿ ಕ್ರಮುಮವಯವಿ ತು ಪ್ರಾಗ್‌ನಿರಸ್ತಂತತೋಽನ್ಯತ್।**
**ತೇನಾಸಜ್ಖ್ಯಾ ತರೂಪೇಕ್ಷ್ವಚನ ನಿರುಪಧಿಃಸ್ಯಾದಸಾವೇಕಸಂಖ್ಯಾ**
**ಸ್ವಾಧಾರೈ ಕಾಯುರೇಷಾ ಪರಮುಪಚರಿತಾ ಸೇಯಮದ್ರವ್ಯವರ್ಗೇ ॥**

'ಏಕತ್ವ' ಸಂಖ್ಯೆಯ ವಿಚಾರವನ್ನು ಹೇಳುತ್ತಾರೆ—ಪರವಿರಹತಯಾ ಏಕ ಸಂಖ್ಯಾ ಕೈವಲ್ಯಂನ—'ಮುಖ್ಯಾನ್ಯ ಕೇವಲೇಷ್ವೇಕಂ'—ಮುಖ್ಯ, ಅನ್ಯ, ಕೇವಲ ಎಂಬ ಅರ್ಥಗಳಲ್ಲಿ 'ಏಕ' ಪದವಿರುತ್ತದೆ ಎಂಬ ಕೋಶವಿದ್ದರೂ ಏಕತ್ವವೆಂಬುದು ಕೈವಲ್ಯ ರೂಪವಲ್ಲ. ಏತಕ್ಕೆಂದರೆ 'ಕೈವಲ್ಯ' ಎಂಬುದು ಇತರ ವಸ್ತುಗಳ ಅಭಾವವಾಗುತ್ತದೆ. 'ಏಕ' ಎಂಬ ಶಬ್ದ ಭಾವರೂಪವಾದ ಅರ್ಥವನ್ನು ಕೊಡುತ್ತಿರುವುದು ಅನುಭವಸಿದ್ಧವಾಗಿರುವುದರಿಂದ, ಇತರ ವಸ್ತುಗಳ ನಿಷೇಧಮಾತ್ರ ಏಕತ್ವವಲ್ಲ. ಮುಖ್ಯಾನ್ಯಭಾವಾವಪಿನ—ಅಪ್ರಧಾನವಾದ ವಸ್ತುಗಳಲ್ಲೂ 'ಏಕ' ಪದವನ್ನು ಪ್ರಯೋಗಿಸುವುದರಿಂದ ಏಕತ್ವ ಮುಖ್ಯತ್ವರೂಪವೂ ಅಲ್ಲ.

1. ತತ್ತ್ವಮುಕ್ತಾಕಲಾಪ. ಅದ್ರವ್ಯಸರ. ೪೧ (೪೦೧)

ಇದರಂತೆಯೇ ಎಲ್ಲಾ ವಸ್ತುಗಳಲ್ಲೂ ಏಕತ್ವ ವ್ಯವಹಾರ ಬರುವುದರಿಂದ ಏಕತ್ವ ಅನ್ಯತ್ವರೂಪವೂ ಅಲ್ಲ. **ಸಂಘಾತೈಕ್ಯಂತು ರಾಶಿಕ್ರಮಂ**=ಸಮುದಾಯದಲ್ಲಿ ಸೇರಿರುವುದೇ ಏಕತ್ವ ಎಂಬುದೂ ಸರಿಯಲ್ಲ. ಆವಾಗ 'ಇದು ಒಂದುರಾಶಿ' ಇವೇ ಮೊದಲಾದ ವ್ಯವಹಾರದ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಒಂದು ಜಾತಿಯ ಧಾನ್ಯಗಳಾದ ಕಾರಣದಿಂದಲೋ ಒಂದುಕಡೆಯಲ್ಲಿ ಸೇರಿರುವ ಕಾರಣ ದಿಂದಲೋ ಆ ವ್ಯವಹಾರ ಬರುವುದು. ಇಲ್ಲಿ ಒಂದು ಎಂಬುದು ಸಂಖ್ಯಾರೂಪವಲ್ಲ.

ಅವಯವಕ್ಕಿಂತಲೂ ಅವಯವಿ ಅತಿರಿಕ್ತವಾದುದರಿಂದ ಏಕತ್ವಸಂಖ್ಯೆ ಅವಯವಿಯಲ್ಲಿರುತ್ತದೆ ಎಂದರೆ,

ಸ್ಪರ್ಶವುಳ್ಳ ಎರಡು ವಸ್ತುಗಳು ಒಂದೇ ಜಾಗದಲ್ಲಿ ಒಂದೇ ಸಮಯ ದಲ್ಲಿರಲು ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ಸಮ್ಮತವಾದದ್ದು. ಘಟವಿರುವ ಅದೇ ಜಾಗದಲ್ಲಿ ಅದೇ ಸಮಯದಲ್ಲಿ ಮತ್ತೊಂದು ಘಟವನ್ನು ಇಡಲು ಯಾರಿಗೂ ಸಾಧ್ಯವಿಲ್ಲ. ಅವಯವ ಅವಯವಿ ಎರಡೂ ಸ್ಪರ್ಶವತ್ತಾದ ಬೇರೆಬೇರೆ ಪದಾರ್ಥ ಗಳಾದರೆ ಎರಡೂ ಒಂದೇ ಜಾಗದಲ್ಲಿ ಒಂದೇ ಸಮಯದಲ್ಲಿ ಸೇರಲು ಸಾಧ್ಯವೇ ಇಲ್ಲ. ಆದುದರಿಂದ ಅವಯವ ಮತ್ತು ಅವಯವಿಗಳು ಅಥವಾ ಉಪಾದಾನ ಮತ್ತು ಉಪಾದೇಯ ಪರಸ್ಪರ ಭಿನ್ನವಲ್ಲ. ಈ ಯುಕ್ತಿಯಿಂದ **ತತಃಅನ್ಯತ್ ಅವಯವಿತು ಪ್ರಾಕ್‌ನಿರಸ್ತಂ**=ಅವಯವಕ್ಕಿಂತಲೂ ಅತಿರಿಕ್ತವಾದ ಅವಯವಿಯನ್ನು ನಿರಾಕರಿಸಿ ದ್ದಾಗಿದೆ.

**ತೇನ ಅಸಂಘಾತರೂಪೇ ಕ್ವಚನ ಅಸೌ ಏಕಸಂಖ್ಯಾ ನಿರುಪಧಿಃ ಸ್ಯಾತ್**= ಆದರಿಂದ ಸಮುದಾಯ ರೂಪವನ್ನು ತಾಳದ ನಿರವಯವಾದ ಪ್ರತ್ಯೇಕ ಪರಮಾ ಣ್ವಾದಿಗಳಲ್ಲೇ ಏಕತ್ವಸಂಖ್ಯೆ ನಿರುಪಾಧಿಕವಾಗಿ ಇರುತ್ತದೆ. ಉಳಿದ ಕಡೆಯಲ್ಲಿ ಇರುವುದು ಸಂಖ್ಯಾರೂಪವಲ್ಲ. **ಏಷಾಸ್ವಾಧಾರೈಕಾಯುಃ**=ಈ ಏಕತ್ವ ತನ್ನ ಆಧಾರವನ್ನು ಅವಲಂಬಿಸಿ ನಿತ್ಯ ಅಥವಾ ಅನಿತ್ಯವಾಗುತ್ತದೆ. ನಿತ್ಯವಾದ ಪರಮಾತ್ಮನಲ್ಲಿ ಇರುವ ಏಕತ್ವ ನಿತ್ಯ, ಸಿದ್ಧಾಂತದಲ್ಲಿ ಪರಮಾಣು ಅನಿತ್ಯವಾದು ದರಿಂದ ಅದರಲ್ಲಿರುವ ಏಕತ್ವ ಅನಿತ್ಯ.

**ಸೇಯಂ ಅದ್ರವ್ಯವರ್ಗೇ ಪರಂಉಪಚರಿತಾ**=ಇಂತಹ ಸಂಖ್ಯೆ ಅದ್ರವ್ಯ ಗಳಲ್ಲಂತೂ ಔಪಚಾರಿಕವೇ ಆಗುತ್ತದೆ. **ಇತ್ಯಾದೌ ಏಕತ್ವಾದೀನಾಂ ಪೃಥಗಭಿ ಧಾನಂ**—ಇವೇ ಮೊದಲಾದವುಗಳಲ್ಲಿ ಏಕತ್ವಾದಿಗಳಿಗೆ ಬೇರೆಯಾಗಿ ಹೇಳುವುದು. **ಸಯೂಥ್ಯಾಙ್ಗೀಕೃತತ್ವಾದಿತಿಭಾವಃ**=ಸಮಾನವಾದ ಗುಂಪಿನವರು ಒಪ್ಪಿರುವುದ ರಿಂದ ಎಂದು ಅಭಿಪ್ರಾಯ ; ಇದು ನ್ಯಾಯಸಿದ್ಧಾಞ್ಜನದ ವ್ಯಾಖ್ಯಾಪಙ್ಕ್ತಿ.

## ಸತ್ತ್ವಗುಣಲಕ್ಷಣ

ಅದ್ರವ್ಯಗಳಲ್ಲಿ "ಪ್ರಕಾಶಕ್ಕೆ ಅಥವಾ ಸುಖಕ್ಕೆ, ಅಥವಾ ಲಾಘವಕ್ಕೆ ಕಾರಣ ವಾಗಿಯೂ, ಅತೀನ್ದ್ರಿಯವಾಗಿಯೂ, ಶಕ್ತ್ಯಾದಿಗಳಿಗಿಂತ ಬೇರೆಯಾದ ಅದ್ರವ್ಯವು ಸತ್ತ್ವವೆನಿಸಿಕೊಳ್ಳುವುದು". ಈ ಲಕ್ಷಣದಲ್ಲಿ ಮೂರು ವಿಶೇಷಣಗಳೂ, ಒಂದು ವಿಶೇಷ್ಯವೂ ಇರುವುವು. ಇವುಗಳಲ್ಲಿ "ಪ್ರಕಾಶ, ಸುಖ, ಲಾಘವಗಳಿಗೆ ಕಾರಣವಾಗಿರುವ" ಎಂಬ ಮೊದಲನೆಯ ವಿಶೇಷಣವನ್ನು ಲಕ್ಷಣದಲ್ಲಿ ಸೇರಿಸದಿದ್ದರೆ ಅತೀಂದ್ರಿಯವಾಗಿಯೂ, ಶಕ್ತಿಭಿನ್ನವಾಗಿಯೂ ಇರುವ ರಜೋಗುಣ ತಮೋ ಗುಣಗಳಲ್ಲಿ ಲಕ್ಷಣವು ಅತಿಪ್ರಸಕ್ತವಾಗುವುದು. ಅದಕ್ಕಾಗಿ ಮೊದಲನೆಯ ವಿಶೇಷಣವು ಸೇರಿಸಲ್ಪಟ್ಟಿರುವುದು. ರಜೋಗುಣ ತಮೋಗುಣಗಳು ಪ್ರಕಾಶ ಕ್ಕಾಗಲಿ ಸುಖಕ್ಕಾಗಲಿ ಲಾಘವಕ್ಕಾಗಲಿ ಕಾರಣಗಳಲ್ಲವಾದುದರಿಂದ ಲಕ್ಷಣಕ್ಕೆ ಅತಿಪ್ರಸಂಗವಿಲ್ಲ.

'ಅತೀನ್ದ್ರಿಯವಾಗಿರುವ' ಎಂಬ ಎರಡನೆಯ ವಿಶೇಷಣವನ್ನು ಲಕ್ಷಣದಲ್ಲಿ ಸೇರಿಸದಿದ್ದರೆ—ಶಬ್ದ—ಸ್ಪರ್ಶ—ರೂಪ—ರಸ, ಗಂಧಗಳಲ್ಲಿ ಲಕ್ಷಣವು ಅತಿಪ್ರಸಕ್ತ ವಾಗುವುದು. ಅದಕ್ಕಾಗಿ ಅತೀನ್ದ್ರಿಯತ್ವ ವಿಶೇಷಣವು ಸೇರಿಸಲ್ಪಟ್ಟಿರುವುದು. ಶಬ್ದಾದಿಗಳು ಇಂದ್ರಿಯಗಳಿಗೆ ಗೋಚರಗಳಾಗಿಯೂ ಇರುವುವಲ್ಲದೆ ಅತೀನ್ದ್ರಿಯ ಗಳಲ್ಲವಾದುದರಿಂದ ಲಕ್ಷಣಕ್ಕೆ ಅತಿಪ್ರಸಂಗವಿಲ್ಲ.

'ಶಕ್ತಿಭಿನ್ನವಾಗಿರುವ' ಎಂಬ ಮೂರನೆಯ ವಿಶೇಷಣವನ್ನು ಲಕ್ಷಣದಲ್ಲಿ ಸೇರಿಸದಿದ್ದರೆ—ಶಕ್ತಿಯಲ್ಲಿ ಲಕ್ಷಣವು ಅತಿಪ್ರಸಕ್ತವಾಗುವುದು. ಅದಕ್ಕಾಗಿ ಶಕ್ತಿ ಭಿನ್ನತ್ವ ವಿಶೇಷಣವು ಸೇರಿಸಲ್ಪಟ್ಟಿರುವುದು. ಶಕ್ತಿಯಲ್ಲಿ ಶಕ್ತಿಭಿನ್ನತ್ವವಿಲ್ಲವಾದು ದರಿಂದ ಲಕ್ಷಣಕ್ಕೆ ಅತಿಪ್ರಸಂಗವಿಲ್ಲ.

ವಿಶೇಷ್ಯ ದಳವನ್ನು ಲಕ್ಷಣದಲ್ಲಿ ಸೇರಿಸದಿದ್ದರೆ—ಪ್ರಕಾಶ—ಸುಖ ಲಾಘವ ಗಳಿಗೆ ಕಾರಣಗಳಾಗಿಯೂ ಅತೀನ್ದ್ರಿಯಗಳಾಗಿಯೂ ಶಕ್ತಿಭಿನ್ನಗಳಾಗಿಯೂ ಇರುವ ಜೀವ, ಈಶ್ವರ, ನಿತ್ಯವಿಭೂತಿ, ಧರ್ಮಭೂತಜ್ಞಾನವೆಂಬ ದ್ರವ್ಯಗಳಲ್ಲಿ ಲಕ್ಷಣಕ್ಕೆ ಅತಿಪ್ರಸಂಗವುಂಟಾಗುವುದು. ಅದಕ್ಕಾಗಿ ಅದ್ರವ್ಯವೆಂಬ ವಿಶೇಷ್ಯವು ಸೇರಿಸಲ್ಪಟ್ಟಿರುವುದು. ದ್ರವ್ಯಗಳಲ್ಲಿ ಅದ್ರವ್ಯತ್ವವಿಲ್ಲವಾದುದರಿಂದ ಲಕ್ಷಣಕ್ಕೆ ಅತಿ ಪ್ರಸಂಗವಿಲ್ಲ.

ಈ ರೀತಿಯಾದ ಸತ್ತ್ವಗುಣವು ಎರಡು ಬಗೆಯಾಗಿರುವುದು. ಅವುಗಳಲ್ಲಿ ಒಂದನ್ನು ಶುದ್ಧ ಸತ್ತ್ವವೆಂದೂ ಮತ್ತೊಂದನ್ನು ಅಶುದ್ಧ ಸತ್ತ್ವವೆಂದೂ ಶಾಸ್ತ್ರ ಕಾರರು ವ್ಯವಹರಿಸುವರು. ರಜೋಗುಣ ತಮೋಗುಣಗಳ ಸಂಪರ್ಕವಿಲ್ಲದ

ದ್ರವ್ಯದಲ್ಲಿರುವ ಸತ್ತ್ವಗುಣವು ಶುದ್ಧಸತ್ತ್ವವೆನಿಸಿಕೊಳ್ಳುವುದು. ಇದು ನಿತ್ಯ ವಿಭೂತಿಯೊಂದರಲ್ಲಿಯೇ ಇರತಕ್ಕುದಾಗಿರುವುದು. ರಜೋಗುಣ ತಮೋಗುಣ ಗಳ ಸಂಪರ್ಕವಿರುವ ಸತ್ತ್ವವು ಅಶುದ್ಧಸತ್ತ್ವ ಅಥವಾ ಮಿಶ್ರಸತ್ತ್ವವೆನಿಸಿಕೊಳ್ಳು ವುದು. ಇದು ಮೂಲಪ್ರಕೃತಿದ್ರವ್ಯದಲ್ಲಿಯೂ ಅದರ ವಿಕಾರದ್ರವ್ಯಗಳಲ್ಲಿಯೂ ಇರತಕ್ಕುದಾಗಿರುವುದು.

## ರಜೋಗುಣಲಕ್ಷಣ

"ಲೋಭಕ್ಕಾಗಲಿ ಪ್ರವೃತ್ತಿಗಾಗಲಿ ಕಾರಣವಾಗಿಯೂ, ಅತೀನ್ದ್ರಿಯ ವಾಗಿಯೂ, ಶಕ್ತಿಭಿನ್ನವಾಗಿಯೂ ಇರುವ ಅದ್ರವ್ಯವು ರಜೋಗುಣವೆನಿಸಿ ಕೊಳ್ಳುವುದು". ಇವುಗಳಲ್ಲಿ ಪ್ರಥಮ ವಿಶೇಷಣವನ್ನು ಲಕ್ಷಣದಲ್ಲಿ ಸೇರಿಸದಿದ್ದರೆ ಅತೀನ್ದ್ರಿಯವಾಗಿಯೂ ಶಕ್ತಿಭಿನ್ನವಾಗಿಯೂ ಅದ್ರವ್ಯವಾಗಿಯೂ ಇರುವ ಸತ್ತ್ವ ಗುಣ ತಮೋಗುಣಗಳಲ್ಲಿ ಲಕ್ಷಣವು ಅತಿಪ್ರಸಕ್ತವಾಗುವುದು. ಅದಕ್ಕಾಗಿ ಮೊದಲ ನೆಯ ವಿಶೇಷಣವು ಸೇರಿಸಲ್ಪಟ್ಟಿರುವುದು. ಸತ್ತ್ವಗುಣ ತಮೋಗುಣಗಳು ಲೋಭಕ್ಕಾಗಲಿ ಪ್ರವೃತ್ತಿಗಾಗಲಿ ಕಾರಣಗಳಲ್ಲವಾದುದರಿಂದ ಲಕ್ಷಣಕ್ಕೆ ಅತಿಪ್ರಸಂಗ ವಿಲ್ಲ. ಉಳಿದ ಪದಗಳ ಪ್ರಯೋಜನವನ್ನು ಹಿಂದಿನಂತೆಯೇ ತಿಳಿಯಬೇಕು.

## ತಮೋಗುಣಲಕ್ಷಣ

"ಪ್ರಮಾದಕ್ಕಾಗಲಿ ಮೋಹಕ್ಕಾಗಲಿ ಕಾರಣವಾಗಿಯೂ, ಅತೀನ್ದ್ರಿಯ ವಾಗಿಯೂ, ಶಕ್ತಿಭಿನ್ನವಾಗಿಯೂ ಇರುವ, ಅದ್ರವ್ಯವು ತಮೋಗುಣವೆನಿಸಿಕೊಳ್ಳು ವುದು." ಇವುಗಳಲ್ಲಿ ಮೊದಲನೆಯ ವಿಶೇಷಣವನ್ನು ಲಕ್ಷಣದಲ್ಲಿ ಸೇರಿಸದಿದ್ದರೆ ಅತೀನ್ದ್ರಿಯವಾಗಿಯೂ ಶಕ್ತಿಭಿನ್ನವಾಗಿಯೂ ಅದ್ರವ್ಯವಾಗಿಯೂ ಇರುವ ಸತ್ತ್ವ ಗುಣ ರಜೋಗುಣಗಳಲ್ಲಿ ಲಕ್ಷಣವು ಅತಿಪ್ರಸಕ್ತವಾಗುವುದು. ಅದಕ್ಕಾಗಿ ಪ್ರಥಮ ವಿಶೇಷಣವು ಸೇರಿಸಲ್ಪಟ್ಟಿರುವುದು. ಸತ್ತ್ವಗುಣ ರಜೋಗುಣಗಳು ಪ್ರಮಾದ ಕ್ಕಾಗಲಿ ಮೋಹಕ್ಕಾಗಲಿ ಕಾರಣಗಳಲ್ಲವಾದುದರಿಂದ ಲಕ್ಷಣಕ್ಕೆ ಅತಿಪ್ರಸಂಗವಿಲ್ಲ. ಉಳಿದಪದಗಳ ಪ್ರಯೋಜನವನ್ನು ಪೂರ್ವದಂತೆಯೇ ತಿಳಿಯಬೇಕು.

ಸತ್ತ್ವರಜಸ್ತಮಸ್ಸುಗಳೆಂಬ ಈ ಮೂರು ಗುಣಗಳೂ ತ್ರಿಗುಣದ್ರವ್ಯದ ಪರಿಣಾಮಗಳಾದ ಎಲ್ಲಾ ದ್ರವ್ಯಗಳಲ್ಲಿಯೂ ವ್ಯಾಪ್ತಗಳಾಗಿ ಅನಿತ್ಯಗಳೆನಿಸಿಕೊಂಡಿ ರುವುವಾದರೂ ತ್ರಿಗುಣದ್ರವ್ಯದಲ್ಲಿ ನಿತ್ಯಗಳಾಗಿಯೇ ಇರುವುವು. ಇವು ಪ್ರಳಯ ದಶೆಯಲ್ಲಿ ಹೆಚ್ಚುಕಡಿಮೆ ಇಲ್ಲದೆ ಒಂದೇ ಸಮನಾಗಿ ಇರುವುವು. ಸೃಷ್ಟಿ, ಸ್ಥಿತ್ಯ ವಸ್ಥೆಗಳಲ್ಲಿ ಪರಸ್ಪರವಾಗಿ ಅತ್ಯಂತ ವೈಷಮ್ಯವನ್ನೂ ಎಂದರೆ—ಹೆಚ್ಚುಕಡಿಮೆ

ಯಾಗಿರುವಿಕೆಯನ್ನೂ ಪಡೆಯುವವು. ಅಲ್ಲದೆ ರಜೋಗುಣವು ಸೃಷ್ಟಿಗೆ ಕಾರಣವಾಗಿಯೂ ತಮೋಗುಣವು ಸಂಹಾರಕ್ಕೆ ಕಾರಣವಾಗಿಯೂ ಸತ್ತ್ವಗುಣವು ಸ್ಥಿತಿಗೆ ಕಾರಣವಾಗಿಯೂ ಉಪಯೋಗಿಸತಕ್ಕವು ಆಗಿರುವುವು.[1]

ಮತ್ತು--ಈಶ್ವರನ ಸಂಕಲ್ಪ ವಿಶೇಷವೆಂಬ ಸಹಕಾರಿ ಕಾರಣದ ಪ್ರಭಾವದಿಂದ ಈ ಗುಣಗಳೊಳಗೆ ಒಂದು ಮತ್ತೊಂದನ್ನು ತಗ್ಗಿಸುತ್ತಲೂ ಅಥವಾ ಹೆಚ್ಚಿಸುತ್ತಲೂ ಅಥವಾ ಮತ್ತೊಂದಕ್ಕೆ ಸಹಾಯಮಾಡುತ್ತಲೂ ಪ್ರಾಪಂಚಿಕ ವ್ಯಾಪಾರಗಳಿಗೆ ಕಾರಣವಾಗುತ್ತಲೇ ಇರುವುವು.

ಹೇಗೆಂದರೆ—ಅಬಲೆಯೆಂಬ ಹೆಸರನ್ನು ಪಡೆದಿರುವ ಒಂದಾನೊಂದು ಶರೀರ ಪಿಂಡವು—ತನ್ನ ಪತಿಯನ್ನು ಕುರಿತು ಸುಖಕ್ಕೆ ಕಾರಣವಾಗಿಯೂ, ಸವತಿಯರನ್ನು ಕುರಿತು ದುಃಖಕ್ಕೆ ಕಾರಣವಾಗಿಯೂ, ವಿಟರನ್ನು ಕುರಿತು ಮೋಹಹೇತುವಾಗಿಯೂ ಲೋಕದಲ್ಲಿ ಕಾಣಬಹುದಾಗಿದೆ. ಆದರೆ ಸುಖಹೇತುತ್ತ್ವವೂ ದುಃಖಹೇತುತ್ವವೂ ಮೋಹಹೇತುತ್ವವೂ ಕೂಡ ಆ ಪಿಂಡಕ್ಕೆ ಸ್ವಾಭಾವಿಕವೆಂದು (ಸ್ವರೂಪ ಪ್ರಯುಕ್ತವೆಂದು) ಹೇಳಲಾಗುವುದಿಲ್ಲ ಸ್ವರೂಪ ಪ್ರಯುಕ್ತವಾಗಿರುವುದಾದರೆ ಎಲ್ಲರನ್ನೂ ಕುರಿತು ಒಂದೇ ರೂಪವಾಗಿಯೇ ಇರಬೇಕಲ್ಲದೆ ಒಬ್ಬೊಬ್ಬರಿಗೆ ಒಂದೊಂದು ರೂಪವಾಗಿರಕೂಡದು. ಆದಕಾರಣ—ಸುಖಾನುಭವಕ್ಕೆ ಕಾರಣವಾದ ಅದೃಷ್ಟವಿಶೇಷದೊಡನೆ ಕೂಡಿರುವ ಪತಿಯ ಸತ್ತ್ವಗುಣವು ತಲೆಯೆತ್ತಿದುದರಿಂದಲೇ ಆ ಅಬಲೆ ಗಂಡನಿಗೆ ಸುಖಕ್ಕೆ ಕಾರಣವಾಗಿ ಕಾಣುವಳು.

ದುಃಖಾನುಭವಕ್ಕೆ ಕಾರಣವಾದ ಅದೃಷ್ಟವಿಶೇಷದೊಡನೆ ಕೂಡಿರುವ ಸವತಿಯರ ರಜೋಗುಣವು ತಲೆಯೆತ್ತಿದುದರಿಂದಲೇ ಸವತಿಯರನ್ನು ಕುರಿತು ದುಃಖಹೇತುವಾಗಿ ಕಾಣುವಳು. ಮೋಹಾನುಭವಕ್ಕೆ ಕಾರಣವಾದ ಅದೃಷ್ಟ ವಿಶೇಷದೊಡನೆ ಕೂಡಿರುವ ವಿಟರ ತಮೋಗುಣವು ತಲೆಯೆತ್ತಿದುದರಿಂದಲೇ ವಿಟರನ್ನು ಕುರಿತು ಮೋಹಹೇತುವಾಗಿ ಕಾಣುವಳು.

1. ರಜೋಜುಷೇ ಜನ್ಮನಿ ಸತ್ತ್ವವೃತ್ತಯೇ
   ಸ್ಥಿತೌ ಪ್ರಜಾನಾಂ ಪ್ರಲಯೇ ತಮಃಸ್ಪೃಶೇ ।
   ಅಜಾಯ ಸರ್ಗಸ್ಥಿತಿ ನಾಶಹೇತವೇ
   ತ್ರಯೀಮಯಾಯ ತ್ರಿಗುಣಾತ್ಮನೇ ನಮಃ ॥

—ಬಾಣಭಟ್ಟನ ಕಾದಂಬರಿಯ ಮಂಗಳ ಶ್ಲೋಕ.

ಸತ್ತ್ವಾದಿಗುಣಗಳು ಪ್ರಕೃತಿದ್ರವ್ಯದಲ್ಲಿರುವುವು. ಅವು ಹೇಗೆ ಪತಿ, ಸವತಿ, ವಿಟರೆಂಬ ಆತ್ಮವಸ್ತುಗಳಲ್ಲಿ ಹೇಗೆ ಬರುವುವು ? ಎಂದರೆ ಸತ್ತ್ವಾದಿಗುಣ ತ್ರಯ ಪ್ರಚುರವಾದ ಪ್ರಕೃತಿಯ ಸಂಬಂಧವು ಆತ್ಮವಸ್ತುವಿಗೆ ಇರುವುದರಿಂದ ಆ ಗುಣಗಳು ಆತ್ಮವಸ್ತುವನ್ನು ಕಲುಷಪಡಿಸಬಲ್ಲವು. ಸ್ವಚ್ಛವಾದ ಸ್ಫಟಿಕವು ಸ್ವಾಭಾವಿಕವಾಗಿ ಕೆಂಪಾಗಿರದಿದ್ದರೂ ದಾಸವಾಳದ ಹೂವಿನ (ಪಗಡೆ ಹೂವಿನ) ಸಾನ್ನಿಧ್ಯದಿಂದ ಅದರಲ್ಲಿರುವ ಲೌಹಿತ್ಯವು ಸ್ಫಟಿಕದಲ್ಲಿಯೂ ಹರಡುವ ಹಾಗೆ ಅವೂ ಅಂಟುತ್ತವೆ, ಎಂದು ತಿಳಿಯಬೇಕು.

ಸತ್ತ್ವಾದಿಗಳೇ ಅದ್ರವ್ಯಗಳಾಗಿ ಗುಣಗಳು ಎನಿಸಿಕೊಂಡಿರುವಾಗ ಅವುಗಳಲ್ಲಿ ಉದ್ಭವವೆಂಬ (ತಲೆಯೆತ್ತುವಿಕೆಯೆಂಬ) ಮತ್ತೊಂದು ಗುಣವನ್ನು ಹೇಗೆ ಹೇಳುವುದು ಎಂದು ಸಂದೇಹ ಪಡಕೂಡದು. ಅದ್ರವ್ಯಗಳಲ್ಲಿಯೂ ಶಕ್ತಿವಿಶೇಷವೆಂಬ ಒಂದು ಗುಣವನ್ನು ಒಪ್ಪಬೇಕಾಗಿದೆ; ಅಥವಾ "ಸುಖ-ದುಃಖ-ಮೋಹಾದ್ಯುತ್ಪತ್ತಿಗೆ ಇವುಗಳು ಸಿದ್ಧವಾಗಲಿ" ಎಂಬ ಈಶ್ವರ ಸಂಕಲ್ಪಕ್ಕೆ ವಿಷಯವಾಗಿರುವಿಕೆಯೇ ಇವುಗಳ ಉದ್ಭವವೆನಿಸಿಕೊಳ್ಳುವುದು ಎಂದು ತಿಳಿಯಬೇಕು.

ಅಂತೂ—ಅಬಲೆಯ ಶರೀರ ಪಿಂಡದಲ್ಲಿರುವ ಸುಖಹೇತುತ್ವ-ದುಃಖಹೇತುತ್ವ-ಮೋಹಹೇತುತ್ವಗಳು-ಪತಿ-ಸವತಿ-ವಿಟರಲ್ಲಿರುವ ಸತ್ತ್ವರಜಸ್ತಮಸ್ಸುಗಳ ಉದ್ಭವಾವಸ್ಥೆಯಿಂದಲೇ ಬಂದಿರುವುವಲ್ಲದೆ ಸ್ವರೂಪಪ್ರಯುಕ್ತಗಳಲ್ಲ ಎಂದು ಅರಿತಂತಾಯಿತು.

ಒಂದೇ ವಸ್ತು ಕಾಲಭೇದದಿಂದಲೂ, ದೇಶಭೇದದಿಂದಲೂ, ವ್ಯಕ್ತಿಭೇದದಿಂದಲೂ ದುಃಖಕ್ಕೂ, ಸುಖಕ್ಕೂ, ಅಸೂಯೆ ಹೆಚ್ಚುವುದಕ್ಕೂ ಕೋಪಕ್ಕೂ ಕಾರಣವಾಗುವುದು. ಆದುದರಿಂದ ಯಾವ ವಸ್ತುವಿಗೂ ಏಕರೂಪತ್ವ ಅಂದರೆ ಒಂದೇ ರೂಪದಿಂದ ಇರುವಿಕೆಯೂ ಸ್ವಭಾವ ಸಿದ್ಧವಾದುದು ಎಂದು ಹೇಳಲು ಸಾಧ್ಯವಿಲ್ಲ.

ಪೂಜ್ಯರಾದ ಪರಾಶರ ಮಹರ್ಷಿಗಳು ಶ್ರೀಮದ್ವಿಷ್ಣುಪುರಾಣದಲ್ಲಿ—

**ವಸ್ತ್ವೇಕಮೇವ ದುಃಖಾಯ ಸುಖಾಯೇರ್ಷ್ಯಾಗಮಾಯಚ ।**
**ಕೋಪಾಯಚ ಯತಸ್ತಸ್ಮಾದ್ವಸ್ತು ವಸ್ತ್ವಾತ್ಮಕಂ ಕುತಃ ॥**
**ತದೇವ ಪ್ರೀತಯೇಭೂತ್ವಾ ಪುನರ್ದುಃಖಾಯ ಜಾಯತೇ ।**
**ತದೇವ ಕೋಪಾಯ ಯತಃ ಪ್ರಸಾದಾಯಚ ಜಾಯತೇ ।**
**ತಸ್ಮಾದ್ದುಃಖಾತ್ಮಕಂನಾಸ್ತಿ ನ ಚ ಕಿಂಚಿತ್ಸುಖಾತ್ಮಕಮ್ ॥**

ಒಂದೇ ವಸ್ತುವು ಬೇರೆಬೇರೆಯಾದ ಪುರುಷರನ್ನು ಕುರಿತು ಸುಖ ದುಃಖ ಮೋಹಾದಿಗಳಿಗೆ ಕಾರಣವಾಗಿರುವುದೆಂದೂ, ಮತ್ತು ಒಂದೇ ವಸ್ತುವು ಒಂದೇ ಪುರುಷನನ್ನು ಕುರಿತು ಬೇರೆಬೇರೆಯಾದ ಕಾಲದಲ್ಲಿ ಸುಖ ದುಃಖ ಮೋಹ ಮುಂತಾದವುಗಳಿಗೆ ಕಾರಣವಾಗಿ ಪರಿಣಮಿಸುವುದೆಂದೂ ಲೋಕದಲ್ಲಿ ಕಾಣುವು ದರಿಂದ ಯಾವ ವಸ್ತುವಿಗೂ ಒಂದೇ ರೂಪವಾಗಿರುವಿಕೆಯೂ ಸ್ವಾಭಾವಿಕವಲ್ಲ ವೆಂಬುದನ್ನು ಹೇಳಿದ್ದಾರೆ.

ಗೀತಾಚಾರ್ಯನು ಭಗವದ್ಗೀತೆಯ ಹದಿನಾಲ್ಕನೆ ಅಧ್ಯಾಯದಲ್ಲೂ ಶ್ರೀ ರಾಮಾನುಜರು ಅದರ ಭಾಷ್ಯದಲ್ಲೂ ಸತ್ತ್ವ, ರಜಸ್ಸು, ತಮಸ್ಸು ಇವುಗಳಿಗೆ ಸಂಬಂಧಪಟ್ಟ ಕಾರ್ಯಗಳು ಅವುಗಳಿಂದ ಉಂಟಾಗುವ ಆಹಾರ ದಾನ ಮುಂತಾದ ವಿಭಾಗ ಇವುಗಳನ್ನು ವಿಸ್ತಾರವಾಗಿ ಹೇಳಿದ್ದಾರೆ.

[1]ಸತ್ತ್ವಂರಜಸ್ತಮ ಇತಿಗುಣಾಃ ಪ್ರಕೃತಿ ಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥

ಈ ಶ್ಲೋಕದ ಅರ್ಥವನ್ನು ನಾವು ತಿಳಿಯುವುದಕ್ಕೆ ಮುಂಚಿತವಾಗಿ ಇದಕ್ಕೆ ಪೀಠಿಕೆಯಾಗಿ ಕೆಲವು ವಿಷಯಗಳನ್ನು ನಾವು ಅರಿಯಬೇಕಾಗಿದೆ.

ಪ್ರಪಂಚದಲ್ಲಿ ಎಲ್ಲಾ ಪ್ರಾಣಿಗಳೂ ಪ್ರಕೃತಿ, ಜೀವ ಇವುಗಳ ಸೇರುವಿಕೆ ಯಿಂದಲೇ ಉಂಟಾಗುತ್ತವೆಯೆಂದು ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿ ಇಪ್ಪತ್ತಾರನೆಯ ಶ್ಲೋಕದಲ್ಲಿ ಹೇಳಲ್ಪಟ್ಟಿದೆ. ಆ ಸೇರುವಿಕೆಯನ್ನು ಭಗವಂತ ನಾದ ನಾನೇ ಉಂಟುಮಾಡುತ್ತೇನೆ ಎಂದು ಗೀತಾಚಾರ್ಯನು ಹೇಳುತ್ತಾನೆ ; ಏತಕ್ಕೆಂದರೆ ಪ್ರಕೃತಿಯು ಸತ್ತ್ವ ಮೊದಲಾದ ಗುಣಗಳಿಂದ ಬಂಧವುಂಟಾಗುವ ದಾರಿಯನ್ನು ಹೇಳುವುದಕ್ಕಾಗಿ.

ಎಲ್ಲಾ ಪ್ರಪಂಚವನ್ನೂ ಉಂಟುಮಾಡುವುದು ನನ್ನದಾಗಿರುವ ಪ್ರಕೃತಿ ಯೆಂಬ ವಸ್ತು. ಅದರಲ್ಲಿ ನಾನು ಗರ್ಭವನ್ನು ಇಡುತ್ತೇನೆ. ಅದೆಂದರೆ ಹೆಂಗಸಿನ ಗರ್ಭದ ಚೀಲದಲ್ಲಿ ಗಂಡಸಿನ ಗರ್ಭವನ್ನು ಇಡುವಂತೆ, ಎಲ್ಲಾ ಪ್ರಾಣಿಗಳಿಗೂ ಬೀಜದಂತಿರುವ ಜೀವಗಳನ್ನು ಪ್ರಕೃತಿಯಲ್ಲಿ ಸೇರಿಸುತ್ತೇನೆ ; ಒಂದು ಭೂಮಿ ಯಲ್ಲಿ ಬಿತ್ತನೆಯನ್ನು ಬಿತ್ತುವಂತೆ, ಆ ಪ್ರಕೃತಿಯಲ್ಲಿ ಜೀವರುಗಳನ್ನು ಸೇರಿಸು ತ್ತೇನೆ. ಜೀವಗಳು ಸುಖದುಃಖಗಳನ್ನು ಅನುಭವಿಸುವುದಕ್ಕೆ ಜಾಗವಾದ ಪ್ರಕೃತಿ ಯೊಡನೆ ಅನುಭವಿಸುವ ಜೀವರುಗಳನ್ನು ಸೇರಿಸುತ್ತೇನೆ. ನನ್ನ ನೆನಪಿನಿಂದ ಈ

1. ಭಗವದ್ಗೀತಾ. ೧೪–೫.

ರೀತಿ ಸೇರಿಸಲ್ಪಟ್ಟ ನನ್ನದಾದ ಎರಡು [1]ಪ್ರಕೃತಿಗಳಿಂದ 'ಬ್ರಹ್ಮ' ಎಂಬುವನು ಮೊದಲು ಮಾಡಿ ಚಿಕ್ಕಹುಲ್ಲಿನವರೆಗೂ ಇರುವ ಎಲ್ಲಾ ಪ್ರಾಣಿಗಳೂ ಉಂಟಾಗುತ್ತವೆ.

[2]ಕಾರ್ಯಾವಸ್ಥೆಯಲ್ಲಿಯೂ ಕೂಡ ಚಿದಚಿತ್ಪ್ರಕೃತಿಸಂಸರ್ಗವು ನನ್ನಿಂದಲೇ ಮಾಡಲ್ಪಟ್ಟಿದೆ. 'ಅಹಂಬೀಜಪ್ರದಃಪಿತಾ' ಎನ್ನುತ್ತಾನೆ, ಜೀವ—ಶರೀರ ಇವುಗಳನ್ನು ಸೇರಿಸುವವನೂ ನಾನೇ ಎಂದು ಹೇಳುತ್ತಾನೆ.

ದೇವ, ಗಂಧರ್ವ, ಯಕ್ಷ, ರಾಕ್ಷಸ, ಮನುಷ್ಯ, ಆಡು, ಹಸು ಮುಂತಾದವುಗಳು, ಹಕ್ಕಿಗಳು ಹಾವುಗಳು—ಇವೇ ಮೊದಲಾಗಿ ಎಲ್ಲರಿಂದಲೂ ಆ ಆ ಪ್ರಾಣಿಗಳು ಉಂಟಾಗುತ್ತವೋ ಅವುಗಳಿಗೆ ಅರಿವಿರುವ ಜೀವನೊಡನೆ ನನ್ನಿಂದ ಸೇರಿಸಲ್ಪಟ್ಟ ಮಹತ್ ಮೊದಲಾದ ಐದು ಭೂತಗಳವರೆಗೂ ಪರಿಣಮಿಸಿದ—ಪ್ರಕೃತಿ ತಾನೇ ಕಾರಣ. ಅವರವರ ಕರ್ಮಕ್ಕೆ ತಕ್ಕಂತೆ ಆ ಆ ಜೀವರುಗಳನ್ನು ಆ ಆ ಶರೀರಗಳಲ್ಲಿ ನಾನು ಸೇರಿಸುತ್ತೇನೆ.

ಮೊದಲಿನಲ್ಲಿ ಪ್ರಪಂಚವನ್ನು ಸೃಷ್ಟಿಸುವಾಗ ಆ ಆ ಜೀವರುಗಳು ತಮ್ಮ ತಮ್ಮ ಕರ್ಮಕ್ಕೆ ತಕ್ಕಂತೆ ದೇವ ಮೊದಲಾದ ನಾಲ್ಕು ವಿಧವಾಗಿ ಉಂಟಾ

1. ಅದಾದರೋ—ಪ್ರಕೃತಿ, ಜೀವ. ಪ್ರಕೃತಿಯೆಂಬುದು ಕಡಿಮೆಯಾದ ಅಪರಾಪ್ರಕೃತಿ; ಜೀವನು—ಶ್ರೇಷ್ಠವಾದ ಪ್ರಕೃತಿ, ಪರಾಪ್ರಕೃತಿ, ಇವೆರಡನ್ನೂ ಭಗವಂತನ ಪ್ರಕೃತಿಯೆಂದು ಹೇಳುವುದು.

2. ಪ್ರಕೃತಿ ಜೀವ ಇವುಗಳ ಸೇರಿಸುವಿಕೆಯು ಎರಡು ವಿಧ. ಪ್ರಳಯಕಾಲದಲ್ಲಿ ಅರಿವಿಲ್ಲದ ಪ್ರಕೃತಿ ಎಂಬುದು ಒಂದೇ ಇರುತ್ತದೆ. ಸೃಷ್ಟಿಕಾಲದಲ್ಲಿ ಆ ಒಂದು ವಸ್ತುವನ್ನು ಭಗವಂತನು ತನ್ನ ನೆನಪಿನಿಂದ ಒಂದಿನಿಂದ ಒಂದಾಗಿ ೨೩ ವಸ್ತುಗಳನ್ನಾಗಿ ಮಾಡುತ್ತಾನೆ. ಹಾಗೆಮಾಡಿ ಅವುಗಳನ್ನು ಒಂದರೊಡನೆ ಮತ್ತೊಂದನ್ನು ಸೇರಿಸಿ, ಬ್ರಹ್ಮಾಂಡವೆಂಬ ಒಂದು ಜಾಗವನ್ನು ಮಾಡಿ, ಒಂದರೊಡನೆ ಒಂದು ಸೇರಿಸಿ ಮಾಡಲ್ಪಟ್ಟ ಬ್ರಹ್ಮನೆಂದು ಹೇಳುವ ಒಂದು ಶರೀರದಲ್ಲಿ ಒಂದು ಜೀವನನ್ನು ಸೇರಿಸಿದನು. ಆ ಬ್ರಹ್ಮನನ್ನು ಮೂಲವಾಗಿ ಇಟ್ಟು ೧೪ ಲೋಕಗಳೂ ಅಡಗಿರುವ ಬ್ರಹ್ಮಾಂಡದಲ್ಲಿರುವ ದೇವತೆಗಳು, ಮನುಷ್ಯರು, ಆಡು, ಹಸು—ಹುಲ್ಲು ಪೊದೆ ಎಂಬ ನಾಲ್ಕು ಭಾಗವುಳ್ಳ ಎಲ್ಲಾ ವಸ್ತುಗಳನ್ನೂ ಉಂಟುಮಾಡಿದನು. ಇದಕ್ಕಾಗಿ ಕಾರಣಾವಸ್ಥೆ (ಸೃಷ್ಟಿ) ಎಂದು ಹೆಸರು. ಇದನ್ನು ೩ನೇ ಶ್ಲೋಕದಲ್ಲಿ ಹೇಳಿದೆ,

ದರು. ಆ ಜೀವರು [1]ಮತ್ತೆ ಮತ್ತೆ ಅದೇ ರೀತಿಯಾಗಿಯೋ ಬೇರೆ ವಿಧವಾಗಿಯೋ ಉಂಟಾಗುವುದಕ್ಕೆ ಕಾರಣವನ್ನು ಈ ಶ್ಲೋಕದಲ್ಲಿ ಹೇಳುತ್ತಾನೆ.

ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಪ್ರಕೃತಿಯೆಂಬ ವಸ್ತುವಿಗೇ ಇರುವ [2]ಗುಣಗಳು. ಅವು ಯಾವಾಗಲೂ ಅದನ್ನು ಬಿಟ್ಟು ಬೇರೆಯಾಗದೆ ಇರುತ್ತವೆ. ಅವುಗಳಿಂದ [3]ಉಂಟಾಗುವ ಕೆಲವು ಸಂಗತಿಗಳನ್ನು ಹೊಂದಿಯೇ ಪ್ರಕಾಶವೇ ಮೊದಲಾದ ಕಾರ್ಯದಿಂದ ಮಾತ್ರ ನಿರೂಪಿಸಲ್ಪಡತಕ್ಕವು. ಆ ಗುಣಗಳು ಇರುವವು ಎಂದು [4]ತಿಳಿಯಬಹುದು. ಆ ಗುಣಗಳನ್ನು ಪ್ರಕೃತಿಯಾಗಿರುವ ಕಾಲದಲ್ಲಿ [5]ತಿಳಿಯಲಾಗದು. ಆ ಪ್ರಕೃತಿಯು ಮಹತ್ ಮೊದಲಾದ ವಸ್ತುಗಳಾಗಿ ಆಗುವಾಗ ತಾನೆ ಅವುಗಳನ್ನು ತಿಳಿಯಬಹುದು.

1. ನೈಮಿತ್ತಿಕ ಸೃಷ್ಟಿಯ ಆರಂಭದಲ್ಲಿ ಭಗವಂತನು ಜೀವನನ್ನು ಅವನ ಕರ್ಮಕ್ಕೆ ತಕ್ಕಂತೆ ಶರೀರದೊಡನೆ ಸೇರಿಸಿದುದರಿಂದಲೇ ಅವನಿಗೆ ಹುಟ್ಟು ಉಂಟಾಯಿತು. ಆ ಶರೀರ ಮುಗಿದಾಗಲೇ ಆ ಕರ್ಮವೂ, ಅದರ ಫಲವೂ, ಅದರ ಅನುಭವಕ್ಕೆ ಸಾಧನವಾದ ಶರೀರವೂ ಹೋದವಲ್ಲಾ. ಜೀವನೋ ಸ್ವಭಾವದಿಂದ ಪರಿಶುದ್ಧನು. ಹೇಗೆ ಅವನಿಗೆ ಮತ್ತೆ ಹೀಗೆ ಶರೀರ ಉಂಟಾಯಿತು ? ಎಂದು ಪ್ರಶ್ನೆ. ಅದಕ್ಕೆ ಉತ್ತರ ಇದು.

2. ಗುಣಗಳು ಎಂಬ ಶಬ್ದದಿಂದ ಸಾಂಖ್ಯರು ಹೇಳುವಂತೆ ಸತ್ತ್ವ ಮೊದಲಾದವು ದ್ರವ್ಯವಲ್ಲ ಎಂದು ತೋರಿಸಲ್ಪಡುತ್ತದೆ.

3. ಶಬ್ದ, ರೂಪ ಮೊದಲಾದ ಗುಣಗಳಂತೆ, ಸತ್ತ್ವ ಮೊದಲಾದವನ್ನು ಕಣ್ಣು ಮೊದಲಾದ ಇಂದ್ರಿಯಗಳಿಂದ ಒಂದು ಕಾಲವೂ ತಿಳಿಯಲಾಗದು ಆದರೂ ನಮಗೆ ಉಂಟಾಗುವ ಕೆಲವು ಸಂಗತಿಗಳನ್ನು ನಾವು ತಿಳಿಯುತ್ತೇವೆ. ಅವುಗಳಿಗೆ ಕಾರಣವಿರಬೇಕೆಂದು ಒಟ್ಟಾಗಿ ತೀರ್ಮಾನಿಸಿ, ಅವುಗಳಿಗೆ ಕಾರಣಗಳನ್ನು ಸತ್ತ್ವ ಮೊದಲಾದ ಗುಣಗಳೆಂದು ಶಾಸ್ತ್ರದಿಂದ ತಿಳಿಯುತ್ತೇವೆ. ವಿಷದ ಮತ್ತು ಔಷಧಿಯ ಶಕ್ತಿಯನ್ನು ಕಣ್ಣಿಗೆ ಕಾಣದಿದ್ದರೂ ಅದನ್ನು ಅರಿತವನು ಹೇಳುವುದನ್ನು ಕೇಳಿ ಔಷಧಿಯನ್ನು ತಿನ್ನಬಹುದು ; ವಿಷವನ್ನು ತಿನ್ನಕೂಡದು ಎಂದು ತೀರ್ಮಾನಿಸುತ್ತೇವೆ. ಹಾಗೆಯೇ ಸತ್ತ್ವ ಮೊದಲಾದವು ಮಾಡುವ ಕಾರ್ಯಗಳನ್ನು ಕೇಳಿ ಸತ್ತ್ವವನ್ನು ಬೆಳಸಬೇಕು ಎಂದೂ ಬೇರೆಯವನ್ನು ಬಿಡಬೇಕು ಎಂದೂ ತಿಳಿಯುತ್ತೇವೆ.

4. ಒಬ್ಬನಿಗೆ ಕಣ್ಣು ಎಂಬ ಇಂದ್ರಿಯವು ಇದೆ ಎಂಬುದನ್ನು ಒಂದು ವಸ್ತುವಿನ ನೋಡುವಿಕೆಯನ್ನು ಕೊಂಡೇ ಅರಿಯಬೇಕು ಅದರಂತೆ.

5. ಈ ಗುಣಗಳನ್ನು ಅರಿಯುವುದಕ್ಕೆ ಕಾರಣ—ಉದ್ಭವವೆಂದು. ಅದಾದರೋ—ಹೊರಗೆ ಬರುವುದು. ಅದು ಪ್ರಕೃತಿಯಾಗಿರುವ ಕಾಲವಲ್ಲ. ಮಹತ್ ಮೊದಲಾಗಿ ಮಾರ್ಪಾಟು ಆಗುವಾಗ ಉಂಟಾಗುವುದು. ಅರಳಿದ ಹೂವಿನಲ್ಲಿರುವ ವಾಸನೆಯು ಮೊಗ್ಗಿನಲ್ಲಿ ಕಾಣುವುದಿಲ್ಲ. ಮಾಗಿದ ಮಾವಿನ ಹಣ್ಣಿನಲ್ಲಿ ಇರುವ ವಾಸನೆ ಮುಂತಾದ ಗುಣಗಳು ಹೀಚಾಗಿಯೂ, ಕಾಯಾಗಿಯೂ ಇರುವಾಗ ತಿಳಿಯುವುದಿಲ್ಲ—ಅದರಂತೆ.

ಆ ಗುಣಗಳು ಶರೀರವಾಗಿ ಆದ ಪ್ರಕೃತಿಯೊಡನೆ ಸೇರಿದ ಜೀವನನ್ನು ಆ ಶರೀರದಲ್ಲಿ ಇರುವುದರಿಂದ ಕಟ್ಟುಪಾಡು ಮಾಡುತ್ತವೆ. ಆ ಜೀವನು ಸ್ವಭಾವದಿಂದ [1]ಗುಣಗಳೊಡನೆ ಸೇರಲು ತಕ್ಕವನಲ್ಲ.

ಸತ್ವ ಮೊದಲಾದ ಗುಣಗಳ ಸ್ವಭಾವವನ್ನು ಅವುಗಳು ಜೀವನನ್ನು ಕಟ್ಟಿ ಹಾಕುವ ದಾರಿಯನ್ನು ಹೇಳುತ್ತಾನೆ ಕೃಷ್ಣ ಪರಮಾತ್ಮಾ.

**ತತ್ರ ಸತ್ತ್ವಂ ನಿರ್ಮಲತ್ವಾತ್ಪ್ರಕಾಶಕಮನಾಮಯಮ್ ।**
**ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥**

ಸತ್ತ್ವ ಮೊದಲಾದ ಗುಣಗಳ ಸ್ವರೂಪವನ್ನೂ, ಅವುಗಳು ಜೀವವನ್ನು ಕಟ್ಟುವ ದಾರಿಯನ್ನೂ ಹೇಳುತ್ತಾನೆ. ಇವು ಮೂರರಲ್ಲಿ ಸತ್ತ್ವವೆಂಬ ಗುಣವು ವಸ್ತುವಿನ ನಿಜವಾದ ಜ್ಞಾನಕ್ಕೂ ಸುಖಕ್ಕೂ ಅಡ್ಡಿಯಾದುದಲ್ಲ, ಆದುದರಿಂದ ನಿಜವಾದ ಅರಿವನ್ನು ಉಂಟುಮಾಡುತ್ತದೆ. ಹಾಗೆಯೇ ವ್ಯಾಧಿ ಇಲ್ಲದಂತೆ ಮಾಡಿ ಸುಖವನ್ನೂ ಉಂಟುಮಾಡುತ್ತದೆ. ವಸ್ತುಯಾಥಾತ್ಮ್ಯಾವಬೋಧಃ ಪ್ರಕಾಶಃ = ಪದಾರ್ಥದ ನಿಜಸ್ಥಿತಿಯ ಅರಿವನ್ನುಂಟುಮಾಡುವಿಕೆ ಪ್ರಕಾಶ. ಅಂತಹ ಪ್ರಕಾಶಕ್ಕೂ, ಸುಖಕ್ಕೂ ಕಾರಣವಾಗಿದೆ. ಜೀವನಿಗೆ ಸುಖದಲ್ಲೂ ನಿಜವಾದ ಜ್ಞಾನದಲ್ಲೂ ಆಶೆಯನ್ನು ಉಂಟುಮಾಡುತ್ತದೆ. ಆ ಆಶೆಯಿಂದ ಆ ಎರಡನ್ನೂ ಕೊಡುವ – ಪ್ರಪಂಚದಲ್ಲಿ ಏರ್ಪಟ್ಟಿರುವ ಅಥವಾ ಶಾಸ್ತ್ರದಲ್ಲಿ ಏರ್ಪಡಿಸಿರುವ ಕಾರ್ಯಗಳನ್ನು ಮಾಡುತ್ತಾನೆ. ಆ ಕಾರ್ಯಗಳ ಫಲವನ್ನು ಅನುಭವಿಸುವುದಕ್ಕಾಗಿ ಶರೀರ ಬರುತ್ತದೆ ; ಅಂದರೆ ಹುಟ್ಟುತ್ತಾನೆ. ಇದೇ ರೀತಿಯಲ್ಲಿ ಮತ್ತೆ ಮತ್ತೆ ಹುಟ್ಟುತ್ತಾನೆ. ಈ ರೀತಿಯಾಗಿ ಸತ್ತ್ವವು ತೊಂದರೆಯನ್ನು ಉಂಟುಮಾಡುತ್ತದೆ.

**ರಜೋರಾಗಾತ್ಮಕಂ ವಿದ್ಧಿ ಕೃಷ್ಣಾಸಂಗ ಸಮುದ್ಭವಮ್ ।**
**ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥**

1. ಇದು ಶ್ಲೋಕದಲ್ಲಿ "ಅವ್ಯಯಮ್" ಎಂಬ ಶಬ್ದದ ಅರ್ಥ, ಸ್ವಭಾವದಿಂದ ಗುಣಗಳ ಸೇರುವಿಕೆಯೂ, ಅದರಿಂದ ಉಂಟಾಗುವ ಅರಿವಿನ ಕಡಿಮೆಯಾಗುವಿಕೆ ಮುಂತಾದವೂ ಜೀವನಿಗೆ ಇಲ್ಲ.

ಈ ಶ್ಲೋಕದಲ್ಲಿ "ಮಹಾಬಾಹೋ" ಎಂದು ಅರ್ಜುನನನ್ನು ಸಂಬೋಧಿಸಿದ ಅಭಿಪ್ರಾಯ ಬಾಹುಬಲಶಾಲಿಯಾದ ನೀನು ನಿನ್ನ ಬಾಹುಬಲದಿಂದ ಶತ್ರುಗಳನ್ನು ಅಡಗಿಸಬಹುದು. ಆದರೆ ಈ ಗುಣಗಳನ್ನು ಅಡಗಿಸಲು ಶಕ್ಯವಲ್ಲವೆಂದು ಅಭಿಪ್ರಾಯ.

ರಜೋಗುಣವು ಸ್ತ್ರೀಗೆ ಪುರುಷನಲ್ಲೂ, ಪುರುಷನಿಗೆ ಸ್ತ್ರೀಯಲ್ಲೂ ಆಸೆಯನ್ನು ಉಂಟುಮಾಡುತ್ತದೆ. ಶಬ್ದ ಮೊದಲಾದ ವಿಷಯಗಳಲ್ಲಿ ಆಸೆಯನ್ನೂ, ಮಗ ಮುಂತಾದವರೊಡನೆ ಸೇರಿರಬೇಕೆಂಬ ಆಸೆಯನ್ನೂ ಉಂಟುಮಾಡುತ್ತದೆ. ಒಳ್ಳೆಯ ಪದಾರ್ಥಗಳನ್ನು ನೋಡುವುದರಲ್ಲಿಯೂ, ಒಳ್ಳೆಯ ಪದಾರ್ಥಗಳನ್ನು ತಿನ್ನುವುದ ರಲ್ಲಿಯೂ, ಒಳ್ಳೆಯ ವಾಸನೆಯುಳ್ಳ ಗಂಧ, ಹೂವು — ಇವೇ ಮೊದಲಾದವುಗಳನ್ನು ಅನುಭವಿಸುವುದರಲ್ಲೂ, ಒಳ್ಳೆ ಹಾಡು, ಮಾತು ಮೊದಲಾದವುಗಳನ್ನುಕೇಳುವುದರಲ್ಲಿ ಆಸೆಯನ್ನೂ ಉಂಟುಮಾಡುತ್ತದೆ. ಆಸೆಯನ್ನುಂಟುಮಾಡಿ, ಅದಕ್ಕೆ ತಕ್ಕ [1]ಕಾರ್ಯ ಗಳಲ್ಲಿ ಪ್ರೇರಿಸುತ್ತದೆ. ಪುಣ್ಯವೋ, ಪಾಪವೋ, ಆದ ಆ ಕಾರ್ಯಗಳ ಫಲಗಳನ್ನು ಅನುಭವಿಸುವುದಕ್ಕಾಗಿ ಶರೀರದೊಡನೆ ಹುಟ್ಟುತ್ತಾನೆ. ರಜಸ್ಸು ಎಂಬ ಗುಣ ಜೀವನನ್ನು ಈ ರೀತಿಯಾಗಿ ತೊಂದರೆಯನ್ನುಂಟುಮಾಡುತ್ತದೆ.

**ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।**
**ಪ್ರಮಾದಾಲಸ್ಯ ನಿದ್ರಾಭಿಸ್ತನ್ನಿ ಬಧ್ನಾತಿ ಭಾರತ ॥**

ಎಲೌ ಅರ್ಜುನನೇ ! ತಮೋಗುಣವು ಒಂದು ವಸ್ತುವನ್ನು ವ್ಯತ್ಯಾಸವಾಗಿ ತಿಳಿಯುವುದರಿಂದ, ಅಂದರೆ ಒಂದು ವಸ್ತುವನ್ನು ಬೇರೆ ವಸ್ತುವಾಗಿ ತಿಳಿಯುವು ದರಿಂದ ಎಲ್ಲಾ ಪ್ರಾಣಿಗಳಿಗೂ ಉಂಟಾಗುತ್ತದೆ; ಅದೇರೀತಿ ಎಣಿಸುವಿಕೆಯನ್ನು ಉಂಟುಮಾಡುತ್ತದೆ. ಅದು ಅವಶ್ಯವಾಗಿ ಮಾಡಬೇಕಾದ ಒಂದು ಕೆಲಸವಿರುವಾಗ, ಅದನ್ನು ಗಮನಿಸದೆ, ಮತ್ತೊಂದು ಕೆಲಸದಲ್ಲಿ ಪ್ರೇರಿಸುತ್ತದೆ. ಸೋಮಾರಿತನ ಅಂದರೆ—ಮಾಡಬೇಕಾದ ಎಲ್ಲಾ ಕಾರ್ಯಗಳಲ್ಲೂ ಔದಾಸೀನ್ಯವನ್ನೂ [2]ನಿದ್ರೆಯನ್ನೂ

1. ಸತ್ತ್ವಗುಣವು ಒಳ್ಳೆಯ ಜ್ಞಾನದಲ್ಲೂ, ಸುಖದಲ್ಲೂ ಆಸೆಯನ್ನುಂಟುಮಾಡಿ ಕಾರ್ಯದಲ್ಲಿ ಪ್ರೇರಿಸುತ್ತದೆ. ರಜೋಗುಣವೂ ಕೆಲವು ಕಾರ್ಯಗಳಲ್ಲಿ ಪ್ರೇರಿಸುತ್ತದೆ. ಈ ರೀತಿಯಾದರೆ ಎರಡು ಗುಣಗಳಿಗೂ ವ್ಯತ್ಯಾಸವೇನೆಂದರೆ, ಸತ್ತ್ವಗುಣವುಳ್ಳ ವನು ಸುಖವನ್ನು ತೀರ್ಮಾನಮಾಡಿಕೊಂಡೇ ಒಂದು ಕಾರ್ಯವನ್ನು ಮಾಡುತ್ತಾನೆ. ರಜೋ ಗುಣವುಳ್ಳವನಿಗೆ ಆ ಆ ವಸ್ತುಗಳೂ, ಕಾರ್ಯಗಳೂ ತಾನೇ ಬೇಕಾಗಿದೆ. ಆದುದರಿಂದ ಉಂಟಾ ಗುವ ಸುಖವು ಸ್ವಲ್ಪವಾದದ್ದೋ, ಹೆಚ್ಚಾದದ್ದೋ ಎಂದು ಗಮನಿಸುವುದಿಲ್ಲ. ಇದನ್ನು— ರಾಜಸ್ತ್ರೀಯನ್ನು ಆಸೆಪಡುವುದು, ಕೆಟ್ಟಮಕ್ಕಳನ್ನು ಕಾಪಾಡುವುದು, ಒಂದು ಪ್ರಯೋ ಜನವೂ ಇಲ್ಲದ ಶರೀರದ ಕಾರ್ಯ ಇವುಗಳಲ್ಲಿ ನೋಡಬಹುದು.

2. ನಿದ್ರೆಯೆಂದರೆ— ಕೆಲಸಮಾಡುವುದರಿಂದ ಇಂದ್ರಿಯಗಳು ಆಯಾಸಗೊಂಡಿರುವಿಕೆ. ಕಣ್ಣು ಮೊದಲಾದ ಇಂದ್ರಿಯಗಳು ಮಾತ್ರ ಆಯಾಸಗೊಂಡು ತಮ್ಮ ಕಾರ್ಯಗಳನ್ನು ಮಾಡ ದಿರುವಿಕೆ. ಅದು ಸ್ವಪ್ನ. ಆವಾಗ ಜ್ಞಾನವು ಇರುತ್ತದೆ. ಮನಸ್ಸೂ ಪ್ರವರ್ತಿಸದೇ ಇದ್ದರೆ, ಒಳ್ಳೆಯ ನಿದ್ರೆ ಉಂಟಾಗುತ್ತದೆ. ಅದಕ್ಕೆ ಸುಷುಪ್ತಿ ಎಂದು ಹೆಸರು. ಆವಾಗ ಅರಿವೇ ಇಲ್ಲ. ತಮೋಗುಣವುಳ್ಳವನಿಗೆ ನಿದ್ರೆಯು ಕೆಲಸಮಾಡುವುದರಿಂದ ಬರುವುದಿಲ್ಲ. ತಮೋ ಗುಣದಿಂದ ಬರುತ್ತದೆ.

ಉಂಟುಮಾಡುತ್ತದೆ. ತಮೋಗುಣವು ಈ ರೀತಿ ಜೀವನನ್ನು ತೊಂದರೆಮಾಡುತ್ತದೆ. ನಿದ್ರೆಯು ಕಾಲದಲ್ಲಿ ಬಾರದೆಯೂ ಅಕಾಲದಲ್ಲಿ ಬರುತ್ತಲೂ ಚೇತನನನ್ನು ಬಂಧನಕ್ಕೊಳಪಡಿಸುವುದು. ಎಂದರೆ ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳನ್ನು ಆಚರಿಸುವುದಕ್ಕೆ ಯೋಗ್ಯವಲ್ಲದ ಕಾಲದಲ್ಲಿ ತಾನು ಬಾರದೆ, ಅದಕ್ಕೆ ಅರ್ಹವಾದ ಕಾಲದಲ್ಲಿ ಚೇತನನನ್ನು ತಾನು ಆಕ್ರಮಿಸಿಕೊಂಡು ವಿಹಿತ ಕರ್ಮಾಚರಣಕ್ಕೆ ಅಡ್ಡಿಯನ್ನು ಮಾಡುತ್ತಾ ಬಂಧಕ್ಕೆ ಕಾರಣವಾಗುವುದು.

**ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।**
**ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥**

ಸತ್ತ್ವಾದಿಗುಣಗಳು ಆ ಆ ಅನೇಕ ಪದಾರ್ಥ ವಿಶೇಷಗಳನ್ನು ದಾರಿಯಾಗಿ ಮಾಡಿಕೊಂಡು ಜೀವನನ್ನು ಬಂಧಕ್ಕೆ ಸಿಲುಕಿಸುತ್ತದೆಯೆಂದು ಹಿಂದಿನ ಶ್ಲೋಕಗಳಲ್ಲಿ ತೋರಿಸಲಾಯಿತು. ಆದರೆ ಅಂತಹ ಅನೇಕ ದ್ವಾರಗಳೊಳಗೆ ಯಾವದ್ವಾರವು— ದಾರಿಯು ಯಾವಗುಣಕ್ಕೆ ಮುಖ್ಯವಾಗಿರುವುದೆಂಬುದನ್ನು ಈ ಶ್ಲೋಕದಲ್ಲಿ ನಿಷ್ಕರ್ಷಿಸುವುದಾಗಿದೆ.

ಎಲೈ ಭರತಕುಲೋತ್ಪನ್ನನಾದ ಅರ್ಜುನನೆ! ಸತ್ತ್ವಗುಣವು ಸುಖಸಂಗವನ್ನೇ ಪ್ರಧಾನದ್ವಾರವನ್ನಾಗಿಮಾಡಿಕೊಂಡೂ, ರಜೋಗುಣವು ಕರ್ಮಸಂಗವನ್ನೇ ಮುಖ್ಯವಾದ ಹಾದಿಯನ್ನಾಗಿ ಮಾಡಿಕೊಂಡೂ ತಮೋಗುಣವಾದರೆ ವಸ್ತುವಿನ ಯಥಾರ್ಥಜ್ಞಾನೋತ್ಪತ್ತಿಗೆ ಅವಕಾಶವನ್ನೀಯದೆ ವಿಪರೀತ ಜ್ಞಾನವನ್ನೇ ಉಂಟುಮಾಡಿ, ಮಾಡಕೂಡದ ಕೆಟ್ಟಕಾರ್ಯದಲ್ಲಿ ಪ್ರವೃತ್ತಿಸಂಗವನ್ನೇ ಪ್ರಧಾನದ್ವಾರವನ್ನಾಗಿ ಮಾಡಿಕೊಂಡೂ ಚೇತನನನ್ನು ಕಟ್ಟುಪಾಡಿಗೆ ಗುರಿಪಡಿಸುವವು.

**ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।**
**ರಜಸ್ಸತ್ತ್ವಂ ತಮಶ್ಚೈವ ತಮಸ್ಸತ್ತ್ವಂ ರಜಸ್ತಥಾ ॥**

ಪ್ರಕೃತಿದ್ರವ್ಯ ತಾನೇ, ಶರೀರವಾಗಿ ಆಗಿರುವುದು. ಇದರಲ್ಲಿ ಮೂರು ಗುಣಗಳೂ ಯಾವಾಗಲೂ ಇದ್ದೇ ಇರುವುವು. ಆ ಮೂರೂ ಒಂದಕ್ಕೊಂದು ವಿರೋಧವಾದ ಕಾರ್ಯಗಳನ್ನು (ಅಂದರೆ ಸತ್ತ್ವವು ಅರಿವನ್ನು ಕೊಡುತ್ತದೆ, ತಮಸ್ಸು ಅದನ್ನು ಕೆಡಿಸುತ್ತದೆ; ರಜೋಗುಣವು ಕೆಲಸವನ್ನು ಕೊಡುತ್ತದೆ. ತಮಸ್ಸು ಅದನ್ನು ಮಾಡದಂತೆ ಮಾಡುವುದು) ಹೇಗೆ ಮಾಡುತ್ತವೆ ಎಂದರೆ ಹೇಳುತ್ತಾನೆ.

ಶರೀರದಲ್ಲಿ ಸತ್ತ್ವ ಮೊದಲಾದ ಮೂರುಗುಣಗಳು ಯಾವಾಗಲೂ ಇದ್ದರೂ, ಬಹಳ ಕಾಲದಿಂದ ಬಂದಿರುವ ಕರ್ಮದಿಂದಲೂ ಶರೀರವನ್ನು ಬೆಳೆಸುವ

1ಆಹಾರದ ವ್ಯತ್ಯಾಸದಿಂದಲೂ, ಆ ಆ ಗುಣಗಳಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ಬೇರೊಂದನ್ನು ಅಡಗಿಸಿ ಮೇಲಕ್ಕೆ ಬರುತ್ತದೆ.

ಒಂದಾನೊಂದು ಸಮಯದಲ್ಲಿ ರಜೋಗುಣ ತಮೋಗುಣಗಳೆರಡನ್ನೂ ತಿರಸ್ಕರಿಸಿ ಸತ್ತ್ವಗುಣವೇ ತಲೆಯೆತ್ತುವುದು. ಮತ್ತೊಂದು ಸಮಯದಲ್ಲಿ ಸತ್ತ್ವಗುಣ ತಮೋಗುಣಗಳೆರಡನ್ನೂ ತಿರಸ್ಕರಿಸಿ ರಜೋಗುಣವೇ ತಲೆಯೆತ್ತುವುದು. ಇನ್ನೊಂದು ಸಮಯದಲ್ಲಿ ಸತ್ತ್ವಗುಣ ರಜೋಗುಣಗಳೆರಡನ್ನೂ ತಿರಸ್ಕರಿಸಿ ತಮೋಗುಣವೇ ತಲೆಯೆತ್ತುವುದು. ಯಾವಾಗ ಯಾವ ಗುಣವು ಉದ್ರಿಕ್ತವಾಗಿರುವುದೋ ಆಗ ಅದರ ಕೆಲಸವು ನಡೆಯಲು ತಡೆಯಿಲ್ಲ.

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ ॥

ಆದರೆ ಯಾವ ಗುಣವು ಯಾವ ಕಾಲದಲ್ಲಿ ಉದ್ರಿಕ್ತವಾಗಿರುವುದೆಂಬುದನ್ನು ಕಂಡುಹಿಡಿಯುವ ಬಗೆ ಹೇಗೆ ? ಎಂಬ ಸಂದೇಹಕ್ಕೆ ಆ ಆ ಕಾರ್ಯವಿಶೇಷದಿಂದ ಅದನ್ನು ಕಂಡುಹಿಡಿಯಬಹುದೆಂಬ ಸಮಾಧಾನವನ್ನು ಈ ಶ್ಲೋಕದಿಂದ ಪ್ರಾರಂಭಿಸಿ ಮೂರು ಶ್ಲೋಕಗಳಲ್ಲಿ ಅಪ್ಪಣೆಕೊಡಿಸುವನು—ಕೃಷ್ಣ ಪರಮಾತ್ಮ. ಇಲ್ಲಿರುವ 'ಪ್ರಕಾಶ' ಎಂಬ ಪದವು ಪ್ರಥಮಾಂತವಲ್ಲ ; ಸಪ್ತಮೀ ವಿಭಕ್ತಿಯ ಏಕವಚನ ಎಂದು ತಿಳಿಯಬೇಕು. ಪ್ರಕಾಶ ಉಂಟಾಗುವುದಕ್ಕಾಗಿ ಜ್ಞಾನವು ಉಂಟಾಗುವುದೋ ಎಂದು ತಾತ್ಪರ್ಯ. ಒಬ್ಬನು ಕಣ್ಣು, ಕಿವಿ, ನಾಲಿಗೆ, ಮೂಗು, ಚರ್ಮ, ಮತ್ತು ಮನಸ್ಸುಗಳೆಂಬ ಆರು ಇಂದ್ರಿಯಗಳಿಂದ ಆ ಆ ವಸ್ತುಗಳನ್ನು ಇದ್ದದ್ದನ್ನು ಇದ್ದಹಾಗೆ ತಿಳಿದರೆ, ಆವಾಗ ಸತ್ತ್ವಗುಣವು ಮೇಲಾಗಿದೆ–ತಲೆಯೆತ್ತಿದೆ ಎಂದು ತಿಳಿಯಬಹುದು.

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥

ತನ್ನ ವಸ್ತುಗಳನ್ನು ಇತರರಿಗೆ ಕೊಡುವುದಕ್ಕೆ ಮನಸ್ಸು ಆಗದಿರುವುದೂ, ಒಂದು ಪ್ರಯೋಜನವೂ ಇಲ್ಲದೆ ಓಡಾಡುವುದೂ, ಕಾಸು ಮೊದಲಾದ ಪ್ರಯೋ

1. ಕರ್ಮದಿಂದಲೂ, ಆಹಾರದಿಂದಲೂ ಶರೀರದಲ್ಲಿ ಪಿತ್ತ, ವಾತ, ಶ್ಲೇಷ್ಮ ಎಂಬ ಮೂರು ಧಾತುಗಳಲ್ಲಿ ಇರಬೇಕಾದ ಸ್ಥಿತಿಯನ್ನು ಮೀರಿ ಒಂದೊಂದು ಒಂದು ಸಮಯದಲ್ಲಿ ಮೇಲೆ ತಲೆಯೆತ್ತುವಂತೆ,

ಜನಕ್ಕಾಗಿ ಕಾರ್ಯಗಳನ್ನು ಮಾಡುವುದೂ, ಇಂದ್ರಿಯಗಳು ಅಡಗದೇ ಇರುವುದೂ, ನೋಟ್ಟ, ಊಟ ಮೊದಲಾದವುಗಳಲ್ಲಿ ಆಸೆಯೂ ಇದ್ದರೆ ರಜೋ ಗುಣವು ತಲೆಯೆತ್ತಿರುವುದೆಂದು ತಿಳಿಯಬಹುದು.

**ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।**
**ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥**

ಓ ಕುರುಕುಲಕ್ಕೆ ಸಂತೋಷವನ್ನುಂಟುಮಾಡುವ ಅರ್ಜುನನೆ ! ಒಂದು ವಸ್ತುವನ್ನು ನೋಡುವಾಗ ಅದರಲ್ಲಿರುವ ಸಂಗತಿಗಳು ಇದ್ದದ್ದನ್ನು ಇದ್ದಹಾಗೆ ತೋಚದಿರುವುದೂ, ಸೋಮಾರಿತನವೂ (ಅಂದರೆ ಒಂದು ಕಾರ್ಯವನ್ನೂ ಮಾಡಲು ಹಿಡಿಸದಿರುವಿಕೆಯೂ) ತಪ್ಪಾದ ಕೆಲಸಗಳನ್ನು ಮಾಡುವಾಗ ಗಮನಿಸದೆ ಇರುವಿಕೆಯೂ, ತಪ್ಪಾದ ಅಭಿಪ್ರಾಯಗಳೂ ಇದ್ದರೆ, ಈ ಶರೀರದಲ್ಲಿ ತಮೋ ಗುಣವು ತಲೆಯೆತ್ತಿದೆ ಎಂದು ತಿಳಿಯಬಹುದು.

**ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।**
**ತದೋತ್ತಮವಿದಾಂ ಲೋಕಾನಮಲಾನ್ ಪ್ರತಿಪದ್ಯತೇ ॥**

ಸಾಯುವಕಾಲದಲ್ಲಿ ರಜಸ್ಸು, ತಮಸ್ಸು ತಲೆಯೆತ್ತುವುದಕ್ಕೆ ಕಾರಣಗಳನ್ನು ಈವಾಗಲೇ ಹೋಗಿಸಲು ತೊಡಗಬೇಕೆನ್ನಲು, ಆ ಆ ಕಾಲದಲ್ಲಿ ರಜಸ್ಸು, ತಮಸ್ಸು ಮೇಲಿಟ್ಟರೆ ಉಂಟಾಗುವ ಕೆಡಕುಗಳನ್ನೂ ಹೇಳುತ್ತಾನೆ.

ಸತ್ತ್ವಗುಣವು ತಲೆಯೆತ್ತಿರುವಾಗ, ಒಬ್ಬನು ಸತ್ತರೆ, ಆತ್ಮಸ್ವರೂಪವನ್ನು ನಿಜವಾಗಿ ಅರಿತವರ ಹೊಟ್ಟೆಯಲ್ಲಿ ಹುಟ್ಟಿ, ಆತ್ಮವಸ್ತುವಿನ ಯಥಾರ್ಥವಾದ ಜ್ಞಾನವನ್ನು ಉಂಟುಮಾಡುವ ಒಳ್ಳೆಯ ಕರ್ಮಗಳನ್ನು ಮಾಡುವನು.

**ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ ।**

ರಜೋಗುಣವು ತಲೆಯೆತ್ತಿರುವಾಗ ಸತ್ತರೆ, ಸ್ವರ್ಗ ಮೊದಲಾದ ಫಲ ಗಳಿಗಾಗಿ ಕರ್ಮಗಳನ್ನು ಮಾಡುವವರ ಹೊಟ್ಟೆಯಲ್ಲಿ ಹುಟ್ಟಿ ಆ ರೀತಿ ತಾನೂ ಸಹ ಫಲಸಾಧನ ಕರ್ಮಗಳಲ್ಲಿ ತೊಡಗುವನು.

**ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ ॥**

ತಮೋಗುಣವು ತಲೆಯೆತ್ತಿರುವಾಗ ಮರಣಹೊಂದುವವನು ನಾಯಿ, ಹಂದಿ ಮೊದಲಾದ ಪ್ರಾಣಿಗಳಾಗಿ ಹುಟ್ಟಿ, ಒಂದು ಒಳ್ಳೆಯ ಕರ್ಮಗಳನ್ನೂ ಮಾಡಲು ಅರ್ಹತೆ ಇಲ್ಲದವನಾಗಿ ಆಗುತ್ತಾನೆ.

ಆದುದರಿಂದ ವಿವೇಕಿಯಾದ ಪ್ರತಿಯೊಬ್ಬನೂ ತನ್ನ ಮರಣಕಾಲಕ್ಕೆ ರಜೋಗುಣವಾಗಲಿ, ತಮೋಗುಣವಾಗಲಿ ವೃದ್ಧಿಹೊಂದದಂತೆಯೂ ಸತ್ತ್ವ ಗುಣವೇ ವೃದ್ಧಿ ಹೊಂದುವಂತೆಯೂ ಅನುಕೂಲಪಡಿಸಿಕೊಳ್ಳುವುದಕ್ಕಾಗಿ ಮೊದಲಿ ನಿಂದಲೂ ಸಾತ್ವಿಕವಾದ ಆಹಾರಸೇವನೆ, ಸಾತ್ವಿಕ ಜನರ ಸಹವಾಸ ಮೊದಲಾದವು ಗಳಲ್ಲಿಯೇ ಪ್ರವರ್ತಿಸುವುದನ್ನು ಅಭ್ಯಾಸ ಮಾಡಬೇಕೆಂದು ಈ ಎರಡು ಶ್ಲೋಕ ಗಳ ಅಭಿಪ್ರಾಯವಾಗಿರುವುದು.

**ಕರ್ಮಣಸ್ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಮ್ ।**
**ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಮ್ ॥**

ಒಬ್ಬನು ಸತ್ವಗುಣವು ಬೆಳೆದಿರುವ ಕಾರ್ಯ ಮಾಡುತ್ತಿರುವಾಗ ಮರಣ ಹೊಂದಿದರೆ ಅವನು ಆತ್ಮದ ಸ್ವರೂಪವನ್ನು ಅರಿತವರ ಕುಲದಲ್ಲಿ ಹುಟ್ಟಿ, ಫಲವನ್ನು ಅಪೇಕ್ಷಿಸದೆ, ನನಗೆ ಸಂತೋಷವನ್ನು ಉಂಟುಮಾಡುವ ಕರ್ಮಗಳನ್ನು ನನ್ನ ಸಂತೋಷಕ್ಕಾಗಿಯೇ ಮಾಡುತ್ತಾನೆ. ಆದರಿಂದ ಇನ್ನೂ ಹೆಚ್ಚಾದ ಸತ್ತ್ವ ಗುಣವು ಅಭಿವೃದ್ಧವಾಗಿ, ಸ್ವಲ್ಪವೂ ದುಃಖದ ಸೇರುವಿಕೆ ಇಲ್ಲದ ಸುಖವನ್ನು ಹೊಂದುತ್ತಾನೆ. ರಜೋಗುಣವು ತಲೆಯೆತ್ತಿರುವಾಗ ಮರಣಹೊಂದಿದವನಿಗೆ ಕಾಮ್ಯಕರ್ಮವನ್ನು ಮಾಡುವವರ ಕುಲದಲ್ಲಿ ಜನ್ಮವೂ, ಅವುಗಳ ಫಲವನ್ನು ಅನು ಭವಿಸುವಿಕೆಯೂ ಮತ್ತೆಮತ್ತೆ ಹುಟ್ಟುವಿಕೆಯೂ ರಜೋಗುಣ ವೃದ್ಧಿಯೂ, ಮತ್ತೆ ಕಾಮ್ಯಕರ್ಮಪ್ರವೃತ್ತಿಯೂ ಹೀಗೆ ಇದೇ ಪರಂಪರೆಯಾಗಿ ಎಡೆಬಿಡದೆ ಬಂದೊದಗುತ್ತಾ ಸಾಂಸಾರಿಕ ದುಃಖವು ತುಂಬಿರುವ ಫಲವೇ ಉಂಟಾಗುವುದೆಂದು ರಜೋಗುಣದ ಪರಿಣಾಮವನ್ನು ತಿಳಿದವರು ಹೇಳುವರು.

ಅಂತ್ಯಕಾಲದಲ್ಲಿ ತಮೋಗುಣವು ತಲೆಯೆತ್ತಿರುವಾಗ ಮರಣ ಹೊಂದಿದವನಿಗೆ ನಾಯಿ, ಹಂದಿ ಮುಂತಾದ ತಾಮಸಜನ್ಮ ಪ್ರಾಪ್ತಿಯೂ, ಮತ್ತೆ ಅಜ್ಞಾನ ಪರಂಪರೆಯೂ, ಯಾವ ವಿಧವಾದ ಪುರುಷಾರ್ಥಗಳಲ್ಲಿಯೂ ಪ್ರವರ್ತಿಸದೇ ಇರು ವವರ ಯೋನಿಗಳಲ್ಲಿ ಮತ್ತೆ ಮತ್ತೆ ಹುಟ್ಟುವಿಕೆಯೂ ಅಂತಹ ಅನರ್ಥಪರಂಪರೆಯೇ ಫಲವಾಗುವುದೆಂದು ತಮೋಗುಣದ ಪರಿಣಾಮವನ್ನು ತಿಳಿದವರು ಹೇಳುವರು.

**ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವಚ ।**
**ಪ್ರಮಾದಮೋಹೌ ತಮಸೋ ಭವತೋಽಜ್ಞಾನ ಮೇವ ಚ ॥**

ಸತ್ತ್ವ ಮೊದಲಾದ ಗುಣಗಳು ಬೆಳೆದು ಬರುವ ಪ್ರಯೋಜನವೇನೆಂಬು ದನ್ನು ಹೇಳುತ್ತಾನೆ;—ಮೇಲೆ ಮೇಲೆ ಸತ್ತ್ವ ಬೆಳೆದರೆ ಆತ್ಮವನ್ನು ಮೊದಲಿನಲ್ಲಿ ಇದ್ದಂತೆ ತಿಳಿಯುತ್ತಾನೆ. ಅನಂತರ ಎಡಬಿಡದೆ ನೆನೆಯುತ್ತಾನೆ. ಆಮೇಲೆ

ನೋಡುತ್ತಾನೆ. ರಜಸ್ಸು ಬೆಳೆದರೆ ಸ್ವರ್ಗ ಮೊದಲಾದ ಫಲಗಳಲ್ಲಿ ಆಸೆ ಬೆಳೆಯುವುದು, ತಮಸ್ಸು ಬೆಳೆದರೆ ವಿಷಯಗಳಲ್ಲಿ ನಿಜಸ್ಥಿತಿಯನ್ನುಗಮನಿಸದೆ ಕೆಟ್ಟ ಕಾರ್ಯಗಳನ್ನು ಮಾಡುತ್ತಾನೆ. ಆದರಿಂದ ತಪ್ಪು ಬುದ್ಧಿಯು ಬೆಳೆಯುತ್ತದೆ. ಅದರಿಂದ ತಮೋಗುಣವು ಮೇಲೆಮೇಲೆ ಬೆಳೆಯುತ್ತದೆ. ಆದರಿಂದ ಒಳ್ಳೆಯ ಅರಿವು ಪೂರ್ತಿಯಾಗಿ ಹೋಗುತ್ತದೆ.

**ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ ।**
**ಜಘನ್ಯ ಗುಣವೃತ್ತಿಸ್ಥಾ ಅಧೋಗಚ್ಛಂತಿ ತಾಮಸಾಃ ॥**

ಸತ್ತ್ವಗುಣ ತಲೆಯೆತ್ತಿದವರು—ಅಂದರೆ ಆ ಗುಣನಿಷ್ಠರು ಮುಂದೆ ಮುಂದೆ ಸತ್ತ್ವಗುಣಬೆಳೆದು ಶ್ರೇಷ್ಠವಾದ ಪದವಿಯನ್ನು ಹೊಂದುತ್ತಾರೆ: ಅಂದರೆ ಸಂಸಾರವನ್ನು ನೀಗುತ್ತಾರೆ. ರಜೋಗುಣವು ತಲೆಯೆತ್ತಿದವರು ಸ್ವರ್ಗದಲ್ಲಿ ಆಸೆಯಿಂದ ಅದಕ್ಕಾಗಿ ಕಾರ್ಯಮಾಡಿ, ಫಲವನ್ನು ಅನುಭವಿಸಿ ಮತ್ತೆ ಹುಟ್ಟಿ, ಅದೇ ರೀತಿಯಾಗಿ ಕರ್ಮಗಳನ್ನು ಮಾಡುತ್ತಾರೆ. ಆದುದರಿಂದ ಮೇಲಕ್ಕೂ ಹೋಗದೆ, ಕೆಳಗೂ ಹೋಗದೆ ನಡುವೆ ನಿಲ್ಲುವರು. ಮತ್ತೆಮತ್ತೆ ಬರುವುದರಿಂದ ಅದನ್ನು ದುಃಖವೆಂದೇ ಹೇಳಬಹುದು. ತಮೋಗುಣವು ತಲೆಯೆತ್ತಿದವರು ಇದ್ದುಇದ್ದು ತಮೋಗುಣವನ್ನು ಬೆಳೆಸಿ ಮತ್ತೆಮತ್ತೆ ಕೆಟ್ಟ ಕಾರ್ಯಗಳನ್ನು ಮಾಡಿ ಕೆಳಕೆಳಗೇಹೋಗುವರು, ಅಂದರೆ ನೀಚಕುಲದಲ್ಲೇ ಹುಟ್ಟುವರು. ಮತ್ತೆ ಹಸು, ಪಕ್ಷಿ ಮೊದಲಾದ ಹುಟ್ಟು, ಅನಂತರ ಹುಳುವಾಗಿ ಹುಟ್ಟುವುದು. ಆಮೇಲೆ ಮರ, ಪೊದರು. ಬಳ್ಳಿ, ಕಲ್ಲು, ಕಾಷ್ಠ—ಕಟ್ಟಿಗೆ, ಹೆಂಚು, ಹುಲ್ಲು ಇವೇ ಮೊದಲಾದವಾಗುತ್ತಾರೆ.

**'ತತಶ್ಚ ಶಿಲಾ ಕಾಷ್ಠ ಲೋಷ್ಟ ತೃಣಾದಿ ಕತ್ವಂಗಚ್ಛಂತೀತ್ಯರ್ಥಃ'** ಎಂದು **ಭಾಷ್ಯ ಪಙ್ಕ್ತಿ.**

ಬಹಳಹೀನವಾದ ಸ್ಥಿತಿಗೆ ಬಂದು ದುಃಖದ ಎಲ್ಲೆಯನ್ನೂ ಸುಖಪ್ರಾಪ್ತಿಯ ದ್ವಾರವನ್ನೂ ಕೂಡ ಕಾಣಲಾರರು.

ಒಳ್ಳೆಯ ಆಹಾರಗಳಿಂದಲೂ, ಫಲವನ್ನು ಬಯಸದೆ ಒಳ್ಳೆಯ ಕರ್ಮಗಳನ್ನು ಮಾಡುವುದರಿಂದಲೂ ಮೇಲೆ ಮೇಲೆ ಸತ್ತ್ವಗುಣ ಬೆಳೆದವರು– ರಜೋಗುಣ, ತಮೋಗುಣ ಕಡಿಮೆಯಾಗಿ ಉತ್ತಮವಾದ ಪದವಿಯನ್ನು ಹೊಂದುವ ರೀತಿಯನ್ನು ಹೇಳುತ್ತಾನೆ ಪರಮಾತ್ಮ.

**ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।**
**ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥**

ಊಟವನ್ನು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರುವಿಧವಾಗಿ ಹೇಳಿದೆ. ಇವುಗಳಲ್ಲಿ ಸತ್ತ್ವಗುಣವನ್ನು ಬೆಳೆಸುವ ಆಹಾರವನ್ನು ಊಟಮಾಡುವುದರಿಂದಲೂ, ಫಲವನ್ನು ಅಪೇಕ್ಷಿಸದೆ ಭಗವಂತನ ಸಂತೋಷಕ್ಕಾಗಿ ಒಳ್ಳೆಯ ಕರ್ಮಗಳನ್ನು ಮಾಡುವುದರಿಂದಲೂ, ಒಬ್ಬನು ರಜೋಗುಣವನ್ನೂ, ತಮೋಗುಣವನ್ನೂ ಇದ್ದ ಜಾಗವೇ ತಿಳಿಯದಂತೆ ನಾಶಮಾಡಿ ಸತ್ತ್ವಗುಣವನ್ನು ಬಹಳವಾಗಿ ಬೆಳೆಸಿ, ಸಂಸಾರಕಾರ್ಯಗಳು ಎಲ್ಲ ಗುಣಗಳಿಂದ ತಾನೇ ಉಂಟಾಗುತ್ತವೆ ಎಂದೂ, ಆತ್ಮಾ ಎಂಬುದು ಸ್ವಭಾವದಲ್ಲಿ ಒಂದು ಕಾರ್ಯವನ್ನೂ ಮಾಡುವುದಿಲ್ಲವೆಂದೂ ತಿಳಿಯುತ್ತಾನೆ. ಅವನು ನನ್ನಂತೆ ಆಗುತ್ತಾನೆ. ಅಂದರೆ—ಆತ್ಮವು ಇದು ಮೊದಲು ಎಂದು ತಿಳಿಯದ ಕಾಲದಿಂದ ಬಂದ ಕರ್ಮದಿಂದ ಸತ್ತ್ವ ಮೊದಲಾದ ಗುಣಗಳಿಂದ ಉಂಟಾಗುವ ಫಲಗಳಲ್ಲಿ ಆಸೆಯುಂಟಾಗಿ ಅದಕ್ಕಾಗಿ ಕೆಲವು ಕಾರ್ಯಗಳನ್ನು ಮಾಡುತ್ತಾನೆ. ಆತ್ಮನು ಸ್ವಭಾವದಿಂದ ಒಂದುವಿಧವಾದ ದೋಷವೂ ಇಲ್ಲದವನು. ಈ ರೀತಿಯಾದ ಕಾರ್ಯಗಳು ಅವನಿಗೆ ಇಲ್ಲ. ಅಳತೆಯಿಲ್ಲದ ಅರಿವುಳ್ಳವನು—ಎಂದು ಅರಿತರೆ, ಅವನು ನನ್ನಂತೆಯೇ ಆಗುತ್ತಾನೆ.

ಆತ್ಮಸ್ವರೂಪವನ್ನು ಇದ್ದಹಾಗೆ ನೋಡುವವನು ಭಗವಂತನ ಹಾಗೆ ಆಗುವನು ಎಂದು ಹೇಳಿದೆ. ಭಗವಂತನ ಹಾಗೆ ಆಗುವುದು ಎಂಬುದು ಏನು ? ಎಂದರೆ ಹೇಳುತ್ತಾನೆ.

**ಗುಣಾನೇತಾನತೀತ್ಯ ತ್ರೀನ್‌ದೇಹೀ ದೇಹಸಮುದ್ಭವಾನ್ ।**
**ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥**

ಈ ಜೀವನು ಶರೀರಾಕಾರವಾಗಿ ಆಗಿರುವ ಪ್ರಕೃತಿಯಿಂದ ಉಂಟಾಗಿರುವ ಸತ್ತ್ವ ಮೊದಲಾದ ಮೂರುಗುಣಗಳನ್ನೂ ಜಯಿಸಿ ಸ್ವಭಾವದಿಂದ ಆ ಗುಣಗಳ ಸಂಬಂಧವಿಲ್ಲದ—ಜ್ಞಾನವೇ ಸ್ವಭಾವವಾಗಿ ಇರುವ ಜೀವಸ್ವರೂಪವನ್ನು ನೋಡಿ ಹುಟ್ಟುವಿಕೆ, ಸಾವು, ಮುಪ್ಪು ಇವೇ ಮೊದಲಾದ ತೊಂದರೆ ಇಲ್ಲದಂತೆ ಆತ್ಮವನ್ನು ಅನುಭವಿಸಿ, ಹೆಚ್ಚಾದ ಸುಖವನ್ನು ಹೊಂದುತ್ತಾನೆ. ಇದು ತಾನೇ ಭಗವಂತನಂತೆ ಆಗುವುದು ಎಂಬುದು, ಅಂದರೆ—ಭಗವಂತನು ಯಾವಾಗಲೂ ಅಳತೆಯಿಲ್ಲದ ಸಂತೋಷವುಳ್ಳವನಾಗಿ ಇರುತ್ತಾನೆ. ಸಂಸಾರಿಗಳಾದ ಜೀವರು ಕೆಲವು ಕಾರಣಗಳಿಂದ ಯಾವಾಗಲೂ ದುಃಖವನ್ನು ಅನುಭವಿಸಿಕೊಂಡೇ ಇರುವರು. ಆ ರೀತಿ ಇಲ್ಲದೆ ಆತ್ಮಸ್ವರೂಪವನ್ನು ನೋಡಿದ ಜೀವರು ಯಾವಾಗಲೂ ಸಂತೋಷಪಡುತ್ತಾರೆ. ಇದೇ ಸಾಮ್ಯವೆನಿಸಿಕೊಳ್ಳುವುದು.

ಗುಣಗಳನ್ನು ಜಯಿಸಿದವನ ನಡವಳಿಕೆಯನ್ನೂ, ಗುಣಗಳನ್ನು ಹೇಗೆ ಜಯಿಸುವುದು ಎಂಬುದನ್ನೂ ಅರ್ಜುನನು ಕೇಳುತ್ತಾನೆ.

ಕೈರ್ಲಿಂಗೈಸ್ತ್ರೀಗುಣಾನೇತಾ ನತೀತೋ ಭವತಿ ಪ್ರಭೋ ।
ಕಿಮಾಚಾರಃ ಕಥಂ ಚೈತಾಂ ಸ್ತ್ರೀನ್ ಗುಣಾನ ತಿವರ್ತತೇ ॥

ಸತ್ತ್ವಮೊದಲಾದ ಈ ಮೂರು ಗುಣಗಳನ್ನು ಜಯಿಸಿದವನು ಯಾವರೀತಿ ನೆನಪುಳ್ಳವನು? ಯಾವರೀತಿ ಮಾತನ್ನಾಡುವನು? ಯಾವರೀತಿಯಾದ ಕಾರ್ಯಗಳನ್ನು ಮಾಡುವನು ? ಈ ಗುಣಗಳನ್ನು ಹೇಗೆ ಜಯಿಸುವುದು ?

ಅದಕ್ಕೆ ಭಗವಂತನ ಉತ್ತರ—

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥

ಒಬ್ಬನು ಸತ್ತ್ವಗುಣದಿಂದ ಒಂದುವಸ್ತುವನ್ನು ತಿಳಿಯುತ್ತಾನೆ ; ರಜೋಗುಣದಿಂದ ಒಂದು ಕಾರ್ಯವನ್ನು ಮಾಡುತ್ತಾನೆ. ತಮೋಗುಣದಿಂದ ಒಂದು ವಸ್ತುವನ್ನು ಬೇರೆ ವಿಧವಾಗಿ ನೆನೆಯುತ್ತಾನೆ. ಪ್ರಪಂಚದಲ್ಲಿ ಆತ್ಮವನ್ನು ಬಿಟ್ಟು[1] ಬೇರೆವಸ್ತುಗಳು ಇಷ್ಟವಾದವು, ಇಷ್ಟವಲ್ಲದವು ಎಂದು ಎರಡು ಬಗೆಯಾಗಿವೆ. ಅವುಗಳಲ್ಲಿ ಹಿಡಿಸದ ವಸ್ತುಗಳನ್ನು ಕುರಿತು ತಿಳುವಳಿಕೆ, ಕೆಲಸ, ಮೋಹ—ಅಜ್ಞಾನ ಇವುಗಳು ಬಂದರೆ, ಒಬ್ಬನು ದುಃಖಪಡುತ್ತಾನೆ. ಹಿಡಿಸಿದ ವಸ್ತುಗಳನ್ನು ಕುರಿತು ಜ್ಞಾನ ಮುಂತಾದವು ಬಂದು ಹೋದರೆ, ಅವು ಮತ್ತೆ ಬರಬೇಕೆಂದು ಆಸೆ

1. **ಉದಾಹರಣೆ** :—ಸತ್ತ್ವಗುಣದಿಂದ ಒಬ್ಬನು ಹಾವು ಮೊದಲಾದವನ್ನು ನೋಡುತ್ತಾನೆ. ಅದು ಹಿಡಿಸದ ವಸ್ತು. ಅದನ್ನು ನೋಡಿದ್ದರಿಂದ ದುಃಖವಿಲ್ಲ. ಪ್ರಪಂಚದಲ್ಲಿ ರಜೋಗುಣದಿಂದ ವಿರೋಧಿಗಳೊಡನೆ ಒಬ್ಬನು ಮಾತನಾಡುತ್ತಾನೆ. ಅವನ ಮನೆಗೆ ಹೋಗುತ್ತಾನೆ. ಮತ್ತೆ ಏತಕ್ಕೆ ಮಾತನ್ನಾಡಿದೆ, ಏತಕ್ಕೆ ಹೋದೆ ಎಂದು ದುಃಖ ಪಡುತ್ತಾನೆ. ಆ ರೀತಿಯಾದ ಕಾರ್ಯಗಳು ಒದಗಿದರೆ, ಇವನು ದುಃಖ ಪಡುವುದಿಲ್ಲ. ಒಬ್ಬನು ತಮೋಗುಣದಿಂದ ಶತ್ರುವಿನ ಮಗುವನ್ನು ಇದ್ದಹಾಗೆ ತಿಳಿಯದೆ ತನ್ನ ಮಗನೆಂದು ನೆನೆದು ಕೊಂಡಾಡುತ್ತಾನೆ. ಆಮೇಲೆ ಅರಿತು ದುಃಖಪಡುತ್ತಾನೆ. ಸತ್ತ್ವಗುಣದಿಂದ ಏರ್ಪಾಡಾಗುವ ಮಗು ಹೆಂಡತಿ ಇವರ ನೋಟ ತನಗೆ ಹೋದರೆ ಆ ನೋಟ ಮತ್ತೆ ಬರಬೇಕೆಂದು ಬಯಸುವುದಿಲ್ಲ. ರಜೋಗುಣದಿಂದ ಏರ್ಪಡುವ—ಹಣ ದೊರೆಯುವುದಕ್ಕಾಗಿ ಮಾಡುವ ಕೆಲಸ ತಪ್ಪಿಹೋದರೆ, ಅದನ್ನು ಕುರಿತು ಆಸೆ ಪಡುವುದಿಲ್ಲ. ಬಹಳ ದಿವಸದಿಂದ ಒಬ್ಬನನ್ನು ನೋಡಬೇಕೆಂದು ನೆನೆಸಿಕೊಂಡಿರುವವನು ಅವನು ಬಂದಾಗ ತಮೋಗುಣದಿಂದ, ಅವನನ್ನು ಮತ್ತೊಬ್ಬನೆಂದು ನೆನೆದನು. ಅವನು ಹೊರಟು ಹೋದನು; ಅನಂತರ ತಪ್ಪಿದ ಅವನ ನೋಟವನ್ನು ಆಸೆಪಡುವುದಿಲ್ಲ.

ಪಡುತ್ತಾನೆ. ಈ ಮೂರು ಗುಣಗಳನ್ನೂ ಜಯಿಸಿದವನಿಗೆ ಈ ರೀತಿ ದುಃಖವಿಲ್ಲ— ಆಸೆಯೂ ಇಲ್ಲ.

ಇನ್ನೂ ಇದರ ವಿವರಣೆ :—ಗುಣತ್ರಯ ಪ್ರಯುಕ್ತಗಳಾದ ಪ್ರಕಾಶ, ಪ್ರವೃತ್ತಿ, ಮೋಹಗಳು ತನಗೆ ಅನಿಷ್ಟವನ್ನು ಕೊಡುವುದಕ್ಕಾಗಿ ಬಂದೊದಗಿದಾಗ ಯಾವ ಜೀವನು ಅವುಗಳನ್ನು ದ್ವೇಷಿಸುವುದಿಲ್ಲವೋ- -ಮತ್ತು ಅದೇ ಪ್ರಕಾಶ, ಪ್ರವೃತ್ತಿ ಮೋಹಗಳು ತನಗೆ ಇಷ್ಟಗಳನ್ನು ಕೊಡುವುದಕ್ಕೆ ಬಂದಿದ್ದು ಅಷ್ಟರಲ್ಲೇ ನಿವೃತ್ತಗಳಾದರೆ ಯಾವ ಚೇತನನು ಅವುಗಳನ್ನು ಕುರಿತು ಆಸೆಪಡುವುದಿಲ್ಲವೋ ಅಂತಹ ಚೇತನನು ಗುಣಾತೀತನು ಎನಿಸಿಕೊಳ್ಳುವನೆಂದು ತಿಳಿಯಬಹುದು.

**ಉದಾಸೀನವದಾಸೀನೋ ಗುಣೈರ್ಯೋನ ವಿಚಾಲ್ಯತೇ ।**
**ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥**

ಶರೀರದ ಜೊತೆಯಲ್ಲಿ ಇರುವವನು—ಹಿಡಿಸಿದವನ್ನೂ, ಹಿಡಿಸದೇ ಇರುವವನ್ನೂ ಕುರಿತು ಕೆಳಗೆ ಹೇಳಿರುವವುಗಳಲ್ಲಿ ಹೇಗೆ ಮನಸ್ಸಿನ ತಳಮಳವಿಲ್ಲದಂತೆ— ವ್ಯತ್ಯಾಸವಾಗದಂತೆ ಇರುವನು ಎಂದರೆ ಹೇಳುತ್ತಾನೆ.

ಇವನು ಆತ್ಮವನ್ನು ಮಾತ್ರ ನೋಡಿ ಸಂತೋಷಪಡುವುದರಿಂದ ಇಷ್ಟವಾದದ್ದೋ, ಇಷ್ಟವಿಲ್ಲದ್ದೋ ಆದ ಬೇರೆ ವಸ್ತುಗಳನ ಗಮನಿಸುವುದಿಲ್ಲ. ಅಂದರೆ—ದುಃಖವೂ, ಆಸೆಯೂ ಉಂಟಾಗುವುದಿಲ್ಲ. ಸತ್ತ್ವ ಮೊದಲಾದ ಗುಣಗಳಿಂದ ದುಃಖವನ್ನೂ, ಆಶೆಯನ್ನೂ, ಹೊಂದಿದರೂ, ಒಂದು ಕೆಲಸವನ್ನೂ ಮಾಡುವುದೂ ಇಲ್ಲ. ಹಿಡಿಸಿದ್ದೋ ಹಿಡಿಸದೇ ಇರುವುದೋ- -ಇವುಗಳ ಅರಿವು ಮುಂತಾದವು ಏರ್ಪಾಡು ಆಗುವಾಗ ಅವುಗಳು ಆ [1]ಗುಣಗಳಿಂದ ಉಂಟಾಗುವುವು, ಎಂದು ತಿಳಿದು [2]ಅವುಗಳಿಗೆ ತಕ್ಕಕಾರ್ಯಗಳನ್ನು ಮಾಡುವುದಿಲ್ಲ. ಹಿಡಿಸದೇ ಇರುವ ವಸ್ತುಗಳನ್ನು ನೋಡಿ ಕೋಪಿಸುವುದೂ, ಹಿಡಿಸಿದ ವಸ್ತುಗಳನ್ನು ನೋಡಿ ಸಂತೋಷಪಡುವುದೂ ಇಲ್ಲ. ಇವನೇ ಗುಣಾತೀತನು ಎಂದು ಹೇಳಿಸಿಕೊಳ್ಳುವನು.

ಸಮದುಃಖ ಸುಖಃಸ್ವಸ್ಥಃ ಸಮಲೋಷ್ಟಾಶ್ಮ ಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮ ಸಂಸ್ತುತಿಃ
ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಸ್ಸಉಚ್ಯತೇ

1. ಶ್ಲೋಕದಲ್ಲಿ ಮೊದಲಿನ ಪಾದದಲ್ಲಿ ಹೇಳಿರುವುದನ್ನೇ ಇಲ್ಲಿ ವಿಸ್ತಾರವಾಗಿ ಹೇಳುವುದು.

2. ಎರಡನೆಯ ಪಾದದಲ್ಲಿ ಹೇಳಿರುವುದನ್ನೇ ಇಲ್ಲಿ ವಿಸ್ತಾರವಾಗಿ ಹೇಳಿದೆ.

ಆತ್ಮವನ್ನು ನೋಡುವುದನ್ನು ಬಿಟ್ಟು ಬೇರೆ ಸುಖವನ್ನೂ ದುಃಖದಂತೆಯೇ ನೆನೆಸುತ್ತಾನೆ. ತನ್ನ ಆತ್ಮ ಒಂದನ್ನೇ ಪ್ರಿಯವಾಗಿ ನೆನೆದುಕೊಂಡಿರುವುದರಿಂದ ಮಗು ಹುಟ್ಟಿತು ಎಂದರೂ ಸತ್ತಿತು ಎಂದರೂ ಅವನ ಮನಸ್ಸು [1]ಒಂದೇ ಮಾದರಿಯಾಗಿ ಇದೆ. ಆದುದರಿಂದಲೇ ಕಪ್ಪರೆಯನ್ನೂ, ಕಲ್ಲನ್ನೂ, ಚಿನ್ನವನ್ನೂ ಒಂದೇ ರೀತಿಯಾಗಿ ನೆನೆಸುತ್ತಾನೆ. ಆದುದರಿಂದಲೇ ಹಿಡಿಸುವ—ಪ್ರಿಯವಾದ ವಸ್ತುಗಳೂ ಹಿಡಿಸದ—ಅಪ್ರಿಯವಾದ ವಸ್ತುಗಳೂ ಅವನಿಗೆ ಒಂದೇ ರೀತಿಯಾಗಿ ಇವೆ. ಆತ್ಮವನ್ನೂ ಶರೀರವನ್ನೂ ಬೇರೆಬೇರೆಯೆಂದು ಅರಿಯುವ ವಿಷಯದಲ್ಲಿ ಸಮರ್ಥನಾಗಿರುತ್ತಾನೆ. ಆದುದರಿಂದ ತನ್ನನ್ನು ಒಬ್ಬ ಬೈಯ್ದರೂ, ಸ್ತೋತ್ರ ಮಾಡಿದರೂ [2]ಒಂದೇ ರೀತಿಯಾಗಿ ಇದ್ದಾನೆ. ಗುಣವನ್ನು ನೋಡಿ ಗೌರವಿಸುವುದರಲ್ಲೂ, ದೋಷವನ್ನು ನೆನೆದು ಅಲಕ್ಷ್ಯಮಾಡುವುದರಲ್ಲೂ ಅವೆರಡಕ್ಕೂ ಕಾರಣವಾಗಿ ಏರ್ಪಾಡಾಗಿರುವ ಸ್ನೇಹ, ವಿರೋಧ ಇವು ಇರುವವರ ವಿಷಯದಲ್ಲೂ—ಅವೆರಡೂ ಆತ್ಮನಿಗೆ ಸಂಬಂಧವಿಲ್ಲ ಎಂದು ನೆನೆದು ಒಂದೇ ರೀತಿಯಾಗಿ ಇರುತ್ತಾನೆ. ಹಾಗೆಯೇ ಶರೀರಕ್ಕಾಗಿ ಮಾತ್ರ ಒಂದು ಕಾರ್ಯವನ್ನೂ ಮಾಡುವುದಿಲ್ಲ. ಈ ರೀತಿಯಾದವನು ಗುಣಗಳನ್ನು ಜಯಿಸಿದವನು ಎಂದು ಹೇಳಲ್ಪಡುತ್ತಾನೆ.

ಈ ರೀತಿ ಗುಣಗಳನ್ನು ಜಯಿಸುವುದಕ್ಕೆ ಮುಖ್ಯವಾದ ಕಾರಣವನ್ನು ಹೇಳುತ್ತಾನೆ.

**ಮಾಂಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।**
**ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥**

ಕೆಳಗೆ ಹೇಳಿದಂತೆ ಶರೀರ ಬೇರೆ, ಆತ್ಮ ಬೇರೆ ಎಂದು ನೆನಿಸಿದ ಮಾತ್ರದಿಂದ ಗುಣಗಳ ಜಯವು ಉಂಟಾಗುವುದಿಲ್ಲ. ಇವೆರಡೂ ಬೇರೆ ಎಂದು ಎಷ್ಟೇ ನೆನಿಸಿದರೂ, ಇವನಿಗೆ ಬಹಳ ಕಾಲದಿಂದ ಬಂದ ಕೆಟ್ಟ ಅಭ್ಯಾಸವು ಈ ನೆನಪನ್ನು ಅದುಮುತ್ತದೆ. ಈ ನೆನಪು ಇದ್ದರೂ, ನೆನಪಿನ ಕಾರ್ಯವು ನಡೆಯುವುದಿಲ್ಲ, ಆದರೆ ಹೇಗೆ ಗುಣಗಳ ಜಯವು ಬರುತ್ತದೆ ಎಂದರೆ, ನನ್ನನ್ನು ಪ್ರಪತ್ತಿಮಾಡಿ

1. ಸುಖ ಬಂದರೆ ಉಬ್ಬುವುದೂ, ದುಃಖ ಬಂದರೆ ತಲೆಯನ್ನು ತಗ್ಗಿಸಿ, ಜೋಲಾಡುವಂತೆ ಮಾಡಿಕೊಳ್ಳುವುದೂ ಇಲ್ಲ.

2. ಒಬ್ಬನು ಇವನು ಬಹಳ ಅಂದವಾಗಿದ್ದಾನೆ ಎಂದು ಹೇಳಿದನು. ಇನ್ನೊಬ್ಬನು ಬಹಳ ಕುರೂಪಿಯಾಗಿ ಇದ್ದಾನೆ ಎಂದು ಹೇಳಿದನು. ಅಂದವೂ, ಅಂದವಿಲ್ಲದಿರುವಿಕೆಯೂ ಶರೀರದಲ್ಲಿ ಇದೆ ಎಂದು ತಿಳಿದು ಅವು ಎರಡರಿಂದ ಶರೀರಕ್ಕಿಂತಲೂ ಬೇರೆಯಾದ ಆತ್ಮನಿಗೆ ಲಾಭವೂ, ನಷ್ಟವೂ ಇಲ್ಲವೆಂದು ತಿಳಿದು ಅವೆರಡರಲ್ಲೂ ಒಂದೇ ರೀತಿಯಲ್ಲಿ ಇದ್ದಾನೆ.

ಮರೆಹೊಕ್ಕು ನನ್ನನ್ನು ಬಿಟ್ಟು ಬೇರೆ ದೇವತೆಯನ್ನೂ, ನನ್ನನ್ನು ಬಿಟ್ಟು ಬೇರೆ ಪ್ರಯೋಜನವನ್ನೂ ನೆನೆಯದೆ, ನನ್ನಹತ್ತಿರ ಭಕ್ತಿಯನ್ನು ಮಾಡಬೇಕು. ನನ್ನನ್ನು ಪ್ರೀತಿಯಿಂದ ನೆನೆದು ಸಂತೋಷಪಡಿಸಬೇಕು. [1]ನಾನು ನೆನಸಿದಂತೆ ನಡೆಸುವವನೂ, ಅಳತೆಯಿಲ್ಲದ ದಯೆ ಉಳ್ಳವನೂ, ನನ್ನಹತ್ತಿರ ಬಂದವರು ಎಷ್ಟೇ ತಪ್ಪು ಮಾಡಿದರೂ ಅವುಗಳನ್ನು ಗಮನಿಸದೆ ಪ್ರೀತಿಸುವವನಾಗಿದ್ದೇನೆ. ಈ ರೀತಿ ನನ್ನ ಗಮನಿಸದೇ ಇರುವಿಕೆಗೂ, ಪ್ರೀತಿಗೂ ಅಳತೆಯೇ ಇಲ್ಲ. ಈ ರೀತಿ ನನ್ನಲ್ಲಿ ಭಕ್ತಿಯೊಡನೆ ತನ್ನ ಸ್ವರೂಪವನ್ನು ಧ್ಯಾನಮಾಡಿದರೆ, ನನ್ನ ಅನುಗ್ರಹವಿಲ್ಲದೆ ಜಯಿಸಲಾಗದ ಸತ್ತ್ವ ಮೊದಲಾದ ಗುಣಗಳನ್ನು ಜಯಿಸಿ, ಬ್ರಹ್ಮವಾಗುವುದಕ್ಕೆ (ಅಂದರೆ ಆತ್ಮವನ್ನು ಇದ್ದಹಾಗೆ ಪ್ರಿಯವಾಗಿ ನೋಡುವುದಕ್ಕೆ) ತಕ್ಕವನಾಗುತ್ತಾನೆ.

ಬ್ರಹ್ಮಣೋಹಿ ಪ್ರತಿಷ್ಠಾಹಮಮೃತಾಸ್ಯಾವ್ಯಯಸ್ಯಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾನ್ತಿಕಸ್ಯ ಚ ॥

ಮತ್ತೊಬ್ಬರನ್ನೂ, ಬೇರೆ ಪ್ರಯೋಜನವನ್ನೂ, ನೆನೆಯದೆ ಮಾಡಲ್ಪಟ್ಟ ಭಕ್ತಿಯಿಂದ ಸಂತೋಷಪಡಿಸಿದ ನಾನು—ನಾಶವಿಲ್ಲದ, ಒಂದು ವಿಧವಾದ ದೋಷವೂ ಇಲ್ಲದ ಪ್ರಿಯವೂ ಆದ ಆತ್ಮಾವಿನ ಅನುಭವವನ್ನೂ, ಬ್ರಹ್ಮಪಟ್ಟಕ್ಕಿಂತಲೂ ಮೇಲಾದ ಐಶ್ವರ್ಯವನ್ನೂ, ಮೋಕ್ಷ ಸುಖವನ್ನೂ ಕೊಡುವವನು. ಆದುದರಿಂದ ನನ್ನನ್ನು ಪ್ರಪತ್ತಿಮಾಡಿ ಭಕ್ತಿಮಾಡಿದರೆ ಮಾತ್ರ ಈ ಎಲ್ಲಾ ಸುಖಗಳೂ ಉಂಟಾಗುವುವು. ಈ ವಿಷಯವನ್ನು ಶ್ರೀ ಭಗವದ್ಗೀತೆಯ ೧೭ನೆಯ ಅಧ್ಯಾಯದ ೧೪ನೆಯ ಶ್ಲೋಕ ಮೊದಲು ಮಾಡಿ ಹೇಳಿದೆ. ಗುಣಗಳನ್ನು ಜಯಿಸುವುದೂ, ಅದರಿಂದ ಉಂಟಾಗುವ ಆತ್ಮಾವಿನ ಅವಲೋಕನವೂ, ಭಗವಂತನನ್ನು ಪ್ರಪತ್ತಿ ಮಾಡಿದರೆ ತಾನೇ ಬರುತ್ತದೆ. ಈ ವಿಷಯಗಳೆಲ್ಲಾ ಒಳ್ಳೆಯ ಆಚಾರ್ಯರ ಮತ್ತು ಭಗವಂತನ ಅನುಗ್ರಹದಿಂದ ಮನಸ್ಸಿನಲ್ಲಿ ಬರಬೇಕು.

ಈ ರೀತಿಯಾದ ಭಗವದುಪದೇಶವನ್ನು ಕೇಳಿದ ಅರ್ಜುನನು—ಶಾಸ್ತ್ರ ವಿಹಿತವಲ್ಲದ ಕರ್ಮವು ಯಾವ ಫಲವನ್ನೂ ಕೊಡದೇ ಪ್ರಯೋಜನವಿಲ್ಲದ್ದಾಗಿ

1. ಬಹಳ ಕಾಲದಿಂದ ಬಂದ ಕೆಟ್ಟ ಅಭ್ಯಾಸವನ್ನು ಹೋಗಿಸುವುದಕ್ಕೆ ಬೇಕಾದ ಭಗವಂತನ ಗುಣಗಳನ್ನು ಶ್ಲೋಕದಲ್ಲಿ 'ಮಾಮ್' (ನನ್ನನ್ನು) ಎಂಬ ಮಾತಿನಿಂದ ತೋರಿಸಲ್ಪಡುತ್ತದೆ ಎಂದು ತಾತ್ಪರ್ಯ. ಭಗವಂತನು ಒಬ್ಬನನ್ನು ಕರ್ಮಕ್ಕೆ ಒಳಪಡಿಸುವ ಹಾಗೆ ಕರ್ಮದಿಂದ ಬಿಡಿಸುವುದರಲ್ಲೂ ನೆನಸಿದಂತೆ ನಡೆಸುವವನು. ಈ ಗುಣವು ಒಬ್ಬನನ್ನು ಶಿಕ್ಷಿಸುವುದಕ್ಕೂ ಕ್ಷಮಿಸುವುದಕ್ಕೂ ಸಮನಾಗಿದೆ. ಅನುಗ್ರಹಕ್ಕೆ ಮಾತ್ರ ಬೇಕಾದವು ಮಿಕ್ಕ ಎರಡು ಗುಣಗಳೂ.

ಆಗುವುದು ಎಂಬುದನ್ನು ತಿಳಿಯದವನಾಗಿ ಶಾಸ್ತ್ರವಿಹಿತವಲ್ಲದ ಕರ್ಮವನ್ನು ಶ್ರದ್ಧೆಯಿಂದ ಒಬ್ಬನು ಮಾಡಿದರೆ ಅವನಿಗೆ ಸತ್ತ್ವಾದಿ ಗುಣಭೇದದಿಂದ ಯಾವ ರೀತಿಯಾದ ಫಲಭೇದವುಂಟಾಗುವುದೆಂಬುದನ್ನು ತಿಳಿಯಲಪೇಕ್ಷಿಸಿ ಪ್ರಶ್ನೆಮಾಡುತ್ತಾನೆ.

**ಯೇ ಶಾಸ್ತ್ರವಿಧಿ ಮುತ್ಸೃಜ್ಯ ಯಜಂತೇ ಶ್ರದ್ಧಯಾನ್ವಿತಾಃ ।**
**ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ ॥**

ಶ್ರೀ ಭಗವದ್ಗೀತೆಯಲ್ಲಿ ಹದಿನಾರನೆಯ ಅಧ್ಯಾಯದಲ್ಲಿ ದೇವಹುಟ್ಟು, ಅಸುರ ಹುಟ್ಟು ಎಂಬ ಹುಟ್ಟಿನ ವಿಭಾಗವನ್ನು ಹೇಳಿ, ಅದರ ಮೂಲಕ ಹೊಂದಬೇಕಾದ ವಸ್ತುವನ್ನೂ, ಹೊಂದುವುದಕ್ಕೆ ಉಪಾಯವನ್ನೂ ವೇದದ ಮೂಲಕವಾಗಿಯೇ ತಿಳಿಯಬೇಕೆಂದು ಹೇಳಿದ್ದಾನೆ ಕೃಷ್ಣಪರಮಾತ್ಮ.

ಈವಾಗ ಶಾಸ್ತ್ರದಲ್ಲಿ ಹೇಳದ ಕಾರ್ಯಗಳು ಅಸುರಹುಟ್ಟು ಉಳ್ಳವರಿಂದಲೇ ಮಾಡಲ್ಪಡುವುದರಿಂದ, ಅವುಗಳು ವ್ಯರ್ಥ; ಅವುಗಳಿಗೆ ಫಲವಿಲ್ಲ ಎಂಬುದನ್ನೂ, ಶಾಸ್ತ್ರದಿಂದ ಹೇಳಲ್ಪಟ್ಟ ಕಾರ್ಯಗಳನ್ನು ಸತ್ತ್ವ ಮೊದಲಾದ ಗುಣಗಳಿಂದ ಮೂರು ವಿಧಗಳು ಎಂಬುದನ್ನೂ; ಶಾಸ್ತ್ರದಿಂದ ಏರ್ಪಾಡಾದ ಕಾರ್ಯಗಳಿಗೆ ಗುರುತನ್ನೂ ಹೇಳುತ್ತಾನೆ. ಅರ್ಜುನನು ಶಾಸ್ತ್ರದಲ್ಲಿ ಹೇಳದ ಕೆಲಸಗಳಿಗೆ ಫಲವಿಲ್ಲ ಎಂಬುದನ್ನು ತಿಳಿಯದೆ ಶಾಸ್ತ್ರದಲ್ಲಿ ಹೇಳಲ್ಪಡದ ಯಾಗ ಮೊದಲಾದ ಕಾರ್ಯಗಳನ್ನು ಹೆಚ್ಚಾದ ಶ್ರದ್ಧೆಯಿಂದ ಒಬ್ಬನು ಮಾಡಿದರೆ ಅವುಗಳಿಂದ ಬರುವ ಫಲಗಳು ಸತ್ತ್ವಗುಣದಿಂದ ಏರ್ಪಟ್ಟವೋ ? ಅಥವಾ ಉಳಿದ ಎರಡು ಗುಣಗಳಿಂದ ಏರ್ಪಟ್ಟವೋ ? ಎಂದು ಕೇಳುತ್ತಾನೆ.

ಈ ರೀತಿ ಕೇಳಲ್ಪಟ್ಟ ಭಗವಂತನು ಶಾಸ್ತ್ರದಿಂದ, ಶಾಸ್ತ್ರದಲ್ಲಿ ಏರ್ಪಾಡಾಗದವುಗಳಲ್ಲಿ ಶ್ರದ್ಧೆಗೂ, ಅದರಿಂದ ಮಾಡಲ್ಪಡುವ ಕೆಲಸಗಳಿಗೂ ಒಂದು ಪ್ರಯೋಜನವೂ ಇಲ್ಲವೆಂಬುದನ್ನು [1]ಮನಸ್ಸಿನಲ್ಲಿ ಇಟ್ಟುಕೊಂಡು, ಶಾಸ್ತ್ರದಿಂದ ಏರ್ಪಾಡಾದ ಯಾಗ ಮೊದಲಾದ ಕಾರ್ಯಗಳು ಸತ್ತ್ವ

1. ಅರ್ಜುನನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊನೆಯಲ್ಲಿ ಹೇಳುತ್ತಾನೆ. ಅದು ಬುದ್ಧಿ ಇಲ್ಲದ ಪ್ರಶ್ನೆ ಎಂದು ತೋರಿಸುವುದಕ್ಕಾಗಿ ಒಡನೇ ಉತ್ತರವನ್ನೂ ಹೇಳಲಿಲ್ಲ.

ವಿಧವೆಂದು ಹೇಳುವುದಕ್ಕಾಗಿ [1]ಶಾಸ್ತ್ರದಿಂದ ವಿಧಿಸಲ್ಪಟ್ಟ ಕಾರ್ಯಗಳನ್ನು ಕುರಿತು ಶ್ರದ್ಧೆ ಮೂರು ವಿಧವೆನ್ನುತ್ತಾರೆ.

[2]ಶರೀರದೊಡನೆ ಕೂಡಿರುವ ಎಲ್ಲಾ ಪ್ರಾಣಿಗಳಿಗೂ ಇರುವ ಶ್ರದ್ಧೆಯೆಂಬುದು ಮೂರು ವಿಧ. ಅದು [3]ಸ್ವಭಾವದಿಂದ ಉಂಟಾಗುತ್ತದೆ. ಸ್ವಭಾವವೆಂದರೆ—ಬಹಳ ಕಾಲದಿಂದ ಬಂದ ವಾಸನೆಯಿಂದ (ಅಭ್ಯಾಸದಿಂದ) ಉಂಟಾದ ಆ ಆ ಸಂಗತಿಗಳಲ್ಲಿ ಪ್ರೀತಿ (ರುಚಿ). ಯಾವುದರಲ್ಲಿ ಪ್ರೀತಿ ಇರುತ್ತದೋ ಅದರಲ್ಲಿ ಶ್ರದ್ಧೆ ಉಂಟಾಗುತ್ತದೆ. ಶ್ರದ್ಧೆಯೆಂದರೆ- ಈ ಕೆಲಸದಿಂದ ನನ, ಇಷ್ಟವು ಸಿದ್ಧಿಸುತ್ತದೆ ಎಂದು ನಂಬಿ, ಆ ಕೆಲಸವನ್ನು ಮಾಡುವುದರಲ್ಲಿ ತ್ವರೆ- -ಆತುರ. ವಾಸನೆಯೂ, ರುಚಿಯೂ, ಶ್ರದ್ಧೆಯೂ ಒಬ್ಬನ ಶರೀರದೊಡನೆ ಸೇರಿರುವಾಗ, ಅದರ ಸತ್ತ್ವ ಮೊದಲಾದ ಗುಣಗಳಿಂದ, ಆ ಆ ಸಂಗತಿಗಳಲ್ಲಿ ಆತ್ಮಗಳಿಗೆ ಉಂಟಾಗುತ್ತವೆ. ಆದುದರಿಂದ, ಶ್ರದ್ಧೆ—ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ವಿಧ. ಅದರ ಸ್ವಭಾವವನ್ನು ಹೇಳುತ್ತೇನೆ ಕೇಳು.

ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।
ಶ್ರದ್ಧಾಮಯೋऽಯಂ ಪುರುಷೋ ಯೋ ಯಚ್ಛ್ರದ್ಧಸ್ಸ ಏವ ಸಃ ॥

1. ಶ್ರದ್ಧೆಯಿಂದ ಒಂದು ಕಾರ್ಯವನ್ನು ಮಾಡಿದರೆ ತಾನೆ ಫಲ ಉಂಟಾಗುತ್ತದೆ. ಆ ಕಾರ್ಯವು ಶಾಸ್ತ್ರದಲ್ಲಿ ಹೇಳಲ್ಪಟ್ಟದ್ದಾಗಿದ್ದರೆ ತಾನೆ ಅದು.

ಶ್ರದ್ಧೆಯೆಂಬುದು ಸತ್ತ್ವಗುಣವು ಉಳ್ಳವರಿಗೆ ಮಾತ್ರ ಎಂಬುದಿಲ್ಲ. ಬೇರೆ ಗುಣ ಉಳ್ಳವರಿಗೂ ಉಂಟು. ಶಾಸ್ತ್ರದಲ್ಲಿ ಹೇಳದ ಕೆಲಸಗಳಲ್ಲಿ ಉಂಟಾಗುವ ಕೆಲಸಗಳಲ್ಲಿ ಉಂಟಾಗುವ ಶ್ರದ್ಧೆಯನ್ನು ಕುರಿತು ಕೇಳಿದ ಅರ್ಜುನನಿಗೆ ಶಾಸ್ತ್ರದಲ್ಲಿ ಹೇಳಿರುವ ಕೆಲಸಗಳಲ್ಲಿ ಬರುವ ಶ್ರದ್ಧೆ ಮೂರು ವಿಧ ಎಂದು ಆರಂಭಿಸಿರುವುದರಿಂದ, ಕೆಳಗೆ ಹೇಳಿದ ಶ್ರದ್ಧೆಗೆ ಮೂರು ವಿಧವಿಲ್ಲ ಎಂದು ಪರೋಕ್ಷವಾಗಿ ತೋರಿಸಲ್ಪಡುತ್ತದೆ.

2. 'ಶರೀರದೊಡನೆ ಕೂಡಿರುವ' ಎಂಬ ಮಾತಿನಿಂದ ಸತ್ತ್ವ ಮೊದಲಾದ ಗುಣಗಳಲ್ಲಿ ಒಂದೊಂದು ತಲೆಯೆತ್ತುತ್ತದೆಯೆಂದೂ, ಅದಕ್ಕೆ ತಕ್ಕಂತೆ ಶ್ರದ್ಧೆ ಮೊದಲಾದ ಕಾರ್ಯಗಳು ಉಂಟಾಗುತ್ತವೆ ಎಂದೂ ತೋರಿಸಲ್ಪಡುತ್ತದೆ. ಸತ್ತ್ವ ಮೊದಲಾದ ಗುಣಗಳು ಶರೀರದಲ್ಲಿವೆ. ಶ್ರದ್ಧೆಯು ಶರೀರದೊಡನೆ ಸೇರಿದ ಆತ್ಮನಲ್ಲಿ ಇದೆ. ಕಾರಣವಾದ ಗುಣಗಳು ಮೂರು ವಿಧವಾಗಿ ಇರುವುದರಿಂದ, ಕಾರ್ಯವಾದ ಶ್ರದ್ಧೆಯೂ ಮೂರು ವಿಧ.

3. ಒಂದು ಕಾರ್ಯವನ್ನು 'ಮಾಡು' ಎಂದು ಹೇಳುವ ಶಾಸ್ತ್ರ, ಆ ಕಾರ್ಯವನ್ನು ಕುರಿತು ಸ್ತೋತ್ರವನ್ನು ಮಾಡುವ ಅರ್ಥವಾದ ಎನ್ನುವ ವೇದವಾಕ್ಯವೂ ಎಲ್ಲರಿಗೂ ಸಮನಾಗಿ ಇರುವಾಗ ಏತಕ್ಕೆ ಒಬ್ಬನಿಗೆ ಒಂದರಲ್ಲಿ ಶ್ರದ್ಧೆ ? ಮತ್ತೊಬ್ಬನಿಗೆ ಇನ್ನೊಂದರಲ್ಲಿ ಶ್ರದ್ಧೆ ಎಂದರೆ—ಈ ವಾಕ್ಯದಿಂದ ಉತ್ತರವನ್ನು ಹೇಳುತ್ತಾನೆ. ಪ್ರಪಂಚದಲ್ಲಿ ರುಚಿಯು ಬೇರೆಬೇರೆಯಾಗಿ ಇದೆ. ಆದುದರಿಂದ ಶ್ರದ್ಧೆಯೂ ಬೇರೆಬೇರೆ.

ಎಲ್ಲಾ ಜೀವರುಗಳಿಗೂ ಶ್ರದ್ಧೆಯು ಅವರವರ ಮನಸ್ಸಿಗೆ ತಕ್ಕಂತೆ ಇರುವುದು. ಮನಸ್ಸು ಯಾವ ಗುಣದೊಡನೆ ಸೇರಿ ಇರುವುದೋ, ಆ ಗುಣದಿಂದ ಉಂಟಾಗುವ ಕಾರ್ಯಗಳಲ್ಲಿ ಶ್ರದ್ಧೆ ಉಂಟಾಗುತ್ತದೆ. [1]ಯಾವನಿಗೆ ಯಾವ ರೀತಿ ಶ್ರದ್ಧೆ ಇದೆಯೋ, ಆ ಶ್ರದ್ಧೆಯೇ ಆ ಮನುಷ್ಯನಿಗೆ ಆಗುತ್ತದೆ. ಮಣ್ಣಿನಿಂದ ಮಾಡಲ್ಪಟ್ಟ ಕೊಡವು ಮಣ್ಣಾಗಿರುತ್ತದೆ. ಬೆಳ್ಳಿಯಿಂದ ಮಾಡಲ್ಪಟ್ಟ ಕೊಡವು ಬೆಳ್ಳಿಯಾಗಿರುತ್ತದೆ. ಆದರಂತೆ, ಅಂದರೆ ಒಳ್ಳೆಯ ಕರ್ಮಗಳಲ್ಲಿ ಶ್ರದ್ಧೆಯುಳ್ಳವನಾಗಿದ್ದರೆ, ಒಳ್ಳೆಯ ಕರ್ಮಗಳ ಫಲಗಳನ್ನು ಹೊಂದುತ್ತಾನೆ. ಆದುದರಿಂದ ಫಲ ಹೊಂದಲು ಶ್ರದ್ಧೆ ತಾನೇ ಮುಖ್ಯವಾದ ಕಾರಣ ಎಂದು ಹೇಳಿದಂತಾಗುತ್ತದೆ.

ಅದನ್ನೇ ವಿವರವಾಗಿ ಹೇಳುತ್ತಾನೆ.

**ಯಜಂತೇ ಸಾತ್ತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।**
**ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜನ್ತೇ ತಾಮಸಾ ಜನಾಃ ॥**

ಸತ್ತ್ವಗುಣವು ತಲೆಯೆತ್ತಿರುವವರು ಸಾತ್ವಿಕವಾದ ಶ್ರದ್ಧೆಯನ್ನು ಹೊಂದಿ, ದೇವತೆಗಳ ಪ್ರೀತಿಗಾಗಿ ಯಾಗಗಳನ್ನು ಮಾಡುವರು. ಈ ರೀತಿಯಾದ ದುಃಖದೊಡನೆ ಕಲೆಯದ—ಶ್ರೇಷ್ಠವಾದ ಸುಖವನ್ನು ಉಂಟುಮಾಡುವ ದೇವತೆಗಳನ್ನು ಕುರಿತು ಮಾಡಲ್ಪಡುವ ಯಾಗಗಳಲ್ಲಿ ಉಂಟಾದ ಶ್ರದ್ಧೆಯನ್ನು ಸಾತ್ವಿಕವೆಂದು ಹೇಳುವುದು. ರಜೋಗುಣವು ತಲೆಯೆತ್ತಿರುವವರು ಯಕ್ಷರನ್ನೂ, ರಾಕ್ಷಸರನ್ನೂ ಕುರಿತು ಯಾಗವನ್ನು ಮಾಡುತ್ತಾರೆ. ತಮೋಗುಣವು ತಲೆಯೆತ್ತಿದವರು, ಪ್ರೇತಗಳನ್ನೂ, ಪಿಶಾಚಗಳನ್ನೂ ಕುರಿತು ಯಾಗವನ್ನು ಮಾಡುತ್ತಾರೆ. ದುಃಖದೊಡನೆ ಕಲೆತ ಅಲ್ಪವಾದ ಸುಖವನ್ನು ಕೊಡುತ್ತದೆ ರಾಜಸಶ್ರದ್ಧೆ. ದುಃಖವೆಂದೇ ಹೇಳಲ್ಪಡುವ—ಬಹಳ ಕಡಿಮೆಯಾದ ಸುಖವನ್ನು ಕೊಡುತ್ತದೆ ತಾಮಸ ಶ್ರದ್ಧೆ.

1. ಶ್ಲೋಕದಲ್ಲಿ ಮೂರನೆಯ ಪಾದದಲ್ಲಿ ಒಟ್ಟಾಗಿ ಹೇಳಿದ್ದನ್ನು, ನಾಲ್ಕನೆಯ ಪಾದದಲ್ಲಿ ಆ ಆ ಶ್ರದ್ಧೆ ಉಳ್ಳವನಿಗೆ ಆ ಆ ಫಲ ಬರುತ್ತದೆ ಎಂದು ಬೇರೆ ಮಾಡಿ ಹೇಳುತ್ತಾನೆ. ತುಪ್ಪವನ್ನು ಕುಡಿದರೆ, ಆಯುಸ್ಸು ಹೆಚ್ಚುತ್ತದೆಯಂತೆ. ಆಯುಸ್ಸು ತುಪ್ಪ—'ಆಯುರ್ಘೃತಮ್' ಎಂದು ಬೆಳೆಸುವ ತುಪ್ಪವನ್ನೂ, ಬೆಳೆಯುವ ಆಯುಸ್ಸನ್ನೂ ಒಂದಾಗಿ ಹೇಳುವುದುಂಟು. ಹಾಗೆಯೇ 'ಆ ಶ್ರದ್ಧೆಯೇ ಅವನು' ಎಂಬ ಶಬ್ದಕ್ಕೆ ಆ ಶ್ರದ್ಧೆಯಿಂದ ಉಂಟಾಗುವ ಫಲವನ್ನು ಅವನು ಅನುಭವಿಸುತ್ತಾನೆ ಎಂದರ್ಥ.

ಕೆಳಗೆ ಹೇಳಿದಂತೆ ಶಾಸ್ತ್ರದಿಂದ ಏರ್ಪಡುವ ಶ್ರದ್ಧೆಯೊಡನೆ ಮಾಡಲ್ಪಟ್ಟ ಯಾಗ ಮೊದಲಾದವುಗಳಿಗೆ ಗುಣಗಳಿಗೆ ತಕ್ಕಂತೆ ಫಲ ಬರುತ್ತದೆ. ಶಾಸ್ತ್ರದಿಂದ ಹೇಳಲ್ಪಡದವುಗಳು ನನ್ನ ಅಪ್ಪಣೆಗೆ ವಿರುದ್ಧವಾದುದರಿಂದ, ಅವುಗಳಿಂದ ಸ್ವಲ್ಪವೂ ಸುಖವು ಸಿಕ್ಕುವುದಿಲ್ಲ. ಅಲ್ಲದೆ ಕೆಟ್ಟದ್ದೂ ಉಂಟಾಗುತ್ತದೆ ಎಂದು ಮನಸ್ಸಿನಲ್ಲಿ ಇರುವ ವಿಷಯವನ್ನು ಹೊರಪಡಿಸಿ ಹೇಳುತ್ತಾನೆ.

ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋಜನಾಃ ।
ದಂಭಾಹಂಕಾರ ಸಂಯುಕ್ತಾಃ ಕಾಮರಾಗಬಲಾನ್ವಿತಾಃ ॥
ಕರ್ಶಯನ್ತಃ ಶರೀರಸ್ಥಂ ಭೂತಗ್ರಾಮ ಮಚೇತಸಃ ।
ಮಾಂಚೈವಾಂತಶ್ಶರೀರಸ್ಥಂ ತಾನ್‌ವಿದ್ಧ್ಯಾಸುರನಿಶ್ಚಯಾನ್ ॥

ದಂಭ, ಅಹಙ್ಕಾರ, ಕಾಮ, ರಾಗ, ಬಲ ಇವುಗಳೊಡನೆ ಶರೀರವನ್ನು ಕೃಶವಾಗುವಂತೆ ಮಾಡಿಕೊಂಡು. ಶರೀರದಲ್ಲಿರುವ [1]ನನ್ನ ಅಂಶವಾದ ಜೀವನಿಗೆ ತೊಂದರೆಯನ್ನುಂಟು ಮಾಡಿಕೊಂಡು [2]ಶಾಸ್ತ್ರದಲ್ಲಿ ಹೇಳದೇ ಇರುವ ಕಠಿಣವಾದ ತಪಸ್ಸನ್ನೂ, ಯಾರು ಮಾಡುತ್ತಾರೋ ಅವರನ್ನು ಅಸುರರೆಂದೇ ತಿಳಿ. ಅಸುರ ರೆಂದರೆ—ನನ್ನ ಕಟ್ಟಳೆಗೆ ವಿರೋಧವಾಗಿ ನಡೆಯುವವರು. ಆ ರೀತಿ ನಡೆಯು ವುದರಿಂದ ಸ್ವಲ್ಪವೂ ಸುಖವಿಲ್ಲ. ಅವರು ಎಲ್ಲೆಯಿಲ್ಲದ ತೊಂದರೆಯಿಂದ ಕೂಡಿದ ನರಕದಲ್ಲಿಯೇ ಬೀಳುವರು.

1. ಶ್ಲೋಕದಲ್ಲಿ (ಮಾಂ) ನನ್ನನ್ನೂ ತೊಂದರೆ ಪಡಿಸುತ್ತಾರೆ ಎಂದು ಹೇಳಿದೆ. ಇವನು ಎಷ್ಟೇ ಹಸಿವಿನಿಂದ ಇದ್ದರೂ ಭಗವಂತನಿಗೆ ಒಂದು ತೊಂದರೆಯೂ ಇಲ್ಲ. ಆದುದ ರಿಂದ 'ನನ್ನನ್ನು' ಎಂಬುವುದಕ್ಕೆ ನನ್ನ ಸೊತ್ತಾದ ಜೀವನು ಎಂದೇ ಅರ್ಥ. ಜೀವನನ್ನು ತೊಂದರೆಪಡಿಸುವುದರಲ್ಲಿ ತನಗೆ ಹೆಚ್ಚಾದ ದುಃಖ ಎಂದು ತೋರಿಸುವುದಕ್ಕಾಗಿ ತನ್ನನ್ನು ತೊಂದರೆ ಮಾಡಿದಂತೆ ಹೇಳಿರುವುದು.

2. ಶಾಸ್ತ್ರದಲ್ಲಿ ಹೇಳಲ್ಪಡದವುಗಳು ಯಾವುವು ಎಂದರೆ—ವೇದವನ್ನು ಒಪ್ಪದೇ ಇರುವವರುಗಳಿಂದ ಏರ್ಪಡಿಸಲ್ಪಟ್ಟ ಕರ್ಮಗಳು, ವೇದದಲ್ಲಿ ಹೇಳಿರುವುಗಳಾದರೂ, ಮಾಡು ವವನು ಹೇಗೆ ಇರಬೇಕು ಎಂದು ಹೇಳಿದೆಯೋ, ಹಾಗೆ ಇಲ್ಲದವರಿಂದ ಮಾಡಲ್ಪಡುವವೂ, ಇಂತಹ ಜಾಗದಲ್ಲಿ, ಇಂತಹ ವೇಳೆಯಲ್ಲಿ, ಇಂತಹ ದ್ರವ್ಯವನ್ನು ಹೊಂದಿ ಈ ರೀತಿ ಮಾಡ ಬೇಕು ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟ ನಿಯಮವನ್ನು ಮೀರಿ ಮಾಡಲ್ಪಡುವವೂ.

ನಾವು ಶಾಸ್ತ್ರಕ್ಕೆ ಒಪ್ಪಿದವು ಎಂದು ನೆನೆದು ಮಾಡುವ ಎಲ್ಲಾ ಕರ್ಮಗಳೂ, ನಿಜವಾಗಿ ಶಾಸ್ತ್ರಕ್ಕೆ ಸೇರಿದ್ದರೆ ಮಾತ್ರ—ವಿಹಿತವಾಗಿದ್ದರೆ ಮಾತ್ರ ಫಲವು ಉಂಟಾಗುತ್ತದೆ. ಹಾಗೆ ಇಲ್ಲದಿದ್ದರೆ, ಎಷ್ಟೊಂದು ಶ್ರದ್ಧೆಯಿಂದ ಮಾಡಿದರೂ ಫಲವು ಸಿಕ್ಕುವುದಿಲ್ಲ ; ಕೆಟ್ಟದ್ದೂ ಆಗುತ್ತದೆ. ಅಂದರೆ ಬ್ರಾಹ್ಮಣರಲ್ಲಿಯೂ, ವೈಷ್ಣವರಲ್ಲಿಯೂ ನಾವು ನಾವು "ಇದು ತಾನೇ ಶಾಸ್ತ್ರಕ್ಕೆ ಸಮ್ಮತವಾದದ್ದು, ಇದು ತಾನೇ ಶಾಸ್ತ್ರದಲ್ಲಿ ವಿಧಿಸಿರುವುದು" ಎಂದು ಜಗಳವಾಡುತ್ತೇವೆ. ಯಾವುದು ನಿಜವಾಗಿಯೂ ಶಾಸ್ತ್ರಕ್ಕೆ ಒಪ್ಪಿತವಾದದ್ದೋ ಅದಕ್ಕೆ ತಾನೆ ಫಲ ಉಂಟು. ಅದು ಯಾವುದು ಎಂದು ಹೇಗೆ ಅರಿಯುವುದು ಎಂದರೆ—ದಯೆ, ಸಹನೆ, ತಗ್ಗಿರುವುದು—ಇವೇ ಮೊದಲಾದ ಗೀತೆಯಲ್ಲಿ ೧೬ನೆಯ ಅಧ್ಯಾಯದಲ್ಲಿ ಹೇಳಿರುವ ೨೬ ಗುಣಗಳುಳ್ಳವನು ಮಾಡುವುದು ತಾನೇ ಶಾಸ್ತ್ರಕ್ಕೆ ಸಮ್ಮತವಾದದ್ದು ಎಂದು ಅರಿಯಬಹುದು. ಅವುಗಳು ಈ ರೀತಿ ಇವೆ :

೧. ಆಚಾರ್ಯನಿಂದ ಶರಣಾಗತಿ ಮಾಡಲ್ಪಟ್ಟ ಶಿಷ್ಯನಿಗೆ ಭಗವಂತನು ಮೋಕ್ಷವನ್ನು ಕೊಡುವುದು, ಆಚಾರ್ಯನಿಗೋಸ್ಕರವೇ ಹೊರತು, ಶಿಷ್ಯನಿಗಾಗಿ ಅಲ್ಲ.

೨. ಶಿಷ್ಯನಲ್ಲಿ ಇರುವ ಸ್ವಲ್ಪ ಗುಣಗಳನ್ನು ನೋಡಿಯೂ ಅವನಿಗಾಗಿ ಆಚಾರ್ಯನು ದಯೆಯಿಂದ ಶರಣಾಗತಿಯನ್ನು ಮಾಡಬಹುದು. ಈ ಎರಡನ್ನೂ ತ್ರಿಜಟೆಯು ರಾಕ್ಷಸಿಗಳಿಗೆ ಮಾಡಿದ ಶರಣಾಗತಿಯಲ್ಲಿ ನೋಡಬಹುದು. ಆದುದರಿಂದ ಆಚಾರ್ಯರು, ಒಳ್ಳೆಯ ಗುಣವುಳ್ಳವರಾಗಿದ್ದು ಭಗವಂತನಿಗೆ ಬಹಳ ಬೇಕಾಗಿರುವವರಾದರೆ, ಅವರುಗಳಲ್ಲಿ ಶಿಷ್ಯನಿಗೆ ಪ್ರೀತಿ ಸ್ವಲ್ಪ ಕಡಿಮೆಯಾಗಿದ್ದರೂ ಅವರುಗಳಿಂದ ಶಿಷ್ಯರಿಗೆ ಮೋಕ್ಷವು ಬಂದೇ ಬರುತ್ತದೆ. ಶಿಷ್ಯನೂ ಹೆಚ್ಚಾದ ಗುಣವುಳ್ಳವನಾಗಿದ್ದರೆ, ಭಗವಂತನು ಹೆಚ್ಚಾದ ಸಂತೋಷದೊಡನೆ ಮೋಕ್ಷವನ್ನು ಕೊಡುತ್ತಾನೆ. ಶಿಷ್ಯನಿಗೆ ಒಳ್ಳೆಯ ಗುಣಗಳನ್ನು ಉಂಟುಮಾಡಿಯೂ ಕೊಡಬಹುದು. ಆ ರೀತಿ ಮಾಡುವುದೂ, ಆಚಾರ್ಯರುಗಳ ಶಿಫಾರ್ಸಿಗಾಗಿಯೇ—ನಮಗಾಗಿ ಭಗವಂತನಲ್ಲಿ ಪ್ರಾರ್ಥನೆ ಮಾಡುವುದಕ್ಕಾಗಿಯೇ. ಒಬ್ಬರಿಗೆ, ಆಚಾರ್ಯನಿಗೆ ಇರಬೇಕಾದ ಗುಣಗಳಿಲ್ಲದಿದ್ದರೆ, ಅವರಲ್ಲಿ ಭಗವಂತನಿಗೆ ನಿಜವಾದ ಪ್ರೀತಿಯು ಇರಲಾರದು. ಆವಾಗ ಶಿಷ್ಯನಿಗೆ ಆ ಆಚಾರ್ಯನ ವಿಷಯದಲ್ಲಿ ಎಲ್ಲೆ ಇಲ್ಲದ ಭಕ್ತಿ ಇದ್ದರೂ, ಅವರಿಂದ ಆ ಶಿಷ್ಯನಿಗೆ ಸ್ವಲ್ಪವೂ ಸೌಖ್ಯವು ಸಿಕ್ಕುವುದಿಲ್ಲ. ಶಿಷ್ಯನಿಗೆ ತನ್ನ ಬಲದಿಂದ ಮೋಕ್ಷವೇ ? ಆಚಾರ್ಯನ ಬಲದಿಂದ ಮೋಕ್ಷವೇ ? ಸೀತೆಯು ರಾಕ್ಷಸಿಯರನ್ನು ಅವರ ಗುಣಕ್ಕಾಗಿ ಕಾಪಾಡಿದಳೇ ? (ತ್ರಿಜಟೆಗಾಗಿ ಕಾಪಾಡಿದಳೇ ?) ಒಬ್ಬರ ಹತ್ತಿರ ಭಗವಂತನಿಗೆ ನಿಜವಾದ ಪ್ರೀತಿ ಇದೆಯೆಂಬುದು ಹೇಗೆ ಅರಿಯಬಹುದೆಂದರೆ, ದೇವಹುಟ್ಟಿಗೆ ಇರಬೇಕಾದ ೨೬ ಗುಣಗಳನ್ನು ಭಗವಂತನು ತಾನೇ ಶ್ರೀಗೀತೆಯಲ್ಲಿ ೧೬ನೆಯ ಅಧ್ಯಾಯದಲ್ಲಿ ಹೇಳಿದ್ದಾನೆ. ಅವನ್ನು ನೋಡಿ ತಿಳಿಯಬಹುದು.

ಶಾಸ್ತ್ರದಲ್ಲಿ ಹೇಳಲ್ಪಟ್ಟ ಯಾಗ ಮೊದಲಾದವುಗಳಲ್ಲಿ ಸತ್ತ್ವ ಮೊದಲಾದ ಗುಣಗಳಿಂದ ಏರ್ಪಡುವ ಹೆಚ್ಚು ಕಡಿಮೆಯನ್ನು ಹೇಳಲು ಆರಂಭಿಸಿರುವುದನ್ನು ವಿಸ್ತಾರವಾಗಿ ಹೇಳುತ್ತಾನೆ. ಸತ್ತ್ವ ಮೊದಲಾದ ಗುಣಗಳಲ್ಲಿ ವ್ಯತ್ಯಾಸವು ಆಹಾರಗಳಿಂದ ಉಂಟಾಗುವುದರಿಂದ, ಮೊದಲಿನಲ್ಲಿ ಆಹಾರವು ಮೂರು ವಿಧ ಎಂದು ಹೇಳಲ್ಪಡುತ್ತದೆ. ಮನಸ್ಸು ಆಹಾರದಿಂದಲೇ ಕಾರ್ಯವನ್ನು ಮಾಡುತ್ತ ದೆಯೆಂದೂ, ಆಹಾರವು ಒಳ್ಳೆಯದಾಗಿದ್ದರೆ ಮನಸ್ಸು ದೋಷವಿಲ್ಲದ್ದಾಗಿ ಇರುವು ದೆಂದೂ [1]ವೇದದಲ್ಲಿ ಹೇಳಲ್ಪಡುತ್ತದೆ.

**ಆಹಾರ ಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ ।**
**ಯಜ್ಞಸ್ತಪಸ್ತಥಾದಾನಂ ತೇಷಾಂ ಭೇದ ಮಿಮಂ ಶೃಣು ॥**

ಎಲ್ಲಾ ಪ್ರಾಣಿಗಳಿಗೂ ಸತ್ತ್ವ ಮೊದಲಾದ ಗುಣಗಳಿಗೆ ತಕ್ಕಂತೆ ಹಿಡಿ ಸುವ ಆಹಾರವು ಮೂರು ವಿಧ. ಅದಾವುದೆಂದರೆ ಸಾತ್ತ್ವಿಕ, ರಾಜಸ, ತಾಮಸ; ಹಾಗೆಯೇ ಯಾಗ, ತಪಸ್ಸು, ದಾನ—ಇವುಗಳೆಲ್ಲಾ ಮೂರು ವಿಧ. ಅವುಗಳ ವಿಧ ವನ್ನು ಹೇಳುತ್ತೇನೆ, ಕೇಳು.

**ಆಯುಸ್ಸತ್ತ್ವಬಲಾರೋಗ್ಯಸುಖ ಪ್ರೀತಿವಿವರ್ಧನಾಃ ।**
**ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾ ಸ್ಸಾತ್ತ್ವಿಕ ಪ್ರಿಯಾಃ ॥**

ಸತ್ತ್ವಗುಣವಿರುವವನಿಗೆ ಸಾತ್ತ್ವಿಕ ಆಹಾರಗಳು ಪ್ರಿಯಗಳಾಗಿರುವುವು. ಅವುಗಳು ಆಯುಸ್ಸನ್ನೂ, ಒಳ್ಳೆಯ ಜ್ಞಾನವನ್ನೂ ಬೆಳೆಸುತ್ತವೆ. ಹಾಗೆಯೇ ಬಲ ವನ್ನೂ, ರೋಗವಿಲ್ಲದಿರುವಿಕೆಯನ್ನೂ ಬೆಳೆಸುತ್ತವೆ. ಎಲ್ಲರಿಗೂ ಪ್ರೀತಿಯನ್ನು ಉಂಟುಮಾಡುವ ಕಾರ್ಯಗಳನ್ನು ಮಾಡುವಂತೆ ಮಾಡಿ, ತನಗೆ ಎಲ್ಲರಲ್ಲಿಯೂ ತನ್ನಲ್ಲಿ ಎಲ್ಲರಿಗೂ ಪ್ರೀತಿಯನ್ನು ಬೆಳೆಸುತ್ತವೆ. ಆ ಆಹಾರಗಳು ಯಾವುವು ಎಂದರೆ ಅವುಗಳಲ್ಲಿ ಸಿಹಿ ತುಪ್ಪ ಮೊದಲಾದುವುಗಳೂ ಅಧಿಕವಾಗಿವೆ. ಅವು ಗಳ ಸಾರವು ಬಹಳಕಾಲ ಇರುವುವು. ಹಾಲನ್ನು ಕುಡಿದರೆ ಶರೀರದಲ್ಲಿ ಪುಷ್ಟಿಯು ಉಂಟಾಗಿ ಬಹಳ ಕಾಲ ಹಸಿವನ್ನು ತಡೆಯುತ್ತದೆ. ಕಣ್ಣಿನಿಂದ ನೋಡುವಾಗಲೇ ಹೆಚ್ಚಾಗಿ ಆನಂದವಾಗಿದೆ. ಈ ರೀತಿಯಾದ ಆಹಾರಗಳು ಸಾತ್ತ್ವಿಕರುಗಳಿಗೆ ಹಿಡಿಸುತ್ತವೆ.

**ಕಟ್ವಮ್ಲ ಲವಣಾತ್ಯುಷ್ಣ ತೀಕ್ಷ್ಣ ರೂಕ್ಷವಿದಾಹಿನಃ ।**
**ಆಹಾರಾ ರಾಜಸಸ್ಯೇಷ್ಟಾ ದುಃಖ ಶೋಕಾಮಯ ಪ್ರದಾಃ ॥**

1. ಅನ್ನಮಯಂಹಿ ಸೋಮ್ಯಮನಃ ಆಹಾರ ಶುದ್ಧೌ ಸತ್ವಶುದ್ಧಿಃ ।

ಕಾರ, ಹುಳಿ, ಉಪ್ಪು ಇವು ಹೆಚ್ಚಾಗಿರುವುದು, ಹೆಚ್ಚು ಬಿಸಿ ಯಾಗಿರುವುದು, ದೇಹಕ್ಕೆ ಬಹಳ ಶೀತ ಉಷ್ಣ ಇವನ್ನು ಕೊಡುವುವುಗಳಾಗಿಯೂ, ತುಪ್ಪ ಮೊದಲಾದುವುಗಳ ಜಿಡ್ಡು ಇಲ್ಲದರಿಂದ ಕಠಿಣವುಳ್ಳವುಗಳಾಗಿಯೂ, ದೇಹಕ್ಕೆ ಉರಿಯನ್ನುಂಟುಮಾಡುವವುಗಳಾಗಿಯೂ ಈ ರೀತಿ ಇರುವ ಆಹಾರಗಳು ರಜೋಗುಣವು ತಲೆಯೆತ್ತಿದವನಿಗೆ ಹಿಡಿಸುತ್ತವೆ—ಪ್ರಿಯವಾಗಿವೆ. ಅವು ರಜೋಗುಣವು ಮೇಲಾಗಿರುವುದರಿಂದ ವಾತ ಪಿತ್ತಗಳನ್ನು ಹೆಚ್ಚು ಮಾಡಿ ದುಃಖವನ್ನು ಉಂಟುಮಾಡುತ್ತವೆ. ಅದರಿಂದ ಮನಸ್ಸಿನ ದುಃಖವನ್ನೂ ಅನಂತರ ವ್ಯಾಧಿಯನ್ನೂ ಉಂಟುಮಾಡುತ್ತವೆ—ಅಲ್ಲದೆ ರಜೋಗುಣವನ್ನು ಬೆಳೆಸುತ್ತವೆ.

**ಯಾತಯಾಮಂ ಗತರಸಂ ಪೂತಿಪರ್ಯುಷಿತಂಚಯತ್ ।**
**ಉಚ್ಛಿಷ್ಟಮಪಿ ಚಾ ಮೇಧ್ಯಂ ಭೋಜನಂ ತಾಮಸಪ್ರಿಯಮ್**

ಬಹಳ ಕಾಲವಾದುದು, ಅಡಿಗೆಯಲ್ಲಿ ಮಾಡುವ ರೀತಿಯಿಂದ ಸ್ವಭಾವವಾದ ರಸವು ಹೋಗಿರುವುದು, ವಾಸನೆ ಬಂದಿರುವುದು, ಹೆಚ್ಚಾದ ಕಾಲವಾದುದರಿಂದ ತನ್ನ ರಸವನ್ನು ಬಿಟ್ಟು ಬೇರೆ ರಸವನ್ನು ಹೊಂದಿರುವುದು (ಹುಳಿಯಾಗಿರುವುದು, ಊಸಿರುವುದು, ವಾಸನೆ ಬಂದಿರುವುದು) ಆಚಾರ್ಯ ತಂದೆ ಹಿರಿಯ ಅಣ್ಣ (ಹೆಂಗಸಿಗೆ) ಗಂಡ—ಇವರದನ್ನು ಬಿಟ್ಟು ಇತರರ ಎಂಜಲು, ವೈಶ್ವದೇವವನ್ನು ಮಾಡಿ ಯೋಗ್ಯತೆಯನ್ನು ಪಡೆಯದ ಆಹಾರ—ಈ ರೀತಿಯಾದ ಆಹಾರಗಳು ತಮೋಗುಣವುಳ್ಳವರಿಗೆ ಪ್ರಿಯವಾಗಿದೆ. [1]ಅದು ತಮೋಗುಣವನ್ನೇ ಬೆಳೆಸುವುದು. ಆದುದರಿಂದ ಆತ್ಮದ ಕ್ಷೇಮವನ್ನು ಅಪೇಕ್ಷಿಸುವವರು ಸತ್ತ್ವವು ಬೆಳೆಯುವುದಕ್ಕಾಗಿ [2]ಸಾತ್ತ್ವಿಕವಾದ ಆಹಾರವನ್ನೇ ಸೇವನೆಮಾಡಬೇಕು.

**ಅಫಲಾ ಕಾಙ್ಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।**
**ಯಷ್ಟವ್ಯ ಮೇವೇತಿಮನಸ್ಸಮಾಧಾಯ ಸ ಸಾತ್ತ್ವಿಕಃ ॥**

1. ಈ ಲೋಕದಲ್ಲಿ ಈ ಆಹಾರದ ಕಾರ್ಯವನ್ನು ಹೇಳದೆ ಇರುವುದರಿಂದ, ಹಿಂದಿನ ರಾಜಸ ಆಹಾರದ ಕಾರ್ಯವನ್ನೇ ಇಲ್ಲೂ ಇಟ್ಟುಕೊಳ್ಳುವುದು.

2. ಇದು ವೈಗೆ ಒಳ್ಳೆಯದು, ಇದು ಮೈಗೆ ಆಗದು ಎಂದು ಹೇಳಿದರೆ, ಒಳ್ಳೆಯದನ್ನೇ ಒಬ್ಬನು ತೆಗೆದುಕೊಳ್ಳುವುದರಿಂದ, ಸಾತ್ತ್ವಿಕ ಆಹಾರವೇ ಒಳ್ಳೆಯದು, ಬೇರೆಯವು ಕೆಟ್ಟವು ಎಂದು ಹೇಳಿದರೆ, ಸಾತ್ತ್ವಿಕವಾದದ್ದನ್ನೇ ಒಬ್ಬನು ಸ್ವೀಕರಿಸುವನು. ಅದಕ್ಕಾಗಿಯೇ ಮೂರುವಿಧ ಎಂದು ತೋರಿಸಿರುವುದು. ಹೀಗೆಯೇ ಮುಂದೆ ಹೇಳುವಗಳಲ್ಲೂ ಮಾಡುವುದು.

ಭಗವಂತನ ಪ್ರೀತಿಯನ್ನು ಬಿಟ್ಟು ಬೇರೆ ಫಲಗಳನ್ನು ಬಯಸದೇ ಇರುವ ರಿಂದ ಮಾಡಲ್ಪಡುವುದೂ, ಶಾಸ್ತ್ರದಲ್ಲಿ ಹೇಳಿರುವಂತೆ ಮಾತ್ರ ದ್ರವ್ಯ ಮೊದಲಾದ ವುಗಳೊಡನೆ ಕೂಡಿರುವುದೂ, ಭಗವಂತನಿಗೆ ಸಂತೋಷವನ್ನು ಕೊಡತಕ್ಕದ್ದಾಗಿರು ವುದರಿಂದ, ಈ ಕೆಲಸವೇ ನಮಗೆ ಪ್ರಯೋಜನವಾದುದು ಎಂದು ನೆನೆದು, ಮನಸ್ಸನ್ನು ಅದರಲ್ಲೇ ಇಟ್ಟು ಮಾಡತಕ್ಕ ಯಜ್ಞವನ್ನು ಸಾತ್ತ್ವಿಕವೆಂದು ಹೇಳುವುದು.

**ಅಭಿಸನ್ಧಾಯ ತು ಫಲಂ ದಂಭಾರ್ಥಮಪಿ ಚೈವ ಯಃ ।**
**ಇಜ್ಯತೇ ಭರತಶ್ರೇಷ್ಠ ತಂಯಜ್ಞಂ ವಿದ್ಧಿ ರಾಜಸಮ್ ॥**

[1]ಸ್ವರ್ಗ ಮೊದಲಾದ ಫಲಗಳಿಗಾಗಿಯೂ ಕೀರ್ತಿಗಾಗಿಯೂ ಮಾಡಲ್ಪಡುವ ಯಾಗವನ್ನು ರಾಜಸವೆಂದು ಹೇಳುವುದು.

**ವಿಧಿಹೀನ ಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಮ್ ।**
**ಶ್ರದ್ಧಾ ವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥**

[2]ಬ್ರಾಹ್ಮಣರ ಅನುಮತಿ ಇಲ್ಲದೆಯೂ, ಶಾಸ್ತ್ರದಲ್ಲಿ ಹೇಳದ ದ್ರವ್ಯ ದಿಂದಲೂ, ಮಂತ್ರವಿಲ್ಲದೆಯೂ, ಕೊಡಬೇಕಾದ ದಕ್ಷಿಣೆ ಇಲ್ಲದೆಯೂ, ಶ್ರದ್ಧೆ ಇಲ್ಲದೆಯೂ, ಮಾಡುವ ಯಜ್ಞವನ್ನು ತಾಮಸವೆಂದು ಹೇಳುವುದು. ಹೀಗೆ— ಸತ್ತ್ವರಜಸ್ತಮೋಗುಣಗಳ ಭೇದದಿಂದ ಆಹಾರವೂ—ಯಜ್ಞವೂ ಮೂರುವಿಧ ವಾಗಿರುವುದೆಂಬುದನ್ನು ವಿವರಿಸಲಾಯಿತು.

ಸತ್ತ್ವ ಮೊದಲಾದ ಗುಣಗಳಿಂದ ತಪಸ್ಸು ಮೂರು ವಿಧವೆಂದು ಹೇಳು ವುದಕ್ಕಾಗಿ, ತಪಸ್ಸು ಎಂಬುದು—ಮನಸ್ಸಿನಿಂದಲೂ, ವಾಕ್ಕಿನಿಂದಲೂ, ಶರೀರ ದಿಂದಲೂ ಉಂಟಾಗಿ ಮೂರು ವಿಧವಾಗಿ ಇದೆಯೆಂದು ಮೊದಲಿನಲ್ಲಿ ಸ್ವರೂಪ ವನ್ನು ಹೇಳುತ್ತಾನೆ.

**ದೇವದ್ವಿಜ ಗುರುಪ್ರಾಜ್ಞ ಪೂಜನಂ ಶೌಚಮಾರ್ಜವಮ್ ।**
**ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪಉಚ್ಯತೇ ॥**

1. ಇದರಿಂದ ಈ ಲೋಕದಲ್ಲೂ, ಬೇರೆ ಲೋಕದಲ್ಲೂ ಉಂಟಾಗುವ ಫಲವು ಹೇಳಲ್ಪಟ್ಟಿದೆ. ಈ ಎರಡನ್ನೂ ಅಪೇಕ್ಷಿಸಿ ಮಾಡುವುದು ರಾಜಸ.

2 ಒಳ್ಳೆಯ ಜ್ಞಾನವೂ, ಒಳ್ಳೆಯ ನಡತೆಯೂ ಇರುವ ಬ್ರಾಹ್ಮಣರು "ನೀನು ಈ ಯಾಗವನ್ನು ಮಾಡು" ಎಂದು ಹೇಳಬೇಕು. ಇದಕ್ಕಾಗಿಯೇ ಒಂದೊಂದು ವೈದಿಕ ಕಾರ್ಯ ವನ್ನು ಆರಂಭಿಸುವಾಗಲೂ ಅನುಜ್ಞೆ ಮಾಡಿಕೊಳ್ಳುವುದು ಸಂಪ್ರದಾಯ ಪದ್ಧತಿ.

ದೇವತೆಗಳು, ಬ್ರಾಹ್ಮಣರು ಆಚಾರ್ಯರು, ಹೆಚ್ಚಾದ ಜ್ಞಾನವುಳ್ಳವರು ಇವರುಗಳನ್ನು ಪೂಜಿಸುವುದು (ಅವರು ಹತ್ತಿರದಲ್ಲಿರುವಾಗ ಶರೀರದಿಂದ ಮಾಡಬೇಕಾದ ಕಾರ್ಯಗಳು, ಕೂತುಕೊಳ್ಳದೆ ಇರುವುದು, ಕೈಮುಗಿಯುವುದು ಮೊದಲಾದವು) ; ಸ್ನಾನ ಮೊದಲಾದವು, ಮನಸ್ಸಿಗೆ ತಕ್ಕ ಶರೀರದ ಕಾರ್ಯವು, ಸ್ತ್ರೀಯರನ್ನು ಪ್ರೀತಿಯಾಗಿ ನೋಡುವುದು—ಕಾಮುಕ ದೃಷ್ಟಿಯಿಂದ ನೋಡುವುದು ಮುಂತಾದವು ಇಲ್ಲದಿರುವಿಕೆ, ಪ್ರಾಣಿಗಳನ್ನು ಹೊಡೆಯದೆ ಹಿಂಸಿಸದೇ ಇರುವುದು—ಇವು ದೇಹದಿಂದ ಮಾಡಲ್ಪಡುವ ತಪಸ್ಸು.

ಅನುದ್ವೇಗಕರಂ ವಾಕ್ಯಂ ಸತ್ಯಂಪ್ರಿಯಹಿತಂ ಚಯತ್ ।
ಸ್ವಾಧ್ಯಾಯಾಭ್ಯಸನಂಚೈವ ವಾಙ್ಮಯಂ ತಪಉಚ್ಯತೇ ॥

ಮತ್ತೊಬ್ಬರಿಗೆ ಭಯ ಮೊದಲಾದ ಒಂದು ವಿಧವಾದ ತೊಂದರೆಯನ್ನು ಉಂಟುಮಾಡದಂತೆ ಮಾತನ್ನಾಡುವುದು; ನಡೆದುದನ್ನು ನಡೆದಂತೆಯೂ 'ಜನರಿಗೆ ಪ್ರಿಯವಾಗಿಯೂ, ಅನುಕೂಲವಾಗಿಯೂ ಮಾತನ್ನಾಡುವುದು, ಯೋಗ್ಯವಲ್ಲದ ವಿಷಯದಲ್ಲಿ ಸ್ತೋತ್ರ ಮಾಡಕೂಡದು ಎಂದು ತೋರಿಸುವುದಕ್ಕಾಗಿ, ಶ್ಲೋಕದಲ್ಲಿ ಹಿತ, ಅನುಕೂಲವಾದ ಎಂಬ ಮಾತು. ಅದು ಸ್ತೋತ್ರಮಾಡುವವನಿಗೂ ಸ್ತೋತ್ರ ಮಾಡಿಸಿಕೊಳ್ಳುವವನಿಗೂ ಅನುಕೂಲವಲ್ಲ. ವೇದಗಳನ್ನು ಹೇಳುವುದು; ಇವುಗಳು ವಾಕ್ಕಿನಿಂದ ಮಾಡುವ ತಪಸ್ಸು ಎಂದು ಹೇಳಲ್ಪಡುತ್ತದೆ.

ಮನಃಪ್ರಸಾದ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿ ರಿತ್ಯೇತತ್ತಪೋ ಮಾನಸ ಮುಚ್ಯತೇ ॥

ಕೋಪ ಮೊದಲಾದುವು ಇಲ್ಲದಂತೆ ಇರುವುದು; ಎಲ್ಲರಿಗೂ ಕ್ಷೇಮವನ್ನೇ ಎಣಿಸುವುದು; ಅಧಿಕವಾಗಿ ತೋಚದಂತೆ ಮಾತನಾಡಕೂಡದೆಂದು ನೆನೆಯುವುದು; ಚಿಂತಿಸಬೇಕಾದ ಆತ್ಮವನ್ನು ಯಾವಾಗಲೂ ನೆನೆಯುವುದು. ಆತ್ಮವನ್ನು ಬಿಟ್ಟು ಬೇರೆ ಸಂಗತಿಗಳನ್ನು ನೆನೆಯದೇ ಇರುವಿಕೆ—ಇವುಗಳ ಮನಸ್ಸಿನಿಂದ ಮಾಡಲ್ಪಡುವ ತಪಸ್ಸು ಎಂದು ಹೇಳಲ್ಪಡುವುವು.

ಹೀಗೆ ಹೇಳಲ್ಪಟ್ಟ ಮೂರು ಬಗೆಯ ತಪಸ್ಸಿನಲ್ಲಿಯೂ ಕ್ರಮವಾಗಿ ಶರೀರ, ವಾಕ್ಕು, ಮನಸ್ಸು ಇವುಗಳೇ ಒಂದೊಂದರಲ್ಲಿ ಒಂದೊಂದು ಪ್ರಧಾನವಾಗಿರುವುದೆಂದು ತೋರಿಸುವುದಕ್ಕಾಗಿಯೇ ಶಾರೀರ, ವಾಚಿಕ, ಮಾನಸ ಎಂದು ತಪಸ್ಸನ್ನು ಮೂರು ಬಗೆಯಾಗಿ ವಿಭಾಗಿಸುವುದು.

ಶ್ರದ್ಧಯಾ ಪರಯಾ ತಪ್ತಂ ತಪಸ್ತತ್ತ್ರಿವಿಧಂ ನರೈಃ ।
ಅಫಲಾಕಾಂಕ್ಷಿಭಿ ರ್ಯುಕ್ತೈ ಸ್ಸಾತ್ತ್ವಿಕಂ ಪರಿಚಕ್ಷತೇ ॥

ಭಗವಂತನ ಪ್ರೀತಿಯನ್ನು ಬಿಟ್ಟು ಬೇರೆ ಫಲವನ್ನು ಅಪೇಕ್ಷಿಸದೆ, ಇದರಿಂದ ಭಗವಂತನಿಗೆ ಸಂತೋಷ ಉಂಟಾಗಬೇಕು ಎಂದು ನೆನೆದು, ಹೆಚ್ಚಾದ ಶ್ರದ್ಧೆಯೊಡನೆ ಮಾಡಲ್ಪಟ್ಟ ಕೆಳಗೆ ಹೇಳಲ್ಪಟ್ಟ ಮೂರು ವಿಧವಾದ ತಪಸ್ಸನ್ನು ಸಾತ್ತ್ವಿಕವೆಂದು ಹೇಳುತ್ತಾರೆ ಜ್ಞಾನಿಗಳು.

ಸತ್ಕಾರಮಾನಪೂಜಾರ್ಥಂ ತಪೋ ದಂಭೇನ ಚೈವ ಯತ್ ।
ಕ್ರಿಯತೇ ತದಿಹ ಪ್ರೋಕ್ತಂ ರಾಜಸಂ ಚಲಮಧ್ರುವಮ್ ॥

ನಮ್ಮನ್ನು ದೊಡ್ಡವನೆಂದು ನೆನೆಯಬೇಕು ಎಂದೂ ಮಾತಿನಿಂದ ಸ್ತೋತ್ರವನ್ನು ಮಾಡಬೇಕೆಂದೂ, ಕೆಳಗೆ ಬಿದ್ದು ನಮಸ್ಕಾರ ಮಾಡಬೇಕು ಎಂದೂ ನೆನೆದೂ, ಫಲಗಳನ್ನು ಆಸೆಪಟ್ಟು ಕೀರ್ತಿಗಾಗಿಯೂ ಮಾಡಲ್ಪಟ್ಟ ತಪಸ್ಸು ರಾಜಸ ಎಂದು ಹೇಳಲ್ಪಡುವುದು. ಅದು ಸ್ವರ್ಗ ಮೊದಲಾದ ಸ್ಥಿರವಲ್ಲದ ಫಲವನ್ನು ಕೊಡುವುದರಿಂದ ಸ್ಥಿರವಲ್ಲದ್ದು. ಈ ಫಲವು ಕಳೆದು ಹೋಗುತ್ತದೆಯಲ್ಲ ಎಂಬ ಭಯವನ್ನು ಕೊಡುತ್ತದೆ.

ಮೂಢಗ್ರಾಹೇಣಾತ್ಮನೋ ಯತ್ಪೀಡಯಾ ಕ್ರಿಯತೇ ತಪಃ ।
ಪರಸ್ಯೋತ್ಸಾದನಾರ್ಥಂ ವಾ ತತ್ತಾಮಸ ಮುದಾಹೃತಮ್ ॥

ಒಳ್ಳೆಯದು ಕೆಟ್ಟದ್ದು ಎಂಬುದನ್ನು ಯೋಚಿಸದೆ, ಹಠದಿಂದ ತನ್ನ ಶಕ್ತಿ ಮುಂತಾದವನ್ನು ಗಮನಿಸದೆ, ತಾನು ಹಲವು ತೊಂದರೆಗಳನ್ನು ಹೊಂದಿ ಮಾಡುವುದೂ, ಇತರರಿಗೂ ಕೆಡಕನ್ನುಂಟುಮಾಡುವುದಕ್ಕಾಗಿಯೂ ಮಾಡುವ ತಪಸ್ಸು ತಾಮಸವೆಂದು ಹೇಳಲ್ಪಡುತ್ತದೆ.

ದಾತವ್ಯಮಿತಿಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇಚ ಪಾತ್ರೇಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥

ಫಲವನ್ನು ಅಪೇಕ್ಷಿಸದೆ, ಅವಶ್ಯಕವಾಗಿ ಕೊಡತಕ್ಕದ್ದು ಎಂಬ ನೆನಪಿನೊಡನೆ ಒಳ್ಳೆಯ ಜಾಗದಲ್ಲಿ, ಒಳ್ಳೆಯ ಕಾಲದಲ್ಲಿ, ಒಳ್ಳೆಯ ಪಾತ್ರದಲ್ಲಿ ಕೊಡುವುದನ್ನು ಸಾತ್ತ್ವಿಕವೆಂದು ಹೇಳುವುದು. ನಮಗೆ ಮುಂಚೆಯೇ ಒಂದು ವಿಧ ಉಪಕಾರವನ್ನು ಮಾಡದಿರುವವನಿಗೆ ಕೊಡಬೇಕು. ಮಾಡಿದವನಿಗೆ ಕೊಟ್ಟರೆ, ಬದಲಾಗಿ ಮಾಡಿದಂತಾಗುತ್ತದೆ.

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ರಾಜಸ ಮುದಾಹೃತಮ್ ॥

ಒಬ್ಬನಿಂದ ಬರುವ ಉಪಕಾರವನ್ನು ನಿರೀಕ್ಷಿಸಿಯೂ, ಮಾಡಿದ ಉಪಕಾರಕ್ಕೆ ಬದಲಾಗಿಯೂ, ಫಲವನ್ನು ಉದ್ದೇಶಮಾಡಿಯೂ [1]ಪ್ರಯೋಜನಕ್ಕೆ ಬಾರದ ಬೆಲೆಬಾಳದ ಪದಾರ್ಥಗಳನ್ನು ಹೊಂದಿ ಮಾಡುವ ದಾನವು ರಾಜಸ ದಾನವೆಂದು ಹೇಳಿಸಿಕೊಳ್ಳುವುದು.

ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತ ಮವಜ್ಞಾತಂ ತತ್ತಾಮ ಸಮುದಾಹೃತಮ್ ॥

ಶಾಸ್ತ್ರಕ್ಕೆ ವಿರೋಧವಾದ ಜಾಗದಲ್ಲೂ (ಅಂದರೆ ಕಳಿಂಗ ಕೀಕಟ ಮುಂತಾದ ಅಪುಣ್ಯಪ್ರದೇಶಗಳಲ್ಲೂ), ಕಾಲದಲ್ಲೂ, ಅಪಾತ್ರದಲ್ಲೂ ಅಂದರೆ ಕೊಟ್ಟ ದಾನವನ್ನು ಸ್ವೀಕರಿಸಲು ಯೋಗ್ಯತೆ ಇಲ್ಲದವನಲ್ಲೂ; ಕಾಲುಗಳನ್ನು ತೊಳೆದು ಕೊಡುವುದು ಮುಂತಾದ ಮರ್ಯಾದೆ ಇಲ್ಲದೆ, ಗೌರವಿಸದೆ ತಿರಸ್ಕಾರವಾಗಿ ಕೊಡುವುದನ್ನೂ ತಾಮಸವೆಂದು ಹೇಳುವುದು.

ಹೀಗೆ ಇದುವರೆಗೂ ಹೇಳಿದುದರಲ್ಲಿ—ಸತ್ತ್ವಾದಿಗುಣಗಳ ಸ್ವರೂಪವೂ ಅವುಗಳ ಕಾರ್ಯವಿಶೇಷವೂ ಹಾಗೆಯೇ ಅವುಗಳ ಗತಿ, ಕರ್ಮ, ಆಹಾರ, ಯಜ್ಞ, ತಪಸ್ಸು, ದಾನ ಇವುಗಳ ವಿಶೇಷ ಸ್ವರೂಪ ಇವನ್ನು ಅರಿತಂತಾಯಿತು. ಈವಾಗ ಈ ಗುಣಗಳಿಗೆ ಅದ್ರವ್ಯತ್ವವು ಹೇಗೆ ಕೂಡುವುದೆಂಬುದನ್ನು ಕುರಿತು ಸ್ವಲ್ಪ ವಿವೇಚನೆ ಮಾಡೋಣ.

ಸಾಂಖ್ಯದರ್ಶನಕಾರರು ಹೇಳುವುದೇನೆಂದರೆ—"ಪ್ರತ್ಯಕ್ಷದಲ್ಲಿ ಕಾಣಬರುತ್ತಿರುವ ಸಮಸ್ತ ಪ್ರಪಂಚವೂ ಸುಖ ದುಃಖ ಮೋಹರೂಪವಾಗಿರುವುದರಿಂದ ಇದಕ್ಕೆ ಕಾರಣವೂ ಅಂತಹದೇ ಆಗಿರಬೇಕು. ಆದುದರಿಂದ ಹೆಚ್ಚು ಕಡಿಮೆ ಯಿಲ್ಲದೆ ಸಾಮ್ಯಾವಸ್ಥೆಯನ್ನು ಹೊಂದಿರುವವುಗಳಾಗಿಯೂ ಸುಖದುಃಖ ಮೋಹ ರೂಪಗಳಾಗಿಯೂ ಇಂದ್ರಿಯಗಳಿಗೆ ಗೋಚರವಾಗದೆ ಕಾರ್ಯಸ್ವಭಾವದಿಂದಲೇ ನಿರೂಪಿಸಲ್ಪಡತಕ್ಕವುಗಳಾಗಿಯೂ ಇರುವ ಸತ್ತ್ವರಜಸ್ತಮಸ್ಸುಗಳೆಂಬ

1. ಶ್ಲೋಕದಲ್ಲಿ 'ಪರಿಕ್ಲಿಷ್ಟಂ' (ಕಷ್ಟಪಟ್ಟು ಕೊಡುವುದು) ಎಂಬ ಶಬ್ದವು ಇದೆ; ಅದರಿಂದ ಅವನಿಗೆ ತನ್ನ ಸೊತ್ತನ್ನು ಕೊಡುವುದಕ್ಕೆ ಮನಸ್ಸು ಇಲ್ಲ. ಆಯ್ಯೋ; ಕೊಡಬೇಕಲ್ಲಾ ಎಂದು ಕೊಡುತ್ತಾನೆ. ಆದುದರಿಂದ ಒಳ್ಳೆಯದನ್ನು ತಾನು ಇಟ್ಟು ಕೊಂಡು ಉಪಯೋಗವಿಲ್ಲದ್ದನ್ನೇ ಕೊಡುತ್ತಾನೆ ಎಂದು ಏರ್ಪಡುತ್ತದೆ.

ದ್ರವ್ಯಗಳು ಮೂಲಪ್ರಕೃತಿಯೆಂಬ ಹೆಸರನ್ನು ಪಡೆದು ಸುಖ ದುಃಖ ಮೋಹ ರೂಪವಾದ ಪ್ರಪಂಚಕ್ಕೆ ಕಾರಣವಾಗುವವು" ಎಂದು.

ಘಟವಾಗುವುದಕ್ಕೆ ಮೃತ್—ಮಣ್ಣು ಉಪಾದಾನ ಕಾರಣ. ಕಾರ್ಯಭೂತ ವಾದ ಘಟದಲ್ಲಿ ಕಾರಣಭೂತವಾದ ಮಣ್ಣು ಕಾಣುವುದರಿಂದ ಅದು ಹೇಗೆ ದ್ರವ್ಯವೋ ಹಾಗೆಯೇ ಕಾರ್ಯಭೂತವಾದ ಪ್ರಪಂಚದಲ್ಲಿ ಸುಖ ದುಃಖ ಮೋಹ ಗಳು ಕಾಣುವುದರಿಂದ, ಆ ಸುಖ ದುಃಖ ಮೋಹಾತ್ಮಕವಾದ ಸತ್ತ್ವಾದಿ ಗಳೂ ದ್ರವ್ಯಗಳೆಂದು ಅವರು ಹೇಳುತ್ತಾರೆ. ಇದನ್ನು ಸೂತ್ರಕಾರರಾದ ಬಾದ ರಾಯಣರು ನಿರಸನಮಾಡುತ್ತಾರೆ.

[1]ರಚನಾನುಪಪತ್ತೇಶ್ಚ ನಾನುಮಾನಂ ಪ್ರವೃತ್ತೇಶ್ಚ ।

**ಅನುಮೀಯತೇ ಇತ್ಯನುಮಾನಮ್**=ಎಂಬ ವ್ಯುತ್ಪತ್ತಿಯಿಂದ ಯಾವುದು ಅನುಮಾನ ಮಾಡಲ್ಪಡುತ್ತದೆಯೋ ಅದು ಅನುಮಾನ. ಪ್ರಕೃತದಲ್ಲಿ ಪ್ರಧಾನ ಅನುಮಾನ ಮಾಡಲ್ಪಡುತ್ತದೆ, ಊಹಿಸಲ್ಪಡುತ್ತದೆ. ಆದುದರಿಂದ ಅನುಮಾನ ಶಬ್ದವು ಆನುಮಾನಿಕಪರ, ಆನುಮಾನಿಕ ಪ್ರಧಾನ.

**ಅನುಮಾನಂ ನ**=ಪ್ರಧಾನವು ಜಗತ್ಕಾರಣವಲ್ಲ; ಏತಕ್ಕೆಂದರೆ ಪ್ರಾಜ್ಞ ನಾದ ಪರಮಪುರುಷನಿಂದ ಅಧಿಷ್ಠಿತವಾಗದೆ ಅಚೇತನವಾದ ಪ್ರಧಾನಕ್ಕೆ ವಿಚಿತ್ರವಾದ ಜಗತ್ತಿನ ರಚನೆಯು ಕೂಡುವುದಿಲ್ಲ. **ಪ್ರವೃತ್ತೇಶ್ಚ**=ರಥವೇ ಮುಂತಾದವುಗಳ ನಿರ್ಮಾಣಕ್ಕೆ ಕಾರಣಗಳಾದ ಮರ ಮುಂತಾದವು ಅಚೇತನಗಳು, ಅವು ರಥವನ್ನು ತಯಾರು ಉಂಟುಮಾಡುವುದರಲ್ಲಿ ಬುದ್ಧಿಯುಳ್ಳ ಬಡಗಿ ಮುಂತಾ ದವರಿಂದ ಅಧಿಷ್ಠಿತಗಳಾಗಿದ್ದುಕೊಂಡೇ ಪ್ರವೃತ್ತಿಸುತ್ತವೆ. ಒಂದು ದ್ರವ್ಯದ ಗುಣಗಳಾಗಿ ಪ್ರಸಿದ್ಧವಾಗಿವೆ ಶೌಕ್ಲ್ಯಾದಿಗಳು. ಶೌಕ್ಲ್ಯ=ಬಿಳುಪಿನ ಸ್ವಭಾವ. ಆದ್ರವ್ಯವನ್ನು ಬಿಟ್ಟು ಬರಿ ಬಿಳುಪನ್ನು ನಾವು ಕಾಣಲಾಗುವುದಿಲ್ಲವಷ್ಟೆ? 'ಬಟ್ಟೆ ಬಿಳುಪಾಗಿದೆ' ಅಂದರೆ ದ್ರವ್ಯವಾದ ಬಟ್ಟೆಯನ್ನು ಆಶ್ರಯಿಸಿವೆ ಬಿಳಪು, ಕಪ್ಪು ಮುಂತಾದವು. ಅದರಹಾಗೆ ದ್ರವ್ಯಕ್ಕೆ ಗುಣಭೂತಗಳಾದ ಸತ್ತ್ವರಜಸ್ಸು ತಮಸ್ಸುಗಳಿಗೆ ಉಪಾದಾನ ಕಾರಣತ್ವವು ಕೂಡುವುದಿಲ್ಲ ಎಂದು, '**ಪ್ರವೃತ್ತೇಶ್ಚ**' ಎಂಬಲ್ಲಿ ಇರುವ ಚಕಾರದಿಂದ ಸೂಚಿಸಲ್ಪಟ್ಟಿದೆ—ಸತ್ತ್ವಾದಿಗಳು ದ್ರವ್ಯಗತವಾದ ಧರ್ಮವೆನಿಸಿಕೊಳ್ಳುತ್ತವೆಯೇ ಹೊರತು ದ್ರವ್ಯಸ್ವರೂಪಗಳಲ್ಲ. ಪೃಥಿವ್ಯಾದಿ ಪದಾರ್ಥಗಳಲ್ಲಿ ಲಾಘವ, ಪ್ರಕಾಶ ಮುಂತಾದ ವಿಶೇಷಗಳುಂಟಾಗುವುದಕ್ಕೆ ಕಾರಣ ಗಳಾಗಿರುವ ಸತ್ತ್ವಾದಿಗಳು ಪೃಥಿವ್ಯಾದಿ ಸ್ವಭಾವ ವಿಶೇಷಗಳೇ ಆಗಿರುವುವಲ್ಲದೆ ಪೃಥಿವ್ಯಾದಿಗಳೇ ಅಲ್ಲ. ಮತ್ತು—"**ಗುಣಾಸ್ಸತ್ತ್ವಂರಜಸ್ತಮಃ**" ಎಂದು ಸತ್ತ್ವ

1. ಬ್ರಹ್ಮಸೂತ್ರ. ೨. ೨. ೧.

ರಜಸ್ತಮಸ್ಸುಗಳಿಗೆ ಗುಣಶಬ್ದದಿಂದಲೇ ಪ್ರಸಿದ್ಧ ವ್ಯವಹಾರವಿರುವುದಲ್ಲದೇ ದ್ರವ್ಯಶಬ್ದದಿಂದ ವ್ಯವಹಾರವಿಲ್ಲ. ಆದಕಾರಣ ಸತ್ತ್ವರಜಸ್ತಮಸ್ಸುಗಳು ಅದ್ರವ್ಯಗಳೇ ಹೊರತು ದ್ರವ್ಯವಲ್ಲ.

## ಶಬ್ದಲಕ್ಷಣ

**ಶಬ್ದೋಽಸ್ಮದಾದಿಶ್ರೋತ್ರಗ್ರಾಹ್ಯಃ ಪಞ್ಚಭೂತವರ್ತೀ**—ನಮ್ಮಂತಹವರ ಕಿವಿಯಿಂದ ಗ್ರಹಿಸಲ್ಪಡುವ ಅದ್ರವ್ಯವು ಶಬ್ದವೆನಿಸಲ್ಪಡುತ್ತದೆ. ಅದು ಪೃಥಿವಿಯೇ ಮೊದಲಾದ ಐದು ಭೂತಗಳಲ್ಲಿಯೂ ಇದೆ. ಕೆಲವರು ಈ ಶಬ್ದವನ್ನು ಆಕಾಶ ಮಾತ್ರದಲ್ಲಿ ಇರುವುದೆನ್ನುವರು. ಅದು ಸರಿಯಲ್ಲ. ಏತಕ್ಕೆಂದರೆ **ಶಙ್ಖೋನದತಿ**—ಶಙ್ಖವು ಶಬ್ದ ಮಾಡುತ್ತದೆ, **ಭೇರೀಧ್ವನಿತಿ**—ನಗಾರಿಯು ಧ್ವನಿಸುತ್ತದೆ, **ಸಮುದ್ರೋಗರ್ಜತಿ**—ಸಮುದ್ರವು ಗರ್ಜಿಸುತ್ತದೆ. ಇವೇ ಮೊದಲಾದವು ಲೋಕಪ್ರಸಿದ್ಧವಾಗಿದೆ. ಬೆಂಕಿಯ ಛಟಪಟ ಎಂಬ ಶಬ್ದವನ್ನು ಕೇಳುತ್ತಲೇ ಇದ್ದೇವಲ್ಲವೇ ? ಆದುದರಿಂದ ಪಂಚಭೂತಗಳಲ್ಲೂ ಶಬ್ದವಿದೆ ಎಂದಾಯಿತು.

ಆ ಶಬ್ದವು ವರ್ಣಾತ್ಮಕ ಮತ್ತು ಅವರ್ಣಾತ್ಮಕವೆಂದು ಎರಡು ಬಗೆಯಾಗಿದೆ. ಅ, ಕ, ಚ, ಟ, ತ, ಪ, ಯ ಇವೇ ಮೊದಲಾದ ರೀತಿಯು ಇಲ್ಲದ ಸಮುದಾಯ ಶೂನ್ಯವಾದದ್ದು ವರ್ಣಾತ್ಮಕವು. ಈ ಸಮುದಾಯವು ಅತ್ವ, ಕತ್ವ, ಚತ್ವ ಮೊದಲಾದ ಪ್ರಕಾರಗಳಲ್ಲಿ ಒಂದುಳ್ಳದ್ದಾಗಿಇದೆಯೇ ಹೊರತು ಅದರಿಂದ ಶೂನ್ಯವಾಗಿಲ್ಲ. ಅಂದರೆ ಅತ್ವ, ಕತ್ವ ಮೊದಲಾದ ಪ್ರಕಾರಾಭಾವ ಸಮುದಾಯ ಶೂನ್ಯತ್ವವು ಇದೆ ಎಂದು ಅರ್ಥ. ಹೀಗೆ ಹೇಳುವುದು ಶಾಸ್ತ್ರೀಯವಾದ ಮರ್ಯಾದೆಯಿಂದ.

**ಇದರ ವಿವರಣೆ** :—ಈ ವರ್ಣಾತ್ಮಕ ಶಬ್ದಕ್ಕೆ ಒಂದು ಸಾಮಾನ್ಯ ಲಕ್ಷಣವನ್ನು ಪರಿಷ್ಕರಿಸಿ ಹೇಳಬೇಕು. ಅದು ಹೇಗೆಂದರೆ—ಅತ್ವ, ಆತ್ವ, ಇತ್ವ, ಈತ್ವ—ಈ ರೀತಿಯಾಗಿರುವ ಐವತ್ತೊಂದು ಧರ್ಮಗಳು ಐವತ್ತೊಂದು ವರ್ಣಗಳಲ್ಲಿ ಒಂದೊಂದರಲ್ಲಿ ಒಂದೊಂದರಂತೆ ಇರುವುವು ; ಈ ಧರ್ಮಗಳೇ ಆ ಆ ವರ್ಣಗಳೆಂಬ ವಿಶೇಷ್ಯಗಳಿಗೆ ಪ್ರಕಾರವೆನಿಸಿಕೊಳ್ಳುವುವು (ವಿಶೇಷಣಗಳೆನಿಸಿಕೊಳ್ಳುವುವು). ಪ್ರತಿಯೊಂದು ವರ್ಣದಲ್ಲಿಯೂ ತನ್ನ ತನ್ನ ವಿಶೇಷಣವಿರುವಂತೆ ಸ್ವೇತರವಾದ—ತನಗಿಂತ ಬೇರೆಯಾದ ಐವತ್ತು ವರ್ಣಗಳಲ್ಲಿರುವ ಐವತ್ತು ಧರ್ಮಗಳ ಅಭಾವಗಳೂ ಇರುವುವು. ಇಲ್ಲಿ ಅತ್ವ, ಆತ್ವ ಮೊದಲಾದ ಧರ್ಮಗಳು ಐವತ್ತೊಂದಾದುದರಿಂದ ಇವುಗಳ ಅಭಾವಗಳೂ ಐವತ್ತೊಂದಾಗುವುವು. ಈ ಐವತ್ತೊಂದು ಅಭಾವಗಳೂ ಯಾವುದರಲ್ಲಿ ಸಂಪೂರ್ಣವಾಗಿ (ಒಂದೂ ಕಡಿಮೆಯಾಗದೆ) ಇರುವವೋ ; ಅದು ವರ್ಣಾತ್ಮಕ ಶಬ್ದವಲ್ಲ

ವೆಂದಿನಿಸಿಕೊಳ್ಳಬಹುದು ; ಆದರೆ ವರ್ಣಮಾಲೆಯಲ್ಲಿರುವ ವರ್ಣಗಳೊಳಗೆ ಪ್ರತಿಯೊಂದರಲ್ಲಿಯೂ ಒಂದೊಂದು ಧರ್ಮವಿದ್ದೇ ಇರುವುದರಿಂದ ಐವತ್ತು ಧರ್ಮಗಳ ಐವತ್ತು ಅಭಾವಗಳೇ ಬರುವವಲ್ಲದೆ ಐವತ್ತೊಂದು ಅಭಾವಗಳೂ ಸೇರಿ ಯಾವುದೊಂದರಲ್ಲಿಯೂ ಬರಲಿಲ್ಲವಾದ ಪ್ರಯುಕ್ತ ಇವುಗಳು ವರ್ಣಾತ್ಮಕ ಶಬ್ದಗಳಲ್ಲವೆಂದು ಎನಿಸಿಕೊಳ್ಳದಂತೆ ವರ್ಣಾತ್ಮಕ ಶಬ್ದಗಳೆಂದೇ ಹೇಳಿಸಿಕೊಳ್ಳುವವು. ಇದರಿಂದ ಅತ್ವ, ಆತ್ವ ಮೊದಲಾದ ಐವತ್ತೊಂದು ಧರ್ಮಗಳ ಐವತ್ತೊಂದು ಅಭಾವಗಳ ಸಮುದಾಯದಿಂದ ಯಾವುದು ಶೂನ್ಯವಾಗಿರುವುದೋ ಅದು ವರ್ಣಾತ್ಮಕ ಶಬ್ದವೆನಿಸಿಕೊಳ್ಳುವುದು ಎಂಬ ನಿಷ್ಕೃಷ್ಟವಾದ ಲಕ್ಷಣವು ಫಲಿತವಾಯಿತು.

ಈ ವರ್ಣಾತ್ಮಕವಾದ ಶಬ್ದವೇ ದೇವತೆಗಳು ಮನುಷ್ಯರು ಮೊದಲಾದ ತಾಲು–ದವಡೆ ಮೊದಲಾದವುಗಳಿಂದ ವ್ಯಙ್ಗ್ಯವಾಗುತ್ತದೆ. ಪಶ್ವಾದಿಗಳ ತಾಲು ವ್ಯಙ್ಗ್ಯತ್ವವು ಇವುಗಳಿಗಿಲ್ಲವಾದುದರಿಂದ ದೇವ ಮನುಷ್ಯಾದಿಗಳೆಂದು ಹೇಳಿದ್ದು. ವಾಚಕತ್ವ ಸ್ಫೋಟಾಭಿವ್ಯಙ್ಗ್ಯತ್ವ ಪ್ರಮಾಣತ್ವ ನಿತ್ಯತ್ವ ಅನಿತ್ಯತ್ವ ಇವೇ ಮೊದಲಾದ ವಿಚಾರವು–ವಿಮರ್ಶೆಯು ಹಿಂದೆ ಕೆಲವು ಭಾಗಗಳಲ್ಲಿ ಮಾಡಲ್ಪಟ್ಟಿದ್ದೆಲ್ಲಾ ಈ ಶಬ್ದಕ್ಕೆ ಸಬಂಧಪಟ್ಟದ್ದೇ ಆಗಿದೆ.

ಅದೂ ಕೂಡ 'ಕ್ಷ' ಕಾರವೂ ಸೇರಿ ಐವತ್ತೊಂದು ರೀತಿಯಾಗಿದೆ. ಹಿಂದೆ ಮಕ್ಕಳಿಗೆ ಅಕ್ಷರವನ್ನು ಅಭ್ಯಾಸ ಮಾಡಿಸಬೇಕಾದರೆ ನೆಲದ ಧೂಳಿನಲ್ಲಿ ಬರೆದು ಮಕ್ಕಳ ಕೈಯಿಂದ ತಿದ್ದಿಸಿ ಅಭ್ಯಾಸ ಮಾಡಿಸುವುದು ವಾಡಿಕೆಯಾಗಿತ್ತು. ಇದಕ್ಕೆ ಮಾತೃಕಾಕ್ಷರ ಪಾಠ ಎಂದು ಹೆಸರು. ಈ ಪಾಠದಲ್ಲಿ ಲಕಾರ ಳಕಾರಗಳಿಗೆ ವ್ಯತ್ಯಾಸವಿಲ್ಲದೆ ಇವೆರಡೂ ಒಂದೇ ಎಂದು ಹೇಳುವ ವಾಡಿಕೆಯಿಂದ ಕೆಲವೆಡೆಯಲ್ಲಿ ಐವತ್ತು ಅಕ್ಷರಗಳೆಂದು ಹೇಳಲ್ಪಡುತ್ತದೆ. ಕ್ಯಕ್ರ್ಯಾದಿಗಳು ಮಾತೃಕಾ ಪಾಠದಲ್ಲಿ ಇರುವುದರಿಂದ ಐವತ್ತೇ ಅಕ್ಷರಗಳೆಂದು ಹೇಳುವುದು ಹೇಗೆ ಸರಿಯಾಗುತ್ತದೆ ಎಂದರೆ ಕ, ಯ ಇವುಗಳ ಸೇರುವಿಕೆಯಿಂದ ಕ್ಯ, ಕ ರ ಇವುಗಳ ಸೇರುವಿಕೆಯಿಂದ ಕ್ರ. ಈ ರೀತಿ ಆದವೆಲ್ಲಾ ಯ ರ ಲಾದಿಗಳ ಸಂಯೋಗ—ಕೂಡಿಸುವುದರಿಂದ ಉಂಟಾದ ಭೇದದಿಂದಾದವು ಎಂದು ತಿಳಿಯತಕ್ಕದ್ದು.

ಅ + ಇ = ಎ, ಅ + ಉ = ಓ, ಈ ರೀತಿ ಎರಡು ಸ್ವರಾಕ್ಷರಗಳು ಸೇರಿ ಆದವು ಸಂಧ್ಯಕ್ಷರಗಳು. ಎ, ಓ, ಐ, ಔ, ಇವು ಸಂಧ್ಯಕ್ಷರಗಳು. ಇವುಗಳಿಗೆ ಹ್ರಸ್ವಗಳೂ ಉಂಟು.

ಪ್ರಾಕೃತವೇ ಮೊದಲಾದ ಭಾಷೆಗಳಲ್ಲಿ ಇವುಗಳ ಹ್ರಸ್ವಾಕ್ಷರಗಳು ಪ್ರಯೋಗಿಸಲ್ಪಟ್ಟಿವೆ. "ಆಯಾನ್ತಿಕ್ಷೇತ್ರಾನಿಲಾಃ = ಗದ್ದೆ ಮುಂತಾದ ಕ್ಷೇತ್ರಗಳಿಂದ ಗಾಳಿಗಳು

ಬೀಸಿ ಬರುತ್ತವೆ" ಎಂಬ ಅರ್ಥದಲ್ಲಿ 'ಆ ಅನ್ನಿಷೇತ್ತ್ರಾಣೆಳಾ' ಎಂದೂ, ಹಾಗೆಯೇ "ತಥಾಸ್ನುಷಯೂ ಪ್ರಲೋಕಿತಃ=ಸೊಸೆಯಿಂದ ನೋಡಲ್ಪಟ್ಟನು" ಎಂಬ ಅರ್ಥದಲ್ಲಿ "ತಹ ಸೊಣ್ಣಾಎಪಳೋ ಇ ಒ" ಇವೇ ಮೊದಲಾದ ಜಾಗದಲ್ಲಿ ಹ್ರಸ್ವದಿಂದ ಪಾಠವಾಗಿದೆ. ಪಂಚದ್ರಾವಿಡ ಭಾಷೆಗಳುಂಟು. ಅವುಗಳ ಮಾತೃಕೆಯಲ್ಲಿ ಹ್ರಸ್ವಾಕ್ಷರಗಳನ್ನು ನಿಬಂಧನೆ ಮಾಡಿರುತ್ತಾರೆ, ಸೇರಿಸಿದ್ದಾರೆ—ಉದಾಹರಣೆಗಾಗಿ, ಕನ್ನಡಿಗರು ಮಾತೃಕೆಯಲ್ಲಿ ಅಕ್ಷರಮಾಲಿಕೆಯಲ್ಲಿ ಸಂಧ್ಯಕ್ಷರಗಳಿಗೆ ಹ್ರಸ್ವವನ್ನು ಸೇರಿಸಿರುತ್ತಾರೆ. ಸಂಸ್ಕೃತದಲ್ಲಿ ವಾಚಕತ್ವವು ಇಲ್ಲದಿರುವುದರಿಂದ, ದ್ರಮಿಡ ಮಾತೃಕೆಯ ಹಾಗೆ ಸಂಸ್ಕೃತ ಮಾತೃಕೆಯಲ್ಲಿ ಆ ಹ್ರಸ್ವಗಳನ್ನು ಓದುವುದಿಲ್ಲ. ಬಹಿಷ್ಕರಿಸಿದ್ದಾರೆ. ಮೋಕ್ಷಧರ್ಮ ಮುಂತಾದವಲ್ಲಿ ಇವುಗಳಿಗೇ ಹೇಗೋ ಮಾಡಿ ಅರವತ್ತುಮೂರು ಅಕ್ಷರವಿರುವಿಕೆಯನ್ನು ಹೇಳಿದೆ.

"ಸಹಸ್ರಾಕ್ಷರಾಪರಮೇವ್ಯೋಮನ್=ನಿತ್ಯವಿಭೂತಿಯಲ್ಲಿ ವೈಕುಂಠದಲ್ಲಿ 'ಸಾವಿರ ಅಕ್ಷರಗಳಿವೆ' ಎಂದು ಶ್ರುತಿಯು ಹೇಳಿರುವುದು. ಅಲ್ಲೇ ಬೇರೆ ವರ್ಣಗಳು ಇರುವುದರಿಂದ ಆ ರೀತಿ ಶ್ರುತಿ ಹೇಳಿದೆಯೆಂದಾದರೂ ಅಥವಾ ಆ ಅಕ್ಷರಗಳಿಗೇ ಸಂದರ್ಭಕ್ಕೆ ತಕ್ಕಂತೆ ಒಂದಕ್ಕೊಂದು ಕೂಡಿಸಿ ಹೇಳೋಣದರಿಂದ ಸಹಸ್ರಾಕ್ಷರತ್ವ ಅಯುತಾಕ್ಷರತ್ವ ಅಂದರೆ ಹತ್ತು ಸಾವಿರ ಅಕ್ಷರವಿರುವಿಕೆ ಇವೇ ಮುಂತಾದ ಭೇದವು ಉಂಟು ಎಂಬ ಉಪಪತ್ತಿಯನ್ನು ಕಲ್ಪಿಸಬೇಕಾಗಿದೆ.

ಪರಮವ್ಯೋಮ ಶಬ್ದಕ್ಕೆ ನಿತ್ಯ ವಿಭೂತಿ ಎಂದು ಕೆಲವರೂ, ಬೇರೆ ಅರ್ಥವುಂಟು ಎಂದು ಮತ್ತೆ ಕೆಲವರೂ ಹೇಳುತ್ತಾರೆ.

> "ಆಧಾರಂ ತು ಚತುರ್ದಲಾರುಣಲಸದ್ವಾಸಾಂತ ವರ್ಣಾತ್ಮಕಂ
> ಸ್ವಾಧಿಷ್ಠಾನಮನೇಕವೈದ್ಯುತನಿಭಂ ಬಾಲಾಂತಷಟ್ಪತ್ರಕಂ ।
> ರತ್ನಾಭಂ ಮಣಿಪೂರಕಂ ದಶದಳಂ ಡಾದ್ಯಂ ಫಕಾರಾಂತಕಂ
> ಪತ್ರೈರ್ದ್ವಾದಶಭಿಸ್ತ್ವನಾಹತಮಿದಂ ಹೈಮಂ ಕಠಾಂತಾವೃತಮ್ ||
> ಮಾತ್ರಾಭಿರ್ದಶಷೋಡಶಸ್ವರಯುತಂ ಜ್ಯೋತಿರ್ವಿಶುದ್ಧಾಂಬುಜಂ
> ಹಕ್ಷೇತ್ಯಕ್ಷರ ಬೀಜಯುಗ್ಮದಳೆ ಯುಗ್ರಾಕ್ಷಾಭಮಾಜ್ಞಾಂಬುಜಮ್ ।
> ತಸ್ಮಾದೂರ್ಧ್ವಗತಂ ಪ್ರಭಾಸಿತಮಿದಂ ಪದ್ಮಂ ಸಹಸ್ರಚ್ಛದಂ
> ನಿತ್ಯಾನಂದಪದಂ ಸದಾ ಹರಿಪದಂ ನಿತ್ಯಂ ನಮಸ್ಯೇತರಾಮ್ ॥"

ಎಂಬುದಾಗಿ ವರ್ಣಮಾಲಾ (ಮಾತೃಕೆಯು) ಧ್ಯಾನ ಶ್ಲೋಕವು ಮಂತ್ರ ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವುದು. ಇದರ ಅಭಿಪ್ರಾಯವೇನೆಂದರೆ- -ಮನುಷ್ಯನು ತನ್ನ ಶರೀರದಲ್ಲಿರುವ ಅವಯವಗಳೊಳಗೆ ಏಳು ಅವಯವ ವಿಶೇಷಗಳನ್ನು

ಕಮಲಾಕಾರಗಳನ್ನಾಗಿ ಭಾವಿಸಿ ಅವುಗಳಲ್ಲಿ ಮುಂದೆ ಹೇಳುವ ರೀತಿಯಾಗಿ ವರ್ಣಮಾಲೆಯ ಅಕ್ಷರಗಳನ್ನು ಧ್ಯಾನಮಾಡಬೇಕೆಂದು ಮಂತ್ರ ಶಾಸ್ತ್ರದ ನಿಯಮ ವುಂಟು.

ಇದು ಮಾತೃಕೆಯ ಧ್ಯಾನಶ್ಲೋಕ. ಇದರಲ್ಲಿ ಆಧಾರಶಬ್ದದಿಂದ ಪ್ರತಿಪಾದಿಸಲ್ಪಟ್ಟದ್ದು—ಹೇಳಲ್ಪಟ್ಟದ್ದು ಗುದಸ್ಥಾನ. ಸ್ವಾಧಿಷ್ಠಾನಶಬ್ದದಿಂದ ವಿವರಿಸಲ್ಪಟ್ಟದ್ದು ಲಿಙ್ಗಸ್ಥಾನ. ಮಣಿಪೂರಕವೆಂಬುದರಿಂದ ನಾಭಿಸ್ಥಾನವೂ ಅನಾಹತವೆಂಬುದರಿಂದ ಹೃದಯಸ್ಥಾನವೂ ಹೇಳಲ್ಪಟ್ಟವು. ವಿಶುದ್ಧಾಮ್ಬುಜ, ಆಜ್ಞಾಮ್ಬುಜ ಶಬ್ದಗಳಿಂದ ಕ್ರಮವಾಗಿ ತಾಲುಸ್ಥಾನ—ದವಡೆ, ಭ್ರೂಮಧ್ಯ (ಹುಬ್ಬುಗಳ ಮಧ್ಯ) ಸ್ಥಾನಗಳೂ ಹೇಳಲ್ಪಟ್ಟವಾಗಿವೆ. ದ್ವಾದಶಾಂತಪದ್ಮಕ್ಕೇ ಸಹಸ್ರಾಕ್ಷರತ್ವವೆಂದು 'ಸಹಸ್ರಾಕ್ಷರಾಪರಮೇವ್ಯೋಮನ್' ಎಂಬ ಶ್ರುತಿಯು ಹೇಳಿರುವುದರಿಂದ ಪರಮವ್ಯೋಮ ಶಬ್ದವು ಅದನ್ನೇ ಹೇಳುತ್ತದೆ, ಎನ್ನುತ್ತಾರೆ.

**ವಿವರಣೆ** :—೧. ಗುದಸ್ಥಾನ. ೨. ಲಿಂಗಸ್ಥಾನ. ೩. ನಾಭಿಸ್ಥಾನ. ೪. ಹೃದಯಸ್ಥಾನ. ೫. ತಾಲುಸ್ಥಾನ. ೬. ಭ್ರೂಮಧ್ಯಸ್ಥಾನ (ಹುಬ್ಬುಗಳ ಮಧ್ಯ). ೭. ಮಸ್ತಕಸ್ಥಾನ (ತಲೆ) ಈ ಏಳು ಸ್ಥಾನಗಳೂ ಕ್ರಮವಾಗಿ ೧. ಆಧಾರಪದ್ಮ. ೨. ಸ್ವಾಧಿಷ್ಠಾನಪದ್ಮ. ೩. ಮಣಿಪೂರಕಪದ್ಮ ೪. ಅನಾಹತಪದ್ಮ. ೫. ವಿಶುದ್ಧಪದ್ಮ. ೬. ಆಜ್ಞಾಪದ್ಮ. ೭. ದ್ವಾದಶಾಂತಪದ್ಮ ಎಂಬ ಏಳು ಹೆಸರುಗಳಿಂದ ವ್ಯವಹರಿಸಲ್ಪಡುವವು. ಅವುಗಳೊಳಗೆ—

೧. **ಆಧಾರಂತು ಚತುರ್ದಳಾರುಣಲಸದ್ವಾಸಾಂತವರ್ಣಾತ್ಮಕಂ**—ಗುದಸ್ಥಾನವೆಂಬ ಆಧಾರಪದ್ಮವು ಕೆಂಪುಬಣ್ಣವುಳ್ಳದಾಗಿ ವ-ಶ-ಷ-ಸ ಎಂಬ ನಾಲ್ಕು ವರ್ಣಗಳಿಂದ ಕೂಡಿದ ನಾಲ್ಕು ದಳಗಳುಳ್ಳದಾದುದರಿಂದ ಚತುರ್ದಳ ಪದ್ಮವೆನಿಸಿಕೊಂಡು ಪ್ರಕಾಶಿಸುತ್ತಿರುವುದು.

೨. **ಸ್ವಾಧಿಷ್ಠಾನ ಮನೇಕ ವೈದ್ಯುತನಿಭಂ ಬಾಲಾಂತ ಷಟ್ಪತ್ರಕಂ**—ಲಿಂಗಸ್ಥಾನವೆಂಬ ಸ್ವಾಧಿಷ್ಠಾನ ಪದ್ಮವು ಬಹಳವಾದ ಮಿಂಚುಗಳು ಒಟ್ಟಿಗೆ ಕೂಡಿದಂತೆ ಪ್ರಕಾಶಿಸುತ್ತಾ ಬ-ಭ-ಮ-ಯ-ರ-ಲ ಎಂಬ ಆರು ವರ್ಣಗಳಿಂದ ಕೂಡಿದ ಆರು ದಳಗಳುಳ್ಳದಾದುದರಿಂದ ಷಡ್ದಳಪದ್ಮವೆನಿಸಿಕೊಂಡು ಪ್ರಕಾಶಿಸುತ್ತಿರುವುದು.

೩ **ರತ್ನಾಭಂ ಮಣಿಪೂರಕಂ ದಶದಳಡಾದ್ಯಂಕ ಫಕಾರಾಂತಕಂ**—ನಾಭಿಸ್ಥಾನವೆಂಬ ಮಣಿಪೂರಕಪದ್ಮವು ರತ್ನದ ಕಾಂತಿಯಂತೆ ಕಾಂತಿಉಳ್ಳದ್ದಾಗಿ ಡ-ಢ

ಪತ್ರೈರ್ದ್ವಾದಶಭಿಸ್ತ್ವನಾಹತ ಮಿದಂ ಹೈಮಂ ಕಠಾಂತಾವೃತಂ—ಹೃದಯಸ್ಥಾನವೆಂಬ ಅನಾಹತ ಪದ್ಮವು ಸ್ವರ್ಣದ—ಚಿನ್ನದ ಕಾಂತಿಯಂತೆ ಕಾಂತಿಯುಳ್ಳದಾಗಿ ಕ–ಖ–ಗ–ಘ–ಙ–ಚ–ಛ–ಜ–ಝ–ಞ–ಟ–ಠ ಎಂಬ ಹನ್ನೆರಡು ವರ್ಣಗಳಿಂದ ಕೂಡಿದ ಹನ್ನೆರಡು ದಳಗಳುಳ್ಳದಾದುದರಿಂದ ದ್ವಾದಶ ದಳ ಪದ್ಮವೆನಿಸಿಕೊಂಡು ಪ್ರಕಾಶಿಸುತ್ತಿರುವುದು.

೫. ಮಾತ್ರಾಭಿರ್ದಶ ಷೋಡಶ ಸ್ವರಯುತಂ ಜ್ಯೋತಿ ರ್ವಿಶುದ್ಧಾಂಬುಜಂ—ತಾಲುಸ್ಥಾನವೆಂಬ ವಿಶುದ್ಧ ಪದ್ಮವು ಜ್ಯೋತೀರೂಪವಾಗಿ ಅ–ಆ–ಇ–ಈ–ಉ–ಊ–ಋ–ೠ–ಌ–ೡ–ಏ–ಐ–ಓ–ಔ–ಅಂ–ಅಃ ಎಂಬ ಹದಿನಾರು ವರ್ಣಗಳಿಂದ ಕೂಡಿದ ಹದಿನಾರು ದಳಗಳುಳ್ಳುದಾದುದರಿಂದ ಷೋಡಶದಳ ಪದ್ಮವೆನಿಸಿಕೊಂಡು ಪ್ರಕಾಶಿಸುತ್ತಿರುವುದು.

೬. 'ಹಕ್ಷೇತ್ಯಕ್ಷರ ಬೀಜಯುಗ್ಮದಳಯುಗ್ರಕ್ತಾಭ ಮಾಜ್ಞಾಂಬುಜಂ'—ಭ್ರೂಮಧ್ಯಸ್ಥಾನವೆಂಬ ಆಜ್ಞಾಪದ್ಮವು ರಕ್ತವರ್ಣವಾಗಿ ಹ–ಕ್ಷ ಎಂಬ ಎರಡು ಬೀಜಾಕ್ಷರಗಳಿಂದ ಕೂಡಿದ ಎರಡು ದಳಗಳುಳ್ಳುದಾದುದರಿಂದ ದ್ವಿದಳಪದ್ಮವೆಸಿಕೊಂಡು ಪ್ರಕಾಶಿಸುತ್ತಿರುವುದು. ಹೀಗೆ ಉಕ್ತವಾದ ಆರು ಸ್ಥಾನಗಳಲ್ಲಿ ವರ್ಣಮಾಲಾಂತರ್ಗತವಾದ ಐವತ್ತು ವರ್ಣಗಳು ಮುಗಿದುವು.

೭. ತಸ್ಮಾದೂರ್ಧ್ವಗತಂ ಪ್ರಭಾಸಿತ ಮಿದಂ ಪದ್ಮಂ ಸಹಸ್ರಚ್ಛದಂ
ನಿತ್ಯಾನಂದಪದಂ ಸದಾ ಹರಿಪದಂ ನಿತ್ಯಂನಮಸ್ಯೇತರಾಮ್

ಮಸ್ತಕಸ್ಥಾನವೆಂಬ ದ್ವಾದಶಾಂತಪದ್ಮವು ಹಿಂದೆ ಹೇಳಿದ ಆಜ್ಞಾಪದ್ಮಕ್ಕಿಂತಲೂ ಮೇಲುಭಾಗದಲ್ಲಿ ಮಿಗಿಲಾದ ಕಾಂತಿಯೊಡನೆ ಕೂಡಿದುದಾಗಿ ಸಹಸ್ರಾಕ್ಷರ ಮಂತ್ರ ವಿಶೇಷದಿಂದ ಕೂಡಿದ ಸಾವಿರದಳಗಳುಳ್ಳುದಾದುದರಿಂದ ಸಹಸ್ರದಳಪದ್ಮವೆನಿಸಿಕೊಂಡು ಪ್ರಕಾಶಿಸುತ್ತಿರುವುದು. ಹೀಗೆ ಹೇಳಿದ ರೀತಿಯಲ್ಲಿ ಅವಯವ ವಿಶೇಷಗಳನ್ನು ಪದ್ಮಾಕಾರವಾಗಿ ಧ್ಯಾನಮಾಡುವವರಿಗೆ ಧ್ಯಾನಾಲಂಬನವಾದ ಆ ಪದ್ಮಗಳು ಶಾಶ್ವತವಾದ ಆನಂದಪ್ರಾಪ್ತಿಗೆ ಸ್ಥಾನಗಳಾಗಿರುವುವು. ಅದಕ್ಕೆ ಕಾರಣವೇನೆಂದರೆ ಇವು ಆನಂದಸ್ವರೂಪನಾದ ಹರಿಗೆ ಯಾವಾಗಲೂ ವಾಸಸ್ಥಾನಗಳಾಗಿರುವವು. ಇಂತಹ ಪದ್ಮಗಳನ್ನು ಮತ್ತೆ ಮತ್ತೆ ನಾನು ನಮಸ್ಕರಿಸುತ್ತೇನೆ ; ಧ್ಯಾನಿಸುತ್ತೇನೆ ಎಂಬುದು ಶ್ಲೋಕಗಳ ಅಭಿಪ್ರಾಯವಾಗಿರುವುದು.

ಇಲ್ಲಿ ಆಧಾರಪದ್ಮ ಮೊದಲುಗೊಂಡು ಆಜ್ಞಾಪದ್ಮದವರೆಗೂ ಆಗುವ ಆರು ಪದ್ಮಗಳೊಡನೆ ಪಠಿತವಾಗಿರುವ ದ್ವಾದಶಾಂತಪದ್ಮವು ಸಹಸ್ರಾಕ್ಷರ ಮಂತ್ರಯುಕ್ತ

ವಾಗಿರುವುದೆಂದು ಹೇಳಿರುವ ಕಾರಣ 'ಸಹಸ್ರಾಕ್ಷರಾ ಪರಮೇವ್ಯೋಮನ್' ಎಂಬ ಶ್ರುತಿಯಲ್ಲಿರುವ ಪರಮವ್ಯೋಮ ಶಬ್ದವು ದ್ವಾದಶಾಂತ ಪದ್ಮವನ್ನೇ ಬೋಧಿಸಿ ಆದರಲ್ಲಿ ಸಹಸ್ರಾಕ್ಷರತ್ವವನ್ನು ತೋರಿಸುತ್ತದೆಯೇ ಹೊರತು ನಿತ್ಯವಿಭೂತಿ ಯಲ್ಲಿ ಸಹಸ್ರಾಕ್ಷರವಿದೆ ಎಂಬುದನ್ನು ಬೋಧಿಸುವುದಿಲ್ಲ ಎಂದು ಕೆಲವರು ಹೇಳುವರು. ಆದಕಾರಣ ವರ್ಣಮಾಲೆಯಲ್ಲಿ ಐವತ್ತು ಅಥವಾ ಐವತ್ತೊಂದು ವರ್ಣಗಳೇ ಇರುವುವೆಂದು ಹೇಳುವುದರಲ್ಲಿ ತಪ್ಪೇನೂ ಆಗದು. ಈ ಮೇಲೆ ಹೇಳಿರುವ ಶ್ಲೋಕಗಳು ಮತ್ತು ಅವುಗಳ ಅರ್ಥ ವಿವರಣೆಗೆ ನ್ಯಾಯಸಿದ್ಧಾಞ್ಜನವ್ಯಾಖ್ಯಾಕಾರರಾದ ಶ್ರೀರಂಗರಾಮಾನುಜ ಮುನಿಗಳ ಅನುಗ್ರಹವೇ ಕಾರಣವಾಗಿದೆ.

ಇನ್ನೊಂದು ರೀತಿಯಲ್ಲೂ ಸಮಾಧಾನ. ನಿತ್ಯ ವಿಭೂತಿಯಲ್ಲಿ ಬೇರೆ ವರ್ಣಗಳಿವೆ. ಆದುದರಿಂದ ಸಹಸ್ರಾಕ್ಷರತ್ವ ಎಂದೂ ಹೇಳಬಹುದು. ಅಕ್ಷರಗಳಿಗೇ ಮೃದುವರ್ಣ ಪರುಷ ವರ್ಣ ಇವುಗಳೊಡನೆ ಕೂಡಿಸಿ ಹೇಳಬೇಕಾದ ಸಂದರ್ಭ ಅಂದರೆ ತೇಲಿಸಿ ಸುಲಭವಾಗಿ ಉಚ್ಚರಿಸುವುದು, ಒತ್ತಿ ಹೆಚ್ಚು ಪ್ರಯತ್ನದಿಂದ ಉಚ್ಚರಿಸುವುದು. ಮುಂತಾದ ಅವಕಾಶ, ಇದರಿಂದಲೂ, ಒಂದೇ ಕಕಾರಕ್ಕೆ ಯ–ರ–ಲ–ವ ಮುಂತಾದವುಗಳೊಡನೆ ಕೂಡುವಿಕೆಯಿಂದ ಉಂಟಾದ ಭೇದದಿಂದಲೂ, ಅದರಲ್ಲೂ ಹಿಂದು ಮುಂದು ಮುಂತಾದ ಭೇದದಿಂದ ಅನೇಕ ವಿಧವಾಗುವಿಕೆ ಉಂಟಾಗುವುದರಿಂದಲೂ ಸಹಸ್ರಾಕ್ಷರತ್ವ, ಅಯುತಾಕ್ಷರತ್ವ ಮುಂತಾದ ಭೇದಗಳು ಆಗುವುವು.

ಅಂತೂ "ಶತಾಕ್ಷರಾ ಸಹಸ್ರಾಕ್ಷರಾಽಯುತಾಕ್ಷರಾ ತಾಂ ರಕ್ಷಸ್ವ" ಎಂಬ ಶ್ರುತಿಯೂ ವ್ಯಾಖ್ಯಾನ ಮಾಡಲ್ಪಟ್ಟಿತು.

ಇಲ್ಲಿಯವರೆಗೂ ವರ್ಣಾತ್ಮಕ ಶಬ್ದದ ವರ್ಣನೆ ಆಯಿತು. ಇನ್ನು ಮುಂದೆ ಅವರ್ಣಾತ್ಮಕ ಶಬ್ದದ ವಿಚಾರವನ್ನು ತಿಳಿಯೋಣ.

**ಅ-ಕ-ಚ-ಟ-ತ-ಪ-ಯಾದಿ ಸಮಸ್ತಪ್ರಕಾರಾ ಭಾವಸಮುದಾಯವಾನ ವರ್ಣಾತ್ಮಕಃ** — ಅತ್ವ, ಕತ್ವ, ಚತ್ವ, ಟತ್ವ ತತ್ವ, ಪತ್ವ, ಯತ್ವ ಇವೇ ಮೊದಲಾದ ಎಲ್ಲಾ ಪ್ರಕಾರಗಳಿಲ್ಲದ—ವಿಶೇಷಣವಿಲ್ಲದ ಸಮೂಹವುಳ್ಳದ್ದು ಅವರ್ಣಾತ್ಮಕವು.

ಅದೂ ಕೂಡ ವಾದ್ಯ, ಮೇಘ, ವಾಯುವೇಗ ಇವುಗಳಿಂದ ಅಭಿವ್ಯಕ್ತವಾಗುವ ಧ್ವನಿವಿಶೇಷ. ಕಟ್ಟಿಗೆ ಮುಂತಾದವನ್ನು ಸೀಳುವಾಗ ಉಂಟಾಗುವ ಶಬ್ದ ಇವೆಲ್ಲಾ ಅವರ್ಣಾತ್ಮಕ ಶಬ್ದ ವಿಶೇಷವೇ, ಕಿವಿಯಿಂದ ಗ್ರಹಿಸಲ್ಪಡುತ್ತವೆ, ಈ ರೀತಿ ಯಾದ ವರ್ಣಾತ್ಮಕ ಅವರ್ಣಾತ್ಮಕಗಳಾದ ಎರಡು ಶಬ್ದಗಳೂ ಶ್ರೋತ್ರೇಂದ್ರಿಯದ

ಹತ್ತಿರದಲ್ಲೇ ಇದ್ದು ಗಾಳಿಯಿಂದ[1] ಅಭಿವ್ಯಕ್ತವಾಗಿ ಕಿವಿಯಿಂದ ಸ್ವೀಕರಿಸಲ್ಪಡುತ್ತದೆ ಎನ್ನುವರ ಪಕ್ಷದಲ್ಲಿ ಆಕಾಶದಲ್ಲಿ ಅಡಗಿರುವ ಆ ಧ್ವನಿಯೇ ಗ್ರಹಿಸಲ್ಪಡುತ್ತದೆ ಎಂದು ಹೇಳಬೇಕು. ವಾದ್ಯವೇ ಮುಂತಾದವುಗಳಲ್ಲಿ ಇರುವ ಧ್ವನಿಯೇ ಗ್ರಹಿಸಲ್ಪಡುತ್ತದೆ ಎನ್ನುವ ಪಕ್ಷದಲ್ಲಿ [2]ಪೃಥಿವ್ಯಾದಿ ಐದು ಭೂತಗಳಲ್ಲಿಯೂ ಅಡಗಿರುವ ಧ್ವನಿಗೆ ಗ್ರಹಿಸಲ್ಪಡುವಿಕೆ ಕೂಡುತ್ತದೆ. ಇದರಲ್ಲಿ ಮೊದಲನೆಯ ಪಕ್ಷದಲ್ಲಿ ಒಂದು ಲಾಘವವುಂಟು ; ಏನೆಂದರೆ ನಗಾರಿ ಅಥವಾ ಅದರ ಅವಯವಗಳು, ಇವುಗಳಿಗೆ ಕಿವಿಯ ಹತ್ತಿರಕ್ಕೆ ಬರುವಿಕೆಯೆಂದರೆ ಕ್ಲಿಷ್ಟಕಲ್ಪನೆಯಾಗುತ್ತದೆ. ಆದುದರಿಂದ ಆಕಾಶದಲ್ಲಿ ಸಮವೇತವಾದ—ಕೂಡಿರುವ ಶಬ್ದವೇ ಗ್ರಹಿಸಲ್ಪಡುತ್ತದೆ ಎಂಬುದಾಗಿ ಒಪ್ಪಬೇಕು.

ದೂರದಲ್ಲಿರುವ ಶಬ್ದದ ಗ್ರಹಣದಲ್ಲಿ ಶ್ರೋತ್ರೇನ್ದ್ರಿಯವೇ ಅಲ್ಲಿಗೆ ಹೋಗಿ ಗ್ರಹಿಸುತ್ತದೆಯೆಂದು ವರದನಾರಾಯಣ ಭಟ್ಟಾರಕರು ಹೇಳುತ್ತಾರೆ.

**ದೂರೇಶಬ್ದಃ ಸಮೀಪೇಚ ಪ್ರಾಚ್ಯಾಶ್ಚೇತ್ಯಾದಿ ದರ್ಶನಾತ್ ।**
**ಗತ್ವಾಶ್ರೋತ್ರೇನ್ದ್ರಿಯಂ ತತ್ರ ತತ್ರ ಶಬ್ದಗ್ರಹಕ್ಷಮಮ್ ॥**

"ಲೋಕದಲ್ಲಿ, ದೂರದಲ್ಲಿ ಶಬ್ದ ಕೇಳಿಸುತ್ತದೆ. ಹತ್ತಿರದಲ್ಲೇ ಕೇಳಿಸುತ್ತದೆ. ಇದು ಪೂರ್ವದಕಡೆಯಿಂದ ಬರುವ ಶಬ್ದ" ಇವೇ ಮುಂತಾದ ವ್ಯವಹಾರವನ್ನು ಕೇಳುತ್ತಿದ್ದೇವೆ. ಶ್ರೋತ್ರೇನ್ದ್ರಿಯವು ಆ ಆ ಧ್ವನಿಯುಂಟಾಗುವ ಜಾಗಕ್ಕೆ ಹೋಗಿ ಆ ಆ ಶಬ್ದವನ್ನು ಗ್ರಹಿಸುತ್ತದೆ—ಶಬ್ದಗ್ರಾಹಕವೆಂದರ್ಥ.

**ಆಗತಾದೂರತಃ ಶಬ್ದಮಾಲಾ ಶ್ರೋತ್ರೇಣ ಗೃಹ್ಯತೇ ।**
**ಸಮವಾಯಾದ್ಯದಿತದ್ವೈವಂ ನಗೃಹ್ಯೇತ ದೂರಜಾ ॥**

ಆಕಾಶದಲ್ಲಿ ಸಮವೇತವಾದ—ಕಲೆತಿರುವ ಶಬ್ದಪರಂಪರೆಯೇ ದೂರದಿಂದ ಬಂದು ಕಿವಿಯಿಂದ ಗ್ರಹಿಸಲ್ಪಡುತ್ತದೆ ಎಂದರೆ ಆವಾಗ ಇದು ದೂರದಲ್ಲಿ ಕೇಳುವ ಶಬ್ದ, ಹತ್ತಿರದಲ್ಲೇ ಇದು ಕೇಳುತ್ತದೆ. ಇದು ಪೂರ್ವದಿಕ್ಕಿನಿಂದ ಕೇಳಿಬರುವ ಶಬ್ದ ಎಂಬುದಾಗಿ ಬೇರೆ ಬೇರೆಯಾಗಿ ಕೇಳದೇ ಇರಬೇಕಾಗುತ್ತದೆ ; ಏತಕ್ಕೆಂದರೆ ಕಿವಿಯ ಪ್ರದೇಶದಲ್ಲಿ ಇರುವ ಶಬ್ದಕ್ಕೇ ಗ್ರಹಣವಾಗುವುದರಿಂದ.

---

1. ಉಚ್ಚಾರಣೆ ಮಾಡುವವನ ದವಡೆ, ನಾಲಿಗೆ, ತುಟಿ ಇವೇ ಮೊದಲಾದ ವ್ಯಾಪಾರಗಳಿಗೂ ಉಪಲಕ್ಷಣ.

2. ಭೂಮಿ, ನಗಾರಿ, ಸಮುದ್ರ, ಇವುಗಳಲ್ಲಿ ಉಂಟಾಗುವ ಶಬ್ದ. ಭೂಮಿಯು ಗುಡುಗುತ್ತದೆ, ನಗಾರಿಯು ಹೊಡೆಯಿತು, ಸಮುದ್ರವು ಭೋರ್ಗರೆಯುತ್ತದೆ, ಬೆಂಕಿಯು ಛಟಪಟಿಸುತ್ತದೆ, ಇವೇ ಮುಂತಾದುವು.

ಶಬ್ದಮಾನ್ದ್ಯಾದಿಭಿ ದೂರೋತ್ಥತ್ವಾದಿ ಗ್ರಹಸಂಭವೇ ।
ಅಪಿಪ್ರಾಚ್ಯಾಂ ಪ್ರತೀಚ್ಯಾ ಇತ್ಯೇವಂ ನ ಗ್ರಹಸಂಭವಃ ॥ ಇತಿ

ಈ ಶಬ್ದವು ದೂರದಲ್ಲಿ ಉಂಟಾಗುವ ಶಬ್ದಪರಂಪರೆಯಿಂದ ಉಂಟಾದುದು ಮಂದಶಬ್ದವಾಗಿರೋಣದರಿಂದ, ಅಂದರೆ ಮೆಲ್ಲಗೆ ಕೇಳಿಸುವ ಶಬ್ದವಾಗಿರೋಣದ ರಿಂದ ಎಂಬುದಾಗಿ ಹೇಳಿದರೆ ಪ್ರಾಯಿಕವಾಗಿ ದೂರದಿಂದ ಕೇಳಿಸುವ ಶಬ್ದಕ್ಕೆ ಸಜಾತೀಯವಾಗಿದ್ದು ಗ್ರಹಿಸಲ್ಪಟ್ಟರೂ, ಇದು ಪೂರ್ವದಿಕ್ಕಿನಿಂದ ಬರುವ ಧ್ವನಿ ಇದ್ದು ಪಶ್ಚಿಮದ್ದು ಎಂಬ ಆ ಆ ಕಡೆಯಿಂದ ಬಂದದ್ದಾಗಿ ತಿಳಿಯಲು ಆಗು ವುದಿಲ್ಲ.

'ಇದು ಪೂರ್ವದ ಕಡೆಯ ಶಬ್ದ ಪರಂಪರೆಯಿಂದ ಉಂಟಾದುದು' ಎಂದು ಹಿಂದಿನ ಅನುಭವದಿಂದ ಊಹಿಸಿ ಒಬ್ಬನು ಹೇಳುತ್ತಾನೆಂದು ತಿಳಿಯೋಣ. ಆವಾಗ ಪೂರ್ವದ ಕಡೆಯದು ಎಂಬುದು ಸುಲಭವಾಗಿ ಗೊತ್ತಾಗುತ್ತದಲ್ಲಾ ಅಂದರೆ, ಆವಾಗ ಅದು 'ಪೂರ್ವದ ಕಡೆಯ ಶಬ್ದ ಸಂತಾನದಿಂದ ಹುಟ್ಟಿದುದು' ಈ ರೀತಿ ಪ್ರತೀತಿಯು ಉಂಟಾಗುತ್ತದೆಯೇ ಹೊರತು ಪೂರ್ವದ ಕಡೆಯ ಶಬ್ದ ಎಂಬ ಪ್ರತೀತಿಯು ಬರುವುದಿಲ್ಲ ಎಂಬ ಅಭಿಪ್ರಾಯ.

ಆ ಈ ಶಬ್ದವು ಆಕಾಶದೊಡನೆ ಹುಟ್ಟುತ್ತದೆ, ಅದು ನಷ್ಟವಾದರೆ ಇದೂ ನಷ್ಟವಾಗುತ್ತದೆ. ಇದಕ್ಕೆ ಬೇರೆ ಭೂತಗಳೊಡನೆಯೂ ಉತ್ಪತ್ತಿ ವಿನಾಶಗಳು ಏಕೆ ಉಂಟಾಗುವುದಿಲ್ಲ ಎಂದರೆ ವಾಯ್ವಾದಿಗಳೂ ಕೂಡ ಆಕಾಶದ ಭಾಗವಾಗಿ ರೋಣದರಿಂದ ಅಂದರೆ ಆಕಾಶ ಕಾರ್ಯವಾಗಿರೋಣದರಿಂದ ಭೂತಾನ್ತರಗಳೊಡನೆ ಉತ್ಪತ್ತಿ ವಿನಾಶಗಳು ಇದಕ್ಕೆ ಇಲ್ಲ.

ಆಕಾಶ ಹುಟ್ಟುವ ವೇಳೆಯಲ್ಲಿ ಹುಟ್ಟುವ ಶಬ್ದಕ್ಕೆ ಆಕಾಶದ ಕಾರ್ಯ ಕೋಟಿಯಲ್ಲಿ ಸೇರಿರುವ ಭೂತಚತುಷ್ಟಯದ ಉತ್ಪತ್ತಿಗೆ ಸಮವಾದ ಸಮಯದಲ್ಲಿ ಉತ್ಪತ್ತಿಯಾಗುವಿಕೆ ಕೂಡುವುದಿಲ್ಲ ಎಂದು ಅಭಿಪ್ರಾಯ.

ಈವಾಗ ತನಗೆ ಇಷ್ಟವಾದ ಪಞ್ಚಭೂತಗಳಲ್ಲಿ ಇರುವಿಕೆಯ ಪಕ್ಷವನ್ನು ಕುರಿತು ಸಮಾಧಾನವನ್ನು ಹೇಳುತ್ತಾರೆ ಆಚಾರ್ಯರು.

ಆಕಾಶ ನಿಷ್ಠವಾದ ಶಬ್ದಕ್ಕೆ ಆಕಾಶದೊಡನೆ ಉತ್ಪತ್ತಿ ಅದರೊಡನೆಯೇ ನಾಶ ವಾಯು ಮುಂತಾದವುಗಳ ನಿಷ್ಠವಾದ—ಇರುವ ಶಬ್ದಕ್ಕೆ ಆ ಆ ಭೂತಗಳೊಡನೆ ಉತ್ಪತ್ತಿ ಹಾಗೆಯೇ ಅವುಗಳೊಡನೆಯೇ ನಾಶ, ಹಾಗಾದರೆ—

ಕಲ್ಪದ ಕೊನೆಯವರೆಗೂ ಇರುವ ಆಕಾಶದೊಡನೆ ವರ್ಣಗಳಿಗೆ ಉತ್ಪತ್ತಿ ಆದರೊಡನೆ ನಾಶ ಎಂದು ಹೇಳುವುದು ಹೊಂದುವುದಿಲ್ಲ ; "ಈವಾಗ ಗಕಾರವು ಹುಟ್ಟಿತು, ಈವಾಗ ನಷ್ಟವಾಯಿತು" ಎಂಬುದಾಗಿ ಲೋಕದಲ್ಲಿ ಪ್ರತೀತಿ ಇರುವು ದರಿಂದ. ಆದರೆ ಹಿಂದೆ ಹುಟ್ಟಿದ ಗಕಾರವೇ ಇದು, ಅದರಂತೆ ಇರೋಣದರಿಂದ; ಎಂಬ ಪ್ರತ್ಯಭಿಜ್ಞೆಯ ಬಲದಿಂದ ಉತ್ಪತ್ತಿ ವಿನಾಶ ಪ್ರತೀತಿ ಉಂಟಾಗಬಹುದಲ್ಲಾ ಎಂದರೆ, ಪ್ರತ್ಯಭಿಜ್ಞೆಯು ಹಿಂದೆ ಹುಟ್ಟಿದ ಗಕಾರ ಜಾತಿ ಪಕಾರ ಜಾತಿಗೆ ಸಮಾನ ವಾಗಿರೋಣದರಿಂದ ಈಗ ಹುಟ್ಟಿದ ಗಕಾರ ಪಕಾರಗಳು ಒಂದೇ ಆಗಿ ಅದೇ ಇದು ಎಂಬ ಜ್ಞಾನವನ್ನು ಉಂಟುಮಾಡುತ್ತದೆ. ಆ ಶಬ್ದಗಳು ಗಟ್ಟಿಯಾದ ಅಥವಾ ಕಡಿಮೆಯಾದ ಧ್ವನಿಯುಳ್ಳವು ಎಂಬುದು ಆದರಿಂದಬಾರದು ಎಂಬ ಆಕ್ಷೇಪವುಂಟಾ ದರೆ ಆಕಾಶ ನಿಷ್ಠವಾದ ಶಬ್ದಕ್ಕೆ ಆಕಾಶದೊಡನೆ ಉತ್ಪತ್ತಿವಿನಾಶ, ವಾಯ್ವಾದಿ ನಿಷ್ಠವಾದ ಶಬ್ದಕ್ಕೆ ವಾಯ್ವಾದಿಗಳೊಡನೆ ಉತ್ಪತ್ತಿವಿನಾಶ, ತಾರತ್ವ–ಬಹಳ ತೀವ್ರ ವಾದ ಧರ್ಮದಿಂದ ಹುಟ್ಟಿದ ಶಬ್ದಗಳಿಗೆ ತೀವ್ರವಾಗಿ, ಗಟ್ಟಿಯಾಗಿ ಕೇಳುವಿಕೆ ಮಂದತ್ವ ಆದಿಲ್ಲದ್ದಕ್ಕೆ ಮೆತ್ತಗೆ ಕೇಳುವಿಕೆ ; ಹೀಗೆ ಆ ಆ ವಿರುದ್ಧ ಧರ್ಮಗಳಿಂದ ಹುಟ್ಟಿದ ಶಬ್ದ ಗಳಿಗೆ ಪ್ರತ್ಯಭಿಜ್ಞೆಯೂ ಹಾಗೆಯೇ ಉಂಟಾಗುವುದರಿಂದ ಸ್ಥಿರತ್ವವು ಎಂದು ಹೇಳುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ವಿರುದ್ಧ ಧರ್ಮಗಳು ವರ್ಣಾಭಿವ್ಯಂಜಕ ವಾದ ವಾಯುನಿಷ್ಠಗಳಾದುದರಿಂದಲೂ, ವರ್ಣನಿಷ್ಠದಲ್ಲಿ ವರ್ಣ ವಿಷಯದಲ್ಲಿ ಅಬಾಧಿತವಾದ ಅಭೇದ ಪ್ರತ್ಯಭಿಜ್ಞೆಯಿರುವುದರಿಂದಲೂ ವರ್ಣಗಳಿಗೆ ಪ್ರಳಯ ಪರ್ಯಂತವಾಗಿ ಸ್ಥಿರತ್ವವನ್ನು ಹೇಳಲು ಯಾವ ಅಡ್ಡಿಯೂ ಇಲ್ಲ.

**ವೇಣುರನ್ಧ್ರ ವಿಭೇದೇನ ಭೇದಃ ಷಡ್ಜಾದಿ ಸಂಜ್ಞಿತಃ ।**

**ಅಭೇದವ್ಯಾಪಿನೋ ವಾಯೋ ಸ್ತಥಾऽಸೌ ಪರಮಾತ್ಮನಃ ॥**

ತಾರತ್ವ ಮಂದತ್ವ ಮೊದಲಾದ ವಿರುದ್ಧಧರ್ಮಗಳು ವರ್ಣಾಭಿವ್ಯಂಜಕ ವಾದ ವಾಯುವಿನಲ್ಲೇ ಇರುವುವು. ಎಂಬುದರಲ್ಲಿ ಪ್ರಮಾಣವಾದುದು ಶ್ರೀಮತ್ಪರಾ ಶರರ ಈ ಸೂಕ್ತಿ. ಗಾಯಕರು ವೇಣುಗಾನವನ್ನು ಮಾಡುವ ಕಾಲದಲ್ಲಿ ಅವರ ಮುಖದಿಂದ ಹೊರಡುವ ವಾಯುವು ತನ್ನ ನೈಜವಾದ ವಾಯುತ್ವಾಕಾರವನ್ನು ಬಿಡದೆ ವೇಣುವಿನಲ್ಲಿ—ಕೊರಳಿನಲ್ಲಿ ಪ್ರವೇಶಿಸಿ ಆ ವೇಣುವಿನಲ್ಲಿರುವ ಅನೇಕ ರಂಧ್ರ ಗಳೊಡನೆ ಸಂಬಂಧವನ್ನು ಪಡೆಯುವುದು. ಆ ರಂಧ್ರಗಳಿಗೆ ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮ ಎಂಬ ಸಂಜ್ಞೆಗಳಿರುವುದರಿಂದ ವಾಯುವಿನ ಯಾವ ಯಾವ ಅಂಶಗಳು ಯಾವ ಯಾವ ರಂಧ್ರಗಳೊಡನೆ ಸಂಬಂಧ ವನ್ನು ಪಡೆವುವೋ ಆ ಆ ಅಂಶಗಳು ಆ ಆ ರಂಧ್ರಗಳ ಸಂಜ್ಞೆಗಳನ್ನು ಪಡೆವುವು. ಹೀಗೆ ಎಲ್ಲಾ ಅಂಶಗಳಿಗೂ ವಾಯುತ್ವವೆಂಬ ಸ್ವಾಭಾವಿಕಾಕಾರವು ತುಲ್ಯ ವಾಗಿಯೇ ಇದ್ದರೂ ಕೆಲವು ಅಂಶಗಳು ಷಡ್ಜವೆಂಬ ಸಂಜ್ಞೆಯನ್ನೂ, ಇನ್ನೂ ಕೆಲವು

ಅಂಶಗಳು ಇನ್ನೊಂದು ಸಂಜ್ಞೆಯನ್ನೂ, ಮತ್ತು ಕೆಲವು ಅಂಶಗಳು ಮತ್ತೊಂದು ಸಂಜ್ಞೆಯನ್ನೂ ಪಡೆಯುವುದಕ್ಕೆ ಆ ಆ ರಂಧ್ರ ವಿಶೇಷಗಳ ಸಂಬಂಧವೇ ಕಾರಣವಾಗಿರುವುದರಿಂದ ಷಡ್ಜತ್ವಾದಿ ಧರ್ಮಗಳು ಬೇರೆಬೇರೆ ವಾಯುಗಳಿಗೆ ಉಪಾಧಿಯಿಂದ ಬಂದವೇ ಹೊರತು ಸ್ವಾಭಾವಿಕಗಳಲ್ಲ.

ಅದರಂತೆ ದೇವ-ಮನುಷ್ಯ-ತಿರ್ಯಕ್-ಸ್ಥಾವರ ಎಂಬ ನಾಲ್ಕು ಬಗೆಯ ಶರೀರಗಳಲ್ಲಿ ಕರ್ಮಾನುಸಾರವಾಗಿ ಪ್ರವೇಶಿಸಿರುವ [1]ಜೀವವ್ಯಕ್ತಿಗಳಿಗೆ ಎಲ್ಲಾ ಶರೀರಗಳಲ್ಲಿಯೂ ಜ್ಞಾನೈಕಾಕಾರತ್ವವು ತುಲ್ಯವಾಗಿದ್ದರೂ ದೇವ ಮನುಷ್ಯ ಇತ್ಯಾದಿ ವ್ಯವಹಾರಕ್ಕೆ ಆ ಆ ಶರೀರಗಳ ಸಂಬಂಧವೇ ಕಾರಣವಾಗಿರುವುದರಿಂದ ದೇವತ್ವ ಮನುಷ್ಯತ್ವಾದಿ ಧರ್ಮಗಳು ಆತ್ಮನಿಗೆ ಶರೀರದ್ವಾರಕಗಳಾಗಿ ಔಪಾಧಿಕ ಧರ್ಮಗಳಾಗುವುವೇ ಹೊರತು ಸ್ವಾಭಾವಿಕಗಳಲ್ಲ ಎಂಬುದು ಶ್ಲೋಕಾರ್ಥ.

ಆದಕಾರಣ ತಾರತ್ವ-ಮಂದತ್ವ ಮೊದಲಾದ ವಿರುದ್ಧ ಧರ್ಮಗಳು ವರ್ಣಾಭಿ ವ್ಯಂಜಕ ವಾಯುಧರ್ಮಗಳೇ ಆದುದರಿಂದ ವರ್ಣವ್ಯಕ್ತಿಭೇದಕ್ಕೆ ಕಾರಣವಾದ ವಿರುದ್ಧ ಧರ್ಮಗಳು ವರ್ಣದಲ್ಲಿ ಇಲ್ಲವಾಗಿ ಯಾವ ತೊಂದರೆಯೂ ಇಲ್ಲದ ಪ್ರತ್ಯಭಿಜ್ಞಾ ಬಲದಿಂದ ವರ್ಣಗಳಿಗೆ ಕಲ್ಪದ ಕೊನೆಯವರೆಗೂ ಸ್ಥಿರವಾಗಿರುವಿಕೆಯನ್ನು ಒಪ್ಪುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ಆದುದರಿಂದಲೇ ಪ್ರಳಯ ಪರ್ಯಂತವೂ ಸ್ಥಾಯಿಯಾಗಿ ನಿಂತಿರುವ ಗಕಾರ ವ್ಯಕ್ತಿಗೆ ಎಷ್ಟೋಸಲ ಉಚ್ಚಾರಣೆಯಾದರೂ ಉಚ್ಚಾರಣ ಭೇದವೇ ಇರುವುದಲ್ಲದೆ ಗಕಾರ ವ್ಯಕ್ತಿ ಭೇದವಿಲ್ಲ. ಒಂದೇ ಗಕಾರ ವ್ಯಕ್ತಿ ಅಲ್ಲಿಯವರೆಗೂ ಮತ್ತೆಮತ್ತೆ ಉಚ್ಚಾರಣೆಗೆ ವಿಷಯವಾಗುವುದು ; ಇತರ ವರ್ಣಗಳಿಗೂ ಸ್ಥಾಯಿತ್ವವನ್ನೂ ಏಕತ್ವವನ್ನೂ ತಿಳಿಯಬೇಕು.

ತಾರತ್ವ ಮಂದತ್ವ ಮೊದಲಾದ ವಿರುದ್ಧ ಧರ್ಮಗಳು ವರ್ಣಧರ್ಮಗಳಲ್ಲವೆಂದು ಹೇಳುವುದಾದರೆ, ಯತ್ತು 'ಶ್ರೋತ್ರಮಪಿ ಇತರೇನ್ದ್ರಿಯವತ್ ಶಬ್ದತ್ವ-ಗತ್ವ - ಮೃದುತ್ವ - ಪುರುಷತ್ವ-ಮನ್ದತ್ವ-ಮಧ್ಯಮತ್ವಾದ್ಯನನ್ತವಿಶೇಷಗ್ರಾಹಕಮ್' ಎಂಬ ಶ್ರೀ ವಿಷ್ಣುಚಿತ್ತರು ಹೇಳಿರುವ ಮಾತಿಗೆ ವಿರೋಧವಾಗುತ್ತದಲ್ಲವೇ ?

---

1. ವೇಣುರನ್ಧ್ರ ಎಂಬ ಈ ಶ್ಲೋಕದಲ್ಲಿ ಪರಮಾತ್ಮ ಎಂಬುದಕ್ಕೆ ಜೀವಾತ್ಮನೆಂದು ಅರ್ಥ. "ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ಪುರುಷಃ ಪರಃ" ಇವೇ ಮುಂತಾದವಲ್ಲಿ ಪ್ರಯೋಗವಿರುವುದರಿಂದ ಇಲ್ಲಿಯೂ ಪರಮಾತ್ಮ ಎಂದು ಹೇಳಿದ್ದಾರೆ.

ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ಪುರುಷಃ ಪರಃ ।
ಯ ಏವಂ ವೇತ್ತಿ ಪುರುಷಂ ಪ್ರಕೃತಿಞ್ಚ ಗುಣೈಃ ಸಹ ॥
ತೈರೇವ ವಿಗತಃ ಶುದ್ಧಃ ಪರಮಾತ್ಮಾ ನಿಗದ್ಯತೇ ॥

ಎಂಬುದಾಗಿ ಅಭಿಯುಕ್ತರ ಪ್ರಯೋಗ ಇದಕ್ಕೆ ಮೂಲ.

ಅಂದರೆ, ಅವರ ಸೂಕ್ತಿಯಲ್ಲಿ ಚಕ್ಷುಸ್ಸೇ ಮೊದಲಾದ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಾದ ರೂಪಾದಿಗಳನ್ನು ಗ್ರಹಿಸುವಾಗ ಶುಕ್ಲತ್ವ ನೀಲತ್ವ ಮೊದಲಾದ ಅನೇಕ ಧರ್ಮವಿಶೇಷಗಳೊಡನೆ ಕೂಡಿಯೇ ಇರುವ ರೂಪಾದಿಗಳನ್ನು ಹೇಗೆ ಗ್ರಹಿಸುವುವೋ, ಹಾಗೆ ಶ್ರೋತ್ರೇನ್ದ್ರಿಯವೂ ತನ್ನ ವಿಷಯವಾದ ಶಬ್ದವನ್ನು ಗ್ರಹಿಸುವಾಗ ಶಬ್ದತ್ವ, ಗತ್ವ, ಮೃದುತ್ವ, ಪರುಷತ್ವ, ಮಂದತ್ವ, ಮಧ್ಯಮತ್ವ ಮೊದಲಾದ ಅನೇಕ ಧರ್ಮಗಳಿಂದ ಕೂಡಿಯೇ ಇರುವ ಶಬ್ದವನ್ನು ಗ್ರಹಿಸುವುದೇ ಅಲ್ಲದೆ ನಿರ್ವಿಶೇಷವಾದ (ಯಾವ ವಿಶೇಷವೂ ಇಲ್ಲದ) ಶಬ್ದ ಸ್ವರೂಪವನ್ನು ಗ್ರಹಿಸುವುದಿಲ್ಲ, ಎಂದು ಹೇಳಿರುವ ಕಾರಣ ಮೃದುತ್ವ, ಪರುಷತ್ವ ಮೊದಲಾದ ವಿರುದ್ಧ ಧರ್ಮಗಳು ಶಬ್ದಧರ್ಮಗಳೇ ಆಗಿರುವುವು ಎಂದು ಅವರ ಅಭಿಪ್ರಾಯವಲ್ಲವೇ ? ಎಂದರೆ ಅವರು ಆ ಅಭಿಪ್ರಾಯದಿಂದ ಹೇಳಲಿಲ್ಲ. ಮತ್ತೇನೆಂದರೆ—ಇಂದ್ರಿಯ ಜನ್ಯವಾದ ಪ್ರತ್ಯಕ್ಷ ಜ್ಞಾನವೂ ನಿರ್ವಿಶೇಷವಸ್ತುವನ್ನೇ ಗ್ರಹಿಸುವುದೆಂದೂ ಸವಿಶೇಷವಸ್ತುವನ್ನು ಗ್ರಹಿಸುವುದಿಲ್ಲವೆಂದೂ ಹೇಳುವ ನಿರ್ವಿಶೇಷವಸ್ತುವಾದಿಗಳನ್ನು ನಿರಾಕರಣ ಮಾಡುವುದಕ್ಕಾಗಿ ಹಾಗೆ ಹೇಳಿದರಲ್ಲದೆ, ವ್ಯಂಜಕವಾದ ವಾಯುಧರ್ಮಗಳನ್ನು ವ್ಯಂಗ್ಯವಾದ ಶಬ್ದದಲ್ಲಿ ಆರೋಪಿಸಿ ಹೇಳಿದ್ದಾರೆಂದು ತಿಳಿಯಬೇಕು. ಅಲ್ಲದೆ ಆ ಧರ್ಮಗಳು ಶಬ್ದಕ್ಕೆ ಸ್ವಭಾವಸಿದ್ಧಗಳೆಂಬುದರಲ್ಲಿ ಅವರಿಗೆ ಅಭಿಪ್ರಾಯವಲ್ಲ. ಮತ್ತೊಂದರ ಧರ್ಮವನ್ನು ಇನ್ನೊಂದರಲ್ಲಿ ಆರೋಪಿಸಿ ಗ್ರಹಿಸುವಾಗಲೂ ನಿರ್ವಿಶೇಷಗ್ರಹಣವಿಲ್ಲವೆಂದು ನಿರಾಕರಿಸಬಹುದಲ್ಲವೇ ?

ಉಪನಿಷತ್ತಿನ "ನಮಸ್ತೇವಾಯೋ—ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಎಂಬ ವಾಕ್ಯಗಳನ್ನು ವ್ಯಾಖ್ಯಾನ ಮಾಡುವಾಗ "ಎಲೈ ವಾಯುದೇವನೇ, ನಿನಗೆ ನಮಸ್ಕಾರ—ನೀನೇ ಪ್ರತ್ಯಕ್ಷ ಬ್ರಹ್ಮವಾಗಿರುವೆ" ಎಂದು ಹೇಳಿ ಪ್ರತ್ಯಕ್ಷಬ್ರಹ್ಮ ಶಬ್ದದಿಂದ ಹೇಳಲ್ಪಟ್ಟ ವೇದದ ಅಭೇದೋಪಚಾರದಿಂದ ವಾಯುವಿಗೆ ವ್ಯಂಜಕತ್ವವನ್ನೇ ಹೇಳಿದ್ದಾರೆಯೇ ಹೊರತು ಉತ್ಪಾದಕತ್ವವನ್ನು ಅಂದರೆ ·ಅದರಿಂದ ಹುಟ್ಟಿದೆಯೆಂಬ ಅಭಿಪ್ರಾಯವನ್ನು ಹೇಳಿಲ್ಲ—ವ್ಯಂಗ್ಯವ್ಯಂಜಕ ಭಾವವೇ ಹೊರತು ಜನ್ಯಜನಕಭಾವವಿಲ್ಲವೆಂದು ಭಾವ. ಅಂತೂ ವರ್ಣಕ್ಕೆ ನಿತ್ಯತ್ವವನ್ನು ಸೂಚಿಸಿರುವುದರಿಂದ ತಾರತಮ್ಯಾದಿ ಧರ್ಮಗಳು ಅದಕ್ಕೆ ಸಂಬಂಧಪಟ್ಟದ್ದಲ್ಲ, ವ್ಯಂಜಕವಾದ ವಾಯುವಿಗೆ ಸಂಬಂಧಪಟ್ಟದ್ದು ಎಂದು ತಿಳಿದಂತಾಯಿತು.

ಈ ರೀತಿ ವರ್ಣನಿತ್ಯತ್ವವನ್ನು ಉಪಪಾದನೆಮಾಡಿ, ವಾಯುವಿನ ಪರಿಣಾಮಭೂತವಾದದ್ದು ಶಬ್ದವು. ಆದುದರಿಂದ ಅದು ಬೇರೆ ದ್ರವ್ಯ ಎಂಬುದು ಒಬ್ಬರ ಪಕ್ಷ ಎಂಬುದನ್ನು ಹೇಳುತ್ತಾರೆ ಆಚಾರ್ಯರು.

ನಮಸ್ತೇವಾಯೋ—ತ್ವಮೇವಪ್ರತ್ಯಕ್ಷಂಬ್ರಹ್ಮಾಸಿ — ತ್ವಾಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ = ಎಲೌ ವಾಯುದೇವನೇ, ನಿನಗೆ ನಮಸ್ಕಾರ. ನೀನೇ ಕಣ್ಣಿಗೆ ಕಾಣುವ ಬ್ರಹ್ಮನಾಗಿದ್ದೀಯೇ—ಅಂತಹ ನಿನ್ನನ್ನೇ ಹೇಳುವೆನು ಎಂಬ ಶ್ರುತಿ ಯಲ್ಲಿ ವಾಯುವಿಗೆ ಶಬ್ದರೂಪತ್ವವು ಕಂಠೋಕ್ತವಾಗಿರುವುದರಿಂದಲೂ ವೇಣುರನ್ಧ್ರ, ಎಂಬ ವಿಷ್ಣುಪುರಾಣದ ಈ ಮಂತ್ರದ ಉಪಬ್ರಹ್ಮಣ ರೂಪ ವಾದ ಶ್ಲೋಕದಲ್ಲಿಯೂ ಕೂಡ ಷಡ್ಜವೇ ಮೊದಲಾದ ಸಂಜ್ಞೆಯಿಂದ ಹೇಳಲ್ಪಟ್ಟ ಶಬ್ದಧರ್ಮಕ್ಕೆ ವಾಯುನಿಷ್ಠವಾಗಿರುವಿಕೆಯು ಪ್ರಸಿದ್ಧವಾಗಿರೋಣ ದರಿಂದಲೂ, "ಧರ್ಮಿಕಲ್ಪನಾತೋ ವರಂ ಧರ್ಮಕಲ್ಪನಾ" = ಧರ್ಮ ವಿಶಿಷ್ಟವಾದ ಬೇರೆ ವಸ್ತುವನ್ನು ಕಲ್ಪಿಸುವುದಕ್ಕಿಂತ ಕ್ಲೃಪ್ತವಾಗಿರುವ ಧರ್ಮಿಯಲ್ಲಿ ಧರ್ಮವನ್ನು ಕಲ್ಪಿ ಸುವುದೇ ಒಳ್ಳೆಯದು ಎಂದು ನ್ಯಾಯವೇದಿಗಳಾದ ಮೀಮಾಂಸಕರು ಹೇಳುವಂತೆ ಶಬ್ದತ್ವವೆಂಬ ಧರ್ಮದೊಡನೆ ಕೂಡಿದ ಶಬ್ದವೆಂಬ ಬೇರೆ ಧರ್ಮಿಯನ್ನು ಕಲ್ಪಿಸುವುದ ಕ್ಕಿಂತಲೂ ಕ್ಲೃಪ್ತವಾದ ವಾಯುದ್ರವ್ಯದಲ್ಲೇ ಶಬ್ದತ್ವವೆಂಬ ಧರ್ಮಮಾತ್ರವನ್ನು ಕಲ್ಪಿಸುವುದೇ ಉತ್ತಮವಾಗಿರುವುದು. "ವಾಯುರಾಪದ್ಯತೇ ಶಬ್ದತಾಂ" ಎಂದು ಹೇಳುವ ಶಿಕ್ಷಾಕಾರರಿಗೂ ಇದು ಅಭಿಮತವಾಗಿರುವುದು.

ಅದ್ರವ್ಯರೂಪವಾದ ಇಂತಹ ಶಬ್ದಕ್ಕೆ ದ್ರವ್ಯತ್ವವನ್ನು ಹೇಳುವುದೇ ಸರಿ ಯಾದದ್ದು. ಪ್ರಾಣಿಗಳ ನಾಭಿಪ್ರದೇಶದಿಂದ ಮೇಲಿನ ಮುಖವಾಗಿ ಹೊರಟಿರುವ ವಾಯುವಿಗೆ ಕಂಠ, ತಾಲು ಮೊದಲಾದ ಪ್ರದೇಶಗಳಲ್ಲಿ ಸಂಘಟ್ಟನೆ ಆದರೆ ಆಗ ಆ ವಾಯುವು ಆ ಆ ಶಬ್ದಗಳ ಆಕಾರವಾಗಿ ಪರಿಣಮಿಸುವುದಷ್ಟೆ. ಆದುದರಿಂದ ತಾರತ್ವಾದಿವಿಶಿಷ್ಟ ಶಬ್ದವೂ ಕೂಡ ವಾಯುಪರಿಣಾಮಭೂತವಾದ ದ್ರವ್ಯಾಂತರ, ಎಂಬುದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ತಾಲ್ವಾದಿವ್ಯಾಪಾರದಿಂದ ವಾಯುವಿನಲ್ಲೇ ಶಬ್ದರೂಪ ಗುಣವು ಹುಟ್ಟುತ್ತದೆ ಎಂದೂ ಹೇಳುತ್ತಾರೆ.

ಈ ಅದ್ರವ್ಯ ಪರಿಚ್ಛೇದದಲ್ಲಿ ಇದುವರೆಗೂ ಹೇಳಿದುದನ್ನು ವಿಚಾರ ಮಾಡಿ ನೋಡಿದರೆ,

೧. ಆಕಾಶವೆಂಬ ಒಂದೇ ಭೂತವು ಶಬ್ದಕ್ಕೆ ಆಶ್ರಯವಾಗಿರುವುದು.

೨. ಪಂಚಭೂತಗಳೂ ಶಬ್ದಕ್ಕೆ ಆಶ್ರಯಗಳು.

೩. ಶಬ್ದವು ವಾಯುವಿನ ಪರಿಣಾಮರೂಪವಾದ ಸ್ವತಂತ್ರದ್ರವ್ಯ.

೪. ತಾಲ್ವಾದಿವ್ಯಾಪಾರದಿಂದ ವಾಯುವಿನಲ್ಲೇ ಶಬ್ದರೂಪ ಗುಣವು ಹುಟ್ಟುತ್ತದೆ.

ಇಂತಹ ಪಕ್ಷಗಳು ಒಂದೊಂದಕ್ಕೂ ವಿರೋಧವಿರುವುದರಿಂದ ಯಾವ ಪಕ್ಷವೂ ಸ್ಥಿರವಾಗಿ ನಿಲ್ಲುವುದಿಲ್ಲ. ನಮ್ಮ ವೇದಾಂತ ಸಿದ್ಧಾಂತವೇ ಬೇರೆಯಾಗಿದೆ—ಇಲ್ಲಿ ಆಚಾರ್ಯರ ಪಙ್ಕ್ತಿಯನ್ನೇ ಬರೆದು ವಿವರಿಸೋಣ.

**ಸಂಗ್ರಹಸ್ತು—ಅವ್ಯಕ್ತ ಪರಿಣಾಮ ವಿಶೇಷ ಶರೀರಕ ಪರಮಾತ್ಮೋಪಾದಾನಕಾಃ ಸರ್ವೇಶಬ್ದಾಃ। ನಪುನಃಪೃಥಗ್ದ್ರವ್ಯತಯಾ ಗುಣತಯಾವಾ ಭಟ್ಟಪ್ರಾಭಾಕರಮತವತ್ ನಿತ್ಯಾಃ, ನಚಅನುಪಾದಾನಕಾಃ।** ಎಂಬುದು ಮೂಲ ಪಙ್ಕ್ತಿ.

**ಇದರ ಸಾರವಾದ ಅರ್ಥ:—**ಅವ್ಯಕ್ತವೆಂಬ ತ್ರಿಗುಣದ್ರವ್ಯದ ಪರಿಣಾಮ ವಿಶೇಷವನ್ನು ಶರೀರವಾಗಿ ಉಳ್ಳ ಪರಮಾತ್ಮನನ್ನೇ ಉಪಾದಾನಕಾರಣವಾಗಿ ಮಾಡಿಕೊಂಡು ಎಲ್ಲಾ ಶಬ್ದಗಳೂ ಹುಟ್ಟುವವು; ಎಂಬುದು ನಮ್ಮ ವೇದಾಂತ ಸಿದ್ಧಾಂತ. ಅಂತಹ ತ್ರಿಗುಣದ್ರವ್ಯದ ಪರಿಣಾಮ ವಿಶೇಷವು ವಾಯುವಾಗಿದ್ದರೂ ಸರಿ ; ಆಕಾಶವಾಗಿದ್ದರೂ ಸರಿ ; ಪಂಚಭೂತಗಳಾಗಿದ್ದರೂ ಸರಿ ; ಶಬ್ದಕ್ಕೆ ಉಪಾದಾನ ಕಾರಣ ಭೂತನಾದ ಪರಮಾತ್ಮನು ಅವುಗಳೆಲ್ಲದರಲ್ಲಿಯೂ ಶರೀರಿಯಾಗಿ ವ್ಯಾಪಿಸಿರುವನು. ಆದುದರಿಂದ ನಮ್ಮ ಸಿದ್ಧಾಂತ ಮುಖ್ಯಾರ್ಥಕ್ಕೆ ಈ ನಾಲ್ಕು ಮತಗಳಲ್ಲಿಯೂ ವಿರೋಧವಿಲ್ಲ.

ಆದರೆ ಮೀಮಾಂಸಕರು ಹೇಳುವ ಸ್ವತಂತ್ರದ್ರವ್ಯತ್ವವೂ ನಿತ್ಯತ್ವವೂ ನಮ್ಮ ಸಿದ್ಧಾಂತಕ್ಕೆ ವಿರುದ್ಧಗಳಾದುದರಿಂದ ಅವನ್ನು ನಾವು ಒಪ್ಪುವುದಿಲ್ಲ. ಸ್ವತಂತ್ರದ್ರವ್ಯವಾಗಿರುವಿಕೆಯಿಂದಲೋ ಗುಣವಾಗಿರೋಣದರಿಂದಲೋ ನಿತ್ಯಗಳಲ್ಲ. ಉಪಾದಾನವಿಲ್ಲದವೂ ಅಲ್ಲ.

## ಸ್ಫೋಟವಾದ ವಿಮರ್ಶೆ

ಇದನ್ನು ಈ ಗ್ರಂಥದ ಮೊದಲನೆಯ ಭಾಗದಲ್ಲಿರುವ ವೈಯಾಕರಣ ಮತದ ವಿಮರ್ಶೆಯ ಸಂದರ್ಭದಲ್ಲಿ ಸ್ವಲ್ಪ ತಿಳಿದಿದ್ದರೂ ಪ್ರಕೃತದಲ್ಲಿ ಇದರ ವಿಷಯವಾಗಿ ಹೆಚ್ಚಾಗಿ ತಿಳಿಯೋಣ.

ತ್ರಿಗುಣದ್ರವ್ಯದ ಪರಿಣಾಮ ವಿಶೇಷಗಳನ್ನು ಶರೀರಗಳಾಗಿ ಪಡೆದಿರುವ ಪರಮಾತ್ಮನೇ ವರ್ಣಗಳಿಗೆ ಉಪಾದಾನ ಕಾರಣ ಎನ್ನುವುದು ಸರಿಯಲ್ಲ. ಏತಕ್ಕೆಂದರೆ—

**ಅನಾದಿನಿಧನಂ ಬ್ರಹ್ಮ ಶಬ್ದತತ್ತ್ವಂಯದಕ್ಷರಮ್ ।**
**ವಿವರ್ತತೇಽರ್ಥಭಾವೇನ ಪ್ರಕ್ರಿಯಾ ಜಗತೋಯತಃ ॥**

ಉತ್ಪತ್ತಿಯು ವಿನಾಶವಿಲ್ಲದೆಯೂ, ಆದುದರಿಂದಲೇ ನಿತ್ಯವಾಗಿಯೂ, ನಿರವಯವವಾಗಿಯೂ ಸಕಲಜಗತ್ತಿಗೂ ಆದಿಕಾರಣ ಭೂತವಾಗಿಯೂ ಇರುವ ಸ್ಫೋಟವೆಂಬ ಶಬ್ದಬ್ರಹ್ಮವು ಯಾವುದುಂಟೋ ಅದೇ ಪ್ರಪಂಚದಲ್ಲಿರುವ ಪದಾರ್ಥ ರೂಪವಾಗಿ [1]ವಿವರ್ತವೆಂಬ ರೂಪಾಂತರವನ್ನು ಪಡೆಯುತ್ತದೆ. ಅದರಿಂದಲೇ ಜಗತ್ತಿನ ಎಲ್ಲಾ ವ್ಯವಹಾರವೂ ನಡೆಯುತ್ತಿದೆ ಎಂದು ವೈಯಾಕರಣರು ಹೇಳುವರು; ಪ್ರಪಂಚಾಕಾರವಾದ ವಿವರ್ತಕ್ಕೆ ಅಧಿಷ್ಠಾನವಾದ ಸ್ಫೋಟವೆಂಬ ಶಬ್ದಬ್ರಹ್ಮ ಎಲ್ಲಕ್ಕೂ ಕಾರಣವಾಗಿರುವಾಗ ಪರಮಾತ್ಮನು ವರ್ಣಗಳಿಗೆ ಹೇಗೆ ಉಪಾದಾನ ಕಾರಣನಾಗುವನು ? ಆದುದರಿಂದ ವರ್ಣಗಳಿಗೆ ಸ್ಫೋಟವೇ ಉಪಾದಾನ.

**ಅಕುಹವಿಸರ್ಜನೀಯಾನಾಂಕಂಠಃ**—ಅಕಾರ ಕವರ್ಗ ವಿಸರ್ಗ ಈ ವರ್ಣಗಳು ಕಂಠದಲ್ಲಿ ಹುಟ್ಟುತ್ತವೆ. ಇ ಚು ಯ ಶಾ ನಾಂ ತಾಲು–ಇಕಾರ ಚವರ್ಗ ಯ, ಶ ಈ ವರ್ಣಗಳು ತಾಲುಸ್ಥಾನದಲ್ಲಿ ಹುಟ್ಟುತ್ತವೆ. ಋ ಟು ರ ಷಾ ಣಾಂ ಮೂರ್ಧಾ–ಋಕಾರ ಟವರ್ಗ ರೇಫ ಷಕಾರಗಳು ಮೂರ್ಧಸ್ಥಾನದಲ್ಲಿ (ತಲೆಯಲ್ಲಿ) ಹುಟ್ಟುತ್ತವೆ ಎಂಬುದಾಗಿ ಹೇಳಿರುವುದರಿಂದ ಅಕಾರಾದಿವರ್ಣಗಳು ಕಂಠ್ಯ, ತಾಲವ್ಯ, ಮೂರ್ಧನ್ಯಗಳೆಂದು ಪ್ರಸಿದ್ಧಗಳಾಗಿರುವುದರಿಂದ ಕಂಠಾದಿಗಳೇ ಉಪಾದಾನ. ಎಂಬುದಾಗಿ ಯಾರು ತಿಳಿಯುತ್ತಾರೋ ಅವರ ಮತವು ಸರಿಯಾದುದಲ್ಲ. ಏಕೆಂದರೆ, "**ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ**—ಎಲೌ ವಾಯುವೇ ! ನಿನಗೆ ನಮಸ್ಕಾರ; ನೀನೇ ಪ್ರತ್ಯಕ್ಷವಾದ ಬ್ರಹ್ಮವಾಗಿರುವೆ" ಇವೇ ಮೊದಲಾದ ಶ್ರುತಿಗಳು ವಾಯುವೇ ಮೊದಲಾದವನ್ನು ಉಪಾದಾನವನ್ನಾಗಿ ಹೇಳುತ್ತವೆ. ಆದುದರಿಂದ ಪ್ರತ್ಯಕ್ಷವಾದ ಶ್ರುತಿಗೆ ವಿರುದ್ಧವಾಯಿತೆಂದು ಅಭಿಪ್ರಾಯ, ಮತ್ತು ಉಪಲಬ್ಧಿಗೆ ಅಂದರೆ ಸಾಕ್ಷಾತ್ಕರಿಸುವುದಕ್ಕೆ ಯೋಗ್ಯವಾದುದು ಉಪಲಬ್ಧವಾಗದಿದ್ದರೆ ಆಗ ಯೋಗ್ಯಾನುಪಲಬ್ಧಿ ಇರುವುದೆಂದು ಶಾಸ್ತ್ರಕಾರರು ವ್ಯವಹರಿಸುವರು.

ಸ್ಫೋಟವೆಂಬ ಶಬ್ದಬ್ರಹ್ಮವೆಂಬುದೊಂದು ಪದಾರ್ಥವು ಇರುವುದಾದರೆ ಅದು ಶ್ರೋತ್ರೇಂದ್ರಿಯದಿಂದ ಗ್ರಹಿಸಲ್ಪಡುವುದಕ್ಕೆಯೋಗ್ಯವಾಗಿಯೇ ಇರುವುದು. ಆ ರೀತಿಯಾದದ್ದು ಶ್ರೋತ್ರೇಂದ್ರಿಯಕ್ಕೆ ಗೋಚರವಾಗಿಯೇ ಆಗಬೇಕು. ಹಾಗೆ

---

1. ವಿವರ್ತವೆಂದರೆ–ಸ್ವಾಭಾವಿಕವಾದ ಅಸಾಧಾರಣ ರೂಪಕ್ಕೆ ವಿರೋಧವು ಬಾರದಂತೆ ಮಿಥ್ಯಾಭೂತವಾದ ರೂಪಾಂತರದ ಭ್ರಮಕ್ಕೆ ಅಧಿಷ್ಠಾನವಾಗಿರುವಿಕೆ, ಹೇಗೆಂದರೆ— ಹಗ್ಗವನ್ನು ನೋಡಿ ಸರ್ಪವೆಂದು ಒಬ್ಬನು ಭ್ರಾಂತಿಗೊಳ್ಳುತ್ತಾನೆಂದು ಭಾವಿಸೋಣ. ಈರೀತಿಯಾದ ಭ್ರಮಕ್ಕೆ ಅಧಿಷ್ಠಾನವಾಗಿದೆ–ಸ್ಥಾನವಾಗಿದೆ ಹಗ್ಗ (ರಜ್ಜು). ಈ ಹಗ್ಗ-ರಜ್ಜು ತನ್ನ ರಜ್ಜುತ್ವಕ್ಕೆ ಸ್ವಾಭಾವಿಕ ರೂಪಕ್ಕೆ ವಿರೋಧವಿಲ್ಲದೆಯೇ ಆಶ್ರಯವಾಗಿರುವುದು ಪಾರಮಾರ್ಥಿಕವಾದ ರೂಪಾಂತರಕ್ಕೆ ಆಶ್ರಯವಾಗುವುದಾದರಲ್ಲವೇ ಸ್ವಾಭಾವಿಕ ರೂಪಕ್ಕೆ ವಿರೋಧವುಂಟಾದೀತು.

ಇದುವರೆಗೂ ಯಾರಿಗೂ ಅದು ಶ್ರೋತ್ರೇಂದ್ರಿಯಕ್ಕೆ ಪ್ರತ್ಯಕ್ಷವಾಗಿಲ್ಲ. ಪ್ರತ್ಯಕ್ಷಕ್ಕೆ ಯೋಗ್ಯವಾದುದು ಪ್ರತ್ಯಕ್ಷವಾಗದಿದ್ದರೆ ಅಂತಹವಸ್ತುವು ಇಲ್ಲವೇ ಇಲ್ಲವೆಂದಲ್ಲವೇ ಹೇಳಬೇಕಾಗುತ್ತದೆ. ಆದುದರಿಂದ ಆಗಮವಿರುದ್ಧವಲ್ಲ ; ಪ್ರತ್ಯಕ್ಷಕ್ಕೂ ವಿರುದ್ಧ. ಅಲ್ಲದೆ ಕಂಠ, ತಾಲು ಮುಂತಾದ ಅವಯವಗಳು ವರ್ಣೋಚ್ಚಾರಣೆಗೆ ಸಾಧನಗಳಾಗಿವೆ. ಅವು ಆ ಆ ವರ್ಣಗಳ ಅಭಿವ್ಯಕ್ತಿಗೆ ನಿಮಿತ್ತ ಕಾರಣವಾಗಬಹುದಲ್ಲದೆ ಉಪಾದಾನ ಕಾರಣವಾಗಲಾರವು.

ಕೇವಲ ವಿರುದ್ಧ ಮಾತ್ರವಲ್ಲ, ಸ್ಫೋಟವೆಂಬುದನ್ನು ಸಾಧನೆಮಾಡಿಕೊಡುವ ಸಾಧಕ ಪ್ರಮಾಣವೂ ಇಲ್ಲ ; ನಮ್ಮಂತಹವರ ಪ್ರತ್ಯಕ್ಷವೂ ಸ್ಫೋಟವೆಂಬ ಪದಾರ್ಥದ ವಿಷಯದಲ್ಲಿ ಪ್ರಮಾಣವಾಗಲಾರದು. "ಗೌಃ ಎಂಬುದು ಒಂದು ಪದವಾಗಿರುವುದು" ಎಂದು ನಮಗೆ ಉಂಟಾಗುವ ಪ್ರತ್ಯಕ್ಷವು ಗಕಾರ, ಔಕಾರ, ವಿಸರ್ಗ, ಈ ವರ್ಣಗಳ ಸಮುದಾಯವನ್ನೇ ಗ್ರಹಿಸುತ್ತದೆ. ಇಷ್ಟರಿಂದಲೇ ನಮಗೆ **ಗೌಃ**=ಹಸು ಎಂದು ಅರ್ಥವಾಗುತ್ತದೆ. ಈ ಸಮುದಾಯಕ್ಕಿಂತಲೂ ಬೇರೆಯಾದ ಸ್ಫೋಟವೆಂಬುದನ್ನು ಪ್ರತ್ಯಕ್ಷವು ತೋರಿಸುವುದಿಲ್ಲ.

ಗಕಾರ, ಔಕಾರ, ವಿಸರ್ಗಗಳು ಒಂದಾದಮೇಲೆ ಮತ್ತೊಂದು ಕ್ರಮವಾಗಿ ಇರುವಾಗ, ಗಕಾರವನ್ನು ಉಚ್ಚಾರಣೆಮಾಡಿ ಔಕಾರವನ್ನು ಉಚ್ಚರಿಸುವ ವೇಳೆಗೆ ಗಕಾರವು ನಷ್ಟವಾಯಿತಲ್ಲ. ಹೀಗೆ ಒಂದರಕಾಲದಲ್ಲಿ ಮತ್ತೊಂದು ಇಲ್ಲವಾದುದರಿಂದ ಇವುಗಳಿಗೆ ಸಮುದಾಯತ್ವವು ಹೇಗೆ ಉಂಟಾಗುತ್ತದೆ ? ಎಂದರೆ ಏಕಾರ್ಥ ಬೋಧಕತ್ವ ಒಂದೇ ಅರ್ಥವನ್ನು ತಿಳಿಸಿಕೊಡುವಿಕೆ ಎಂಬ ಏಕೋಪಾಧಿಯಿಂದ ಒಟ್ಟಾಗಿ ಸೇರಿಸಲ್ಪಟ್ಟ ಇವುಗಳಿಗೆ ಸಮುದಾಯತ್ವವು ಉಂಟಾಗಬಹುದಲ್ಲ. ಆದುದರಿಂದ ಅಸ್ಮದಾದಿ ಪ್ರತ್ಯಕ್ಷದಿಂದ ಸ್ಫೋಟಪದಾರ್ಥವು ಸಿದ್ಧವಾಗುವುದಿಲ್ಲ. ಯೋಗಿ ಪ್ರತ್ಯಕ್ಷವಾದರೋ ಸಂದೇಹವುಳ್ಳದ್ದಾಗಿದೆ ; ಆದುದರಿಂದ ಅದರಿಂದಲೂ ಸ್ಫೋಟಸಿದ್ಧಿಸದು. **"ಸ್ಫೋಟಸ್ತ್ವಂ ವರ್ಣಜುಷ್ಟಃ"** ಎಂಬ ಭಾರತವಾಕ್ಯವು ಇದರ ಇರುವಿಕೆಗೆ ಪ್ರಮಾಣವೆನ್ನಬಹುದಲ್ಲವೆಂದರೆ, **"ಸ್ಫೋಟ್ಯತೇ ಅರ್ಥಃ ಅನೇನ**=ಇದರಿಂದ ಅರ್ಥವು ಸ್ಫುರಿಸುತ್ತದೆ" ಎಂಬ ವ್ಯುತ್ಪತ್ತಿಯಿಂದ ಸ್ಫೋಟ ಶಬ್ದಕ್ಕೆ ಅರ್ಥವನ್ನು ಪ್ರಕಾಶಪಡಿಸುವ ವರ್ಣಶಕ್ತಿಯೆಂದು ಅರ್ಥವಾಗುತ್ತದೆಯೇ ಹೊರತು, ನಿಮಗೆ ಇಷ್ಟವಾದ ಅರ್ಥ ಕಲ್ಪನೆಗೆ ಸಾಧಕವಾಗುವುದಿಲ್ಲ.

**ಮತ್ತೆ ಒಂದು ಸಂದೇಹ :—'ಗೌಃ'** ಎಂಬ ಶಬ್ದದಲ್ಲಿ ಗಕಾರ-ಔಕಾರ-ವಿಸರ್ಗಗಳೆಂಬ ಮೂರುವರ್ಣಗಳಿರುವುವು. ಈ ಮೂರರೊಳಗೆ ಒಂದೊಂದೇ ವರ್ಣವು ಗೋ=ಹಸು ಎಂಬ ಅರ್ಥಕ್ಕೆ ವಾಚಕವೋ ? ಅಥವಾ ಈ ಮೂರರ ಸಮುದಾಯವೇ ವಾಚಕವೋ ? ಪ್ರತ್ಯೇಕ ವರ್ಣವೇ ಅರ್ಥವಾಚಕವೆಂದು ಹೇಳುವು

ದಾದರೆ ವರ್ಣಾಂತರವು ವ್ಯರ್ಥವಾದುದರಿಂದ ಅರ್ಥದ ಪ್ರತೀತಿಗಾಗಿ ಬೇರೆ ವರ್ಣವನ್ನು ಪ್ರಯೋಗಿಸುವುದು ಆವಶ್ಯಕವಲ್ಲವೆಂದಾಗುವುದು. ವರ್ಣಗಳ ಸಮುದಾಯವೇ ಅರ್ಥಕ್ಕೆ ವಾಚಕವೆಂದರೆ ಅದು ಸರಿಯಲ್ಲ.

ಏತಕ್ಕೆಂದರೆ ವರ್ಣಗಳಿಗೆ ಸಮುದಾಯಭಾವವೇ ಕೂಡುವುದಿಲ್ಲ. ಹೇಗೆಂದರೆ ವರ್ಣಗಳನ್ನು ಕ್ರಮವಾಗಿ ಒಂದರ ಮುಂದೆ ಮತ್ತೊಂದರಂತೆ ಉಚ್ಚರಿಸಬಹುದಲ್ಲದೆ ಒಂದು ವರ್ಣವನ್ನು ಉಚ್ಚರಿಸುವ ಕಾಲದಲ್ಲೇ ಎಲ್ಲಾ ವರ್ಣಗಳನ್ನು ಉಚ್ಚರಿಸಲು ಸಾಧ್ಯವಾಗುವುದಿಲ್ಲ. 'ಗೌಃ' ಎಂಬ ಪದದ ಗಕಾರವನ್ನು ಉಚ್ಚರಿಸುವ ಕಾಲದಲ್ಲಿ ಔಕಾರ, ವಿಸರ್ಗಗಳು ಅದರ ಜೊತೆಗೆ ಇನ್ನೂ ಬಂದುಸೇರಲೇ ಇಲ್ಲ. ಆವಾಗಲೇ ಗಕಾರವು ಹೇಳಲ್ಪಟ್ಟು ನಷ್ಟವಾಗಿದೆ. ಔಕಾರವನ್ನು ಉಚ್ಚರಿಸುವ ಕಾಲಕ್ಕೆ ಗಕಾರವು ಮೊದಲೇ ಉಚ್ಚರಿತವಾಗಿ ನಷ್ಟವಾಗಿರುವುದು. ವಿಸರ್ಗವು ಇನ್ನೂ ಹುಟ್ಟಿಲೇ ಇಲ್ಲ. ಅನಂತರ ವಿಸರ್ಗವನ್ನು ಉಚ್ಚರಿಸುವ ಕಾಲಕ್ಕೆ ಗಕಾರ, ಔಕಾರಗಳೆರಡೂ ನಷ್ಟಗಳಾಗಿರುವುವು. ಈ ಮೂರು ವರ್ಣಗಳೂ ಒಂದೇಕ್ಷಣದಲ್ಲಿ ಕೂಡಿದ್ದರಲ್ಲವೇ ಇವುಗಳಿಗೆ ಸಮುದಾಯ ಭಾವವು ಉಂಟಾದೀತು. ಆದಕಾರಣ ಕ್ರಮವಾಗಿ ಉಚ್ಚರಿಸಲ್ಪಡುವ ವರ್ಣಗಳಿಗೆ ಸಮುದಾಯವಾಗಿರುವಿಕೆಯೇ ಕೂಡುವುದಿಲ್ಲವಾದುದರಿಂದ ವರ್ಣಸಮುದಾಯವೇ ಅರ್ಥಕ್ಕೆ ವಾಚಕವಾಗುವುದೆಂದು ಹೇಳಲಾಗುವುದಿಲ್ಲ. ಆದುದರಿಂದ ವರ್ಣಕ್ಕಿಂತಲೂ ಬೇರೆಯಾಗಿಯೂ ವರ್ಣಾಭಿವ್ಯಂಗ್ಯವಾಗಿಯೂ ಇರುವ ವರ್ಣಸ್ಫೋಟವೆಂಬುದೊಂದು ಪದಾರ್ಥವನ್ನು ಅಂಗೀಕರಿಸಿ ಅದಕ್ಕೇ ಅರ್ಥಪ್ರಕಾಶಕತ್ವವನ್ನು ಒಪ್ಪಬೇಕಾಗುತ್ತದಲ್ಲವೇ ಎಂದರೆ—ಇದು ಬೇಕಾಗಿಲ್ಲ. ಅತಿರಿಕ್ತವಾದ ಸ್ಫೋಟವನ್ನು ಒಪ್ಪಿದರೂ 'ಗೌಃ' ಎಂಬ ಶಬ್ದದಲ್ಲಿ ಗಕಾರೌಕಾರವಿಸರ್ಗಗಳಿಗೆ ಒಂದೊಂದೇ ವರ್ಣಕ್ಕೆ ಸ್ಫೋಟಾಭಿವ್ಯಂಜಕತ್ವವನ್ನು ಹೇಳುವುದಾದರೆ ವರ್ಣಾಂತರ ವೈಯರ್ಥ್ಯವು ಪ್ರಸಕ್ತವಾಗುವುದು. ವರ್ಣಗಳಿಗೆ ಸಮುದಾಯಭಾವವೂ ಸಂಭವಿಸುವುದಿಲ್ಲ. ಕೊನೆಯ ವರ್ಣಕ್ಕೆ ಸ್ಫೋಟಾಭಿವ್ಯಂಜಕತ್ವವನ್ನು ಹೇಳುವುದಾದರೆ ಆಗಲೂ ವರ್ಣಾಂತರ ವೈಯರ್ಥ್ಯವು ಪ್ರಸಕ್ತವಾಗುವುದು. ಹೀಗೆ ವರ್ಣಗಳಿಗೆ ಅರ್ಥವಾಚಕತ್ವವನ್ನು ಹೇಳುವವರ ಮತದಲ್ಲಿ ಹೇಳುವ ದೂಷಣಗಳು ಸ್ಫೋಟವಾದಿಗಳಿಗೂ ಸಮವಾಗಿದೆ.

ಪ್ರತ್ಯೇಕ ವರ್ಣಗಳಿಗೆ ಸ್ಫೋಟಾಭಿವ್ಯಂಜಕತ್ವವೋ ? ಅಥವಾ ಸಮುದಾಯಕ್ಕೋ ? ಎಂಬ ವಿಕಲ್ಪವು ಉಂಟಾಗುವುದರಿಂದ—

"ಯಶ್ಚೋಭಯೋಃ ಸಮೋ ದೋಷಃ ಪರಿಹಾರೋಽಪಿ ವಾ ಸಮಃ—ವರ್ಣಗಳಿಗೆ ಅರ್ಥವಾಚಕತ್ವವನ್ನು ಹೇಳುವ ಮತಕ್ಕೂ ವರ್ಣಗಳಿಗೆ ಸ್ಫೋಟವ್ಯಂಜಕತ್ವವನ್ನು ಹೇಳುವ ಮತಕ್ಕೂ ಸಮವಾದ ದೋಷವೂ ಪರಿಹಾರವೂ ಸಮವಾಗಿದೆ"

ಎಂಬ ನ್ಯಾಯವು ಉಂಟಾಗುತ್ತದೆ. ಆದುದರಿಂದ ಉಭಯವಾದಿಗಳೂ ಒಪ್ಪಿಕೊಂಡು ಕ್ಲೃಪ್ತವಾಗಿರುವ ವರ್ಣಗಳಿಂದಲೇ ಅರ್ಥಪ್ರತೀತಿಗೆ ಉಪಪತ್ತಿ ಉಂಟಾಗುವುದರಿಂದ ಇದಕ್ಕಾಗಿ ವರ್ಣಕ್ಕಿಂತಲೂ ಬೇರೆಯಾದ ಸ್ಫೋಟವೆಂಬ ಒಂದು ಪದಾರ್ಥವನ್ನೂ ಕಲ್ಪಿಸಬೇಕಾದುದಿಲ್ಲ.

**"ಪ್ರತ್ಯೇಕ ಸಮುದಾಯವಿಕಲ್ಪಾಃ ವಾಚಕತ್ವ ಇವ ಸ್ಫೋಟಾಭಿವ್ಯಕ್ತಾವಪಿ ಸಮಾಃ, ಕಲ್ಪನಂತು ಭವತಾಮಧಿಕಮ್"** ಎಂಬುದು ನ್ಯಾಯಸಿದ್ಧಾಂಜನದ ಪಙ್ಕ್ತಿ.

ಸ್ಫೋಟಾಭಿವ್ಯಂಜಕತ್ವಪಕ್ಷದಲ್ಲಿ ಸಮವಾದ ದೋಷ ಎಂದು ಹೇಳುವುದು ಸರಿಯಲ್ಲ; ಏತಕ್ಕೆಂದರೆ ಸ್ಫೋಟವನ್ನು ಅಭಿವ್ಯಂಜನಮಾಡುವ—ಪ್ರಕಟಿಸುವ ಮೊದಲನೆಯ ಧ್ವನಿಯು ಸ್ಫೋಟವನ್ನು ಅಸ್ಫುಟವಾಗಿ ಪ್ರಕಟಿಸುತ್ತದೆ. ಆಮೇಲೆ ಆಮೇಲೆ ಪ್ರಕಟವಾಗುವ ಆ ಧ್ವನಿ ಸ್ವಲ್ಪಸ್ವಲ್ಪವಾಗಿ ಸ್ಪಷ್ಟವಾಗುತ್ತದೆ–ಹೇಗೆ ವೇದಾಭ್ಯಾಸವನ್ನು ಮಾಡುವವರಿಗೆ ಅಧ್ಯಯನವು ಒಂದೇಸಲ ಹೇಳಿಕೊಟ್ಟ ಮಾತ್ರದಿಂದಲೇ ಮನಸ್ಸಿನಲ್ಲಿ ನಿಲ್ಲುವುದಿಲ್ಲ; ಅವಧಾರಣವಾಗುವುದಿಲ್ಲ. ಅಭ್ಯಾಸದಿಂದ ಮನಸ್ಸಿನಲ್ಲಿ ನಿಂತು ಅದು ಸ್ಪಷ್ಟವಾಗಿ ಉಚ್ಚರಿಸಲ್ಪಟ್ಟದ್ದಾಗಿ ಕೇಳುವವರ ಕಿವಿಗೆ ಇಂಪಾಗಿ ಶ್ರುತಿಯೆಂಬುದು ಅನ್ವರ್ಥವಾಗಿ ಪರಿಣಮಿಸುತ್ತದೋ ಹಾಗೆ. ಹೇಗೆ ರತ್ನತತ್ತ್ವವು ಅಂದರೆ ಈ ರತ್ನವು ಒಳ್ಳೆಯದೋ ಅಥವಾ ಅಲ್ಲವೋ ಎಂಬುದು ಪರೀಕ್ಷೆ ಮಾಡುವವನಿಗೆ ಮೊದಲನೆಯ ಸಲವೇ ಗೊತ್ತಾಗುವುದಿಲ್ಲ. ಮತ್ತೆ ಮತ್ತೆ ನೋಡಿದಾಗ ಮಾತ್ರ ಅವನಿಗೆ ಅದರ ಗುಣದೋಷಗಳು ಕಂಡು ಇದು ಒಳ್ಳೆಯದು, ಇದು ಅಲ್ಲ ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಹಾಗೆ—

**"ನಾದೈರಾಹಿತ ಬೀಜಾಯಾ ಮನ್ತ್ಯೇನ ಧ್ವನಿನಾ ಸಹ ।**
**ಆವೃತ್ತ ಪರಿಪಾಕಾಯಾಂ ಬುದ್ಧೌ ಶಬ್ದೋಽವಧಾರ್ಯತೇ ॥**

ಬುದ್ಧಿಯೆಂಬ ಕ್ಷೇತ್ರದಲ್ಲಿ ಸ್ಫೋಟರೂಪವಾದ ಶಬ್ದವೆಂಬ ಫಲದ ಸ್ಫುಟೋತ್ಪತ್ತಿಗಾಗಿ ಪ್ರಥಮ ಧ್ವನಿಯೆಂಬ ರೈತನು ಬೀಜವನ್ನು ಬಿತ್ತಲು ಉತ್ತರೋತ್ತರ ನಾದಗಳಿಂದ ಆ ಬೀಜಕ್ಕೆ ಕ್ರಮ ಕ್ರಮವಾದ ಪುಷ್ಟಿಯುಂಟಾಗಿ ಕೊನೆಯ ನಾದದಿಂದ ಪರಿಪಾಕವುಂಟಾದರೆ ಆಗ ಅಂತಹ ಕ್ಷೇತ್ರದಲ್ಲಿ ಸ್ಫೋಟವೆಂಬ ಫಲವು ಸ್ಫುಟವಾಗುವುದು" ಎಂಬುದು ಭರ್ತೃಹರಿಯ ಕಾರಿಕೆ. ಅದರಂತೆ ಸ್ಫೋಟಾಭಿವ್ಯಂಜಕತ್ವವನ್ನು ಹೇಳುವ ಮತದಲ್ಲಿ ದೋಷವಿಲ್ಲ, ಅಂದರೆ—

ಅರ್ಥಪ್ರಕಾಶಕತ್ವವನ್ನು ಹೇಳುವವರ ಮತದಲ್ಲೂ ಈ ಕಲ್ಪನೆ ಏಕೆ ಬರಬಾರದು ? ಬುದ್ಧಿಯೆಂಬ ಕ್ಷೇತ್ರದಲ್ಲಿ ಅರ್ಥಸ್ಫೂರ್ತಿಯೆಂಬ ಫಲದ ಸ್ಫುಟೋ

ತೃಪ್ತಿಗಾಗಿ ಪ್ರಥಮ ವರ್ಣನೆಂಬ ರೈತನು ಬೀಜಾವಾಪಮಾಡಲು ಉತ್ತರೋತ್ತರ ವರ್ಣಗಳಿಂದ ಆ ಬೀಜಕ್ಕೆ ಕ್ರಮಕ್ರಮವಾಗಿ ಪುಷ್ಟಿಯುಂಟಾಗಿ ಕೊನೆಯ ವರ್ಣದಿಂದ ಪರಿಪಾಕವುಂಟಾದರೆ ಆಗ ಅಂತಹ ಬುದ್ಧಿ ಕ್ಷೇತ್ರದಲ್ಲಿ ಅರ್ಥ ಸ್ಫೂರ್ತಿಯೆಂಬ ಫಲವು ಸ್ಫುಟವಾಗುವುದು ಎಂದೂ ಕಲ್ಪನೆ ಮಾಡಬಹುದಲ್ಲಾ ; ವರ್ಣ ಸಮುದಾಯದಿಂದ ಅರ್ಥಪ್ರತಿಪತ್ತಿ ಆಗುವ ಸ್ಥಲದಲ್ಲಿಯೂ ಈ ಕಾರಿಕೆಗೆ ಅನ್ವಯವಾಗುವುದರಿಂದ ಇಬ್ಬರೂ ಒಪ್ಪುವ ವರ್ಣಕ್ಕಿಂತ ಬೇರೆಯಾದ ಸ್ಫೋಟವೆಂಬ ಬೇರೆ ಪದಾರ್ಥವನ್ನು ಕಲ್ಪಿಸುವುದು ಪ್ರಮಾಣವಾಗುವುದಿಲ್ಲ. ಇದರಿಂದ "ಇದು ಒಂದೇ ವಾಕ್ಯ" ಇವೇ ಮೊದಲಾದವುಗಳಿಗೂ ಕೂಡ ಪದಸಮುದಾಯದಿಂದಲೇ ನಿರ್ವಾಹವು ಉಂಟಾಗುವುದರಿಂದ ವಾಕ್ಯಸ್ಫೋಟವೂ ಭಗ್ನವಾಯಿತು. ಪರಸ್ಪರ ಅನ್ವಯವನ್ನು ಪಡೆದು ಒಂದೇ ಅರ್ಥವನ್ನು ಉಂಟುಮಾಡುವ ಅನೇಕ ಪದಗಳ ಸಮುದಾಯವಷ್ಟೇ ವಾಕ್ಯವೆಂಬುದು. ಅರ್ಥ ಪ್ರತೀತಿಗೆ ಪದಸಮುದಾಯದ ಸಹಾಯವೇ ಸಾಕಲ್ಲ–ಬೇರೆ ವಾಕ್ಯಸ್ಫೋಟವೆಂಬುದು ಏತಕ್ಕೆ ?

"ಶಬ್ದಾದರ್ಥಂ ಪ್ರತೀಮಃ=ಶಬ್ದದಿಂದ ಅರ್ಥವನ್ನು ತಿಳಿಯುತ್ತೇವೆ." ಎಂಬುದಾಗಿ ಲೋಕಪ್ರಸಿದ್ಧಿ ಇದೆ. ಇಲ್ಲಿ 'ಶಬ್ದಾತ್' ಎಂದು ಶಬ್ದ ಶಬ್ದವು ಏಕವಚನಾಂತವಾಗಿದೆ. ವಾಕ್ಯದಲ್ಲಿ ಅನೇಕ ಶಬ್ದಗಳಿವೆ. ಅವುಗಳಿಂದ ಅರ್ಥ ಪ್ರತೀತಿಯಾಗುತ್ತದೆ. ಆದುದರಿಂದ ಅಖಂಡವಾದ ನಿರವಯವವಾದ ವಾಕ್ಯ ಸ್ಫೋಟವೆಂಬ ಶಬ್ದದಿಂದ ಎಂಬುದಾಗಿ ಹೇಳುವುದು ನ್ಯಾಯವಲ್ಲವೇ ? ಎಂದರೆ, ಇಲ್ಲಿ "ಶಬ್ದಾತ್–ಶಬ್ದದಿಂದ" ಶಬ್ದದ ದೆಸೆಯಿಂದ ಎಂಬುದು ಜಾತ್ಯೇಕವಚನದಲ್ಲಿದೆ. ಆದುದರಿಂದ ವರ್ಣಾತ್ಮಕವಾದ ಅನೇಕ ಶಬ್ದಗಳಿಗೆ ಬೋಧೆ ಉಂಟಾಗುತ್ತದೆ, ಎಂದು ತಿಳಿಯಬೇಕು.

ಸ್ಫೋಟವೆಂಬುದು ಪರಬ್ರಹ್ಮವನ್ನೇ ಹೇಳುತ್ತದೆ–ಆದುದರಿಂದ ಪರಮಾತ್ಮನೇ ಸ್ಫೋಟಶಬ್ದವಾಚ್ಯನು ಎಂದರೆ, ಅದು ನಮಗೆ ಇಷ್ಟವಾದದ್ದೇ. ಅದರಲ್ಲಿ ವಿರೋಧವೇನೂ ಇಲ್ಲ,

ಅದ್ವೈತಿಗಳು ಹೇಳುವ ಹಾಗೆ ಸ್ಫೋಟಕ್ಕೆ ಬ್ರಹ್ಮದಂತೆ ನಿರ್ವಿಶೇಷತ್ವವನ್ನೂ ನಿರವಯವತ್ವವನ್ನೂ ಹೇಳಿರುವುದರಿಂದ, ಈ ಸ್ಫೋಟಕ್ಕೆ ಪ್ರಪಂಚ ಭ್ರಮಾಧಿಷ್ಠಾನತ್ವವು ಉಂಟಾಗುವುದಿಲ್ಲ ಭ್ರಮಕ್ಕೆ ಅಧಿಷ್ಠಾನವಾದದ್ದು ಹೆಚ್ಚಾಗಿ ಪ್ರಕಾಶಿಸುತ್ತಿದ್ದರೂ ಭ್ರಮೆ ಉಂಟಾಗುವುದಿಲ್ಲ, ಪ್ರಕಾಶಿಸದೆ ಇದ್ದರೂ ಭ್ರಮೆ ಉಂಟಾಗುವುದಿಲ್ಲ. ವಸ್ತುವಿನ ಸಾಧಾರಣಾಕಾರವು ಮಾತ್ರವೇ ಪ್ರಕಾಶಿಸುತ್ತಾ ಅಸಾಧಾರಣಾಕಾರವು ಪ್ರಕಾಶಿಸದೆ ಇದ್ದರೆ ಆಗ ಭ್ರಮೆಯುಂಟಾಗಬಹುದು ; ಇದಕ್ಕಾಗಿ ಸ್ಫೋಟದಲ್ಲಿ ಜ್ಞಾತವಾದ ಸಾಧಾರಣಾಕಾರವನ್ನೂ ಅಜ್ಞಾತವಾದ ಅಸಾಧಾರಣಾಕಾರವನ್ನೂ

ಒಪ್ಪುವುದಾದರೆ ಆಗ ಆ ಸ್ಫೋಟವೆಂಬುದು ಸವಿಶೇಷವಸ್ತುವೇ ಆಗಬೇಕಲ್ಲದೆ ನಿರ್ವಿಶೇಷ ವಸ್ತುವಾಗಲಾರದು, ಭ್ರಮಾಧಿಷ್ಠಾನತ್ವದಲ್ಲಿ ಅಭಿಮಾನವಿದ್ದರೆ ನಿರ್ವಿಶೇಷತ್ವವನ್ನೂ ನಿರವಯುವತ್ವವನ್ನೂ ಬಿಡಬೇಕು, ಭ್ರಮಾಧಿಷ್ಠಾನವಾಗಬಹು ದಾದ ರಜ್ಜು, ಶುಕ್ತಿ ಮೊದಲಾದುವುಗಳೆಲ್ಲಾ ಸಾವಯುವಗಳಾಗಿಯೂ ಸವಿಶೇಷ ಗಳಾಗಿಯೂ ಇರುವವಲ್ಲದೆ ನಿರವಯುವಗಳಾಗಿಯೂ ನಿರ್ವಿಶೇಷಗಳಾಗಿಯೂ ಇಲ್ಲವಷ್ಟೆ ?

**ಅಧಿಷ್ಠಾನಸ್ಯ ಕಾರ್ತ್ಸ್ನ್ಯೇನ ಭಾನೇಽಭಾನೇಽಪಿನ ಭ್ರಮಃ ।**
**ಭಾತಾಭಾತಾಕೃತಿ ಭಿದಾ ಸವಿಶೇಷತ್ವಸಾಧಿಕಾ ॥**

ಇದು ಅಭಿಯುಕ್ತರ–ತಿಳಿದ ಹಿರಿಯರ ಮಾತು. ಅಧಿಷ್ಠಾನಕ್ಕೆ ಸಂಪೂರ್ಣ ವಾಗಿ ಪ್ರಕಾಶವಿದ್ದರೂ ಅಥವಾ ಪ್ರಕಾಶವಿಲ್ಲದಿದ್ದರೂ ಭ್ರಾಂತಿಯೇ ಬಾರದು, ಪ್ರಕಾಶಿಸುತ್ತದೆ ಅಥವಾ ಪ್ರಕಾಶಿಸುತ್ತಿಲ್ಲ ಎಂಬ ಭೇದವು ಸವಿಶೇಷತ್ವ ಅಂದರೆ ಒಂದು ವಿಶೇಷದೊಡನೆ ಕೂಡಿರುವಿಕೆಯನ್ನು ಸಾಧನೆಮಾಡಿಕೊಡುತ್ತದೆ. ಶಾಬ್ದಿಕ ರಿಂದ ಹೇಳಲ್ಪಟ್ಟಿರುವುದರಿಂದ ಸಮಂಜಸವಾದದ್ದೆಂದು ಒಪ್ಪಬೇಕು ಎಂದರೆ, ಸಾಧು ಶಬ್ದಗಳನ್ನೇ ಪ್ರಯೋಗಿಸಬೇಕು ; ಅಸಾಧುಶಬ್ದಗಳನ್ನು ಪ್ರಯೋಗಿಸ ಕೂಡದು. ಗವಾದಿ ಶಬ್ದಗಳೇ ಸಾಧುಗಳು. **"ಗಾಯೀ–ಗೋಣೀ ಗೋಪೋ ತಳಿಕಾ"** ಎಂಬಿವೇ ಮೊದಲಾದವು ಸಾಧುಶಬ್ದಗಳಲ್ಲ ಎಂಬುದಾಗಿ ಸಾಧುಶಬ್ದ ಸ್ವರೂಪನಿಯಮ, ಸಾಧುಶಬ್ದಪ್ರಯೋಗನಿಯಮ ಎಂಬ ಎರಡು ನಿಯಮ ಗಳನ್ನು ಪರಿಷ್ಕರಿಸುವುದಕ್ಕಾಗಿಯೇ ಅವತರಿಸಿರುವ ವ್ಯಾಕರಣ ಶಾಸ್ತ್ರದಲ್ಲಿ ಸ್ಫೋಟ ನಿರೂಪಣಕ್ಕೆ ಸ್ವಲ್ಪವೂ ಉಪಯೋಗವಿಲ್ಲ. ಆದಕಾರಣ ಅಪ್ರಾಮಾಣಿಕವಾದ ಅರ್ಥ ವನ್ನು ನಿರೂಪಿಸುವುದರಲ್ಲಿ ವೈಯಾಕರಣರಿಗೆ ಸ್ವಲ್ಪವೂ ಸ್ವಾತಂತ್ರ್ಯವಿಲ್ಲ. ಹಿಂದಿನ ಪ್ರಯೋಗವನ್ನು ಅನುಸರಿಸಿ ಪ್ರಕೃತಿ ಪ್ರತ್ಯಯಗಳನ್ನು ತೋರಿಸಿ ಶಬ್ದಸಾಧು ತ್ವವನ್ನು ತೋರಿಸುವುದರಲ್ಲಿ ಅವರಿಗೆ ಅಧಿಕಾರವಿದೆಯೇ ಹೊರತು ಹೊಸದಾಗಿ ಅಪ್ರಾಮಾಣಿಕವಾದ ಒಂದನ್ನು ಅರ್ಥಪ್ರತೀತಿಗೆಂದು ತಂದು ಸೇರಿಸಿರುವುದನ್ನು ವೇದಾವಲಂಬಿಗಳಾದ ಶಿಷ್ಟರು ಒಪ್ಪಲಾರರು. ಶಬ್ದಸಾಧುತ್ವವ್ಯುತ್ಪಾದನದಲ್ಲಿ ಸ್ಫೋಟವು ಉಪಯೋಗವಾಗುವುದಿಲ್ಲವೆಂದು ಅಭಿಪ್ರಾಯ.

ಪಾಣಿನಿ ಕಾತ್ಯಾಯನ ಪತಂಜಲಿಗಳೆಂಬ ಮಹರ್ಷಿಗಳೂ ಈ ಸ್ಫೋಟ ವನ್ನು ಹೇಳಿಲ್ಲ. ಆಧುನಿಕರಾದ ವಾಕ್ಯಪದೀಯವೇ ಮೊದಲಾದವುಗಳಿಗೆ ಪ್ರವರ್ತಕರಾದ ಭರ್ತೃಹರಿ ಮೊದಲಾದವರು ಇದನ್ನು ಹೇಳಿರುವುದರಿಂದ ಇದು ಗ್ರಾಹ್ಯವಲ್ಲ; ಆದರಿಸಲು ತಕ್ಕದ್ದಲ್ಲವೇ ಅಲ್ಲ. ಇದು ಇವರ ವ್ಯರ್ಥವಾದ ಆಯಾಸ ವನ್ನು ತೋರಿಸುತ್ತದೆ.

ಈ ವಿಷಯದಲ್ಲಿ ಪೂಜ್ಯರಾದ ಪರಾಶರಭಟ್ಟರು ಹೇಳಿರುವ ಮಾತಿದು.

ಪ್ರಾಕ್ಪ್ರಯೋಗಾನುಸಾರೇಣ ಪ್ರಕೃತಿಪ್ರತ್ಯಯಸ್ವರಾನ್ ।
ಪ್ರಕಲ್ಪ್ಯ ವೈಯಾಕರಣ್ಯೈ ರ್ವ್ಯುತ್ಪಾದ್ಯಾ ಪದಪದ್ಧತಿಃ ॥

ಹಿಂದಿನವರು ಪ್ರಯೋಗ ಮಾಡಿರುವ ಶಬ್ದಗಳಿಗೆ ಅನುಸಾರವಾಗಿ ಪ್ರಕೃತಿ ಪ್ರತ್ಯಯ ಸ್ವರ. ಇವನ್ನು ವಿಮರ್ಶೆಮಾಡಿ ವ್ಯುತ್ಪತ್ತಿಯನ್ನು ತೋರಿಸಿ ಪದಗಳ ರೀತಿಯನ್ನು ತಿಳಿಸುವುದು ವೈಯಾಕರಣಿಗಳ ಕಾರ್ಯವೆಂದು ಮುನಿಶ್ರೇಷ್ಠರ ಅಭಿಪ್ರಾಯ.

## ಶಬ್ದಕ್ಕೆ ಅದ್ರವ್ಯತ್ವ ಸಮರ್ಥನೆ

ಶಬ್ದಕ್ಕೆ ಅದ್ರವ್ಯತ್ವ ಮತ್ತು ವ್ಯಙ್ಗ್ಯತ್ವ ಇವನ್ನು ಸಿದ್ಧಾಂತಮಾಡಲು ಸಾಧ್ಯವಿಲ್ಲ. ಏತಕ್ಕೆಂದರೆ ಶ್ರುತಿಯೇ ಮೊದಲಾದವುಗಳಲ್ಲಿ ಇದಕ್ಕೆ ದ್ರವ್ಯತ್ವ ಮತ್ತು ಕಾರ್ಯತ್ವ ಇವುಗಳನ್ನು ಹೇಳಿದೆ.

ಯದ್ವೇದಾದೌಸ್ವರಃ ಪ್ರೋಕ್ತೋ ವೇದಾನ್ತೇಚ ಪ್ರತಿಷ್ಠಿತಃ ।
ತಸ್ಯಪ್ರಕೃತಿಲೀನಸ್ಯ ಯಃ ಪರಸ್ಸ ಮಹೇಶ್ವರಃ ॥

ದಹರ ವಿದ್ಯೆಯಲ್ಲಿ, ಉಪಾಸನೆ ಮಾಡಲ್ಪಡುವ ದೇವತಾವಿಶೇಷವಾವುದು? ಎಂಬುದನ್ನು ತಿಳಿಯಲು ಬಯಸಿದರೆ, ನಾರಾಯಣನನ್ನು ಆ ವಿದ್ಯೆಯಿಂದ ಉಪಾಸನೆ ಮಾಡಬೇಕೆಂದು ಪ್ರತಿಪಾದನೆ ಮಾಡಲು ಹೊರಟು ಸಕಲವಾದ ಪರವಿದ್ಯೆಗಳಿಂದ ಉಪಾಸನೆ ಮಾಡಲ್ಪಡುವುದಕ್ಕೆ ಯೋಗ್ಯವಾದ ಮಹೇಶ್ವರತ್ವವನ್ನೂ ನಾರಾಯಣನಿಗೆ ತೋರಿಸುತ್ತದೆ ಈ ಮಂತ್ರ.

**ಬ್ರಹ್ಮಣಃ ಪ್ರಣವಂ ಕುರ್ಯಾದಾದಾ ವನ್ತೇಚ ಸರ್ವದಾ।**
**ಸ್ರವತ್ಯನೋಙ್ಕೃತಂ ಬ್ರಹ್ಮ (ಪೂರ್ವಂ) ಪರಸ್ತಾಚ್ಚವಿಶೀರ್ಯತೇ॥**

ಇದು ಮನುಸ್ಮೃತಿಯ ಶ್ಲೋಕ. ವೇದವನ್ನು ಉಚ್ಚರಿಸುವಾಗ ಮೊದಲು ಮತ್ತು ಕೊನೆಯಲ್ಲಿ ಯಾವಾಗಲೂ ಪ್ರಣವಾಕ್ಷರವನ್ನು ಹೇಳಬೇಕು, ಹಾಗೆ ಅದನ್ನು ಹೇಳದಿದ್ದರೆ ಉಚ್ಚರಿಸಲ್ಪಟ್ಟ ವೇದವು ಫಲವನ್ನು ಕೊಡದಿರುವುದು ಮಾತ್ರವಲ್ಲ, ದೃಢವಾಗಿ ನಿಲ್ಲುವುದಿಲ್ಲ-ತೂತಿನ ಬಿಂದಿಗೆಯಲ್ಲಿಟ್ಟ ನೀರಿನಂತೆ ಸೋರಿ ನಾಶವಾಗುತ್ತದೆ ; ಮರತೇ ಹೋಗುತ್ತದೆಂದು ತಾತ್ಪರ್ಯ. ಆದುದರಿಂದ ವೇದದ ಮೊದಲು ಮತ್ತು ಕೊನೆಯಲ್ಲಿ ಪ್ರತಿಷ್ಠಿತವಾದ (ಪ್ರೋಕ್ತವಾದ) ಸ್ವರ—ಪ್ರಣವ, ವೇದದ ಉತ್ಪತ್ತಿ ಪ್ರಲಯ ಇವಕ್ಕೆ ಕಾರಣ ಪ್ರಣವ ಎಂದೂ, ವೇದಕ್ಕೆ ಬೀಜ ಅದು ಎಂದೂ ಪೂರ್ವ ಮೀಮಾಂಸೆಯಲ್ಲಿ ಹೇಳಿದೆ. 'ಓಙ್ಕಾರಪ್ರಭವಾ ವೇದಾಃ'

ಎಂದು ವೇದದ ಉತ್ಪತ್ತಿಗೆ ಕಾರಣ ಪ್ರಣವವೆಂಬುದು ಪ್ರಸಿದ್ಧವಾಗಿದೆ ; ಅದರ ಪ್ರಕೃತಿಯು ಅಕಾರ. ಎಲ್ಲಾ ಶಬ್ದಕ್ಕೂ ಮೂಲವಾಗಿದೆ ಅದು. ಆ ಪ್ರಕೃತಿಯಾದ ಅಕಾರದಲ್ಲಿ ಲೀನನಾಗಿದ್ದಾನೆ ಅಂದರೆ ಅಡಗಿದ್ದಾನೆ ಪರಮಾತ್ಮ. ಲೀನನೆಂದರೆ ಅದರ ರೂಪವನ್ನು ಹೊಂದಿರುವಿಕೆ. ಆ ಅಕಾರಕ್ಕೆ ಯಾವನು ಪ್ರತಿಪಾದ್ಯನೋ—ವಾಚ್ಯನೋ ಅವನೇ ಮಹೇಶ್ವರ. 'ಯಃಪರಃ ಸ ಮಹೇಶ್ವರಃ'—ಎಂಬಲ್ಲಿ ಪರಶಬ್ದವು ವಾಚ್ಯವನ್ನು ಹೇಳುತ್ತದೆ. ಇದಂಪರಃ, ತತ್ಪರಃ ಇವೇ ಮೊದಲಾದವುಗಳಲ್ಲಿ ಪರಶಬ್ದಕ್ಕೆ ವಾಚ್ಯದಲ್ಲಿ ಪ್ರಯೋಗವು ಕಾಣುತ್ತದೆ. ಅಂತೂ ವೇದ ಪ್ರಕೃತಿಭೂತವಾದದ್ದು ಪ್ರಣವ. ಅದಕ್ಕೆ ಪ್ರಕೃತಿ ಭೂತವಾದದ್ದು ಅಕಾರ. ಆದರಿಂದ ಹೇಳಲ್ಪಡುವವನು ಮಹೇಶ್ವರ. "ಅ ಇತಿ ಬ್ರಹ್ಮ" ಎಂದು ಶ್ರುತಿ.

"ಅಕಾರೇಣೋಚ್ಯತೇ ವಿಷ್ಣುಃಸರ್ವಲೋಕೇಶ್ವರೋಹರಿಃ ।

ಎಲ್ಲಾ ಲೋಕಕ್ಕೂ ಒಡೆಯನಾದ ವಿಷ್ಣುವು ಅಕಾರದಿಂದ ಹೇಳಲ್ಪಡುತ್ತಾನೆ. "ಆಕಾರೋವಿಷ್ಣುವಾಚಕಃ=ಅಕಾರವು ವಿಷ್ಣುವನ್ನು ಹೇಳುವ ಶಬ್ದ" ಇವೇ ಮೊದಲಾದವು ಸ್ಮೃತಿಗಳು. ಇವುಗಳಿಂದ ಅಕಾರವಾಚ್ಯನಾದವನು ವಿಷ್ಣುವು ; ಅವನೇ ಮಹೇಶ್ವರ ಎಂಬುದನ್ನು ಅರಿತಂತಾಯಿತು.

"ಯದ್ವೇದೌ ಸ್ವರಃ ಪ್ರೋಕ್ತಃ" ಇವೇ ಮೊದಲಾದವುಗಳಿಂದ ವರ್ಣಗಳಿಗೆ—ಅಕಾರ, ಉಕಾರ, ಮಕಾರಗಳಿಂದ ಕೂಡಿದ ಪ್ರಣವಕ್ಕೆ—ಬೇರೆ ವರ್ಣಗಳ ಉಪಾದಾನತ್ವವು ಹೇಳಲ್ಪಡುತ್ತದೆ. ಅದೃಷ್ಟಕ್ಕೆ ಉಪಾದಾನತ್ವವು ಕೂಡುವುದಿಲ್ಲ. ನಿಮಿತ್ತಕಾರಣತ್ವವನ್ನು ಮಾತ್ರ ಹೇಳಲು ಅಪೇಕ್ಷಿಸಿದರೆ "ತಸ್ಯಪ್ರಕೃತಿಲೀನಸ್ಯ" ಎಂಬಲ್ಲಿ ಉಪಾದಾನಕಾರಣದ ಅರ್ಥವನ್ನು ಹೇಳುವ ಪ್ರಕೃತಿಪದಕ್ಕೂ 'ಲೀನ—ಅಡಗುವುದು' ಎಂಬ ಪದಕ್ಕೂ ಸ್ವಾರಸ್ಯವು ಇಲ್ಲದಂತಾಗುತ್ತದೆ. ಮಡಕೆಗೆ ಉಪಾದಾನಕಾರಣ ಮಣ್ಣು. ಮಡಕೆ ಮುರಿದರೆ ಅದಕ್ಕೆ ಉಪಾದಾನಕಾರಣವಾದ ಮಣ್ಣಿನಲ್ಲಿ ಅದು ಅಡಗುತ್ತದೆ. ಮಡಕೆಯ ಉತ್ಪತ್ತಿಗೆ ಕುಂಬಾರನು ನಿಮಿತ್ತಕಾರಣ. ಅವನು ಸತ್ತರೆ ಮಡಕೆಯಲ್ಲಿ ಲೀನವಾಗುತ್ತಾನೆಯೆ ? ಹಾಗೆ ಹೇಳುವುದು ಸ್ವಾರಸ್ಯವಲ್ಲ. ನಿಮಿತ್ತಕಾರಣಕ್ಕೆ ಪ್ರಕೃತಿಯು ಲಯಸ್ಥಾನವಲ್ಲ. ಯಾವ ವಿಧವಾದ ಬಾಧೆಯೂ ಇಲ್ಲದೆ ಇರುವುದರಿಂದ ಉಪಚಾರವಾಗಿ ಹೇಳಿದೆ ಎಂದೂ ಹೇಳಲಾಗುವುದಿಲ್ಲ. ಭಾಷ್ಯಕಾರರ ಮಾತಿಗೂ ವಿರೋಧವುಂಟಾಗುತ್ತದೆ. ವೇದಾರ್ಥಸಂಗ್ರಹದಲ್ಲಿ—"ವೇದಾದ್ಯನ್ತರೂಪತಯಾ ವೇದಬೀಜಭೂತಪ್ರಣವಸ್ಯ=ವೇದದ ಮೊದಲು ಕೊನೆಯರೂಪವಾಗಿರುವಿಕೆಯಿಂದ ವೇದಕ್ಕೆ ಕಾರಣಭೂತವಾದ ಪ್ರಣವಕ್ಕೆ" ಎಂದು ಆರಂಭಿಸಿ—

"ಸರ್ವಸ್ಯ ವೇದಜಾತಸ್ಯ ಪ್ರಕೃತಿಃ ಪ್ರಣವಃ । ಪ್ರಣವಸ್ಯಚ ಪ್ರಕೃತಿಃ ಅಕಾರಃ । ಪ್ರಣವವಿಕಾರೋವೇದಃ ಸ್ವಪ್ರಕೃತಿಭೂತೇಪ್ರಣವೇ ಲೀನಃ । ಪ್ರಣವೋಽಪಿ ಅಕಾರ ವಿಕಾರಃ ಃ ಸ್ವಪ್ರಕೃತೌ ಅಕಾರೇ ಲೀನಃ । ತಸ್ಯ ಪ್ರಣವ ಪ್ರಕೃತಿ ಭೂತಾಕಾರಸ್ಯ ಯಃ ಪರೋವಾಚ್ಯಃ ಸ ಏವ ಮಹೇಶ್ವರ ಇತಿ । ಸರ್ವ ವಾಚಕಜಾತ ಪ್ರಕೃತಿಭೂತಾಕಾರವಾಚ್ಯಃ ಸರ್ವವಾಚ್ಯಜಾತ ಪ್ರಕೃತಿಭೂತೋ ನಾರಾಯಣೋ ಯಃ ಸ ಮಹೇಶ್ವರ ಇತ್ಯರ್ಥಃ—ಸರ್ವವೇದ ಸಮೂಹಕ್ಕೂ ಪ್ರಕೃತಿಯು ಪ್ರಣವವೆಂದು ಹೇಳಲಾಗಿದೆ; ಪ್ರಣವಕ್ಕೆ ಪ್ರಕೃತಿಯು ಅಕಾರವು. ಪ್ರಣವ ವಿಕಾರವಾದ ವೇದವು ತನ್ನ ಪ್ರಕೃತಿಯಾಗಿರುವ ಪ್ರಣವದಲ್ಲಿ ಲಯು ವಾಗಿ, ಅಕಾರ ವಿಕಾರಭೂತವಾದ ಪ್ರಣವವೂ ತನ್ನ ಪ್ರಕೃತಿಯಾದ ಅಕಾರದಲ್ಲಿ ಲಯುವಾಗಿರುತ್ತದೆ. ಪ್ರಣವದ ಪ್ರಕೃತಿಯಾದ ಅಕಾರಕ್ಕೆ ಯಾವನು ಪರವೋ ಎಂದರೆ ವಾಚ್ಯವೋ ಅವನೇ ಮಹೇಶ್ವರನು ಎಂದರೆ ಸರ್ವವಾಚ್ಯ ಜಾತಕ್ಕೂ ಸಮೂಹಕ್ಕೂ ಪ್ರಕೃತಿಯಾಗಿರುವ ಅಕಾರಕ್ಕೆ ವಾಚ್ಯನಾಗಿರುವ ಸರ್ವವಾಚ್ಯಜಾತಕ್ಕೆ ಪ್ರಕೃತಿಭೂತ ನಾರಾಯಣನಿದಾನಲ್ಲ, ಅವನೇ ಮಹೇಶ್ವರನು ಎಂದರ್ಥ.

ಹೀಗೆಂದು ಹೇಳಿ "[1]ಅಕಾರೋವೈಸರ್ವಾವಾಕ್—ಅಕಾರವೇ ಸರ್ವವಾಕ್ಕು ಎಂದೂ ಶ್ರುತಿ ಇರುವುದರಿಂದ" "ವಾಚಕಜಾತಸ್ಯ ಅಕಾರ ಪ್ರಕೃತಿತ್ವಂ ವಾಚ್ಯ ಜಾತಸ್ಯ ಬ್ರಹ್ಮ ಪ್ರಕೃತಿತ್ವಞ್ಚಸುಸ್ಪಷ್ಟಮ್—ವಾಚಕಜಾತವು ಅಕಾರವೆಂಬ ಪ್ರಕೃತಿಯಿಂದಾದದ್ದು, ವಾಚ್ಯಜಾತವು ಬ್ರಹ್ಮಪ್ರಕೃತಿಯಿಂದಾದದ್ದು—ಎಂಬುದು ಸುಸ್ಪಷ್ಟವಾಗಿರುತ್ತದೆ; ಎಂದು ಹೇಳಿದೆ.

ಹಾಗೆಯೇ ಶ್ರೀಮದ್ಗೀತಾಭಾಷ್ಯದಲ್ಲಿ—ಅಕ್ಷರಾಣಾಮಕಾರೋಽಸ್ಮಿ—ಅಕ್ಷರ ಗಳ ಮಧ್ಯದಲ್ಲಿ 'ಅಕಾರೋವೈ ಸರ್ವಾವಾಕ್' ಎಂಬ ಶ್ರುತಿ ಪ್ರಸಿದ್ಧನಾದ ಎಲ್ಲಾ ವರ್ಣಗಳಿಗೂ ಪ್ರಕೃತಿಯಾದ ಅಕಾರವು ನಾನು ಎಂದು ಪರಮಾತ್ಮನೇ ಹೇಳಿದ್ದಾನೆ.

ಹಾಗೆ ಶಬ್ದಕ್ಕೆ ಪರಿಣಾಮವಾಗುವಿಕೆಯನ್ನು [2]"ಸಮಾನನಾಮರೂಪತ್ವಾಚ್ಚ" ಎಂಬ ಸೂತ್ರಾವತಾರಭಾಷ್ಯದಲ್ಲಿ ಹೇಳಿದೆ. ಶಬ್ದವು ತಾಮಸಾಹಂಕಾರ ದ್ರವ್ಯದ ಪರಿಣಾಮರೂಪವಾಗಿರುವುದೆಂಬ ಅಂಶವನ್ನೂ ಅಂತಹ ಶಬ್ದಕ್ಕೆ ಪ್ರಾಕೃತ ಪ್ರಳಯದಲ್ಲಿ ವಿಲಯುವನ್ನೂ "ಪ್ರಾಕೃತ ಪ್ರಳಯೇ ಸ್ರಷ್ಟುಃ ಪ್ರಜಾಪತೇಃ ಭೂತಾ ದ್ಯಹಂಕಾರ ಪರಿಣಾಮಶಬ್ದಸ್ಯಚ ವಿನಷ್ಟತ್ವಾತ್'' ಎಂದು ಭಾಷ್ಯಕಾರರೇ ತೋರಿ ಸಿರುವರು. ಆದುದರಿಂದ ಶಬ್ದಕ್ಕೆ ದ್ರವ್ಯತ್ವವನ್ನೂ ಅನಿತ್ಯತ್ವವನ್ನೂ ಒಪ್ಪ

1. ಐತರೇಯೋಪನಿಷತ್ ೨-೩-೬.
2. ಬ್ರಹ್ಮಸೂತ್ರ ೧-೩-೨೮.

ಬೇಕು. ಹಾಗೆಯೇ ದೀಪದಲ್ಲೂ, "ಅವ್ಯಾಕೃತಪರಿಣಾಮ ಶಬ್ದಮಯೇಷು ವೇದೇಷು — ಅವ್ಯಾಕೃತ ಪರಿಣಾಮ ವಿಶೇಷಗಳಾದ ಶಬ್ದಮಯವಾದ ವೇದಗಳಲ್ಲಿ" ಎಂದು ಹೇಳಿದೆ.

ಪರಿಣಾಮಿಯಾಗುವ ಸ್ವಭಾವವಿರುವುದರಿಂದ ದ್ರವ್ಯತ್ವವು ಸಿದ್ಧವೆಂದು ಅಭಿಪ್ರಾಯ. ಹಾಗೆಯೇ "ಯಸ್ಯವೇದಾಃ ಶರೀರಮ್ — ಯಾವನಿಗೆ ವೇದವು ಶರೀರ ವಾಗಿದೆಯೋ" ಇವೇ ಮೊದಲಾದವುಗಳಿಂದಲೂ ಶಬ್ದಕ್ಕೆ ದ್ರವ್ಯತ್ವವು ಸಿದ್ಧವಾಗಿದೆ. "ಯಸ್ಯಚೇತನಸ್ಯ ಯದ್ದ್ರವ್ಯಂ ಸರ್ವಾತ್ಮನಾ ಸ್ವಾರ್ಥೇನಿಯನ್ತುಂ ಧಾರಯಿತುಞ್ಚ ಶಕ್ಯಂತತ್‌ತಸ್ಯ ಶರೀರಮ್ — ಯಾವ ಚೇತನನಿಗೆ ಯಾವ ಪದಾರ್ಥವು ಎಲ್ಲಾ ರೀತಿ ಯಿಂದಲೂ ತನ್ನ ಪ್ರಯೋಜನಕ್ಕಾಗಿ ನಿಯಮಿಸಲೂ (ಹೇಳಿದಂತೆ ಕೇಳುವುದೂ) ಮತ್ತು ಧರಿಸಲೂ ಸಮರ್ಥವಾಗಿದೆಯೋ ಆ ಪದಾರ್ಥವು ಅವನಿಗೆ ಶರೀರ ವೆನಿಸುತ್ತದೆ" ಎಂಬುದು ಶರೀರಲಕ್ಷಣವಾಗಿರುವುದರಿಂದ ವೇದವು ಶರೀರವಾಗಿರು ವುದರಿಂದ ದ್ರವ್ಯಕ್ಕೇ ಶರೀರದ ಭಾವವಿರುವುದರಿಂದ ಶಬ್ದಕ್ಕೆ ದ್ರವ್ಯತ್ವವು ಸಿದ್ಧ ವಾಯಿತು.

ಯಾಮುನಾಚಾರ್ಯರು ರಚಿಸಿರುವ ಆತ್ಮಸಿದ್ಧಿಯೆಂಬ ಗ್ರಂಥದಲ್ಲೂ, "ದೃಶ್ಯನ್ತೇ ಗುಣಾ ಅಪಿ ಶಬ್ದಗನ್ಧಸೂರ್ಯಾಲೋಕರತ್ನಪ್ರಭಾದಯೋಗತಿಮನ್ತೋ ಧರ್ಮ್ಯತಿವರ್ತಿನಶ್ಚ ಅತಿಸೂಕ್ಷ್ಮೋ ದೂರಗಮನಧರ್ಮಾ ಭೌತಿಕೋ ಹಿ ಶಬ್ದಃ। ಸ ಖಲು ಶಙ್ಖಮುಖಾದೇರ್ದವೀಯಸೋಽಪಿ ದೃಶಾಂ ನೋದನ ವಿಶೇಷೇಣ ಲೋ ಷ್ಟಾದಿರಿವ ಯಾವದ್ವೇಗಮಭಿ ಪ್ರತಿಷ್ಠತೇ, ಸ್ಪರ್ಶರಹಿತೋಽಪಿ" ಇತ್ಯಾರಭ್ಯ ಶಬ್ದಸ್ಯ ನಭೋಗುಣತ್ವ ಪ್ರತಿಕ್ಷೇಪೋ ವಾಯವೀಯತ್ವಮುಚ್ಚಾರಣಾನನ್ತರ ಭಾವಿತ್ವಂ ವ್ಯಞ್ಜಕಪಕ್ಷದೂಷಣಾನಿ ಚ ವಿಶದಮುಪಪಾದಿತಾನಿ" ಇತಿ,

**ಇದರ ಅರ್ಥ :**—ಶಬ್ದ, ಗನ್ಧ, ಸೂರ್ಯನ ಬೆಳಕು, ರತ್ನದ ಕಾಂತಿ ಮುಂತಾ ದವು ಬೇರೆ ಧರ್ಮಿಗಳಿಗೆ ವಿಶೇಷಣಭೂತಗಳಾಗಿದ್ದರೂ ಗಮನಶಕ್ತಿಉಳ್ಳವು ಗಳಾಗಿವೆ. ಹಾಗೆಯೇ ಧರ್ಮಿಗಳಾದ ಪದಾರ್ಥಗಳನ್ನು ಬಿಟ್ಟು ಬೇರೆ ಹೋಗುವು ಗಳಾಗಿಯೂ ಇವೆ. (ಹೀಗೆ ಹೇಳಿರುವುದರಿಂದ ಕ್ರಿಯಾವತ್ತ್ವವನ್ನು ತೋರಿಸಿರುವು ದರಿಂದ ದ್ರವ್ಯತ್ವವು ಸಿದ್ಧಿಸುತ್ತದೆ ಎಂಬುದನ್ನು ಅರಿಯಬೇಕು.) ಶಬ್ದವು ಬಹಳ ಸೂಕ್ಷ್ಮವಾಗಿ ದೂರಕ್ಕೆ ಹೋಗುವ ಧರ್ಮವುಳ್ಳ ಭೌತಿಕವಾದದ್ದಲ್ಲವೇ ? (ಭೌತಿಕೋ ಹಿ ಶಬ್ದಃ ಎಂದು ಹೇಳಿರುವುದರಿಂದ ದ್ರವ್ಯತ್ವವು ಪ್ರಕಟಿಸಲ್ಪಟ್ಟಿತು.) ಹಾಗಾದರೆ ಗಂಧಕ್ಕೂ ಗತಿಮತ್ವ—ದೂರಕ್ಕೆ ಹೋಗುವಿಕೆ ಹೇಳಿರುವುದರಿಂದ ಅದೂ ದ್ರವ್ಯವೆನಿಸಿಕೊಳ್ಳಲಿ ಎಂದು ಹೇಳಕೂಡದು. ಗಂಧಕ್ಕೆ ಆಧಾರವಾದ ದ್ರವ್ಯಪರವಾಗಿದೆ ಗಂಧ ಶಬ್ದ.

ಅವುಗಳೊಳಗೆ ಭೌತಿಕವಾದ ಶಬ್ದವೆಂಬುದು ಅತಿಸೂಕ್ಷ್ಮವಾಗಿಯೂ ಬಲು ದೂರದವರೆಗೆ ಸಂಚರಿಸುವ ಸ್ವಭಾವವುಳ್ಳದಾಗಿಯೂ ಇರುವುದು ; ಏತಕ್ಕೆಂದರೆ— ಕಣ್ಣುಗಳಿಗೆ ಗೋಚರವಾಗದೆ ಅತಿದೂರದಲ್ಲಿರುವ ಶಂಖ—ಮುಖ ಮೊದಲಾದವುಗಳಿಂದ ಪ್ರೇರಿಸಲ್ಪಟ್ಟ, ಆ ಶಬ್ದವೆಂಬುದು ಪ್ರೇರಣಾಬಲದಿಂದ ಕೈಯಿಂದ ಎಸೆಯಲ್ಪಟ್ಟ ಮಣ್ಣುಹೆಂಟೆ ಮುಂತಾದ ಪದಾರ್ಥದಂತೆ ವೇಗವಿರುವವರೆಗೂ ಓಡುತ್ತಿರುವುದು; ಮತ್ತು ಸ್ಪರ್ಶಗುಣ ಹೀನವಾಗಿರುವುದು. ಈ ಸೂಕ್ತಿಯಲ್ಲಿ ಶಬ್ದಕ್ಕೆ ಭೌತಿಕತ್ವವನ್ನು ಹೇಳಿರುವುದರಿಂದ ದ್ರವ್ಯತ್ವವು ಸಿದ್ಧವಾಗಿರುವುದು.

ಶಬ್ದವು ಅದ್ರವ್ಯವೇ ಆಗಿದ್ದ ಪಕ್ಷದಲ್ಲಿ ಸ್ಪರ್ಶಗುಣವನ್ನು ಇದರಲ್ಲಿ ಪ್ರತಿಷೇಧಿಸಬೇಕಾದ ಪ್ರಸಕ್ತಿಯೇ ಇಲ್ಲ, ಅದ್ರವ್ಯದಲ್ಲಿ ಅದ್ರವ್ಯವು ಇಲ್ಲವೆಂಬುದು ಸ್ಪಷ್ಟವಷ್ಟೆ? ಶಬ್ದಕ್ಕೆ ಆಕಾಶದ ಗುಣವಾಗಿರುವಿಕೆಯ ನಿಷೇಧ. ವಾಯುವೀಯತ್ವ, ಉಚ್ಚಾರಣೆಯ ನಂತರ ಉಂಟಾಗುವಿಕೆ ವ್ಯಂಜಕ ಪಕ್ಷದೂಷಣೆ ಇವುಗಳು ಸ್ಪಷ್ಟವಾಗಿ ಉಪಪಾದನೆ ಮಾಡಲ್ಪಟ್ಟಿವೆ.

ಹೀಗೆ ಶಬ್ದಕ್ಕೆ ಅದ್ರವ್ಯತ್ವ ವ್ಯಙ್ಗ್ಯತ್ವ ಇವುಗಳನ್ನು ಸಿದ್ಧಾಂತ ಮಾಡಲು ಆಗದಿರುವಾಗ ಮಧ್ಯದಲ್ಲಿ ಬೇರೆ ವಿಚಾರವು ಪ್ರಸ್ತಾಪಿಸಲ್ಪಡುತ್ತದೆ.

ಶಬ್ದವನ್ನು ಲಕ್ಷೀಕರಿಸಿ ಶಾಸ್ತ್ರಗಳಲ್ಲಿ ಉಪಾದಾನಕಾರಣತ್ವವನ್ನೂ, ಆ ಆ ಸ್ಥಾನ ವಿಶೇಷಗಳನ್ನೂ ಆ ಆ ವರ್ಣ ವಿಶೇಷಗಳನ್ನೂ ಉಪದೇಶಿಸುವ ವಾಕ್ಯಗಳು.

೧. ನಿಶ್ಚಯವಾಗಿಯೇ ಇರುವವೋ ?

೨. ಕಲ್ಪಿತಗಳೋ ?

**ಜರದ್ಗವಃ ಕಂಬಳ ಪಾದುಕಾಭ್ಯಾಂ**
**ದ್ವಾರಿಸ್ಥಿತೋ ಗಾಯತಿ ಭದ್ರಕಾಣಿ ।**
**ತಂಬ್ರಾಹ್ಮಣೀ ಪೃಚ್ಛತಿ ಪುತ್ರಕಾಮಾ**
**ರಾಜನ್ ರುಮಾಯಾಂ ಲಶುನಸ್ಯ ಕೋಽರ್ಘಃ ॥**

ಎಂಬಿವೇ ಮೊದಲಾದ ಜರದ್ಗವಾದಿ ವಾಕ್ಯಗಳಂತೆ ಬಾಧಿತವಾದ ಅರ್ಥವುಳ್ಳವುಗಳಾಗಿ ಅಯಥಾರ್ಥಗಳೆನಿಸಿಕೊಳ್ಳುವುವೋ ?

೩. "ಮನೋಬ್ರಹ್ಮೇತ್ಯುಪಾಸೀತ"—ಬ್ರಹ್ಮವಲ್ಲದ ಮನಸ್ಸನ್ನೂ ಹಾಗೆಯೇ "ನಾಮಬ್ರಹ್ಮೇತ್ಯುಪಾಸೀತ"—ಬ್ರಹ್ಮವಲ್ಲದ ನಾಮವನ್ನೂ ಬ್ರಹ್ಮವೆಂದು

ಉಪಾಸನೆ ಮಾಡಬೇಕೆಂದು ವಿಧಿಸುವ ದೃಷ್ಟಿ. ವಿಧಿವಾಕ್ಯಗಳಂತೆ ಉಪಾದಾನ ಕಾರಣವಲ್ಲದ ವರ್ಣವನ್ನು ಉಪಾದಾನ ಕಾರಣವಾಗಿ ಉಪಾಸನೆ ಮಾಡಬೇಕೆಂದೂ, ಸ್ಥಾನವಿಶೇಷದಲ್ಲಿ ನಿಯತವಲ್ಲದ ವರ್ಣವನ್ನು ಸ್ಥಾನವಿಶೇಷದಲ್ಲಿ ಉಪಾಸನೆ ಮಾಡಬೇಕೆಂದೂ, ರೂಪವಿಲ್ಲದ ವರ್ಣವನ್ನು ಬಿಳುಪು ಕಪ್ಪು ಮುಂತಾದ ರೂಪಗಳಿಂದ ಕೂಡಿದ್ದವನ್ನಾಗಿ ಉಪಾಸನೆಮಾಡಬೇಕೆಂದೂ ವಿಧಿಸುವುವೋ ?

೪. ಅಥವಾ "ಸಿಂಹೋ ಮಾಣವಕಃ—ಎಂದು ಸಿಂಹದಂತೆ ಶೌರ್ಯವುಳ್ಳ ಹುಡುಗನಲ್ಲಿ ಔಪಚಾರಿಕವಾಗಿ ಈ ಹುಡುಗ ಸಿಂಹವೇ ಎಂಬ ಸಿಂಹ ಶಬ್ದವನ್ನು ಪ್ರಯೋಗಿಸುವಂತೆ, ಉಪಾದಾನಕಾರಣಕ್ಕೆ ಸದೃಶವಾದ ವರ್ಣದಲ್ಲಿ ಉಪಾದಾನ ಶಬ್ದವನ್ನೂ, ಸ್ಥಾನ ವಿಶೇಷದಲ್ಲಿರುವುದಕ್ಕೆ ಸದೃಶವಾದ ವರ್ಣದಲ್ಲಿ 'ಸ್ಥಾನ ವಿಶೇಷದಲ್ಲಿರುವ' ಎಂಬ ಶಬ್ದವನ್ನೂ ಶುಕ್ಲನೀಲಾದಿಗಳಿಗೆ ಸದೃಶವಾದ ವರ್ಣದಲ್ಲಿ ಶುಕ್ಲನೀಲಾದಿ ಶಬ್ದವನ್ನೂ ಪ್ರಯೋಗಿಸಿರುವುದೋ ? ಎಂಬುದಾಗಿ ನಾಲ್ಕು ವಿಚಾರಗಳು ಉಂಟಾಗುವುವು.

ಹೀಗೆ ವಿಚಾರ ಮಾಡುವಾಗ ಮೊದಲನೆಯ ಪಕ್ಷವು ಒಪ್ಪಲಾಗುವುದಿಲ್ಲ. ಏತಕ್ಕೆಂದರೆ ವರ್ಣಗಳಿಗೆ ನಿತ್ಯತ್ವವನ್ನು ಹೇಳುವ ಮೀಮಾಂಸಕರ ಮತದಲ್ಲಿ ಕಾರ್ಯಕಾರಣಭಾವವೇ ಇಲ್ಲದಿರುವಾಗ ಉಪಾದಾನ ಕಾರಣತ್ವವನ್ನು ಹೇಗೆ ಹೇಳಲಾದೀತು ? ಮತ್ತು ವ್ಯಾಪಕತ್ವವನ್ನು ಒಪ್ಪುವರ ಮತದಲ್ಲಿ ಸ್ಥಾನವಿಶೇಷ ನಿರವಯತ್ವವನ್ನು ಹೇಳುವ ಈ ಮತದಲ್ಲಿ ಬಿಳುಪು ಕೆಂಪು ಮೊದಲಾದ ಇವು ಹೇಗೆ ಸಂಭವಿಸೀತು ? ಮತ್ತು ನೈಯಾಯಿಕ ಮತದಲ್ಲಿ ಆದರೋ ಇವರು ಶಬ್ದಕ್ಕೆ ಅನಿತ್ಯತ್ವವನ್ನು ಅಂಗೀಕರಿಸುವರಾದರೂ ಅಸಮವಾಯಿಕಾರಣತ್ವವನ್ನು ಒಪ್ಪಿರುವರಲ್ಲದೆ ಉಪಾದಾನಕಾರಣತ್ವವನ್ನು ಒಪ್ಪಲಿಲ್ಲ; ಶಬ್ದಕ್ಕೆ ಗುಣಭಾವವಿರುವುದರಿಂದ ಆದಕ್ಕೆ ಯಾವಾಗಲೂ ಯಾವುದರ ಆರಂಭಕತ್ವವೂ—ಅಂದರೆ ಉತ್ಪತ್ತಿಮಾಡುವಿಕೆಯೂ ಇಲ್ಲ, ಶಬ್ದಕ್ಕೆ ಗುಣತ್ವವನ್ನು ಒಪ್ಪಿದವರಾದುದರಿಂದ ಅದಕ್ಕೆ ದ್ರವ್ಯತ್ವವೇ ಇಲ್ಲವಾಗಿ ರೂಪವೂ ಇದಕ್ಕೆ ಸಂಭವಿಸುವುದಿಲ್ಲ. ಗುಣದಲ್ಲಿ ಗುಣವಿಲ್ಲವಷ್ಟೆ ? ಮತ್ತು ಪೂಜ್ಯ ಯಾಮುನಮುನಿಗಳ ಪಕ್ಷದಲ್ಲಿಯೂ ಕೂಡ ವಾಯುವಿಗೇ ವರ್ಣಗಳಿಗೆ ಉಪಾದಾನವಾಗಿರುವಿಕೆಯನ್ನು ಒಪ್ಪಿರುವುದರಿಂದ ಸ್ಥಾನವಿಶೇಷನಿಯಮವೂ ಸಂಭವಿಸುವುದಿಲ್ಲ ; ವಾಯುವು ರೂಪಶೂನ್ಯವಾದುದರಿಂದಲೂ ಶುಕ್ಲನೀಲಾದಿ ರೂಪಗಳು ತಾನೆ ಇವುಗಳಿಗೆ ಹೇಗೆ ಸಂಭವಿಸೀತು. ಭಾಷ್ಯಕಾರರಿಂದಲೂ ವರ್ಣಗಳು ಅಹಂಕಾರತತ್ತ್ವದ ಪರಿಣಾಮವಿಶೇಷಗಳಾಗಿರುವುವು ಎಂದು ಒಪ್ಪಿರುವುದರಿಂದ ಯಾಮುನಾರ್ಯರ ಮತದಂತೆಯೇ ಇವರ ಮತದಲ್ಲಿಯೂ ವರ್ಣಗಳಿಗೆ ಉಪಾದಾನ ಕಾರಣತ್ವವಾಗಲಿ "ಆಧಾರಂತು ಚತುರ್ದಳಾರುಣಲಸತ್" ಎಂಬುದಾಗಿ ಹೇಳುವ ಸ್ಥಾನವಿಶೇಷಗಳಾಗಲಿ ರೂಪವಿಶೇಷವಾಗಲಿ ಸಂಭವಿಸುವುದಿಲ್ಲ.

ಆದಕಾರಣ "ಶಾಸ್ತ್ರಗಳಲ್ಲಿ ಶಬ್ದಕ್ಕೆ ಉಪಾದಾನಕಾರಣತ್ವವನ್ನೂ ಸ್ಥಾನ ವಿಶೇಷವನ್ನೂ ರೂಪವಿಶೇಷವನ್ನೂ ಬೋಧಿಸುದ ವಾಕ್ಯಗಳು ಯಥಾರ್ಥಗಳಾಗಿಯೇ ಇರುವುವು" ಎಂಬ ಮೊದಲನೆಯ ಪಕ್ಷವು ಸಂಭವಿಸುವುದಿಲ್ಲ.

ಹಾಗಾದರೆ—"ಉಪಾದಾನತ್ವವೂ, ಸ್ಥಾನವಿಶೇಷವೂ, ರೂಪವಿಶೇಷವೂ ಕಲ್ಪಿತಗಳಾದುದರಿಂದ ಈ ವಾಕ್ಯಗಳು ಜರದ್ಗವಾದಿ ವಾಕ್ಯಗಳಂತೆ ಬಾಧಿತಗಳಾಗಿ ಅಯಥಾರ್ಥಗಳೆನಿಸಿಕೊಳ್ಳುವುವು" ಎಂಬ ಎರಡನೆಯ ಪಕ್ಷವು ಸಂಭವಿಸಬಹುದಲ್ಲವೇ ?

ಇಲ್ಲ. ಎರಡನೆಯ ಪಕ್ಷವೂ ಸಂಭವಿಸುವುದಿಲ್ಲ. ಹೇಗೆಂದರೆ—ಕಲ್ಪಿತಗಳೆಂದು ಹೇಳಿದರೆ ಮಿಥ್ಯೆಯೆಂದು ಹೇಳಿದಂತಾಯಿತು: ಮಿಥ್ಯಾತ್ವವನ್ನು ಹೇಳುವ ನಿಮಗೆ ಸರ್ವಮಿಥ್ಯಾತ್ವವು ಇಷ್ಟವೋ ? ಅಥವಾ ಬ್ರಹ್ಮಕ್ಕಿಂತ ಬೇರೆಯಾದ ಪ್ರಪಂಚಕ್ಕೆ ಮಿಥ್ಯಾತ್ವವು ಇಷ್ಟವೋ ? ಅಥವಾ ವರ್ಣಗಳ ಉಪಾದಾನತ್ವ ಸ್ಥಾನವಿಶೇಷ–ರೂಪವಿಶೇಷ ಇವುಗಳಿಗೆ ಮಾತ್ರ ಮಿಥ್ಯಾತ್ವವು ಅಭಿಮತವೋ ?

ಮೊದಲನೆಯ ಅಭಿಪ್ರಾಯದಲ್ಲಿ ಮಾಧ್ಯಮಿಕರ ಸರ್ವಶೂನ್ಯವಾದವು ಪ್ರಸಕ್ತವಾಗುವುದು. ಎರಡನೆಯ ಅಭಿಪ್ರಾಯದಲ್ಲಿ ಅದ್ವೈತವಾದವು ಪ್ರಸಕ್ತವಾಗುವುದು. ಈ ಎರಡು ವಾದಗಳೂ "ನನ್ನ ತಾಯಿ ಬಂಜೆ" ಎಂದು ಹೇಳುವವನಂತೆ ತನ್ನ ಮಾತಿಗೇ ವಿರೋಧವನ್ನು ತರುತ್ತವೆ. ತನ್ನ ತಾಯಿ ಬಂಜೆಯಾಗಿದ್ದರೆ ಇವನು ಹೇಗೆ ಹುಟ್ಟುತ್ತಿದ್ದನು ? ಈ ಮಾತು ವ್ಯಾಘಾತವೆಂಬ ದೋಷದಿಂದ ಕೂಡಿದ್ದಾಯಿತು. ಈ ಎರಡು ವಾದಗಳೂ ತಮ್ಮ ಪ್ರತಿಜ್ಞೆಗೆ ವಿರುದ್ಧವಾದ ಅರ್ಥಗಳನ್ನು ಸಾಧಿಸಿ ಕೊಡುವುವುಗಳಾಗಿರುವುವು. ಸರ್ವಶೂನ್ಯವಾದದಲ್ಲಿ "ಸರ್ವಂ ಮಿಥ್ಯಾ–ಎಲ್ಲವೂ ಸುಳ್ಳು" ಎಂದು ಪ್ರತಿಜ್ಞೆಯನ್ನು ಮಾಡಿದರೆ ಈ ಪ್ರತಿಜ್ಞಾವಾಕ್ಯವೂ ಸರ್ವಪದಾರ್ಥದ ಗುಂಪಿಗೆ ಸೇರಿದುದರಿಂದ ಸರ್ವಕ್ಕೂ ಮಿಥ್ಯಾತ್ವವನ್ನು ತೋರಿಸುವ ಪ್ರತಿಜ್ಞಾವಾಕ್ಯವೇ ಮಿಥ್ಯೆಯಾದರೆ, ಸರ್ವದ=ಎಲ್ಲದರ ಸತ್ಯತ್ವಕ್ಕೆ ಅಪವಾದವಿಲ್ಲವಾಗುವುದು ಅಂದರೆ ಎಲ್ಲವೂ ನಿಜವಾಗಿರುವುವೇ ಆಗಿರುವುವು—ಆದಿಲ್ಲ ಎಂಬ ಮಾತೇ ಸುಳ್ಳಾಯಿತಲ್ಲಾ, ಈ ಪ್ರತಿಜ್ಞಾವಾಕ್ಯವೊಂದನ್ನು ಬಿಟ್ಟು ಉಳಿದುದೆಲ್ಲಾ ಮಿಥ್ಯೆಯಾಗಿರುವುದೆಂಬ ಅಭಿಪ್ರಾಯವನ್ನು ಹೇಳುವುದಾದರೆ ಆಗ ಈ ಪ್ರತಿಜ್ಞಾವಾಕ್ಯವೊಂದು ಸತ್ಯವಾಗಿ ಉಳಿದುದರಿಂದ ಆಗಲೂ 'ಸರ್ವಂ ಮಿಥ್ಯಾ' ಎಂದು ಪ್ರತಿಜ್ಞೆ ಮಾಡಕೂಡದು. ಏತಕ್ಕೆಂದರೆ ಸರ್ವಶೂನ್ಯವಾದಿಗಳಿಗೆ ಈ ಪ್ರತಿಜ್ಞಾವಾಕ್ಯವು ಮಾತ್ರ ಸತ್ಯವಾಗಿರುವುದೆಂಬುದು ಇಷ್ಟವೂ ಇಲ್ಲ.

ಅದ್ವೈತವಾದದಲ್ಲಿ "ಬ್ರಹ್ಮವ್ಯತಿರಿಕ್ತಂ ಮಿಥ್ಯಾ" ಎಂದು ಪ್ರತಿಜ್ಞೆಯನ್ನು ಮಾಡಿದರೆ ಈ ಪ್ರತಿಜ್ಞಾವಾಕ್ಯವೂ ಬ್ರಹ್ಮವ್ಯತಿರಿಕ್ತವಾದುದರಿಂದ—ಬ್ರಹ್ಮಕ್ಕಿಂತ

ಬೇರೆಯಾದುದರಿಂದ ಮಿಥ್ಯೆಯಾಗಬೇಕಾಗಿಬರವುದು ; ಆಗ ಪ್ರಪಂಚದ ಸತ್ಯತ್ವಕ್ಕೆ ಅಪವಾದವನ್ನು—ಅದಿಲ್ಲ ಎಂದು ಹೇಳುವ ಪ್ರತಿಜ್ಞಾವಾಕ್ಯವೇ ಮಿಥ್ಯೆಯಾದರೆ ಪ್ರಪಂಚದ ಸ್ವಭಾವಸಿದ್ಧವಾದ ಸತ್ಯತ್ವಕ್ಕೆ ಚ್ಯುತಿ (ನಾಶ) ಇಲ್ಲದಂತೆ ಆಗುವುದು. ಈ ಪ್ರತಿಜ್ಞಾ ವಾಕ್ಯವೊಂದನ್ನು ಬಿಟ್ಟು ಉಳಿದ ಬ್ರಹ್ಮವ್ಯತಿರಿಕ್ತವೆಲ್ಲಾ ಮಿಥ್ಯೆಯಾಗಿರುವುದು ಎಂದು ಅಭಿಪ್ರಾಯವನ್ನು ಹೇಳುವುದಾದರೆ ಆಗ "ಏತತ್ಪ್ರತಿಜ್ಞಾವಾಕ್ಯಂವಿನಾಬ್ರಹ್ಮವ್ಯತಿರಿಕ್ತಂಮಿಥ್ಯಾ" ಎಂದು ಪ್ರತಿಜ್ಞೆ ಮಾಡಬೇಕಾಗಿ ಬರುವುದರಿಂದ "ಬ್ರಹ್ಮವ್ಯತಿರಿಕ್ತಂ ಮಿಥ್ಯಾ" ಎಂದು ಪ್ರತಿಜ್ಞೆ ಮಾಡಿದುದು ಅಸಂಗತವಾಗುವುದು. ಈ ಪ್ರತಿಜ್ಞಾವಾಕ್ಯದ ಸತ್ಯತ್ವವು ಅದ್ವೈತವಾದಿಗಳಿಗೆ ಅಭಿಮತವೂ ಅಲ್ಲ, ಆಗ ಸತ್ಯದ್ವಯುವು ಅಂದರೆ ಬ್ರಹ್ಮವೊಂದು ಸತ್ಯವಾದದ್ದು. ಈ ಪ್ರತಿಜ್ಞಾವಾಕ್ಯವೊಂದು ಸತ್ಯವೆಂಬುದಾಗಿ ಎರಡಿಲ್ಲ. ಒಂದೇ ಸತ್ಯವಾದದ್ದು ಎಂದು ಹೇಳುವ ಅದ್ವೈತವಾದವು ಕೆಟ್ಟುಹೋಗುವುದು.

ವರ್ಣಗಳಿಗೆ ಉಪಾದಾನಕಾರಣತ್ವ—ಸ್ಥಾನವಿಶೇಷ—ರೂಪವಿಶೇಷಗಳಿಗೇ ಮಾತ್ರವೇ ಮಿಥ್ಯಾತ್ವವನ್ನು ಹೇಳುವೆವು ಎಂಬ ಮೂರನೆಯ ಅಭಿಪ್ರಾಯದಲ್ಲಿ ಆಗಮದಿಂದ ಸಿದ್ಧವಾಗಿರುವ ಇವುಗಳಿಗೆ ಮಿಥ್ಯಾತ್ವವನ್ನು ಹೇಳುವುದಾದರೆ ಪ್ರಕೃತಿ–ಮಹಾನ್–ಅಹಂಕಾರ ಮುಂತಾದವುಗಳಿಗೆ ಆಗಮಸಿದ್ಧವಾಗಿರುವ ಉಪಾದಾನಕಾರಣತ್ವಾದಿಗಳಿಗೂ ಮಿಥ್ಯಾತ್ವವನ್ನು ಏಕೆ ಹೇಳಬಾರದು ? ಪ್ರಕೃತ್ಯಾದಿಗಳ ವಿಷಯದಲ್ಲಿ ಉಪಾದಾನತ್ವಾದಿಗಳಿಗೆ ಉಪಪತ್ತಿಯುಂಟೆಂದೂ, ವರ್ಣಗಳ ವಿಷಯದಲ್ಲಿ ಉಪಪತ್ತಿಯಿಲ್ಲದೆ ಅನುಪಪತ್ತಿಯಿರುವುದೆಂದೂ ತಾರತಮ್ಯವನ್ನು ಹೇಳಲಾಗುವುದಿಲ್ಲ ; ಇಲ್ಲಿ ಅನುಪಪತ್ತಿಯಿದ್ದರೆ ಅಲ್ಲಿಯೂ ಅನುಪಪತ್ತಿಯನ್ನು ಊಹಿಸಬಹುದು ; ಅಲ್ಲಿ ಉಪಪತ್ತಿಯಿದ್ದರೆ ಇಲ್ಲಿಯೂ ಉಪಪತ್ತಿಯು ಇದೆ ಎನ್ನಬಹುದು.

ಆಗಮದಿಂದ ಸಿದ್ಧವಾಗಿರುವುದಕ್ಕೆ ಉಪಪತ್ತಿಯೆಂಬ ತರ್ಕದಿಂದ ಬಾಧಿಸಲ್ಪಡುವಿಕೆ ಕೂಡುವುದಿಲ್ಲ. ತರ್ಕಕ್ಕೆ ಅನುಸಾರವಾಗಿ ಆಗಮವನ್ನು ವ್ಯತ್ಯಾಸ ಮಾಡಲು ಸಾಧ್ಯವಿಲ್ಲ. ಆಗಮವಿರುದ್ಧವಾದ ತರ್ಕಗಳು ಆದರಿಸಲು ತಕ್ಕವಲ್ಲ. ಆದುದರಿಂದ—

**ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರಾವಿರೋಧಿನಾ ।**
**ಯಸ್ತರ್ಕೇಣಾನು ಸಂಧತ್ತೇ ಸಧರ್ಮಂವೇದನೇತರಃ ॥**

ವೇದಶಾಸ್ತ್ರಕ್ಕೆ ವಿರೋಧವಿಲ್ಲದೆ ತರ್ಕದಿಂದ ಋಷಿಗಳಿಂದ ಹೇಳಲ್ಪಟ್ಟ ರಹಸ್ಯಾರ್ಥವನ್ನೂ ಮತ್ತು ಧರ್ಮೋಪದೇಶವನ್ನೂ ಯಾವನು ನಿರ್ಧರಿಸಿ ಅರಿಯು

ತ್ತಾನೋ ಅವನೇ ಧರ್ಮವನ್ನು ಅರಿತವನು–ಬೇರೆಯವನಲ್ಲ ಎಂಬುದು ಮನುವಿನ ಮಾತು.

ಆಗಮವು ಪ್ರಮಾಣವಲ್ಲವೆಂದು ಹೇಳುವವರನ್ನು—"ಪ್ರತ್ಯಕ್ಷವೂ, ಅನುಮಾನವೂ ಹೇಗೆ ಪ್ರಮಾಣಗಳಾದುವು ?" ಎಂದು ಕೇಳಬೇಕು. ಕಾರಣ "ದೋಷವೂ ಬಾಧಕಜ್ಞಾನವೂ ಇಲ್ಲವಾದುದರಿಂದ ಪ್ರತ್ಯಕ್ಷಾನುಮಾನಗಳು ಪ್ರಮಾಣಗಳೆನಿಸಿ ಕೊಂಡಿರುವುವು" ಎಂದು ಪ್ರತ್ಯುತ್ತರವನ್ನು ಹೇಳಿದರೆ, ಆಗಮ ವಿಷಯದಲ್ಲಿಯೂ ಕಾರಣದೋಷ ಬಾಧಕಪ್ರತ್ಯಯಗಳಿಲ್ಲವೆಂಬುದು ಸಮಾನವಾದುದರಿಂದ ಇದೂ ಪ್ರಮಾಣವೆಂದು ಅಂಗೀಕರಿಸಲೇಬೇಕಾಗುತ್ತದಲ್ಲವೇ ? ಹೀಗೆ ಆಗಮಕ್ಕೂ ಪ್ರಾಮಾಣ್ಯವಿರುವಾಗ ಅನುಪಪತ್ತಿಯೆಂಬ ಕಾರಣದಿಂದ ಇದನ್ನು ಬಾಧಿಸುವುದಕ್ಕಾಗುವುದಿಲ್ಲ.

ವರ್ಣಗಳಿಗೆ ಉಪಾದಾನಕಾರಣತ್ವವಿರುವುದಾದರೆ ಪ್ರತ್ಯಕ್ಷವಾಗಿ ಅದು ಕಾಣಬೇಕಲ್ಲವೇ ? ಘಟಕ್ಕೆ ಮಣ್ಣು ಉಪಾದಾನಕಾರಣ, ಅದು ಕಣ್ಣಿಗೆ ಕಾಣುತ್ತದೆ. ಹಾಗಲ್ಲವೇ ಇದೂ ಕಾಣಬೇಕು ಎಂದರೆ ಪ್ರತ್ಯಕ್ಷಕ್ಕೆ ಗೋಚರವಾಗದ ಧರ್ಮಾಧರ್ಮಗಳನ್ನೂ, ಪರಲೋಕವನ್ನೂ, ಈಶ್ವರನನ್ನೂ ಈ ರೀತಿಯಾದ ಇನ್ನೂ ಅನೇಕ ಪದಾರ್ಥಗಳನ್ನೂ ತಿರಸ್ಕರಿಸಬೇಕಾಗುತ್ತದೆ.

ಆದಕಾರಣ ವರ್ಣಗಳಿಗೆ ಉಪಾದಾನತ್ವಾದಿಗಳನ್ನು ಬೋಧಿಸುವ ವಾಕ್ಯಗಳು ಅಯಥಾರ್ಥಗಳಾಗಿರುವವು ಎಂಬ ಮೂರನೆಯ ಪಕ್ಷವೂ ಸಂಭವಿಸುವುದಿಲ್ಲ. ವರ್ಣಗಳ ವಿಷಯವಾಗಿ ಶಾಸ್ತ್ರದೊಳಗೆ ಒಂದೊಕ್ಕೊಂದಕ್ಕೆ ವಿರುದ್ಧಗಳಾದ ಅನೇಕ ರೀತಿಗಳು ಸ್ಪಷ್ಟವಾಗಿ ಹೇಳಿರುವುದರಿಂದ ಇವುಗಳೆಲ್ಲಕ್ಕೂ ಉಪಪತ್ತಿಯನ್ನು ಹೇಳಬೇಕಾದರೆ ದೃಷ್ಟಿವಿಧಿಯೆಂಬ ಈ ನಾಲ್ಕನೆಯ ಪಕ್ಷವನ್ನು ಬಿಟ್ಟರೆ ಬೇರೆಗತಿಯೇ ಇಲ್ಲ ; ಎಂದು ತಿಳಿದು ಆ ಪಕ್ಷವನ್ನು ಅರಿಯೋಣ.

ಕೆಲವು ಗ್ರಂಥಗಳಲ್ಲಿ ಪ್ರಣವದ ಭಾಗವಾದ ಅಕಾರ, ಉಕಾರ, ಮಕಾರಗಳಿಂದಲೇ ವರ್ಣಗಳ ಉತ್ಪತ್ತಿಹೇಳಿದೆ. ಮತ್ತೆ ಕೆಲವುಗಳಲ್ಲಿ ಹೃಲ್ಲೇಖಾ ಮಂತ್ರವೆಂದು ಮಂತ್ರಶಾಸ್ತ್ರದಲ್ಲಿ ಹೇಳಲ್ಪಡುವ 'ಹ್ರೀಂ' ಎಂಬ ಮಂತ್ರದ ಅವಯವಭೂತವಾದ ಹಕಾರದಿಂದ ಎಲ್ಲಾವರ್ಣಗಳೂ ಹುಟ್ಟುತ್ತವೆಯೆಂದು ಹೇಳಿದೆ.

ಇವೆರಡನ್ನೂ ಮೀರಿ ಬೇರೆ ರೀತಿಯಿಂದ ಅಂದರೆ ಎಲ್ಲಾ ವರ್ಣಗಳಿಗೂ ಅಕಾರಾದಿಯು ಉಪಾದಾನಕಾರಣವಾಗಿದೆ ಎಂಬ ರೀತಿಯನ್ನು ಬಿಟ್ಟು ಅಕಾರಾದಿ ವರ್ಣಗಳಿಗೆ ಭೂಃ, ಭುವಃ, ಸುವಃ ಇವು ಉಪಾದಾನವಾಗಿವೆ ಎಂದು ಶ್ರುತಿಯು ಹೇಳುತ್ತದೆ. "ಭೂರಿತ್ಯೇವ ಋಗ್ವೇದಾದಜಾಯತ—ಋಗ್ವೇದದಿಂದ ಭೂಃ ಎಂಬುದೇ

ಹುಟ್ಟಿತು. "ಭುವ ಇತಿ ಯಜುರ್ವೇದಾತ್—ಯಜುರ್ವೇದದಿಂದ ಭುವಃ ಎಂದೂ, ಸುವರಿತಿ ಸಾಮವೇದಾತ್—ಸಾಮವೇದದಿಂದ ಸುವಃ" ಎಂದೂ ಹುಟ್ಟಿದವು. ತಾನಿಶುಕ್ರಿಯಾಣ್ಯಭ್ಯತಪತ್। ತೇಭ್ಯೋಽಭಿತಪ್ತೇಭ್ಯಸ್ತ್ರಯೋವರ್ಣಾ ಅಜಾಯನ್ತ। ಅಕಾರ ಉಕಾರ ಮಕಾರ ಇತಿ। ತಾನೇಕಧಾಸಮಭರತ್ತದೇತದೋಮಿತಿ।

ಇದರ ಒಟ್ಟು ಅಭಿಪ್ರಾಯ :—ಸೃಷ್ಟಿಕಾರ್ಯದಲ್ಲಿ ಅಧಿಕಾರವನ್ನು ಪಡೆದ ಚತುರ್ಮುಖ ಬ್ರಹ್ಮನು ಪ್ರಪಂಚವನ್ನು ಸೃಷ್ಟಿಸಿದನು. ಹೀಗೆ ಸೃಷ್ಟಿಸಲ್ಪಟ್ಟ ಲೋಕಕ್ಕೆ ಹಿತವನ್ನು ಬಯಸಿ ಈ ಸೃಷ್ಟಿಗೆ ಸಾಧನವಾದ ವೇದಗಳನ್ನು ತನ್ನ ಬುದ್ಧಿಯಲ್ಲಿ ಮತ್ತೆ ಮತ್ತೆ ಮನನಮಾಡಿದನು. 'ಭೂಃ' ಎಂಬ ಮೊದಲನೆಯ ವ್ಯಾಹೃತಿ ಮಂತ್ರವನ್ನು ಋಗ್ವೇದದ ಸಾರವಾಗಿ ಕಂಡುಹಿಡಿದನು. ಆದುದರಿಂದ ಇದು ಋಗ್ವೇದದಿಂದ ಹುಟ್ಟಿತೆಂದು ವ್ಯವಹರಿಸಲ್ಪಡುವುದು. ಮತ್ತು 'ಭುವಃ' ಎಂಬ ಎರಡನೆಯ ವ್ಯಾಹೃತಿ ಮಂತ್ರವನ್ನು ಯಜುರ್ವೇದದ ಸಾರವಾಗಿಯೂ, 'ಸುವಃ' ಎಂಬುದು ಮೂರನೆಯ ವ್ಯಾಹೃತಿ ಮಂತ್ರವನ್ನು ಸಾಮವೇದದ ಸಾರವಾಗಿಯೂ ಕಂಡುಹಿಡಿದನು. ಅನೇಕ ಮಂತ್ರಗಳಿದ್ದರೂ ಈ ಮೂರು ಮಂತ್ರಗಳೇ ಶುಕ್ರಿಯಗಳು—ಎನಿಸಿಕೊಂಡವು. ಶುಕ್ರಃ-ತೇಜಸ್ವಿಯಾದ ಪರಮಾತ್ಮನು. ಅವನು ಇವುಗಳಿಗೆ ದೇವತೆ. ಆದುದರಿಂದ ಶುಕ್ರಿಯಗಳಾದವು—ಸಾರವು ಆದವು. ನೇರವಾಗಿ ಪ್ರತಿಪಾದಿಸಲ್ಪಡುವವನು ಪರಮಾತ್ಮನು. ಈ ವ್ಯಾಹೃತಿ ಎಂಬ ಹೆಸರುಳ್ಳ ಭೂಃ, ಭುವಃ, ಸುವಃ ಎಂಬುವುಗಳಿಂದ ಪರಮಾತ್ಮನು ಇವುಗಳಿಗೆ ಪ್ರತಿಪಾದ್ಯ ದೇವತೆಯಾದುದರಿಂದ ಇವುಗಳು ಸಾರಗಳೆನಿಸಿಕೊಂಡವು.

ಹೀಗೆ ಸಾರಭೂತಗಳೆಂದು ನಿಷ್ಕರ್ಷಿಸಲ್ಪಟ್ಟ ಈ ಶುಕ್ರಿಯಗಳನ್ನು ಬ್ರಹ್ಮದೇವನು ಮತ್ತೆ ಆಲೋಚನಾ ರೂಪವಾದ ತಪಸ್ಸಿಗೆ ಗುರಿಪಡಿಸಿ ಮಥನಮಾಡಿದನು—ಕಡೆದನು. ಹೀಗೆ ಮಥಿಸಲ್ಪಟ್ಟ ಈ ಮೂರು ವ್ಯಾಹೃತಿ ಮಂತ್ರಗಳಿಂದಲೂ ಕ್ರಮವಾಗಿ ಅಕಾರ—ಉಕಾರ—ಮಕಾರಗಳೆಂಬ ಮೂರು ವರ್ಣಗಳು ಹುಟ್ಟಿದವು. ಈ ಮೂರನ್ನೂ ಒಟ್ಟುಗೂಡಿಸಿ ಉಚ್ಚರಿಸಿದುದರಿಂದ ಅವು 'ಓಂ' ಎಂಬ ಪ್ರಣವಾಕಾರವನ್ನು ಪಡೆದವು.

ಈ ಶ್ರುತಿಯನ್ನೇ-

ಅಕಾರಂಚಾಪ್ಯುಕಾರಂಚ ಮಕಾರಂಚ ಪ್ರಜಾಪತಿಃ
ವೇದತ್ರಯಾನ್ನಿರದುಹದ್ಭೂರ್ಭುವಸ್ಸ್ವರಿತೀತಿ ಚ ॥

ಎಂಬ ಮನುಸ್ಮೃತಿ ವಚನವೂ ಅನುಸರಿಸುವುದು.

ಈ ಶ್ರುತಿ ಸ್ಮೃತಿಗಳು ಸರ್ವವರ್ಣಗಳಿಗೂ ಅಕಾರೋಕಾರಮಕಾರಗಳೇ ಕಾರಣಗಳೆಂದು ಹೇಳುವುದನ್ನು ಬಿಟ್ಟು ಈ ಮೂರು ವರ್ಣಗಳು ವ್ಯಾಹೃತಿತ್ರಯ ದಿಂದ ಹುಟ್ಟುವುವೆಂದು ತೋರಿಸುವುವು.

ಹಾಗೆಯೇ ಎಲ್ಲಾ ಮಂತ್ರಗಳಿಗೂ ಬೀಜ–ಉತ್ಪತ್ತಿಸ್ಥಾನ ಪ್ರಣವ ಎಂದು ಸಾಧಾರಣವಾಗಿ ಹೇಳಿ ಪ್ರತಿ ಒಂದು ಮಂತ್ರಕ್ಕೂ ಬೀಜಾಕ್ಷರಗಳನ್ನು ಆ ಆ ಮಂತ್ರ ಕಲ್ಪಗಳು ಹೇಳುತ್ತವೆ. ಹಾಗೆಯೇ ಪ್ರಳಯಕಾಲದಲ್ಲಿಯೂ "ಮಂತ್ರಂ ಸಞ್ಛಾದ್ಯ ರಕ್ಷತಿ=ಮಂತ್ರವನ್ನು ಮುಚ್ಚಿ ಕಾಪಾಡುತ್ತದೆ- ಎಂದು ಛಂದಸ್ಸಿನ ನಿರ್ವಚನವಿರುವು ದರಿಂದ ಗಾಯತ್ರೀ–ಉಷ್ಣಿಕ್–ಅನುಷ್ಟುಪ್–ಬೃಹತೀ–ಪಙ್ತ್ತಿ–ತ್ರಿಷ್ಟುಪ್–ಜಗತೀ ಇವುಗಳಲ್ಲೊಂದು ಛಂದಸ್ಸು ಪ್ರತಿ ಮಂತ್ರಗಳಿಗೂ ಇದ್ದೇ ಇರೋಣದರಿಂದ ಅವು ನಿತ್ಯವಾಗಿ ಇರುವವು ಎಂದಾಗುತ್ತವೆ; ಇದು ವಿರೋಧವಾಗಿದೆ.

ಹೀಗೆ ವರ್ಣರೂಪವಾದ ಮಂತ್ರಗಳಿಗೆ ನಿತ್ಯತ್ವವು ತೋರಿಬರುವುದರಿಂದ ಕಾರಣವನ್ನೇ ಎದುರುನೋಡದ ಇವುಗಳಿಗೆ ಉಪಾದಾನ ಕಾರಣವನ್ನು ಹೇಳುವ ಸಂದರ್ಭಕ್ಕೆ ಅವಕಾಶವಿಲ್ಲ.

ಹಾಗೆಯೇ ಆ ಆ ಅಕ್ಷರಗಳಿಗೆ ಬಿಳುಪು, ಕೆಂಪು, ಹಳದಿ, ಕಪ್ಪು ಇವೇ ಮುಂತಾದ ರೂಪವಿಶೇಷಗಳೂ ಹೇಳಲ್ಪಡುತ್ತವೆ. ಒಂದೇ ಅಕ್ಷರಕ್ಕೆ ಕಾರ್ಯ ಭೇದದಿಂದಲೂ ಮಂತ್ರಭೇದದಿಂದಲೂ ರೂಪಭೇದವು ಉಪದೇಶಿಸಲ್ಪಟ್ಟಿರುವುದು. ನಿಜವಾಗಿಯೂ ವರ್ಣಗಳಿಗೆ ರೂಪವಿರುವುದಾದರೆ ಯಾವುದಾದರೊಂದು ರೂಪವು ವ್ಯವಸ್ಥಿತವಾಗಿರಬೇಕು ; ಹಾಗಿಲ್ಲದೆ ಒಂದೇ ವರ್ಣವು ಒಂದೊಂದು ವೇಳೆ ಒಂದೊಂದು ರೂಪವನ್ನು ಹೇಗೆ ಪಡೆದೀತು ? ಹೀಗೆಯೇ ವರ್ಣಗಳಿಗೆ ಅಲ್ಲಲ್ಲಿ ಉಪದೇಶಿಸಲ್ಪಡುವ ನಿಯತ ನಿಯಮ ಇರುವ ಮತ್ತು ಅನಿಯತ–ನಿಯಮವಿಲ್ಲದೆ ಇರುವ ಸ್ಥಾನವಿಶೇಷದಲ್ಲಿಯೂ ವಿರೋಧವನ್ನು ತಿಳಿಯಬಹುದು.

ನಿಜವಾಗಿಯೂ ವರ್ಣಗಳಿಗೆ ರೂಪ–ಸ್ಥಾನ ಮುಂತಾದ ಭೇದಗಳು ಇಲ್ಲ, ಆದರೂ ಆ ರೀತಿ ರೂಪ ಸ್ಥಾನಾದಿಗಳು ಇರುವಂತೆ ಅನುಸಂಧಾನ ಮಾಡಿದರೆ ಅದರಿಂದ ಒಂದು ಅದೃಷ್ಟವಿಶೇಷ ಉಂಟಾಗುತ್ತದೆ. ಯನ್ತ್ರಗಳ ಸಮಾಚಾರದಂತೆ ಎಂಬುದು ನಮ್ಮ ಇಷ್ಟ. ಹಾಗಿಲ್ಲದಿದ್ದರೆ ಒಂದಕ್ಕೊಂದು ವಿರುದ್ಧವಾದ ಕಾರ್ಯ ಕಾರಣಭಾವ (ಉಪಾದಾನ ಉಪಾದೇಯ ಭಾವ) ರೂಪ, ಸ್ಥಾನ ಮುಂತಾದವುಗಳ ಉಪದೇಶದಿಂದ ಅವುಗಳಿಗೆ ಪ್ರಾಮಾಣ್ಯವೇ ಇಲ್ಲದಂತಾಗುತ್ತದೆ. ಆದುದರಿಂದ ಈ ವಿಷಯದಲ್ಲಿ "ಅತಸ್ಮಿನ್ ತದ್ವತ್ತಾಬುದ್ಧಿಃ=ಅದಿಲ್ಲದುದಲ್ಲಿ ಅದು ಇರುವಂತೆ ಭಾವಿ ಸುವುದು" ಎಂಬ ದೃಷ್ಟಿವಿಧಾನವೇ ತಕ್ಕದ್ದು ಎಂದರೆ ಈ ಪಕ್ಷವೂ ತಿರಸ್ಕರಿಸಲ್ಪಟ್ಟಿದೆ.

ಏತಕ್ಕೆಂದರೆ "ಓಮಿತ್ಯೇತದಕ್ಷರ ಮುದ್ಗೀಥಮುಪಾಸೀತ" ಎಂಬುದಾಗಿ (ಸಾಮದ ಒಂದು ಭಾಗವಾದ ಉದ್ಗೀಥಕ್ಕೆ ಒಂದು ಅವಯವವೆನಿಸಿಕೊಂಡಿರುವ ಪ್ರಣವವನ್ನು ಸಂಪೂರ್ಣ ಉದ್ಗೀಥವೆಂದು ಉಪಾಸನೆ ಮಾಡಬೇಕು) ಎಂದು ದೃಷ್ಟಿವಿಧಿ ದೊರೆಯುವಂತೆ, "ಪ್ರಣವಂ ಸರ್ವಾಕ್ಷರೋಪಾದಾನ ಮುಪಾಸೀತ= ಓಂ ಕಾರವನ್ನು ಸರ್ವವರ್ಣಗಳಿಗೂ ಉಪಾದಾನ ಕಾರಣವಾಗಿ ಉಪಾಸನೆ ಮಾಡಬೇಕು" ಎಂಬುದಾಗಿ ಒಂದು ದೃಷ್ಟಿವಿಧಿಶಾಸ್ತ್ರವು ಇದುವರೆಗೂ ದೊರೆತಿಲ್ಲ. ತತ್ತ್ವಸ್ಥಿತಿಯನ್ನು ನಿರೂಪಿಸುವ ರೀತಿಯಲ್ಲಿಯೇ ಈ ಶಾಸ್ತ್ರಗಳು ಉಪಾದಾನ ಕಾರಣತ್ವ, ಸ್ಥಾನವಿಶೇಷ, ರೂಪವಿಶೇಷಗಳನ್ನು ವರ್ಣಗಳಿಗೆ ಉಪದೇಶಿಸುತ್ತಿರುವುವು. ಹೀಗಿರುವಾಗಲೂ ಅಂದರೆ ವಿಧಿಯು ಹೇಳಲ್ಪಡದಿದ್ದರೂ ಅದಕ್ಕೆ ವಿಧಿಯನ್ನು ಹೇಳುವುದಾದರೆ ದೃಷ್ಟಿವಿಧಿತ್ವವನ್ನು ಸ್ವೀಕರಿಸುವುದಾದರೆ ಪರಮಾತ್ಮನಿಗೆ ನಿಜವಾಗಿ ಜಗತ್ಕಾರಣತ್ವವನ್ನು ಬೋಧಿಸುವ ಶಾಸ್ತ್ರಗಳಲ್ಲಿಯೂ ಇದೇ ನ್ಯಾಯವನ್ನು ಅವಲಂಬಿಸಬೇಕಾಗಿ ಬಂದೀತು; ಎಂದರೆ ವಾಸ್ತವವಾಗಿಯೂ ಪರಮಾತ್ಮನು ಜಗತ್ತಿಗೆ ಉಪಾದಾನಕಾರಣನಲ್ಲ; ಆದರೂ ಫಲವಿಶೇಷ ಸಿದ್ಧಿಗಾಗಿ ಅವನು ಜಗದುಪಾದಾನಕಾರಣನು ಎಂದು ಪರಮಾತ್ಮನನ್ನು ಉಪಾಸಿಸಬೇಕು ಎಂದು ಪ್ರಸಕ್ತವಾದೀತು.

ಅಲ್ಲದೆ ತತ್ತ್ವಸ್ಥಿತಿಯ ನಿರ್ಣಯಕ್ಕೆ ಉಪಯೋಗಿಗಳಾದ ಯುಕ್ತಿಗಳನ್ನು ತೋರಿಸುತ್ತಾ ಬಂದ ಸಂದರ್ಭದಲ್ಲಿ ಶ್ರೀ ಭಾಷ್ಯಕಾರರು ಅಕಾರವು ಸರ್ವಶಬ್ದಗಳಿಗೂ ಮೂಲ ಎಂಬ ಕಾರಣವನ್ನು ಹೇಳಿ ಪರಮಾತ್ಮ ವಾಚಕತ್ವವನ್ನು ತೋರಿಸಿರುವರು. ದೃಷ್ಟಿವಿಧಿತ್ವವನ್ನು ಅವರೂ ತೋರಿಸಿಲ್ಲ. ವಸ್ತುಸ್ಥಿತಿಯಲ್ಲಿ ಅಕಾರಕ್ಕೆ ಸರ್ವಶಬ್ದೋಪಾದಾನಕಾರಣವಾಗಿರುವಿಕೆಯೇ ಇಲ್ಲವಾದರೆ ಪರಮಾತ್ಮ ವಾಚಕತ್ವವೂ ಇದಕ್ಕೆ ಸಿದ್ಧಿಸಲಿಲ್ಲ. ಆಗ ಅಕಾರವಾಚ್ಯನಲ್ಲದ ಪರಮಾತ್ಮನಿಗೆ ಮಹೇಶ್ವರತ್ವವೂ ಸಿದ್ಧಿಸಲಾರದೇ ಹೋಗುವುದು.

ಅಕಾರವು ಸಾಕ್ಷಾತ್ತಾಗಿ ಉಪಾದಾನಕಾರಣವಾಗದಿದ್ದರೂ ಅಕಾರವಿಶಿಷ್ಟವಾದ ಆಕಾಶವು ಉಪಾದಾನಕಾರಣವಾಗಿಯೇ ಇರುವುದರಿಂದ [1]ಕುಶಕಾಶಾವಲಂಬನ ನ್ಯಾಯದಿಂದ ಮುಖ್ಯಪಕ್ಷವಲ್ಲದಿದ್ದರೂ ಗೌಣಪಕ್ಷವನ್ನು ಅನುಸರಿಸಿ ಈ ಶಾಸ್ತ್ರಗಳಿಗೆ ಉಪಪತ್ತಿಯನ್ನು ಹೇಳಬಹುದಲ್ಲವೇ ? ಎಂದರೆ ಅಕಾರಕ್ಕೆ ಮುಖ್ಯವಾದ ಉಪಾದಾನಕಾರಣತ್ವವು ಸಿದ್ಧಿಸದಿದ್ದರೂ ಅಕಾರವಿಶಿಷ್ಟವಾದ ಆಕಾಶಕ್ಕೆ

1. ಪ್ರವಾಹದಲ್ಲಿ ಮುಳುಗಿದವನು ದಡವನ್ನು ಹತ್ತಲಾಗದೆ ಕಷ್ಟಪಡುವ ವೇಳೆಯಲ್ಲಿ ದಡದಲ್ಲಿ ಬೆಳೆದಿರುವ ಒಂದು ದರ್ಭೆಯ ಅಥವಾ ಜೊಂಡಿನ ಬುಡವನ್ನಾದರೂ ಹಿಡಿದು ಹತ್ತುವಂತೆ.

ಉಪಾದಾನಕಾರಣತ್ವವಿರುವಾಗ ಅಕಾರಕ್ಕೆ ಅನುಕಲ್ಪವಾದ–ಗೌಣವಾದ ಉಪಾದಾನ ಕಾರಣತ್ವವು ಸಿದ್ಧಿಸಬಹುದಲ್ಲವೇ ? ಎಂದರೆ ಹಾಗೆ ಹೇಳುವುದಾದರೆ ವಿಶೇಷ್ಯ ವಾದ ಆಕಾಶದಲ್ಲಿರುವ ಉಪಾದಾನಕಾರಣತ್ವವನ್ನು ವಿಶೇಷಣವಾದ ಅಕಾರದಲ್ಲಿ ಉಪಚರಿಸಿ ಹೇಳಿದಂತೆ ಪರ್ಯವಸಾನವಾಗುವುದು. ಆಗ ಔಪಚಾರಿಕತ್ವವೆಂಬ ನಾಲ್ಕನೆಯ ಪಕ್ಷವನ್ನು ಸ್ವೀಕರಿಸಿದಂತೆ ಆಗುವುದರಿಂದ ದೃಷ್ಟಿವಿಧಿಯೆಂಬ ಮೂರ ನೆಯ ಪಕ್ಷವು ಓಡಿಹೋಯಿತು.

ಹಾಗಾದರೆ ಔಪಚಾರಿಕತ್ವವೆಂಬ ನಾಲ್ಕನೆಯ ಪಕ್ಷವನ್ನೇ ಇಲ್ಲಿ ಸ್ವೀಕರಿಸಿದರೆ ಕುಂದೇನು ? [1]ಎಂದರೆ,

ವಾಚಕಶಬ್ದರಾಶಿಗೆ ಪ್ರಕೃತಿಭೂತವಾದ ಅಕಾರಕ್ಕೆ ವಾಚ್ಯರಾಶಿ ಪ್ರಕೃತಿ ಭೂತ ಪರಮಾತ್ಮ ವಾಚಕತ್ವವನ್ನು ಹೇಳಿದುದು ಅಸಂಗತವಾಗುತ್ತದೆ.

**ಅಕಾರೇಣಾಖಿಲಾಧಾರಃ ಪರಮಾತ್ಮಾಭಿಧೀಯತೇ ।**
**ಸಮಸ್ತಶಬ್ದಮೂಲತ್ವಾದಕಾರಸ್ಯ ಸ್ವಭಾವತಃ ॥**
**ಸಮಸ್ತವಾಚ್ಯ ಮೂಲತ್ವಾತ್ ಬ್ರಹ್ಮಣೋऽಪಿ ಸ್ವಭಾವತಃ ।**

ಅಕಾರದಿಂದ ಎಲ್ಲಕ್ಕೂ ಆಧಾರಭೂತನಾದ ಪರಮಾತ್ಮನು ಹೇಳಲ್ಪಡು ತ್ತಾನೆ. ಅಕಾರವು ಸ್ವಭಾವದಿಂದಲೇ ಎಲ್ಲಾ ಶಬ್ದಗಳಿಗೂ ಮೂಲಕಾರಣವಾಗಿದೆ; ಹಾಗೆಯೇ ಪರಮಾತ್ಮನೂ ಆ ಆ ಶಬ್ದಗಳಿಂದ ಹೇಳಲ್ಪಡುವ ಅರ್ಥಗಳಿಗೆ ಮೂಲ ಸ್ಥಾನವಾಗಿದ್ದಾನೆ; ಅಂದರೆ ಎಲ್ಲಾ ಪದಗಳೂ ಪರಬ್ರಹ್ಮವನ್ನೇ ಬೋಧಿಸುತ್ತವೆ. ಎಂಬ ಈ ಮಾತು ಹೊಂದಾಣಿಕೆ ಇಲ್ಲದಂತಾಗುತ್ತದೆ ಎಂಬ ಅಭಿಪ್ರಾಯ.

ಭಾಷ್ಯಕಾರರ ವಚನಗಳಿಗೆಲ್ಲಾ ಮುಖ್ಯಾರ್ಥವು ಉಂಟಾಗದೆ ಔಪಚಾರಿಕತ್ವ ವನ್ನು ಒಪ್ಪಬೇಕಾಗುತ್ತದೆ. ವೇದಾರ್ಥ ಸಂಗ್ರಹದಲ್ಲಿ ಹೇಳಲ್ಪಟ್ಟ ಸೂಕ್ತಿಯೆಲ್ಲಾ ಅಕಾರದ ಪ್ರಶಂಸಾಪರವೆಂದು ಹೇಳಬೇಕಾಗಿಬರುವುದು. [2]ಪ್ರಕೃತಿದ್ರವ್ಯವು ರೂಪವಿಲ್ಲದ್ದು. ಆದರೂ ಅದಕ್ಕೆ 'ಅಜಾಮೇಕಾಂಲೋಹಿತ ಶುಕ್ಲಕೃಷ್ಣಾಂ' ಎಂಬ ಶ್ರುತಿಯಿದ ಹೇಳಲ್ಪಡುವ ಕೆಂಪು, ಬಿಳುಪು, ಕಪ್ಪು ಮುಂತಾದವು ಉಪಚಾರ

---

1. ಅಕಾರದಲ್ಲಿ ಎಲ್ಲಾ ವರ್ಣಗಳಿಗೆ ಪ್ರಕೃತಿಯಾಗಿರುವಿಕೆಯನ್ನು ಮುಖ್ಯವಾಗಿ ಹೇಳದೆ ಉಪಚಾರವಾಗಿ ಹೇಳುವುದಾದರೆ ಅದಕ್ಕೆ ನಿಜವಾಗಿಯೂ ಎಲ್ಲಾ ಶಬ್ದಗಳ ಸಮೂಹಕ್ಕೆ ಪ್ರಕೃತಿಯಾಗಿರುವಿಕೆ ಇಲ್ಲವೆಂದು ಅಭಿಪ್ರಾಯ.

2. 'ಗುಣತ್ರಯಾಪೌ ಲೋಹಿತ ಶುಕ್ಲಕೃಷ್ಣ ವ್ಯಪದೇಶವತ್' ಎಂಬುದು ನ್ಯಾಯ ಸಿದ್ಧಾಞ್ಜನದ ಪಙ್ಕ್ತಿ.

ದಿಂದ ಹೇಳಿದವು ಎನ್ನುವಂತೆ ಇಲ್ಲಿಯೂ ಔಪಚಾರಿಕತ್ವವನ್ನು ಹೇಳಬೇಕಾಗುತ್ತದೆ. ಆದುದರಿಂದ ನಾಲ್ಕನೆಯ ಪಕ್ಷವೂ ಸಂಗತವಲ್ಲ.

ಹೀಗೆ ಹೇಳಿದ ರೀತಿಯಲ್ಲಿ ನಾಲ್ಕು ಪಕ್ಷಗಳೂ ಅಸಂಗತಗಳಾದರೆ ಈ ಶಾಸ್ತ್ರ ವಚನಗಳ ಗತಿ ಏನು ? ಎಂದರೆ, ಹೀಗಿರುವಾಗ ಐದನೆಯ ಪಕ್ಷವು ನಿರೂಪಿಸಲ್ಪಡುತ್ತದೆ. ಅದರ ವಿವರ ಹೀಗೆ—ಪರಸ್ಪರ ವಿರುದ್ಧಾರ್ಥಗಳಾದ ಪ್ರಮಾಣಗಳೊಳಗೆ—ಈ ಶಾಸ್ತ್ರದೊಳಗೆ ಕೆಲವಕ್ಕೆ ಯಥಾರ್ಥತ್ವವನ್ನೂ, ಕೆಲವಕ್ಕೆ ಕೆಲವೆಡೆ ಭ್ರಾಂತಿಯಾಗಿರುವಿಕೆಯುನ್ನೂ, ಅಯಥಾರ್ಥತ್ವವನ್ನೂ, ಕೆಲವಕ್ಕೆ ದೃಷ್ಟಿವಿಧಿಯ ರೂಪವಾಗಿರುವಿಕೆಯನ್ನೂ, ಕೆಲವಕ್ಕೆ ಔಪಚಾರಿಕತ್ವವನ್ನೂ ಸ್ವೀಕರಿಸುವೆವು. ಇದೇ ಐದನೆಯ ಪಕ್ಷವು.

ಇದರಲ್ಲಿ ಯಾವ ಅಂಶಕ್ಕೆ ಭಾದೆಯಿಲ್ಲವೋ–ಯಾವ ವಿಧವಾದ ತೊಂದರೆಯೂ ಇಲ್ಲದೆ ಹೇಳಿರುವ ಅಂಶಗಳು ಸುಗಮವಾಗಿ ಇದೆಯೋ ಅವು ಯಥಾರ್ಥವಾದವೆಂದು ಸ್ವೀಕರಿಸುವೆವು. ಯಾವ ಅಂಶಗಳಿಗೆ ಭಾದಕವಿದೆಯೋ ಮತ್ತು ಆಪ್ತರಿಂದ ಹೇಳಲ್ಪಡದೆ ಇರುವುದಾಗಿರುವುವೋ ಅವು ಅಯಥಾರ್ಥಗಳು, ಭ್ರಮೆಯಿಂದ ಕಲ್ಪಿತವಾದವುಗಳು, ಎನ್ನುವೆವು. ಕೆಲವೆಡೆ ದೃಷ್ಟಿವಿಧಿ ರೂಪತ್ವವನ್ನು ಸ್ವೀಕಸುವೆವು. ಪ್ರಾಯಶಃ ಧ್ಯಾನವಿಧಿಗಳೆಲ್ಲಾ ಈ ಗುಂಪಿಗೆ ಸೇರಿದವಾಗುತ್ತವೆ. ಯಾವ ಅಂಶದಲ್ಲಿ ಯಥಾಶ್ರುತಾರ್ಥಕ್ಕೆ ಭಾದೆ–ವಿರೋಧ ಉಂಟಾಗುತ್ತದೋ ಆ ಅಂಶವನ್ನು ಹೇಳುವವನ ವಿಷಯದಲ್ಲಿ "ಇವನು ಆಪ್ತನು–ಇವನು ಹೇಳುವುದು ಪ್ರಮಾಣದಿಂದ ಕೂಡಿದೆ" ಎಂಬ ತಿಳಿವಳಿಕೆ ಉಂಟಾದರೆ ಆ ಸಂದರ್ಭದಲ್ಲಿ ಮುಖ್ಯಾರ್ಥಕ್ಕೆ ಸಂಬಂಧಪಟ್ಟಿರುವುದರಲ್ಲಿ ಉಪಚಾರವಾಗಿರುವಿಕೆಯನ್ನು ಸ್ವೀಕರಿಸುವೆವು.

ಹೀಗೆ ಐದನೆಯ ಪಕ್ಷವನ್ನು ತೋರಿಸಿದರೂ ಯಾವುದೊಂದು ಸಿದ್ಧಾಂತವೂ ವ್ಯವಸ್ಥೆ ಮಾಡಿದಂತಾಗಲಿಲ್ಲ. ಶಬ್ದವು ದ್ರವ್ಯವೋ ? ಅಥವಾ ಅದ್ರವ್ಯವೋ ? ದ್ರವ್ಯತ್ವವನ್ನು ಅಂಗೀಕರಿಸುವ ಪಕ್ಷದಲ್ಲಿ ಯಾವ ವರ್ಣವು ಯಾವ ವರ್ಣಕ್ಕೆ ಉಪಾದಾನ ? ರೂಪಸಂಬಂಧವೂ ಸ್ಥಾನಸಂಬಂಧವೂ ಇದಕ್ಕೆ ಹೇಗೆ ಇರುತ್ತದೆ ? ಅದ್ರವ್ಯತ್ವವನ್ನು ಒಪ್ಪುವುದಾದರೆ ಉಪಾದಾನತ್ವಕ್ಕೂ ರೂಪಕ್ಕೂ ಹೇಗೆ ಸಂಬಂಧ ?

ಹೀಗೆ ಸಂದೇಹ ವಿಷಯವಾಗಿ ನಿಂತಿರುವ ಇದನ್ನು ಕುರಿತು ಈವಾಗ ಹೇಳೋಣ. ಸಿದ್ಧಾಂತಿಗಳಲ್ಲಿಯೇ ಶಬ್ದಕ್ಕೆ ಕೆಲವರ ಮತದಲ್ಲಿ ದ್ರವ್ಯತ್ವವನ್ನೂ ಇನ್ನು ಕೆಲವರ ಮತದಲ್ಲಿ ಅದ್ರವ್ಯತ್ವವನ್ನೂ ಹೇಳುತ್ತಾರೆ. ದ್ರವ್ಯತ್ವಪಕ್ಷದಲ್ಲಿಯೂ ವಾಯವೀಯ, ಅವಾಯುವೀಯ ಎಂದು ಎರಡು ಪಕ್ಷಗಳುಂಟು.

ಅಪಾಯುವೀಯತ್ವಪಕ್ಷದಲ್ಲೂ ದೀಪಾದಿಗಳ ಧರ್ಮಭೂತವಾದ ಪ್ರಭೆಯಂತೆ ಭೇರ್ಯಾದಿಗಳ ಧರ್ಮಭೂತವಾದದ್ದು ; ಭೇರಿ ಮೊದಲಾದವನ್ನು ಹೊಡೆದರೆ ಆ ಹೊಡೆತದಿಂದ ಪ್ರಕಾಶಹೊಂದಲು ಯೋಗ್ಯವಾದದ್ದು ಎಂಬುದು ಒಂದುಪಕ್ಷ. ಹೇಗೆ ಪ್ರಭೆಯು ದೀಪದಿಂದ ಬೇರೆಯಾದುದಲ್ಲವೋ, ಹಾಗೆ ಭೇರ್ಯಾದಿಗಳನ್ನು ಬಿಟ್ಟಿರದೆ ಹೊಡೆತದಿಂದ ಭೇರಿಯ ಅವಯವಗಳೊಡನೆ ಇರುವ ಇದು ಪ್ರಸರಿಸುತ್ತದೆ ಎಂದರ್ಥ. ಹೇಗೆ ಬೀಸಣಿಗೆಯನ್ನು ಬೀಸಿದರೆ ಆಗಲೇ ಉಂಟಾದ ಗಾಳಿಯು ಬೀಸಣಿಗೆಯನ್ನು ಬಿಟ್ಟೇ ಹೇಗೆ ಹರಡುತ್ತದೋ ಹಾಗೆ ಭೇರಿಯ ಹೊಡೆತದಿಂದ ಹುಟ್ಟಿ ಹರಡುತ್ತದೆ.

ಈ ಎರಡು ಪಕ್ಷಗಳಲ್ಲಿಯೂ ಈ ಶಬ್ದವು ಸ್ಪರ್ಶಗುಣರಹಿತವಾಗಿರುವುದೆಂದೇ ಅಭಿಮತವಾಗಿರುವುದು. "ಸ್ಪರ್ಶರಹಿತೋಽಪಿ=ಸ್ಪರ್ಶಗುಣವಿಲ್ಲದಿದ್ದರೂ" ಎಂದು ಆತ್ಮಸಿದ್ಧಿ ಗ್ರಂಥದಲ್ಲಿ ಯಾಮುನಾರ್ಯರು ಹೇಳಿದ್ದಾರೆ. ಇದಕ್ಕೆ ಕಾರಣ—ವಾಯು ಸ್ಪರ್ಶವಿಶಿಷ್ಟವಾದುದರಿಂದ ವಾಯುವೀಯವಾದ ಶಬ್ದದಲ್ಲಿಯೂ ಆ ಗುಣವು ಇದ್ದೇ ಇರಬೇಕು. ಆದರೂ ಶಬ್ದದಲ್ಲಿ ಸ್ಪರ್ಶಗುಣಕ್ಕೆ ಯಾವಾಗಲೂ ಉಪಲಬ್ಧಿಯೇ ಇಲ್ಲವಾದುದರಿಂದ ಇದರಲ್ಲಿ ಸ್ಪರ್ಶಗುಣವಿಲ್ಲವೆಂದೇ ಒಪ್ಪಬೇಕು, ಎಂಬುದೇ ಯಾಮುನಾರ್ಯರ ಸೂಕ್ತಿಗೆ ಮೂಲವಾಗಿರುವುದು.

ಆದರೆ ಈ ಎರಡು ಪಕ್ಷಗಳೊಳಗೆ—"ಶಬ್ದವು ಭೇರ್ಯಾದಿಗಳಿಗೆ ಅವಿನಾಭೂತವಾಗಿರುವುದು—ಅದನ್ನು ಬಿಟ್ಟಿರದೇ ಅದರೊಡನೆಯೇ ಇರುವುದು" ಎಂಬ ಮೊದಲನೆಯ ಪಕ್ಷಕ್ಕೆ ಲೋಕದಲ್ಲಿ ಭೇರೀಶಬ್ದ—ಭೇರಿಯಲ್ಲಿ ಇರುವ ಶಬ್ದ ಎಂಬ ವ್ಯವಹಾರ ಸ್ವಾರಸ್ಯದಿಂದ ಭೇರಿಯ ಅವಯವದಲ್ಲಿ ಕೂಡಿರುವ ಶಬ್ದ ಎಂದು ಅರ್ಥವಾಗುವುದರಿಂದ ಭೇರಿಗೂ ಶಬ್ದಕ್ಕೂ ಧರ್ಮಧರ್ಮಿಭಾವವು-ಆಶ್ರಯಾಶ್ರಯಿಭಾವವು ತೋರುತ್ತದೆ. ಹಾಗೆಯೇ ವೀಣೆಯಧ್ವನಿ, ಮೃದಂಗದ ಶಬ್ದ ಮುಂತಾದ ವ್ಯವಹಾರಗಳೂ ಲೋಕದಲ್ಲಿ ಇವೆಯಷ್ಟೆ. ಇವೆಲ್ಲಕ್ಕೂ ಆಶ್ರಯಾಶ್ರಯಿ ಭಾವಗಳೇ ಕಾರಣ.

ಹಾಗಾದರೆ 'ಭೇರ್ಯಾದಿಗಳನ್ನು ಕೋಲಿನಿಂದ ಹೊಡೆದರೆ ಒಡನೆ ಶಬ್ದವು ಹುಟ್ಟುತ್ತದೆ' ಎಂಬ ಎರಡನೆಯ ಪಕ್ಷಕ್ಕೆ ಕಾರಣವೇನೆಂದರೆ, ಹೊಡೆತವಿದ್ದರೆ ಶಬ್ದದ ಇರುವಿಕೆ–ಅದಿಲ್ಲದಿದ್ದರೆ ಶಬ್ದ ಇಲ್ಲದಿರುವಿಕೆ ಹೀಗೆಂಬ ಅನ್ವಯವ್ಯತಿರೇಕವೇ ಕಾರಣವಾಗಿದೆ. ಈ ಅನ್ವಯ ವ್ಯತಿರೇಕದ ಬಲದಿಂದ ಶಬ್ದಕ್ಕೂ ಪ್ರಹಾರಕ್ಕೂ ಕಾರ್ಯ ಕಾರಣಭಾವವು ತೋರುತ್ತದೆ. ಆದುದರಿಂದ ಶಬ್ದವು ಪ್ರಹಾರದಿಂದ ಹುಟ್ಟುತ್ತದೆಯೆಂದೇ ಒಪ್ಪಬೇಕು. ಆಗ ಶಬ್ದವು ಭೇರ್ಯಾದಿಗಳಿಗೆ ಅವಿನಾಭೂತವಲ್ಲ. ಜನ್ಯಜನಕಭಾವವೇ ಇರುವುದರಿಂದ 'ಭೇರೀಶಬ್ದ'ಎಂಬ ವ್ಯವಹಾರ ಉಪಪನ್ನವಾಗುತ್ತದೆ. **ತರಂಗ ಮಾರುತಃ**=ಅಲೆಯ ಗಾಳಿ ಎಂದೂ ಲೋಕವ್ಯವಹಾರ

ವಿರುವುದು. ಈ ವ್ಯವಹಾರದಲ್ಲಿ ಗಾಳಿ ತರಂಗಕ್ಕೆ ಅವಿನಾಭೂತವಲ್ಲ. ಸೂರ್ಯ ನನ್ನು ಬಿಟ್ಟು ಪ್ರಭೆಯು—ಬೆಳಕು ಇರುವುದಿಲ್ಲ ; ಅದು ಅವಿನಾಭೂತವಾಯಿತು. ಹಾಗೆ ಗಾಳಿಯು ಯಾವಾಗಲೂ ಅಲೆಯೊಡನೆ ಇರುತ್ತದೇನು ? ಇಲ್ಲ. ತರಂಗ ಜನ್ಯವಾದುದರಿಂದಲೇ ಈ ವ್ಯವಹಾರವು ಹೇಗೆ ಉಪಪನ್ನವಾಗುವುದೋ ಹಾಗೆ 'ಭೇರೀ ಶಬ್ದ' ಎಂಬುವೇ ಮೊದಲಾದ ಲೋಕವ್ಯವಹಾರವೂ ಜನ್ಯಜನಕಭಾವ ಸಂಬಂಧದಿಂದಲೇ ಉಪಪನ್ನವಾಗಬಹುದು.

ಶಬ್ದವು ಪ್ರಹಾರದಿಂದ ಹುಟ್ಟುತ್ತದೆ. 'ಶಬ್ದವು ಭೇರಿಯಿಂದ ಹುಟ್ಟುತ್ತದೆ' ಎಂಬ ಈ ಎರಡು ವ್ಯವಹಾರಗಳೂ ಸರಿಯಾದವೇ.

ಶಬ್ದಕ್ಕೆ ವಾಯವೀಯತ್ವವನ್ನು ಅಪೇಕ್ಷಿಸುವವರ ದೃಷ್ಟಿಯಲ್ಲಿ, ವಾಯು ಶಬ್ದಕ್ಕೆ ವ್ಯಂಜಕವಾದರೂ ಸರಿಯೇ, ಉತ್ಪಾದಕವಾದರೂ ಸರಿಯೇ. ಹೇಗಿದ್ದರೂ ಶಬ್ದವು ಪ್ರತ್ಯಕ್ಷವಾಗುವ ವೇಳೆಯಲ್ಲಿ ಆ ರೀತಿಯಾದ ವಾಯುವಿನ ಬರುವಿಕೆ ಆವಶ್ಯಕವಾದುದಾದರೆ ಅಂತಹ ವಾಯುವಿನಿಂದ ವ್ಯಂಗ್ಯವಾದ ಅಥವಾ ಜನ್ಯವಾದ ಶಬ್ದವೆಂಬ ಒಂದು ಧರ್ಮಿಯನ್ನು—ಪದಾರ್ಥವನ್ನು ಆ ವಾಯುವಿಗಿಂತಲೂ ಬೇರೆ ಯಾಗಿ ಕಲ್ಪಿಸುವುದು ಗೌರವವಾಗುತ್ತದೆ. "ಧರ್ಮಿಕಲ್ಪನಾತೋ ಧರ್ಮಕಲ್ಪ ನಂವರಮ್—ಧರ್ಮದೊಡನೆ ಕೂಡಿರುವುದನ್ನು ಕಲ್ಪನೆ ಮಾಡುವುದಕ್ಕಿಂತಲೂ ಧರ್ಮವನ್ನು ಕಲ್ಪನೆಮಾಡುವುದೇ ಮೇಲು"ಎಂಬ ನ್ಯಾಯವನ್ನು ಅನುಸರಿಸಿ ಶಬ್ದತ್ವ ವೆಂಬ ಧರ್ಮದೊಡನೆ ಕೂಡಿದ ಶಬ್ದವೆಂಬ ಧರ್ಮಿಯನ್ನು ಕಲ್ಪಿಸುವುದಕ್ಕಿಂತ ಕ್ಲೃಪ್ತ ವಾದ ವಾಯುವೆಂಬ ಧರ್ಮಿಯಲ್ಲಿಯೇ ಶಬ್ದತ್ವವೆಂಬ ಧರ್ಮಮಾತ್ರವನ್ನು ಕಲ್ಪಿಸುವ ಪಕ್ಷದಲ್ಲಿ ಲಾಘವಗುಣ ಇರುವುದರಿಂದ ವಾಯುವೇ ಶಬ್ದವಾಗಿ ಪರಿಣಮಿಸುವುದು ಎಂಬುದೇ ಅವರ ಅಭಿಪ್ರಾಯ ಎಂದು ತಿಳಿಯಬೇಕು.

ಭೇರ್ಯಾದಿಗಳಿಗೆ ಸಂಬಂಧಪಡದ ನೂರಾರು ವಾಯು ವ್ಯಕ್ತಿಗಳು ಆಕಾಶ ದಲ್ಲಿದ್ದರೂ, ಭೇರಿ ಮುಂತಾದವಕ್ಕೆ ಸಂಬಂಧಪಟ್ಟ ಆ ವಾಯುವಿಗೇ ಅಭ್ಯಂಜಕತ್ವ ಶಕ್ತಿಯು ಇದೆ. ಹಾಗೆಯೇ ಆ ವಾಯುವಿಗೇ ಶ್ರಾವಣತ್ವವೆಂದರೆ ಕಿವಿಗೆ ಕೇಳಿಸು ವಿಕೆ ಇದೆ. ಆದುದರಿಂದಲೇ ಶಬ್ದತ್ವವೆಂಬ ಧರ್ಮವೂ ಅದಕ್ಕೇ ಕಲ್ಪಿಸಲ್ಪಡುತ್ತದೆ ಎಂಬುದು ವಾಯುವೀಯತ್ವವನ್ನು ಅಪೇಕ್ಷಿಸುವವರ ಇಷ್ಟ.

ಹೀಗೆ ವಾಯುವೀಯತ್ವ ಪಕ್ಷದಲ್ಲಿ ಶಬ್ದಕ್ಕೆ ವಾಯುವು ಉಪಾದಾನ ಕಾರಣ ವಾಗಿರುವುದರಿಂದ—ಉತ್ಪತ್ತಿಗೆ ಕಾರಣವಾಗಿರುವುದರಿಂದ ವರ್ಣಗಳಿಗೆ ವಾಯುವಿ ಗಿಂತ ಬೇರೆಬೇರೆಯಾದ ವರ್ಣಗಳು ಉಪಾದಾನಗಳು ಎಂದು ಹೇಳುವ ವಾದ ಗಳೆಲ್ಲವೂ 'ದೃಷ್ಟಿವಿಧಿಯಿಂದ ಹೇಳುತ್ತವೆ, ಉಪಚಾರದಿಂದ ಹೇಳುತ್ತವೆ' ಎಂಬು ದಾಗಿ ತಿಳಿಯಬೇಕು.

ಶಬ್ದಕ್ಕೆ ಅವಾಯವೀಯ ದ್ರವ್ಯತ್ವವನ್ನು ಹೇಳುವವರ ಮತದಲ್ಲಿ—ಎಂದರೆ ವಾಯುವಿಗಿಂತ ಬೇರೆಯಾದ ಪೃಥಿವ್ಯಾದಿರೂಪ ದ್ರವ್ಯತ್ವವನ್ನು ಹೇಳುವವರ ಮತದಲ್ಲಿ ಆವಾಗ ಉಪಾದಾನ ನಿಯಮಕ್ಕೆ ಅವ್ಯಕ್ತತೆ ಇರುವುದರಿಂದ ಎಂಬುದು ಭಾವ. ಅಂದರೆ ಆ ನಿಯಮವು ಪ್ರಕಟವಾಗದೇ ಇರುವುದರಿಂದ ಅನಿಯತವಾದ ಉಪಾದಾನಕಾರಣವನ್ನು ಉಪದೇಶಿಸುವ ಶಾಸ್ತ್ರವೂ, ರೂಪವಿಶೇಷ, ಸ್ಥಾನವಿಶೇಷ, ಇವುಗಳನ್ನು ಹೇಳುವ ಶಾಸ್ತ್ರಗಳೂ ಕಲ್ಪಭೇದದಿಂದಾಗಲಿ, ಅಂಡಭೇದದಿಂದಾಗಲಿ ಅವು ಉಂಟು ಎಂದಾಗುತ್ತದೆ, ಉಪಪನ್ನವಾಗುತ್ತದೆ. ಆದರೂ ಪೃಥಿವ್ಯಾದಿಗಳ ಪರಿಣಾಮ ವಿಶೇಷವಾದ ಶಬ್ದವೆಂಬ ದ್ರವ್ಯದಲ್ಲಿ ರೂಪವಿಶೇಷವು ನಮಗೆ ಕಾಣದಿರುವುದಕ್ಕೆ ಅಲ್ಲಿ ರೂಪವೇ ಇಲ್ಲವೆಂಬುದು ಕಾರಣವಲ್ಲ. ಅಲ್ಲಿ ರೂಪವಿದ್ದೇ ಇರುವುದು. ಆದರೆ ಅದು ಗ್ರಹಣಕ್ಕೆ ಅಯೋಗ್ಯವಾದ—ಗ್ರಹಿಸಲು ಆಗದ ಸ್ಥಿತಿಯಲ್ಲಿ ಇರುವುದರಿಂದ ಅದು ನಮ್ಮಿಂದ ಗ್ರಹಿಸಲ್ಪಡುವುದಿಲ್ಲ.

ಹಾಗಾದರೆ ಯಾವಾಗಲೂ ಅನುಪಲಬ್ಧವಾಗಿಯೂ ಅಯೋಗ್ಯವಾಗಿಯೂ ಇರುವ ರೂಪವನ್ನು ಅವುಗಳಲ್ಲಿ ಸ್ವೀಕರಿಸುವುದಾದರೆ ಅಂತಹ ರೂಪವನ್ನು ಆಕಾಶದಲ್ಲಿಯೂ ಏತಕ್ಕೆ ಸ್ವೀಕರಿಸಬಾರದು ? ಎಂದರೆ ಅವುಗಳಲ್ಲಿ ರೂಪವನ್ನೇ ಅಂಗೀಕರಿಸಬೇಕಾದುದಿಲ್ಲ. ರೂಪಬೋಧಕ ಶಾಸ್ತ್ರ ದೃಷ್ಟಿವಿಧಿಯಾಗಿರುವುದೆಂದು ಹೇಳಬಹುದು.

ಇನ್ನುಮುಂದೆ ಶಬ್ದ ಅದ್ರವ್ಯ ಎಂದು ಹೇಳುವವರ ಪಕ್ಷವನ್ನು ತಿಳಿಯೋಣ. ಕಪ್ಪು ಬಿಳುಪು ಮುಂತಾದವು ಒಂದೊಂದು ದ್ರವ್ಯದ ಗುಣಗಳೆಂದು ಪ್ರಸಿದ್ಧವಾಗಿವೆ. ಹಾಗೆಯೇ ಸತ್ತ್ವ ರಜಸ್ಸು ತಮಸ್ಸುಗಳೂ ದ್ರವ್ಯಗಳಿಗೆ ಗುಣಗಳಾಗಿವೆ. ಆದುದರಿಂದ ಅವುಗಳಿಗೆ ಉಪಾದಾನ ಕಾರಣವಾಗಿರುವಿಕೆ ಕೂಡುವುದಿಲ್ಲ. ಸತ್ವ ತಮಸ್ಸು ಇವುಗಳಿಗೆ ಅದ್ರವ್ಯತ್ವವನ್ನು ಸಾಧಿಸಲು ಭಾಷ್ಯಕಾರರಿಂದ ಹೇಳಲ್ಪಟ್ಟ ಯುಕ್ತಿಗಳು ಶಬ್ದಕ್ಕೂ ಸಮಾನವಾಗಿವೆ. ಈ ತತ್ತ್ವವನ್ನು ಭಾಷ್ಯಕಾರರು [1]"ರಚನಾನುಪಪತ್ತೇಶ್ಚ ನಾನುಮಾನಂ ಪ್ರವೃತ್ತೇಶ್ಚ" ಎಂಬ ಸೂತ್ರದಲ್ಲಿ ನಿರ್ಣಯ ಮಾಡಿದ್ದಾರೆ.

ಇದರ ಅರ್ಥ :—ಸಾಂಖ್ಯರು ಹೇಳುವುದೇನೆಂದರೆ, ಈ ಜಗತ್ತು ಸತ್ತ್ವಗುಣ ರಜೋಗುಣ ತಮೋಗುಣ ಈ ಗುಣಗಳ ಕಾರ್ಯವಾದ ಸುಖ ದುಃಖ ಮೋಹ, ಅಜ್ಞಾನ ಇವುಗಳಿಂದ ತುಂಬಿವೆ. ಆದುದರಿಂದ ಸತ್ತ್ವ ರಜಸ್ಸು ತಮಸ್ಸು ಇವುಗಳ ಸಮವಾದ ನೆಲೆಯುಳ್ಳ ಪ್ರಧಾನವೆಂಬುದೇ ಈ ಜಗತ್ತಿಗೆ ಕಾರಣ

1. ಬ್ರಹ್ಮಸೂತ್ರ-೨-೨-೧.

ಆದರಿಂದಲೇ ಹುಟ್ಟಿದೆ ಈ ಜಗತ್ತು—ಇದು ಅದರ ಕಾರ್ಯ ಎಂದು ಊಹಿಸುತ್ತೇವೆ, ಎನ್ನುತ್ತಾರೆ. 'ಅನುಮೀಯತೇ ಇತ್ಯನುಮಾನಂ' ಎಂಬುದು ಅದರ ನಿರ್ವಚನ. ಸೂತ್ರದಲ್ಲಿರುವ ಅನುಮಾನ ಶಬ್ದವು ಆನುಮಾನಿಕ ಪರ ವಾದದ್ದು ಅಂದರೆ ಊಹಿಸಲ್ಪಡತಕ್ಕದ್ದು—ಪ್ರಧಾನ ಎಂದರ್ಥ. ಇಂತಹ ಪ್ರಧಾನಕ್ಕೆ ವಿಚಿತ್ರವಾದ ಪ್ರಪಂಚದ ಸೃಷ್ಟಿಯಲ್ಲಿ ಸಾಮರ್ಥ್ಯವಿಲ್ಲ. ಸೃಷ್ಟಿಸಬೇಕಾದರೆ ಸೃಷ್ಟಿಸಲ್ಪಡುವ ವಸ್ತುವಿನ ಸ್ವಭಾವವನ್ನು ಅರಿತಿರಬೇಕು—"ಇದನ್ನು ಹೀಗೆ ಸೃಷ್ಟಿಸಬೇಕು" ಎಂದು. ಅಚೇತನವಾದ ಪ್ರಧಾನಕ್ಕೆ ಈ ಅರಿವು ಎಲ್ಲಿ ? ಅಚೇತನ ವಾದ ಮರ ಮುಂತಾದವು ತಾನೇ ರಥ ಬಾಗಿಲು ಮುಂತಾದವುಗಳಾಗುವುದಿಲ್ಲ. ಅರಿವುಳ್ಳ ಬಡಗಿ ಮುಂತಾದವರಿಂದ ಮಾಡಲ್ಪಟ್ಟಾಗಲೇ—ಅಧಿಷ್ಟಿತವಾದಾಗಲೇ ಕಾರ್ಯರೂಪವನ್ನು ಪಡೆಯುತ್ತವೆ.

ಹಾಲು ಮೊಸರಾಗುವುದಿಲ್ಲವೇ ? ಮೋಡದಿಂದ ಬಿದ್ದ ನೀರು ಎಳನೀರಾಗಿ ರುಚಿಯಾಗಿರುವುದಿಲ್ಲವೇ ? ಇಲ್ಲೆಲ್ಲಾ ಚೇತನನ ಕಾರ್ಯವಿದೆಯೇ ? ಎಂದರೆ "ಯೋಽಪ್ಸು ತಿಷ್ಠನ್=ಯಾವನು ನೀರಿನಲ್ಲಿದ್ದು" ಇವೇ ಮೊದಲಾದ ಶ್ರುತಿಗಳಿಂದ ಅವಲ್ಲೂ ಪ್ರಾಜ್ಞನಾದ ಪರಮಾತ್ಮನ ಅಧಿಷ್ಠಾನ ಇರುವುದರಿಂದಲೇ ಈ ರೀತಿ ಪರಿಣಾಮಗಳಾಗುತ್ತವೆ.

ಈ ಯುಕ್ತಿಗಳೆಲ್ಲಾ ಶಬ್ದದ ವಿಷಯದಲ್ಲಿಯೂ ಸಮಾನಗಳಾಗಿರುವುವು. ಅವುಗಳಿಂದಲೇ ಶಬ್ದಕ್ಕೆ ಅದ್ರವ್ಯತ್ವವು ಸಿದ್ಧಿಸುವುದು.

ಹಾಗಾದರೆ ಶಬ್ದವು "ಅವ್ಯಾಕೃತ ಅಹಂಕಾರ ತತ್ತ್ವದ ಪರಿಣಾಮವೆಂದು ಶಾಸ್ತ್ರದಲ್ಲಿ ನಿರ್ದೇಶಿಸುವ ಬಗೆ ಹೇಗೆ ? ಎಂದು ಸಂದೇಹಪಡಕೂಡದು. ಅಲ್ಲಿ ಪರಿ ಣಾಮ ಶಬ್ದವು—ಅಹಂಕಾರ ತತ್ತ್ವಕ್ಕೆ ಶಬ್ದತ್ವವೆಂಬ ಆಗಂತುಕವಾದ—ಮಧ್ಯ ದಲ್ಲಿ ಬರುವ ಒಂದು ಧರ್ಮವು ಉಂಟಾಗುವುದು ಎಂಬುದನ್ನು ತಿಳಿಸುತ್ತದೆಯೇ ಹೊರತು ಅಹಂಕಾರತತ್ತ್ವವೇ ಶಬ್ದತ್ವವೆಂಬ ಅವಸ್ಥಾಂತರತ್ವವನ್ನು ಪಡೆಯುವು ದೆಂದು ಬೋಧಿಸುವುದಿಲ್ಲ—ಹಾಗಾದರೆ ದ್ರವ್ಯತ್ವವನ್ನು ಒಪ್ಪಬೇಕಾದೀತು ಎಂದು ಅಭಿಪ್ರಾಯ. ಆಗನ್ತುಕತ್ವಮೇವ ಪರಿಣಾಮತ್ವಮ್=ಮಧ್ಯದಲ್ಲಿ ಬರುವಿಕೆಗೇ ಪರಿಣಾಮವಾಗುವಿಕೆ ಎನ್ನುವುದು.

ಶಬ್ದವನ್ನು ಅದ್ರವ್ಯವೆಂದೇ ಒಪ್ಪುವುದಾದರೆ ಹಿಂದೆ ಹೇಳಿದ ಯಾಮುನಾ ರ್ಯರ "ದೃಶ್ಯನ್ತೇಚ" ಎಂಬ ಆತ್ಮಸಿದ್ಧಿ ಗ್ರಂಥದ ವಚನದೊಡನೆ ವಿರೋಧವು ಪ್ರಸಕ್ತವಾಗುವುದಿಲ್ಲವೋ ? ಎಂದು ಶಂಕೆಯುಂಟಾದರೆ, ಅವರು ಆ ರೀತಿ ಹೇಳಿರುವುದು ಪರಮತವನ್ನು ಅನುವಾದ ಮಾಡುತ್ತಾರೆಂದಾಗಲಿ ಅಥವಾ ಏಕ

ದೇಶಿಗಳ—ಒಂದು ಪಂಗಡದವರ ಮತವನ್ನೇ ಅಲ್ಲಿ ಹೇಳಿರುವರೆಂದಾಗಲೀ ಆ ವಚನಕ್ಕೆ ಉಪಪತ್ತಿಯನ್ನು ಹೇಳಬಹುದು. ಪರಾಶರಭಟ್ಟಾರ್ಯರು (ಗಗನಗುಣ ಶಬ್ದಾದಿ ಸ್ವರೂಪಸ್ಥಿತೀಃ ಪ್ರವರ್ತಯತಾ ಭಗವತೈವ ಯೋಗ್ಯಾರ್ಥೈದಮರ್ಥ್ಯೇನ ವಾಕ್ಯಪ್ರವಾಹಸ್ಯ ಪೂರ್ವಮೇ ವೋಪಾತ್ತತ್ವಾತ್—ಆಕಾಶ ಗುಣವೆನಿಸಿಕೊಂಡಿರುವ ಶಬ್ದಾದಿಗಳ ಸ್ವರೂಪಗಳನ್ನೂ . ಸ್ಥಿತಿಗಳನ್ನೂ ನಡೆಸುತ್ತಿರುವ ಪರಮಾತ್ಮನು ವಾಕ್ಯಪ್ರವಾಹವು ಪ್ರತ್ಯಕ್ಷಕ್ಕೆ ವಿರೋಧವನ್ನು ಉಂಟುಮಾಡದ ಅರ್ಥವನ್ನು ಬೋಧಿಸಲೆಂಬ ಸಂಕಲ್ಪದಿಂದಲೇ ಪೂರ್ವದಲ್ಲಿಯೇ ಅದನ್ನು ಉಂಟುಮಾಡಿದ್ದಾನೆ. ಆದುದರಿಂದ, ಎಂಬುದಾಗಿ) ವಾಕ್ಯಸ್ವರೂಪ ಪ್ರಸ್ತಾವದಲ್ಲಿ ಶಬ್ದವನ್ನು ಆಕಾಶದ ಗುಣವೆಂದು ಅನುವಾದಮಾಡಿ, ಅದ್ರವ್ಯತ್ವವನ್ನೇ ಅದಕ್ಕೆ ಅಂಗೀಕರಿಸಿರುವರು. ಇಲ್ಲಿ 'ಗಗನಗುಣ' ಎಂಬ ಅಂಶಕ್ಕೆ ಮಾತ್ರ ಉಪಯೋಗ.

ಹಾಗಾದರೆ "ಯಸ್ಯವೇದಾಃ ಶರೀರಮ್" ಎಂದು ಶಬ್ದರೂಪವಾದ ವೇದಗಳಿಗೆ ಪರಮಾತ್ಮ ಶರೀರತ್ವವನ್ನು ಬೋಧಿಸುವ ಶಾಸ್ತ್ರವು ಹೇಗೆ ಸಂಗತವಾದೀತು ? ಶಬ್ದವು ಶರೀರವೆನಿಸಿಕೊಳ್ಳಬೇಕಾದರೆ ದ್ರವ್ಯವಾಗಿಯೇ ಇರಬೇಕಲ್ಲವೆ ? 'ಯಸ್ಯ ಚೇತನಸ್ಯಯದ್ದ್ರವ್ಯಂ ಸರ್ವಾತ್ಮನಾಸ್ವಾರ್ಥೇನಿಯಂತುಂ ಧಾರಯಿತುಞ್ಚ ಶಕ್ಯಂ— ಯಾವ ಚೇತನನಿಗೆ ಯಾವ ದ್ರವ್ಯವು ಎಲ್ಲಾ ವಿಧದಿಂದಲೂ ತನ್ನ ಪ್ರಯೋಜನಕ್ಕಾಗಿ ನಿಯಮಿಸಲೂ ಮತ್ತು ಧರಿಸಲೂ ಸಮರ್ಥವಾಗುತ್ತದೋ ಅದು ಆ ಚೇತನನ ಶರೀರ ಎಂಬುದಲ್ಲವೇ ಶರೀರದ ಲಕ್ಷಣ, ಎಂದು ಸಂಶಯಪಡಬೇಕಾಗಿಲ್ಲ ; ಏತಕ್ಕೆಂದರೆ ಅಲ್ಲಿ ವೇದಶಬ್ದವು ವೇದಾಭಿಮಾನಿಯಾದ ದೇವತಾ ವಿಶೇಷವನ್ನು ಬೋಧಿಸುವುದರಿಂದಲೂ ಅಂತಹ ದೇವತಾವಿಶೇಷ ವಿಷಯವಾಗಿರುವಿಕೆಯಿಂದ ಕೂಡುತ್ತದೆ, ಉಪಪನ್ನವಾಗುತ್ತದೆ. ವೇದಾಭಿಮಾನಿಯಾದ ದೇವತೆಯೇ ಶರೀರ ಎಂದರ್ಥ. ಹೀಗೆಯೇ ಆ ಆ ಮಂತ್ರದ ಅಭಿಮಾನಿ ದೇವತೆಯ ಉಪಾದಾನ, ರೂಪ, ಸ್ಥಾನವಿಶೇಷ ಇವೂ ಅಭಿಮಂತವ್ಯವಾದ ಮಂತ್ರದ ವರ್ಣನಿಷ್ಠವಾಗಿವೆಯೆಂದು ಆ ಆ ಆಗಮಗಳಲ್ಲಿ ಉಪದೇಶಿಸಲ್ಪಟ್ಟಿದೆ.

"ತಸ್ಯಪ್ರಕೃತಿಲೀನಸ್ಯ" ಎಂಬ ಶ್ರುತಿವಾಕ್ಯಕ್ಕೆ ಪ್ರಣವಾಭಿಮಾನಿದೇವತೆಯು ಅಕಾರಾಭಿಮಾನಿದೇವತೆಯಲ್ಲಿ ಲಯಿಸುವುದಾದ ಪ್ರಯುಕ್ತ ಪ್ರಣವವು ಅಕಾರದಲ್ಲಿ ಲಯಿಸುವುದೆಂಬುದಾಗಿ ವ್ಯವಹರಿಸಲ್ಪಡುವುದು. ಆದುದರಿಂದ ಈ ಶ್ರುತಿಯೂ ಶಬ್ದಕ್ಕೆ ದ್ರವ್ಯತ್ವವನ್ನುಸಾಧಿಸಿಕೊಡಲಾರದು. ಅದ್ರವ್ಯತ್ವ ಪಕ್ಷದಲ್ಲಿಯೂ ಈ ಶ್ರುತಿ ಉಪಪನ್ನವಾಗಬಹುದು. ಆ ಆ ದೇವತೆಗಳ ಬೀಜಾಕ್ಷರಗಳು ಆ ಆ ದೇವತೆಗಳನ್ನು ಕುರಿತು ಉಪಾದಾನ ಕಾರಣಗಳಾಗಿರುವುವು ಎಂದು ಹೇಳುವ ವಾಕ್ಯಗಳನ್ನು ಔಪಚಾರಿಕ ವಾಕ್ಯಗಳೆಂದಾಗಲಿ ದೃಷ್ಟಿವಿಧಿವಾಕ್ಯಗಳೆಂದಾಗಲಿ ನಿರ್ವಾಹಮಾಡಬಹುದು.

ಆದರೆ ವರ್ಣಗಳೊಳಗೆ ಅನಿಯತವಾಗಿ ಅಂದರೆ ವ್ಯವಸ್ಥೆಯಿಲ್ಲದೆ ಉಪಾದಾನ ಕಾರಣತ್ವವನ್ನು ಬೋಧಿಸುವ ವಾಕ್ಯಗಳನ್ನು ಹೇಗೆ ನಿರ್ವಹಿಸುವುದೆಂದರೆ— ತತ್ತ್ವೋಪದೇಶ ಶಾಸ್ತ್ರಗಳೊಳಗೆ ಕೆಲವು ಗ್ರಂಥಗಳಲ್ಲಿ ಅಂದರೆ ಸಾಂಖ್ಯಗ್ರಂಥಗಳಲ್ಲಿ ಪರಮಾತ್ಮನಿಗೆ ವಿಶೇಷಣವಾಗದ ಸ್ವತಂತ್ರ ಪ್ರಕೃತಿಯೇ ಜಗತ್ತಿಗೆ ಉಪಾದಾನ ಕಾರಣವೆಂದೂ, ಇನ್ನು ಕೆಲವು ಗ್ರಂಥಗಳಲ್ಲಿ ಅಂದರೆ ನ್ಯಾಯ ವೈಶೇಷಿಕ ಗ್ರಂಥಗಳಲ್ಲಿ ಪರಮಾಣುಗಳೇ ಉಪಾದಾನಕಾರಣವೆಂದೂ ಹೇಳುತ್ತವೆ. ಸಿದ್ಧಾಂತ ಗ್ರಂಥಗಳಲ್ಲಿ ಚಿದಚಿದ್ವಿಶಿಷ್ಟನಾದ ಪರಮಾತ್ಮನೇ ಜಗದುಪಾದಾನ ಕಾರಣವೆಂದು ಹೇಳಿದೆ, ಹೀಗೆ ಪರಸ್ಪರ ವಿರುದ್ಧವಾಗುವಂತೆ ಅನಿಯತವಾಗಿ ಉಪಾದಾನ ಕಾರಣತ್ವವನ್ನು ಉಪದೇಶಿಸಿದರೆ ಇವುಗಳೊಳಗೆ ಕೆಲವನ್ನು ಪ್ರಮಾಣಗಳೆಂದೂ, ಉಳಿದವುಗಳನ್ನು ಪ್ರಮಾಣಾಭಾಸಗಳೆಂದೂ ಅಂಗೀಕರಿಸಿ ಹೇಗೆ ನಿರ್ವಹಿಸುವೆವೋ ಹಾಗೆಯೇ ಇಲ್ಲಿಯೂ ಕೆಲವನ್ನು ಪ್ರಮಾಣಗಳಾಗಿಯೂ, ಮತ್ತು ಕೆಲವನ್ನು ಪ್ರಮಾಣವಲ್ಲದವನ್ನಾಗಿಯೂ ಅಂಗೀಕರಿಸಿ ನಿರ್ವಹಿಸಬೇಕು. ಒಂದಕ್ಕೊಂದು ವಿರುದ್ಧವಾದ ಎರಡು ಶಾಸ್ತ್ರಗಳೂ ಪ್ರಮಾಣ ಭೂತಗಳಾಗಿಯೇ ನಿಲ್ಲುವ ಪಕ್ಷದಲ್ಲಿ ನ್ಯಾಯವನ್ನು ಅನುಸರಿಸಿ ಅರ್ಥಸ್ವರೂಪವನ್ನು ನಿಷ್ಕರ್ಷಿಸಬೇಕು,

ಈ ರೀತಿ ಹೇಳಿದುದರಿಂದ, ಕೆಲವೆಡೆ ಅಕಾರವು ಎಲ್ಲಕ್ಕೂ ಉಪಾದಾನವೆಂದು ಹೇಳುತ್ತದೆ. ಮತ್ತೆ ಕೆಲವೆಡೆ "ಹರಿರೋಮ್" ಎಂದು ಉಪಕ್ರಮಿಸುವುದರಿಂದ ಹಕಾರವು ಸರ್ವೋಪಾದಾನವೆಂದೂ ಹೇಳಲ್ಪಡುತ್ತದೆ. ಹೀಗೆ ಇವೆರಡಕ್ಕೂ ವಿರೋಧವುಂಟಾದರೆ, "**ಆಗಮ ತದಾಭಾಸಯೋಃ ಪ್ರಾಮಾಣ್ಯಾ ಪ್ರಾಮಾಣ್ಯಾಭ್ಯಾಂ** ನಿರ್ವಾಹ್ಯಂ—ಶಾಸ್ತ್ರ, ಶಾಸ್ತ್ರದಂತೆ ತೋರುವುದು ಇವುಗಳಲ್ಲಿ ಒಂದಕ್ಕೆ ಪ್ರಾಮಾಣ್ಯ ಮತ್ತೊಂದಕ್ಕೆ ಅಪ್ರಾಮಾಣ್ಯ" ವೆಂದು ಹೇಳಿ ನಿರ್ವಾಹ ಮಾಡಬೇಕು ಅಥವಾ ನ್ಯಾಯವನ್ನು ಅನುಸರಿಸಿ ತೀರ್ಮಾನಮಾಡಬೇಕು. ಈ ಅಕಾರ ಹಕಾರ ವಾದದಲ್ಲಿ ಜಗಳಕ್ಕೇ—ವಿವಾದಕ್ಕೇ ಅವಕಾಶವಿಲ್ಲವೆಂದು ಕೆಲವರ ಅಭಿಪ್ರಾಯ.

**ಅವರು** ಹೇಳುವುದೇನೆಂದರೆ :—ಅಕಾರವೇ ಸಮಸ್ತ ವರ್ಣಗಳಿಗೂ ಉಪಾದಾನ ಕಾರಣವೆಂದು ಬೋಧಿಸುವ ಶಾಸ್ತ್ರಕ್ಕೂ—ಹ್ಸ್ಲ್ರೀಖಾ ಮಂತ್ರದ ಹಕಾರವೇ ಉಪಾದಾನ ಕಾರಣವೆಂದು ಬೋಧಿಸುವ ಶಾಸ್ತ್ರಕ್ಕೂ ಪರಸ್ಪರವಾಗಿ ವಿರೋಧವೇ ಇಲ್ಲ, ಹೇಗೆಂದರೆ—"**ಅಕಾರಃ ಸರ್ವೋಪಾದಾನಂ**" ಎಂದು ಹೇಳುವ ಶಾಸ್ತ್ರದಲ್ಲಿ ಕೇವಲವಾದ ಅಕಾರವು ವಿವಕ್ಷಿತವಲ್ಲ.

ಮತ್ತೇನೆಂದರೆ :—ವಿಸರ್ಗವೆಂಬ ಹೆಸರನ್ನು ಪಡೆದಿರುವ ಹದಿನಾರನೆಯ ಸ್ವರಾಕ್ಷರಕ್ಕೆ ಎಡಬಿಡದೆ ಮೊದಲು ಉಚ್ಚರಿಸಲ್ಪಡುವ "ಅಃ" ಎಂಬುದಾಗಲಿ— ಅಥವಾ ಅಂತಹ ವಿಸರ್ಗಕ್ಕೆ ಅವ್ಯವಹಿತಪರವಾಗಿ ಉಚ್ಚರಿಸಲ್ಪಡುವ 'ಹ'

ಎಂಬುದಾಗಲಿ ವಿವಕ್ಷಿತವಾಗಿರುವುದು. ಇಂತಹ ಅಕಾರವೇ ಸಮಸ್ತ ವರ್ಣಗಳಿಗೂ ಉಪಾದಾನಕಾರಣವೆಂದು ಈ ಶಾಸ್ತ್ರವಚನದ ಅಭಿಪ್ರಾಯವಾಗಿರುವುದು. ಆದುದರಿಂದಲೇ "ಅಃ—ಹ" ಎಂಬ ಎರಡು ವರ್ಣಗಳಿಗೂ ಉಪಾದಾನ ಕಾರಣತ್ವವು ಸಿದ್ಧಿಸುವುದು. ಆದಕಾರಣ ಈ ಎರಡು ಶಾಸ್ತ್ರಗಳಿಗೂ ವಿರೋಧವೇ ಇಲ್ಲ. ಕೇವಲ ಅಕಾರ ಮಾತ್ರ ಉಪಾದಾನವಲ್ಲ. ಹದಿನಾರನೆಯ ವರ್ಣಾತ್ಮಕ ವಾದ -ವರ್ಣಸ್ವರೂಪವಾದ ಯಾವ ಅಕಾರವುಂಟೋ ಅದೇ ಉಪಾದಾನ.

ಹದಿನಾರನೆಯ ವರ್ಣ ವಿಸರ್ಜನೀಯ, ಅಕಾರವು ಎಲ್ಲಕ್ಕೂ ಉಪಾದಾನ ಎಂಬಲ್ಲಿ ವಿಸರ್ಜನೀಯ ಪೂರ್ವವಾಗಲೀ ವಿಸರ್ಜನೀಯಪರವಾಗಲೀ ಉಳ್ಳ ಅಕಾರವು ಸರ್ವೋಪಾದಾನ ಎಂಬುದರ್ಥ, ಕೇವಲ ಅಕಾರ ಮಾತ್ರವಲ್ಲ.

ಆದುದರಿಂದಲೇ ವರ್ಣಮಾಲೆಯೊಳಗೆ ಸ್ವರ ವ್ಯಂಜನಗಳ ಮಧ್ಯಸ್ಥಾನದಲ್ಲಿ ಸ್ವರ–ವ್ಯಂಜನ ಈ ಎರಡು ರೂಪವಾಗಿರುವ ಅಃ" ಎಂಬುದಕ್ಕೆ ಪಾಠಮಾಡಿರುವುದು. ಅಕಾರವು ಹಕಾರವೆನಿಸಿಕೊಂಡ ಬಗೆ ಹೇಗೆ ಎಂದು ಚಿಂತಿಸಬಾರದು. ಇದು ಅನುಭವಸಿದ್ಧವಾಗಿಯೇ ಇರುವುದು—ಹದಿನಾರು ಸ್ವರಾಕ್ಷರಗಳೊಳಗೆ ಒಂದನೆಯದನ್ನೂ ಹದಿನಾರನೆಯದನ್ನೂ ತೆಗೆದುಕೊಂಡು ಮೊದಲು ಒಂದನೆಯದನ್ನೂ ಅನಂತರ ಹದಿನಾರನೆಯದನ್ನೂ ಸೇರಿಸಿ ಸಂಧಿಮಾಡಿ ವಿಲಂಬವಿಲ್ಲದೆ ಉಚ್ಚರಿಸಿದರೆ "ಅಃ' ಎಂಬ ಅಕ್ಷರವಾಗುವುದು. ಇದನ್ನು ತಲೆಕೆಳಕಾಗಿ ಮಾಡಿ ಪ್ರಥಮದಲ್ಲಿ ಹದಿನಾರನೆಯದನ್ನೂ ಅನಂತರದಲ್ಲಿ ಒಂದನೆಯದನ್ನೂ ಸೇರಿಸಿ ಸಂಧಿಮಾಡಿ ವಿಲಂಬವಿಲ್ಲದೆ ಉಚ್ಚರಿಸಿದರೆ "ಹ" ಎಂಬ ಅಕ್ಷರವಾಗವುದು. "ದಧಿ+ಅತ್ರ, ಮಧು+ಅತ್ರ" ಎಂಬುವುಗಳಿಗೆ ಸಂಧಿಮಾಡುವಾಗ ಇಕಾರವು ಯಕಾರವಾಗುವುದನ್ನೂ, ಉಕಾರವು ವಕಾರವಾಗುವುದನ್ನೂ ಪ್ರತ್ಯಕ್ಷದಲ್ಲಿ ನಾವು ಕಂಡಿದ್ದೇವೆ. ಅದರಂತೆ ಹೇಳಿದ ರೀತಿಯಲ್ಲಿ ಅಕಾರವು ಏಕೆ ಹಕಾರವಾಗಬಾರದು ? ಈ ರೀತಿಯಲ್ಲಿ ಅಕಾರಕ್ಕೆ ಹಕಾರತ್ವವು ಪ್ರತ್ಯಕ್ಷಾನುಭವಸಿದ್ಧವಾದುದರಿಂದ— ಅಕಾರ ಹಕಾರಗಳೆರಡಕ್ಕೂ ಉಪಾದಾನಕಾರಣತ್ವವನ್ನು ಬೋಧಿಸುವ ಶಾಸ್ತ್ರಗಳಿಗೆ ಪರಸ್ಪರ ವಿರೋಧಕ್ಕೆ ಪ್ರಸಕ್ತಿಯೇ ಇಲ್ಲ. ಇದು ಲಕ್ಷ್ಮೀತಂತ್ರ ಮೊದಲಾದ ಆಗಮ ಗ್ರಂಥಗಳಲ್ಲಿ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಹೀಗೆ ಅಕಾರವು ಸರ್ವವರ್ಣೋಪಾದಾನಕಾರಣವೆಂದು ಹೇಳುವ ಶಾಸ್ತ್ರ ದಲ್ಲಿ ಕೇವಲವಾದ ಅಕಾರವು ವಿವಕ್ಷಿತವಲ್ಲವೆಂದೂ, ಹದಿನಾರನೆಯ ಸ್ವರವಾದ ವಿಸರ್ಗವನ್ನು ಪೂರ್ವದಲ್ಲಿಯಾಗಲಿ ಪರದಲ್ಲಿಯಾಗಲಿ ಇಟ್ಟುಕೊಂಡಿರುವ ಅಕಾರವೇ ವಿವಕ್ಷಿತವೆಂದೂ ತೋರಿಸಿದುದರಿಂದಲೇ "ಅಃಇತಿಬ್ರಹ್ಮ" ಎಂಬ ಶಾಸ್ತ್ರ ನಿರ್ದೇಶವೂ ಸಂಗತವಾಗುವುದು ; ಹಾಗಿಲ್ಲದೆ ಕೇವಲವಾದ ಅಕಾರವೇ ಅಲ್ಲಿ ವಿವಕ್ಷಿತವಾಗಿರುವು

ದಾದರೆ "ಅಃಇತಿ" ಎಂಬ ಸ್ಥಳದಲ್ಲಿ ಅಕಾರಕ್ಕೂ ಇಕಾರಕ್ಕೂ ಸಂಧಿಮಾಡಿದರೆ ಗುಣಸಂಧಿಯ ನಿಯಮದಂತೆ "ಏತಿಬ್ರಹ್ಮ" ಎಂಬುದಾಗಿಯೇ ನಿರ್ದೇಶವನ್ನು ಮಾಡಬೇಕಾಗಿದ್ದಿತು. "ಅಃ" ಎಂದು ಪ್ರಥಮಾ ವಿಭಕ್ತಿಯ ಏಕವಚನಾಂತವಾದ ಪದವಾಗಿ ನಿರ್ದೇಶಮಾಡಕೂಡದಾಗಿದ್ದಿತು. ಆದಕಾರಣ ನಾವು ಹೇಳುವ ರೀತಿಯಲ್ಲಿಯೇ ಆ ಎರಡು ಶಾಸ್ತ್ರಗಳಿಗೂ ವಿರೋಧವಿಲ್ಲವೆಂದು ತಿಳಿಯಬೇಕು. ಲಕ್ಷ್ಮೀತನ್ತ್ರದಲ್ಲಿ ಇದು ಹೇಳಲ್ಪಟ್ಟಿದೆ, ಹೀಗೆಂಬುದು ಕೆಲವರ ಅಭಿಪ್ರಾಯ.

**ಮತ್ತೆ ಕೆಲವರ ಅಭಿಪ್ರಾಯ** :—ಹದಿನಾರನೆಯ ವರ್ಣವಾದ ವಿಸರ್ಗದಿಂದ ಉಪಲಕ್ಷಿತವಾದ ಅಕಾರಕ್ಕೆ ಪ್ರಣವದಲ್ಲಿ ಶ್ರವಣವಿಲ್ಲ, **"ಅಃಕಾರೋವೈಸರ್ವಾವಾಕ್"** ಎಂಬುದಾಗಿ ಶಾಸ್ತ್ರದಲ್ಲಿ ಹೇಳಿಲ್ಲ. ಪ್ರಥಮಾವಿಭಕ್ತಿಯ ಏಕವಚನಾಂತವಾದ **"ಅಃ"** ಹದಿನಾರನೆಯ ವರ್ಣಕ್ಕೆ ಪ್ರಣವದೊಳಗೆ ಸೇರಿರುವಿಕೆಯಾಗಿದ್ದರೆ **"ಓಮ್"** ಎಂಬ ರೂಪವು ಸಿದ್ಧಿಸುವುದಿಲ್ಲ. ಓಕಾರಾದೇಶವು ವಿಭಕ್ತಿಯೊಡಗೂಡಿದ್ದಕ್ಕೆ ಬಾರದು ವಿಷ್ಣುವೇ ಸರ್ವಕ್ಕೂ ಕಾರಣವೆಂಬುದು ತೀರ್ಮಾನ ಮಾಡಲ್ಪಟ್ಟ ವಿಷಯ. ಅವನನ್ನು ಮೊದಲನೆಯ ಅಕ್ಷರವಾದ ಅಕಾರವೇ ಹೇಳುತ್ತದೆ ಎಂಬುದು **"ಅಕಾರಾರ್ಥೋ ವಿಷ್ಣುಃ ಜಗದುದಯರಕ್ಷಾಪ್ರಳಯಕೃತ್"**—ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವ ಪರಮಾತ್ಮನು ಅಕಾರದ ಅರ್ಥವಾಗಿದ್ದಾನೆಂದು ಶಾಸ್ತ್ರಗಳು ಹೇಳುತ್ತವೆ, ಹದಿನಾರನೆಯ ಅಕ್ಷರವಾದ 'ಅಃ' ಎಂಬುದಲ್ಲ, **"ಅಕಾರೋವೈ ಸರ್ವಾವಾಕ್"** ಎಂದು ಶ್ರುತವಾಗಿರುವುದಲ್ಲದೆ **"ಅಃಕಾರೋವೈಸರ್ವಾವಾಕ್"** ಎಂದು ಶ್ರುತವಾಗಿಲ್ಲ.

ಹಾಗಾದರೆ ಅಕಾರವೇ ಸರ್ವವರ್ಣಕಾರಣವೆಂದೂ, ಹಕಾರವೇ ಸರ್ವವರ್ಣ ಕಾರಣವೆಂದೂ ಬೋಧಿಸುವ ಶಾಸ್ತ್ರಗಳೆರಡಕ್ಕೂ ಉಂಟಾಗುವ ವಿರೋಧವನ್ನು ಹೇಗೆ ಪರಿಹಾರಮಾಡುವುದೆಂದರೆ, ಸರ್ವಕ್ಕೂ ಕಾರಣಭೂತನಾದ ಪರಮಾತ್ಮನಿಗೆ ವಾಚಕವಾದುದರಿಂದ ಅಕಾರವೇ ಸರ್ವಕಾರಣವೆಂದು ಹೇಗೆ ಔಪಚಾರಿಕವಾಗಿ ವ್ಯವಹರಿಸುತ್ತೇವೋ ; ಅದರಂತೆಯೇ ಆ ರೀತಿಯಾದ ಪರಮಾತ್ಮನಿಗೆ ವಾಚಕವಾದ ಹರಿಶಬ್ದದ ಒಂದು ಭಾಗವಾದ ಹಕಾರವೂ ಎಲ್ಲಕ್ಕೂ ಉಪಾದಾನಕಾರಣವೆಂದು ಹೇಳಲು ತಡೆಯಿಲ್ಲ. ಹೀಗೆ ಉಪಪತ್ತಿಯನ್ನು ಹೇಳಿದ ಮೇಲೆ ಆ ಎರಡು ಶಾಸ್ತ್ರಗಳಿಗೂ ವಿರೋಧವೇ ಇಲ್ಲ. ಪ್ರಮಾಣ ಭೂತವಾದ ಶಾಸ್ತ್ರದಲ್ಲಿ ಹಕಾರದ ಪರಿಗ್ರಹವೂ ಇದೆ. ಅದಕ್ಕೆ ಕಾರಣವೇನೆಂದರೆ ಅದು ಪರಮಾತ್ಮಾಕ್ಷರವಾಗಿದೆ ಎಂಬುದನ್ನು ಒಪ್ಪಿರಿ.

ಹಾಗಾದರೆ ಅಕಾರವೇ ಸರ್ವವರ್ಣಕ್ಕೂ ಕಾರಣವಾಗಿರುವುದಾದರೆ ಪ್ರಣವವೇ ಸರ್ವವರ್ಣ ಕಾರಣವೆಂದು ಹೇಳುವ ಶಾಸ್ತ್ರದ ಗತಿಯೇನು ? "ಓಂಕಾರ

ಪ್ರಭವಾವೇದಾಃ", "ಪ್ರಣವಾದ್ಯಾಸ್ತಥಾವೇದಾಃ", "ಓಙ್ಕಾರೇಣ ಸರ್ವಾವಾಕ್ಸಂತೃಣ್ಣಾ" "ಓಙ್ಕಾರಏವೇದಂ ಸರ್ವಮ್" ಎಂಬಿವೇ ಮೊದಲಾದ ಶಾಸ್ತ್ರಗಳಿಂದ ಪ್ರಣವವೇ ಸರ್ವಕಾರಣವೆಂದು ತಿಳಿದುಬರುತ್ತಲ್ಲವೆ ? ಅಂದರೆ ಅಕಾರವೇ ಸರ್ವಕಾರಣವಾಗಿದ್ದರೂ ಅಂತಹ ಅಕಾರವು ಪ್ರಣವದ ಒಂದು ಭಾಗವಾದುದರಿಂದ ತನ್ನ ಅಂಶಭೂತವಾದ ಅಕಾರದ ಮೂಲಕವಾಗಿ ಪ್ರಣವವೂ ಸರ್ವಕಾರಣವೆಂದು ಹೇಳಲು ತೊಂದರೆ ಏನೂ ಇಲ್ಲ.

ಪ್ರಣವವು ಋಕ್, ಯಜುಸ್, ಸಾಮ, ಸ್ವರೂಪವಾಗಿದೆ ಎಂಬ ಮಾತು ಇದೆ. ಹಾಗೆಯೇ ಅಥರ್ವಣ ವೇದವನ್ನೂ ಸೇರಿಸಿ ವೇದಚತುಷ್ಟಯಾತ್ಮಕ ಸ್ವರೂಪವಾದದ್ದು ಎಂಬಮಾತೂ ಶಾಸ್ತ್ರಗಳಲ್ಲಿ ಇದೆ. ಈ ಹೇಳಿಕೆಯಲ್ಲಿ ಒಂದಕ್ಕೊಂದಕ್ಕೆ ವಿರೋಧವಾಯಿತಲ್ಲಾ ಎಂದರೆ ಅದರ ಪರಿಹಾರ ಹೀಗೆಂದು ಆಚಾರ್ಯರು ಹೇಳುತ್ತಾರೆ.

ತ್ರಿವೇದೀ ಪ್ರಸಂಗದಲ್ಲಿ ಅಕಾರ ಉಕಾರ ಮಕಾರದವರೆಗೂ ನಿರೂಪಣೆ ಮಾಡಿ ಒಂದೊಂದು ಅಕ್ಷರವೂ ಒಂದೊಂದು ವೇದಕ್ಕೆ ಪ್ರಕೃತಿಯಾಗಿದ್ದು ಆ ಆ ವೇದಗಳ ಸಾರಾರ್ಥವನ್ನು ಬೋಧಿಸುತ್ತದೆ—ಎಂದು ಅರಿಯಬೇಕು. ಅಥರ್ವಣ ವೇದವನ್ನೂ ಹೇಳುತ್ತದೆ ಎಂಬುದನ್ನು ಅಪೇಕ್ಷಿಸಿದರೆ ಪ್ರಣವಕ್ಕೆ ನಾದವೂ ಶರೀರವಾಗಿದೆ ಎಂದು ತಿಳಿಯಬೇಕು—ಹೀಗಾಗಿ ಅದು ನಾಲ್ಕು ಅಕ್ಷರವುಳ್ಳದ್ದಾಯಿತು, ವೇದಚತುಷ್ಟಯದ ಸ್ವರೂಪ ಅದು ಎಂದರಿಯಬೇಕು. ಮಕಾರದ ಮುಂದಿರುವ ಅರ್ಧಮಾತ್ರೆಗೆ ನಾದವೆಂದು ಮಂತ್ರಶಾಸ್ತ್ರದಲ್ಲಿ ಪ್ರಸಿದ್ಧಿ ಉಂಟು. ನಾದದೊಡನೆ ನಾಲ್ಕು ಅಕ್ಷರವಾಗಿ ಇರುವುದರಿಂದ ನಾಲ್ಕು ವೇದದ ಸ್ವರೂಪವೆಂದು ಹೇಳುವುದು ತಪ್ಪಿಲ್ಲವೆಂದು ಭಾವ.

ಪ್ರಣವದ ಮೊದಲನೆಯ ಮಾತ್ರೆಯು ಯಾವುದುಂಟೋ ಅದು ಅಕಾರ. ಅದನ್ನು ಪೃಥಿವೀ ಸ್ವರೂಪವೆಂದೂ, ಋಕ್ಕುಗಳಿಂದ ಕೂಡಿದ ಋಗ್ವೇದವೆಂದೂ, ಬ್ರಹ್ಮ ವಸುಗಳು ಗಾಯತ್ರೀ ಗಾರ್ಹಪತ್ಯಾಗ್ನಿ ಇವುಗಳೆಂದೂ ಉಪಾಸನೆ ಮಾಡಬೇಕು. ಈ ಮಾತ್ರೆಯು ಸಾಮದ ಮೊದಲನೆಯ ಪಾದವಾಗುತ್ತದೆ.

ಎರಡನೆಯ ಮಾತ್ರೆಯು ಉಕಾರ. ಅದು ಅಂತರಿಕ್ಷಸ್ವರೂಪವೆಂದೂ, ಯಜುರ್ಮಂತ್ರಗಳಿಂದ ಕೂಡಿರುವ ಯಜುರ್ವೇದವೆಂದೂ, ವಿಷ್ಣು, ರುದ್ರ, ತ್ರಿಷ್ಟುಕ್‌ದಕ್ಷಿಣಾಗ್ನಿ ಇವುಗಳೆಂದೂ ಅದನ್ನು ಉಪಾಸನೆ ಮಾಡಬೇಕು. ಇದು ಸಾಮದ ಎರಡನೆಯ ಪಾದವಾಗುತ್ತದೆ.

ಮೂರನೆಯ ಮಾತ್ರೆಯು ಮಕಾರ. ಅದು ದ್ಯೌಃ–ಸ್ವರ್ಗ. ಅದು ಸಾಮಗಳಿಂದ ತುಂಬಿದ ಸಾಮವೇದ, ರುದ್ರ ಆದಿತ್ಯ ಜಗತೀ ಆಹವನೀಯಾಗ್ನಿ ಇವುಗಳೆಂದೂ ಉಪಾಸನೆಮಾಡಬೇಕು. ಇದು ಸಾಮದ ಮೂರನೆಯ ಪಾದವಾಗುತ್ತದೆ.

ಈ ಪ್ರಣವದ ಕೊನೆಯಲ್ಲಿ ನಾಲ್ಕನೆಯದಾದ ಅರ್ಧಮಾತ್ರೆ ಯಾವುದುಂಟೋ ಅದು ಸೋಮಲೋಕ. ಓಙ್ಕಾರವು ಅಥರ್ವ ಮಂತ್ರಗಳಿಂದ ಕೂಡಿರುವ ಅಥರ್ವವೇದ. ಸಂವರ್ತಕಅಗ್ನಿ, ಮರುತ್ತುಗಳು, ವಿರಾಟ್ ಏಕರ್ಷಿ[1] ಸೂರ್ಯನಲ್ಲಿ ಎಂದೂ ಉಪಾಸನೆಮಾಡಬೇಕು. ಅದು ಸಾಮದ ನಾಲ್ಕನೆಯ ಪಾದವಾಗುತ್ತದೆ. ಈ ರೀತಿ ಅಕಾರಾದಿಗಳಿಗೆ ಒಂದೊಂದಕ್ಕೂ ಗಾರ್ಹಪತ್ಯ ಗಾಯತ್ರೀ ಪ್ರಥಮಪಾದ ಋಗ್ವೇದ ಸ್ವರ್ಲೋಕ ಇವೇ ಮೊದಲಾದ ರೀತಿಯಿಂದ ಯಾವ ಒಳಗಿನ ಭೇದವುಂಟೋ ಅದೆಲ್ಲಾ ಉಪಾಸನೆ ಮಾಡಲು ತಕ್ಕದನ್ನು ಹೇಳಲು ಬಯಸಿ ಹೇಳಿದ್ದೆಂದು ಅನುಸಂಧಾನ ಮಾಡಲು ತಕ್ಕದ್ದಾಗಿದೆ ಎಂದು ಅಭಿಪ್ರಾಯ.

ಈ ರೀತಿ ಅಕಾರಾದಿಗಳಲ್ಲಿ ಒಂದೊಂದನ್ನೂ ಅನುಸಂಧಾನಮಾಡಬೇಕು. ಅಕಾರವೂ ಕೂಡ ಪ್ರಣವದ ಅಂಶವಾಗಿದೆ; ಹೀಗಿರುವಾಗ ಅಕಾರದಿಂದ ಪ್ರಣವದ ಉತ್ಪತ್ತಿಯು ಹೇಗೆ ? ಅಂದರೆ ಅಕಾರವಾಚ್ಯನಾದ ಪರಮಾತ್ಮನಿಂದ ಪ್ರಣವಕ್ಕೆ ಅಧಿಷ್ಠಾತೃವಾದ ದೇವತೆಯು ಆಗುವುದರಿಂದ "ಅಕಾರದಿಂದ ಪ್ರಣವವು ಉತ್ಪನ್ನವಾಗುವುದು" ಎಂದು ಔಪಚಾರಿಕವಾಗಿ ವ್ಯವಹರಿಸುವುದು.

ಪ್ರಣವಾಭಿಮಾನಿ ದೇವತೆಯೂ ಪರಮಾತ್ಮನೇ ಆದುದರಿಂದ—ಪರಮಾತ್ಮನಿಂದಲೇ ಪರಮಾತ್ಮನ ಉತ್ಪತ್ತಿಯು ಹೇಗೆ ಘಟಿಸೀತು ? ಎಂದು ಸಂದೇಹವುಂಟಾದರೆ ಪ್ರಣವಾಂಶವಾದ ಅಕಾರೋಕಾರ ಮಕಾರಗಳಿಗೆ ಅಭಿಮಾನಿದೇವತೆಗಳೆನಿಸಿಕೊಂಡಿರುವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರು ವಿಗ್ರಹವಿಶಿಷ್ಟರಾಗಿ ಪರಮಾತ್ಮನಿಂದ ಉತ್ಪನ್ನರಾಗುವರಾದ ಕಾರಣ ಆಗಲೂ ಅಕಾರದಿಂದ ಪ್ರಣವೋತ್ಪತ್ತಿಯನ್ನು ಔಪಚಾರಿಕವಾಗಿ ಹೇಳಲು ತಡೆಯಿಲ್ಲ.

ಹೀಗೆ ಎಲ್ಲಾ ಶಾಸ್ತ್ರಗಳಿಗೂ ಉಪಪತ್ತಿ ದೊರೆಯುವುದರಿಂದ ಶಬ್ದಕ್ಕೆ ಅದ್ರವ್ಯತ್ವವನ್ನು ಅಂಗೀಕರಿಸುವ ಪಕ್ಷವೇ ಶ್ಲಾಘ್ಯವಾಗಿರುವುದು. ದೂರದಲ್ಲಿ

1. ಸೂರ್ಯನಿಗೆ ದ್ವಾದಶಾತ್ಮನೆಂಬ ಹೆಸರುಂಟು. ಹನ್ನೆರಡು ಮೂರ್ತಿಗಳುಳ್ಳ ಸೂರ್ಯ ಎಂದರ್ಥ. ಅವನ ಹನ್ನೆರಡು ಮೂರ್ತಿಗಳು ಯಾವುವೆಂದರೆ, ಧಾತಾ, ಮಿತ್ರ, ಅರ್ಯಮಾ, ರುದ್ರ, ವರುಣ, ಸೂರ್ಯ, ಭಗ, ವಿವಸ್ವಾನ್. ಪೂಷಾ, ಸವಿತಾ, ತ್ವಷ್ಟಾ ಮತ್ತು ವಿಷ್ಣು ಎಂಬುವು. ಇವುಗಳಲ್ಲಿ ಒಂದು ಮೂರ್ತಿಯೆಂದು ಧ್ಯಾನಮಾಡಬೇಕು.

ರುವ ಶಬ್ದವನ್ನು ಗ್ರಹಿಸುವಾಗ ವಿಷಯವಿರುವೆಡೆಗೆ ಕಣ್ಣು ಹೋಗುವಂತೆ ಶಬ್ದವಿದ್ದ ಜಾಗಕ್ಕೆ ಶ್ರೋತ್ರೇಂದ್ರಿಯದ ಗಮನವನ್ನು ಹೇಳುವ ಶ್ರೋತ್ರವೃತ್ತಿ ಪಕ್ಷವಾಗಲಿ, ಶಬ್ದವ್ಯಂಜಕವಾದ ವಾಯುವಿನ ಆಗಮನ ಪಕ್ಷವಾಗಲಿ, ಶಬ್ದಾಶ್ರಯವಾದ ಭೇರ್ಯಾದಿಗಳ [1]ಸೂಕ್ಷ್ಮಾವಯವಗಳ ಆಗಮನ ಪಕ್ಷವಾಗಲಿ, [2]ಶಬ್ದದೊಡನೆ ಕೂಡಿದ ವಾಯುವಿನ ಆಗಮನ ಪಕ್ಷವಾಗಲಿ ಸ್ವೀಕರಿಸಲು ತಕ್ಕದ್ದಾಗಿದೆ.

ಹೀಗೆ ಶಬ್ದಕ್ಕೆ ಅದ್ರವ್ಯತ್ವವನ್ನು ಹೇಳುವ ಪಕ್ಷದಲ್ಲಿಯೂ ನೈಯಾಯಿಕರ ವೀಚೀತರಂಗ ನ್ಯಾಯದ ರೀತಿಯನ್ನು ಅವಲಂಬಿಸಬೇಕಾದ ಆವಶ್ಯಕತೆ ಇಲ್ಲ.

ಹೀಗೆ ಶಬ್ದವು ನಿರೂಪಿಸಲ್ಪಟ್ಟಿತು.

## ಸ್ಪರ್ಶದ ನಿರೂಪಣೆ

ನಮ್ಮಂತಹವರೇ ಮುಂತಾದವರ ತ್ವಗಿಂದ್ರಿಯದಿಂದ ಗ್ರಹಿಸಲ್ಪಡುವ ಪದಾರ್ಥಕ್ಕಿಂತಲೂ ವಿಜಾತೀಯಗಳಾದ ಶಬ್ದ–ರೂಪ–ರಸ–ಗಂಧಗಳೆಂಬುವು ಯಾವುವುಂಟೋ ಅವುಗಳಿಗಿಂತಲೂ ವಿಲಕ್ಷಣವಾದ ಅದ್ರವ್ಯವು ಸ್ಪರ್ಶವೆನಿಸಿಕೊಳ್ಳುವುದು.

ಶೀತ, ಉಷ್ಣ ಮತ್ತು ಅನುಭಯಾತ್ಮಕ ಈ ಭೇದದಿಂದ ಅದೂ ಮೂರು ಬಗೆಯಾಗಿದೆ, ನೀರಿನಲ್ಲಿ ಶೀತಸ್ಪರ್ಶ, ತೇಜಸ್ಸಿನಲ್ಲಿ ಉಷ್ಣಸ್ಪರ್ಶ, ಭೂಮಿ ಗಾಳಿ ಇವುಗಳಲ್ಲಿ ಅನುಷ್ಣಾಶೀತಸ್ಪರ್ಶ. (ಉಷ್ಣ–ಬಿಸಿ, ಶೀತ–ತಣ್ಣಗಿರುವಿಕೆ, ಇವೆರಡೂ ಇಲ್ಲದಿರುವುದು ಅನುಷ್ಣಾಶೀತ.)

ಮತ್ತೆ ಪಾಕಜ ಅಪಾಕಜವೆಂದು ಎರಡು ವಿಧವಾಗಿದೆ. ಪೃಥಿವಿಯಲ್ಲಿ ಮೊದಲನೆಯದು—ಪಾಕಜ. ಅಪ್ಪು, ತೇಜಸ್ಸು, ವಾಯು ಇವುಗಳಲ್ಲಿ ಅಪಾಕಜ. ಅಮೃತ, ವಿಷ, ಹತ್ತಿ, ಕಲ್ಲು, ಬ್ರಾಹ್ಮಣ, ಚಂಡಾಲ ಇವೇ ಮುಂತಾದವರ ಸ್ಪರ್ಶವಿಶೇಷವು ಪಾಕಜಭೇದವು.

## ರೂಪದ ನಿರೂಪಣೆ

ಅಸ್ಮದಾದಿಗಳ ಚಕ್ಷುರಿಂದ್ರಿಯದಿಂದ ಮಾತ್ರದಿಂದ ಗ್ರಹಿಸಲ್ಪಡುವ ಪದಾರ್ಥಕ್ಕಿಂತಲೂ ವಿಜಾತೀಯಗಳಾದ ಶಬ್ದ, ಸ್ಪರ್ಶ, ರಸ, ಗಂಧಗಳೆಂಬುವು ಯಾವು

---

1. ಶಬ್ದವು ಭೇರ್ಯಾದಿಗಳನ್ನು ಆಶ್ರಯಿಸಿದೆ ಎಂಬ ಪಕ್ಷ.

2. ಶಬ್ದವು ವಾಯುವಿನ ಗುಣವಾಗಿದೆ ಎನ್ನುವರ ಪಕ್ಷ.

ವುಂಟೋ ಅವುಗಳಿಗಿಂತಲೂ ವಿಲಕ್ಷಣವಾದ ಅದ್ರವ್ಯವು ರೂಪವೆನಿಸಿಕೊಳ್ಳುವುದು. ಅದು ನಾಲ್ಕು ವಿಧವಾಗಿದೆ. ಬಿಳುಪು, ಕೆಂಪು, ಹೊಂಬಣ್ಣ, ಕಪ್ಪು ಎಂಬಿವು ಇದರ ಭೇದಗಳು. ನೀರು, ಬೆಳ್ಳಿ, ಶಙ್ಖ, ಕಪ್ಪೆಚಿಪ್ಪು, ಚಂದ್ರ ಇವೇ ಮೊದಲಾದವು ಬಿಳುಪಿನ ಭೇದಗಳು. ಬೆಂಕಿ, ದಾಸವಾಳ, ದಾಳಿಂಬೆ, ಬಂಧುಜೀವ ಹೂವು–ಹವಳ ಪದ್ಮರಾಗಮಣಿ ಇವುಗಳ ರೂಪವಿಶೇಷವು ರಕ್ತಭೇದಗಳು. ಚಿನ್ನ, ಹರಿತಾಲ–ಹರಿಶಿನ ಇವೇ ಮುಂತಾದವುಗಳ ರೂಪಗಳು ಹೊಂಬಣ್ಣಗಳ ಭೇದಗಳು. ಮರಕತ ಮಣಿ, ದುಂಬಿ, ಮೋಡ, ಕತ್ತಲು, ಹೊಂಗೆ, ಗರಿಕೆ ಮುಂತಾದವುಗಳ ರೂಪ ವಿಶೇಷಗಳು ಕಪ್ಪಿನ ಭೇದಗಳು.

ಕೆಲವರು ಶ್ರುತ್ಯನುಸಾರವಾಗಿ ಕೆಂಪುಬಣ್ಣದ ಒಳಭೇದವೆಂದು ಹೊಂಬಣ್ಣವನ್ನು ಹೇಳುತ್ತಾರೆ. ರೂಪವು ಭಾಸ್ವರ ಅಭಾಸ್ವರ ಭೇದದಿಂದ ಎರಡು ವಿಧ. ಭಾಸ್ವರವು ತೇಜಸ್ಸಿನಲ್ಲಿ ಇದೆ. ಅಭಾಸ್ವರರೂಪವು ಭೂಮಿ, ನೀರು, ಮುಂತಾದವುಗಳಲ್ಲಿದೆ. ಈ ರೀತಿ ರೂಪವು ನಾಲ್ಕೇವಿಧವಾಗಿದೆ. ಚಿತ್ರವೆಂಬ ಐದನೆಯ ರೂಪವುಂಟೆಂದು ಕೆಲವರು ಹೇಳುತ್ತಾರೆ. ಈರೀತಿ ವಿಭಾಗವನ್ನು ಹೇಳಿರುವುದರಿಂದ ಅವರ ಮತವು ನಿರಸನ ಮಾಡಿದಂತಾಯಿತು. ಆದುದರಿಂದಲೇ ಚಿತ್ರರಸ, ಚಿತ್ರಗಂಧ, ಚಿತ್ರಸ್ಪರ್ಶ ಇವುಗಳ ನಿರಾಸವಾಯಿತು.

## ರಸದ ನಿರೂಪಣೆ

ನಮ್ಮಂತಹವರ ಜಿಹ್ವೇಂದ್ರಿಯ ಮಾತ್ರದಿಂದ ಗ್ರಹಿಸಲ್ಪಡುವ ಪದಾರ್ಥಕ್ಕಿಂತಲೂ ವಿಜಾತೀಯಗಳಾದ ಶಬ್ದ–ಸ್ಪರ್ಶ–ರೂಪ–ಗಂಧಗಳೆಂಬುವು ಯಾವುವುಂಟೋ, ಅವುಗಳಿಗಿಂತಲೂ ವಿಲಕ್ಷಣವಾದ ಅದ್ರವ್ಯವು ರಸವೆನಿಸಿಕೊಳ್ಳುವುದು. ಅದು ಸಿಹಿ, ಹುಳಿ, ಉಪ್ಪು, ಕಹಿ, ಕಾರ, ಒಗಚು ಎಂಬ ಭೇದಗಳಿಂದ ಆರು ವಿಧವಾಗಿದೆ. ಅವುಗಳಲ್ಲಿ ಕಬ್ಬು, ಹಾಲು, ಬೆಲ್ಲ ಇವುಗಳಲ್ಲಿ ಇರುವ ರಸವು ಸಿಹಿಯ ಭೇದಗಳು. ಮಾವು, ಹುಣಿಸೆ, ನೆಲ್ಲಿ ಇವುಗಳ ರಸವು ಹುಳಿಯ ಭೇದಗಳು. ಸಮುದ್ರಕ್ಕೆ ಸಂಬಂಧಪಟ್ಟವು, ಮರುಭೂಮಿಗೆ ಸಂಬಂಧಪಟ್ಟವು ಇವುಗಳ ರಸವು ಉಪ್ಪಿನಭೇದಗಳು.

ಕಿಂಪಾಕವೆಂಬ ವಿಷವೃಕ್ಷ, ಹಾವುಮೆಕ್ಕೆಕಾಯಿ, ಬೇವು ಮುಂತಾದ ವಸ್ತುಗಳಲ್ಲಿರುವ ರಸವ್ಯತ್ಯಾಸಗಳು ಕಹಿರಸದ ಒಳಭೇದಗಳಾಗಿರುವುವು. ಶುಣ್ಠಿ, ಮೆಣಸು, ಸಾಸಿವೆ ಇವುಗಳ ರಸಗಳು ಕಟುಭೇದಗಳು. ಅಳಲೇಕಾಯಿ, ತಾರೆಕಾಯಿ, ಮಾವಿನ ಚಿಗುರು ಮುಂತಾದ ವಸ್ತುಗಳಲ್ಲಿರುವ ರಸವ್ಯತ್ಯಾಸಗಳು ಕಷಾಯ ರಸದ ಒಳಭೇದಗಳಾಗಿರುವುವು. ಉಷ್ಣರಸವೂ, ಕಷಾಯರಸವೂ, ತಿಕ್ತ

ರಸದ ಒಳಭೇದಗಳಿಗೆ ಸೇರಿದುವೆಂದು ಕೆಲವರು ತಿಳಿದಿರುವರು; ಆದರೆ ಇವರ ತಿಳಿವು ಪ್ರತ್ಯಕ್ಷ ವಿರುದ್ಧವಾಗಿಯೂ, ಶಾಸ್ತ್ರ ವಿರುದ್ಧವಾಗಿಯೂ ಇರುವುದರಿಂದ ಭ್ರಾಂತಿಯೇ ಹೊರತು ಯಥಾರ್ಥವಾದ ರೂಪವಾದುದಲ್ಲ.

ಇಂತಹ ರಸಗಳ ವಿಷಯವಾಗಿ ತಿಳಿಯಬೇಕಾದ ಇನ್ನೂ ಅನೇಕ ವಿಷಯಂಗಳನ್ನು ಆಯುರ್ವೇದ ಗ್ರಂಥಗಳಿಂದ ವಿಶದವಾಗಿ ತಿಳಿಯಬಹುದು.

## ಗಂಧದ ನಿರೂಪಣೆ

ನಮ್ಮಂತಹವರ ಘ್ರಾಣೇಂದ್ರಿಯ ಮಾತ್ರದಿಂದ ಗ್ರಹಿಸಲ್ಪಡುವ ಪದಾರ್ಥಕ್ಕಿಂತಲೂ ವಿಜಾತೀಯಗಳಾದ ಶಬ್ದ, ಸ್ಪರ್ಶ, ರೂಪ, ರಸಗಳೆಂಬುವು ಯಾವುವುಂಟೋ ಅವುಗಳಿಗಿಂತಲೂ ವಿಲಕ್ಷಣವಾದ ಅದ್ರವ್ಯವು ಗಂಧವೆನಿಸಿಕೊಳ್ಳುವುದು.

ಇಂತಹ ಗಂಧವು ಸುರಭಿಯೆಂದೂ (ಒಳ್ಳೆಯ ವಾಸನೆ) ಅಸುರಭಿ (ಕೆಟ್ಟವಾಸನೆ) ಎರಡು ಬಗೆಯಾಗಿ ವಿಂಗಡಿಸಲ್ಪಡುವುದು. ಚಂದನ, ಕಸ್ತೂರಿ, ಪುಣಗು, ಜವ್ವಾಜಿ, ಕೇಸರಿ, ಪಚ್ಚಕರ್ಪೂರ, ಏಲಕ್ಕಿ, ಸಂಪಿಗೆ, ಮಲ್ಲಿಗೆ, ಇರುವಂತಿಗೆ, ಶಾವಂತಿಗೆ, ಮೊಲ್ಲೆ, ಜಾಜಿ ಮುಂತಾದ ವಸ್ತುಗಳಲ್ಲಿರುವ ಗಂಧ ವ್ಯತ್ಯಾಸಗಳು ಸುರಭಿಗಂಧದ ಒಳಭೇದಗಳಾಗಿರುವುವು.

ಮಲ, ಮೂತ್ರ ರೇತಸ್ಸು, ರಕ್ತ, ಮಾಂಸ, ಕೊಬ್ಬು, ಬೆವರು, ಕೊಳೆತು ಹೋದವಸ್ತು, ಹಳಸಿಹೋದ ವಸ್ತು ಇವೇ ಮೊದಲಾದ ವಸ್ತುಗಳಲ್ಲಿರುವ ಗಂಧ ವ್ಯತ್ಯಾಸಗಳು ಅಸುರಭಿಗಂಧದ ಒಳಭೇದಗಳಾಗಿರುವುವು.

ಈ ಗಂಧವು ಪೃಥಿವಿಯಲ್ಲಿ ಮಾತ್ರ ಇರುವುದು, ಪಾಕಭೇದದಿಂದ ಬೇರೆಬೇರೆಯಾಗಿದೆ. ಗಾಳಿ, ನೀರು ಮುಂತಾದವಲ್ಲಿ ಗಂಧದ ಉಪಲಬ್ಧಿಯು–ವಾಸನೆ ಹೊಂದುವಿಕೆಯು ಪೃಥಿವಿಗೆ ಸಂಬಂಧಪಟ್ಟ ಪದಾರ್ಥಗಳ ಸಹವಾಸದಿಂದ ಎಂದು ಅರಿಯಬೇಕು. ಇದು "ಅಯೋದಹತಿ=ಕಬ್ಬಿಣವು ಸುಡುತ್ತದೆ" ಎಂಬುವ ಹಾಗೆ ಉಪಚಾರವಾದ ಮಾತು. ಕಬ್ಬಿಣವು ಸುಡಬೇಕಾದರೆ ಬೆಂಕಿಯ ಸಂಪರ್ಕದಿಂದ ತಾನೆ.

ಪಂಚೀಕರಣ ಪ್ರಕ್ರಿಯೆಯಿಂದ ಎಲ್ಲಾ ಭೂತಗಳಲ್ಲೂ ಎಲ್ಲಾ ಗುಣಗಳು ಇದ್ದರೂ ಪ್ರಾಧಾನ್ಯಾಭಿಪ್ರಾಯದಿಂದ ಈ ರೀತಿ ಹೇಳಲ್ಪಟ್ಟಿದೆ. ಆದುದರಿಂದ ಯಾವ ವಿರೋಧವೂ ಇಲ್ಲ. ಸ್ವಾಶ್ರಯದಲ್ಲಿ ಪಾಕದಿಂದ ಬೇರೆ ಗುಣದ ಉತ್ಪತ್ತಿಯಾಗುತ್ತದೆ, ಸ್ವಾಶ್ರಯಕ್ಕೆ ನಾಶವಿಲ್ಲದುದರಿಂದಲೇ ಉಪಪತ್ತಿಯಾಗುವುದ

ರಿಂದ ಪೀಲುಪಾಕವೇ ಮೊದಲಾದ ಮತ ನಿರಾಸವಮಾಡಲ್ಪಟ್ಟಂತಾಯಿತು. ಪೀಲು ವೆಂದರೆ ಪರಮಾಣು. ಪರಮಾಣುವಿನಲ್ಲಿಯೇ ಪಾಕವುಂಟಾಗುವುದೆಂದು ಅವರ ಅಭಿಪ್ರಾಯ.

## ಸಂಯೋಗದ ನಿರೂಪಣೆ

**ಚಕ್ಷುರಿಂದ್ರಿಯಜನ್ಯ**—ನಮ್ಮ ಚರ್ಮಕ್ಕೂ ಮತ್ತೊಂದು ಪದಾರ್ಥಕ್ಕೂ ಸಂಬಂಧ ದಿಂದ ಉಂಟಾಗುವದಾಗಿಯೂ ತ್ವಗಿಂದ್ರಿಯಜನ್ಯ ನಮ್ಮ ಮುಂದೆ ಇರುವ ಎರಡು ಪದಾರ್ಥಗಳಲ್ಲಿ "**ಇಮೌ ಸಂಯುಕ್ತೌ**—ಇವುಗಳೆರಡೂ ಕೂಡಿವೆ" ಎಂಬ ಪ್ರತ್ಯಕ್ಷಕ್ಕೆ ನಿಮಿತ್ತವಾಗಿಯೂ ಅದ್ರವ್ಯವಾಗಿಯೂ ಇರುವುದು ಸಂಯೋಗವೆನಿಸಿಕೊಳ್ಳು ವುದು. ಅದು ಕೂಡ ಆರು ದ್ರವ್ಯಗಳಲ್ಲಿ ಇರುವ ಸಾಮಾನ್ಯಗುಣವು. ಇದಕ್ಕೂ ಕೂಡ ಇದರ ಇಲ್ಲದಿರುವಿಕೆ ಒಂದೇ ಜಾಗದಲ್ಲಿ ಇರುವಿಕೆ ಇವೆಲ್ಲಾ ಅಂಶ ಭೇದ ಪ್ರಯುಕ್ತವಾಗಿರುವುದರಿಂದ ವಿರೋಧವೇನೂ ಇಲ್ಲ.

ಇದು ಕಾರ್ಯ ಅಕಾರ್ಯ ಭೇದದಿಂದ ಎರಡು ವಿಧವಾಗಿದೆ. ಪರಿಮಿತ ವಾಗಿರುವವರಿಗೆ ಇಬ್ಬರ ಪ್ರೇರಣೆಯಿಂದ ಉಂಟಾಗುವುದು ಕಾರ್ಯಸಂಯೋಗ. ಉದಾ :—ಎರಡು ಆಡುಗಳು ಒಂದಕ್ಕೊಂದಕ್ಕೆ ಡಿಕ್ಕಿ ಇಡುತ್ತವೆ. ಜಟ್ಟಿಗಳು ಕಾಳಗ ಮಾಡುತ್ತಾರೆ ಮುಂತಾದವು. ಕೆಲವೆಡೆ ಎರಡರ ಪ್ರೇರಣೆಯಿಲ್ಲದೆ ಒಂದರ ಪ್ರೇರಣೆ ಯಿಂದಲೇ ಸಂಯೋಗವುಂಟಾಗುತ್ತದೆ. "ಮೋಟು ಮರದಮೇಲೆ ಗಿಡುಗ ಕೂತಿದೆ" ಎನ್ನುವಾಗ ಇವೆರಡಕ್ಕೂ ಉಂಟಾಗುವ ಸಂಯೋಗವು ಅಕಾರ್ಯ ಭೇದವಾಗಿದೆ.

ಕೆಲವರು 'ಸಂಯೋಗಜಸಂಯೋಗವೆಂಬುದೂ' ಒಂದು ಉಂಟೆನ್ನುತ್ತಾರೆ. ಕೈಯಲ್ಲಿ ಪುಸ್ತಕವಿದೆ. ಕೈಯು ಶರೀರದ ಒಂದು ಭಾಗ. ಆದುದರಿಂದ ಸಂಯೋಗವುಳ್ಳ ಕೈಯಿನ ಸಂಯೋಗವು ಶರೀರಕ್ಕೆ ಇರುವುದರಿಂದ ಸಂಯೋಗಜ ಸಂಯೋಗವಾಯಿತು ಎಂಬುದು ಅವರ ಅಭಿಪ್ರಾಯ. ಅದು ಸರಿಯಲ್ಲ. ಹಸ್ತ ಪುಸ್ತಕ ಇವೆರಡರ ಸಂಯೋಗದಿಂದಲೇ ಉಪಪನ್ನವಾಗುವುದರಿಂದ ಬೇರೆ ಒಂದು ಸಂಯೋಗವನ್ನು ಕಲ್ಪನೆಮಾಡಬೇಕಾದುದಿಲ್ಲ. ಇದರಿಂದ **'ವಿಭಾಗಜವಿಭಾಗ'** ಎಂಬುದೂ ಒಂದುಂಟು ಎಂದು ಹೇಳುವವರನ್ನು ನಿರಸನಮಾಡಿಯಾಯಿತು. ವಿಭಾಗವೂ ಕೂಡ ಸಂಯೋಗವಿಲ್ಲದಿರುವುದೇ ಆಗಿದೆ. ಅದು ಬೇರೆ ಗುಣವಲ್ಲ. ವಿಭು ದ್ರವ್ಯಗಳಿಗೆ ಅಕಾರ್ಯ ಸಂಯೋಗ. ಕಾಲವೇ ಮೊದಲಾದ ವಿಭು ಪದಾರ್ಥ ಗಳಲ್ಲಿ ಈಶ್ವರನ ಅನುಪ್ರವೇಶ ಪ್ರಯುಕ್ತವಾದ ಈಶ್ವರ ಸಂಯೋಗವೇ ಇಲ್ಲದಿದ್ದ ಪಕ್ಷದಲ್ಲಿ ಆ ಪದಾರ್ಥಗಳು ತಮ್ಮ ತಮ್ಮ ಕೆಲಸಗಳನ್ನು ಅಣುಮಾತ್ರವೂ ಮಾಡ ಲಾರವೆಂಬ ಈ ಅರ್ಥವು (ವಿಷಯವು).

ಕಾಲಂ ಸ ಪಚತೇ ತತ್ರ ನ ಕಾಲಸ್ತತ್ರವೈ ಪ್ರಭುಃ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ ॥

ಎಂಬಿವೇ ಮೊದಲಾದ ನೂರಾರು ಸ್ಮೃತಿವಾಕ್ಯಗಳಲ್ಲಿಯೂ, ಶ್ರುತಿವಾಕ್ಯಗಳಲ್ಲಿಯೂ ಪ್ರಸಿದ್ಧವಾಗಿರುವುದು.

"ಯೇನವಿ ನಾ ತೃಣಾಗ್ರಮಪಿನಚಲತಿ=(ಯಾವನ ಸಂಯೋಗವಿಲ್ಲದಿದ್ದರೆ ಹುಲ್ಲಿನ ತುದಿಯೂ ಸಹ ಅತ್ತಿತ್ತಚಲಿಸಲೂ ಸಮರ್ಥವಾಗಲಾರದೋ) ಎಂದು ಪಂಡಿತ ಪಾಮರ ಸಾಧಾರಣವಾಗಿ ಲೋಕದವರೆಲ್ಲರೂ ವ್ಯವಹರಿಸುತ್ತಿರುವರಷ್ಟೆ.

"ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣ ಸ್ಥಿತಃ=ಸಕಲ ಪದಾರ್ಥಗಳ ಒಳಗೂ ಹೊರಗೂ ವ್ಯಾಪಿಸಿ ನಾರಾಯಣನು ಇರುವನು" ಎಂದು ತಿಳಿದು ಬರುವುದರಿಂದ ಕಾಲವೇ ಮೊದಲಾದ ವಿಭು ಪದಾರ್ಥಗಳಿಗೆ ಬಹಿಃಪ್ರದೇಶವೇ ಇಲ್ಲವಾದುದರಿಂದ ಅವುಗಳಿಗೆ ವಿಭುತ್ವ ಹೇಗೆ ? ಎಂದು ಸಂದೇಹವುಂಟಾದರೆ, ಯಾವ ಪದಾರ್ಥಗಳಿಗೆ ಬಹಿಃ ಪ್ರದೇಶವು ಪ್ರಮಾಣದಿಂದ ಪ್ರಸಿದ್ಧವಾಗಿರುವುದೋ ಅಂತಹ ಸರ್ವಪದಾರ್ಥವೇ ವಿವಕ್ಷಿತವಾಗಿದೆ. ಕಾಲ ಮುಂತಾದವುಗಳಲ್ಲಿ ಬಹಿರ್ವ್ಯಾಪ್ತಿಯಿಲ್ಲದೆ ಸಮ ವ್ಯಾಪ್ತಿಯೇ ಇದ್ದರೂ ಅವುಗಳು ಈಶ್ವರನಿಗೆ ನಿಯಾಮ್ಯಗಳಾಗಿಯೇ ಇರುವುವು. ಹೀಗೆ ಅಂತರ್ವ್ಯಾಪ್ತಿಯ ಮೂಲಕ ಈಶ್ವರ ಸಂಯೋಗವನ್ನೂ ಈಶ್ವರ ನಿಯಾಮ್ಯತ್ವವನ್ನೂ ಒಪ್ಪಿದರೇನೇ—ಶ್ರುತ್ಯಾದಿ ಪ್ರಮಾಣಗಳಿಂದ ಕಾಲಾದಿಗಳಿಗೆ ಅವಗತವಾಗಿರುವ ಈಶ್ವರ ಶರೀರತ್ವವೂ ಸುರಕ್ಷಿತವಾಗುತ್ತದೆ.

ಅನುಮಾನದಿಂದಲೂ ವಿಭುದ್ರವ್ಯಕ್ಕೆ ಈಶ್ವರಸಂಯೋಗವು ಸಿದ್ಧಿಸುತ್ತದೆ. "ವಿಭುದ್ರವ್ಯಂ ಈಶ್ವರಸಂಯುಕ್ತಂ ದ್ರವ್ಯತ್ವಾತ್ ಘಟವತ್=ಘಟವು ಹೇಗೆ ಈಶ್ವರನಿಂದ ಸಂಯುಕ್ತವಾಗಿದೆಯೋ ಹಾಗೆಯೇ ವಿಭುದ್ರವ್ಯವೂ ಈಶ್ವರ ಸಂಯುಕ್ತವಾಗಿದೆ. ಈಶ್ವರಃ ಕಾಲಾದಿಸಂಯುಕ್ತಃ ದ್ರವ್ಯತ್ವಾತ್ ಘಟವತ್= ಘಟವು ಹೇಗೆ ಈಶ್ವರನಿಂದ ಸಂಯುಕ್ತವಾಗಿದೆಯೋ ಹಾಗೆಯೇ ಕಾಲಾದಿಗಳೂ ದ್ರವ್ಯವಾಗಿರುವುದರಿಂದ ಅವುಗಳಲ್ಲಿ ಈಶ್ವರನು ಸಂಯುಕ್ತನಾಗಿದ್ದಾನೆ." ಇವೇ ಮೊದಲಾದವು ಅನುಮಾನಗಳು.

## ಶಕ್ತಿನಿರೂಪಣೆ

ಎಲ್ಲಾ ಕಾರಣಗಳಿಗೂ ಕಾರಣತ್ವವನ್ನು ನಿರ್ವಾಹಮಾಡುವ ಒಂದಾನೊಂದು ಅದ್ರವ್ಯವಿಶೇಷವು ಶಕ್ತಿಯೆನಿಸಿಕೊಳ್ಳುವುದು. ತರ್ಕ=ಅನುಮಾನ, ಆಗಮ= ಶಾಸ್ತ್ರ ಇವುಗಳಿಂದ ಆದರ ಸಿದ್ಧಿಯಾಗುತ್ತದೆ.

ಅಗ್ನಿಗೆ ಸುಡುವ ಸ್ವಭಾವ ಇದೆ. ಇದು ಮಣಿಮಂತ್ರ ಇವೇ ಮುಂತಾದವುಗಳ ಸನ್ನಿಧಿಯಲ್ಲಿ ಇದು ಸುಡುವುದಿಲ್ಲ. ಆಗ ಇದರ ಸ್ವರೂಪ–ಇದಕ್ಕೆ ಬೇಕಾದ ಸಹಕಾರಿ ಕಾರಣ ಇವೆಲ್ಲಾ ಒಂದೇ ಸಮನಾಗಿದ್ದರೂ ಈ ತಡೆಗಳಿಂದ ಅದರ ಸುಡುವ ಶಕ್ತಿಯು ಕುಂಠಿತವಾಗುತ್ತದೆ. ಈ ಶಕ್ತಿಯು ಅತೀನ್ದ್ರಿಯ ಶಕ್ತಿ. ಅಯಸ್ಕಾಂತ ಮುಂತಾದವುಗಳಲ್ಲಿ ಇದರ ಪ್ರಸಿದ್ಧಿಯನ್ನು ಕಾಣಬಹುದು. ಆ ಶಕ್ತಿಯು ಆರು ದ್ರವ್ಯಗಳಲ್ಲೂ ಇರುತ್ತದೆ. ಭಗವಂತನ ಅದ್ಭುತವಾದ ಶಕ್ತಿಯು–ವಿಷ್ಣುಪುರಾಣಾದಿಗಳಲ್ಲಿ ಪ್ರಸಿದ್ಧವಾಗಿದೆ.

**ಇದರ ವಿವರಣೆ :—**

**[1]ಅಕ್ಷರಂ ತತ್ಪರಂ ಬ್ರಹ್ಮ ಕ್ಷರಂ ಸರ್ವಮಿದಂ ಜಗತ್ ।**
**ಏಕದೇಶ ಸ್ಥಿತಸ್ಯಾಗ್ನೇ ಜ್ಯೋತ್ಸ್ನಾ ವಿಸ್ತಾರಿಣೀ ಯಥಾ ।**
**ಪರಸ್ಯ ಬ್ರಹ್ಮಣಃ ಶಕ್ತಿಃ ತಥೇದ ಮಖಿಲಂ ಜಗತ್ ॥**

ಆ ಪರಬ್ರಹ್ಮವು ಅಕ್ಷರಶಬ್ದದಿಂದ ಹೇಳಲ್ಪಡುತ್ತಾನೆ. ಸಂಪೂರ್ಣವಾದ ಜಗತ್ತು ಪರಬ್ರಹ್ಮದ ಶಕ್ತಿಯಾಗಿದೆ.

ಎಲೌ ಮೈತ್ರೇಯನೇ ! ಅಗ್ನಿಯ ಹತ್ತಿರ ದೂರ ಈ ಭೇದಗಳಿಂದ ಯಾವ ರೀತಿ ಅದರ ಪ್ರಕಾಶದಲ್ಲೂ ಕೂಡ ಹೆಚ್ಚಾಗಿರುವಿಕೆ ಮತ್ತು ಕಡಿಮೆಯಾಗಿರುವಿಕೆಯ ಭೇದವುಂಟಾಗುತ್ತದೋ ಅದೇ ರೀತಿ ಬ್ರಹ್ಮದ ಶಕ್ತಿಯಲ್ಲೂ ತಾರತಮ್ಯವಿದೆ. ಎಲೌ ಬ್ರಾಹ್ಮಣನೇ ! ಬ್ರಹ್ಮ, ವಿಷ್ಣು ಮತ್ತು ಶಿವ ಇವರು ಬ್ರಹ್ಮದ ಪ್ರಧಾನ ಶಕ್ತಿಯಾಗಿದ್ದಾರೆ. ಅದಕ್ಕಿಂತ ಕಡಿಮೆಯಾದದ್ದು ದೇವಗಣ, ಅದಕ್ಕನಂತರ ದಕ್ಷನೇ ಮೊದಲಾದ ಪ್ರಜಾಪತಿಗಣ, ಅದಕ್ಕಿಂತ ಕಡಿಮೆಯಾದದ್ದು ಮನುಷ್ಯ, ಪಶು, ಪಕ್ಷಿ, ಮೃಗ ಮತ್ತು ಸರ್ಪ ಮುಂತಾದವು. ಹಾಗೆಯೇ ಅದಕ್ಕಿಂತ ಬಹಳ ಕಡಿಮೆಯಾದದ್ದು ಮರ, ಪೊದೆ ಮತ್ತು ಬಳ್ಳಿ ಮುಂತಾದವು.

ಆದುದರಿಂದ ಎಲೌ ಮುನಿಶ್ರೇಷ್ಠನೇ ! ಆವಿರ್ಭಾವ (ಹುಟ್ಟುವುದು) ತಿರೋಭಾವ (ಮರೆಯಾಗುವುದು) ಹುಟ್ಟುವಿಕೆ, ಸಾಯುವಿಕೆ ಮುಂತಾದ ವಿಕಲ್ಪದಿಂದ ಕೂಡಿದ ಈ ಎಲ್ಲಾ ಸಂಪೂರ್ಣ ಜಗತ್ತು ವಾಸ್ತವದಲ್ಲಿ ನಿತ್ಯ ಮತ್ತು ಅಕ್ಷಯವೇ ಆಗಿದೆ.

1. ವಿಷ್ಣುಪುರಾಣ. ಅಂಶ ೧. ಅಧ್ಯಾಯ ೨೨. ಶ್ಲೋಕ ೫೬.

ಸರ್ವಶಕ್ತಿಮಯೋ [1]ವಿಷ್ಣುಃ ಸ್ವರೂಪಂ ಬ್ರಹ್ಮಣಃ ಪರಮ್ ।
ಮೂರ್ತಂಯದ್ಯೋಗಿಭಿಃ ಪೂರ್ವಂ ಯೋಗಾರಂಭೇಷು ಚಿನ್ತ್ಯತೇ ॥

ಸರ್ವಶಕ್ತಿಮಯನಾದ ವಿಷ್ಣುವೇ ಬ್ರಹ್ಮದ ಪರಸ್ವರೂಪ ಹಾಗೆಯೇ ಮೂರ್ತ ರೂಪನಾಗಿದ್ದಾನೆ. ಯೋಗಿ ಜನರಿಂದ ಯೋಗಾರಂಭದ ಮೊದಲು ಯಾವುದು ಚಿಂತಿಸಲ್ಪಡುತ್ತದೋ ಅದು ಮೂರ್ತರೂಪ. ಹೀಗೆ ಎಲ್ಲೆಡೆಯಲ್ಲೂ ಶಕ್ತಿ ಎಂಬ ಹೆಸರುಳ್ಳ ಧರ್ಮ ವಿಶೇಷವು ಸಿದ್ಧಿಸುತ್ತದೆ.

ಗುಣಗಳು ಇಪ್ಪತ್ತುನಾಲ್ಕು ರೀತಿಯಾಗಿವೆ ಎಂದು ಹೇಳುವುದರಿಂದ ಹತ್ತೇ ಗುಣಗಳು ಎಂಬುದು ಹೇಗೆ ? ಎಂದರೆ—

ಬುದ್ಧಿ, ಸುಖ, ದುಃಖ, ಇಚ್ಛಾ, ದ್ವೇಷ, ಪ್ರಯತ್ನಗಳೆಂಬ ಈ ಆರೂ ಜ್ಞಾನದ ವಿಸ್ತಾರ ರೂಪವಾಗಿರುವುದರಿಂದ ಇವಕ್ಕೆ ಜ್ಞಾನದಲ್ಲಿ ಅಂತರ್ಭಾವ. ಈಶ್ವರನಿಗೆ ಪ್ರೀತಿಯನ್ನುಂಟುಮಾಡುವುದು ಧರ್ಮ. ಅವನಿಗೆ ಪ್ರಿತಿಯನ್ನುಂಟು ಮಾಡದೇ ಇರುವುದು ಅಧರ್ಮ. ಹೀಗೆ ಅವೆರಡೂ ಅವನ ಪ್ರೀತಿ, ಅಪ್ರೀತಿ ರೂಪವಾಗಿರುವುದರಿಂದ ಅವನ ಜ್ಞಾನದಲ್ಲಿಯೇ ಧರ್ಮ, ಅಧರ್ಮಗಳಿಗೆ ಅಂತರ್ಭಾವ, ಭಾವನೆಯೆಂಬ ಹೆಸರುಳ್ಳ ಸಂಸ್ಕಾರಕ್ಕೆ ಜ್ಞಾನವಿಶೇಷದಲ್ಲಿ ಅಂತ ರ್ಭಾವ. ವೇಗವನ್ನು ಉಂಟುಮಾಡುವ ಕಾರಣಕ್ಕೇ ವೇಗವೆಂಬ ಹೆಸರುಳ್ಳ ಸಂಸ್ಕಾರವು ಉಪಪನ್ನವಾಗುತ್ತದೆ. ಸ್ಥಿತಿಸ್ಥಾಪಕವೆಂಬ ಗುಣಕ್ಕೆ ಸಂಯೋಗದಲ್ಲಿ ಅಂತರ್ಭಾವ—ಸ್ಥಿತಿಸ್ಥಾಪಕವೆಂಬುದನ್ನು ಬೇರೆ ಒಪ್ಪಬೇಕಾಗಿಲ್ಲ.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬಿವೈದೂ ಪ್ರತ್ಯಕ್ಷಸಿದ್ಧವಾಗಿವೆ, ಇವನ್ನು ಒಪ್ಪಿದ್ದಾಗಿದೆ. ವಿಭಾಗ, ಪೃಥಕ್ತ್ವ ಎಂಬಿವೆರಡೂ ಸಂಯೋಗದ ಅಭಾವ ರೂಪವೇ ಆಗಿವೆ. ದೇಶ, ಕಾಲ ಇವುಗಳ ಸಂಯೋಗ ವಿಶೇಷವನ್ನು ತೆಗೆದುಕೊಂಡು ಪರತ್ವ, ಅಪರತ್ವ ಇವೆರಡಕ್ಕೂ, ಉಪಪತ್ತಿಯನ್ನು ಹೇಳಬಹುದಾಗಿದೆ. ಸಂಖ್ಯಾ ಪರಿಮಾಣ ದ್ರವತ್ವ ಸ್ನೇಹ ಇವುಗಳಿಗೆ ಆ ಆ ದ್ರವ್ಯಗಳ ಸ್ವರೂಪವನ್ನು ಸ್ವೀಕರಿಸಿಯೇ ಉಪಪತ್ತಿಯನ್ನು ಹೇಳಬಹುದು. ಗುರುತ್ವ ವೆಂಬುದನ್ನು ಪ್ರತ್ಯೇಕ ವಾಗಿ ಒಪ್ಪಬೇಕಾಗಿಲ್ಲ—ಅದಕ್ಕೆ ಶಕ್ತಿಯಲ್ಲೇ ಅಂತರ್ಭಾವವನ್ನುಹೇಳಬಹುದು. ಆದುದರಿಂದ ಹತ್ತೇ ಗುಣಗಳು ಎಂದು ಹೇಳಿರುವುದು ಸರಿಯಾಗಿ ಹೇಳಿದ್ದೇ ಆಗಿದೆ. ಅವುಗಳಲ್ಲಿ ಸತ್ತ್ವ, ರಜಸ್ಸು, ತಮಸ್ಸು ಎಂಬಿವು ಪ್ರಕೃತಿ ಗುಣಗಳು ; ಮತ್ತು ಆ ಪ್ರಕೃತಿ ಸಂಬಂಧವನ್ನು ಪಡೆದಿರುವ ಜೀವ ಗುಣಗಳು. ಸತ್ವದ ರೂಪವು ಜ್ಞಾನ, ಸಾತ್ತ್ವಿಕವಾದ ಕಾಲ ಇವೇ ಮೊದಲಾದ ಪ್ರತೀತಿಯು

---

1. ವಿಷ್ಣುಪುರಾಣ. ಅಂಶ ೧, ಅಧ್ಯಾಯ ೨೨, ಶ್ಲೋಕ ೫೬.

ಉಪಾಧಿಯಿಂದ ಹೇಳಲ್ಪಟ್ಟದ್ದಾಗಿದೆ, ಔಪಚಾರಿಕವಾದದ್ದು. ಶಬ್ದಾದಿಗಳು ಐದೂ ಪ್ರಕೃತಿ ಕಾರ್ಯಗಳಾದ ಪಂಚಮಹಾಭೂತಗಳ ಗುಣಭಾವವುಳ್ಳವೆಂದು ಪ್ರಸಿದ್ಧವಾಗಿವೆ. ಶುದ್ಧಸತ್ತ್ವವಾದರೋ ತ್ರಿಪಾದ್ವಿಭೂತಿಯಲ್ಲೂ ಅದಕ್ಕೆ ಪ್ರವರ್ತಕನಾದ ಈಶ್ವರನಲ್ಲೂ ಇದೆ. ಸಂಯೋಗ ಶಕ್ತಿ ಈ ರೂಪವಾದ ಗುಣಗಳೆರಡೂ ಷಡ್ದ್ರವ್ಯ ಸಾಧಾರಣವಾದವು ಎಂದು ವಿವೇಚನಮಾಡಲ್ಪಟ್ಟಿವೆ.

ಈ ರೀತಿ ಅದ್ರವ್ಯವು ನಿರೂಪಿಸಲ್ಪಟ್ಟಿತು.

* * *

ಈ ರೀತಿ ದ್ರಮಿಡಭಾಷ್ಯ, ನ್ಯಾಯತತ್ತ್ವ, ಸಿದ್ಧಿತ್ರಯ, ಶ್ರೀಭಾಷ್ಯ, ದೀಪ, ಸಾರ, ವೇದಾರ್ಥ ಸಂಗ್ರಹ, ಭಾಷ್ಯವಿವರಣಸಂಗತಿಮಾಲಾ, ಷಡರ್ಥ ಸಂಕ್ಷೇಪ, ಶ್ರುತಪ್ರಕಾಶಿಕಾ, ತತ್ತ್ವರತ್ನಾಕರ, ಪ್ರಜ್ಞಾಪರಿತ್ರಾಣ, ಪ್ರಮೇಯ ಸಙ್ಗ್ರಹ, ನ್ಯಾಯಕುಲಿಶ, ನ್ಯಾಯ ಸುದರ್ಶನ, ಮಾನಯಾಥಾತ್ಮ್ಯನಿರ್ಣಯ, ನ್ಯಾಯಸಾರ, ತತ್ತ್ವದೀಪ, ತತ್ತ್ವನಿರ್ಣಯ, ಸರ್ವಾರ್ಥ ಸಿದ್ಧಿ, ನ್ಯಾಯಪರಿಶುದ್ಧಿ, ನ್ಯಾಯಸಿದ್ಧಾಞ್ಜನ, ಪರಮತಭಙ್ಗ, ತತ್ತ್ವತ್ರಯಚುಲುಕ, ತತ್ತ್ವತ್ರಯ ನಿರೂಪಣ, ತತ್ತ್ವತ್ರಯ ಅದರ ವ್ಯಾಖ್ಯಾನ ಚಣ್ಡಮಾರುತ, ವೇದಾಂತ ವಿಜಯ, ಪಾರಾಶರ್ಯವಿಜಯವೇ ಮೊದಲಾದ ಪೂರ್ವಾಚಾರ್ಯರ ಪ್ರಬಂಧಗಳನ್ನು ಅನುಸರಿಸಿ ತಿಳಿಯಬೇಕಾದ ಅರ್ಥಗಳನ್ನು ಸಂಗ್ರಹಿಸಿ ಬಾಲರ ಅರಿವಿಗಾಗಿ ಯತೀನ್ದ್ರಮತದೀಪಿಕೆ ಎಂಬ ಹೆಸರುಳ್ಳ ಗ್ರಂಥವನ್ನು ವಾಧೂಲ ಗೋತ್ರದಲ್ಲಿ ಜನಿಸಿ ಆ ಕುಲಕ್ಕೆ ಅಲಂಕಾರಪ್ರಾಯರಾದ, ಶ್ರೀಮನ್ಮಹಾಚಾರ್ಯರ ಪ್ರಥಮ ಶಿಷ್ಯರಾದ ಶ್ರೀನಿವಾಸಾಚಾರ್ಯರೆಂಬುವರು ರಚಿಸಿದ್ದಾರೆ. ಇದು ಶಾರೀರಕ ಪರಿಭಾಷಾಗ್ರಂಥ. ಇದನ್ನು ಅನುಸರಿಸಿ ವಿಶಿಷ್ಟಾದ್ವೈತದರ್ಪಣವೆಂಬ ಹೆಸರುಳ್ಳ ಇಬ್ಭಾಗವಾದ ಗ್ರಂಥವನ್ನು ಪರಮಾತ್ಮನ ಪ್ರೇರಣೆಯಿಂದ ನಾನು ಬರೆದಿರುತ್ತೇನೆ.

ಅಧ್ಯಾತ್ಮ ಶಾಸ್ತ್ರಗಳು ತತ್ತ್ವಹಿತ ಪುರುಷಾರ್ಥಗಳನ್ನು ಪ್ರತಿಪಾದಿಸುತ್ತವೆ. ಅವುಗಳ ಸಾರಭೂತವಾದ ಈ ಯತೀನ್ದ್ರಮತದೀಪಿಕೆಯಲ್ಲೂ ಪ್ರಕೃತಿ, ಜೀವ, ಈಶ್ವರ ಪರಿಚ್ಛೇದಗಳಿಂದ ತತ್ತ್ವವು ನಿರೂಪಿಸಲ್ಪಟ್ಟಿದೆ. ಬುದ್ಧಿ ಪರಿಚ್ಛೇದದಲ್ಲಿ ಉಪಾಯವು ನಿರೂಪಿತವಾಗಿದೆ. ನಿತ್ಯವಿಭೂತಿ ಪರಿಚ್ಛೇದದಲ್ಲೂ, ಈಶ್ವರ ಪರಿಚ್ಛೇದದಲ್ಲೂ ಪುರುಷಾರ್ಥವು ನಿರೂಪಿಸಲ್ಪಟ್ಟಿರುವುದರಿಂದ ತತ್ತ್ವ, ಹಿತ–ಉಪಾಯ, ಪುರುಷಾರ್ಥಗಳು ನಿರೂಪಿಸಲ್ಪಟ್ಟಂತಾದವು.

ಪಂಡಿತರು ಒಂದೇ ತತ್ತ್ವವೆಂದು ಪ್ರತಿಪಾದನೆ ಮಾಡುತ್ತಾರೆ. ಋಷಿಗಳು ಆತ್ಮ, ಅನಾತ್ಮ ಎಂದು ಎರಡು ವಿಧವಾಗಿ ನಿರೂಪಿಸುತ್ತಾರೆ. ಆಚಾರ್ಯರುಗಳು

ಭೋಗ್ಯ, ಭೋಕ್ತೃ, ನಿಯನ್ತೃ ರೂಪವಾದ ತತ್ತ್ವತ್ರಯವೆಂದು ಪ್ರತಿಪಾದನೆ ಮಾಡುತ್ತಾರೆ. ಮತ್ತೆ ಕೆಲವು ಆಚಾರ್ಯರು ಹೇಯ, ಅದರ ನಿವರ್ತಕ (ಅದನ್ನು ಹೋಗಲಾಡಿಸುವುದು), ಉಪಾದೇಯ, ತತ್ಪ್ರಾಪ್ತ್ಯುಪಾಯ ಎಂದು ನಾಲ್ಕುವಿಧ ಎಂದು ವಿಭಾಗಮಾಡಿ ಅನುಸಂಧಾನ ಮಾಡುತ್ತಾರೆ.

**ಪ್ರಾಪ್ಯಸ್ಯಬ್ರಹ್ಮಣೋರೂಪಂ ಪ್ರಾಪ್ತುಶ್ಚಪ್ರತ್ಯಗಾತ್ಮನಃ ।**
**ಪ್ರಾಪ್ತ್ಯುಪಾಯಂ ಫಲಂಪ್ರಾಪ್ತೇಃ ತಥಾಪ್ರಾಪ್ತಿವಿರೋಧಿಚ ।**
**ವದಂತಿಸಕಲಾವೇದಾ ಸ್ಸೇತಿಹಾಸಪುರಾಣಕಾಃ ॥**

ಪ್ರಾಪ್ಯ-ಹೊಂದಲು ತಕ್ಕದ್ದು, ಹೊಂದುವವನು, ಹೊಂದಲು ಉಪಾಯ, ಹೊಂದಿಹೊಂದುವ ಫಲ, ಅದಕ್ಕೆ ವಿರೋಧವನ್ನುಂಟುಮಾಡುವುದು ಎಂದು ಐದು ವಿಧವಾಗಿ ಹೇಳುತ್ತಾರೆ ಇತರ ಆಚಾರ್ಯರು. ಈ ಅರ್ಥ ಪಞ್ಚಕವನ್ನೇ ಸಂಬಂಧ ದೊಡನೆ ಆರು ವಿಧವೆಂದು ಲೆಕ್ಕಿಸಿ ಹೇಳುತ್ತಾರೆ ಬೇರೆ ಗುರುಗಳು. ಈ ರೀತಿ ಅವವರು ಹಾಗೆ ಉಪನ್ಯಾಸಮಾಡುವುದು ಆ ಆ ವಿಭಾಗ ಮಾಡಲು ತಕ್ಕ ಧರ್ಮ ವನ್ನು ಪುರಸ್ಕಾರ ಮಾಡುವುದರಿಂದ. ಹೀಗೆ ವಿಭಾಗ ಮಾಡುವುದರಿಂದ ಅರ್ಥ ಭೇದವೇನೂ ಇಲ್ಲ. ಆದುದರಿಂದ ಎಲ್ಲಾ ನಿರ್ದುಷ್ಟವಾಗಿದೆ-ಪರಿಶುದ್ಧವಾಗಿದೆ.

ನಿಜವಾಗಿ ನೋಡಿದರೆ ವೇದಾಂತಗಳಿಗೆ ಚಿದಚಿದ್ವಿಶಿಷ್ಟಾದ್ವೈತವಾದ ತತ್ತ್ವ ವೊಂದೇ ಬ್ರಹ್ಮವೆಂಬುದು ತಾತ್ಪರ್ಯ. ಆದುದರಿಂದಲೇ ಚಿದಚಿದ್ವಿಶಿಷ್ಟವಾದ ಬ್ರಹ್ಮವು ಒಂದೇ ಎಂದು ತಿಳಿದು ಪೂಜ್ಯರಾದ ಬಾದರಾಯಣರು 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಪ್ರಾರಂಭಿಸಿ ಅದನ್ನೇ ಸಪ್ರಕಾರವಾಗಿ—ರೀತಿಗಳೊಡನೆ ನಿರೂಪಣೆ ಮಾಡಿದ್ದಾರೆ. ಆದುದರಿಂದ ಚಿದಚಿದ್ವಿಶಿಷ್ಟನಾದ ಬ್ರಹ್ಮಶಬ್ದದಿಂದ ಹೇಳಲ್ಪಡುವ ವಿಷ್ಣುವೆಂಬ ಹೆಸರುಳ್ಳ ಪರವಾಸುದೇವನಾದ ನಾರಾಯಣನೇ ಒಂದು ತತ್ತ್ವವೆಂಬುದು ವಿಶಿಷ್ಟಾದ್ವೈತವಾದಿಗಳ ದರ್ಶನವೆಂಬುದು ಸಿದ್ಧವಾಯಿತು.

## ಆಳ್ವಾರುಗಳ ಪಾಶುರಗಳು

ಇಲ್ಲಿಯವರೆಗೂ ಈ ತತ್ತ್ವವಿಷಯದಲ್ಲಿ ಬಾದರಾಯಣ ಸೂತ್ರಗಳನ್ನು ವಿವರಿಸಿದ ಆಚಾರ್ಯರುಗಳ ಹೃದಯವನ್ನು-ಅಭಿಪ್ರಾಯವನ್ನು ಅರಿತಾಯಿತು. ಇನ್ನು ಭಗವಂತನ ಗುಣಗಳೆಂಬ ಆಳವಾದ ಕಡಲಿನಲ್ಲಿ ಮುಳುಗಿ ಅವನ್ನು ಅನು ಭವಿಸಿ ಹಾಡಿರುವ ಆಳ್ವಾರುಗಳ ಒಂದೆರಡು ಪಾಶುರಗಳ-ಪದ್ಯಗಳ ಅಮೃತವನ್ನು ಸವಿಯೋಣ.

ಪೂನಿಲಾಯ [1]ವೈನ್ದುಮಾಯ್ ಪ್ಪುನರ್ಕಣಿನ್ರ ನಾನ್ಗು ಮಾಯ್,
ತೀನಿಲಾಯ ಮೂನ್‌ರು ಮಾಯ್ ಚ್ಚಿರನ್ದುಕಾಲಿರಣ್ಡು ಮಾಯ್
ಮೀನಿಲಾಯ ದೊನ್‌ರುಮಾಹಿ ವೇರು ವೇರು ತನ್ಮೈಯಾಯ್
ನೀನಿಲಾಯ ವಣ್ಣಮ್ ನಿನ್ನೈಯಾರ್ ನಿನೈಕ್ಕವಲ್ಲರೇ.

(ಪರಮಾತ್ಮನೇ !)

ಪೂನಿಲಾಯ ಐನ್ದುಮಾಯ್=ಭೂಮಿಯಲ್ಲಿ ತಙ್ಗಿರುವ (ಶಬ್ದವೇ ಮೊದಲಾದ) ಐದು ಗುಣಗಳಿಗೂ ನಿರ್ವಾಹಕನಾಗಿ.

ಪುನಲ್ ಕಣ್ ನಿನ್ರ ನಾನ್ಗುಮ್ ಆಯ್=ನೀರಿನಲ್ಲಿರುವ ನಾಲ್ಕುಗುಣಗಳಿಗೂ ನಿರ್ವಾಹಕನಾಗಿ.

ತೀನಿಲಾ ಮೂನ್ರುಮ್ ಆಯ್=ತೇಜಸ್ಸಿನಲ್ಲಿರುವ ಮೂರು ಗುಣಗಳಿಗೂ ನಿರ್ವಾಹಕನಾಗಿರುವ.

ಶಿರನ್ದ ಕಾಲ್ ಇರಣ್ಡುಮ್ ಆಯ್=(ಎಲ್ಲಾ ಪ್ರಾಣಿಗಳಿಗೂ ಜೀವನಕ್ಕೆ ಕಾರಣವಾಗಿರುವುದರಿಂದ) ಶ್ರೇಷ್ಠವಾದ ವಾಯುವಿನಲ್ಲಿರುವ ಎರಡು ಗುಣಗಳಿಗೂ ನಿರ್ವಾಹಕನಾಗಿ.

ಮೀನಿಲಾಯುದು ಒನ್ರುಮ್ ಆಹಿ=ಆಕಾಶದಲ್ಲಿ ಇರುವ ಶಬ್ದಗುಣವೊಂದಕ್ಕೂ ನಿರ್ವಾಹಕನಾಗಿ.

ವೇರು ವೇರು ತನ್ಮೈಆಯ್=ಒಂದೊಂದಕ್ಕೂ ವಿಲಕ್ಷಣವಾದ ದೇವಾದಿ ಪದಾರ್ಥಗಳಿಗೂ ಆತ್ಮನಾಗಿ.

ನೀ ನಿಲಾಯುವಣ್ಣಮ್=ನೀನಿರುವ ರೀತಿಯನ್ನೂ.

ನಿನ್ನೈ=ನಿನ್ನನ್ನೂ.

ಆರ್ ನಿನೈಕ್ಕವಲ್ಲರ್=ತನ್ನ ಪ್ರಯತ್ನದಿಂದ ಯಾರು ತಾನೇ ಚಿಂತಿಸಿ ಅರಿಯಲು ಸಮರ್ಥರು ?

ಅಂಡಗಳಿಗೆ ಕಾರಣವಾಗಿ ಗುಣಗಳೊಡನೆ ಕೂಡಿರುವ ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶ ಎಂಬ ಐದು ಭೂತಗಳಿಗೂ ಅನ್ತರಾತ್ಮನಾಗಿ ನಿಂತಿ

1. ತಿರುಮಳಿಶೈಯಾಳ್ವಾರ್ ತಿರುಚ್ಚನ್ದವಿರುತ್ತಮ್. ೧.

ರುವ ನೀನೇ ಉಪಾದಾನ ಕಾರಣ. ಈ ಪರಮಾರ್ಥವು ವೇದಾಂತಪ್ರಮೇಯವು. ಇದು ಬಾಹ್ಯ ಕುದೃಷ್ಟಿಗಳಿಗೆ ಮನಸ್ಸಿನಲ್ಲಿ ಹೊಗುವುದಿಲ್ಲವಲ್ಲಾ ಎನ್ನುತ್ತದೆ ಈ ಪಾಶುರ.

ಇದರಲ್ಲಿ ಮೊದಲು ಎರಡು ಅರ್ಧಪಾದಗಳಿಂದ ಪ್ರಾಕೃತ ಸೃಷ್ಟಿ ಹೇಳಲ್ಪಡುತ್ತದೆ. ಸಾಧಾರಣವಾಗಿ ಪೃಥಿವಿಗೆ ಗನ್ಧ (ವಾಸನೆ) ಗುಣವೆಂದೂ, ಅಪ್ಪಿಗೆ ರಸ ಗುಣವೆಂದೂ, ತೇಜಸ್ಸಿಗೆ ರೂಪ ಗುಣವೆಂದೂ ವಾಯುವಿಗೆ ಸ್ಪರ್ಶ ಗುಣವೆಂದೂ, ಆಕಾಶಕ್ಕೆ ಶಬ್ದಗುಣವೆಂದೂ ಈ ರೀತಿ ಒಂದೊಂದು ಭೂತಕ್ಕೂ ಒಂದೊಂದು ಗುಣವಾಗಿ ಹೇಳಲ್ಪಟ್ಟಿದ್ದರೂ "ಕಾರಣಗುಣಾಃ ಕಾರ್ಯೇಸಂಕ್ರಾಮನ್ತಿ" ಎಂದರೆ ಕಾರಣವಸ್ತುವಿನಲ್ಲಿ ಇರುವ ಗುಣಗಳು ಕಾರ್ಯದಲ್ಲಿ ಬಂದು ಸೇರುತ್ತವೆ ಎಂಬ ನ್ಯಾಯದಂತೆ ಭೂಮಿಗೆ ಐದು ಗುಣಗಳೂ, ಜಲಕ್ಕೆ ನಾಲ್ಕು ಗುಣಗಳೂ, ತೇಜಸ್ಸಿಗೆ ಮೂರು ಗುಣಗಳೂ, ವಾಯುವಿಗೆ ಎರಡು ಗುಣಗಳೂ ಉಂಟು.

ತೈತ್ತರೀಯೋಪನಿಷತ್ತಿನಲ್ಲಿ "ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃಪೃಥಿವೀ" ಎಂದು ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಪೃಥಿವಿಯೂ ಉಂಟಾದಂತೆ ಹೇಳಲ್ಪಟ್ಟಿದೆ. ಆಕಾಶದಿಂದ ಹುಟ್ಟುವ ವಾಯುವು ತನ್ನ ಗುಣವಾದ ಸ್ಪರ್ಶದೊಡನೆ ತನಗೆ ಕಾರಣಭೂತವಾದ ಆಕಾಶದ ಗುಣವಾದ ಶಬ್ದವನ್ನೂ ಹೊಂದಿದಾಗುತ್ತದೆ. ವಾಯುವಿನಿಂದ ಹುಟ್ಟುವ ಅಗ್ನಿಯು ತನ್ನ ಗುಣವಾದ ರೂಪದೊಡನೆ ಸ್ವಕಾರಣವಾದ ವಾಯುವಿನಲ್ಲಿರುವ ಶಬ್ದಸ್ಪರ್ಶಗಳನ್ನೂ ಪಡೆದದ್ದಾಗುತ್ತದೆ. ಅಗ್ನಿಯಿಂದ ಹುಟ್ಟುವ ಜಲವು ತನ್ನ ಗುಣವಾದ ರಸದೊಡನೆ ಸ್ವಕಾರಣವಾದ ಅಗ್ನಿಯಲ್ಲಿರುವ ಶಬ್ದ, ಸ್ಪರ್ಶ, ರೂಪಗಳನ್ನೂ ಹೊಂದಿದಾಗುತ್ತದೆ. ಜಲದಿಂದ ಹುಟ್ಟುವ ಭೂಮಿಯಾದದ್ದು ತನ್ನ ಗುಣವಾದ ಗಂಧದೊಡನೆ ತನ್ನ ಉತ್ಪತ್ತಿಗೆ ಕಾರಣಭೂತವಾದ ಜಲದಲ್ಲಿ ಇರುವ ಶಬ್ದ, ಸ್ಪರ್ಶ, ರೂಪ, ರಸಗಳೆನ್ನೂ ಉಳ್ಳದ್ದಾಗುತ್ತದೆ.

ಹೀಗಾಗಿ ಭೂಮಿಯು ಐದು ಗುಣಗಳುಳ್ಳದಾಗಿಯೂ, ಜಲವು ನಾಲ್ಕು ಗುಣಗಳುಳ್ಳದಾಗಿಯೂ, ಅಗ್ನಿಯೂ ಮೂರುಗುಣಗಳುಳ್ಳದಾಗಿಯೂ, ವಾಯುವು ಎರಡು ಗುಣಗಳುಳ್ಳದಾಗಿಯೂ, ಆಕಾಶವು ಒಂದು ಗುಣ ಉಳ್ಳದ್ದಾಗಿಯೂ ಆಯಿತು. ಈ ಪ್ರಕ್ರಿಯೆಯನ್ನು ಮನಸ್ಸಿನಲ್ಲಿಟ್ಟೇ "ಪೂನಿಲಾಯವೈನ್ದುಮ್" ಇತ್ಯಾದಿಯನ್ನು ಆಳ್ವಾರು ಅನುಗ್ರಹಿಸಿದ್ದಾರೆ.

ಈ ರೀತಿ ಒಂದು ಭೂತದಿಂದ ಮತ್ತೊಂದು ಭೂತ ಉಂಟಾದಂತೆ ಹೇಳಲ್ಪಟ್ಟ ರೀತಿಯಲ್ಲದೆ, ತನ್ಮಾತ್ರೆಯಿಂದ (ಭೂತಸೂಕ್ಷ್ಮದಿಂದ) ತನ್ಮಾತ್ರೆ ಹುಟ್ಟು

ವಿಕೆ, ಭೂತದಿಂದ ತನ್ಮಾತ್ರೆ ಹುಟ್ಟುವಿಕೆ ಮುಂತಾದ ಪ್ರಕಾರಾಂತರಗಳು ಉಂಟಾಗಿದ್ದರೂ, ಅಲ್ಲದೆ ಪಂಚೀಕರಣ ಪ್ರಕ್ರಿಯೆಯಿಂದ ಎಲ್ಲಾ ಭೂತಗಳಲ್ಲೂ ಎಲ್ಲಾ ಗುಣಗಳೂ ಹೆಚ್ಚು ಕಡಿಮೆ ಇವೆ ಎಂಬ ಅಭಿಪ್ರಾಯವಿದ್ದರೂ ಇಲ್ಲಿ "ಆಕಾಶಾದ್ವಾಯುಃ" ಎಂಬ ಶ್ರುತಿಯ ಛಾಯೆಯಿಂದ ಹೇಳಲ್ಪಟ್ಟಿದೆ ಎಂದು ಅರಿಯಬೇಕು.

[1]ಆಕಾಶವಾಯುತೇಜಾಂಸಿ ಸಲಿಲಂ ಪೃಥಿವೀ ತಥಾ ।
ಶಬ್ದಾದಿಭಿರ್ಗುಣೈರ್ಬ್ರಹ್ಮನ್ ಸಂಯುತಾ ನ್ಯುತ್ತರೋತ್ತರೈಃ ॥

ಎಲೌ ಮೈತ್ರೇಯನೇ ! ಆಕಾಶ, ವಾಯು, ಅಗ್ನಿ, ಜಲ, ಪೃಥಿವೀ– ಈ ಪಂಚಭೂತಗಳು ಉತ್ತರೋತ್ತರ=ಮುಂದು ಮುಂದಿನ (ಕ್ರಮವಾಗಿ) ಶಬ್ದ–ಸ್ಪರ್ಶ ಮೊದಲಾದ ಐದು ಗುಣಗಳಿಂದ ಕೂಡಿವೆ.

ಈ ಪ್ರಕ್ರಿಯೆಯು ವಿಷ್ಣು ಪುರಾಣದಲ್ಲಿ ಸ್ಪಷ್ಟವಾಗಿದೆ. ಪಂಚಭೂತಗಳೂ ಹೇಗೆ ಪರಮಾತ್ಮನು ನಿಯಮಿಸಿದಂತೆ ಕಾರ್ಯಗಳನ್ನು ಮಾಡುತ್ತವೋ ಹಾಗೆಯೇ ಅವುಗಳ ಗುಣಗಳೂ.

[2]ಏಕಮೂರ್ತಿ ಮೂನ್ರುಮೂರ್ತಿ ನಾಲುಮೂರ್ತಿ ನನ್ಮೈಶೇರ್
ಬೋಗಮೂರ್ತಿ ಪುಣ್ಣಿಯತ್ತಿನ್ ಮೂರ್ತಿ ಯೆಣ್ಣಿಲ್ ಮೂರ್ತಿಯಾಯ್
ನಾಗಮೂರ್ತಿ ಶಯನಮಾಯ್ ನಲಙ್ಗಡಲ್ಕಿಡನ್ದು ಮೇಲ್
ಆಹಮೂರ್ತಿಯಾಯವಣ್ಣಮ್ ಎನ್ಕೊಲಾದಿದೇವನೇ

ಆದಿದೇವನೇ=ಎಲ್ಲಕ್ಕೂ ಕಾರಣಭೂತನಾದ ಭಗವಂತನೇ !

ಏಕಮೂರ್ತಿ ಆಯ್=(ಪರಮಪದವನ್ನು ವಾಸಸ್ಥಾನವಾಗಿ ಉಳ್ಳ) ಪರ ವಾಸುದೇವ ಮೂರ್ತಿಯಾಗಿ.

ಮೂನ್ರು ಮೂರ್ತಿಯಾಯ್=ಸಙ್ಕರ್ಷಣ, ಪ್ರದ್ಯುಮ್ನ, ಅನಿರುದ್ಧರಾಗಿರುವ ಮೂರು ಮೂರ್ತಿಯಾಗಿ.

ನಾಲುಮೂರ್ತಿ ಆಯ್=ಪ್ರಧಾನ, ಪುರುಷ, ಅವ್ಯಕ್ತ, ಕಾಲವೆಂಬುವನ್ನು ಶರೀರವಾಗಿ ಉಳ್ಳ ನಾಲ್ಕುಮೂರ್ತಿಯಾಗಿ.

1. ವಿ. ಪು. ಅಂಶ. ೧–೨–೫೦.
2. ತಿರುಚ್ಚನ್ದವಿರುತ್ತಮ್. ೧೭.

**ನನ್ಮೈಶೇರ್ ಬೋಗಮ್ ಮೂರ್ತಿಯಾಯ್**=ವಿಲಕ್ಷಣವಾಗಿ ಭೋಗಕ್ಕೆ ಅರ್ಹವಾದ ಮೂರ್ತಿಯಾಗಿ.

**ಪುಣ್ಣಿಯತ್ತಿನ್ ಮೂರ್ತಿಯಾಯ್**=ಪುಣ್ಯವೇ ರೂಪವನ್ನು ಪಡೆದು ಆಗಿರುವ ಒಂದು ಮೂರ್ತಿಯಾಗಿ.

**ಎಣ್ ಇಲ್ ಮೂರ್ತಿಯಾಯ್**=(ಈ ರೀತಿ) ಲೆಕ್ಕವಿಲ್ಲದ (ಹಲಹಲವು) ಮೂರ್ತಿಯಾಗಿ.

**ನಲಮ್ ಕಡಲ್**=ಒಳ್ಳೆಯ ಹಾಲಿನ ಸಮುದ್ರದಲ್ಲಿ.

**ನಾಕಮ್ ಮೂರ್ತಿ ಶಯನಮ್ ಆಯ್ ಕಿಡನ್ದು**=ಆದಿಶೇಷನ ಶರೀರವನ್ನು ಹಾಸಿಗೆಯಾಗಿ ಉಳ್ಳವನಾಗಿ ನಿದ್ರೆಮಾಡಿ.

**ಮೇಲ್**=ಇದಕ್ಕೆ ಮೇಲೆ.

**ಆಕಮೂರ್ತಿ ಆಯ್ ವಣ್ಣಮ್**=ಭಕ್ತರು ಪ್ರೀತಿಸುವ ರೂಪವಾದ ಅರ್ಚಾವತಾರವಾಗಿ ಅವತರಿಸಿದ ರೀತಿ.

**ಎನ್ ಕೊಲ್**=ಏನಾಗಿದೇ ?

ಪರವಾಸುದೇವಮೂರ್ತಿಯಾಗಿದ್ದುಕೊಂಡು ನಿತ್ಯವಿಭೂತಿಯನ್ನು (ವೈಕುಂಠವನ್ನು) ನಿರ್ವಾಹಮಾಡಿಯೂ, ವ್ಯೂಹ ಮೊದಲಾಗಿ ಸ್ಥಾವರ (ಚಲಿಸದೆ ಇರುವ ಪರ್ವತ, ಮರ, ಬಳ್ಳಿ)ಗಳವರೆಗೂ ಅವತಾರ ಮಾಡಿ ಲೀಲಾವಿಭೂತಿಯನ್ನು ನಿರ್ವಾಹಮಾಡಿಯೂ ಹೋಗುವ ಇವು ಒಂದೊಂದೂ ಶಾಸ್ತ್ರಗಳಿಗೆ ವಿಷಯವಾಗದಿರುವಾಗ, ಅದಕ್ಕೆ ಮೇಲೆ ಭಕ್ತರು ಪ್ರೀತಿಸಿದ ಯಾವ ರೂಪವುಂಟೋ ಆ ರೂಪವುಳ್ಳವನಾಗಿ ಸರ್ವರಿಗೂ ಸುಲಭನಾಗಿ ಎಲ್ಲವನ್ನೂ ಸಹಿಸುವವನಾಗಿ ಎಲ್ಲಾ ಜನರಿಂದಲೂ ಆರಾಧಿಸಲು ತಕ್ಕವನಾಗಿ ಅರ್ಚಾವತಾರ ರೂಪಿಯಾಗಿ ತಾನು ಹೊಂದಿರುವ ಸ್ವಭಾವ ಎಂತಹದೋ ! ಎಂದು ಆಳ್ವಾರವರು ತನ್ನ ಮನಸ್ಸಿನಲ್ಲೇ ಆನಂದವನ್ನು ಅನುಭವಿಸುತ್ತಾರೆ.

**ಏಕಮೂರ್ತಿಯಾಯ್**=ಭಗವಂತನ ಸ್ವರೂಪವಾದರೋ **ಪರತ್ವ ವ್ಯೂಹ ವಿಭವ ಅನ್ತರ್ಯಾಮಿತ್ವ ಅರ್ಚಾವತಾರ** ಎಂಬುದಾಗಿ ಐದು ಪ್ರಕಾರಗಳಿಂದ ಕೂಡಿದೆ; ಅವುಗಳಲ್ಲಿ ಪರತ್ವವಾದರೋ–ಕಾಲವು ಸಂಚರಿಸಿದಂತೆ ಇದ್ದು ಅಂದರೆ ಕಾಲಕ್ಕೆ ಅಧೀನವಲ್ಲದ ಎಲ್ಲೆ ಇಲ್ಲದ ಆನಂದಕ್ಕೆ ಬೀಡಾದ ವೈಕುಂಠದಲ್ಲಿ ನಿತ್ಯರಿಗೂ

ಮುಕ್ತರಿಗೂ ಅನುಭವಿಸುವುದಕ್ಕೆ ತಕ್ಕವನಾಗಿ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಎಂಬ ಆರು ಗುಣಗಳಿಂದ ಪರಿಪೂರ್ಣನಾಗಿ ಪರವಾಸುದೇವ ನೆಂಬ ಹೆಸರನ್ನು ಪಡೆದು ದಯಮಾಡಿಸಿರುವ ಸ್ಥಿತಿ; ಆ ಸ್ಥಿತಿಯನ್ನೇ ಇಲ್ಲಿ "ಏಕಮೂರ್ತಿಯಾಯ್" ಎಂಬುದಾಗಿದೆ.

ಮೂನ್ರುಮೂರ್ತಿಯಾಯ್=ಪರತ್ವಕ್ಕೆ ಮುಂದಿನ ಸ್ಥಿತಿ ವ್ಯೂಹ; ಆ ವ್ಯೂಹಕ್ಕೆ ವಿನಿಯೋಗವು ಲೀಲಾವಿಭೂತಿಯಾಲ್ಲಾದುದರಿಂದ ಆ ವಿಭೂತಿಯನ್ನು ಪಡೆಯುವಿಕೆ, ಕಾಪಾಡುವಿಕೆ, ನಾಶಮಾಡುವಿಕೆ ಎಂಬೀ ಕಾರ್ಯಗಳನ್ನು ನಿರ್ವಹಿಸುವುದ ಕ್ಕೋಸ್ಕರ ಸಙ್ಕರ್ಷಣ-ಪ್ರದ್ಯುಮ್ನ-ಅನಿರುದ್ಧರೆಂಬ ಮೂರು ಮೂರ್ತಿಯಾಗಿ ರುವ ಸ್ಥಿತಿ ವ್ಯೂಹವೆನ್ನಿಸಿಕೊಳ್ಳುತ್ತದೆ; ಸಙ್ಕರ್ಷಣಮೂರ್ತಿ, ಜ್ಞಾನ, ಬಲ ಎಂಬ ಎರಡು ಗುಣಗಳಿಂದ ಕೂಡಿ ಶಾಸ್ತ್ರಪ್ರವರ್ತನವನ್ನೂ ಜಗತ್ತಿನ ಸಂಹಾರವನ್ನೂ ಮಾಡತಕ್ಕದ್ದಾಗಿದೆ; ಪ್ರದ್ಯುಮ್ನಮೂರ್ತಿ, ಐಶ್ವರ್ಯ, ವೀರ್ಯ ಎಂಬ ಎರಡು ಗುಣಗಳಿಂದ ಕೂಡಿ ಧರ್ಮೋಪದೇಶವನ್ನೂ ಮನುಚತುಷ್ಟಯ ಮೊದಲಾದ ಶುದ್ಧ ವರ್ಗ ಸೃಷ್ಟಿಯನ್ನೂ ಮಾಡತಕ್ಕದ್ದಾಗಿದೆ ಎಂದೂ; ಅನಿರುದ್ಧಮೂರ್ತಿಯು, ಶಕ್ತಿ, ತೇಜಸ್ಸು ಎಂಬ ಎರಡು ಗುಣಗಳಿಂದ ಕೂಡಿ ರಕ್ಷಣಕ್ಕೂ ತತ್ತ್ವಜ್ಞಾನ ವನ್ನು ಕೊಡುವುದಕ್ಕೂ ಕಾಲಸೃಷ್ಟಿಗೂ, ಮಿಶ್ರಸೃಷ್ಟಿಗೂ ಕಾರಣವಾಗಿದೆ. ಎಂದು ಪಾಂಚರಾತ್ರ ಶಾಸ್ತ್ರಗಳು ಹೇಳುತ್ತವೆ. ಈ ರೀತಿಯಾದ ವ್ಯೂಹದ ಸ್ಥಿತಿಯು ಇಲ್ಲಿ "ಮೂನ್ರುಮೂರ್ತಿಯಾಯ್" ಎಂಬುದಾಗುತ್ತದೆ.

ನಾಲುಮೂರ್ತಿಯಾಯ್=ಕೆಳಗೆ ಹೇಳಿದ ವ್ಯೂಹದಲ್ಲಿ ವಾಸುದೇವನನ್ನೂ ಸೇರಿಸಿ ನಾಲ್ಕು ಮೂರ್ತಿಯಾಗಿ ಹೇಳುವುದುಂಟು. "ಚತುರ್ವಿಧಸ್ಸಭಗವಾನ್ ಮುಮುಕ್ಷೂಣಾಂಹಿತಾಯುವೈ"=ಮೋಕ್ಷವನ್ನು ಬಯಸುವವರ ಹಿತಕ್ಕಾಗಿ ಆ ಭಗವಂತನು ನಾಲ್ಕು ವಿಧವಾಗಿದ್ದಾನೆ" ಎಂಬುದನ್ನು ಇಲ್ಲಿ ಗಮನಿಸತಕ್ಕದ್ದು. ವಾಸುದೇವ, ಸಙ್ಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ಈ ನಾಲ್ಕು ವ್ಯೂಹ ಮೂರ್ತಿಗಳಿಗೆ ವೈಖಾನಸ ಶಾಸ್ತ್ರಗಳಲ್ಲಿ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ಪದಗಳಿಂದ ವ್ಯಪದೇಶವುಂಟು. ಇವುಗಳಲ್ಲಿ ಮೊದಲಿನ ವ್ಯೂಹಮೂರ್ತಿಯಾದ ವಾಸುದೇವರೂಪವು ಪರರೂಪಕ್ಕಿಂತ ಗುಣಾದಿಗಳಿಂದ ಯಾವ ರೀತಿಯಿಂದಲೂ ಭೇದವಿಲ್ಲ. ಆದುದರಿಂದಲೇ ಪರವಾಸುದೇವನೆಂದೂ ವ್ಯೂಹ ವಾಸುದೇವನೆಂದೂ ವ್ಯವಹಾರ. ಪರವಾಸುದೇವನಿಗೆ ನಿತ್ಯೋದಿತನೆಂದೂ, ವ್ಯೂಹವಾಸುದೇವನಿಗೆ ಶಾನ್ತೋದಿತನೆಂದೂ ಸಂಪ್ರದಾಯಸಿದ್ಧವಾದ ವ್ಯವಹಾರವಾಗುತ್ತದೆ. ಪರವಾಸು ದೇವನ ಸಂಕಲ್ಪವು ನಿತ್ಯವಿಭೂತಿನಿರ್ವಾಹವೆಂದೂ, ವ್ಯೂಹವಾಸುದೇವನ ಸಂಕಲ್ಪವು ಲೀಲಾವಿಭೂತಿ ನಿರ್ವಾಹವೆಂದೂ ಹೇಳುತ್ತಾರೆ. ಈ ವ್ಯೂಹಚತುಷ್ಟಯದ ಸ್ಥಿತಿ ಯನ್ನೇ ಇಲ್ಲಿ "ನಾಲುಮೂರ್ತಿಯಾಯ್" ಎಂದು ಹೇಳಿದ್ದಾಗಿದೆ. ಅಲ್ಲದೆ ವ್ಯೂಹ

ಮೂರ್ತಿಗಳ ಕಾರ್ಯವಾದ ಸೃಷ್ಟಿ ಮೊದಲಾದುವುಗಳಿಗೆ ಬೇಕಾದ ಪ್ರಧಾನ, ಪುರುಷ, ಅವ್ಯಕ್ತ, ಕಾಲಗಳು ಎಂಬ ನಾಲ್ಕು ತತ್ತ್ವಗಳನ್ನು ಶರೀರವಾಗಿ ಉಳ್ಳ ನಾಲ್ಕುಮೂರ್ತಿಯಾಗಿ ಎಂದೂ ಹೇಳಬಹುದು.

ನನ್ಮೈಶೇರ್ ಭೋಗಮೂರ್ತಿಯಾಯ್=ವಿಭವಾವತಾರವನ್ನು ಹೇಳುತ್ತದೆ. ಭೋಗ=ವಿಭವ, "ಪ್ರಕೃತಿಂಸ್ವಾಮಧಿಷ್ಠಾಯಸಂಭವಾಮಿ=ತನ್ನ ಸ್ವಭಾವವನ್ನು ಅಧಿಷ್ಠಿಸಿ ಹುಟ್ಟುತ್ತೇನೆ." ಎಂದು ಹೇಳುವ ರೀತಿಯಲ್ಲಿ ತನ್ನ ವಿಭವ ಕಡಿಮೆಯಾಗದೆ ಇತರ ಸಜಾತೀಯನಾಗಿ ಅವತರಿಸುವುದು ವಿಭವಾವತಾರವಾಗುತ್ತದೆ. ಸಾಮಾನ್ಯ ಜಾತಿಗೆ ಸಂಬಂಧಪಟ್ಟವನಂತೆ ಬಂದು ಹುಟ್ಟಿದರೂ ಜಟಾಯುವಿಗೆ ಮೋಕ್ಷಪ್ರದಾನವೂ ; ಸಾಂದೀಪಿನಿಗೆ ಪುತ್ರರನ್ನು ತಂದುಕೊಡುವುದೂ, ಗೋವರ್ಧನ ಪರ್ವತವನ್ನು ಎತ್ತುವುದೂ ಮುಂತಾದ ಕೆಲವು ಮನುಷ್ಯರು ಮಾಡಲಾಗದ ಕಾರ್ಯವಿಶೇಷಗಳಿಂದ ತನ್ನ ಸ್ವಾಭಾವಿಕವಾದ ಶಕ್ತಿವಿಶೇಷಕ್ಕೆ ಕಡಿಮೆಯಾಗದ ರೀತಿಯನ್ನು ಪ್ರಕಾಶಪಡಿಸಿದುದರಿಂದ 'ನನ್ಮೈಶೇರ್' ಎಂದು ಹೇಳಿದೆ.

ಪುಣ್ಯತ್ತಿನ್‌ಮೂರ್ತಿಯಾಯ್=ಕೆಳಗೆ "ಪೋಕಮೂರ್ತಿ" ಎಂದು ವಿಭವಾವತಾರಗಳೆಲ್ಲವನ್ನೂ ಸಮುದಾಯವಾಗಿ ಹೇಳಿದ್ದರೂ ಅವುಗಳಲ್ಲಿ ಶ್ರೀರಾಮಾವತಾರವೂ, ಕೃಷ್ಣಾವತಾರವೂ ಬಹಳ ಹೆಚ್ಚಿನವಾದುದರಿಂದ ಈ ಎರಡು ಅವತಾರಗಳನ್ನೂ "ಪುಣ್ಯತ್ತಿನ್‌ಮೂರ್ತಿ" ಎಂದು ಹೇಳಿರುವುದು. "ರಾಮೋವಿಗ್ರಹವಾನ್ ಧರ್ಮಃ" ಎಂದೂ "ಕೃಷ್ಣಂಧರ್ಮಂಸನಾತನಮ್" ಎಂದೂ ಶ್ರೀರಾಮಕೃಷ್ಣರನ್ನು ಸಾಕ್ಷಾತ್ತಾಗಿ ಪುಣ್ಯಸ್ವರೂಪಿಗಳಾಗಿ ಹೇಳಿರುವುದರಿಂದ, "ಪುಣ್ಯತ್ತಿನ್‌ಮೂರ್ತಿ" ಎಂದು ಅವರನ್ನು ಹೇಳಿದೆ. ಅಲ್ಲದೆ ಪುಣ್ಯದಿಂದ ಹೊಂದಲು ತಕ್ಕ ಮೂರ್ತಿ ಎಂದೂ ಅರ್ಥ ಹೇಳಬಹುದು—ಅಂದರೆ ಪುಣ್ಯಮಾಡಿರುವ ಪುರುಷರಿಂದ ಮಾತ್ರ ಹೊಂದಲು ತಕ್ಕವನು ಎಂದು, ಕ್ಷತ್ರಬಂಧು ಮೊದಲಾದ ಪಾಪಿಷ್ಠರೂ ಹೊಂದಿದರಲ್ಲಾ ಎಂದರೆ ಅವರೂ ಪಾಪಗಳನ್ನು ನಾಶಮಾಡಿಕೊಂಡು ಪುಣ್ಯವು ಬೆಳೆದ ಮೇಲೆ ಹೊಂದಿದರು ಎಂದು ತಿಳಿಯಬೇಕು.

ಎಣ್ಣಿಲ್ ಮೂರ್ತಿಯಾಯ್="ಬಹೂನಿಮೇವ್ಯತೀತಾನಿ ಜನ್ಮಾನಿತವ ಚಾರ್ಜುನ=ಎಲೌ ಅರ್ಜುನನೇ ! ನನಗೂ ನಿನಗೂ ಬಹಳ ಜನ್ಮಗಳು ಉರುಳಿವೆ. ನಾನೂ ನೀನೂ ಎಷ್ಟೋ ಜನ್ಮಗಳನ್ನು ಎತ್ತಿದ್ದೇವೆ" "ಎನ್ನಿನ್ರಯೋನಿಯುಮಾಯ್ ಪ್ಪಿರನ್ದಾಯ್=ಯಾವ ಯಾವ ಯೋನಿಯಲ್ಲೋ ಹುಟ್ಟಿದೆ. (ಮತ್ಸ್ಯ, ಕೂರ್ಮ, ವರಾಹ ಮುಂತಾದ)" ಎಂದು ಹೇಳಿರುವ ರೀತಿಯಲ್ಲಿ ಲೆಕ್ಕವಿಲ್ಲದ ಅವತಾರಗಳನ್ನು ಎತ್ತಿದುದನ್ನು ಹೇಳಿದ್ದಾಗಿದೆ.

ವೇದಾಂತ ದೇಶಿಕರು ರಹಸ್ಯತ್ರಯಸಾರದಲ್ಲಿ ತತ್ವತ್ರಯ ಚಿಂತನಾಧಿಕಾರದಲ್ಲಿ "ವಿಭವಙ್ಗಳಾವನ—ಎಂದು ಆರಂಭಿಸಿ ಪದ್ಮನಾಭಾದಿಗಳಾದ ಮೂವತ್ತು ಚಿಕ್ಕರೂಪಗಳು. ಇವುಗಳಲ್ಲಿ ಮತ್ಸ್ಯ ಕೂರ್ಮಾದಿಗಳಾದ ಅವತಾರಗಳು ಒಂದು ಪ್ರಯೋಜನಕ್ಕೆ ಅಧೀನವಾಗಿರೋಣದರಿಂದ ವಿಶೇಷಿಸಿ ಹೇಳಿವೆ. ಈ ವಿಭವಗಳಲ್ಲಿ ಈಶ್ವರನು ಆ ಆ ಕಾರ್ಯ ವಿಶೇಷಗಳಿಗೆ ಸಂಬಂಧಪಟ್ಟಂತೆ ತಾನು ಅಪೇಕ್ಷಿಸಿದ ಗುಣಗಳನ್ನು ಬೇಕಾದ ವೇಳೆಯಲ್ಲಿ ಮರೆಮಾಚಿಯೂ ಬೇಕಾದ ವೇಳೆಯಲ್ಲಿ ಪ್ರಕಾಶಪಡಿಸಿಯೂ ನಡೆಸುತ್ತಾನೆ. ಇವುಗಳಲ್ಲಿ ಅವಾಂತರಭೇದಗಳು—ಒಳಭೇದಗಳು "ಕೃಷ್ಣರೂಪಾಣ್ಯಸಂಖ್ಯಾನಿ=ಕೃಷ್ಣನರೂಪಗಳು ಲೆಕ್ಕವಿಲ್ಲದವು" ಇವೇ ಮೊದಲಾದ ರೀತಿಯಲ್ಲಿ ಅನಂತಗಳಾಗಿವೆ. ಹೀಗೆಯೇ ವಿಭವಾನ್ತರಗಳನ್ನೂ ಅರಿಯುವುದು. ಕೆಲವು ಜೀವರುಗಳನ್ನು ವಿಗ್ರಹ ವಿಶೇಷದಿಂದಲೂ, ಶಕ್ತಿವಿಶೇಷದಿಂದಲೂ ಅಧಿಷ್ಠಾನ ಮಾಡಿ ಹೆಚ್ಚಾದ ಕಾರ್ಯಗಳನ್ನು ನಡೆಸುವುದೂ ವಿಭವಭೇದ" ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸತಕ್ಕದ್ದಾಗಿದೆ. ಈ ರೀತಿ ಲೆಕ್ಕವಿಲ್ಲದ ಅವತಾರಗಳನ್ನು ಮಾಡಿದ್ದರೂ ತನ್ನ ಇಷ್ಟದಂತೆ ಸಂಸಾರಿಗಳು ತನ್ನನ್ನು ಹೊಂದದೆ ಇರುವುದರಿಂದ—ತನ್ನ ಹತ್ತಿರಕ್ಕೆ ಬರದೇ ಇರುವುದರಿಂದ "ಈ ಪಾಪಿಷ್ಠರು ಕೆಡಲಿ" ಎಂದು ಉಪೇಕ್ಷಿಸಿ ಪರಮಪದವನ್ನು ಕುರಿತು ಹೊರಡಬಹುದಾಗಿದ್ದರೂ, ರಕ್ಷಣ ವ್ರತದಲ್ಲಿರುವ ಅಭಿನಿವೇಶದ ಹೆಚ್ಚಳದಿಂದ ಕ್ಷೀರಸಮುದ್ರದಲ್ಲಿ ಹೋಗಿ ಮಲಗಿದ ರೀತಿಯನ್ನು ಹೇಳುತ್ತಾರೆ. ನಾಕಮೂರ್ತಿ ಇತ್ಯಾದಿಗಳಿಂದ ನಾಗಮೂರ್ತಿಯನ್ನು ಹಾಸಿಗೆಯನ್ನು ಮಾಡಿ ಸಮುದ್ರದಲ್ಲಿ ಮಲಗಿದ್ದಾನೆ ಪರಮಾತ್ಮ, ಎಂದು.

ಮೇಲ್ ಆಕಮೂರ್ತಿಯಾಯ ವಣ್ಣಮೇನ್ ಕೋಲ್"="ಆಕಮೂರ್ತಿ" ಎಂದು ಅರ್ಚಾವತಾರವನ್ನು ಹೇಳುತ್ತದೆ. "ಯಾಗಮೂರ್ತಿ" ಎಂಬುದು ತಮಿಳಿನಲ್ಲಿ "ಆಕಮೂರ್ತಿ" ಎಂದಾಯಿತು ಎಂದೂ ಯಾಗವಾದರೋ "ಯಜದೇವಪೂಜಾಯಾಂ" ಎನ್ನುವ ರೀತಿಯಲ್ಲಿ ಅರ್ಚನೆಯಾಗಿ, ಅರ್ಚನೆಗೆತಕ್ಕ ಅರ್ಚಾವತಾರ ಎಂದು ಅರ್ಥವಾಗಬಹುದೆಂದು ಹೇಳುವವರೂ ಉಂಟು. ಅರ್ಚಾವತಾರವಾದರೋ ಆಶ್ರಿತರಾದ ಚೇತನರಿಗೆ ಅಭಿಮತವಾದ–ಇಷ್ಟವಾದ ಚಿನ್ನ, ಬೆಳ್ಳಿ, ಕಲ್ಲು ಇವುಗಳವರೆಗೂ ಯಾವುದಾದರೂ ಒಂದು ದ್ರವ್ಯದಲ್ಲಿ ಅಯೋಧ್ಯಾ ಮಧುರಾದಿ ದೇಶನಿಯಮವೇನು ಹನ್ನೊಂದು ಸಾವಿರ ವರ್ಷ, ನೂರು ವರ್ಷ ಎಂಬಂತೆ ಉಂಟಾದ ಕಾಲನಿಯಮವೇನು, ದಶರಥ ವಸುದೇವಾದಿಗಳೆಂಬಂತೆ ಕೆಲವು ಅಧಿಕಾರಿನಿಯಮವೇನು ಇವು ಉಳ್ಳದಾಗಿ ಸಾನ್ನಿಧ್ಯಮಾಡಿದ ರಾಮಕೃಷ್ಣಾದಿ ವಿಭವ ವಿಶೇಷಗಳಂತಲ್ಲದೆ "ಭೌಮ ನಿಕೇತನಷ್ವಪಿಕುಟೀಕುಂಜೇಷು=ಭೂಮಿಯಲ್ಲಿರುವ ಮನೆಗಳು ಗುಡಿಸಲು, ಪೊದೆಗಳು" ಎಂಬಂತೆ ಒಂದುದೇಶ ನಿಯಮವಿಲ್ಲದಂತೆಯೂ ಅರ್ಚಕನ–ಪೂಜೆಮಾಡುವವನ ಅಪೇಕ್ಷೆಯೇ ಕಾಲ ಎಂಬುದನ್ನು ಬಿಟ್ಟು ತನಗಾಗಿ ಒಂದು ಕಾಲ

ವೆಂಬ ನಿಯಮವಿಲ್ಲದ ರೀತಿಯಲ್ಲೂ, ರುಚಿಸುವವರೆಲ್ಲರಿಗೂ ಆಗುವುದರಿಂದ ಇಂತಹವರೆಂಬ ಒಂದು ಅಧಿಕಾರಿನಿಯಮವಿಲ್ಲದ ರೀತಿಯಲ್ಲೂ, ಸನ್ನಿಧಿ ಮಾಡಿ ಅವರು ಮಾಡುವ ಅಪರಾಧಗಳನ್ನು ನೋಡದಂತೆ ಅರ್ಚಕಪರತಂತ್ರನಾಗಿ ಸ್ನಾನ, ಅಶನ, ಶಯನ, ಈ ಎಲ್ಲಾ ವ್ಯಾಪಾರಗಳನ್ನೂ ಉಳ್ಳವನಾಗಿ ದಯಮಾಡಿಸಿ ಇರುವ ಸ್ಥಿತಿ. **"ಅರ್ಚಾಪೂಜಾಪ್ರತಿಮಯೋಃ"** ಎಂಬ ನಿಘಂಟು ಇರುವುದರಿಂದ ಅರ್ಚಾಪದವು ಇಲ್ಲಿ ಪ್ರತಿಮೆಯನ್ನು ಹೇಳುತ್ತದೆ. "**ಮೇಲ್ ಆಕಮೂರ್ತಿಯಾಯುವಣ್ಣಮ್ ಎನ್‌ಕೊಲ್** !—ಕೆಳಗೆ ಹೇಳಿದ ಕೆಲವು ರೂಪಗಳನ್ನು ಹೊಂದಿದ್ದೂ ಅಲ್ಲದೆ ಈ ರೀತಿ ಎಲ್ಲಾ ವಿಧದಿಂದಲೂ ಪರಾಧೀನವಾದ ಒಂದು ಸ್ಥಿತಿಯನ್ನು ಹೊಂದಿದ್ದು ಎಂತಹ ಸೌಲಭ್ಯದ ಪರಾಕಾಷ್ಠೆ ! ಎಂದು ಮನಸ್ಸು ಕರಗಿರುವ ರೀತಿ. **ಆದಿದೇವನೇ !**— ಜಗತ್ತಿಗೆಲ್ಲಾ ಆದಿಕಾರಣವಾಗಿರುವ ನೀನು ಕಾರ್ಯವರ್ಗದೊಳಗೆ ಅತಿಕ್ಷುದ್ರ— ಅಲ್ಪನಾಗಿ ಇರುವ ಒಂದು ಚೇತನನ ಇಷ್ಟಕ್ಕೆ ಅಧೀನನಾಗಿ ನಡೆಯುವುದು ಎಂತಹ ಸಾಮರ್ಥ್ಯ ! ಎಂದು ಕೇಳುವ ರೀತಿ.

**[1] ಆರುಣಾವಮ್ 'ನಮಕ್ಕೆನ್‌ರುವಮ್-ಆಳಿವಲವನ್,**
**ಮುರನಾಳ್ ವಲಮ್' ಶುಳಿನ್ದ ಮೊಯ್ಮ್ಬನ್, ಶರಣಾಮೇಲ್**
**ಏದುಗತಿ ? ಏದುನಿಲೈ ? ಏದುಪಿರಪ್ಪು ? ಎನ್ನಾದೇ !**
**ಓದು–ಕತಿ–ಮಾಯನ್ನೈಯೇ ! ಓರ್ತು.**

ಸರ್ವೇಶ್ವರನು ಎಲ್ಲರನ್ನು ಕಾಪಾಡುವವನು ಎಂದು ಹೆಸರನ್ನು ಪಡೆದಿದ್ದರೂ ಅವನ ಈ ರಕ್ಷಕತ್ವವು ಎಲ್ಲರಲ್ಲೂ ಒಂದೇ ಕಾಲದಲ್ಲಿ ಪ್ರವೇಶಿಸಲಾರದು. ತಮ್ಮನ್ನು ಕಾಪಾಡಿಕೊಳ್ಳುವುದರಲ್ಲಿ ತಾವೇ ಯತ್ನಮಾಡುವವರು ಬಹಳ ಮಂದಿ ಉಂಟು. ಅಂತಹವರನ್ನು ಅವನು ಕಾಪಾಡಲಾರ. ರಕ್ಷಣೆಯ ಎಲ್ಲಾ ಹೊರೆಯನ್ನು ಅವನಲ್ಲಿಟ್ಟು 'ನೀನೇ ಶರಣು' ಎಂದು ದೃಢಮನಸ್ಸಿನಿಂದ ಅವನನ್ನು ನಂಬಿ 'ಸೀರೆಯನ್ನು ಸೆಳೆದಾಗ ಎರಡು ಕೈಯನ್ನು ಬಿಟ್ಟು ಕೃಷ್ಣನನ್ನು ಮರೆಹೊಕ್ಕ ದ್ರೌಪದಿಯಂತೆ ಆದವರನ್ನು ಅವನು ಕೈಬಿಡ.'

**[2] ಇನಿ ಅರಿನ್ದೇನ್ ಈಶರ್ಕುಮ್ ನಾನ್ಮುಹರ್ಕುಮ್ ತೆಯ್ವಮ್ ;**
**ಇನಿ ಅರಿನ್ದೇನ್ ಎಮ್ಪೆರುಮಾನ್ ! ಉನ್ನೈ, ಇನಿ ಅರಿನ್ದೇನ್**
**ಕಾರಣನ್‌ನೀ ಕತ್ತವೈನೀ ಕರ್ಪವೈನೀ ನರ್‌ಕಿರಿಶೈ**
**ನಾರಣನ್‌ನೀ–ನನ್ಗರಿನ್ದೇನ್ ನಾನ್.**

1. ಪೇಯಾಳ್ವಾರ್, ೭೮.
2. ತಿರುಮಳಿಶೈಯಾಳ್ವಾರ್, ೯೬.

ಓ ಸ್ವಾಮಿ! ನೀನು ರುದ್ರನಿಗೂ ಬ್ರಹ್ಮನಿಗೂ ದೈವವು ಎಂಬುದನ್ನು ದೃಢವಾಗಿ ತಿಳಿದೆ. ಎಲ್ಲಾ ಜಗತ್ತಿಗೂ ಕಾರಣಭೂತನಾದವನು ನೀನು. ಇದಕ್ಕೆ ಮೊದಲು ಅರಿಯಲ್ಪಟ್ಟ ವಸ್ತುವೆಲ್ಲವೂ ನೀನೇ. ಇನ್ನುಮುಂದೆ ಅರಿಯಬೇಕಾದ ವಸ್ತುಗಳೂ ನೀನೇ ಎಂದಂತೆ. ಕಾರಣವಿಲ್ಲದೆ ರಕ್ಷಿಸುವ ಒಳ್ಳೆಯ ವ್ಯಾಪಾರವುಳ್ಳ ನಾರಾಯಣನು ನೀನು. ಇದನ್ನು ನಾನು ಚೆನ್ನಾಗಿ ಅರಿತೆ.

[1]ಎಣ್ ಪೆರುಕ್ಕು ಅನ್ನಲತ್ತು, ಒಣ್ ಪೊರುಳ್ ಈರಿಲ,
ವಣ್ ಪುಕಳನಾರಣನ್, ತಿಣ್‌ಕಳಲ್ ಶೇರೇ

ಭಕ್ತಿಯೋಗಕ್ಕೆ ವಿಷಯವಾಗಿ ಹೇಳಲ್ಪಟ್ಟ ಸ್ವಾಮಿಯು ನಾರಾಯಣನೇ. ಅವನು ಲೆಕ್ಕಕ್ಕೆ ಮೀರಿದ ಜೀವರುಗಳನ್ನು, ಅಳತೆ ಇಲ್ಲದ ಗುಣಗಳನ್ನು ತನಗೆ ಶೇಷವಾಗಿ ಪಡೆದವನು. ಅವನು ತನ್ನ ಪಾದವನ್ನು ಆಶ್ರಯಿಸಿದವರನ್ನು ಒಂದುಕಾಲವೂ ಕೈಬಿಡ. ಅವನ ಪಾದಕಮಲಗಳನ್ನು ಆಶ್ರಯಿಸಿ ಎಂದು ಆಳ್ವಾರು ಉಪದೇಶಿಸುತ್ತಾರೆ.

## ಗ್ರಂಥೋಪಸಂಹಾರ

ಭೂ ಯಾಚ್ಚಕ್ಷ್ವದಸೌ ಹಯಾಸ್ಯ ಕರುಣಾದೃಷ್ಟಿಸ್ಸುವೃಷ್ಟ್ಯಾತ್ಮನಾ
ಜ್ಞಾನಾಂಧಸ್ಯ ಮಮೋಪರೀತ್ಯನುದಿನಂ ವಾಂಛಾಮಿ ತುಷ್ಯಾಮಿ ಚ ।
ಆಯುಸ್ಸಾರ್ಥಕತಾಮಯಾದಿತಿ ಯಯಾ ಯುಕ್ತೋಽಹಮೇತಾದೃಶೀಂ
ತತ್ತ್ವಗ್ರಂಥಿವಿಸರ್ಜನಾತ್ಮಕಕೃತಿಂ ಕರ್ತುಂತಥಾ ಶಕ್ನುಯಾಮ್ ॥೧॥

ತಿಳುವಳಿಕೆಯೆಂಬ ಕಣ್ಣಿಲ್ಲದೆ ಕುರುಡನಾದ ನನ್ನಮೇಲೆ ಶ್ರೀ ಹಯಗ್ರೀವ ಮೂರ್ತಿಯ ದಯೆಯಿಂದ ಕೂಡಿದ ನೋಟವು ಸುರಿಮಳೆಯಂತೆ ಸುರಿಯಲಿ— ಬೀಳಲಿ ಎಂದು ಬಯಸುತ್ತೇನೆ. ಯಾವ ನೋಟದ ಬೀಳುವಿಕೆಯಿಂದ ಕೂಡಿದ ನಾನು ತತ್ತ್ವಗಳೆಂಬ ಗಂಟನ್ನು ಅಂದರೆ ಸುಲಭವಾಗಿ ಅರ್ಥವಾಗದ ವೇದಾಂತ ತತ್ತ್ವಾರ್ಥಗಳನ್ನು ಬಿಡಿಸಿ ತಿಳಿಸುವ ಇಂತಹ ಗ್ರಂಥಗಳನ್ನು ರಚಿಸಲು ಸಮರ್ಥನಾಗುತ್ತೇನೋ ಅಂತಹ ದೃಷ್ಟಿ ನನ್ನ ಮೇಲೆ ಬೀಳಲಿ ಎಂದು ಅಭಿಪ್ರಾಯ.

ಗ್ರಂಥೋಽಯಂ ಮುಕುರಾಭಿಧೋ ವಿಜಯತೇ ಪ್ರಾಪ್ಯಾರ್ಥಭಾಗಂಸ್ವಕಂ
ತತ್ತ್ವೈಸ್ಸಂಕಲಿತಂ ಯಥಾಮತಿ ಗುರೋಃಕಾರುಣ್ಯತೋ ಮೇಽಧುನಾ ।
ಶಿಷ್ಯೇಽತ್ರಪ್ರಭವೋ ವಿವಿಕ್ತಹೃದಯಾ ನಿರ್ಮತ್ಸರಾಸ್ಸ್ಯಾಂ ಕೃತೌ
ದೋಷಂ ವಾಯದಿವಾಗೃಣನ್ತು ತುಗುಣಂ ತೃಪ್ತಿರ್ಹರೇರ್ಮೇ ಯಶಃ ॥೨॥

1. ನಮ್ಮಾಳ್ವಾರ್. ೧-೨-೧೦.

ಆಚಾರ್ಯರ ಅನುಗ್ರಹದಿಂದ ನನ್ನ ಬುದ್ಧಿಗೆ ಎಟುಕಿದಷ್ಟು ತತ್ತ್ವಗಳಿಂದ ಕೂಡಿದ ತನ್ನ ಎರಡನೆಯ ಭಾಗವೆಂಬ ಗ್ರಂಥದಿಂದ ಕಲೆತಿದ್ದಾಗಿ ಈ ವಿಶಿಷ್ಟಾದ್ವೈತ ದರ್ಪಣವೆಂಬ ಗ್ರಂಥವು ಬೆಳಗುತ್ತದೆ. ಈ ಗ್ರಂಥದ ವಿಷಯವಾಗಿ ಉಳಿದ ವಿಚಾರದಲ್ಲೂ 'ಒಳ್ಳೆಯದು, ಕೆಟ್ಟದ್ದು' ಎಂದು ವಿಮರ್ಶೆಮಾಡಲು ಸಮರ್ಥರಾದ ಅಸೂಯೆ ಇಲ್ಲದ ಸಹೃದಯರೇ ಅಧಿಕಾರಿಗಳು; ಅಂದರೆ ಅವರದೇ ಕೊನೆಯ ತೀರ್ಮಾನ. ಆದರೆ ನನಗಂತೂ ನನ್ನ ಈ ಕಾರ್ಯದಿಂದ ಪರಮಾತ್ಮನು ತೃಪ್ತಿಯನ್ನು ಪಡೆದರೆ ಅದೇ ನನ್ನ ಕೀರ್ತಿ ಎಂದು ಭಾವಿಸುವೆನು.

**ಶುಕ್ಲಾಬ್ದಸ್ಯ ಮೃಗೇಂದ್ರಮಾಸಿಯುತನಂ ಗ್ರಂಥಸ್ಯಪೂರ್ಣಂಚಮೇ**<br>
**ಕ್ರಿಸ್ತಾಬ್ದೇತು ವಿಗಂಶತೇಶ್ಚ ನವತೇ ರೇಕೈಕಲೋಪೇಕ್ರಮಾತ್ ।**<br>
**ಕರ್ಣಾಟೇರಸಿಕಾಸ್ಸ್ವದಂತುಭುವಿಮೇ ವಾಚಸ್ಸುಧಾಮುದ್ಧೃತಾಂ**<br>
**ಪಾರಾಶರ್ಯ ಮತಾನುಸಾರಿಗುರುಭಿಃ ಪ್ರೋಕ್ತಾನ್ನವಾದ್ದರ್ಶನಾತ್ ॥೩॥**

ಶುಕ್ಲನಾಮ ಸಂವತ್ಸರದ ಸಿಂಹಮಾಸದಲ್ಲಿ ಈ ಗ್ರಂಥದ ರಚನೆಯ ಪ್ರಯತ್ನವು ಪೂರ್ತಿಯಾಯಿತು. ಇದಕ್ಕೆ ಸರಿಯಾದ ಕ್ರೈಸ್ತವರ್ಷವು ಇಪ್ಪತ್ತರಲ್ಲೂ ತೊಂಭತ್ತರಲ್ಲೂ ಒಂದೊಂದನ್ನು ಕ್ರಮವಾಗಿ ತಳ್ಳಿದರೆ ಅಂದರೆ ಕಾಣದಂತೆ ಮಾಡಿದರೆ ೧೯ ಮತ್ತು ೮೯ ಸಂಖ್ಯೆಗಳಾಗುತ್ತವೆ. ಈ ೧೯೮೯ನೆಯ ಆ ಸಿಂಹ ಮಾಸ ಆಗಸ್ಟಿಗೆ ಸೇರಿದುದಾಗುತ್ತದೆ. ಇಂತಹ ಶುಭವಾದ ಶ್ರಾವಣಮಾಸದಲ್ಲಿ ನನ್ನ ಯತ್ನವು ಸಫಲವಾಗಿ ವಿಶಿಷ್ಟಾದ್ವೈತ ದರ್ಪಣದ ಎರಡನೇ ಭಾಗವು ಜನ್ಮತಾಳಿತು. ಪರಾಶರರ ಮಕ್ಕಳಾದ ಶ್ರೀ ವೇದವ್ಯಾಸರ–ಬ್ರಹ್ಮಸೂತ್ರಗಳನ್ನು ರಚಿಸಿದವರ ಅಭಿಪ್ರಾಯವನ್ನು ಅರಿತ ಗುರುಗಳ ಅಮೃತಮಯವಾದ ಮಾತುಗಳನ್ನು ನಾನು ಅರಿಸಿ ಈ ಗ್ರಂಥವನ್ನು ರಚಿಸಿದ್ದೇನೆ. ರಸಿಕರು ಓದಿ, ಇದರ ರಸವನ್ನು ಸವಿಯಲಿ.

**ಇತ್ಥಂ ಶ್ರೀವಾಸರಂಗೇಣ ವೇದ ವೇದಾಂತ ಧೀಮತಾ ।**<br>
**ರಚಿತೋಽಯಂ ದ್ವಿಭಾಗಾತ್ಮಾ ವಿಶಿಷ್ಟಾದ್ವೈತದರ್ಪಣಃ ॥೪॥**

ಈ ರೀತಿ ವೇದ ಮತ್ತು ವೇದಾಂತ ಪಂಡಿತನಾದ ಶ್ರೀನಿವಾಸರಂಗಾಚಾರ್ಯನೆಂಬವನಿಂದ ಎರಡು ಭಾಗವುಳ್ಳ ವಿಶಿಷ್ಟಾದ್ವೈತ ದರ್ಪಣವೆಂಬ ಗ್ರಂಥವು ರಚಿಸಲ್ಪಟ್ಟಿರುತ್ತದೆ.

ಇಲ್ಲಿಗೆ ವಿಶಿಷ್ಟಾದ್ವೈತ ದರ್ಪಣದ ಎರಡನೆಯ ಭಾಗವು ಮುಗಿಯಿತು.

ಗ್ರಂಥವು ಪರಿಸಮಾಪ್ತವಾಯಿತು.

# ವೈಷ್ಣವೀ ಮಾಸಪತ್ರಿಕೆ (೬–೩–೧೯೮೯)

# ಗ್ರಂಥ ವಿಮರ್ಶೆ

## ವಿಶಿಷ್ಟಾದ್ವೈತ ದರ್ಪಣ (ಭಾಗ–೧)

**ವಿಶಿಷ್ಟಾದ್ವೈತ ದರ್ಪಣ (ಭಾಗ-೧) :** ಇದೊಂದು ಉತ್ಕೃಷ್ಟ ಗ್ರಂಥ. ಇದರಲ್ಲಿ ಬೇರೆ ಬೇರೆ ವೈದಿಕ, ಅವೈದಿಕ ಮತಗಳ ಪರಾಮರ್ಶೆಯನ್ನು ನೀಡಿರುವುದು ಗ್ರಂಥಕರ್ತರ ದೊಡ್ಡ ಮನೋಭಾವ ತೋರಿಸುತ್ತದೆ. ವೇದಾಂತ ಶಾಸ್ತ್ರದಲ್ಲಿ ಆಸಕ್ತರಾದವರಿಗೆ ಉಪಯುಕ್ತವಾದ ಗ್ರಂಥ. ಶೈಲಿ ಪ್ರಮೇಯಗಳು ಸರಳವಾಗಿ ಅರ್ಥವಾಗುವಂತೆ ಬರೆಯಲಾಗಿದೆ. ಭಗವಾನ್ ರಾಮಾನುಜರು ಉಪದೇಶಿಸಿದ ಶ್ರೀಭಾಷ್ಯವನ್ನು ಅದಕ್ಕೆ ವ್ಯಾಖ್ಯಾನವಾಗಿ ಸುದರ್ಶನ ಸೂರಿಗಳು ರಚಿಸಿರುವ ಶ್ರುತ ಪ್ರಕಾಶಿಕೆಯನ್ನು ಆಧಾರಿಸಿ ವಿಶಿಷ್ಟಾದ್ವೈತದ ಪರಿಚಯವನ್ನು ಲೇಖಕರು ಮಾಡಿದ್ದಾರೆ. ಇದರಲ್ಲಿ ವೇದದ ಹಿರಿಮೆ, ಸಾಂಖ್ಯಮತ, ಬೌದ್ಧಮತದ ವಿಮರ್ಶೆ, ಜೈನಮತ, ಭಾಸ್ಕರಮತ ದ್ವೈತದರ್ಶನ, ರುದ್ರವಿದ್ಯಾ, ಗಾಯಿತ್ರಿ ವಿದ್ಯಾ ಇವುಗಳನ್ನು ವಿವರಿಸಲಾಗಿದೆ. ಪರಮಾತ್ಮನ ಅನುಗ್ರಹ ಸಂಪಾದನೆಗಾಗಿ ಜೀವನು ಅನುಷ್ಠಿಸಬೇಕಾದ ಉಪಾಯಗಳ ವಿವರಣೆಯನ್ನು ಕೊಡಲಾಗಿದೆ.

ಇದರ ಗ್ರಂಥಕರ್ತೃ ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯ. ಆಂಗ್ಲ, ಕನ್ನಡ, ಹಿಂದಿ, ಸಂಸ್ಕೃತಗಳಲ್ಲಿ ಅಧ್ಯಯನ ನಡೆಸಿ—ಕನ್ನಡ, ಹಿಂದಿ, ಸಂಸ್ಕೃತ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರವಚನ, ಉಪನ್ಯಾಸ ಮಾಡಿದ್ದಾರೆ. ಇವರ ಲೇಖನಗಳು ಅನೇಕ ಪತ್ರಿಕೆಗಳಲ್ಲಿ ಸತತವಾಗಿ ಬಂದಿವೆ.

ಪುಸ್ತಕ ದೊರೆಯುವ ಸ್ಥಳ :

**ಶೇಟ್ಟಲೂರ್ ಶ್ರೀನಿವಾಸರಂಗಾಚಾರ್ಯ**

ನಂ. ೧೦೩/೧, 'ಶ್ರೀರಂಗ ನಿಲಯ,

೧ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ.

ಗವಿಪುರಂ ಬಡಾವಣೆ,

ಬೆಂಗಳೂರು–೫೬೦ ೦೧೯

## BOOK REVIEW

**VISHISHTADVAITA DARPANA Vol. I : Shettalur Srinivasarangacharya, No. 103/1, 'Sriranga Nilaya' 1st Main Road, 3rd Cross Road, Gavipuram Extension, Bangalore-560 019 (Karnataka).**

"The glory of the immutable Vedas, refutation of the Materialists (Nastikas), argumentations are presented. Establishes that the Lord is the cause for creation, sustenance and destruction of the universe. The means the individual Soul has to adopt to receive the grace of the Lord is discussed".

*—VISHISHTADVAITA WORKS Vol. II : The Academy of Sanskrit Research, Melkote-571 431, Karnataka, 1988.*

# ಗ್ರಂಥಕರ್ತ ಶೇಟ್ಟಿಲೂರ್ ಶ್ರೀನಿವಾಸರಂಗಾಚಾರ್ಯ

ಪತಿತಪಾವನೆ ತಾಯಿ ಕಾವೇರಿ ಮತ್ತು ಕಪಿಲೆಗಳ ಸಂಗಮಕ್ಷೇತ್ರ ತಿರುಮ ಕೂಡಲಿಗೆ ಸಮೀಪದ ಕೃಷ್ಣಾಪುರವೆಂಬ ಅಗ್ರಹಾರದಲ್ಲಿ ಪರಮಶ್ರೋತ್ರಿಯರೂ, ವೇದಾಂತಿಗಳೂ ಆದ ಗೋಪಾಲಕೃಷ್ಣಮಾಚಾರ್ಯರು ಮತ್ತು ಅವರ ಧರ್ಮಪತ್ನಿ ಸಾಧ್ವೀಮಣಿ ವೆಂಕಟಲಕ್ಷ್ಮಮ್ಮ ಇವರ ಏಕೈಕ ಪುತ್ರ ಈ ಗ್ರಂಥಕರ್ತ ಶೇಟ್ಟಿಲೂರ್ ಶ್ರೀನಿವಾಸರಂಗಾಚಾರ್ಯ. ಬಾಲ್ಯದಲ್ಲಿಯೇ ತೀರ್ಥರೂಪರವರ ವಿಯೋಗ. ದೊಡ್ಡಪ್ಪ ನವರಾದ ಶೇಟ್ಟಿಲೂರ್ ಲಕ್ಷ್ಮೀನರಸಿಂಹಾಚಾರ್ಯ, ವೇದಾಂತ ರಾಮಾನುಜಾಚಾರ್ಯ ಇವರುಗಳ ಬಳಿಯಲ್ಲಿ ಬಾಲ್ಯ, ವೇದಾಧ್ಯಯನ. ನಂತರ ಮೈಸೂರು ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಶಾಸ್ತ್ರಾಧ್ಯಯನ. ಜೊತೆಗೆ ಆಂಗ್ಲ, ಕನ್ನಡ, ಹಿಂದಿ ಅಧ್ಯಯನ. ಸಂಸ್ಕೃತ, ಕನ್ನಡ, ಹಿಂದಿ ವಿದ್ವತ್ತುಗಳ ಸಂಪಾದನೆ. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್, ಬೆಂಗಳೂರು ಹೈಸ್ಕೂಲ್, ಕಾರ್ಪೊರೇಷನ್ ಹೈಸ್ಕೂಲ್‌ಗಳಲ್ಲಿ ಕನ್ನಡ, ಸಂಸ್ಕೃತ ಪಂಡಿತರಾಗಿ ಸೇವೆ. ಅಲ್ಲದೆ ಬೆಂಗಳೂರು ದಂಡು ಥಿಯಲಾಜಿಕಲ್ ಕಾಲೇಜಿನಲ್ಲೂ ಸಂಸ್ಕೃತ, ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಅಹೋಬಿಲ ಮಠ, ಪರಕಾಲಮಠ, ಶ್ರೀಮದಾಂಡವನ್ ಸನ್ನಿಧಿಗಳಲ್ಲಿ ಪ್ರವಚನ, ಉಪನ್ಯಾಸಗಳು ಮತ್ತು ಕಾಲಕ್ಷೇಪಗಳನ್ನೂ ಮಾಡಿದ್ದಾರೆ. ವೇದ, ಉಪನಿಷತ್, ಬ್ರಹ್ಮಸೂತ್ರಗಳ ಬಗ್ಗೆ ನಿರರ್ಗಳವಾಗಿ ಉಪನ್ಯಾಸಮಾಡುವ ಕಲೆ ಇವರದು. ವಿಶಿಷ್ಟಾದ್ವೈತ ಸಿದ್ಧಾಂತವನ್ನು ಶಾಸ್ತ್ರಜ್ಞಾನ ಇಲ್ಲದವರಿಗೂ ತಿಳಿಯುವಂತೆ ಮಂಡಿಸುವ ಶೈಲಿ ಇವರ ವೈಶಿಷ್ಟ್ಯ. ಇದನ್ನರಿತ ಮಠಾಧಿಪತಿಗಳಿಂದ ಸನ್ಮಾನ. ಶ್ರೀರಂಗಂ ಶ್ರೀಮದಾಂಡವನ್ ಸನ್ನಿಧಿಯಲ್ಲಿ ಆಸ್ಥಾನವಿದ್ವಾನ್ ಪದವೀಪ್ರದಾನ. ಅತಿ ಉನ್ನತ ಬಾರ್ಹಸ್ಪತ್ಯ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿ. ವೇದ ಧರ್ಮಪರಿಪಾಲನ ಸಭೆಯಿಂದ 'ವೇದಮಾರ್ತಾಂಡ' ಎಂಬ ಬಿರುದು ಪಡೆದಿದ್ದಾರೆ. ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲಾ, ಚಾಮರಾಜಪೇಟೆ, ಬೆಂಗಳೂರು, ಇವರಿಂದ 'ಯಜುರ್ವೇದ ರತ್ನ' ಎಂಬ ಬಿರುದೂ ಸಹ ಬಂದಿದೆ. ವೇದಾಂತಕ್ಕೇ ಸೀಮಿತವಾಗದೆ ಸಾಹಿತ್ಯಕ್ಷೇತ್ರಕ್ಕೂ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಲೇಖನಗಳು ಅನೇಕ ಪತ್ರಿಕೆಗಳಲ್ಲಿ ಸತತವಾಗಿ ಬಂದಿವೆ. 'ಗುರುದಕ್ಷಿಣೆ' ಇವರ ಒಂದು ಸಂಸ್ಕೃತ ನಾಟಕ. ಆಕಾಶವಾಣಿಯಲ್ಲೂ ಪಾಠ ಪ್ರವಚನ, ಉಪನ್ಯಾಸಗಳನ್ನೂ ಮಾಡಿದ್ದಾರೆ. ಇವರ ವಿದ್ವತ್ ಪ್ರತಿಭೆಯನ್ನು ಮನ್ನಿಸಿ ಕರ್ನಾಟಕ ಸರ್ಕಾರ ಗೌರವ ವಿಶ್ರಾಂತಿ ವೇತನವನ್ನು ನೀಡಿ ಪುರಸ್ಕರಿಸಿದೆ.

ವಿಶಿಷ್ಟಾದ್ವೈತ ದರ್ಪಣ ಒಂದನೇ ಭಾಗ ಬಿಡುಗಡೆಯಾದ ಸ್ವಲ್ಪ ಸಮಯದಲ್ಲೇ ತಮ್ಮ ಪತ್ನಿಯನ್ನು ಕಳೆದುಕೊಂಡ ಇವರು ಚಿಂತನ ಚೇತನಗಳಿಂದ ವಂಚಿತರಾಗಿ, ಕರ್ಮ ಸನ್ಯಾಸಿಯಾದರು. ಅಂದೊಂದು ದಿನ ಇದ್ದಕ್ಕಿದ್ದ ಹಾಗೆ ತಮ್ಮ ಕರ್ತವ್ಯವನ್ನರಿತು ನವಚೇತನದಿಂದ ಕೂಡಿ ವಿಶಿಷ್ಟಾದ್ವೈತ ದರ್ಪಣ ಎರಡನೇ ಭಾಗವನ್ನು ಪೂರ್ಣಗೊಳಿಸುವ ಸಂಕಲ್ಪಮಾಡಿ, ಅಧ್ಯಾತ್ಮ ಚಿಂತಕರನ್ನು ನಿರಾಸೆಗೊಳಿಸದೆ ಶ್ರೀಮದಾಚಾರ್ಯರ ಗ್ರಂಥಗಳ ಪ್ರಮಾಣವನ್ನು ತೋರಿಸಿ, ಸರಳ ಸುಂದರ ರೂಪದಲ್ಲಿ ಈ ಗ್ರಂಥವನ್ನು ಪೂರ್ಣಗೊಳಿಸಿ ಭಗವತ್‌ಸಾಕ್ಷಾತ್ಕಾರಕ್ಕೆ ದಾರಿತೋರಿಸಿರುವರು.

—ವೈ. ಎ. ಶ್ರೀನಿವಾಸಮೂರ್ತಿ